ಸ್ವದೇಶಾಭಿಮಾನಿ

Swadeshabhimani. Estd 1906

Date 7—7—1939 ತಾರೀಖು ೭—೭—೧೯೩೯

ಸಚಿತ್ರ

ವಾರಪತ್ರಿಕೆ

ನೋಟಗಳು

ಇಂದಿನ ಪತ್ರಿಕೋದ್ಯಮದ 'ಪಟ್ಟು'ಗಳು ಬಹಳ ಅವನತಿಗಿಳಿದಿರುವುದನ್ನು ಕಂಡು ಶ್ರೀ ರಾಜಾಜಿಯವರು, "ಪತ್ರಿಕೋದ್ಯೋಗದ ಆರಂಭದ ದಿನಗಳಲ್ಲಿ ಎಲ್ಲರೂ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಪ್ರಕಟಿಸುತ್ತಿದ್ದರು; ಸತ್ಯವನ್ನೇ ಸಾರುವುದು ಅಂದಿನ ಅಭ್ಯಾಸವಾಗಿತ್ತು; ಇಂದು ಪತ್ರಿಕೆಗಳು ತಮ್ಮ ಹೊಣೆಗಾರಿಕೆಯನ್ನು ಮರೆತು, ಅಪಪ್ರಚಾರವನ್ನು ಮಾಡುತ್ತಾ ಹೋಗುವ ನಿಮಿತ್ತ, ಪತ್ರಿಕೆಗಳಲ್ಲಿ ಬರುವುದೆಲ್ಲಾ ಸರಿಯಲ್ಲವೆಂದು ಜನರೂ ತಿಳಿದಿದ್ದಾರೆ" ಹೀಗೆಂದು ಇಂದಿನ ಬಡ ಪತ್ರಿಕೋದ್ಯೋಗಿಗಳ ಹಾಗೂ ಪತ್ರಿಕೆಗಳ ಮೇಲೆ, ಕಪ್ಪುಕನ್ನಡಕದೆಡೆಯಿಂದ ರಾಜಾಜಿಯವರ ತೀಕ್ಷ್ಣ ದೃಷ್ಟಿಯು ಬಿದ್ದಿದೆ!

ಇಂದಿನ ಪತ್ರಿಕೋದ್ಯಮದ ವಿಷಯದಲ್ಲಿ ರಾಜಾಜಿಯವರು ಇಷ್ಟೊಂದು ಬೇಸರಗೊಂಡಿದ್ದರೆ, ಮಾದರಿಯಾಗಿ ಅವರೇ ತಮ್ಮದೊಂದು ಪತ್ರಿಕೆಯನ್ನು ಹೊರಡಿಸುತ್ತಿದ್ದರೆ ಚೆನ್ನಾಗಿತ್ತು

ಗಾಂಧಿಜಿಯವರು 'ಹರಿಜನ' ಪತ್ರಿಕೆಯ ಮೂಲಕ ತಮ್ಮ ಅಭಿಪ್ರಾಯಗಳು ಹಾಗೂ ವಿಮರ್ಶೆಗಳನ್ನು ಜನತೆಯ ಮುಂದಿಡುತ್ತಾರೆ!

ರಾಜಾಜಿಯವರು ತಮ್ಮದೊಂದು ಪತ್ರಿಕೆಯನ್ನು ಹೊರಡಿಸಿದಲ್ಲಿ, ಜನಸಮುದಾಯಕ್ಕೆ ತನ್ನ ಪಕ್ಷದ ನೀತಿಯು ಸತ್ಯವೆಂದು ಸಾರಬಹುದಷ್ಟೆ!

ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಬಿಲ್ಲನ್ನು ತಿದ್ದುಪಡಿಮಾಡುವ ಒಂದು ಮಸೂದೆಯನ್ನು ಮದ್ರಾಸು ಸರಕಾರವು ರಚಿಸುತ್ತಿದೆ ಈ ತಿದ್ದುಪಡಿ ಕಾನೂನಿನಂತೆ ಪ್ರತಿಯೊಂದು ದೇವಸ್ಥಾನ ಮತ್ತು ಮಠಗಳು ಸರಕಾರದ ಸಂಪೂರ್ಣ ಸ್ವಾಧೀನಕ್ಕೆ ಬರುವಂತಾಗುವುವು ಇದರ ಒಂದು ನಿಬಂಧನೆಯ ಪ್ರಕಾರ ದೇವಳ ಹಾಗೂ ಮಠಗಳ ಪೂಜೆಯ ಭಟ್ಟರು ಮತ್ತು ಸನ್ಯಾಸಿಗಳು ತಿರುಪತಿಯಲಿ ಸ್ಥಾಪಿತವಾದ ಹೊಸ ಓರಿಯಂಟಲ್ ವಿದ್ಯಾಮಂದಿರದಲ್ಲಿ ಶಿಕ್ಷಣ ಪಡೆಯಬೇಕಾಗಿದೆ!

ದೇವಸ್ಥಾನದಲ್ಲಿ ಪೂಜೆಮಾಡುವ ಭಟ್ಟರು ಮೊದಲಾದವರನ್ನು ಸರಕಾರವು ಶಿಕ್ಷಣ ಕೊಟ್ಟು ತರಬೇತಿಮಾಡುವಲ್ಲಿ, ಎಲ್ಲ ದೇವಸ್ಥಾನಗಳನ್ನು ಹರಿಜನರಿಗೆ ತೆರೆಯುವಂತೆ ಮಾಡುವ ಕೆಲಸವು ಸರಕಾರಕ್ಕೆ ಸುಲಭವಾಯಿತಷ್ಟೆ? ಅವರನ್ನು ಅದೇ ರೀತಿಯಲಿ ತರಬೇತಿ ಮಾಡಿದರೆ ಮುಗಿಯಿತು ಸ್ವತಃ ರಾಜಗೋಪಾಲಾಚಾರ್ಯರೇ ಅಲ್ಲಿ ತಿಂಗಳಿಗೊಂದು ಲೆಕ್ಚರು ಕೊಟ್ಟರೆ ಯಾರ ತಲೆಯಾದರೂ ತಿರುಗುತ್ತದೆ

ಈ ತಿದ್ದುಪಡಿ ಸೂಚನೆಯಲ್ಲಿಯೇ 'ದೇವಸ್ಥಾನಗಳು ಎಲ್ಲಾ ಜಾತಿಯವರಿಗೂ, ಹರಿಜನರಿಗೂ ತೆರೆಯಲ್ಪಡಬೇಕೆಂದು ಸೂಚನೆ ತಂದರೆ ಕಾರ್ಯವು ಇನ್ನಷ್ಟು ಸುಲಭವಾಯಿತು!

ಬೇಂಕುಗಳಲ್ಲಿ ಆಗುವ ಇತ್ತೀಚೆಯ ಅವಗಡಗಳು ಸರಕಾರದ ಗಮನವನ್ನು ಸೆಳೆದಿದೆ ಹಾಗಾಗಿ ಬೇಂಕಿನ ಸುಧಾರಣೆಯ ಕಾನೂನೊಂದು ಜ್ಯಾರಿಗೆ ಬಂದಿರುತ್ತದೆ "ಯಾವುದೇ ಬೇಂಕನ್ನು ಆರಂಭಿಸಬೇಕಾದಲ್ಲಿಯೂ ಪ್ರತಿಯೊಂದು ಬೇಂಕಿನಲ್ಲಿಯೂ ೫೦,೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದ ನಿಶ್ಚಿತ ಮೂಲಧನವಿರಬೇಕು ಜಿಲ್ಲೆಯಲ್ಲಿ ತೆರೆಯುವ ಪ್ರತಿಯೊಂದು ಶಾಖೆಗಳ ಸಂಖ್ಯೆಗಳಿಗೆ ಪ್ರತಿಯೊಂದಕ್ಕೂ ೫೦,೦೦೦ ರೂ ಗಳ ಹೆಚ್ಚಿನ ಮೂಲಧನ ವಿಡಬೇಕು. ಪ್ರಾಮುಖ್ಯ ಶಾಖೆಯೊಂದನ್ನು ತೆರೆಯಬೇಕಾದರೆ ನಿಶ್ಚಿತವಾದ ೫ ಲಕ್ಷ ರೂಪಾಯಿಗಳ ಮೂಲಧನವಿರಬೇಕು ಎಲ್ಲಾ ಬೇಂಕುಗಳು ಸಾರ್ವಜನಿಕರಿಂದ ಪಡೆದ ಮೂಲಧನದ ಶೇಕಡ ೩೫॥ ಅಂಶವನ್ನು ಸರಕಾರಿ ಭದ್ರತೆಯಲ್ಲಿಡಬೇಕು ಕಡೆಗೆ ಯಾವ ಬೇಂಕು ಚೆಕ್ಕನ್ನು ಕೆತ್ತ ಠೇವಣಿದಾರರಿಗೆ ಹಣವನ್ನು ಕೊಡಲು ಶಕ್ತವಾಗುವುದಿಲ್ಲವೋ ಆ ಬೇಂಕು ಸರಕಾರದಿಂದ ಶೋಧಿಸಲ್ಪಡುವುದು.

... ಗಾರರಿಗೂ ನಂಬಿಕೆಯನ್ನು ಹುಟ್ಟಿಸುವುದಕ್ಕೆ, ಹೆಚ್ಚಿನದಿತ್ತು. ಬೇಂಕಿಗೆ ದೊಡ್ಡ ಕ್ಷೇಮನಿಧಿಯು ಇರುವುದಕ್ಕಿಂತಲೂ, ಬೇಂಕಿನ ಕೆಲಸಗಾರರು ತೃಪ್ತಿಯಿಂದ ಕೆಲಸ ಮಾಡುವುದು, ಅದರ ಭದ್ರತೆಗೆ ಬಹಳ ಅವಶ್ಯವಾಗಿದೆ.

ಬೊಂಬಾಯಿಯ ಮುಸ್ಲಿಂ ಲೀಗಿನ ಸಭೆಯಲ್ಲಿ ವಾರ್ಧಾ ವಿದ್ಯಾಯೋಜನೆಯನ್ನು ಹೀಗೆಂದು ಖಂಡಿಸಿ ಠರಾವು ಆಗಿದೆ: "ಈ ಯೋಜನೆಯು ಮುಸ್ಲಿಂ ಸಂಸ್ಕೃತಿಯನ್ನು ನಾಶಮಾಡಿ, ಹಿಂದೂ ಸಂಸ್ಕೃತಿಯನ್ನು ದೇಶದಲ್ಲಿ ಪ್ರಚಾರಮಾಡುವ ಉದ್ದೇಶದ್ದಾಗಿರುತ್ತದೆ. ಇದಕ್ಕಾಗಿ ಮಂಜೂರಾದ ಪಠ್ಯ ಪುಸ್ತಕಗಳೆಲ್ಲಾ ಮುಸ್ಲಿಮರಿಗೆ ಬಹಳ ಹಾನಿಯನ್ನುಂಟುಮಾಡುವವುಗಳು."

ಮಿ॥ ಜಿನ್ನರು ಈ ಠರಾವನ್ನು ಗಮನವಿಟ್ಟು ಓದಿಕೊಳ್ಳಲಿ! ಹಿಂದುಗಳ ಮೇಲೆ ದೋಷಾರೋಪದ ಬಾಣಗಳನ್ನು ಬಿಡುವ ಜಿನ್ನರ ಬತ್ತಳಿಕೆಗೆ ಇದೊಂದು ಹೊಸ ಅಸ್ತ್ರ!

ಬೊಂಬಾಯಿಯ 'ಫಾರ್ವರ್ಡ್ ಬ್ಲಾಕ್' ಆಫೀಸನ್ನು ಉದ್ಘಾಟನೆಮಾಡುವಂದು, ಸುಭಾಷ ಬೋಸರು, ತಮ್ಮ ಹೊಸ ಪಕ್ಷದ ಪ್ರಚಾರಕ್ಕಾಗಿ ಹಲವು ಪತ್ರಿಕೆಗಳನ್ನು ದೇಶದಲ್ಲೆಲ್ಲಾ ಹೊರಡಿಸಬೇಕೆಂದು ಅಭಿಪ್ರಾಯಪಟ್ಟರು ಬೋಸರು ರಾಜಕೀಯದಲ್ಲಿ ಧರ್ಮದ ನೆರಳಿರಬಾರದೆಂಬ ಅಭಿಪ್ರಾಯದವರು!

ಬೋಸರು ಧರ್ಮಹೀನವಾದ ತಮ್ಮ ಪಕ್ಷದ ಪತ್ರಿಕೆಗಳ ಪ್ರಚಾರದಿಂದ ಅಖಿಲ ಭಾರತದಲ್ಲಿ ಹೇಗೆ ವಿಶ್ವಾಸವನ್ನು ಪಡೆಯುವರೋ ತಿಳಿಯದಾಗಿದೆ! ಶೇಕಡಾ ೯೯ ಮಂದಿಯು ಇವರ ಧರ್ಮ ಬಾಹಿರವಾದ ಪಕ್ಷದ ಅಭಿಪ್ರಾಯವನ್ನು ಅರ್ಥಮಾಡಿಕೊಂಡರೂ, ಬಾಕಿಯ ಶೇಕಡಾ ೧ರ ಮುಂದಿಗೆ ಇವರ ಸಂದೇಶವು ಮುಟ್ಟಿತೇ ಎಂಬುದು ಸಂದಿಗ್ಧ ಸಮಸ್ಯೆಯಾಗಿದೆ!

ಡಾಂಝಿಗ್ಗಿನ ಪರಿಸ್ಥಿತಿಯು ನಿಜವಾಗಿಯೂ ಇಂದು ಭೀಕರವಾಗಿದೆ

ಚೇಂಬರ್ಲೇನರು ತನ್ನ ಭೇಟಿಗೆ ಓಡಿಬರುವ ಆಯಾಸವಿಲ್ಲದಂತೆ, ಹಿಟ್ಲರನು ಈ ಸಲ ವ್ಯೂಹವನ್ನು ರಚಿಸಿದ್ದಾನೆ!

ಹಿಟ್ಲರನು ತಾನು ಮೊದಲಾಗಿಯೂ ಯುದ್ಧಮಾಡುವುದಿಲ್ಲವೆಂದು ಸ್ಪಷ್ಟ ಹೇಳಿದ್ದಾನೆ! ಆತನ ಸೈನ್ಯ ಮಾತ್ರ ಪೋಲೆಂಡಿಗೆದುರಾಗಿ ಯುದ್ಧಹೂಡಲು ವೇಷಪಲ್ಲಟಿಸಿ ಸಾಗುತ್ತಿದೆ

ಆದಕಾರಣ ಚೇಂಬರ್ಲೇನರು ಹಿಟ್ಲರನನ್ನು ಈ ಸರ್ತಿ ಸಂದರ್ಶಿಸುವ ಆಯಾಸ ಪಡಬೇಕಾಗಿಲ್ಲ! ಯಾಕೆಂದರೆ ಸ್ವತಃ ಹಿಟ್ಲರನು ಕಲಹಪ್ರಿಯ '(aggressor)ನಲ್ಲ'

ಹಾಗಾಗಿ ಬ್ರಿಟಿಷ್ ಕೂಲಿಗಾರರು ಯೂರೋಪನ್ನು ಯುದ್ಧ ಸಂಕಷ್ಟದಿಂದ ಪರಿಹರಿಸಬೇಕಾಗಿ ಜರ್ಮನಿಗೆ ಬಿನ್ನಹಗಳನ್ನು ಮಾಡುತ್ತಿದ್ದಾರೆ

ಜರ್ಮನಿಯ ಜನರು ಹಿಟ್ಲರನು ಆಜ್ಞಾಪಿಸುವ ಯುದ್ಧಗಳಲ್ಲಿ ಭಾಗವಹಿಸಬಾರದಾಗಿ ಅವರ ವಿನಂತಿ!

ಬ್ರಿಟಿಷರ ಮಾತಿಗೆ ಕಿವಿಗೊಟ್ಟರೆ, ಹಸಿದ ಜರ್ಮನ್ ಸಿಪಾಯಿಗಳಿಗೆ ಬೆಣ್ಣೆ ಮತ್ತು ರೊಟ್ಟಿ ಸಿಗುವುದಂತೆ! ಬೆಣ್ಣೆ ಮತ್ತು ರೊಟ್ಟಿ ಬೇಕಾದರೆ ಅವರು ಹಿಟ್ಲರನಿಗೆ ಅವಿಧೇಯರಾಗಿ ಯುದ್ಧ ಮಾಡದೆ ಸುಮ್ಮನಿರಬೇಕು!

ಹಿಟ್ಲರನ ಆಜ್ಞೆಗೆ ವಿರೋಧ ವರ್ತಿಸಿದರೆಂಬ ವಿನಂತಿಯು ಜರ್ಮನಿಯ ಅಂತರಿಕ ರಾಜಕೀಯ ಕ್ರಾಂತಿಯ ಸಂದೇಶವಾಗಿದೆಯೆ?

ಜರ್ಮನಿಯಲ್ಲಿ ಉಂಟುಮಾಡುವ ಈ ರಾಜಕೀಯ ಕ್ರಾಂತಿಯು ಪ್ರಪಂಚವನ್ನು ಯುದ್ಧಸಂಕಷ್ಟದಿಂದ ವಿಮೋಚನೆ ಮಾಡುವುದೆಂಬುದು ಬ್ರಿಟಿಷರ ಹೊಸ ಶಕುನಿ ತಂತ್ರವೇ?

ಮಳೆಗಾಲದಲ್ಲಿ ನಿಮ್ಮ ಎದೆಯನ್ನು ರಕ್ಷಿಸಿರಿ

ನಿಮ್ಮ ಕಂಠದಲ್ಲಿ ಮತ್ತು ಎದೆಯಲ್ಲಿ 'ಅಶಕ್ತ ಸ್ಥಳ'ವೊಂದು ಇರುವುದಾದರೆ, ಮಳೆಗಾಲದಲ್ಲಿ ಅದರ ಅರಿವು ನಿಮಗಾಗುವುದು, ಅದುದರಿಂದಲೆ ಶೀತ; ಕೆಮ್ಮು ಮತ್ತು ಕಫವು ಹೆಚ್ಚಾಗಿ ಮಳೆಗಾಲದಲ್ಲಿ ಕಾಣಿಸಿಕೊಳ್ಳುವುದು. ಆದುದರಿಂದ ಪೆಪ್ಸ್ ಶ್ವಾಸನೀಯ ವಿಷಹಾರಿ ಗುಳಿಗೆಗಳನ್ನುಪಯೋಗಿಸಿ, ರೋಗ ಬಾರದಂತೆ ರಕ್ಷಿಸಿಕೊಳ್ಳಿರಿ.

ಪೆಪ್ಸ್ ಗುಳಿಗೆ ನಿಮ್ಮ ಬಾಯಿಯಲ್ಲಿ ಕರಗುತ್ತಿರುವಾಗ ಹೊರಡುವ ಔಷಧೀಯ ಧೂಮವು ನಿಮ್ಮ ಶ್ವಾಸಕೋಶದ ನಳಿಗೆಗಳನ್ನು ಪ್ರವೇಶಿಸುವುದು. ಅದರಿಂದ ನಿಮ್ಮ ಶ್ವಾಸಕೋಶವು ರೋಗಗಳನ್ನು ತಡೆಯುವ ಸಾಮರ್ಥ್ಯವನ್ನು ಹೊಂದುವುದು. ಈ ಧೂಮದಿಂದ ಕಂಠನಾಳದಲ್ಲಿರುವ ಉರಿತವು ಕಡಿಮೆಯಾಗುವುದು, ಎಲ್ಲಾ ರೋಗಾಣುಗಳನ್ನು ನಾಶಪಡಿಸುವುದು, ಕಫವನ್ನು ಕಡಿಮೆಮಾಡುವುದು, ಯಾವತ್ತು ಶೀತ ಸಮ್ಬಂಧ ರೋಗಗಳನ್ನು ಎದುರಾಯಿಸುವರೆ ನಿಮಗೆ ಹೆಚ್ಚಿನ ಬಲವನ್ನು ಕೊಡುವುದು

ಎಲ್ಲಾ ದವಾಖಾನೆಗಳಲ್ಲಿಯೂ ರೂ ಒಂದರ ಪ್ರಕಾರ ಮಾರಾಟವಾಗುತ್ತದೆ

ಏಜಂಟರು

ಮೆಸ್ಸರ್ಸ್ ದಾಥಾ ಎಂಡ್ ಕೊ, ಪಾರ್ಕ್‌ಟೌನ್, ಮದ್ರಾಸು

ಯಾವಾಗಲೂ ಪೆಪ್ಸ್ ಗುಳಿಗೆಗಳನ್ನೇ ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು.

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಟಾಗುವ ಬಳಲಿಕೆ ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವೀರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು.

ಆಯುರ್ವೇದಾಶ್ರಮ ಮದರಾಸು



ಸ್ವಾಪಿಸ್ಟರು:

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ರಕ್ಷೈರ್ನರ್ಹಾರ್ಹೈರ್ನಸ್ತು ತುರ್ನರ್ನ
ದೇವಾ । ನ ಭೇಜಿರೇ ಭೀಮ
ವಿಕೀಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ದೊರೆಯಬನುಪಮ ರತ್ನಗಳು
ಸಾ । ಗರವ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ! ಮತೆ
ವಿಶ್ವವ ಸುಡುವ ಬರುತಿರುವ ।
ಗರಲಕವರಂಜಿದರೆ! ಸುಧೆಯನು
ಪಡೆತು ಕ್ಷುದ್ರರ
ತೆರದಿ ಕುಳಿತರೆ । ತೆರಳ ಬಲರೆ!
ತೆರೆದು, ಧೀರರು
ನಿಶ್ಚಿತಾರ್ಥವನು ॥

ತಾರೀಕು ೭–೭–೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 7—7—1939

ಹಿಟ್ಲರನ ಪಡೆಯು ಡಾನ್ಜಿಂಗನ್ನು ಪ್ರವೇಶಿಸಿದೆ!

ಬ್ರಿಟಿಷರ ಬಿನ್ನಹಕ್ಕೆ ಬೆಲೆಯಿಲ್ಲ

ಜರ್ಮನಿಯ ಸಾಹಸಕ್ಕೆ ಎದುರಿಲ್ಲ!

ಯೂರೋಪಿನ ಪ್ರಬಲ ರಾಷ್ಟ್ರಗಳಾದ ಬ್ರಿಟನು ಜರ್ಮನಿಗಳು ಈಗೊಮ್ಮೆ ಹಿಡಿದು ನಿಂತಿವೆ. ಕಳೆದ ವಾರದಲ್ಲಿ ಜರ್ಮನಿಯು ಸ್ಲೋವೇಕಿಯವನ್ನು ನುಂಗಹೋಗುವುದೆಂಬ ವಾರ್ತೆ ಹರಡಿತ್ತು. ಆ ಸುದ್ದಿಯು ಗಾಳಿಯಲ್ಲಿ ಮಾಯವಾಗುತ್ತಿದ್ದಂತೆ, ಡಾನ್ಜಿಂಗಿಗೆ ಜರ್ಮನಿಯ ನಾಲ್ಕು ಸಾವಿರ ಉದ್ಯೋಗಸ್ಥರು ತಮ್ಮ ಪಡೆಯೊಡನೆ ಪ್ರವೇಶಮಾಡಿದರೆಂದು ಈಗ ಕೇಳುತ್ತದೆ. ಹಿಂದೆ ಜರ್ಮನಿಯು ಸಾರಿದ್ದಂತೆ, ಒಂದು ವರ್ಷ ಸ್ಲೋವೇಕಿಯವನ್ನು ಮುಷ್ಟಿಗೆ ಹಾಕುತ್ತಿದ್ದರೂ ಮಹಾನರ್ಥಗಳಾಗುವ ಸಂಭವನವೇನೂ ಇರಲಿಲ್ಲ. ಆದರೆ ಪೋಲೆಂಡಿನ ರಕ್ಷಣೆಗಾಗಿ ಬ್ರಿಟನು ಹಿಂದೆ ಪ್ರಕಟಪಡಿಸಿದಂತೆ, ನಾಜೀ ಸರಕಾರವು ಡಾನ್ಜಿಗನ್ನು ಮುಷ್ಟಿಗೆ ಹಾಕಿದ್ದಲ್ಲಿ ಖಂಡಿತವಾಗಿಯೂ ಯುದ್ಧಕ್ಕೆ ಎಲ್ಲಿಲ್ಲದೇ ಬೇಕಾಗಿದೆ. ಅದು ಮಾತ್ರವಲ್ಲದೆ ಫ್ರಾನ್ಸಿನ ಪ್ರಧಾನರೂ ಕೂಡಾ ಅದೇ ಅರ್ಥದ ಭಾಷಣವನ್ನು ಕೊಟ್ಟಿದ್ದಾರೆ. ಚರ್ಚ್‌ಹಿಲ್ಲರು ಹೇಳುವಂತೆ, ಬ್ರಿಟನು ಇಂದು ತೆರಿಗೆ ಕಳೆದ ವರ್ಷದಂತಹ ವಿಷಮ ಪರಿಸ್ಥಿತಿಗೆ ಬಂದಿರುತ್ತದೆ. ಜರ್ಮನಿಯು ಬ್ರಿಟನಿನ ಹೇಳಿಕೆಗೆ ಕಿವಿಗೊಡದಲ್ಲಿ ಪರಸ್ಪರ ಸಂಘರ್ಷಣೆಗಳು [illegible]ಗುವುದು ಸಂಭವವೇ ಎಂಬ ನಿರೀಕ್ಷೆಯಿದೆ.

ಈ ಸಂದರ್ಭದಲ್ಲಿ ಆಂಗ್ಲ–ಜರ್ಮನ್ ನೌಕಾ ಒಪ್ಪಂದದ ಮುಗಿತಾಯದ ಉತ್ತರವಾಗಿ ಒಂದು ನೆನಪರಿಕೆಯನ್ನು ಬ್ರಿಟನು ಜರ್ಮನಿಗೆ ಕಳುಹಿಸಿರುತ್ತದೆ. ಯೂರೋಪಿನಲ್ಲಿ ಯಾವುದೇ ರಾಷ್ಟ್ರವಾಗಲಿ ಜರ್ಮನು ತನ್ನ ಕರಾಳ ಧೋರಣೆಯಿಂದ ಆಕ್ರಮಿಸಲು ನೋಡಿದಲ್ಲಿ, ಖಂಡಿತವಾಗಿಯೂ ಜರ್ಮನಿಗೆ ವಿರುದ್ಧವಾಗಿ ಬ್ರಿಟನು ಯುದ್ಧ ಹೂಡುವುದೆಂದು ಇದರಲ್ಲಿ ಖಂಡಿತಪಡಿಸಿದೆ.

ಅದಲ್ಲದೆ, ಈ ನೆನಪರಿಕೆಯಲ್ಲಿ ಬ್ರಿಟನು ಜರ್ಮನಿಯನ್ನು ಎಲ್ಲಾ ರೀತಿಯಿಂದಲೂ ಸುತ್ತುಗಟ್ಟಲು ಯತ್ನಿಸುತ್ತಿದೆಯೆಂಬ ಜರ್ಮನಿಯ ಅಪವಾದನೆಯನ್ನು ಅಲ್ಲಗಳೆದಿದೆ. ಜರ್ಮನಿಯ ವ್ಯಾಪಾರ ಉದ್ಯಮಗಳನ್ನು ಯಾವುದೇ ರೀತಿಯಿಂದಲಾಗಲಿ ತಡೆಯುವ ಧ್ಯೇಯವು ಬ್ರಿಟನಿಗಿರುವುದಿಲ್ಲವೆಂದೂ, ಬ್ರಿಟನಿನೊಡನೆ ವ್ಯಾಪಾರ ಸಂಬಂಧದಲ್ಲಿ ಬ್ರಿಟನು ಸೌಹಾರ್ದದಿಂದ ವರ್ತಿಸಿತ್ತೆಂದೂ ಜರ್ಮನಿಯ ಆರ್ಥಿಕ ಸುಧಾರಣೆಯ ವಿಷಯದಲ್ಲಿ ಅನ್ಯೋನ್ಯ ವಿಶ್ವಾಸವು ಬೆಳೆದಲ್ಲಿ ಬ್ರಿಟನು ಸಂಪೂರ್ಣ ಸಹಕರಿಸುವುದೆಂದೂ ತಿಳಿಸಿದೆ.

ಹೀಗೆ ಜರ್ಮನಿಯೊಡನೆ ಜಗಳ ಹೂಡುವಂತಾದ್ದು ಬ್ರಿಟನಿನ ಅಭಿಪ್ರಾಯವಲ್ಲವೆಂದೂ ಜರ್ಮನ್ ಬ್ರಿಟನುಗಳು ಅನ್ಯೋನ್ಯ ಸೌಹಾರ್ದವು ಹೆಚ್ಚಿ ಎರಡು ಜನಾಂಗಗಳ ಹಕ್ಕುಗಳು ಮಾತ್ರ ಪರಸ್ಪರ ಹಾಳಾಗದಂತೆ ನೋಡುವುದೇ ಬ್ರಿಟನಿನ ಅಭಿಪ್ರಾಯವೆಂದೂ ಸೂಚಿತವಾಗಿದೆ. ಈ ನೆನಪರಿಕೆಯಲ್ಲಿ ಜರ್ಮನಿಯು ಇನ್ನೊಂದು ಒಪ್ಪಂದವನ್ನು ಮಾಡುವ ಮನಸ್ಸುಳ್ಳದ್ದಾದರೆ, ಬ್ರಿಟಿಷ ಸರಕಾರವು ಸಂಪೂರ್ಣ ಸಂತೋಷದಿಂದ ಅದನ್ನು ಅಂಗೀಕರಿಸ ಬಹುದೆಂದೂ, ಆದರೆ ಅದು ಯಾವಾಗ ಆಗತಕ್ಕದ್ದೆಂಬ ವಿಷಯದಲ್ಲಿಯೂ, ಈ ಒಪ್ಪಂದವನ್ನು ಮುರಿಯುವ ಹಾಗೂ ವ್ಯತ್ಯಾಸ ಮಾಡುವ ಸಮಯದಲ್ಲಿ ಎರಡು ರಾಷ್ಟ್ರಗಳ ಅಭಿಮತವನ್ನು ಪಡೆಯುವ ವಿಷಯವಾಗಿ ಭದ್ರತೆಯನ್ನು ಕೂಡಾ ಬ್ರಿಟನು ಅಪೇಕ್ಷಿಸುತ್ತದೆ.

ಬ್ರಿಟನಿನ ಈ ನೆನಪರಿಕೆಯ ಉತ್ತರದಿಂದ ಜರ್ಮನಿಯು ಏನೂ ಎಚ್ಚರಗೊಂಡಂತೆ ಕಾಣುವುದಿಲ್ಲ. ಆಗಾಗಲೇ, ಬ್ರಿಟನು ಯಾವ ರಾಷ್ಟ್ರಕ್ಕೆ ಮುಷ್ಟಿಗೆ ಹಾಕಬಾರದಾಗಿ ಜರ್ಮನಿಯನ್ನು ಎಚ್ಚರಿಸಿರುವುದೋ, ಆ ಡಾನ್ಜಿಂಗಿಗೇ ಜರ್ಮನ್ ಸೈನ್ಯವು ನುಗ್ಗುತ್ತಿದೆ.

ಬ್ರಿಟನು ಜರ್ಮನಿಗಳ ಸಂಘರ್ಷಣೆಯು ಎಷ್ಟು ಸಮೀಪವರ್ತಿಯೋ ಅಷ್ಟೇ ಅನಿವಾರ್ಯವು ಆಗಿದೆ. ಶಾಂತಿಸಾಧಕರಾದ ಚೆಂಬರ್ಲಿನರ ಧೋರಣೆಯು ಹೇಗೆ ತಿರುಗಲಿದೆಯೋ ಹೇಳಬರುವುದಿಲ್ಲ.

ಹೈದರಾಬಾದು ಸೆರೆಮನೆಯಲ್ಲಿ ಸತ್ಯಾಗ್ರಹಿಗಳಿಗೆ ನರಕ ಪೀಡೆ!

ಶ್ರೀ ಎಂ. ಎಸ್. ಆಣೆಯವರ ಪ್ರಕಟಣೆ

ಸತ್ಯಾಗ್ರಹಿಗಳ ಮರಣಕ್ಕೆ ಹಿಂಸೆಯು ಕಾರಣವೇ?

ವೈಸರಾಯರಿಂದ ನಿಷ್ಪಕ್ಷಪಾತ ವಿಚಾರಣೆಯಾಗಬೇಕು

ನಿಜಾಮರ ಸರಕಾರದಲ್ಲಿ ಜೈಲಿಗೆ ಹೋದ ಸ್ವಾತಂತ್ರ್ಯವೀರರಿಗೆ, ಕೊಡುವ ಸಹನಾತೀತವಾದ ಸಂಕಷ್ಟಗಳ ಕುರಿತು, ಶ್ರೀ ಎಂ. ಎಸ್. ಆಣೆಯವರು ಹೀಗೆಂದು ಪ್ರಕಟಿಸುತ್ತಾರೆ:

"ಅಲ್ಲಿ ಸತ್ಯಾಗ್ರಹಿಗಳು ದುರಂತ ಸಂಕಷ್ಟಗಳಿಗೆ ಗುರಿಯಾಗುತ್ತಿರುವರೆಂದ ಕೇಳಿ ನಾನು ಹಲವು ಮಿತ್ರರೊಡನೆ ಅಲ್ಲಿಗೆ ತೆರಳಿದೆ. ಅನೇಕ ಮಂದಿ ಸತ್ಯಾಗ್ರಹಿಗಳು ಲಾಠಿಯ ಭಯಂಕರವಾದ ಹೊಡೆತದಿಂದ ಗಾಯಗೊಂಡದ್ದನ್ನು ಕಂಡೆನು. ಪೂನಾದ ಒಬ್ಬ ಮಹನೀಯರು ಹೀಗೆ ಲಾಠಿಯ ಹೊಡೆತದಿಂದ ಇಂದು ಆಧಾರವಿಲ್ಲದೆ ಎದ್ದು ನಿಲ್ಲಲು ಸಾಧ್ಯವಿಲ್ಲದವರಾಗಿಯೂ, ನಿರಂತರ ನೋವಿನಿಂದ ನರಳುತ್ತಲೂ ಇದ್ದಾರೆ. ಕಾಲಿಗೆ ಬೇಡಿ ತೊಡಿಸಿದ್ದರು.

"ನಾವು ವಿಚಾರಣೆಗಿಟ್ಟ ಕೆಲವು ಸತ್ಯಾಗ್ರಹಿಗಳ ತನಿಖೆಯ ದಿನ ಕೋರ್ಟಿಗೆ ತೆರಳಿದೆವು. ಜಗಲಿಯಲ್ಲಿ [illegible] ಮಂದಿ ಸತ್ಯಾಗ್ರಹಿಗಳು ಕುಳಿತಿದ್ದರು. ಅವರಲ್ಲಿ [illegible] ಮಂದಿಯ ಕಾಲಿಗೆ ಕಬ್ಬಿಣದ ಬೇಡಿಯನ್ನು ತೊಡಿಸಿದ್ದರು. ಅವರಲ್ಲಿ ಇಬ್ಬರು ಸುಶಿಕ್ಷಿತರು ಮತ್ತು ಒಳ್ಳೆಯ ಸಂಸ್ಕೃತಿಯುಳ್ಳ ಮಹನೀಯರು.

"ಮಹಾಶಯ ಕೃಷ್ಣರವರು [illegible] ಮಂದಿ ಸತ್ಯಾಗ್ರಹಿಗಳ ಜತೆ ಮುಜಂಬಿಯಿಂದ ಬಂಧಿಸಲ್ಪಟ್ಟಾಗ, ಅವರಿಗೆಲ್ಲಾ ಆಹಾರ ನೀರು ವಸತಿ ಮೊದಲಾದ ಸೌಕರ್ಯಗಳನ್ನು ಕೊಡಲು ಜೈಲಿನ ಅಧಿಕಾರಿಗಳಿಗೆ ಸಾಧ್ಯವಾಗದೆ ಅವರನ್ನು ಬಹಳ ನಿರ್ದಯವಾಗಿ ನೋಡಿದರು. ಹೀಗೆ ೮೦೦ ಮಂದಿ ಸತ್ಯಾಗ್ರಹಿಗಳನ್ನು ಸೆರೆಯಲ್ಲಿರಿಸಿ, ೩೦ ತಾಸುಗಳ ವರೆಗೆ ಅವರನ್ನು ಉಗ್ರ ವಾಸದಲ್ಲಿ ಕೆಡವಿದರು. ತಮಗೆ ಜೈಲಿನಲ್ಲಿರುವ ಅಪಮಾನಕರವಾದ ಸೌಕರ್ಯಗಳ ಕುರಿತು ಅಧಿಕಾರಿಗಳೊಡನೆ ಸತ್ಯಾಗ್ರಹಿಗಳು ದೂರಿಕೊಂಡಾಗ, ಹಲವರಿಗೆ ಬಹಳವಾಗಿ ಲಾಠೀ ಪೆಟ್ಟುಗಳ ಸುರಿಮಳೆಯೇ ಆಯಿತು. ಹಾಗೆ ಗಾಯಗೊಂಡವರು ಇಂದೂ ನೋವಿನಿಂದ ನರಳುತ್ತಾ ಇದ್ದಾರೆ.

"ಅಲ್ಲಿನ ತಿಲಕ ದಂಡನ ಒಳ್ಳೆಯ ವಿದ್ಯಾವಂತ ಹಾಗೂ ಸುಸಂಸ್ಕೃತನಾದವನೆಂದು ತಿಳಿದ, ಅವನೊಡನೆ ನಾವು ವಿದ್ಯಾವಂತರಾಗಿರುವ ಗುಣ ನಡತೆಯ ಸತ್ಯಾಗ್ರಹಿಗಳ ನೈಲಾನ್ ಕಾಲು ಕೈಗಳಿಗೆ ಬೇಡಿ ತೊಡಿಸಿ ಕೋರ್ಟಿಗೆ ಕರೆತರುವ ವಿಷಯವಾಗಿ ದೂರು ಹೇಳಲು, ಆತನು ಆಶ್ಚರ್ಯಗೊಂಡು ಆ ವಿಷಯದಲ್ಲಿ ತಾನು ತನ್ನಿಂದ ಆಗುವ ಕೆಲಸ ಮಾಡುವುದಾಗಿ ಭರವಸೆಯಿತ್ತನು.

ಜೈಲಿನಲ್ಲಿ ಓದುವುದು, ಆಹಾರ ವಿಷಯ ಒಳ್ಳೆಯ ಬಟ್ಟೆಗಳನ್ನು ಉಡುವ ವಿಷಯದಲ್ಲಿ ತೋರಿಸಿದ ರಿಯಾಯಿತಿಗಳನ್ನು ಹಿಂತೆಗೆದಿದ್ದಾರೆ.

"ಮಹಾಶಯ ಕೃಷ್ಣರೊಡನೆ ಬಂದ ಒಬ್ಬ ಸತ್ಯಾಗ್ರಹಿಯು ಜೈಲಿನಲ್ಲಿ ತೀರಿಹೋದನು. ಆತನು ಜ್ವರದ ಸಂಬಂಧವಾಗಿ ತೀರಿಹೋದನೆಂದು ಅಧಿಕಾರಿಗಳು ಹೇಳುತ್ತಾರೆ. ಆದರೆ ಜೈಲಿನ ಅಧಿಕಾರಿಗಳ ಕಠೋರ ವರ್ತನೆಯೇ ಕಾರಣವೆಂಬ ವದಂತಿಯಿದೆ. ಹೆಣದ ಮೇಲೆ ಅನೇಕ ಗಾಯಗಳಿದ್ದುವಂತೆ. ಹೆಣದ ಫೋಟೋ ತೆಗೆಯಲು ಸರಕಾರವು ಸಮ್ಮತಿಸಲಿಲ್ಲ.

'ಸತ್ಯಾಗ್ರಹಿಗಳಲ್ಲಿ ಈಗ ಸುಮಾರು ೧೦ ಮಂದಿಗೆ ಹೆಚ್ಚಿನ ಜನರು ಸತ್ತಿರುವರು. ಎಲ್ಲಾ ಹೆಣಗಳ ಮೈಮೇಲೆಯೂ ಗಾಯಗಳ ಗುರುತಿತ್ತೆಂದು ಖಂಡಿತವಾದ ಸುದ್ದಿಯಿದೆ. ಹೀಗಿರುವಾಗ ಬ್ರಿಟಿಷ್ ಸರಕಾರವು ತಮ್ಮ ಪ್ರಜೆಗಳನ್ನು ಆಶ್ರಿತ ಸರಕಾರವು ಈ ರೀತಿಯ ನಿರ್ದಯವಾದ ರೀತಿಯಲ್ಲಿ ಪಾಶವಿಕ ರೀತಿಯಲ್ಲಿ ನೋಯಿಸುವುದನ್ನು ತಡೆಯುವುದು ಅದರ ಕರ್ತವ್ಯವಾಗಿರುತ್ತದೆ. ಆದ್ದರಿಂದ ನಿಜಾಮು ಸರಕಾರದ ಈ ಕಠೋರ ವರ್ತನೆಯ ನ್ಯಾಯವಾದ ವಿಚಾರಣೆಯನ್ನು ವೈಸರಾಯರು ಮಾಡಬೇಕಾಗಿ ನಾನು ಕೇಳಿಕೊಳ್ಳುತ್ತೇನೆ."

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಯಾಂಪಲ್ಲುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಟೇಷನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮಾಲು ಪರದೇಶದಿಂದ ಬರುವಂತೆ ಉಂಟು. ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎನ್. ಎಮ್. ನಾಥ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜಂಟ್.—ಪಿ. ಎಚ್. ಭಕ್ತಾ. ಗದಗ—ವಿ. ಎಸ್. ನಿಟ್ಟೆ.
ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜಂಟ್—ಡಾ. ಕೆ. ಭಾಸ್ಕರ ಪೈ.
ಸ್ಪೆಶಲ್ ಏಜಂಟ್:—ಬಿ. ವ್ಹಿ. ಹೊನ್ನಾವರ

ಗಾಂಧಿಜಿಯವರ ಸಂದೇಶಗಳು

ಸ್ವಾತಂತ್ರ್ಯವೊಂದೇ ನಮ್ಮೆಲ್ಲರ ಗುರಿ!

ಭಾಷಾಸರಣಿ ಬೇರೆ; ಉದ್ದೇಶವೊಂದೇ!

ಸತ್ಯಾಗ್ರಹದ ತಿರುಳೇನು? ಫೆಡರೇಶನು ಬಂದೀತೇ?

ಅಂಧಾನುಯಾಯಿಗಳು ಯಾರು?

ಸತ್ಯಾಗ್ರಹದ ತತ್ವವೇನು?

ಮಹಾತ್ಮಾಜಿಯವರು ಆಶ್ರಿತರಾಜ್ಯಗಳಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಅಪ್ಪಣೆಕೊಡಿಸಿದ ವಿಷಯದಲ್ಲಿ ಆಶ್ರಿತ ರಾಜ್ಯದ ಕೆಲವು ಧುರೀಣರೂ, ಜನರೂ, ಅಸಂತೃಪ್ತಿ ಪಟ್ಟುಕೊಳ್ಳುವುದಕ್ಕೆ ಸಮಾಧಾನವಾಗಿ ಉತ್ತರ ಬರೆಯುತ್ತಾ ಗಾಂಧಿಜಿಯವರ ಶ್ರದ್ಧಾವಂತ ಅನುಯಾಯಿಗಳಲ್ಲೊಬ್ಬರಾದ ಡಾ| ಪಟ್ಟಾಭಿ ಸೀತಾರಾಮಯ್ಯನವರು, ಈ ಜನರು ನಿಜವಾದ ಸತ್ಯಾಗ್ರಹದ ತತ್ವವನ್ನು ತಿಳಿದಿಲ್ಲವೆಂದು ಹೇಳುತ್ತಾರೆ

"ಸತ್ಯಾಗ್ರಹವು ಹೊಸತೊಂದು ವಿಜ್ಞಾನ, ನವೀನ ಕಲೆ. ಅದಕ್ಕೆ ಪ್ರತ್ಯೇಕ ಪರಿಭಾಷೆಯಿದೆ ನಾವೆಲ್ಲರೂ ಅದನ್ನು ತಿಳಿಯಲಿಲ್ಲ. ಹಲವರು ಅದನ್ನು ತಿಳಿಯಲು ಜ್ಞಾನಶಕ್ತಿಯಿಂದ ಯತ್ನಿಸುತ್ತಾರೆ. ಆದರೆ ಈ ತತ್ವದ ಸೂತ್ರವರಿದು ಒಂದು ಅಪೂರ್ವ ಶಕ್ತಿಯಿದೆ; ಆ ಅಪೂರ್ವ ಶಕ್ತಿಯ ಮೂಲಕವೇ ನಾವದನ್ನು ಅರಿತುಕೊಳ್ಳಬೇಕು. ನಾವು ಮಹಾತ್ಮಾಜಿಯವರ ಸತ್ಯಾಗ್ರಹದ ತತ್ವವನ್ನು ನಮ್ಮ ಜ್ಞಾನಶಕ್ತಿಯ ಉಪಯೋಗದ ಮೂಲಕ ಅವರು ಅನುಸರಿಸಿದ ಕಾರ್ಯಗಳನ್ನು ಧೋರಣೆಗಳನ್ನು ಶೋಧಿಸಿ ನಿರ್ಣಯ ಮಾಡಬೇಕು ಅವರ ನಿರ್ಣಯವು ನಮ್ಮ ಜ್ಞಾನಶಕ್ತಿಗೆ ಸರಿಬೀಳದಿದ್ದರೆ ನಾವು ಅವುಗಳನ್ನು ದೂರುತ್ತೇವೆ. ಆದರೆ ನಾವೆಲ್ಲರೂ, ಗಾಂಧಿಜಿಯವರು ಯಾವುದೇ ನಿರ್ಣಯ ಮಾಡುವುದಾಗಲಿ ಕಾರ್ಯವಾರಂಭಿಸುವುದಾಗಲಿ ಅವರ ಅಂತರ್ಯಪ್ರೇರಣೆಯಿಂದ ಎಂಬುದನ್ನು ತಿಳಿದಿದ್ದೇವೆ ಅದ್ದರಿಂದ ಯೋಗ್ಯವಾದ ಕಾರಣ ಮತ್ತು ತರ್ಕ ಸರಣಿಯಿಂದ ತಿಳಿದುಕೊಳ್ಳುವುದು ನಮ್ಮ ಪ್ರಯತ್ನವಾಗಿದೆ ಸಹಜವಾಗಿಯೂ ಈ ಯತ್ನಗಳನ್ನು ಮಾಡಬೇಕಾದರೆ ಈ ತತ್ವದಲ್ಲಿ ವಿಶ್ವಾಸವಿರಬೇಕು ವಿಶ್ವಾಸವಿಲ್ಲದೆ ಪ್ರಯೋಗಸಿದ್ಧವೆನ್ನುವ ವಿಜ್ಞಾನವನ್ನು ಕೂಡಾ ನಮಗೆ ನಂಬಲಿಕ್ಕಾಗುವದಿಲ್ಲ."

ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಪ್ರತಿನಿಧಿ ಮಿ| ಸ್ಟೀಲ್ ಎಂಬವನು ಗಾಂಧಿಜಿಯವರನ್ನು ಕಂಡು ರಾಜಕೀಯದ ವಿಷಯವಾಗಿ ಹಲವು ಪ್ರಶ್ನೆಗಳನ್ನು ಕೇಳಿದನು ಇತ್ತೀಚೆಗೆ ಗಾಂಧಿಜಿಯವರು ರಾಜಕೀಯ ಸಂಭಾಷಣೆಗಳನ್ನು ಮಾಡಲು ಬಯಸುವ ಪತ್ರಿಕಾ ಪ್ರತಿನಿಧಿಗಳನ್ನು ಮಾತನಾಡಿಸುವುದೇ ಕಡಿಮೆ. ಹಾಗಾಗಿ ಈತನು ಕೇಳಿದ ಪ್ರಶ್ನೆಗಳೂ ಆತನು ಪಡೆದ ಉತ್ತರಗಳೂ ಬಹಳ ಅನುಕೂಲ್ಯವಾಗಿವೆ

'ಸ್ವಾತಂತ್ರ್ಯವೆಂಬುದರಿಂದ ನಿಮ್ಮ ಅಭಿಪ್ರಾಯವೇನು? ಇದು ಆತನು ಗಾಂಧಿಜಿಯವರಿಗೆ ಮೊದಲಾಗಿ ಕೇಳಿದ ಪ್ರಶ್ನೆ

ಶಬ್ದದ ಕುರಿತು ಚರ್ಚೆಯಿಲ್ಲ

'ಸ್ವಾತಂತ್ರ್ಯವೆಂದರೆ ನಾನು ಹಿಂದೂದೇಶದಿಂದ ಬ್ರಿಟಿಷರ ಅಧಿಕಾರವು ಸಂಪೂರ್ಣವಾಗಿ ಹೋಗುವುದೆಂದು ತಿಳಿಯುತ್ತೇನೆ' ಎಂದು ಗಾಂಧಿಜಿಯವರು ಉತ್ತರವಿತ್ತರು 'ಆದರೆ ಇದು ಡೊಮಿನಿಯನ್ ಸ್ಟೇಟಸ್‌ಗಿಂತ ಭಿನ್ನವಾಗಿರಬೇಕಾಗಿಲ್ಲ'ವೆಂದು ಅವರು ಮುಂದುವರಿಸಿದರು. 'ದಕ್ಷಿಣ ಆಫ್ರಿಕ, ಕೆನಡಾ, ಆಸ್ಟ್ರೇಲಿಯಾ, ಮೊದಲಾದ ಡೊಮಿನಿಯನ್ ಸ್ಟೇಟಸ್ ಇರುವ ರಾಷ್ಟ್ರಗಳ ರಾಜಕೀಯ ಪರಿಸ್ಥಿತಿಗೆ ಸಂಪೂರ್ಣ ಭಿನ್ನವಾಗಿ ಹಿಂದೂದೇಶವು ಇರುವ ಕಾರಣ ಇಲ್ಲಿನ ಸ್ವಾತಂತ್ರ್ಯಕ್ಕೆ ಡೊಮಿನಿಯನ್ ಸ್ಟೇಟಸ್ ಎಂದು ಹೆಸರಿಡುವುದು ಸರಿಯೂ ಆಗುವುದಿಲ್ಲ. ಬಹುಶಃ ಇಂಗ್ಲಿಷು ರಾಜ್ಯಸೂತ್ರದಂತೆ ಈ ಶಬ್ದವೇ ಬಹಳ ಸಂದಿಗ್ಧವಾಗಿ ಎಳೆದ ಕಡೆ ಬರುವಂತೆ ಇದೆ. ಆದರೆ ಹಿಂದೂದೇಶದ ಇಂದಿನ ಸಮಸ್ಯೆಯನ್ನು ಬಗೆಹರಿಸುವಂತೆ ಆಗಿ, ಇಂಗ್ಲೆಂಡಿನೊಡನೆ ಗೌರವದ ಒಪ್ಪಂದವಾಗುವಲ್ಲಿ ನಾನು ಯಾವುದೇ ಶಬ್ದವಾಗಲಿ ಆ ಕುರಿತು ಚರ್ಚಿಸಲಾರೆನು. ಹಿಂದೂದೇಶದ ಸಮಸ್ಯೆಯ ಸಂಪೂರ್ಣ ಪರಿಹಾರದ ಹಾದಿಯಲ್ಲಿ ಇಂಗ್ಲೆಂಡಿನೊಡನೆ ಮಾಡುವ ಗೌರವಪೂರ್ಣವಾದ ಒಪ್ಪಂದಕ್ಕೆ ಇಂಗ್ಲಿಷ್ ರಾಜ್ಯನೀತಿ ಕುಶಲರು ಡೊಮಿನಿಯನ್ ಸ್ಟೇಟಸ್ ಎಂದು ಹೆಸರಿಡುವುದಿದ್ದರೆ ನಾನು ಆ ಶಬ್ದಕ್ಕಾಗಿ ಜಗಳವೆತ್ತಲಾರೆ '

ಗಾಂಧಿ ಮತ್ತು ಸುಭಾಷರ ಮತವೊಂದೇ

'ಆದರೆ ಕಾಂಗ್ರೆಸಿನಲ್ಲಿ ಸುಭಾಷ ಬಾಬುವಿನಂತಿರುವ ಕೆಲವು ರಾಜಕೀಯ ಮತದವರು ಬ್ರಿಟಿಷ್ ಸಾಮ್ರಾಜ್ಯದಿಂದ ತೀರಾ ಹೊರತಾಗಿರುವ ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುವವರಿದ್ದಾರಷ್ಟೆ?' ಹೀಗೆಂದು ಪತ್ರಿಕಾ ಪ್ರತಿನಿಧಿಯು ಪ್ರಶ್ನಿಸಿದನು

'ಅದು ಕೇವಲ ಸಾಂಭಾಷಿಕ ವ್ಯತ್ಯಾಸವಲ್ಲದೆ ಬೇರಲ್ಲ ನಾನು ಮತ್ತು ಸುಭಾಷಬಾಬುಗಳು ಬೇರೆ ಬೇರೆ ಭಾಷಾ ಸರಣಿಯನ್ನು ಉಪಯೋಗಿಸುತ್ತಿರುವೆವಾದರೂ, ಈ ವಿಷಯದಲ್ಲಿ ನನಗೂ ಅವರಿಗೂ, ಒಂದಿಷ್ಟೇ ಭೇದವಿರುವುದೆಂದಾಗಲಿ ನಾನು ಒಪ್ಪಿಕೊಳ್ಳುವುದಿಲ್ಲ ನಾನು ಹೇಳಿದಂತೆ ಹಿಂದೂದೇಶದಲ್ಲಿ ಆ ರೀತಿಯ ಸ್ವತಂತ್ರವಾದ ಗೌರವಪೂರ್ಣವಾದ ಒಪ್ಪಂದವನ್ನು ಇಂಗ್ಲೆಂಡಿನೊಡನೆ ನಾವು ಮಾಡಿಕೊಂಡಲ್ಲಿ ಸುಭಾಷ ಬಾಬುಗಳು ಅದಕ್ಕೆ 'ಬೇಡ'ವೆನ್ನಲಾರರೆಂದು ನಾನು ತಿಳಿಯುತ್ತೇನೆ. ಆದರೆ ಇಂದು ಸುಭಾಷರಲ್ಲಿ ಆ ರೀತಿಯ ಮಾತುಕತೆ ನಡೆಸಿದರೆ ಬಹುಶಃ ಅವರು ಭಿನ್ನವಾಗಿ ಉತ್ತರಿಸಬಹುದು, ಏಕೆಂದರೆ ಬ್ರಿಟಿಷರು ಕೆಲವರು ತಿಳಿಯುವಂತೆ ಅಷ್ಟು ಸುಲಭದಲ್ಲಿ ಶರಣು ಬರಲಾರರೆಂದು ಅವರು ಭಿನ್ನವಾಗಿ ಮಾತನಾಡುತ್ತಾರೆ ಆದರೂ ನಾನು ಅವರೊಡನೆ ಅದಕ್ಕಾಗಿ ಕಾದಾಡುವುದಿಲ್ಲ. ನಾನು ನನ್ನ ವಿಚಾರಸರಣಿಗೆ ಸರಿಯಾದ ಭಾಷೆಯನ್ನು ಉಪಯೋಗಿಸುತ್ತೇನೆ ' ಹೀಗೆಂದರು ಗಾಂಧಿಜಿಯವರ ಫೆಡರೇಶನಿನ ಕುರಿತು ಬ್ರಿಟಿಷ್ ಅಧಿಕಾರಿಗಳೂ ಗಾಂಧಿಜಿಯವರಿಗೂ ಯಾವುದೇ ರೀತಿಯ ಗುಪ್ತವಾದ ಪತ್ರವ್ಯವಹಾರವು ನಡೆಯುತ್ತದೋ ಎಂದು ತಿಳಿಯಲು ಆ ಅಮೇರಿಕನು ಪತ್ರಿಕಾ ಪ್ರತಿನಿಧಿಗಳು ಕುತೂಹಲಪಟ್ಟರು

ಫೆಡರೇಶನು ಬರುವುದೇ?

'ಹಾಗೆ ಯಾವುದೂ ಇಲ್ಲ, ಈ ವಿಷಯದಲ್ಲಿ ಪತ್ರಿಕೆಗಳಲ್ಲಿ ಬರುವ ಎಲ್ಲಾ ವಿಷಯಗಳು ಕೇವಲ ಊಹನೆಯು ಕೇವಲ ಕಲ್ಪನಾ ಕಥೆಗಳಾಗಿವೆ ಇಂದಿನ ವೈಸರಾಯರು ಆ ರೀತಿ ಕೆಲಸಮಾಡುವವರಲ್ಲ ಗುಟ್ಟಿನಲ್ಲಿ ಕಾರ್ಯ ನಡೆಸುವುದರ ಕುರಿತು ಅವರಿಗೆ ಏನೂ ವಿಶ್ವಾಸವಿಲ್ಲ, ಅವರು ಪ್ರತಿಯೊಂದನ್ನು ಸಾರ್ವಜನಿಕರ ಗಮನಕ್ಕೆ ತಂದು ಕಾರ್ಯ ಮಾಡುತ್ತಾರೆ ಹೇಗಿದ್ದರೂ ನಾನು ಹಾಗೆಂದು ತಿಳಿಯುತ್ತೇನೆ ಬಹಿರಂಗ ವ್ಯವಹಾರದಿಂದ ಏನೂ ತೊಂದರೆ ಆಗಲಾರದೆಂದು ಅವರು ತಿಳಿಯುತ್ತಾರೆಂದು ನಾನು ನಂಬಿಕೆಯುಳ್ಳವನಾಗಿದ್ದೇನೆ.

"ಆದರೆ ಕಾಂಗ್ರೆಸ್ಸಿಗಾಗಲಿ, ಮುಸ್ಲಿಮರಿಗಾಗಲಿ, ನರೇಂದ್ರರಿಗಾಗಲಿ ಫೆಡರೇಶನು ಬೇಡದೇ ಇರುವಾಗ ಅದು ಬರಲಿಕ್ಕಿಲ್ಲವೆಂದು ನಾನು ಖಂಡಿತವಾಗಿಯೂ ನಂಬುತ್ತೇನೆ ಬ್ರಿಟಿಷ್ ರಾಜ್ಯನೀತಿ ಕುಶಲರು ಇಲ್ಲಿನ ಪಕ್ಷಗಳನ್ನು ಬಗಲೊಳಗೆ ಹಾಕಿಕೊಳ್ಳಲು ಯತ್ನಮಾಡುವರಲದೆ, ತುಪಿಯಲದ, ಹಿಂದೂದೇಶಕೆ ಬೇಡವಾದ ಫೆಡರೇಶನನ್ನು ಹೊರಿಸುವಷ್ಟು ವಿಚಾರಶೂನ್ಯತೆಯನ್ನು ಅವರು ತೋರಿಸಲಾರರೆಂದು ನಾನು ತಿಳಿಯುತ್ತೇನೆ. ಹೇಗಿದ್ದರೂ ಇದಿಷ್ಟು ನನ್ನ ವಿಶ್ವಾಸ.

"ಹಾಗಲ್ಲದೆ ಹಿಂದೂದೇಶದ ಮೇಲೆ ಅದು ಹೊರಿಸಲ್ಪಟ್ಟಲ್ಲಿ ಬಹಳ ದೊಡ್ಡ ವಿಷಮತೆಯನ್ನು ಉಂಟುಮಾಡೀತು ಇಂತಹ ಉಗ್ರ ವಿರೋಧ ಮತ್ತು ಅತೃಪ್ತಿಯಿಂದ ಇರುವ ರಾಷ್ಟ್ರದಲ್ಲಿ ಫೆಡರೇಶನು ಜಾರಿಗೆ ಬರಲು ಸಾಧ್ಯವಿಲ್ಲ ಯಾವ ಪಕ್ಷದವರಿಗೆ ಆಗಲಿ, ಇಲ್ಲಿ ಈ ಫೆಡರೇಶನು ಬೇಡವೆಂದಿರುವಾಗ ಇದನ್ನು ಹೊರಿಸುವುದು ಅದು ಅಧಿಕಾರದ ಮೂರ್ಖತೆಯನ್ನು ತೋರಿಸೀತು." ಹೀಗೆಂದು ಫೆಡರೇಶನಿನ ಕುರಿತು ಗಾಂಧಿಜಿಯವರು ವ್ಯಕ್ತಪಡಿಸಿದರು ಹಾಗಾದರೆ ಹಿಂದೂದೇಶಕ್ಕೆ ಬೇಕಾದುದೇನು? ಎಂದು ಪ್ರಶ್ನಿಸಿದಾಗ "ಹಿಂದೂದೇಶದ ಎಲ್ಲಾ ಪಕ್ಷಗಳಿಗೆ ಯಾವುದು ಬೇಕೋ ಅದೇ ಇದೀ ರಾಷ್ಟ್ರಕ್ಕೆ ಬೇಕಾದುದು" ಎಂದರು.

ಬ್ರಿಟಿಷರೊಡನೆ ಕಡೆಯ ನುಡಿ

ಬ್ರಿಟಿಷ್ ಸಾಮ್ರಾಜ್ಯ ಶಾಹಿಗೆ ಕಡೆಯ ನುಡಿ (ultimatum) ಹೇಳುವ ಸುಭಾಷಬಾಬುಗಳ ಧೋರಣೆಯ ಕುರಿತು ಗಾಂಧಿಜಿಯವರ ಅಭಿಪ್ರಾಯವು ಹೀಗಿತ್ತು

'ಸುಭಾಷಬಾಬು ಮತ್ತು ನನ್ನಲ್ಲಿ ಇರುವ ಮೂಲ ಅಭಿಪ್ರಾಯಭೇದವೇ ಅದು ಹಾಗೆ ಬ್ರಿಟಿಷ್ ಸರಕಾರದೊಡನೆ ಕಡೆಯ ನುಡಿ ಕೇಳುವುದೆಂಬ ವಿಚಾರವೇ ತಪ್ಪೆಂದು ನಾನು ಹೇಳುವುದಿಲ್ಲ ಆದರೆ ಇಂದು ಹಾಗೆ ಕಡೆಯ ನುಡಿ ಕೇಳಲು ಅಹಿಂಸೆಯ ಯೋಗ್ಯ ಎಂಬ ಒಪ್ಪಿಗೆಯು ಇದೆಯೋ ಎಂಬುದನ್ನು ತಿಳಿಯಬೇಕು ಎಲ್ಲಾ ಪಕ್ಷಗಳೂ ಅನ್ಯೋನ್ಯ ಗೌರವಪೂರ್ಣವಾದ ಒಂದು ಒಮ್ಮತಕ್ಕೆ ಬಂದ ಪಕ್ಷದಲ್ಲಿ ಈ ರೀತಿಯ ಪರಿಣಾಮಕಾರಿಯಾದ ಜನತೆಯ ಒಪ್ಪಿಗೆ ಸಿಗುವುದೂ ಸಾಧ್ಯವಿದೆ

ಹಿಂದೂ–ಮುಸ್ಲಿಂ ಐಕ್ಯ

ಜಾತೀಯ ಪರಿಸ್ಥಿತಿಯ ಕುರಿತು ಗಾಂಧಿಜಿಯವರೊಡನೆ ಇಂದು ಹಿಂದೂ–ಮುಸ್ಲಿಂ ಸ್ಥಿತಿಯ ಹಿಂದಿಗಿಂತಲೂ ಕೆಟ್ಟದಾಗಿದೆಯೇ ಎಂದು ಕೇಳಲಾಗಿ ಹೀಗೆಂದು ಅವರು ಉತ್ತರ ಕೊಟ್ಟರು

"ಬಹುಶಃ ಹಾಗೆಯೇ ಇದೆ ಆದರೆ ಬೇಗನೇ ನಾವು ಒಂದುಗೂಡುವ ಭರವಸೆ ನನಗಿದೆ ನಮ್ಮಿಕ್ಕಟ್ಟಿನ ಪಂಗಡಗಳ ಧ್ಯೇಯವೂ ಒಂದೆಂದು ತಿಳಿದು, ಎರಡು ಪಕ್ಷದ ಧುರೀಣರು ಅನ್ಯೋನ್ಯ ಒಂದಾಗುವ ಕಾಲ ಬೇಗನೇ ಬರುವುದು ಅಂತಹ ಪರಿಸ್ಥಿತಿಯು ಬಂದಾಗ ಅವರು ಹಾಗೆ ಮಾಡಿಯೇ ಮಾಡುತ್ತಾರೆ. ಇಂದು ಆಗಿರುವ ಜಾಗ್ರತಿಯ ಪರಿಣಾಮವು ಈ ವಿಧವಾಗಿ ನಮ್ಮಲ್ಲಿ ಪರಿಣಮಿಸಿದೆ ಇಂದಿನ ಪರಿಸ್ಥಿತಿಯು ಅನ್ಯೋನ್ಯ, ದ್ವೇಷ, ಮತ್ಸರ, ಶಂಕೆ, ವಿಷಮತೆಗಳನ್ನು ಉದ್ರೇಕಿಸುತ್ತವೆ ಹೊಸ ಹೊಸ ಕೇಳಿಕೆಗಳನ್ನು ಮುಂದೊಡ್ಡುತ್ತಾ ಹೊಸ ಹೊಸ ಧುರೀಣರು ತಲೆಯೆತ್ತಿ, ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸುತ್ತಾರೆ ಇಂತಹ ಅವ್ಯವಸ್ಥೆಯೊಳಗಿಂದಲೇ ವ್ಯವಸ್ಥೆಯು ಸ್ಥಾಪಿಸಲ್ಪಟ್ಟೀತೆಂಬುದು ಖಂಡಿತ."

"ಮುಸ್ಲಿಂ ಲೀಗು ಮತ್ತು ಕಾಂಗ್ರೆಸಿನೊಳಗಿನ ಭೇದಗಳು ... ವುಗಳಲ್ಲವೇ?" ಎಂದು ಕೇಳಿದರು ಪತ್ರಿಕಾ ಪ್ರತಿನಿಧಿಗಳು.

"ಭೇದಗಳು ನಿವಾರಣವಾಗಿರುವವುಗಳು" ಎಂದರು ಗಾಂಧಿಜಿಯವರು.

ಮುಂದಿನ ಹೆಜ್ಜೆ?

"ಕಡೆಯ ನುಡಿ ಕೇಳಲು ಸಮಯವಾಗಿಲ್ಲವೆಂದು ಹೇಳುತ್ತೀರಲ್ಲಾ, ಹಾಗಾದರೆ ಮುಂದಿನ ಧೋರಣೆಯೇನು?" ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಿದರು.

ಸತ್ಯದ ಪ್ರಚಾರ

"ನಮ್ಮ ಮನೆಯನ್ನು ವ್ಯವಸ್ಥೆಗೊಳಿಸುವುದು" ಕೂಡಲೇ ಗಾಂಧಿಜಿಯವರು ಉತ್ತರ ಹೇಳಿದರು—"ಬೇಗನೇ ನಾವು ಅದನ್ನು ಮಾಡಿ, ಬೇರೆ ಬೇರೆ ಪಕ್ಷಗಳನ್ನು ಒಂದುಗೂಡಿಸಿ ಸಿದ್ಧರಾಗಬೇಕು."

"ಅಮೇರಿಕದಿಂದ ನೀವು ಏನು ಸಹಾಯವನ್ನು ಅಭಿಲಷಿಸುತ್ತೀರಿ?" ಎಂದರು ಮಿ| ಸ್ಟೀಲರು

"ಬಹಳ ಸಹಾಯ ಬೇಕಾಗಿದೆ ಯೋಗ್ಯವಾದ ವಿಮರ್ಶೆಬೇಕು ನಾನು ಕಂಡದ್ದೇನೆಂದರೆ ಒಂದೋ ಅಮೇರಿಕದ ಪತ್ರಿಕೆಗಳು ಹಿಂದೂದೇಶದ ವಿಚಾರ ಬಹು ಪ್ರಶಂಸೆ ಮಾಡಿ ಬರೆಯುತ್ತವೆ, ಇಲ್ಲದಿದ್ದಲ್ಲಿ ಬಹಳವಾಗಿ ಟೀಕಿಸುತ್ತವೆ ನಿಮ್ಮ ಪತ್ರಿಕೆಗಳು ಹಿಂದೂದೇಶದ ನಿಜವಾದ ಪರಿಸ್ಥಿತಿಯ ಕುರಿತು ಅಮೇರಿಕದ ಜನತೆಯು ಸ್ಪಷ್ಟವಾಗಿ ತಿಳಿಯುವಂತೆ ಏನೂ ಕೆಲಸ ಮಾಡಲಿಲ್ಲ ' ಎಂದರು ಗಾಂಧಿಗಳು ಹೊರಟು ಹೋಯಿತು.

ಕಡೆಯದಾಗಿ ಗ್ವಾಲಿಯರ್ ತೀರ್ಮಾನದ ವಿಷಯ ಪ್ರಶ್ನಿಸಲ್ಪಟ್ಟಲ್ಲಿ "ನನಗೆ ಅದನ್ನು ಬಿಟ್ಟುಕೊಟ್ಟದ್ದರಿಂದ ಏನೂ ಬೇಸರವಿಲ್ಲ ನಾನು ಆ ಹೊರೆಯನ್ನು ಇಳಿಸಿ ಸ್ವತಂತ್ರ ಹಕ್ಕಿಯಾಗಿ ಸರ್ವತ್ರ ಹಾರಾಡುವವನಂತೆ ಅನುಭವಿಸುತ್ತೇನೆ ಹಿಂದೀಯ ಆಶ್ರಿತರಾಜ್ಯಗಳ ಸಮಸ್ಯೆಗಳನ್ನು ಪರಿಹರಿಸಲು ಸ್ವತಂತ್ರನಾಗಿ ಯತ್ನ ಮಾಡಲು ಅವಕಾಶವಾಗಿದೆ" ಎಂದರು.

ಯಾರು ಅಂಧಾನುಯಾಯಿಗಳು

ಗಾಂಧಿಜಿಯವರ ಅಂಧಾನುಯಾಯಿಗಳೆಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರನ್ನು ಹೇಳುವುದರ ಕುರಿತು ಪಾಟ್ನಾದ ಸಭೆಯೊಂದರಲ್ಲಿ ಅವರು ಹೀಗೆನ್ನುತ್ತಾರೆ

ಗಾಂಧಿಜಿಯವರ ಅಂಧಾನುಯಾಯಿಯೆಂದು ಜನರು ನನ್ನನ್ನು ದೂರುತ್ತಾರೆ ನನ್ನ ಮೇಲೆ ಹೊರಿಸಿದ ಈ ಆರೋಪವು ಸರಿಯೆಂದು ಒಪ್ಪಿಕೊಳ್ಳಲು ನಾನು ನಾಚಿಕೆಪಡುವುದಿಲ್ಲ ನಾನು ಮಹಾತ್ಮರನ್ನು ಬಹಳ ಹತ್ತಿರ ಹೋಗಿ ಪರೀಕ್ಷಿಸಿದೆ, ಅವರು ಮೊದಲಿಂದ ಇದುವರೆಗೆ ಅದ್ಭುತ ಕಾರ್ಯಗಳನ್ನು ಮಾಡಲು ಮಹಾಪ್ರಭಾವಶಾಲಿಗಳೆಂದು ನಾನು ನಂಬಿದ್ದೇನೆ

ಯಾರು ಗಾಂಧಿಜಿಯವರನ್ನು ಟೀಕಿಸುತ್ತಾರೋ ಅವರು ಕೂಡ ಅಂಧಾನುಯಾಯಿಗಳೇ ಆಗಿದ್ದಾರೆ. ನಾನು ಮಾತ್ರ ನನ್ನ ಪ್ರತ್ಯಕ್ಷವಾಗಿ ಕಂಡ ಮಹಾಪುರುಷನನ್ನು ಆತನು ಮಾಡುವ ಕಾರ್ಯಗಳನ್ನು ಅರಿತುಕೊಂಡು ಅವನಲ್ಲಿ ವಿಶ್ವಾಸವಿಟ್ಟು ಅಂಧಾನುಸರಣೆ ಮಾಡುವುದು, ಆದರೆ ಗಾಂಧಿಜಿಯವರ ಟೀಕಾಕಾರರು ತಾವು ಕಂಡಿರರು, ಕೇವಲ ಪುಸ್ತಕಗಳ ಓದುವಿಕೆಯಿಂದ ಮಾತ್ರ ಅರಿತುಕೊಂಡ ಕೆಲವರನ್ನು ಅಂಧಾನುಸರಣೆ ಮಾಡುತ್ತಾರೆ, ಅವರಿಗೆ ಪ್ರತ್ಯಕ್ಷ ಜ್ಞಾನವೆಂಬುದೇ ಇಲ್ಲ ಇಂದಿನ ಗಾಂಧೀ ಟೀಕಾಕಾರರ ತತ್ವಗಳು ಪ್ರಪಂಚದ ಬಹುಮಂದಿಯಿಂದ ಅಂಗೀಕರಿಸಲ್ಪಟ್ಟವುಗಳಲ್ಲ. ಜರ್ಮನಿ, ಇಟೆಲಿ, ಸ್ಪೈನುಗಳು ಅವುಗಳನ್ನು ಬಿಟ್ಟಿವೆ

ಬಹುಸಮಯದ ಪ್ರಯೋಗಮಾಡಿ ಗ್ರೇಟ್ ಬ್ರಿಟನು ಮತ್ತು ಫ್ರಾನ್ಸುಗಳು ಸೋಶಿಯಲಿಸಮ್ಮನ್ನು ಅಲ್ಲಗಳೆದುವು ರಷ್ಯ ಮಾತ್ರ ಇಂದು ಅಂಗೀಕರಿಸಿದೆ, ಆದ್ದರಿಂದ ಯಾವುದಾದರೂ ಒಂದು ದೇಶಕ್ಕೆ ಒಪ್ಪುವ ಒಂದು ತತ್ವವನ್ನು ಹಿಂದೂದೇಶವು ಅಂಗೀಕರಿಸುವುದು ಕೇವಲ ತಪ್ಪಾಗಿರುತದೆ.

ಹೆಲಿಫಾಕ್ಸರ ಸ್ಪಷ್ಟ ನುಡಿ

ಈತನಕವೂ ಬ್ರಿಟನಿನ ವಿದೇಶೀಯ ಧೋರಣೆ ಯಾವ ತರದ ಸ್ಪಷ್ಟೋಕ್ತಿಯಿಂದಲೂ ಇರಲಿಲ್ಲ. ಅತ್ತ ಅವರು ಪೋಲೆಂಡ, ಟರ್ಕಿಗಳಂತಹ ದೇಶಗಳಿಗೆ ಬೆಂಬಲವಾದರೂ ಮುಂದೆಯೂ ಕೆಲವು ಸಂದಿಗ್ಧ ವಿಷಯಗಳಲ್ಲಿ ಹೇಗೆ ವರ್ತಿಸುವರೆಂಬುದು ಊಹೆಗೇ ಬಿಟ್ಟ ಸಂಗತಿಯಾಗಿತ್ತು. ಚೇಂಬರ್ಲೆನರ ಪ್ರತಿಯೊಂದು ಮಾತುಗಳೊ— ಟ್ಟಾತು ಅರ್ಥವಾಗಿ ಕಾಣುವಂತಿದ್ದ ಮಾತಿನ ಹಿಂದಿನ ಮರ್ಮ ಅಸ್ಪಷ್ಟವಾಗಿತ್ತು. ಒಂದು ರೀತಿಯಿಂದ ರಾಜನೀತಿಯ ರೀತಿಯೇ ಹಾಗೆನ್ನಬಹುದು. ಆದರೆ ಮುಂದೆ ಯಾವ ಕಡೆಗೇ ತಿರುಗಿಸಬಹುದಾದ ನುಡಿಗಳವು ಅಂಥ ನುಡಿಯು ಸ್ಪೈಯಿನಿನ ವಿಷಯದಲ್ಲಿ, ಜೆಕೊಸ್ಲೊವಾಕಿಯಾದ ವಿಷಯದಲ್ಲಿ ಹೇಗೆ ಪರಿಣಾಮ ಹೊಂದಿವೆಂದು ಎಲ್ಲರೂ ಬಲ್ಲರು. ಹಿಟ್ಲರನು ಜೆಕೊಸ್ಲೊವಾಕಿಯವನ್ನು ವಶಪಡಿಸಿಕೊಂಡ ಬಳಿಕವೂ ಇದೇ ತೆರನಮಾತುಗಳಿಂದ ದಿನ ಸಾಗಿವೆ. ಇದರಿಂದ ಹಿಟ್ಲರನು ಬ್ರಿಟನು— ಇನ್ನು ತನ್ನ ಮಾತನ್ನು ಕಾರ್ಯದಲ್ಲಿ ತರಲು ಅನುಮಾನಿಸುವ ದೇಶವೆಂದು ತಿಳಿಯಲು ಅವಕಾಶವಾಯಿತು. ಆದರೆ ಈಗೀಗ ಬ್ರಿಟನಿನ ಸಂದೇಶಗಳನ್ನು ಜರ್ಮನಿಯಲ್ಲಿ ಹೇಗ ಟೀಕಿಸುತ್ತಿರುವರು, ಮ್ಯುನಿಚ್ ಒಪ್ಪಂದಕ್ಕೆ ಸೂತ್ರಧಾರಿಯಾದ—ಚೇಂಬರ್ಲೆನರಿಗೂ ಎಂಥ ಮರ್ಯಾದೆ ಸಿಗುತ್ತಿದೆ ಎಂಬುದನ್ನು ಮನಗಂಡ ಬಳಿಕ—ಬ್ರಿಟನಿನ ಮನಸ್ಸು ಬೇರೆಯಾದಂತಿದೆ.

ಜರ್ಮನಿಯ ಬ್ರಿಟನಿನ "ಸುತ್ತುವರಿ ಯುವ" ಹಠದಿಕೆಯನ್ನು ಕುರಿತು ಪ್ರಚಾರ ನಡೆಯುತ್ತಿದೆ. ವಾಸ್ತವವಾಗಿ ಜರ್ಮನಿ ಯೊಳಗೀನ ದೇಶದ ಜನರಿಗೆ ಒಂದು ತರವಾದ ವಾರ್ತೆಗಳು ಸಿಗುತ್ತಿವೆ. ಇನ್ನೊಂದು ದೇಶ ತನ್ನ ವಿಷಯವಾಗಿ ಹೇಗೆ ತಿಳಿಯುತ್ತಿದೆ ಎಂಬುದನ್ನು ಕೂಡ ಅವಕಾಶವಿಲ್ಲ. ಹೊರಗಿನ ಪತ್ರಿಕೆಯ ನುಡಿಗಳು ಅಲ್ಲಿನ ಜನರನ್ನು ಬ್ರಿಟನಿನ ವೈರಿಗಳಾಗಿ ಮಾಡುವುದೂ ನಿಜ.

ಈಗ ಹೆಲಿಫಾಕ್ಸ್‌ರು—ಮುಂದಿನ ವಿಷಯ ಸ್ಪಷ್ಟವಾಗಿ ನುಡಿದಿದ್ದಾರೆ. ತನ್ನ ಅಪೇಕ್ಷಣಾರ ಹೊಣೆಯನ್ನು ಜರ್ಮನಿಯ ಹೊರಬೇಕೆಂದೂ ಹೇಳಿದ್ದಾರೆ ...ನ ಯಾವ ... ಒಪ್ಪಂದಗಳು ರಕ್ಷಣೆಗಾಗಿಯೆ ... ಪ್ರಯೋಗ, ಜರ್ಮನಿಯು ತನ್ನ ... ವಿರುದ್ಧವಾದರೆ ಮಾತ್ರವೆಂದು ... ಹಕ್ಕುಗಳು ವಿಷಯದಲ್ಲಿಯಾಗಲಿ ಇತರರ ತಂಟೆಗೆ ಹೋಗಬಾರದೆಂಬುದಾಗಲಿ ಅರ್ಥವಿಲ್ಲದ ಮಾತೆಂದೂ ... ಜೆಕೊಸ್ಲೊವಾಕಿಯಾ, ... ಕೆಲಸಗಾರರ... ಅಂದಿದ್ದಾರೆ ... ವಿಧಾನದ ... ದಲೇ ಪ್ರಸ್ತಾಪಿಸಲ್ಪಡಬೇಕೆಂದು ಹೇಳಿದ್ದಾರೆ.

ಡಾಂಜಿಗ್ ಕುದಿಯುತ್ತಿದೆ

ಜರ್ಮನ ಸೇನೆಯವರು ಖಾಸಗಿ ಪ್ರವಾಸಿಗಳಾಗಿ ಅಲ್ಲಿ ಸೇರಿದ್ದಾರೆ. ಯುದ್ಧಕ್ಕೆ ಶಸ್ತ್ರಸನ್ನಾಹಗಳು ಅಲ್ಲಿ ನಾಗರಿಕ ಒಳಗೊಳಗೇನೇ ಕೂಡಲ್ಪಟ್ಟಿವೆ. ಅವರನ್ನು ಮುಂದಿರಿಸಿ ಹಿಟ್ಲರನು ತನ್ನ ಇಚ್ಛೆಯನ್ನು ಸಾಗಿಸಲಿದ್ದಾನೆ. ಪೋಲೆಂಡು ತಾನಾಗಿ ಮೊದಲಿನ ಪ್ರತಿಭಟನೆಯನ್ನು ತಂದರೆ, ಜರ್ಮನಿಯು ತಾನು ಸ್ವರಕ್ಷಣೆಗೆಂದು ಮುಂದುವರಿಯುವುದೂ ನಿಜ. ಇತ್ತ ಈ ಡಾಂಜಿಗ್ ಪ್ರಶ್ನೆಯ ಮೇಲೆಯೇ ಫ್ರಾನ್ಸು— ಪೋಲೆಂಡನ್ನು ಎಂದೂ ಬಿಟ್ಟು ಹಾಕಲಾರದು ಎಂದಿರುವನು.

ಪೋಲೆಂಡಿನ ಮೇಲಿನ ಕಲಹಕ್ಕೆ ಇನ್ನೊಂದೆಡೆ ಮೊರೆವಿಯಾದಲ್ಲಿ ಸೇನೆ ಕಲೆತಿರುವುದೂ, ಫ್ರಾನ್ಸಿಗೂ ಇದಿರಾಗಿ ಸಾರ್ ಪ್ರಾಂತಕ್ಕೆ ಜರ್ಮನ್ ಸೇನೆ ಅಪಾರವಾಗಿ ನೆರೆದುದೂ ಬಹಿರಂಗ ಸಂಗತಿಗಳು. ಹೀಗಿರಲು—ಡಾಂಜಿಗ್‌ನ ಭವಿಷ್ಯವು ಯುರೋಪಿನ ಭವಿಷ್ಯವೇ ಅಂದ ಹಾಗಾಯಿತು. ಈ ವಿಷಯ ಸಮಾಧಾನದಿಂದ ಪಂಚಾಯತಿ ನಡೆಯಿಸುವ ಪ್ರ

ಅಂಗೈ ನೋಟ

ಪಕ್ಷದ ವಿಶೇಷ ಲೇಖಕರು: ಶ್ರೀ। ಶಿವರಾಮ ಕಾರಂತರು

ಸ್ತಾವ ಹಿಟ್ಲರನು ತಾನಾಗಿ ಎತ್ತುವನಲ್ಲ. ಅವನದು ಕೆಲಸಮಾಡಿ, ಆ ಬಳಿಕ ಅದಕ್ಕೆ ಕಾರಣ ಸಾಧಿಸುವ ಗುಣ.

ಲಾರ್ಡ್ ಹೆಲಿಫಾಕ್ಸರ ಸ್ಪಷ್ಟೋಕ್ತಿಗೂ ಮೊದಲು ಕೊಡಗಿದ ಡಾಂಜಿಗ ಪಿತೂರಿಯು ಇನ್ನು ಮುಂದೆ ಹೇಗೆ ಕೊನೆಗಾಣಬೇಕು ಆದಿದ್ದನ್ನು ಮಾಡುವವ ಹಿಟ್ಲರ್. ಆದರೆ— ಈಗಿನ ವಾರ್ತೆಗಳಂತೆ ಬಹಿರಂಗವಾದ ತಯಾರಿಯಿಂದ, ತನ್ನ ಇಚ್ಛೆಯನ್ನು ಬಯಲುಗೊಳಿಸಿ ಕದನಕ್ಕೆ ಮುಂದರಿಯುವ ಶಕ್ತಿಯೇ ಅವನು? ಈ ತನಕ ಅವನದೆಲ್ಲ ಗುಪ್ತಸಿದ್ಧತೆಗಳು, ಗುಪ್ತ ಧೋರಣೆಗಳು.

ಇಷ್ಟು ನಿಜ

ಡಾಂಜಿಗ್‌ನಲ್ಲಿ ಕಾವೇರಿಸಿ, ಪೋಲೆಂಡು ಉದ್ರೇಕಗೊಳ್ಳುವಂತೆ ಮಾಡಿ, ಬ್ರಿಟನೇ ಒಂದು ಸಂಧಾನದ ರೀತಿಗೆ ಸೂಚಿಸುವಂತೆ ಆಗಬಹುದು ಎಂದು ಅವನ ಅಭಿಪ್ರಾಯ. ಆದರೆ ಅಷ್ಟರ ಮಟ್ಟಿಗೆ ಬ್ರಿಟನಿನ ಜನರಲ್ಲಿ ಜರ್ಮನಿಯ ಮೇಲೆ ಯಾವ ಅಭಿಮಾನವೂ ಉಳಿದಿಲ್ಲ. ಈ ಸಮಯದಲ್ಲಿ ಅಖಿಲ ಬ್ರಿಟನೂ ಒಂದೇ ಮನಸ್ಸುಳ್ಳದು. ಕಾದಾಟಕ್ಕೆ ಯಾರೂ ಸಿದ್ಧರಿಲ್ಲ, ಆದರೆ ಮುಂದೆ ತಮಗೂ ವಿಪತ್ತು ಬರುವ ತನಕ ಕಾಯುವುದಕ್ಕೆ ಅವರಿಲ್ಲ.

ಹಿಟ್ಲರನ ಧೈರ್ಯವನ್ನೂ ಪರಿಶೀಲಿಸಿದರೆ ಅವನ ಮನೋಧರ್ಮವೇ ಒಂದು ಬಗೆಯಾಗಿದೆ. ಅವನು ಯಾತರಿಂದ ಕಾರ್ಯಸಾಧಿಸುವನೆಂದರೆ? ಸೋಲು—ಎಂಬುದು ತಿಳಿದಾಗ ಹಿಂಜರಿಯ ... ವನನೇ ಎಂಬುದು ತರ್ಕಿಸಬೇಕಾದ ವಿಷಯ. ಮುಸೋಲಿನಿಯು ಎಷ್ಟೆಯೂ ... ಆದರೆ ಆದರಾಳಿ ಬಹುವಾಗಿಷ್ಟೆ ... ಬಾಯಿ ... ಕೆಲಸ ಆದುಗುವುದು. ಹಿಟ್ಲರನು ಹೀಗ ಮನ್ನ ಹೊರಪಡಿಸದೆ ಕೆಲಸಗಾರ ಅವನ ಕೆಲಸ ಈತನು ನಿಶ್ಚಯಿಸಿದಂತೆ ನಡೆದಿದೆ. ಡಾಂಜಿಗನ್ನು ರೀಶ್‌ಗೆ ಸೇರಿಸುವುದು ಅವನ ಪೂರ್ವ ನಿಶ್ಚಯ. ಅವನ ನಿಶ್ಚಯಕ್ಕೆ ಅಪಾರ ಆತ್ಮವಿಶ್ವಾಸವೇ ಕಾರಣ. ಈ ತನಕ ಈ ಆತ್ಮವಿಶ್ವಾಸಕ್ಕೆ ಕಡೆಬಾರದುದರಿಂದ, ಅತಿವಿಶ್ವಾಸದಿಂದ ಅವನು ಧುಮುಕುವ ಸಂಭವವೇ ಅಧಿಕ.

ಕಡೆದು ಏನು ಮಾಡಬೇಕು? ಅವನ ಇಡೀ ರಾಜಕೀಯ ಅಧಿಕಾರವು—ಏಕೋದ್ದೇಶಿತವಾದುದು. ದಿಗ್ವಿಜಯವು ಅದರ ಗುರಿ. ದೇಶದ ಒಳ ಅಭಿವೃದ್ಧಿಯ ಎರಡನೆಯದು. ಅದನ್ನೆಲ್ಲ ಈ ದಿಗ್ವಿಜಯದ ಆಸೆಗೆ ಬಲಿಹಾಕಿದವನು. ಅಂಥವನು ಸಂಧಿಕಾಲವನ್ನು ಕಳೆಯಲಾರ. ಸಂಧಿಕಾಲದಲ್ಲಿ—ಜರ್ಮನಿಯ ಸಂಪತ್ತನ್ನು ಯುದ್ಧಸನ್ನಾಹದ ಕಡೇಗೇನೆ ತಿರುಗಿ ಕಾಲ ಕಳೆಯಲು ಬರುವುದಿಲ್ಲ. ಆ ಅಪಾರ ವ್ಯಯಕ್ಕೆ ಜನರಿಗೆ ಸಮಾಧಾನ ಕೊಡಲು ಬರುವುದಿಲ್ಲ. ಅವನು—ಸೋಲಬೇಕು, ಗೆಲ್ಲಬೇಕು— ಕೈಸರನ ಹಾದಿ ಹಿಡಿಯಲೇಬೇಕು. ಒಂದೋ ಗೆಲಬೇಕು. ಇಲ್ಲವೆ ಸೋಲಬೇಕು—ಮುರಿದ ಯದಾಗಿ ಅಂತರಿಕ ಕ್ರಾಂತಿಯ ಪದ ಪದಭ್ರಷ್ಟ ನಾಗಬೇಕು. ಸಿಕ್ಕೊದ್ರೇಕವಿಲ್ಲದೆ ಹಿಟ್ಲರನು ' ಮಿಮನ್ನೂ ಕಳೆಯ ... ಕೀಲುದನನಲ್ಲ.

ಚೀನದ ಕಡೆ

ಟೈನ್‌ಸ್ಟಿನಿನಲ್ಲಿ ಜಪಾನಿಯರು ಮಾಡುತ್ತಿರುವ ಧೋರಣೆ ಸಂದೇಹಾಸ್ಪದವಾಗಿದೆ. ಆದರ ರಾಜಕೀಯ ಉದ್ದೇಶದ ಅರ್ಥ ತಿಳಿಯಬಹುದು. ಸ್ವಾಧೀನವಾದ ಚೀನದ ಯಾವತನ್ನ ಆರ್ಥಿಕ ಧೋರಣೆ ಅವರ ಅಧೀನವಾಗಿದೆ. ಅದರ ವಿನಿಮಯಕ್ಕೆ ಜಪಾನು ಅಧಿಕಾರಿ. ಆದರೆ ಅಲ್ಲಿನ ಸಂಧಿಗೊಳಗಾದ ಬಂದರುಗಳಿಂದಾಗಿ ಅವರು ... ಬಾಳ್ವ ಹಣದ ಚಲಾವಣೆ ಮಾಡಲಾರರು. ಕಾರಣ—ಈ ಸಂಧಿ ಬಂದರುಗಳಲ್ಲಿ ಬ್ರಿಟನಾಗಲಿ, ಫ್ರಾನ್ಸ್ ಆಗಲಿ ಜಪಾನಿನ ಹೊಸ ಹಣ ವಿನಿಮಯ ಧೋರಣೆಗೆ ಒಳಗಾಗಿಲ್ಲ. ಒಳಗಾಗುವ ವಿಷಯದಲ್ಲೂ ಇಲ್ಲ. ಆದುದರಿಂದ ಸ್ವತಂತ್ರ ಚೀನಕ್ಕೂ, ಈ ವಿದೇಶೀಯರಿಗೂ ಇರುವ ಹಿಡಿತವನ್ನು ಜಪಾನು ತಪ್ಪಿಸಲಾರದಾಗಿದೆ. ಆದುದರಿಂದಲೇ ಈ ರೇವುಗಳ ಸ್ವಾತಂತ್ರ್ಯವನ್ನು ನಿರಾಕರಿಸಿ, ಬಲವಂತದಿಂದ ವಿದೇಶೀಯ ಬ್ಯಾಂಕುಗಳು ಜಪಾನಿನ "ವಿನಿಮಯ" ಧೋರಣೆಗೆ ಒಪ್ಪುವಂತೆ ಮಾಡಬೇಕಾಗಿದೆ. ಮೊನ್ನೆಮೊನ್ನೆ ಚಾಂಗ ಕಾಶ್ಯಾನ್ ಸರಕಾರದ ಆರ್ಥಿಕ ನೆಲೆಗಟ್ಟು ಚಂಚಲವಾಗಿದ್ದಂತೆ ಕಾಣುತ್ತಿತ್ತು. ಬ್ರಿಟನು—ತನ್ನ ಕೈಯನ್ನು ತಾನು ಕಡಿಯಲಾರದು.

ಮೇಲಿನ ಕಾರಣಗಳು ಜಪಾನಿನ ದೃಷ್ಟಿಯಿಂದ ಸಮರ್ಥಿಸಬಹುದು. ಆದರೆ ಅದನ್ನು ಸಾಧಿಸಲು ಮಾಡಿದ ಹಂಚಿಕೆ ಸಂದೇಹಾಸ್ಪದವಾದುದು! ಸರಿ. ಈ ಬಂದರಗಳ ವಿದೇಶೀಯರು ಬಂದು ಹೋಗ ವಾಗ ಅವರನ್ನು ಬಹಿರಂಗವಾಗಿ ಬೆತ್ತಲೆಮಾಡುವುದು ಯಾವ ನಾಗರಿಕತೆಯ ಚಿಹ್ನೆಯ? ಅಗಿಲ್ಲ. ಈ ಕೆಲಸವನ್ನು ಅವರ ಸೇನಾಪ... ಮೇಲಿನ ... ವಾರ್ಥವಿಲ್ಲದೆ ಮಾಡಿಯಾ... ಇರಲಾರರು. ಇದ—ನಮ್ಮ ... ಪೌರ್ವಾತ್ಯ ಜನಾಂಗದ ಸಂಸ್ಕೃತಿಯ ಪ್ರತಿಷ್ಠೆಯನ್ನು ಕೆಡಿಸುತ್ತದೆ.

ಜಪಾನಿನ ಸಂಸ್ಕೃತಿಯ ... ಅಧಿಕಾರವನ್ನು ಪಡೆದುದು. ಪಾಶ್ಚಾತ್ಯರ ನಾಗರಿಕತೆಯ ಅತೀ ಪತಿಕರ ಸ್ವರೂಪವನ್ನು ಅಲ್ಲಿ ಕಾಣುವಿರಿ. ಆದರೆ ಅವರ ಸಂಸ್ಕೃತಿಯ ... ಕಾಣಸಿಗ ...

ಟೈನ್‌ಸ್ಟಿನ್ "ವಿಚಾರ" ಮಾತುಕತೆಗಳು ಬ್ರಿಟನಿಗೂ ಜಪಾನಿಗೂ ... ನಡೆಯುತ್ತಿವೆ ಎಂದು ... ಆದರೆ ಅವು ಗಳ ಫಲಿತಾಂಶ ... ನಡೆಯ ... ಆದರೆ ... ತಕ್ಕ ಬಹುದು.

ಆದರೆ ... ಪೂರ್ವದಲ್ಲಿ ... ನ ಸಂಸ್ಥೆಗಳೆರಡು ... ನ್ ಸಂವಾದವನ್ನು ಮಾತನಾಡಬೇಕಾಗಿ ... ಕಂಡರೆ ... ಜಪಾನಿಗೆ ... ಚಾಕೆಯಾಗುವ ಸಂಭವವೇ ಬಹಳ.

ಬಹುಕಾಲದಿಂದ ಭಾರತದ ಮಹಾಜನರ ಮೆಚ್ಚುಗೆಯ ಎರಡು ಉತ್ತಮ ವಾಚುಗಳು!

ವೆಸ್ಟ್ ಎಂಡ್ ವಾಚ್ ಕಂಪೆನಿಯು ಜನಮನ ಹೆಯನ್ನು ಪಡೆದ ಹಳೇ ಮಾದರಿಯ ಗಡಿಯಾರಗಳಿಗೆ ಸಮಕಟ್ಟಾದವುಗಳು ... ಇಲ್ಲ. ಅವುಗಳ ದೀರ್ಘ ಬಾಳಿಕೆಯ... ಚಿಂದ ಪಟ್ಟಿಕೆ ... ಇಂದು ...

2



ಎಕ್ಸ್ ಟ್ರಾ ಸ್ಟೀಲ್	ರೂ 30
ರೋಲ್ಡ್ ಗೋಲ್ಡ್ ಹೊಸ ಆಕಾರ	,, 36
9ct ಬಂಗಾರ	,, 58
18 ,, ,,	,, 94

ಸಾಧಾರಣ ಬೆಲೆಯಲ್ಲಿ ಜನರ ಮೆಚ್ಚುಗೆ ಪಡೆಯಲು ಕಾರಣವಾಯಿತು. ಆದರೆ ಆದೇ ವಾಚುಗಳನ್ನು ಮಹಾಜನರ ಸುಧಾರಣೆಗನುಸಾರವಾಗಿ ಚಿತ್ರದಲ್ಲಿ ತೋರಿಸಲ್ಪಟ್ಟಂತೆ ಹೊಸ ಆಕಾರಗಳಲ್ಲಿ ಒದಗಿಸುತ್ತಿರುವೆವು. ಸಾಧಾರಣ ಬೆಲೆಯ ಬಹುಕಾಲದಿಂದಲೂ ಮೆಚ್ಚುಗೆ ಪಡೆದ ಈ ವಾಚುಗಳನ್ನೆ ಕೊಂಡುಕೊಳ್ಳಿರಿ. ಪುಸ್ತಕವಾಗಿ ಸಿಗುವ ಕೆಟಲಾಗಿಗೆ ಬರೆಯಿರಿ.

ಸಿಗಾಟಿಯಲ್ಲಿದ್ದ—ಹೊಸ ಆಕಾರ
ಸಿಕ್ಸ್ ಲೆವರಿನ ಎ. ಟ್ರೈಟ್ ಸ್ಟೀಲ್ ರೂ 25
ರೇಡಿಯಂ ಡಯಲಿಗೆ ... ರೂ ೨ ಜಾಸ್ತಿ

ವೆಸ್ಟ್ ಎಂಡ್ ವಾಚ್ ಕಂಪೆನಿ
ಬೊಂಬಾಯಿ ಮತ್ತು ಕಲ್ಕತ್ತ

WEST END WATCH Co
BOMBAY CALCUTTA

ಕಾಂಗ್ರೆಸ್ ವಾರ್ತೆಗಳಿಗೆ
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು
ಪ್ರತಿಫಲಬರುವಂತೆ ಸಾಧಿಸುವುದು

ಶ್ರೇಷ್ಠ ತರದ
ದೃಷ್ಟಿಚಕ್ರಗಳಿಗೆ

ರಬ್ಬರು ಮೊಹರುಗಳಿಗೆ
ನಾಯಕ್ ಸ್ಟೋರ್ಸ್
ರಥಬೀದಿ, ಮಂಗಳೂರು.

ಈ ವಾರದಲ್ಲಿ

ಮದ್ರಾಸಿನ ಮಂತ್ರಿಗಳ ಉಪದೇಶವೇನು? :: :: :: ::

ಬಸ್ ಸರ್ವಿಸಿನಿಂದ ಬೋರ್ಡಿಗೆ ಪ್ರಯೋಜನವಿಲ್ಲ—ಮಾನ್ಯ ರೆಡ್ಡಿ
ಮದ್ಯಪಾನ ನಿಷೇಧವು ಕಾಂಗ್ರೆಸಿನ ಪ್ರತಿಜ್ಞೆ—ಮಾನ್ಯ ರಾಜಾಜಿ
ಬಡವರ ತಲೆಯಿಂದ ಹಣವಂತರ ಹೆಗಲಿಗೆ ಹೊರೆ—ಮಾನ್ಯ ರೆಡ್ಡಿ
ಶಾರೀರಿಕ ಶಿಕ್ಷಣದಿಂದ ರಾಷ್ಟ್ರದ ಅಭಿವೃದ್ಧಿ—ಮಾನ್ಯ ವಾರ್ಕಿ
ಶ್ರೀ! ಎಚ್. ವಿ. ಕಾಮತರ ರಾಜಿನಾಮೆಯ ಕಾರಣ

ಮಾನ್ಯ ರಾಜಾಜಿಯವರು
(ಮದ್ಯಪಾನ ನಿಷೇಧದ ಕುರಿತು)

"ಪಾಶ್ಚಾತ್ಯ ದೇಶಗಳಲ್ಲಿ ಆಗದೆ ಇರುವಂತಹುದು ಇಲ್ಲಿಯೂ ಜಯಶೀಲವಾಗಲಾರದೆಂದು ಹಲವರು ಮದ್ಯಪಾನ ನಿಷೇಧವನ್ನು ಖಂಡಿಸುತ್ತಾರೆ. ಅವರಿಗೆ ಹಿಂದೂದೇಶದ ಪರಿಸ್ಥಿತಿ ತಿಳಿಯದು. ಹಿಂದೀಯರು ಮದ್ಯಪಾನ ಮಾಡುವುದನ್ನು ಪಾಪವೆಂದು, ಅಪಮಾನವೆಂದು ತಿಳಿದು, ಗುಟ್ಟಾಗಿ ಕುಡಿಯುತ್ತಾರೆ, ಮನೆಯ ಮುಂದಿಗೇ ಅದನ್ನು ತಿಳಿಸುವುದಿಲ್ಲ. ಆದರೆ ಪಾಶ್ಚಾತ್ಯ ದೇಶದಲ್ಲಿ ಅದು ಬಹಿರಂಗ ಕಾರ್ಯ. ಅದಕ್ಕೆ ನೀತಿಯು ಅಲ್ಲಿ ನೆಲೆಯಿಲ್ಲ ಹೋಗಿರುವಾಗ, ಅಮೇರಿಕದಲ್ಲಿ ಇದು ಜಯಶೀಲವಾಗಿಲ್ಲವೆಂದು ಹಿಂದೂದೇಶದಲ್ಲಿಯೂ ಆಗಲಾರದೆಂದು ಹೇಳುವವರು ನಿಜವಾದ ವಿಷಯಗಳನ್ನು ತಿಳಿದಿಲ್ಲ. ಬೊಂಬಾಯಿಯಂತಹ ನಗರದಲ್ಲಿ ಮದ್ಯಪಾನ ನಿಷೇಧ ಮಾಡಿದ್ದಕ್ಕಾಗಿ ಬಹಳ ಟೀಕೆಯಾಗಿದೆ. ನಾವೆಲ್ಲರೂ ಅಮಲು ಬಿಡಬೇಕಾಗಿ ನಿಶ್ಚಯಿಸಿದ್ದರೆ, ಅದು ಎಲ್ಲಿ ಮೊದಲಾಗಿ ಆರಂಭವಾದರೇನು? ಹಳ್ಳಿಯಾಗಲಿ, ಪಟ್ಟಣವಾಗಲಿ ಎಲ್ಲಿಯಾದರೂ ಆರಂಭವಾಗಬೇಕಷ್ಟೆ? ನಮ್ಮ ಧ್ಯೇಯವು ಅಮಲು ನಿಷೇಧವಾಗಿದ್ದರೆ ಅದನ್ನು ಮುಂದುವರಿಸುವುದರಲ್ಲಿ ಅರ್ಥವೇನು?

"ನಾನು ಮದ್ಯಪಾನ ನಿಷೇಧವನ್ನು ಶುರು ಮಾಡಿದಾಗ ಯಾರೂ ಆಕ್ಷೇಪವೆತ್ತಲಿಲ್ಲ. ಆದರೆ ತೆರಿಗೆಯನ್ನು ಮಾಡಿದಾಗ ಆಕ್ಷೇಪಗಳು ಬಂದುವು. ನಿಜವಾಗಿ, ಜನತೆಯ ಕಾಂಗ್ರೆಸು ಪ್ರೀತಿಯನ್ನು ಪರೀಕ್ಷಿಸುವ ಸಮಯವು ಅದಾಗಿತ್ತು. ಹಾಗಾಗಿ ಮದ್ಯಪಾನ ನಿಷೇಧದ ಅವಶ್ಯಕತೆ, ಹೊಸ ತೆರಿಗೆಯ ನ್ಯಾಯ ಇವುಗಳ ಕುರಿತು ನಾವು ಮತ್ತೊಮ್ಮೆ ಜನರಿಗೆ ವಿವರಿಸಬೇಕಾಯಿತು. ಇದೇ ಪ್ರಾಂತದಲ್ಲಿ ನಾವು ಮದ್ಯಪಾನ ನಿಷೇಧದ ಪ್ರಚಾರವನ್ನು ಖಂಡಿತವಾಗಿ ನೆವು ಎಲ್ಲಿ ಮೊದಲಾಗಿ ಆರಂಭಿಸಬೇಕೋ, ಅದು ಅಲ್ಲಿನ ಸೌಕರ್ಯಗಳನ್ನು ಹೊಂದಿದೆ.

"ಹಿಂದೂದೇಶದಲ್ಲಿ ಕುಡಿತವು ಕೆಟ್ಟದೆಂದು ತಿಳಿದಿದೆ. ಹಾಗಾಗಿ ಅದನ್ನು ಜನರು ಬಿಟ್ಟುಬಿಟ್ಟಾರು. ಮದ್ಯಪಾನ ನಿಷೇಧ ಚಳವಳಿವು ಇಲ್ಲಿ ಯಶಸ್ವಿಯಾಗುವುದು. ಬಡವರ ಬಡಸಂಬಳದಿಂದ ಇದೇ ಪ್ರಾಂತದ ಉತ್ಪತ್ತಿಯ ಕಾಲಂಶವು ವಸೂಲಾಗುವುದು ಅನ್ಯಾಯ, ಮದ್ಯವನ್ನು ಮಾರಾಟಮಾಡಲು ಸರಕಾರವು ಸಮ್ಮತಿಸುವುದರಿಂದ ಬಡವರನ್ನು ಸುಲಿದು ತಿಂದಂತೆ ಆಗುತ್ತದೆ.

"ಉದ್ಯೋಗದವರಿಗೆ ಹೊಸ ತೆರಿಗೆಯು ದೊಡ್ಡ ಹೊರೆಯಾದರೆ ಬಡವರಿಗೆ ಮದ್ಯಪಾನವು ಎಷ್ಟು ದೊಡ್ಡ ಹೊರೆಯಾಗಬೇಡ? ಕಾಂಗ್ರೆಸು ಸರಕಾರವು ಈ ಹೊರೆಯನ್ನು ಸಮಪಾಲಾಗಿ ಮಾಡದೆ, ಕೇವಲ ಬಡವರ ತಲೆಯಲ್ಲಿಯೇ ಹೆಚ್ಚಿನ ಹೊರೆಹೊರಿಸಿದರೆ, ಎಲ್ಲರ ಹಿತಕ್ಕಿರುವ ಸಂಸ್ಥೆಯೆಂಬ ಹೆಸರನ್ನು ಕಾಂಗ್ರೆಸು ಕಳಕೊಳ್ಳಬೇಕಾದೀತು.

ಮದ್ಯಪಾನ ನಿಷೇಧವು ಕಾಂಗ್ರೆಸಿನ ಧ್ಯೇಯ ಮತ್ತು ಪ್ರತಿಜ್ಞೆಯಾಗಿದೆ" ಹೀಗೆಂದು ಮಾನ್ಯ ರಾಜಾಜಿಯವರು ಬೊಂಬಾಯಿ ಸಭೆಯೊಂದರಲ್ಲಿ ಭಾಷಣವಿತ್ತರು.

ಮಾನ್ಯ ಗೋಪಾಲರೆಡ್ಡಿಯವರು
(ಹೊಸ ತೆರಿಗೆಯ ಕುರಿತು)

"ಇಂದು ಹೆಚ್ಚಿನ ಭಾರವು ಹಳ್ಳಿಯ ಬಡವರ ಮೇಲಿರುವುದನ್ನು ತೆಗೆದು ಹಣವಂತರ ಹೆಗಲ ಮೇಲಿರಿಸುವುದೇ, ಮದ್ಯಪಾನ ನಿಷೇಧ ಮತ್ತು ಹೊಸ ತೆರಿಗೆಗಳ ಧ್ಯೇಯ. ಆ ಮೇಲೆ ದೇಶದ ಎಲ್ಲಾ ತರದ ಅಭಿವೃದ್ಧಿಯ ಕೆಲಸಗಳಿಗೆ ಹಣವು ಬೇಕಾಗಿದೆ. ಆ ಹಣವನ್ನು ಸರಕಾರವು ನ್ಯಾಯವಾಗಿ ಸಂಪಾದಿಸಬೇಕಾಗಿದೆ. ನಾವು ನಿಮ್ಮ ಸಹಕಾರದಿಂದ ಅಧಿಕಾರಕ್ಕೇರಿದ್ದೇವೆ. ಕಾಂಗ್ರೆಸಿನ ಧ್ಯೇಯವನ್ನು ಸಾಧಿಸಲು ನಾವು ಯತ್ನಿಸುವಲ್ಲಿ ನೀವೇ ನಮಗೆ ಸಹಾಯವಾಗಬೇಕು. ನಿಮ್ಮ ಸಹಾಯ ನಂತಲ್ಲಿ ನಮ್ಮ ರಥವು ನಿಂತ ಹಾಗೆ! ದೇಶದ ಬಡಮಂದಿಯ ಉದ್ಧಾರಕ್ಕಾಗಿ ನೀವು ಈ ತೆರಿಗೆಯನ್ನು ತೆರಲು ಸಿದ್ಧರಿರಬೇಕು. ರಾಷ್ಟ್ರದ ಸಹಾಯಕ್ಕಾಗಿ ಕೊಡುವ ಈ ತೆರಿಗೆಯನ್ನು ಆ ಪವಿತ್ರ ಉದ್ದೇಶದಿಂದ ತೆರಬೇಕು" ಹೀಗೆಂದು ಶ್ರೀ ಗೋಪಾಲ ರೆಡ್ಡಿಯವರು ಅನಂತಪುರದಲ್ಲಿ ಭಾಷಣವಿತ್ತರು.

(ಬಸ್ಸ್ ಸರ್ವಿಸಿನ ಕುರಿತು)

"ಬಸ್ಸು ಸರ್ವೀಸುಗಳನ್ನು ಬೋರ್ಡಿನಿಂದ ನಡೆಸಿದರೆ ಖಾಸಗೀ ಜನರು ನಡೆಸಿದಷ್ಟು ಉತ್ತಮವಾಗಿ ನಡೆದೀತೆಂದು ನಾನು ನಂಬುವುದಿಲ್ಲ. ಈಗ ಬಸ್ಸು ಮಾಲಕರು ಹೆಚ್ಚು ಲಾಭ ಪಡೆಯುತ್ತಿರುವರೆಂಬುದೇನೋ ಸಹಜ, ಆದರೆ ಜಿಲ್ಲಾ ಬೋರ್ಡುಗಳು ಅವುಗಳನ್ನು ತೆಕ್ಕೊಂಡರೆ ಆ ಕೆಲಸದಲ್ಲಿ ಖಾಸಗೀ ಜನರು ಮಹನಷ್ಟು ತೆಕ್ಕೊಳ್ಳುವಷ್ಟು ಮೆಹನತ್ತಿಲ್ಲದೆ, ಖಂಡಿತವಾಗಿಯೂ ವ್ಯಾಪಾರವು ಊರ್ಜಿತವಾಗಲಾರದು. ಅಂತೂ ಆ ವಿಚಾರವು ಬರುವ ತಿಂಗಳ ಕೌನ್ಸಿಲಿನಲ್ಲಿ ನಿರ್ಣಯಕ್ಕೆ ಬರಲಿರುವುದು" ಹೀಗೆಂದು ಅನಂತಪುರದಲ್ಲಿ ಶ್ರೀ! ರೆಡ್ಡಿಯವರು ಭಾಷಣವಿತ್ತರು.

ಮಾನ್ಯ ಸಿ ಜೆ ವಾರ್ಕಿಯವರು
(ವ್ಯಾಯಾಮ ಶಿಕ್ಷಣದ ಕುರಿತು)

"ನಮ್ಮ ಹಿಂದಿನ ಹಿರಿಯರು ಕೇವಲ ತಾತ್ವಿಕ ವಿದ್ಯೆಯ ಕಡೆ ಗಮನವಿತ್ತು ಶಾರೀರಿಕ ವಿದ್ಯೆಯನ್ನು ದುರ್ಲಕ್ಷಿಸಿದ್ದಾರೆ. ಅಮೇರಿಕವು ಇಂದು ಆ ದೃಷ್ಟಿಯಲ್ಲಿ ಬಹಳ ಅಭಿವೃದ್ಧಿಹೊಂದಿದೆ. ರಾಷ್ಟ್ರದ ಪ್ರಗತಿಗೆ ತಾತ್ವಿಕ, ನೈತಿಕ ಮತ್ತು ಶಾರೀರಿಕ ಶಿಕ್ಷಣಗಳು ಅಗತ್ಯವಾಗಿವೆ. ಈ ಸಂಸ್ಥೆಯು ಇಡೀ ಹಿಂದೂದೇಶದಲ್ಲೆಲ್ಲಾ ಅತ್ಯಂತ ಪ್ರಾಚೀನವಾದ ಸಂಸ್ಥೆಯಾಗಿದೆ. ಇತರ ಪ್ರಾಂತಗಳಿಗೆ ಇದು ಆದರ್ಶ ಸಂಸ್ಥೆಯಾಗಿ ದೇಶದ ಶಕ್ತಿಯನ್ನು ಬೆಳೆಸಿ ಅಭಿವೃದ್ಧಿ ಹೊಂದುವಂತಾಗಲಿ" ಎಂದು ಮಾನ್ಯ ವಾರ್ಕಿಯವರು ಮದ್ರಾಸಿನ ವೈ ಎಂ ಸಿ ಎ ಕಾಲೇಜಿನ ಪ್ರವೇಶ ದಿನದಂದು ಭಾಷಣವಿತ್ತರು.

ಶ್ರೀ! ಎಚ್ ವಿ ಕಾಮತರ ರಾಜಿನಾಮೆಯ ಕಾರಣ

ಐ ಸಿ ಎಸ್ ಕೆಲಸಕ್ಕೆ ರಾಜಿಕೊಟ್ಟು ಬಂದು ರಾಷ್ಟ್ರೀಯ ಯೋಜನಾ ಸಮಿತಿಯ ಕಾರ್ಯದರ್ಶಿಗಳಾಗಿದ್ದ ಶ್ರೀ ಎಚ್ ವಿ ಕಾಮತರು ತಿರುಗೊಮ್ಮೆ ತಮ್ಮ ಕಾರ್ಯದರ್ಶಿ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿರುವುದರ ಕಾರಣವು ಅವರಿಗೂ ಜವಾಹಿರಲಾಲ ನೆಹರೂಗಳಿಗೂ ನಡೆದ ಪತ್ರ ವ್ಯವಹಾರದಿಂದ ಹೀಗೆಂದು ತಿಳಿದುಬರುತ್ತದೆ —

ರಾಷ್ಟ್ರೀಯ ಯೋಜನಾ ಸಮಿತಿಯ ಕೆಲಸವು ಅಖಿಲ ಭಾರತದ ದೃಷ್ಟಿಯಲ್ಲಿ ಬಹಳ ಮಹತ್ವವುಳ್ಳದಾದ ದರಿಂದಲೂ ಅದರಲ್ಲಿ ಕಾಂಗ್ರೆಸ್ಸಿಗೆ ಸೇರದ ಸದಸ್ಯರಿರುವುದರಿಂದಲೂ ಶ್ರೀ! ಎಚ್ ವಿ ಕಾಮತರು ಅದರ ಕಾರ್ಯದರ್ಶಿಗಳಾಗಿದ್ದು ಕಾಂಗ್ರೆಸು ಪ್ರೆಸಿಡೆಂಟರ ಚುನಾವಣೆಯ ಸಂದರ್ಭದಲ್ಲಿ ವ್ಯಕ್ತಿಗತವಾದ ಪ್ರಕಟಣೆಯನ್ನು ಹೊರಡಿಸಿದ್ದು, ಹಾಗೂ ಫಾರ್ವರ್ಡ್ ಬ್ಲಾಕಿನ ಸದಸ್ಯರಾಗಿ ಪ್ರತ್ಯಕ್ಷ ರಾಜಕೀಯ ರಂಗದಲ್ಲಿ ಕಾರ್ಯಭಾಗ ವಹಿಸಿದ್ದಕ್ಕೆ ನೆಹರೂಗಳು ಆಕ್ಷೇಪಿಸಿದರು. ತಾನು ತನ್ನ ಕಾರ್ಯದರ್ಶಿ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಿರುವುದಾಗಿಯೂ, ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸಬಾರದಾಗಿ ನನಗೆ ಆ ಕೆಲಸವನ್ನು ನೇಮಿಸಿದಾಗ ಹೇಳಿದಿಲ್ಲವೆಂದೂ, ಹಾಗೆ ನನ್ನ ರಾಜಕೀಯ ಕೆಲಸದಿಂದ ತೊಂದರೆಯಾಗುವುದಾದರೆ ನಾನು ಕಾರ್ಯದರ್ಶಿತನಕ್ಕೆ ರಾಜಿಕೊಡುವುದಾಗಿಯೂ ಅವರು ತಿಳಿಸಿದರು. ಕಡೆಯ ಪತ್ರದಲ್ಲಿ ನೆಹರುಗಳು ಸ್ವಲ್ಪ ಸಮಯದ ವರೆಗೆ ಶಾಂತರೀತಿಯಿಂದಿದ್ದು ಕಾಂಗ್ರೆಸಿನ ಕೆಲಸದಲ್ಲಿ ತರಬೇತಿಯಾಗಿ ಪ್ರತ್ಯಕ್ಷ ರಾಜಕೀಯಕ್ಕೆ ದುಮುಕುವುದು ಚೆನ್ನಾಗಿತ್ತೆಂದು ಉಪದೇಶಿಸಿ, ಅವರ ರಾಜಿನಾಮೆಯನ್ನು ಅಂಗೀಕರಿಸಿರುವರು.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ
ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St CALCUTTA

Now! NACET
SLOTTED BLADES

ಎಲ್ಲರ ಮನ್ನಣೆಗೆ ಪಾತ್ರವಾದ ನೆಸೆಟ್ ಬ್ಲೇಡುಗಳ ಚೊಕ್ಕಟವಾದ ಕ್ಷೌರದ ಸಂಪ್ರದಾಯವನ್ನು ಮುಂದರಿಸಲು ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳನ್ನು ಹೊರಡಿಸಿದ್ದೇವೆ. ಆದರೆ ಈ ಬಾರಿ ಅಧಿಕ ಉತ್ತಮತರದ್ದಾಗಿದೆ.

ಹೊಸ ಬ್ಲೇಡುಗಳು ಸೀಳಾಗಿವೆ ಎಂದು ನೀವು ಗಮನಿಸಿದಲ್ಲಿ ಅದರ ಸ್ವಲ್ಪ ಹೆಚ್ಚಿಸಿದ ಬೆಲೆಯ ಗುಣವನ್ನು ಕಂಡು ಸಮಾಧಾನವಾದೀತು. ಅದು ಅಲ್ಲದೆ ಇದು ಹೊಸ ಯಾ ಹಳೆಯ ರೇಜರುಗಳಿಗೆ ಆಗುವ ತರದ್ದಾಗಿರುತ್ತದೆ

10 ಬ್ಲೇಡುಗಳಿಗೆ ಆಣೆ 8



INK

ಉದರಶೂಲೆಗೆ ಉತ್ತಮ ಔಷಧಿ!

ಊಟವಾದೊಡನೆ ಯಾ ಇತರ ಆಹಾರವನ್ನು ಸೇವಿಸಿದೊಡನೆ ತಲೆ ಸಿಡಿತ ಮುಂತಾದ ಬಾಧೆಗಳ ತಲೆದೋರಿದೊಡನೆ—ಹೊಟ್ಟೆಯಲ್ಲಿ ಸಹಿಸಲಸಾಧ್ಯವಾದ ವೇದನೆಯ ಪ್ರಾರಂಭವಾದೊಡನೆ—ಒಂದು ಡೋಸ ಮೆಕ್ಲಿನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಉಪಯೋಗಿಸಿರಿ. ಒಬ್ಬರ ... ಗುಣಹೊಂದಿರುವರು.

ಈ ಔಷಧಿಯು ... ಉದರವನ್ನು ಸೇರಿದೊಡನೆ ನೀವು ತಿಂದಂತಹ ಅತ್ಯಂತ ಅಧಿಕವಾದ ಉತ್ತಮ ಆಹಾರ ... ಸೇವನೆಯಿಂದ ಉಂಟಾದ ಅಧಿಕ ... ವನ್ನು ಹಿಂಗಡಿಸಿ ಅದನ್ನು ... ರಹಿತವನ್ನಾಗಿ ಮಾಡಿ ಉದರ ವೇದನೆಯನ್ನು ಗುಣಪಡಿಸುವುದು. ... ಜೀರ್ಣೇಂದ್ರಿಯಗಳಲ್ಲಿ ಉಂಟಾದ ... ಹೂರಗೆಡಹಿ ಆಹಾರ ... ಗಳ ದೇಹದಿಂದ ಹೊರಬೀಳ ... ತಲೆಶೂಲೆ, ಆಲಸ್ಯ ... ತಾದ ಬಾಧೆಗಳೆಲ್ಲಾ ಮಾಯವಾಗುವುದು. ನೀವು ಪುನಃ ಹಿಂದಿನಂತೆ ಉತ್ತೇಜಿತರಾಗುವಿರಿ. ಆದಕಾರಣ ಇಂಥ ಬಾಧೆಗಳಿಗೆ ಅಗತ್ಯಬೀಳುವ ಒಂದು ಬಾಟ್ಲಿ ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರನ್ನು ಸಂಗಡವೇ ಇಟ್ಟುಕೊಳ್ಳಿರಿ. ಆದರೆ ಇದನ್ನು ಕೊಂಡುಕೊಳ್ಳುವಾಗ ಖಾತ್ರಿ ... ದ ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರು ಸಿಗುವಂತೆ ಎಲೆಕ್ಸ್ ಸಿ ಮೆಕಿನ್ಸ್



... ಪಟ್ಟಿಗೆಯು ... ಇರುವುದು ಎಂದ ನೋಡಿರಿ ಮತ್ತು ಪಟ್ಟಿಗೆಯ ... ಕೆಂಪು ... ಇರುವುದೊ ... ಮಾರಲ್ಪಡುವುದಿಲ್ಲ. ಪಟ್ಟಿಗೆಯೊಳಗಿನ ಬಾಟ್ಲಿಗಳಲ್ಲಿ ಮಾರಲ್ಪಡುವುದು (ಹುಡಿ ಅಥವಾ ಮಾತ್ರೆಗಳ ರೂಪದಲ್ಲಿ) ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುವುದು

71/

೫. ಗವಯಿ ಗಣಪತಿ

ನಮ್ಮ ನಗರದ ಜೀವನದಲ್ಲಿ ಗಣಪತಿಯನ್ನು ಬಿಟ್ಟರೆ ಊರಿನ ಸಂಸ್ಕೃತಿಯ ಒಂದು ಅಂಗ ಬಿಟ್ಟಂತೆ. ಹೇಗೆ ಮಂಗಳೂರಿನ 'ಜನಾಭಿಪ್ರಾಯಕ್ಕೆ'–ಕುಮಾರಯ್ಯನು ಒಂದು ಬಾಯಿಯೋ, ಅದೇ ರೀತಿ ಸಂಸ್ಕೃತಿಯ ಸಂಕೇತ ಗಣಪಯ್ಯ. ಗವಯಿ ಗಣಪತಿ ಎಂದರೆ ಚಿಲ್ಲರೆಯವನಲ್ಲ, ವಿದ್ವಾಂಸ ಎಂಬುದು ಸ್ವತಃ ತಿಳಿಯಬೇಕು. ಸ್ವತಃ ಅವನ ಮನೆಯ ಮುಂದಿನ ಬೋರ್ಡಿನ ಮೇಲೆ ಪ್ರೊ|| ಗಣಪತಿರಾವ್–ಗಾನವಿಶಾರದ ತಬ್ಲಾ, ಹಾರ್ಮೋನಿಯಂ ಮಾಸ್ಟರ್ ಎಂದೂ, 'ಇಲ್ಲಿ ತಬ್ಲಾ ಹಾರ್ಮೋನಿಯಮುಗಳು ರಿಪೇರಿ ಮಾಡಲ್ಪಡ ತ್ತವೆಯೆಂದೂ ಸೂಚನೆಯುಳ್ಳ ಬೋರ್ಡು ಇದೆ. ಸಂಗೀತದಲ್ಲಿ ಪ್ರೊಫೆಸರನೆನಿಸಲು ಎಷ್ಟು ಶ್ರಮ ಬೇಡ. ಸಂಗತದಲ್ಲಿ ಗಣಪತಿಯು ಪಟ್ಟ ಶ್ರಮಕ್ಕಿಂತ ಊರವರಿಗೆ ಪರಿಸುವ ಶ್ರಮ ಕಡಿಮೆಯಲ್ಲ. ಇವರೊಬ್ಬರಿಗಿಂತ–ಪ್ರತಿ ಮೂರು ತಿಂಗಳಿಗೆ ಮನೆ ಬದಲಿಸುವ ಅವನ ಸೈನು ಬೋರ್ಡಿನ ಶ್ರಮ ಮತ್ತೂ ಅಧಿಕ.

ಗಣಪತಿ ಏಕೆ ಮುಖ್ಯ ಎಂದರೆ–ಸಂಗೀತಕ್ಕೆ ಮಾತ್ರವಲ್ಲ. ಅದರ ವಿಷಯದಲ್ಲಿ 'ಈ ಹೋಲ್ ಸೌತ್ ಕೆನರಾದಲ್ಲಿ, ಏಕೆ ಮುಂಬಯಿಯಲ್ಲಿ ಸಹ ಅವನ ಗಾಯನಕ್ಕೆ ಸ್ಪರ್ಧಿಗಳು ಯಾರಿದ್ದಾರೆ?' ಎಂದು ಕೇಳುವಾಗ ಅವನ ಆತ್ಮವಿಶ್ವಾಸವೆಷ್ಟಿರಬೇಕು. ಅದು ಮಾತ್ರವಲ್ಲ–ಎಂಥ ಶ್ರೀಮಂತರ ಮನೆಯವರಾದರೂ, ಹೆಣ್ಣು ಮಕ್ಕಳು ಹುಟ್ಟಿದ ದಿನವೇ ಅವನನ್ನು ಸ್ಮರಿಸಲು ತೊಡಗುವುದು ರೂಢಿ. ಹತ್ತು ವರ್ಷವಾದರೆ ಗಣಪತಿಯದೇ ಧ್ಯಾನ. ಮದುವೆಗೆ ಆರು ತಿಂಗಳ ಮೊದಲಿಂದಾದರೂ ಗಾನ ಅವನ ಕೈಯಿಂದ ಪಾರ ಕಲಿಸದಿದ್ದರೆ ತಂದೆಯೆನಿಸಿದವನಿಗೆ ಸಮಾಧಾನವಾಗದು. ಹೀಗಿದ್ದ ಮೇಲೆ ನಮ್ಮ ನಗರದ ಎಲ್ಲ ಅಧ್ಯಂಲ್ಲಿಗೆ ಹೋಗಿ ಬರುವ ಸೌಲಭ್ಯ ಅವನಿಗಿರುವಂತೆ ಇನ್ನಾರಿಗಿದೆ. ಅಲ್ಲದೆ–ಗಾಯನದ ಗವರ್ ಎಂದ ಬಳಿಕ ಅಂತಃಪುರ ಪ್ರವೇಶಕ್ಕನೆ ಅಧಿಕಾರ ದೊರೆತಂತಿರಲು ಯಾರ್ಯಾರ ಮನೆಯ ದೋಸಗಳಿಗೆ ಎಷ್ಟೆಷ್ಟು ತೂತುಗಳು ಎಂದ ಎಣಿಸಿ ಹೇಳಬಲ್ಲ ಭಟ ಅವನಲ್ಲದೆ ಇನ್ನಾರು? ಕನ್ನಡ ಕೇಸರಿಯಲ್ಲಿ 'ದಿಗಂಬರರಾಯರಂಥ ದೇಶಸೇವಕರಿಲ್ಲ, ಗ್ರೇಸಿ ಫರ್ಟಾಡರಂಥ ಉದಾರಿಗಳಿಲ್ಲ' 'ನಾಗೇಂದ್ರ ಪೈಗಳಂಥ ಸಾಹುಕಾರರೂ, ಉದ್ಯೋಗ ವಿಶಾರದರೂ ಇಲ್ಲ'–ಎಂದರೆ ಅಗ್ರಲೇಖ ಬಂದರೆ ಒಂದೇ ಉಸಿರಿನಲ್ಲಿ 'ಅದಕ್ಕೇನು ಗೊತ್ತು ಆ ಕುಮಾರಯ್ಯನಿಗೆ? ಇನ್ನೂ ಮೀಸೆ ಬಾರದ ಹುಡುಗ. ಮೈದಾನಿನಲಿ ಲೆಕ್ಚರು ಕೊಟ್ಟರೆ ಆಯಿತೇ? ಯಾಥ ಹೇಗೆ ಎಂದು ನನ್ನಿಂದ ಕೇಳಲಿ' ಎನ್ನುತ್ತಾನೆ.

ಅದಕ್ಕೆ ಒಂದು ಕಾರಣ ಹೀಗೂ ಇರಬಹುದು–'ಗವಯಿಗಳಾದ ಗರ್ಜಿಗೆ ಮಿತಿಯಿಲ್ಲ.' ಹೀಗಿರಲು ಗಣಪತಿಯ ಇಸಯಲ್ಲಿ ಕಾಸು ಉಳಿಯುವುದೆಂದೂ ಇಲ್ಲ, ಹೊರಗಿನ ಕೀಟಲೆ ಅವನಿಗೆ ತಪ್ಪುವುದೆಂದೂ ಇಲ್ಲ. ಇತ ಸಂಪಾದನೆ ಇಲ್ಲವೆ? ಅವನೇ 'ವೇಳೆಯಿಲ್ಲವೆ ಎಷ್ಟೋ ಜನ ಸಲಾಂ ಹಾಕಿ ಬಂದರೂ ಟೈಮ್ ಇಲ್ಲ' ಎಂದವನು. ಆದರೆ ಹಣದ ಅಡಚಣೆ ಕೇವಲ ಗ್ರಹಗತಿಯ ಕೆಡುಗಿನಿಂದ ತಪ್ಪಿದ್ದೇ ಇಲ್ಲ. ಹಾಗಾಗಿ ಒಮ್ಮೊಮ್ಮೆ–ಅವನು ದಿಗಂಬರರಾಯರ ಮನೆಗೆ ಹೋದಾಗ ಆಪತ್ತೆಲ್ಲೋ ಚನೆಯಲ್ಲಿ ನಾಣಿಯೊಡನೆ ಬೆರೆತು, 'ನಾಣ್ಣೆ–ಈ ಪೇಪರಿನವರು ಸುಮ್ಮನೆ ಕಾಂಗ್ರೆಸ್ಸಿನ ಮುತ್ತು ಮಂತ್ರಿಗಳ, ಈ ಸ್ಟ್ರೈಕುಗಳ 'ದಾಳಿ' ತುಂಬಿಸುವ ಬದಲು ಪ್ರತಿ ವಾರ ಒಂದೊಂದು ಪುಟ ಗಾಯನದ ಮೇಲೆ ನೋಟೇಶನ ಸಹಿತ ಯಾಕೆ ಹಾಕಬಾರದು. ಹೆಣ್ಣು ಮಕ್ಕಳಿದ್ದ ಮನೆಯವರು ಅದನ್ನು ತಪ್ಪದೆ ಕೊಂಡ್ಯಾರು' ಎಂದು ದುಂಬಾಲು ಬೀಳುವ 'ರೈಟ್' ಎಂದುದೂ ಉಂಟು. ಆದರೆ ಗವಯಿಯ ಧೋರಣೆಗೆ ಸಮನಾಗಿ ಪೇಪರಿನವರಲ್ಲಿಗೆ ಹೋಗಲು ಆಗಲಿಲ್ಲ. ಅವರಾಗಿ ಅವನಲ್ಲಿ ಸಂಗೀತ ಭಿಕ್ಷೆ ಕೇಳಲಿಲ್ಲ. ...ಗು ಗವ ...ರ ಹಣದ ತರಾತುರಿ ಬಿದ

ನಗರದ ನವ ನಾಯಕರು

ಲೇಖಕ: ಶಿವರಾಮ ಕಾರಂತ

ದಿನವೇ ಈ ಯೋಚನೆ ಉದಿಸಿದ. ಕಪಿಲಾ ಷಷ್ಠಿಯೋಗ ಕೂಡಿದಂತೆ ನಾಣಿಗೂ, ಗವಯಿಗೂ ಬೇಟಿಯಾಯಿತು. ಅದೇ ವೇಳೆಗೆ ಸಮನಾಗಿ ಕುಮಾರಯ್ಯನ ಸವಾರಿಯೂ ಬಂದಿತು. ಹೆಚ್ಚುಕಡಿಮೆ ಕಾರಾಮತಿಯವರ ಅಧ್ಯಕ್ಷತೆಯಲ್ಲಿ ಎಂಬಂತೆ ಒಂದು ಸಭೆಯು ಜರುಗಿತು. ನಾಣಿಯದೇ ಪ್ರಾರಂಭ ಭಾಷಣ–'ಮಿ॥ ಕಾಮ್ರೇಡರೇ, ನಿಮ್ಮ ಕೇಸರಿಯ ದಾಳಿ ಓದಿ ಸಾಕಾಯಿತು. ನಮ್ಮ ಗವಯಿಗಳಿಂದ ಒಂದು ಪುಟ ಪ್ರತಿ ವಾರಕ್ಕೆ ಸಂಗೀತದ ವಿಚಾರ ಯಾಕೆ ಬರೆಯಿಸಬಾರದು? ನಾಲ್ಕು ಹೆಣ್ಣುಗಳಾದರೂ ಓದಿಯಾರು. ಈಗಲಾದರೆ ನಮ್ಮ ರಾಯರ, ಗ್ರೇಸಿ, ಜಾನಕಿ–ಎಂದು ಇವರದ್ದೇ ಕಾಳಗ, ಶೂರ್ಪನಖಿ ಪರಿಣಯ, ಭಬ್ರುವಾಹನ ಕಾಳಗವೆಂದ ಕಾಂಗ್ರೆಸ್ಸಿನ ವರದಿ ಇದೇ ಆಯಿತು. ಸುಬಾಸರು ಅಳಿರಲಿ, ವಲ್ಲಭಾಯಿ ಮತ್ತೊಂದು ಕಡೆಗಿರಲಿ. ಅವರಿಗೆ ಜಗಳವಾದರೆ, ನಮ್ಮ ಅಧ್ಯಾನ ಗಂಟೇನು ಖರ್ಚು. ಒಂದಾಣೆ ಕೊಡುವವನ ಈ ಯಾರಾರ ಜಾತಕ ಓದಬೇಕೇ' ಎಂದನು. ಅವನ ಉಸಿರು ನಿಲ್ಲುವುದರಲ್ಲೆ ಗವಯಿ ಎದ್ದು 'ಅಮ್ಮ, ಮೊನ್ನೆ ಕರೀಮಖಾನರು ಸತ್ತರೆ ಒಂದು ಪತ್ರಿಕೆಯಲ್ಲಾದರೂ ನಾಲ್ಕು ಪಂಕ್ತಿ ಬರಬೇಕೇ? ಎಬ್ಸೀನಿಯದಲ್ಲಿ ಒಂದು ಕತ್ತೆ ಸತ್ತರೆ ಆರು ಪುಟ ಬರೆಯುತ್ತಾರೆ. ಸಿನೆಮ ಕಂಪೆನಿ ಅವಳು ಇವಳು ಸಂಗೀತದ ಗಂಧಗಾಳಿ ಇಲ್ಲದವಳು ಗದ್ದ ಮ್ಯಾತನಾಡಿದರೆ ಅದು ಸಂಗೀತ ಎಂದು ಬರೆಯುತ್ತಾರೆ'–ಎಂದನು.

ನಾನು ಒಗ್ಗವಣೆ ಕೇಳಬೇಕೇ? 'ಹೋ ಗವಯಿಗಳೇ, ಕರೀಮಖಾನನ ವಿಚಾರ ಬರೆಯಲು ಅವನೇನು ಹೆಣ್ಣೇ? ಹಾಡದಿದ್ದರೂ ಚಿಂತೆಯಿಲ್ಲ, ಹೆಣ್ಣಾದರೆ ದಾಡಿಗೆ ಬ್ಲಾಕು ತಂದು ಕನ್ನಡ ಕೇಸರಿಯಲ್ಲಿ ಆ ಕಾಲಮ್ ಕೇಸರಿ ಚಿತ್ರ ತುಂಬಿಸುತ್ತಾರೆ. ಇಲ್ಲವಾದರೆ ಅಂಥ ದೇಶಭಕ್ತಳಾದರೂ ಆಗಬೇಕು. ಯಾವುದೂ ಇಲ್ಲದೆ'

ಇಂದ ಉಗ್ರವಾದ ಟೀಕೆಗಳು ನಮ್ಮ ಸಂಪಾದಕ ಕೇಸರಿಯ ಮೇಲೆ ಮಾಡಿದರೆ ಕುಮಾರಯ್ಯನಿಗೆ ತಡೆದೀತೆ? ನೀವೆಲ್ಲ–ಅನ್ ಎಡ್ಯುಕೇಟೆಡ್ ಬ್ರುಟ್ಸ್. ಇದು ದೇಶಕ್ಕಾಗಿ ಸಾಯುವ ಕಾಲ, ಹಾಡುತ್ತಾ ಕುಳಿತಿರುವುದಲ್ಲ'–ಎಂದುಬಿಟ್ಟನು.

ನಾಣಿಯೋ ಅವನ ಬಾಯಿ ಮುಚ್ಚಿಸಿ–'ಹಾಗಾದರೆ ತಾವು ಸಹ ಬೀಡಿ ಎಳೆದೆಳೆದೇ ಮುಸರಬಹುದಲ್ಲ' ಎಂದುಬಿಟ್ಟ.

ಗವಯಿಗೆ ಉಗ್ರ ಸಿಟ್ಟು. 'ಅಹುದು, ಸಂಗೀತ ಬೇಡವಾದಕ್ಕೆ ಮಿಸ್ ಇವಳ ತೊದಲು ಸಂಗೀತ ಕೇಳಲಿಕ್ಕೆ ಹೋದದ್ದು'–ಎಂದನು.

ನಾಣಿ ತಿದ್ದುಪಡಿ ಮಾಡಿ 'ಸಂಗೀತ ಕೇಳಲಿಕ್ಕಲ್ಲ ಗವಯಿಗಳೇ, ಕಾಣಲಿಕ್ಕೆ' ಎಂದನು.

ಇಷ್ಟು ವಾಗ್ವಾದ ಬೆಳೆದ ಮೇಲೆ ಕಾರಾಮತಿಯವರ ಅಪ್ಪಣೆಯಾಯಿತು. 'ನಿಮ್ಮ ಮಾತೊಂದೂ ನನಗೆ ಅರ್ಥವಾಗದು. ನಾನೆನ್ನುತ್ತೇನಲ್ಲ, ನಿಮ್ಮ ಪೇಪರು ನಮ್ಮ ಮನೆಗೆ ಬೇಡ ಎಂದರೂ ತಂದುಹಾಕುತ್ತೀರಿ. ನಮ್ಮ ಕೆಲಸದವಳಿಗೆ ಕಸತೆಗೆಯುವ ಒಂದು ಕೆಲಸವೇ ಹೆಚ್ಚು ಬಿದ್ದಿದೆ. ನಮ್ಮ ಯಜಮಾನರು ಅವರ ಹೆಸರು ಬಂದಿದೆಯೇ ಎಂದು ನೋಡಿ 'ಹೊಗೊ ಪೇಪರಿಂತು ಇಲ್ಲ' ಎನ್ನುತ್ತಾರೆ. ಅವರ ವಿಷಯ ಪೇಪರಿನಲ್ಲಿ ಬರುವುದೇಕೆ ನನ್ನ ಯಾವುದು ಅದನ್ನು ಮೊದಲು ತಿಳಿದಿಲ್ಲ. ಬದಲು ಒಂದು ಪುಟ ಸಂಗೀತದ ವಿಚಾರವಾದರೂ ಹಾಕಿದರೆ ನಾಲ್ಕು ಮನೆಯವರು ಓದಿಯಾರು' ಎಂದರು.

ಕುಮಾರಯ್ಯನು ಅವರನ್ನು ಇದಿರಿಸಲಾರದೆ, ಅದಕ್ಕೇನು ನಾಳಿನ ವಾರದಿಂದಲೇ ಹಾಕಿಸುವ. ಗವಯಿಗಳೇ ಸಿಟ್ಟುಮಾಡಬೇಡಿ. ಏನ ಬೇಕೋ ಬರೆದು ಕಳುಹಿಸಿರಿ. ಛಾಪಿಸಿದಂತೆ ಹಾಕುತ್ತೇನೆ. ನಾವು ಎಡಿಟರು–ಜನರಿಗೆ ಬೇಕಾದ್ದನ್ನು ಕೊಡಬೇಕು. ಸ್ವತಃ ನನಗೆ ಸಂಗೀತದಲಿ ಅಭಿರುಚಿ ಇಲ್ಲ ಎಂದು ಹೀಗೆ ಹೇಳಿದೆ.

ನಾಣಿ–'ಹಾಗಾದರೆ ಮಿಸ್ ಅವಳ ಸಂಗೀತದ ವಿಷಯದಲ್ಲಿ ಅರ್ಧ ಪುಟ ಇತ್ತ ನಿಮ್ಮ ಪೇಪರಿನಲ್ಲಿ?'

'ಅದು ಅವರೇ ಬರೆಯಿಸಿಕೊಟ್ಟರು. ಹಾಕದೆ ನಾನೇನು ಮಾಡುವುದು? ಹಾಕಿದರಾಯಿತಲ್ಲ' ಎಂದನು.

ಇಂಥ ಉದಾರ ಸಂಪಾದಕರ ಮನೆಗೆ 'ವಸಂತ ರಾಗ'ದ ಚೀಸು ನೊಟೇಶನಿನ ಸಹಿತವಾಗಿ ಗವಯಿಗಳು ಲೇಖನ ಹಿಡಿದುಕೊಂಡು ಹೋದರು. ಅವರು ಕಾಂಗ್ರೆಸು ಇಲೆಕ್ಷನಿನ ದಿಪ್ಲೊಮಸಿ ವಿಚಾರ ಯಾರೊಡನೋ ತರ್ಕಿಸುವ ವೇಳೆ ವಸಂತ ರಾಗವನ್ನು ಹಾಡಿ ತೋರಿಸಿ, ಹೇಗೆ ತಬ್ಲಾಗ್ ಖಾನರ ಘರಾಣದವರು ಅದನ್ನು ಕೆಡಿಸಿದ್ದಾರೆಂದು, ಅದಕ್ಕೆ ಮಂಚಸ್ಥ ಬೇಕೇ ಬೇಡವೇ–ಎಂಬುದನ್ನು ತರ್ಕಿಸಿದರು. ಕುಮಾರಯ್ಯನಿಗೆ ಸಾಕಾಯಿತು. ಅವನು ಉಪನ್ಯಾಸದಿಂದ ಬೇರೆಯುವರನ್ನು ಕೊಂದ ವೀರನೇ ವಿನಹ ಕೊಲ್ಲಿಸಿಕೊಂಡು ಸಾಂತವನಲ್ಲ. ಈಗ ಗವಯಿಗಳ ಗಂಧರ್ವೋಪನ್ಯಾಸವನ್ನು ಕೇಳಿ ಸೋಲು ಒಪ್ಪಿ–'ಲೇಖನ ಕೊಡಿರಿ ನೀವು. ಹಾಕಿದರಾಯಿತಲ್ಲ' ಎಂದು ಅವರನ್ನು ಕಳುಹಿಸಿ ಕೊಡಲು ಇನ್ನು ನಾಲ್ಕು ರಾಗಗಳ ವಿಷಯ ವಿಸ್ತಾರವಾಯಿತು. ಹೋಗುವಾಗ ಅಸಾವೇರಿಗ 'ರಿಷಭ' ಹಚ್ಚುವವರನ್ನು ಸಿಗಿದುಹಾಕಬೇಕೆಂದೂ ಹೇಳಿ ಹೋದನು.

ಮುಂದಿನ ವಾರ 'ವಸಂತರಾಗ ವಿಸ್ತಾರ' ಒಂದಿತ್ತು. ಆದರೆ ಆರೋಹಣ ಅವರೋಹಣದಲ್ಲಿ 'ಮ' ವ ಆಗತ್ತು ಕೆಲವು ಕಡೆ. 'ಅದೂ ಬಾತಲ್ಲಾ, ಮಂಗಳೂರಲ್ಲಿ ಒಬ್ಬ ಗವಯಿ ಬದುಕಿದ್ದಾನೆ ಎಂಬುದು ನಾಲ್ಕೂರಿಗೆ ತಿಳಿಯಿತಲ್ಲಾ' ಎಂದು ಹರ್ಷಪಟ್ಟನು. ಆ ಲೇಖವನ್ನು ತಾನು ಹೋಗುವ ಎಲ್ಲ ಮನೆಗಳಿಗೂ ಒಯ್ದು ಮನೆಯ ಹೆಂಗುಸರ ಮುಂದಿರಿಸಿದನು. ಜಾನಕಿಯಮ್ಮನಿಗೆ ಅದನ್ನು ಕೇಳಲು ಅವಕಾಶವಾಗಲಿಲ್ಲೆಂದು ಅವರ ಶಿರಿಮಗಳು, ಅರ್ಥಾತ್ ಇವರ ಶಿಷ್ಯಳಾದ ಇಂದುಮತಿಗೆ (೧೨ ವರ್ಷದ ಗಾನಪ್ರವೀಣೆ) ವಿವರಿಸಿದನು. ಆ ದಿನ ವಾರ ಮುಗಿಯುವ ಮೊದಲೇ ಜಾನಕಿಯವರು ಹೊರಟು ಹೋದರು. ಗವಯಿಗಳ ನಿತ್ಯದ ಫೀಸು ೧–೮–೦ ಬಾರದೆ ಹೋಯಿತು. ಬಹಳ ಗರ್ಜತ್ತು ಗವಯಿಗಳಿಗೆ. ಹೀಗಾಗಿ ನಿರಾಶೆಯಿಂದ ಪೇಪರಿನ ಲೇಖನವನ್ನು ಸ್ಮರಿಸಿ ಕುಮಾರಯ್ಯನವರಲ್ಲಿಗೆ ಹೋದನು. ಹೋದೊಡನೆಯೇ ಕುಮಾರಯ್ಯನು 'ಗವಯಿಗಳ ಮುಂದೆ ಭಲೆ, ನಾಲಕ್ಕೆರು ಜನರ' ಬಹಳ ಶಿಫಾರಸಿ ಮಾಡಿ ಬರೆದಿದ್ದಾರೆ. ಎಲ್ಲರೂ ಹೆಂಗಸರು ಗೌರವವಂತರ. ಇಂಥ ಗಾಯನ ಸಂಬಂಧ ಲೇಖ ಬೇಕು' ಎಂದು ಬರೆದಿದ್ದಾರೆ ಎಂದನು. 'ಈಗ ಧೈರ್ಯವಾಯಿತು. ಇನ್ನು ನೀವು ವಸಂತರಾಗವಲ್ಲ ಗೋರಿಂಗ್ ರಾಗ ಬರೆದರೂ ಹಾಕುತ್ತೇನೆ' ಎಂದು ಅಭಯವಾಯಿತು.

(೧೪ನೇ ಪುಟವನ್ನು ನೋಡಿರಿ)

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ

ಜಗತ್ಪ್ರಸಿದ್ಧ

GONO KILLER ORIGINAL

ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲಾ ಪ್ರಕಾರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಬೀಳುವುದಿಲ್ಲ. ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವುಹೋಗುವುದು ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ–ಕೊಕಸ' ಎಂಬ ವಿಷಾರಿ ಜಂತುಗಳ ... ಇದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗವು ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ಶ್ಯಂತವಾಗಿ ಮತ್ತು ಸಮೂಲವಾಗಿ ನಾಶವಾಗುವುವು. ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8–0–0 (ವ್ಹಿ. ಪಿ. ಚಾರ್ಜು 8 ಆಣೆ ಬೇರೆ)

ಎಲ್ಲಾ ಪತ್ರವ್ಯವಹಾರ ಗಳು ಇಂಗ್ಲಿಷಿನಲ್ಲಿ ಬರೆಯಿರಿ. **ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.**

Sole Manufacturer: **Dr. D. N. JASANI,** Vithalbhai Patal Road, BOMBAY,

ಸ್ಟಾಕಿಸ್ಟ: ಮೆಸರ್ಸ್ ಇಲೆಕ್ಟ್ರೊ ಹೊಮ್ಯೊಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್ ಹಂಪನಕಟ್ಟಾ ಮಂಗಳೂರು.

ಸತ್ಯಾಗ್ರಹದ ರಹಸ್ಯವನ್ನು ಪಟ್ಟಾಭಿಯವರು ವಿವರಿಸುತ್ತಾರೆ!

★ ಆಶ್ರಿತ ಸಂಸ್ಥಾನಗಳಲ್ಲಿ ಆಂದೋಲನವನ್ನು ನಿಲ್ಲಿಸಿದುದೇಕೆ?
★ ಗಾಂಧಿಜಿಯವರ ಜೀವನದಲ್ಲಿ ಅಪೂರ್ವ ಘಟನೆಗಳು
★ ರಚನಾತ್ಮಕ ಕಾರ್ಯವಿಲ್ಲದೆ ಸತ್ಯಾಗ್ರಹವು ಸಾಧ್ಯವಿಲ್ಲ
★ ಕಾಂಗ್ರೆಸಿನ ಪಂಚವಿಧ ಧ್ಯೇಯಗಳು

ಬೊಂಬಾಯಿಯ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಡಾ। ಪಟ್ಟಾಭಿ ಸೀತಾರಾಮಯ್ಯನವರು, ಮಹಾತ್ಮಾಜಿಯವರು ಆಶ್ರಿತ ರಾಜ್ಯಗಳಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಹೇಳಿದುದರ ಅರ್ಥವೇನೆಂದು ಹೀಗೆಂದು ವಿವರಿಸಿ ಹೇಳಿದರು,

"ಆಶ್ರಿತ ರಾಜ್ಯಗಳಲ್ಲಿ ಕೂಡಲೇ ಸತ್ಯಾಗ್ರಹವನ್ನು ಹಿಂದೆಗೆಯಬೇಕೆಂದು ಮಹಾತ್ಮಾಜಿಯವರು ಹೇಳಿದ ವಿಷಯದಲ್ಲಿ ಹಲವರಿಗೆ ತಮ್ಮ ಕೆಲಸದಲ್ಲಿ ಜಯವು ಸನ್ನಿಹಿತವಾಗಿದೆಯೆಂಬಷ್ಟರಲ್ಲಿ, ಕೈಗೆ ಹಣ್ಣು ಎಟಕಿತು ಎನ್ನುವಷ್ಟರಲ್ಲಿ, ಅದನ್ನು ಕಳೆದುಕೊಂಡ ಹಾಗೆ ನಿರುತ್ಸಾಹವಾಗಿದೆ ಅವರು ಇಷ್ಟರವರೆಗೆ ಮಾಡಿದ ಶ್ರಮ ಮತ್ತು ಸ್ವಾರ್ಥತ್ಯಾಗವು ನಿಷ್ಪ್ರಯೋಜನವಾಯಿತೆಂದು ತಿಳಿದುಕೊಂಡಿದ್ದಾರೆ. ಆದರೆ ಗಾಂಧಿಜಿಯವರ ಕಾರ್ಯನೀತಿಯನ್ನು ತಿಳಿದವರಿಗೆ, ಇದು ಅನಿರೀಕ್ಷಿತವಾಗಿ ಆಗಿದ್ದರೂ ಆಶ್ಚರ್ಯಕರವಾಗಿ ಕಾಣಲಿಕ್ಕಿಲ್ಲ.

"ಸತ್ಯಾಗ್ರಹವೆಂಬುದು ಒಂದು ನೂತನ ವಿಜ್ಞಾನವಾಗಿದೆ. ಹಲವರು ಅದನ್ನು ತಿಳಿಯಲು ತಮ್ಮ ವಿಚಾರ ಶಕ್ತಿಯನ್ನುಪಯೋಗಿಸುತ್ತಿದ್ದರೂ, ಎಲ್ಲರೂ ತಿಳಿದಿಲ್ಲ. ಸತ್ಯಾಗ್ರಹದ ಅಂತರ್ಗದಲ್ಲಿ ಒಂದು ಅಪೂರ್ವ ಶಕ್ತಿಯಿದೆ, ಅಂತಹ ಶಕ್ತಿಯಿಂದಲೇ ನಾವು ಸತ್ಯಾಗ್ರಹವನ್ನು ಕಂಡು ಹುಡುಕಬೇಕು ಸತ್ಯಾಗ್ರಹದಲ್ಲಿ ವಿಶ್ವಾಸಬೇಕು ವಿಶ್ವಾಸವಿಲ್ಲದಿದ್ದರೆ ವಿಜ್ಞಾನವೂ ತಿಳಿಯಲಾರದು.

"ಇಂತಹ ಅನಿರೀಕ್ಷಿತ ನಿರ್ಣಯಗಳನ್ನು ಮಾಡಿದ್ದು ಗಾಂಧಿಜಿಯವರು ಇದೇ ಮೊದಲನೆಯ ಸಲವಲ್ಲ. ೧೯೨೨ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಅವರು ಚೌರಿ ಚೌರಾ ಕೊಲೆಯ ಘಟನೆಯಿಂದು ಇಡೀ ಭರತಖಂಡದಲ್ಲೇ ವ್ಯಾಪಿಸಿದ್ದ ಸತ್ಯಾಗ್ರಹವನ್ನು ನಿಲ್ಲಿಸಿಬಿಟ್ಟರು ಲಾಲಾ ಲಜಪತರಾಯ್ ಮತ್ತು ಮೋತಿಲಾಲ್ ಮೊದಲಾದವರು ಇದನ್ನು ಖಂಡಿಸಿದರು ಅವರಿಗೆ ಮಹಾತ್ಮಾಜಿಯವರ ಸ್ವಭಾವ ಮತ್ತು ವಿಚಾರಗಳು ತಿಳಿದಿರಲಿಲ್ಲ. ಈಗಲೂ ಕೂಡ ಮಹಾತ್ಮಾಜಿಯವರನ್ನು ತಿಳಿಯದೆ ಹಲವು ರಾಜಕೀಯ ವಿಚಾರದವರು ದೂರುತ್ತಾರೆ ಮಹಾತ್ಮಾಜಿಯವರು ಎರಡನೆಯ ಸಲ ಹೀಗೆ ಮಾಡಿದ್ದು ೧೯೩೪ರಲ್ಲಿ ಸತ್ಯಾಗ್ರಹವನ್ನು ಕೇವಲ ತನ್ನ ಮಟ್ಟಿಗೆ ಮಾತ್ರ ಇಟ್ಟುಕೊಂಡು ನ್ಯಾಯವಿಧಾಯಕ ಸಭೆಗಳನ್ನು ಪ್ರವೇಶಿಸುವರೆ ಅವರು ಆಜ್ಞೆಯಿತ್ತರು ಈ ಎರಡನೆಯ ಸಲ ಜನರು ಅಷ್ಟು ಆಶ್ಚರ್ಯಗೊಳ್ಳಲಿಲ್ಲ ಇದು ಅವರ ಜೀವನದಲ್ಲಿ ಮೂರನೆಯ ಘಟನೆಯಾಗಿದೆ ಇದು ಹಲವರು ಇದರಿಂದ ಬೇಸರಗೊಂಡಿದ್ದಾರೆ. ಅವರ ಹಲವು ಅನುಯಾಯಿಗಳು ಅವರಲ್ಲಿ ವಿಶ್ವಾಸವನ್ನು ಕಳಕೊಂಡಿದ್ದಾರೆ.

ಸತ್ಯಾಗ್ರಹವು ಈಗ ತಾತ್ಕಾಲಿಕವಾಗಿ ನಿಲ್ಲಿಸಿದ್ದರೂ, ಅದು ಸಂಪೂರ್ಣ ನಿಂತುಬಿಡುವ ಹಾಗಿಲ್ಲ ಇಂದು ಬ್ರಿಟಿಷ್ ಪ್ರಾಂತಗಳ ಜನರು ನಿಲ್ಲಿಸಿದ್ದಲ್ಲಿಂದ ಆಶ್ರಿತ ರಾಜ್ಯದ ಪ್ರಜೆಗಳು ಆರಂಭಿಸಬೇಕೆಂದು ಹೇಳುವ ಮಾತಿನಲ್ಲಿ ಔಚಿತ್ಯವಿದೆ ಸತ್ಯಾಗ್ರಹ ಹೂಡುವ ವಿಷಯದಲ್ಲಿ ಆರಂಭವಾಗಿ ಮಾಡತಕ್ಕ ರಚನಾತ್ಮಕ ಕಾರ್ಯವನ್ನು ಆಶ್ರಿತ ರಾಜ್ಯದ ಪ್ರಜೆಗಳು ಈಗ ಕೈಕೊಳ್ಳಬೇಕಾಗಿದೆ

"ರಚನಾತ್ಮಕ ಕಾರ್ಯದಲ್ಲಿ ಅನುಭವ ಪಡೆದದ್ದರಿಂದ ಮಾತ್ರ ಮಹಾತ್ಮಾಜಿಯವರ ಮಾತುಗಳಲ್ಲಿ ಸಾರ ಉಂಟೆಂದು ನಮಗೆ ತಿಳಿದು, ನಾವೀಗ ಅವರ ಮಾತನ್ನು ಬಹಳ ಶುದ್ಧ ಹೃದಯದಿಂದ ಅಂಗೀಕರಿಸುತ್ತೇವೆ ಖಾದಿ, ಹಿಂದೂ ಮುಸ್ಲಿಂ ಐಕ್ಯ, ಅಸ್ಪೃಶ್ಯತಾ ನಿವಾರಣೆ, ರಾಷ್ಟ್ರೀಯ ವಿದ್ಯೆ ಮತ್ತು ಮದ್ಯಪಾನ ನಿಷೇಧ ಇವುಗಳು ನಮ್ಮ ಮೊದಲನೆಯ ರಚನಾತ್ಮಕ ಕಾರ್ಯವಾಗಿವೆ

ಈ ಐದು ಕಾರ್ಯಕ್ರಮಗಳನ್ನು ಮುಂದಿಟ್ಟು ಮಹಾತ್ಮಾಜಿಯವರು ಕಾರ್ಯವನ್ನು ಆರಂಭಿಸಿದರು ಈ ಐದು ಉದ್ದೇಶಗಳಿಗಾಗಿ ದೊಡ್ಡ ದೊಡ್ಡ ವಕೀಲರು, ಡಾಕ್ಟರರು ಉಚ್ಚ ಅಧಿಕಾರಿಗಳನ್ನು ತಮ್ಮ ವೃತ್ತಿಯನ್ನು ಬಿಟ್ಟು ಅತುಲ ಸ್ವಾರ್ಥತ್ಯಾಗವನ್ನು ಮಾಡಿದರು ಈ ಐದು ಉದ್ದೇಶಗಳಿಗಾಗಿಯೇ ಕಾಂಗ್ರೆಸಿನ ಅಧೀನದಲ್ಲಿರುವ ಮಂತ್ರಿಮಂಡಲಗಳು ತಮ್ಮ ಕಾರ್ಯಗಳನ್ನು ಮಾಡುತ್ತಿವೆ ಕಾಂಗ್ರೆಸಿನ ಕೆಲಸಗಾರರು ರಚನಾತ್ಮಕ ಕಾರ್ಯಗಳಿಂದ ನೆಲವನ್ನು ಉತ್ತು ಬಿತ್ತುವ ಯತ್ನ ಮಾಡಿದ್ದಾರೆ ಆದ್ದರಿಂದ ಹಾಗೆ ಯಾರ ಮಾಡುತ್ತಾರೋ ಅವರು ಮಾತ್ರ ಶಾಸನಭಂಗ ಸತ್ಯಾಗ್ರಹ ಚಳವಳಿಯನ್ನು ಮಾಡಲು ಯೋಗ್ಯತೆಯುಳ್ಳವರಾಗಿರುತ್ತಾರೆ

"ಗಾಂಧಿಜಿಯವರು ಸತ್ಯಾಗ್ರಹ ಯುನಿವರ್ಸಿಟಿಯ ಚಾನ್ಸಲರಂತಿದ್ದಾರೆ ಯಾವನೇ ಆಗಲಿ ಯುನಿವರ್ಸಿಟಿ ವಿಷಯದಲ್ಲಿ ಯೋಗ್ಯತೆಯುಳ್ಳವನೆಂದಾಗ ಬೇಕಾದರೆ, ಅಕ್ಷರಮಾಲೆ, ಪ್ರೈಮರಿ, ಹೈಸ್ಕೂಲ್, ಯುನಿವರ್ಸಿಟಿ ಕ್ಲಾಸುಗಳಲ್ಲಿ ಕಲಿಯುತ್ತಾ ಬರಬೇಕು. ಈಗ ಗಾಂಧಿಜಿಯವರೂ ಕೂಡಾ ಅದನ್ನೇ ಹೇಳುತ್ತಾರೆ. ಸತ್ಯಾಗ್ರಹದಲ್ಲಿ ನಿಮಗೆ ಯೋಗ್ಯತೆ ಬರಬೇಕಾದರೆ ನೀವು ಆ ಮೂಲ ಅಕ್ಷರಗಳ ಜ್ಞಾನವನ್ನು ಅಂದರೆ ರಚನಾತ್ಮಕ ಕಾರ್ಯಗಳ ಅನುಭವವನ್ನು ಮಾಡಬೇಕು ಇದನ್ನೇ ಗಾಂಧಿಜಿಯವರು ಆಶ್ರಿತ ರಾಜ್ಯದ ಪ್ರಜೆಗಳು ಚಳವಳಿವನ್ನು ನಿಲ್ಲಿಸಬೇಕೆಂದು ಆಜ್ಞೆ ಮಾಡಿದಾಗ, ಅಭಿಪ್ರಾಯಪಟ್ಟಿರಬೇಕೆಂದು, ತಿಳಿಯಬೇಕಾಗಿದೆ.

"ಪ್ರಕೃತಿಯ ಸಹಜತೆಯಿಂದ ಜ್ವಾಲಾಮುಖಿಯು ಹೇಗೆ ಹೊರಬರುತ್ತದೋ ಸತ್ಯಾಗ್ರಹವೂ ಹಾಗೆಯೇ ಬರುವುದು. ಹೀಗೆ ತರಬೇಕಿಯಾದ ಮುಹೂರ್ತದಲ್ಲಿಯೇ ಗಾಂಧಿಜಿಯವರೊಡನೆ ಅನುಮತಿ ಕೇಳಿದಾಗ ಅವರು ಖಂಡಿತವಾಗಿ ನೀವು ಕೈಕೊಳ್ಳುವ ಕಾರ್ಯಕ್ಕೆ ಅಡ್ಡಿ ಹೇಳಲಾರರು ಅಥವಾ ಈಗಲಾದರೂ ಅವರು ಅಡ್ಡಿ ಮಾಡುವುದಿಲ್ಲ ಯಾರಿಗೆ ಸತ್ಯಾಗ್ರಹ ಮಾಡಲು ನಿಜವಾದ ಸಾಮರ್ಥ್ಯವುಂಟೋ, ಅಂಥವರು ಮಾಡಬಹುದಾಗಿ ಗಾಂಧಿಜಿಯವರೇ ಹೇಳಿದ್ದಾರೆ

"ಹಾಗಾಗಿ ಗಾಂಧಿಜಿಯವರು ನಮಗೆ ಆತಂಕ ಮಾಡುತ್ತಾರೆಂದು ವಿಚಾರಿಸಬೇಡಿ ಅವರು ನಮ್ಮ ತಾತ್ವಿಕ ಪುರುಷ, ಆಪ್ತಮಿತ್ರ ಮತ್ತು ಮಾರ್ಗದರ್ಶಕರಾಗಿದ್ದಾರೆ. ಸತ್ಯಾಗ್ರಹವನ್ನು ಎಂದು ಸುರು ಮಾಡಬೇಕು? ಹೇಗೆ ನಿಲ್ಲಿಸಬೇಕೆಂದ ಅವರಿಗೆ ಚೆನ್ನಾಗಿ ಗೊತ್ತಿದೆ ಅವರು ಒಬ್ಬ ಮೋಟರು ಡ್ರೈವರನಂತೆ ಈ ಸತ್ಯಾಗ್ರಹ ಗಾಡಿಯನ್ನು ಸರಿಯಾಗಿ ನಡೆಸುತ್ತಾರೆ ಮಾತುಕತೆಗಳಿಂದ ಅವರನ್ನು ನಾವು ಪೀಡಿಸದಿದ್ದಲ್ಲಿ ನಮ್ಮ ಗುರಿಯನ್ನು ಸುರಕ್ಷಿತವಾಗಿ ಮುಟ್ಟುವೆವು"

ಇದೊಂದು ಮನೋಹರವಾದ ವ್ಯಾಖ್ಯಾನ— ನಿಮ್ಮಲ್ಲಿ ವಿಶ್ವಾಸವನ್ನು ಉಂಟುಮಾಡತಕ್ಕದು!

ಸ್ಥ
ಳೀ
ಯ
ವಾ
ದ

ಪ್ರೊಯ್ರ್ಚ್ಯಾ ಆಮಿ ಆಮ್ಚ್ಯಾ ಎಕಾ ಮಹಂತ್ ಮಾನೆಸ್ತಾಗಡೆ ಇನ್ಶೂರೆನ್ಸ್ ಕಂಪ್ಣ್ಯಾಂ ವಿಶಾಂತ್ ಗಜಾಲ್‌ಮಾತ್ ಕರ್‍ತಾನಾ, ತೊ ಮ್ಹಣಾಲಾಗ್ಲೊ.
'ಗಾಂವ್ಚೊ ಚೋರ್ ಪುಣಿ ಪ್ರೊಯ್, ಸರ್ಗಾಂವ್ಚೊ ಸಾವ್ ನಹಿಂ' ಮ್ಹಣ್, ಆನಿ ತ್ಯಾ ಪಸ್ಸತ್ ನಹಿಂಚ್ ತೊ ಗಾಂವ್ಚ್ಯಾ ಕಂಪ್ಣ್ಯಾ ಆದರ್ಸಿತಾ ಬಗಾರ್ ತಾಚೆ ಗಡೆ ಯೆಂವ್ಚ್ಯಾಂಕ್ ಗಾಂವ್ಚ್ಯಾ ಕಂಪ್ಣ್ಯಾನಿ ಜೀವ್ ವಿಮೊ ಕರುಂಕ್ ಸಾಂಗ್ತಾ ಮ್ಹಣ್ ಆದಿಂ ಆಮ್ಕಾಂ ಅಸಲ್ಯೊ ಕಂಪ್ಣ್ಯೊ ಗಾಂವ್ಚ್ಯೊ ಮ್ಹಣ್ ನಾತ್‌ಲ್ಲ್ಯೊ ಆತಾಂ ತಿ ಸದಾಂ ವಾಡೊನ್ ಯೆಂವ್ಚಿ ಗಾಂವ್ಚಿ ಚ್ಯಾ ಪ್ರೊಪ್ಯುಲರ್ ಇನ್ಶುರೆನ್ ಕಂಪ್ನಿ ಆಮ್ಚ್ಯಾ ಹಾಯಾಂಗಡೆ ಆಸಾ. ಗೆಲೆತ್ಯಾ ವರ್ಸಾಚ್ಯಾ ತಿಚ್ಯಾ ವರ್ದೆಚಿ ಆನಿ ಲೆಕಾಪಟ್ಟೆಚಿ ಪ್ರತಿ ವಿಮುರ್ಶಾಕ್ ಮ್ಹಣ್ ಆಮ್ಕಾಂ ಆಯ್ಲ್ಯಾ ಸುರು ತಾವ್ನ್ ಆಕೇರ್ ಮ್ಹಣಾಸರ್ ತಿ ವಾಚುನ್ ಪ್ರೊಳೆತಾನಾ ಸರಿಸುಮಾರ್ ಘಟ್ಟ್ ಕಂಪ್ಣ್ಯೊ ಮ್ಹಣ್ ಆಮಿ ಲೆಕ್ತಾ ಕಂಪ್ಣ್ಯಾಂಕ್ ಸರಿ ಜಾವ್ನ್ ಯೆತಾತಿ ದಿಸ್ತಾ. ಗೆಲೆತ್ಯಾ ಎಕಾ ವರ್ಸಾಂತ್ ರು 8,97,750 ಐವಜಾಚೊ ವೆವಾರ್ ತಿಣೆ ಕೆಲಾ, ಆನಿ ಹ್ಯೊ ತಾಚ್ಯಾ ಆದ್ಲ್ಯಾ ವರ್ಸಾಚ್ಯಾಕ್ ರು 1,65 069 ಐವಜಾಕ್ ಚಡ್ತಾ. ವಿಮ್ಯಾದುಡು ಭಾಯ್ರ್ ಪಾವ್ಲೊ ಹಳ್ತಾರ್ ರಾವ್‌ಲ್ಲ್ಯಾ ಪ್ರೊವಿಂ ಹ್ಯೆ ಕಂಪ್ನೆಚಿ ಬುನ್ಯಾದ್ ಘಟ್‌ಚ್ಯಾ ಜಾತಾ. ಗೆಲೆತ್ಯಾ ವರ್ಸಾಂತ್ ತೀನ್‌ಂಚ್ ತಸಲಿಂ ಲೆಕಾಂ ಆಸ್‌ಲ್ಲಿಂ, ಸಟ್ಟ್ ಕರ್ನ್ ದೀವ್ನ್ ಸೊಡ್ಲ್ಯಾಂತ್, ಮ್ಹಳ್ಯಾರ್ ರು 5,135 ಹೆ ಕಂಪ್ನೆಚೆ ಶಾಖೆ ಆತಾಂ ವಿಸ್ತಾರ್ತ್ಯಾತ್, ಮದ್ರಾಸಾಂತ್ ಏಕ್ ಆಸಾ ಕೆಲಾ ಆನಿ ಮಲ್ಬಾರ್, ಮೈಸೂರ್, ಆಂಧ್ರ ದೇಶ್, ಉ. ಕನ್ನಡಾ ಆನಿ ದಕ್ಷಿಣ್ ಮಹಾರಾಷ್ಟ್ರಾಂ ಸ್ಪತ್ ಶಾಖೆ ಆಸಾ ಕರ್ಚಿ ಮಾಂಡಾವಳ್ ಚಲ್ತಾ ವಿಮೊ ಕರ್‍ತ್ಯಾಂಕ್ ಹ್ಯೆ ಕಂಪ್ನಿ ಥ್ಯಂ ಆಸ್‌ಲ್ಯಾ ಪಾತ್ಯೆಣ ಪ್ರೊವಿಂ, ಕಂಪ್ನೆಚಾ ವಾಡಾವಳಾಕ್ ಉತ್ತೇಜನ್ ಮೆಳ್ತಾ ಮ್ಹಳ್ಯಾರ್ ದುಬಾವ್ ನಾ ತರ್ ಆಮ್ಚ್ಯಾ ಲೊಕಾನ್ ಸರ್ಗಾಂವ್ಚ್ಯಾ ಕಂಪ್ಣ್ಯಾಂಕ್ ಕಿತ್ಯಾಕ್ ಝುಕ್ ಮಾರ್ಚಿ? ಅಮ್ಕಾಂ ಘರ್ ಪ್ರೊಯ್ಲ್ಲಂ ಸುಧಾರ್ನ್ ಶಾಬಿತ್ ತೆಂ ಉರ್ವಶೆಂ ಕರ್ಚಿ ಮ್ಹಿನತ್ ಆನಿ ಸಹಕಾರ್ ಆಮ್ಕಾಂ ಗಾಂವ್ಚ್ಯಾಂಕ್ ಸಚ್‌ಲ್ಲೊ ಜಾವ್ಚ್ಯಾ ನಾ ತಶೆಂಚ್ ಜಾಲ್ಲೆಂ ಪ್ರೊಳೊಂವ್ಚೊ ಆಮ್ಚೊ ಸಂತೊಸ್.

ಈ ಸಂಸ್ಥೆಯನ್ನು ಪ್ರೋತ್ಸಾಹಿಸಿರಿ—ಅದಕ್ಕೆ ಬೆಂಬಲ ಕೊಡಿರಿ.

ದಿ ಪ್ರೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಮಂಗಳೂರು ಸಮಾಚಾರ

ನಗರಸಭೆ—ನಗರ ಸಭೆಯ ಮೀಟಿಂಗು ತಾ. ೩ನೇ ಸಂಜೆಗೆ ಚ್ಯಾರಮ್ಯಾನರಾದ ಶ್ರೀ. ವೆಂಕಟ್ರಾಯಬಾಳಿಗಾ ಎಂ. ಎಲ್. ಎ ಯವರ ಅಧ್ಯಕ್ಷತೆಯಿಂದ ಸೇರಿತು.

ಮುನ್ಸಿಪಲ್ ಶಾಲೆಗಳಲ್ಲಿ ಶನಿವಾರ ರಜೆ ಕೊಡುವ ನಿರ್ಣಯವಾಯಿತು. ಅನ್ಯಾಯಕ್ಕೆ ಬಲಿಯಾದ ಸ್ತ್ರೀಯ ಸಂರಕ್ಷಣೆಯನ್ನು ಸ್ಥಳೀಯ ಆಶ್ರಮಗಳು ಮಾಡುವವೇ, ಎಂಬ ವಿಷಯ ವಾರ್ಧಾವಿದ್ಯಾಯೋಜನೆಯನ್ನು ಕಲಿಯಲು ಒಬ್ಬ ಉಪಾಧ್ಯಾಯರನ್ನು ಕಳುಹಿಸುವ, ಮುನ್ಸಿಪಲ್ ಶಾಲೆಗಳಲ್ಲಿ ವ್ಯಾಯಾಮ ಶಿಕ್ಷಣದ ಅಂದಾಜು ವೆಚ್ಚ ನೋಡುವ ವಿಷಯ ಕಮಿಟಿಯವರಿಗೆ ಒಪ್ಪಿಸಲಾಯಿತು. ಭಗಿನೀ ಸಮಾಜದವರು ನಡೆಸುವ ಶಿಶುರಕ್ಷಣಾ ಕೇಂದ್ರಕ್ಕೆ ತಿಂಗಳಿಗೆ ರೂ ೩೦ರ ಸಹಾಯ ಕೊಡುವ ನಿರ್ಣಯ ವಾಯಿತು.

ಅರ್ಪಣೆ—ಸಹಕಾರ ಸಂಘದ ಡಿ ರಿಜಿಸ್ಟ್ರರಲಾದ ಶ್ರೀ ಕೆ ಸರ್ವೋತ್ತಮರಾಯರು ಜಿಲ್ಲೆಯ ವಿದ್ಯಾರ್ಥಿ ಸ್ಟೇಶನರಿ ಸೊಸೈಟಿಗಳಲ್ಲಿ ಅತ್ಯುತ್ತಮವಾದುದಕ್ಕೆ ಒಂದು ರೋಲಿಂಗ್ ಕಪ್ ಕೊಡುವಂತೆ ಜಿಲ್ಲಾ ಎಡ್ವಾನ್ಸ್‌ಮೆಂಟ್ ಸೊಸೈಟಿಗೆ ಅದನ್ನು ಅರ್ಪಿಸಿದ್ದಾರೆ

ಬೀಡಿ ಲೇಬರ್ ಯೂನಿಯನ್ ಇದರ ಮಹಾಸಭೆಯೊಂದು ಯುನಿಯನ್ ಆಫೀಸಿನಲ್ಲಿ ಶ್ರೀ ಎಸ್ ಎನ್ ಹೊಳ್ಳರ ಅಧ್ಯಕ್ಷತೆಯಿಂದ ಜರಗಿತು ಸಂಘವನ್ನು ರಿಜಿಸ್ಟರ್ ಮಾಡುವ ನಿರ್ಣಯವಾಯಿತು

ಜಿಲ್ಲೆಯ ಕರಾವಳಿ ರಸ್ತೆ—ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕರಾವಳಿ ರಸ್ತೆಯನ್ನು ಒಟ್ಟುಗೂಡಿಸುವ ವಿಚಾರ ದ ಕ ಜಿ ಬೋರ್ಡು ಅಧ್ಯಕ್ಷರಾದ ಡಾ ಕೆ ವಿಟ್ಠಲ ಶೆಟ್ಟರು ಮಲಬಾರ ಜಿ. ಬೋ ಅಧ್ಯಕ್ಷರಾದ ಶ್ರೀ ಕೇಳಪ್ಪನವರೊಡನೆ ಪಯ್ಯನ್ನೂರಿನಲ್ಲಿ ಸಂಧಿಸಿ ಮಾತನಾಡಿರುವರಾಗಿ ತಿಳಿಯುತ್ತದೆ ದ ಕ ಜಿಲ್ಲಾ ಬೋರ್ಡು ೧೪ ಸಾವಿರ ರೂಪಾಯಿಗಳ ವ್ಯಯದಿಂದ ರಸ್ತೆಯನ್ನು ಮಲಬಾರಿನ ವರೆಗೆ ತಂದಿದ್ದು ಮಲಬಾರು ಅದನ್ನು ಕೂಡಿಸಬೇಕಾಗಿ ಹೇಳಿದಕ್ಕೆ ಶ್ರೀ ಕೇಳಪ್ಪನವರು ಹಾಗೆ ಮಾಡುವ ಆಶ್ವಾಸನ ಕೊಟ್ಟಿರುವರಾಗಿ ವಾರ್ತೆ

ಬಿ.ಇ.ಎಂ ಬ್ರಾಹ್ಮಿನ್ಸ್ ಗರ್ಲ್ಸ ಸ್ಕೂಲ್—ಈ ಶಾಲೆಯು ಹೈಯರ್ ಎಲಿಮೆಂಟರಿ ಶಾಲೆಯಾಗಿ ಮಂಜೂರಾಗಿದೆ ಎಂದು ಗೊತ್ತಾಗಿದೆ

ಜಿಲ್ಲಾ ಬೋರ್ಡು ಸಭೆ—ತಾ ೮ನೇ ಶನಿವಾರ ಪೂರ್ವಾಹ್ನ ೧೧ ಗಂಟೆಗೆ ಜಿಲ್ಲಾ ಬೋರ್ಡಿನ ಸಭೆಯು ಜರಗಲಿರುವುದು

ಸಾಕ್ಷರತಾ ವಿಚಾರನಿಧಿಗೆ ನಾಟಕ ಪ್ರದರ್ಶನ—ತಾ ೨ನೇ ಆದಿತ್ಯವಾರ ಗಣಪತಿ ಹೈಸ್ಕೂಲಿನ ಸಭಾಭವನದಲ್ಲಿ ಶ್ರೀ ಎಸ್ ಎನ್. ಹೊಳ್ಳ ಮತ್ತು ಅವರ ಮಿತ್ರಮಂಡಳಿಯವರು 'ಜೀವನ್ಮುಕ್ತ' ಮತ್ತು 'ಕುಡೀ ಬೇಡಿ' ಎಂಬೆರಡು ನಾಟಕಗಳನ್ನು ಅಭಿನಯಿಸಿದರು ಇದರ ಸಂಗ್ರಹ ಧನವು ಮಂಗಳೂರಿನಲ್ಲಿ ಸಾಕ್ಷರತಾ ಪ್ರಚಾರಕ್ಕಾಗಿ ಉಪಯೋಗಿಸಲ್ಪಡುವುದೆಂದು ತಿಳಿಯುತ್ತದೆ

ಹೈಯರ್ ಗ್ರೇಡ್ ಟ್ರೈನಿಂಗಿನ ಪ್ರವೇಶ ಪರೀಕ್ಷೆ—ಗವರ್ನಮೆಂಟ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆಯುವ ಪ್ರವೇಶ ಪರೀಕ್ಷೆಗೆ ಕುಳಿತುಕೊಳ್ಳುವರೆ ಆಂಸಲಾದ ಟ್ರೈನಿಂಗ್ ವಿದ್ಯಾರ್ಥಿಗಳು ಮಂಗಳೂರು ಗವರ್ನಮೆಂಟ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೧೪—೭—೩೯ ರಂದು ಪೂರ್ವಾಹ್ನ ಗಂಟೆ ೧೧ಕ್ಕೆ ಹಾಜರಿರಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಾರೆ.

ಸೌತ್ ಕೆನರಾ ಪ್ರೆಸ್ ವರ್ಕರ್ಸ್ ಯೂನಿಯನು—ತಾ. ೩೦—೬—೩೯ನೇ ಶುಕ್ರವಾರ ಸಂಜೆ ಗಂಟೆ ೬-೩೦ಕ್ಕೆ ಯೂನಿಯನಿನ ಉಪಾಧ್ಯಕ್ಷರಾದ ಶ್ರೀ. ಸಬಸ್ಟ್ಯೈನ್ ಲೋಬೊರವರ ಅಧ್ಯಕ್ಷತೆಯಲ್ಲಿ ಕೂಡಿದ ಕಾರ್ಯಕಾರಿ ಮಂಡಳಿಯ ಸದಸ್ಯರ ಸಭೆಯ ವರದಿ—

೧ ಮಾಸಿಕ ಲೆಕ್ಕ ಪರಿಶೋಧನೆ ಮಾಡಲಾಯಿತು ೨ ಕೇಳಿಕೆ ವಿಷಯದಲ್ಲಿ ಜಿಲ್ಲಾ ಕಲೆಕ್ಟರರಿಗೆ ಕಳುಹಿಸಿದ ಪತ್ರಕ್ಕೆ ಉತ್ತರವನ್ನು ನಿರೀಕ್ಷಿಸಬೇಕೆಂದೂ ಮತ್ತು ಮಾಸ್ಟರ್ ಪ್ರಿಂಟರ್ಸ್ ಅಸೋಸಿಯೇಶನಿಗೆ ಈ ಕುರಿತು ಬರೆದ ಕಾಗದಕ್ಕೆ ಉತ್ತರವು ಬಾರದಿರುವ ಕಾರಣ ಅವರಿಗೆ ಪುನಃ ಕಾಗದ ಬರೆದು ಕೇಳಿಕೊಳ್ಳಬೇಕೆಂದಾಯಿತು. ೩ ಸದಸ್ಯರು ಮಾಸಿಕ ಹಣ ಬಾಕಿ ಮಾಡಿದುದಕ್ಕಾಗಿ ಅಂಥವರಿಗೆ ಆಯಾಯ ಪ್ರೆಸ್ಸಿನಲ್ಲಿರುವ ಕಾರ್ಯಕಾರಿ ಮಂಡಳಿಯ ಸದಸ್ಯರ ಮೂಲಕ ತಿಳಿಸಿ ಅವರು ಸದಸ್ಯರಿಂದ ಕೂಡಲೇ ಹಣ ವಸೂಲು ಮಾಡಿ ಯೂನಿಯನ್ ಆಫೀಸಿಗೆ ರವಾನಿಸಿ ಕೊಡುವಂತೆ ಕೇಳಿಕೊಳ್ಳಬೇಕೆಂದಾಯಿತು ೪ ೧೯೩೮ನೇ ಇಸವಿ ಎಪ್ರಿಲಿನಿಂದ ೧೯೩೯ನೇ ಮಾರ್ಚಿ ಅಂತ್ಯದ ವರೆಗಿನ ಒಂದು ವರ್ಷದ ಲೆಕ್ಕ ಪರಿಶೋಧನೆ ಮಾಡುವರೇ ಶ್ರೀಗಳಾದ ಎನ್ ಅನಂತು ಮತ್ತು ಎಮ್ ಲಕ್ಷ್ಮಣ ಇವರನ್ನು ಚುನಾಯಿಸಲ್ಪಟ್ಟಿತು. ೫ ಯೂನಿಯನಿನ ಅಧ್ಯಕ್ಷೆಯರಾದ ಶ್ರೀಮತಿ ಕಮಲಾದೇವಿಯವರು ಹಿಂದೂಸ್ತಾನದಿಂದ ಪ್ರಪಂಚದ ಮಹಿಳಾ ಪರಿಷತ್ತಿಗೆ ಒಬ್ಬ ಪ್ರತಿನಿಧಿಗಳಾಗಿ ಆರಿಸಲ್ಪಟ್ಟುದುದಕ್ಕಾಗಿ ಮತ್ತು ಅವರು ಅಂತರಾಷ್ಟ್ರೀಯ ಶಾಂತಿ ಪರಿಷತ್ತಿಗೆ ಉಪಮಂತ್ರಿ ತರಾದುದಕ್ಕಾಗಿ ಅವರಿಗೆ ಈ ಕಮಿಟಿಯು ತನ್ನ ಅಭಿನಂದನೆಗಳನ್ನು ಕಳುಹಿಸುತ್ತದೆ ಅವರು ಯಶಸ್ವಿಯಾಗಿ ಮಾಡಿದ ಶ್ರೇಯಸ್ಕಾರ್ಯಗಳಿಗೆ ಈ ಕಮಿಟಿಯು ಸಂತೋಷ ಸೂಚಿಸುತ್ತದೆ ಮತ್ತು ಅವರ ಸಂಚಾರವು ಯಶಃ ಪ್ರಧಾನವಾಗಲೆಂದೂ ಅವರ ಸೌಖ್ಯದಿಂದ ಹಿಂತಿರುಗಲೆಂದೂ ಆಶಿಸುತ್ತದೆ ೬ ಜುಲೈ ತಾ ೨೨ರಲ್ಲಿ ಮಹಾಸಭೆ ಕರೆಯಬೇಕೆಂದು ನಿರ್ಣಯಿಸಲ್ಪಟ್ಟಿತು.

ನಿಧನ

ಮಂಗಳೂರಿನ ಪ್ರಸಿದ್ಧ ವಕೀಲರಾಗಿದ್ದು ಗೌಡ ಸಾರಸ್ವತ ಸಮಾಜದ ಮುಂದಾಳುಗಳಲ್ಲೊಬ್ಬರಾಗಿದ್ದ ಶ್ರೀ. ರಂಗಪ್ಪ ಭಂಡಾರಿಗಳು ಕಳೆದ ತಾ ೨ನೇ ಆದಿತ್ಯವಾರ ಸಾಯಂಕಾಲ ತಮ್ಮ ೬೩ನೇ ವಯಸ್ಸಿನಲ್ಲಿ ಉಡುಪಿಯಲ್ಲಿ ದಿವಂಗತರಾದರು. ಶ್ರೀಯುತರು ಕೆನರಾ ಹೈಸ್ಕೂಲಿನ ಸ್ಥಾಪಕರಲ್ಲೊಬ್ಬರೂ, ಕೆನರಾ ಬ್ಯಾಂಕಿದ ಪ್ರಥಮ ಡೈರೆಕ್ಟರ್ ಮಂಡಳಿಯ ಸದಸ್ಯರಲ್ಲೊಬ್ಬರೂ ಆಗಿದ್ದರಲ್ಲದೆ ಬಹಳ ಉದಾರಿಗಳೂ ದಾನಿಗಳೂ ಆಗಿದ್ದು ತಮ್ಮ ಸಮಾಜದ ಸ್ಥಿತಿಗೆ ಬಹಳವಾಗಿ ಹೆಣಗಾಡಿದವರಾಗಿರುತ್ತಾರೆ ಶ್ರೀಯುತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಪ್ರಾರ್ಥಿಸುತ್ತೇವೆ ಇವರ ನಿಧನದ ದುಃಖಸೂಚಕವಾಗಿ ಕಳೆದ ಬುಧವಾರ ಕೆನರಾ ಹೈಸ್ಕೂಲ್ ಮುಚ್ಚಲ್ಪಟ್ಟಿತು

ಸ್ವೀಕಾರ

ಗೋಪಾಲ ಭೇಷಜಾಶ್ರಮದ ೨೮ನೇ ವಾರ್ಷಿಕ ವರದಿ—ಶಾಲಿವಾಹನಶಕ ೧೮೬೦ಕ್ಕೆ ಅನುಕ್ರಮವಾಗಿ ಸರಿಯಾದ ಕ್ರಿಸ್ತಾಬ್ದ ೧೯೩೮ ದಶಂಬರ ೩೧ಕ್ಕೆ ಅಂತ್ಯವಾಗುವ ಮಂಗಳೂರು ಕದ್ರಿಯಲ್ಲಿರುವ ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿಗಳ ಗೋಪಾಲಭೇಷಜಾಶ್ರಮದ ೨೮ನೇ ವಾರ್ಷಿಕ ವರದಿಯು ಹಸ್ತಗತವಾಗಿದೆ.

ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿಗಳ ಮತ್ತು ಅವರ ಗೋಪಾಲಭೇಷಜಾಶ್ರಮದ ವಿಷಯ ತಿಳಿಯದವರಿಲ್ಲ. ಆಯುರ್ವೇದ ವೈದ್ಯಕೀಯ ವೃತ್ತಿಯಲ್ಲಿ ಜನಸೇವೆಯನ್ನು ಅವಿಶ್ರಾಂತವಾಗಿ ಮಾಡುತ್ತಿರುವ ಶಾಸ್ತ್ರಿಗಳ ಆಶ್ರಮದ ಕಾರ್ಯವು ಶ್ರೇಯಸ್ಕರವಾಗಿ ಸಾಗಲಿ ಎಂತ ಹಾರೈಸುತ್ತೇವೆ.

ತಾಲೂಕು ಸಮಾಚಾರ

ಕಾರ್ಕಳ

ಎಡ್ವೈಸರಿ ಕಮಿಟಿ—ಪ್ರಾಥಮಿಕ ಶಿಕ್ಷಣದ ತಾಲೂಕು ಎಡ್ವೈಸರಿ ಕಮಿಟಿಯ ಸಭೆಯು ಡಿಪ್ಯುಟಿ ಇನಸ್ಪೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿ ಬಾಲಿಕಾ ವಿದ್ಯಾಭ್ಯಾಸ, ಹರಿಜನ ವಿದ್ಯಾಭ್ಯಾಸ ಮತ್ತು ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರದ ಕುರಿತು ಕಾರ್ಯಗಳನ್ನು ಕೈಕೊಳ್ಳಬೇಕಾಗಿ ನಿರ್ಣಯವಾಯಿತು. ಬರುವ ದಶಂಬರ ತಿಂಗಳಲ್ಲಿ ತಾಲೂಕು ಶಿಕ್ಷಣ ಪ್ರದರ್ಶನವನ್ನು ಕರೆಯಬೇಕಾಗಿ ನಿರ್ಣಯವಾಯಿತು.

ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶ—ಕಾರ್ಕಳದ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶವಿತ್ತು, ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿರುವರಾಗಿ ತಿಳಿಯುತ್ತದೆ.

ಉಪಾಧ್ಯಾಯರ ಸಭೆ—ಇಲ್ಲಿಯ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಜಲ್ಯೈ ತಿಂಗಳ ಸಭೆಯು ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ ೧—೭—೩೯ರ ದಿನ ಈ ರೇಂಜ ಡೆಪ್ಯುಟಿ ಇನ್ಸ್‌ಪೆಕ್ಟರ ಶ್ರೀ ವೆಂಕಟರಮಣ ಬಿ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಕೂಡಿತು. ವರದಿ ವಾಚನ, ಸರ್ಕಲರು ಓದುವುದು ಇತ್ಯಾದಿ ಸಾಧಾರಣ ಕಾರ್ಯಗಳು ಮುಗಿದ ತರುವಾಯ ಶ್ರೀ ಆರ್ ವಿಟ್ಟಪ್ಪ ಶೆಟ್ಟಿಯವರು ವಾಲ್ಯನೆಕ್ಲಾಸಿಗೆ ಭಿನ್ನರಾಶಿಯಲ್ಲಿ ಮಾದರಿ ಪಾಠವನ್ನೂ ಶ್ರೀ ಯಂ ಸರ್ವೋತ್ತಮ ಕಾಮತ ಬಿ ಎ ಯಲ್ ಟಿ ಯವರು ಪ್ರೊಜೆಕ್ಟ ಮೆಥಡಿನ ಕುರಿತು ಭಾಷಣವನ್ನು ಕೊಟ್ಟ ಬಳಿಕ, ಅಧ್ಯಕ್ಷ ಭಾಷಣ, ಉಪಹಾರ, ವಂದೇ ಮಾತರಮ್‌ದೊಂದಿಗೆ ಸಭೆ ಮುಗಿಯಿತು.

ಕಾಸರಗೋಡು

ನೀಲೇಶ್ವರ—ಇಲ್ಲಿನ ಸುಪ್ರಸಿದ್ಧ ಮಲೆಯಾಳೀ ವಿದೂಷಕರಾದ ಶ್ರೀ ಕೋಮನ್ ನಾಯರರು ತಮ್ಮ ಅಭಿನಯವನ್ನು ರೇಡಿಯೋ ಮೂಲಕ ಪ್ರದರ್ಶಿಸಲು ಮದ್ರಾಸಿಗೆ ತೆರಳಿರುವರು.

ಯುವಜನ ಪರಿಷತ್ತು—ಈ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀ ಕೆ ಅಪ್ಪುಕುಟ್ಟಿ ಅವರು ಯೋಚಿಯಿಸದೆ ಆರಿಸಲ್ಪಟ್ಟಿರುವರು

ಕುಂದಾಪುರ

ಬೈಂದೂರು—ಇಲ್ಲಿನ ಪ್ರಚಂಡ—ಜಿ ಬೋ ಮೆಂಬರರಾದ ಶ್ರೀ ಬಿ ಸ ಬ್ಬಣ್ಣ ಶೆಟ್ಟರು ಬೈಂದೂರು ಸರ್ಕಲಿನಲ್ಲಿ ಸಾಕ್ಷರತೆಯ ಪ್ರಚಾರಕ್ಕಾಗಿ ಪ್ರಯತ್ನಮಾಡುತ್ತಿರುವರೆಂದು, ಹರಿಜನ ವಿದ್ಯಾರ್ಥಿಗಳಿಗೆ ಒಪ್ಪೊತ್ತಿನ ಊಟ ಒದಗಿಸಲು ಸಹಾಯ ಮಾಡುತ್ತಿರುವರೆಂದೂ, ಮದ್ಯಪಾನ ನಿಷೇಧದ ಪ್ರಚಾರ ಮಾಡುತ್ತಿರುವರೆಂದೂ ತಿಳಿಯುತ್ತದೆ

ಉಡುಪಿ

ನಗರಸಭೆ—ಸಾಕ್ಷರತಾ ಸಹಾಯ—ನಗರ ಸಭೆಯ ಮೀಟಿಂಗಿನಲ್ಲಿ ಮಿಶನ್ ಕಟ್ಟಡಗಳು ಕೆಲವು ಅನಾಥವಸತಿ ಗೃಹಗಳಾಗಿರುವುದರಿಂದ ಅವುಗಳಿಂದ ತೆರಿಗೆ ವಸೂಲು ಮಾಡಬಾರದಾಗಿಯೂ, ಮದ್ರಾಸು ಸರಕಾರವು ಐದು ವರ್ಷಗಳ ಯೋಜನೆಮಾಡಿ ನಿರಕ್ಷರತೆಯನ್ನು ನಿರ್ನಾಮ ಮಾಡುವಂತೆ ಕೇಳಿಕೊಳ್ಳಬೇಕಾಗಿಯೂ ನಿರ್ಣಯಗಳಾದುವು

ಶ್ರೀ ಕೃಷ್ಣಪುರ ಮಠದ ಶ್ರೀ ಪಾದಂಗಳು—ಇವರು ಕಾಶಿ, ಹರಿದ್ವಾರ, ಬದರಿಕಾಶ್ರಮಗಳನ್ನು ಸಂದರ್ಶಿಸಿ ಉಡುಪಿಗೆ ಕ್ಷೇಮದಿಂದ ಮರಳಿ ಬಂದಿರುವರು.

ಮುದ್ರಾಧಾರಣ ಸಮಾರಂಭ—ಶ್ರೀ ಕೃಷ್ಣ ಸನ್ನಿಧಿಯಲ್ಲಿ ಕಾಲಂಪ್ರತಿ ಜರಗುವ ಶಯನೀತಪ್ತ ಮುದ್ರಾಧಾರಣಾ ಸಮಾರಂಭವು ತಾ. ೨೭ರಲ್ಲಿ ಪರ್ಯಾಯ ಶ್ರೀ ಫಲಿಮಾರು ರಘುಮಾನ್ಯ ತೀರ್ಥ ಶ್ರೀ. ಪಾದಂಗಳವರ ನೇತೃತ್ವದಲ್ಲಿ ನಡೆಯಿತು ಯತಿಗಳಿಗೆ ಚಾತುರ್ಮಾಸ ದೀಕ್ಷೆಯ ಅಧಿಕಾರಸಿದ್ಧಿಗೆ ಸಂಕಲ್ಪವಾಯಿತು.

ಕರ್ನಾಟಕ

ಧಾರವಾಡ—ಜಿಲ್ಲಾ ಸ್ಕೂಲ್ ಬೋರ್ಡಿನ ಸಾಧಾರಣ ಸಭೆಯು ಶ್ರೀ. ವೀರಭದ್ರಪ್ಪಾ ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ಸೇರಿ ೧೯೩೯—೪೦ನೇ ಇಸವಿಯ ರಿವ್ಯಾಜ್ಡ್ ಬಜೆಟ್ ಮಂಜೂರು ಮಾಡಿತು. ವಿದ್ಯಾಂಗದ ಡ್ಯಾರೆಕ್ಟರರ ಪತ್ರದಂತೆ ವ್ಯಾಯಾಮ ಶಿಕ್ಷಣವನ್ನು ಆರಂಭಿಸಬೇಕೆಂದು ಮಂಜೂರಾಯಿತು.

ನಗರಸಭೆ—ಧಾರವಾಡ ನಗರಸಭೆಯ ಸ್ಪೆಶಲ್ ಜನರಲ್ ಕಮಿಟಿಯ ಸಭೆಯು ತಾ. ೨೮—೬—೩೯ರಲ್ಲು ಸೇರಿತು

ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸು ಪಕ್ಷ—ಧಾರವಾಡ ಜಿಲ್ಲಾ ಕಾಂಗ್ರೆಸ್ ಸಿವಿಕ್ ಬೋರ್ಡಿನ ಆಜ್ಞೆಗಳನ್ನು ಮನ್ನಿಸದೆ ಇರುವುದರಿಂದ ಜಿಲ್ಲಾ ಬೋರ್ಡಿನ ಕಾಂಗ್ರೆಸು ಪಕ್ಷವು ಇನ್ನು ಮುಂದೆ ಕಾಂಗ್ರೆಸು ಪಕ್ಷವಾಗಿಲ್ಲವೆಂದು ಕಾಂಗ್ರೆಸು ಸಿವಿಕ್ ಬೋರ್ಡಿನವರು ಪ್ರಕಟಿಸಿದ್ದಾರೆ.

ಮೈಸೂರು

ಹರಿದಾಸರಿಗೆ ೧೦೦೦ ರೂ ಸಂಭಾವನೆ—ಶ್ರೀ ಮುಂಡರಗಿ ಹರಿಸರ್ವೋತ್ತಮದಾಸರ ಕೀರ್ತನೆಗಳನ್ನು ಶ್ರೀ. ಮಧ್ವರಾಜರು ಕಳೆದ ತಿಂಗಳಿಂದ ಅರಮನೆಯಲ್ಲಿ ಬಿಡದೆ ಕೇಳುತ್ತಿದ್ದು ಸಂತುಷ್ಟರಾಗಿ ೧೦೦೦ ರೂಪಾಯಿಗಳ ಬಹುಮಾನವಿತ್ತಿರುವುದು ಮಾತ್ರವಲ್ಲದೆ ಮೈಸೂರು ಇತಿಹಾಸದ ವೀರ ರಾಜರ ಮತ್ತು ವೀರ ರಾಣಿಯರ ಕಥೆಗಳನ್ನು ರಚಿಸಿ ಪ್ರಸಿದ್ಧಿಸಲು ಅಪ್ಪಣೆಯಿತ್ತಿರುವರು

ಮಾತಾಡಿದ್ದಕ್ಕಾಗಿ ಕೈದು—ಶ್ರೀ. ಮುಳವಳ್ಳಿ ವೀರಪ್ಪನವರು ಕಳೆದ ತಿಂಗಳಲ್ಲಿ ಮಾಡಿದ ಎರಡು ಭಾಷಣಗಳು ರಾಜದ್ರೋಹಕರವಾಗಿ ಕ್ಕೆಂದು ತುಮಕೂರು ಪೋಲೀಸಿನವರು ಅವರನ್ನು ಕೈದು ಮಾಡಿರುವರು.

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ—ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ತಾ ೮, ೯ರಲ್ಲು ಜರಗಿ ಪ್ರಾಮುಖ್ಯ ವಿಷಯಗಳು ಚರ್ಚಿಸಲ್ಪಟ್ಟುವು.

ಬೆಂಗಳೂರು

ಚೀಫ್ ಇಂಜಿನಿಯರರ ರಾಜಿನಾಮೆ—ಮೈಸೂರು ಸರಕಾರದ ಚೀಫ್ ಇಂಜಿನಿಯರರಾದ ದಿ ಬ ಎನ್. ಎನ್ ಅಯ್ಯಂಗಾರರು ಅನಾರೋಗ್ಯದ ನಿಮಿತ್ತ ತಮ್ಮ ಅಧಿಕಾರಸ್ಥಾನಕ್ಕೆ ರಾಜಿನಾಮೆಯಿತ್ತಿರುವರಾಗಿ ತಿಳಿಯುತ್ತದೆ

ಬರೋಡ ಮಹಾರಾಜರು—ಇವರು ಬೆಂಗಳೂರಿಗೆ ಬಂದಿದ್ದು ರಾಜರ ಅತಿಥಿಗಳಾಗಿದ್ದರು

ಬೈರಮಂಗಲ ಆಣೆಕಟ್ಟು—ಕನ್ನಕಪೇಟೆ ತಾಲೂಕಿನ ಬೈರಮಂಗಲ ಗ್ರಾಮದ ಪ್ರಭಾವತಿಯ... ನದಿಗೆ ಆಣೆಕಟ್ಟು ಕಟ್ಟಿಸಲು ಸರಕಾರವು ೯೫,೦೦೦ ರೂಪಾಯಿಗಳನ್ನು ಮಂಜೂರು ಮಾಡಿದೆ

ಬೆಳಗಾಂವಿ

ಏಕೀಕರಣ ಶಿಷ್ಟ ಮಂಡಳಿ—ಮಾನ್ಯ ಮಂತ್ರಿ ಖೇರರು ಬಾಗಲಕೋಟೆಗೆ ಬಂದಾಗ ಅವರನ್ನು ಸಂದರ್ಶಿಸಲು ಏಕೀಕರಣ ಶಿಷ್ಟಮಂಡಳಿಯೊಂದು ರಚಿತವಾಗಿದೆ.

ರಾಮದುರ್ಗ ಕಮಿಟಿ—ರಾಮದುರ್ಗದ ಅರಸು ಪ್ರಜೆಗಳಲ್ಲಿ ಮಧುರ ಸಂಬಂಧವನ್ನು ಕಲ್ಪಿಸುವರೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸು ಕಮಿಟಿಯು ಶ್ರೀ ದೇಶಪಾಂಡೆ ಗಂಗಾಧರರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಜರ್ಮನಿಯ ಜನರೊಡನೆ ಬ್ರಿಟನಿನ ಶ್ರಮಜೀವಿಗಳ ಬಿನ್ನಹ!

ಸಿಲೋನಿನ ಸಂಧಾನದಲ್ಲಿ ನೆಹರುಗೆಳಿಗೆ ವಿಜಯದ ಭರವಸೆ

ಸಿಲೋನಿಗೆ ಪಂಡಿತ ಜವಾಹರಲಾಲ ನೆಹರುಗಳನ್ನು ಅಲ್ಲಿನ ಪರಿಸ್ಥಿತಿಗಳನ್ನು ತಿಳಿದು ಸರಕಾರದೊಡನೆ ಸಂಧಾನ ಬೆಳೆಸಲು ಕಳುಹಿಸುವುದಾಗಿ ಅಖಿಲಭಾರತ ಕಾಂಗ್ರೆಸು ಕಮಿಟಿಯು ನಿರ್ಧರಿಸಿದೆಯಷ್ಟೆ! ಆ ಕುರಿತು ನೆಹರುಗಳು ತಾವು ಭವಿಷ್ಯತ್ತನ್ನು ಕುರಿತು ಮಾತನಾಡುವುದು ಯೋಗ್ಯವಲ್ಲದಿದ್ದರೂ, ಅಲ್ಲಿನ ಸರಕಾರವು ನನ್ನ ಆಗಮನವನ್ನು ಸ್ವಾಗತೀಕರಿಸಿದ ನಿಮಿತ್ತ ಖಂಡಿತವಾಗಿಯೂ ಯೋಗ್ಯ ಸಂಧಾನವು ಆಗುವುದೆಂಬ ಭರವಸೆಯುಳ್ಳವನಾಗಿರುವೆನೆಂದು ಹೇಳಿದರು

ಕಳೆದ ಸರ್ತಿ ತಾನು ಅಲ್ಲಿಗೆ ಹೋದಾಗ ಪರಿಚಯ ಮಾಡಿಕೊಂಡವರಲ್ಲಿ ಹಲವರು ಸರಕಾರದ ಮಂತ್ರಿಗಳಾಗಿರುವುದರಿಂದ ಅವರನ್ನೆಲ್ಲ ತಾನು ಸಂದರ್ಶಿಸಲಿರುವೆನೆಂದೂ, ಅವರ ಸಂಭಾಷಣೆಯಿಂದ ಉಭಯತರಿಗೂ ಹಿತವಾದ ತೀರ್ಮಾನವಾಗದಿರದೆಂದೂ ಹೇಳಿದರು

ಹಿಟ್ಲರನಿಗೆ ವಿಶ್ರಾಂತಿ ಬೇಕೆ?

ಹಿಟ್ಲರನಿಗೆ ಈಗ ವಿಶ್ರಾಂತಿ ಬೇಕಂತೆ ಈಗಿನ ಆತನ ಪ್ರತಿಯೊಂದು ಮಾತೂ, ಬಹಳ ವಿಶೇಷ ಆಸಕ್ತಿಯಿಂದ ಕೇಳಲ್ಪಡುವ ಕಾರಣ ಮತ್ತು ಆತನು ಮಾತನಾಡಿದಲ್ಲಿ ಬ್ರಿಟಿಷರ ನೌಕಾ ಒಪ್ಪಂದದ ವಿಷಯವಾಗಿ ಮಾತನಾಡಬೇಕಾಗುವುದರಿಂದ, ಆ ಕುರಿತು ತನ್ನ ಅಭಿಪ್ರಾಯವನ್ನು ಜಗತ್ತಿನ ಎದುರು ಸಾರಲಿಕ್ಕೆ ಅವನಿಗೆ ಇಚ್ಛೆ ಇಲ್ಲವಾಗಿ ತಿಳಿಯುತ್ತದೆ ಬರುವ ಶರತ್ಕಾಲದಲ್ಲಿ ಕೈಕೊಳ್ಳಲಿರುವ ಕಾರ್ಯಕ್ಕಾಗಿ ಈಗ ಈ ವಿಶ್ರಾಂತಿಯೆಂದು ತಿಳಿಯುತ್ತದೆ

ಸ್ಪಷ್ಟ ಧೋರಣೆಯಿಲ್ಲ

ಲಾರ್ಡ್ ಹೆಲಿಫಾಕ್ಸರ ಭಾಷಣದಿಂದ ಇಟಲಿಯಲ್ಲಿ ಈ ರೀತಿಯ ಅಭಿಪ್ರಾಯ ಹುಟ್ಟಿದೆ ಬ್ರಿಟನು ಫ್ರಾನ್ಸುಗಳು ಖಂಡಿತವಾಗಿಯೂ ಯಾವ ಧೋರಣೆಯನ್ನೂ ಮುಂದೊಡ್ಡುವುವು ಎಂಬ ಕುರಿತು ಸ್ಪಷ್ಟತೆಯಿಲ್ಲವಾದರೂ ಅವುಗಳು ಹಿಂದಿಗಿಂತ ಈಗ ಇನ್ನಷ್ಟು ಬಲವಂತವಾಗಿ ಟೀಕಿಸುತ್ತಿವೆಯೆಂಬುದು ಸ್ಪಷ್ಟ ಹೀಗಾಗಿದಲ್ಲಿ ಮುಂದಕ್ಕೆ ಖಂಡಿತವಾಗಿಯೂ ಪರಿಸ್ಥಿತಿ ಕೆಡಬಹದು ಹೆಲಿಫಾಕ್ಸರ ಮಾತು ಸರ್ವಾಧಿಕಾರಿಗಳಿಗೆ ಎಚ್ಚರವಾದರೂ ಪ್ರಜಾಪ್ರಭುತ್ವರಾಷ್ಟ್ರಗಳು ಧೈರ್ಯದ ನಿರ್ಣಯ ಮಾಡಲಿಲ್ಲವೆಂಬ ಅಭಿಪ್ರಾಯವುಂಟು

'ತೆಟಿಸ್' ನಿಧಿ

ತೆಟಿಸ್ ಜಲಾಂತರ್ಯಾಮಿ ನಾವೆಯಲ್ಲಿ ಆಹುತಿಯಾದ ಜನರನ್ನು ಹೊಂದಿರುವವರಿಗೆ ಸಹಾಯಮಾಡುವ ಸಲುವಾಗಿ, ಸಂಗ್ರಹಿಸಲ್ಪಟ್ಟ ನಿಧಿಯು ಇಂದು ೧೫,೦೦೦ ಪವನುಗಗಳಷ್ಟು ಆಗಿದೆ, ತೆಟಿಸ ಅವಗಡದಿಂದ ೬೯ ವಿಧವೆಯರೂ, ೮೫ ಮಕ್ಕಳೂ ಅನಾಥರಾಗಿರುವರೆಂದೂ ತಿಳಿದಿದೆ ಲಿವರ್ ಪೂಲಿನ ಲಾರ್ಡ್ ಮೇಯರರೊಬ್ಬರು ಸಂಗ್ರಹಿಸಿದ ನಿಧಿಯೇ ೫೦,೦೦೦ ಪವನುಗಳಾಗಿವೆ

ತೆಟಿಸನ್ನು ನೀರಿನಿಂದ ತೆಗೆಯುವ ಕೆಲಸವು ಆರಂಭವಾಗಿದೆ ಸಮುದ್ರದ ಹವೆಯೂ ಚೆನ್ನಾಗಿರುತ್ತದೆಯೆಂದು ವಾರ್ತೆ

ಜಪಾನಿಯರು ಶಾಲೆಯನ್ನು ಸುಟ್ಟರು

ಅಮೇರಿಕದ ಮಿಶನರಿಯವರಿಂದ ನಡೆಸಲ್ಪಡುವ ಫೂಚೂ ಎಂಬಲ್ಲಿನ ಯೂನಿಯನ್ ಶಾಲೆಯೊಂದು ಜಪಾನೀಯರ ಬಾಂಬಿಗೆ ಬಲಿಯಾಯಿತು. ಅದರಲ್ಲಿ ಅನೇಕ ಚೈನದ ವಿದ್ಯಾರ್ಥಿಗಳು ಕಲಿಯುತ್ತಿದ್ದರು ಅವರೆಲ್ಲಾ ಸುಟ್ಟು ಭಸ್ಮರಾಗಿದ್ದಾರೆ ಅಮೇರಿಕದ ಅಧಿಕಾರಿಗಳು ಜಪಾನಿನ ಈ ಕ್ರೂರವರ್ತನೆಯನ್ನು ಖಂಡಿಸಿದ್ದಾರೆ.

ಆಚಾರ್ಯ ನರೇಂದ್ರದೇವರನ್ನು ಬಂಧಿಸಿದರು!

ಹಿಂದೂ ಮುಸ್ಲಿಂ ಜಗಳದಿಂದ ಬ್ರಿಟಿಷರಿಗೆ ಲಾಭ!

ಗಾಂಧೀ—ಬೋಸ್ ಭೇಟಿ

ಎಮ್ ಎಲ್. ಎ.ಗಳಿಗೆ ರೈಲ್ವೆ ಪಾಸು

ಈಗ ಕೇಂದ್ರ ನ್ಯಾಯವಿಧಾಯಕ ಸಭೆಯ ಸದಸ್ಯರಿಗೆ Iನೇ ತರಗತಿಯ ರೈಲ್ವೇ ಚಾರ್ಜು ಕೊಡಲ್ಪಟ್ಟು, ಅದರಲ್ಲಿ ಹಲವರು IIIನೇ ಕ್ಲಾಸಿನಲ್ಲಿಯೇ ಪ್ರಯಾಣಮಾಡಿ Iನೇ ಕ್ಲಾಸಿನ ಚಾರ್ಜು ಪಡೆಯುವರಾಗಿ ತಿಳಿದುಬರುವುದರಿಂದ ಇದನ್ನು ತಡೆಯುವ ನಿಮಿತ್ತ ಇನ್ನು ಮುಂದಕ್ಕೆ ಎಂ ಎಲ್ ಎ ಗಳಿಗೆ ರೈಲ್ವೆ ಪಾಸು ಕೊಡುವ ವಿಷಯವಾಗಿ ಬರುವ ಸಿಮ್ಲಾದ ಅಧಿವೇಶನದಲ್ಲಿ ಒಂದು ಠರಾವು ಬರಲಿದೆಯಾಗಿ ತಿಳಿಯುತ್ತದೆ

ಅಮೇರಿಕದಲ್ಲಿ ಠಾಗೂರರ ಜನ್ಮದಿನಾಚರಣೆ

ವಿಶ್ವಕವಿ ಠಾಗೋರರ ೭೮ನೇ ಜನ್ಮದಿನಾಚರಣೆಯನ್ನು ಅಮೇರಿಕದ ಇಂಡಿಯಾ ಲೀಗಿನವರು ಬಹಳ ವಿಜೃಂಭಣೆಯಿಂದ ಆಚರಿಸಿದರು. ಹಲವರು ಸ್ವಇಚ್ಛಾಭಾವದಿಂದ ಹಿಂದಿರುಗಬೇಕಾಯಿತು ಠಾಗೂರರಿಂದ ರಚಿತವಾದ "ಚಿತ್ರ" ನಾಟಕವು ಬಹಳ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು

ವಾರ್ತಾ ಪತ್ರಿಕಾ ಸಂಘ

ಭಾರತದ ವಾರ್ತಾ ಪತ್ರಿಕಾ ಸಂಘವು ಬೊಂಬಾಯಿಯ ತಾಜಮಹಾಲ್ ಹೊಟೇಲಿನಲ್ಲಿ ಸೇರಿತು ಸ್ಟೇಟ್ಸ್‌ಮೇನ್ ಪತ್ರಿಕೆಯ ಸಂಪಾದಕರಾದ ಮಿ ಆರ್ಥರ್ ಮೂರೆಯವರು ಅಧ್ಯಕ್ಷರಾಗಿದ್ದರು

ಶ್ರೀಗಳಾದ ಕೆ ಶ್ರೀನಿವಾಸನ್ ('ಹಿಂದೂ' ಸಂಪಾದಕರು) ಫ್ರಾನ್ಸಿಸ್ ಲೋ (ಟೈಮ್ಸ್ ಓಫ್ ಇಂಡಿಯಾ) ಡೆಸ್ಮೊಂಡ್ ಯಂಗ್ ('ಪಯನಿಯರ್') ವಸಂತಪ್ರಸಾದ ('ಲೀಡರ್') ಮುಕನಲಾಲ ಸೇನ ('ಹಿಂದೂಸ್ಥಾನ ಸ್ಟ್ಯಾಂಡಾರ್ಡ್') ಶಾಂತಿಘೋಷ ('ಅಮೃತ್ ಬಜಾರ್') ಕಾಮಾ ('ಬೊಂಬೇ ಕ್ರಾನಿಕಲ್') ದೇವದಾಸ ಗಾಂಧೀ ('ಹಿಂದೂಸ್ಥಾನ್ ಟೈಮ್ಸ್') ಎಸ್ ಎ ಜಾಕ್ಸನ್ ('ಮದ್ರಾಸ್ ಮೈಲ್') ಮತ್ತು ಎಚ್ ಡಬ್ಲ್ಯು ಸ್ಮಿತ್ (ಟೈಮ್ಸ್ ಓಫ್ ಇಂಡಿಯಾ) ಇವರು ಹಾಜರಿದ್ದರು

ಮದ್ರಾಸು ಎಸೆಂಬ್ಲಿಯ ಬರುವ ಅಧಿವೇಶನ

ಮದ್ರಾಸು ಎಸೆಂಬ್ಲಿಯ ಅಧಿವೇಶನವು ಆಗಸ್ಟ ಮೂರರಂದು ಸೇರುವುದು ಇಂದಿನ ಕಾರ್ಯಕ್ರಮದಂತೆ ಮೂರು ದಿನಗಳಿಗಿಂತ ಹೆಚ್ಚು ಸಮಯವು ಬೇಕಾಗಲಾರದೆಂದು ತಿಳಿಯುತ್ತದೆ

ವ್ಯಾಪಾರ ತೆರಿಗೆಯು ಬಿಲು ಧನಿಯು ಮುಖ್ಯ ಚರ್ಚಾವಿಷಯವಾಗಿದೆ

ಮೂವತ್ತು ಮದುವೆಗಳು ಒಂದೇ ದಿನ

ಟುಟಿಕೋರಿನದಲ್ಲಿ ಮೂವತ್ತು ಮದುವೆಗಳು ಒಂದೇ ದಿನ ಮೆರವಣಿಗೆ, ಬೇಂಡ್ ಮೊದಲಾದ ಯಾವ ತರದ ದುಂದುಗಾರಿಕೆಯೂ ಇಲ್ಲದೆ ನಡೆದುವು ಈ ಸುಧಾರಣೆಯಲ್ಲಿ ಟುಟಿಕೋರಿನ್ ಬಿಶೋಪರಾದ ಫ್ರಾನ್ಸಿಸ್ ಟಿ ರೋಚಿಯೆಂಬವರು ಬಹಳ ಉತ್ಸಾಹ ತೆಕ್ಕೊಳ್ಳುತ್ತಾರೆ

ಕಳೆದ ವರ್ಷ ಅವರು ಹಲವು ಹಳ್ಳಿಗಳನ್ನು ಸಂದರ್ಶಿಸಿದಾಗ ಅನೇಕ ಪ್ರಾಯಸ್ಥರಾದ ತರುಣಿಯರ ಮದುವೆಯ ವೆಚ್ಚಕ್ಕೆ ಹಣವಿಲ್ಲದ ತಂದೆತಾಯಿಗಳು ಅವರಿಗೆ ಮದುವೆಮಾಡದಿರುವುದನ್ನು ಕೇಳಿ ಈ ಸುಧಾರಣೆಯನ್ನು ಬಿಶೋಪರು ಪ್ರಚಾರಮಾಡಿರುತ್ತಾರೆ ವರದಕ್ಷಿಣೆಯಿಲ್ಲದೆ ಮದುವೆಯಾಗುವವರಿಗೆ ಸ್ವತಃ ಬಿಶೋಪರೇ ಬಂದು ಆಶೀರ್ವಾದಿಸುವುದರಿಂದ ಜನರು ಬಹಳ ಉತ್ಸಾಹಗೊಂಡಿದ್ದಾರೆ

ತ್ರಿರಾಷ್ಟ್ರಗಳ ಒಪ್ಪಂದ

ಆಂಗ್ಲ—ಫ್ರಾನ್ಸು—ರಶ್ಯಾ ರಾಷ್ಟ್ರಗಳ ಒಪ್ಪಂದವು ವಾರವೊಂದರೊಳಗೆ ಆಗುವುದಾಗಿ ಪ್ಯಾರಿಸ್ಸಿನಲ್ಲಿ ವಾರ್ತೆಯಾಗಿದೆ ಎಂ ಮೊಲೊಟೋವರು ಬೇಗನೇ ಈ ಕುರಿತು ನಿರ್ಣಯಕ್ಕಾಗಿ ಮುಖ್ಯಾಧಿಕಾರಿಗಳ ಸಭೆ ಕರೆಯಲಿರುವರಂತೆ!

ಆದರೆ ರಶ್ಯಾದಲ್ಲಿ ಬ್ರಿಟನಿನ ಕುರಿತು ಅವಿಶ್ವಾಸವು ಹೆಚ್ಚುತ್ತಿದೆ ಹಾಗಾಗಿ, ಯಾವ ಒಪ್ಪಂದವನ್ನು ಮಾಡಲಿಕ್ಕೂ ರಶ್ಯಾಕ್ಕೆ ಮನಸ್ಸಿಲ್ಲವೆಂದು ಸುದ್ದಿ

ಡಚ್ಚ್ ಮಂತ್ರಿಮಂಡಳದ ರಾಜಿನಾಮೆ

ಡಚ್ಚ್ ಮಂತ್ರಿಮಂಡಳದ ಪ್ರಧಾನರಾದ ಡಾ ಕೊಲಿಜ್ನಿಯವರು ಮಂತ್ರಿಗಳೊಳಗೆ ಉಂಟಾದ ಅಭಿಪ್ರಾಯ ಭೇದಕ್ಕಾಗಿ ರಾಜಿಯಿತ್ತಿರುವರೆಂದು ತಿಳಿಯುತ್ತದೆ ಡಚ್ಚ್ ರಾಣಿಯು ಹೊಸ ಮಂತ್ರಿಮಂಡಳವನ್ನು ನಿರ್ಮಿಸಲು ಅವರಿಗೇ ಅಧಿಕಾರವನ್ನು ಕೊಟ್ಟಿರುವಳು

ಆಚಾರ್ಯ ನರೇಂದ್ರ ದೇವರನ್ನು ಬಂಧಿಸಿದರು!

ರೋಹ್ತಾಕಿನ ಸೋಶಿಯಲಿಸ್ಟ್ ಪರಿಷತ್ತಿನಲ್ಲಿ ಅಧ್ಯಕ್ಷತೆ ವಹಿಸಲು ಬಂದ ಆಚಾರ್ಯ ನರೇಂದ್ರ ದೇವರಿಗೆ ಹೊಸ ಡಿಲ್ಲಿಯಲ್ಲಿ ಪಂಜಾಬನ್ನು ಪ್ರವೇಶಿಸಬಾರದಾಗಿ ನಿಷೇಧಾಜ್ಞೆಯಾಯಿತು ಈ ಆಜ್ಞೆಯನ್ನು ಅವರು ತಿರಸ್ಕರಿಸಿ ಮುಂದುವರಿಯಲು ರೋಹ್ತಾಕಿನಲ್ಲಿ ಬಂಧಿಸಿದರು

ಫ್ರೆಂಚ ಮಂತ್ರಿಮಂಡಳದ ಸಭೆ

ಫ್ರೆಂಚ ಮಂತ್ರಿಮಂಡಳದ ಸಭೆಯೊಂದು ಸೇರಿ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯ ಕುರಿತು ಆಲೋಚಿಸಿರುವುದಾಗಿ ತಿಳಿಯುತ್ತದೆ ಡಾಸಿಗಿನ ವಿಷಯವನ್ನು ಚರ್ಚಿಸುತ್ತಾ ಪ್ರಜಾಪ್ರಭುತ್ವ ಸರಕಾರಗಳ ದೃಢಸಾಧನೆಯು ದಿನದಿನ ಪಶುಶಕ್ತಿಯನ್ನು ಖಂಡಿಸ ಬೇಕೆ ಯೋಗ್ಯವಾದ ಕಾರ್ಯವೆಂದು ಅಭಿಪ್ರಾಯ ಮಾಡಲಾಯಿತು ಜರ್ಮನಿಗೆ ಫ್ರೆಂಚ್ ಪತ್ರಿಕೆಗಳು ಹೀಗೆ ಖಚಿತವಾದ ಎಚ್ಚರಿಕೆಯನ್ನು ಕೊಡುತ್ತಿವೆ

ಬೋಸ್—ಗಾಂಧಿಯವರ ಭೇಟಿ

ಶ್ರೀ ಸುಭಾಷ ಚಂದ್ರಬೋಸ್ ಮತ್ತು ಗಾಂಧಿಜಿಯವರು ಭೇಟಿಯಾಗಿ ಕೆಲ ಹೊತ್ತು ಸಂಭಾಷಣೆ ನಡೆಸಿದರು ಕಾಂಗ್ರೆಸಿನ ಘಟನೆಯಲ್ಲಿ ಮಾಡಿದ ತಿದ್ದುಪಡಿಯಿಂದ ಕಾಂಗ್ರೆಸಿನ ಎಡಪಕ್ಷ ಮತ್ತು ಬಲಪಕ್ಷ ಇವೆರಡಕ್ಕೂ ಒಂದೇ ರೀತಿಯ ಪರಿಣಾಮವಾಗುವುದೆಂಬ ವಿಷಯದಲ್ಲಿ ಬೋಸರು ಸಮ್ಮತಿಸಿದಂತೆ ತಿಳಿಯುತ್ತದೆ ಬೋಸರು ಈಗಲೂ ವರ್ಕಿಂಗ್ ಕಮಿಟಿಯಲ್ಲಿ ಎಲ್ಲಾ ಪಕ್ಷಗಳ ಪ್ರಾತಿನಿಧ್ಯವಿರಬೇಕೆಂಬ ಅಭಿಪ್ರಾಯದವರಾಗಿದ್ದಾರೆ ಬೋಸರು ಜುಲಾಯಿ ಮೂರನೇ ವಾರದಲ್ಲಿ ಮದ್ರಾಸು ಪ್ರಾಂತದ ಸಂಚಾರ ಹೊರಡುವರು ಅದೇ ಸಮಯದಲ್ಲಿ ವಲ್ಲಭಭಾಯಿ ಪಟೇಲರೂ ಮದ್ರಾಸಿಗೆ ಬರುವರಾಗಿ ತಿಳಿಯುತ್ತದೆ

ಗಿರಣಿ ಮುಷ್ಕರ

ಕಲ್ಕತೆಯ ಬರಕ್‌ಪುರ ಎಂಬಲ್ಲಿನ ಹತ್ತಿಯ ಕಾರ್ಖಾನೆಯಲ್ಲಿ ೯೦೦ ಮಂದಿ ಕೆಲಸಗಾರರು ಕೆಲಸಕ್ಕೆ ಮುಷ್ಕರ ಹೂಡಿರುವರು ಕೆಲಸಗಾರರು "ರಥ" ಮಹೋತ್ಸವದ ದಿನವನ್ನು ರಜಾದಿನವಾಗಿ ಕೇಳಿದಕ್ಕೆ ಅಧಿಕಾರಿಗಳು ಒಪ್ಪದ್ದರಿಂದ ಈ ಮುಷ್ಕರವು ನಡೆದಿದೆ

ಶ್ರೀ ದೇವಿದಾಸ ಗಾಂಧಿಯರು ಹೈದರಾಬಾದಿನಲ್ಲಿ

ಶ್ರೀ ದೇವಿದಾಸ ಗಾಂಧಿಯವರು ಹೈದರಾಬಾದಿಗೆ ಬಂದಿರುವರು ಅವರನ್ನು ಪತ್ರಿಕಾ ಪ್ರತಿನಿಧಿಗಳು ಸಂದರ್ಶಿಸಿದಾಗ ತನ್ನ ಸ್ವಂತ ಕಾರ್ಯದಲ್ಲಿ ಬಂದಿರವುದಾಗಿ ಹೇಳಿದರು. ಇನ್ನೊಂದು ವರ್ತಮಾನದಂತೆ ಹೈದರಾಬಾದಿನ ಪರಿಸ್ಥಿತಿಯನ್ನು ತಿಳಿಯಲು ಅವರು ಬಂದಿರುವುದಾಗಿಯೂ ಸ್ಥಳೀಯ ಧುರೀಣರನ್ನು ಕಂಡು ಅವರು ಮಾತನಾಡಲಿರುವರೆಂದೂ ತಿಳಿಯುತ್ತದೆ

ಹೈದರಾಬಾದಿಗೆ ಸುಧಾರಣೆಯೊಂದೇ ಮದ್ದು

ಜ್ಯೋತಿರ್ಮಠದ ಶಂಕರಾಚಾರ್ಯ ಸ್ವಾಮಿಗಳು ಹೈದರಾಬಾದಿನ ಪರಿಸ್ಥಿತಿಯನ್ನು ಪ್ರತ್ಯಕ್ಷ ಪರೀಕ್ಷಿಸಿ, ಸರಕಾರಕ್ಕೆ ಒಂದು ದೀರ್ಘವಾದ ಮನವಿಯನ್ನು ಕಳುಹಿಸಿದ್ದಾರೆ, ಅದರಲ್ಲಿ ಇಂದು ಸಂಸ್ಥಾನದಲ್ಲಿ ಉಂಟಾದ ಜಾಗ್ರತಿಯಂತೆ ಸರಕಾರದಲ್ಲಿ ಸುಧಾರಣೆಯಾಗುವುದೇ, ಇಂದಿನ ಆಶ್ಯಕ್ಕೆಗೆ ಏಕಮಾತ್ರ ಉಪಾಯವೆಂದು ತಿಳಿಸಿರುತ್ತಾರೆ

ಮಧುರೆಯಲ್ಲಿ ಮುಷ್ಕರ

ಮಧುರೆಯ ನೆಯಿಯುವಿಲ್ಲಿನಲ್ಲಿ ಮುಷ್ಕರವಾಗಿ ೭೩ ಮಂದಿ ಪಿಕೆಟಿಂಗ್ ಮಾಡುವವರನ್ನು ಕೈದ ಮಾಡಲಾಗಿದೆ ೧೪೪ನೇ ಸೆಕ್ಷನು ಅಲ್ಲಿ ಜಾರಿಯಲ್ಲಿದೆ

ಹಿಂದೂ ಮುಸ್ಲಿಂ ಜಗಳದಿಂದ ಬ್ರಿಟಿಷರ ಲಾಭ

ಯಾವುದಾದರೂ ಒಂದು ಅಲ್ಪ ನೆವನಕ್ಕಾಗಿ ಹಿಂದೂ ಮುಸ್ಲಿಮರಲ್ಲಿ ಜಗಳವುಂಟಾದರೆ, ಅದನ್ನು ಬ್ರಿಟಿಷ್ ಸರಕಾರವು ತಡೆಯುವಂತೆ ಯತ್ನಿಸದೆ ಅಲ್ಲಿ ಬದ್ಧವ ತೀಯನ್ನು ನಡೆಸುತ್ತಿದಯೆ ದೂ ಹೀಗೆ ಹಿಂದೂದೇಶದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿಕೊಂಡಿದೆಯೆಂದೂ ಇಟಲಿಯ ಪತ್ರಿಕೆಯೊಂದು ಹೇಳುತ್ತದೆ

ತಿರುವಾಂಕೂರು ಸ್ಟೇಟ್ ಕಾಂಗ್ರೆಸ್ಸು

ವರ್ಕಿಂಗ್ ಕಮಿಟಿಯ ನಿರ್ಣಯದಂತೆ ತಿರುವಾಂಕೂರ ಸ್ಟೇಟ್ ಕಾಂಗ್ರೆಸ ಮೊದಲನೆಯದಾಗಿ ಸರಕಾರದೊಡನೆ ಸಮಾಲೋಚನೆ ಮಾಡುವ ಸಲುವಾಗಿ ದಿವಾನರ ಭೇಟಿಯನ್ನು ಕೇಳಿದೆ ಇದರ ಅಧ್ಯಕ್ಷರ ಗಾಂಧಿಜಿಯವರೊಡನೆಯೂ ಟೆಲಿಗ್ರಾಫಿನ ಸಂಭಾಷಣೆ ಮಾಡುತ್ತಿರುವರು

ಚೈನಾದಲ್ಲಿ ಗೋರಿಲ್ಲಾ ಯುದ್ಧ

ಟ್ಸಿನ್‌ಟ್ಸಿನದಲ್ಲಿ ಜಪಾನೀಯರ ಸ್ವಾಧೀನವಿರುವ ಪ್ರದೇಶಕ್ಕೆ ಚೈನೀ ಗೋರಿಲ್ಲಾ ಸೈನಿಕರು ಮುತ್ತಿಗೆ ಹಾಕಿ ಹಲವು ಜಪಾನೀಯರನ್ನು ಕೊಂದು ತುಂಬಾ ಯುದ್ಧಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿರುವರಾಗಿ ತಿಳಿಯುತ್ತದೆ ಪೀಕಿಂಗಿನಲ್ಲಿಯೂ ಚೈನಾ ಗೋರಿಲ್ಲಾ ಸೈನಿಕರು ಜಪಾನೀಯರನ್ನು ಹಡಗೆಳಿಸುವುದರಲ್ಲಿ ಜಯ ಶಾಲಿಗಳಾಗಿರುತ್ತಾರೆ

ಜರ್ಮನಿಯ ಜನತೆಯೊಡನೆ ಬ್ರಿಟನಿನ ಶ್ರಮಜೀವಿಗಳ ಬಿನ್ನಹ

ಲಂಡನಿನ ಲೇಬರ್ ಪಾರ್ಟಿ ಮತ್ತು ಟ್ರೇಡ್ ಯೂನಿಯನ್ ಕಾಂಗ್ರೆಸಿನ ಪ್ರತಿನಿಧಿಗಳಿಂದ ಸೇರಿದ ಒಂದು ಸಭೆಯು ಈ ರೀತಿಯ ಒಂದು ಬಿನ್ನಹ ರೂಪದ ನಿರ್ಣಯವನ್ನು ಜರ್ಮನ್ ಜನತೆಗೆ ಕಳುಹಿಸಿದೆ — ನಿಮ್ಮಲ್ಲಿ ಹಲವರು ಜರ್ಮನಿಯನ್ನು ಎಲ್ಲಾ ಕಡೆಯಿಂದಲೂ ಮುತ್ತುವ ನಿಮಿತ್ತ ಅದು ಯುದ್ಧಕ್ಕೆ ಇಳಿದಿರುವುದಾಗಿ ತಿಳಿದಿರುತ್ತಾರೆ ಈ ಸುಳ್ಳು ಪ್ರಚಾರವು ಖಂಡಿತವಾಗಿಯೂ ನಿಷಿದ್ಧವಾದುದು ಯಾವ ರಾಷ್ಟ್ರದ ಸ್ವಾತಂತ್ರ್ಯಕ್ಕೂ ಹಾನಿ ಬರದಂತೆ ಜರ್ಮನಿಯ ಶಾಂತಿಯನ್ನು ಕಾಪಾಡಿಕೊಂಡು ಮುಂದುವರಿಯಬೇಕು

ಅಮೇರಿಕದ ತಾಟಸ್ಥ್ಯ

ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರ ಯುದ್ಧ ಸಹಾಯ ಯೋಜನೆಯು ಕಾನೂನು ಪ್ರತಿನಿಧಿ ಸಭೆಯಲ್ಲಿ ಬಿದ್ದುಹೋಯಿತು ಅಮೇರಿಕವು ತನ್ನಷ್ಟಕ್ಕೆ ಸುಮ್ಮಗಿರಬೇಕಾಗಿಯೂ, ಹಣ ತೆತ್ತವರಿಗೆ ಮಾತ್ರ ಯುದ್ಧ ಸಾಮಗ್ರಿಗಳನ್ನು ಕೊಡಬೇಕಾಗಿಯೂ ನಿರ್ಣಯವಾಯಿತು

ಡಾನ್ಸಿಗು ಯೂರೋಪಿನ ಕುರುಕ್ಷೇತ್ರವಾಗುವುದೇ?

★ ಲಾರ್ಡ್ ಹೆಲಿಫಾಕ್ಸರ ಎದೆಗಾರಿಕೆ!

★ ಜರ್ಮನಿಯು ಬ್ರಿಟಿಷರನ್ನು ಜರೆಯುತ್ತಿದೆ!

★ ಪೋಲೆಂಡು ಸುಮ್ಮನಿರಲು ಸಾಧ್ಯವಿದೆಯೋ?

ಲಾರ್ಡ್ ಹೆಲಿಫಾಕ್ಸರ ಎದೆಗಾರಿಕೆ

ಲಂಡನಿನ ಅಂತರ್ ರಾಷ್ಟ್ರೀಯ ವಿಚಾರದ ರಾಜಕೀಯ ಸಂಸ್ಥೆಯಲ್ಲಿ ಲಾರ್ಡ್ ಹೆಲಿಫಾಕ್ಸರು ಭಾಷಣಮಾಡುತ್ತಾ ಬ್ರಿಟನಿನ ಇಂದಿನ ಧೃಢತವನ್ನು ಹೀಗೆಂದು ಹೇಳಿದರು ಅದರ ಸಾರಾಂಶ ಹೀಗಿದೆ —

'ಇತರ ರಾಷ್ಟ್ರಗಳಲ್ಲಿ ನಮ್ಮಿಂದ ಭಿನ್ನ ರೀತಿಯ ರಾಜಕೀಯ ಮನೋವೃತ್ತಿಯ ಜನರು ನಮ್ಮ ಧ್ಯೇಯ ಮತ್ತು ಕಾರ್ಯಗಳನ್ನು ತಪ್ಪು ರೀತಿಯಿಂದ ವ್ಯಾಖ್ಯಾನಿಸುವ ಧೋರಣೆಯನ್ನು ಕೈಕೊಂಡಿದ್ದಾರೆ' ಬ್ರಿಟನು ಇಂದು ಯಾವ ಅನ್ಯಾಯದ ಶಕ್ತಿಗೂ ಶರಣಾಗಲು ಸಿದ್ಧವಿಲ್ಲವೆಂದು ನಾನು ವ್ಯಕ್ತಪಡಿಸುತ್ತೇನೆ ನಮ್ಮ ಜನರಿಗೆ ಮಾಡಿದ ಪ್ರತಿಯೊಂದು ಅನ್ಯಾಯವೂ, ನಮ್ಮ ಶಕ್ತಿ ಮತ್ತು ಯಥಾರ್ಥತೆಗಳನ್ನು ಇದಿರಿಸಿ ಹೇಳಿದ ಪ್ರತಿಯೊಂದು ಹೇಳಿಕೆಯೂ, ನಮ್ಮ ಶಕ್ತಿಯನ್ನು ಹೆಚ್ಚಿಸಿದೆ ಮಾತ್ರವಲ್ಲದೆ ನಮ್ಮ ವಿಚಾರದಲ್ಲಿ ಸಹಭಾಗಿಗಳಾದವರೊಡನೆ ಮತ್ತಷ್ಟು ಸಮೀಪ ಸಂಬಂಧವನ್ನುಂಟು ಮಾಡಿದೆ

'ನಮ್ಮ ಧ್ಯೇಯವೇನೆಂಬದರ ಕುರಿತು ಎಲ್ಲಾ ಕಡೆಗಳಲ್ಲಿಯೂ ಅಪಪ್ರಚಾರವಾಗುತ್ತಿರುವಾಗ, ಅದನ್ನು ಸ್ಪಷ್ಟಗೊಳಿಸುವುದು ಶಕ್ಯದಾಗಿದೆ ನಮ್ಮ ಮೊದಲನೆಯ ಧ್ಯೇಯವು ಕಲಹಪ್ರಿಯವಾದ ರಾಷ್ಟ್ರಗಳನ್ನು ಎದುರಿಸುವುದು ಮತ್ತು ಆ ಧ್ಯೇಯದಿಂದಲೇ ನಾವು ಇತರ ಜನಾಂಗದವರೊಡನೆ ಒಪ್ಪಂದ ಮಾಡಿಕೊಂಡಿರುತ್ತೇವೆ. ಇದು ಇಟಲಿ ಜರ್ಮನಿಗಳ ವಿರೋಧ ಪರ್ತನೆಯೆಂದೂ, ಅವುಗಳನ್ನು ಬದುಕಲು ಬಿಡದಂತೆ ಮಾಡುವ ಕೆಲಸವೆಂದೂ ಅಬದ್ಧವಾಗಿ ತಿಳಿದು ಪ್ರಚಾರವಾಗುತ್ತಿದೆ

ಜವಾಗಿ ವಿಚಾರಿಸಿದರೆ ಜರ್ಮನಿಯು ಇಂದು ತನ್ನಷ್ಟಕ್ಕೇ ಪ್ರತ್ಯೇಕವಾಗಿ ನಿಂತಿದೆ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ದೃಷ್ಟಿಗಳಿಂದ ಜರ್ಮನಿಯು ಇಂದು ಇತರ ರಾಷ್ಟ್ರಗಳಿಂದ ದೂರ ನಿಂತುಕೊಂಡಿರುವಾಗ, ಹೀಗೆ ತಾನು ಬೇಕೆಂದೇ ಮಾಡುತ್ತಿರುವಾಗ ಇದಕ್ಕಾಗಿ ಇನ್ನೊಬ್ಬರನ್ನು ದೂರಿ ಫಲವೇನು? ಕಡೆಯದಾಗಿ, ಲೋಕದಲ್ಲಿ ಸರ್ವರೂ ಸುಖದಿಂದಿರುವಂತೆ ನೋಡುವುದೇ ನಮ್ಮ ಧ್ಯೇಯ. ಅನ್ಯೋನ್ಯ ಸಹಕಾರದಿಂದ ಸಂಕಷ್ಟವು ಖಂಡಿತವಾಗಿಯೂ ಕೊನೆಗಾಣುವುದು.

ತಮ್ಮ ರಾಷ್ಟ್ರದಲ್ಲಿ ಹೆಚ್ಚು ಜನರಿರುವರೆಂಬ ನೆವನ ಹೂಡಿ ಅನ್ಯ ರಾಷ್ಟ್ರಗಳ ಸ್ವಾತಂತ್ರ್ಯಾಪಹರಣ ಮಾಡುವ ಕೆಲಸವು ಖಂಡಿತವಾಗಿಯೂ ನಿಂದನೀಯವಾಗಿರುವುದು ತಮ್ಮ ನೆರೆಕರೆಯ ರಾಷ್ಟ್ರಗಳ ಸೌಹಾರ್ದ ಸಂಬಂಧಗಳಿಂದ ರಾಷ್ಟ್ರಗಳು ಎಲ್ಲೆಲ್ಲಿಯೂ ಊರ್ಜಿತ ಸ್ಥಿತಿಯನ್ನು ಹೊಂದಿವೆಯಲ್ಲದೆ ಪಶುಬಲದ ಪ್ರದರ್ಶನದಿಂದಲ್ಲ, ಅದೂ ಅಲ್ಲದೆ ಜರ್ಮನಿಗೆ ಜೆಕೊಸ್ಲವೇಕಿಯಾ, ಇಟಲಿ, ಹೋಲೆಂಡುಗಳಿಂದ ಕೆಲಸಕ್ಕೆ ಜನರನ್ನು ತರಿಸುತ್ತಿದ್ದ ಸಮಯದಲ್ಲಿ ಹೀಗೆ ತಮಗೆ ಉಳಕೊಳ್ಳಲಿಕ್ಕೆ ಜಾಗೆಗಾಗಿ ಜರ್ಮನಿಯ ಹೋರಾಟವೆಂಬ ನೆವನದಿಂದ ಪಶುನೀತಿಯನ್ನು ಸಮರ್ಥಿಸುವುದು ಆಶ್ಚರ್ಯಕರವಾದ ಸಂಗತಿಯಾಗಿದೆ

ಹೋಲೆಂಡು, ಬೆಲ್ಜಿಯಮ, ನಮ್ಮ ದ್ವೀಪಗಳು ಈ ಸಮಸ್ಯೆಗೆ ಉತ್ತರವಿತ್ತಿವೆ ಯಾವುದೇ ರಾಷ್ಟ್ರವಾಗಲಿ ತಮ್ಮ ನೆರೆಕರೆಯ ರಾಷ್ಟ್ರದೊಡನೆ ಸಹಕಾರದಿಂದಿರುವುದು ನ್ಯಾಯವೂ ಆಗಿದೆ, ಪ್ರಯೋಜನವುಳ್ಳದ್ದೂ ಆಗಿದೆ ಹಾಗೆ ಮಾಡದೆ ಜರ್ಮನಿಯು ಪ್ರತ್ಯೇಕ ನಿಂತುಕೊಂಡು ಈ ಸಮಸ್ಯೆಯನ್ನು ಬಗೆಹರಿಸಲು ಕಲಹವನ್ನು ಆಹ್ವಾನಿಸುವುದು ನ್ಯಾಯವಾಗಲಾರದು.

ಯುದ್ಧನೀತಿಯು ಕೊನೆಗಾಣದೆ ಖಂಡಿತವಾಗಿಯೂ ಶಾಂತಿಯಾಗಲಾರದು ಎಲ್ಲಾ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಯು ನಮ್ಮ ದೃಷ್ಟಿಯಲ್ಲಿಲ್ಲದೆ ಇದ್ದರೆ ಒಂದು ಯೋಗ್ಯ ನೆಲೆಯು ಉಂಟಾಗಲಾರದು

'ಇಂದು ಶಕ್ತಿಯು ಆಳುವುದೆಂಬ ತತ್ವವು ಇಡೀ ಜಗತ್ತಿನಲ್ಲಿ ಅನ್ಯೋನ್ಯ ದ್ವೇಷ, ಅಸೂಯೆ, ಕಲಹಗಳಿಗೆ ಕಾರಣವಾಗಿದೆ ಈ ತತ್ವವು ಹೋದರೆ ಮಾತ್ರ ನಮಗೆ ಕ್ಷೇಮವಾದೀತು

ಎಲ್ಲಾ ರಾಷ್ಟ್ರಗಳ ವಿಶ್ವಾಸವನ್ನು ಪಡೆದು ಅಂತರ್ ರಾಷ್ಟ್ರೀಯ ಶಾಂತಿ ಸ್ಥಾಪನೆಯೇ ನಮ್ಮ ಧ್ಯೇಯವಾಗಿದೆ

ಬ್ರಿಟಿಷರ ಧ್ಯೇಯವು ಹೀಗೆ ದ್ವಿಮುಖವಾಗಿದೆ ಪಶುಶಕ್ತಿಯನ್ನು ಎದುರಿಸುವುದು, ಮತ್ತು ಜಗತ್ತಿನ ಶಾಂತಿಗಾಗಿ ರಚನಾತ್ಮಕ ಸಾಧನೆಯನ್ನು ಮಾಡುವುದು ಪೋಲೆಂಡ್, ಟರ್ಕಿ, ಗ್ರೀಸು ದೇಶಗಳೊಡನೆ ನಾವು ಈ ಉದ್ದೇಶಕ್ಕಾಗಿ ಒಪ್ಪಂದಮಾಡಿದ್ದೇವೆ ರಕ್ಷಣ ಒಪ್ಪಂದದ ಮಾತುಕತೆಯೂ ಜಯಶೀಲವಾದೀತೆಂದು ನಮಗೆ ಭರವಸೆಯಿದೆ ಈ ಎಲ್ಲಾ ನಮ್ಮ ಭರವಸೆಯ, ಹಾಗೂ ಸೈನ್ಯಶಕ್ತಿಯ ಹಿಂದೆ ಬ್ರಿಟಿಷ್ ಜನಾಂಗದ ಹೃದಯವಿದೆ''

ಬ್ರಿಟಿಷರ ಶಕುನಿ ತಂತ್ರವನ್ನು ಜರ್ಮನಿಯು ಖಂಡಿಸುತ್ತದೆ!

ಲಾರ್ಡ್ ಹೆಲಿಫಾಕ್ಸರ ಭಾಷಣವನ್ನು ಜರ್ಮನ್ ಪತ್ರಿಕೆಗಳು ಅಬದ್ಧವೆಂದು ಖಂಡಿಸುತ್ತಿವೆ ಬ್ರಿಟನಿನ ವಿದೇಶೀಯ ಧೋರಣೆಯು ತಮಗೆ ಅತ್ಯಂತ ಸ್ಪಷ್ಟವಾಗಿ ತಿಳಿದಿದೆಯೆಂದೂ, ಲಾರ್ಡ್ ಹೆಲಿಫಾಕ್ಸರ ಭಾಷಣವು ಕೇವಲ ಕಲ್ಪನಾಜಾಲವೆಂದೂ, ಟೊಳ್ಳು ಮಾತೆಂದೂ, ಕೇವಲ ಶಕುನಿ ತಂತ್ರವೆಂದೂ ಜರ್ಮನಿಯು ಜರೆದಾಡುತ್ತಿದೆ

ಸ್ವಾಸ್ಟ್‌ಬರ್ಗ್ ಮತ್ತು ಕಾರ್ಲ್ಸುಹೇಗಳ ಸಮೀಪ ಜರ್ಮನ್ ಸೈನ್ಯಗಳು ಬಂದಿರುವುದಾಗಿ ವಾರ್ತೆ! ಫ್ರಾನ್ಸಿನ ಗಡಿಗೆ ಜರ್ಮನಿಯು ಧಾಳಿಯಿಡಲು ಯತ್ನಮಾಡುವುದೇ?

ಸರ್ವಾಧಿಕಾರಿಗಳ ಗುಪ್ತ ಭೇಟಿ!

ಕಳೆದ ಆದಿತ್ಯವಾರ ಸರ್ವಾಧಿಕಾರಿಗಳಾದ ಹಿಟ್ಲರ್ ಮತ್ತು ಮುಸಲೋನಿಗಳು ಗುಪ್ತ ಭೇಟಿ ಮಾಡಿರುವುದಾಗಿ ತಿಳಿದುಬರುತ್ತದೆ. ಮಹಾಯುದ್ಧವಾಗುವ ಸಂದರ್ಭದಲ್ಲಿ ಇಟಲಿ ಮತ್ತು ಜರ್ಮನಿಯ ಸೈನ್ಯಗಳು ಒಂದೇ ಆಗಿ ಎದುರಿಸುವ ಸಿದ್ಧತೆ ಮಾಡಬೇಕೆಂಬುದು ಭೇಟಿಯ ಕಾರಣವಂತೆ.

ಪೋಲೆಂಡಿನ ನಿರ್ಣಯ

ಪೋಲೆಂಡಿನ ಪ್ರೆಸಿಡೆಂಟರು ತಮ್ಮ ಭಾಷಣವೊಂದರಲ್ಲಿ, ಪೋಲೆಂಡಿನ ಆರ್ಥಿಕ ಅಭಿವೃದ್ಧಿಗೆ ಡಾನ್ಸಿಂಗಿನ ಪ್ರಾಮುಖ್ಯತೆಯನ್ನು ವಿವರಿಸಿ ಕಳೆದ ಅನೇಕ ಶತಮಾನಗಳಿಂದ ಡಾನ್ಸಿಂಗಿಗೆ ಪೋಲೆಂಡಿನ ನಿಕಟ ಸಂಬಂಧವಿರುವುದಾಗಿಯೂ ಹೇಳಿದರು

ಜರ್ಮನಿಯ ಯುದ್ಧ ನೀತಿ

ಯೂರೋಪಿನ ಪ್ರತಿಯೊಂದು ರಾಷ್ಟ್ರವೂ ಭವಿಷ್ಯತ್ತಿನ ಕುರಿತು ಕುತೂಹಲದಿಂದ ಕಾಯುತ್ತಿದ್ದಾವೆ ಜರ್ಮನಿಯ ಚಲನವಲನಗಳನ್ನು ಪೋಲೆಂಡು ತೆರೆದ ಕಣ್ಣಿನಿಂದ ನೋಡುತ್ತಿದೆ.

ಹಿಟ್ಲರನು ಬಹಳ ಬುದ್ಧಿವಂತಿಕೆಯಿಂದ ತನ್ನ ಕಾರ್ಯವನ್ನು ಸಾಧಿಸಲು ಯತ್ನಿಸುತ್ತಾನೆ. ತನ್ನ ಸೈನ್ಯವನ್ನು ಅಲ್ಲಿ ಸೇರಿಸುವುದರಿಂದ ಪೋಲೆಂಡಿಗೆ ಎದುರು ಡಾನ್ಸಿಂಗಿನ ಜನತೆಯು ಯುದ್ಧಹೂಡುವಂತೆ ಮಾಡುವುದು ಆತನ ಉಪಾಯವಾಗಿ ತಿಳಿದಿದೆ ಬ್ರಿಟನು ಫ್ರಾನ್ಸುಗಳು ಪೋಲೆಂಡಿನ ಪಕ್ಷವಾಗಿ ನಿಂತು ಯುದ್ಧ ಹೂಡುವ ತಮ್ಮ ನಿರ್ಧಾರವನ್ನು ವ್ಯಕ್ತಪಡಿಸಿವೆ.

ಹರ್ ಹಿಟ್ಲರನು ಡಾನ್ಸಿಂಗನನ್ನು ಇದೇ ತಿಂಗಳಲ್ಲಿ ಸಂದರ್ಶಿಸಲಿರುವನೆಂದೂ ತಿಳಿದಿದೆ.

ಗುಪ್ತ ವೇಷದಿಂದ ಜರ್ಮನರನೇಕರು ಡಾನ್ಸಿಂಗರೊಡನೆ ಬೆರೆತಿದ್ದಾರೆ. ಹಿಟ್ಲರನು ಅಲ್ಲಿ ಒಂದು ಭಾಷಣ ಮಾಡಲಿರುವನೆಂದೂ, ಆ ಮೇಲೆ ಆ ನಗರವು ಹಿಟ್ಲರನ ಸ್ವಾಧೀನವಾಗುವುದೆಂದೂ ಅಧಿಕಾರಿವರ್ಗದ ಅಭಿಪ್ರಾಯ ಪಡುತ್ತಿದೆ.

ಆದರೆ ಹಿಟ್ಲರನ ಈ ಯೋಜನೆಯನ್ನು ಪೋಲೆಂಡು ನಡೆಸಬಿಡುವುದು ಸಾಧ್ಯವಿಲ್ಲ.

ಜಪಾನಿಯರ ಎದೆಯ ಮೇಲೆ ಹಸಿವಿನ ತಾಂಡವ ನೃತ್ಯ

ಸುಂದರ ತರುಣಿಯರು ಕಾಮಾಗ್ನಿಗೆ ಆಹುತಿ

ಜರ್ಮನಿಯ ಅಧೋಗತಿ!!

ಜಪಾನು ಒಂದು ಕಡೆಯಿಂದ ಚೈನಾವನ್ನು ನುಂಗುತ್ತಾ ಹೋಗುತ್ತಿದ್ದರೆ, ಜಪಾನಿನ ಒಳಗಿನ ಅವಸ್ಥೆಯೇನು? ಎಂದು ತಿಳಿಯುವುದು ಕುತೂಹಲದ ವಿಷಯವಾಗಿದೆ ಆ ಕುರಿತು ನ್ಯೂ ರಿಪಬ್ಲಿಕ್ ಪತ್ರಿಕೆಯಲ್ಲಿ ಮಿ| ಬ್ರೌನ್ ಅಲೆನ್ನರು ಹೀಗೆಂದು ಬರೆಯುತ್ತಾರೆ

"ಜಪಾನಿನ ಆಂತರ್ಯವು ಬಹಳವಾಗಿ ಕೆಟ್ಟುಹೋಗಿದೆ. ಅಲ್ಲಿನ ಕೂಲಿಗಾರರು ಅನ್ನಬಟ್ಟೆಗಳಿಲ್ಲದೆ ಬಹಳ ಕಷ್ಟಕ್ಕೀಡಾಗಿರುತ್ತಾರೆ ತಮ್ಮ ಹೊಟ್ಟೆಯ ಹಸಿವನ್ನು ತೀರಿಸಲಾರದೆ, ಅವರು ಸ್ವಾಧೀನವಿದ್ದ ಸೊತ್ತನ್ನು ಎಲ್ಲಾ ಮಾರಾಟಮಾಡಿ, ಊಟ ಮಾಡಬೇಕಲ್ಲದೆ ಇನ್ನೂ ಅನೇಕ ಪಾಪ ಕೆಲಸಗಳಿಗೂ ಕೈಯಿಕ್ಕುತ್ತಾರೆ

"ಜಪಾನಿನ ಉತ್ತರ ಭಾಗದ ಜಿಲ್ಲೆಯ ಕೆಲಸಗಾರರನೇಕರು ಉದ್ಯೋಗವಿಲ್ಲದೆ, ಆದಾಯವಿಲ್ಲದವರಾಗಿದ್ದಾರೆ ಮಾಡಿದ ವಸ್ತುಗಳು ಮಾರಾಟವಾಗುವುದಿಲ್ಲ ಹೀಗಾಗಿ ಅವರು ದಾರಿದ್ರ್ಯದಿಂದ ನಿರಂತರ ನರಳಬೇಕಾಗಿ ಬಂದದರಿಂದ ಅನೇಕರು ತಮ್ಮ ಸುಂದರಿಯರಾದ ಪುತ್ರಿಯರನ್ನು ಕಾಮುಕರ ಭೋಗಲಾಲಸೆಗಾಗಿ ಮಾರಾಟ ಮಾಡುತ್ತಿದ್ದಾರೆ ಹೀಗೆ ಹೆಣ್ಣು ಹುಡುಗಿಯರಿದ್ದವರ ಒಂದ ವರ್ಷಗಳ ಜೀವನೋಪಾಯವನ್ನಾದರೂ ಪಡೆಯುವರು ಹೊಟ್ಟೆಗೆ ಅನ್ನವಿಲ್ಲದಾಗ ನೀತಿಯ ವಿಚಾರ ಅವರಲ್ಲಿ ಹೇಗೆ ಬರಬೇಕು? ಹೆಚ್ಚಾಗಿ ೧೩, ೧೪ ವರ್ಷದ ಹುಡುಗಿಯರನ್ನು ಕಾಮುಕರಿಗೆ ಬಲಿದಾನ ಮಾಡುತ್ತಾರೆ ಒಬ್ಬಳಿಗೆ ೨೦೦ ಅಥವಾ ೩೦೦ ಯೆನ್ನುಗಳ ಬೆಲೆ (ಇಲ್ಲಿನ ೩೫೦ ಅಥವಾ ೬೫೦ ರೂಪಾಯಿಗಳಿಗೆ ಸರಿ) ಸಿಗುವವು

ಇದು ಮಾತ್ರವಲ್ಲದೆ ಹೊಟ್ಟೆಗೆ ಆಹಾರವಿಲ್ಲದೆ ಇರುವುದರಿಂದ ಸಾಂಕ್ರಾಮಿಕ ರೋಗಗಳು ಅವರನ್ನು ಬಿಟ್ಟಿರುವುದಿಲ್ಲ ಹೆಚ್ಚಾಗಿ ಜನರು ಕ್ಷಯರೋಗಕ್ಕೆ ತುತ್ತಾಗುತ್ತಾರೆ ವಾಂತಿಭೇದಿ ಮೊದಲಾದ ರೋಗಗಳ ಸರ್ವತ್ರ ಹರಡಿವೆ.

ಇಂದಿರವ ಎಲ್ಲಾ ಕಚ್ಚಾ ಮಾಲುಗಳನ್ನು ಉಪಯೋಗಿಸಿದ ಮೇಲೆ ಇಂದು ಉದ್ಯೋಗದಲ್ಲಿರುವ ೧,೩೦೦,೦೦೦ ಮಂದಿ ನಿರುದ್ಯೋಗದಲ್ಲಿ ನರಳಬೇಕಾಗುವುದು. ಇಲ್ಲಿ ಕೂಲಿಗಾರರು ಮುಷ್ಕರಗಳನ್ನೆಬ್ಬಿಸುತ್ತಿದ್ದಾರೆ ಗತಿಸಿದ ಆರು ತಿಂಗಳ ೪೯೩ ಮುಷ್ಕರಗಳಲ್ಲಿ ೩೫,೦೦೦ ಕೆಲಸಗಾರರು ಭಾಗವಹಿಸಿದರು

ಹೀಗೆ ನಿರುದ್ಯೋಗ-ನಿರಾಹಾರಗಳು ಹೆಚ್ಚಾಗಿರುವುದರಿಂದ ಚೈನಾ ಜಪಾನು ಯುದ್ಧವು ಬೇಗನೇ ಬೇರೊಂದು ತಿರವಾಗುವ ಸಂಭವವಿದೆ ಚೈನಾದಲ್ಲಿ ಮಿಲಿಯಾಂತರ ಮಂದಿ ಸಿಪಾಯಿಗಳು ತುಂಬಬಹುದು ಇವರನ್ನು ಸಾಕುವುದೇ ಜಪಾನು ಸರಕಾರಕ್ಕೆ ಸಾಧ್ಯವಿರುವುದಿಲ್ಲ ಚಿಯಾಂಗ ಕೈಶೇಕರ ಇಂದಿನ ಯುದ್ಧಕ್ರಮದಿಂದ ಖಂಡಿತವಾಗಿಯೂ ಚೈನಾವನ್ನು ಜಪಾನಿಗೆ ಬೇಗನೇ ಆಕ್ರಮಿಸುವುದೂ ಸಾಧ್ಯವಿಲ್ಲ ಹಾಗಾಗಿ ಜಪಾನೀ ಸೈನಿಕರಲ್ಲಿ ಅಸಂತೃಪ್ತಿಯುಂಟಾಗಿ ಮಹಾ ಗೊಂದಲವು ಆಗುವುದೇ ಎಂದು ನಿರೀಕ್ಷಿಸಲಾಗಿದೆ."

ನೋಟೀಸು

ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ

ಶ್ರೀ ದೇವಸ್ಥಾನದ ಬಾಬ್ತು ಜಮಾ ಇರುವ ಸುಮಾರು ಎಂಟು ಸೇರು ಚಿನ್ನವನ್ನು ಎಳೆಂಟು ಲೋಟುಗಳನ್ನಾಗಿ ವಿಂಗಡಿಸಿ ಒಂದೊಂದಾಗಲೀ ಅಥವಾ ಅಗತ್ಯಕಂಡಲ್ಲಿ ಕಮ್ಮಿ ಸಂಖ್ಯೆಯ ಲೋಟುಗಳಿಂದಾಗಲೀ ಇದೇ ಬರುವ ತಾ ೬-೮-೧೯೩೯ನೇ ರವಿವಾರ ಬೆಳಿಗ್ಗೆ ಘಂಟೆ ೧೦ಕ್ಕೆ ಶ್ರೀ ದೇವಸ್ಥಾನದ ವಸಂತ ಮಂಟಪದಲ್ಲಿ ಬಹಿರಂಗವಾಗಿ ಏಲಂ ಕರೆಯಲಾಗುವುದು

೧) ಏಲಮಿಗೆ ನಿಲ್ಲುವ ಅಪೇಕ್ಷೆಯುಳ್ಳವರು ಏಲಂ ಕರೆಯುವ ಮುಂಚಿತವಾಗಿ ಏಲಂ ಕರೆಯುವ ಆ ಲೋಟಿನ ಚಿನ್ನ ತೊಲೆ ೧ರ ರೂ ೩-೦-೦ರಂತೆ ಪ್ರಥಮತ ಭಂಡಾರದಲ್ಲಿ ಡಿಪೋಜಿಟ್ ಇಡತಕ್ಕದ್ದು ಅಂಥವರು ಮಾತ್ರ ಏಲಮಿಗೆ ನಿಲ್ಲಲಿಕ್ಕೆ ಹಕ್ಕುಳ್ಳವರಾಗಿರುತ್ತಾರೆ

೨) ಏಲಮಿಗೆ ವಹಿಸಿಕೊಂಡು ಏಲಂ ಕಾಯಂ ಮಾಡಲ್ಪಟ್ಟ ಕೂಡಲೇ ಆ ಲೋಟಿನ ಹಣದಲ್ಲಿ ಆತನ ಬಾಬ್ತು ಡಿಪೋಜಿಟ್ ಇದಬಹುದಾದ ಹಣ ಕಳೆದು ಮಿಕ್ಕ ಏಲಮಿನ ಪೂರಾ ಹಣ ಆಗಲೇ ಭಂಡಾರಕ್ಕೆ ಪಾವತಿಮಾಡಿ ಆ ಲೋಟಿನ ಚಿನ್ನವನ್ನು ಪಡೆಯತಕ್ಕದ್ದು ತಪ್ಪಿದ್ದಲ್ಲಿ ದರಖಾಸ್ತುದಾರನ ನಷ್ಟ ಸಂಭವದ ಮೇಲೆ ಪುನಃ ಏಲಂ ಮಾಡಲಾದೀತು ಮತ್ತು ಆತನ ಬಾಬ್ತು ಭಂಡಾರದಲ್ಲಿ ಡಿಪೋಜಿಟು ಇರುವ ಹಣವನ್ನು ಅತನಿಗೆ ವಾಪಾಸು ತೆರಲಾಗಲಿಕ್ಕಿಲ್ಲ

೩) ಏಲಂ ಕಾಯಂ ಮಾಡುವ ಯಾ ಮಾಡದೆ ಇರುವ ಯಾ ಅಗತ್ಯಕಂಡಲ್ಲಿ ಏಲಂ ನಿಲ್ಲಿಸುವ ಹಕ್ಕು ಭಂಡಾರದ ಕಡೆಯಿಂದ ಕಾದಿಟ್ಟಿದೆ

The Trustees,
Sri Venkatramana Temple Mulki
Mulki
೫-೭-೩೯

WANTED.

Applications are invited for the post of a manager (Parupathyagar) for the Sri Venkatramana Temple Mulki on a salary of Rs 75 per month

The applicants should have completed the age of 25 years and must belong to the Gowd Saraswath Brahmin community

The applicant if selected should furnish before taking up his appointment, security either in cash or of immovable property for a sum of Rs 2500

Applications should be accompaied by True copies of testimonials, if any nd ashould reach the Trustees on or before 7th August 1939

For further particulars apply to

The Trustees,
Sri Venktramana Temple,
Mulki.

Mulki
5-7-39

ಸ್ವದೇಶಾಭಿಮಾನಿ

ತಾರೀಖು ೭—೭—೧೯೩೯

ಶಾಂತಿಸಾಧನೆಯೆ?

ಡಾನ್ಜಿಗು ಇಂದು ಪಾಶ್ಚಾತ್ಯ ರಾಷ್ಟ್ರಗಳ ರಣರಂಗವಾಗುವ ಸಂಭವವೊದಗಿದೆ. ಜರ್ಮನಿಯು, ಯಾರ ಬೆದರಿಕೆಗಳಿಗೂ ಅಂಜದೆ, ಭರದಿಂದ ಮುನ್ನುಗ್ಗುತ್ತಿರುವುದನ್ನು ನೋಡಿ, ಚೆಂಬರ್ಲೆನ್ನರು ವಿಹ್ವಲಗೊಂಡಂತಿದೆ ಪೋಲೆಂಡಿಗೆ ಡಾನ್ಜಿಗನ್ನು ಬಿಟ್ಟುಬಿಡಲು ಸಾಧ್ಯವಿಲ್ಲದಿದ್ದರೆ, ಹಿಂದಿನ ಒಪ್ಪಂದದಂತೆ ಬ್ರಿಟನು ಜರ್ಮನಿಗೆ ಎದುರಾಗಿ, ಪೋಲೆಂಡಿಗೆ ನೆರವಾಗಿ ನಿಲ್ಲಲೇ ಬೇಕು ಇಂತಹ ಉಭಯಸಂಕಟದಲ್ಲಿ ಚೆಂಬರ್ಲೆನರು 'ಲೋಕಶಾಂತಿಗಾಗಿ ಮತ್ತು ಆತ್ಮರಕ್ಷಣೆಗಾಗಿ' ಎಂಬಂತೆ ಬ್ರಿಟಿಷರನ್ನು ಯುದ್ಧಕ್ಕೆ ಸಜ್ಜುಗೊಳಿಸುತ್ತಿದ್ದಾರೆ ಹೆಲಿಪಾಕ್ಸರು ಜರ್ಮನಿಗೆ ಕೊಟ್ಟ 'ಕಡೆಯ ನುಡಿ'ಯು 'ಚಾರಿತ್ರಿಕ ಮಹತ್ವ'ವುಳ್ಳದೆಂದು ಬ್ರಿಟಿಷ್ ಪತ್ರಿಕೆಗಳ ಪ್ರಚಾರ! ಲೋಕಶಾಂತಿ, ಆತ್ಮರಕ್ಷಣೆ, ನ್ಯಾಯ, ಇವುಗಳು ಚೆಂಬರ್ಲೆನರ ಹಾಡಿನ ಪಲ್ಲವಿ!

ಅನ್ಯ ಉಪಾಯವಿಲ್ಲದೆ, ಬ್ರಿಟನು ಜರ್ಮನಿಯೊಡನೆ ಯುದ್ಧಕ್ಕಿಳಿಯಬೇಕಾದಲ್ಲಿ ಸರ್ವಸಿದ್ಧತೆಯನ್ನು ಮಾಡುವುದು ಅವಶ್ಯವಾದುದು ಆದರೆ ಇಂತಹ ಮಹಾ ಘಟನೆಯು ನ್ಯಾಯಮೂಲವಾದದ್ದು ಎಂದು, ನ್ಯಾಯಕ್ಕಾಗಿಯೇ ಯುದ್ಧ ಹೂಡುವುದೆಂದೂ ಹೇಳುವ ಚೆಂಬರ್ಲೆನರ ಹೇಳಿಕೆಯು ಪಿಪಶಾಸ್ಪದವಾಗಿದೆ

ನ್ಯಾಯವಾದ ಕಾರಣವನ್ನು ಮುಂದಿಟ್ಟು ಬ್ರಿಟನು ಯುದ್ಧಕ್ಕಿಳಿದಲ್ಲಿ ಇದೀ ಸಾಮ್ರಾಜ್ಯದ ಹಾಗೂ ಶಾಂತಿಪ್ರಿಯ ರಾಷ್ಟ್ರಗಳ ಸಹಾಯವನ್ನು ಪಡೆಯಬಹುದೆಂಬ ಚೆಂಬರ್ಲೆನರ ಅಭಿಪ್ರಾಯವು ಯಥಾರ್ಥವಿದೆ ಆದರೆ ಮಾತಿನಲ್ಲಿ ಮಾತ್ರ ನ್ಯಾಯ, ಕೃತಿಯಲ್ಲಿ ಅನ್ಯಾಯವು ಒಡೆದು ಕಂಡಲ್ಲಿ ಇತರ ರಾಷ್ಟ್ರಗಳ ಸಹಾನುಭೂತಿಯನ್ನು ಆಶಿಸುವುದು ಅಸಾಧ್ಯ

ಬ್ರಿಟಿಷರ ವಸಾಹತುಗಳಲ್ಲಿ ಅಶಾಂತಿಯ ಕೋಲಾಹಲವೇ ಉಂಟಾಗಿದೆ! ಎಲ್ಲೆಡೆಗಳಲ್ಲಿಯೂ ಅನ್ಯಾಯವೆಂಬ ಕೂಗು ಕೇಳಬರುತ್ತಿದೆ ಹಿಂದೂದೇಶವಂತೂ ಕಳೆದ ಅರ್ಧ ಶತಮಾನದಿಂದಲೂ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಲೆಯಿಂದ ಬಿಡುಗಡೆ ಹೊಂದಲು ಯತ್ನಮಾಡುತ್ತಿದೆ

ಚೆಂಬರ್ಲೇನರು ಯಾವ ಘನವಾದ ಗುರಿಯನ್ನು ಮುಂದಿಟ್ಟುಕೊಂಡು ಮಹಾಸಮರಕ್ಕೆ ಬ್ರಿಟನನ್ನು ಸಜ್ಜುಗೊಳಿಸುತ್ತಾರೋ ಅದೇ ಉದ್ದೇಶಕ್ಕಾಗಿ ಹೋರಾಡುತ್ತಿರುವ, ತಮ್ಮ ಸ್ವಾಧೀನತೆಯಲ್ಲಿರುವ ವಸಾಹತುಗಳ ವಿಷಯವಾಗಿ ಅವರು ತಟಸ್ಥರಾಗಿರುವುದು ಆಶ್ಚರ್ಯವಾಗಿ ತೋರುತ್ತದೆ! ಲೋಕಶಾಂತಿಯ ನಿಜವಾದ ಮೂಲ ಕಾರಣವನ್ನು ತಮ್ಮಲ್ಲಿಯೇ ಬಚ್ಚಿಟ್ಟುಕೊಂಡಿರುವ ಚೆಂಬರ್ಲೇನರ ಇಂದಿನ ಅಸ್ಪಷ್ಟ ಧೋರಣೆಯಲ್ಲಿ ಅವರು ತಮ್ಮ ಸಾಮ್ರಾಜ್ಯದ ಪ್ರಜೆಗಳ ಸಹಕಾರವನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ

ಚೆಂಬರ್ಲೇನರು ನಿಜವಾಗಿಯೂ ಜಗತ್ತಿನಲ್ಲಿ ಎಲ್ಲಾ ರಾಷ್ಟ್ರಗಳೂ ತಮ್ಮ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಇಟ್ಟುಕೊಂಡು ಶಾಂತಿಯಿಂದಿರಬೇಕೆಂದು ಬಯಸುವುದಿದ್ದರೆ, ತಮ್ಮ ಸ್ವಾಧೀನದಲ್ಲಿರುವ ಹಲವು ವಸಾಹತುಗಳಿಗೆ ನ್ಯಾಯವನ್ನು ಕೊಡಲು ತಡಮಾಡಬಾರದು 'ಮಾತಿನಂತೆ ಕೃತಿ'ಯೆಂಬ ವಿಶ್ವಾಸವನ್ನು ಗಳಿಸದ ವಿನಹ, ಈ ಶಾಂತಿ ಮಂತ್ರದ ಸಫಲತೆಯನ್ನು ಕಾಣುವ ಸಂಭವವಿಲ್ಲ.

ಹಾಗಾಗಿ, ಚೆಂಬರ್ಲೇನರ ಹೇಳಿಕೆಯಲ್ಲಾಗಲಿ, ಹೆಲಿಪಾಕ್ಸರ 'ಕಡೆಯ ನುಡಿ'ಯಲ್ಲಾಗಲಿ ಅಂತಹ ಚಾರಿತ್ರಿಕ ಮಹತ್ವ'ವೇನೂ ಕಂಡು ಬರುವುದಿಲ್ಲ. ತಮ್ಮ ಆತ್ಮರಕ್ಷಣೆಗಾಗಿ ಬ್ರಿಟನು ಈ ದುರಂತವನ್ನು ತಪ್ಪಿಸಿಕೊಳ್ಳುವುದು ಅಸಾಧ್ಯವಾಗಿ ಆದಕ್ಕಾಗಿ ಈ ಹೇಳಿಕೆಯನ್ನು ಹೊರಡಿಸಿದ್ದೆಂದು ವಿಚಾರಿಸುವುದು ಬ್ರಿಟಿಷ್ ರಾಜನೀತಿಯನ್ನು ತಿಳಿದವರಿಗೆ ಹೊಸವಿಷಯವಲ್ಲ, ಇಂತಹುದೇ ವಿಷಮ ಸಂದರ್ಭಗಳು ಹಿಂದೆ ಒದಗಿದ್ದಾಗ, ಬ್ರಿಟನು ತನ್ನ ತಪ್ಪಿನಿಂದ ಅಮೇರಿಕಾ, ಐರ್ಲೆಂಡುಗಳ ವಸಾಹತುಗಳನ್ನು ಕಳಕೊಂಡಿರುತ್ತದೆ! ಇಂದಿನ ಅವಸ್ಥೆಯಿಂದಲೂ ಬ್ರಿಟನರು ಅಂತಹುದೇ ಒಂದು ಅವಗಡವನ್ನು ನಿರೀಕ್ಷಿಸುವುದು ಸಂಭವವಿರುತ್ತದೆ ನ್ಯಾಯಕ್ಕಾಗಿ ಹೋರಾಡುವವರಲ್ಲಿಯೇ ಅನ್ಯಾಯವಿರುವುದು ಅತ್ಯಂತ ಹೇಯವಾದ ವಿಚಾರ

ಸ್ವೀಕಾರ-ವಿಮರ್ಶೆ

ಪಂಚ-ಕಲ್ಯಾಣ:—ಲೇಖಕರು — ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರು M. L. C -ಕ್ರಾನ್ ¼ ಆಕಾರದ 80 ಪುಟಗಳು ಬೆಲೆ(?) ಮೂಡಬಿದರೆ ಶ್ರೀಮಠದಿಂದ ಪ್ರಕಾಶಿತವಾಗಿದೆ

ಧರ್ಮಜಿಜ್ಞಾಸುಗಳಾದವರಿಗೆ ಇದು ಅತ್ಯಂತ ಅಮೂಲ್ಯಗ್ರಂಥವು ಧರ್ಮಾಭಿಮಾನಿಗಳಾದ ಶ್ರೀ ಡಿ. ಮಂಜಯ್ಯ ಹೆಗ್ಡೆಯವರು ತಮ್ಮ ಸುಂದರವಾದ ಶೈಲಿಯಿಂದ ಜೈನ ಧರ್ಮದ ತಿರುಳನ್ನು ತಿಳಿಸುವ ಸಲುವಾಗಿ ಈ ಚಿಕ್ಕ ಹೊತ್ತಿಗೆಯಲ್ಲಿ, ತೀರ್ಥಂಕರರ 'ಪಂಚಕಲ್ಯಾಣ'ದ ಪರಿಚಯವನ್ನು ಕೊಟ್ಟಿದ್ದಾರೆ

ಲೇಖಕರು ಮುನ್ನುಡಿಯಲ್ಲಿಯೇ ಜೈನ ಧರ್ಮದ ಅಹಿಂಸಾ ನೀತಿಯನ್ನೂ, ವಿಜ್ಞಾನ ಯುಗದಲ್ಲಿಯೂ, ತಾತ್ವಿಕವಾದ ಧರ್ಮಜಿಜ್ಞಾಸೆಯ ಅವಶ್ಯಕತೆಯನ್ನು ಸೂತ್ರರೂಪವಾಗಿ ಸ್ಪಷ್ಟಗೊಳಿಸಿದ್ದಾರೆ.

ಜೈನಾಗಮ ರೀತ್ಯಾ ಲೋಕ ಪುಷ್ಟು ಜೀವಸ್ವರೂಪಗಳನ್ನು ತಿಳಿಸಿ, ನಾನಾ ಲೋಕಗಳ ನಾನಾ ಜೀವಗಳ ಸ್ಥಿತಿಗತಿಗಳನ್ನು ವಿವರಿಸಿ ಆತ್ಮನು ನಿರ್ಮಲವಾದ ಜ್ಞಾನಶೋಧನೆಯಿಂದ 'ಬೆಸುಗೆಯ ಬಂಗಾರವು ಶುದ್ಧ ಕಾಂಚನವಾಗು'ವಂತೆ ಪರಮಾತ್ಮನಾಗುವುದೆಂಬುದು ಪುಸ್ತಕದ ಆದಿಯಲ್ಲಿ ವರ್ಣಿತವಾಗಿದೆ

ಕರ್ಮಕ್ಷಯವನ್ನು ಮಾಡಿದ ಉತ್ತಮ ಜೀವಿಗಳು 'ತೀರ್ಥಂಕರ'ರಾಗುವ ವಿಷಯ ಅವರ ಪೂರ್ವಭವಾವಳಿಯ ಪುಣ್ಯ ಕರ್ಮಗಳು ಅವರಿಗೆ ದೇವ ಮಾನುಷರಿಂದ ಸಲುವ ಮನ್ನಣೆ ಇವುಗಳ ಇದರಲ್ಲಿ ಸೂಚಿತವಾಗಿವೆ ತೀರ್ಥಂಕರನು ಯಾವ ಪುಣ್ಯ ಮಾತೆಯ ಪವಿತ್ರ ಗರ್ಭದಲ್ಲಿ ಜನಿಸುವನೋ, ಆ ಮಾತೆಯು ಕಾಣುವ ಷೋಡಶ ಸ್ವಪ್ನಗಳ ವಿವರ, ಆ ಸುಮುಹೂರ್ತದಲ್ಲಿ ಇಂದ್ರಾದಿ ದೇವತೆಗಳೇ ಬಂದು ನೆರವೇರಿಸುವ 'ಗರ್ಭಾವತರಣ' ಕಲ್ಯಾಣ, ಆ ಮೇಲೆ ಹೆತ್ತ ಬಾಲಕನಿಗೆ ಯಥಾಕ್ರಮವಾಗಿ ಆಗುವ ಜನ್ಮಾಭಿಷೇಕ ಕಲ್ಯಾಣ, ವಿರಕ್ತನಾದವನಿಗೆ ಸಲುವ ಪರಿನಿಷ್ಕ್ರಮಣ ಕಲ್ಯಾಣ ಬಳಿಕ ದಿವ್ಯಜ್ಞಾನವನ್ನೊಂದಿದ ತೀರ್ಥಂಕರ ಸ್ವಾಮಿಯನ್ನು ಪೂಜೆ ಮಾಡುವ ಕೇವಲ ಜ್ಞಾನಕಲ್ಯಾಣ ಕಟ್ಟಕಡೆಗೆ ಮೋಕ್ಷಾವಸ್ಥೆಯಲ್ಲಿ ದೇವತೆಗಳ ಸೇವೆ, ಆನಂದನಾಟಕಂ ನಡೆಯುತ್ತಾ ಮಾಡು ... ನಿರ್ವಾಣ ಕಲ್ಯಾಣ ಈ ಐದು ಪಂಚಕಲ್ಯಾಣಗಳ ಸ್ಪಷ್ಟ ವಿವರವು ಸ್ಪಷ್ಟವಾಗಿ ಕೊಡಲ್ಪಟ್ಟಿದೆ

ಹಿಂದಿನ ... ಈಗ ... ಇಪ್ಪತ್ತ ಮೂರನೇ ತೀರ್ಥಂಕರರಾದ ಶ್ರೀ ಪಾರ್ಶ್ವನಾಥ ಸ್ವಾಮಿಗಳ ಪೂರ್ವಾಭವಾವಳಿಯನ್ನು ಪಂಚಕಲ್ಯಾಣವನ್ನು ಕೊಟ್ಟಿರುತ್ತದೆ

ಸುಪ್ರಸಿದ್ಧ ಚಿತ್ರಗಾರ ... ಶ್ರೀ ಹೆಗ್ಡೆಯವರು ... ಚಿತ್ರ ... ಚಿತ್ರಗಳು ಪುಸ್ತಕದ ... ಮತ್ತಷ್ಟು ಹೆಚ್ಚಿಸಿವೆ ಲೇಖಕರ ... ಸಾಮರ್ಥ್ಯ ... ದೃಶ್ಯಗಳ ... ಕನ್ನಡ ... ಮನ್ನಣೆಯೊದಗಿಸಿದೆ

... ಶ್ರೀ ಹೆಗ್ಡೆಯವರ ... ಸೇವೆಯು ... ಹಾರೈಸುತ್ತೇವೆ

ಕಯ್ಯಾರ

ಮಾನ್ಯ ಮಂತ್ರಿ ಗೋಪಾಲ ರೆಡ್ಡಿಯವರ ಜಿಲ್ಲಾ ಸಂಚಾರ

ಜುಲೈ ತಿಂಗಳ ೭ನೇ ತಾರೀಖಿಗೆ ನಮ್ಮ ಜಿಲ್ಲೆಗೆ ಬರಲಿರುವ ಸ್ಥಳೀಯ ಸಂಸ್ಥೆಗಳ ಮಂತ್ರಿಗಳಾದ ಮಾನ್ಯ ಶ್ರೀ ಬಿ ಗೋಪಾಲ ರೆಡ್ಡಿಯವರ ಸಂಚಾರದ ಕಾರ್ಯಕ್ರಮ ಈ ಕೆಳಗಿನಂತಿದೆ —

೮ನೇ ಶನಿವಾರ

೮-೪೫ಕ್ಕೆ ಮಲಬಾರ್ ಎಕ್ಸ್‌ಪ್ರೆಸ್ ಮೂಲಕ ಆಗಮನ ೫ ೩೦ರಿಂದ ೬ ೩೦ ಜಿಲ್ಲಾ ಬೋರ್ಡ್ 'ನೌಕರರ ಸಂಘದ ಸ್ವಾಗತ' ಜಿಲ್ಲಾ ಬೋರ್ಡಿನ ಹೊಸ ಸಭಾ ಭವನದ ಉದ್ಘಾಟನ ಉಪಹಾರ ೬-೩೦ರಿಂದ ೭-೩೦ ಮುನ್ಸಿಪಲ್ ಆಫೀಸು ಶ್ರೀ ಅಲ್ಬುಕರ್ಕರ ಭಾವಚಿತ್ರ ಅನಾವರಣ

೯ನೇ ಆದಿತ್ಯವಾರ

ಬೆಳಿಗ್ಗೆ ೮-೩೦ ಕಾರ್ಕಳಕ್ಕೆ ಪ್ರಯಾಣ ೯ ೩೦ರಿಂದ ೧೦-೧೫ ಮೂಡಬಿದರೆ, ಸಾರ್ವಜನಿಕ ಸಭೆ, ವಾಚನಾಲಯ ಸಂದರ್ಶನ ೧೦ ೩೦ರಿಂದ ೧೧-೧೫ ಕಾರ್ಕಳ, ೧೨ ಶ್ರೀ ಕೆ ಎಸ್ ಪ್ರಭುಗಳ ಉಚಿತವಾಗಿ ಕೊಟ್ಟ ಹೆಂಗೆ ಆಸ್ಪತ್ರೆಯ ಉದ್ಘಾಟನೆ ೧ರಿಂದ ೨-೧೫ ಉಪಹಾರ-ವಿರಾಮ ೨-೧೫ರಿಂದ ೨ ೪೫ ಭೇಟಿ ೩ ಉಡುಪಿಗೆ ಪ್ರಯಾಣ ೪-೩೦ ಮುನಿಸಿಪಲ್ ಕೌನ್ಸಿಲಿನ ವೇದನ ೪-೪೫ ಭುಜಂಗ ಪಾರ್ಕಿನ ಶಿಲಾಸ್ಥಾಪನೆ ವ್ಯಾಯಾಮ ಶಾಲೆ ರೇಡಿಯೋ ಹೌಸ್ ದೇವಳ ಇತ್ಯಾದಿಗಳ ಸಂದರ್ಶನ ೬-೩೦ ಸಾರ್ವಜನಿಕ ಸಭೆ (ಮುನ್ಸಿಪಲ್ ಮೈದಾನ್ ಶಾಲೆಯಲ್ಲಿ) ಉಡುಪಿಯಲ್ಲಿ ವಿಶ್ರಾಂತಿ

೧೦ನೇ ಸೋಮವಾರ

ಮುಂಜಾನೆ ೮-೩೦ರಿಂದ ೯ರ ತನಕ ಭೇಟಿ ೯-೩೦ಕ್ಕೆ ಉಡುಪಿಯಿಂದ ಉದ್ಯಾವರ, ಕಾಪು, ಯರ್ಮಾಳು, ಪಡುಬಿದ್ರೆಗಳ ಮಾರ್ಗವಾಗಿ ಪಡುಬಿದ್ರೆ ಪಂಚಾಯತ್ ಬೋರ್ಡಿನ ಮಾನಪತ್ರ, ೧೨ಕ್ಕೆ ಹೈಸ್ಕೂಲಿನ ಹೊಸ ಕಟ್ಟಡದ ಶಂಕುಸ್ಥಾಪನೆ ೩ಕ್ಕೆ ಮೂಡಬಿದರೆ ಮಾರ್ಗವಾಗಿ ಮಂಗಳೂರಿಗೆ ಪ್ರಯಾಣ ೫ಕ್ಕೆ ಮಂಗಳೂರಿನ ಫೆಲಿಕ್ಸ್ ಪೈ ಬಜಾರಿನ ವಸ್ತು ಸಂಗ್ರಹಾಲಯದ ಸಂದರ್ಶನ ೬-೩೦ಕ್ಕೆ ಸ್ಟೂಡೆಂಟ್ಸ್ ಫೆಡರೇಶನಿನಲ್ಲಿ ಭಾಷಣ ೬ರಿಂದ ೭ ಕೆನರಾ ಹೈಸ್ಕೂಲು ಮಹಾತ್ಮಗಾಂಧಿಯವರ ಮೂರ್ತಿಯ ಅನಾವರಣ ವಸ್ತುಸಂಗ್ರಹಾಲಯದ ನಾಮಕರಣ ಪ್ರೊಕೇಶನ್ ಹಾಲ್‌ನ ಶಂಕುಸ್ಥಾಪನೆ

೧೧ನೇ ಮಂಗಳವಾರ

ಮುಂಜಾನೆ ೮ರಿಂದ ೯ರ ತನಕ ಭೇಟಿ ಮದ್ರಾಸ್ ಪ್ರಾಂತಿಕ ಲೋಕಲ್ ಬೋರ್ಡ್ ನೌಕರರ ಮನವಿ ೯-೩೫ಕ್ಕೆ ಕಾಸರಗೋಡಿಗೆ ಪ್ರಯಾಣ ೧೦-೩೦ ಖಾನ್ ಬಹದ್ದೂರ್ ಮುಹಮ್ಮದ್ ಚಮ್ನಾಡ್ ಸಾಹೇಬ್ ಬಹದ್ದೂರ್ ಪಂ ಯಲ ... ದಲ್ಲಿ ಉಪಹಾರ ... ೧ರಿಂದ ೨-ಪಂಚಾಯತ್ ಬೋರ್ಡಿನ ಮಾನಪತ್ರ ಸಾರ್ವಜನಿಕ ಸಭೆ ೧೨ರಿಂದ ೧-೪೫ ಉಪಹಾರ ವಿರಾಮ ೨-೮ ಕಾಞಂಗಾಡಿಗೆ ಪ್ರಯಾಣ ೨-೩೦ ಪಂಚಾಯತ್ ಬೋರ್ಡು ಅಧ್ಯಕ್ಷರುಗಳ ಉಪಹಾರ, ಸಾರ್ವಜನಿಕ ಸಭೆ ೫-೨೦ ನೀಲೇಶ್ವರಕ್ಕೆ ಕಾರಿನಲ್ಲಿ ಪಯಣ ೫ ೩೫ ಕಡಪಿನ ಬಳಿ ಸ್ವಾಗತ ಸಾರ್ವಜನಿಕರ ಮಾನಪತ್ರ ಸಾರ್ವಜನಿಕರ ಸಭೆ ಭೇಟಿ ೮ ೩೦ ಡಿನ್ನರು

೧೨ನೇ ಬುಧವಾರ

ಬೆಳಿಗ್ಗೆ ೮ ... ಚೆರ್ವತ್ತೂರಿಗೆ ಪ್ರಯಾಣ ... ಚೆರ್ವತ್ತೂರ್‌ನಲ್ಲಿ ಸ್ವಾಗತ ಹಾಗೂ ಸಂವಾದ ಸಂಭಾಷಣೆಗಳು ೧೨-೨೦ ಮದ್ರಾಸಿಗೆ ಪ್ರಯಾಣ

ಹೊಸ ವಾರ್ತೆ

ಡಾನ್ಜಿಗ್ಗಿನ ಅದೃಷ್ಟವು ನಿಶ್ಚಯವಾದಂತೆ ಹಿಟ್ಲರನು ತನ್ನ ಎಲ್ಲಾ ಹಂಚಿಕೆಗಳನ್ನೂ ಪೂರ್ಣಗೊಳಿಸಿದ್ದಾನೆ! ಎಂದ ಸ್ವಾಧೀನತೆಯು ಸುದ್ದಿ ಹೊರಬರಲಿದೆಯೆಂಬುದು ಮಾತ್ರ ಕಾತುರದ ನಿರೀಕ್ಷೆಯಾಗಿದೆ ಚೆಂಬರ್ಲೆನರ ... ಗನ ಸದ್ದಿಯಿಂದ ಚಡಪಡಿಸುತ್ತಿದ್ದಾರೆ!

★

ಟ್ಸಿನ ಟ್ಸಿನ ವಿಷಯದಲ್ಲಿ ಜಪಾನೀಯರು ಬಹಳ ಜೋರಾಗಿದ್ದಾರೆ! ಬ್ರಿಟಿಷ್ ದರಕಾಸ್ತಿನಲ್ಲಿ ಜಪಾನೀಯರ ನಿಯಮಗಳು ಅತ್ಯಂತ ಕಠಿನವಾಗಿವೆ

★

ಮಂಗೋಲಿಯೋ ಗಡಿಯಲ್ಲಿ ರಷ್ಯಾ ಜಪಾನ ಸೈನ್ಯಗಳಿಗೆ ಕದನವಾಗುತ್ತದೆ

★

ಕೊಲಂಬೋದಲ್ಲಿ ಸಿಲೋನ್ ಇಂಡಿಯನ್ ಕಾಂಗ್ರೆಸ್ ಎಂಬ ಹೊಸ ಸಂಸ್ಥೆಯು ಸ್ಥಾಪಿತವಾಯಿತು

★

ಎ ಐ ಸಿ ಸಿ ಜನರಲ್ ಸೆಕ್ರೆಟರಿಗಳು ಎಲ್ಲಾ ಪ್ರಾಂತ ಕಾಂಗ್ರೆಸು ಕಮಿಟಿಗಳಿಗೂ ಕಾಂಗ್ರೆಸಿನಲ್ಲಿರುವ ಅಕ್ರಮಗಳನ್ನು ಸರಿಪಡಿಸುವರೆ ಸರ್ಕ್ಯುಲರ್ ಕಳುಹಿಸಿರುವರು

★

ಕಾಂಗ್ರೆಸ್ ಸೋಶಿಯಲಿಸ್ಟ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ಐಕ್ಯ ಸಂಭಾಷಣೆಯು ಫಲಕಾರಿಯಾಗಲಿಲ್ಲವೆಂದು ತಿಳಿಯುತ್ತದೆ

★

ಯೂರೋಪಿನ ವಿಜ್ಞಾನ ಸಂಘಗಳ ಸಂದರ್ಶನಕ್ಕಾಗಿ ಹೋಗಿದ್ದ ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ. ನಿರೇಶಚಂದ್ರ ಗುಹರವರ ಅಮೇರಿಕ ಕೆನಡಾ ಇಂಗ್ಲೆಂಡ ಮೊದಲಾದ ಕಡೆಗಳಲ್ಲಿ ವಿಜ್ಞಾನದ ಪ್ರಗತಿಯನ್ನು ಮತ್ತು ಸಂಘಟಿತ ಉದ್ಯೋಗಗಳನ್ನು ತಿಳಿದು ಹಿಂದೂದೇಶಕ್ಕೆ ಬಂದಿರುವರು

★

ಡಾನ್ಜಿಗಿನಲ್ಲಿರುವ ಆರೋಗ್ಯವಂತರಾದ ಜರ್ಮನಿಯ ಹೆಂಗುಸರು ಮತ್ತು ಗಂಡುಸರು ರಾಷ್ಟ್ರದ ರಕ್ಷಣೆಗಾಗಿ ಶಸ್ತ್ರಸಿದ್ಧರಾಗಿರಬೇಕಾಗಿ ಜರ್ಮನಿಯು ಆಜ್ಞೆ ಮಾಡಿದೆ

★

ಡಾನ್ಜಿಗ್ಗಿನಲ್ಲಿ ಜರ್ಮನಿಯ ಸೈನ್ಯವು ಹೆಚ್ಚುತ್ತಿರುವ ಕಾರಣ ಫ್ರಾನ್ಸ್, ಪೋಲೆಂಡ್, ಇಂಗ್ಲೆಂಡು ಸಂಯುಕ್ತ ಕಾರ್ಯ ಧೋರಣೆಯು ವಿಚಾರಿಸಲ್ಪಡುತ್ತದೆ

★

ಆಂಗ-ಫ್ರೆಂಚ್ ಒಪ್ಪಂದದ ಕೋರಿಕೆಗೆ ರಷ್ಯದ ಉತ್ತರವನ್ನು ಎಂ ಮೊಲೊಟೋವರು ಇತ್ತಿರುವರು ಎಂ ಬೊನೆಟರು ಅದರ ಕುರಿತು ವಿಚಾರಿಸುತ್ತಿರುವರಂತೆ ಮೊಲೊಟೋವರು ಕೆಲವು ಸಂಗತಿಗಳ ಕುರಿತ ಹೆಚ್ಚಿನ ವಿವರವನ್ನು ಕೇಳಿರುವರಾಗಿ ತಿಳಿಯುತ್ತದೆ

ಸ್ವಾತಂತ್ರ್ಯದ ಯಜ್ಞಕುಂಡದಲ್ಲಿ ಧಗಧಗಿಸಿದ ಆಹುತಿ!

ದಿವಂಗತ ವಿ. ವಿ. ಎಸ್ ಅಯ್ಯರ್

[ಒಂದು ಕ್ರಾಂತಿಕಾರೀ ಜೀವನದ ಅದ್ಭುತ ರಮ್ಯ ಚರಿತ್ರೆ]

ಸರಕಾರದ ವಕ್ರದೃಷ್ಟಿಗೆ ಬಿದ್ದು ಜೀವನದಲ್ಲಿ ಯಮಯಾತನೆಗಳನ್ನು ಅನುಭವಿಸಿದ ಶ್ರೀ. ವಿ. ವಿ. ಸುಬ್ರಹ್ಮಣ್ಯ ಅಯ್ಯರರ ರೋಮಾಂಚನವನ್ನುಂಟುಮಾಡುವ ಉಜ್ವಲ ಜೀವನ ಕಥೆ! ಅವರ ಕ್ರಾಂತಿಕಾರಿ ಜೀವನವೂ ಉಜ್ವಲ ಸಾಹಿತ್ಯ ಸೇವೆಯೂ ಈಗಲೂ ಭಾರತೀಯರಿಗೆ ಅನುಕರಣೀಯವೂ ಆದರ್ಶವೂ ಆಗಿದೆ.

ಶರ್ಮದೇವಿಯ ರೈಲ್ವೆ ನಿಲ್ದಾಣದಿಂದ ಒಂದು ಮೈಲು ದೂರದಲ್ಲಿರುವ ಆ ಮಾವಿನ ತೋಪು ಶ್ರೀ. ವಿ. ವಿ. ಸುಬ್ರಹ್ಮಣ್ಯ ಅಯ್ಯರರ ಸ್ನೇಹ ಸಂಪರ್ಕಗಳಿಂದ ಪರಮಪಾವನವಾಯಿತು. ಈಗ ಅದು ನಿರ್ಜನವಾಗಿದೆ. ಅದರೊಳಗಿನ ಗುಡಿಸಲುಗಳು ಹಾಳುಬಿದ್ದಿವೆ. ಜನಸಂಚಾರವು ಎಲ್ಲಾದರೂ ಅಪರೂಪವಾಗಿ ಆಗುತ್ತದೆ. ಆದರೂ ಅದೇ ಮಾವಿನ ತೋಪು ಜನಸಮ್ಮರ್ದವಾಗಿ, ದೇಶದ ಭಾಗ್ಯನಿರ್ಮಾಣ ಮಾಡುವ ನಾನಾ ವಿಧ ಕಾರ್ಯ ಚಟುವಟಿಕೆಗಳ ಕೇಂದ್ರಸ್ಥಾನವಾಗಿದ್ದ ಒಂದು ಸಮಯವಿದ್ದಿತು. ಶ್ರೀ ವಿ. ವಿ ಸುಬ್ರಹ್ಮಣ್ಯ ಅಯ್ಯರರ ಗುರುಕುಲ ಆಶ್ರಮಸ್ಥಾಪನೆಯೂ ಅಲ್ಲೇ ಆಗಿದ್ದಿತು ಪರಂತು ಆಶ್ರಮವು ಬಹುಕಾಲ ಉಳಿಯಲಿಲ್ಲ. ಶ್ರೀ ಸುಬ್ರಹ್ಮಣ್ಯ ಅಯ್ಯರರು ಹೇಗೆ ಮಿಂಚು ಮಿಂಚಿದಂತೆ ಬಹು ಸ್ವಲ್ಪ ಕಾಲ ಉಳಿದು ಅಳಿದರೋ, ಹಾಗೆ ಅವರ ಆಶ್ರಮವೂ ಚಿರಕೀರ್ತಿಯನ್ನು ಮಾತ್ರ ಉಳಿಸಿ ಅಳಿಯಿತು.

ಪ್ರಾರಂಭ ಜೀವನ

ಶ್ರೀ ಸುಬ್ರಹ್ಮಣ್ಯ ಅಯ್ಯರರು ಮೊದಲು ತಿರುಚಿನಾಪಳ್ಳಿಯಲ್ಲಿ ವಕೀಲರಾಗಿದ್ದರು ಮತ್ತೆ ಅಲ್ಲಿಂದ ರಂಗೂನಿಗೆ ಹೋಗಿ ಕೆಲಕಾಲ ವಕೀಲಿಕಿ ಮಾಡಿಕೊಂಡಿದ್ದರು ಆದರೆ ಅವರು ಮಹತ್ವಾಕಾಂಕ್ಷಿಗಳು ತಮ್ಮ ಸಾಧಾರಣ ಜೀವನದಿಂದ ತೃಪ್ತರಾಗದೆ, ಬೆರಿಸ್ಟರಿ ಪರೀಕ್ಷೆಯನ್ನು ಕೊಡುವುದಕ್ಕೋಸ್ಕರ ವಿಲಾಯತಿಗೆ ಹೋದರು. ಆ ಸಮಯ ಬೆರಿಸ್ಟರ ಸಾವರ್ಕರರು ಕೂಡ ಇಂಗ್ಲಾಂಡಿನಲ್ಲಿದ್ದರು ಶ್ರೀ ಅಯ್ಯರರು ಸಾವರ್ಕರರಿಂದ ತುಂಬಾ ಪ್ರಭಾವಿತರಾದರು ದೇಶಸೇವೆ, ದೇಶಸ್ವಾತಂತ್ರ್ಯಗಳು ಶ್ರೀ ಅಯ್ಯರರ ಜೀವನದ ಲಕ್ಷ್ಯಗಳಾದವು ಅವರೂ ಶ್ರೀ ಸಾವರ್ಕರರೂ ಮತ್ತು ಆಗ ಐ ಸಿ ಎಸ್ ಪರೀಕ್ಷೆಯನ್ನು ಕೊಡಲಿಕ್ಕೆ ಹೋಗಿ ಮತ್ತೆ ಅದ್ಭುತಕ್ರಾಂತಿಕಾರರಾಗಳೆಂದು ಪ್ರಸಿದ್ಧರಾದ ಲಾಲಾ ಹರದಯಾಳರೊಂದಿಗೆ ಕೂಡಿ ಭಾರತದ ಬಂಧವಿಮೋಚನೆಯ ಉಪಾಯವನ್ನು ಚಿಂತಿಸತೊಡಗಿದರು. ರಕ್ತರಂಜಿತ ಕ್ರಾಂತಿಯಿಂದಲ್ಲದೆ, ದೇಶದ ಸ್ವಾತಂತ್ರ್ಯವನ್ನು ಸಂಪಾದಿಸುವುದು ಅಸಾಧ್ಯವೆಂಬ ಅವರ ಆಗಿನ ಖಚಿತ ಅಭಿಪ್ರಾಯವಾಗಿದ್ದಿತು. ಆದ್ದರಿಂದ ರಕ್ತರಂಜಿತಕ್ರಾಂತಿಯ ಮೂಲಕ ಭಾರತ ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕೆ ಬೆರಿಸ್ಟರ ಸಾವರ್ಕರರು ವಿಲಾಯತಿಯಲ್ಲಿ ಸ್ಥಾಪಿಸಿದ ಅಭಿನವ ಭಾರತ ಸಂಘದ ಉಪಾಧ್ಯಕ್ಷರಾಗಿ ಕೆಲಸಮಾಡಿದರು

ಸರಕಾರದ ವಕ್ರದೃಷ್ಟಿ

ಶ್ರೀ ವಿ ವಿ ಸುಬ್ರಹ್ಮಣ್ಯ ಅಯ್ಯರರು ಮುಂದೆ ಬೆರಿಸ್ಟರರಾಗಿ ವಿಲಾಯತಿಗೆ ತೆರಳಿದ್ದರಾದರೂ, ಅಲ್ಲಿಯ ಸ್ವತಂತ್ರ ವಾತಾವರಣ ಮತ್ತು ಬೆರಿಸ್ಟರ ಸಾವರ್ಕರ, ಹರದಯಾಳರಂಥ ಕ್ರಾಂತಿಕಾರಿಗಳ ಸಂಪರ್ಕದ ಪರಿಣಾಮವಾಗಿ ಅವರೂ ಉಗ್ರಪಕ್ಷದ ಪ್ರಮುಖರೆನ್ನಿಸಿಕೊಂಡರು. ಈ ವಿಚಿತ್ರ ಪರಿವರ್ತನದಿಂದ ಸರಕಾರದ ವಕ್ರದೃಷ್ಟಿಯು ಅವರ ಮೇಲೆ ಬೀಳುವುದು ಸಹಜವಾಗಿದ್ದಿತು. ವಿಲಾಯತಿಯಲ್ಲಿರುವಾಗ ಶ್ರೀ ಸುಬ್ರಹ್ಮಣ್ಯ ಅಯ್ಯರರು ಮಾಡಿದ ಕಾರ್ಯಗಳು ಅಸಾಧಾರಣವಾಗಿದ್ದುವು ಅವುಗಳಿಗೆ ಕಲ್ಪನಾತೀತ ಸಾಹಸ ಇಚ್ಛಾಶಕ್ತಿಗಳು ಬೇಕಾಗಿದ್ದುವು ಆದರೂ ಶ್ರೀ ಅಯ್ಯರರು ಅವುಗಳನ್ನು ಮಾಡಿ ಮುಗಿಸಿ ಧನ್ಯರಾದರು.

ವಿದೇಶ ಸಂಚಾರ

ಸರಕಾರವು ಶ್ರೀ. ಅಯ್ಯರರನ್ನು ಕೈದು ಮಾಡಲಿಕ್ಕೆ ವಾರಂಟನ್ನು ಕಳುಹಿಸಿದ್ದಿತು. ಇದು ಸೂಕ್ಷ್ಮದರ್ಶಿಗಳೂ ದೂರದರ್ಶಿಗಳೂ ಆದ ಅಯ್ಯರರಿಗೆ ಹೇಗೋ ತಿಳಿದು, ಅವರು ಇಂಗ್ಲಾಂಡಿನಿಂದ ಯೂರೋಪಿಗೆ ಪಲಾಯನ ಮಾಡಿದರು. ಆಗ ಅವರು ಪಟ್ಟ ಕಷ್ಟಗಳು ವರ್ಣನಾತೀತವಾಗಿದ್ದುವು. ದೇಶಕ್ಕಾಗಿ ಅವರು ಎಲ್ಲವನ್ನೂ ಸಹಿಸಿಕೊಂಡರು. ಸರಕಾರದ ಗೂಢಚಾರರು ಎಲ್ಲಿ ಅವರನ್ನು ಹಿಡಿಯಲಿಕ್ಕೆ ಎಂಥ ಬಲೆಯನ್ನು ಒಡ್ಡಿದರೆಂದು ತಿಳಿಯುವುದು ಕಠಿನವಾಗಿದ್ದಿತು ಹೆಜ್ಜೆ ಹೆಜ್ಜೆಗೆ ಅವರು ಆಪತ್ತುಗಳೊಂದಿಗೆ ಹೋರಾಡಬೇಕಾಗಿದ್ದಿತು ಆದರೆ ಹೇಗೆ ಹೇಗೆ ವಿಘ್ನ ವಿಡಂಬರಗಳೂ ಆಪತ್ತು ಕಷ್ಟಗಳೂ ಬೆಳೆಯತೊಡಗಿದವೋ ಹಾಗೆ ಹಾಗೆ ಅವರ ತರುಣರಕ್ತವು ಉತ್ಸಾಹದಿಂದ ಕುದಿಯತೊಡಗಿತು ಅವರು ಹೊಸ ಹೊಸ ಕಷ್ಟಸಂಕಷ್ಟಗಳಿಗೆ ಎದೆಕೊಡಲು ಸಿದ್ಧರಾದರು ಒಮ್ಮೆ ಅವರು ಗೂಢಚಾರರ ಬಲೆಯಲ್ಲಿ ಬಿದ್ದು ಬಿದ್ದು ತಪ್ಪಿಸಿಕೊಂಡಿದ್ದರು. ಶ್ರೀ ಅಯ್ಯರರು ತೀಕ್ಷ್ಣ ಬುದ್ಧಿಯವರಲ್ಲದವರಾಗುತ್ತಿದ್ದರೆ ಆ ಬಲೆಯಿಂದ ತಪ್ಪಿಸಿಕೊಳ್ಳುವುದು ಅಸಾಧ್ಯವಾಗುತಿತ್ತು 'ಸ್ವಾಮಿ, ವಿ ವಿ ಎಸ್ ಅಯ್ಯರರೆಂದರೆ ತಾವೆಯೋ? ತಮಗೊಂದು ತಂತಿ ಇದೆ' ಎಂದೊಬ್ಬ ಗೂಢಚಾರನು ಬಂದು ಅವರು ಇಂಗ್ಲಾಂಡಿನಿಂದ ಯೂರೋಪಿಗೆ ಹಡಗು ಹತ್ತಲಿಕ್ಕಿದ್ದಾಗ ಹೇಳಿದ. ಅವರು ಗೂಢಚಾರನೆಂದೂ ತನ್ನ ಕೈಗೆ ವಾರಂಟು ತಂದಿರುವನೆಂದೂ ಅಯ್ಯರರು ಶೀಘ್ರದಲ್ಲಿ ತಿಳಕೊಂಡರು 'ಅಯ್ಯಾ' ವಿ ವಿ ಎಸ್. ಅಯ್ಯರ ನಾನಲ್ಲ! ನಾನೊಬ್ಬ ಪಂಜಾಬಿ!' ಎಂದು ಹೇಳಿ ಅವರ ಆ ಗೂಢಚಾರನ ಕಣ್ಣಿಗೆ ಮಣ್ಣು ಹಾಕಿ ಅವನನ್ನು ಹಿಂತಿರುಗಿಸಿ ಬಿಟ್ಟರು

ಮುಸಲ್ಮಾನ ಫಕೀರ

ಮತ್ತೊಮ್ಮೆ ಶ್ರೀ ಅಯ್ಯರರು ವೇಷ ಮರೆಸಿಕೊಂಡ ಕಾರಣ ಕಳೆಯಬೇಕಾಗಿದ್ದಿತ್ತು ಅವರು ಫಿನ್ಲ್ಯಾಂಡ್, ಮಧ್ಯಯೂರೋಪದ ರಾಜ್ಯಗಳನ್ನು ಸಂಚರಿಸುತ್ತಾ ಈಜಿಪ್ಟಿಗೆ ಹೋದರು. ಅಲ್ಲಿ ಅಯ್ಯರರು ಮುಸಲ್ಮಾನ ಫಕೀರನ ವೇಷದಲ್ಲಿದ್ದರು ಆ ಮೇಲೆ ಅವರು ಕಲ್ಕತ್ತದ ಒಬ್ಬ ಶೇಠಿಯಂತೆ ವೇಷ ಹಾಕಿಕೊಂಡು ಕೊಲಂಬೊಕ್ಕೆ ಬಂದು ಅಲ್ಲಿ ಕೆಲವು ದಿನಗಳನ್ನು ಕಳೆದರು ಅಲ್ಲಿಯೂ ಅವರನ್ನು ಗೂಢಚಾರರು ಹಿಂಬಾಲಿಸಿದ್ದರು ಆದರೆ ವೇಷಧಾರಿ ಅಯ್ಯರರನ್ನು ಗುರುತಿಸುವುದು ಗೂಢಚಾರರಿಗೆ ಅಸಾಧ್ಯವಾಯಿತು ಮತ್ತೆ ಅವರು ಕೊಲಂಬೊದಿಂದ ಪಾಂಡಿಚೆರಿಗೆ ಹೋಗಿ ಅಲ್ಲಿ 'ಎಸ್ ಎಸ್ ಆಚಾರ್ಯ'ರೆಂಬ ಹೆಸರಿನಿಂದ ಸ್ವಲ್ಪ ಸಮಯ ಕಳೆದರು

ಆಶ್ರಮ ಸ್ಥಾಪನೆ

ಇಷ್ಟಾದರೂ ಅವರ ಲಕ್ಷ್ಯವು ದೇಶಸೇವೆಯ ಕಡೆಗೇ ಇದ್ದಿತು. ಅವರು ತಮ್ಮ ಉಚ್ಚ ಲಕ್ಷ್ಯದಿಂದ ಕಿಂಚಿನ್ಮಾತ್ರವಾದರೂ ಪತಿತರಾಗಿರಲಿಲ್ಲ ಮಾತ್ರ, ಸ್ವದೇಶಕ್ಕೆ ಮರಳಿದ ತರುವಾಯ ಅವರ ಹಿಂಸಾಪರ ಧೋರಣೆಯಲ್ಲಿ ಸಂಪೂರ್ಣ ಪರಿವರ್ತನವಾಗಿದ್ದಿತು ಅವರು ಮಹಾತ್ಮಾಗಾಂಧಿಯವರ ಪ್ರಸಿದ್ಧ ಶಿಷ್ಯರಾದರು ಒಮ್ಮೆಗೆ ರೈಲು ಪ್ರಯಾಣ ಮಾಡುತಿದ್ದಾಗ ಅಕಸ್ಮಾತ್ತಾಗಿ ಅವರ ದೃಷ್ಟಿಯು ಸೌತ್ ಇಂಡಿಯನ ರೈಲ್ವೆ ಲೈನಿನ ಮೇಲಿರುವ ಶರ್ಮದೇವಿ ಸ್ಟೇಶನಿಗೆ ಒಂದು ಮೈಲು ದೂರದ ಆ ಮಾವಿನ ತೋಪಿನ ಕಡೆಗೆ ಹೊರಳಿತು ಅದು ನಿಜವಾಗಿಯೂ ಒಂದು ಗುರುಕುಲ ಆಶ್ರಮ ಸ್ಥಾಪನೆಗೆ ಅನುಕೂಲ ಸ್ಥಳವಾಗಿದ್ದಿತು. ಅಲ್ಲಿಯೇ ಅವರು ಆಶ್ರಮ ಮಾಡಿಕೊಂಡು ಇರತೊಡಗಿದರು. ಅನೇಕ ವಿದ್ಯಾರ್ಥಿಗಳು ಅವರ ಬಳಿಗೆ ಅಭ್ಯಾಸಕ್ಕೆ ಬರುತಿದ್ದು, ಅವರಿಂದ ಪ್ರಭಾವಿತರಾಗುತಿದ್ದರು. ಸರಕಾರದ ದೃಷ್ಟಿ ಈ ಆಶ್ರಮದ ಮೇಲೂ ಇದ್ದಿತೆಂಬುದರಿಂದ ಶ್ರೀ ಅಯ್ಯರರು ಅಲ್ಲಿ ಎಂಥ ಮಹತ್ವಪೂರ್ಣ ಕಾರ್ಯಗಳನ್ನು ಮಾಡುತಿದ್ದರೆಂಬುದನ್ನು ತಿಳಕೊಳ್ಳಬಹುದು.

ಸಾಹಿತಿಕ ಜೀವನ

ಶ್ರೀ ಅಯ್ಯರರು ಅದ್ಭುತ ರಾಜಕೀಯ ಕೆಲಸಗಾರರಾಗಿದ್ದರು ಮಾತ್ರವಲ್ಲ, ಪ್ರಸಿದ್ಧ ಸಾಹಿತಿಗಳಾಗಿಯೂ ಇದ್ದರು. ಲ್ಯಾಟಿನ, ಫ್ರೆಂಚ, ಗ್ರೀಕ ಭಾಷೆಗಳಲ್ಲಿಯೂ ಅವರಿಗೆ ಪಾಂಡಿತ್ಯವಿದ್ದಿತು. ಇಂಗ್ಲೀಷಿಗೆ ಪರಿವರ್ತಿಸಿದ ಅವರ 'ಕುರಲು' ಗ್ರಂಥವು ಅವರಿಗೆ ಸಾಹಿತ್ಯಕ್ಷೇತ್ರದಲ್ಲಿ ಗಣನೀಯ ಸ್ಥಾನವನ್ನು ತಂದುಕೊಟ್ಟಿತು. ಬಳ್ಳಾರಿ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತಿದ್ದಾಗ ಅವರು 'ಕಂಬನ' ಎಂಬ ತಮಿಳು ಕವಿಯ ವಿಷಯವಾಗಿ ಆಲೋಚನಾತ್ಮಕ ಪ್ರಬಂಧಗಳನ್ನು ಬರೆದರು. ಈ ಪ್ರಬಂಧಗಳ ಅವರ ಅಸಾಧಾರಣ ವಿದ್ವತ್ತೆಯನ್ನು ಸೂಚಿಸುತ್ತವೆ ಶ್ರೀ ಅಯ್ಯರರು ತಮಿಳಿನಲ್ಲಿ ಗುರು ಗೋವಿಂದಸಿಂಹ, ಗುರು ಅರ್ಜುನಸಿಂಹರ ಚರಿತ್ರೆಗಳನ್ನು ಸುಲಲಿತ ಶೈಲಿಯಲ್ಲಿ ಬರೆದು ತಮಿಳಿನ ಸೇವೆಯನ್ನು ಮಾಡಿದ್ದಾರೆ.

ಬಲಿದಾನ

ಅಯ್ಯರರ ಜೀವನವು ದೇಶಸೇವೆ ಸಾಹಿತ್ಯ ಸೇವೆಯಲ್ಲಿಯೇ ಕಳೆಯಿತು. ೧೯೨೫ನೇ ಇಸವಿಯ ಜೂನ್. ತಿಂಗಳ ೩ನೇ ತಾರೀಕು. ಅವರ ಏಕಮಾತ್ರ ಮಗಳು ಸುಭದ್ರೆ ಆಶ್ರಮ ಸಮೀಪದಲ್ಲಿರುವ ಕಲ್ಯಾಣಿ ಜೋಗಿನ ಹತ್ತಿರ ಸ್ನಾನ ಮಾಡುತ್ತ ಅವಳು ಪ್ರವಾಹಕ್ಕೆ ಸಿಕ್ಕಿದ್ದಳು. ಅವಳನ್ನು ಬದುಕಿಸುವುದಕ್ಕೋಸ್ಕರ ಶ್ರೀ. ಅಯ್ಯರರೂ ಪ್ರವಾಹದಲ್ಲಿ ಧುಮುಕಿದರು. ಆದರೆ ಪ್ರವಾಹದ ವೇಗವು ಅತಿಶಯವಾಗಿದ್ದಿತು ಆದ್ದರಿಂದ ಅದರೊಳಗಿನಿಂದ ಹೊರ ಬರುವುದು ಅಸಾಧ್ಯವಾಯಿತು. ಮಗಳು ಮತ್ತೆ ತಂದೆ—ಇಬ್ಬರೂ ಪ್ರವಾಹದ ವೇಗಕ್ಕೆ ಬಲಿಯಾದರು.

ಅಸಾಧಾರಣ ಪುರುಷರು

ಶ್ರೀ. ಅಯ್ಯರರು ಅಸಾಧಾರಣ ಪುರುಷರಾಗಿದ್ದರು ಅವರ ಸ್ಫೂರ್ತಿ ಉತ್ಸಾಹ ಶಕ್ತಿ ಸಾಮರ್ಥ್ಯಗಳು ಅನುಪಮವಾಗಿದ್ದುವು, ಅಲೌಕಿಕವಾಗಿದ್ದುವು 'ಹಿಂದುಗಳಲ್ಲಿ ಅವರು ಅಪ್ರತಿಮ ಹಿಂದುಗಳಾಗಿದ್ದರು ಅವರು ಸ್ವರ್ಗವಾಸಿಗಳಾದ್ದರಿಂದ ಹಿಂದೂ ಜಾತಿಯು ಹಿಂದು ಸಂಸ್ಕೃತಿಯ ಒಂದು ಸುಂದರ ಕೃತಿಯನ್ನು ಕಳಕೊಂಡಂತಾಯಿತು ಜನತಾರೂಪಿ ಜನಾರ್ಧನನ ಸೇವೆಯು ಅವರ ಜೀವನದ ಆದರ್ಶವಾಗಿದ್ದಿತು. ಎಂದು ಮೊದಲಾಗಿ ಬೆರಿಸ್ಟರ ಸಾವರ್ಕರರು ಅವರನ್ನು ಶ್ಲಾಘಿಸಿರುವರು ಅವರು ಹೇಗೆ ಧರ್ಮಾಭಿಮಾನಿಗಳಾಗಿದ್ದರೋ ಹಾಗೆ ಅವರು ದೇಶಾಭಿಮಾನಿಗಳೂ ಆಗಿದ್ದರು ಧರ್ಮಾಭಿಮಾನ ದೇಶಾಭಿಮಾನಗಳು ಅವರಲ್ಲಿ ಬಹಳ ಸ್ನೇಹದಿಂದ ಕೂಡಿದ್ದುವು.

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳ ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು

S. U. N. & Co.,

Silk Merchants,

Chaukhamba, BENARES CITY

ಈಗಿನ ತರಹ(ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು. 18 ಮೊಳದ $2\frac{1}{4}$ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ. 45ರಿಂದ 160. ಸಾಧಾರಣತರದ್ದು 18 ಮೊಳ ಸಣ್ಣ ಬುಟ ಶೀರೆಗಳು ರೂ. 35ರಿಂದ ರೂ. 55. ಪಡಲು ಸಾದಾ ಶೀರೆ 18 ಮೊಳ ರೂ. 32ರಿಂದ ರೂ. 65. ಉದ್ದ ಮೊಳ 16, ಅಗಲ $2\frac{1}{4}$ ರೂ. 20ರಿಂದ 35ರ ವರೆಗೆ ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾಗುತ್ತದೆ.

ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ,

ಚೌಕಂಬಾ, ಬೆನರಿಸ್ ಸಿಟಿ.

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದ ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ ಎಲ್ಲವರ ರುಚಿಗೆ ತಕ್ಕದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧. ಸಾರಥಿ ನಸ್ಯ 1 ವೀಸಕ್ಕೆ ರೂ. 3-8-0 ನವಿಲಿನ ಮಾರ್ಕು ಸಾರಥಿ ನಸ್ಯ 1 ವೀಸಕ್ಕೆ ರೂ. 3-0-0

(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ.

ಎಡ್ರೆಸು:—

ಎ ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು.

ನಗರದ ನವ ನಾಯಕರು

[೩ನೇ ಪುಟದಿಂದ ಮುಂದುವರಿದುದು]

ಒಳ್ಳೇ ಸೀರೆಕೆಯೊಂದು ತಿಳಿದ ಗವಯಿಗಳು 'ಕುಮಾರಯ್ಯ ೨ ರೂಪಾಯಿಯಿದ್ದರೆ ಕೊಡಿರಿ. ಇವತ್ತು ಎಲ್ಲಿಯೂ ಮುಕ್ಕಾಲು ಸಿಗಲಿಲ್ಲ. ಈ ಸಂಗೀತವನ್ನೂ ಕಥೆಯಾಗಿ ಮಾರಬೇಕಾದ ಕಾಲವಿದು — ನೋಡಿ ಹಾಲಿನವಳಿಗೆ ೫ ರೂಪಾಯಿ ಬಾಕಿ. ಎರಡಾದರೂ ಕೊಟ್ಟರೆ ಅರಿಷ್ಟ ನಿವಾರಣೆಯಾಗುವುದೋ ನೋಡುತ್ತೇನೆ' ಎಂದನು. ಕುಮಾರಯ್ಯನ ಹತ್ತಿರ ಎರಡು ರೂಪಾಯಿ ಕೇಳಿದ ತಕ್ಷಣ ಇರುವುದಾಗಿದ್ದರೆ ಕೌನ್ಸಿಲು ಇಲೆಕ್ಷನಿಗೇ ನಿಲ್ಲುತ್ತಿದ್ದನು. ಹೀಗಾಗಿ 'very sorry .. ಈಗ ಪ್ರೆಸ್ಸಿನವರು ಇದ್ದುದೆಲ್ಲಾ ಖಾಲಿಮಾಡಿಕೊಂಡು ಹೋದರು. ಅಲ್ಲವಾದರೆ . .' ಎಂದನು.

ಸರಿ—ಮುಂದೆ ಗವಯಿಗಳ ಜೀವನಪುರಿಯೂ ಕನ್ನಡ ಕೇಸರಿಯಲ್ಲಿ ಬರಲಿಲ್ಲ; ಪಾಲ ಕಂಸವೂ ಬರಲಿಲ್ಲ ಗವಯಿಗಳು "ಈ ಪೇಪರಿನವರೆಲ್ಲ ಗೊತ್ತಿದ್ದವರೇ' ಎಂದು ಹೊರಟನು. ಅನಂತರ ಸ್ವಾಭಾವಿಕವಾಗಿ ಗವಯಿ ಯಾವಾವ ಮನೆಗಳಿಗೆ ಹೋಗುತ್ತಾನೆಯೋ ಅಲ್ಲಿ ಮೊದಲಿಗೆ "ಕುಮಾರಯ್ಯನ ಬಚ್ಚಾಲುಗಿರಿಯ ವಿಷಯ" ಪ್ರಸ್ತಾಪಕಾರ್ಯ ನಡೆಯುವುದಾಯಿತು ವೇಳೆ ಉಳಿದರೆ ಸಂಗೀತದ ಪಾಠಗಳು

ಈಗೀಗ ಜಾನಕಿ ರಾಮಚಂದ್ರಯ್ಯನವರು ಮನೆಗೆ ಬರುವ ಗವಯಿಗಳಿಗೆ ಕಾಫಿಯನು ತಪ್ಪದೆ ಕೊಡಿಸುತ್ತಾರೆ ಮಗಳಿಗೆ ಸಂಗೀತ ಪಾಠ ಅರ್ಧವಾದರೂ ಚಿಂತೆಯಿಲ್ಲ 'ಕುಮಾರಯ್ಯನ ಪುರಾಣ ಶ್ರವಣ ಮಾಡಿಸುತ್ತಾರೆ! ಅನಂತರ ಯಥಾಪ್ರಕಾರವಾಗಿ "ಗವಯಿಗಳೇ ಆ ಪಶು ಮರೆಯುವುದು ಆ ದಿಗಂಬರರಾಯನ ಹಣದಿಂದ ಅವರ ಮನೆಯವಳಿಗೆ ಇಷ್ಟು ಬುದ್ಧಿಯಿದ್ದಿದ್ದರೆ ಈ ಪ್ರಾಣಿಯನ್ನು ಹೊಸ್ತಿಲಿನ ಒಳಗೆ ಹೊಗ್ಗಿಸಲಿಕ್ಕಿಲ್ಲ" ಎಂದು ಹೇಳುತ್ತಾರೆ ಗವಯಿಗಳಿಗೂ ಬೇಕಾದುದು ಅದೇ 'ನಿಸಿ ಕೊಟ್ಟ ನಾಯಿ ನೊಸಲು ನಕ್ಕುತ್ತದೆ' ಎಂದ ಹಾಗೆ ಆ ಮುದುಕನಿಗೂ ತಿಳಿಯುತ್ತದೆ

ಜಾನಕಿ—ಆ ಮುದಕನಿಗೆ ತಿಳಿಯುವುದು ಒಂದೇ ದಿವಸ

ಗವಯಿ— ಇಲ್ಲ ಅಮ್ಮ—ಈಗ ಅಲ್ಲಿ ನಾಣಿಗೂ, ಕುಮಾರಯ್ಯನಿಗೂ ಕಾಂಪಿಟೀಶನು ನಡೆದಿದೆ. ಇನ್ನು ನಾಣಿಗೂ ತಾರಾಮತಿಗೂ ಒಳ್ಳೆಯದಿದೆಯೆಂದು ರಾಯರಿಗೆ ತಿಳಿಸುವುದು ಮಾತ್ರ ಬಾಕಿ

ಜಾನಕಿ — ಇವನ ವಿಷಯವೂ ಅವಳ ವಿಷಯವೂ ಏನೇನೂ ಹೇಳುತ್ತಿದ್ದರಲ್ಲ

ಗವಯಿ —ಅದ ಸುಳ್ಳಮ್ಮ. ನನಗೆ ತಿಳಿಯದ್ದೇ ಆದರೆ ಅವರಿಬ್ಬರ ಸ್ನೇಹ ಮಾತ್ರ ಖಂಡಿತ

ಇಷ್ಟು ವರ್ತಮಾನ ಕೊಟ್ಟು, ಮುಂದಿನ ಮೂರು ಪಾಠಕ್ಕೆ ಎಡ್ವಾನ್ಸ್ ರೂ. ೧ ೮ ೦ ಯನ್ನು ಪಡೆದು ಗವಯಿಗಳು ಎರಡನೆ ಮನೆಗೆ ಹೊರಡುತ್ತಾರೆ ರೂಪಾಯಿ ಕೈಗೆಬಂದ ದಿವಸ, ಹೆಚ್ಚಿನ ಶಿಷ್ಯರೂ ಇಲ್ಲ, ಸಂಗೀತವೂ ಇಲ್ಲ ಆ ದಿನ ಅವರಿಗೆ ಮಂದಿ ಗಂಟಲೇ ಸಮ ಇರುವುದಿಲ್ಲ

ಮರುದಿವಸ ಕಿಸೆ ಖಾಲಿಯಾದರೆ ಶಿಷ್ಯರನ್ನು ಹುಡುಕಿಕೊಂಡು ಹೋಗುತ್ತಾರೆ

ಈ ದಿವಸ ನಾಗೇಂದ್ರ ಪೈಗಳ ಮನೆಗೆ ಹೋದರೆ ಇನ್ನೆಂಟು ದಿವಸ ಆ ಕಡೆ ಮುಖವನ್ನು ಹಾಯಿಸುವುದಿಲ್ಲ ಮನೆಯವಳು ಇವನ ಆಲಸ್ಯಕ್ಕಾಗಿ ಗದ್ದಲ ಮಾಡಿದರೆ 'ನನಗೇನು ಗೊತ್ತು. ಅವರ ಮಗಳಿಗೆ ಈ ಜನ್ಮಕ್ಕೆ ಸಂಗೀತ ಬರುವ ಜಾತಿಯಲ್ಲ ಅವರಿಗೆ ಮಗಳ ಬಾಯಿಂದ ದಿನ ಒಂದರ ಒಂದು ಹಾಡು ಹೇಳಿಸಬೇಕೆಂಬ ಹಟ. ಮೊನ್ನೆ ಹೇಳುತ್ತಾರೆ ಮಾಸ್ತರೇ—ನಿಮ್ಮ ಸಂಗೀತ ಹೀಗೇ ನಡೆದರೆ ನಮಗೆ ಬೇಡ. ನಾಳೆಗೆ ಆರು ತಿಂಗಳೊಳಗಾದರೂ ಮದುವೆ ಆಗುವ ಹುಡುಗಿ. ಮದುವೆಗೆ ಮೊದಲು ಒಂದು ಹತ್ತು ಹಾಡು ಬೇಡವೇ? ನೀವು ಪಾಠಕ್ಕೆ ಎಂಟಾಣೆ ತೆಗೆದುಕೊಂಡು ಹೋಗುತ್ತೀರಾಯಿತೆ? ಹತ್ತು ಪಾಠವಾದರೂ ಒಂದು ಹಾಡಿಲ್ಲ. "ಸನ ಸನ ರಿಗ್ರಿ ರಿಗ್ರಿ" ಮಾಡಿದರೆ! ಆಗ ರಾಮಚಂದ್ರ ನೆರೆಮನೆಯಲ್ಲಿ ನೋಡಿ-ಏನಿಲ್ಲ ಆರು ವರ್ಷದ ಹುಡುಗಿಗೆ ಮೂರು ತಿಂಗಳಲ್ಲಿ ಎಂಟು ಪದ ಬಾರಿಸಿ ಹಾಡಲು ಕಲಿಸಿದ್ದಾನೆ. ನೋಡಿ ಸಿಟ್ಟು ಮಾಡಬೇಡಿ. ಇನ್ನು ಮುಂದೆ ನೀವು ಕಲಿಸಿದ ಹಾಡೊಂದರೆ ಒಂದು ರೂಪಾಯಿ ಕೊಡುವ ಈ ಪಾಠದ ಲೆಕ್ಕ ಬೇಡ ಎನ್ನುತ್ತಾರೆ. ಅಬ್ಬ! ಥೇಟು ಅಂಗಡಿ ಸಾಹುಕಾರರೆಂದರೆ ಸಾಹುಕಾರರು!" ಎನ್ನುತ್ತಾನೆ

ಗವಯಿಗಳ ಯಾವ ಗುಣವೂ ಅವನ ಧರ್ಮಪತ್ನಿಗೆ ಹೊಸತಲ್ಲ ಕಾರಣ ಅವಳೆನ್ನುವಂತೆ "ಹೊಗೆ ಹಿಡಿದ ಮನೆ ನಿಮಗೆ ಆಗುವಂತೆ ಇಲ್ಲ" ಎನ್ನುತ್ತಾಳೆ ಆದರೆ ಯಜಮಾನರ ವಿಷಯ ಅವಳ ಅಭಿಪ್ರಾಯ ಅಷ್ಟೊಂದು ಸಮಂಜಸವಲ್ಲ ಗಣಪತಿಗೂ, ನಮ್ಮ ನಾಗೂರು ಉಮೇಶರಾಯರಿಗೂ ಅಂಥಾ ಮಾತುಕತೆಯಾಗಿತ್ತಲ್ಲ 'ನಿನ್ನ ಮನೆ ಮೆಟ್ಟಲು ಹತ್ತುವುದಿಲ್ಲ ಎಂದೂ ಇವರು ಆಣೆ ಹಾಕಿದರು, "ನಿನ್ನ ಮುಖ ಕಾಣುವುದಿಲ್ಲ ಎಂದು ಅವರು ಆಣೆ ಹಾಕಿದರು'—ಆದರೆ ಮೊನ್ನೆಯಿಂದ ರಮೇಶರಾಯರ ಮಗಳು ನಳಿನಿಗೆ ಪಾಠ ಹೇಳುತ್ತಿದ್ದಾರೆ ತಾರಾಮತಿಯಮ್ಮನಲ್ಲಿಗೆ ಬಂದು "ಅಮ್ಮಾ, ನಮ್ಮ ನಳಿನಿ ಖಂಭಾವತಿ ಹಾಡಿದ ಹಾಗೆ ಈ ಮಂಗಳೂರಲ್ಲಿ ಯಾರು ಹಾಡಲಿಕ್ಕಿಲ್ಲ" ಎಂದರು ಎದುರಿಗೆ ನಾಣಿಯೂ ಇದ್ದನು "ಅದೆಂಥ ಕಂಬಾವತಿಯಪ್ಪ" ಎಂದನು ಅವ ಸಂ ರಾಗ ವಿಸ್ತಾರ ತೊಡಗಿತು 'ನಿಯಾತೆಪ್ರಿ ವ್ಯೆ' "ಎಂದು ಹಾಡಿ ತೋರಿಸಿದನು ತಾರಾಮತಿಯವರಿಗೆ ಮೊದಲಾದರೆ ಹಾಡುಗಳಲ್ಲಿ ಅಷ್ಟು ಅಭಿರುಚಿ ಬರುತ್ತಿರಲಿಲ್ಲ 'ಏನು ವರ್ಷಕವೋ ಅನ್ನುತ್ತಿದ್ದರು ಈಗ ಕೆಲವು ಸಮಯದಿಂದ ಅವ ಧೂರ್ತ ಕ್ರಿಮಾರಿಗಳಿಂದ ಹಿಂದೀ ಪಾಠ ಹೇಳಿಸಿಕೊಳ್ಳುತ್ತಿದ್ದಾರೆ! ಪ್ರಾಥಮಿಕವೂ ಆಯಿತಂತೆ ಹಾಗಾಗಿ 'ಪಿಯಾತೋ ವ್ಯೆ' ಹಾಡಿನ ಅರ್ಥ ಮಂದಟ್ಟಾಯಿತು ಒಮ್ಮೆಗೇ ಸ್ಫೂರ್ತಿಯೂ ಬಂದು ನಾಣಿ, ನನಗೆ ಸಂಗೀತ ಬಂದೀತೇ? ಈ ವಯಸ್ಸಿನಲ್ಲಿ" ಎಂದು ಕೇಳಿದನು - ತಮಗೇನು ೨೪ ವಯಸ್ಸಿರಬಹುದು—ನಾನು ೫೦ ವರ್ಷ ಪ್ರಾಯದವರಿಗೆ ರಾಗ ಪಾಠ ಮಾಡಿಸಿದ್ದೇನೆ" ಎಂದನು ವಾಸ್ತವಕ್ಕೆ ಪಾಠಕ್ಕೆ ರೂಪಾಯಿಯಂತೆ ಕೊಡುವಿರಾದರೆ ನೂರು ವರ್ಷ ಪ್ರಾಯದವರಿಗೂ ಪಾಠ ಹೇಳಲು ಸಿದ್ಧನಿರುವಾಗ ಅಲ್ಲದೆ ತಾರಾಮತಿ 'ನಾನು ಅಷ್ಟು ಮುದುಕಿಯೇ ಎಂದ ಮಯೋಸಿಂಕರಣೆ ಮಾಡಿದಳು ಗಣಪತಿಯ ಸವಾರಿ, ದಿಗಂಬರರಾಯರ ವಯಸ್ಸು ಎಣಿಸಿ ಅವರ ಎರಡನೆ ಹೆಂಡತಿಯ ಪ್ರಾಯ ಅಳೆಯಲು ಹೋಗಿ ತಪ್ಪಿಬಿದ್ದನು ಈಗ ಅವರೇ ನನಗೆ ೨೫ ಎಂದು ಪ್ರಾಯ ಹೇಳಲು" ನಿಜವಾಗಿ ಸಂಗೀತ ಕಲಿಯಲು ಅದೇ ಪ್ರಾಯ ಮಕ್ಕಳ ಹತ್ತಿರ ಬಡಿದ ಕೊಂಡರೆ ಏನು ತಿಳಿದೀತು' ಸುಮ್ಮನೆ ಗಳ ಬಾಯಿಪಾಠ ಮಾಡುತ್ತವೆ. ಒಂದು ರಾಗದ ಮರ್ಮ, ವಿಸ್ತಾರ, ಯಾವ ಘರಾಣದವರು ಹೇಗೆ ಹಾಡುತ್ತಾರೆ ಎಂಬ ವ್ಯತ್ಯಾಸ ಅವಕ್ಕೇನು ಗೊತ್ತಾಗುತ್ತದ' ಎಂದು ವಿವರಿಸಿದನ

ಸರಿ, ಮುಂದಿನ ವಾರದಿಂದ ತಾರಾಮತಿಯ ದಿಗಂಬರರಾಯರ ಹಿರೇ ಹೆಂಡತಿಯ ಕಿರೇ ಮಗಳ ಜತೆಗೇನೆ ಸಂಗೀತ ವ್ಯಾಸಂಗಕ್ಕೆ ಪ್ರಾರಂಭವಾಯಿತು ಒಮ್ಮೆಗೇ ಸಂಗೀತದಿಂದ ಅವರಿಗೆ ಬೇಸರಬಾರದೆಂದು ಜಾನಕಿ ರಾಮಚಂದ್ರಯ್ಯನವರು ರಾಗಾಲೋಪವನ್ನು ಮಾಡುತ್ತಿದ್ದರು. ಆಗಾಗ ಕುಮಾರಯ್ಯನ ನಕಲಿಯೂ ನಡೆಯುತಿತ್ತು ಹೀಗಾಗಿ ತಾರಾಮತಿಯವರು ಗವಯಿಗಳ ಗಾನದಲ್ಲಿ ಆಸಕ್ತರಾದರು.



ಒಂದೂ ಕಲೆಯುಳಿಯದಂತೆ ಗುಣಪಡಿಸುವುದು!

ಗಾಯ ಮತ್ತು ವ್ರಣಗಳಿಗೆ ಅತ್ಯುತ್ಕೃಷ್ಟ ಔಷಧಿ.

ನಿಮ್ಮ ಯಾವತ್ತೇ ವ್ರಣ, ಚರ್ಮರೋಗ, ಗಾಯ ಮೊದಲಾದುವುಗಳ ಮೇಲೆ ಜ್ಯಾಂಬಕನ್ನು ಸವರಿದ ಕೂಡಲೇ ಬೇನೆಯು ದಣಿಯುವಾಗಿ ಗುಣವಾಗಲು ಪ್ರಾರಂಭಿಸುತ್ತದೆ ಜ್ಯಾಂಬಕಿನಲ್ಲಿರುವ ಔಷಧೀಯ ಗಿಡಮೂಲಿಕೆಗಳ ತೈಲವು ಆಳವಾಗಿ ಚರ್ಮರಂಧ್ರಗಳನ್ನು ಹೊಕ್ಕು ವಿಷಮಯವಾದ ಕ್ರಿಮಿಕೀಟಗಳನ್ನು ನಾಶಪಡಿಸಿ ವ್ರಣಗಳಿಂದ ಹೊರಬಿಡುವ ರಸಿಗೆಯನ್ನು ಒಣಗಿಸುತ್ತದೆ. ಜ್ಯಾಂಬಕು ಅಸಹ್ಯಕರವಾದ ಒಂದೂ ಕಲೆಯನ್ನುಂಟುಮಾಡದೆ ಗುಣಪಡಿಸುತ್ತದೆ ಜ್ಯಾಂಬಕನ್ನು ಕಜ್ಜಿ, ವ್ರಣ, ಗಾಯ, ಕಡಿತ, ಮುಡ್ಡಣ, ಕಾಯಿಕುಂಟು, ಬಾತುಕೆ ಮೊದಲಾದುವುಗಳಿಗೆ ಉಪಯೋಗಿಸಿರಿ, ಡಬ್ಬ 1-0-0 ಮತ್ತು 2-4-0 ರಂತೆ ಮಾರಲ್ಪಡುತ್ತದೆ

ಏಜಂಟ್ಸ್

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಾರ್ಕ್ ಟೌನ್ ಮದ್ರಾಸು

ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ — ಜಮ್ಮಿ ವಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ — ಲಿವರ್ ಮತ್ತು ಸ್ಪ್ಲೀನ್ ಸ್ಪೆಷಿಯಲಿಸ್ಟ್, ಮೈಲಾಪುರ, ಮದ್ರಾಸು.

ಸರದಾರ ಭವನ Sirdar Bhavan

ಫೆಲಿಕ್ಸ್ ಪೈ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶುಚಿಯಾಗಿ ತಯಾರಿಸಲ್ಪಟ್ಟ ದಿನಸ ಮತ್ತು ಉತ್ತಮವಾದ ಭೋಜನ, ಮಿತವಾದ ದರ ... ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ... ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ ಎಲ್ಲಾ ಮೇಲ್ವಿಚಾರಗಳು ...

Propriter— H R Rao,
Bungalore Gun Emporium Madras

ಹೆಂಗಸರ ಆರೋಗ್ಯಕ್ಕೆ ಲೋಧ್ರವನ್ನು ಉಪಯೋಗಿಸಿರಿ.

LODHRA
ಲೋಧ್ರ

ಬಹಿಷ್ಟೆಯಾಗುವಾಗ ಉಂಟಾಗುವ ಯಾವತ್ತೂ ಬಾಧೆಗಳನ್ನು ಗುಣಪಡಿಸುತ್ತದೆ

ಹೆಂಗಸರಿಗೆ ಬಲವನ್ನೂ ಆರೋಗ್ಯವನ್ನೂ ಉಂಟುಮಾಡುವ ಉತ್ತಮ ಟಾನಿಕ್ಕು.

ಪ್ರೊಪ್ರೈಟರ್ಸ್ ಮತ್ತು ತಯಾರಿಸುವವರು
ಕೇಸರಿ ಕುಟೀರಂ, :: :: :: ಮದ್ರಾಸು
ಎಲ್ಲಾ ಕೆಮಿಸ್ಟರಲ್ಲಿಯೂ ಶಾಪಿನಲ್ಲಿಯೂ ದೊರೆವುದು.
ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

★ ವಾರದ ಭವಿಷ್ಯ ★

[ಲೇಖಕ:– ಪಿ. ಈಶ್ವರ ಶರ್ಮ, ಹಸ್ತರೇಖಾ ಗಣಿತ ಶಾಸ್ತ್ರಿ,
ಮುಖ್ಯಪ್ರಾಣ ದೇವಸ್ಥಾನದ ಬಳಿ, ಮಂಗಳೂರು

ತಾರೀಕು 7–7–1989ರಿಂದ 13–7–1989ರ ವರೆಗೆ.

ಮೇಷ

ಆಲಸ್ಯವು ದುರ್ದೈವದ ಶಿಖರವಾಗಿರುವುದು. ಇದಕ್ಕೆ ಕಾರಣವಿಷ್ಟೇ, ನಿಮ್ಮ ಜನ್ಮರಾಶಿಯಲ್ಲಿ ಶನಿಕೇತುಗಳ ಕಾಟದಿಂದ ಇಷ್ಟವಾದಲಿರುವ ಉದ್ಯೋಗ ನಾಳೆಯೆಂದೆನಿಸುವದು ಭಯವನ್ನುಂಟುಮಾಡುವದು ಇವರ ಕರ್ತವ್ಯವಾದರೂ ಈ ನಿಮ್ಮ ಜನ್ಮಾಧಿಪತಿ ಕುಜ ಉಚ್ಚನಾಗಿ ದಶಮದಲ್ಲಿರುವದರಿಂದ ಧನಾಧಿಪತಿ ಸಹಾಯದಲ್ಲಿದ್ದು ಸಾಹಾಧಿಪತಿ ಸುಖಸ್ಥಾನದಲ್ಲಿ ಅಗ್ರಾಧಿಪತಿಗೆ ನೋಡುವರಿಂದ ಇಂದಿನ ಉದ್ಯೋಗವನ್ನು ನಾಳೆಗೆಂದಿಡಬೇಡಿರಿ ಏಕೆಂದರೆ ಶುಭಸ್ಯ ಶೀಘ್ರಂ ಅಶುಭಸ್ಯ ಕಾಲಹರಣಂ ಎಂಬ ನಿಮಗೆ ಈ ವಚನಂತ್ಯವಾದಂತೆ ಅತೀ ಉತ್ತಮ ಫಲ ದೊರೆಯಲಿರುವದು. ನಿಮ್ಮ ಶತ್ರು, ಸಾಲ, ವ್ಯಸನಗಳಿಂದ ಕಿಂಚಿತ್ತು ಪಾರಾಗುವಿರಿ ನೌಕರಿ ದಂದೆಗಳ ಪರಿಸ್ಥಿತಿ ಸಮಾಧಾನಕರವಾಗುವದು ಸರಕಾರಿ ಉದ್ಯೋಗ ವ್ಯವಹಾರಗಳಿಗೆ ಉತ್ತಮವಿರುವದು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಉತ್ಸಾಹವಿರುವದು ತಾ ೧೧, ೧೨, ೧೩ ದೇಹಾರೋಗ್ಯ, ಇಷ್ಟಕಾರ್ಯಸಿದ್ಧಿ, ಮನಸ್ಸಂತೋಷ

ವೃಷಭ

ನಿಮ್ಮ ಸ್ವಭಾವವು ವಿಚಿತ್ರವಿರುವದು ನೀವು ಕಲಾಪ್ರಿಯರಾಗಿರುವಿರಿ ನಿಮ್ಮ ರಾಶಿಯ ಸ್ವಾಮಿಯು ಶುಕ್ರನಲ್ಲವೇ, ಇದಲ್ಲದೆ ನಿಮ್ಮ ರಾಶಿಯೆಂದರೆ ಚಂದ್ರನ ಉಚ್ಚರಾಶಿಯೆಂದೆನಿಸಲ್ಪಡುತ್ತದೆ ಚಂದ್ರ ಮತ್ತು ಶುಕ್ರ ಈ ಎರಡು ಗ್ರಹಗಳು ಸ್ತ್ರೀ ಗ್ರಹಗಳು ಸಾಧಾರಣವಾಗಿ ನೀವು ಪುರುಷರಾಗಿದ್ದರೂ ಸ್ತ್ರೀಯರಂತೆ ನಿಮ್ಮ ಸ್ವಭಾವವು ಕೋಮಲವಾಗಿರುವುದು ಈ ಕೋಮಲ ಸ್ವಭಾವದ ಲಾಭವನ್ನು ದುಷ್ಟ ರೀತಿಯಿಂದ ತೆಗೆದುಕೊಳ್ಳುವವರ ನಿಮಗೆ ಕೊಡುವರು ನೀವು ಯಾರ ಮೇಲೆ ದಯೆ ತೋರಿಸುವಿರೋ, ಅವರಿಂದಲೇ ಅದರ ದುಷ್ಪರಿಣಾಮವನ್ನು ಹೊಂದುವಿರಿ ಇದಕ್ಕೆ ಕಾರಣ ವಿಷ್ಟೆ ಸಾಮಾದಿಪತಿ ಚಂದ್ರ ಲಾಭದಲ್ಲಿದ್ದು ವ್ಯಯಕ್ಕೆ ಬರುವದರಿಂದಲೂ, ಉಚ್ಚದ ಭಾಗ್ಯ ರಾಶಿಯು ಅಂಗಾರಕನ ವ್ಯಯಭಾವದ ದೃಷ್ಟಿಯಿಂದಲೂ ಚತುರ್ಥ ಸುಖರಾಶಿ ರವಿಯ ಸಂಪರ್ಕದ ಶುಕ್ರನಿಂದಲೂ–ಮನುಷ್ಯನ ಜನ್ಮಕೇವಲ ಜ್ಞಾನಾರ್ಜನೆಯ ಸಲುವಾಗಿಯೇ ಇರುವುದಲ್ಲ ಆತ್ಮವಿಕಾಸದ ಸಲುವಾಗಿಯೂ ಇರುವುದೆಂಬುದು ನಿಮಗೆ ಈ ವಾರ ಸ್ಪಷ್ಟವಾಗಲಿರುವುದು ಆದರೆ ತಾ ೧೩ರ ಪರಿಯಂತ್ರ ಮಿತ್ರನೂ ತನ್ನ ಪ್ರೇಮಾತಿಶಯಗಳಿಂದ ಕಷ್ಟನಷ್ಟ ಆಕಸ್ಮಿಕ್ ಬನ್ನರದಂತೆ ಎಚ್ಚರವಿರಕಕ್ಕದ್ದು ಮುಂದೆ ಶುಭ

ಮಿಥುನ

ನಿಮ್ಮ ವಿಷಯುತ್ತ ವಿಚಿತ್ರ ನಿಮ್ಮಾಗಿರುವುದು ಇದಕ್ಕೆ ಕಾರಣವಿಷ್ಟೆ ನಿಮಗೆ ರವಿಯ ಶುಕ್ರನು ಮಿತ್ರರಾಗಿ ಸಮಾನರಾಗಿದ್ದರೂ ಅವರವರು ಶತ್ರುಗಳಾಗಿ ನಿಮ್ಮ ಜನ್ಮರಾಶಿಯಲ್ಲಿ ಅವರು ಇರುವುದರಿಂದ ಆನಂದವೂ ದುಃಖವೂ ಈ ಎರಡು ವಿಧದಿಂದ ನಿಮ್ಮ ಮನಸ್ಸೆ ಚಂಚಲವಾಗಿರುವುದಲ್ಲದೆ ಲಾಭದಲ್ಲಿ ಶನಿಕೇತುಗಳಿರುವುದರಿಂದ ದೊಡ್ಡ ಅಧಿಕಾರದಲ್ಲಿಯಾದರೂ ವಿಶೇಷ ಲಾಭವಿರದೆ ಅಪ್ಪನದ ಮಂಗಳನು ಅನಿಷ್ಟಗಳನ್ನು ತಂದೊಡ್ಡುವುದರಿಂದ ಎಳ್ಳಷ್ಟು ಹೆಸರೂ ಹೀನಗೊಳ್ಳದಾಗ ಮುಂದೆ ಪಂಚಮದ ರಾಹುವಿನಿಂದ ಬುದ್ಧಿಯ ಅಕ್ಷಿಪ್ರದವಾಗಿ ಪ್ರಸನ್ನವಾಗಿದ್ದರೂ ವಿಭ್ರಮೆಗೆ ಕಾರಣವಾದೀತು. ಆದುದರಿಂದ ಈ ವಾರದಲ್ಲಿ ದೂರದೃಷ್ಟಿಯೇ ಸದ್ಗುಣವು ಸುತ್ತು ಅಲ್ಪ ದೃಷ್ಟಿಯೇ ದುರ್ಗುಣವೆಂಬುದನ್ನು ಅಂತರ್ಯದಲ್ಲಿಟ್ಟು ನಡೆಯಿರಿ ಕರ್ಮಾದಿಪತಿ ಸ್ವಕ್ಷೇತ್ರಸ್ಥ ಗುರು ಕೃಪೆಯಿಂದ ಮುಂದೆ ಇಷ್ಟ ಸಿದ್ಧಿಯಾಗುವುದು.

ಕರ್ಕಾಟಕ

ಆತ್ಮಪ್ರವಂತರೂ ಶಾಂತಿ ಸ್ವಭಾವದವರೂ ಧೃಢಚಿತ್ತರು ಇರುವ ನಿಮ್ಮ ರಾಶ್ಯಾಧಿಪತಿ ಚಂದ್ರನಿಗೆ ಈ ವಾರದಲ್ಲಿ ಉಚ್ಚಾರೋಹಿನಾಗಿ ಭಾಗ್ಯದ ಗುರು ಸಂಪರ್ಕವಿರುವುದರಿಂದಲೂ ಪಂಚಮ ಕರ್ಮಾಧಿಪತಿ ಕುಜ ಉಚ್ಚನಾಗಿರುವುದರಿಂದ ಸಾಹಸಾಧಿಪತಿ ಬುಧ ಜನ್ಮದಲ್ಲಿರುವುದರಿಂದ ಪೀಡೆ ಇಂದ ಗ್ರಹ ನಿವಾರಕತೆ ಮಾನ ವಾದಕಗಳು ಬರಲಾರದು ಆರೋಗ್ಯ ಚೆನ್ನಾಗಿ ಉಳಿಯುವುದು ದುಡಿದ ಪರಿಸ್ಥಿತಿ ಕೂಡ ಚೆನ್ನಾಗಿರುವುದೆ ಆದ

ರೆ ಕೈ ಬಿಗಿಹಿಡಿದು ಖರ್ಚುಮಾಡಬೇಕಾಗುವುದು. ಏಕೆಂದರೆ ಧನಾಧಿಪತಿ ರವಿ ವ್ಯಯದಲ್ಲಿರುವುದರಿಂದ ಅಧಿಕ ಖರ್ಚು ನಡೆಯುತ್ತಾ ಬರಲಿರುವುದು ನೌಕರಿದಂದೆಗಳು ಚೆನ್ನಾಗಿರುವುದು ಮಿತ್ರರ ಸಹವಾಸ ದೊರೆಯುವುದು, ಅಪ್ತರೇಷ್ಟರ ಭೇಟಿಯಾಗುವುದು, ಮಾನ ಸನ್ಮಾನಗಳು ದೊರೆಯುವುದು. ತಾ ೮, ೯ ಉತ್ತಮ ಸರ್ವ ಕಾರ್ಯಾನುಕೂಲ, ಜಯ, ಮಾನಪ್ರಾಪ್ತಿ ಉಂಟಾಗುವುದು.

ಸಿಂಹ

ಧಾರ್ಮ್ಯಗುಣ ಸ್ಥಿರಬುದ್ಧಿ ಪರಾಕ್ರಮವುಳ್ಳ ನಿಮ್ಮ ರಾಶ್ಯಾಧಿಪನಾದ ರವಿ ಒಬ್ಬನೇ ಲಾಭ ಭಾವದಲ್ಲಿ ಇರುವದರಿಂದ ನಿಮ್ಮ ಯೋಗ್ಯತೆಗೆ ಕೊರತೆ ಇಲ್ಲ 'ಆದರೂ ಧನಲಾಭಾದಿಪತಿ, ವ್ಯಯದಲ್ಲಿ ವ್ಯಯಾಧಿಪತಿ, ಅಷ್ಟಮದಲ್ಲಿ ಭಾಗ್ಯದಲ್ಲಿ ಪಾಪಗ್ರಹಶನಿಕೇತುಗಳು ಇರುವುದರಿಂದ ನಿಮ್ಮ ಸಾಂಪತ್ತಿಕ ಸ್ಥಿತಿಯಲ್ಲಿ ಬಹಳ ಹೆಚ್ಚು ಕಡಿಮೆಯಾಗುವುದು. ಕೈಯಲ್ಲಿ ದುಡ್ಡು ಬರುವುದ ಎಲ್ಲಿಲ್ಲಿಯೂ ನೆನೆಸದ ಅನಗತಗಳಿಂದ ವೆಚ್ಚನಾಗುವ ನೌಕರಿ ದಂದೆಗಳ ವಿಷಯ ತುಸು ಗಡಿಬಿಡಿಯಾಗಿ ತೋರುವದು ಆದರೂ ನಿಮ್ಮ ಹಾನಿಯೂ ಯಾವ ಕಾರಣದಿಂದಲೂ ಆಗಲಾರದು ತಾರೀಖು ೧೦, ೧೧ ಅಧಿಕ ನಷ್ಟ ವ್ಯಸನ

ಕನ್ಯಾ

ತೀಕ್ಷ್ಣ ಬುದ್ಧಿ ತನ್ನ ಬುದ್ಧಿವಂತಿಕೆಯನ್ನು ಟೀಕಿಸಿಯವರೀತಿಗೆ ಸ್ವಚಾರವಡಿಸದಿರುವಿಕೆ ಎಲ್ಲಾ ವಿಷಯ ತಿಳುವಳಿಕೆಯ ಶಕ್ತಿಯುಳ್ಳ ನಿಮ್ಮ ರಾಶ್ಯಾಧಿಪತಿ, ಲಾಭದಲ್ಲಿ ಪಾಪನಮಧ್ಯನಾಗಿ ಶತ್ರುಸ್ಥಾನಮಧ್ಯ ಕೇಂದ್ರದಲ್ಲಿರುವದರಿಂದಲೂ ದ್ವಿತೀಯ ದರಾಹು ಪಂಚಮದ ಕುಜ ಅಷ್ಟಮ ಶನಿಕೇತುಗಳ ಭಾಧೆಯ ಬೆಂಕಿಯಲ್ಲಿ ಸಿಕ್ಕಿದ ನಷ್ಟನು ಅತ್ಯುತ್ತ ಬಡಿದಾಡಿ ಕೈಕಾಲು ಬಿಡ ಕೊಂಡಂತೆ ಅಲ್ಲದೆ ಎಷ್ಟು ಶಾಂತಿಯಿಂದಿದ್ದರೂ ಅಗಾಗ್ಗೆ ಭಯ, ವ್ಯಸನ, ಚಿಂತೆಗೊಳಗಾಗಬೇಕಾದೀತು ಆದರೂ ಸುಖಸಪ್ತಮಾಧಿಪತಿ ಗುರು ನೀಚನಿರುವದರಿಂದ ನಿಮ್ಮ ಸ್ಥಿತಿಯು ಉತ್ತಮ ರೀತಿಯಿಂದ ಸುಧಾರಿಸುವುದು ಆದರೆ ಈ ವ್ಯಾಪಾರವು ಸಮಾಧಾನದಿಂದ ಕಳೆಯ ನಡೆ ಮುಂದಿನ ವಾರದಲ್ಲಿ ಲಾಭಾಧಿಪತಿ ಚಾಂದ್ರಕ್ಕೆ ಬರುವುದರಿಂದ ಮುಂದೆ ಇದರಿಂದ ಉತ್ತಮಸ್ಥಿತಿ ಉಂಟಾದೀತ ತಾರೀಕು ೧೩ ಉತ್ತಮ ಫಲ, ಮಾನ್ಯ, ಪ್ರಾಪ್ತಿ

ತುಲಾರಾಶಿ

ಸ್ವಾರ್ಯ ಕಾರ್ಯ ವಿವೇಚನಾ ಶೀಲರಾದ ನಿಮ್ಮ ರಾಶಿಯಾಧಿಪತಿ ಶತ್ರು ಗ್ರಹನೊಡನೆ ಭಾಗ್ಯದಲ್ಲಿ ಇರುವುದರಿಂದ ವಿಶೇಷ ಜನ್ಮದ ರಾಹುವಿನಿಂದ ಉಂಟಾಗುವ ಜನನಿಂದೆ ಗಮನಿಸದಿರಿ ಧೈರ್ಯದಿಂದ ಕೆಲಸವನ್ನು ಮಾಡಿರಿ ಅಂದರೆ ಈ ವಾರದಲ್ಲಿ ಧನಾದಿಪತಿ ಉಚ್ಚದಲ್ಲಿ ಇದ್ದು ಕರ್ಮಾದಿಪತಿ ಉಚ್ಚಾರೋಹಣ ಆಗ ವುದರಿಂದ ನಿಮಗೆ ಯಶಸ್ಸು ನಿಸಂದೇಹವಾಗಿ ದೊರೆಯುವುದು ನಿಮ್ಮ ಆರೋಗ್ಯವು ಚೆನ್ನಾಗಿ ಉಳಿಯುವುದು ಸಾಂಪತ್ತಿಕ ಸ್ಥಿತಿಯೂ ಕೂಡಾ ಚೆನ್ನಾಗಿ ಇರುವುದು ಮುಂದಿನ ಗ್ರಹಗಳ ಪರಿಸ್ಥಿತಿಯನ್ನು ನೋಡಿ ಪರೆ ಇನ್ನೇ ವಾರದಲ್ಲಿ ನಿಮ್ಮ ಕೆಲಸಗಳನ್ನು ಮುಗಿಸುವುದು ಉತ್ತಮವೆಂದು ತೋರುತ್ತದೆ. ನೌಕರಿ ದಂದೆಗಳ ಸ್ಥಿತಿಯು ಉತ್ತಮದಲ್ಲಿ ಇರುವುದು ವಿಚಿತ್ರವಾದ ಪ್ರವಾಸ ಪ್ರಸಂಗವು ಉಂಟಾಗುವುದು

ವೃಶ್ಚಿಕ

ಎಂಥ ಅಸಾಧ್ಯ ಕಾರ್ಯವನ್ನು ಮಾಡಬಲ್ಲ ಸಾಮರ್ಥ್ಯವಿರುವ ನಿಮ್ಮ ಕರ್ಮಾಧಿಪತಿ ರವಿವ್ಯಯಾದಿಪತಿಯಿಂದ ನೀಚ ಅಷ್ಟಮದಲ್ಲಿ ಗವ

ಭರಿಂದ ಜನ್ಮಾಧಿಪತಿ ಉಚ್ಚದಲ್ಲಿ ಇದ್ದರೂ ಪಂಚಮದಲ್ಲಿ ಗುರು ಇದ್ದರೂ, ಸುಖಾಧಿಪತಿ ನೀಚನಾಗಿ ಕೇತುವಿನಿಂದ ಕೂಡಿರುವುದರಿಂದ ಶರೀರ ಪ್ರಕೃತಿ ಸರಿ ಇರಲಾರದು, ಕೈಕಾಲು ಜುಮ್ಮುವುದು ಕಣ್ಣು ಉರಿಯುವುದು ಇತ್ಯಾದಿ ವಿಕಾರಗಳಾಗುವುವು ಈ ವಾರದಲ್ಲಿ ನೌಕರಿ ದಂಧೆಗಳ ಸಂಗತಿ ಬಹಳ ಕಷ್ಟದಾಯಕವಾಗಿರುವುದು ಇವರ ಕಡೆಗೆ ಗಮನಿಸದೆ ಅನೇಕ ಕಷ್ಟಗಳು ಆಗುವುವು ಕೈಕೊಂಡ ಕಾರ್ಯಗಳು ಆಕಸ್ಮಿಕವಾಗಿ ಸಂಭವಿಸಿದ ಅಡಚಣೆಗಳಿಂದ ಅರ್ಧಕ್ಕೆ ನಿಲ್ಲುವುದು. ಅದ್ದರಿಂದ ಆರೋಗ್ಯ ಉದ್ಯೋಗದ ಎಚ್ಚರಿಕೆಯಿಂದ ನಡೆಯಿರಿ ಮುಂದಿನ ವಾರ ಸರ್ವ ಬೇಜಾರಿನ ಸುಧಾರಿಸುವುದ.

ಧನು

ದೈವ ಭಕ್ತಿ ದಾನಧರ್ಮ ಪರಾಯಣತೆ. ದೊಡ್ಡವರ ದೋಸ್ತಿ ಉಳ್ಳ ನಿಮಗೆ ರಾಶಿಯಾಧಿಪತಿ ಸ್ವಕ್ಷೇತ್ರದಲ್ಲಿ ಸುಖರಾಶಿಯಲ್ಲಿ ಇರುವುದರಿಂದ ಶರೀರ ಪ್ರಕೃತಿ ಚೆನ್ನಾಗಿ ಆರೋಗ್ಯಕರವಾಗಿರುವುದು ಆದರೆ ಧನಾಧಿಪತಿ ನೀಚನಾಗಿರುವುದರಿಂದ ಅಧಿಕ ವೆಚ್ಚವಾದೀತು ಕುಟುಂಬದಲ್ಲಿ ವಿಶೇಷ ಸುಖವಿರಲಾರದು ನೌಕರಿ ದಂಧೆಗಳ ಸ್ಥಿತಿ ಸಮಾಧಾನಕರವಾಗಿರಲಾರದು. ಆದರೂ ಈ ವಾರದಲ್ಲಿ ಮಾನ ಸನ್ಮಾನವೂ, ವಿದ್ವಾಂಸರ ಭೇಟಿಯೂ, ಆಗುವುದು ಪುಷ್ಪಾದ ಸಹವಾಸದಿಂದ ಮಣ್ಣಿಗೂ ಕೂಡಾ ಅದರ ವಾಸನೆ ಹತ್ತುವಂತೆ, ನಿಮಗೆ ಚಂದ್ರ ಗ್ರಹ ಮುಂದೆ ಗುರು ಸಮಾಗಮಕ್ಕೆ ಬರುವಾಗ ಅತೀ ಸೌಖ್ಯ ಸಂತೋಷ ದೊರೆಯಲಿರುವುದು.

ಮಕರ

ನಿಮಗೆ ಈ ವಾರವು ಶುಭದಾಯಕವಾಗಿರುವುದು ಇದಕ್ಕೆ ಕಾರಣ ವಿಷ್ಟೇ ಮನುಕಾರಕ ನಾದ ಚಂದ್ರ ಸೂರ್ಯ ಶುಭ ಗ್ರಹ ಸನ್ನಿಂದದಿಂದಲೂ ಜನ್ಮರಾಶ್ಯಾಧಿಪತಿಯನ್ನು ದಾಟಿ ಉಚ್ಚಾರೋಹಣವಾಗುವುದರಿಂದ ವ ನಸ್ಸು ಸರ್ವಸಿದ್ಧಿ ಸಾಧನವಾಗುವುದು ಮೋಕ್ಷ, ಬಂಧನ, ಸುಖ, ಸಮಾಧಾನಕರವಾದ ಇಚ್ಛೆ ಇವುಗಳನ್ನು ಕೊಡುವುದು ಮನಸ್ಸೇ ಅದ್ದರಿಂದ ಪ್ರಸನ್ನ ಮನಸ್ಸಿನಿಂದ ಉತ್ತಮ ಅಧಮ ಅದೋಗತಿಗಳನ್ನು ಕೊಡುವುದ ಮನಸ್ಸು, ಈ ಮನಸ್ಸು ಸರ್ವ ಕಾರ್ಯ ಯಂತ್ರವುದ. ಸಾಧು ಸಂತರಾದ ತಮ್ಮ ರಾಮ ಮಹಾತ್ಮ ಸಹ ಮನಸ್ಸನ್ನು ಹುರಿದುಂಬಿಸುತ್ತಾರೆ ಆದರಿಂದ ಮನಸ್ಸನ್ನು ವಿಗಿಸಿ ದೃಢ ಧೈರ್ಯದಿಂದ ವಿಚಾರಿಸಿ ಉದ್ಯೋಗ ವ್ಯವಹಾರಗಳಲ್ಲಿ ಮುಂದುವರಿದರೆ, ಮಾನ ಸನ್ಮಾನಗಳೂ ದೊರೆಯುವುದು ನೌಕರಿ ದಂಧೆಗಳ ಸ್ಥಿತಿ ಸಮಾಧಾನವಿರುವುದು ದುಡ್ಡಿನ ಸಂಗ್ರಹವಾಗಿರುವುದು, ಪ್ರವಾಸಾನುಕೂಲ ಕೂಡಿ ಬರುವುದು

ಕುಂಭ

ನಿಮ್ಮ ಜನ್ಮರಾಶಿಯ ದ್ವಿತೀಯದ ಗುರು ಗ್ರಹನು ಎಲ್ಲಾ ವಿಷಯದ ಸುಖಗಳನ್ನು ಕೊಡಲಿರುವನು. ಆದರೆ ಜನ್ಮಾಧಿಪತಿ ನೀಚನಾಗಿ ಕೇತು ಗ್ರಹ ಸಂಪರ್ಕದಿಂದಿರುವುದರಿಂದ, ಮನಸ್ಸಮಾಧಾನವಾಗಿರಲಾರದು ನವಮಾಧಿಪತಿ ಅಷ್ಟಮಾಧಿಪತಿಯೊಡನೆ ಸೇರಿರುವುದರಿಂದ ಹಿರಿಯರ ಭಾಗ್ಯ ಕಿಂಚಿತ್ ಹಾನಿಯೂ, ಬಾಧಕಗಳು ಉಂಟಾಗಲಿರುವುದು. ವಾಸಸ್ಥಾನವನ್ನು ಬದಲಾಯಿಸುವುದಾಗಲೀ, ಪ್ರವಾಸ, ಕೈಕೊಳ್ಳುವುದಾಗಲೀ ಮನಸ್ಸು ಉಂಟಾದೀತು. ವ್ಯಯದ ಅಂಗಾರಕನು ಶರ್ಮ ಭ್ರಷ್ಟತೆ, ಭಂಗ, ಪರಾಭವಗಳ ಭಯವನ್ನು ಉಂಟುಮಾಡುತ್ತದಲ್ಲಿ ಸಾಧನಾ ಸಾಮರ್ಥ್ಯವನ್ನುಂಟುಮಾಡುತ್ತದೆ ಉತ್ತ

ಕ್ಕೊ ವದ್ಧವಿರುವ ಗುರು ಸಹಾಯದಿಂದ ಪ್ರಭಳ ಭಾಧಕ ಉಂಟಾಗಲಾರದು ಸ್ತ್ರೀಯರಿಗೆ ಆರೋಗ್ಯವು ಚೆನ್ನಾಗಿರಲಾರದು ಉದರ ಶೂಲೆ ಅಸ್ತಿ ಜ್ವರ ಬುದ್ಧಿ ವಿಭ್ರಮಾದಿಗಳಿಂದ ಕಿಂಚಿತ್ ವ್ಯಸನಿಸಬೇಕಾಗುವುದು. ಋಣ ಭಾಧೆಯು ಪದೇ ಪದೇ ಪೀಡಿಸಿ ಪಶ್ಚಾತ್ತಾಪಕ್ಕೆ ಎಡೆಯನ್ನು ಉಂಟುಮಾಡಿದರೂ, ವ್ಯಸನ ನಿವೃತ್ತಿ ಹೊಂದುವುದು, ಸಾಮಾನ್ಯ ಉತ್ತಮ.

ಮೀನ

ಸಮಾಜ ಪರಕಾರ್ಯಗಳಲ್ಲಿ ಆಸಕ್ತಿ ಮಿತ್ರ ಜನರಿಗಾಗಿ ಸಹಾಯ ಮನಾಂಗ ಪ್ರೇಮವುಳ್ಳ ನಿಮಗೆ ಸಾಂಪತ್ತಿಕ ಸ್ಥಿತಿ ಚೆನ್ನಾಗಿರುವುದಿಲ್ಲ ಆದರೂ, ಪಂಚಮದ ಚಂದ್ರನೂ ಮುಂದುವರೆಯುತ್ತ, ಉಚ್ಚರಾಶಿಯನ್ನೆದುವುದರಿಂದ ಬುದ್ಧಿ ಐಶ್ವರ್ಯ ಸ್ಥಿತಿಯು ಉಚ್ಚ ಸ್ಥಿತಿಯನ್ನೆದುವುದು ಜನರ ಸಂಗವಾಗುವುದು, ಹಿಡಿದ ಕಾರ್ಯಗಳೆಲ್ಲಾ ನಿಮ್ಮ ಇಚ್ಛೆಯಂತೆ ನೆರವೇರುವುದು ಕೋರ್ಟು ವ್ಯವಹಾರಗಳಲ್ಲಿ ಜಯ ವಿರುವುದು, ಮಾನಭಿಮಾನವೂ ಉಂಟಾಗುವುದ, ಆದರೆ ಹಿತ ಶತ್ರುಗಳ ಬಲೆಗೆ ಸಿಕ್ಕದಂತೆ ಪ್ರಯತ್ನದಿಂದ ಇರತಕ್ಕದ್ದು ಮುಂದಿನ ವಾರದ ಕರ್ತವ್ಯಗಳನ್ನು ಈ ವಾರದಲ್ಲಿ ನೆರವೇರಿಸುವುದರಿಂದ ಉತ್ತಮ ಫಲ ಪ್ರಾಪ್ತವಾಗುವುದು

ವಿದ್ಯಾಶಾಲೆಗಳಿಗೆ
ಪ್ರತಿ ವಾರವೂ
ಸ್ವದೇಶಾಭಿಮಾನಿ
ಅತ್ಯಾವಶ್ಯಕ ವಾಚನೀಯ
ವಿಷಯಗಳನ್ನು
ಒದಗಿಸುವುದು.

ಪುರೋಹಿತ ಶ್ವಾಸಹಾರಿ

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ಶಿಕ್ಷಣದಿಂದ ಜೀವನೋಪಾಯ

ಅಮೇರಿಕದ ಉದಾಹರಣೆ

★ ಶಿಕ್ಷಣವೂ ರಾಷ್ಟ್ರದ ಜೀವನವೂ
★ ಕೃಷಿ, ವಾಣಿಜ್ಯ, ಉದ್ಯೋಗ ಶಿಕ್ಷಣದಿಂದ ಜೀವನದ ಹಾದಿ
★ ಹಿಂದೂದೇಶದ ವಿದ್ಯಾ ಕ್ರಮದಲ್ಲಿ ಬದಲಾವಣೆ

ಹಿಂದೂದೇಶದ ಇಂದಿನ ವಿದ್ಯಾಭ್ಯಾಸ

ಹಿಂದೂದೇಶದಲ್ಲಿ ಇಂದು ಇರುವ ವಿದ್ಯಾ ಜೀವನದಲ್ಲಿ ತೀವ್ರ ಬದಲಾವಣೆಯಾಗುವುದು ಅತ್ಯಂತ ಆವಶ್ಯವಿರುವುದೆಂಬುದನ್ನು ಸರ್ವರೂ ಒಪ್ಪಿಕೊಂಡಿದ್ದಾರೆ. ಇದಕ್ಕೆ ಮುಖ್ಯಕಾರಣವೆಂದರೆ ನಾವು ಪಡೆಯುವ ಯಾವುದೇ ರೀತಿಯ ವಿದ್ಯೆಯಾಗಲಿ, ಮುಂದಿನ ನಮ್ಮ ಜೀವನದ ದಾರಿಯನ್ನು ತೋರಿಸುವುದಿಲ್ಲವಾದರೆ, ಆ ರೀತಿಯ ವಿದ್ಯೆಯನ್ನು ಕೊಡುವುದರಿಂದ ರಾಷ್ಟ್ರವು ಏಳಿಗೆ ಹೊಂದುವ ಬದಲು ಕ್ಷೀಣ ದೆಶೆಯನ್ನು ಹೊಂದುವುದು. ಮಹಾತ್ಮಾ ಗಾಂಧಿಜಿಯವರ ವಾರ್ಧಾಶಿಕ್ಷಣ ಪದ್ಧತಿಯು ಈ ದಾರಿಯಲ್ಲಿ ಅತ್ಯಂತ ಮಾರ್ಪಾಟನ್ನು ಮಾಡಿಬಿಡುವುದು. ಪ್ರಪಂಚದಲ್ಲಿ ಇಂದು ಪ್ರಗತಿಯ ದಾರಿಯಲ್ಲಿ ಮುಂದುವರಿಯುವ ರಾಷ್ಟ್ರಗಳ ಕಡೆಗೆ ನಾವು ನೋಡಿಕೊಂಡಲ್ಲಿ ನಮ್ಮ ಏಳಿಗೆಯನ್ನು ಯಾವ ರೀತಿ ಮಾಡಿಕೊಳ್ಳಬಹುದೆಂದು ವಿಚಾರಿಸುವುದು ಸುಲಭವಾಗಿದೆ.

ಈ ರೀತಿಯಲ್ಲಿ ನೋಡಿದರೆ ಇಂದು ಜಗತ್ತಿನ ಪ್ರಮುಖ ನಾಗರಿಕ ರಾಷ್ಟ್ರವಾದ ಅಮೇರಿಕವು ಹೇಗೆ ವಿದ್ಯಾಭ್ಯಾಸದಿಂದ ರಾಷ್ಟ್ರದ ಅನೇಕ ಸಮಸ್ಯೆಗಳನ್ನು ಪರಿಹರಿಸಿತೆಂಬುದನ್ನು ವಿಚಾರಿಸುವುದು ಅಗತ್ಯವಿದೆ

ಅಮೇರಿಕದ ರಾಷ್ಟ್ರೀಯ ವಿದ್ಯಾಯೋಜನೆ

ಯಾವುದೇ ವಿದ್ಯೆಯಾಗಲಿ, ಆ ರಾಷ್ಟ್ರದ ಸ್ಥಿತಿಗತಿಗಳನ್ನು ಹೊಂದಿಕೊಂಡಿದ್ದು ಅಲ್ಲಿನ ಸಮಸ್ಯೆಗಳ ಪರಿಹಾರದ ಸಾಧನವಾಗಿರಬೇಕು ಅಮೇರಿಕವು ಅಂತಹ ವಿದ್ಯಾಯೋಜನೆಯನ್ನು ಕೈಕೊಂಡಿತು ಇದ. ೧೯೧೭ರಲ್ಲಿ ಅವರು ಮಂಜೂರುಮಾಡಿದ ಶಾಸನದಂತೆ ಜಾರಿಗೆ ಬಂತು ಈ ಯೋಜನೆಯು ಯಾವುದೇ ರಾಷ್ಟ್ರಕ್ಕಾದರೂ ಒಂದು ಆದರ್ಶವಾಗುವುದರಲ್ಲಿ ಯಾವ ತರಹ ಸಂದೇಹವೂ ಇರುವುದಿಲ್ಲ ಕೃಷಿ, ವ್ಯಾಪಾರ, ಉದ್ಯೋಗ, ಗೃಹಕೃತ್ಯ ಮುತ್ತ ಪಹವಾಟುಗಳ ಕುರಿತು ಈ ಯೋಜನೆಯು ನಮ್ಮ ಕಾಲೇಜು ವಿದ್ಯಾಭ್ಯಾಸಕ್ಕಿಂತ ಕಡಿಮೆಯ ಗ್ರೇಡಿನಲ್ಲಿ ಸತ್ಪರಿಣಾಮ ಪಡೆದಿವೆ.

ಕೃಷಿಯಲ್ಲಿ ಶಿಕ್ಷಣ

ಅಲ್ಲಿ ನಾಲ್ಕು ರೀತಿಯ ಶಾಲೆಗಳು ಕೃಷಿಕ ವಿದ್ಯೆಗಾಗಿ ತೆರೆಯಲ್ಪಟ್ಟುವು ಕೃಷಿಯ ಪ್ರತಿಯೊಂದು ಅಂಗವೂ ವರ್ಷಕ್ಕೆ ಕಡಿಮೆಪಕ್ಷ ಆರು ತಿಂಗಳು ಯಾವುದೇ ಒಂದು ಭೂಕ್ಷೇತ್ರದಲ್ಲಿ ಸ್ವತಃ ಕೃಷಿಮಾಡಿ ತೋರಿಸುವ ರೀತಿಯಿಂದ ವಿದ್ಯಾರ್ಥಿಗಳಿಗೆ ಕಲಿಸಲ್ಪಡುತ್ತಿತ್ತು. ಈ ಕ್ರಮವು ವಿದ್ಯಾಕ್ಷೇತ್ರದಲ್ಲಿ ಕೇವಲ ಪದ್ಧತಿಗಳನ್ನು ಮುಖಪಾಠ ಹೇಳಿ ಪ್ರಯೋಗ ಜ್ಞಾನವೇ ಇಲ್ಲದ (ಇಂದು ಹಿಂದೂದೇಶದಲ್ಲಿ ಇರುವ) ವಿದ್ಯಾಕ್ರಮದ ಸಂಪೂರ್ಣ ಬದಲಾವಣೆಯಾಗಿದೆ ಅಲ್ಲಿನ ಹುಡುಗರು ತಮ್ಮ ಇಡೀ ದಿನದ ಶಾಲೆಯ ಕೆಲಸದಲ್ಲಿ ಅರ್ಧ ಹೊತ್ತನ್ನೂ, ಬೇಸಗೆಯ ಇಡೀ ಸಮಯವನ್ನೂ ಕೃಷಿಕ್ಷೇತ್ರದಲ್ಲಿಯೇ ಕಳೆಯುವರು. ವಿದ್ಯಾರ್ಥಿಗಳು ಅವರ ಹೆತ್ತವರ ಮತ್ತು ಉಪಾಧ್ಯಾಯರೊಡನೆ ಕೃಷಿಕ್ಷೇತ್ರಕ್ಕಿಳಿದು ನಿಜವಾದ ಜೀವನದ ಸಮಸ್ಯೆಯನ್ನು ಬಗೆಹರಿಸುವಂತೆ ದುಡಿಯುವರು. ಹೀಗೆ ಅವರ ಜೀವನವೂ, ವಿದ್ಯಾಭ್ಯಾಸವೂ ಜತೆಜತೆಯಾಗಿ ಅಭಿನ್ನವಾಗಿ ಸಾಗಿರುವುದು. ಹೀಗೆ ಹುಡುಗರು ತಮ್ಮ ವಿದ್ಯಾಭ್ಯಾಸಂಗದ ಸಮಯದಲ್ಲಿ ಮಾಡುವ ಕೆಲಸಕ್ಕೆ ಸಂಬಳ ಇರುವುದು. ಅವರು ತಮ್ಮ ವಿದ್ಯಾರ್ಥಿ ಜೀವನದ ಅಂತ್ಯದಲ್ಲಿ ತಮ್ಮ ಗೈಯ್ಮೆಯಿಂದಾಗಿ ಒಂದೊಂದು ಭೂಮಿಯನ್ನು ಕ್ರಯಕ್ಕೆ ತೆಕ್ಕೊಳ್ಳಲು ಸಮರ್ಥರಾಗುತ್ತಾರೆ

ಸಂಜೆ ಹೊತ್ತಿಗೆ ಅಲ್ಲಲ್ಲಿ ಪ್ರಾಯಸ್ಥರಾದವರಿಗೆ ಶಾಲೆಗಳನ್ನು ತೆರೆದರು, ಅವರು ಎದುರಿಸುವ ಅನೇಕ ಸಮಸ್ಯೆಗಳ ಕುರಿತು ಶಾಸ್ತ್ರೀಯವಾದ ಪರಿಹಾರಗಳನ್ನು ಕಲಿಸಿದರು, ನೂತನ ಶೋಧನೆಗಳನ್ನು ಅವರಿಗೆ ತಿಳಿಸಿ ಅವರು ಕೃಷಿ ಮಾಡುವ ಮಣ್ಣಿನಲ್ಲಿ ಮತ್ತಷ್ಟು ಫಲಬರುವಂತೆ ಮಾಡಿದರು

ಇಂತಹ ಕೃಷಿವಿದ್ಯಾಭ್ಯಾಸಕ್ಕೆ ಅಲ್ಲಿನ ಫೆಡರಲ್ ಸರಕಾರವು ಬಹಳವಾಗಿ ಸಹಾಯ ಮಾಡಿತು

ವ್ಯಾಪಾರ ಶಿಕ್ಷಣ

ಇಂದು ನಾವು ವ್ಯಾಪಾರೋದ್ಯೋಗ ಶಿಕ್ಷಣವೆಂದರೆ ಶೋರ್ಟ್‌ಹೇಂಡ್, ಟೈಪ್ ರೈಟಿಂಗ್, ಬುಕ್ ಕೀಪಿಂಗ್, ಇವೇ ಮೊದಲಾದವುಗಳನ್ನು ಕಲಿಯುವುದು ಎಂದು ತಿಳಿದಿದ್ದೇವೆ. ನಮ್ಮ ಹುಡುಗರಿಗೆ ನಾವು ಅದನ್ನೇ ಕೊಡುತ್ತಿದ್ದೇವೆ ಆದರೆ ಅಮೇರಿಕದಲ್ಲಿ ಈ ಶಿಕ್ಷಣವು ಬಿನ್ನರೀತಿಯಿಂದ ಕೊಡಲ್ಪಡುತ್ತದೆ ಕಚ್ಚಾಮಾಲುಗಳನ್ನು ಪಡೆದು, ಅದನ್ನು ಮಾರುವವರಿಂದ ಪಡೆಕೊಂಡು ಬೇಕಾದವರಿಗೆ ಮತ್ತು ಮಾರಾಟಮಾಡುವ ಕಂಪೆನಿಗಳಿಗೆ ಹಂಚಿಕೊಡುವ ಕೆಲಸವನ್ನು ಅವರು ಮುಖ್ಯವಾಗಿ ಕೈಕೊಂಡರು ಸಾಮಾನಿನ ಉತ್ಪತ್ತಿ, ಅದರ ಯೋಗ್ಯವಾದ ಹಂಚೋಣಿಗಳು ಇದರಿಂದ ಸರಿಯಾಗಿ ನಡೆಯಿತು ಈ ಕ್ರಮವೂ ಕೂಡ ಪ್ರಾಯಸ್ಥರಿಗೆ, ಹುಡುಗರಿಗೆ ಸರಿಯಾಗಿ ಕಲಿಯುವಂತೆ ಹಗಲು ಮತ್ತು ಸಂಜೆ ಹೊತ್ತುಗಳಲ್ಲಿ ಶಾಲೆಗಳೇರ್ಪಟ್ಟುವು. ಶಾಲೆಗಳಲ್ಲಿ ಅವರವರ ವ್ಯಾಪಾರಗಳಿಗೆ ಸರಿಯಾಗಿ, ಅರ್ಥಿಕ ಶಾಸ್ತ್ರ, ಭೌಗೋಳಿಕ ಜ್ಞಾನ, ಗಣಿತ ಜ್ಞಾನ, ಭಾಷಾಜ್ಞಾನಗಳೂ ಕಲಿಸಲ್ಪಟ್ಟುವು ಕಳೆದ ವರ್ಷದ ಪರಿಗಣನೆಯಂತೆ ಅಮೇರಿಕದ ೧೭೫ ಬೇರೆ ಬೇರೆ ಉದ್ಯೋಗಗಳಲ್ಲಿ ಹೀಗೆ ತಯಾರಾದ ೭೦೨,೦೦೦ ಮಂದಿಯು ಉದ್ಯೋಗದಲ್ಲಿ ದ್ದಾರೆ ಬುಕ್ ಬೈಂಡ್ ಮಾಡುವುದು, ರೊಟ್ಟಿ ಮಾಡುವುದು, ಮರದ ಕೆಲಸ, ನರ್ಸಿಂಗ್ ಮೊದಲಾದವುಗಳ ಪ್ರಯೋಜನಕ್ಕೆ ಬೇಕುವಂತೆ ಕಲಿಸಲ್ಪಡುತ್ತವೆ

ಉದ್ಯೋಗ ಶಿಕ್ಷಣ

ಇದು ಕೂಡಾ ಬೇರೆಬೇರೆ ರೀತಿಯಲ್ಲಿ ಇಡೀ ದಿನ, ಅರ್ಧ ದಿನ, ಸಂಜೆಗಳಲ್ಲಿ ಕಲಿಸಲ್ಪಟ್ಟಿತು ಬೇರೆಬೇರೆ ಉದ್ಯೋಗಗಳಲ್ಲಿರುವ ಮಾಹಿತಿಗಳನ್ನು ಅವರಿಗೆ ಹೇಳಿಕೊಟ್ಟು ಎಲ್ಲರೂ ಆಯಾಯ ಕೆಲಸದಲ್ಲಿ ತಮ್ಮ ಪೂರ್ಣ ಜೀವನವನ್ನು ಸಾಗಿಸುವಂತೆ ಮಾಡಲಾಯಿತು. ಅಂಗಹೀನರಿಗೂ ಅವರಿಗೆ ಸಾಧ್ಯವಾಗುವ ಉದ್ಯೋಗವನ್ನು ಕಲಿಸಿ, ಅವರೂ ನ್ಯಾಯವಾದ ಜೀವನವನ್ನು ನಡೆಸುವಂತೆ ಸರಕಾರವೇ ಏರ್ಪಾಡು ಮಾಡಿತು. ಕುರುಡರೂ, ಕುಂಟರೂ, ಮೂಗರೂ ತಮ್ಮ ಗೈಯ್ಮೆಯಿಂದ ತಾವು ಜೀವಿಸುವ ಸ್ವತಂತ್ರರಾದರು

ಹೀಗಾಗಿ ಅಲ್ಲಿನ ಪ್ರಜಾಸತ್ತಾತ್ಮಕ ಸರಕಾರವು ಪ್ರತಿಯೊಬ್ಬ ದೇಶೀಯ ಯುವಕನಿಗೆ ಯೋಗ್ಯಶಿಕ್ಷಣವೂ, ಶಿಕ್ಷಣ ಮುಗಿಸಿದ ಮೇಲೆ ಸರಿಯಾದ ಉದ್ಯೋಗವೂ ಕೊಡುವ ಏರ್ಪಾಡನ್ನು ಮಾಡಿದೆ. ಈ ಕೆಲಸಕ್ಕೆ ಯೋಗ್ಯರಾದ ಶಿಕ್ಷಕರು ನೇಮಿಸಲ್ಪಟ್ಟಿರುತ್ತಾರೆ

ಇಂತಹ ಶಾಸನವು ಹಿಂದೂದೇಶದಲ್ಲಿಯೂ ಜಾರಿಗೆ ಬರುವುದು ಅವಶ್ಯವಲ್ಲವೇ?

PRIMITIVE RACES

THE Oriental loves the feasts of his country, where the shades of ancestors play the part of invisible guests. For a long time he joyfully anticipates the harvest festival. It is a pleasing sight for him to see his wife arranging the yellow ears of rice in the richly decorated ceremonial basket, as well as garden fruit placed on a banana leaf. Whilst the strains of Argentine airs are softly played on a bamboo instrument, he ties a handful of rice ears in his scarf and does the same with a friend's scarf, then, with these two packets balanced at the ends of a flexible bamboo, he will dance gracefully to the sound of the sinuous music

He loves the tombs of his country, the tombs of the saints of Islam and magnificent sultans from whom he asks for happiness and health, the tombs of his parents, to where, at the close of the day, the family takes flowers and food, so that the shades of the ancestors, in the cold Kingdom of Shadows, can eat, rejoice and know about the faithful love of their children

As a matter of fact death makes terrible ravages every year in these countries It seizes its pray, weakened by malaria, which is too feeble to offer any resistance

This monster spreads its tentacles over the whole world, where 800 millions of malarial sufferers groan under the burden of fever Far away, in countries where malaria does not exist influenza colds and influenza have free play, there, millions of human beings fall beneath the scythe of the terrible reaper

For centuries past the ignorant races of the beautiful Eastern countries have taken their offerings and placed them on the tombs of the saints of Islam Whilst they have gabbled their prayers with touching resignation scientists have worked to ensure the well-being of these primitive races and succeeded in gaining the victory over the monster MALARIA by administering from 5 to 7 days a daily dose of 15 to 20 grains of quinine to the sufferers, as is recommended by the Malaria Commission of the League of Nations. This Commission has laid down that as a preventive measure, a daily dose of 6 grains of quinine should be taken through out the fever-season.

Little by little the mind of the simple Oriental has been enlightened and he now understands that quinine protects him as a heavenly gift and brings him health.

In Western countries, where magazines and newspapers rapidly disseminate news concerning the progress made by science and where, people are educated in the principles of hygiene, the fight against this other monster, influenza, should not last so long. In these countries, children in the schools, workmen in factories, soldiers in barracks, are safeguarded against this terrible scourge by the distribution every day of 3 grains of quinine per person

Mal E No 58

ಉತ್ತಮ ಆರೋಗ್ಯವು

ANDREWS LIVER SALT

ಮಿತವ್ಯಯ ಟಿನ್ನುಗಳಲ್ಲಿ

ಉತ್ತಮವೂ ದೃಢವೂ ಆದ ಆರೋಗ್ಯಕ್ಕಾಗಿ ಅಂತರೇಂದ್ರಿಯಗಳನ್ನು ಶುದ್ಧಗೊಳಿಸಿರಿ ಯಾವಾಗಲೂ ಒಂದು ಗ್ಲಾಸು ಎಂಡ್ರೂಸ್ ಲಿವರ್ ಸೋಲ್ಟನ್ನು ತೆಗೆದುಕೊಳ್ಳಿರಿ— ಇದೇ ಸುರಕ್ಷಿತವಾದ ಹಾದಿ

ಎಂಡ್ರೂಸ್ ಈಗ ಮಿತವ್ಯಯ ಟಿನ್ನುಗಳಲ್ಲಿ ಮಾರಲ್ಪಡುತ್ತದೆ (ದೊಡ್ಡ ಟಿನ್ನು ರೂಪಾಯಿ 1-4-0 ಸಣ್ಣ ಟಿನ್ನು ಆಣೆ 11) ಈ ಮಿತವ್ಯಯದ ದರವು ಪ್ರತಿ ಒಬ್ಬರಿಗೂ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಅನುಕೂಲವಾಗಿದೆ ಅಂತರೇಂದ್ರಿಯಗಳನ್ನು ಶುದ್ಧಗೊಳಿಸುತ್ತದೆ. ಎಲ್ಲಾ ಉಕ್ಕಿಬರುವ ಲವಣಗಳಿಗಿಂತಲೂ ಎಂಡ್ರೂಸ್ ಲವಣವು ಲೋಕದಲ್ಲಿ ಅಧಿಕವಾಗಿ ಮಾರಲ್ಪಡುತ್ತದೆ

ಎಂಡ್ರೂಸ್ ಲವಣವು ಟಿನ್ನುಗಳಲ್ಲಿ ಉತ್ತಮ ಆದರೆ ಇಷ್ಟರವರೆಗೆ ನಿಮಗೆ ಚಿರಪರಿಚಿತವಾದ ಲವಣವು ಬಾಟ್ಲಿಗಳಲ್ಲಿ ದೊರೆಯುತ್ತದೆ.

784

ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ಆಷಾಢ ಬ॥ ೬ ಶನಿವಾರದಿಂದ ಆಷಾಢ ಬ॥ ೧೨ ಶುಕ್ರವಾರದ ವರೇಗಿನ ಪಂಚಾಂಗ. (೧೯೩೯ನೇಯ ಮಿಥುನ ಕಾರ್ತೆಲ್)

8	ಶನಿ	೨೦	೯॥	ಉ ಭಾದ್ರ	೪	೨೪	
9	ರವಿ	೨೧	೧೦॥	ಉ ಭಾದ್ರ	೮॥	೨೫	
10	ಸೋ.	೨೨	೧೨॥	ರೇವತೀ	೧೨॥	೨೬	
11	ಮಂಗ	೨೩	೧೩॥	ಅಶ್ವಿನಿ	೧೫	೨೭	
12	ಬುಧ	೨೪	೧೩	ಭರಣೀ	೧೬॥	೨೮	
13	ಗುರು	೨೫	೧೧।	ಕೃತ್ತಿಕಾ	೧೬॥	೨೯	
14	ಶುಕ್ರ	೨೬	೮॥	ರೋಹಿಣಿ	೧೫॥	೩೦	

THE PIE-MONEY BANK LTD.

Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs 5000/ run regularly on systematic lines. Unique Banking facilities to Businessmen and interested Public.

Apply for particulars-**K. R. GURU**, *Managing Director*

THE Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.
in denominations of

RS. 50/-,100/-,500/-,1,000/-, & 5,000/
are now issued at all our Branches

For particulars call at or write to any of our nearest Branches.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯುಂಟಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವ[illegible] ... ಶರೀರಕ್ಕೆ ಏನೂ ಅಪಾಯವಾಗದ ... ಗರ್ಭಧಾರಣ ... [illegible] ವೈದ್ಯ ಎಲ್. ಸಿ. ಪಿ. ಎಸ್. ... ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಚೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪-೦-೦ ವಿ. ಪಿ.

ವಿಳಾಸ: ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.)

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ 1-4-0 (ಪಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಆಂಡ್ ಕೋ.,
ಆಯುರ್ವೇದಿಕ ಸಮಾಜ ಪೆರಿಡೇಪಿ
() Peridepi (ನೆಲ್ಲೂರು ಡಿ.)

HOUNSA

ಹಂಸಾಸ್ನೋ ಮತ್ತು ಬ್ರಿಲ್ಲೆಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ರೋಡೋಕಟ್ಟಾ ಬಜಾರ್ ಮಂಗಳೂರು

ಬರೇ ರೂ 1-4-0ಕ್ಕೆ 8 ಗಡಿಯಾರಗಳು ಮತ್ತು 1295 ಫೆನ್ಸಿ ಬಹುಮಾನಗಳು

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 8 ಸೀಸೆ ಪರಿಮಳದ ಸೆಂಟನ್ನೂ ಅಥವಾ 8 ಸೀಸೆ ಸುಬಳ... ಯ ಮದ್ದನ್ನು ಪಡಕೊಳ್ಳುವವರಿಗೆ 2 ಗೋಲ್ಡ ಗಿಲ್ಟಿನ ಹಮ್ಮಿ ರಿಸ್ಟುವಾಚುಗಳೂ ಒಂದು ಕಟ್ಟುವ ಪಟ್ಟಿ ಸಹಿತ

1 ಪೋಕೆಟು ವಾಚು ಒಂದು ಜಿಲ್ಲೆಟ್ ರೇಜರೂ, ಒಂದು ಶೇವಿಂಗ್ ಬ್ರಶೂ, ಒಂದು ಶೇವಿಂಗ್ ಸಾಬೂನು, ಒಂದು ಕನಡಿ, ಒಂದು ಬಾಚಣಿಗೆ, 14 ಕೆರೆಟ್ ರೋಲ್ಡ್ ಗೋಲ್ಡ ನಿಬ್ಬಿನ ಫೌಂಟೆನ್ ಪೆನ್ನು, ಒಂದು ಸೆಟ್ಟು ರೋಲ್ಡಗೋಲ್ಡ ಗುಂಡಿಗಳು, ಒಂದು ಪೆಕೆಟ್ ಪೌಡರು, ಒಂದು ಚೂರಿ, ಒಂದು ಪೇರ್ ಕನ್ನಡಕ, ಒಂದು ಬಂಗಾರದ ಗಿಲ್ಟಿನ ಉಂಗುರ, 360 ಫೀಟ್ ದೂರಕ್ಕೆ ಬೀಳುವ ಒಂದು ಟೋರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ ಗಟ್ಟಿಯಾದ ಮೆಶಿನರಿಯಿಂದ ಸಾಧಲ್ಪಟ್ಟ ಒಂದು ಜರ್ಮನ್ ಟೈಮ್‌ಪೀಸೂ ಇವುಗಳನ್ನು ಉಚಿತವಾಗಿ ಕೊಡುವೆವು. ಪೆಕಿಂಗ್ ಮತ್ತು ಟಪ್ಪಾಲು ಖರ್ಚು 0—14—0 ಪ್ರತ್ಯೇಕ.

The American Commercial Stores Post Box No 12213 Calcutta (S A)

ಡೋಂಗರೆ ಇವರ ಬಾಲಾಮೃತವು

ಮಕ್ಕಳ
ಹಳೆಯ ಮತ್ತು ಅಸಹ್ಯವಾದ ರೋಗ
ಮತ್ತು ಒಳಜ್ವರ ಇವುಗಳನ್ನು ಗುಣ
ಪಡಿಸಿ ಮಕ್ಕಳಿಗೆ ಪುಷ್ಟಿಯನ್ನು
ಬಲವನ್ನು ಕೊಡುತ್ತದೆ

THE

Bank of Mangalore Ltd.,

MANGALORE

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

All kinds of banking business transacted

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—14—0	—
„ ದುಯಂ „ „	1—12—0	1—12—0
„ ಅವ್ವಲ್ ಸುಗ್ಗಿ „	1—12—0	—
„ ದುಯಂ „	1—10 0	—
ಅಕ್ಕಿ ಅವ್ವಲ್ ಗುಡ್ಡು	4—10—0	4—12—0
ದುಯಂ „ „	4—6—0	4—8—0
„ ಅವ್ವಲ್ ಸಗಿ „	4—6—0	4—8—0
„ ದುಯಂ „	4—4—0	4—6—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35 0—0
„ ಸಿಪ್ಪೆ ಇದ್ದದು „	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	60—0—0	—
„ ದಿಲ್‌ಪಸಂದ	52—8—0	—
ತೆಂಗಿನ ಎಣ್ಣೆ ಮಣಕ್ಕೆ	8 6—0	8—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	3—8—0	4—4—0
ಗೇರುಬೀಜ ಮುಡಿಗೆ	8—12—	3—12—0
ಕಬ್ಬಿನ ಬೆಲ್ಲ ಖಂಡಿಗೆ	52—8—0	57—8—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	14—8—0	16—8—0

ಪೂರ್ವ ಮತ್ತು ಪಶ್ಚಿಮ ದೇಶಗಳು ಪರಸ್ಪರ ಭಿನ್ನ ಸಂಸ್ಕೃತಿ, ಭಿನ್ನ ಸಂಪ್ರದಾಯಗಳಿಂದ ಬಹು ವಿಧದಲ್ಲಿ ಬೇರೆಯಾಗಿದ್ದರೂ, ಅವುಗಳ ಇಂದಿನ ಸಂಪರ್ಕದಿಂದಾಗಿ ಈ ಎರಡು ದೇಶಗಳ ಜನರ ಜೀವನ ಕ್ರಮದಲ್ಲಿ ಆರ್ಥಿಕ ವಿಚಾರದಲ್ಲಿ ಮತ್ತು ರಾಜಕೀಯ ವಿಚಾರದಲ್ಲಿಯೂ ಕೂಡಾ ಬಹಳ ಸುಧಾರಣೆಗಳುಂಟಾಗಿವೆ

ಹತ್ತೊಂಬತ್ತನೇ ಶತಮಾನದ ಅಂತ್ಯಭಾಗದಲ್ಲಿ ಹಿಂದೂದೇಶದ ಜನರ ಪ್ರತಿಯೊಂದು ಜೀವನ ವಿಭಾಗದಲ್ಲಿಯೂ ಯೂರೋಪಿನ ಸಂಪರ್ಕದಿಂದ ಬಲವಾದ ವ್ಯತ್ಯಾಸಗಳು ಕಂಡುಬಂದವು ಅದುವರೆಗೆ ಈ ದೇಶದಲ್ಲಿ ಸ್ಥಿರವಾಗಿ ಪ್ರಚಾರದಲ್ಲಿದ್ದ ಆಯುರ್ವೇದ ಔಷಧಗಳ ಪ್ರತಿಷ್ಠೆಯು ಕಡಿಮೆಯಾಗಿ ಎಲೋಪತಿ ಯೆಂಬ ಪಾಶ್ಚಾತ್ಯ ಔಷಧಕ್ರಮವು ಸ್ಥಾನವನ್ನೂ, ಮನ್ನಣೆಯನ್ನೂ ಪಡೆಯಿತು.

ಹಿಂದೂದೇಶದಲ್ಲಿ ಔಷಧಗಳಿಗೆ ಬೇಕಾದ ಸಸ್ಯಗಳೇ ಮೊದಲಾದುವು ಬಹಳವಾಗಿ ಇದ್ದರೂ ಅವುಗಳನ್ನು ಶೋಧನೆಮಾಡಿ ಉಪಯೋಗಕ್ಕೆ ತಂದುಕೊಳ್ಳುವುದು ತೀರಾ ಕಡಿಮೆಯಾಗಿತ್ತು ಒಂದು ಕಡೆಯಿಂದ ಕೆಲವು ವೈದ್ಯರು ಇನ್ನೊಬ್ಬರಿಗೆ ತಿಳಿಸಿದರೆ ತಮ್ಮ ಉತ್ಪತ್ತಿಯು ಕಡಿಮೆಯಾಗುವುದೆಂದೂ, ತಮ್ಮ ಜೀವನೋಪಾಯಕ್ಕೆ ಹಾನಿತಟ್ಟುವುದೆಂದೂ ತಮ್ಮ ಪ್ರತಿಷ್ಠೆಯು ಹಾಳಾಗಬಹುದೆಂದೂ ತಾವು ತಿಳಿದಿದ್ದ ಅಮೂಲ್ಯ ಔಷಧಿಗಳನ್ನು ಗುಪ್ತವಾಗಿಯೇ ಇಟ್ಟುಕೊಂಡರು ಹೀಗಾಗಿ ರಾಷ್ಟ್ರದ ಸೊತ್ತಾಗಿರುವ ಔಷಧಿಗಳ ಹಲವು ಪ್ರಯೋಗಗಳು ಕಡಿಮೆಯಾಗುತ್ತಾ ಬಂದಂತೆ, ಇನ್ನೊಂದು ಕಡೆಯಿಂದ ಪಾಶ್ಚಾತ್ಯ ಪದ್ಧತಿಗಳ ಹೊಸ ಹೊಸ ಪ್ರಯೋಗಗಳೂ ಸರ್ಜರಿ ಮೊದಲಾದುವುಗಳೂ ಹಿಂದೂದೇಶವನ್ನು ಬೆರಗುಗೊಳಿಸಿದವು ದೇಶೀಯ ಔಷಧಗಳು ಸಂಪೂರ್ಣ ನಿರ್ನಾಮವಾಗುವವೇ ಎಂದು ಸಂದೇಹಗೊಂಡಿದ್ದ ಸಮಯದಲ್ಲಿ ನಮ್ಮ ದೇಶೀಯ ಔಷಧಗಳ ಹಾಗೂ ರಸಾಯನಿಕ ವಸ್ತುಗಳ ತಯಾರಿಯ ಕಡೆಗೆ ಹಲವು ವೈಜ್ಞಾನಿಕರ ಗಮನವು ಹರಿದಿತು

ಹೀಗೆ ಹಿಂದೂದೇಶದಲ್ಲಿ ರಾಷ್ಟ್ರೀಯ ಜಾಗೃತಿಯುಂಟಾಗುತ್ತಾ ಬಂದ ಸಮಯದಲ್ಲಿ, ಆಯುರ್ವೇದಕ್ಕೆ ವಿಜ್ಞಾನದ ಶೋಧನೆಯನ್ನು ಜತೆಗೂಡಿಸಿ ದೇಶೀಯ ಔಷಧಗಳ ಪೂರ್ಣ ಯೋಗ್ಯತೆಯನ್ನು ಜಗತ್ತಿಗೆ ಸಾರಿದ ಕೀರ್ತಿ ಆಚಾರ್ಯ ಪಿ ಸಿ ರೇ ಇವರ ಪಾಲಿನದಾಗಿರುತ್ತದೆ

ಹೀಗೆ ದೇಶೀಯ ಔಷಧಿಗಳನ್ನು ಆರಂಭ ಮಾಡಿದ ಈ ಮಹನೀಯರು ಉಜ್ವಲ ದೇಶಾಭಿಮಾನದಿಂದ ಪ್ರೇರಿತರಾದರು, ಮಾತ್ರವಲ್ಲದೆ ತಮ್ಮ ಕಾರ್ಯದಲ್ಲಿ ಕೃತಕೃತ್ಯರಾಗಿದ್ದಾರೆ ರಾಷ್ಟ್ರೀಯ ಹಿತದೃಷ್ಟಿಯಿಂದ ಅವರು ನೂತನ ಶೋಧನೆಗಳನ್ನು ಆರಂಭಿಸಿದರೂ, ಅದು ಕೇವಲ ಪೌರ್ವಾತ್ಯಕ್ರಮದಿಂದ ಕೂಡಿದ್ದಾಗಿರದೆ ಪಾಶ್ಚಾತ್ಯಕ್ರಮವೂ ಬೆರೆತಿದ್ದು ಸರ್ವರಿಗೂ ಹಿತವಾಗಿ ಬೆಳೆಯಿತು. ಆಸವ, ಲೇಹ, ಅರಿಷ್ಟ ಮೊದಲಾದುವುಗಳನ್ನು ಪ್ರಯೋಗ ಪರೀಕ್ಷೆಗಳಿಂದ ತಯಾರುಮಾಡುವುದರ ಮೂಲಕ ಅವುಗಳು ದೇಶೀಯ ವೈದ್ಯರಿಗೂ ಎಲೋಪತಿಯ ಡಾಕ್ಟರರಿಗೂ ಉಭಯ ಪಕ್ಷದವರಿಗೂ ಸರಿಯಾಗಿ ಉಪಯುಕ್ತವಾಯಿತು ಹೀಗೆ ಹಿಂದೂದೇಶದಲ್ಲಿ ದೇಶೀಯ ಔಷಧಿಗಳನ್ನು ಆರಂಭಿಸದಿದ್ದರೆ ರಾಷ್ಟ್ರಕ್ಕೆ ಎಷ್ಟರಮಟ್ಟಿಗೆ ಹಾನಿ ಬರುತಿತ್ತೆಂಬುದು ಹೇಳಬರುವುದಲ್ಲ

ಸರ್ ಪಿ ಸಿ ರೇಯವರ ಇಡೀ ಜೀವನವು ಇಂತಹ ಅನೇಕ ಅದ್ಭುತಗಳಿಂದ ಕೂಡಿದೆ ಅವರು ಅನೇಕ ದೇಶೋಪಯೋಗೀ ಕಾರ್ಯಗಳನ್ನು ಮಾಡಿದ್ದಾರೆ ಅವರು ಸ್ಥಾಪಿಸಿದ ದೇಶೀ ಕೈಗಾರಿಕೆಯು ಬಹಳ ಸಾಮರ್ಥ್ಯದಿಂದ ಮತ್ತು ಹೆಚ್ಚಿನ ತಾಳ್ಮೆಯಿಂದ ಮಾಡಲ್ಪಟ್ಟು ಸಕಲರನ್ನು ದಂಗುಗೊಳಿಸಿದೆ ಮೊಟ್ಟಮೊದಲು ಕಿರಿದಾಗಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯು ಇಂದು ತನ್ನ ಉಪಶಾಖೆಗಳನ್ನು ಇಡೀ ದೇಶದಲ್ಲಿ ವಿಸ್ತಾರವಾಗಿ ಸ್ಥಾಪಿಸಿದ್ದು ಮಾತ್ರವಲ್ಲದೆ ಎಂದೆಂದೂ ಚಿರಸ್ಥಾಯಿಯಾಗಿ ಉಳಿವಂತೆ ಮಾಡಿರುವರು

ವಿಜ್ಞಾನ ಯುಗ

ಬೆಂಗಾಲ್ ಕೆಮಿಕಲ್ ಕಂಪೆನಿಯ ಪ್ರಶಂಸನೀಯ ಇತಿಹಾಸ!

ಆಚಾರ್ಯ ಪಿ. ಸಿ. ರೇಯವರ ಅಪೂರ್ವ ಶೋಧನ
ಹಿಂದೂದೇಶದ ನೂತನ ಕೈಗಾರಿಕೆಯ ಅಭಿವೃದ್ಧಿ
ಯೂರೋಪಿನೊಡನೆ ಸಮಭುಜದ ಸಾಹಸ

ಬಂಗಾಳ ದೇಶವು ಹಿಂದೂದೇಶದ ಸುಧಾರಣೆಯಲ್ಲಿ ಅತ್ಯಂತ ಮಹತ್ವದ ಕಾರ್ಯವನ್ನು ಮಾಡಿದೆಯೆಂಬುದನ್ನು ನಾವು ಅನೇಕ ರೀತಿಯಿಂದ ತಿಳಿಯಬಹುದು ಅಲ್ಲಿ ಅಂತರ್‌ರಾಷ್ಟ್ರೀಯ ಖ್ಯಾತಿಯ ಅನೇಕ ಮಂದಿ ಜನ್ಮ ತಾಳಿದರು ಠಾಗೋರ್, ಬೋಸ್, ರೇ ಮೊದಲಾದವರ ಮಹಾಕೀರ್ತಿಶಾಲಿಗಳಾಗಿದ್ದಾರೆ

೧೮೯೨ರಲ್ಲಿ ಶ್ರೀ. ಪ್ರಫುಲ್ಲಚಂದ ರೇಯವರು ದೇಶೀಯ ಔಷಧಗಳನ್ನು, ಮೂಲಿಕೆಗಳನ್ನು, ಹಾಗೂ ರಸಾಯನಿಕ ವಸ್ತುಗಳನ್ನು ತಯಾರಿಸುವ ಕುರಿತು ಆಲೋಚಿಸಿದರು ಅಂದು ಕೇವಲ ೭೦೦ ರೂಪಾಯಿಗಳ ಮೂಲಧನದಿಂದ ಕಲ್ಕತ್ತದಲ್ಲಿ ಬೆಂಗಾಲ್ ಕೆಮಿಕಲ್ ಮತ್ತು ಫಾರ್ಮಸ್ಯುಟಿಕಲ್ ವರ್ಕ್ಸ್ ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿ ಕೈಗಾರಿಕೆಯನ್ನು ಆರಂಭಿಸಿದರು

ಆ ಮೇಲೆ ಇವರೊಡನೆ ಡಾ ಎ ಸಿ ಬೋಸ್ ಮತ್ತು ಎ ಸಿ ಸಿಂಹ ಎಂಬಿಬ್ಬರು ಸಹಾಯಿಗಳಾಗಿ ಸೇರಿ ಈ ಕೈಗಾರಿಕೆಗೆ ಮತ್ತಷ್ಟು ಪುಷ್ಟಿಕೊಟ್ಟರು ಈ ಎಲ್ಲಾ ಕಾರ್ಯಕರ್ತರ ಹೃದಯಗಳಲ್ಲಿಯೂ ಅದ್ಭುತವಾದ ಕಾರ್ಯಸಾಧನೆ, ಸಾಹಸ, ಪ್ರೇಮ, ದೇಶೋದ್ಧಾರ ಬುದ್ಧಿ ಇವುಗಳ ಉಕ್ಕುತಿದ್ದವು ಹೀಗೆ ಅವರು ಮೊಟ್ಟಮೊದಲು ಬ್ರಿಟಿಷರು ಒದಗಿಸುತಿದ್ದ ಔಷಧಿಗಳನ್ನೂ, ಇನ್ನು ಕೆಲವು ಹಿಂದೀಯ ಗಿಡಮೂಲಿಕೆಗಳಿಂದ ತಯಾರುಮಾಡಿದ ಆಸವಾದಿಗಳನ್ನೂ ಮಾಡತೊಡಗಿದರು

ಶ್ರೀ ರೇಯವರು ಇದರ ನಿರ್ಮಾಣಕಾರ್ಯದಲ್ಲಿ ನಿರತರಾಗಿ ನಿಂತರು ಡಾ ಬೋಸರು ಔಷಧಿಗಳ ಕಡೆ ಗಮನವಿತ್ತರು ಶ್ರೀ ಸಿಂಹರವರು ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವ ಕೆಲಸವನ್ನು ತಕ್ಕೊಂಡರು ಆಧುನಿಕ ಪಾಶ್ಚಾತ್ಯ ಪದ್ಧತಿಯಲ್ಲಿ ನೂತನ ನೂತನ ಶೋಧನೆಗಳಿಂದ ಹೊಸ ಹೊಸ ಮದ್ದುಗಳನ್ನು ತಯಾರಿ ಮಾಡುತ್ತಾ ನಿರಂತರ ದುಡಿದವರು ಶ್ರೀ. ರೇಯವರೊಬ್ಬರೇ

ಇಂದು ಈ ಕಂಪನಿಯ ಮೂಲಧನವು ೧೯ ಲಕ್ಷ ರೂಪಾಯಿಗಳಿಗೆ ಏರಿದೆ ೧೯೦೧ರಲ್ಲಿ ಈ ಕಂಪನಿಯು ಲಿಮಿಟೆಡ್ ಸಂಸ್ಥೆಯಾಗಿ ರಿಜಿಸ್ಟರ್ ಮಾಡಲ್ಪಟ್ಟಿತು. ಮೊದಲನೆಯ ವರುಷದ ವ್ಯಾಪಾರವು ವಾರ್ಷಿಕ ಕೇವಲ ೨೫,೦೦೦ ರೂಪಾಯಿಗಳಷ್ಟಿದ್ದು ಇಂದು ೪,೦೦,೦೦೦ ರೂಪಾಯಿಗಳಿಗೆ ಏರಿದೆ ಡಾಕ್ಟರ ವೃತ್ತಿಯವರಿಗೆಂದೇ ೩,೦೦೦ ಶೇರುಗಳು ರಿಸರ್ವ್ ಮಾಡಲಾಗಿವೆ ಇದರ ಪಾಲುಗಾರರು ಇಂದು ೭೦೦ಕ್ಕೆ ಮಿಕ್ಕಿದ್ದಾರೆ ಇದರಲ್ಲಿ ಬಹು ಮಂದಿ ಪ್ರಖ್ಯಾತರಾದವರೇ ಇದ್ದಾರೆ ಇದರಿಂದಾಗಿ ನಾವು ಹಿಂದೂದೇಶದಲ್ಲಿ ಯಾವುದೇ ಉದ್ಯೋಗವಾದರೂ, ಯೋಗ್ಯ ಮೇಲ್ವಿಚಾರಣೆಯಿಂದ ಮಾಡಿದ್ದಲ್ಲಿ ಬಹಳ ಅಭಿವೃದ್ಧಿಯನ್ನು ಹೊಂದಬಹುದೆಂದು ತಿಳಿಯಬಹುದು

ಇಂದು ಈ ಉದ್ಯೋಗವು ಹೆಚ್ಚುತ್ತಾ ಬಂದಂತೆ, ಇದರ ಶಾಖೆಯೊಂದನ್ನು ಬೊಂಬಾಯಿಯಲ್ಲಿಯೂ ಸ್ಥಾಪಿಸಿದ್ದಾರೆ ಶುದ್ಧವಾದ ಆರೋಗ್ಯಕರವಾದ ಸ್ಥಳದಲ್ಲಿ ಈ ಸಂಸ್ಥೆಯು ಸ್ಥಾಪಿತವಾಗಿ ಬಹಳ ಅವಶ್ಯ ಔಷಧಿ ಮತ್ತು ರಸಾಯನ ವಸ್ತುಗಳನ್ನು ತಯಾರಿ ಮಾಡುತ್ತದೆ ಬೊಂಬಾಯಿಯ ಶಾಖೆಯಾದ ಮೇಲೆ ಇಡೀ ದಕ್ಷಿಣ ಹಿಂದೂಸ್ಥಾನದಲ್ಲಿ ಇದರ ಔಷಧ ಮತ್ತು ರಾಸಾಯನಿಕ ವಸ್ತುಗಳು ಬಹಳ ಪ್ರಚಾರವನ್ನು ಪಡೆದಿತ್ತು ಇವೆ

ಈ ಸಂಸ್ಥೆಯು ಈ ಕೆಳಗಿನ ಕಾರ್ಯಗಳನ್ನು ಮಾಡಿದೆ –

(೧) ಅದರಲ್ಲಿ ಕೆಲಸಮಾಡುವ ಹುಡುಗರಿಗೆ ಶಾಲೆಗಳನ್ನೂ ಆಟದ ಸೌಕರ್ಯಗಳನ್ನೂ ಒದಗಿಸಿದೆ

(೨) ಎಲ್ಲಾ ಅದರ ಕೆಲಸಗಾರರಿಗೂ ಧರ್ಮಾರ್ಥ ಮದ್ದು ಕೊಡಲಾಗುತ್ತದೆ

(೩) ಅದರ ಕೆಲಸಗಾರರು ತಮ್ಮ ಸ್ವಂತ ಕೋಆಪರೇಟಿವ್ ಸ್ಟೋರ್ಸ್‌ಗಳನ್ನೂ ಕ್ರೆಡಿಟ್ ಸೊಸೈಟಿಗಳನ್ನೂ ಮಾಡುವಂತೆ ಆಗಿದೆ

(೪) ವಾಚನಾಲಯ, ಲೈಬ್ರರಿ, ಕ್ಲಬ್ಬು ಮೊದಲಾದವುಗಳನ್ನು ಸ್ಥಾಪಿಸಿದೆ

(೫) ಪ್ರತಿಯೊಬ್ಬನಿಗೂ ಪ್ರೊವಿಡೆಂಟ್ ಫಂಡಿನ ಸೌಕರ್ಯವು ಕೊಡಲ್ಪಟ್ಟಿದೆ.

ಹೀಗಾಗಿ ಕಂಪನಿಯು ೩,೦೦೦ ಕೆಲಸಗಾರರಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಮಾಡಿಕೊಟ್ಟಿದೆ

ಕಂಪೆನಿಗೆ ತನ್ನ ಸ್ವಂತ ಪ್ರಿಂಟಿಂಗ್ ಪ್ರೆಸ್ಸು ಮೊದಲಾದವುಗಳಿವೆ ಇಂದು ಇಲ್ಲಿ, ಸುಗಂಧ ದ್ರವ್ಯ, ಸಾಬೂನು ಮೊದಲಾದವುಗಳೂ ತಯಾರಾಗುತ್ತವೆ

ಅದ್ಭುತವಾದ ಈ ಕೈಗಾರಿಕೆಯ ಬೆಳವಣಿಗೆಯಿಂದ ಹಿಂದೂದೇಶವು ಯಾವುದೇ ಉದ್ಯೋಗದಲ್ಲಾಗಲಿ ಇತರ ದೇಶದಿಂದ ಹಿಂದಾಗಲಾರದು ಎಂಬುದು ಸ್ಪಷ್ಟವಾಗಿ ತಿಳಿಯಬಹುದಾಗಿದೆ

ಸಂತತಿ ನಿರೋಧವು ದುಃಖಕ್ಕೆ ಮೂಲ

ಸಂತತಿ ನಿರೋಧದಿಂದ ಜಾತಿಯು ನಷ್ಟವಾಗುವ ಭಯವಿರುವುದು ಮಾತ್ರವಲ್ಲದೆ ಅದರಿಂದ ಪಾರಿವಾರಿಕ ಸುಖಕ್ಕೂ ಭಂಗ ಬರುತ್ತದೆ ಎಂದು ಲೋರ್ಡ ಡೋಸನ್ ಎಂಬ ಪ್ರಸಿದ್ಧ ವೈದ್ಯರು ಹೇಳುತಿದ್ದಾರೆ ಮಕ್ಕಳು ಆಗದೆ ಇರುವುದರಿಂದ ಪ್ರಾರಂಭದಲ್ಲಿ ಕೆಲವು ವರ್ಷಗಳ ತನಕ ನವ ವಿವಾಹಿತ ದಂಪತಿಗಳು ಆನಂದದಲ್ಲಿ ದಿನ ಕಳೆಯಬಹುದು ಆದರೆ ತಾರುಣ್ಯದ ಮದವು ಇಳಿದು ದಂಪತಿಗಳು ಶಾಂತಿಯುಕ್ತ ಕೌಟುಂಬಿಕ ಜೀವನವನ್ನು ಕಳೆಯಲು ಆರಂಭಿಸುವಾಗ ಮನೆಯಲ್ಲಿ ಮಕ್ಕಳು ಇಲ್ಲದಿರುವುದು ಬಹಳ ದುಃಖವನ್ನು ಕೊಡುತ್ತದೆ ಕೌಟುಂಬಿಕ ಜೀವನವು ನೀರಸವೂ ಬೇಸರದ್ದೂ ಆಗುತ್ತದೆ ಅದ್ದರಿಂದ ಬೇಕುಬೇಕೆಂದೇ ಸಂತಾನ ನಿಗ್ರಹ ಮಾಡಿಕೊಂಡವರು ಮುಂದೆ ಬಹಳ ಪಶ್ಚಾತ್ತಾಪಪಡುತ್ತಾರೆ ಗಂಡ ಹೆಂಡತಿ ಇಬ್ಬರು ಮಕ್ಕಳ ಇದ್ದರೆ ಸಂಸಾರ ಬಹಳ ಚೆಂದವಾಗಿ ಇರುವುದು ಹೇಗಿದ್ದರೂ ಒಂದಾದರೂ ಮಗು ಇದ್ದರೆ ಮನೆಯು ... ಅಲ್ಲದಿದ್ದರೆ ಮಕ್ಕಳೇ ಮನೆ ತುಂಬುವವರು ಅವರೇ ತಮ್ಮ ಹೆತ್ತವರಿಗೆ ತಾರುಣ್ಯದ ಸ್ಫೂರ್ತಿ ಉತ್ಸಾಹಗಳನ್ನು ಕೊಡುವವರು

'DILROZ' Regd

Dil Roz' is a sure cure for Oriental sores local sores, all kinds of deep rooted sores, skin eruptions Pimples, Eczema, Ringworm, Sinus Fistula auxillary-Abscess

There is no need of dressing the wounds, nor are baths prohibited.

Price Rs. 2 Postage extra

TAHIR DIN,
Anarkali LAHORE

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Season Deposits are accepted at 3½ % per annum.

For Further particulars apply to the Car-Street-Branch, Mangalore

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST. PAULS CHURCH,
Bolkonje Post, S K
Dated 4th Jan. 1939.

To
THE JOINT MANAGERS,
The C. P C Co Ltd, Mangalore.

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights some of which I hear were done voluntarily.

May the blessings of the almighty fall on you all and may you be able to do much good to the Publ

Renewing my thanks I remain,
Yours Sincerely
(Sd) P W Farias

Sri Parshwanathaswami,
PANCHAKALYANA POOJA MAHOSTHAM,
Venoor, S Kanara, 1939

To,
THE JOINT MANAGERS,
The Combind Booking Agency, Mangalore.

Dear Sirs,

Please permit us to express our thanks on behalf of the above committee for the efficient Service rendered by your combind Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Moodabidri Booking Clerk Mr B Krishnayya and also his other mates and Mr Raghavendra Bhandary who had specially come down from Mangalore to see to the needs of and comforts of the travelling Public Thanking you once again,

We remain Yours faithfully

Venoor, Dated 6-2-'39 (Sd) B Chandappa Indra, (*Secretary, P M Council*) (Sd) M. Jagathpal, (Sd) M Pachappa Shetty (Sd) Anantharaj Shetty (*Members, Panchakalyana Maaosthamam Committee*)

JOINT MANAGERS,

The Combined Booking Agency, MANGALORE.

The Joint Booking Office, KODIALBAIL,

CONSTRUCTIVE BANKING

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding a Crore.

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER A CRORE.

ESTD 1906
CANARA BANK. LIMITED.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಬೊಡಿನು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುವುದು.

ಸ್ವದೇಶಾಭಿಮಾನಿ

Established 1906 — Regd. No M 3406

ಸಂಪುಟ ೩೩] ತಾರೀಖು ೭-೭-೧೯೩೯ (7—7—1939) [ಸಂಚಿಕೆ ೨೭

THE

BOMBAY LIFE ASSURANCE COMPANY, LTD.,

(Estd 1908)

THE OFFICE

Which has proved its popularity by its progress

Record of New Bussiness

Proposed	Year	Completed
1,25 50 250	1934	[illegible]
1 50 18 915	1935	[illegible]
1 68 86 200	1936	[illegible]
1 72 579,75	1937	[illegible]
176 83 250	**1938**	**144 °1 000**

1939 - VALUATION YEAR

Please take up a Policy Now and participate in Bonus

To Insure … Rep … consult …

KOCHIKAR BROTHERS, LIMITED,

Madras Branch Secretary

The Bombay Life Assurance Co Ltd

The Bombay Life Building Gandhinagar UDIPI

or any of our following offices:

Post Box No 337 Mount Road, Madras

Visweshwarapuram Circle Bangalore City

Charni Road Girgaum BOMBAY 4

Car Street, Mangalore

Puthiyara, Calicut

Central Station Road, Trivandrum

MAKE LIFE WORTH-LIVING!

Indigestion Insomnia Dry Cough

Nervousness Weak Heart &c

these make you weary of Life!

'CONSULT US AND BUY

YOUR LIFE'S HAPPINESS!

Oils – that cool the brain and … sleep

Lehas – that build-up … system

Asavas – that regenerate … blood …

All Genuine Ayurvedic Preparations-

from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA N KANARA.)

ಜೀವನದಲ್ಲಿ ನಿರಾಶರಾಗಬಾರದು!

ಬಹುಕಾಲದ ಅಜೀರ್ಣ ನಿದ್ರಾವಿಹೀನತೆ ಒಣ ಕೆಮ್ಮು

ನರಗಳ ಅಬಲತೆ ದುರ್ಬಲ ಹೃತ್ಕೋಶ ಇವುಗಳು

ಜೀವನದಲ್ಲಿ ನಿರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆಕೊಡುವ ತೈಲಗಳು

ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು

ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ

ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ, – ದ ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

Edited, Printed & Published by A. S. Kamath at the Sharada Press Car Street Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 14-7-1939 ತಾರೀಖು ೧೪—೭—೧೯೩೯

ಸಚಿತ್ರ

ವಾರಪತ್ರಿಕೆ

ನೋಟಗಳು

ಬೋಸರ "ಕ್ರಾಂತಿಕಾರಕ ಪ್ರೇರಣೆ" (Revolutionary urge) ಯು ದಿನದಿಂದ ದಿನಕ್ಕೆ ವಿಪರೀತವಾಗಿ ಹೆಚ್ಚುತ್ತಿದೆ.

❖

ಬೊಂಬಾಯಿಯ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ನಿರ್ಣಯಗಳನ್ನು ಖಂಡಿಸುವ ಬಗ್ಗೆ ಸಭೆ ಜರಗಿಸುವ ಬೋಸರ ನಿರ್ಣಯ ತಪ್ಪೆಂದು ರಾಷ್ಟ್ರಪತಿಗಳು ಹೀಗೆಂದು ಅವರನ್ನು ಎಚ್ಚರಿಸಿದರು.

"ನೀವು ಹೀಗೆ ಅಖಿಲಭಾರತ ಕಾಂಗ್ರೆಸು ಕಮಿಟಿಯ ನಿರ್ಣಯವನ್ನು ವಿರೋಧಿಸುವ ನಿಶ್ಚಯವನ್ನು ಪ್ರಾಂತಿಕ ಕಾಂಗ್ರೆಸು ಕಮಿಟಿಯಲ್ಲಿ ಮಾಡಿದ್ದು ಸರಿಯಲ್ಲ; ನಿಮ್ಮ ನಿರ್ಣಯವು ಘಟನಾಕ್ರಮಕ್ಕೆ ವಿರುದ್ಧವಾದದ್ದು; ಪ್ರಧಾನ ಸಂಸ್ಥೆಯ ನಿರ್ಣಯವನ್ನು ಅದರ ಸಹಾಯಕ ಸಂಸ್ಥೆಗಳು ಮಾನಿಸದಿರಬಾರದು. . . . ಬಹಳ ಬೇಸರ, ಕಾಂಗ್ರೆಸ್ ಸಂಸ್ಥೆಯ ಶಿಸ್ತನ್ನು ಹೀಗೆ ನಾಶಮಾಡಬೇಡಿ"

❖

ಇದಕ್ಕೆ ಭೋಸರ ಉತ್ತರವು ಹೀಗಿದೆ:—

'ಕಾಂಗ್ರೆಸಿನ ಮೂಲ ಭೂತ ತತ್ವಕ್ಕೆ ವಿರುದ್ಧವಾದ ನಿಮ್ಮ ಶಿಸ್ತಿನ ಧೋರಣೆಯು ಶೋಚನೀಯ! ಇದರಿಂದ ಖಂಡಿತವಾಗಿಯೂ ಕಾಂಗ್ರೆಸಿನ ಪ್ರಜಾಪ್ರಭುತ್ವ ತತ್ವವೇ ನಾಶವಾದಂತಾಗಿದೆ!

❖

ಕಾಂಗ್ರೆಸು ಸಂಸ್ಥೆಯೊಡನೆ ಬೋಸರು ಹೂಡಿದ ಈ ಜಗಳವು ಎಲ್ಲೆಲ್ಲೂ ಅತೃಪ್ತಿಯನ್ನು ಹುಟ್ಟಿಸಿದೆ! ಕರಾಚಿಯ ಪ್ರಸಿದ್ಧ ಮುಂದಾಳುಗಳೊಬ್ಬರು, ಸುಭಾಷಭೋಸರ ಮತ್ತು ಅವರ ಸಂಗಡಿಗರ ಧೋರಣೆಯು ಈ ಸಂದರ್ಭದಲ್ಲಿ ಕಾಂಗ್ರೆಸನ್ನು ಮುರಿಯುವಂತಹುದು' ಎನ್ನುತ್ತಾರೆ! ಅವರ ಅಭಿಪ್ರಾಯದಂತೆ ಬೋಸರು ಇಂದು ಶತ್ರುಗಳ ಕೈಯ ಗೊಂಬೆಯಾಗಿದ್ದಾರಂತೆ!

❖

ಭೋಸರ ಪ್ರಾಂತವಾಗಿರುವ ಬಂಗಾಳವೇ ಅವರ ಇಂದಿನ ಈ ಧೋರಣೆಯನ್ನು ಮನ್ನಿಸುವುದಿಲ್ಲ!

❖

ಬಂಗಾಳದಲ್ಲಿಯೂ ಭೋಸರ ರೀತಿನೀತಿಯನ್ನು ಖಂಡಿಸಿ ಠರಾವು ಆಗಿದೆ. ಭೋಸರ ವರ್ತನೆಯು ಅವರ ಪ್ರಾಂತದವರಿಗೇ ಆಗುವುದಿಲ್ಲ.

❖

ಕಾಂಗ್ರೆಸಿನಲ್ಲಿರುವ ಭಯಂಕರ ಕ್ರಾಂತಿಕಾರಿಗಳಾದ ಶ್ರೀ. ಎಂ. ಎನ್. ರಾಯರುಗಳೇ ರಾಷ್ಟ್ರಪತಿಗಳ ಆಜ್ಞೆಯನ್ನು ಉಲ್ಲಂಘಿಸಿದ್ದು ತಪ್ಪೆಂದು ಹೇಳುತ್ತಾರೆ.

❖

ನಿಷೇಧಸಭೆ ಜರಗಿಸಿದಕ್ಕಾಗಿ ಬೊಂಬಾಯಿ ಕಾಂಗ್ರೆಸು ಕಮಿಟಿಯು ಶ್ರೀ ಕೆ. ಎಫ್. ನರಿಮನ್ ಮತ್ತು ಎಂಟು ಮಂದಿಯ ಮೇಲೆ ಶಿಸ್ತು ಉಲ್ಲಂಘನೆಯ ನೋಟೀಸು ಕೊಟ್ಟಿದೆ.

❖

ಕಾಂಗ್ರೆಸಿಗೆ ಎದುರು ನಿಂತು ಜಗಳ ಹೂಡಿ ಭೋಸರು ತನ್ನ ರಾಜಕೀಯ ಜೀವನವನ್ನೇ ಮುಗಿಸಿಕೊಳ್ಳುವರೇ?

❖

ಕಾಂಗ್ರೆಸಿಗೆ ಅವಿಧೇಯರಾಗಿ ಜಗಳ ಹೂಡುವ ಭೋಸರನ್ನು ಜನತೆಯು ಬಹಿಷ್ಕರಿಸುವುದು ತಪ್ಪಾಗಲಾರದು! ಸಂಸ್ಥೆ ದೊಡ್ಡದು! ವ್ಯಕ್ತಿ ಸಣ್ಣದು!

❖

ಮದ್ರಾಸಿನ ಪ್ರಧಾನ ಮಂತ್ರಿ ರಾಜಾಜಿಯವರು ಈ ರೀತಿಯಾಗಿ ಪ್ರಕಟಣೆ ಕೊಡುತ್ತಾರೆ:—

"ಮಧುರೆಯ ಮಹಾಮೀನಾಕ್ಷಿ ದೇವಾಲಯದಲ್ಲಿ ಹರಿಜನರ ಪ್ರವೇಶದ ಕುರಿತು ಶಾಂತ ರೀತಿಯ ನಿಶ್ಚಯವಾದ ವಾರ್ತೆಯನ್ನು ಕೇಳಿ ಮಿಲಿಯಾಂತರ ಮಂದಿ ಹಿಂದೀಯರ ಹೃದಯಗಳು ಆನಂದದಿಂದ ತುಂಬಿರಬೇಕು".

❖

ಆದರೆ, ಮಿಲಿಯಾಂತರ ಮಂದಿನ ಹಿಂದೀಯರ ಸಂಖ್ಯೆಯಲ್ಲಿ ಸೇರದಿರುವ, ಒಬ್ಬ ನಿವೃತ್ತ ಸರಕಾರೀ ಉದ್ಯೋಗಸ್ಥರೂ, ಮುದಿ ವಕೀಲರು ಆಗಿರುವ ಟಿ. ಎಸ್. ರಾಮಸ್ವಾಮಿ ಅಯ್ಯಂಗಾರರೆಂಬ ಸನಾತನಿಗಳೊಬ್ಬರು ಕೂಡಲೇ ಶಾಸ್ತ್ರದ ಪುಸ್ತಕಗಳನ್ನು ಓದಿ ನೋಡಿ 'ಪಂಚಮರು ದೇವಸ್ಥಾನವನ್ನು ಪ್ರವೇಶಿಸುವುದು ಅನ್ಯಾಯವೆಂದು' ಅರಚಿಯೇ ಬಿಟ್ಟರು!

❖

ಇದರಿಂದ ಪಂಚಮರಿಗೇ ಮೊದಲಾಗಿ ಕೇಡು ಕಾಗುವುದೆಂದೂ, ಕ್ರಮೇಣ ಬೇರೆ ವರ್ಣದವರಿಗೂ ಹಾನಿಯೊದಗುವುದೆಂದೂ ಅವರು ಶಂಕಿಸುತ್ತಾರೆ'.

❖

ದೇವರಿಂದ ನಿರ್ಮಿತವಾದ ಮಾನವ ಜನತೆಯ ಉದ್ಧಾರಕ್ಕಾಗಿ ಶಾಸ್ತ್ರಗಳು ನಿರ್ಮಿತವಾಗಿವೆ!

ಪಂಚಮರೂ ದೇವರಿಂದಲೇ ನಿರ್ಮಿತರಾದವರು! ಶಾಸ್ತ್ರ ಓದಿದವರು ಅವರನ್ನು ಉದ್ಧರಿಸುವುದರಲ್ಲಿ ಬೇಸರ ಪಡಬಾರದು! ಇಷ್ಟಾಗಿ, ಗಾಂಧಿಜಿಯವರೇ ಅವರಿಗೆ 'ಹರಿಜನ'ರೆಂದು ನಾಮಕರಣ ಮಾಡಿದ್ದಾರೆ!

❖

ಈ ಮುದಿ ನಿವೃತ್ತರಾದ ವಕೀಲ ಮಹಾಶಯರು ಹೀಗೆ ಅಸಂಬದ್ಧವಾಗಿ ಶಾಸ್ತ್ರದ ಮಾತನ್ನು ಉಚ್ಚರಿಸುವ ಮಹಾಪಾಪ ಮಾಡುವುದೇಕೆ?

❖

ಬಹುಶಃ ಹರಿಜನರು ಬರುವ ಜನ್ಮದಲಿ ಶಿಕ್ಷೆಗೆ ಗುರಿಯಾಗುವರೆಂದು ಈ ಮುದಿ ವಕೀಲರು ಹೆದರಿರಬಹುದು!

❖

ಈ ಜನ್ಮದಲ್ಲಿಯೇ ಎಷ್ಟೆಷ್ಟೋ ಶಿಕ್ಷೆಗಳಿಗೆ ಕಾರಣರಾದ ಈ ವಕೀಲರು, ಬರುವ ಜನ್ಮದ ಶಿಕ್ಷೆಗೆ ಏಕಿಷ್ಟು ಹೆದರುತ್ತಾರೋ?

❖

ಮುದಿಪ್ರಾಯ ತಾನೆ? ಎಲ್ಲಾ ತಿರುಗು ಮುರುಗು!

❖

ಮದ್ರಾಸಿನ ಯುವಕ ಸಂಘವೊಂದರಲ್ಲಿ ಭಾಷಣ ಮಾಡುತ್ತಾ ಶ್ರೀ. ಸತ್ಯಮೂರ್ತಿಗಳು ಗಾಂಧಿಜಿಯವರನ್ನು ನಿಮ್ಮ ಆದರ್ಶಮೂರ್ತಿಯಾಗಿ ಮಾಡಿಕೊಳ್ಳಿರಿ ಎನ್ನುತ್ತಾರೆ!

❖

ಇಂದಿನ ಭಾರತದ ಕ್ರಾಂತಿಕಾರರಾದ ಯುವಕರಿಗೆ ಸತ್ಯಮೂರ್ತಿಗಳ ಈ ಉಪದೇಶವೇ?

❖

ಎಡಪಕ್ಷದಲ್ಲಿ ನಿಂತು, ಬಲಪಕ್ಷದ ಮುಂದಾಳುಗಳಾದ ಗಾಂಧಿಗಳೊಡನೆ ಜಗಳಾಡಲು ಸೊಂಟಕಟ್ಟಿದ ಇಂದಿನ ನಮ್ಮ ವೀರಾಗ್ರಣಿಗಳೊಡನೆ ಈ ಮಾತೇ?

❖

ಗಾಂಧಿಜಿಯವರು ಈಗ ರಾಜಕೀಯವನ್ನು ಬಿಟ್ಟುಬಿಡಲಿ ನಾವಿದ್ದೇವೆ. ಎನ್ನುವ ಹೊಸ ಧುರೀಣರೊಡನೆ ಈ ನುಡಿಯೇ?

❖

ಅಥವಾ ಗಾಂಧಿಜಿಯವರ ತತ್ವವನ್ನೇ ತಿಳಿಯದ ಈ ಮಂದಿಯೊಡನೆ ಹೀಗೂ ಹೇಳುವುದೇ?

❖

ಗಾಂಧಿಜಿಯವರು ಯುವಕರ ಆದರ್ಶಮೂರ್ತಿಯಂತೆ!

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮ ವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ದೊರೆಯಲು ಅಮಿತ ರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತೆ ವಿಶ್ವವ ಸುಡುವ ಬರುತಿರುವ । ಗರಲಕವರಂಜಿದರೆ! ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ । ಧೀರ ಬಲರಿ ಕೊರೆದು ಧೀರರು ನಿಶ್ಚಿತಾರ್ಥವನು ।

ತಾರೀಕು ೧೪—೭—೧೯೩೯ | ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 14—7—1939

ಪ್ರಜಾಪ್ರಭುತ್ವದ ರಾಷ್ಟ್ರಗಳು ಸರ್ವಾಧಿಕಾರಿಗಳನ್ನು ಬಹಿಷ್ಕರಿಸಬಾರದೇ?

★ ಬಹಿಷ್ಕಾರವೇ ಬಲವಂತವಾದ ಅಸ್ತ್ರ!
★ ಹೇಡಿತನದಿಂದ ಪ್ರಮಾದವಾಯಿತು!
★ ಶಕ್ತಿ ತೋರಿಸದಲ್ಲಿ ಶಾಂತಿ ಬಾರದು!

[ಯುರೋಪಿನಲ್ಲಿ ರಣಭೇರಿಯು ಮೊಳಗಿದೆ; ಸರ್ವಾಧಿಕಾರಿಗಳ ರಾಜ್ಯತೃಷ್ಣೆಗೆ ದುರ್ಬಲ ರಾಷ್ಟ್ರಗಳು ಬಲಿಯಾಗುತ್ತವೆ! ಯುರೋಪಿನ ಪ್ರಜಾಸತ್ತಾತ್ಮಕ ರಾಷ್ಟ್ರಗಳು ಯಾವ ಸ್ಪಷ್ಟ ಧೋರಣೆಯಿಲ್ಲದೆ ಉದಾಸೀನವಾಗಿವೆ ಲೋಕಶಾಂತಿ ನಾಗರಿಕ ಸ್ವಾತಂತ್ರ್ಯ ರಕ್ಷಣ ಈ ಬರಿಯ ಆಡಂಬರದ ಮಾತುಗಳಿಗೆ ಬೆಲೆಯುಂಟೇ? ಶಕ್ತಿಯಿಲ್ಲದಿದ್ದರೆ ಶಾಂತಿಯುಂಟೇ?]

ಯೂರೋಪಿನ ರಣಭೀತಿ

ಯೂರೋಪಿನ ಪ್ರತಿಯೊಂದು ಪ್ರಜಾಸತ್ತಾತ್ಮಕ ರಾಷ್ಟ್ರವೂ ಇನ್ನೊಮ್ಮೆ ಲೋಕಯುದ್ಧವಾಗುವುದೇ ಎಂಬ ಅಂಜಿಕೆಯುಳ್ಳದೆ ಎಲ್ಲರೂ ಎಳೆಗೆಹೊಂದುತ್ತಿದ್ದ ಶಾಂತಿಯುಂದಿರಬೇಕೆಂಬ ಹಂಬಲವು ಇಡೀ ಪ್ರಪಂಚದಲ್ಲೆಲ್ಲಿಯೂ ಇರುವಾಗ, ಈ ಮಹಾಯುದ್ಧದ ಹೆದರಿಕೆಯು, ಪ್ರತಿಯೊಬ್ಬರ ಹೃದಯದಲ್ಲಿಯೂ ವಿಷಮ ಹಾಲಾಹಲವನ್ನು ಹುಟ್ಟಿಸುತ್ತದೆ.

ಇಂದು ಜರ್ಮನಿಯೋ, ಇಟಲಿಯೋ, ಜಪಾನೋ ಯಾವುದಾದರೊಂದು ರಾಷ್ಟ್ರವನ್ನು ನುಂಗಿಬಿಡುವುದೆಂಬ ವಿಷಯ ಮಾತ್ರ ಕೌತೂಹಲವಲ್ಲ. ಇಂದಿನ ಪರಿಸ್ಥಿತಿಯನ್ನು ಯೋಚಿಸಿದರೆ, ಈ ಘರ್ಷಣೆಯಲ್ಲಿ ಹುಟ್ಟುವ, ಇನ್ನೊಂದೇ ಒಂದು ಕಿಡಿಯೂ ಅಖಿಲ ಜಗತ್ತನ್ನು ಭಸ್ಮಮಾಡಿಬಿಡಬಹುದೆಂಬ ಬೆದರಿಕೆಯು ಜನತೆಯನ್ನು ನಡುಗಿಸುತ್ತಿದೆ!

ಬ್ರಿಟನು ಫ್ರಾನ್ಸುಗಳ ಪ್ರಮಾದ

ಇಂದು ಶಾಂತಿಪ್ರಿಯವಾಗಿರುವ ಪ್ರಜಾಸತ್ತಾತ್ಮಕ ರಾಷ್ಟ್ರಗಳು 'ಕಲಹ ಕಂಟಕ' ರಾಷ್ಟ್ರಗಳನ್ನು ಇದುರಿಸಲು ಅಸಮರ್ಥವಾಗಿವೆಯೆಂಬುದು ಇಂದಿನ ಕೋಲಾಹಲಕ್ಕೆ ಕಾರಣವಲ್ಲ. ೧೯೧೯ರಿಂದು, ಅಂತಹ ಶಾಂತಿಪ್ರಿಯ ರಾಷ್ಟ್ರಗಳು ಒಂದಾಗಿ 'ಸಾರ್ವದೇಶಿಕ ಸಂಘ' (League of Nations) ವನ್ನು ಸ್ಥಾಪಿಸಿ, ಕಲಹಕಂಟಕ ರಾಷ್ಟ್ರಗಳನ್ನು ಹದಗೆಡಿಸುವ ಕಾರ್ಯವನ್ನು ಮಾಡಲು ಪ್ರತಿಜ್ಞೆ ತೊಟ್ಟಿದ್ದವು. ಆದರೆ ಬ್ರಿಟನು ಮತ್ತು ಫ್ರಾನ್ಸು ದೇಶಗಳು 'ಶಾಂತಿ'ಗಾಗಿ ಸಾಧಿಸುವಲ್ಲಿ ಸಂಕಷ್ಟ ಬಂದೀತೇ ಎಂದು ಅಂಜಿ, ಹಿಂಜರಿದು ಮಹಾ ಪ್ರಮಾದವನ್ನು ಮಾಡಿವೆ. ಅವುಗಳೇ ಸಾರ್ವದೇಶಿಕ ಸಂಘವನ್ನು ನಿರ್ವೀರ್ಯವನ್ನಾಗಿ ಮಾಡಿ, ಅದರ ಸಂಯುಕ್ತ ಶಕ್ತಿಯನ್ನು ನಿರ್ನಾಮಗೊಳಿಸಿವೆ.

ಇನ್ನೂ ತಡವಾಗಲಿಲ್ಲ

ಆದರೆ, ಇಂದು ಈ ಪರಿಸ್ಥಿತಿಯಲ್ಲಾದರೂ, ನಿರ್ಬಲ ರಾಷ್ಟ್ರಗಳ ರಕ್ಷಣೆಗಾಗಿ ನಿಂತು ಶಾಂತಿಯ ಸರಿಯಾದ ಹಾದಿಯನ್ನು ಜಗತ್ತಿಗೆ ತೋರಿಸಿಕೊಡುವುದು ಸಾಧ್ಯವಿಲ್ಲವೆಂದಿಲ್ಲ. ಹಾಗಾದರೆ ಮಾತ್ರ ಜಗತ್ತು ಇಂದು [illegible] ಮಹಾಯುದ್ಧದ ಭೀಷಣತೆಯಿಂದ ತಪ್ಪಿಸಿಕೊಂಡಂತಾಗುವುದು. ಶಾಂತಿಪ್ರಿಯವೆನ್ನಿಸುವ ಪ್ರಜಾಸತ್ತಾತ್ಮಕ ರಾಷ್ಟ್ರಗಳು, ಸರ್ವಾಧಿಕಾರಿಗಳನ್ನೆದುರಿಸುವಲ್ಲಿ ತಮ್ಮ ಧೈರ್ಯದ ಹೆಜ್ಜೆಯನ್ನು ಧೃಢತೆಯಿಂದ ಮುಂದಿಡಬೇಕು.

ಜಗತ್ತಿನಲ್ಲಿ ಗೌರವಪೂರ್ಣವಾದ ಶಾಂತಿ ಮಾಗಬೇಕಾದರೆ, ಅಮೆರಿಕಾ, ರಷ್ಯಾ, ಬ್ರಿಟನು, ಫ್ರಾನ್ಸು ರಾಷ್ಟ್ರಗಳು ಒಂದಾಗಿ, ಏಕಮುಖವಾದ ಕಾರ್ಯಯೋಜನೆಯನ್ನು ಅವಲಂಬಿಸಬೇಕು. ಬೆದರಿಕೆ, ಅನ್ಯಾಯಗಳನ್ನು ಮುಂದೊಟ್ಟಿ ಬರುವ 'ಕಲಹಪ್ರಿಯ'ರಿಗೆ ಈ ನಾಲ್ಕು ರಾಷ್ಟ್ರಗಳು ಧೈರ್ಯದಿಂದ ತಮ್ಮ ನಿಶ್ಚಿತವಾದ ಕಾರ್ಯಧೋರಣೆಯನ್ನು ವ್ಯಕ್ತಪಡಿಸಿ, ಅದರಂತೆ ಮಾಡಲು ಸರ್ವಸಿದ್ಧರಾಗಿದ್ದರೆ ಜಗತ್ತಿನ ಶಾಂತಿಯು ಖಂಡಿತವಾಗಿಯೂ ಸಾಧಿಸಲ್ಪಡುವುದು.

ಅಂತಹ ಸ್ಪಷ್ಟೀಕರಣ ಧೋರಣೆಯನ್ನು ಮಾತಲ್ಲ, ಪ್ರಜಾಸತ್ತಾತ್ಮಕ ರಾಷ್ಟ್ರಗಳು ತಡಮಾಡಬಾರದು, ೧೯೧೪ರಲ್ಲಿ ಆದ ದುರಂತ ಘಟನೆಯು ಇನ್ನೊಮ್ಮೆ ಪ್ರಪಂಚದ ಇತಿಹಾಸದಲ್ಲಿ ಪುನರಾವೃತ್ತಿಯಾಗಬಾರದು!

ಸ್ಪಷ್ಟೀಕರಣವಿಲ್ಲ

ಕಳೆದ ಮಹಾಯುದ್ಧದ ಕಾರಣಗಳನ್ನು ಚೆನ್ನಾಗಿ ಪರಿಶೀಲಿಸಿದವರಾದ, ಸರ್ ನಾರ್ಮನ್ ಏಂಗೆಲರಂತವರು, ಬೆಲ್ಜಿಯಮ್ಮನ್ನು ಆಕ್ರಮಿಸಿದಾಗ ಬ್ರಿಟನು ಯುದ್ಧಕ್ಕೆ ಸಿದ್ಧವಾಗುವುದೆಂಬ ತನ್ನ ಸ್ಪಷ್ಟ ರೀತಿಯನ್ನು ಮೊದಲಾಗಿಯೇ ಪ್ರಕಟಿಸುತ್ತಿದ್ದರೆ, ಮಹಾಯುದ್ಧವು ಆಗುವ ಸಂಭವವಿರಲಿಲ್ಲವೆಂದು ಹೇಳಿರುವರು.

ನಾಲ್ಕು ರಾಷ್ಟ್ರಗಳ ನಿರ್ಣಯ

ಇಂದಿನ ಪರಿಸ್ಥಿತಿಯನ್ನು ಎದುರಿಸಿ, ಲೋಕಶಾಂತಿಯನ್ನು ಸಾಧಿಸಬೇಕಾಗಿದ್ದರೆ ಮೇಲೆ ಹೇಳಿದ ರಾಷ್ಟ್ರಗಳು ತಮ್ಮ ಖಂಡಿತ ನಿರ್ಧಾರವನ್ನು, ಸ್ಪಷ್ಟಪಡಿಸಲೇ ಬೇಕು. ಇಂತಹ ಭಯಾನಕ ಪರಿಸ್ಥಿತಿ ಬಂದಿರುವಾಗ ಮೇಲೆ ಹೇಳಿದ ನಾಲ್ಕು ರಾಷ್ಟ್ರಗಳು ತಮ್ಮ ನಿರ್ಧಾರದಿಂದ ನಾಗರಿಕ ಜನಾಂಗಗಳ ಸಹಾಯಕ್ಕೆ ನಿಲ್ಲುವ ನಿಶ್ಚಯವನ್ನು ಜಗತ್ತಿಗೆ ಸಾರಿದ್ದಲ್ಲಿ ಎಲ್ಲೆಲ್ಲೂ ಅಭೂತಪೂರ್ವ ಪರಿಣಾಮವು ನೆಲಸೀತು.

ಯುದ್ಧಸಿದ್ಧತೆಯೇಕೆ?

ಪ್ರಜಾಸತ್ತಾತ್ಮಕವೆನ್ನುವ ರಾಷ್ಟ್ರಗಳಲ್ಲಿ ಯುದ್ಧಸಿದ್ಧತೆಯ 'ನೀತಿ' ಭರದಿಂದ ಸಾಗುತ್ತಿದೆ, ಆದರೆ ಇದರ ಮುಂದಿನ ಉಪಯೋಗ ಪ್ರಶ್ನೆಯ ವಿಷಯವಾಗಿ ಉಳಿಯುತ್ತದೆ. ಹೀಗಾಗಿ, ಯುದ್ಧವಾಗದೆ ಶಾಂತಿಯು ಸಾಧ್ಯವಾಗುವುದಿದ್ದರೆ, ಅದೇ ಯೋಗ್ಯವಾದದ್ದು, ಇಂದಿನ ಪರಿಸ್ಥಿತಿಯಲ್ಲಿ ಅಂತಹ ಸಂದರ್ಭವು ಒದಗಿಬರುವ ಅವಕಾಶವೇನೂ ಕಾಣುವುದಿಲ್ಲ. ಹಾಗಿದ್ದರೆ ಕಲಹಕಂಟಕರಾದವರನ್ನು ತಡೆದ ನಿಲ್ಲಿಸಲು ರಾಷ್ಟ್ರದ ಶಕ್ತಿಸಾಧನಗಳನ್ನು ಉಪಯೋಗಿಸದೆ ನಿರ್ವಾಹವಿಲ್ಲ.

ರಷ್ಯಾ ಅಮೇರಿಕಾ ಫ್ರಾನ್ಸು, ಬ್ರಿಟನುಗಳ ಸಂಯುಕ್ತ ಶಕ್ತಿಯೂ, ಅವುಗಳ ಆಶ್ರಿತ ರಾಷ್ಟ್ರಶಕ್ತಿಯೊಡನೆಯೂ, ಪ್ರಪಂಚದ ಇತರ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಸಹಾಯದೊಡನೆಯೂ ಜತೆಗೂಡಿದಲ್ಲಿ, ಎಂತಹ ಕಲಹಕಂಟಕರನ್ನೂ ಸದೆಬಡಿಯಬಹುದಾಗಿದೆ. ಸರ್ವಾಧಿಕಾರಿಗಳ ಸಂಪೂರ್ಣ ಬಹಿಷ್ಕಾರವನ್ನು ನಿರ್ಭಯದಿಂದ ಮಾಡದೆ ನಿರ್ವಾಹವಿಲ್ಲ.

ವ್ಯಾಪಾರ ಬಹಿಷ್ಕಾರ

ಫ್ಯಾಸಿಸ್ಟ್ ರಾಷ್ಟ್ರಗಳ ಸಾಮಾನುಗಳನ್ನು ಪ್ರಜಾಸತ್ತಾತ್ಮಕ ರಾಷ್ಟ್ರಗಳು ತಮ್ಮ ಹಡಗಿನಲ್ಲಿ ಸಾಗಿಸುವುದನ್ನು ತಿರಸ್ಕರಿಸಿದಲ್ಲಿ, ಹಾಗೂ ಅವುಗಳ ವ್ಯಾಪಾರಕ್ಕೆ ಈ ರಾಷ್ಟ್ರಗಳು ಬಂದರು ಭೂಮಿಗಳನ್ನು ಒದಗಿಸಿಕೊಡದಲ್ಲಿ, ಫ್ಯಾಸಿಸ್ಟ್ ರಾಜ್ಯಗಳ ಕೈಕಟ್ಟಿದಂತಾಗುವುದು. ಇಂದು ಪ್ರಜಾಸತ್ತಾತ್ಮಕ ರಾಷ್ಟ್ರಗಳ ನೌಕಾಬಲವು ೨೫,೩೦,೦೦೦ರಷ್ಟಿದೆ ಫಾಸಿಸ್ಟ್ ರಾಷ್ಟ್ರಗಳದ್ದು ೫,೬೦,೦೦೦ ಮಾತ್ರ. ಆ ಮೇಲೆ ಪ್ರಜಾಸತ್ತಾತ್ಮಕ ರಾಷ್ಟ್ರಗಳು ತಮ್ಮ ಸ್ವಾಧೀನವಿರುವ ಎಲ್ಲಾ ಕಚ್ಚಾ ಮಾಲುಗಳನ್ನು ಫ್ಯಾಸಿಸ್ಟ್ ರಾಷ್ಟ್ರಗಳಿಗೆ ಒದಗಿಸದಂತೆ ತಡೆಯಬೇಕು. ಹಾಗೂ ಎಲ್ಲಾ ಪ್ರಜಾಸತ್ತಾತ್ಮಕ ರಾಷ್ಟ್ರಗಳೂ ತಮ್ಮ ಬ್ಯಾಂಕ್ ಮೂಲಧನವನ್ನು ಆ ರಾಷ್ಟ್ರಗಳಿಗೆ ಯಾವ ಉಪಯೋಗಕ್ಕೂ ಬಳಸದಂತೆ ತಡೆಯಬೇಕು. ಹೀಗೆ ಯಾವ ತರದ ನೆರವೂ ಸಿಗದಲ್ಲಿ ಅವುಗಳು ಅತ್ತಿತ್ತ ಚಲಿಸುವ ಹಾಗಿಲ್ಲ.

ಯುದ್ಧವಾಗುವುದರಿಂದ ಭಯಂಕರ ಪರಿಣಾಮವಾದೀತೆಂದು, ಕಲಹಪ್ರಿಯರಾದ ಹಿಟ್ಲರ್ ಪ್ರಭೃತಿಗಳನ್ನು ಬೆದರಿಸಿ ಫಲವಿಲ್ಲ! ಇಂದಿನ ಅವರ ಧೋರಣೆಯನ್ನು ರವಷ್ಟಾದರೂ ಸಹಿಸುವುದಿಲ್ಲವೆಂಬುದನ್ನು ಕಾರ್ಯತಃ ಮಾಡಿ ತೋರಿಸಬೇಕು.' ಅವರೊಡನೆ ಯಾವ ರೀತಿಯ ವ್ಯಾಪಾರ ವಹಿವಾಟುಗಳನ್ನಾದರೂ ಕೂಡಲೇ ನಿಲ್ಲಿಸಿಬಿಡಬೇಕು.

ಹೀಗೆ ಖಂಡಿತವಾದ ರೀತಿಯಲ್ಲಿ ಫ್ಯಾಸಿಸ್ಟ್ ರಾಷ್ಟ್ರಗಳೊಡನೆ ವ್ಯಾಪಾರ ಸಂಬಂಧವನ್ನು ಮುರಿಯುವುದರಿಂದ ಅವುಗಳು ತಮ್ಮ ಹಿಂದುಮುಂದನ್ನು ತಿಳಿದುಕೊಳ್ಳುವವು. ಜಪಾನು, ಇಟಲಿ ಜರ್ಮನಿಗಳ ಸಂಯುಕ್ತ ಜನಸಂಖ್ಯೆಯು ೨೬೪,೦೦೦,೦೦೦ ಮಾತ್ರ ಇದೆ ಆದರೆ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಜನಸಂಖ್ಯೆಯು ೧,೨೮೪,೦೦೦,೦೦೦ ಇರುತ್ತದೆ.

ಶಕ್ತಿಯಿಲ್ಲದೆ ಶಾಂತಿಯಿಲ್ಲ

ನಿಜವಾದ ಜಗತ್ತಿನ ಶಾಂತಿಯು ಪ್ರಜಾಸತ್ತಾತ್ಮಕ ರಾಷ್ಟ್ರಗಳ ವ್ಯಾಪಾರ ಸಂಬಂಧ, ಆರ್ಥಿಕ ಸ್ವಾಧೀನತೆ, ಸರಕುಗಳ ಸಹಾಯ ಮತ್ತು ಜನಶಕ್ತಿಗಳ ಮೇಲೆ ಹೊಂದಿಕೊಂಡಿದೆ' ಹಾಗಾಗಿ ಇಂದು ಲೋಕಶಾಂತಿಯನ್ನು ಸಾಧಿಸಬೇಕಾದರೆ ಎಲ್ಲಾ ಪ್ರಜಾಸತ್ತಾತ್ಮಕ ರಾಷ್ಟ್ರಗಳೂ ಸಂಯುಕ್ತವಾಗಿ ತಮ್ಮ ಧೋರಣೆಯನ್ನು ಸ್ಪಷ್ಟಪಡಿಸಬೇಕಾಗಿದೆ. ತಾವು ನ್ಯಾಯಕ್ಕಾಗಿಯೂ, ನಾಗರಿಕ ರಾಷ್ಟ್ರಗಳ ಸಹಾಯಕ್ಕಾಗಿಯೂ, ದುರ್ಬಲ ರಾಷ್ಟ್ರಗಳ ರಕ್ಷಣೆಗಾಗಿಯೂ ಖಂಡಿತ ಕಾದಾಡಲು ಸಿದ್ಧರಿದ್ದೇವೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ' ಶಕ್ತಿಯಿಲ್ಲದಿದ್ದರೆ ಶಾಂತಿಯಾಗುವ ಸಂಭವವಿಲ್ಲ!

'DILROZ' Regd

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary-Abscess.

There is no need of dressing the wounds, nor are baths prohibited.

Price Rs. 2. Postage extra.

—TAHIR DIN,
Anarkali,-LAHORE

ಗಾಂಧಿಜಿಯವರ ಸಂದೇಶಗಳು:—

ಪುತ್ಥಳಿ ಬಂಗಾರವನ್ನು ಸಂತೆಗೊಯ್ದು ಕೆಟ್ಟ ಲೋಹದ ಬೆಲೆಗೆ ಮಾರಬೇಡಿ!

ರಾಷ್ಟ್ರಧ್ವಜ ಮತ್ತು ವಂದೇ ಮಾತರಂ ಹಾಡಿನ ಕುರಿತು ಮಹಾತ್ಮರ ಬಿನ್ನಹ!

ಪೂರ್ಣ ಜ್ಯೋತಿಯನ್ನು ನಾನಿನ್ನೂ ಕಂಡಿಲ್ಲ!

ಸಿಲೋನಿನವರೂ ನಾವೂ ನೆರೆಕರೆಯ ಸಹೋದರರು

ರಾಷ್ಟ್ರಧ್ವಜ ಮತ್ತು 'ವಂದೇ ಮಾತರಂ'

ರಾಷ್ಟ್ರಧ್ವಜದ ಬಗ್ಗೆ ಇಂದು ಹಿಂದಿನ ಅಭಿಮಾನವು ಇಂದು ಜನರಲ್ಲಿಲ್ಲದಿರುವುದನ್ನು ಕಂಡು ಮನನೊಂದು, ವಂದೇ ಮಾತರಂ ಹಾಡಿನ ಕುರಿತು ಜನರು ಇಂದು ಕಲಹ ಮಾಡುವುದಕ್ಕಾಗಿ ಮರುಗಿ, ಮಹಾತ್ಮಾಜಿಯವರು ದೇಶದ ಹಿತಕ್ಕಾಗಿ ಈ ಕೆಳಗಿನ ಸಂದೇಶವನ್ನು 'ಹರಿಜನ'ದಲ್ಲಿ ಪ್ರಕಟಿಸಿದ್ದಾರೆ:—

"ಅಸಹಕಾರ ಚಳವಳವು ಉನ್ನತಿಯನ್ನು ಹೊಂದಿದ್ದಾಗ ತ್ರಿವರ್ಣ ರಾಷ್ಟ್ರಧ್ವಜದ ನಿರ್ಮಾಣವಾಯಿತು. ಹಿಂದೂದೇಶದಲ್ಲಿರುವ ಸಮಸ್ತರೂ, ಜಾತಿಮತಗಳ ಭೇದಗಳನ್ನು ಮರೆತು ಅವಿರೋಧವಾಗಿ ಪೂರ್ಣ ಹೃದಯದಿಂದ ಅದಕ್ಕೆ ಮನ್ನಣೆಯಿತ್ತರು. ಆಲೀ ಸಹೋದರರು ಆ ಧ್ವಜದ ತ್ರಿವರ್ಣ ಸಂಕೇತದ ಪ್ರಭಾವಪೂರ್ಣವಾದ ಅರ್ಥವನ್ನು ವಿವರಿಸಿ ತನ್ಮಯರಾಗುತ್ತಾ ಹಿಂದೂ—ಮುಸ್ಲಿಮರೆಲ್ಲರನ್ನೂ ಆ ಧ್ವಜದ ನೆರಳಲ್ಲಿ ತನ್ಮಯತೆಯಿಂದ ಮರುಳುಗೊಳಿಸಿದ್ದರು. ನಾವು ಚರಕಾ, ಸ್ವದೇಶೀ ಮೊದಲಾದ ರಚನಾತ್ಮಕ ಕಾರ್ಯಗಳನ್ನು ಕೈಕೊಂಡು ದೇಶದ ಹಿತಕ್ಕಾಗಿ ಹೋರಾಡಲು ಸಿದ್ಧವಾಗುತ್ತಿದ್ದಾಗ ಎಲ್ಲಾ ಜಾತಿಯವರ ಐಕ್ಯದ ಕುರುಹಾಗಿ ಈ ಧ್ವಜವು ತಿಳಿಯಲ್ಪಟ್ಟಿತ್ತು. ರಾಷ್ಟ್ರೀಯ ಸಭೆಗಳಲ್ಲಿ ಇದಕ್ಕೆ ಅಪೂರ್ವ ಮನ್ನಣೆ ಸಿಕ್ಕಿತು. ಸರಳತೆ, ಪಾವಿತ್ರ್ಯ, ಐಕ್ಯಶಕ್ತಿಯಿಂದ ನಾವು ನಮ್ಮನ್ನು ಸ ಲಿಯತ್ತಿರುವ ಸಾಮ್ರಾಜ್ಯಶಾಹಿಯೊಡನೆ ಕಾದಾಡುತ್ತಿರುವಾಗ ನಮ್ಮ ಧೈರ್ಯ ಶಕ್ತಿಗಳ ನೆಲೆಯಾಗಿದ್ದ ಧ್ವಜವು ಇಂದು ಜಾತಿಯ ಜಗಳಕ್ಕೆ ಕಾರಣವಾಗಿದೆ. ಕಾಂಗ್ರೆಸ್ಸಿನಲ್ಲಿ ತ್ರಿವರ್ಣ ಧ್ವಜವನ್ನೇರಿಸಿ ಕೆಂಪು ಧ್ವಜವನ್ನು ಹಾರಾಡಿಸುವ ಜನರೂ ಕುಂಟಿದ್ದಾರೆ.

"ಹಾಗಾಗಿ ಒತ್ತಾಯದಿಂದ ರಾಷ್ಟ್ರಧ್ವಜವನ್ನು ಯಾವ ಸಭೆಯಲ್ಲಾಗಲಿ, ಮುನ್ಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡ್ ಮೊದಲಾದವುಗಳಲ್ಲಾಗಲಿ ಏರಿಸಬಾರದು. ಹಲವು ಜನರಲ್ಲಿ ಒಬ್ಬನು ಇದಿರಾಡಿದರೂ ಅವನ ಹಿತವನ್ನು ಬಯಸುವುದು, ಜಾಣತನ ಮತ್ತು ಗೌರವವಾಗಿದೆ. ಎಲ್ಲಿವರೆಗೆ ಈ ಧ್ವಜವನ್ನು ಏರಿಸಲು ಎಲ್ಲಾ ಜನರ ಆಗ್ರಹದ ಬೇಡಿಕೆಯಿಲ್ಲವೋ ಅಲ್ಲಿವರೆಗೆ ಸಾರ್ವಜನಿಕ ಸ್ಥಳಗಳಲ್ಲಿ ಉಪಯೋಗಿಸಬಾರದಾಗಿ ನನ್ನ ಅರಿಕೆ.

"ವಂದೇ ಮಾತರಂ ಹಾಡಿನ ಬಗೆಗಾಗಿಯೂ ನನ್ನದು ಇದೇ ಉತ್ತರ. 'ವಂದೇ ಮಾತರಂ' ಹಾಡನ್ನು ನಾನು ಮೊದಲನೆಯ ಸಲ ಕೇಳಿದಾಗ ನನಗೆ ಆನಂದ ಮಠ ಮತ್ತು ಬಂಕಿಂಚಂದ್ರರ ವಿಷಯ ಏನೂ ತಿಳಿದಿರಲಿಲ್ಲ, ಆದರೂ ನಾನು ಆ ಹಾಡಿನ ಭಾವದಿಂದ ರೋಮಾಂಚನಗೊಂಡಿದ್ದೆನು. ಅದರಲ್ಲಿರುವ ಶುದ್ಧ ಸಾತ್ವಿಕ ಭಾವನೆಗಳು ನನ್ನನ್ನು ಉತ್ಸಾಹಿತನನ್ನಾಗಿ ಮಾಡಿವೆ. ಅದು ಹಿಂದುಗಳ ಗೀತವೆಂಬ ಭಾವ ನನಗೆ ಬರಲೇ ಇಲ್ಲ. ಹಲವು ಕಾಲ, ರಾಷ್ಟ್ರದಲ್ಲಿಯೂ ಆ ಭಾವನೆ ಇರಲಿಲ್ಲ. ಮೊದಲು ಪುತ್ಥಳಿ ಬಂಗಾರವಾಗಿದ್ದುದು ಈಗ ಕೆಟ್ಟ ಲೋಹವೆಂದು ದೂಷಿಸಲ್ಪಡುತ್ತದೆ. ಪುತ್ಥಳಿ ಬಂಗಾರವನ್ನು ಪೇಟೆಗೊಯ್ದು ಕೆಟ್ಟ ಲೋಹದ ಬೆಲೆಗೆ ಮಾರದಿರುವುದೇ ಬುದ್ಧಿವಂತಿಕೆ. ಮಿಶ್ರ ಸಭೆಗಳಲ್ಲಿ ಇದನ್ನು ಹಾಡದಿರುವುದು ಒಳ್ಳೆಯದು. ಅದನ್ನು ದುರುಪಯೋಗಿಸುವುದು ಬೇಡ, ಲಕ್ಷಾವಧಿ ಜನರ ಹೃದಯಗಳಲ್ಲಿ ಹಾಡಿನ ಪಲ್ಲವಿಯು ವೀರಾವೇಶವನ್ನು ತುಂಬಿಸಿದೆ. ರಾಷ್ಟ್ರಕ್ಕೆ ಇದು ಬಂಗಾಳದ ಅಪೂರ್ವ ಕಾಣಿಕೆ. ಯಾರೇನು ಮಾಡಿದರೂ ರಾಷ್ಟ್ರವು ಜೀವಂತವಾಗಿರುವ ವರೆಗೆ ತ್ರಿವರ್ಣ ರಾಷ್ಟ್ರ ಧ್ವಜ ಮತ್ತು ವಂದೇ ಮಾತರಂ ಹಾಡುಗಳು ಸಚೇತನವಾಗಿ ಸ್ಫೂರ್ತಿದಾಯಕವಾಗಿ ಉಳಿಯುವವು"

'ಪೂರ್ಣಜ್ಯೋತಿಯನ್ನು ನಾನಿನ್ನೂ ಕಂಡಿಲ್ಲ'

"ಮಹಾತ್ಮಾಜಿಯವರ ಅಹಿಂಸಾ ಧೋರಣೆಯು ಸ್ವರಾಜ್ಯ ಸಾಧನೆಗಾಗಿ ಸರ್ವಥಾ ಹೋರಾಡಬೇಕೆಂಬ ಜನರಿಗೆ ಹೇಗೆ ಸಮ್ಮತವಾದೀತು?" ಎಂದು ಶಂಕಿಸುವವರಿದ್ದಾರೆ. ಅಂತಹವರಿಗೆ ಮಹಾತ್ಮರೇ ಹೀಗೆಂದು ಉತ್ತರ ಕೊಡುತ್ತಾರೆ —

"ನಾನು ಹಿಂದೆ ಹೇಳಿದ್ದಂತೆ, ಅಹಿಂಸೆಯು ಸ್ವರಾಜ್ಯಕ್ಕಿಂತ ಮೊದಲು ಬರುವುದೆಂಬ ನನ್ನ ನಿಶ್ಚಯವು ಇಂದು ಇನ್ನೂ ದೃಢವಾಗಿದೆ. ಕ್ರಾಂತಿಯಲ್ಲಿ ಬರುವ ಅಧಿಕಾರವು ಬೇಡ, ಸ್ವಾತಂತ್ರ್ಯ ಮತ್ತು ಅಧಿಕಾರಗಳು ದುರ್ಬಲರಿಗೂ ಬರುವಂತಹ ಸ್ವರಾಜ್ಯವು ನಮಗೆ ಬೇಕು. ಹಾಗಲ್ಲದಿದ್ದರೆ ಯಾರಿಗೆ ಬಲವುಂಟೋ ಅವರೇ ದುರ್ಬಲರನ್ನು ಪೀಡಿಸಿ ಸೌಭಾಗ್ಯದಿಂದ ಮೆರೆಯುವಂತಾಗುವುದು.

"ಅಹಿಂಸೆಯನ್ನು ಪ್ರತಿಯೊಂದು ಕಾರ್ಯದಲ್ಲಿಯೂ ನಾವು ಮುಂದಿಡಬೇಕು. ಹಾಗಾದರೆ ಮಾತ್ರ ಅದು ನಮ್ಮ ತಡೆಯಲಾರದ ಶಕ್ತಿಯಾಗುತ್ತದೆ. ಇಲ್ಲದಿದ್ದಲ್ಲಿ, ಹಿಂಸೆಯೆಂಬುದು ಹಲವರು ತಿಳಿದಂತೆ ನಿರ್ವೀರ್ಯವಾದೀತು.

ನಾವು ಅನ್ಯರನ್ನು ವೃಥಾ ಬೆದರಿಸುವಂತೆ 'ಪೂರ್ಣ ಸ್ವರಾಜ್ಯ' ಹೊಣೆಗಾರಿಕೆ ಸರಕಾರ ಎಂಬೀ ಮೊದಲಾದ ಮಾತುಗಳನ್ನು ಹೇಳಿ ಪ್ರಯೋಜನವಿಲ್ಲ. ಅದರ ಪ್ರಾಥಮಿಕ ವಿಷಯಗಳನ್ನು ವಿಚಾರಿಸಿ, ಆ ಕಡೆಗೆ ಮನಸ್ಸು ಕೊಟ್ಟು ಕೆಲಸ ಮಾಡಬೇಕು. ದಿನದಿಂದ ದಿನಕ್ಕೆ ನಾವು ಮಾಡುವ ಕಾರ್ಯಗಳು ನಾವೆಣಿಸಿದ ಪೂರ್ಣ ಧ್ಯೇಯದ ಕಡೆಗೆ ಬಲಗೊಂಡು ಹೋಗಬೇಕು. ನಾನು ದಂಡಿಯಾತ್ರೆಗೆ ಹೊರಟಾಗ ಕೇವಲ ಹದಿನಾಲ್ಕು ಅಂಶಗಳನು ಮಾತ್ರ ಸರಕಾರದೊಡನೆ ಕೇಳಿದ್ದೆ. ಅದಕ್ಕಾಗಿ ಮೋತೀಲಾಲರು ನನ್ನಲ್ಲಿ ಸಿಟ್ಟುಗೊಂಡಿದ್ದರು. ಆದರೆ ಕೆಲವೇ ದಿನಗಳಲ್ಲಿ ಈ ಹದಿನಾಲ್ಕು ಅಂಶಗಳ ಪ್ರಾಪ್ತಿಯಿಂದ ಪೂರ್ಣ ಸ್ವಾತಂತ್ರ್ಯವೇ ಹಸ್ತಗತವಾದೀತೆಂದು ಅವರೇ ಮನಗಂಡಿದ್ದರು.

"ಅಹಿಂಸೆಯನ್ನು ಮೊದಲಾಗಿ ಸಾಧಿಸಿರಿ, ಅದನ್ನು ನಿಮ್ಮ ಅಧೀನ ಮಾಡಿಕೊಂಡರೆ ಮುಂದಿನ ಹೋರಾಟದಲ್ಲಿ ನೀವು ಯಾರಿಗೂ ಅಂಜಬೇಕಾಗಿಲ್ಲ. ನನ್ನ ಅಥವಾ ಕಾಂಗ್ರೆಸಿನ ಸಹಾಯವನ್ನೂ ಕೇಳಬೇಕಾಗಿಲ್ಲ, ನೀವು ಕೇವಲ ಸರಕಾರದ ಗುಂಡಿಗೆ ಎದುರಾಗುವಂತೆ, ಅಥವಾ ಸರಕಾರವನ್ನು ನಿಮಗೆ ಶರಣಾಗುವಂತೆ ಚಳವಳ ಹೂಡಲು ಈಗ ಶಕ್ತರಿರಬಹುದು, ಆದರೆ ಇದರಿಂದ ಅಹಿಂಸೆಯನ್ನು ಪಾಲಿಸಿಕೊಂಡಿದ್ದರೆಂದು ಅರ್ಥವಾಗುವುದಿಲ್ಲ. ಮನೋವ್ಯಾಕ್ಕಾರ್ಯಗಳಿಂದ ಅಹಿಂಸೆಯನ್ನು ಆಚರಿಸದೆ ಪೂರ್ಣ ಪ್ರಯೋಜನ ಹೊಂದಲು ಸಾಧ್ಯವಿಲ್ಲ. ನಾನೀಗ ವೈದಿಕ ಋಷಿಗಳ 'ನೇತಿ' 'ನೇತಿ' (ಇದಲ್ಲ, ಇದಲ್ಲ) ಎಂಬ ಮಾತಿನ ತನಕ ಮುಟ್ಟಿದ್ದೇನೆ. ಆದರೆ 'ಇದು ಆಗಬೇಕಾದುದು' ಎಂದು ಹೇಳುವ ಸ್ಥಿತಿಗೆ ನಾನಿನ್ನೂ ಮುಟ್ಟಲಿಲ್ಲ. ಆ ಬೆಳಕನ್ನು ನಾನು ಇನ್ನೂ ಹುಡುಕುತ್ತೇನೆ.

'ನಾವು ನೆರೆಕರೆಯವರು'

ಜವಾಹಿರಲಾಲ ನೆಹರುಗಳನ್ನು ಸಿಲೋನಿಗೆ ರಾಯಭಾರಿಗಳಾಗಿ ಕಳುಹಿಸುವ ಕಾಂಗ್ರೆಸಿನ ನಿರ್ಣಯದ ಕುರಿತು ಗಾಂಧಿಜಿಯವರು ಹೀಗೆಂದು ಹೇಳುತ್ತಾರೆ.

'ಶಾಂತಿಯ ರಾಯಭಾರಿಯಾಗಿ ನೆಹರುಗಳನ್ನು ಸಿಲೋನಿಗೆ ಕಳುಹಿಸಲು ಎ. ಐ. ಸಿ. ಸಿ. ಯ ಆರಿಸಿದ್ದು ಚೆನ್ನಾಯಿತು. ಹಿಂದೂದೇಶ ಮತ್ತು ಸಿಲೋನುಗಳು ಅನ್ಯೋನ್ಯ ಕಾದಿಡುವುದು ಯೋಗ್ಯವಾಗಿದೆ. ನಾವೆರಡು ದೇಶದವರೂ ಒಂದೇ ಸಂಸ್ಕೃತಿಯಿಂದ ಬೆಳೆದವರು. ನಮಗೆ ದೈನಂದಿನ ಸಮ್ಬಂಧವಿರುತ್ತದೆ. ರಾಮೇಶ್ವರದಿಂದ ಸಿಲೋನಿಗೆ ಹೆಜ್ಜೆಯಿಡುವಾಗ ಯಾರಿಗಾದರೂ ಹೊಸ ದೇಶಕ್ಕೆ ಬಂದ ಅನುಭವವೇ ಆಗ ವುದಿಲ್ಲ, ಹಲವು ಸಮಯ ... ಅನ್ಯೋನ್ಯ ಬೇರೆಯಾಗುತ್ತಾರೆ ... ನೆರೆಕರೆಯವರ ಜಗಳಾಡುತ್ತಾರೆ. ಕಡೆಗೆ ಸಹೋದರರು ಒಂದಾಗುವಂತೆ ಅವರೂ ಒಂದಾಗುತ್ತಾರೆ, ... ಹಿಂದಿಗಿಂತಲೂ ಹೆಚ್ಚಾದ ಪ್ರೇಮ ಸಂಬಂಧದಿಂದ ಇರುತ್ತಾರೆ. ಆ ರೀತಿಯ ಸಂಬಂಧವು ಪಂಡಿತ ನೆಹರುಗಳ ರಾಯಭಾರಿತನದಿಂದ ಆಗಲಿ. ಈ ಕೆಲಸಕ್ಕೆ ಅವರಿಗಿಂತ ಯೋಗ್ಯವಂತರ ಬೇರಿಲ್ಲ. ಗೌರವಪೂರ್ವಕವಾದ ಒಪ್ಪಂದಕ್ಕೆ ಸಿಲೋನ್ ಸರಕಾರವೂ, ಅಲ್ಲಿನ ಹಿಂದೀಯರೂ ಯೋಗ್ಯ ದಾರಿ ಮಾಡಲೆಂದು ನಾನು ಹಾರೈಸುತ್ತೇನೆ.'

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ

ಜಮ್ಮಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ

ಲಿವರ್ ಮತ್ತು ಸ್ಪ್ಲೀನ್ ಸ್ಪೆಷಿಯಲಿಸ್ಟ್,
ಮೈಲಾಪುರ, ಮದ್ರಾಸು

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲೈಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು. ೪) ಸ್ಟೇಷನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮಾಲು ಪರದೇಶದಿಂದ ಬರುವಂತೆ ಉಂಟು. ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ್. ನಾಥ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜಂಟ್:—ಪಿ. ಎಚ್. ಭಟ್ಟಾ

ಗದಗ —ವಿ. ಎಸ್. ಶೆಟ್ಟಿ.

ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜೆಂಟ್ —ಡಾ. ಕೆ. ಭಾಸ್ಕರ ಪೈ.

ಸ್ಪೆಶಲ್ ಏಜಂಟ್:—ಬಿ. ವ್ಹಿ. ಹೊನ್ನಾವರ

S. U. N. & Co.,

Silk Merchants,
Chaukhamba, BENARES CITI

ಈಗಿನ ತರಹ (ಕಾಶಿ) ಬನಾರಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು. 18 ಮೊಳದ 2¼ ಅಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ. 45ರಿಂದ 150. ಸಾಧಾರಣತರದ್ದು 18 ಮೊಳ ಸಣ್ಣ ಬುಟಿ ಶೀರೆಗಳು ರೂ. 35ರಿಂದ ರೂ 55. ಪಡಲು ಸಾದಾ ಶೀರೆ 18 ಮೊಳ ರೂ 32ರಿಂದ ರೂ 66. ಉದ್ದ ಮೊಳ 16, ಅಗಲ 2¼ ರೂ. 20ರಿಂದ 35ರ ವರೆಗೆ. ಭೇರಿ ಮಾಲುಗಳ ಕಟಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ. ಬೆನರೆಸ್ ಸಿಟಿ

ಜೀವಂತರಾದ ದೇವರುಗಳನ್ನು ನಾವು ಮೊದಲು ಆರಾಧಿಸಬೇಕು

ಮಾನ್ಯ ಮಂತ್ರಿ ಗೋಪಾಲ ರೆಡ್ಡಿಯವರ ಭಾಷಣ

ಜಿಲ್ಲಾ ಬೋರ್ಡಿನ ಸಭಾಭವನದ ಉದ್ಘಾಟನಾ ಸಮಾರಂಭ

ಕಾರ್ಕಳದಲ್ಲಿ ಹರಿಗೆ ವಾರ್ಡಿನ ಉದ್ಘಾಟನೋತ್ಸವ

ಕೆನರಾ ಹೈಸ್ಕೂಲಿನಲ್ಲಿ ಅನಾವರಣೋತ್ಸವ ಮತ್ತು ಶಂಕುಸ್ಥಾಪನೆ,

ಮಾನ್ಯ ಮಂತ್ರಿ ಶ್ರೀ ಬಿ. ಗೋಪಾಲ ರೆಡ್ಡಿಯವರು ಪಾರ್ಲಿಮೆಂಟರಿ ಸೆಕ್ರಟರಿ ಶ್ರೀ ಭಕ್ತವತ್ಸಲಂರವರೊಡನೆ ಮಂಗಳೂರಿಗೆ, ತಾ. ೮ ರಂದು ಸಂಜೆ ಮೈಲಿನಲ್ಲಿ ಬಂದಿಳಿದರು. ಮಂಗಳೂರಿನ ಪುರಪ್ರಮುಖರನೇಕರು ಅವರನ್ನು ಸಂಭ್ರಮದಿಂದ ಸ್ವಾಗತೀಕರಿಸಿದರು.

ಮಾನ್ಯ ಮಂತ್ರಿಗಳು ಅಲ್ಲಿಂದ ಬಂಗ್ಲೆಗೆ ತೆರಳಿ ಸ್ವಲ್ಪ ವಿರಾಮ ಹೊಂದಿ, ಘಂಟೆ ೯ಕ್ಕೆ ಡಿ. ಬೋ. ಹೊಸ ಕಟ್ಟಡವನ್ನು ಉದ್ಘಾಟನೆ ಮಾಡುವರೆ ಚಿತ್ತೈಸಿದರು. ಸಭಿಕರ ಪ್ರಚಂಡ ಕರತಾಡನದೊಡನೆ ಮಂತ್ರಿಗಳು ಅಗ್ರಾಸನ ವಹಿಸಿದರು.

ಜಿಲ್ಲಾ ಬೋರ್ಡು ಉದ್ಯೋಗಸ್ಥರ ಸಂಘದ ಪರವಾಗಿ ಶ್ರೀ ಎಂ. ಸುಂದರರಾಯರು ಮಂತ್ರಿಗಳಿಗೆ ಮಾನಪತ್ರವನ್ನಿತ್ತರು.

ಆ ಮೇಲೆ, ಜಿ ಬೋ. ಪ್ರೆಸಿಡೆಂಟರಾದ ಡಾ। ಕೆ. ವಿಠಲಶೆಟ್ಟರು, ಇದು ವರೆಗೆ ಬೋರ್ಡಿಗೆ ಯೋಗ್ಯವಾದ ಸಭಾಭವನವೊಂದು ಇಲ್ಲದಿರುವ ಕೊರತೆಯಿತ್ತೆಂದೂ, ಹಿಂದಿನ ಬೋರ್ಡಿನ ಅಧಿಕಾರಿಗಳು ಕಲೆಕ್ಟರರಾಗಿದ್ದ ಮಿ। ಗೋನರೀ ಮೊದಲಾದವರ. ಆ ಬಗ್ಗೆ ಯತ್ನಿಸಿ ಸಾಧ್ಯವಾಗದೇ ಇದ್ದು, ತಾನು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿಕೊಂಡಮೇಲೆ ಈ ಕೆಲಸವನ್ನು ಸಂಪೂರ್ಣಗೊಳಿಸಿದ ವಿಷಯವನ್ನೂ, ಈ ಕಟ್ಟಡವು ಅಷ್ಟೊಂದು ಭವ್ಯವಿಲ್ಲದಿದ್ದರೂ, ನಮ್ಮ ಜಿಲ್ಲೆಯ ಯೋಗ್ಯತೆಗೆ ಕಳ್ಳದಾಗಿರುವುದಾಗಿಯೂ ಹೇಳಿದರು ಇದರ ಉದ್ಘಾಟನೆಯನ್ನೂ ಮಾನ್ಯ ಮಂತ್ರಿಗಳು ನಡೆಸಬೇಕಾಗಿ ಕೇಳಿಕೊಂಡರು

ಉದ್ಘಾಟನಾ ಸಮಾರಂಭವನ್ನೂ ಮಾಡುವ ಮೊದಲು, ಮಾನ್ಯ ಮಂತ್ರಿಗಳು ಈ ಸಾರಾಂಶದ ಭಾಷಣವಿತ್ತರು:—

"ಮಳೆಗಾಲದಲ್ಲಿ ನಿಮ್ಮ ಜಿಲ್ಲೆಯ ಸೌಂದರ್ಯವನ್ನು ನೋಡುವ ಕುತೂಹಲವು ನನಗಿತ್ತು. ಇದರ ಪ್ರಾರಂಭೋತ್ಸವವನ್ನು ಮಾಡಬೇಕೆಂದು ಅಧ್ಯಕ್ಷರು ನನ್ನೊಡನೆ ಕೇಳಿದಾಗ ನಾನದನ್ನು ಒಪ್ಪಿಕೊಂಡೆ ಹಿಂದಿನ ಜಿ ಬೋ. ಅಧಿಕಾರಿಗಳಿಗೆ, ಸ್ವತಃ ಮಿ। ಗೋನರಿಗೇ ಪೂರೈಸದಿರುವ ಕೆಲಸವನ್ನು ಇಂದಿನ ಅಧ್ಯಕ್ಷರಾದ ಡಾ। ಶೆಟ್ಟರು ಅತ್ಯಲ್ಪ ಸಮಯದಲ್ಲಿಯೇ ಪೂರ್ಣಗೊಳಿಸಿದ್ದು ಅವರ ಕಾರ್ಯಸಾಹಸವನ್ನು ವ್ಯಕ್ತಪಡಿಸುತ್ತದೆ! ಅನವಿದೀ ದುಡಿದು ಕಷ್ಟಪಡುವ ಉದ್ಯೋಗಸ್ಥರಿಗೆ ಯೋಗ್ಯ ಸ್ಥಳವನ್ನು ಒದಗಿಸಿಕೊಡಬೇಕಾದುದು ಅವಶ್ಯ, ಅದಕ್ಕಾಗಿ ವೆಚ್ಚ ಮಾಡಿದ ಹಣವು ವ್ಯರ್ಥವಾಗಿ ಹೋಗದೇ ಇಗಿದೆ

ಜಿಲ್ಲಾ ಬೋರ್ಡು ಬಸ್ಸು ಸರ್ವೀಸು

"ಬಸ್ಸು ಸರ್ವಿಸುಗಳನ್ನು ಬೋರ್ಡಿನಿಂದ ನಡೆಸುವ ವಿಷಯದಲ್ಲಿ ನಿಮ್ಮ ನಿರ್ಧಾರವನ್ನು ಮುಂದುವರಿಸಿದ್ದೀರೆಂದು ಕೇಳುತ್ತೇನೆ ಬೋರ್ಡಿಗೆ ಲಾಭವುಂಟೆಂಬುದರಿಂದ ಹೀಗೆ ಸರ್ವಿಸು ನಡೆಸುವ ಯೋಜನೆ ಆಲೋಚಿಸಲಾಗಿದೆ ಸರಕಾರವು ಬೇಗನೇ ಒಂದು ಪರಿಷತ್ತನ್ನು ಕರೆದು ಈ ಕುರಿತು ನಿರ್ಧಾರಮಾಡುವುದು. ಕೆಲಸದ ಮಹತ್ವವನ್ನರಿತು ತಾಳ್ಮೆಯಿಂದ ಮುಂದುವರಿಯಬೇಕು.

'ಬೋರ್ಡುಗಳು ಬಸ್ಸು ಸರ್ವಿಸು ನಡೆಸುವುದನ್ನು ಸಂಪೂರ್ಣಗೊಳಿಸಲಿಕ್ಕೆ ನಾಲ್ಕು ವರ್ಷಗಳ ಅವಧಿ ಹೋಗಲೂಬಹುದು. ಕೆಲವು ರಸ್ತೆಗಳಲ್ಲಿ ಬೋರ್ಡುಗಳು ಈಗಲೇ ಬಸ್ಸು ಪ್ರಾರಂಭಿಸಬಹುದು ಬಸ್ಸು ಸರ್ವೀಸು ನಡೆಸಿದ ಕೊಯಂಬುತ್ತೂರು ಜಿ। ಬೋರ್ಡಿಗೆ ಲಾಭವುಂಟೆಂದು ತಿಳಿಯಲಾಗಿದೆ. ಆದರೆ ಲಾಭದ ಆಶೆಯಿಂದ ಇಡೀ ಜಿಲ್ಲೆಯಲ್ಲಿ ಬಸ್ಸು ಸರ್ವಿಸು ನಡೆಸುವರೆ ಹಣವು ಬೋರ್ಡುಗಳಲ್ಲಿಲ್ಲ. ಸಾಲ ಕೊಡುವರೆ ಸರಕಾರದಲ್ಲಿಯೂ ಹಣವಿಲ್ಲ. ಅದೂ ಅಲ್ಲದೆ ಈಗಿರುವ ಕಂಪೆನಿಗಳಿಗೆ ನಷ್ಟ ಬರದಂತೆ, ಸಾವಕಾಶದಿಂದ ಈ ಈ ವಿಷಯವನ್ನೂ ಯೋಚಿಸಬೇಕು.

"ಇಂದಿನ ಬಸ್ಸುಗಳು ಹಾಳಾಗುವ ವರೆಗೆ ಕಾದು ಕುಳಿತುಕೊಳ್ಳಬೇಕು ಇಲ್ಲವೇ ಅವುಗಳನ್ನು ಬೋರ್ಡು ಪಡೆಯಬೇಕು. ಇಂದಿನ ಕಂಪೆನಿಯವರಿಗೂ ನಷ್ಟವಾಗಬಾರದು ಕುಂಟಾ ಹಣದ ವಹಿವಾಟಿನ ಕೆಲಸವಾದದ್ದರಿಂದ ಲಂಚವೇ ಮೊದಲಾದ ಆರೋಪ ಪ್ರೆಸಿಡೆಂಟರಿಗೆ ಹೊರಿಸಬಾರದು. ಅದನ್ನೂ ತಪ್ಪಿಸುವಂತಾಗಬೇಕು ಇದರ ಎಲ್ಲಾ ವಿಚಾರಗಳನ್ನು ವಿಮರ್ಶಿಸಿ ಕಾರ್ಯವನ್ನು ಆರಂಭಿಸಬೇಕು

ಪ್ರಾಥಮಿಕ ವಿದ್ಯಾಭ್ಯಾಸ

ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರಾಂತ ಸರಕಾರವು ತೆಗೆದುಕೊಳ್ಳಬೇಕೆಂದು ಯೋಚನೆಯಿತ್ತು ಅದು ಈಗ ಬೇಡವೆಂಬಾಗಿದೆ ಜಿ। ಬೋ. ಸೆಕ್ರಟರಿಗಳಿಗೆ ಆಯಾಯ ಜಿಲ್ಲೆಯ ಪ್ರಾಥಮಿಕ ವಿದ್ಯಾಭ್ಯಾಸದ ಅಧಿಕಾರ ಕೊಡುವ ಯೋಜನೆಯುದೆ ಬೋರ್ಡುಗಳ ವ್ಯವಹಾರದಲ್ಲಿ, ಆರ್ಥಿಕ ವಿಷಯದಲ್ಲಿ, ಉಪಾಧ್ಯಾಯರ ವರ್ಗಾವರ್ಗಗಳಲ್ಲಿ ಆಗುವ ಗೊಂದಲಗಳಿಲ್ಲದರ ಪರಿಹಾರಕ್ಕೆ ಒಂದೊಂದು ಅಧಿಕಾರವನ್ನು ಪ್ರತ್ಯೇಕ ಒಬ್ಬ ವ್ಯಕ್ತಿಯ ವಶವಿರಿಸುವುದು ಹಿಹಿತವಾಗಿವೆ

ಜಿ. ಬೋರ್ಡಿನ ಉದ್ಯೋಗಸ್ಥರು

ಬೋರ್ಡಿನ ಉದ್ಯೋಗಸ್ಥರಿಗೆ ಅದಷ್ಟು ಅನುಕೂಲತೆಗಳನ್ನು ಒದಗಿಸಬೇಕೆಂಬು ನನ್ನ ಇಚ್ಛೆ ಆದರೆ ಅವರನ್ನು ಒಂದು ಕಡೆಯಿಂದ ಒಂದು ಕಡೆಗೆ ವರ್ಗಮಾಡುವುದರಿಂದ ಹೆಚ್ಚು ಹಿತವಿದೆಯೆಂದು ನಾನು ತಿಳಿಯುತ್ತೇನೆ ಜಿಲ್ಲೆಯಲ್ಲಿ ಅನೇಕ ಪಕ್ಷಗಳಿರುತ್ತವೆ ಹೆಚ್ಚಾಗಿ ಯಾರೇ ಕರಾಗಿದ್ದ ಅವರು ಯಾವುದಾದರೊಂದು ಪಕ್ಷಕ್ಕೆ ಸೇರಿ ಆಫೀಸಿನ ಗಟ್ಟುಬಿಡಬಹುದು ಅವರಿಗೆ ಬುದ್ಧಿ ಬರುವ ವರೆಗೆ ವರ್ಗಾಯಿಸುವುದರಿಂದ ಹಿತವಿದೆ ಹೀಗೆಂದು ಹೇಳಿದರು.

"ನಿಮ್ಮ ಒಪ್ಪಿಗೆಮೇರೆಗೆ ನನ್ನ ಇಂದಿನ ಕಾರ್ಯವಾದ ಡಿ। ಬೋರ್ಡಿನ ಹೊಸ ಸಭಾಸದನವನ್ನು ಉದ್ಘಾಟನೆ ಮಾಡುತ್ತೇನೆ" ಎಂದು ಭಾಷಣವನ್ನು ಕೊನೆಗಾಣಿಸಿದರು

ಧನ್ಯವಾದಾರ್ಪಣೆ

ಆ ಮೇಲೆ ಪ್ರೆಸಿಡೆಂಟರಾದ ಡಾ। ವಿಟ್ಠಲ ಶೆಟ್ಟರು ತಮ್ಮ ಕೆಲಸದಲ್ಲಿ ಸಹಾಯಿಗಳಾದ ಸರ್ವರಿಗೂ ಧನ್ಯವಾದಾರ್ಪಣೆ ಮಾಡಿದರು ಮಾತ್ರವಲ್ಲದೆ ಸಾವಿರ ರೂಪಾಯಿಗಳಿಗೆ ಮಿಕ್ಕಿದ ಬೆಲೆಯ ಕರ್ಚ ಮೇಜುಗಳೇ ಮೊದಲಾದವುಗಳನ್ನೇ ಉಚಿತವಾಗಿ ಇತ್ತ ಮೆಸರ್ಸ್ ಕೇನನ್ ಡಂಕರ್ಲಿ ಕಂಪೆನಿಯವರಿಗೆ ಕೃತಜ್ಞತೆ ಹೇಳಿದರು. ಸಭಿಕರಿಗೂ, ಮಾನ್ಯ ಮಂತ್ರಿಗಳಿಗೂ ಆಭಾರ ಹೇಳಿದರು

ಉಪಹಾರದೊಡನೆ ಸಭಾಕಾರ್ಯವು ಕೊನೆಗೊಂಡಿತು

ಕಾರ್ಕಳದಲ್ಲಿ ಮಂತ್ರಿಗಳು

ಅನೇಕ ನಾಗರಿಕರ ಸಂಭ್ರಮದ ಸ್ವಾಗತದೊಡನೆ, ಮಾನ್ಯ ಮಂತ್ರಿ ಶ್ರೀ ಗೋಪಾಲರೆಡ್ಡಿಯವರು ತಾ ೯ರಂದು ಕಾರ್ಕಳಕ್ಕೆ ಚಿತ್ತೈಸಿ ಅಲ್ಲಿ ಶ್ರೀ ಕೆ ಶೇಷಗಿರಿ ಪ್ರಭುಗಳು ಬೋರ್ಡಿಗೆ ದಾನವಾಗಿತ್ತ ಹೆರಿಗೆ ವಾರ್ಡಿನ ಅನಾವರಣವನ್ನು ಮಾಡಿದಾಗ ಹೇಳಿದ ಮಾತುಗಳಿವು.

ಶ್ರೀ ಪ್ರಭುಗಳಂಥವರಿಂದ ಕಾರ್ಕಳ ತಾಲೂಕಿನ ಜನರು ಇತರ ತಾಲೂಕಿನವರಿಗೆ ಸಿಗದಂತಹ ಒಂದು ದೊಡ್ಡ ಸೌಕರ್ಯವನ್ನು ಪಡೆದಿದ್ದಾರೆ! ಪಟ್ಟಣದ ಬಾಳುವೆಯಲ್ಲಿ ಹೆರಿಗೆಯ ವಾರ್ಡಿನ ದಾನಕ್ಕೆ ತಕ್ಕ ಪ್ರತಿಕೋಪವಾದ ದಾನವಿಲ್ಲ' ಬಡತನಕ್ಕೆ ಒಳಗಾದ ಹೆತ್ತ ಸಾಯುವ ಮಾತೆಯರ ಸಂಖ್ಯೆ ನಮ್ಮಲ್ಲಿ ಹೆಚ್ಚಾಗಿದೆ' ಇಂತಹ ಸಂಕಷ್ಟವನ್ನು ಪರಿಹರಿಸಲು ಉದಾರಿಗಳು ಮುಂದೆ ಬರಬೇಕು ಇಂತಹ ಹಲವಾರು ಪ್ರಭುಗಳಂತವರು ನಮಗೆ ಬೇಕು, ಸರಕಾರವು ಮದ್ಯಪಾನ ನಿಷೇಧದಂತಹ, ಮಹತ್ವಾದ ಮೂಲ ವಿಚಾರಗಳ ಕುರಿತು ಮೊದಲಾಗಿ ತನ್ನ ಕಾರ್ಯವನ್ನು ಸುರುಮಾಡಿರುವುದರಿಂದ, ಹೀಗಿದ್ದ ಕೆಲಸಕ್ಕೆ ಪುಣ್ಯಾತ್ಮರಾದ ಶ್ರೀಮಂತರು ಮುಂದೆ ಬಂದು ನೆರವಾಗಬೇಕು. ಶಾಲೆ, ಆಸ್ಪತ್ರೆ ಹೆರಿಗೆ ಆಸ್ಪತ್ರೆಗಳು ನಮ್ಮಲ್ಲಿ ಹೆಚ್ಚಬೇಕು. ದೇವಸ್ಥಾನಗಳು ಈಗ ಅಗತ್ಯವಿಲ್ಲ, ಜೀವಂತರಾದ ದೇವರನ್ನು ಪೂಜಿಸುವುದು ಮೊದಲನೆಯ ಕರ್ತವ್ಯವಾಗಿದೆ.

"ಆಸ್ಪತ್ರೆಗಳನ್ನು ಹೆಚ್ಚಿಸಬೇಕು ಜಗಲಿಗಳಲ್ಲಿ ರೋಗಿಗಳನ್ನು ಹಾಕಬಾರದು. ಅದು ಕಠಿಣವಾದ ಕೆಲಸ ಆದರೆ ಮುರುಕು ಗುಡಿಸಲುಗಳಲ್ಲಿ ಬಿದ್ದು ಸಾಯುವಂತೆ ಮಾಡುವುದು ಅದಕ್ಕಿಂತಲೂ ಕಠಿಣವಾದುದು ಹಿಂದಿನ ವೇದಕಾಲದಿಂದಲೇ ನಮ್ಮ ದೇಶದ ದಾನಶೂರತೆ ಪ್ರಖ್ಯಾತವಾಗಿದೆ. ನನಗೀ ಸಂದರ್ಭವನ್ನು ಕೊಟ್ಟದ್ದಕ್ಕಾಗಿ ಶ್ರೀ ಪ್ರಭುಗಳಿಗೂ ಡಾ ಶೆಟ್ಟರಿಗೂ ವಂದನೆ"ಯೆಂದು ಹೇಳಿ ಉದ್ಘಾಟನೆ ನಡೆಸಿದರು

ಅನಂತರ ಡಾ। ಶೆಟ್ಟರು ಕೃತಜ್ಞತೆಯನ್ನು ಸೂಚಿಸುತ್ತಾ ಮೂಡಬಿದ್ರೆಯಲ್ಲಿ ಹೆರಿಗೆ ವಾರ್ಡನ್ನು ಕಟ್ಟಿಸಲು ಎತ್ತಿದ ನಿಧಿಗೆ ಮಹಾಜನರು ಸಹಾಯ ಮಾಡಬೇಕೆಂದು ಹೇಳಿದರು.

ಉಡುಪಿಯಲ್ಲಿ ಮಂತ್ರಿಗಳು

ಹಲವು ಮಂದಿ ಸದ್ಗೃಹಸ್ಥರು ಮಾನ್ಯ ಮಂತ್ರಿಗಳನ್ನು ಉಡುಪಿಯಲ್ಲಿ ಸ್ವಾಗತಮಾಡಿದರು ಮುನಿಸಿಪಾಲಿಟಿಯಿಂದ ಅರ್ಪಿತವಾದ ಮಾನಪತ್ರವನ್ನು ಅಂಗೀಕರಿಸಿ, ಅಜ್ಜರಕಾಡಿನ ಭುಜಂಗ ಪಾರ್ಕಿನ ಶಂಕುಸ್ಥಾಪನೆ ಮಾಡಿ, ಹಿಂತಿರುಗಿದರು ಮಂತ್ರಿಗಳು ತಮ್ಮ ಭಾಷಣದಲ್ಲಿ ಮಾನಪತ್ರಗಳಿಗೆ ಉತ್ತರವಿತ್ತರು. ಕಾರ್ಯದರ್ಶಿಗಳಾದ ಶ್ರೀ ಭಕ್ತವತ್ಸಲಂರವರು ಭಾಷಣಮಾಡಿದರು

ಉಪಹಾರವಾಗಿ ದೇವಸ್ಥಾನ, ವ್ಯಾಯಾಮ ಶಾಲೆ, ರೇಡಿಯೋ ಹೌಸ್‌ಗಳನ್ನೆಲ್ಲಾ ನೋಡಿದರು. ಮೂಲ್ಕಿಗೆ ಪ್ರಯಾಣ ಬೆಳೆಸಿದರು. ದಾರಿಯುದ್ದಕ್ಕೆಲ್ಲಾ ಅನೇಕ ಸ್ವಾಗತವಿತ್ತು

ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ

ಮಂಗಳೂರು ಕೆನರಾ ಹೈಸ್ಕೂಲಿನ ಮೇನೇಜರರು ಮಂತ್ರಿಗಳಿಗೆ ಪುಷ್ಪಹಾರವನ್ನರ್ಪಿಸಿ, ಮಾನಪತ್ರವನ್ನು ಓದಿದರು. ಮಂತ್ರಿಗಳ ಭಾಷಣವಾದ ಮೇಲೆ, ಪ್ರೊಫೆಶನಲ್ ಹಾಲಿನ ಶಂಕುಸ್ಥಾಪನೆ ಮಾಡಿದರು. ಮತ್ತು ನಂಗ ಹಾಲಿನಲ್ಲಿ ಮಹಾತ್ಮಾಜಿಯವರ ಹೆಸರನ್ನಿರಿಸಿ ಶ್ರೀ ವಿಟ್ಠಲ ಶಾಂತಾರಾಮ ರಾಯರಿಂದ ಅರ್ಪಿತವಾದ ಮಹಾತ್ಮಾ ಗಾಂಧಿಯವರ ಪ್ರತಿಮೆಯನ್ನು ಅನಾವರಣ ಮಾಡಿದರು.

NOTICE

Mangalore Automobiles Limited,

(CITY BUS SERVICE)

We hereby inform our numerous share holders numbering nearly 600 and the public in general of Mangalore that the Road Traffic Board, South Kanara, have sanctioned only 3 new Buses against our applications for 8 new Buses. This will make a total of 12 Buses for the City Service. We have at present 11 Buses and have ordered for one more which is expected very shortly

Although the Licensing Authorities are satisfied with half an hour service, our ambition is to make our services quicker i. e 15 minutes service, and for this reason we had applied for 8 more Buses

If there is enough traffic and public patronage, we are prepared to put on road more Buses, and give unique facilities to the travelling Public of Mangalore if the Road Traffic Board thoroughly investigate the traffic needs and order us to do the needful We are also ready to meet the requirements of the New Motor Vehicles Act which is bound to bring a lot of good to the travelling public and the Motor Transport Companies.

KERWAR & Co.,
Managing Agents.

ನೋಟೀಸು

ಅಡೂರು ಪಂಚಾಯ್ತ ಕೋರ್ಟಿನಲ್ಲಿ

ಸ್ಮಾಲ್ ನಂ 16 38

ಶೇದಿ ಕುಂಞಾಬ್ಯಾರಿ — ವಾದಿ

ಸೆಲಿಮಾನ್ ಬ್ಯಾರಿ ಕಡಾರ ಪ್ರತಿವಾದಿರು

ಸದ್ರಿ ವ್ಯಾಜ್ಯದ 2ನೇ ಪ್ರತಿವಾದಿ ಅಡೂರು 1ನೇ ಗ್ರಾಮ ದಲಿರುವ ಸೆಲಿಮಾನ್ ಬ್ಯಾರಿ ಮಗ ಮೂಸೆಬ್ಯಾರಿಗೆ ತಿಳಿಸುವುದೇನೆಂದರೆ

ನಾನು ವಾದಿಯಾಗಿ ನಿಮ್ಮ ಮೇಲೆ ಕ್ಲೈಮ ದಾಖಲು ಮಾಡಿದ ಮೇಲ್ಕಂಡ ಪ್ರಾಮಿಸರಿ ನೋಟಿನ ವ್ಯಾಜ್ಯವು ತಾ. 29-7 39ಕ್ಕೆ ಅಖೈರಿ ತನಿಖೆಗೆ ಇಟ್ಟಿರುವುದರಿಂದ ಆ ದಿವಸ ನೀವು ಮೇಲ್ಕಂಡ ಕೋರ್ಟು ಮುಂದೆ ಬೆಳಿಗ್ಗೆ 11 ಗಂಟೆ ಸಮಯಕ್ಕೆ ಹಾಜರು ಆಗುವರೆ ತಪ್ಪಿದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ

ಅಡೂರು ಪಂಚಾಯ್ತ ಕೋರ್ಟು ಹುಕುಂ ಪ್ರಕಾರ ಶೇದಿ ಕುಂಞಿ.

12-7-39

ಈ ಮೂರು ಗೆರೆ ಶೇದಿ ಕುಂಞಾಬ್ಯಾರಿ ರುಜು

ಬೊಂಬಾಯಿಯ ಪ್ರಧಾನ ಮಂತ್ರಿ ಶ್ರೀ. ಬಿ. ಜಿ. ಖೇರ್

ಟಪ್ಪಾಲು ಪೇದೆಯರ ಮೊಮ್ಮಗ--ಗುಮಾಸ್ತರ ಮಗ--

ಇಪ್ಪತ್ತು ರೂಪಾಯಿ ಸಂಬಳದಲ್ಲಿ ಜೀವನ ನಡೆಸುತ್ತಿದ್ದ ಶ್ರೀ। ಖೇರರು—ಬೊಂಬಾಯಿ ಆಧಿಪತ್ಯವನ್ನು ಆಳುವ ಅಧಿಕಾರ ಸೂತ್ರವನ್ನು ಇಂದು ವಶಪಡಿಸಿಕೊಂಡಿದ್ದಾರೆ!

"ಪದವೀಧರರಿಗೆ ಕೆಲಸ ಬೇಕಾಗಿದೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ" ಎಂಬುದಾಗಿ ಬೊಂಬಾಯಿಯ ಪ್ರಮುಖ ವಾರ್ತಾಪತ್ರಿಕೆಯಲ್ಲಿ ಜಾಹೀರಾತೊಂದು ಪ್ರಕಟವಾಗಿತ್ತು ಈ ಜಾಹೀರಾತಿಗೆ ದುಡ್ಡು ಕೊಟ್ಟು ಪ್ರಕಟಿಸಿದವರು ಈಗ ಒಂದು ದೊಡ್ಡ ಪ್ರಾಂತ್ಯದ ಮುಖ್ಯಾಧಿಕಾರ ವಹಿಸಿದ್ದಾರೆ ಲಕ್ಷಗಟ್ಟಲೆ ಪ್ರಜೆಗಳ ಭವಿಷ್ಯವು ಇವರ ಕೈಯಲ್ಲಿದೆ ಕೋಟ್ಯಾಂತರ ರೂಪಾಯಿಗಳ ಯಾಜಮಾನ್ಯವನ್ನು ವಹಿಸಿ ಚಾಕಚಕ್ಯತೆಯಿಂದ ಕೆಲಸಮಾಡುತ್ತಿದ್ದಾರೆ ಒಂದಾನೊಂದು ಕಾಲದಲ್ಲಿ ಕೇವಲ ಹತ್ತಿಪ್ಪತ್ತು ರೂಪಾಯಿಗಳ ಕೆಲಸಕ್ಕಾಗಿ ಹಾತೊರೆಯುತ್ತಿದ್ದ ಸ್ಥಿತಿಯಿಂದ ಪದವಿಗೇರುವುದು ಜೀವನದ ಸಫಿಕಹಿಗಳನ್ನು ಸ್ಪಷ್ಟಪಡಿಸುತ್ತದೆ

ಈಗ ನಮ್ಮ ಕಲ್ಯಾಣ ನಗರಿಯ ಸೌಮ್ಯ ಹವಾಗುಣವನ್ನು ಸೇವಿಸಿ ಆರೋಗ್ಯ ಲಾಭ ಹೊಂದುತ್ತಿರುವ ಬೊಂಬಾಯಿ ಪ್ರಾಂತ್ಯದ ಮುಖ್ಯ ಮಂತ್ರಿಗಳೂ, ಪ್ರಸಿದ್ಧ ದೇಶಾಭಿಮಾನಿಗಳೂ ಆದ ಶ್ರೀ ಬಾಲ ಗಂಗಾಧರ ಖೇರರು ಜೀವನದ ನೋವನ್ನನುಭವಿಸಿದವರು ಅವರನ್ನು ಕರ್ಮಯೋಗಿಗಳೆಂದು ಬೇಕಾದರೂ ಕರೆಯಬಹುದು, ಜ್ಞಾನಯೋಗಿಗಳೆಂದಾದರೂ ಕರೆಯಬಹುದು ಕಾಂಗ್ರೆಸ್ ಅಧಿಕಾರ ಸ್ವೀಕಾರಕ್ಕೆ ಹಿಂದೆ ಅವರ ಹೆಸರನ್ನು ಯಾರೂ ಕೇಳಿರಲಿಲ್ಲ ಇದ್ದಕ್ಕಿದ್ದ ಹಾಗೆ ಅವರ ವ್ಯಕ್ತಿತ್ವದ ಘನತೆಯು ಎಲ್ಲರಿಗೂ ತಿಳಿದು ಬಂತು ಶ್ರೀ ಖೇರರು ಶುದ್ಧ ವೇದಾಂತಿಗಳಿಗಿರುವ ನಿರಾಶಾವಾದಿತ್ವವು ಅವರಲಿಲ್ಲ ಅನೇಕರಿಗೆ ಅವರು ಅಪರಿಚಿತರಾದರೂ, ಅವರ ಘನತೆ, ವೈಶಿಷ್ಟ್ಯಗಳು ಗೌರೀ ಶಂಕರದಂತಹ ಮೇಲ್ಮಟ್ಟದಲ್ಲಿದೆ ಅವರದು ಸುಂದರ ವ್ಯಕ್ತಿತ್ವ ಅವರ ಮುಖಭಾವದಲ್ಲಿ ಪೃಥತೆಯೂ ಮಾನವ ಪ್ರೇಮವೂ, ಆಕರ್ಷದ ಅನುಭವವೂ, ಕಾಣುತ್ತದೆ ಶ್ರೀ ಖೇರರ ಶೀಲಸ್ಥೈರ್ಯವು ಅವರನ್ನು ಈ ಪರಮಾವಧಿಗೇರಿಸಿದೆ ಸೇನಾನಾಯಕರಿಗಿರುವ ಆಜ್ಞೆಯ ಮನೋಭಾವದೊಂದಿಗೆ ಸರಳತೆಯೂ ಅವರಲ್ಲಿ ಸೇರಿಹೋಗಿದ್ದೆ ನೆಪೋಲಿಯನ್ನರಂತೆ ವೀರಾಗ್ರಣಿಗಳಾದರೂ, ಸಹೋದ್ಯೋಗಿಗಳಲ್ಲೂ ಪ್ರೀತಿಯನ್ನು ತೋರಿಸಿದ್ದಾರೆ ಯಾರೂ ಇವರ ಮಾತನ್ನು ತಳ್ಳಿ ಹಾಕುವಷ್ಟು ಧೈರ್ಯವನ್ನು ಹೊಂದಿಲ್ಲ.

ಎತ್ತರವಾದ ವ್ಯಕ್ತಿತ್ವ, ಅದಕ್ಕೆ ತಕ್ಕಂತಹ ಸುಂದರವಾದ ಶರೀರ, ಉದ್ದವಾದ ಮೂಗು, ಯಾವಾಗಲೂ ಮುಗುಳ್ನಗೆಯನ್ನು ಬೀರುತ್ತಿರುವ ಅವರ ವದನವು ಯಾರಿಗಾದರೂ ಸಂತೋಷವನ್ನುಂಟುಮಾಡದೇ ಇರದು ಮುಖ್ಯ ಮಂತ್ರಿ ಪದವಿಯಲ್ಲಿದ್ದರೂ, ಆ ಪದವಿಯ ಮೋಹವು ಅವರಿಂದ ಒಂದು ಮೈಲ ದೂರದಲ್ಲಿಯೇ ಇದೆ ಆತ್ಮ ಪ್ರಶಂಸೆಯೆಂಬುದು ಅವರಲ್ಲಿ ಲವಲೇಶವಾದರೂ ಇಲ್ಲ ಅದು ಅವರ ಮುಂದೆ ಮಂಜಿನಂತೆ ಮಾಯವಾಗುತ್ತದೆ ಜಗನ್ನಿಯಾಮಕನು ಶ್ರೀ ಖೇರರಿಗೆ ಅಪಾರವಾದ ಬುದ್ಧಿಶಕ್ತಿಯನ್ನು ಕರುಣಿಸಿದ್ದಾನೆ ಈ ವೈಶಿಷ್ಟ್ಯವಿರುವುದರಿಂದಲೇ ಅವರು ಆಡಳಿತ ನೌಕೆಯನ್ನು ಸುರಕ್ಷಿತವಾದ ದಾರಿಯಲ್ಲಿ ಕೊಂಡೊಯ್ಯುತ್ತಿದ್ದಾರೆ

ಶ್ರೀ ಖೇರರು ೧೮೮೮ನೇ ಇಸವಿ ಆಗಸ್ಟ್ ೨೪ನೇ ತಾರೀಖಿನ ದಿವಸ ರತ್ನಗಿರಿಯಲ್ಲಿ ಜನ್ಮವೆತ್ತಿದರು ಶ್ರೀ ಗಂಗಾಧರರಾವ್ ಖೇರರಿಗೆ ಅವರೇ ಏಕಮಾತ್ರ ಸುಪುತ್ರರು ಒಂದಾನೊಂದು ಕಾಲದಲ್ಲಿ ಇವರ ಮನೆತನದವರಿಗೆ ಅತುಲೈಶ್ವರ್ಯವಿತ್ತು ಆದರೆ ಅನೇಕ ಸನ್ನಿವೇಶಗಳಿಂದ ಕ್ರಮೇಣ ಬಡತನದ ಬೇನೆಯು ಇವರ ಬೆನ್ನು ಹತ್ತಿತು. ಶ್ರೀ ಖೇರರ ಪಿತಾಮಹರು ಊರಿಂದೂರಿಗೆ ಟಪಾಲನ್ನು ಹೊತ್ತು ತಿರುಗುತ್ತಿದ್ದರು ಅವರ ಪಿತೃವರೇಣ್ಯರು ಗುಮಾಸ್ತೆ ಕೆಲಸ ಮಾಡಿ ಜೀವನ ರಥವನ್ನು ಸಾಗಿಸುತ್ತಿದ್ದರು ಈ ಬಡತನದಿಂದ ಶ್ರೀ ಖೇರರು ಬಾಲ್ಯವನ್ನೆಲ್ಲಾ ಕಳೆದರು

೧೯೦೨ರಲ್ಲಿ ಶ್ರೀ ಖೇರರು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು ಆ ನಂತರ ಬೊಂಬಾಯಿ ವಿಲ್ಸನ್ ಕಾಲೇಜಿನಲ್ಲಿ ಪ್ರೌಢ ವಿದ್ಯಾ ವ್ಯಾಸಂಗದಲ್ಲಾಸಕ್ತರಾಗಿ ಅನೇಕ ಬಹುಮಾನಗಳನ್ನು ಪಡೆದರು ೧೯೦೬ರಲ್ಲಿ ಬೊಂಬಾಯಿ ವಿಶ್ವವಿದ್ಯಾನಿಲಯದ ಬಿ ಎ ಡಿಗ್ರಿಯನ್ನು ಹೊಂದಿ ಬಾವಾಧಾಜಿ ಪ್ರಶಸ್ತಿಯನ್ನು ಪಡೆದರು ಸಂಸ್ಕೃತದಲ್ಲಿ ಇವರಿಗೆ ಪ್ರಾವೀಣ್ಯತೆ ಸಿಕ್ಕಿತು ೧೯೦೮ರಲ್ಲಿ ಲಾ ಪರೀಕ್ಷೆ ಪಾಸುಮಾಡಿ ಜ್ಯೂನಿಯರ್ ವಕೀಲರಾದರು

೧೯೧೨ರಲ್ಲಿ ಶ್ರೀ ಖೇರರು ಯೂರೋಪಿನಲ್ಲೂ, ಅಮೇರಿಕಾದಲ್ಲೂ ಸಂಚರಿಸಿಕೊಂಡು ಸ್ವದೇಶಕ್ಕೆ ಹಿಂತಿರುಗಿದರು ಅಲ್ಲದೆ ಭಾಗ್ಯ ಲಕ್ಷ್ಮಿಯು ಇವರನ್ನು ಒಲಿಯದೆ ನಿರ್ಲಕ್ಷಿಸಿದಳು ಅಂದಿನಿಂದ ಬಹಳ ಸಂಕಟವನ್ನನುಭವಿಸಿದರು ಆಗ ನಾವು ಮೊದಲೇ ಬರೆದಂತೆ ಒಂದು ಪತ್ರಿಕೆಯಲ್ಲಿ ಕೆಲಸಬೇಕೆಂದು ಜಾಹೀರುಪಡಿಸಿದರು ಜಸ್ಟಿಸ್ ಥೀಮಾನ್‌ರು ಈ ಜಾಹಿರಾರನ್ನು ನೋಡಿ ತಮ್ಮ ಕಾರ್ಯದರ್ಶಿಗಳನ್ನಾಗಿ ಇವರನ್ನು ನೇಮಿಸಿಕೊಂಡರು ಪುನಃ ಅಂದರೆ ೧೯೧೭ರಲ್ಲಿ ಎರಡನೆಯ ಬಾರಿ ಯುರೋಪನ್ನು ಸಂಚರಿಸುವ ಸುಯೋಗ ಲಭಿಸಿತು

೧೯೧೮ರಲ್ಲಿ ಶ್ರೀ ಖೇರರು ಶ್ರೀ ಮಣೀಲಾಲ್ ನಾನಾವತ್ತಿಯವರೊಡನೆ ನ್ಯಾಯವೃತ್ತಿಯನ್ನವಲಂಬಿಸಿ ಶೀಘ್ರದಲ್ಲಿಯೇ ಔನ್ನತ್ಯ ಸಂಪಾದಿಸಿದರು. ನ್ಯಾಯವೃತ್ತಿಯೊಂದೇ ಅಲ್ಲದೆ, ಸಮಾಜ ಸಂಸ್ಕರಣಾಭಿಲಾಷಿಗಳಾಗಿ ಕೆಲಸಮಾಡಲು ಉಪಕ್ರಮಿಸಿದರು

ಸ್ವಲ್ಪ ದಿವಸಗಳ ಮೇಲೆ ಇವರಿಗೆ ಮೇಲೆ ರಾಜಕೀಯ ಜೀವನದ ರುಚಿಹುಟ್ಟಿತು. ಸಮಾಜ ಸೇವೆಯೊಂದಿಗೆ ರಾಜಕೀಯ ಮುಖಂಡತ್ವವನ್ನು ಸಂಪಾದಿಸಿ ಸ್ವರಾಜ್ಯ ಪಾರ್ಟಿಯ ಕಾರ್ಯದರ್ಶಿಗಳಾದರು ಆ ಮೇಲೆ ಬಾರ್ಡೋಲಿ ವಿಚಾರಣಾ ಸಮಿತಿಯಲ್ಲಿ ತಮ್ಮ ನ್ಯಾಯಪರತೆಯನ್ನೂ, ದೂರದೃಷ್ಟಿಯನ್ನೂ ವ್ಯಕ್ತಗೊಳಿಸಿದರು ಶ್ರೀ ಖೇರರಿಗೆ ಹರಿಜನೋದ್ಧಾರವೆಂದರೆ ಬಹು ಪ್ರೀತಿ ಮಹಾರಾಷ್ಟ್ರ ಹರಿಜನ ಸೇವಕ ಸಂಘದ ಅಧ್ಯಕ್ಷ ಪೀಠದಲ್ಲಿದ್ದು ಬಹಳ ಕೆಲಸ ಮಾಡಿದ್ದಾರೆ ಶ್ರದ್ಧಾನಂದ ಅಬಲೆಯರ ಆಶ್ರಮದ ಸೇವೆಯಲ್ಲೂ ಇತರ ಸಂಸ್ಥೆಗಳಲ್ಲೂ ವಿಶೇಷ ಕೀರ್ತಿಗಳಿಸಿದ್ದಾರೆ ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗಿಗಳಾಗಿ ಎರಡುವರ್ಷ ಕಾರಾಗೃಹವಾಸವನ್ನನುಭವಿಸಿದರು

೧೯೩೭ರಲ್ಲಿ ಇವರು ಬೊಂಬಾಯಿ ಮುಖ್ಯ ಮಂತ್ರಿಗಳಾಗಿ ಪ್ರಮಾಣ ವಚನವನ್ನು ಕೈಗೊಂಡರು ಅಂದಿನಿಂದ ಇವರು ಜನಾನುರಾಗ ಸಂಪಾದಿಸಿ ಖ್ಯಾತಿ ಪಡೆದಿದ್ದಾರೆ ಶ್ರೀ ಖೇರರು ಈಗ ಧರ್ಮಪತ್ನಿ ಸಮೇತರಾಗಿ ನಮ್ಮ ಚಿನ್ನದ ನಾಡಿನ ಗಾಳಿಯನ್ನು ಸೇವಿಸಲು ಬಂದಿದ್ದಾರೆ ನಮ್ಮ ಸಂಸ್ಥಾನವನ್ನು ಎರಡು ಕಣ್ಣುಗಳಿಂದಲೂ ನೋಡಿ, ನಮ್ಮ ಅಳರಸರ ಕೀರ್ತಿ ಗಾನಮಾಡಿ ನಮ್ಮ ದಿವಾನರ ದೂರದೃಷ್ಟಿಯನ್ನು ಭಲೆ, ಭೇಷ್ ಅನ್ನಲಿ, ಖೇರ್ ದಂಪತಿಗಳಿಗೆ ಮಂಗಳವುಂಟಾಗಲಿ

(ತಾಯಿನಾಡಿನಿಂದ)

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store.
28 Meachua Bazar St, CALCUTTA

ಸರದಾರ ಭವನ Sirdar Bhavan

ಫಲ್ನೀರ್ ಕಟ್ಟೆ ಬಜಾರ್-ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊರಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ ಎಲ್ಲಾ ಮೇಲ್ಮೆಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ

Propriter— H R Rao,
Bangalore Guit Emporuim Madras

7 O'CLOCK

7 ಒ'ಕ್ಲೋಕ್ ಸೆಟ್ಟಿನಲ್ಲಿ ಒಂದು 7 ಒ'ಕ್ಲೋಕ್ ಲೋಹದ ರೇಜರು ಮತ್ತು ಎರಡು ಬ್ಲೇಡುಗಳು ಒಂದು ಅಚ್ಚುಕಟ್ಟಾದ ಪೆಟ್ಟಿಗೆಯಲ್ಲಿರುತ್ತವೆ— ನಿಜವಾದ ಲಾಭವಾಗಿದೆ

ಕ್ರಯ 8 ಆಣೆ

ಒಂದು ಸೆಟ್ಟಿಗೆ ಆಣೆ 12

7011

NOTICE.

The Bombay Life Assurance Company Ltd.

Mr Vittemunlir K[illegible]appa of Narimogru Village Puttur S-K Holder of [illegible] Paid Up Policy No 9654 which matured for payment on 25—3—[illegible]9 having notified that he has [illegible] lost or misplaced his policy and having requested us to issue a duplicate thereof in his favour notice is hereby given that a duplicate policy will be issued and the claim be paid [illegible] him by the Company should there be no objection recorded in our Head Office by our doing so within [illegible] month of this notice

Jyotendra L Metha
Managing Director,
Bombay Life Assurance Company Ltd

ಶ್ರೇಷ್ಠ ತರದ ದೃಷ್ಟಿಚಕ್ರಗಳಿಗೆ



ರಬ್ಬರು ಮೊಹರುಗಳಿಗೆ ನಾಯಕ್ ಸ್ಟೋರ್ಸ್

ರಥಬೀದಿ, ಮಂಗಳೂರು.

ನಗರದ ನವ ನಾಯಕರು

ಲೇಖಕ: ಶಿವರಾಮ ಕಾರಂತ.

ಸಾಹುಕಾರ ನಾಗೇಂದ್ರ ಪೈಗಳು.

ಸಾಹುಕಾರರು ಮಂಗಳೂರಿಗೆ ಬಂದುದು ಅವರ ಮೂವತ್ತನೇ ವಯಸ್ಸಿನಲ್ಲಿ. ಆ ಮೊದಲು ಅವರು ಕುಮುಟೆಯಲ್ಲಿ ಭಾರೀ ಸಾಹುಕಾರರಾಗಿದ್ದರು. ಅದಕ್ಕೆ ಮೊದಲು ಕಾರವಾರದಲ್ಲಿ ಸಾಹುಕಾರರಾಗಿದ್ದರು. ಅವರು ಅಲ್ಲಿಂದ ಇಲ್ಲಿಗೆ ಬಂದುದು ವ್ಯಾಪಾರದ ದೆಸೆಯಿಂದ. ತಮ್ಮ ವಹಿವಾಟುಗಳಿಗೆ ಕುಮುಟೆ, ಕಾರವಾರದಂಥ ಚಿಕ್ಕ ಊರುಗಳು ಹಿಡಿಸಲಾರದೆಂದು ಮಂಗಳೂರಿಗೆ ಬಂದರು—ಹೀಗೆಂದು ಅವರ ಗೆಳೆಯರು ಹೇಳುತ್ತಾರೆ. ಗವಯಿ ಗಣಪತಿಯನ್ನು ಕೇಳುತ್ತೀರೋ—'ಅದಲ್ಲವೇ ಅಲ್ಲ. ನನಗೆ ಗೊತ್ತಿಲ್ಲವೇ. ಕಾರವಾರದಲ್ಲಿ ನಾನು ನಮ್ಮ ಗವಯಿ ರಾಧಾಶ್ಯಾಮರ ಹತ್ತಿರ ಪಾಠ ಹೇಳುವಾಗ ಇವರು ಅಲ್ಲಿ ಹುಡಿ ಅಂಗಡಿ ಇಟ್ಟಿದ್ದರು' ಎನ್ನುತ್ತಾನೆ. ಬಹಿರಂಗದಲ್ಲಿ ಗಣಪತಿಗೂ ನಾಗೇಂದ್ರ ಪೈಗಳಿಗೂ ಜೀವಕ್ಕೆ ಜೀವ ಎನ್ನುವಂಥ ಅಭಿಮಾನವಿದ್ದರೂ ಅಂತರಂಗದಲ್ಲಿ ತುಸು ಬೇಸರಿಕೆ. ಹಾಗಾಗಿ ಗುಟ್ಟಿನಿಂದ ಗಣಪತಿಯನ್ನು ಕರೆದು 'ಸಂಗೀತ ಗೊತ್ತಿಲ್ಲದಿದ್ದವನು ದನ ಮೇಯಿಸಲಿಕ್ಕೆ ಸರಿ' ಎಂಬ [illegible]ರಿಕೆ ಹಾಕಿ—ಮುಂದೆ 'ಗಣಪತಿ—ನಮ್ಮ ರಾಮರಾಯರಲ್ಲಿ ನಿನ್ನನ್ನು ಟ್ಯೂಶನಿಗೆ ತಗಲಿಸಿ ಹಾಕಬೇಕು' ಎಂದು ಮಾತನಾಡಿ ಕ್ಷಿಪ್ರದಲ್ಲೇ ನಾಗೇಂದ್ರ ಪೈಗಳ ವಿಚಾರ ಎತ್ತಬೇಕು. ಆಗ ಗಣಪತಿ ಅನ್ನುತ್ತಾನೆ "ಅಲ್ಲಿ ಕುಮುಟೆಯಲ್ಲಿ ಮಾಡಿದ್ದು ಒಂದೇ ಕೆಲಸ; ಇಲ್ಲಿಯೂ ಅದೇ. ಅತ್ತ ಅಕ್ಕಿಗೆ ನೀರು ಬಡಿದು ಮಾರಿದರು, ಬೆಲ್ಲಕ್ಕೆ ಕಲ್ಲು ಸೇರಿಸಿ ಕೂಗಿದರು. ಇತ್ತ ಕೊಟ್ಟವರಿಗೆ ಟೋಪಿ ಹಾಕಲು ದಿವಾಳಿ ಅರ್ಜಿ ಕೊಟ್ಟರು ಎನ್ನುತ್ತಾನೆ.'

ಗಣಪತಿಯ ಮಾತಿಗೆ ಅಷ್ಟು ಬೆಲೆ ಕೊಡುವವರು ಯಾರಿಂದು ಜೀವದವೇ?

ಸಾಹುಕಾರರು ಮಂಗಳೂರಿಗೆ ಬಂದು ಇಂದಿಗೆ ಇಪ್ಪತ್ತು ವರ್ಷವಾಯಿತು. ಆಗಿಂದಿನಿಂದ ತನಕ ಅವರ ಧೋರಣೆ ಯಾವ ರೀತಿಯಲ್ಲೂ ಕದಿಮೆಯಾಗಿಲ್ಲ. ಮೊದಲು ಅಂಗಡಿ ಹುಡಿ ವ್ಯಾಪಾರವಿದ್ದಂತೆ ಹೇಗೋ—ಈಗ ಕಮಲಾಲಯ ಕ್ಲಬ್ಬಿನಲ್ಲಿ ಇಸ್ಪೇಟ ಆಡುವಾಗಲೂ ಹಾಗೆ—ಅದೇ ರೀತಿಯಿಂದ ಇದ್ದಾರೆ. ಖರ್ಚು ವೆಚ್ಚಕ್ಕಾಗಲಿ, ಮಾತುಗಾರಿಕೆಗಾಗಲಿ, ಉಪಚಾರ, ಉಪಚರಿಕೆಗಾಗಲಿ ಒಂದೇ ರೀತಿಯಿದ್ದಾರೆ.

ಅವರ ಸಾಹುಕಾರಿಕೆಯ ವಿಚಾರ ಈಗ ಕೇಳಿ ಉಪಯೋಗವಿಲ್ಲ. ಅವರು ವಹಿವಾಟು ಮುಗಿಸಿ 'ಪೆನ್ಶನು ತೆಗೆದುಕೊಂಡಿದ್ದಾರೆ' [illegible]ನು ಸ್ವಾಮಿ 'ಹೊಸ ಕಂದಾಯ ಇಲ್ಲ—ವ್ಯಾಪಾರದ ಮೇಲೆ ಏನು ಜೀವರ ಬಂದಿತು ಎಂದರೆ 'ನೋಡು ಪಾಂಡು, ಇದೀ ಆಯುಷ್ಯಾಲ ಅದನ್ನೆ ಕೆಲಗೆ ಹೆಚ್ಚಿಕೊಳ್ಳಲಿಕ್ಕೆ ಬರುತ್ತದೆಯೇ. ಸರಕಾರಿ ಆಫೀಸರಿಗೆ ಕಂಪಲ್ಸರಿ ನಿವೃತ್ತಿ ಅದಂತೆ ನನಗೆ ನಾನೇ ನಿವೃತ್ತಿ ಮಾಡಿಕೊಂಡೆ. ಸಾಯುವ ತನಕ ಬಂದರದ ಭಂಡಸಾಲೆಯಲ್ಲಿ ಬಿದ್ದಿರುವುದಕ್ಕೆ ನನಗೆ ಇಷ್ಟವಿಲ್ಲ. ಇನ್ನು ಲೈಫ್ ಎಂಜೋಯಿ ಮಾಡುವುದಾವಾಗ?' ಎನ್ನುತ್ತಾರೆ.

ಅವರು ಕಾಸು ಗಳಿಸಿ, ವ್ಯಾಪಾರದಿಂದ ನಿವೃತ್ತಿಗೊಂಡರು ಎಂಬುದು ನಿಜ. ನಿತ್ಯ ಕಮಲಾಲಯ ಕ್ಲಬ್ಬಿನಲ್ಲಿ ಬೆಳಗ್ಗೆ ಬಿಸ್ಕತ್ತು ಅಂಬೊಡೆ ಧ್ವಂಸಕ್ಕೆ ಹಾಜರಾದರೆ, ಮಧ್ಯಾಹ್ನದ ಊಟವೂ ಅಲ್ಲಿಗೇ ಬರುತ್ತದೆ—ಮನೆಗೆ ಹಿಂದಿರುಗುವುದು ಸಂಜೆ ೯ ಘಂಟೆಗೆ. ಅಲ್ಲಿಯ ತನಕ ಇಸ್ಪೇಟು. ಚಿಲ್ಲರೆ ಜನರೊಡನೆ ಆಡುವುದೂ ಇಲ್ಲ. ಕಮಲಾಲಯಕ್ಕೆ ಬರುವ ಇಸಾಮುಗಳೇ ಭಾರಿಯವು. ನಿವೃತ್ತ ಪೆನ್ಶನುದಾರರು, ಬ್ಯಾಂಕರರು, ಭಾರಿ ಸಾಹುಕಾರರು, ವಕೀಲರು, ಆಫೀಸರರು. ಬರಿದೆ ಇಸ್ಪೇಟು ಆಡುವ ಪೋಪರ್ಕಿಗಳು ಯಾರೂ ಅಲ್ಲ. ಬಂದಕ್ಕೆ ಒಂದುನಾಲ್ಕು ರೂಪಾಯಿ ಬರಬೇಕು, ಹೋದರೆ ಅಷ್ಟಾದರೂ ಹೋಗಬೇಕು—ಎನ್ನುವ ಜನರು. ನಾಗೇಂದ್ರ ಪೈಗಳಾದರೂ ದಿನಕ್ಕೆ ನಾಲ್ಕೆಂಟು ರೂಪಾಯಿ ಕಳೆಯುತ್ತಲೋ ಗಳಿಸುತ್ತಲೋ ಇದ್ದಾರೆ. ಅದರ ಎಡೆಯಲ್ಲಿ ದಿನಕ್ಕೆ ಒಂದು ಹದಿನೆರಡಾಣೆಯಾದರೂ ಖಾಸಗಿ ಕಾಫೀ ಅಂಬೊಡೆಗಳಿಗೆ ಬೇಕು. ಮೇಲೆ ಚುರೂಟು—ಜಟ್ಕಾ—ಇತ್ಯಾದಿಯೆಂದು ಚಿಲ್ಲರೆ ಖರ್ಚಿಗೇನೆ ಒಂದೆರಡು ರೂಪಾಯಿ ಸಾಲದು.

ಮನೆಯ ಖರ್ಚೇ? ಅದೇ ರೀತಿಯದೆ. ಮೂರು ಜನ ಶಾಲೆಗೆ ಹೋಗುವ ಹೆಣ್ಣು ಹುಡುಗಿಯರು. ಒಂದು ಎ. ಸಿ. ಮಿಸ್. ಕೇಶವ ಪ್ರಭುಗಳಿಗೆ ಮದುವೆಯಾಗಿದೆ. ಒಬ್ಬಳು ಇಂಟರ್—ಇನ್ನೊಬ್ಬಳು ಮೂರನೆ ಆವೃತ್ತಿ ಮೆಟ್ರಿಕ್ಸು. ಮನೆಯಲ್ಲಿ ನಾಲ್ಕನೆಯ ಮೂರ್ತಿಯೆಂದರೆ ಪೈಗಳ ಮಗ ಹದಿನಾಲ್ಕು ವರ್ಷದ ನವತರುಣ. ಅವನು ಸಾಹುಕಾರರ ಮಗನೆಂದು ಹುಟ್ಟುವಾಗಲೇ ತಿಳಿದು ಬಂದವನೋ ಎಂಬಂತೆ ದರ್ಬಾರಿ. ಸಾಹುಕಾರರ ಹೆಂಡತಿಯು 'ಪ್ರುನ್ಪ ಮಾರ್ಕೆಟಿಗೆ' ಹೋಗುವುದಾದರೂ ಟ್ಯಾಕ್ಸಿಯಲ್ಲಿ ಹೋಗುವವಳು. ಮೊದಲು ಅವರದೇ ಕಾರು ಇದ್ದಿತ್ತು. ಆದರೆ ಈ ದೈವಗಳ ಕಾಟ ಸಾಕಾಯಿತು, 'ಮೋಟರಿನ ವಹಿವಾಟು ನಡೆಯಿಸು ಎಂದರೆ, ಮನೆ ವಹಿವಾಟಿಗೆ ಬರುತ್ತಾರೆ' ಎಂದು ಪೈಗಳವರು ಮೋಟರನ್ನು ಮಾರಿಬಿಟ್ಟರು. ಬಾಡಿಗೆಯ ಟ್ಯಾಕ್ಸಿ, ಖರ್ಚೇನೋ ಮೊದಲಿನಂತೆ ಆಗುತ್ತದೆ. ಆದರೆ ದೈವದ ಕಿರುಕುಳ, ಗೇರೇಜಿನ ಬಿಲ್ಲು ಇಷ್ಟಾದರೂ ಉಳಿಯಿತಲ್ಲ

ನಾಗೇಂದ್ರ ಪೈಗಳ ಪೆನ್ಶನಿನ ವೈಭವ ಹೀಗಿರಲು ಅವರ ಪ್ರಾರಂಭದ ವ್ಯಾಪಾರ ಹೇಗೆ ಎಂದು ಹೇಳಲು ಸಾಧ್ಯವಿಲ್ಲ. ಕುಮಟೆಯಿಂದ ಬಂದವರೇ ಬಂದರದಲ್ಲಿ ಭಾರೀ ಅಂಗಡಿ ಗೋದಾಮುಗಳನ್ನು ಹಿಡಿದರು. ಒಮ್ಮೆಗೇ ಸಗಟು ವ್ಯಾಪಾರ ತೊಡಗಿದರು. ಕುಮಟೆಯಲ್ಲಿ ಅಡಿಕೆ, ಏಲಕ್ಕಿ, ಮೆಣಸು ವ್ಯಾಪಾರದಲ್ಲಿ ನುರಿತುದರಿಂದ ಇಲ್ಲೂ ಅದೇ ವ್ಯಾಪಾರ ತೊಡಗಿತು. ಜತೆಗೆ ಕಾಫಿ ವ್ಯಾಪಾರ ಕೂಡ ಗಿತು. ಒಂದ ನಾಲ್ಕಾರು ವರ್ಷದಲ್ಲಿ ಒಂದರದ ಸಿಂಹ ತಾನು ಎಂದು ಎನಿಸಿಕೊಂಡರು. ನಾಗೇಂದ್ರ ಪೈಗಳು ಬಿಟ್ಟ ವ್ಯಾಪಾರ ಉಳಿದವರಿಗೆ ಎನ್ನುವ ಕಾಲ ಬಂದಿತು. 'ಅವರ ವ್ಯಾಪಾರದ ನಸೀಬು ಹಾಗೆ' ಎಂದು ಎಲ್ಲರೂ ವಿಸ್ಮಿತರಾದರು.

ಆದರೆ ಒಮ್ಮೆಗೇ ಎಂಬಂತೆ ಹತ್ತನೇ ವರ್ಷವು ಕ್ಷಯ ಸಂವತ್ಸರವೂ ಕೂಡಿತು. ಅವರೇ ಹಲವರು ಸ್ನೇಹಿತರೊಡನೆ ಮೊದಲಿಂದಲೂ ಅನ್ನುತ್ತಿದ್ದರು. 'ಕ್ಷಯಸಂವತ್ಸರವೊಂದು ತನಗೆ ಭಾರಿ ಕಂಟಕವಿದ್ದು' ಎಂದು. ಹಾಗೇ ಆಯಿತು. ಅವರ ಕುಳುವಾರಗಳು ಕಚ್ಚಾ ಸಾಹುಕಾರರು ಮೂರು ನಾಲ್ಕು ಜನ ದಿವಾಳಿಯಾದರಂತೆ. ನಾಗೇಂದ್ರ ಪೈಗಳು ಒಮ್ಮೆಗೇ ೪ ಲಕ್ಷಕ್ಕೆ ಇಳಿದರೆಂದು ಊರಲ್ಲಿ ಗಲಾಟೆ ಬಿದ್ದಿತು. ಎಲ್ಲೆಲ್ಲಿ ಹಳ್ಳಿಯ ಜಮೀನುದಾರರು ಬಂದು ಕಕ್ಕಾಬಿಕ್ಕಿಯಾಗಿ ಅವರ ಹಿಂದೆ ಸುಳಿಯತೊಡಗಿದರು. ಅಂಥ ಆಪತ್ತಿನಲ್ಲೂ ಇಷ್ಟು ಕಳ್ಳಾ ಖಿಲ್ಲಿಯಾಗದೆ, ಬಂದವರಿಗೆಲ್ಲಾ ಕಾಫಿ ಅಂಬೊಡೆ ಕೊಡಿಸಿ 'ಏನಿಲ್ಲ ಗಡಿಬಿಡಿ ಬೇಡ. ಈ ಇಷ್ಟ ಮೋಸ ಸುಳ್ಳಾದರೆ ನಿಮ್ಮ ಹಣಕ್ಕೆ ತೊಂದರೆ ಬಂದೀತು' ಎಂದರು. ಸಾಹುಕಾರರ ಪರ್ಜೆ ಕೇಳಿದ ಗಿರಾಕಿಗಳು ಸುಮ್ಮನಾದರು. ಈ ಮೊದಲು ಎರಡು ಕೇಳಿದಾಗ ನಾಲ್ಕು ಕೊಟ್ಟವರು. ಅವರು ಹೀಗಿರಲು ಆಪತ್ಕಾಲದಲ್ಲಿ ಕುತ್ತಿಗೆ ಮೇಲೆ ಕುಳಿತು 'ಇದಿ ಹಣ' ಎನ್ನಲು ಬಂದೀತೆ?'

ಸರಿ ಒಂದು ವರ್ಷದಲ್ಲಿ ಕ್ಷಾಂತಿಕನ ಬಾಳು ತಾಗಿ ಆಕಸ್ಮಿಕ ಅನರ್ಥವಾಯಿತು ಸಾಹುಕಾರರ ಮೊಸೆಗೆ. ಮೊಸೆ ತಗಿಯುತಿದ್ದರು. ಕ್ಷಯ ಸಂವತ್ಸರ ಕಳೆಯುವಾಗ ಅವರ ದಿವಾಳಿ ಅರ್ಜಿ ದಾಖಲಾಯಿತು. 'ಹಾಳು ಬಡಿದ ಕಚ್ಚಾ ಸಾಹುಕಾರರನ್ನು ನಂಬಿ ನಾಗೇಂದ್ರ ಪೈಗಳು ನೀರು ಕುಡಿದರು.'

ಸರಿ ಮುಂದೆ ಮೂರು ವರ್ಷ ಯಾವ ವಹಿವಾಟೂ ಮಾಡಲಿಲ್ಲ. ಏನೇ ನು[illegible] ತೋರಿಸಿಯೂ ತೋರಿಸದೆ ಎಂಬಂತೆ ದಿನ ಕಳೆದರು. ಈ ಕಷ್ಟ ಕಾಲದಲ್ಲಿಯೇ ಅವರ ಹಿರೀ ಮಗಳ ಕಲ್ಯಾಣಕ್ಕೆ ಲಗ್ನವಾಯಿತು. ಕಷ್ಟ ಬಂದಿತೆಂದು ಹುಲಿ ಹುಲ್ಲು ಮೇಯುವುದಿಲ್ಲವಷ್ಟೆ. ಹಾಗೆಂದು ಅವರು ಚಿಲ್ಲರೆ ನಂಟುತನ ನೋಡದೆ ಕೇಶವ ಪ್ರಭುಗಳ ಸಂಬಂಧ ಹೂಡಿದರು. ಅಳಿಯನನ್ನು ಐ. ಸಿ. ಎಸ್. ಸಹ ಮಾಡಿಸಿದರು. ಈಗ ಅದೇ ಅಳಿಯ ಮಾವನಿಗೆ ಖರ್ಚಿಗೆ ಕಳುಹಿಸುತ್ತಾನೆ ತಿಂಗಳಿಗೆ ೨೦೦ ರೂಪಾಯಿಯಂತೆ ಎಂದು ಗಣಪತಿ ಅನ್ನುತ್ತಾನೆ. ಇದನ್ನೇನು ಒಪ್ಪುವವರೂ ಇದ್ದಾರೆ, 'ಇರಬಹುದು' ಎಂದು ಅನುಮಾನಿಸುವವರೂ ಇದ್ದಾರೆ.

ಅವರ ಅಳಿಯನ ತನ್ನ ಒಲುಮೆ ಹುಡುಗಿನ ಹುಡುಗ ವಿದ್ಯೆ ಪ್ರಭು—ಎಂದು ನಾಮಕರಣ. ಅವನ ಚಿಕ್ಕಪ್ಪನಿಗೆ ಮೆಚ್ಚಿ ಮೆಟ್ರಿಕ್ಕ ಮುಗಿದೊಡನೆ ತಮ್ಮ ಮನೆಯಲ್ಲಿ ಇರಿಸಿಕೊಂಡು ಎರಡನೇ ಮಗಳಿಗೆ ಲಗ್ನ ಮಾಡುವ ಯೋಚನೆ ಮಾಡಿದರು. ಆಗ ಆ ಹುಡುಗಿ ಸುಶೀಲೆಗೆ ೧೦ ವಯಸ್ಸು. ಹುಡುಗನೂ ಅವಸರದ ಮದುವೆಗೆ ಒಪ್ಪಲಿಲ್ಲ. ಅಲ್ಲದೆ ಅಣ್ಣನಂತೆ ಇಂಗ್ಲೆಂಡಿಗೆ ಹೋಗುವ ಭ್ರಮೆ ಅವನಿಗೂ ಇತ್ತು. ಆದರೆ ಕನ್ನ ಭಾವೀ ಮಾವ ವಿದ್ಯೆ ಹಾಳುಮಾಡಿದನೆಂದ ಕೋಪವೇ ಆಯಿತು.

ಮೂವನೇ—ಯಾರಿಗೂ ಕೇಡು ಬಗೆಯುವವರಲ್ಲ; ಅದರಲ್ಲೂ ಭಾವೀ ಅಳಿಯನಿಗೆ. ತಾನು ದಿವಾಳಿಯಾದ ಮೂರನೆ ವರ್ಷದಲ್ಲಿ ಎರಡನೆ ಮಗಳ ಹೆಸರಿನಲ್ಲಿ ಒಂದು ಕಟ್ಟಡ, ಮತ್ತು ಹಾರ್ಡ್‌ವೇರ್ ಅಂಗಡಿ ಬಂದರದಲ್ಲಿ ತೆರೆದರು. ಭಾವೀ ಅಳಿಯರಾಯನನ್ನು ಅಂಗಡಿ ಪೀಠದ ಮೇಲೆ ಕುಳ್ಳಿರಿಸಿದರು. ಎಲ್ಲಾ ವ್ಯಾಪಾರ ಅವನ ಸಹಿಯಿಂದ ನಡೆಯುತ್ತಿದ್ದರೂ, ಸೂತ್ರಧಾರಿಗಳು ಪೈಗಳೇ ಆಗಿದ್ದರು. ಈ ವ್ಯಾಪಾರವೂ ಉಗ್ರವಾಗಿಯೇ ನಡೆಯಿತು. ಒಂದು ಆಣಿ, ಇಸ್ಕ್ರೂ ತರಿಸುವುದಾದರೂ ಮಾಂಚೆಸ್ಟರಿನಿಂದಲೋ; ಬರ್ಮಿಂಗಾಮಿನಿಂದಲೋ ತರಿಸುತ್ತಿದ್ದರು. ಎಲ್ಲಾ 'ಹೋಲ್‌ಸೇಲ್' ಆಯಿತು. ಅವರ ಅಂಗಡಿಯ ಗೋದಾಮು ನೋಡಿದರೇನೆ ಅಜಬ್ ಆಗಬೇಕು. ಅಷ್ಟು ವ್ಯಾಪಾರ. ಕಡ ಕೇಳುವುದರಲ್ಲಿ ಅವರು ಹಿಂಜರಿಯಲಿಲ್ಲ. ಅದರಂತೆ ಕೊಡುವುದೂ ತಡಮಾಡಲಿಲ್ಲ. ಹೀ

(೧೪ನೇ ಪುಟಕ್ಕೆ ಮುಂದುವರಿಯುವುದು)

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು.

ತಯಾರಿಸುವವರು:
ಆಯುರ್ವೇದಾಶ್ರಮ :: ಮದರಾಸು.

ಸ್ಟಾಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

92 ವರ್ಷ ಪ್ರಾಯದವನು ಬಹು ದೃಢಕಾಯನಾಗಿದ್ದಾನೆ!

ಉಪ್ಪರಿಗೆಯನ್ನು ಸುಲಭವಾಗಿ ಹತ್ತಿ ಇಳಿಯಬಲ್ಲನು!

ಕ್ರುಶನ್ ಲವಣವನ್ನು ಪ್ರತಿನಿತ್ಯವೂ ಬೆಳಗ್ಗೆ ಸೇವಿಸುವನು.

ಮಿಸೆಸ್ ಎ. ಜೆ. ಡಬ್ಲ್ಯು ಎಂಬಾಕೆಯು ಹೀಗೆಂದು ಬರೆಯುತ್ತಾಳೆ: ನನ್ನ ಪಿತನಿಗೆ ಕ್ರುಶನ್ ಲವಣದಿಂದ ದೊರೆತ ಅತ್ಯಾಶ್ಚರ್ಯಕರವಾದ ಗುಣಾಂಶದ ಕುರಿತು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ಇಂಥಾ ಫಲಿತಾಂಶಗಳು ವಿಚಿತ್ರ ಘಟನೆಗಳೆಂದು ಹೇಳಬಹುದು. ಆತನು 92 ವರ್ಷ ಪ್ರಾಯದವನಾದರೂ ಪೂರ್ಣ ಗಟ್ಟಿಗನಾಗಿದ್ದಾನೆ. ಅವನು ಚುರುಕಾಗಿ ಚಲಿಸಬಲ್ಲನು, ಮಾತ್ರವಲ್ಲದೆ ಉಪ್ಪರಿಗೆಯನ್ನು ಸುಲಭವಾಗಿ ಏರಿ ಇಳಿಯುತ್ತಾನೆ. ಅವನ ಸ್ನೇಹಿತರು ಅವನ ಚುರುಕುತನವನ್ನು ನೋಡಿ ಬಹಳ ದಿಗಿಲುಪಡುತ್ತಾರೆ. ತನ್ನ ಪ್ರಾತಃಕಾಲದ ಕ್ರುಶನ್ ಲವಣ ಮಿಶ್ರಿತ ಚಹಾ ಸೇವನೆಯೇ ಇದಕ್ಕೆ ಕಾರಣವೆಂದು ತಿಳಿಸುತ್ತಾನೆ. ನಮ್ಮ ಮಿತ್ರರುಂದರಿಗೆಲ್ಲಾ ನಾವು ಕ್ರುಶನ್ ಲವಣವನ್ನು ಶಿಫಾರಸು ಮಾಡುತ್ತೇವೆ. ಪ್ರತಿಯೊಂದು ಕುಟುಂಬದಲ್ಲಿ ಕ್ರುಶನ್ ಲವಣವು ಅಗತ್ಯವಿರತಕ್ಕದ್ದು ಎಂಬದಾಗಿ ನನಗೆ ತೋರುತ್ತದೆ.

ಆರೋಗ್ಯಕ್ಕೆ ಮುಖ್ಯ ಸಾಧನವಾದ ಒಳಗಿನ ಅಂಗಗಳನ್ನು ಕಶ್ಮಲರಹಿತವಾಗಿ ಇರಿಸದೆ ಇರುವುದರಿಂದಲೇ ಹೆಚ್ಚಿನವರು ಅವರ ಪ್ರಾಯ ಬರುವ ಮುಂಚಿತವಾಗಿಯೇ ಮುದುಕರಾಗುತ್ತಾರೆ.

ಕ್ರಮೇಣವಾಗಿ ಅವರು ಕ್ರುಶನ್ ಲವಣವನ್ನು ಸೇವನೆಯನ್ನು ಅಭ್ಯಾಸಿಸಿದರು. ಅಸ್ವಾಸ್ಥ್ಯ ತರ ಅವರ ಜೀವನಾನದಲ್ಲಿ ಶೇಖರಣೆಯಾಗಿ ಅವರ ಶರೀರದೊಳಗಿರುವ ಕಶ್ಮಲ ಪದಾರ್ಥವನ್ನು ಹೊರಗೆಡಹಿಸಿದಂತಾಗುವುದು. ಹೀಗಾಗಿ ಕರುಳುಗಳು ದಾಸ್ಯನಾಗಿ ಕೆಲಸ ಹೋದಂತಿರುವ ಪದಾರ್ಥವು ಪೂರ್ತಿಯಾಗಿ ಹೊರಗೆ ಹೋಗಿ ನಿರ್ಮಲವಾಗುವುದು. ಲಿವರ್ ಮತ್ತು ಮೂತ್ರಕೋಶವು ಇದರಿಂದಾಗಿ ಕ್ರಮವಾಗಿ ಅವುಗಳ ಕೆಲಸಗಳನ್ನು ಚುರುಕಿನಿಂದ ಮಾಡಲು ತೊಡಗುವುವು. ಇದರ ಪರಿಣಾಮವಾಗಿ ನಮ್ಮ ದೇಹದ ಎಲ್ಲಾ ನರನಾಡಿಗಳಲ್ಲಿ ಶುದ್ಧರಕ್ತ ಚಲಾವಣೆ ಯು ಸರಾಗವಾಗಿ ನಡೆದು, ನಮ್ಮ ಪ್ರತಿಯೊಂದು ಅವಯವಗಳಿಗೆ ಆರೋಗ್ಯ ಬಲ ಮತ್ತು ಹೊಸ ಹುರುಪನ್ನುಂಟುಮಾಡುತ್ತದೆ.

ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

ಸ್ವಾತಂತ್ರ್ಯವನ್ನು ಮರಳಿ ಪಡೆಯದೆ ಜೆಕ್ಕರು ಅಶಾಂತರಾಗಿದ್ದಾರೆ

ಜರ್ಮನಿಯ ನಿರ್ದಯ ದಮನ ನೀತಿ

ಹಿಟ್ಲರನ ಪಡೆಯ ವಂಚಕ ಮನೋವೃತ್ತಿ!

ಇಂದು ಜೆಕೊಸ್ಲವೇಕಿಯದ ಸ್ವಾತಂತ್ರ್ಯ ದಾಹ

ಜೆಕೊಸ್ಲವೇಕಿಯವನ್ನು ಹಿಟ್ಲರನು ತನ್ನ ಪ್ರಚಂಡ ಪಡೆಗಳಿಂದ ದಿನದಿಂದ ದಿನಕ್ಕೆ ಜರ್ಝರಿತ ಮಾಡುತ್ತಿದ್ದಾನೆ! ಹಿಟ್ಲರನ ಕ್ರೂರ ನೀತಿಗೆ ತಲೆವಾಗದ, ಸ್ವಾತಂತ್ರ್ಯ ವೀರರ ಅಸಮ ಸಾಹಸಗಳ ಕಥೆಯನ್ನು, ಹೊರಗೆಡಹಬಾರದಾಗಿ ಜರ್ಮನಿಯ ಸರಕಾರವು ಬಹಳ ಜಾಗ್ರತೆಯಿಂದಿದೆ. ಅಲ್ಲಿ ನಡೆಯುವ ಅನೇಕ ವಿಷಯಗಳು ಹೊರಗಣಜಗತ್ತಿಗೆ ತಿಳಿಯುವುದೇ ಇಲ್ಲ. ಇಂದಿನ ಜರ್ಮನಿಯ ಹಿಡಿತದಿಂದ ಜೆಕೊಸ್ಲವೇಕಿಯವು, ತನ್ನ ಸಂಪೂರ್ಣ ರಾಷ್ಟ್ರೀಯತೆಯನ್ನು ಕಳಕೊಂಡು, ಪರರ ಅಧಿಕಾರದ ತುಳಿತಕ್ಕೆ ತಲೆಬಾಗಿಸಬೇಕಾಗಿದೆ, ಇದನ್ನು ಎದುರಿಸಲು ಜೆಕೊಸ್ಲವೇಕಿಯದಲ್ಲಿ ಮತ್ತು ಅನ್ಯದೇಶಗಳಲ್ಲಿ ಕ್ರಾಂತಿ ಸಂಘಗಳು ಏರ್ಪಟ್ಟು ತಮ್ಮ ದುರಂತ ಪರಿಸ್ಥಿತಿಯಲ್ಲಿ ಸಹ ಸಂತಾಪ ಪಡುತ್ತಿರುವ ಅನ್ಯ ರಾಷ್ಟ್ರಗಳೊಡನೆ ಸಂಬಂಧ ಬೆಳಸುತ್ತಿರುವರಾಗಿ ತಿಳಿದಿದೆ. ನಿಜವಾಗಿ ಲೋಕಶಾಂತಿಯ ಹೆಸರಿನಿಂದ ಹೇಡಿತನವನ್ನು ಯೂರೋಪಿನ ಪ್ರಬಲ ರಾಷ್ಟ್ರಗಳು ತೋರಿಸಿದುದರ. ಫಲವಾಗಿ ಜೆಕೊಸ್ಲವೇಕಿಯವು ಜರ್ಮನ್ ಶಾಸನದ ತುತ್ತಾಗಿ ಸಂಕಷ್ಟಪಡಬೇಕಾಯಿತು.

ಜರ್ಮನಿಯ ದಮನ ನೀತಿ

ಜೆಕೊಸ್ಲವೇಕಿಯವನ್ನು ಜರ್ಮನಿಯು ಆಕ್ರಮಿಸಿದ್ದೇ ತಡ, ೨೦,೦೦೦ ಮಂದಿ ಜೆಕೊಸ್ಲವೇಕಿಯರನ್ನು ಸೆರೆಹಿಡಿದರು. ಅನೇಕ ಮುಖಂಡರನ್ನು ಸೆರೆಮನೆಯ ಕತ್ತಲು ಕೋಣೆಗೆ ಹಾಕಿರುವರು.

ವಾರ್ತಾವಾಹಕ ಸ್ತೇಶನುಗಳೂ, ವಾರ್ತಾಪತ್ರಿಕೆಗಳೂ ಜರ್ಮನಿಯ ವಿರೋಧವಾದ ಯಾವುದೇ ಗುಟ್ಟನ್ನು ಹೊರಹಾಕದಂತೆ ತಡೆಯಲ್ಪಟ್ಟವೆ. ಜೆಕೊಸ್ಲವೇಕಿಯದ ಹಲವು ಸುಪ್ರಸಿದ್ಧ ಪತ್ರಿಕೆಗಳನ್ನು ನಿಷೇಧಿಸಿದ್ದಾರೆ ಆಕ್ರಮಣ ಮಾಡಿದ ಜನರನ್ನು ಅಲ್ಲಿನ ಮೂಲ ನಿವಾಸಿಗಳು ದ್ವೇಷಿಸಿ ದಂಗೆಯೇಳುವುದು ಎಲ್ಲೆಲ್ಲೂ ನಡೆಯುತ್ತಿದೆ, ಅದನ್ನು ತಡೆಯಲು ಜಯಿಸಿದ ಜನಾಂಗದವರು ಯತ್ನಿಸುವುದೂ ಸಹಜವಿರುತ್ತದೆ, ಆದರೆ ಈ ಪರಿಸ್ಥಿತಿಯು ಇಂದು ಜೆಕೊಸ್ಲವೇಕಿಯದಲ್ಲಿ ಅತ್ಯಂತ ಪರಮಾವಧಿಯನ್ನೇ ಹೊಂದಿದೆ.

ಜರ್ಮನ್ ಸಿಪಾಯಿಗಳ ವಂಚನೆ!

ಜರ್ಮನ್ ಸಿಪಾಯಿಗಳು ಜೆಕೊಸ್ಲವೇಕಿಯವನ್ನು ಗೆದ್ದ ಕ್ಷಣದಲ್ಲಿ ಹಳ್ಳಿ ಹಳ್ಳಿಗಳನ್ನು ಹೊಕ್ಕು ಅತ್ಯಾಚಾರ ಸುರುಮಾಡಿದರು ಒಂದು ಹಳ್ಳಿಯ ಶಾಲೆಗೆ ನುಗ್ಗಿ, ಅಲ್ಲಿನ ಹುಡುಗರ ಜೋಡುಗಳನ್ನು ಹೊರಗೆ ಬಿಸಾಡಿ, ಅವುಗಳನ್ನು ಹೆಕ್ಕಿ ತರಬೇಕಾಗಿ ಅಜ್ಞಾಪಿಸುತ್ತರು ಪಾಪ! ಬಡ ಹುಡುಗರು ಚಳಿಯಿಂದ ನಡುಗುತ್ತಾ, ಬರಿಗಾಲಿನಲ್ಲಿ ಅವುಗಳನ್ನು ಹೊರಗಿನಿಂದ ಹೆಕ್ಕಿ ತರಲು ಓಡಿದರು.' ಈ ದೃಶ್ಯವನ್ನು ಸಿಪಾಯಿಗಳು ಫೋಟೋ ತೆಗೆದು, ತಮ್ಮ ಪ್ರಚಾರ ಖಾತೆಯ ಮೂಲಕ "ಜರ್ಮನರು ಜೆಕೊಸ್ಲವೇಕಿಯದ ಬಡ ಹುಡುಗರಿಗೆ ಧರ್ಮಾರ್ಥ ಜೋಡುಗಳನ್ನು ಹಂಚುವುದು" ಎಂದು ಅಪಪ್ರಚಾರ ಮಾಡಿದರು ಇಂತಹುದೇ ಇನ್ನೊಂದು ಸಂಗತಿಯೂ ನಡೆಯಿತು ಒಬ್ಬ ಜರ್ಮನ್ ಸಿಪಾಯಿಯು ಜೆಕೊಸ್ಲವೇಕಿಯದ ಹುಡುಗನನ್ನು ದಾರಿಯಲ್ಲಿ ಭೇಟಿಯಾದನು. ಆತನೊಡನೆ 'ನೀನು ಪ್ರಾರ್ಥನೆ ಮಾಡುತ್ತೀಯಾ?' ಎಂದು ಕೇಳಿದ್ದಕ್ಕೆ, ಹುಡುಗನು ಕೈಜೋಡಿಸಿ ಪ್ರಾರ್ಥನೆ ಮಾಡುವುದಾಗಿ ತೋರಿಸಿದನು ಆ ದೃಶ್ಯವನ್ನು ಫೋಟೋ ತೆಗೆದು, "ಒಬ್ಬ ಜರ್ಮನ್ ಸಿಪಾಯಿಯೊಡನೆ, ಜೆಕೊಸ್ಲವೇಕಿಯದ ಬಡ ಹುಡುಗನು ಉಣ್ಣಲು ಗತಿಯಿಲ್ಲದೆ ಅನ್ನವನ್ನು ಬೇಡುವುದು" ಎಂದು ಪ್ರಚಾರ ಮಾಡಲಾಯಿತು! ಹೀಗೆಂದು ಜರ್ಮನಿಯು ಅಧಿಕಾರದಿಂದಲೂ, ದರ್ಪದಿಂದಲೂ, ವಂಚನೆಯಿಂದಲೂ, ಅಸತ್ಯದಿಂದಲೂ ಜೆಕೊಸ್ಲವೇಕಿಯವನ್ನು ಹಾಳುಮಾಡಲು ಯತ್ನಿಸುತ್ತಿದೆ'

ಜೆಕೊಸ್ಲವೇಕಿಯದ ಸ್ವಾತಂತ್ರ್ಯ ದಾಹ!

ಜರ್ಮನಿಯ ಜನರನ್ನು ಸಾಧ್ಯವಿದ್ದ ರೀತಿಯಲ್ಲೆಲ್ಲಾ ಜೆಕೊಸ್ಲವೇಕಿಯದವರು ದ್ವೇಷಿಸುತ್ತಾರೆ ಅವರು ತಮ್ಮ ರಾಷ್ಟ್ರಘಾತುಕರೆಂದು ಅಭಿಪ್ರಾಯ ಪಡುತ್ತಾರೆ ಜೆಕೊಸ್ಲವೇಕಿಯದವರು ತಮ್ಮ ಸ್ವಾತಂತ್ರ್ಯಕ್ಕಾಗಿ ಕಾದಾಡುವ ವರೆಗೆ ಹತ್ತು ಕಟ್ಟಪ್ಪಣೆ ವಿಧಿಸಿರುವರು ಅವುಗಳಲ್ಲಿ ದೇಶದ ಸ್ವಾತಂತ್ರ್ಯ, ಪ್ರೇಮ ನಾಜೀ ದ್ರೋಹ, ಆತ್ಮ ಧೈರ್ಯ, ಇಂದಿನ ಘೋರಣೆಯ ನಿಷೇಧ, ಜಗತ್ತಿನಲ್ಲಿ ತಮ್ಮ ಸಹಾನುಭೂತಿ ಮೊದಲಾದವುಗಳೂ ಸೂಚಿತವಾಗಿವೆ. ಇವುಗಳು ಅಲ್ಲಿನ ಇಂದಿನ ಸ್ವಾತಂತ್ರ್ಯವೀರರಿಗೆ ವೇದವಾಕ್ಯಗಳಾಗಿವೆ.

ಜೆಕೊಸ್ಲವೇಕಿಯದ ವಿಮಾನದಳ ಧನಸಂಗ್ರಹ, ಸೇನಾಪತಿಗಳು ಜರ್ಮನರು ದೇಶವನ್ನು ಆಕ್ರಮಿಸಿದ ಮರುಕ್ಷಣದಲ್ಲಿಯೇ ಅಲ್ಲಿಂದ ಮಾಯವಾಗಿ ಹೋಗಿವೆ. ಜರ್ಮನರ ಹಿಡಿತವಿಲ್ಲದ ರಾಜ್ಯಗಳಲ್ಲಿ ಸೇರಿ, ಅಲ್ಲಿ ಜರ್ಮನರನ್ನು ತಮ್ಮ ರಾಷ್ಟ್ರದಿಂದ ಹೊಡೆದಟ್ಟಲು ಸಿದ್ಧತೆ ಆಗುತ್ತಿದೆ ಹೀಗಿರುವ ಒಂದು ಸೈನ್ಯಸಿದ್ಧತೆಯು ಪೋಲೇಂಡಿನಲ್ಲಿ ನಡೆಯುತ್ತಿದೆ; ಈ ಸೈನ್ಯದಲ್ಲಿ ಇಂದು ೫೦,೧೦೦ ಜನರು ಸೈನಿಕರಿದ್ದಾರೆ!

ಯುದ್ಧ ಸಿದ್ಧತೆ!

ಜೆಕೊಸ್ಲವೇಕಿಯಾ ಪೋಲೆಂಡುಗಳ ಗಡಿಯನ್ನು ಜರ್ಮನರು ಭದ್ರವಾಗಿ ಕಾದಿರುವರಾದರೂ, ಇಂದು ಅಲ್ಲಿ ಸೇರಿಸುತ್ತಿರುವ ಸೈನ್ಯಕ್ಕೆ ಇಲ್ಲಿಂದ ದಿನದಿಂದ ದಿನಕ್ಕೆ ಜನರು ಹೋಗಿ ಸೇರುತ್ತಿದ್ದಾರೆ ಹೀಗೆ ಸಂಯುಕ್ತ ಅಮೇರಿಕದಲ್ಲಿಯೂ ಕೂಡಾ ಇದೇ ರೀತಿ ಸೈನ್ಯದಳವು ಸಿದ್ಧವಾಗಿದೆ ಲಂಡನ್ ಫ್ರಾನ್ಸುಗಳಲ್ಲಿಯೂ ಈ ಚಳವಳವು ನಡೆಯುತ್ತಿದೆ. ಜೆಕೊಸ್ಲವೇಕಿಯವು ಮುಂದಿನ ಯುದ್ಧದಲ್ಲಿ ಜರ್ಮನಿಯನ್ನು ಹೊಡೆದಟ್ಟಲು ಸಿದ್ಧತೆ ಮಾಡಿಕೊಂಡಿದೆ

ಜಾಹೀರಾತುಗಳಿಗೆ
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು:
ಪ್ರತಿಫಲಬರುವಂತೆ ಸಾಧಿಸುವುದು

ಇದೊಂದು ಸುಮನೋಹರವಾದ ವ್ಯಾಖ್ಯಾನ — ನಿಮ್ಮಲ್ಲಿ ವಿಶ್ವಾಸವನ್ನು ಉಂಟುಮಾಡತಕ್ಕದು!

ಸ್ಥಳೀಯ ವಾದ

ಪ್ರೊಯ್ರೆಚ್ಸ್ ಆಮಿ ಆಮ್ಚ್ಯಾ ಏಕಾ ಮಹಂತ್ ಮಾನೆಸ್ತಾಗಡೆ ಇನ್ಶೂರೆನ್ಸ್ ಕಂಪ್ಣ್ಯಾಂ ವಿಶಾಂತ್ ಗಜಾಲ್ ಮಾತ್ ಕರ್ತಾನಾ, ತೊ ಮ್ಹಣಾಲಾಗ್ಲೊ:— 'ಗಾಂವ್ಚ್ಯೊ ಚೋರ್ ಪುಣಿ ವ್ಹೊಯ್, ಪರ್ಗಾಂವ್ಚ್ಯೊ ಸಾವ್ ನಹಿಂ' ಮ್ಹೊಣ್, ಆನಿ ತ್ಯಾ ಪಸ್ಸತ್ ನಹಿಂಚ್ ತೊ ಗಾಂವ್ಚ್ಯ್ಯಾ ಕಂಪ್ಣ್ಯೆ ಆದರ್ಸಿತಾ ಬಗಾರ್ ತಾಚೆ ಗಡೆ ಯೆಂವ್ಚ್ಯಾಂಕ್ ಗಾಂವ್ಚ್ಯಾ ಕಂಪ್ಣ್ಯೆನಿ ಜೀವ್ ವಿಮೊ ಕರುಂಕ್ ಸಾಂಗಾತ್ ಮ್ಹೊಣ್ ಆದಿಂ ಆಮ್ಚ್ಯಾಂ ಅಸಲ್ಯೊ ಕಂಪ್ಣ್ಯೊ ಗಾಂವ್ಚ್ಯೊ ಮ್ಹೊಣ್ ನಾತ್‌ಲ್ಲ್ಯೊ ಆತಾಂ ತಿ ಸದಾಂ ವಾಡೊನ್ ಯೆಂವ್ಚಿ ಗಾಂವ್ಚಿ ಚ್ಸ್ ಪೊಪ್ಯುಲರ್ ಇನ್ಶುರೆನ್ಸ್ ಕಂಪ್ಣಿ ಆಮ್ಚ್ಯಾ ಪಾಯಾಂಗಡೆ ಅಸಾ. ಗೆಲೆತ್ಯಾ ವರ್ಸಾಚಾ ತಿಚ್ಯಾ ವರ್ದೆಚಿ ಆನಿ ಲೆಕಾಪಟ್ಟಿಚಿ ಪ್ರತಿ ವಿಮರ್ಶಾಕ್ ಮ್ಹೊಣ್ ಆಮ್ಕಾಂ ಆಯ್ಲ್ಯಾ. ಸುರು ತಾವ್ನ್ ಆತಾಂ ಮ್ಹಣಾಸರ್ ತಿ ವಾಡೊನ್ ಪೊಳೆತಾನಾ ಪರಿಸುಮಾರ್ ಘಟ್ಟ್ ಕಂಪ್ಣ್ಯೊ ಮ್ಹೊಣ್ ಆಮಿ ಲೆಕ್ಯಾತ್ ಕಂಪ್ಣ್ಯಾಂಕ್ ಸರಿ ಜಾವ್ನ್ ಯೆತಾತಿ ದಿಸ್ತಾ ಗೆಲೆತ್ಯಾ ಏಕಾ ವರ್ಸಾಂತ್ ರು 8,97,750 ಐವಜಾಚೊ ವೆವಾರ್ ತಿಣೆ ಕೆಲಾ, ಆನಿ ಹ್ಯೊ ತಾಚಾ ಆದ್ಲ್ಯಾ ವರ್ಸಾಚಾಕಿ ರು 1,65,069 ಐವಜಾಕ್ ಚಡ್ಲಾ. ವಿಮ್ಯಾದಾರಾ ಭಾಯ್ರ್ ಪಾವ್ಲೊ ಹಲ್ಯಾರ್ ರಾವ್‌ಲ್ಲ್ಯಾ ವ್ಹೊರ್ವಿಂ ಹ್ಯೆ ಕಂಪ್ಣೆಚಿ ಬುನ್ಯಾದ್ ಘಟ್ಚ್ ಜಾತಾ. ಗೆಲೆತ್ಯಾ ವರ್ಸಾಂತ್ ತೀನ್‌ಂಚ್ ತಸಲಿಂ ಲೆಕಾಂ ಆಸ್‌ಲ್ಲಿಂ, ಸಟ್ಟ್ ಕರ್ನ್ ದೀವ್ನ್ ಸೊಡ್ಲ್ಯಾಂತ್, ವ್ಹೊಲ್ಯಾರ್ ರು 5,135 ಹೆ ಕಂಪ್ಣೆಚೆ ಶಾಖೆ ಆತಾಂ ವಿಸ್ತಾರ್ತಾತ್, ಮದ್ರಾಸಾಂತ್ ಏಕ್ ಅಸಾ ಕೆಲಾ ಆನಿ ಮಲ್ಬಾರ್, ಮೈಸೂರ್, ಆಂಧ್ರಾ ದೇಶ್, ಉ. ಕನ್ನಡಾ ಆನಿ ದಕ್ಷಿಣ್ ಮಹಾರಾಷ್ಟ್ರಾಂತ್ ಸ್ವತಃ ಶಾಖೆ ಅಸಾ ಕರ್ಚಿ ಮಾಂಡಾವಳ್ ಚಲ್ತಾ ವಿಮೊ ಕರ್ಚ್ಯಾಂಕ್ ಹ್ಯೆ ಕಂಪ್ಣೆ ಪ್ಯಂ ಆಸ್‌ಲ್ಲ್ಯಾ ಪಾತ್ಯೆಣ ವ್ಹೊರ್ವಿಂ, ಕಂಪ್ಣೆಚಾ ವಾಡಾವಳಾಕ್ ಉತ್ತೇಜನ್ ಮೆಳ್ತಾ ಮ್ಹೊಳ್ಯಾರ್ ದುಬಾವ್ ನಾ ತರ್ ಆಮ್ಚ್ಯಾ ಲೊಕಾನ್ ಪರ್ಗಾಂವ್ಚ್ಯಾ ಕಂಪ್ಣ್ಯಾಂಕ್ ಕಿತ್ಯಾಕ್ ಝುಕ್ ಮಾರ್ಚಿ? ಆಮ್ಚಿಂ ಘರ್ ಪೊಯ್ಲಿಂ ಸುಧಾರ್ನ್ ಕಾಬಿತ್ ತೆಂ ಉರಾಕೆಂ ಕರ್ಚಿ ವ್ಹಿನತ್ ಆನಿ ಸಹಕಾರ್ ಆಮ್ಕಾಂ ಗಾಂವ್ಚ್ಯಾಂಕ್ ಸಜ್‌ಲ್ಲೊ ಜಾವ್ನಾಸಾ. ತಶೆಂಚ್ ಜಾಲ್ಲಿಂ ಪೊಳೊಂವ್ಚೊ ಆಮ್ಚೊ ಸಂತೊಸ್.

ಈ ಸಂಸ್ಥೆಯನ್ನು ಪ್ರೋತ್ಸಾಹಿಸಿರಿ—ಅದಕ್ಕೆ ಬೆಂಬಲ ಕೊಡಿರಿ.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಮಂಗಳೂರು ಸಮಾಚಾರ

ನಗರ ಸಭೆ:—ತಾ. ೧೧ನೇ ಸಂಜೆ ಘಂಟೆ ೬ಕ್ಕೆ ಮಾನ್ಯ ಮಂತ್ರಿ ಶ್ರೀ ಗೋಪಾಲ ರೆಡ್ಡಿಯವರು ಮಂಗಳೂರು ಮುನಿಸಿಪಾಲಿಟಿಯನ್ನು ಸಂದರ್ಶಿಸಿದರು.

ಶ್ರೀ ಎಮ್ ಆನಂದ ತಳ್ವಾರರಿಗೆ ಹೊಸ ಹುದ್ದೆ:—ನಮ್ಮ ಜಿಲ್ಲೆಯ ಸಬ್ ಜಡ್ಜರಿಗೆ ಸೆಶನ್ ಅಧಿಕಾರವನ್ನು ಸರಕಾರದವರು ಕೊಟ್ಟಂತೆ, ಆ ಕೋರ್ಟಿನಲ್ಲಿ ಸರಕಾರದ ಪರವಾಗಿ ಕ್ರಿಮಿನಲ್ ವ್ಯವಹರಣೆಯ ಬಗ್ಗೆ ಎಡಿಶನಲ್ ಪಬ್ಲಿಕ್ ಪ್ರೊಸ್ಯುಕ್ಯೂಟರರಾಗಿ ಶ್ರೀ. ಎಂ ಆನಂದ ತಳ್ವಾರ್ ಬಿ ಎ ಬಿ ಎಲ್ ಇವರು ನೇಮಕ ಹೊಂದಿರುವರು

ಜಿಲ್ಲಾ ಬೋರ್ಡಿನ ಸಭೆ:—ನಮ್ಮ ಡಿ ಬೋ ಸಭೆಯು ತಾ ೪ರಂದು ಪೂರ್ವಾಹ್ನ ಘಂಟೆ ೧೧ಕ್ಕೆ ಪ್ರೆಸಿಡೆಂಟರಾದ ಡಾ ವಿಠಲ ಶೆಟ್ಟರ ಅಧ್ಯಕ್ಷತೆಯಿಂದ ನೆರವೇರಿತು

ಜಾನುವಾರು ಸಂತೆಗಳ ಸಮಯ, ಯಾತ್ರಿಕರಾಗಿ ಹೋಗುವವರಿಂದಲೂ, ವಾಹನಗಳಿಂದಲೂ ತೆರಿಗೆ ವಸೂಲು ಮಾಡಬೇಕೆಂಬ ವಿಷಯ ಮುಂದುವರಿಸಲಾಯಿತು ಶ್ರೀ ಪಿ ಉಪೇಂದ್ರ ಶ್ರೀನಿವಾಸ ನಾಯ್ಕ ಮತ್ತು ಶ್ರೀಮತಿ ಸರಸ್ವತಿ ಬಾಯಿಯವರ ನಿರ್ಗಕೊಂಡ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು

ಅನೇಕ ಸಂಸ್ಥೆಗಳ ದುರಸ್ತಿಯ ಬಗ್ಗೆ ಹಣ ಸೇಂಕ್ಷನುಗಳಾಯಿತು ಗವರ್ನಮೆಂಟ್ ಟೇಡ್ ಸ್ಕೂಲಿನ ವಿದ್ಯಾರ್ಥಿಗಳಿಗೆ ಸ್ಕೋಲರ್‌ಶಿಪ್ ಕೊಡುವರೆ ರೂಪಾಯಿ ೨೦೦ ನಿರ್ಣಯವಾಯಿತು ಬೋರ್ಡು ಆಫೀಸಿನ ಪೇದೆಗಳಿಗೆ ಖಾಕಿ ಉಡಿಗೆಗೆ ರೂ ೧೨೦ ಸೇಂಕ್ಷನಾಯಿತು

ಮಧ್ಯಾಹ್ನ ೨½ ಗಂಟೆಗೆ ಬೋರ್ಡಿನ ವಿಶೇಷ ಸಭೆಯೊಂದು ಜರಗಿ, ಜಿಲ್ಲಾ ಬೋರ್ಡಿನಿಂದ ಬಸ್ಸು ಸರ್ವಿಸು ನಡೆಸುವ ವಿಷಯ ಮುಂದಕ್ಕೆ ಆಲೋಚಿಸಬಹುದಾಗಿ ನಿರ್ಣಯವಾಯಿತು

ಇದೇ ತಿಂಗಳ ತಾ ೪ಕ್ಕೆ ಮಾನ್ಯ ಮಂತ್ರಿ ಶ್ರೀ ಗೋಪಾಲ ರೆಡ್ಡಿಯವರು ಮಂಗಳೂರಿಗೆ ಬಂದು ಅನೇಕ ಸಮಾರಂಭಗಳಲ್ಲಿ ಭಾಗವಹಿಸಿದರು ಜಿ ಬೋ ಹೊಸ ಕಟ್ಟೋಣದ ಉದ್ಘಾಟನೆ, ಕೆನರಾ ಹೈಸ್ಕೂಲಿನಲ್ಲಿ ಮಹಾತ್ಮಾಜಿಯವರ ಮೂರ್ತಿಯ ಅನಾವರಣೋತ್ಸವ, ಶಂಕುಸ್ಥಾಪನೆ ಮೊದಲಾದ ವಿಪುಲ ಕಾರ್ಯಗಳಿತ್ತು (ವಿವರವನ್ನು ಬೇರೊಂದೆಡೆ ಕೊಡಲಾಗಿದೆ)

ಮುನ್ಸಿಪಾಲಿಟಿಯಲ್ಲಿ ಭಾವಚಿತ್ರಾನಾವರಣ: ಮುನ್ಸಿಪಾಲಿಟಿಯ ಸಭಾಭವನದಲ್ಲಿ ಮೊದಲೇ ಮಂಜೂರಾದಂತೆ ಮಿ ಫೆಲಿಕ್ಸ್ ಪೈ ಅಲ್ಬುಕರ್ಕರ ಭಾವಚಿತ್ರವನ್ನು ಅನಾವರಣ ಮಾಡುವರೆ ಮಂತ್ರಿಗಳು ಬರುವ ತಿಂಗಳ ತಾ ೮ಕ್ಕೆ ತಿರುಗಿ ಬರುವರೆಂದು ಆಶ್ವಾಸನೆಯಿತ್ತಿರುವರಂತೆ ವೆಬೆಸ್ಟರ್ ಮಾರ್ಕೆಟಿನ ಗಲಭೆಯಿಂದಾಗಿ ಅದಕ್ಕೆ ಮೂಲ ಕಾರಣದ ಮಿ. ಅಲ್ಬುಕರ್ಕರ ಭಾವಚಿತ್ರವನ್ನು ಅದರ ಇತ್ಯರ್ಥವಾಗದೆ ಮುನ್ಸಿಪಾಲಿಟಿಯಲ್ಲಿಡಬಾರದಾಗಿ ನಾಗರಿಕರಲ್ಲಿ ಕೆಲವರು ಮಂತ್ರಿಗಳಿಗೆ ದೂರು ಕೊಟ್ಟಿರುವ ನಿಮಿತ್ತ ಈ ಸಲದ ಆ ಕಾರ್ಯಕ್ರಮವು ರದ್ದಾಗಿ ಹೀಗೆ ಮುಂದುವರಿಸಲಾಗಿದೆಯೆಂದು ತಿಳಿಯುತ್ತೇವೆ

ಶ್ರೀ ವೆಂಕಟ್ರಾಯ ಬಾಳಿಗರ ರಾಜಿನಾಮೆ:—ಮುನ್ಸಿಪಲ್ ಚ್ಯಾರ್‌ಮ್ಯಾನರಾದ ಶ್ರೀ. ಬಿ ವೆಂಕಟ್ರಾಯ ಬಾಳಿಗಾ, ಎಂ ಎಲ್. ಎ. ಇವರು ಭಾವಚಿತ್ರ ಅನಾವರಣದ ವಿಷಯ ಮಂತ್ರಿಗಳು ಅಸಮ್ಮತಿಸಿದ್ದಕ್ಕಾಗಿ ರಾಜಿನಾಮೆ ಯಿತ್ತರೆಂದೂ, ಮಂತ್ರಿಗಳು ಅದನ್ನು ಹಿಂದೆಗೆಯಬೇಕಾಗಿ ಕೇಳಿಕೊಂಡುದರಿಂದ ಹಿಂದೆಗೆದಿರುವರೆಂದೂ ಕೇಳುತ್ತೇವೆ. ಇದು ಒಂದು ಸಂತೋಷಕರ ವಾರ್ತೆ.

ಇದೇ ಆದಿತ್ಯವಾರ ದಿವಸ ತಾ ೧೬ರಲ್ಲಿ ಶ್ರೀಕೃಷ್ಣ ಮಂದಿರದಲ್ಲಿ ವಿವೇಕಾನಂದ ಸಭೆಯ ಸದಸ್ಯರು ರಾಮಕೃಷ್ಣ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರ ಸ್ಮಾರಕ ಉತ್ಸವನ್ನು ಆಚರಿಸುವರು ಈ ಸಂದರ್ಭದಲ್ಲಿ ಶ್ರೀ ಎಂ ಎನ್ ಕಾಮತರವರು ಈ ಮಹಾಪುರುಷರ ಜೀವನ ಚರಿತ್ರೆ ಕುರಿತು ಕೊಂಕಣಿ ಭಾಷೆಯಲ್ಲಿ ಮಾತನಾಡುವರು ಎಲ್ಲರಿಗೂ ಸುಸ್ವಾಗತವಿದೆ.

ಮೋಟಾರು ಕೆಲಸಗಾರರ ಮುಷ್ಕರ:— ಸಿ ಪಿ ಸಿ ಶಂಕರ್ ವಿಠಲ್, ಹನುಮಾನ್ ಮೋಟಾರು ಕೆಲಸಗಾರರು ಕೆಲವರು ತಾ. ೧೧ರಂದು ಬೆಳಿಗ್ಗೆ ಮುಷ್ಕರ ಹೂಡಿದರು ಡ್ರೈವರರು ಮತ್ತು ಕಂಡೆಕ್ಟರರು ಮೋಟರುಗಳನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಮುಷ್ಕರಗಾರರಲ್ಲಿ ಕೆಲವರು ಪಿಕೆಟಿಂಗ್ ಮಾಡಿ ತಡೆದರು ಜಿಲ್ಲಾ ಕಲೆಕ್ಟರರಾದ ರಾವ್ ಬಹದ್ದೂರ್ ಶ್ರೀ ವೆಲ್ಲೋಡಿಯವರು ಬಂದು ಮುಷ್ಕರಗಾರರೊಡನೆ ಮಾತನಾಡಿ ಮಧ್ಯಾಹ್ನ ಒಂದು ಗಂಟೆಗೆ ಅದನ್ನು ನಿಲ್ಲಿಸುವಂತೆ ಮಾಡಿದರು.

ಶೋಚನೀಯ ಆತ್ಮಹತ್ಯೆ:—ಶ್ರೀ ಚಿಂತಾಮಣಿ ವಿಷ್ಣು ಘಾಟೆ ಇವರ ಸುಮಾರು ೧೪ ವರ್ಷ ಪ್ರಾಯದ ಮಗನು (ಕೆನರಾ ಹೈಸ್ಕೂಲಿನಲ್ಲಿ ವಿದ್ಯಾರ್ಥಿ) ಯಾವುದೋ ಕಾರಣಕ್ಕಾಗಿ ಉರುಲು ಹಾಕಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿಯುತ್ತದೆ

ಅಪಾಯ.—ಇದೇ ತಾ ೧೩ನೇ ಮಧ್ಯಾಹ್ನ ಕುದ್ರೋಳಿ ಸಂಗಡ ಬಳಿ ತೆಂಗಿನ ಮರವೊಂದನ್ನು ಕಡಿಯುತ್ತಿದ್ದಾಗ, ಮರವು ಆಕಸ್ಮಿಕವಾಗಿ ಮುರಿದುಬಿದ್ದು ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಕ್ರೈಸ್ತಯುವಕನಿಗೆ ತಾಗಿ, ಬಲವಾದ ಪೆಟ್ಟಾಗಿರುವುದಾಗಿಯೂ ಆತನನ್ನು ಆಸ್ಪತ್ರೆಗೊಯ್ದಿರುವರಾಗಿಯೂ ತಿಳಿಯುತ್ತದೆ [illegible] ಕಡಿದವನಿಗೂ [illegible] ಆಗಿದೆ

ತಾಲೂಕು ಸಮಾಚಾರ

ಕಾರ್ಕಳ:—ಕಾರ್ಕಳದ ಲೋಕಲ್ ಫಂಡ ಆಸ್ಪತ್ರೆಗೆ ಈಗ ಒಂದು ಹೆರಿಗೆ ಮನೆಯು ದೊರೆತಿರುವುದರಿಂದ, ಅದಕ್ಕೆ ಸಂಬಂಧಪಟ್ಟು ಇಲ್ಲಿಗೆ ಒಂದು ಲೇಡಿ ಡಾಕ್ಟರನ್ನು ಕೊಡುವುದು ಅತ್ಯಗತ್ಯವಾಗಿದೆ. ಮದ್ರಾಸ ಸರಕಾರದ ಆರೋಗ್ಯ ಮಂತ್ರಿಗಳಾದ ಡಾಕ್ಟರ ರಾಜನವರು ಇಲ್ಲಿಗೆ ಬಂದಿದ್ದಾಗ, ಅವರು ಅಂಥ ಒಬ್ಬ ಲೇಡಿ ಡಾಕ್ಟರರನ್ನು ಕೊಡುವ ಕುರಿತು ಪರ್ಯಾಲೋಚಿಸುವುದಾಗಿ ತಮ್ಮ ಭಾಷಣದಲ್ಲಿ ಹೇಳಿದ್ದರು ಸಂಬಂಧಪಟ್ಟವರು ಅದಕ್ಕಾಗಿ ಪ್ರಯತ್ನಿಸಿ ಸಫಲರಾದರೆ, ಹೆರಿಗೆ ಮನೆಯ ಪೂರ್ಣ ಪ್ರಯೋಜನವು ಸರ್ವಜನರಿಗೆ ದೊರೆಯುವಂತಾಗುವುದು

ಕಿನ್ನಿಗೋಳಿ.—೧ ಅಕ್ಟೋರು ಎಂಡ್ ಜನರಲ್ ಬೇಂಕ್ ಲಿಮಿಟೆಡ್ ಇದರ ಶಾಖೆಯು ತಾ ೧೪ರಂದು ತೆರೆಯಲ್ಪಡುವುದು ಮತ್ತು ದಿ ಕೆಥೋಲಿಕ್ ಬೇಂಕ್ ಲಿಮಿಟೆಡಿನ ಶಾಖೆಯು ತಾ ೧೫ರಂದು ತೆರೆಯಲಾಗುವುದೆಂದೂ ಸುದ್ದಿ.

ಐಕಳ:—ಪಂಚಾಯತ ಬೋರ್ಡಿನ ಸ್ಪೆಶಲ್ ಸಭೆಯು ಜರಗಿ ಸೇತುವೆ ಕಟ್ಟಿಸವ ಮತ್ತು ಮಾರ್ಗ ಕಡಿಸುವ ಠರಾವುಗಳು ಮಂಜೂರಾದುವು

ಪಲಿಮಾರು:—ಬೋರ್ಡು ಹಯ್ಯರ್ ಎಲಿಮೆಂಟರಿ ಶಾಲೆಯ ಕರ್ನಾಟಕ ಕರ್ಷಕ ಸಂಘದ ಸಭೆಯು ತಾ ೯ರಂದು ಡಾ ಕುಮಾರನ್ ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು

ಪೆರಡಾಲ— ಉದಯಾದ್ರಿ ಡಿ ಬೋ ಎಲಿಮೆಂಟರಿ ಶಾಲೆಯನ್ನು ಹೈಯರ್ ಎಲಿಮೆಂಟರಿ ಶಾಲೆ ಮಾಡುವ ಬಗ್ಗೆ ಡಿ ಬೋ ಪ್ರೆಸಿಡೆಂಟರೊಡನೆ ಊರ ಮಹನೀಯರು ಬಿನ್ನಯಿಸಿಕೊಂಡಲ್ಲಿ ಅವರು ಆ ಬಗೆ ಊರವರು ಶಾಲಾ ಕಟ್ಟಡ ಕಟ್ಟಿಸಿಕೊಡಬೇಕಾಗಿ ಹೇಳಿದ್ದರು ಊರವರು ಶಾಲಾ ಕಟ್ಟಡದ ಬಗೆ ನಿಧಿಯನ್ನು ಸಂಗ್ರಹಿಸಿ ಬೇಂಕಿನಲ್ಲಿ ಡಿಪೊಸಿಟ್ ಇಟ್ಟಂತೆ, ಜಿ. ಬೋರ್ಡಿನಲ್ಲಿ ಹೈಯರ್ ಎಲಿಮೆಂಟರಿ ಮಾಡಬಹುದಾಗಿ ನಿರ್ಧಾರಗಿರುತ್ತದೆ ಆ ಬಗ್ಗೆ ಆರನೇ ತರಗತಿ ತೆರೆಯಲು ಕಟ್ಟೋಣವು ತಯಾರಿದೆಯೋ ಎಂದು ಡಿ. ಬೋರ್ಡಿನಿಂದ ಹುಕುಂ ಬಂದಿದೆ ಅದಕ್ಕೆ ಯೋಗ್ಯ ಕಟ್ಟಡವು ತಯಾರಿರುವುದಾಗಿ ಊರವರು ತಿಳಿಸಿದ್ದಾರೆ.

ಉಡುಪಿ ಶ್ರೀ ಸೋದೇ ವಾದಿರಾಜ ಸ್ವಾಮಿ ಮಠ

ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯರು ಶ್ರೀ ವಿಶ್ವೇಂದ್ರ ತೀರ್ಥ ಶ್ರೀಪಾದಂಗಳವರು ಧಾರವಾಡದಿಂದ ಬೆಂಗಳೂರಿಗೆ ಕಳೆದ ಜೂನ್ ತಿಂಗಳ ತಾ ೨೪ನೇ ದಿನ ವಿಜಯಮಾಡಿದರು ಮೈಸೂರು ದಿವಾನ್ ಮಿರ್ಜಾ ಎಂ ಇಸ್ಮಾಯಿಲ್ ಸಾಹೇಬರು ತಾ ೨೫ರಲ್ಲಿ ಭೇಟಿ ಮಾಡಿ ಸಂಭಾಷಣೆ ಮಾಡಿದರು.

ಜುಲಾಯಿ ತಾ. ೨ನೇ ಭಾನುವಾರ ಬೆಂಗಳೂರು ಅರಮನೆಯಲ್ಲಿ ಶ್ರೀಮಾನ್ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರವರ ಭೇಟಿ ಆಯಿತು ಸಂಭಾಷಣೆ ನಡೆಯಿತು. ಶ್ರೀ ಶ್ರೀಗಳವರು ಉಡುಪಿ ಮಹಾತ್ಮ್ಯೆಯ ವಿಚಾರದಲ್ಲಿ ಮಹಾರಾಜರವರಲ್ಲಿ ಪ್ರಶಂಸಿಸಿ ಮಧ್ವ ಮತ ಸಾರವನ್ನೂ ಶ್ರೀ ವಾದಿರಾಜ ಸ್ವಾಮಿಗಳವರ ಮಹಾತ್ಮೆಯನ್ನೂ ಮಹಾರಾಜರವರಿಗೆ ವ್ಯಕ್ತಪಡಿಸಿದರು ತದನಂತರ ಉಡುಪಿ ಶ್ರೀ ಕೃಷ್ಣ ಮಠಕ್ಕೆ ಶ್ರೀಮಾನ್ ಮಹಾರಾಜರವರ ಪಿತಾಮಹರಾದ ವೈಕುಂಠವಾಸಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು ಮಾಡಿರುವ ವಿಶೇಷ ಉಪಕಾರವನ್ನು ಮತ್ತು ತಮ್ಮ ಶ್ರೀ ವಾದಿರಾಜ ಮಠಕ್ಕೆ ಕೊಟ್ಟಿರುವ ಅಮೂಲ್ಯವಾದ ಪಟ್ಟೆಯ ಮಂಟಪವನ್ನೂ ಶ್ರೀ ಮಹಾರಾಜರವರ ಗಮನಕ್ಕೆ ತಂದರು

ಇಷ್ಟು ಉಪಕಾರ ಮಾಡಿದ ಮೈಸೂರು ಸಂಸ್ಥಾನದವರು ಉಡುಪಿ ಕ್ಷೇತ್ರಕ್ಕೆ ಬಂದು ಶ್ರೀ ಕೃಷ್ಣ ಸಂದರ್ಶನ ಮಾಡಬೇಕಾಗಿ ಅಷ್ಟ ಮಠಾಧಿಪತಿಗಳ ಪರವಾಗಿ ಆಹ್ವಾನ ಮಾಡಿದರು

ಸಂಭಾಷಣೆ ಆದನಂತರ ಶ್ರೀಪಾದಂಗಳವರು ಶ್ರೀಮಾನ್ ಮಹಾರಾಜರವರಿಗೆ ಶ್ರೀ ದೇವರಿಗೆ ಸಮರ್ಪಿತವಾದ ಪುಷ್ಪ ಮಾಲಿಕೆಯನ್ನು ಮಹಾರಾಜರವರ ಕೊರಳಿಗೆ ಹಾಕಿ ಫಲಮಂತ್ರಾಕ್ಷತೆಗಳನ್ನಿತ್ತು ಆಶೀರ್ವದಿಸಿ ಅರಮನೆಯಿಂದ ತಮ್ಮ ಮೊಕ್ಕಾಂಗೆ ತೆರಳಿದರು

ಶ್ರೀಪಾದಂಗಳವರು ಇನ್ನು ಒಂದು ವಾರ ಬೆಂಗಳೂರಲ್ಲಿ ವಾಸಿಸಿ ಚಾತುರ್ಮಾಸಕ್ಕೆ ಮೈಸೂರಲ್ಲಿ ಮೊಕ್ಕಾಂ ಮಾಡುವವರಿದ್ದಾರೆ.

ಇದೇ ಶ್ರೀ ಸೋದೇ ವಾದಿರಾಜ ಸ್ವಾಮಿಗಳವರ ಮಠಕ್ಕೆ ಶ್ರೀಮಾನ್ ಮಹಾರಾಜರವರು ಮೂರು ತೈಲ ಭಾವಚಿತ್ರಗಳನ್ನು ಮಠದಲ್ಲಿ ಸ್ಥಾಪಿಸಲು ಕೊಡಬೇಕಾಗಿ ಆಜ್ಞಾ ಮಾಡಿದ್ದಾರೆ

ಈ ಭಾವಚಿತ್ರಗಳು ಅರಮನೆಯ ಚಿತ್ರಗಾರರಿಂದ ರಚಿತವಾಗಿವೆ ಇವುಗಳನ್ನು ಶೀಘ್ರದಲ್ಲಿಯೇ ವಿದ್ಯಾಭೂಷಣ ವಿ ಎಸ್. ಸಂಜೀವರಾಯರು ಅರಮನೆಯಿಂದ ಮಠಕ್ಕೆ ಕೊಂಡು ಅನಾವರಣದ ಬಗ್ಗೆ ಉಡುಪಿಗೆ ಕೊಂಡು ಹೋಗುವರು

ಕರ್ನಾಟಕ ಸಮಾಚಾರ

ಧಾರವಾಡ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಆಫೀಸು ಧಾರವಾಡದ ಮಂಗಳವಾರ ಪೇಟೆಯಿಂದ ಮಾಳಮಡ್ಡಿಗೆ ಒಯ್ಯಲಾಗಿದೆ. ಗೂಡ್ಸ್ ಶೆಡ್ಡಿನ ದಾರಿಯಲ್ಲಿ ರೈಲ್ವೇ ಸ್ಟೇಶನಿನ ಹತ್ತಿರ ಈ ಆಫೀಸು ಇರುತ್ತದೆ, ಪೋಸ್ಟು ವಿಳಾಸವು ಮೊದಲಿನಂತೆಯೇ ಇರತಕ್ಕದ್ದು ಎಂದು ಗೌ। ಕಾರ್ಯದರ್ಶಿಗಳು ತಿಳಿಸುತ್ತಾರೆ

ಬೆಂಗಳೂರು

ಕನ್ನಡ ಜ್ಯೋತಿಯೊಂದು ಕಣ್ಮರೆಯಾಯಿತು

ರಾವ್ ಬಹದ್ದೂರ್, ರಾಜಕಾರ್ಯ ಪ್ರಸಕ್ತ ಎಂ ಶ್ಯಾಮರಾಯರು ದಿವಂಗತರಾದರು ಇವರು ಸುಪ್ರಸಿದ್ಧ ಇತಿಹಾಸಕಾರರೂ ಹೆಸರಾಂತ ಗ್ರಂಥಕರ್ತರು. ಕನ್ನಡ ಸಾಹಿತ್ಯದಲ್ಲಿ ಒಳ್ಳೆಯ ಅಭಿಮಾನಿಗಳು—ಕನ್ನಡಿಗರು ಇವರ ನಿಧನದಿಂದ ಅಪಾರ ನಷ್ಟಹೊಂದಿದ್ದಾರೆ!

ಹುಬ್ಬಳ್ಳಿ

ಇಲ್ಲಿಯ ನ್ಯೂ ಇಂಗ್ಲಿಷ್ ಶಾಲೆ, ಕರ್ನಾಟಕ ಪ್ರೆಸ್, ಇವುಗಳಲ್ಲಿ ಹಿಂದೀ ಶಿಕ್ಷಣವು ಆರಂಭವಾಗಿರುತ್ತದೆ.

ಮೈಸೂರು

ಶ್ರೀ ತಗಡೂರು ರಾಮಚಂದ್ರರಾಯರ ಹೇಳಿಕೆ

ಮೂಗಿನ ಶಸ್ತ್ರ ಚಿಕಿತ್ಸೆಗಾಗಿ ಶ್ರೀ ತಗಡೂರು ರಾಮಚಂದ್ರರಾಯರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ತರಲಾಗಿದೆ. ಸ್ಟೇಟ್ ಕಾಂಗ್ರೆಸಿನ ವಿಷಯ ಅವರು ಹೀಗೆಂದರು. “ಸಪ್ಟೆಂಬರ ಒಂದನೇ ತಾರೀಕಿನೊಳಗೆ ಸರಕಾರದೊಡನೆ ಗೌರವಪೂರ್ಣ ಒಪ್ಪಂದವಾಗದಿದ್ದಲ್ಲಿ ಸತ್ಯಾಗ್ರಹವನ್ನು ಆರಂಭಿಸಬೇಕು”

ಧಾರವಾಡ

ವಿಕ್ಟೋ[illegible] ಹೈಸ್ಕೂಲಿನ [illegible] ಪ್ರಾರಂಭವಾಗಿದೆ.

ಅಖಿಲ ಭಾರತ ಮಹಿಳಾ ಪರಿಷತ್ತಿನ ಅಧ್ಯಕ್ಷೆಯಾದ [illegible] ವಾಡೆಯವರೂ ಕಾರ್ಯದರ್ಶಿಗಳಾದ [illegible] ಬಾಯಿ [illegible] ತಾ ೪ರಂದು ಧಾರವಾಡದಲ್ಲಿ ಸಂಚಾರ ಮಾಡಿದರು.

ಬಳ್ಳಾರಿ

ಗೆಳೆಯರ ಗುಂಪು

ಬಳ್ಳಾರಿ ಕನ್ನಡಿಗರ ಗುಂಪಿನ ಸಭೆಯೊಂದು ಸೇರಿ ಕನ್ನಡದ ಉದ್ಧಾರದ ಬಗ್ಗೆ ಹಲವು ನಿರ್ಣಯಗಳು ಮಂಜೂರಾದುವು

ಮುಂಬಾಯಿ

ಧರ್ಮಾರ್ಥ ಯೋಗಿಕ ಉಪಚಾರ

ಪ್ರತಿ ಒಂದು ಆದಿತ್ಯವಾರ ಬೆಳಿಗ್ಗೆ ಆರೂವರೆ ಗಂಟೆಯಿಂದ ಹತ್ತು ಗಂಟೆಯ ವರೆಗೆ ಅಸಾಧ್ಯ ರೋಗ ನಿವಾರಣೆ ಸಲುವಾಗಿ ಯೋಗೋಪಚಾರ, ಜಲೋಪಚಾರ, ಮಾನಸಿಕ ಉಪಚಾರ ಮತ್ತು ಸೂರ್ಯ ಕಿರಣ ಚಿಕಿತ್ಸಾ ಧರ್ಮಾರ್ಥ ಕೊಡಲ್ಪಡುತ್ತದೆ ಮತ್ತು ಮುಮುಕ್ಷು ಸ್ತ್ರೀ ಪುರುಷರಿಗೆ ಯೋಗದ ಅಂತರಂಗ ಸಾಧನೆಗಳನ್ನು ಕಲಿಸಲ್ಪಡುತ್ತದೆ.

ಸಂಚಾಲಕ,—ಯೋಗಿರಾಜ ಉಮೇಶಚಂದ್ರ

ಸ್ಥಳ—ಶ್ರೀ ರಾಮತೀರ್ಥ ಯೋಗಾಶ್ರಮ ಸೆಕ್ಷರಿಯ ಬಿಲ್ಡಿಂಗ್, ಸೆಂಡ್ ಹರ್ಸ್ಟ್ ರೋಡ್, ಪ್ರಾರ್ಥನಾ ಸಮಾಜ ಟ್ರಾಮ ಜಂಕ್ಷನಿನ ಹತ್ತಿರ. ಮುಂಬಯಿ ೪.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ವಿದೇಶದಲ್ಲಿರುವ ಹಿಂದೀಯರ ದುರಂತ ಸಂಕಷ್ಟ!

ಫಾರ್ವರ್ಡ್ ಬ್ಲಾಕಿಗೆ ಕಾಂಗ್ರೆಸಿನ ಬೆಂಬಲವಿಲ್ಲ   ಜಪಾನಿನ ಯುದ್ಧದಲ್ಲಿ ಭಾರತವು ಬಲಿಯಾದೀತೆ?

ಬರುವ ಕಾಂಗ್ರೆಸಿನಲ್ಲಿ ಸಿನೇಮಾ ಪ್ರದರ್ಶನ -- ಗಾಂಧಿಜಿಯವರು ಹಿಂದೂದೇಶವನ್ನು ಆಳುತ್ತಾರೆ

ಇಟೆಲಿಯನರು ಹಿಂದೀಯರನ್ನು ಪೀಡಿಸುತ್ತಿದ್ದಾರೆ

ಅಖಿಲಭಾರತ ಕಾಂಗ್ರೆಸು ಕಮಿಟಿಗೆ ಬಂದ ವಾರ್ತೆಯಂತೆ, ೧೩೦೦ ಮಂದಿ ಸಂಸ್ಕೃತಿಯುಳ್ಳ ವಿದ್ಯಾವಂತರಾದ, ಅಬಿಸೀನಿಯಾ, ಇಟೆಲಿಯನ್ ಸೋಮಾಲಿಲೇಂಡ್, ಎರಿಟ್ರಿಯಾ, ಮೊದಲಾದೆಡೆಗಳಲ್ಲಿರುವ ಹಿಂದೀಯರನ್ನು ಅನ್ಯಾಯದ ನಿರ್ಬಂಧಗಳನ್ನು ಹಾಕಿ ಇಟೆಲಿಯಾನರು ಪೀಡಿಸುತ್ತಿದ್ದಾರೆಂದು ತಿಳಿಯುತ್ತದೆ!

ಅವರಿಗೆ ಹೋಟೆಲು, ಸಿನೆಮಾ, ನಾಟಕ, ಮೊದಲಾದೆಡೆಗಳಲ್ಲಿ ಪ್ರವೇಶವಿಲ್ಲದಂತೆಯೂ, ಮೊದಲನೇ ಮತ್ತು ಎರಡನೇ ಕ್ಲಾಸಿನ ಗಾಡಿಗಳಲ್ಲಿ ಪ್ರಯಾಣಮಾಡದಂತೆಯೂ, ಯುರೋಪಿಯನರು ಹೋಗುವ ಸಾರ್ವಜನಿಕ ರಸ್ತೆಗಳಲ್ಲಿ ನಡೆಯದಂತೆಯೂ, ಮುಖ್ಯ ಪೋಸ್ಟ್ ಮತ್ತು ಟೆಲಿಗ್ರಾಫ್ ಆಫೀಸುಗಳನ್ನು ಪ್ರವೇಶಿಸದಂತೆಯೂ, ಪ್ರಮುಖ್ಯ ವ್ಯಾಪಾರ ನಡೆಸದಂತೆಯೂ, ವಿಶ್ರಾಂತಿಭವನಗಳಲ್ಲಿ ಉಳಕೊಳ್ಳದಂತೆಯೂ, ನಾನಾ ವಿಧವಾಗಿ ಉಪದ್ರವನ್ನು ಕೊಡುತ್ತಿದ್ದಾರೆ

ಎರಡು ವರ್ಷಗಳಿಂದ ಈ ಅನ್ಯಾಯವನ್ನು ತಡೆಯಲು ಹಿಂದೀಯರು ಯತ್ನಿಸುತ್ತಿದ್ದರೂ ಅವರು ಜಯಶಾಲಿಗಳಾಗಲಿಲ್ಲ

ಜಪಾನಿನೊಡನೆ ಯುದ್ಧವಾದರೆ ಹಿಂದೂದೇಶವೂ ಬಲಿಯಾದೀತೇ?

ಸಿಂಗಾಪುರದಲ್ಲಿ ಬ್ರಿಟಿಷ್ ಮತ್ತು ಪ್ರೆಂಚರ ಸಂಯುಕ್ತ ಸೈನ್ಯಖಾತೆಯ ಅಧಿಕಾರಿಗಳ ಸಂಭಾಷಣೆಯು ಈ ತಿಂಗಳ ಮೊದಲನೆಯ ವಾರದಲ್ಲಿ ನಡೆಯಿತು ಅದರ ಪರಿಣಾಮ ಈ ನಿಶ್ಚಯವು ಮಾಡಲಾಗಿದೆಯೆಂದು ತಿಳಿಯುತ್ತದೆ –

"ಜಪಾನಿನೊಡನೆ ಯುದ್ಧವು ಆರಂಭವಾದ ಕ್ಷಣದಲ್ಲಿ, ಹಿಂದೂದೇಶವೂ ಅದರ ಸಂಪೂರ್ಣ ಸೈನ್ಯಶಕ್ತಿಯಿಂದ, ಆಕಾಶ, ಜಲ, ಭೂಮಿಗಳೆಲ್ಲಾ ಕಡೆಗಳಲ್ಲಿಯೂ ಜಪಾನಿನೊಡನೆ ಹೆಣಗಾಡಲು ಸಿದ್ಧವಾಗಬೇಕು

ಬ್ರಿಟಿಷ್ ಮತ್ತು ಪ್ರೆಂಚ್ ಸೈನ್ಯಗಳು ಎಡ್ಮಿರಲ್ ಸರ್ ಪೆಸ್ಸಿನೋಟ್ಸ್ ಎಂಬವರ ಏಕ ಸೈನ್ಯಾಧಿಕಾರಿಯ ಕೈಕೆಳಗೆ ಯುದ್ಧಮಾಡುವುವು

ನೌಕಾಬಲ, ಭೂಮಿಬಲ, ವಿಮಾನಬಲಗಳನ್ನು ಹೆಚ್ಚಿಸುವುದೂ, ಚೈನಾಸಾಗರವನ್ನು ಭದ್ರತೆಯಿಂದ ಕಾಯುವುದೂ, ಸಿಂಗಾಪುರ, ಹೊಂಕೋಂಗಗಳನ್ನು ರಕ್ಷಿಸುವುದೂ, ಈ ಸಂಯುಕ್ತ ಸೈನಿಕ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಯಿತೆಂದು ತಿಳಿಯುತ್ತದೆ!

ಯುದ್ಧವು ಸುರುವಾದಲ್ಲಿ, ಕಲಹಕಂಟಕರಾದವರನ್ನು ಘುಂಡುವರಿಯದಂತೆ ತತ್ಕ್ಷಣವೇ ತಡೆಯಲಾಗುವುದು ಹಿಂದೂದೇಶದ ಪೂರ್ವಭಾಗದಲ್ಲಿ ಯಾವ ಬೆದರಿಕೆಯೂ ಇರಲಾರದೆಂದೂ ಊಹಿಸಲಾಗಿದೆ! ಪೂರ್ವಭಾಗದಲ್ಲಿ ಯುದ್ಧವು ಆರಂಭವಾದರೆ, ಕಲ್ಕತ್ತದಿಂದ ಸೈನಿಕರು ಪೆನಾಂಗಿಗೂ, ಸಿಂಗಾಪುರಕ್ಕೂ, ವಿಮಾನಗಳು ಮಲಯಾಕ್ಕೂ ಕಳುಹಿಸಲ್ಪಡುವವೆಂದು ನಿರ್ಣಯವಾಯಿತು.

ಮಹಾತ್ಮರು ಗಡಿನಾಡಿಗೆ ತೆರಳಿದರು

ಮಹಾತ್ಮ ಗಾಂಧಿಯವರು ತಾ. ೫ನೇ ದಿನ ಪತ್ನಿಸಹಿತರಾಗಿ, ಅನುಯಾಯಿಗಳಾದ ಶ್ರೀ ಮಹಾದೇವ ದೇಸಾಯಿಗಳೊಡನೆ ಗಡಿನಾಡಿನ ಸಂಚಾರಕ್ಕಾಗಿ ತೆರಳಿದರು. ಅವರು ಅಲ್ಲಿ ಒಂದು ತಿಂಗಳ ವರೆಗೆ ಉಳಕೊಳ್ಳುವರು. ಅವರ ಹೆಚ್ಚಿನ ಸಮಯವನ್ನು ಅವರು ಅಲ್ಲಿ ಹಜಾರ ಜಿಲ್ಲೆಯಲ್ಲಿಯೇ ಕಳೆಯುವರು ಅಲ್ಲಿಂದ ಅವರು ಆಗೋಸ್ತು ತಿಂಗಳಲ್ಲಿ ವಾರ್ಧಾಕ್ಕೆ ಹಿಂತಿರಳುವರು.

ಮಹಾತ್ಮಾಜಿಯವರನ್ನು ತಕ್ಷಶಿಲೆಯಲ್ಲಿ ಗಡಿನಾಡಿನ ಗಾಂಧಿಗಳಾದ ಖಾನ್ ಅಬ್ದುಲ್ ಗಫರ್ ಖಾನರು ಭೇಟಿಯಾಗುವರು

ಮಹಾತ್ಮಾಜಿಯವರು ತಮ್ಮ ಆರೋಗ್ಯ ಸುಧಾರಣೆಗಾಗಿಯೂ, ಹಜಾರಾ ಜಿಲ್ಲೆಯ ಉಣ್ಣೆಯ ಕೈಗಾರಿಕೆಯನ್ನು ಉತ್ಸಾಹಗೊಳಿಸಲಿಕ್ಕಾಗಿಯೂ ಅಲ್ಲಿಗೆ ತೆರಳಿರುವರೆಂದು ತಿಳಿಯುತ್ತದೆ! ಗಾಂಧಿಜಿಯವರು ಗಡಿನಾಡಿನ ಪ್ರಧಾನ ಮಂತ್ರಿಗಳನ್ನೂ ಇತರ ಮಂತ್ರಿಗಳನ್ನೂ ಸಂದರ್ಶಿಸುವರು

14 ರಶ್ಯಾವಿಮಾನಗಳನ್ನು ಗುಂಡೆಸೆದು ಕೆಡವಿದರು

ಮಂಚುಕೋ ಮಂಗೋಲ ಗಡಿಯಲ್ಲಿ ಜಪಾನಿಯರಿಗೂ ರಶ್ಯನರಿಗೂ ಕಲಹವಾಗುತ್ತಿದೆಯಷ್ಟೆ? ಜಪಾನಿನ ವರ್ತಮಾನದಂತೆ ೧೪ ರಶ್ಯದ ವಿಮಾನಗಳ ಜಪಾನೀಯನರಿಂದ ಗುರಿಯಿಕ್ಕಿ ಕೆಡಹಲ್ಪಟ್ಟಿವೆಯೆಂದು ತಿಳಿಯುತ್ತದೆ!

ಬಲಪಕ್ಷದ ಮುಖಂಡರು ವಿಶ್ರಾಂತಿ ಹೊಂದಲಿ!

ಮಹಾಕೋಸಲ ಯುವಕ ಪರಿಷತ್ತಿನ ಉದ್ಘಾಟನಾ ಸಮಾರಂಭದ ಭಾಷಣದಲ್ಲಿ ಶ್ರೀ ಸುಭಾಷ ಬೋಸರು "ಇಂದು ರಾಷ್ಟ್ರವು ಸಂಪೂರ್ಣ ಸ್ವರಾಜ್ಯಕ್ಕಾಗಿ ಮುಂದುವರಿಯಲು ಸಿದ್ಧವಿದೆ, ಆದರೆ ಧುರೀಣರು ಹೆಜ್ಜೆ ಮುಂದಿಡಲು ಭಯಪಡುತ್ತಾರೆ' ಬಲಪಕ್ಷದ ನಾಯಕರ ರಾಜಕೀಯದಿಂದ ವಿಶ್ರಾಂತರಾಗುವುದು ಒಳ್ಳೆಯದು ಹೀಗೆ ಗೌರವದಿಂದಲೂ ಶಾಂತಿಯಿಂದಲೂ ಅವರು ವಿಶ್ರಾಂತಿ ಪಡೆದು ಯಾರಿಗೆ ಮುಂದುವರಿಯಲು ಆಸಕ್ತಿ ಉಂಟೋ, ಅಂಥಾ ಯುವಕರಿಗೆ ಅವಕಾಶವನ್ನು ಕಲ್ಪಿಸಿಕೊಡುವುದ, ಬಲಪಕ್ಷದ ಮುಖಂಡರಿಗೆ ನ್ಯಾಯವಾಗಿದೆ"ಎಂದರು ಎಡಪಕ್ಷ ಬಲಪಕ್ಷಗಳ ವ್ಯತ್ಯಾಸದ ಕುರಿತು, ಫಾರ್ವರ್ಡ್ ಬ್ಲಾಕಿನ ಕಾರ್ಯಕ್ರಮ ಧೋರಣೆಯ ಕುರಿತು ೬೦ ನಿಮಿಷದ ವರೆಗೆ ಉದ್ದಾನು ಭಾಷಣವಿತ್ತರು

ಫಾರ್ವರ್ಡ್ ಬ್ಲೋಕಿಗೆ ಕಾಂಗ್ರೆಸಿನ ಸಹಾಯವಿಲ್ಲ

ಮದ್ರಾಸು ಪ್ರಾಂತ್ಯಕ್ಕೆ ಬರಲಿರುವ ಬಾಬು ಸುಭಾಷ ಬೋಸರ ಕಾರ್ಯಕ್ರಮದ ಕುರಿತು ತಮಿಳ ನಾಡು ಕಾಂಗ್ರೆಸು ಕಮಿಟಿಯು ಸುಭಾಷ ಬೋಸರ ಫಾರ್ವರ್ಡ್ ಬ್ಲೋಕಿನ ಸಂಘಟನೆಯಲ್ಲಾಗಲಿ, ಅಭಿವೃದ್ಧಿಯಲ್ಲಾಗಲೀ ಕಮಿಟಿಗಳು ಸಹಕರಿಸಬಾರದಾಗಿಯೂ, ವ್ಯಕ್ತಿ ಜವಾಬ್ದಾರಿಯಿಂದ ಯಾರಾದರೂ ಸಹಕರಿಸುವುದಿದ್ದರೆ ಅದು ಅವರ ಇಷ್ಟವೆಂದೂ ಪ್ರಕಟನೆಯನ್ನು ಕೊಟ್ಟಿರುತ್ತಾರೆ ಇಂದಿನ ಕಾಂಗ್ರೆಸಿನ ದುರೀಣತೆಯಲ್ಲಿ ಅತೃಪ್ತಿಗೊಂಡ ಸುಭಾಷ ಬೋಸರು ತನ್ನ ಪಕ್ಷವನ್ನು ಪ್ರಬಲಗೊಳಿಸುವ ಧ್ಯೇಯದಿಂದ ಬರುವ ಕಾರಣ, ಅವರ ಧ್ಯೇಯವೇ ಕಾಂಗ್ರೆಸಿನ ಹಿತದೃಷ್ಟ್ಯಾಸಮಂಜಸವಲ್ಲದಿರುವಾಗ, ಅವರ ಹಿಂದಿನ ಸ್ವಾರ್ಥತ್ಯಾಗಗಳನ್ನು ಗೌರವಿಸಿ ಅವರ ಪಕ್ಷಕ್ಕೆ ಸಹಾಯ ಕೊಡುವುದು ನಿಷಿದ್ಧವೆಂದು ಪ್ರಕಟಿಸಲ್ಪಾಗಿದೆ. ಹಾಗೂ ಕಾಂಗ್ರೆಸಿನ ಪ್ರಮುಖ ಮುಂದಾಳುಗಳಾದ ಅವರಿಗೆ ಸಂಭ್ರಮದ ಸ್ವಾಗತವನ್ನು ಕೊಡಲು ಯಾರೂ ಮರೆಯಬಾರದೆಂದೂ ಪ್ರಕಟನೆಯು ತಿಳಿಸುತ್ತದೆ.

ಬೊಂಬಯಿಯಲ್ಲಿ ಪಾನನಿಷೇಧ

ಇನ್ನಲ್ಪ ಅವಧಿಯಲ್ಲಿಯೇ ಬೊಂಬಯಿ ನಗರವು ಸಂಪೂರ್ಣ 'ಒಣಗಿ' ಹೋಗುವುದು ಎಲ್ಲಾ ಮದ್ಯದಂಗಡಿಗಳು, ಸಾವಿರಾರು ಮಾದಕ ಭವನಗಳು ಭದ್ರವಾಗಿ ಮುಚ್ಚಲ್ಪಡುವುವು ಡಾ. ಗಿಲ್ಡರ್ ಮತ್ತು ಶ್ರೀ ಮುನ್ಷಿಯವರು ಪೋಲಿಸು ಮತ್ತು ಸ್ವಯಂಸೇವಕರ ದಳದೊಡನೆ ಈ ಕಾನೂನನ್ನು ಜಾರಿಗೆ ತರುವಲ್ಲಿ ಅತ್ಯಂತ ಆಸಕ್ತಿಯಿಂದ ದುಡಿಯುತ್ತಿದ್ದಾರೆ

ಲೆಕ್ಕವಿಲ್ಲದಷ್ಟು ಬಸ್ಸುಗಳೋ, ಟ್ರೈನುಗಳೋ ಬೊಂಬಯಿನಗರಕ್ಕೆ ಬರುತ್ತಿವೆ, ಹಾಗಾಗಿ ಹೊರಗಣಿಂದ ಕಳ್ಳತನದಲ್ಲಿ ಮದ್ಯವನ್ನು ಯಾರಾದರೂ ತರಿಸುತ್ತಾರೋ ಎಂದು ಪರೀಕ್ಷಿಸಲು ಪ್ರತಿಯೊಬ್ಬ ಪ್ರಯಾಣಿಕನನ್ನೂ ಪರೀಕ್ಷಿಸಬಹುದಾಗಿ ಕಠಿಣ ಆಜ್ಞೆಯಾಗಿದೆ ಪೋಲೀಸು ದಳವು ಆ ಸ್ಥಳಗಳಲ್ಲಿ ತೆರದ ಕಣ್ಣಿನಿಂದ ಕಾಯುತ್ತಿರುವರು. ಕೆಲವು ಸದ್ಗೃಹಸ್ಥರನ್ನ ಕಳ್ಳತನ ನಡೆಸುವ ಜನರ ಪತ್ತೆಹಚ್ಚಲು ನಿಯಮಿಸಲಾಗುವುದು ಪ್ರತಿಯೊಂದು ಬಂದರಕ್ಕೆ ಬರುವ ಹಡಗನ್ನೂ ಪರೀಕ್ಷಿಸಲಾಗುವುದು ಪೋಲೀಸುದಳವನ್ನು ಸರಕಾರವು ಹೆಚ್ಚಿಸಿದ್ದು ಮಾತ್ರವಲ್ಲದೆ ೮೦೦ ಮಂದಿ ಸ್ವಯಂಸೇವಕರಾಗಿ ಕೆಲಸಮಾಡಲು ಒಪ್ಪಿರುವರು ಅವರಲ್ಲ ಹಲವರು ವಿದ್ಯಾರ್ಥಿಗಳೇ, ವಕೀಲರು ಡಾಕ್ಟರರೇ ಮೊದಲಾದವರಿರುವರ, ೨೦,೦೦೦ ಮಂದಿಗೆ ಮಿಕ್ಕದ ಬೇರೆ ಬೇರೆ ಸಂಸ್ಥೆಗಳ ಸ್ವಯಂಸೇವಕರು ನೆರವಾಗುವರು

ಮದ್ಯಪಾನ ನಿಷೇಧದ ಪ್ರಚಾರ ಮಾಡಲು ಅಲ್ಲಲ್ಲಿ ಸ್ವಯಂಸೇವಕರು ಬಹಳ ಉತ್ಸಾಹದಿಂದ ಕೆಲಸಮಾಡುತ್ತಿದ್ದಾರೆ. ಪೋಲೀಸರಿಗೆ ಪ್ರತ್ಯೇಕ ತರಬೇತಿ ಕೊಡಲಾಗಿದೆ

ಸ್ವಾಮಿಯ ಸಹಜಾನಂದ ಜಾತಿಯವರು!

ಬಿಹಾರದಲ್ಲಿರುವ ಸ್ವಾಮಿ ಸಹಜಾನಂದರ ಜಾತಿಯವರ ಜೀವನದಲ್ಲಿ ಆದ ಅದ್ಭುತ ಮಾರ್ಪಾಟು ಶ್ರವಣೀಯವಾದ ವಾರ್ತೆಯಿದು

ಇವರು ಬಿಹಾರಿನ ಕಿಸಾನ್ (ಕೃಷಿಕ) ಮುಖಂಡರು ಹೆಸರು ರಾಹುಲ ಸಂಕೀರ್ತ್ಯಾಯನ ಎಂದು ಬಹು ಸಮಯದಿಂದ ಅವರೂ ಸನ್ಯಾಸಿಯ ವೇಷ ಧರಿಸುತ್ತಿದ್ದರು' ಆದರೆ ಇತ್ತೀಚೆಗೆ ತನ್ನ ವೇಷವನ್ನು ಕಳಚಿಬಿಸುಟ್ಟು, ಶುದ್ಧ ಗೃಹಸ್ಥನಾದ ವಿಷಯವಾಗಿ ಸಾರ್ವಜನಿಕರ ಕಟುವಾದ ಟೀಕೆಗೆ ಗುರಿಯಾಗಿದ್ದಾರೆ

ಬಹಳ ಮಂದಿ ಅವರು ಒಬ್ಬ ಪರಿಶುದ್ಧನಾದ ಸರ್ವಸಂಗ ಪರಿತ್ಯಕ್ತನಾದ ಸನ್ಯಾಸಿಯೆಂದೇ ತಿಳಿದಿದ್ದರು, ಆದರೆ ಅವರ ರಶ್ಯಾ ಪತ್ನಿಯೊಬ್ಬಳೂ ಒಂಬತ್ತು ತಿಂಗಳ ಮಗನ ಸ್ತೆತ್ತಿಕೊಂಡು ಈಗ ಬಂದಿರುವುದಾಗಿ ತಿಳಿದು ಬರುತ್ತದೆ'

ರಾಮುಗರ ಕಾಂಗ್ರೆಸಿನಲ್ಲಿ ಸಿನೇಮಾ ಪ್ರದರ್ಶನ

ರಾಮುಗರದಲ್ಲಿ ಆಗಲಿರುವ ಕಾಂಗ್ರೆಸಿನ ಸಭೆಯಲ್ಲಿ ಗ್ರಾಮ ಕೈಗಾರಿಕೆಗಳಿಗೆ ಸಂಬಂಧಿಸಿದ ಇನ್ನೂ ಅನೇಕ ಪ್ರದರ್ಶನಗಳು ತೋರಿಸಲ್ಪಡುವವು ಕಾಂಗ್ರೆಸಿನ ಇತಿಹಾಸದಲ್ಲಿ ಇದೇ ಮೊದಲನೆಯ ಸಲವಾಗಿದೆ

ಅಖಿಲಭಾರತ ಚರಕಾ ಸಂಘದ ಮದುಬಂನುಶಾಖೆಯಲ್ಲಿ ಕೂಡಿದ ಸಭೆಯಲ್ಲಿ, ಹಲವು ಮಂದಿ ಕವಿಗಳು, ಗ್ರಂಥಕರ್ತರೂ ಕೂಡಿ ಅ ಕುರಿತು ಉತ್ತಮ ಚಿತ್ರಗಳನ್ನು ತಯಾರಿಸುವ ಸಲುವಾಗಿ ಕಂಪೆನಿಯವರನ್ನು ಕಂಡು ಮಾತನಾಡುವುದೆಂದು ನಿರ್ಣಯವಾಯಿತು

ಬೀಹಾರದ ಸುಪ್ರಸಿದ್ಧ ಚಿತ್ರ ಕಲಾವಿದರಾದ ಶ್ರೀ ಉಪೇಂದ್ರ ಮಹಾರಥಿಯವರನ್ನು ಕಾಂಗ್ರೆಸ್ ನಗರದ ಅಲಂಕಾರಮಾಡಲು ನಿರ್ಣಯಿಸಿದೆ.

ಗಾಂಧಿಜಿಯವರು ಹಿಂದೂದೇಶವನ್ನು ಆಳುತ್ತಾರೆ!

ಮೆಂಚಸ್ಟರ್ ಗಾರ್ಡಿಯನ್ ಪತ್ರಿಕೆಯು ತನ್ನ ಅಗ್ರಲೇಖನದಲ್ಲಿ ಹೀಗೆಂದು ಬರೆಯುತ್ತದೆ "ಗಾಂಧಿಜಿಯವರ ತತ್ವದ ಶುದ್ಧತೆಯನ್ನು ತಿಳಿಯುವುದು ಅವರ ಅನುಯಾಯಿಗಳಿಗೇ ಕಷ್ಟವಾಗುತ್ತದೆ. ಅವರು ಪ್ರತಿಸಲವೂ ಕಾಂಗ್ರೆಸಿನಿಂದ ವಂಚನೆಹೋಗಬೇಕೆಂದೂ, ಅಲ್ಲಿಂದ ಕೆಟ್ಟ ಮನುಷ್ಯರನ್ನು ದೂರವಾಗಿರಿಸಬೇಕೆಂದೂ ಹಾಗಾದರೆ ಮಾತ್ರ ನಮಗೆ ಜಯವುಂಟೆಂದೂ ಹೇಳುತ್ತಾರೆ. ಆದರೆ ಅವರ ಅನುಯಾಯಿಗಳು ಇದನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾಗಿದ್ದಾರೆ, ರಾಜಕೀಯ ಪಕ್ಷದಲ್ಲಿ ಯಾವಾಗಲೂ ಒಂದು ರೀತಿಯ ವಂಚನೆಗಳು ಅಲ್ಪಸ್ವಲ್ಪ ಆಗುವುದುಂಟೆಂ ಅವರ ಅಭಿಪ್ರಾಯ ಆದರೆ ಗಾಂಧಿಜಿಯವರು ತನ್ನ ಅಹಿಂಸಾಶಸ್ತ್ರದ ಬಲವಾದ ಸಹಾಯದಿಂದ ಇಂದೂ ಜನರನ್ನು ಆಳುತಿದ್ದಾರೆ ಬ್ರಿಟಿಷರನ್ನು ಎದುರಿಸಲು ಈ ಅಹಿಂಸೆಯೇ ಸಮರ್ಥವೆಂದು ಅವರ ಅಭಿಪ್ರಾಯ "

ಗಾಂಧಿಜಿಯವರ ಆಜ್ಞೆ ಮೀರಿದುದು ಉಪವಾಸ!

ಕಾಂಗ್ರೆಸ ಮಂತ್ರಿಮಂಡಲಗಳು ಅಧಿಕಾರದಲ್ಲಿರುವ ಪ್ರಾಂತಗಳಲ್ಲಿ, ಅದರಲ್ಲಿಯೂ ಬೊಂಬಾಯಿ ಪ್ರಾಂತದಲ್ಲಿ ಒಂದು ಚಳುವಳಿ ನಡೆಯುತ್ತಿದೆಯೆಂದೂ, ಇದು ಕಾಂಗ್ರೆಸಿನ ನ್ಯಾಯನೀತಿ ಅಹಿಂಸಾಧೋರಣೆಗೆ ವಿರೋಧವೆಂದೂ, ಇದನ್ನು ಗಾಂಧಿಜಿಯವರು ನಿಲಿಸದಿದ್ದರೆ, ಅವರ ಶೀಘ್ರವಾಗಿ ಅಶ್ರದ್ಧ ಮುಂದುಗಡೆ ಒಂದು ತಿಂಗಳ ಉಪವಾಸ ಬೀಳುವುದಾ ಗಿಯೂ ಪೂನಾದ ಶ್ರೀ ಎ ವಿ ಸೌತೆ ಎಂಬವರು ಗಾಂಧಿಜಿಯವರಿಗೆ ಬರೆದಿರುವರು.

ಮದ್ಯ ತಯಾರಿಸುವವರಿಗೆ ಉದ್ಯೋಗವಿದೆ?

ಸಂಯುಕ್ತ ಪ್ರಾಂತದ ಜಿಲ್ಲೆಗಳ ಡಿಪ್ಯುಟಿ ಕಮಿಶನರು ವರದಿಯಿಂದ ತಿಳಿಯುವುದೇನೆಂದರೆ ತಾಳೆ ಮರ ಮೊದಲಾದವುಗಳಿಂದ ಕಳ್ಳನ್ನು ತೆಗೆದ ಜೀವನ ನಡೆಸುತ್ತಿದ್ದವರು ಮದ್ಯಪಾನ ನಿಷೇಧದಿಂದ ನಿರುದ್ಯೋಗಿಗಳಾಗಿ ಸಂಭವವಿಲ್ಲವೆಂದೂ, ಕಳ್ಳಿನ ಬೆಲ್ಲದ ಹೊಸ ಉದ್ಯೋಗವನ್ನು ಆರಂಭಿಸುವುದರಿಂದ ಎಲ್ಲರೂ ಸಾಕಷ್ಟು ಸಂಪಾದನೆ ಮಾಡುವರೆಂದೂ ತಿಳಿದಿದೆ ಹೀಗೆ ಬೆಲ್ಲ ಮಾಡುವುದರಿಂದ, ವಿದೇಶೀ ಸಕ್ಕರೆಗಳಿಗಾಗಿ ವ್ಯಯವಾಗುವ ಹಣವು ಉಳಿದು, ದೇಶದ ಸಂಪತ್ತು ಬೆಳೆದಂತಾಗುವುದು ಹಳ್ಳಿಯ ಕುಂಬಾರರು, ಮರಕಡಿವವರು, ಮತ್ತು ಕಮ್ಮಾರನೇ ಮೊದಲಾದವರಿಗೂ ಉದ್ಯೋಗ ಸಿಗುತ್ತದೆ

ಜಗದೀಶ ಚಂದ್ರಬೋಸರ ಒಂದು ಲಕ್ಷದ ನಿಧಿ!

ಪ್ರಾಂತಗಳ ಅನ್ಯೋನ್ಯ ಸೌಹಾರ್ದ ಸಂಬಂಧಕ್ಕಾಗಿ ಅರ್ಪಿಸಲಾದ ಭಾರತದ ಸುಪ್ರಸಿದ್ಧ ವೈಜ್ಞಾನಿಗಳಾಗಿದ್ದ ದಿವಂಗತ ಜಗದೀಶ ಚಂದ್ರಬೋಸರ ಒಂದು ಲಕ್ಷ ರೂಪಾಯಿಗಳ ನಿಧಿಯನ್ನು ಬೀಹಾರ ಮತ್ತು ಬಂಗಾಳ ಪ್ರಾಂತಗಳ ಸೌಹಾರ್ದಕ್ಕಾಗಿ ವ್ಯಯಮಾಡುವ ವಿಷಯವಾಗಿ ಪಾಟ್ನಾದಲ್ಲಿ ಸೇರಿದ ಬಂಗಾಳ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಸಭೆಯಲ್ಲಿ ಚರ್ಚಿಸಲಾಯಿತು ಈ ನಿಧಿಗೆ ಬಾಬೂರಾಜೇಂದ್ರ ಪ್ರಸಾದರೇ ಅಧಿಕಾರಿಗಳಾಗಿರುತ್ತಾರೆ ಜಹರಿಯಾ ಕಲ್ಲಿದ್ದಲ್ಲಿನ ಪ್ರಾಂತದಲ್ಲಿ ಅದನ್ನು ಉಪಯೋಗಿಸುವ ಬಗ್ಗೆ ಯೋಚನೆಯೂ ಮಾಡಲಾಯಿತು

ಸುಭಾಷ ಬೋಸರ ವಿಚಿತ್ರ ಧೋರಣೆ

★ ರಾಷ್ಟ್ರಪತಿಗಳ ಆಜ್ಞೆಯನ್ನು ಉಲ್ಲಂಘಿಸಿದರು.
★ ಪಂಡಿತ ನೆಹರುಗಳು ಖಂಡಿಸಿದರು
★ ಎಂ. ಎನ್. ರಾಯಿಗಳು ಸಲ್ಲದೆಂದರು
★ ನಿಷೇಧಿಸಿದವರ ಮೇಲೆ ಶಿಸ್ತು ಜಾರಿಯೆ?



ಕಾಂಗ್ರೆಸು ಎಡಪಕ್ಷದ ಐಕ್ಯ ಸಮಿತಿಯು ಸಭೆ ಸೇರಿ ಮುಂಬಯಿಯ ಅಖಿಲಭಾರತ ಕಾಂಗ್ರೆಸು ಕಮಿಟಿಯಲ್ಲಿ ಮಂಜೂರಾದ ಕೆಲವು ಠರಾವುಗಳನ್ನು ನಿಷೇಧಿಸುವಂತೆ ತಾ. ೯ನ್ನು ಅಖಿಲಭಾರತ ದಿನವನ್ನಾಗಿ ಆಚರಿಸಬೇಕೆಂದು ಪ್ರಕಟನೆ ಹೊರಡಿಸಿತು ಆ ಕುರಿತು ಬಾಬೂ ರಾಜೇಂದ್ರ ಪ್ರಸಾದರು ಈ ರೀತಿಯ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದಾರೆ

"ಬೊಂಬಾಯಿಯ ಅಖಿಲಭಾರತ ಕಾಂಗ್ರೆಸು ಕಮಿಟಿಯ ಸಭೆಯಲ್ಲಿ ಮಂಜೂರಾದ ನಿರ್ಣಯಗಳನ್ನು ಖಂಡಿಸಲು ಜುಲಾಯಿ ೯ರಂದು ಸಭೆ ಸೇರುವ ರೀತಿಯಲ್ಲಿ ಶ್ರೀ ಸುಭಾಷ ಬೋಸರು ಕೊಟ್ಟ ಪ್ರಕಟಣೆಯನ್ನು ನೋಡಿ ನಾನು ಆಶ್ಚರ್ಯಗೊಂಡಿದ್ದೇನೆ ಪ್ರಬಲ ಬಹುಮತದಂತೆ ಆ ಠರಾವುಗಳು ಮಂಜೂರಾಗಿವೆ ಕಾಂಗ್ರೆಸಿನ ಕೈಕೆಳಗಿನ ಪ್ರಾಂತಿಕ ಕಾಂಗ್ರೆಸ ಕಮಿಟಿಗಳು ಮತ್ತು ಕಾಂಗ್ರೆಸು ಕೆಲಸಗಾರರೇ ಹಾಗೇ ಬಹುಮತದಿಂದ ಮಂಜೂರಾದ ಠರಾವುಗಳನ್ನು ನಿಷೇಧಿಸಿದಲ್ಲಿ, ಕಾಂಗ್ರೆಸಿನಲ್ಲಿ ಅವಿಧೇಯತೆಯು ಬೆಳೆದೀತು. ಕಾಂಗ್ರೆಸು ಸಂಸ್ಥೆಯೇ ಸಂಪೂರ್ಣ ಹಾಳಾಗಬಹುದು.

"ಹಾಗಾಗಿ ನಾವು ಎಲ್ಲಾ ಪ್ರಾಂತಿಕ ಕಮಿಟಿಗಳಿಗೂ ಮತ್ತು ಅವುಗಳ ಅಧೀನ ಸಂಸ್ಥೆಗಳಿಗೂ ಮಾತ್ರವಲ್ಲದೆ, ಅದರ ಅಧಿಕಾರೀ ಮಂಡಳಿಗೂ ತಿಳಿಸುವುದೇನೆಂದರೆ ಹೀಗೆ ಕಾಂಗ್ರೆಸಿನಲ್ಲಿ ಆದ ನಿರ್ಣಯಗಳನ್ನು ಖಂಡಿಸುವುದು ಕಾಂಗ್ರೆಸಿಗೆ ಅವಿಧೇಯತೆ ತೋರಿಸಿದಂತೆಯೂ, ಶಿಸ್ತುಭಂಗ ಮಾಡಿದಂತೆಯೂ ಆಗುವುದು. ಅಂತಹ ನಿಷಿದ್ಧ ಸಭೆ ಮತ್ತು ಸಂಘಗಳಲ್ಲಿ ಕಾಂಗ್ರೆಸಿಗೆ ಸೇರಿದವರು ಭಾಗವಹಿಸಲಾರರೆಂದು ನಾನು ಅಪೇಕ್ಷಿಸುತ್ತೇನೆ"

ನೆಹರುಗಳು ಬೋಸರವರ್ತನೆಯನ್ನು ಖಂಡಿಸುತ್ತಾರೆ

ನಿಷೇಧ ಸಭೆಯ ಕುರಿತು ಬೋಸರು ಮಾಡಿದ ತೀರ್ಮಾನದ ಬಗ್ಗೆ ಪಂಡಿತ ನೆಹರುಗಳು ಹೀಗೆಂದು ಹೇಳುತ್ತಾರೆ "ನಾವು ವ್ಯಕ್ತಿಶಃ ಎ ಐ ಸಿ ಸಿಯಲ್ಲಿ ನಿರ್ಣಯವಾದ ಠರಾವುಗಳನ್ನು ಒಪ್ಪುತ್ತೇವೋ ಇಲ್ಲವೋ ಎಂಬುದು ಪ್ರಶ್ನೆಯಲ್ಲ; ಕಾಂಗ್ರೆಸು ಕಮಿಟಿಗಳು ಮತ್ತು ಕಾಂಗ್ರೆಸಿನ ಕೆಲಸಗಾರರು ಎ ಐ. ಸಿ. ಸಿ-ಯ ಠರಾವಿಗೆ ವಿರೋಧ ನಡೆಯುವುದು ಅದರಲ್ಲಿಯೂ ಎ ಐ ಸಿ. ಸಿ ಸದಸ್ಯರೇ ಹೀಗೆ ಅಖಿಲಭಾರತದ ದೃಷ್ಟಿಯಿಂದ ನಿಷೇಧವನ್ನು ಪ್ರದರ್ಶಿಸುವುದು ನ್ಯಾಯವೇ ಎಂಬ ಪ್ರಶ್ನೆ! ಅಖಿಲಭಾರತ ಸಂಸ್ಥೆಯು ನಿರ್ಣಯವನ್ನು ಅದರ ಉಪಸಮಿತಿಗಳು ನ್ಯಾಯವಾಗಿ ಜ್ಯಾರಿಗೆ ತರಬೇಕಾದಲ್ಲಿ ಹೀಗೆ ವಿರೋಧ ವರ್ತಿಸುವಿಕೆಯ ಕುರಿತು ನಾನಿದುವರೆಗೆ ಕೇಳಲೇ ಇಲ್ಲ ಹೀಗೆ ನಿಷೇಧ ಮಾಡಬೇಕೆಂದು ನಿರ್ಣಯಿಸಿದವರು ಗಲಭೆಗೊಂಡು ಹಿಂದ ಮುಂದನು ಯೋಚಿಸದೆ ನಿರ್ಣಯಿಸಿದ್ದಾರೆ ಇದು ದೂರದರ್ಶಿತ್ವವಿಲ್ಲದಂತಹ ಅನ್ಯಾಯವಾಗಿದೆ ನಮ್ಮಲ್ಲಿ ಅನೇಕರು ಪಕ್ಷಗಳಿಗಾಗಿ ದೊಡ್ಡ ವಿಷಯಗಳನ್ನು ಮರೆತಿದ್ದಾರೆ, ಇದು ಯೋಗ್ಯವಲ್ಲ ಇನ್ನೊಂದು ಸ್ವಾರ್ಥತ್ಯಾಗ, ಪ್ರೇಮ ಸಂಕಷ್ಟಗಳಿಂದ ನಾವೆಲ್ಲರೂ ನಿರ್ಮಿಸಿದ ಕಾಂಗ್ರೆಸು ಸಂಸ್ಥೆಗೆ ಹೀಗೆ ಎದುರಾಗುವುದ ಉಚಿತವಲ್ಲ ಹಲವು ಸಲ ಬಲಪಕ್ಷದ ಮುಖಂಡರಿಂದ, ಕಾಂಗ್ರೆಸಿನಲ್ಲಿರುವ ಹೊಸ ಧೋರಣೆಯವರಿಗೆ ಅನ್ಯಾಯವಾಗಿರಬಹುದು ಆದರೆ ಇಂದು ಕಾಂಗ್ರೆಸಿನ ಶಿಸ್ತನ್ನು ಮುರಿಯುವಂತಹ ಕ್ರಾಂತಿಯು ಈ ನಿರ್ಣಯಕ್ಕೆ ಸರ್ವಥಾ ನನ್ನ ಬೆಂಬಲವಿಲ್ಲ ಇದು ನಮ್ಮ ಭವಿಷ್ಯತ್ತನ್ನು ಹಾಳುಮಾಡುವುದು

ಸುಭಾಷರ ಉತ್ತರ

ರಾಷ್ಟ್ರಪತಿಗಳಿಗೆ ಸುಭಾಷ ಬೋಸರು ಈ ರೀತಿ ಉತ್ತರಕೊಟ್ಟಿರುವರು "ನಿಮ್ಮ ಪತ್ರಿಕಾ ಪ್ರಕಟಣೆಯನ್ನು ನೋಡಿದೆ ಎ ಐ ಸಿ ಸಿಯ ಎರಡು ಠರಾವುಗಳನ್ನು ತೆಗೆದುಹಾಕಬೇಕೆಂದು ನಾವು ಕೇಳುತ್ತೇವೆ. ನಮ್ಮ ನಿಷೇಧ ಸಭೆಯನ್ನು ಹಿಂತೆಗೆಯಲು ಸಾಧ್ಯವಿಲ್ಲವೆನ್ನುವುದಕ್ಕೆ ವಿಷಾದಿಸುತ್ತೇನೆ ಶಿಸ್ತಿನ ಹೆಸರಲ್ಲಿ ಪ್ರಜಾಪ್ರಭುತ್ವ ತತ್ವಕ್ಕೆ ಕೊಡಲಿಯಿಡಬೇಡಿ"

ಶ್ರೀ ಎಂ. ಎನ್. ರಾಯಿಗಳ ಅಸಮ್ಮತಿ

ಶ್ರೀ ಎಂ. ಎನ್. ರಾಯಿಗಳು ಸುಭಾಷರು ರಾಷ್ಟ್ರಪತಿಗಳ ಆಜ್ಞೆಯನ್ನು ಉಲ್ಲಂಘಿಸಿ ನಿಷೇಧ ಸಭೆಯನ್ನು ಮಾಡುವ ನಿರ್ಧಾರ ಮಾಡಿದ್ದು ತಪ್ಪೆಂದು ಹೇಳುತ್ತಾರೆ ಪಂಡಿತ ನೆಹರುಗಳಿಗೂ ಅದೇ ಅಭಿಪ್ರಾಯದ ತಂತಿ ಬಿಟ್ಟಿರುತ್ತಾರೆ ಅನೇಕ ಪ್ರಾಂತಿಕ ಕಾಂಗ್ರೆಸು ಕಮಿಟಿಗಳು ನಿಷೇಧಸಭೆ ಮಾಡಬಾರದಾಗಿ ಆಜ್ಞೆ ಹೊರಡಿಸಿವೆ.

ಬೊಂಬಾಯಿಯಲ್ಲಿ ತಾ ೯ರಂದು ಸುಭಾಷ ಬೋಸರ ಅಧ್ಯಕ್ಷತೆಯಿಂದ ನಿಷೇಧ ದಿನಾಚರಣೆಯನ್ನು ಮಾಡಿದರು. ಬೊಂಬಾಯಿ ಪ್ರಾಂತಿಕ ಕಾಂಗ್ರೆಸು ಕಮಿಟಿಯು ಶ್ರೀ ನರಿಮನರೇ ಮೊದಲಾದ ಎಂಟು ಮಂದಿಯ ಮೇಲೆ ಶಿಸ್ತು ಜಾರಿಯ ನೋಟೀಸು ಕೊಟ್ಟಿದೆ.

ಬೋಸರ ಖಂಡಿತ ನಿರ್ಧಾರ

ಸುಭಾಷ ಬೋಸರು ತಾನು ಶಿಸ್ತು ಜ್ಯಾರಿಗೆ ಹೆದರುವುದಿಲ್ಲವೆಂದೂ, ಇಂದಿನ ಕಾಂಗ್ರೆಸಿನ ಬಲಪಕ್ಷದ ಧೋರಣೆಯನ್ನು ಖಂಡಿಸುವುದು ತನ್ನ ಖಂಡಿತ ನಿರ್ಧಾರವೆಂದೂ ಹೇಳುತ್ತಾರೆ

ಬಂಗಾಳ ಸರಕಾರವೂ ರಾಷ್ಟ್ರೀಯ ಯೋಜನಾ ಸಮಿತಿಯೂ

ರಾಷ್ಟ್ರೀಯ ಯೋಜನಾ ಸಮಿತಿಯ ಕಾರ್ಯದೊಡನೆ ಬಂಗಾಳ ಪ್ರಾಂತಿಕ ಸರಕಾರವು ಸಹಕರಿಸುವಿದಿಲ್ಲವೆಂಬ ವಾರ್ತೆಯಲ್ಲಿ ಪ್ರಕಟವಾಗಿರುವುದು ಸರಿಯಲ್ಲವೆಂದು ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಫೊರ್ಮೇಶನ್ ಇವರು ಈ ರೀತಿ ತಿಳಿಸುತ್ತಾರೆ –

ಮದ್ರಾಸು ಮಂತ್ರಿಗಳಾದ ಶ್ರೀ ವಿ. ವಿ ಗಿರಿಯವರು ಬಂಗಾಳದ ಮಂತ್ರಿಗಳಿಗೆ ರಾಷ್ಟ್ರೀಯ ಯೋಜನಾಸಮಿತಿಯ ಕುರಿತು ಒಂದು ಪತ್ರವನ್ನು ಕಳುಹಿಸಿರುವರ ಅದರನ್ನು ಸರಕಾರದ ಸಂಪೂರ್ಣ ಸಹಾಯವೂ, ಅದರ ಅದರ ವೆಚ್ಚಕ್ಕಾಗಿ ಸರಕಾರದ ಆರ್ಥಿಕ ಸಹಾಯವೂ ಕೊಡಲ್ಪಟ್ಟಿತ್ತು ಈ ಕರಿತು ಮುಂದಕ್ಕೆ ವಿವರಗಳನ್ನು ತಿಳಿಯುವರೆ ಕಮಿಟಿಗೆ ಸರಕಾರದಿಂದ ಬರೆಯಲಾಗಿದೆ ಹಾಗಾಗಿ ರಾಷ್ಟ್ರೀಯ ಯೋಜನಾ ಸಮಿತಿಯೊಡನೆ ಬಂಗಾಳ ಮಂತ್ರಿ ಮಂಡಲವು ಸಹಕರಿಸುವುದಿಲ್ಲವೆಂದು ಸತ್ಯವಲ್ಲ ಹೀಗೆಂದು ಪ್ರಕಟಣೆಯ ಸಾರಾಂಶ

ಲಕ್ನೋದಲ್ಲಿ ಪೋಲೀಸರು ಗುಂಡು ಹಾರಿಸಿದರು

ಲಕ್ನೋದಲ್ಲಿ ಗಲಭೆ ಮಾಡುತ್ತಿದ್ದ ಶೀಯಾ ಮುಸಲ್ಮಾನರ ಗುಂಪಿನ ಮೇಲೆ ಪೋಲೀಸರು ಗುಂಡು ಹಾರಿಸಿದುದರ ಕುರಿತು ಸಂಯುಕ್ತ ಪ್ರಾಂತ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಬಹಳ ಚರ್ಚೆ ನಡೆಯಿತು.

ಮುಸಲ್ಮಾನ ಮುಖಂಡರು ಸರಕಾರದ ವರ್ತನೆಯ ಬಗ್ಗೆ ತಮ್ಮ ಅಸಂತೋಷವನ್ನು ಸೂಚಿಸಿದರು.

ಪ್ರಧಾನ ಮಂತ್ರಿಗಳು ಮಾತನಾಡುತ್ತಾ ಅಂತಹ ಪರಿಸ್ಥಿತಿಯಲ್ಲಿ ದೊಡ್ಡ ಗುಂಪನ್ನು ಭಯಂಕರ ಸಂಕಷ್ಟದಿಂದ ವಿಮೋಚನೆಗೊಳಿಸಬೇಕಾದಲ್ಲಿ ಹಾಗೆ ಮಾಡಬೇಕಾಯಿತೆಂದೂ ಮುಸಲ್ಮಾನ ಮುಖಂಡರು ತಮ್ಮ ಪಂಗಡಗಳೊಳಗೆ ಇರುವ ಅಂತಃಕಲಹಗಳನ್ನು ಕಡಿಮೆಯಾಗುವಂತೆ ಯತ್ನಿಸಬೇಕೆಂದೂ ಕೇಳಿಕೊಂಡರು

ಗುಂಡಿನಿಂದ ಗಾಯಗೊಂಡವನೊಬ್ಬನು ತೀರಿಹೋಗಿರುವನು.

ಜರ್ಮನರಿಗೆ ಬ್ರಿಟಿಷರ ಸಂದೇಶ

ಬ್ರಿಟನಿನಲ್ಲಿ ಗಣಿಗಳಲ್ಲಿ ಕೆಲಸ ಮಾಡುವವರ ಸಂಘವು ಜರ್ಮನಿಯ ಗಣಿಯ ಕೆಲಸಗಾರರ ಸಂಘಕ್ಕೆ "ಇಂದಿನ ಸರ್ವಾಧಿಕಾರಿಗಳ ಯುದ್ಧಕಾಂಕ್ಷೆಯ ಧೋರಣೆಯು ಮಹಾಯುದ್ಧವನ್ನು ಉದ್ರೇಕಿಸುವಂತಹುದಾಗಿದೆ. ಅದುದರಿಂದ ಇಂತಹ ಯುದ್ಧಕಂಟಕರನ್ನು ಎದುರಿಸಲು ಮತ್ತು ಜಗತ್ತಿನ ಶಾಂತಿಯನ್ನು

ರಕ್ಷಿಸಲು ನೀವು ನಮಗೆ ನೆರವಾಗಬೇಕು-ಹೀಗೆ ಸಹಾಯಮಾಡಿ ಅಂತರಾಷ್ಟ್ರೀಯ ಐಕ್ಯತೆಗೆ ನೆರವಾದಲ್ಲಿ ನಿಮ್ಮ ರಾಷ್ಟ್ರದಲ್ಲಿಯೂ ಸ್ವಾತಂತ್ರ್ಯವನ್ನು ಸ್ಥಾಪಿಸಲು ನಾವು ಪ್ರತಿಜ್ಞೆ ಹೂಡುತ್ತೇವೆ' ಹೀಗೆಂದು ಸಂದೇಶ ಕಳಿಸಿರುವರು

ಚೈನಾದ ನಿರ್ಧಾರ!

ಚೈನಾ ಯುದ್ಧದ ದ್ವಿತೀಯ ವಾರ್ಷಿಕ ದಿನಾಚರಣೆಯೆಂದು ದಳಪತಿ ಚಿಯಾಂಗ್ ಕೈಷಾಕರವರು ಚೈನೀಯರೆಲ್ಲರೂ ಸ್ವಾತಂತ್ರ್ಯದ ಹೋರಾಟದಲ್ಲಿ ದೃಢನಿಶ್ಚಯದಿಂದ ಇರಬೇಕಾಗಿ ತಮ್ಮ ಸಂದೇಶವನ್ನು ಕಳುಹಿಸಿದ್ದಾರೆ! ಚೈನವು ಜಪಾನಿನೊಡನೆ ಸಂಧಾನ ಮಾಡುವುದೆಂಬ ವಾರ್ತೆಯನ್ನು ಅವರು ಅಬದ್ಧವೆಂದು ಖಂಡಿಸಿದರು

ಜಪಾನು ತನ್ನ ಕಲಹ ಕಂಟಕ ವರ್ತನೆಯನ್ನು ಬಿಡದಿದ್ದರೆ [illegible] ಚೈನಾದ ಕಮಾಂಡರ್ ಜನರಲ್ ಚೆಂಗ್ ಚಾಂಗರು ಭವಿಷ್ಯ ನುಡಿದರು

ನ್ಯೂಯಾರ್ಕಿನಲ್ಲಿ ಅಖಿಲಭಾರತ ಪರಿಷತ್ತು

ಜುಲಾಯಿ ಇಪ್ಪತ್ತರಿಂದ ಆಗಸ್ಟ ತರವರೆಗೆ ನ್ಯೂಯಾರ್ಕಿನಲ್ಲಿ ಅಖಿಲಭಾರತ ಪರಿಷತ್ತು ಒಂದು ಜರುಗುವ ಸಿದ್ಧತೆಯಾಗಿದೆ! ಹಿಂದುದೇಶದ ಬೇರೆ ಬೇರೆ ರಾಜಕೀಯ ದೃಷ್ಟಿಯ ಮುಖಂಡರು ಪರಿಷತ್ತಿಗೆ ಬರುವರಾಗಿ ತಿಳಿದು ಬರುತ್ತದೆ! ಹಿಂದೂದೇಶದ ಭವಿಷ್ಯತ್ತು ಮತ್ತು ಸಂಯುಕ್ತ ದೇಶ ಕದಲುವ ಹಿಂದೀಯರ ಸಮಸ್ಯೆ [illegible] ಚರ್ಚಿಸಲಾಗುವುದ

ಕಡಿಮೆ ಖರ್ಚಿನಲ್ಲಿ ಮದುವೆ

ಲಾಹೋರಿನ ಒಬ್ಬ ಕಾಲೇಜ್ ವಿದ್ಯಾರ್ಥಿಗೂ ಮತ್ತು ಅಲ್ಲಿ ಸಮಾಜಸುಧಾರಕನ ಮಗಳಿಗೂ ಬಹಳ ಕಡಿಮೆ ಖರ್ಚಿನಿಂದ ವಿವಾಹವು ಜರಗಿತು. ಬಂದ ಅತಿಥಿಗಳಿಗೆ ಮಜ್ಜಿಗೆಯ ಉಪಹಾರ ಕೊಡಲಾಗಿತ್ತಂತೆ ವರನಿಗೆ ಬಹಳ ಕಡೆಗಳಿಂದ ಅಭಿನಂದನೆಗಳು ಬಂದಿವೆ [illegible] ಲ್ಲಿ ಪ್ರಾಂತದ ಮಂತ್ರಿಗಳ ಅಭಿನಂದನೆಯೂ ಇತ್ತು ಈ ಮದುವೆಯ ಪ್ರಚಾರವನ್ನು ಅಲ್ಲಿನ ಗ್ರಾಮೋದ್ಧಾರಕ ಸಂಘದವರು ಪ್ರಚಾರಮಾಡಿದ್ದರು.



ಸ್ವದೇಶಾಭಿಮಾನಿ

ತಾರೀಕು ೧೪—೭—೧೯೩೯

ಸುಭಾಷರ ಕ್ರಾಂತಿ!

"ಶಿಸ್ತು ಜಪ್ತಿಗೆ ನಾನು ಭಯಪಟ್ಟಿಲ್ಲ, ಬರಲಿರುವವುಗಳನ್ನು ಧೈರ್ಯದಿಂದ ಎದುರಿಸಲು ಸಿದ್ಧನಿದ್ದೇನೆ." ಹೀಗೆನ್ನುತ್ತಾರೆ ಸುಭಾಷಚಂದ್ರ ಬೋಸರು. ಮುಂಬಯಿಯ ಅಖಿಲಭಾರತ ಕಾಂಗ್ರೆಸು ಕಮಿಟಿಯ ಸಭೆಯಲ್ಲಿ ನಿರ್ಣಯವಾದ ಠರಾವುಗಳನ್ನು ಖಂಡಿಸುವ ನಿಷೇಧ ಸಭೆಯನ್ನು ಅಖಿಲ ಭಾರತದಲ್ಲಿ ತಾ. ೯ರೆಂದು ಜರಗಿಸಬೇಕಾಗಿ ಬೋಸರು ಹೇಳಿಕೆಯೊಂದನ್ನು ಪ್ರಕಟಿಸಿದ್ದು ನ್ಯಾಯವಲ್ಲವೆಂದೂ, ಅದನ್ನು ರದ್ದು ಮಾಡಬೇಕೆಂದೂ ಎಚ್ಚರಿಸಿದರೂ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಬೋಸರು ಅವರ ಹೇಳಿಕೆಯನ್ನು ಅಲ್ಲಗಳೆದರು. ರಾಷ್ಟ್ರಪತಿಗಳು ತಿರಿಗಿ ಒಮ್ಮೆ ವಿವರಿಸಿದರು. ಬೋಸರು ತಾ ೯ರೆಂದು ನಿಷೇಧ ಸಭೆ ಜರುಗಿಸಿಯೇ ಬಿಟ್ಟರು! ಈಗ ತಿರಿಗಿ ಆಗಸ್ಟ ತಾ. ೧೨ರೆಂದು ಅಖಿಲಭಾರತದಲ್ಲಿ 'ರಾಷ್ಟ್ರೀಯ ಸಂಗ್ರಾಮ ದಿನ'ವನ್ನಾಚರಿಸುವುದಾಗಿಯೂ ಹಿಂದೂದೇಶದ ಜನರು ಪೂರ್ಣ ಸ್ವಾತಂತ್ರ್ಯದ ಹೋರಾಟಕ್ಕೆ ಸಿದ್ಧರಿದ್ದಾರೇ ಎಂಬ ಕುರಿತು ನಿರ್ಣಯವನ್ನು ತಿಳಿವ ಸಿದ್ಧತೆ ಮಾಡುವುದಾಗಿಯೂ ಹೇಳುತ್ತಾ, ಇಂದಿನ ಕಾಂಗ್ರೆಸು ಸಂಸ್ಥೆಗೆ ತೀರಾ ಅವಿಧೇಯರಂತೆ ನಡೆಯುತ್ತಾರೆ ನಮ್ಮ ಹಿಂದಿನ ರಾಷ್ಟ್ರಪತಿಗಳು!

ಕಾಂಗ್ರೆಸಿಗಾಗಿ ಬಹಳ ಕಾಲದಿಂದ ಅತುಲ ಸ್ವಾರ್ಥತ್ಯಾಗ ಮಾಡಿದ ಹಾಗೂ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಒಬ್ಬ ಜವಾಬ್ದಾರೀ ಮುಖಂಡರೇ ಹೀಗೆ ಕಾಂಗ್ರೆಸಿನ ನಿಯಮಗಳನ್ನು ಸಾರ್ವಜನಿಕವಾಗಿ ಖಂಡಿಸಿ ಕ್ರಾಂತಿ ಮಾಡುವುದು ಮತ್ತು ಜನಸಮೂಹವನ್ನು ಈ ಬಗೆಯ ಕಾಂಗ್ರೆಸಿನ ನಿಯಮೋಲ್ಲಂಘನೆಯ ಅವಿಧೇಯತೆಗಾಗಿ ತಯಾರು ಮಾಡುವದು ನಿಜವಾಗಿಯೂ ಅತ್ಯಂತ ಶೋಚನೀಯ ವ್ಯಾಪಾರ! ಪಂಡಿತ ನೆಹರೂಗಳ ನಂತೆ "ಇದು ವ್ಯಕ್ತಿಗತವಾದ ಒಪ್ಪಿಗೆಯ ಹೇಳಿಕೆ. ಇದಲ್ಲಿ, ನಮ್ಮೆಲ್ಲರ ಏಕಮಾತ್ರ ಪವಿತ್ರ ಸಂಸ್ಥೆಯಾದ ಕಾಂಗ್ರೆಸಿನ ಗೌರವವನ್ನು ಕೆಡಿಸುವಂತಹ ಈ ರೀತಿಯ ಅವಿಚಾರದ ವರ್ತನೆಯ [illegible] ಪ್ರೇರಣೆಗಳು, ಸಮಾಜ ಸತ್ತಾ [illegible] ಆಗಲಾರದ."

ಪ್ರಧಾನ ಸಂಸ್ಥೆಯು [illegible] ಅಧೀನ ಸಂಸ್ಥೆಗಳ ಪ್ಯಾರಿಗೆ ತರುವುದು, ಆದರಲ್ಲಿಯೂ ಸುಭಾಷ ಬೋಸರಂತಹ ಹಿರಿಯರು [illegible] ಹೊತ್ತವರು ಅದನ್ನು ಪಾಲಿಸುವುದು ಕರ್ತವ್ಯವೆಂಬ ವಿಷಯದಲ್ಲಿ ಸಾಮಾನ್ಯ ರಾಜಕೀಯ ವಿದ್ಯಾರ್ಥಿಯೊಬ್ಬನೂ ಸಂಶಯಗೊಳ್ಳಲಾರನು. ಕಾಂಗ್ರೆಸಿನ ಅಧ್ಯಕ್ಷಪೀಠದಲ್ಲಿದ್ದು, ಇತ್ತಗಿಂಗಿ, ಕಾಂಗ್ರೆಸಿನ ಗೌರವ ಕ್ಕಾಗಿ ಹೋರಾಡಿದ ಸುಭಾಷಬೋಸರೇ ಈ ರೀತಿ ಮುತ್ಸಾಹಿ ವರ್ತಿಸುವುದರಿಂದ ರಾಷ್ಟ್ರದ ಹಿತವಾಗುವ ಬದಲು ಅನಿಷ್ಟವಾಗುವುದೇ ಎಂದು ಹೇಳಬೇಕಾಗಿದೆ. ಸುಭಾಷರಂತಹ ಸುಪ್ರತಿಷ್ಠಿತರಾದವರು ಹೀಗೆ ಕಾಂಗ್ರೆಸು ಸಂಸ್ಥೆಯೊಡನೆ ಕ್ರಾಂತಿಯೆಬ್ಬಿಸುವುದರಿಂದ, ರಾಷ್ಟ್ರದಲ್ಲಿರುವ ಹಲವು ಮಂದಿ ಅವರ ಅನುಯಾಯಿಗಳೂ ಹುಚ್ಚುತನವನ್ನು ತಮ್ಮ ದಾರಿಯಲ್ಲಿ ಎಳೆದ ಅನ್ಯಾಯವನ್ನು ತಿಳಿಯದೇ ತಿಳಿದೂ ಬೋಸರು ಮೂಲಕ ಸಾಗುತ್ತಿರುತ್ತಾರೆ. ಇದನ್ನು ಯೋಚಿಸುವಾಗ ಕಾಂಗ್ರೆಸಿನ ಮುಖಂಡರೆಲ್ಲ ಹೇಳುವಂತೆ "ಚೋರರು ಹುಟ್ಟುಹಾಕುವ ಸ್ವರಾಜ್ಯವೆಂಥದ್ದಾಗುವುದೋ?", ಎಂಬ ಸಂಶಯವು ಹುಟ್ಟುವುದಾಗಿದೆ! ರಾಷ್ಟ್ರದ ಉಚ್ಚ ರಾಷ್ಟ್ರಾಭಿಮಾನಿಗಳಾಗಿದ್ದವರಿಗೆ ಇದು ಭೂಷಣವೆನಿಸಲಾರದು!

ಯಾವ ಸುಭಾಷರು ಮುಂಬಯಿ ನಗರದಲ್ಲಿ ಮದ್ಯಪಾನ ನಿಷೇಧವಾಗುವ ಸಂದರ್ಭದಲ್ಲಿ ತಮ್ಮ ಸಂಪೂರ್ಣ ಹೃದಯದ ಪ್ರೋತ್ಸಾಹವನ್ನೂ ಶುಭಸಂದೇಶವನ್ನೂ ಕಳುಹಿಸಿದ್ದರೋ, ಅಂತಹವರೇ ಇನ್ನೊಂದು ಅಲ್ಪ ಸಮಯದಲ್ಲಿಯೇ ಮುಂಬಯಿ ನಗರದಲ್ಲಿ ಮದ್ಯಪಾನ ನಿಷೇಧವಾಗಿದ ಕಾಂಗ್ರೆಸು ಮಂತ್ರಿಮಂಡಲದ ಕಾರ್ಯವು ಸಲ್ಲದೆನ್ನುವುದನ್ನು ನೋಡಿದರೆ ಅವರ ಇಂದಿನ ಧೋರಣೆಯ ದೂರದರ್ಶಿತ್ವದ ಬಗ್ಗೆ ಸಂದೇಹಗೊಳ್ಳಬೇಕಾಗುತ್ತದೆ. ಯಾವುದನ್ನು ಕಾಂಗ್ರೆಸು ಮಂತ್ರಿಮಂಡಲದ ವೈರಿಗಳು ಹೇಳುತಿದ್ದಾರೋ, ಅದೇ ಮಾತನ್ನು ಸುಭಾಷರು ಉಚ್ಚರಿಸುತ್ತಿರುವದು ಬೋಸರ ಗೌರವಕ್ಕೆ ಸಲ್ಲತಕ್ಕುದಲ್ಲ. ನೆಹರೂಗಳ ಪ್ರಕಟಣೆಯು ಈ ಸಂದರ್ಭದಲ್ಲಿ ನಿಜವಾದ ಮಹತ್ವವುಳ್ಳದ್ದಾಗಿದೆ. 'ಯಾರಿಗೆ ಕಾಂಗ್ರೆಸಿನ ತತ್ವದಲ್ಲಿ ಭಿನ್ನಾಭಿಪ್ರಾಯವುಂಟೋ ಅಂತಹವರು ಅದರ ಶಿಸ್ತನ್ನು ಉಲ್ಲಂಘಿಸಿ, ಕಾಂಗ್ರೆಸಿನಲ್ಲಿರುವ ಮನಸ್ಸು ಮಾಡುವುದಕ್ಕಿಂತ ದೇಶದ ಹಿತಕ್ಕಾಗಿ ಕಾಂಗ್ರೆಸನ್ನು ಬಿಟ್ಟಿರುವುದು' ಯೋಗ್ಯವು. ಸುಭಾಷಬೋಸರ ಕ್ರಾಂತಿಯಿಂದ ಮುಂದಕ್ಕೆ ಏನು ಸಂಭವಿಸುವುದೋ ಆ ಕಡೆಗೆ ರಾಷ್ಟ್ರದ ದೃಷ್ಟಿಯು ಕುತೂಹಲದಿಂದ ತಿರುಗಿದೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

ಕಾಂಗ್ರೆಸ ಸದಸ್ಯರನ್ನು ಮಾಡುವುದು

ಈ ವರ್ಷ ಪ್ರಾಥಮಿಕ ಸದಸ್ಯರನ್ನು ಮಾಡುವ ಕೊನೆಯ ತಾರೀಖು ೧೫-೯-೩೯ ಎಂದು ವರ್ಕಿಂಗ್ ಕಮಿಟಿಯವರು ನಿರ್ಣಯಿಸಿರುವರು. ಕಾರಣ ಇನ್ನು ಎರಡು ತಿಂಗಳು ಮಾತ್ರ ಈ ಕೆಲಸಕ್ಕೆ ಉಳಿದಿರುವದು. ಅಷ್ಟರಲ್ಲಿಯೇ ಎಲ್ಲ ಅಧೀನ ಸಮಿತಿಗಳು—ಈ ಬಗ್ಗೆ ನಾವು ಆಗಾಗ್ಗೆ ಕೊಟ್ಟ ನಿಯಮ ಸಲಹೆಗಳನ್ನು ಲಕ್ಷ್ಯದಲ್ಲಿಟ್ಟು ಮನಮುಟ್ಟಿ ಕಾರ್ಯಮಾಡಬೇಕು. ಮೊನ್ನೆ ಮುಂಬಯಿಯಲ್ಲಿ ಸೇರಿದ ಅಖಿಲಭಾರತ ಕಾಂಗ್ರೆಸ ಸಮಿತಿಯ ಸಭೆಯಲ್ಲಿ ಕೆಲವು ಘಟನಾತ್ಮಕ ತಿದ್ದುಪಡಿಗಳಾದ್ದರಿಂದ ಸದಸ್ಯತ್ವ ಫಾರ್ಮಿನಲ್ಲಿ ಕೂಡ ಹೆಚ್ಚು ಕಡಿಮೆಯಾಗಿರುವದು. ಆದರೆ ಈಗಾಗಲೇ ಮುದ್ರಿಸಲಾದ ಸದಸ್ಯತ್ವ ಪುಸ್ತಕಗಳ ಜಿಲ್ಲಾ ಸಮಿತಿಗೆ—ಮುಂದೆ ತಾಲೂಕ ಸಮಿತಿಗಳ [illegible] ವ್ಯಕ್ತಿಗಳಿಗೆ ಹಂಚಲಾಗಿವೆ. ಕಾರಣ ಈ ಸಲ ಬದಲಾವಣೆ ಮಾಡಲು ಸಾಧ್ಯವಿಲ್ಲ. ಆದರೂ ಸಹ ಫಾರ್ಮುಗಳನ್ನು ಇನ್ನು ಮುಂದೆ ತುಂಬುವಾಗ—ಸದಸ್ಯರಾಗಲಿಚ್ಛಿಸುವವರು ಪುರುಷರಿದ್ದರೆ ತಂದೆಯ ಹೆಸರನ್ನು ಸ್ತ್ರೀಯರಿದ್ದರೆ ಗಂಡನ ಹೆಸರನ್ನು ಬರೆಯಬೇಕು. ಸದಸ್ಯನ ಸಹಿ 'ಹಣ' ಹಣ ಪಡೆದವನ ಸಹಿ ಈ ಮಧ್ಯದಲ್ಲಿ ಒಬ್ಬ ಸಾಕ್ಷೀದಾರನ ಸಹಿಯನ್ನು ಮಾಡಿಸಬೇಕು.

ಈ ಪ್ರಕಾರ ಕಾಂಗ್ರೆಸ್ ಘಟನೆಯಲ್ಲಿ ಬದಲಾವಣೆಗಳನ್ನು ಮಾಡಲು ಮುಖ್ಯ ಕಾರಣವೆಂದರೆ ಸದ್ಯಕ್ಕೆ ಪ್ರಚಲಿತದಲ್ಲಿರುವ ಖೊಟ್ಟಿ ಸಭಾಸದತ್ವವನ್ನು ದೂರ ಮಾಡುವದು. ಇದೇ ಉದ್ದೇಶದಿಂದಲೇ ಇಲ್ಲಿ ಕೆಲವು ಸೂಚನೆಗಳನ್ನು ಕೊಡಲಾಗಿದೆ. ಅವುಗಳನ್ನೆಲ್ಲಾ ಅಧೀನ ಸಮಿತಿಗಳು ಮನಃಪೂರ್ವಕವಾಗಿ ಹಾಗು ಕಟ್ಟುನಿಟ್ಟಿನಿಂದ ಅನುಸರಿಸಿದರೆ ಬಹುಮಟ್ಟಿಗೆ ಈ ಕೊರತೆಯು ದೂರಾಗುವದರಲ್ಲಿ ಸಂದೇಹವಿಲ್ಲ:—

೧. ಸದಸ್ಯರನ್ನು ಮಾಡಲು ಪುಸ್ತಕಗಳನ್ನು ತೆಗೆದುಕೊಂಡ ವ್ಯಕ್ತಿಗಳು ತಾಲೂಕು ಸಮಿತಿಗಳ ಕಡೆಗೆ ಸಕಾಲಕ್ಕೆ—(೧) ಸದಸ್ಯತ್ವದ ಪೂರ್ಣ ವರದಿ. (೨) ಸದಸ್ಯರಾದವನ್ನು ೦-೪-೦ ಆಣೆ ಹಣ, (೩) ಸಂಪೂರ್ಣವಾಗಿ ಮುಗಿದ ಪುಸ್ತಕಗಳು:—ಇವೆಲ್ಲವುಗಳನ್ನು ಒಪ್ಪಿಸಬೇಕು. (ಕೊಟ್ಟ ಪುಸ್ತಕಗಳನ್ನೆಲ್ಲಾ ಪೂರ್ಣ ಮುಗಿಸಿ ಎಲ್ಲವನ್ನೂ ಲೆಕ್ಕದೊಂದಿಗೆ ಒಪ್ಪಿಸಿದ ಬಳಿಕ ಆಯಾ ವ್ಯಕ್ತಿಗಳಿಗೆ ಹೊಸ ಪುಸ್ತಕಗಳನ್ನು ಕೊಡಬೇಕು.

೨ ಗ್ರೂಪ ಹಾಗು ಗ್ರಾಮ ಸಮಿತಿಗಳು ತಾಲೂಕು ಸಮಿತಿಗೆ ಸಕಾಲಕ್ಕೆ ವರದಿಯನ್ನೊಪ್ಪಿಸಬೇಕಲ್ಲದೆ ಸದಸ್ಯರಾದವನ್ನು ನಾಲ್ಕು ಆಣೆ ಹಣವನ್ನು (ಪೂರ್ಣ) ಎಂಟು ದಿನಕ್ಕೊಮ್ಮೆ ತಾಲೂಕು ಕಾಂಗ್ರೆಸು ಸಮಿತಿಗಳಲ್ಲಿ ಜಮೆ ಮಾಡಿ ಪಾವತಿ ಪಡೆಯಬೇಕು.

೩ ತಾಲೂಕು ಸಮಿತಿಗಳು ಜಿಲ್ಲಾ ಸಮಿತಿಗೆ ಪ್ರತಿ ವಾರಕ್ಕೊಮ್ಮೆ ಈ ಕೆಳಗಿನ ಮಾಹಿತಿ ಕಳಿಸಬೇಕು:—೧ ತಮ್ಮ ತಾಲೂಕಿನಲ್ಲಿಯ ಆ ವಾರದಲ್ಲಿ ಆಗಲಿ ಅಲ್ಲಿಯವರೆಗೆ ಆದ ಒಟ್ಟು ಸದಸ್ಯರ ಸಂಖ್ಯೆ. ೨ ತಾವು ವ್ಯಕ್ತಿಗಳಿಗೆ ಹಂಚಿದ ಪುಸ್ತಕಗಳ ಪೂರ್ಣ ವಿವರ. (ಇದರಲ್ಲಿ ವ್ಯಕ್ತಿಗಳ ವಿಳಾಸ, ಕೊಟ್ಟ ಪುಸ್ತಕಗಳ ಮೇಲಿನ ಕ್ರಮಾಂಕ ಹಾಗು ಸಂಖ್ಯೆ ಸೇರುವದು.)

೪ ಜಿಲ್ಲಾ ಸಮಿತಿಗಳು ತಮ್ಮ ಜಿಲ್ಲೆಯಲ್ಲಾದ ಸದಸ್ಯರ ಸಂಖ್ಯೆ ಹಾಗು ವ್ಯಕ್ತಿಗಳಿಗೆ ಕೊಡಲ್ಪಟ್ಟ ಪುಸ್ತಕಗಳ ಪೂರ್ಣ ವಿವರ (ಮೇಲಿನಂತೆ) ಗಳನ್ನೊಳಗೊಂಡ ಒಂದು ವರದಿಯನ್ನು ಪ್ರತಿ ೧೫ ದಿನಗಳಿಗೊಮ್ಮೆ ಪ್ರಾಂತೀಯ ಸಮಿತಿಗೆ ಕಳಿಸಬೇಕು.

ಈ ಸಂಬಂಧವಾದ ತಾರೀಕುಗಳು ಎಲ್ಲರಿಗೂ ಅನುಕೂಲವಾಗಬೇಕೆಂದು ಕೆಳಗಿನಂತೆ ಗೊತ್ತುಮಾಡಿದೆ —

ಪ್ರತಿ ತಿಂಗಳು ೧, ೮, ೧೫ ಮತ್ತು ೨೨ನೇ ತಾರೀಖುಗಳಲ್ಲಿ ತಾಲೂಕು ಸಮಿತಿಗಳು ಜಿಲ್ಲಾ ಸಮಿತಿಗೆ ಮೇಲ್ಕಾಣಿಸಿದ ಮಾಹಿತಿ ತಿಳಿಸುವದು.

ಪ್ರತಿ ತಿಂಗಳ ೫ ಹಾಗು ೨೦ನೇ ತಾರೀಖುಗಳಲ್ಲಿ ಜಿಲ್ಲಾ ಸಮಿತಿಗಳು ಪ್ರಾಂತೀಯ ಸಮಿತಿಗೆ ವರದಿಯನ್ನು ಒಪ್ಪಿಸಬೇಕು.

ಈ ಸಂಬಂಧದ ಮೊದಲನೇ ವರದಿಯು ತಾಲೂಕು ಸಮಿತಿಗಳಿಂದ ಜಿಲ್ಲಾ ಸಮಿತಿಗಳಿಗೆ ೧೫-೭-೩೯ರ ಒಳಗಾಗಿ ಹಾಗು ಜಿಲ್ಲೆಗಳಿಂದ ಪ್ರಾಂತೀಯ ಸಮಿತಿಗೆ ೨೦-೭-೩೯ರ ಒಳಗೆ ಒಪ್ಪಿಸಲ್ಪಡಬೇಕು.

ಈ ಸದಸ್ಯತ್ವದ ಸಂಬಂಧವಾದ ಪ್ರಾಂತೀಯ ಮೇಲ್ಲಾ ಪತ್ರಿಕೆಯನ್ನು ಬೇಗನೆ ಪ್ರಸಿದ್ಧಿಸಲಾಗುವದು. ಅದರಲ್ಲಿ ಜಿಲ್ಲಾ ಸಮಿತಿಗಳು ಪ್ರಾಂತೀಯ ಸಮಿತಿಗೆ ಹಣಮಾದಿಟ್ಟ ಸ್ಥಳಗಳನ್ನು ಒಪ್ಪಿಸುವ ಕೊನೆಯ ತಾರೀಖು ನಿರ್ದೇಶಿಸಲ್ಪಡುವದು. ಅಷ್ಟರಲ್ಲಿ ಸಂಪೂರ್ಣ ಮಾಹಿತಿಯ ಒಪ್ಪಿಸಲ್ಪಡಬೇಕು. ಎಲ್ಲ ಪುಸ್ತಕಗಳು ನಿರ್ದಿಷ್ಟ ಅವಧಿಯಲ್ಲಿ ಪ್ರಾಂತೀಯ ಸಮಿತಿಗೆ ಒಪ್ಪಿಸದೇ ಇದ್ದಲ್ಲಿ ಜಿಲ್ಲಾ ಸಮಿತಿಗಳಿಂದ ಪ್ರತಿಯೊಂದು ಪುಸ್ತಕಕ್ಕೆ ರೂ ೧-೦-೦ಯಂತೆ ದಂಡ ವಸೂಲಿ ಮಾಡಲು ಬರುವದು. (ಅವಧಿ ಮೀರಿ ಪುಸ್ತಕ ಒಪ್ಪಿಸಿದರೆ ದಂಡದ ಹಣದಲ್ಲಿ ಕಡಿತವು ಸಿಗಲಾರದು.)

ಈ ಬಂಧನಗಳನ್ನು ಹೇಳುವ ಉದ್ದೇಶಗಳನ್ನು ಅಧೀನ ಸಮಿತಿಗಳು ಸಂಪೂರ್ಣವಾಗಿ ತಿಳಿದುಕೊಂಡು ಈಗಿನಿಂದಲೇ ಸರಿಯಾಗಿಯೂ ಅಚ್ಚುಕಟ್ಟಾಗಿಯೂ ಕೆಲಸಮಾಡಲು ಪ್ರಾರಂಭಿಸಬೇಕು. ಅಂದರೆ ಈ ಸದಸ್ಯರನ್ನು ಮಾಡುವ ಕಾರ್ಯದಲ್ಲಿ ಶ್ರೇಯಸ್ಸು ದೊರೆಯುವುದು.

ಅಧೀನ ಸಮಿತಿಗಳಿಗೆ ಎಚ್ಚರಿಕೆ

ಮೊನ್ನೆ ಮೊನ್ನೆ ಮುಂಬಯಿಯಲ್ಲಾದ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಸಭೆಯಲ್ಲಿ ಪಾಸಾದ ಗೊತ್ತುವಳಿಗಳ ಬಗ್ಗೆ ವಿರೋಧವನ್ನು ಕೆಲವು ಕಾಂಗ್ರೆಸು ಸಮಿತಿಗಳು ಪ್ರದರ್ಶಿಸುತ್ತಿರುವುದು ಮೇಲಿನ ಸಮಿತಿಯ ಗಮನಕ್ಕೆ ಬಂದಿದೆ. ಅಧೀನ ಸಮಿತಿಗಳು ತಮ್ಮ ಮೇಲಿನ ಸಮಿತಿಗಳ ನಿರ್ಣಯಗಳನ್ನು ಈ ಪ್ರಕಾರ ಖಂಡಿಸುವುದು ಶಿಸ್ತುಭಂಗವೆಂದು ಗಣಿಸಲ್ಪಡುವುದು. ಕಾರಣ ಈ ಪ್ರಕಾರ ನಮ್ಮ ಪ್ರಾಂತದಲ್ಲಿಯ ಯಾವ ಸಮಿತಿಗಳೂ ವರ್ತಿಸಬಾರದೆಂದು ಭಿನ್ನವಿಸುತ್ತೇನೆ. ಒಂದು ವೇಳೆ ವಿರೋಧ ಪ್ರದರ್ಶಿಸಿದಲ್ಲಿ ಆಯಾ ಸಮಿತಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ಎಚ್ಚರಿಸಲಾಗಿದೆ. ಆದರೆ ಅಧೀನ ಸಮಿತಿಗಳು ತಮ್ಮ ಮೇಲಿನ ಸಮಿತಿಗಳಿಗೆ ವಿನಂತಿ ಯಾಗಲಿ ಸೂಚನೆಗಳನ್ನು ಕಳುಹಿಸಿಕೊಡಲು ಯಾವ ಅಡ್ಡಿಯೂ ಇಲ್ಲ' ಎಂದು ಗೌ। ಕಾರ್ಯದರ್ಶಿ ಶ್ರೀ. ನಾ. ಸು. ಹರ್ಡೀಕರರು ತಿಳಿಸುತ್ತಾರೆ.

ಹೊಸ ವಾರ್ತೆ

ಬ್ರಿಟನ್—ಫ್ರಾನ್ಸುಗಳೊಳಗೆ ನಡೆದ ಒಪ್ಪಂದದಿಂದ ಟರ್ಕಿಯಲ್ಲಿ ದೇಶದ ಒಳಗೂ ಹೊರಗೂ ಶಾಂತಿಗೆ ತೊಂದರೆಯೊದಗಲಿಲ್ಲವೆಂದೂ, ನಮ್ಮನ್ನು ಯುದ್ಧರಂಗಕ್ಕೆ ಎಳೆಯಲ್ಪಡುವ ಸಂದರ್ಭದಲ್ಲಿ ತಾವೂ ನಮ್ಮ ರಕ್ಷಣೆಗೆ ಸಿದ್ಧರಾಗಿರುವೆವೆಂದೂ ಟರ್ಕಿ ವಿದೇಶಿ ಮಂತ್ರಿಗಳು ಹೇಳುತ್ತಾರೆ.

★

೬೦,೦೦೦ ಜನರಿಂದ ಸೇರಿದ ಒಂದು ಜಪಾನಿನ ಸಭೆಯಲ್ಲಿ ಬ್ರಿಟಿಷ್ ವಿರುದ್ಧ ಭಾಷಣಗಳಾಗಿ ಠರಾವು ಮಂಜೂರಾಯಿತು. ಅದನ್ನು ಚೆಂಬರ್ಲೇನ್, ಹೆಲಿಫಾಕ್ಸ್ ಮೊದಲಾದವರಿಗೆ ಕಳುಹಿಸಲಾಗಿದೆ.

★

ಮಧುರೆಯ ಮಹಾಮೀನಾಕ್ಷಿ ದೇವಾಲಯ ಅಲ್ಲದೆ ಇನ್ನೂ ಅನೇಕ ತಮಿಳು ನಾಡಿನ ದೇವಾಲಯಗಳು ಹರಿಜನರಿಗೆ ಪ್ರವೇಶಿಸಲು ತೆರೆಯಲ್ಪಟ್ಟುವು.

★

ಗದಿನಾಡಿನಲ್ಲಿ ಮಹಾತ್ಮಾ ಗಾಂಧಿಯವರು ಹಲವು ಕಾಂಗ್ರೆಸು ಮುಖಂಡರನ್ನು ಕಂಡು ಕಾಂಗ್ರೆಸು ಸಂಸ್ಥೆಯ ಶುದ್ಧೀಕರಣದ ಕುರಿತು ಚರ್ಚಿಸಿದರು.

★

ಸಿಲೋನಿನ ನೆಹರ ಗಳು ಕೇವಲ ಹಿಂದೀಯರ ಹಿತಚಿಂತಕರಾಗಿ ಬರುವರೆಂದೂ, ಸಿಲೋನೀಯರ ಬಗ್ಗೆ ಅವರಿಗೆ ಸಹ ಸಂತಾಪವಿಲ್ಲವೆಂದೂ, ಆದ್ದರಿಂದ ನಾವು ಅವರ ಆಗಮನವನ್ನು ಸ್ವಾಗತಿಸುವುದಿಲ್ಲವೆಂದೂ ಸಿಲೋನಿಯರ ಹೇಳಿಕೆ!

★

ಸುಭಾಷಚಂದ್ರ ಬೋಸರು ತಮ್ಮ ಶಿಸ್ತು ಜಪ್ತಿಗೆ ಹೆದರುವುದಿಲ್ಲವೆಂದೂ, ಇಂದಿನ ಬಲಪಕ್ಷದ ಕಾಂಗ್ರೆಸ್ ಧೋರಣೆಯನ್ನು ಖಂಡಿಸುವೆನೆಂದೂ, ಮುಂಬಯಿ ನಗರದ ಮದ್ಯಪಾನ ನಿಷೇಧ ಕಾರ್ಯವು ತಪ್ಪೆಂದೂ ಹೇಳುತ್ತಾರೆ.

★

[illegible] ಯಾವುದೇ ರೀತಿಯಲ್ಲಿ [illegible] ಬಲಾತ್ಕಾರ ಮಾಡಿದರೆ ಬ್ರಿಟನ್ ಪೋಲೆಂಡಿನ ಸಹಾಯವಾಗಿ ನಿಲ್ಲುವುದೆಂದು ಚೆಂಬರ್ಲೇನರು ಹೇಳುತ್ತಾರೆ.

★

ಚೈನಾಕ್ಕೆ ತಗಲಿದ ರಶ್ಯಾದ [illegible] ಭಾಗವು ಕಾರಿನ ಅಪಘಡದಿಂದ ಮೃತಪಟ್ಟನು.

★

ಸೋಶಿಯಲಿಸ್ಟ ಮುಖಂಡರಾದ ಶ್ರೀ. ಜಯಪ್ರಕಾಶ ನಾರಾಯಣರು [illegible]ದಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸಿನ ಕೆಲಸಗಾರರು ಕಾಂಗ್ರೆಸು ಸಂಸ್ಥೆಯಲ್ಲಿ ಒಡಕನ್ನು ಹುಟ್ಟಿಸುವಂತೆ ವರ್ತಿಸಬಾರದು ಎನ್ನುತ್ತಾರೆ!

ಪಂಜಾಬದ ರಣಕೇಸರಿ ರಾಜಾ ರಣಜಿತಸಿಂಹ

[ಭಾರತದ ಇತಿಹಾಸದಲ್ಲಿ ಒಂದು ಉಜ್ವಲ ರತ್ನ!]

ಪಂಜಾಬ್! ಆರ್ಯ ಸಂಸ್ಕೃತಿಯ ಪ್ರವಾಹವು ಹರಿದು ಬಂದ ಮೂಲ ಭೂಮಿ! ವೇದಕಾಲೀನ ಋಷಿಗಳ ಪುಣ್ಯತಪೋನಿಲಯ! ಭಾರತದ ಉಜ್ವಲ ಇತಿಹಾಸದಲ್ಲಿ ಪಂಜಾಬದ ನೆಲೆಯು ಅಸದೃಶವಾಗಿದೆ! ಚಿರಸ್ಮರಣೀಯವಾಗಿದೆ!

ಮೊಗಲ ಸಾಮ್ರಾಜ್ಯವು ನಾಮಾವಶೇಷವಾದ ಬಳಿಕ ಭಾರತದಲ್ಲಿ ಸ್ವತಂತ್ರ ರಾಜ್ಯಸ್ಥಾಪನೆ ಮಾಡಿದ ವೀರ ರಾಜರ ಸಾಲಿನಲ್ಲಿ ಪಂಜಾಬದ ಕೇಸರಿ ಮಹಾರಾಜ ರಣಜಿತಸಿಂಗನಿಗೆ ಅಗ್ರಸ್ಥಾನವು ಸಿಗಬೇಕು! ಆತನ ಯುದ್ಧನೈಪುಣ್ಯ, ರಾಜನೀತಿಯ ಕುಶಲತೆ, ಇವುಗಳ ಫಲವಾಗಿ, ಕಿರಿದಾಗಿದ್ದ ಸಿಕ್ಖ ದೊರೆತನವು ಅಖಂಡ ಸಾಮ್ರಾಜ್ಯವಾಗಿ ವ್ಯಾಪಿಸಿತು! ಆತನ ನಿಧನದ ಮೇಲೆ ಅದೇ ಸಿಕ್ಖ ದೊರೆತನವು ಅವನತಿಗಿಳಿದುಬಂದುದೇ ಅವನಲ್ಲಿ ನೆಲೆಸಿದ್ದ ಕರ್ತೃತ್ವಶಕ್ತಿ, ಅನುಪಮ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ!

ಬಾಲ್ಯ

ಈ ಮಹಾವೀರನು ಕ್ರಿ. ಶ. ೧೭೮೦ರಲ್ಲಿ ಜನ್ಮತಾಳಿದನು. ಬಹಳ ಸಣ್ಣದಿರುವಾಗಲೇ ಸಿಡುಬಿನ ರೋಗಕ್ಕೀಡಾಗಿದ್ದರಿಂದ, ಮುಖದಲ್ಲೆಲ್ಲಾ ಕಪ್ಪು ಗುರುತುಗಳಾಗಿ ಕುರೂಪವಾದುದು ಮಾತ್ರವಲ್ಲದೆ, ಆತನ ಒಂದು ಕಣ್ಣೂ ಕಳೆದು ಹೋಯಿತು! ಆ ಒಂದು ಕಣ್ಣಿನ ಹುಡುಗನೇ, ತನ್ನ ಹೃದಯದಲ್ಲಿ ಹುದುಗಿದ್ದ ಉಜ್ವಲ ಆಕಾಂಕ್ಷೆಯ ಪರಿಣಾಮವಾಗಿ, ಮುಂದಕ್ಕೆ ಭಾರತದ ಇತಿಹಾಸದಲ್ಲಿ ರತ್ನಪ್ರಾಯನಾಗಿ ಬೆಳಗಿದನು! ರಣಜೀತನು ಚಿಕ್ಕವನಿದ್ದಾಗಲೇ, ಸಿಕ್ಖ ಜನಾಂಗದ ಮುಂದಾಳುವಾಗಿದ್ದ ತನ್ನ ತಂದೆಯ ಜತೆಯಲ್ಲಿ ಅನೇಕ ಸಾಹಸಕಾರ್ಯಗಳಿಗೆ ತೊಡಗಿ ಹೆಸರುವಾಸಿಯಾಗಿದ್ದನು!

ರಾಜ್ಯವಿಸ್ತಾರ

ರಣಜೀತನ ಹದಿನೆರಡನೆಯ ವಯಸ್ಸಿನಲ್ಲಿ ಆತನು ತಂದೆಯನ್ನು ಕಳೆಕೊಂಡನು! ಅಂತಹ ವಿಷಮ ಸಂದರ್ಭದಲ್ಲಿ ಆತನಿಗೆ ಅವನ ಸಂಬಂಧಿಕರೊಬ್ಬರು ಬೇಕಾದಷ್ಟು ಧನಸಹಾಯವನ್ನು ಒದಗಿಸಿದ ನಿಮಿತ್ತ ಬಹಳ ಉಪಕಾರವಾಯಿತು. ತನ್ನ ಒಂದು ಸಾಹಸ ಕೆಲಸದ ಫಲವಾಗಿ ಆತನು ಲಾಹೋರಿನ ಒಡೆಯನಾಗಿ, ರಾಜನೆಂಬ ಬಿರುದನ್ನು ಪಡೆದನು. ಕಾಬೂಲಿನ ಅರಸಿಗೆ ಮಾಡಿದ ಒಂದು ಸಾಹಸದ ಸಹಾಯಕ್ಕಾಗಿ ರಣಜಿತನಿಗೆ ಲಾಹೋರಿನ ಸ್ವತಂತ್ರ ಅಧಿಕಾರವು ನೆಲೆಯಾಯಿತು. ಸ್ವಲ್ಪ ಸಮಯದ ಮೇಲೆ, ಆತನು ಅಮೃತಸರವನ್ನು ಮುತ್ತಿ ಅದನ್ನು ಸ್ವಾಧೀನ ಪಡಿಸಿದನು. ಆ ಸಮಯದಲ್ಲಿ ರಣಜಿತನಿಗೆ ಯಾವುದೇ ರಾಜ್ಯವನ್ನು ಆಕ್ರಮಿಸಿ, ವಿಜಯಶಾಲಿಯಾಗುವ ವಿಷಯದಲ್ಲಿ ಯಾವ ಸಂಶಯವೂ ಇರಲಿಲ್ಲ. ಆಗ ಸಿಕ್ಖರಲ್ಲಿಯೇ ಅನ್ಯೋನ್ಯ ಪಂಗಡಗಳೊಳಗೆ ಜಗಳವಿತ್ತು. ರಣಜಿತನು ಅವರನ್ನು ಸೋಲಿಸಿ ಮುಖ್ಯಸ್ಥನಾದನು. ಪಂಜಾಬಿನಲ್ಲಿರುವ ಮಹಮ್ಮದೀಯರು ದಂಗೆಯೇಳಲು, ಅವರನ್ನು ಎದುರಿಸಿ ಸ್ವಾಧೀನತೆಯಲ್ಲಿಟ್ಟನು. ಅಫಘಾನರನ್ನೂ ಬಲಗುಂದಿಸಿದನು. ಮುಲ್ತಾನ, ಜಮ್ಮು, ಕಾಶ್ಮಿರ, ಪೇಶಾವರಗಳು ಮತ್ತು ಅನೇಕ ರಾಜಪುತ ಸಂಸ್ಥಾನಗಳು ಆತನ ಆಡಳಿತದ ಅಂಕೆಯೊಳಗೆ ಬಂದುವು!

ಬ್ರಿಟಿಷರ ಸಂಬಂಧ

ರಣಜಿತಸಿಂಗನಿಗೆ ಇಡೀ ಸಿಕ್ಖಮತೀಯರನ್ನು ಒಂದೇ ಒಡೆತನದ ಕೆಳಗೆ ಬರುವಂತೆ ಮಾಡಬೇಕೆಂಬ ಅಪೇಕ್ಷೆ ಬಹಳ ಇತ್ತು! ಇದರಲ್ಲಿ ಆತನು ಜಯಶಾಲಿಯಾಗಲಿಲ್ಲ; ಇದಕ್ಕಾಗಿಯೇ ಆಗ ಸಾಮ್ರಾಜ್ಯವನ್ನು ಬೆಳೆಸುತ್ತಿದ್ದ ಆಂಗ್ಲರೊಡನೆ ಆತನು ಸಂಬಂಧ ಬೆಳೆಸಬೇಕಾಗಿ ಬಂತು. ಸಿಕ್ಖರ ರಾಜ್ಯವೊಂದನ್ನು ರಣಜಿತನು ಸ್ವಾಧೀನಪಡಿಸಲು ಯತ್ನಿಸಿ, ಕಡೆಗೆ ಅದು ಬ್ರಿಟಿಷರ ಸ್ವಾಧೀನದಾಯಿತು! ಚಾರ್ಲ್ಸ್ ಮೆಟ್‌ಕಾಫ್‌ಮುಖರ ಮಧ್ಯಸ್ಥಿಕೆಯಿಂದ, ಇಂಗ್ಲಿಷರ ಒಡನೆ ರಾಜಿಯೊಪ್ಪಂದ ನಡೆದು, ಸಟ್ಲೇಜ್ ನದಿಯು ರಣಜಿತನ ರಾಜ್ಯದ ಪೂರ್ವದ ಗಡಿಯಾಗಿ ನಿಶ್ಚಯವಾಯಿತು. ರಣಜಿತನು ಈ ಒಪ್ಪಿಗೆಗೆ ಎಂದೆಂದೂ ಮಿಕ್ಕಿ ನಡೆದದ್ದಿಲ್ಲ! ಆದರೆ ಕೆಂಪು ಶಾಯಿಯಿಂದ ಗುರುತಿಸಿದ ಇಂಗ್ಲಿಷರು ಸ್ವಾಧೀನಪಡಿಸಿದ ಹಿಂದೂದೇಶದ ಪ್ರಾಂತಗಳನ್ನು ಬಿಡಿಸಿದ ನಕಾಶೆಯನ್ನೊಮ್ಮೆ ನೋಡಿ, ಆತನು ವಿಷಾದದಿಂದ 'ಸ್ವಲ್ಪ ಸಮಯದಲ್ಲಿ ಇಡೀ ಹಿಂದೂದೇಶವೇ ಕೆಂಪಾಗುವುದೇ?' ಎಂದು ನಿಟ್ಟುಸಿರೆಳೆದನಂತೆ!

ಸೈನ್ಯಶಕ್ತಿ

ಜೀವನದಲ್ಲಿ ಒದಗಿದ ಅನೇಕ ಘಟನೆಗಳಿಂದ, ಇಂಗ್ಲಿಷರ ಅಧೀನದಲ್ಲಿ ತರಬೇತಿ ಹೊಂದಿದ ಸೈನ್ಯವು ಹೆಚ್ಚು ಪ್ರಭಾವಶಾಲಿಯಾದೀತೆಂಬ ಅಭಿಪ್ರಾಯವು ಆತನಲ್ಲಿ ಸ್ಥಿರವಾಗಿತ್ತು! ಹಾಗಾಗಿ ಆತನು ತನ್ನ ಸೈನ್ಯವನ್ನು ಹೆಚ್ಚು ಮುಹನತ್ತಿನಿಂದ ತಯಾರುಮಾಡಲೂ, ಹಿಂದಿನ ಯುದ್ಧೋಪಕರಣಗಳನ್ನು ಬಿಟ್ಟು ಹೊಸ ಉಪಕರಣಗಳನ್ನು ಉಪಯೋಗಿಸಲೂ ಮನಸ್ಸು ಮಾಡಿದನು. ಒಮ್ಮೆ ಆತನು ಇಬ್ಬರು ಯೂರೋಪಿಯನ್ ಜನರಲರನ್ನು ತನ್ನಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದನು. ಅವರಿಗೆ ಚೆನ್ನಾಗಿ ಸಂಬಳವನ್ನು ಕೊಡುತ್ತಿದ್ದುದರಿಂದ ಅವರು ರಣಜಿತ ಸೈನ್ಯವನ್ನು ಯೂರೋಪಿಯನರ ರೀತಿಯಲ್ಲಿಯೇ ತರಬೇತಿ ಮಾಡಿದರು. ಹೀಗೆ ಆತನು ಶಿಸ್ತಿನಿಂದ, ಶಕ್ತಿಯಿಂದ ಮತ್ತು ಸಂಘಟಿತ ರೂಪದಿಂದ, ತನ್ನ ಸೈನ್ಯವನ್ನು ತಯಾರು ಮಾಡಿದನು. ಈ ಸೈನ್ಯವೇ ಮುಂದಕ್ಕೆ ಇಂಗ್ಲಿಷರ ಎದುರಾಗಿ ಯುದ್ಧಮಾಡಿ ಸಾಮರ್ಥ್ಯವನ್ನು ಪ್ರದರ್ಶಿಸಿತು!

ವ್ಯಕ್ತಿತ್ವ

ತನ್ನಲ್ಲಿ ಉದ್ಯೋಗಕ್ಕೆ ಆತನು ಜಾತಿಭೇದವಿಲ್ಲದೆ ಯೋಗ್ಯರಾದವರನ್ನೇ ನಿಯಮಿಸುತ್ತಿದ್ದುದರಿಂದ, ಆತನ ಆ ಸ್ಥಾನವು ಉತ್ತಮ ಜನರಿಂದಲೇ ಶೋಭಿತವಾಗಿತ್ತು. ಅವರಲ್ಲಿ ಆತನ ಪ್ರಧಾನಮಂತ್ರಿಯೂ, ವಿಶ್ವಾಸಪಾತ್ರನೂ ಆದ ಫಕೀರ ಅಜೀಜುದ್ದೀನನೆಂಬ ಮಹಮ್ಮದೀಯನು ಪ್ರಖ್ಯಾತನು. ಅಜೀಜುದ್ದೀನನೊಡನೆ ಒಮ್ಮೆ ಸಿಮ್ಲಾದಲ್ಲಿ ಒಬ್ಬ ಆಂಗ್ಲೇಯನು ರಣಜಿತನ ಯಾವ ಕಣ್ಣು ಕುರುಡಾಗಿರುವುದೆಂದು ಪ್ರಶ್ನಿಸಿದಾಗ, ಯಾವ ತಡವೂ ಇಲ್ಲದೆ, ಅಜೀಜುದ್ದೀನನು "ಆತನ ಮುಖದ ತೇಜಸ್ಸು ಅಷ್ಟು ಪ್ರಭಾವಶಾಲಿಯಾದುದರಿಂದ, ನಾನೊಮ್ಮೆಯಾದರೂ ಆತನನ್ನು ಸಮೀಪದಿಂದ ನೋಡಿದ್ದಿಲ್ಲ" ವೆಂದನು. ರಣಜಿತನು ರೋಗದಿಂದ ಮುಖವಿಕಾರವುಳ್ಳವನಾಗಿದ್ದರೂ, ಆತನಿಗೆ ಜನ್ಮತಃ ಬಂದ ಕ್ಷಾತ್ರತೇಜಸ್ಸು ಅಪೂರ್ವ ಸೌಂದರ್ಯವನ್ನು ಉಂಟುಮಾಡಿತ್ತು! "ಆತನು ತನ್ನ ಕುದುರೆಯನ್ನು ಏರಿ ಕತ್ತಿಕೆ ಕೊಡಲೇ, ಅಂತರ್ಯದಲ್ಲಿ ಅಡಗಿರುವ ಒಂದು ಅಪೂರ್ವ ಶಕ್ತಿಯಿಂದ ಆ ವೇಳೆಗೊಂದರೆ ರಣಜಿತಸಿಂಹನು ಭಯಂಕರನಾಗಿ ಕಾಣುವನು" ಎಂದು ಒಬ್ಬ ಆಂಗ್ಲೇಯ ಇತಿಹಾಸಕಾರನು ವರ್ಣಿಸಿರುವನು.

ಆತನು ಓದು ಬರಹವಿಲ್ಲದವನಾಗಿದ್ದನು. ಬಹಳ ತೀಕ್ಷ್ಣ ವಿಚಾರ ಶಕ್ತಿಯುಳ್ಳವನಾಗಿದ್ದನು. ಆತನು ಪ್ರತಿಯೊಂದು ಇಲಾಖೆಯ ವಿಷಯಗಳನ್ನು ಸಂಪೂರ್ಣವಾಗಿ ನೆನಪಿಡಲು ಶಕ್ತನಾಗಿದ್ದನು. ಆತನಲ್ಲಿ ಕೆಲಸಕ್ಕಿದ್ದ ಅತ್ಯಂತ ಕೆಳಗಿನ ಕರಣಿಕನಿಂದ ಹಿಡಿದು, ಪಂಜಾಬದ ಪ್ರತಿಯೊಂದು ಹಳ್ಳಿಯ ತನಕ ಹಿಡಿದು, ಹೆಸರು ಹೇಳಿ ಕರೆಯಲು ಬಲ್ಲವನಾಗಿದ್ದನು. ಒಮ್ಮೆ ನೋಡಿದವರನ್ನು ಆ ಮೇಲೆ ಎಷ್ಟೋ ವರ್ಷಗಳ ತರುವಾಯವೂ ಗುರುತಿಸಲು ಶಕ್ತನಾಗಿದ್ದನು.

ಕೊನೆಯ ದಿನಗಳು

ಅವಿಶ್ರಾಂತವಾಗಿ ಮಾಡಿದ, ಆತನ ಸಾಹಸಕಾರ್ಯಗಳಿಂದಾಗಿ ತನ್ನ ಐವತ್ತನೇ ವರ್ಷದಲ್ಲಿಯೇ ಅವನ ಆರೋಗ್ಯ ಸಿಡಿಲಿಡಿಯಿತು! ಪಾರ್ಶ್ವವಾಯುಪೀಡಿತನಾದ ರಣಜಿತನು ಅಪಾರದ್ರವ್ಯವನ್ನು ದೇವಾಲಯಗಳಿಗೂ ಬಡವರಿಗೂ ದಾನಮಾಡಿದನು. ತನ್ನಲ್ಲಿದ್ದ ಅಮೂಲ್ಯ ರತ್ನವಾಗಿದ್ದ 'ಕೊಹಿನೂರ' ವಜ್ರವನ್ನು ಜಗನ್ನಾಥ ದೇವಸ್ಥಾನಕ್ಕೆ ದಾನವಾಗಿ ದಾನದ ಮಾಡಿದ್ದನು. ಪಂಜಾಬನ್ನು ಇಂಗ್ಲಿಷರು ಸ್ವಾಧೀನಪಡಿಸುವ ವರೆಗೆ, ಆ ಅಮೂಲ್ಯರತ್ನವು ಅಲ್ಲಿಯೇ ಇತ್ತು. ಆ ಮೇಲೆ ಮಾತ್ರ ಬ್ರಿಟಿಷ್ ಸಾಮ್ರಾಜ್ಞಿಯ ಕಿರೀಟದಲ್ಲಿ ಕಂಗೊಳಿಸುವಂತಾಯಿತು!

ರಣಜಿತಸಿಂಗನು ಐವತ್ತೊಂಬತ್ತನೆಯ ವರ್ಷದಲ್ಲಿ ಸ್ವರ್ಗಸ್ಥನಾದನು. ಆತನ ನಾಲ್ಕು ಮಂದಿ ಪತ್ನಿಯರೂ, ಏಳುಮಂದಿ ಸೇವಕಿಯರೂ ಚಿತೆಯಲ್ಲಿ ಭಸ್ಮೀಭೂತರಾದರು! ಅವನ ಸಮಾಧಿಯು ಇಂದೂ ಅಪೂರ್ವವಾಗಿ ಆ ಮಹಾವೀರನ ಪೌರುಷದ ಸ್ಮರಣೆಯನ್ನು ಹುಟ್ಟಿಸಿ ಅತುಲವಾಗಿ ಶೋಭಾಯಮಾನವಾಗಿ ಕಂಗೊಳಿಸುತ್ತದೆ!

ಸತೀಮಣಿಯರಿಗೆ, ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು
ಮನೆಗೆಲ್ಲಾ ಬೆಳಕು, ಬೆಳವಣಿಗೆ
ಆದ್ದರಿಂದಲೇ ಸ್ತ್ರೀಯರ ಆರೋಗ್ಯವು
ಅತ್ಯವಶ್ಯ.

ಸ್ತ್ರೀಯರಿಗೆ ಋತುಸಂಬಂಧವಾದ
ದೋಷಗಳಿಂದ ತರೀರವು ಕೃಶಿಸಿ
ಸಂತಾನ ವಾಂಛೆಯು ಶಿಥಿಲತೆ
ಹೊಂದಿತು. ಆದರೆ ಲೋಧ್ರವನ್ನು
ಸೇವಿಸಿದರೆ ಸ್ತ್ರೀಯರಿಗೆ ಸಕ್ಕ
ತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟಾಕಿಸ್ಟರು: ಪೊಪ್ಯುಲರ್ ಮೆಡಿಕಲ್ಸ್, ರಥಬೀದಿ, ಮಂಗಳೂರು.

ನೋಟೀಸು

ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ

ಶ್ರೀ ದೇವಸ್ಥಾನದ ಬಾಬ್ತು [illegible] ವ ಸುಮಾರು ಎಂಟು ಸೇರು [illegible] ಟು [illegible] ಗಳನ್ನಾಗಿ [illegible] ನಲೀ ಅಥವಾ [illegible] ಯು [illegible] ೩೦. [illegible] ಶ್ರೀ ದೇವಸ್ಥಾನದ [illegible] ದಲ್ಲಿ [illegible] ವುದು.

೧) [illegible]

೨) [illegible]

೩) [illegible]

The Trustees,
Mulki } Sri Venkatramana
[illegible] } Temple Mulki

WANTED.

[illegible] the [illegible] Sri Venkatramana Temple Mulki [illegible]

The applicants should have completed the age of 25 years and [illegible]

The applicants [illegible] Rs. 20[illegible]

Applications should be [illegible] by [illegible] and should reach the Trustees on or before the [illegible] August 19[illegible].

For further particulars apply to

The Trustees
Mulki Sri Venkatramana Temple,
[illegible] Mulki.

ಸ್ವದೇಶಾಭಿಮಾನಿ

ತಾರೀಖು ೧೪—೬—೧೯೩೯

ಸುಭಾಷರ ಕ್ರಾಂತಿ!

"ಶಿಸ್ತು ಜ್ಯಾರಿಗೆ ನಾನು ಭಯಪಟ್ಟಿಲ್ಲ, ಬರಲಿರುವವುಗಳನ್ನು ಧೈರ್ಯದಿಂದ ಎದುರಿಸಲು ಸಿದ್ಧನಿದ್ದೇನೆ" ಹೀಗೆನ್ನುತ್ತಾರೆ ಸುಭಾಷಚಂದ್ರಬೋಸರು ಮುಂಬಯಿಯ ಅಖಿಲಭಾರತ ಕಾಂಗ್ರೆಸು ಕಮಿಟಿಯ ಸಭೆಯಲ್ಲಿ ನಿರ್ಣಯವಾದ ಠರಾವುಗಳನ್ನು ಖಂಡಿಸುವ ನಿಷೇಧ ಸಭೆಯನ್ನು ಅಖಿಲ ಭಾರತದಲ್ಲಿ ತಾ. ೯ರಂದು ಜರುಗಿಸಬೇಕಾಗಿ ಬೋಸರು ಹೇಳಿಕೆಯೊಂದನ್ನು ಪ್ರಕಟಿಸಿದ್ದು ನ್ಯಾಯವಲ್ಲವೆಂದೂ, ಅದನ್ನು ರದ್ದು ಮಾಡಬೇಕೆಂದೂ ಎಚ್ಚರಿಸಿದರು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಬೋಸರು ಅವರ ಹೇಳಿಕೆಯನ್ನು ಅಲ್ಲಗಳೆದರು ರಾಷ್ಟ್ರಪತಿಗಳು ತಿರುಗಿ ಒಮ್ಮೆ ವಿವರಿಸಿದರು ಬೋಸರು ತಾ ೯ರಂದು ನಿಷೇಧ ಸಭೆ ಜರುಗಿಸಿಯೇ ಬಿಟ್ಟರು! ಈಗ ತಿರುಗಿ ಆಗಸ್ಟ ತಾ. ೯ರಂದು ಅಖಿಲಭಾರತದಲ್ಲಿ 'ರಾಷ್ಟ್ರೀಯ ಸಂಗ್ರಾಮ ದಿನ'ವನ್ನಾಚರಿಸುವುದಾಗಿಯೂ ಹಿಂದೂದೇಶದ ಜನರು ಪೂರ್ಣ ಸ್ವಾತಂತ್ರ್ಯದ ಹೋರಾಟಕ್ಕೆ ಸಿದ್ಧರಿದ್ದಾರೇ ಎಂಬ ಕುರಿತು ನಿರ್ಣಯವನ್ನು ತಿಳಿವ ಸಿದ್ಧತೆ ಮಾಡುವುದಾಗಿಯೂ ಹೇಳುತ್ತಾ, ಇಂದಿನ ಕಾಂಗ್ರೆಸು ಸಂಸ್ಥೆಗೆ ತೀರಾ ಅವಿಧೇಯರಂತೆ ನಡೆಯುತ್ತಾರೆ ನಮ್ಮ ಹಿಂದಿನ ರಾಷ್ಟ್ರಪತಿಗಳು!

ಕಾಂಗ್ರೆಸಿಗಾಗಿ ಬಹಳ ಕಾಲದಿಂದ ಅತುಲ ಸ್ವಾರ್ಥತ್ಯಾಗ ಮಾಡಿದ, ಹಾಗೂ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಒಬ್ಬ ಜವಾಬ್ದಾರೀ ಮುಖಂಡರೇ ಹೀಗೆ ಕಾಂಗ್ರೆಸಿನ ನಿಯಮಗಳನ್ನು ಸಾರ್ವಜನಿಕವಾಗಿ ಖಂಡಿಸಿ ಕ್ರಾಂತಿ ಮಾಡುವುದು ಮತ್ತು ಜನಸಮೂಹವನ್ನು ಈ ಬಗೆಯ ಕಾಂಗ್ರೆಸಿನ ನಿಯಮೋಲ್ಲಂಘನೆಯ ಅವಿಧೇಯತೆಗಾಗಿ ತಯಾರು ಮಾಡುವುದು ನಿಜವಾಗಿಯೂ ಅತ್ಯಂತ ಶೋಚನೀಯವಾದ ವಿಚಾರ' ಪಂಡಿತ ನೆಹರುಗಳೆಂದಂತೆ 'ನಮ್ಮ ವ್ಯಕ್ತಿಗತವಾದ ಒಲ್ಮೆಗಳು ಹೇಗೆಯೇ ಇರಲಿ, ನಮ್ಮೆಲ್ಲರ ಏಕಮಾತ್ರ ಪವಿತ್ರ ಸಂಸ್ಥೆಯಾದ ಕಾಂಗ್ರೆಸಿನ ಗೌರವವನ್ನು ಕೆಡಿಸುವಂತಹ, ಈ ರೀತಿಯ ಅವಿಚಾರದ ವರ್ತನೆಯು ನಿಜವಾಗಿಯೂ ರಾಷ್ಟ್ರೀಯ ಪ್ರೇಮವಾಗಲಿ, ಸಮಾಜಸತ್ತಾ ನೀತಿಯಾಗಲಿ ಆಗಲಾರದ"

ಪ್ರಧಾನ ಸಂಸ್ಥೆಯ ನಿರ್ಣಯವನ್ನು, ಅಧೀನ ಸಂಸ್ಥೆಗಳು ಚ್ಯಾಂಗೆ ತರುವುದು, ಅದರಲ್ಲಿಯೂ ಸುಭಾಷ ಬೋಸರಂತಹ ಹೊಣೆಗಾರಿಕೆಯನ್ನು ಹೊತ್ತವರು ಅದನ್ನು ಪಾಲಿಸುವುದು ಕರ್ತವ್ಯವೆಂಬ ವಿಷಯದಲ್ಲಿ ಸಾಮಾನ್ಯ ರಾಜಕೀಯ ವಿದ್ಯಾರ್ಥಿಯೊಬ್ಬನು ಸಂಶಯಗೊಳ್ಳಲಾರನು ಕಾಂಗ್ರೆಸಿನ ಅಧ್ಯಕ್ಷಪೀಠದಲ್ಲಿದ್ದು, ಶಿಸ್ತಿಗಾಗಿ, ಕಾಂಗ್ರೆಸಿನ ಗೌರವಕ್ಕಾಗಿ ಹೋರಾಡಿದ ಸುಭಾಷಬೋಸರೇ ಈ ರೀತಿ ದುಡುಕಿ ವರ್ತಿಸುವುದರಿಂದ ರಾಷ್ಟ್ರದ ಹಿತವಾಗುವ ಬದಲು ಅನಿಷ್ಟವಾಗುವುದೇ ಎಂದು ಶಂಕಿಸಬೇಕಾಗಿದೆ ಸುಭಾಷರಂತಹ ಸುಪ್ರತಿಷ್ಠಿತರಾದವರು ಹೀಗೆ ಕಾಂಗ್ರೆಸು ಸಂಸ್ಥೆಯೊಡನೆ ಕ್ರಾಂತಿಯೆಬ್ಬಿಸುವುದರಿಂದ, ರಾಷ್ಟ್ರದಲ್ಲಿರುವ ಹಲವು ಮಂದಿ ಅವರ ಅನುಯಾಯಿಗಳೆಂಬ ಯುವಕರನ್ನೂ ತಪ್ಪು ದಾರಿಯಲ್ಲಿ ಎಳೆವ ಅನ್ಯಾಯವನ್ನು ತಿಳಿದು ತಿಳಿದೂ ಬೋಸರು ಮಾಡುವಂತೆ ತೋರುತ್ತದೆ. ಇದನ್ನು ಯೋಚಿಸುವಾಗ ಕಾಂಗ್ರೆಸಿನ ಮುಖಂಡರೊಬ್ಬರು ಹೇಳಿದಂತೆ, "ಬೋಸರು ಇಂದು ವೈರಿಗಳ ಕೈಗೊಂಬೆಯಾಗಿದ್ದಾರೆಯೇ?" ಎಂಬ ಸಂಶಯವೂ ಹುಟ್ಟಬಹುದಾಗಿದೆ! ಇಂತಹ ಉಜ್ವಲ ರಾಷ್ಟ್ರಾಭಿಮಾನಿಗಳಾಗಿದ್ದವರಿಗೆ ಇದು ಭೂಷಣವೆನಿಸಲಾರದು!

ಯಾವ ಸುಭಾಷರು ಬೊಂಬಾಯಿ ನಗರದಲ್ಲಿ ಮದ್ಯಪಾನ ನಿಷೇಧವಾಡುವ ಸಂದರ್ಭದಲ್ಲಿ ತನ್ನ ಸಂಪೂರ್ಣ ಹೃದಯದ ಪ್ರೋತ್ಸಾಹವನ್ನೂ ಶುಭಸಂದೇಶವನ್ನೂ ಕಳುಹಿಸಿದ್ದರೋ, ಅಂತಹವರೇ ಇಷ್ಟೊಂದು ಅಲ್ಪ ಸಮಯದಲ್ಲಿಯೇ ಬೊಂಬಯಿ ನಗರದಲ್ಲಿ ಮದ್ಯಪಾನ ನಿಷೇಧವಾಡಿದ ಕಾಂಗ್ರೆಸು ಮಂತ್ರಿಮಂಡಲದ ಕಾರ್ಯವು ಸಲ್ಲದೆನ್ನುವುದನ್ನು ನೋಡಿದರೆ ಅವರ ಇಂದಿನ ಧೋರಣೆಯ ದೂರದರ್ಶಿತ್ವದ ಬಗ್ಗೆ ಸಂದೇಹಗೊಳ್ಳಬೇಕಾಗುತ್ತದೆ. ಯಾವುದನ್ನು ಕಾಂಗ್ರೆಸು ಮಂತ್ರಿಮಂಡಲದ ವೈರಿಗಳು ಹೇಳುತಿದ್ದಾರೋ, ಅದೇ ಮಾತನ್ನು ಸುಭಾಷರು ಉಚ್ಚರಿಸುತ್ತಿರುವದು ಬೋಸರ ಗೌರವಕ್ಕೆ ಸಲ್ಲತಕ್ಕದಲ್ಲ ನೆಹರುಗಳ ಪ್ರಕಟಣೆಯು ಈ ಸಂದರ್ಭದಲ್ಲಿ ನಿಜವಾದ ಮಹತ್ವವುಳ್ಳದ್ದಾಗಿದೆ. 'ಯಾರಿಗೆ ಕಾಂಗ್ರೆಸಿನ ತತ್ವದಲ್ಲಿ ಭಿನ್ನಾಭಿಪ್ರಾಯವುಂಟೋ ಅಂತಹವರು ಅದರ ಶಿಸ್ತನ್ನು ಉಲ್ಲಂಘಿಸಿ, ಕಾಂಗ್ರೆಸಿನಲ್ಲಿರುವ ಮನಸ್ಸು ಮಾಡುವುದಕ್ಕಿಂತ ದೇಶದ ಹಿತಕ್ಕಾಗಿ ಕಾಂಗ್ರೆಸನ್ನು ಬಿಟ್ಟಿರುವುದು' ಯೋಗ್ಯವು ಸುಭಾಷಬೋಸರ ಕ್ರಾಂತಿಯಿಂದ ಮುಂದಕ್ಕೆ ಏನು ಸಂಭವಿಸುವುದೋ ಆ ಕಡೆಗೆ ರಾಷ್ಟ್ರದ ದೃಷ್ಟಿಯು ಕುತೂಹಲದಿಂದ ತಿರುಗಿದೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

ಕಾಂಗ್ರೆಸ ಸದಸ್ಯರನ್ನು ಮಾಡುವುದು

ಈ ವರ್ಷ ಪ್ರಾಥಮಿಕ ಸದಸ್ಯರನ್ನು ಮಾಡುವ ಕೊನೆಯ ತಾರೀಖು ೧೫-೬-೩೯ ಎಂದು ವರ್ಕಿಂಗ್ ಕಮಿಟಿಯವರು ನಿರ್ಣಯಿಸಿರುವರು ಕಾರಣ ಇನ್ನು ಎರಡು ತಿಂಗಳು ಮಾತ್ರ ಈ ಕೆಲಸಕ್ಕೆ ಉಳಿದಿರುವರು ಅಷ್ಟರಲ್ಲಿಯೇ ಎಲ್ಲ ಅಧೀನ ಸಮಿತಿಗಳು— ಈ ಬಗ್ಗೆ ನಾವು ಆಗಾಗ್ಗೆ ಕೊಟ್ಟ ನಿಯಮ ಸಲಹೆಗಳನ್ನು ಲಕ್ಷದಲ್ಲಿಟ್ಟು ಮನಮುಟ್ಟಿ ಕಾರ್ಯವಾಡಬೇಕು, ಮೊನ್ನೆ ಮುಂಬಯಿಯಲ್ಲಿ ಸೇರಿದ ಅಖಿಲಭಾರತ ಕಾಂಗ್ರೆಸ ಸಮಿತಿಯ ಸಭೆಯಲ್ಲಿ ಕೆಲವು ಘಟನಾತ್ಮಕ ತಿದ್ದುಪಡಿಗಳಾದ್ದರಿಂದ ಸದಸ್ಯತ್ವ ಫಾರ್ಮಿನಲ್ಲಿ ತುಸು ಹೆಚ್ಚು ಕಡಿಮೆಯಾಗಿರುವದು ಆದರೆ ಈಗಾಗಲೇ ಮುಕ್ಕಾಲು ಪಾಲು ಸದಸ್ಯತ್ವ ಪುಸ್ತಕಗಳು ಜಿಲ್ಲಾ ಸಮಿತಿಗೆ—ಮುಂದೆ ತಾಲೂಕ ಸಮಿತಿ ಹಾಗೂ ವ್ಯಕ್ತಿಗಳಿಗೆ ಹಂಚಲಾಗಿವೆ ಕಾರಣ ಈ ಸಲ ಬದಲಾವಣೆ ಮಾಡಲು ಸಾಧ್ಯವಿಲ್ಲ ಆದರೂ ಸಹ ಫಾರ್ಮುಗಳನ್ನು ಇನ್ನು ಮುಂದೆ ತುಂಬುವಾಗ್ಗೆ— ಸದಸ್ಯರಾಗಲಿಚ್ಛಿಸುವವರು ಪುರುಷರಿದ್ದರೆ ತಂದೆಯ ಹೆಸರನ್ನೂ ಸ್ತ್ರೀಯರಿದ್ದರೆ ಗಂಡನ ಹೆಸರನ್ನೂ ಬರಿಯಬೇಕು ಸದಸ್ಯನ ಸಹಿ 'ಹಾಗು' ಹಣ ಪಡೆಯುವವನ ಸಹಿ ಈ ಮಧ್ಯದಲ್ಲಿ ಒಬ್ಬ ಸಾಕ್ಷೀದಾರನ ಸಹಿಯನ್ನೂ ಮಾಡಿಸಬೇಕು

ಈ ಪ್ರಕಾರ ಕಾಂಗ್ರೆಸ್ ಘಟನೆಯಲ್ಲಿ ಬದಲಾವಣೆಗಳನ್ನು ಮಾಡಲು ಮುಖ್ಯ ಕಾರಣವೆಂದರೆ ಸಧ್ಯಕ್ಕೆ ಪ್ರಚಲಿತದಲ್ಲಿರುವ ಖೊಟ್ಟಿ ಸಭಾಸದತ್ವವನ್ನು ದೂರ ಮಾಡುವದು ಇದೇ ಉದ್ದೇಶದಿಂದಲೇ ಇಲ್ಲಿ ಕೆಲವು ಸೂಚನೆಗಳನ್ನು ಕೊಡಲಾಗಿದೆ ಅವುಗಳನ್ನೆಲ್ಲಾ ಅಧೀನ ಸಮಿತಿಗಳು ಮನಃಪೂರ್ವಕವಾಗಿ ಹಾಗು ಕಟ್ಟು ನಿಟ್ಟಿನಿಂದ ಅನುಸರಿಸಿದರೆ ಬಹುಮಟ್ಟಿಗೆ ಈ ಕೊಳೆಯು ದೂರಾಗುವದರಲ್ಲಿ ಸಂದೇಹವಿಲ್ಲ —

೧ ಸದಸ್ಯರನ್ನು ಮಾಡಲು ಪುಸ್ತಕಗಳನ್ನು ತೆಗೆದುಕೊಂಡ ವ್ಯಕ್ತಿಗಳು ತಾಲೂಕು ಸಮಿತಿಗಳ ಕಡೆಗೆ ಸಕಾಲಕ್ಕೆ—(೧) ಸದಸ್ಯತ್ವದ ಪೂರ್ಣ ವರದಿ (೨) ಸದಸ್ಯರಾದಷ್ಟು ೦-೪-೦ ಆಣೆ ಹಣ, (೩) ಸಂಪೂರ್ಣವಾಗಿ ಮುಗಿದ ಪುಸ್ತಕಗಳು.—ಇವೆಲ್ಲವುಗಳನ್ನು ಒಪ್ಪಿಸಬೇಕು. (ಕೊಟ್ಟ ಪುಸ್ತಕಗಳನ್ನೆಲ್ಲಾ ಪೂರ್ಣ ಮುಗಿಸಿ ಎಲ್ಲವನ್ನೂ ಲೆಕ್ಕದೊಂದಿಗೆ ಒಪ್ಪಿಸಿದ ಬಳಿಕ ಆಯಾ ವ್ಯಕ್ತಿಗಳಿಗೆ ಹೊಸ ಪುಸ್ತಕಗಳನ್ನು ಕೊಡಬೇಕು.

೨. ಗ್ರೂಪ ಹಾಗು ಗ್ರಾಮ ಸಮಿತಿಗಳು ತಾಲೂಕು ಸಮಿತಿಗೆ ಸಕಾಲಕ್ಕೆ ವರದಿಯನ್ನೊಪ್ಪಿಸಬೇಕಲ್ಲದೆ ಸದಸ್ಯರಾದಷ್ಟು ನಾಲ್ಕು ಆಣೆ ಹಣವನ್ನು (ಪೂರ್ಣ) ಎಂಟು ದಿನಕ್ಕೊಮ್ಮೆ ತಾಲೂಕು ಕಾಂಗ್ರೆಸು ಸಮಿತಿಗಳಲ್ಲಿ ಜಮೆ ಮಾಡಿ ಪಾವತಿ ಪಡಿಯಬೇಕು.

೩ ತಾಲೂಕು ಸಮಿತಿಗಳು ಜಿಲ್ಲಾ ಸಮಿತಿಗೆ ಪ್ರತಿ ವಾರಕ್ಕೊಮ್ಮೆ ಈ ಕೆಳಗಿನ ಮಾಹಿತಿ ಕಳಿಸಬೇಕು:—೧ ತಮ್ಮ ತಾಲೂಕಿನಲ್ಲಿಯ ಆ ವಾರದಲ್ಲಿ ಆಗಲಿ ಅಲ್ಲಿಯವರೆಗೆ ಆದ ಒಟ್ಟು ಸದಸ್ಯರ ಸಂಖ್ಯೆ ೨ ತಾವು ವ್ಯಕ್ತಿಗಳಿಗೆ ಹಂಚಿದ ಪುಸ್ತಕಗಳ ಪೂರ್ಣ ವಿವರ. (ಇದರಲ್ಲಿ ವ್ಯಕ್ತಿಗಳ ವಿಳಾಸ, ಕೊಟ್ಟ ಪುಸ್ತಕಗಳ ಮೇಲಿನ ಕ್ರಮಾಂಕ ಹಾಗು ಸಂಖ್ಯೆ ಸೇರುವದು)

೪ ಜಿಲ್ಲಾ ಸಮಿತಿಗಳು ನಮ್ಮ ಜಿಲ್ಲೆಯಲ್ಲಾದ ಸದಸ್ಯರ ಸಂಖ್ಯೆ ಹಾಗು ವ್ಯಕ್ತಿಗಳಿಗೆ ಕೊಡಲ್ಪಟ್ಟ ಪುಸ್ತಕಗಳ ಪೂರ್ಣ ವಿವರ (ಮೇಲಿನಂತೆ) ಗಳನ್ನೊಳಗೊಂಡ ಒಂದು ವರದಿಯನ್ನು ಪ್ರತಿ ೧೫ ದಿನಗಳಿಗೊಮ್ಮೆ ಪ್ರಾಂತೀಯ ಸಮಿತಿಗೆ ಕಳಿಸಬೇಕು

ಈ ಸಂಬಂಧವಾದ ತಾರೀಕುಗಳು ಎಲ್ಲರಿಗೂ ಅನುಕೂಲವಾಗಿರಬೇಕೆಂದು ಕೆಳಗಿನಂತೆ ಗೊತ್ತು ಮಾಡಿದೆ —

ಪ್ರತಿ ತಿಂಗಳು ೧, ೮, ೧೫ ಮತ್ತು ೨೨ನೇ ತಾರೀಕುಗಳಲ್ಲಿ ತಾಲೂಕು ಸಮಿತಿಗಳು ಜಿಲ್ಲಾ ಸಮಿತಿಗೆ ಮೇಲ್ಕಾಣಿಸಿದ ಮಾಹಿತಿ ತಿಳಿಸುವದು

ಪ್ರತಿ ತಿಂಗಳ ೫ ಹಾಗು ೨೦ನೇ ತಾರೀಕುಗಳಲ್ಲಿ ಜಿಲ್ಲಾ ಸಮಿತಿಗಳು ಪ್ರಾಂತೀಯ ಸಮಿತಿಗೆ ವರದಿಯನ್ನು ಒಪ್ಪಿಸಬೇಕು

ಈ ಸಂಬಂಧದ ಮೊದಲನೇ ವರದಿಯು ತಾಲೂಕು ಸಮಿತಿಗಳಿಂದ ಜಿಲ್ಲಾ ಸಮಿತಿಗಳಿಗೆ ೧೫-೭-೩೯ರ ಒಳಗಾಗಿ ಹಾಗು ಜಿಲ್ಲೆಗಳಿಂದ ಪ್ರಾಂತೀಯ ಸಮಿತಿಗೆ ೨೦-೭-೩೯ರ ಒಳಗೆ ಒಪ್ಪಿಸಲ್ಪಡಬೇಕು

ಈ ಸದಸ್ಯತ್ವದ ಸಂಬಂಧವಾದ ಪ್ರಾಂತೀಯ ವೇಳಾ ಪತ್ರಿಕೆಯನ್ನು ಬೇಗನೆ ಪ್ರಸಿದ್ಧಿಸಲಾಗುವದು ಅದರಲ್ಲಿ ಜಿಲ್ಲಾ ಸಮಿತಿಗಳು ಪ್ರಾಂತೀಯ ಸಮಿತಿಗೆ ಹಣಯಾದಿಟ್ಟು ಸ್ಥಳಗಳನ್ನು ಒಪ್ಪಿಸುವ ಕೊನೆಯ ತಾರೀಕು ನಿರ್ದೇಶಿಸಲ್ಪಡುವದು. ಅಷ್ಟರಲ್ಲಿ ಸಂಪೂರ್ಣ ಮಾಹಿತಿಯು ಒಪ್ಪಿಸಲ್ಪಡಬೇಕು ಎಲ್ಲ ಪುಸ್ತಕಗಳು ನಿರ್ದಿಷ್ಟ ಅವಧಿಯಲ್ಲಿ ಪ್ರಾಂತೀಯ ಸಮಿತಿಗೆ ಬಾರದೇ ಇದ್ದಲ್ಲಿ ಜಿಲ್ಲಾ ಸಮಿತಿಗಳಿಂದ ಪ್ರತಿಯೊಂದು ಪುಸ್ತಕಕ್ಕೆ ರೂ. ೧-೨-೮-೦ಯಂತೆ ವಸೂಲು ಮಾಡಲ ಬರುವರು (ಅವಧಿ ಮೀರಿ ಪುಸ್ತಕ ಒಪ್ಪಿಸಿದರೆ ದಂಡದ ಹಣದಲ್ಲಿ ಕಡಿತವು ಸಿಗಲಾರದು)

ಈ ಬಂಧನಗಳನ್ನು ಹೇಳುವ ಉದ್ದೇಶಗಳನ್ನು ಅಧೀನ ಸಮಿತಿಗಳು ಸಂಪೂರ್ಣವಾಗಿ ತಿಳಿದುಕೊಂಡು ಈಗಿನಿಂದಲೇ ಸರಿಯಾಗಿಯೂ ಅಚ್ಚುಕಟ್ಟಾಗಿಯೂ ಕೆಲಸಮಾಡಲು ಪ್ರಾರಂಭಿಸಬೇಕು ಅಂದರೆ ಈ ಸದಸ್ಯರನ್ನು ಮಾಡುವ ಕಾರ್ಯದಲ್ಲಿ ಶ್ರೇಯಸ್ಸು ದೊರೆಯುವುದು

ಅಧೀನ ಸಮಿತಿಗಳಿಗೆ ಎಚ್ಚರಿಕೆ

ಮೊನ್ನೆ ಮೊನ್ನೆ ಮುಂಬಯಿಯಲ್ಲಾದ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಸಭೆಯಲ್ಲಿ ಪಾಸಾದ ಗೊತ್ತುವಳಿಗಳ ಬಗ್ಗೆ ವಿರೋಧವನ್ನು ಕೆಲವು ಕಾಂಗ್ರೆಸು ಸಮಿತಿಗಳು ಪ್ರದರ್ಶಿಸುತ್ತಿರುವುದು ಮೇಲಿನ ಸಮಿತಿಯ ಗಮನಕ್ಕೆ ಬಂದಿದೆ ಅಧೀನ ಸಮಿತಿಗಳು ತಮ್ಮ ಮೇಲಿನ ಸಮಿತಿಗಳ ನಿರ್ಣಯಗಳನ್ನು ಈ ಪ್ರಕಾರ ಖಂಡಿಸುವುದು ಶಿಸ್ತುಭಂಗವೆಂದು ಗಣಿಸಲ್ಪಡುವುದು ಕಾರಣ ಈ ಪ್ರಕಾರ ನಮ್ಮ ಪ್ರಾಂತದಲ್ಲಿಯ ಯಾವ ಸಮಿತಿಗಳೂ ವರ್ತಿಸಬಾರದೆಂದು ಭಿನ್ನವಿಸುತ್ತೇನೆ ಒಂದು ವೇಳೆ ವಿರೋಧ ಪ್ರದರ್ಶಿಸಿದಲ್ಲಿ ಆಯಾ ಸಮಿತಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ಎಚ್ಚರಿಸಲಾಗಿದೆ ಆದರೆ ಅಧೀನ ಸಮಿತಿಗಳು ತಮ್ಮ ಮೇಲಿನ ಸಮಿತಿಗಳಿಗೆ ವಿನಂತಿ ಹಾಗೂ ಸೂಚನೆಗಳನ್ನು ಕಳುಹಿಸಕೊಡಲು ಯಾವ ಅಡ್ಡಿಯೂ ಇಲ್ಲ' ಎಂದು ಗೌ| ಕಾರ್ಯದರ್ಶಿ ಶ್ರೀ. ನಾ ಸು. ಹರ್ಡೀಕರರು ತಿಳಿಸುತ್ತಾರೆ

ಹೊಸ ವಾರ್ತೆ

ಬ್ರಿಟನ್—ಫ್ರಾನ್ಸುಗಳೊಳಗೆ ನಡೆದ ಒಪ್ಪಂದದಿಂದ ಟರ್ಕಿಯಲ್ಲಿ ದೇಶದ ಒಳಗೂ ಹೊರಗೂ ಶಾಂತಿಗೆ ಕುಂದರೆಯೊದಗಲಿಲ್ಲವೆಂದೂ, ನಮ್ಮನ್ನು ಯುದ್ಧರಂಗಕ್ಕೆ ಎಳೆಯಲ್ಪಡುವ ಸಂದರ್ಭದಲ್ಲಿ ತಾವೂ ನಮ್ಮ ರಕ್ಷಣೆಗೆ ಸಿದ್ಧರಾಗಿರುವೆವೆಂದೂ ಟರ್ಕಿ ವಿದೇಶಿ ಮಂತ್ರಿಗಳು ಹೇಳುತ್ತಾರೆ.

★

೬೦,೦೦೦ ಜನರಿಂದ ಸೇರಿದ ಒಂದು ಜಪಾನಿನ ಸಭೆಯಲ್ಲಿ ಬ್ರಿಟಿಷ್ ವಿರುದ್ಧ ಭಾಷಣಗಳಾಗಿ ಠರಾವು ಮಂಜೂರಾಯಿತು. ಅದನ್ನು ಚೆಂಬರ್ಲೇನ್, ಹೆಲಿಫಾಕ್ಸ್ ಮೊದಲಾದವರಿಗೆ ಕಳುಹಿಸಲಾಗಿದೆ

★

ಮಧುರೆಯ ಮಹಾಮೀನಾಕ್ಷಿ ದೇವಾಲಯ ಅಲ್ಲದೆ ಇನ್ನೂ ಅನೇಕ ತಮಿಳು ನಾಡಿನ ದೇವಾಲಯಗಳು ಹರಿಜನರಿಗೆ ಪ್ರವೇಶಿಸಲು ತೆರೆಯಲ್ಪಟ್ಟುವು.

★

ಗಡಿನಾಡಿನಲ್ಲಿ ಮಹಾತ್ಮಾ ಗಾಂಧಿಯವರು ಹಲವು ಕಾಂಗ್ರೆಸು ಮುಖಂಡರನ್ನು ಕಂಡು ಕಾಂಗ್ರೆಸು ಸಂಸ್ಥೆಯ ಶುದ್ಧೀಕರಣದ ಕುರಿತು ಚರ್ಚಿಸಿದರು

★

ಸಿಲೋನಿಗೆ ನೆಹರುಗಳು ಕೇವಲ ಹಿಂದೀಯರ ಹಿತಚಿಂತಕರಾಗಿ ಬರುವರೆಂದೂ, ಸಿಲೋನೀಯರ ಬಗ್ಗೆ ಅವರಿಗೆ ಸಹ ಸಂತಾಪವಿಲ್ಲವೆಂದೂ, ಆದ್ದರಿಂದ ನಾವು ಅವರ ಆಗಮನವನ್ನು ಸ್ವಾಗತಿಸುವುದಿಲ್ಲವೆಂದೂ ಸಿಲೋನಿಯರ ಹೇಳಿಕೆ!

★

ಸುಭಾಷಚಂದ್ರ ಬೋಸರು ತಮ್ಮ ಶಿಸ್ತು ಜ್ಯಾರಿಗೆ ಹೆದರುವುದಿಲ್ಲವೆಂದೂ ಇಂದಿನ ಬಲಪಕ್ಷದ ಕಾಂಗ್ರೆಸ್ ಧೋರಣೆಯನ್ನು ಖಂಡಿಸುವೆನೆಂದೂ, ಬೊಂಬಯಿ ನಗರದ ಮದ್ಯಪಾನ ನಿಷೇಧ ಕಾರ್ಯವು ತಪ್ಪೆಂದೂ ಹೇಳುತ್ತಾರೆ

★

ಡೆಂಜಿಗಿನ ಮೇಲೆ ಜರ್ಮನಿಯು ಯಾವುದೆ ರೀತಿಯಲ್ಲಿ ತನ್ನ ಹಕ್ಕನ್ನು ಬಲಾತ್ಕಾರಿಸಿ ಮಾಡಿದರೆ ಬ್ರಿಟನ್ ಪೋಲೆಂಡಿನ ಸಹಾಯವಾಗಿ ನಿಲ್ಲುವುದೆಂದು ಚೆಂಬರ್ಲೇನರು ಹೇಳುತ್ತಾರೆ

★

ಚೈನಾಕ್ಕೆ ತೆರಳಿದ ಭಾರತದ ವೈದ್ಯ ತಂಡ ಭಾಗವು ಕಾರಿನ ಅವಗಢದಿಂದ ಮೃತನಾದನು

★

ಸೋಶಿಯಲಿಸ್ಟ್ ಮುಖಂಡರಾದ ಶ್ರೀ ಜಯಪ್ರಕಾಶ ನಾರಾಯಣರು ಪೇಶಾವರದಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸಿನ ಕೆಲಸಗಾರರು ಕಾಂಗ್ರೆಸು ಸಂಸ್ಥೆಯಲ್ಲಿ ಒಡಕನ್ನು ಹುಟ್ಟಿಸುವಂತೆ ವರ್ತಿಸಬಾರದು ಎನ್ನುತ್ತಾರೆ!

ಪಂಜಾಬದ ರಣಕೇಸರಿ ರಾಜಾ ರಣಜಿತಸಿಂಹ

[ಭಾರತದ ಇತಿಹಾಸದಲ್ಲಿ ಒಂದು ಉಜ್ವಲ ರತ್ನ!]

ಪಂಜಾಬ್! ಆರ್ಯ ಸಂಸ್ಕೃತಿಯ ಪ್ರವಾಹವು ಹರಿದು ಬಂದ ಮೂಲ ಭೂಮಿ! ವೇದಕಾಲೀನ ಋಷಿಗಳ ಪುಣ್ಯತಪೋನಿಲಯ! ಭಾರತದ ಉಜ್ವಲ ಇತಿಹಾಸದಲ್ಲಿ ಪಂಜಾಬದ ನೆಲೆಯು ಅಸದೃಶವಾಗಿದೆ! ಚಿರಸ್ಮರಣೀಯವಾಗಿದೆ!

ಮುಗಲ ಸಾಮ್ರಾಜ್ಯವು ನಾಮಾವಶೇಷವಾದ ಬಳಿಕ ಭಾರತದಲ್ಲಿ ಸ್ವತಂತ್ರ ರಾಜ್ಯಸ್ಥಾಪನೆ ಮಾಡಿದ ವೀರ ರಾಜರ ಸಾಲಿನಲ್ಲಿ ಪಂಜಾಬದ ಕೇಸರಿ ಮಹಾರಾಜ ರಣಜಿತಸಿಂಗನಿಗೆ ಅಗ್ರಸ್ಥಾನವು ಸಿಗಬೇಕು! ಆತನ ಯುದ್ಧನೈಪುಣ್ಯ, ರಾಜನೀತಿಯ ಕುಶಲತೆ, ಇವುಗಳ ಫಲವಾಗಿ, ಕಿರಿದಾಗಿದ್ದ ಸಿಕ್ಖ್ ದೊರೆತನವು ಅಖಂಡ ಸಾಮ್ರಾಜ್ಯವಾಗಿ ವ್ಯಾಪಿಸಿತು! ಆತನ ನಿಧನದ ಮೇಲೆ ಅದೇ ಸಿಕ್ಖ್ ದೊರೆತನವು ಅವನತಿಗಿಳಿದುಬಂದುದೇ ಅವನಲ್ಲಿ ನೆಲೆಸಿದ್ದ ಕರ್ತೃತ್ವ ಶಕ್ತಿ, ಅನುಪಮ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ!

ಬಾಲ್ಯ

ಈ ಮಹಾವೀರನು ಕ್ರಿ. ಶ. ೧೭೮೦ರಲ್ಲಿ ಜನ್ಮತಾಳಿದನು. ಬಹಳ ಸಣ್ಣದಿರುವಾಗಲೇ ಮೈಲಿಗೆ ರೋಗತಾಗಿದ್ದರಿಂದ, ಮುಖದಲ್ಲೆಲ್ಲಾ ಕಪ್ಪು ಗುರುತುಗಳಾಗಿ ಕುರೂಪವಾದುದು ಮಾತ್ರವಲ್ಲದೆ, ಆತನ ಒಂದು ಕಣ್ಣೂ ಕಳೆದು ಹೋಯಿತು! ಆ ಒಂದು ಕಣ್ಣಿನ ಹುಡುಗನೇ, ತನ್ನ ಹೃದಯದಲ್ಲಿ ಹುದುಗಿದ್ದ ಉಜ್ವಲ ಆಕಾಂಕ್ಷೆಯ ಪರಿಣಾಮವಾಗಿ, ಮುಂದಕ್ಕೆ ಭಾರತದ ಇತಿಹಾಸದಲ್ಲಿ ರತ್ನಪ್ರಾಯನಾಗಿ ಬೆಳಗಿದನು! ರಣಜೀತನು ಚಿಕ್ಕವನಿದ್ದಾಗಲೇ, ಸಿಕ್ಖ ಜನಾಂಗದ ಮುಂದಾಳುವಾಗಿದ್ದ ತನ್ನ ತಂದೆಯ ಜತೆಯಲ್ಲಿ ಅನೇಕ ಸಾಹಸಕಾರ್ಯಗಳಿಗೆ ತೊಡಗಿ ಹೆಸರುವಾಸಿಯಾಗಿದ್ದನು!

ರಾಜ್ಯವಿಸ್ತಾರ

ರಣಜೀತನ ಹದಿನೆರಡನೆಯ ವಯಸ್ಸಿನಲ್ಲಿ ಆತನು ತಂದೆಯನ್ನು ಕಳಕೊಂಡನು! ಅಂತಹ ವಿಷಮ ಸಂದರ್ಭದಲ್ಲಿ ಆತನಿಗೆ ಅವನ ಸಂಬಂಧಿಕಳೊಬ್ಬಳು ಬೇಕಾದಷ್ಟು ಧನಸಹಾಯವನ್ನು ಒದಗಿಸಿದ ನಿಮಿತ್ತ ಬಹಳ ಉಪಕಾರವಾಯಿತು. ತನ್ನ ಒಂದು ಸಾಹಸ ಕೆಲಸದ ಫಲವಾಗಿ ಆತನು ಲಾಹೋರಿನ ಒಡೆಯನಾಗಿ, ರಾಜನೆಂಬ ಬಿರುದನ್ನು ಪಡೆದನು. ಕಾಬೂಲಿನ ಅರಸಿಗೆ ಮಾಡಿದ ಒಂದು ಸಾಹಸದ ಸಹಾಯಕ್ಕಾಗಿ ರಣಜಿತನಿಗೆ ಲಾಹೋರಿನ ಸ್ವತಂತ್ರ ಅಧಿಕಾರವು ನೆಲೆಯಾಯಿತು. ಸ್ವಲ್ಪ ಸಮಯದ ಮೇಲೆ, ಆತನು ಅಮೃತಸರವನ್ನು ಮುತ್ತಿ ಅದನ್ನು ಸ್ವಾಧೀನ ಪಡಿಸಿದನು ಆ ಸಮಯದಲ್ಲಿ ರಣಜಿತನಿಗೆ ಯಾವುದೇ ರಾಜ್ಯವನ್ನು ಆಕ್ರಮಿಸಿ, ವಿಜಯಶಾಲಿಯಾಗುವ ವಿಷಯದಲ್ಲಿ ಯಾವ ಸಂಶಯವೂ ಇರಲಿಲ್ಲ. ಆಗ ಸಿಕ್ಖರಲ್ಲಿಯೇ ಅನ್ಯೋನ್ಯ ಪಂಗಡಗಳೊಳಗೆ ಜಗಳವಿತ್ತು. ರಣಜಿತನು ಅವರನ್ನು ಸೋಲಿಸಿ ಮುಖ್ಯಸ್ಥನಾದನು ಪಂಜಾಬಿನಲ್ಲಿರುವ ಮಹಮ್ಮದೀಯರು ದಂಗೆಯೇಳಲು, ಅವರನ್ನು ಎದುರಿಸಿ ಸ್ವಾಧೀನತೆಯಲ್ಲಿಟ್ಟನು. ಅಫ್ಘಾನರನ್ನೂ ಬಲಗುಂದಿಸಿದನು. ಮುಲ್ತಾನ, ಜಮ್ಮು, ಕಾಶ್ಮೀರ, ಪೇಶಾವರಗಳು ಮತ್ತು ಅನೇಕ ರಾಜಪುತ ಸಂಸ್ಥಾನಗಳು ಆತನ ಆಡಳಿತದ ಅಂಕೆಯೊಳಗೆ ಬಂದುವು!

ಬ್ರಿಟಿಷರ ಸಂಬಂಧ

ರಣಜಿತಸಿಂಗನಿಗೆ ಇಡೀ ಸಿಕ್ಖಮತೀಯರನ್ನು ಒಂದೇ ಒಡೆತನದ ಕೆಳಗೆ ಬರುವಂತೆ ಮಾಡಬೇಕೆಂಬ ಅಪೇಕ್ಷೆ ಬಹಳ ಇತ್ತು! ಇದರಲ್ಲಿ ಆತನು ಜಯಶಾಲಿಯಾಗಲಿಲ್ಲ; ಇದಕ್ಕಾಗಿಯೇ ಆಗ ಸಾಮ್ರಾಜ್ಯವನ್ನು ಬೆಳೆಸುತ್ತಿದ್ದ ಆಂಗ್ಲರೊಡನೆ ಆತನು ಸಂಬಂಧ ಬೆಳೆಸಬೇಕಾಗಿ ಬಂತು. ಸಿಕ್ಖರ ರಾಜ್ಯವೊಂದನ್ನು ರಣಜಿತನು ಸ್ವಾಧೀನಪಡಿಸಲು ಯತ್ನಿಸಿ, ಕಡೆಗೆ ಅದು ಬ್ರಿಟಿಷರ ಸ್ವಾಧೀನವಾಯಿತು! ಚಾರ್ಲ್ಸ್ ಮೆಟ್‌ಕಾಫೆಯವರ ಮುಂದಾಳುತನದಿಂದ, ಇಂಗ್ಲಿಷರ ಒಂದು ರಾಯಭಾರಿತ್ವವು ನಡೆದು, ಸಟ್ಲೇಜ್ ನದಿಯು ರಣಜಿತನ ರಾಜ್ಯದ ಪೂರ್ವದ ಗಡಿಯಾಗಿ ನಿಶ್ಚಯವಾಯಿತು. ರಣಜಿತನು ಈ ಒಪ್ಪಿಗೆಗೆ ಎಂದೆಂದೂ ಮೀರಿ ನಡೆದದ್ದಿಲ್ಲ! ಆದರೆ ಕೆಂಪು ಶಾಯಿಯಿಂದ ಗುರುತಿಸಿದ ಇಂಗ್ಲಿಷರು ಸ್ವಾಧೀನಪಡಿಸಿದ ಹಿಂದೂದೇಶದ ಪ್ರಾಂತಗಳನ್ನು ಬಿಡಿಸಿದ ನಕಾಶೆಯನ್ನೊಮ್ಮೆ ನೋಡಿ, ಆತನು ವಿಷಾದದಿಂದ 'ಸ್ವಲ್ಪ ಸಮಯದಲ್ಲಿ ಇಡೀ ಹಿಂದೂದೇಶವೇ ಕೆಂಪಾಗುವುದೇ?' ಎಂದು ನಿಟ್ಟುಸುರಿಳೆದನಂತೆ!

ಸೈನ್ಯಶಕ್ತಿ

ಜೀವನದಲ್ಲಿ ಒದಗಿದ ಅನೇಕ ಘಟನೆಗಳಿಂದ, ಇಂಗ್ಲಿಷರ ಅಧೀನದಲ್ಲಿ ತರಬೇತಿ ಹೊಂದಿದ ಸೈನ್ಯವು ಹೆಚ್ಚು ಪ್ರಭಾವಶಾಲಿಯಾದೀತೆಂಬ ಅಭಿಪ್ರಾಯವು ಆತನಲ್ಲಿ ಸ್ಥಿರವಾಗಿತ್ತು! ಹಾಗಾಗಿ ಆತನು ತನ್ನ ಸೈನ್ಯವನ್ನು ಹೆಚ್ಚು ಮೆಹನತ್ತಿನಿಂದ ತಯಾರುಮಾಡಲೂ, ಹಿಂದಿನ ಯುದ್ಧೋಪಕರಣಗಳನ್ನು ಬಿಟ್ಟು ಹೊಸ ಉಪಕರಣಗಳನ್ನು ಉಪಯೋಗಿಸಲೂ ಮನಸ್ಸು ಮಾಡಿದನು. ಒಮ್ಮೆ ಆತನು ಇಬ್ಬರು ಯೂರೋಪಿಯನ್ ಜನರಲರನ್ನು ತನ್ನಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದನು. ಅವರಿಗೆ ಚೆನ್ನಾಗಿ ಸಂಬಳವನ್ನು ಕೊಡುತ್ತಿದ್ದುದರಿಂದ ಅವರು ರಣಜಿತ ಸೈನ್ಯವನ್ನು ಯೂರೋಪಿಯನರ ರೀತಿಯಲ್ಲಿಯೇ ತರಬೇತಿ ಮಾಡಿದರು. ಹೀಗೆ ಆತನು ಶಿಸ್ತಿನಿಂದ, ಶಕ್ತಿಯಿಂದ ಮತ್ತು ಸಂಘಟಿತ ರೂಪದಿಂದ, ತನ್ನ ಸೈನ್ಯವನ್ನು ತಯಾರು ಮಾಡಿದನು ಈ ಸೈನ್ಯವೇ ಮುಂದಕ್ಕೆ ಇಂಗ್ಲಿಷರ ಎದುರಾಗಿ ಯುದ್ಧಮಾಡಿ ಸಾಮರ್ಥ್ಯವನ್ನು ಪ್ರದರ್ಶಿಸಿತು!

ವ್ಯಕ್ತಿತ್ವ

ತನ್ನಲ್ಲಿ ಉದ್ಯೋಗಕ್ಕೆ ಆತನು ಜಾತಿಭೇದವಿಲ್ಲದೆ ಯೋಗ್ಯರಾದವರನ್ನೇ ನಿಯಮಿಸುತ್ತಿದ್ದುದರಿಂದ, ಆತನ ಆ ಸ್ಥಾನವು ಉತ್ತಮ ಜನರಿಂದಲೇ ಶೋಭಿತವಾಗಿತ್ತು. ಅವರಲ್ಲಿ ಆತನ ಪ್ರಧಾನಮಂತ್ರಿಯೂ, ವಿಶ್ವಾಸಪಾತ್ರನೂ ಆದ ಫಕೀರ ಅಜುದ್ದೀನನೆಂಬ ಮಹಮ್ಮದೀಯನು ಪ್ರಖ್ಯಾತನು. ಅಜುದ್ದೀನನೊಡನೆ ಒಮ್ಮೆ ಸಿಮ್ಲಾದಲ್ಲಿ ಒಬ್ಬ ಆಂಗ್ಲೇಯನು ರಣಜಿತನ ಯಾವ ಕಣ್ಣು ಕುರುಡಾಗಿರುವುದೆಂದು ಪ್ರಶ್ನಿಸಿದಾಗ, ಯಾವ ತಡವೂ ಇಲ್ಲದೆ, ಅಜುದ್ದೀನನು "ಆತನ ಮುಖದ ತೇಜಸ್ಸು ಅಷ್ಟು ಪ್ರಭಾವಶಾಲಿಯಾದುದರಿಂದ, ನಾನೊಮ್ಮೆಯಾದರೂ ಆತನನ್ನು ಸಮೀಪದಿಂದ ನೋಡಿದ್ದಿಲ್ಲ"ವೆಂದನು. ರಣಜಿತನು ರೋಗದಿಂದ ಮುಖವಿಕಾರವುಳ್ಳವನಾಗಿದ್ದರೂ, ಆತನಿಗೆ ಜನ್ಮತಃ ಬಂದ ಕ್ಷಾತ್ರತೇಜಸ್ಸು ಅಪೂರ್ವ ಸೌಂದರ್ಯವನ್ನು ಉಂಟುಮಾಡಿತ್ತು! "ಆತನು ತನ್ನ ಕುದುರೆಯನ್ನು ಏರಿ ಕುಳಿತ ಕೂಡಲೇ, ಅಂತರ್ಯದಲ್ಲಿ ಅಡಗಿರುವ ಒಂದು ಅಪೂರ್ವ ಶಕ್ತಿಯಿಂದ ಆವೇಶಗೊಂಡಂತೆ ರಣಜಿತಸಿಂಹನು ಭಯಂಕರನಾಗಿ ಕಾಣುವನು" ಎಂದು ಒಬ್ಬ ಆಂಗ್ಲೇಯ ಇತಿಹಾಸಕಾರನು ವರ್ಣಿಸಿರುವನು.

ಆತನು ಓದು ಬರಹವಿಲ್ಲದವನಾಗಿದ್ದರೂ. ಬಹಳ ತೀಕ್ಷ್ಣ ವಿಚಾರ-ಶಕ್ತಿಯುಳ್ಳವನಾಗಿದ್ದನು. ಆತನು ಪ್ರತಿಯೊಂದು ಇಲಾಖೆಯ ವಿಷಯಗಳನ್ನು ಸಂಖ್ಯಾಸಹಿತವಾಗಿ ನೆನಪಿಡಲು ಶಕ್ತನಾಗಿದ್ದನು. ಆತನಲ್ಲಿ ಕೆಲಸಕ್ಕಿದ್ದ ಅತ್ಯಂತ ಕೆಳಗಿನ ಕರಣಿಕರಿಂದ ಹಿಡಿದು, ಪಂಜಾಬದ ಪ್ರತಿಯೊಂದು ಹಳ್ಳಿಯಿಂದ ಹಿಡಿದು ಹೆಸರುಹೇಳಿ ಕರೆಯಲು ಬಲ್ಲವನಾಗಿದ್ದನು. ಒಮ್ಮೆ ನೋಡಿದವನನ್ನು ಆ ಮೇಲೆ ಎಷ್ಟೋ ವರ್ಷಗಳ ತನಕವಾದರೂ ಗುರುತಿಸಲು ಶಕ್ತನಾಗಿದ್ದನು

ಕೊನೆಯ ದಿನಗಳು

ಅವಿಶ್ರಾಂತವಾಗಿ ಮಾಡಿದ, ಅತುಲ ಸಾಹಸಕಾರ್ಯಗಳಿಂದಾಗಿ, ತನ್ನ ಐವತ್ತನೆಯ ವರ್ಷದಲ್ಲಿಯೇ ಆತನ ಶರೀರವು ನಿರ್ಬಲವಾಯಿತು! ಧಾರ್ಮಿಕನಾಗಿದ್ದ ರಣಜಿತನು, ಅಪಾರದ ದ್ರವ್ಯವನ್ನು ದೇವಾಲಯಗಳಿಗೂ ಪುರೋಹಿತರಿಗೂ ದಾನವಿತ್ತನು. ತನ್ನಲ್ಲಿದ್ದ ಅಮೂಲ್ಯ ರತ್ನವಾಗಿದ್ದ "ಕೋಹಿನೂರ"ನ್ನು ಪುರಿಯ ಜಗನ್ನಾಥ ದೇವಸ್ಥಾನಕ್ಕೆ ದಾನವಾಗಿ ಶಾಸನ ಮಾಡಿದ್ದನು. ಪಂಜಾಬನ್ನು ಇಂಗ್ಲಿಷರು ಸ್ವಾಧೀನಪಡಿಸುವ ವರೆಗೆ, ಆ ಅಮೂಲ್ಯರತ್ನವು ಅಲ್ಲಿಯೇ ಇತ್ತು. ಆ ಮೇಲೆ ಮಾತ್ರ ಬ್ರಿಟಿಷ್ ಸಾಮ್ರಾಜರ ಕಿರೀಟದಲ್ಲಿ ಕಂಗೊಳಿಸುವಂತಾಯಿತು!

ರಣಜಿತಸಿಂಗನು ಐವತ್ತೊಂಬತ್ತನೆಯ ವರ್ಷದಲ್ಲಿ ಸ್ವರ್ಗಸ್ಥನಾದನು. ಆತನ ನಾಲ್ಕು ಮಂದಿ ಪತ್ನಿಯರೂ, ಏಳುಮಂದಿ ಸೇವಕಿಯರೂ ಚಿತೆಯಲ್ಲಿ ಭಸ್ಮೀಭೂತರಾದರು! ಅವನ ಸಮಾಧಿಯು ಇಂದೂ ಅಪೂರ್ವವಾಗಿ ಆ ಮಹಾವೀರನ ಧೈರ್ಯದ ಸ್ಮರಣೆಯನ್ನು ಹುಟ್ಟಿಸಿ ಅಚಲವಾಗಿ ಶೋಭಾಯಮಾನವಾಗಿ ಕಂಗೊಳಿಸುತ್ತದೆ!

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು. ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತುಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟಾಕಿಸ್ಟರು: ಪೊಪ್ಯುಲರ್ ಸ್ಟೋರ್ಸ್ ರಥಬೀದಿ, ಮಂಗಳೂರು.

ನೋಟೀಸು

ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ

ಶ್ರೀ ದೇವಸ್ಥಾನದ ಬಾಬ್ತು ಜಮಾ ಇರುವ ಸುಮಾರು ಎಂಟು ಸೇರು ಚಿನ್ನವನ್ನು ಎಳೆಂಟು ಲೋಟುಗಳನ್ನಾಗಿ ವಿಂಗಡಿಸಿ ಒಂದೊಂದಾಗಲೀ ಅಥವಾ ಅಗತ್ಯಕಂಡಲ್ಲಿ ಕಮ್ಮಿ ಸಂಖ್ಯೆಯ ಲೋಟುಗಳಿಂದಾಗಲೀ ಇದೇ ಬರುವ ತಾ. ೬-೮-೧೯೩೯ನೇ ರವಿವಾರ ಬೆಳಿಗ್ಗೆ ಘಂಟೆ ೧೦ಕ್ಕೆ ಶ್ರೀ ದೇವಸ್ಥಾನದ ವಸಂತ ಮಂಟಪದಲ್ಲಿ ಬಹಿರಂಗವಾಗಿ ಏಲಂ ಕರೆಯೋಣವಾಗುವುದು

೧) ಏಲಮಿಗೆ ನಿಲ್ಲುವ ಅಪೇಕ್ಷೆಯುಳ್ಳವರು ಏಲಂ ಕರೆಯುವ ಮುಂಚಿತವಾಗಿ ಏಲಂ ಕರೆಯುವ ಆ ಲೋಟಿನ ಚಿನ್ನ ತೊಲೆ ೧ರ ರೂ. ೨-೦-೦ರಂತೆ ಪ್ರಥಮತ ಭಂಡಾರದಲ್ಲಿ ಡಿಪೊಜಿಟ್ ಇಡತಕ್ಕದ್ದು. ಅಂಥವರು ಮಾತ್ರ ಏಲಮಿಗೆ ನಿಲ್ಲಲಿಕ್ಕೆ ಹಕ್ಕುಳ್ಳವರಾಗಿರುತ್ತಾರೆ.

೨) ಏಲಮಿಗೆ ವಹಿಸಿಕೊಂಡು ಏಲಂಕಾಯಂ ಮಾಡಲ್ಪಟ್ಟ ಕೂಡಲೇ ಆ ಲೋಟಿನ ಹಣದಲ್ಲಿ ಆತನ ಬಾಬ್ತು ಡಿಪೋಜಿಟ್ ಇಡಬಹುದಾದ ಹಣ ಕಳೆದು ಮಿಕ್ಕ ಏಲಮಿನ ಪೂರಾ ಹಣ ಆಗಲೇ ಭಂಡಾರಕ್ಕೆ ಪಾವತಿಮಾಡಿ ಆ ಲೋಟಿನ ಚಿನ್ನವನ್ನು ಪಡೆಯತಕ್ಕದ್ದು. ತಪ್ಪಿದ್ದಲ್ಲಿ ದಂಡಾಸ್ತುದಾರನ ನಷ್ಟ ಸಂಭವದ ಮೇಲೆ ಪುನಃ ಏಲಂ ಮಾಡಲಾವದೀತು. ಮತ್ತು ಆತನ ಬಾಬ್ತು ಭಂಡಾರದಲ್ಲಿ ಡಿಪೋಜಿಟು ಇರುವ ಹಣವನ್ನು ಆತಗೆ ವಾಪಾಸು ತಿರೋಣವಾಗಲಿಕ್ಕಿಲ್ಲ.

೩) ಏಲಂ ಕಾಯಂ ಮಾಡುವ ಯಾ ಮಾಡದೆ ಇರುವ ಯಾ ಅಗತ್ಯಕಂಡಲ್ಲಿ ಏಲಂ ಮುಂದರಿಸುವ ಹಕ್ಕು ಭಂಡಾರದ ಕಡೆಯಿಂದ ಕಾದಿಟ್ಟಿದೆ.

The Trustees,
Mulki } Sri Venkatramana
-7-39 } Temple Mulki.

WANTED.

Applications are invited for the post of a manager (Parupathyagar) for the (Sri Venkatramana Temple, Mulki, on a salary of Rs. 75 per month.

The applicants should have completed the age of 25 years and must belong to the Gowd Saraswath Brahmin community.

The applicant, it selected, should furnish before taking up his appointment, security either in cash or of immovable property, for a sum of Rs. 2500.

Applications should be accompaied by True copies of testimonials, if any nd ashould reach the Trnstees on or before 7th August 1939.

For further particulars apply to:

The Trustees,
Mulki } Sri Venktramana Temple,
-7-39 } Mulki

ನಗರದ ನವ ನಾಯಕರು

[೬ನೇ ಪುಟದಿಂದ ಮುಂದುವರಿದುದು]

ಗಾಗಿ ತುಂಬ ವ್ಯಾಪಾರ ನಡೆಯಿತು. ಮುಂಬಯಿಯಲ್ಲಿ ಕೊಡುವ ಧಾರಣೆಗೆ ಮಂಗಳೂರಲ್ಲಿ ಸಿಗುವಾಗ ಯಾರು ತಾನೇ ಅವರ ಬಳಿಗೆ ಹೋಗಲಾರರು?

ಈ ವ್ಯಾಪಾರದ ಉಚ್ಛ್ರಾಯಸ್ಥಿತಿಯಲ್ಲೇ ಅವರು ಒಂದೆರಡು ಬ್ಯಾಂಕುಗಳ ಸ್ಥಾಪಕರೂ ಡಿರೆಕ್ಟರರೂ ಆದರು. ಅನೇಕ ಹೊಸ ಲಿಮಿಟೆಡ್ ಸಂಸ್ಥೆಗಳಲ್ಲಿ ಆಗ ತಾನೆ ಹುಟ್ಟಿದ ಮೋಹನನ ಹೆಸರಿನಲ್ಲಿ ಪಾಲು ಪಡೆದು ತಾವು ಪ್ರತಿನಿಧಿ ಡೈರೆಕ್ಟರರಾದರು. ತಿರುಗಿ ಅವರ ಅದೃಷ್ಟ ಮೊದಲಿನಂತೆ ಚಲಿಸತೊಡಗಿತು. ಬ್ಯಾಂಕುಗಳಲ್ಲಿ ಅವರ ಕೈ ಉಂಟು ಎಂಬುದು ಪ್ರಕಟವಾಗುತ್ತಲೇ ಊರವರಿಗೆ ಅವರ ಮೇಲೆ ಅಭಿಮಾನ ತಿರುಗಿ ಉಕ್ಕಿಬರತೊಡಗಿತು. ಅವರ ಮನೆ ಕಾಣದ ವಂತಿಗೆ ಪಟ್ಟಿಯಿಲ್ಲವಾಯಿತು. ಇವತ್ತಿಗೂ ಸರಿಯೆ ಅದೊಂದು ವಿಷಯದಲ್ಲಿ ಅವರು ಮುಂದೆ. ಕಾಂಗ್ರೆಸು ಚುನಾವಣೆಯೇ ಹೆರಿಗೆ ವಾರ್ಡಿನ ಸ್ಥಾಪನೆಯೇ ಆಗಲಿ, ಕ್ರಿಕೆಟ್ ಜಿಮ್ಖಾನ ಸ್ಥಾಪನೆಯೇ ಆಗಲಿ, ಮುನ್ಸಿಪಲ್ ಚುನಾವಣೆಯೇ ಆಗಲಿ—ಅವರ ಮಾತು ಅತ್ತಿತ್ತ ಅಲುಗುವಂತಿಲ್ಲ. ಮಾತಿನ ಭರವೂ ಉಳಿದಿದೆ, ಅದರಂತೆ ಕೆಲಸವೂ ಆಗುತ್ತದೆ.

ಇಷ್ಟಿದ್ದರೂ ಸಾಹುಕಾರರು ತಮ್ಮ ಕಟ್ಲೆರಿ ಹಾರ್ಡ್‌ವೇರ್ ಅಂಗಡಿಯ ವಹಿವಾಟನ್ನು ದಿಢೀರನೆ ನಿಲ್ಲಿಸಿದುದು ಎಲ್ಲರಿಗೂ ವಿಸ್ಮಯ ಹುಟ್ಟಿಸಿದ ಸಂಗತಿ. ಕೇಳಿದವರಿಗೆ "ಕಂಪ ಲ್ಸರಿ ನಿವೃತ್ತಿ" ಎಂದರೂ, ಊಹೆಗೆ ಹಲವು ಅವಕಾಶಗಳಾಗಿವೆ. ಇದು ಡಬಲ್ ಪಾಲಿಟಿಕ್ಸ್" ಎಂಬವರು ಕೆಲವರು 'ಟ್ರಬಲ್' ಎಂಬವರೂ ಹಲವರು. ಹೇಗೂ ಇರಲಿ—ಪ್ರಸಂಗ ನಡೆದುದು ಮಾತ್ರ ತುಸುಮಟ್ಟಿಗೆ ಅನ್ನಬಹುದು. ಪಾತಾಳದ ಆಳ ತಿಳಿಯದು ಎಂಬಂತೆ ಸಾಹುಕಾರರ ಮರ್ಜಿ ತಿಳಿಯುವುದು ಸುಲಭವಲ್ಲ.

ಮೂರು ವರ್ಷದ ಕೆಳಗೆ ಅವರ ಅಂಗಡಿಯ ಧನಲಕ್ಷ್ಮೀ ಪೂಜೆ ವಿಜೃಂಭಣೆಯಿಂದ ಜರಗುತ್ತಿರುವಾಗಲೇ ಅವರ ಗೋದಾಮು ಒಂದಕ್ಕೆ ಆಕಸ್ಮಿಕವಾಗಿ ಬೆಂಕಿ ತಗುಲಿತು. ಮಂಗಳೂರಲ್ಲಿ ಗೋದಾಮು ಆಗಲಿ, ಮನೆಯಾಗಲಿ—ಉರಿಯಿತೆಂದರೆ ಮುಗಿಯುವ ತನಕ ಉರಿಯಬೇಕು. ಅರ್ಧದಲ್ಲಿ ನಿಲ್ಲಲಿಕ್ಕಿಲ್ಲ. ಹಾಗಾಗುವುದಾದರೆ ಹಣವಾದರೂ ಅರ್ಧ ಉಳಿದೀತು, ಮನೆ ಗೋದಮುಗಳ ಅರೆ ಸೀಕರಿಯಾಗಲಾರವು. ಅದೇ ಲೆಕ್ಕಾಚಾರದಂತೆ ಗೋದಾಮ ಸ್ವಲ್ಪ ಧ್ವಂಸವಾಯಿತು. ಆಗ ಸಾಹುಕಾರರು ಲಕ್ಷ್ಮೀ ಪೂಜೆಗೆ ಅಣಿಯಾಗಿದ್ದರು. ಭಟ್ಟರು ಆರತಿ ಬಿಟ್ಟು ಎದ್ದರು. ಸಾಹುಕಾರರು ಅದೇ ಆರತಿ ಹಿಡಿದು ಪೂಜೆ ಮುಗಿಸಿ ಎದ್ದರು. ಅವರ ಭಕ್ತಿ ಕಂಡವರಿಗೆ ಯಾರಿಗೂ ಆಶ್ಚರ್ಯವಾಗಬೇಕು. ಸರಿ ಗೋದಾಮೂ ಉಳಿಯಲಿಲ್ಲ, ವ್ಯಾಪಾರ ನಿಂತಿತು. ಆದರೆ ಎರಡೂವರೆ ಲಕ್ಷಕ್ಕೆ ಇನ್ಶೂರು ಮಾಡಿದುದರಿಂದ ಹಣ ಕಳೆದುಕೊಂಡವರು ಬೇರೆಯವರಾದರು. ಇದು ಆ ದಿನದ ಧನಲಕ್ಷ್ಮೀ ಕೃಪೆಯಿಲ್ಲದೆ ಸಾಧ್ಯವೆ?

ಸರಿ—ಅಂದಿನಿಂದ ಅಳಿಯನ ಅಂಗಡಿ ಧ್ವಂಸವಾಯಿತು. ಅಳಿಯನು ನಿರಾಶೆಯಾಗಿ ಮಾವನ ಮನೆಯನ್ನು ಮದುವೆಯಾಗದೆ ಬಿಟ್ಟನಂತೆ. ಎರಡನೇ ಹುಡುಗಿ ಸುಶೀಲೆಗೆ ಮದುವೆಯಾಗಲೇ ಇಲ್ಲ. ಕಾರಣ—ಕೇಳಿದರೆ ಊರವರು ಒಂದೊಂದು ರೀತಿ ಹೇಳುತ್ತಾರೆ. 'ಸುಶೀಲೆ ಇಂಗ್ಲೆಂಡಿಗೆ ಹೋಗುತ್ತಾಳೆ' ಎಂದು ತಂದೆ ಹೇಳುತ್ತಾರೆ. ಸುಶೀಲೆಯಿಂದಾಗಿ, ಮನೆಯಲ್ಲಿ ಮೋಟರು ಇರಿಸಿಕೊಳ್ಳುವುದು ಎಂದು ಗವಯ ಅನ್ನುತ್ತಾನೆ. ಕೇಶವನ ತಮ್ಮನಿಗೂ ಸುಶೀಲೆಗೂ ನಿತ್ಯ ಕಾದಾಟವಾಗುತ್ತಿತ್ತೆಂದೂ ಅವರವರಿಗೆ ಹೊಂದಿಕೆಯೇ ಆಗದೆ ಮದುವೆ ಮುರಿಯಿತೆಂದೂ ಹಲವರು ಹೇಳುತ್ತಾರೆ. ಅಂತು ಈ ವಿಷಯದಲ್ಲಿ ಏನಾದರೊಂದು ರಾಜಿ ಮಾಡಿಸುವ ಎಂದು ಐ. ಸಿ. ಯಸ್. ಆಗಿ ಯು. ಪಿ.ಯಲ್ಲಿ ಡೆಪ್ಯುಟಿ ಕಲೆಕ್ಟರರಾಗಿರುವ ಕೇಶವ ಪ್ರಭುಗಳ ಸವಾರಿ ಎರಡಾವೃತ್ತಿ ಮಂಗಳೂರಿಗೆ ಬಂದಿತು. ಸುಶೀಲೆಗೆ ತನ್ನ ಹೆಂಡತಿ ಕಲ್ಯಾಣಿಯಿಂದ ಉಪದೇಶವನ್ನು ಮಾಡಿಸಿದರಂತೆ. ಆದರೆ ಅವಳು ಕೇಶವನನ್ನು ಮದುವೆಯಾಗುವ ಬದಲು ಮಡೆಯನ್ನು ಮದುವೆಯಾಗಬಹುದು" ಎಂದಳಂತೆ. ಇದನ್ನೆಲ್ಲಾ ಕೇಳಿದವರಾರೋ ನಮಗೆ ತಿಳಿಯದು. ಆದರೆ ಇಂಥೆಲ್ಲಾ ವಾರ್ತೆಗಳಿಗೆ ಮನೆಮುಸುರೆಯವಳ ಮುದ್ರಿಕೆಯಿಂದ ಹಿಡಿದು ಗವಯಿಯ ಸಾಕ್ಷಿಯ ತನಕ ಇದೆ. ಅಂತು ಐ. ಸಿ. ಯಸ್. ಅಳಿಯರ ತಮ್ಮ ಊರು ಬಿಟ್ಟು ಹೋದವನು ತಿರುಗಿ ಬರಲೇ ಇಲ್ಲ. ಅನಂತರ ಅಣ್ಣತಮ್ಮಂದಿರಿಗೂ ಭೇಟಿಯಾಗಲಿಲ್ಲ. ಇತ್ತ ರಾಜಿಪ್ರಸ್ತಾಪ ಮಾಡಲು ಬಂದ ಕಲ್ಯಾಣಿಗೂ ಸುಶೀಲೆಗೂ ಸಂಧಿಯಾಗಲಿಲ್ಲ.

ಈಗ ಕ್ಲಬ್ಬಿನಲ್ಲಿ ಇಸ್ಪೀಟು ಆಡುತ್ತಿರುವಾಗಲೂ ಸುಶೀಲೆಯನ್ನು ಮದುವೆಮಾಡಿ ಇಂಗ್ಲೆಂಡಿಗೆ ಕಳುಹಿಸಲೇ ಇಲ್ಲವೇ ಮೊದಲಿಗೇ ಕಳುಹಿಸಲೇ—ಎಂದು ತಂದೆಯ ಯೋಚನೆ. ಇತ್ತ ಕೊಡಿಯಾಲ್ ಬೇಂಕಿನ ಡಿರೆಕ್ಟರರ ಮಗ ಮಂಜುನಾಥನ ಜಾತಕ ಕೂಡಿ ಬರುವುದೆಂದು. ಸುಶೀಲಾ ತಾಯಿ ಹೇಳುತ್ತಾಳೆ. ಹುಡುಗ ಓದುತ್ತಿರುವುದೂ ಇಂಟರಿನಲ್ಲಿ. ಇಬ್ಬರು ಒಂದೇ ಕ್ಲಾಸು. ಇಬ್ಬರಲ್ಲಿಯೂ ಪ್ರೇಮವಿದೆ—ಎಂದು ತಾಯ ನಂಬಿಕೆ. ಅಂತು ಇನ್ನೂ ನಿಶ್ಚಿಂತೆಯಿಂದ ನಿವೃತ್ತರಾದ ನಾಗೇಂದ್ರ ಪೈಗಳು ನಿಶ್ಚಿಂತೆಯಿಂದ ಕಷ್ಟುಲಾಲಯದಲ್ಲಿ ಇಸ್ಪೀಟು ಆಡುತ್ತಿದ್ದರೆ ಅನ್ನಲು ಬರುವುದಿಲ್ಲ. ಎರಡು ಮಕ್ಕಳ ಮದುವೆಯಾಗಿ ಮೋಹನ ಇಂಗ್ಲೆಂಡಿಗೆ ಹೋಗಿ ಎಂದು ಅವನಿಗೊಂದು ಮದುವೆಯಾದರೆ ಸಾಹುಕಾರರ ಪಾಲನ ತಾತ್ಕಾಲಿಕ ನಿವೃತ್ತಿಬಂದಿತು. ಕೊನೆಗೆ ಮಗನು ಬದ್ಧಿಬಂದು ಮುದುಕ ತಂದೆ ಇನ್ನಾದರೂ ವ್ಯಾಪಾರದ ಅಂಗಡಿ ತೆಗೆಯುವ ಅಂದರೆ "ಆಗದು" ಎನ್ನಲು ಸಾಧ್ಯವಾಗುತ್ತದೆಯೇ?

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ

ಎಂಡ್ರೂಸ್ ಲಿವರ್ ಸೋಲ್ಟ್

ಎಂಡ್ರೂಸ್ ಬಾಟ್ಲಿಗಳಿಗಿಂತಲೂ ಟಿನ್ನುಗಳಲ್ಲಿ ಉತ್ತಮವಾಗಿ ನಿಲ್ಲುತ್ತದೆ

ವರ್ಷಗಟ್ಟಲೆಯ ಪರಿಶೋಧನೆಯ ಪರಿಣಾಮವಾಗಿ ಎಂಡ್ರೂಸ್ ಲವಣವು ಬಾಟ್ಲಿಗಳಿಗಿಂತಲೂ ಟಿನ್ನುಗಳಲ್ಲಿ ಉತ್ತಮವಾಗಿರುತ್ತದೆಂದು ಕಂಡುಹಿಡಿಯಲ್ಪಟ್ಟಿದೆ. ಆದುದರಿಂದ ಈ ಉತ್ತಮವಾದ ಎಂಡ್ರೂಸ್ ಲವಣವನ್ನು ಟಿನ್ನುಗಳಲ್ಲಿಯೇ ಕೊಂಡುಕೊಳ್ಳುವಂತೆ ನಮ್ಮ ಸಲಹೆ. ಆದರೆ ಬಾಟ್ಲಿಗಳೇ ಬೇಕೆನ್ನುವವರಿಗೆ ಬಾಟ್ಲಿಗಳಲ್ಲಿ ಕೂಡಾ ದೊರಕುತ್ತದೆ.

ಮೊದಲಾಗಿ ಪ್ರಾರಂಭಿಸಿ—ಪ್ರತೀ ಮುಂಜಾನೆ ಒಂದು ಚಮಚೆಯಷ್ಟು ಎಂಡ್ರೂಸ್ ಲವಣವನ್ನು ಒಂದು ವಾರದ ತನಕ ಸೇವಿಸಿ—ಇದು ನಿಮ್ಮ ಆರೋಗ್ಯವನ್ನು ಕಾಪಾಡುವುದು—ಎಂದೂ ನಷ್ಟ ಯಾವಾಗಲೂ ಕೊಂಡುಕೊಳ್ಳಿ.

ಎಂಡ್ರೂಸ್ ಲವಣ ಬೇರೆ ಬೇರೆ ಲವಣಗಳಿಂದ ಉತ್ತಮವಾದ ನಿಧಾನವಾಗಿ ಉಕ್ಕಿ ಬರುವ ಒಂದು ಗುಣವುಳ್ಳದ್ದು. ಈ ಗುಣದ ಪರಿಣಾಮದಿಂದ ಅದು ನಿಮ್ಮ ನಾಲಿಗೆ ಹೊಟ್ಟೆಯೊಳಗಿನ ಪಚನಾಂಗ ಆರೋಗ್ಯವಾಗಿರಿಸುವ ಗುಣವಿರುವುದು.

ಎಂಡ್ರೂಸ್ ಲವಣದಿಂದ ಉತ್ತಮ ಗುಣವನ್ನು ಪಡೆಯಬೇಕಾದರೆ ಎರಡು ಚಮಚೆಯಷ್ಟು ಲವಣವನ್ನು ಒಂದು ಗ್ಲಾಸ ನೀರಿನಲ್ಲಿ ಹಾಕಿ ಕದಡಿಸಿ ಅದು ಉಕ್ಕಿ ಬರುತ್ತಿರುವಾಗಲೇ ಕುಡಿಯಿರಿ.

ಟಿನ್ನುಗಳಲ್ಲಿ ಬಾಟ್ಲಿಗಳಲ್ಲಿದ್ದಷ್ಟೇ [illegible] ಲವಣವು ಆದರೆ ಬೆಲೆಯು ಕಡಿಮೆ.

ಎಲ್ಲಾ ಉಕ್ಕಿ ಬರುವ ಗುಣವುಳ್ಳ ಲವಣಗಳಿಗಿಂತಲೂ ಎಂಡ್ರೂಸ್ ಲವಣವು ಜಗತ್ತಿನಲ್ಲಿ ಹೆಚ್ಚಾಗಿ ಮಾರಲ್ಪಡುತ್ತದೆ. ಇದರ ತಯಾರಿಕೆಯು ಸಮಯ ಕೈ ಸೋಂಕುವುದಿಲ್ಲ.

ನೀವು ಈ ಕೆಳಗಿನವುಗಳಿಂದ ನರಳುತ್ತಿರುವಿರಾದರೆ ಎಂಡ್ರೂಸ್ ಲವಣವು ಅಗತ್ಯ

ಪಿತ್ತ ವಿಕಾರ	ಎದೆಯುರಿ
ಮಲಬದ್ಧತೆ	ಅಜೀರ್ಣ
ವಾತದೋಷ	ಅರುಚಿ
ಬವಳಿ	[illegible]
ತಲೆನೋವು	ಯಕೃತ್ತಿನ ರೋಗ

ಅಂತರ್ ಶುದ್ಧಿಗೆ ಎಂಡ್ರೂಸ ಲಿವರ್ ಸೋಲ್ಟ್

ದೊಡ್ಡ ಟಿನ್ನು (8 ಓನ್ಸು) (ಬಾಟ್ಲಿಗಳಲ್ಲಿದ್ದ ಪ್ರಕಾರವೇ ಪುದ) ರೂ 1—4—0
ಸಣ್ಣ ಟಿನ್ನು (4 ಓನ್ಸು) ರೂ 0—11—0

ಹಳೆಯ ಬಾಟ್ಲಿಗಳ ಕ್ರಯ

8 ಓನ್ಸು ರೂ. 1-10-0
4 ಓನ್ಸು ರೂ 1-0-0

755

ANDREWS
LIVER SALT
for Inner Cleanliness

★ ವಾರದ ಭವಿಷ್ಯ ★

[ಲೇಖಕ:— ಪಿ. ಈಶ್ವರ ಶರ್ಮ, ಹಸ್ತರೇಖಾ ಗಣಿತ ಶಾಸ್ತ್ರಿ,
ಮುಖ್ಯಪ್ರಾಣ ದೇವಸ್ಥಾನದ ಬಳಿ, ಮಂಗಳೂರು

ತಾರೀಕು 14—7—1939ರಿಂದ 20—7—1939ರ ವರೆಗೆ.

ಮೇಷ

ಸದಾ ಉತ್ಸಾಹದ ಶಕ್ತಿ, ಉದಾರ ಮನಸ್ಸು, ಬಲಿಷ್ಠತೆ, ಎದೆಧೈರ್ಯವುಳ್ಳ ಪುರುಷರೆಂದ ನಿಮ್ಮ ಕಷ್ಟ ವ್ಯಸನ ಕಾರ್ಯಬಾಗ ದೊಡ ಲಾದ ದುಸ್ಥಿತಿಯು ಅಧಿಕವಾಗಿದ್ದರೂ ಈ ವಾರದಲ್ಲಿ ಮನಃಶಾಂತಿಯೂ, ಕರ್ಮವೃದ್ಧಿಯೂ, ಧನದ ಸಹಾಯವೂ, ಕೋರ್ಟು ಕಚೇರಿ ವ್ಯವಹಾರದಲ್ಲಿ ಜಯ ಮಾನ್ಯ ಪ್ರಾಪ್ತಿಯೂ ಉಂಟಾಗುವದು ಆದರೆ ಹಿತಶತ್ರುಗಳ ನಾನಾ ಯಾತಂತ್ರಗಳು ನಿಮ್ಮ ಮೇಲೆ ಪ್ರವೇಶಿಕ್ಕದ [illegible]ದಂತೆ ಎಚ್ಚರವಿರಬೇಕು ಮುಂದಿನ ವಾರಕ್ಕಿಂತಲೂ ಈ ವಾರ ಉತ್ತಮವಾಗಿರುವದರಿಂದ ಯಾವ ಯಾವ ಕಾರ್ಯವಾದರೂ ಅಧಿಕ ಮುಂದುವರಿಯುವದಾದರೆ ಉದಾಸೀನದಿಂದ ಹಿಂಜರಿಯಬೇಡಿರಿ ಇದೇ ವಾರ ನೆರವೇರಿಸಿದ್ದಲ್ಲಿ ಜಯಮಾನವೃದ್ಧಿಯನ್ನೈದುವದು

ವೃಷಭ

ಮನೋನಿಶ್ಚಯ ವ್ಯವಹಾರ ಜ್ಞಾನ ವಸ್ತ್ರಾಲಂಕಾರ ಪ್ರಿಯರಾದ ನಿಮಗೆ ಇದೇ ವಾರದ ೧೬ನೇ ತಾರೀಕಿನ ಮೇಲೆ ಗತಕಾಲದ ಎರಡು ವಾರಗಳಿಂದ ಪ್ರಬಲ ವ್ಯಸನ ಕಷ್ಟ ನಷ್ಟಕ್ಕೀಡಾದ ನಿಮಗೆ ಸರ್ವಕಾರ್ಯ ಸಿದ್ಧಿ ಮನಃಶಾಂತಿ ಧೈರ್ಯ ಸಹಾಯ ಕೀರ್ತಿ ಫಲ ಹೊರತು ಮುಂದಿನ ವಾರದಿಂದ ಮುಂದೆ ಎಲ್ಲಾ ವಿಷಯ ಉತ್ತಮ ಫಲಾನುಕೂಲವೆಂದರಿಯಬೇಕಾಗುವದು ನೂತನ ಜನಸಹಾಯ ಮೂಲಕ ಸ[illegible]ದ್ಧಿ ಉಂಟಾದೀತು

ಮಿಥುನ

ತೀವ್ರ ಬುದ್ಧಿ ಸುಖಾಸಕ್ತಿ ಕಾರ್ಯಕಾರ್ಯವಿವೇಚನಾಶೀಲರಾದ ನಿಮಗೆ ಜನ್ಮಾಧಿಪತಿದ್ವಿತೀಯದಲ್ಲಿದ್ದು ದ್ವಿತೀಯಾಧಿಪತಿ ಜನ್ಮದ್ವಿತೀಯ ಭಾಗದಲ್ಲಿಯೇ ಗತಿಯಿಂದಿರುವದರಿಂದ[illegible] ಕರ್ಮದ ಗುರುಗ್ರಹದಿಂದ ವಾಹಿದ್ವರ್ತನಾ ಕಾರ್ಯನಿರತರಾಗುವಿರಿ, ಕುಟುಂಬಿಕ ಕಷ್ಟಗಳಿಂದ ಬಿಡುಗಡೆ ಹೊಂದುವಿರಿ ಮಿತ್ರರಿಂದ ಧನಸಹಾಯ ಉಳ್ಳವರಾಗುವಿರಲ್ಲದೆ ಧೈರ್ಯದಿಂದ ಮುಂದೆ ಅನುಕೂಲವೇ ಹೊರತು ದೋಷ ಫಲ ಪ್ರತ್ಯಕ್ಷ ಬರಲಾರದು ಆದರೂ ಅಷ್ಟಮದ ಮಂಗಳನಿಂದ ಪಂಚಮದ ರಾಹುಗ್ರಹನಿಂದಾಗಿ ಪದೇಪದೇ ವ್ಯಸನ ಭಯಕ್ಕೊಳಗಾಗಬೇಕಾದೀತು ಮಾನಕ್ಕಾಗಲೀ ಧನಕ್ಕಾಗಲೀ ವಿಶೇಷ ಕೊರತೆ ಇಲ್ಲ ಇಷ್ಟಸಿದ್ಧಿ ಕಾರ್ಯಾನುಕೂಲವಾಗ ವದಕ್ಕೆ ಈ ವಾರದ ಸಂದೇಹವಿಲ್ಲ

ಕರ್ಕಾಟಕ

ವಿವೇಚನಾಶೀಲರಾಗಿ ಕಷ್ಟನಷ್ಟದ ಪರಿವರ್ತನೆಗೊಳಗಾಗಿ ಸಾಮಾನ್ಯ ಸುಧಾರಣೆಯಿಂದಿದ್ದ ನಿಮಗೆ ನಿಮ್ಮ ಜನ್ಮರಾಶಿಯಲ್ಲಿಯೂ ಭಾಗ್ಯದಲ್ಲಿಯೂ ಶುಭ ಗ್ರಹಬಲ ಸಂಪೂರ್ಣವಿದ್ದರೂ ಪ್ರಕೃತರಾಶಿಯ ಅಧಿಪತಿ ಚಂದ್ರನು ರವಿಸಮ್ಮಂಧ ಸೇರಿರುವದರಿಂದ ಈ ವಾರ ಉತ್ತಮ ಬಾಗವಾಗಿ ಯಾವ ಕಾರ್ಯದಲ್ಲೂ ಉತ್ತಮ ಅನುಭವವಿರಲಾರದು. ಕರ್ಮದಲ್ಲಿ ಅವಮಾನ, ಧನದಲ್ಲಿ ಇಕ್ಕಟ್ಟು ಮನಸ್ಸಿಗೆ ಅಸಮಾಧಾನವೇ ಹೊರತು ಹೆಚ್ಚಿನ ಪ್ರಯೋಜನ ದಿನಗಳೆಲ್ಲ ಪ್ರಾದೇಸ್ತಬ್ದರಾಗಿ ನೂತನ ಯಾವ ವಿಷಯಕ್ಕೂ ಗಮನಿಸದಿದ್ದಲ್ಲಿ ಮುಂದೆ ಸೌಖ್ಯ ಕೀರ್ತಿ ಜಯ ಮಾನಾದಿ ಉತ್ತಮ ಫಲ ಪ್ರಾಪ್ತವಾಗುವದು

ಸಿಂಹ

ಗೌರವಶಾಲಿಗಳಾಗಿಯೂ ಪರೋಪಕಾರಿಗಳಾಗಿಯೂ ಹಿಡಿದ ಕಾರ್ಯಪೂರೈಸುವ ಸಾಮರ್ಥ್ಯವಿರುವ ನಿಮ್ಮ ರಾಶಿಯ ಸ್ವಾಮಿಯಾದ ರವಿವ್ಯಯದಲ್ಲಿ ಧನಲಾಭಾದಿಪತಿಯನ್ನು ಸೇರಿರುವದರಿಂದ— ಚಂಚಲವಾಗಿಯೂ ಕುಟುಂಬ ಸಮ್ಮಂಧ ಧನ ಅನವ್ಯಯವಾಗಿಯೂ ಬಾಗ್ಯದ ವಿಷಯ ಪದೇಪದೇ ಮನನೊಂದುಕೊಂಡ ಬೇಸರ ಪಡಬೇಕಾಗುವದು ಅದರ ಕರ್ಮಾಧಿಪತಿ ಲಾಭದಲ್ಲಿರುವದರಿಂದ ತ್ರಿತಿಯ ರಾಹು ಕಷ್ಟಕುಜ, ಅಷ್ಟಮಗುರು ಈ ರೀತಿ ಗ್ರಹ ಚಾರವಿರುವದರಿಂದ ಕೆಲವು ಬಾಗ್ಯಕ್ಕೆ ಬಾಧಕವಿಲ್ಲವಾದ್ದರಿಂದಲೂ ದೋಷಬಾಗಗಳಿಗೆ ಗುರುದೃಷ್ಟಿಯಿರುವುದರಿಂದಲೂ ಸಾಮಾನ್ಯ ಮಿಶ್ರಫಲಾನುಭವ ಉಂಟಾದೀತು

ಕನ್ಯಾ

ಯಾವ ಸಂಗತಿಯ ನನ್ನು ತಿಳಿದು ಮಾತನಾಡುವಾಗ ಚಲೋ ಮಾತಾಡುವ ನಿಮ್ಮ ರಾಶ್ಯಾದಿಪ ಲಾಭದ ಸೌಭಾಗ್ಯದ ಶುಕ್ರ ಕರ್ಮದಲ್ಲೂ ಸಪ್ತದ ಗುರುಜನ್ಮಕ್ಕೆ ನೋಡುವದರಿಂದಲೂ ವ್ಯಯಾಧಿಪತಿ ಲಾಭದಲ್ಲೂ ಇರುವದರಿಂದ ಕುಟುಂಬ ಸೌಖ್ಯ ದೇಹ ರೋಗ್ಯ ಧನಸಂಗ್ರಹ ಮನಶಾಂತಿ ದಾಂಪತ್ಯ ಸೌಖ್ಯ ರಾಜಕೀಯ ವಿಷಯ ಜಯ ಮಾನ ಅಧಿಕಾರದಲ್ಲ ದುಃಖವೇ ಹೊರತು ವಿಶೇಷ ದೋಷವಿಲ್ಲ

ತುಲಾರಾಶಿ

ಈ ವಾರದಲ್ಲಿ ನಿಮ್ಮ ಎಲ್ಲಾ ವಿಷಯದಲ್ಲೂ ಸಾಮಾನ್ಯ ಉತ್ತಮವಿರುವದೇ ನಿಮ್ಮ ರಾಶಿಯ ಸ್ವಾಮಿ ಬಾಗ್ಯಲ್ಲಿದ್ದು ಬಾಗ್ಯಾದಿಪತಿ ಲಾಭಾ ಭಾಗ್ಯಾದಿಪನೊಡನೆ ಕರ್ಮದಲ್ಲಿರುವದರಿಂದ ಉದ್ಯೋಗ ಧನಸ್ಥಾನಕ್ಕೆ ಗುರುದೃಷ್ಟಿ ಇರುವದು ಉದ್ಯೋಗವೃದ್ಧಿದಾನ ಧರ್ಮಪರೋಪಕಾರ ಬುದ್ಧಿ ಸಮಾಜದಲ್ಲಿ ಮಾನ್ಯ ಬಂಧುವರ್ಗದವರಿಂದ ಕೂಡಿ ನಡೆಯುವಿಕೆ ದಾಂಪತ್ಯ ಪಕ್ಷಿ ಮಿತ್ರ ಜನಾಂಗ ಸಹಾಯದಿ ಉತ್ತಮ ಫಲ ಹೊರತು ವಿಶೇಷ ದೋಷವಿಲ್ಲ ನೀವೆಣಿಸಿದಂತೆ ನಿಮ್ಮ ಮನೋಇಚ್ಛೆಪೂರ್ತಿಯಾಗುವುದು

ವೃಶ್ಚಿಕ

ನೀವಿವಾರದಲ್ಲಿ ಸಂಪೂರ್ಣ ಅದೃಷ್ಟವಂತರಾಗುವಿರಿ ನಿಮ್ಮ ಧೈರ್ಯ ಸಹ ಸಂಪೂರ್ಣ ಪ್ರಯೋಜನವಾಗುವದು ಗುರುಕೃಪೆ ಪೂರ್ಣವಿರುವದು ಮುಂದಿನ ವಾರಕ್ಕಿಂತಲೂ ಈ ವಾರವೆ ಉತ್ತಮವೆನಿಸುವದು ಈ ಸಮಯ ಸುಮ್ಮನೆ ಕಾಲ ಕಳೆಯಬೇಡಿರಿ ಗ್ರಹ ಮಾನವು ಬಾಗ್ಯಕ್ಕೂ ಲಾಭಕ್ಕೂ ಕೀರ್ತಿಗೂ ಸುಖಕ್ಕೂ ಮನೊ ಇಚ್ಛೆಯಂತೆ ಸರ್ವ ಕಾರ್ಯಾನುಕೂಲವಾದವೆಂದರಿಯಬೇಕು ಪ್ರಕೃತ ಬಿರಿಲ್ಲವೆಂತಾಗುವದೋ, ರಾಜಕೀಯ ಸಮಾಜ ಭೂವ್ಯವಹಾರ ಇತ್ಯಾದಿ ವ್ಯವಹಾರಗಳಿಗೂ ವಿದ್ಯೋಪವಿದ್ಯಾ ಜೀವನ ವ್ಯಾಪಾರಗಳಿಗು ಇಷ್ಟಕಾಲವಾಗಿ ತೋರಿ ಬರುತ್ತದೆ:

ಧನು

ಕಳೆಯಿರಿ ಇನ್ನೊಂದು ವಾರವನ್ನು, ಕಳೆಯಿರಿ ಇಷ್ಟಕಾರ್ಯಾನುಕೂಲವಾಗುವದು ಉದ್ಯೋಗದಲ್ಲಿ ಲಾಭ ಮಾನ್ಯ ಕೀರ್ತಿ ಉಂಟಾಗುವದು ನಿಮ್ಮ ಮನಸ್ಸಿನಂತೆ ಸರ್ವ ವಿಶಯ ನಡೆಯಲಿರುವದು ಆದರೆ ಈ ವಾರ ಶಾಂತಿಯಿಂದಲ್ಲಿ ದಿನಹರಣೆ ಹೊರತು ಪ್ರಯೋಜನ ಕಾಲವಲ್ಲ ಆದ್ದರಿಂದ ಧಾನಧರ್ಮ ಪರೋಪಕಾರದಿ ಸತ್ಕರ್ಮ ನಿರತರಾದ ನಿಮ್ಮ ಇದರ ಫಲನುಕೂಲನಹ ಇಲ್ಲವೆಂತ ಬೇಸರವಾಗಬಹುದು ಆದರೆ ಕರ್ಮಾದಿಪತಿ ಅಷ್ಟಮದಿಂದ ಮುಂದುವರಿದ ಮೇಲೆ ಸರ್ವ ವಿಷಯ ಸಂತೃಪ್ತಿ ದೊರೆಯುವದು ಈ ವಾರದಲ್ಲಿ ದುರಿತ ನಿವಾರಣೆಗಾಗಿ ಕಿಂಚಿತ್ತು ದೇವರ ಸ್ಮರಣೆಗಾಗಿ ಸಮಯ ವ್ಯಯಿಸಿರಿ ಎಂದೆ ಶುಭಾನುಭವ ಫಲವುಂಟಾದೀತು

ಮಕರ

ನೀವೇ ಸುಖಿಗಳೆಂಬಲ್ಲಿ ಸಂದೇಹವಿಲ್ಲ ! ಮಗೀವಾರದಲ್ಲಿ ದೇಹಾರೋಗ್ಯ ಮಿತ್ರರ ಸಾಹಯ ಮನೆಯು ವೆಚ್ಚಕ್ಕೆ ತಕ್ಕ ಧನ ಉದ್ಯೋಗದಲ್ಲಿ ಕ್ರಿಯಸ್ಸು ಕ್ರಯ ವಿಕ್ರಯದಲ್ಲಿ ಇಚ್ಛಾಪೂರ್ತಿ ದಾಂಪತ್ಯ ಪುತ್ರ ಬ್ರಕ್ಷ ವರ್ಗದವರ ಅನುಕೂಲ ಚೆನ್ನಾಗಿರುವದು ಆದರೆ ನಿಮ್ಮ ಆಲಸ್ಯ ಕತ್ತ ನಿವ[illegible] ಮನಃಚಂಚಲವನ್ನು ಈಯುವದು ಇದಕ್ಕೆ ಕಾರಣ ಜನ್ಮಾದಿಪತಿ ಕೇತು ಗ್ರಹನಿಂದ ಕೂಡಿ ಚವ ರ್ಥದಲ್ಲಿರುವದರಿಂದ ತೃಪ್ತಿಯೆಷ್ಟನ್ನಾದು ಉಂಟುಮಾಡದಿಲ್ಲವಾದ್ದರಿಂದ ತೃಪ್ತಿಯೇ ಸುಖವೆಂಬ ನ್ಯಾಯವನ್ನು ಅನುಭವದಲ್ಲಿಟ್ಟುಕೊಳ್ಳಿರಿ ಸರ್ವಗಿಷ್ಟ ವ್ಯಸನವಿದ್ದ್ರೂ ದೂರವಾಗುವದು ಇಷ್ಟಫಲ ಪ್ರಾಪ್ತವಾಗುವದು

ಕುಂಭ

ದ್ವಿತಿಯದ ಗುರು ಪಂಚಮದ ಶುಕ್ರ ಈ ಗ್ರಹರ ಅನುಗ್ರಹವೇ ಸರ್ವಸಿದ್ಧಿಗೆ ಕಾರಣವಾಗಿ ನಿಮಗೆ ಈ ವಾರ ಮನ ಸಂತೋಷ ಮಾನ್ಯ ಉದ್ಯೋಗ ವ್ಯವಹಾರಗಳಲ್ಲಿ ತೃಪ್ತಿದೈವಾನುಗ್ರಹ ಮಾತ್ರ ವಿದ್ಯಾಭೂಮಿಗಳ ಸಮ್ಮಂದ ಜನಾಂಗಕ್ಕೆ ಅತ್ಯುತ್ತಮ ಎಲ್ಲಾ ವಿಷಯ ಸೌಖ್ಯ ಸಂಪ್ರಾಪ್ತ ದಿನಗಳೆ ಈ ವಾರವಾಗಿರುವದ ಮತ್ತು ದೇವತಾ ಸೇವೆ ಕಥಾಶ್ರವಣ ಭಕ್ತಿಯಿಂದ ಮುಕ್ತಿಮಾರ್ಗಕ್ಕೆ ಬೇಕಾದ ಸಂಗ್ರಹನ ಕಾಲಕಾಲವೇ ಇದೆಂದು ತಿಳಿಯುತ್ತದಾದ್ರಿಂದ ಮುಂದೆ ದೈವಾನ ಗ್ರಹದಿಂದ ಸರ್ವ ವಿಶಯ ಇಚ್ಛಾಪೂರ್ತಿ ಸುಖಮಾನಜಯ ಉಂಟಾದೀತು

ಮೀನ

ನಿಮ್ಮ ಭಾಗ್ಯೋದಯ ಪ್ರಾರಂಭ ಮುಂದೆ ವ[illegible]ದ ಶುಭ ಸೂಚನೆ[illegible]ದೆ ಸ್ವಧರ್ಮದಿಂದ ಉದ್ಯೋಗದಲ್ಲಿ ಪ್ರಯತ್ನಶಾಲಿಗಳಾಗಿರಿ ಕರ್ಮಕ್ಕೆ ತಕ್ಕ [illegible]ವೆಂಬಂತೆ ಸದಾ ಸತ್ಕರ್ಮವನ್ನವಲಂಬಿಸಿ, ಸ[illegible] ಫಲವನ್ನು ಹೊಂದುವ ದಿನಗಳೇ ಬಗಿರುವದು ಕರ್ಮಾದಿಪತಿ ಗುರು ಧರ್ಮ ಕರ್ಮ ಸಾಧನೆಯನ್ನು [illegible] ಸುಖಾದಿ ಸೌಖ್ಯ ಸಂಪತ್ತು ಕೂಟ [illegible]ನ್ಯಾದಿ ಪುರುಷಾರ್ಥ ಫಲಗನ್ನು ಧನದಾನ್ಯ ಕೃಷಿ ಕಾರ್ಯ ಸಮ್ಮಂದ ತೃಪ್ತಿಯನ್ನು [illegible]ತ್ರ ಬಾಂದವ ಭೃತ್ಯ ವಿತ್ತರಿಂದ ಇಷ್ಟಾರ್ಥವನ್ನು ಪಡೆಯುವಿರಿ ಆದರೆ ಧನ, ಕುಟುಂಬ ಮ[illegible] ಸುಖವಷ್ಟು ದೊರೆಯಲಾರದು ಆದರೆ ಬೇರೆ ಎಲ್ಲಾ ವ್ಯವಹಾರಂದ ಸರ್ವ ವಿಶಯ ಯಾವ ಬಾಧಕವಿಲ್ಲ ಉತ್ತಮ ಫಲ ಕಾಲವಾಗಿರುತ್ತದೆ

ಸ್ವೀಕಾರ

ಮೊಗವೀರ ಸಾಂವತ್ಸರಿಕ ೧೯೩೯

ಮುಂಬಯಿಯ ಮೊಗವೀರ ಯುವಕ ಸಂಘದ ಪ್ರಕಟಣೆ. ಕ್ರಾನ್ ¼ ಆಕಾರದ ೮೩ ಪುಟಗಳು ಬೆಲೆ ನಾಲ್ಕಾಣೆ.

ಪ್ರತಿಯೊಬ್ಬ ಮನುಷ್ಯನೂ, ಪ್ರತಿಯೊಂದು ಜಾತಿಯೂ ಅಭಿವೃದ್ಧಿಹೊಂದುವುದರಿಂದ ಇಡೀ ರಾಷ್ಟ್ರವೇ ಏಳಿಗೆ ಹೊಂದಿದಂತಾಗುವುದು. ಹೀಗೆ ಬೇರೆ ಬೇರೆ ರಾಷ್ಟ್ರಗಳು ಉನ್ನತಿಹೊಂದುವುದರಿಂದಲೇ ವಿಶ್ವಕಲ್ಯಾಣವು ಸಾಧಿಸಿದಂತಾಗುವುದು.— ಈ ಸಂಚಿಕೆಯಲ್ಲಿ ಮುಂಬಯಿಯ ಯುವಕ ಸಂಘದವರು ತಮ್ಮ ಜಾತಿಯ ಇತಿಹಾಸ, ಸಾಹಸಜೀವನ, ಮೊದಲಾದುವುಗಳ ವರ್ಣನೆಗಳನ್ನು ಕೊಟ್ಟಿರುವುದು ಮಾತ್ರವಲ್ಲದೆ ಯುವಕರನ್ನು ಸಮಾಜಸೇವೆಯಲ್ಲಿ ಪಾತ್ರತಕ್ಕ ಕರ್ತವ್ಯದ ಕಡೆಗೆ ಎಚ್ಚರಿಸಿರುವರು. ಆಂಗ್ಲ—ಕನ್ನಡ ಭಾಷೆಗಳೆರಡರಲ್ಲಿಯೂ ವಿಚಾರ ಪ್ರಚೋದಕಗಳಾದ ಲೇಖನಗಳಿವೆ ಕತೆ—ಕವಿತೆಗಳೂ ಸಂಚಿಕೆಯ ವೈವಿಧ್ಯವನ್ನು ಹೆಚ್ಚಿಸಿವೆ ಸುರಿತಸಮಾಜ ಸಧಾರಕರೂ, ಹೊಸ ಹುರುಪಿನ ಯುವಕರು ಎಲ್ಲರೂ ಒಮ್ಮನಸ್ಸಿನಿಂದ ಸಮಾಜಸೇವೆಗಾಗಿ ಹಾರೈಸುತ್ತಿರುವುದನ್ನು ಈ ಸಂಚಿಕೆಯಲ್ಲಿ ಕಾಣಬಹುದು ಮಾಹಿಳೆಯರೂ ಸಮಾಜದುನ್ನತಿ ಬಗ್ಗೆ ಆಗ್ರಹಗೊಂಡು ಮುಂದೆ ಬರುತ್ತಿರುವುದು ಶುಭಲಕ್ಷಣವಾಗಿದೆ ಕನ್ನಡಿಗರು,—ಅದರಲ್ಲಿಯೂ ವಿಶೇಷವಾಗಿ ಮೊಗವೀರ ಸಮಾಜಬಂಧುಗಳು ಅತ್ಯವಶ್ಯವಾಗಿ ಓದತಕ್ಕ ಸಂಚಿಕೆ ಸಂಪಾದಕ ಮಂಡಳಿಯ ಈ ಬಗೆಯ ಕಾರ್ಯವು ಯಶಸ್ವಿಯಾಗಲೆಂದು ಹಾರೈಸುತ್ತೇವೆ

ದೇವದಾಸ (ಸಾಹಿತ್ಯಭಂಡಾರ ಹುಬ್ಬಳ್ಳಿ) ಸುಳಿವು ಹೊಳವು (ಮನೋಹರ ಗ್ರಂಥಮಾಲೆ ಧಾರವಾಡ) ಈ ಪುಸ್ತಕಗಳು ಬಂದಿವೆ ವಿಮರ್ಶೆಯು ಮುಂದೆ ಪ್ರಕಾಶ

ನೋಟಿಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

[illegible] P [illegible] 1[illegible]

1	ಖದಿಜಾಬಿ	ಅರ್ಜಿದಾರರು
2	ಆಸಾಬಿ	
3	ಕುಂಞಾಲಿ	
4	ಮಾಹಿನ್ — ಮ್ಯಾನರ್ — ಈತನ ಕ್ಷೇಮ ಚಿಂತಕಳು ಇವನ ತಾಯಿ 1ನೇ ಅರ್ಜದಾರಳು ಖದಿಜಾಬಿ	

1ನೇ ಅರ್ಜದಾರಳ ಗಂಡ ನೂ, ಬಾಕಿ ಅರ್ಜಿದಾರರ ತಂದೆಯಾಗಿದ್ದ ಕಳನಾಡು ಗ್ರಾಮದ ಕಂಞಾಲಿ ಹಾಜಿಯವರ ಮಗ ಮಹಮ್ಮದ ಹಾಜಿಗೆ ಹೊರಕುಳಗಳಿಂದ ಸಲ್ಲತಕ್ಕ ಆ್ಯವಜನ್ಯ ವಸೂಲು ಮಾಡುವರೆ ತಮಗೆ ವಾರ್ಸಿ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 9-8-1939ಕ್ಕೆ ಈ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವದರಿಂದ ಆಕ್ಷೇಪವುಳ್ಳವರ ಆ ದಿವಸ ಜಾಹೀರು ಮಾಡಿಕೊಳ್ಳಬಹುದೆಂತ್ತ ಈ ಮೂಲಕ ತಿಳಿಸಲಾಗಿಯದೆ

Kasaragod
Dated 8—7—39

K. Mammunhi, B. A., L. T.
Advocate for Petitioners

SWADESHABIMANI
Estd, 1906.

The Best & the First Medium

For selling and introducing your goods in Karnatak there is no better medium than 'SWADESHABIMANI because it is the only favourite Journal of Karnatics.
If your goods are to be sold thro mail orders in Karnatak there is no other way than to advertise in
"SWADESHABHIMANI"

For particulars please write to:
The Advt. Manager,
"SWADESHABHIMANI"
MANGALORE.

ಯೂರೋಪಿನಲ್ಲಿ ಒತ್ತಾಯದ ಸೈನಿಕ ಶಿಕ್ಷಣದಿಂದ ಜನತೆಯು ಬೇಸರಗೊಂಡಿದೆ!

ಬ್ರಿಟಿಷ ಜನರಿಗೆ ಕೊನ್ಸ್‌ಕ್ರಿಪ್ಶನ ಅಥವಾ ಒತ್ತಾಯದ ಸೈನಿಕ ಶಿಕ್ಷಣವೆಂದರೆ ಬಹಳ ಬೇಸರದ ಮಾತಾಗಿರುವುದು. ಆ ಮಾತನ್ನು ಕೇಳಿದೊಡನೆ ಅವರಿಗೆ ಕಿವಿಗಳಲ್ಲಿ ಕರಗಿಸಿದ ಲೋಹವನ್ನು ಹೊಯ್ದಂತಾಗುತ್ತದೆ. ಒತ್ತಾಯದ ಸೈನಿಕ ಶಿಕ್ಷಣವನ್ನು ಬ್ರಿಟಿಷ ಜನರು ತುಂಬ ತಿರಸ್ಕಾರದಿಂದ ಕಾಣುವರು. ಯೂರೋಪದ ಇತರ ರಾಷ್ಟ್ರಗಳ ಜನರಿಗೆ ಕೂಡ ಅದು ಬೇಕಾಗಿರುವುದಿಲ್ಲ, ಯಾರೂ ಅದು ಬೇಕೆಂದು ಸ್ವಾಗತಿಸುವುದಿಲ್ಲ. ಪರಂತು ನಿರುಪಾಯರಾಗಿ, ಪರಿಸ್ಥಿತಿಯಿಂದ ಬಂಧಿತರಾಗಿ ಜನರು ಈ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಎಲ್ಲೆಲ್ಲೂ ಯುದ್ಧದ ಕಾರ್ಮುಗಿಲುಗಳು ರಾಜಕೀಯ ಆಕಾಶವನ್ನು ಮುಚ್ಚಿರುವಾಗ, ಆತ್ಮರಕ್ಷಣೆ ಮತ್ತು ದೇಶದ ಸ್ವಾತಂತ್ರ್ಯ ರಕ್ಷಣೆಗಾಗಿ ಜನರು ಆ ಶಿಕ್ಷಣವನ್ನು ಪಡೆಯಲೇ ಬೇಕಾಗಿ ಬಂದಿದೆ.

ಫ್ರಾನ್ಸಿನಲ್ಲಿ

ಭೂಗೋಲಿಕ ದೃಷ್ಟಿಯಿಂದ ಫ್ರಾನ್ಸಿಗೆ ಆತ್ಮರಕ್ಷಣೋಪಾಯಗಳು ಬಹಳ ಕಡಿಮೆ ಇರುವುವು. ಅದಕ್ಕೆ ಶತ್ರು ಪಕ್ಷದವರ ಆಕ್ರಮಣ ಭಯವು ವರ್ಷದ ಎಲ್ಲಾ ದಿನಗಳಲ್ಲಿ—ಹಗಲೂ ರಾತ್ರಿ ಇರುತ್ತದೆ. ಆದ್ದರಿಂದ ಫ್ರಾನ್ಸಿನ ಜನರು ಯುದ್ಧವನ್ನು ಬಯಸದ ಶಾಂತಿಪ್ರಿಯ ಜನರಾಗಿದ್ದಾರಾದರೂ, ಅವರು ಯುದ್ಧ ಸಂಭವದಲ್ಲಿ ತಮ್ಮನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಶಾಂತಿಯ ಕಾಲದಲ್ಲಿ ಕೂಡ ಯುದ್ಧಸಿದ್ಧತೆಗಳನ್ನು ಮಾಡಿಕೊಂಡು ಬರಬೇಕಾಗಿದೆ. ಆದ್ದರಿಂದ ಆ ದೇಶದಲ್ಲಿ ಒತ್ತಾಯದ ಸೈನಿಕ ಶಿಕ್ಷಣವು ಯುದ್ಧ ಸಿದ್ಧತೆಯ ಒಂದು ಆವಶ್ಯಕ ಅಂಗವಾಗಿ ಪರಿಣಮಿಸಿದೆ. ಆದರೆ ಫ್ರಾನ್ಸಿನ ಶಿಕ್ಷಿತ ಜನರು ಈ ಶಿಕ್ಷಣವನ್ನು ಅಷ್ಟಾಗಿ ಮೆಚ್ಚುವುದಿಲ್ಲ. ಯಾಕಂದರೆ ಈ ಶಿಕ್ಷಣವನ್ನು ಪಡೆದ ಅನಂತರ ಸೈನ್ಯದಲ್ಲಿಯೇ ಶಿಕ್ಷಿತ ತರುಣರಿಗೆ ಅವರಿಗೆ ಯೋಗ್ಯ ಪದವಿಗಳು ಸಿಕ್ಕುವುದು ಬಹಳ ಕಡಿಮೆ. ಶ್ರೀಮಂತರ ಮಕ್ಕಳಿಗಾದರೆ ಅವರ ದುಡ್ಡಿನ ಬಲದಿಂದ ಅಂಥ ಪದವಿಗಳು ಸುಲಭದಲ್ಲಿ ದೊರೆಯುತ್ತವೆ. ಹೇಗಾಗಿದ್ದರೂ ಆ ಪದವಿಗಳು ದೊರೆಯುವುದು, ಸೈನಿಕ ಶಿಕ್ಷಣವನ್ನು ಪಡೆಯುವ ಒಟ್ಟು ಮಂದಿಯಲ್ಲಿ ಬರೀ ಕೆಲವರಿಗೆ ಮಾತ್ರ. ಉಳಿದವರು ತಮ್ಮ ಶಿಕ್ಷಣವನ್ನು ಮುಗಿಸಿದ ಅನಂತರ ಸೈನಿಕವಲ್ಲದ ಇತರ ವೃತ್ತಿ ಉದ್ಯೋಗಗಳನ್ನು ಅವಲಂಬಿಸಬೇಕಾಗುತ್ತದೆ.

ಸೈನಿಕ ಶಿಕ್ಷಣವನ್ನು ಪಡೆಯುತ್ತಿರುವಾಗ ತರುಣರಿಗೆ ದೊರೆಯುವ ಜೀವನಾಂಶವು ಬಹಳ ಸ್ವಲ್ಪವಾಗಿದೆ. ಅದು ಅವರ ಜೀವನಕ್ಕೆ ಸಾಕಾಗುವಷ್ಟು ಇರುವುದಿಲ್ಲವೆನ್ನುವಾಗ, ಅವರನ್ನು ಅವಲಂಬಿಸಿರುವ ತಾಯ್ತಂದೆ ಅಥವಾ ಬಂಧು ಭಗಿನಿಯರಿಗೆ ಅವರು ಶಿಕ್ಷಣದ ಕಾಲದಲ್ಲಿ ಯಾವ ತರಹದ ಆರ್ಥಿಕ ಸಹಾಯವನ್ನು ಒದಗಿಸಬಹುದು? ಅಲ್ಲದೆ ಸೈನಿಕ ಶಿಕ್ಷಣವು ಇತರ ವೃತ್ತಿ ಉದ್ಯೋಗಗಳಿಗೆ ಒಂದು 'ಅಯೋಗ್ಯತೆ' ಎನ್ನಿಸುತ್ತದೆ. ತಮ್ಮ ಜೀವನ ವೃತ್ತಿಯ ಜ್ಞಾನಾನುಭವವನ್ನು ಸಂಪಾದಿಸಲಿಕ್ಕೆ ಉಪಯೋಗಿಸಬಹುದಾದ ಅತಿ ಅಮೂಲ್ಯವಾದ ತಮ್ಮ ಜೀವನಕಾಲ—ಅಂದರೆ ಸಾಧಾರಣ ೧೮ರಿಂದ ೨೧ರ ವರೆಗಿನ ೩ ವರ್ಷಗಳ ಅವಧಿಯನ್ನು ತರುಣರು ಸೈನಿಕ ಶಿಕ್ಷಣವನ್ನು ಪಡೆಯಲಿಕ್ಕೆ ಕಳೆಯಬೇಕಾಗುತ್ತದೆ. ಆದ್ದರಿಂದ ತರುಣರ ಭಾವೀ ಜೀವನಸಫಲತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾಗಿದ್ದರೆ ನಿರ್ಬಂಧದ ಮಿಲಿಟರಿ ಶಿಕ್ಷಣದಿಂದ ತರುಣರಿಗೆ ಲಾಭ ಏನೂ ಇರುವುದಿಲ್ಲ, ಮಾತ್ರವಲ್ಲ, ನಷ್ಟವೂ ಆಗುವುದು. ಈ ಶಿಕ್ಷಣವನ್ನು ಪಡೆದು ಬಂದು ತರುಣರು ಒರಟರೂ ಸ್ಥೂಲ ಬುದ್ಧಿಯವರೂ ಆಗುತ್ತಾರೆ. ಅವರು ಬಹಳ ಮಟ್ಟಿಗೆ ಮನುಷ್ಯೋಚಿತ ಗುಣಗಳಿಂದ ವಂಚಿತರಾಗುತ್ತಾರೆ.

ನಿರ್ಬಂಧದ ಮಿಲಿಟರಿ ಶಿಕ್ಷಣವನ್ನು ಪಡೆದು ಸೈನಿಕ ವೃತ್ತಿಯನ್ನೇ ತಮ್ಮ ಜೀವನೋಪಾಯವಾಗಿ ಮಾಡಿಕೊಂಡಿರುವವರಿಗೆ ಕೂಡ, ಉಚ್ಚ ಪದವಿಗಳಿಗೆ ಏರುವ ಅನುಕೂಲತೆ ಸೌಲಭ್ಯಗಳು ಕಡಿಮೆ ಇರುತ್ತವೆ. ಆದ್ದರಿಂದ ಮುಂದೆ ಅವರು ಜೀವನದಲ್ಲಿ ನಿರಾಶರಾಗುವರು. ಜುಗುಪ್ಸೆಯಿಂದ ದಿನಗಳನ್ನು ಕಳೆಯುವರು. ಈ ಎಲ್ಲಾ ಕಾರಣಗಳಿಂದ ಫ್ರಾನ್ಸಿನಲ್ಲಿ ಒತ್ತಾಯದ ಸೈನಿಕ ಶಿಕ್ಷಣಕ್ಕೆ ಜನಸಮುದಾಯ ಬೆಂಬಲವು ಇರುವುದಿಲ್ಲ.

ಜರ್ಮನಿಯಲ್ಲಿ

ಆದರೆ ಜರ್ಮನಿಯ ಪರಿಸ್ಥಿತಿಯು ಬ್ರಿಟನ ಫ್ರಾನ್ಸುಗಳಿಂದ ತೀರಾ ಭಿನ್ನವಾಗಿರುವುದು. ಅಲ್ಲಿ ಸೈನಿಕ ಶಿಕ್ಷಣವು ತುಂಬಾ ತ್ರಾಸದಾಯಕವಾಗಿದೆ. ಸೈನಿಕ ಶಿಕ್ಷಣವನ್ನು ಪಡೆಯಲಿಕ್ಕೆ ಸೇರಿದ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವವನ್ನು ಕಳಕೊಂಡು ಇರಬೇಕಾಗುತ್ತದೆ. ಅವರೊಡನೆ ಮೇಲಾಫೀಸರುಗಳ ಪಶುತುಲ್ಯ ವ್ಯವಹಾರವು ನಡೆಯುತ್ತದೆ. ಅಲ್ಲಿ ಯೋಗ್ಯತೆ ಶಕ್ತಿಸಾಮರ್ಥ್ಯಗಳಿದ್ದರೂ ಸೈನಿಕ ಶಿಕ್ಷಣ ಪಡೆದ ತರುಣನಿಗೆ ಉಚ್ಚಪದವಿಗೆ ಬರುವ ಆಶೆಯೇ ಇರುವುದಿಲ್ಲ. ಅವರು ಜರ್ಮನ ಸರಕಾರದ ಸೈನಿಕ ಕ್ರಮವೆಂಬ ಒಂದು ಯಂತ್ರದ ಸಣ್ಣ ದೊಡ್ಡ ಗಾಲಿಗಳಂತೆ ತಮ್ಮ ಕರ್ತವ್ಯಗಳನಷ್ಟೇ ಮಾಡಿ ಜೀವನದಲ್ಲಿ ಸುಖವನ್ನೂ ತೃಪ್ತಿಯನ್ನೂ ಕಲ್ಪಿಸಿಕೊಳ್ಳಬೇಕು. ಆದರೆ ಈ ಶಿಕ್ಷಣವನ್ನು ಪಡೆದ ಜರ್ಮನ ತರುಣರು ಆರ್ಥಿಕ ದೃಷ್ಟಿಯಿಂದ ಬ್ರಿಟನ ಫ್ರಾನ್ಸುಗಳ ತರುಣರಿಗಿಂತ ಕೊಂಚ ಉತ್ತಮ ಸ್ಥಿತಿಯಲ್ಲಿ ಇರುವರು. ಶಿಕ್ಷಣವು ಮುಗಿದ ಬಳಿಕ ಸರಕಾರವೇ ಅವರಿಗೆ ಯೋಗ್ಯವಾದ ವೃತ್ತಿ ಉದ್ಯೋಗವನ್ನು ದೊರಕಿಸಿ ಕೊಡುತ್ತದೆ. ಸೈನಿಕ ಶಿಕ್ಷಣವನ್ನು ಮುಗಿಸಿ ಬಂದ ತರುಣರಿಗೆ ಜರ್ಮನಿಯಲ್ಲಿ ತುಂಬಾ ಆದರ ಸತ್ಕಾರಗಳಾಗುತ್ತವೆ. ಅವರನ್ನು ಜರ್ಮನ ಜನತೆಯು ಗೌರವ ದೃಷ್ಟಿಯಿಂದ ಕಾಣುತ್ತದೆ. ಆದ್ದರಿಂದ ಇತರ ವೃತ್ತಿ ಉದ್ಯೋಗಗಳಿಗಿಂತ ಸೈನಿಕ ವೃತ್ತಿಯೇ ಆಗಬಹುದೆಂದು ತರುಣರಿಗೆ ತೋರುವುದು. ಈ ಕಾರಣದಿಂದ ಜರ್ಮನ ತರುಣರಿಗೆ ಶಿಸ್ತು ವ್ಯವಸ್ಥೆ, ಡ್ರಿಲ್ ಕ್ರಮಗಳೆಂದರೆ ವೇದಶಾಸ್ತ್ರಗಳಿಗಿಂತ ಪವಿತ್ರವಾಗಿರುವುವು. ಇದೆಲ್ಲಾ ಹಿಟ್ಲರ ಮತ್ತು ಅವನ ಪ್ರಮುಖ ಅನುಯಾಯಿಗಳ ನಾಝಿ ತತ್ವದ ಪ್ರಚಾರದ ಫಲಸ್ವರೂಪವಾಗಿರುವುದು. ಅಲ್ಲವಾದರೆ, ಮಹಾಯುದ್ಧ ಪೂರ್ವದಲ್ಲಿ ಜರ್ಮನರಿಗಾದರೂ ಈ ಸೈನಿಕ ಶಿಕ್ಷಣವು ಮೆಚ್ಚುಗೆಯದ್ದಾಗಿರಲಿಲ್ಲ.

ಇಟಲಿಯಲ್ಲಿ

ಇಟಲಿಯ ಜನರು ನಿರ್ಬಂಧದ ಮಿಲಿಟರಿ ಶಿಕ್ಷಣವನ್ನು ಒಂದು ಅಭಿಶಾಪವೆಂದು ತಿಳಿಯುವರು. ಈ ಶಿಕ್ಷಣವನ್ನು ಪಡೆಯುವ ತರುಣರಿಗೆ ಬ್ರಿಟನ ಫ್ರಾನ್ಸುಗಳಲ್ಲಿರುವಂಥ ಆ ಕೆಲವು ಸೌಲಭ್ಯಗಳಾಗಲೀ ಜರ್ಮನಿಯಲ್ಲಿರುವಂಥ ಆ ಕೆಲವು ಸೌಕರ್ಯಗಳಾಗಲೀ ಇರುವುದಿಲ್ಲ. ಮಿಲಿಟರಿ ಶಿಕ್ಷಣವನ್ನು ಪಡೆದವರನ್ನು ಯಾವಾಗ ಬೇಕಾದರೂ ಯುದ್ಧಕ್ಕೆ ಕರೆಯಬಹುದಾಗಿದೆ. ಮಹಾಯುದ್ಧದಲ್ಲಿ ಐದಾರು ವರ್ಷ ಕಾದಾಡಿದವರನ್ನು ಕೂಡ ಸರಕಾರವು ದಯೆದಾಕ್ಷಿಣ್ಯಗಳಿಲ್ಲದೆ ಅಬಿಸೀನಿಯಕ್ಕೆ, ಅನಂತರ ಸ್ಪೈನಿಗೂ ಹೋರಾಡಲಿಕ್ಕೆ ಕಳುಹಿಸಿದ ಹೇರಳ ಉದಾಹರಣೆಗಳಿವೆ. ಕ್ರಮವಾಗಿ ರೂಪುಗೊಂಡ ಸೈನ್ಯದಲ್ಲಿರುವ ಸೈನಿಕರಂತೆಯೇ ಈ ತರುಣರೂ ಯಾವಾಗಲೂ ಯುದ್ಧಕ್ಕೆ ಸಿದ್ಧರಾಗಿರಬೇಕು. ತರಬೇತಿಯು ಮುಗಿದಾಕ್ಷಣ ಅವರ ಜವಾಬುದಾರಿಯು ಕಡಿಮೆಯಾಗುವುದಿಲ್ಲ. ತರಬೇತಿಯನ್ನು ಹೊಂದಿದ ತರುಣರು ಸೈನ್ಯಕ್ಕೆ ಸೇರಿರದಿದ್ದರೂ ಅವರ ಜೀವನವೆಲ್ಲ ಸೈನಿಕ ವೃತ್ತಿಯಲ್ಲಿ ಕಳೆದುಹೋಗುವ ಸಂಭವವಿದೆ.

ಸ್ವಿಜರಲೆಂಡಿನಲ್ಲಿ

ಸ್ವಿಜರಲೆಂಡಿನಲ್ಲಿ ಉತ್ಕೃಷ್ಟವಾದ ಸೈನ್ಯವಿದೆ. ಆ ದೇಶವು ಬಹಳ ಚಿಕ್ಕದಾಗಿರುವುದು. ಆದ್ದರಿಂದ ಅಲ್ಲಿ ತರುಣರ ಒತ್ತಾಯದ ಶಿಕ್ಷಣ ಅವಧಿಯು ಆರು ತಿಂಗಳನ್ನು ಮೀರುವುದಿಲ್ಲ. ತರಬೇತಿಯು ಮುಗಿದ ತರುವಾಯ ಕೆಲವು ತಿಂಗಳಿಗೊಮ್ಮೆ ಒಂದೆರಡು ತಿಂಗಳು ಅವರನ್ನು ಕೆಲಸಕ್ಕೆ ಕರೆಯುವರು. ಆದರೆ ಈ ಕಾಲವು ಅಷ್ಟು ಬೇಸರದ್ದಾಗುವುದಿಲ್ಲ. ಅದನ್ನು ಅವರು ಸಂತೋಷದಲ್ಲಿಯೇ ಕಳೆಯುವರು. ಹೀಗಿದ್ದರೂ ಅಲ್ಲಿಯ ಜನತೆಯು ಈ ಕೊಂಚ ಅವಧಿಯ ನಿರ್ಬಂಧ ಸೈನಿಕ ಶಿಕ್ಷಣವನ್ನು ಮನಸಾರೆ ಮೆಚ್ಚುತ್ತದೆಂದು ಹೇಳಲಿಕ್ಕಾಗುವುದಿಲ್ಲ. ಅದನ್ನು ದೂರುವ ಜನರೂ ಅಲ್ಲಿದ್ದಾರೆ.

ಒಂದರಿಂದ ಒಂದು ಉಚ್ಚಪದವಿಗೆ ಏರುವ ಸೌಲಭ್ಯಗಳಿರುವಾಗ, ಸಂಬಳ ಸಾರಿಗೆಗಳು ಇತರ ವೃತ್ತಿ ಉದ್ಯೋಗಗಳಿಗಿಂತ ಅ[illegible]ಕವಾಗಿರುವಾಗ ಸೈನಿಕ ವೃತ್ತಿಯನ್ನು ಬೇಡವೆಂದು ಬಿಡಲಿಕ್ಕಾಗುವುದಿಲ್ಲ. ಆದ್ದರಿಂದ ಯೂರೋಪಿನ ಬಹಳ ಮಂದಿ ತರುಣರು ಸ್ವಮನಃಪೂರ್ವಕವಾಗಿ ಸೈನ್ಯಕ್ಕೆ ಸೇರಲು ಆತುರರಾಗಿ ಇರಬಹುದು. ಪರಂತು ಒತ್ತಾಯದ ಸೈನಿಕ ಶಿಕ್ಷಣವು ಮಾತ್ರ ಯಾರಿಗೂ ಬೇಡವಾಗುತ್ತದೆ. ಯಾಕಂದರೆ ಅದರಿಂದ ಅವರಿಗೆ ವ್ಯರ್ಥ ಪರಿಶ್ರಮ ಮಾತ್ರವಲ್ಲ ಬೇರೇನೂ ಪ್ರಯೋಜನವು ತೋರುವುದಿಲ್ಲ. ಯೂರೋಪಿನ ಜನಸಮುದಾಯವು ಶಾಂತಿಯ ಕಾಲದಲ್ಲಿ ನಿರ್ಬಂಧದ ಸೈನಿಕ ಶಿಕ್ಷಣವನ್ನು ವಿರೋಧಿಸುವುದರ ರಹಸ್ಯವು ಇದೇ ಆಗಿದೆ.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವಿಟ್ಟಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ 1 ವೀಸಕ್ಕೆ ರೂ 3 8 0 ನಡಿಲ ಮಾರ್ಕ ಸಾರಥಿ ನಸ್ಯ 1 ವೀಸಕ್ಕೆ ರೂ 3 0 0

(ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ಎಡ್ರೆಸು –
ಎ ಪಿ ಸಾರಥಿ
ಮೆನ್ಯುಫೆಕ್ಚರರ್ಸ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗಳಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ಆಶಾಢ ಬ॥ ೧೩ ಶನಿವಾರದಿಂದ ಶ್ರಾವಣ ಶು॥ ೫ ಶುಕ್ರವಾರದ ವರೇಗಿನ ಪಂಚಾಂಗ. (೧೮೩೯ನೇಯ ಕರ್ಣಾಟಕ ಆಟ)

[illegible]	[illegible]	[illegible]	[illegible]	[illegible]	[illegible]	[illegible]	[illegible]
15	ಶನಿ	೨೭	೪॥	ಮೃಗಶಿರಾ	೧೩॥	೩೧	
16	ರವಿ	೨೮	೦.೫ಘ್ನ್ಯಾಳಿ॥	ಆದ್ರ್ರಾ	೧೦॥।	೩೨	
17	ಸೋ.	೨೯	೪೮॥	ಪುನರ್ವಸೂ	೭।	೧	
18	ಕುಜ	೩೦	೪೨॥	ಪುಷ್ಯಾ	೩। ಘ್ನ್ಯಾ.೫೬	೨	
19	ಬುಧ	೧	೩೬।	ಮಘಾ	೫೫।	೩	
20	ಗುರು	೨	೩೦॥	ಹುಬ್ಬಾ	೫೧।	೪	
21	ಶುಕ್ರ	೩	೨೫	ಉತ್ತರಾ	೪೭॥	೫	

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs 5000/ run regularly on systematic lines. Unique Banking facilities to Businessmen and interested Public

Apply for particulars—K. R. GURU, *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C.)

ಬರೀ ರೂ. 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಫೆಷ್ಣಿ ಬಹುಮಾನಗಳು!

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 8 ಸೀಸೆ ಪರಿಮಳದ ಸೆಂಟನ್ನು ಅಥವಾ 8 ಸೀಸೆ [illegible]



[illegible] 3-14-0 [illegible]

The American Commercial Stores, Post Box No 12318 Calcutta (S A)

THE

Bank of Mangalore Ltd.,

MANGALORE

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted.

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.
in denominations of

RS. 50/-, 100/-, 500/-, 1,000/-, & 5,000/
are now issued at all our Branches.

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ದೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿ ಮನ್ನು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರ್ಡೂರು,
P. O. Perdoor (ಉಡುಪಿ)

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಿಂಟಾನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ [illegible] ಬಲವನ್ನು ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗ್ಯೆರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	1—14—0	—
„ ದುಯಂ „ „	1—12—0	1—12—0
„ ಅವ್ವಲ್ ಸುಗ್ಗಿ „	1—12—0	—
„ ದುಯಂ „ „	1—10—0	—
ಅಕ್ಕಿ ಅವ್ವಲ್ ಗುಡ್ಡ „	4—12—0	4—12—0
„ ದುಯಂ „ „	4—8—0	4—10—0
„ ಅವ್ವಲ್ ಸುಗ್ಗಿ „	4—7—0	4—7—0
„ ದುಯಂ „ „	4—8—0	4—5—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
„ ಸಿಪ್ಪೆ ಇದ್ದದು „	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
„ ದಿಲ್‌ಪಸಂದ „	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	8—8—0	4—4—0
ಗೇರುಬೀಜ ಮುಡಿಗೆ	8—10—	8—10—0
ಕಬ್ಬಿನ ಬೆಲ್ಲ ಖಂಡಿಗೆ	52—8—0	57—8—0
ಒಳ್ಳೇಮೆಣಸು ಹಂಡ್ರಡ್ವೇಟಿಗೆ	14—8—0	15—8—0

ಗ್ರಾಮೋದ್ಧಾರ ಕಾರ್ಯದಲ್ಲಿ ರೇಡಿಯೋ ಸಹಾಯ

ಏಳು ಪ್ರಾಂತಗಳ ಮಾದರಿ

ಜುಲೈಯ ಮೊದಲನೆಯ ದಿನದಿಂದ ಆರಂಭಿಸಿ ಲಕ್ನೋದಲ್ಲಿರುವ ಅಖಿಲ ಭಾರತ ರೇಡಿಯೋ ಮಂದಿರದಿಂದ ಸಂಯುಕ್ತ ಪ್ರಾಂತದ ಎಲ್ಲಾ ಹಳ್ಳಿಗಳಿಗೂ ರೇಡಿಯೋ ಕೇಳುವ ಸೌಕರ್ಯವು ಒದಗಿಸಲಾಗಿದೆ! ಒಟ್ಟು ಐವತ್ತು ರೇಡಿಯೋ ಸೆಟ್ಟುಗಳು ಹಳ್ಳಿಗಳಲ್ಲಿ ಹಂಚಲ್ಪಟ್ಟವೆ. ಅಖಿಲ ಭಾರತ ರೇಡಿಯೋ ಮೂಲಕ, ಹಳ್ಳಿಗಳಲ್ಲಿ ರೇಡಿಯೋ ಪ್ರಚಾರ ಮಾಡುವ ಪ್ರಾಂತಗಳಲ್ಲಿ ಸಂಯುಕ್ತ ಪ್ರಾಂತವು ಏಳನೆಯ ಪ್ರಾಂತವಾಗಿದೆ. ಪಂಜಾಬ, ದಿಲ್ಲಿ, ಬೊಂಬಾಯಿ, ಬಂಗಾಲ, ಮದ್ರಾಸು, ಗಡಿನಾಡು ಪ್ರಾಂತಗಳಲ್ಲಿ ಈಗಾಗಲೇ ಈ ಪ್ರಚಾರವು ಸಾಗಿದೆ.

ರಿಸೀವರುಗಳ ಕ್ರಯ ಮತ್ತು ಖರ್ಚುಗಳನ್ನು ಪ್ರಾಂತೀಯ ಸರಕಾರವೇ ವಹಿಸುವುದು, ಅದರ ಕಾರ್ಯಕ್ರಮವನ್ನು ಅಖಿಲ ಭಾರತ ರೇಡಿಯೋ ಒದಗಿಸಬೇಕಾಗಿದೆ, ಗ್ರಾಮಾಭಿವೃದ್ಧಿ ಕೆಲಸ ಮಾಡುವ ಹಳ್ಳಿಗಳ ಕೇಂದ್ರಸ್ಥಾನಗಳನ್ನು ಆರಿಸಿ ಸಂಯುಕ್ತ ಪ್ರಾಂತದ ಸರಕಾರವು ಈ ರೀತಿ ರೇಡಿಯೋ ಸೆಟ್ಟುಗಳನ್ನು ಹಳ್ಳಿಗಳಲ್ಲಿ ಹಂಚಿರುತ್ತದೆ. ಅಲ್ಲಿಗೆ ಬೇಕಾದ ಮಾರ್ಗಗಳ ಸೌಕರ್ಯವೂ ಮಾಡಲಾಗಿದೆ. ರೇಡಿಯೋದಲ್ಲಿ ಯಾವುದಾದರೂ ಹಾಳುಬಿದ್ದರೆ, ಅದನ್ನು ಕೂಡಲೇ ಸರಿಮಾಡಲಿಕ್ಕಾಗಿ ಬೇಕಾದ ವಾಹನಗಳ ಸೌಲಭ್ಯವು ಅಲ್ಲಿಗೆ ಮಾಡಲಾಗಿದೆ. ಪ್ರತಿಯೊಂದು ಸೆಟ್ಟನ್ನು ಹತ್ತು ದಿನಗಳಿಗೊಮ್ಮೆ ಹೋಗಿ ಸಂದರ್ಶಿಸುವಂತೆ ಕಾರ್ಯಕ್ರಮವು ಇಡಲಾಗಿದೆ.

ಜೀವನದಲ್ಲಿ ಕ್ರಾಂತಿ

ಹೀಗೆ ಹಳ್ಳಿಗಳಲ್ಲಿ ರೇಡಿಯೋಗಳನ್ನು ಇಡುವುದರಿಂದ ಗ್ರಾಮೋದ್ಧಾರ ಕಾರ್ಯವು ಬಹಳ ಸುಲಭದಿಂದಲೂ, ಉತ್ಸಾಹದಿಂದಲೂ ಮಾಡಲು ಸಾಧ್ಯವಾಗುವುದು. ಹಳ್ಳಿಯ ಜೀವನದಲ್ಲಿ ಶತಮಾನಗಳಿಂದಲೂ, ಯಾವ ವ್ಯತ್ಯಾಸವೂ ಇಲ್ಲದೆ ಜಡವಾಗಿದ್ದ ಗ್ರಾಮಸ್ಥರ ಜೀವನದಲ್ಲಿ ಇದು ಒಂದು ಹೊಸ ಬೆಳಕನ್ನು ತರುವುದು. ಸಹಜವಾಗಿಯೂ ಇದು ಆಕರ್ಷಣೀಯವಾಗಿದ್ದು ಜನತೆಯಲ್ಲಿ ಸ್ವಧಾರಣೆಯ ಕ್ರಾಂತಿಯನ್ನೇ ಉಂಟುಮಾಡುವುದು.

ಮನೋಶಾಂತಿ

ಹಗಲಿನ ಕೆಲಸ ತೀರಿದ ಮೇಲೆ, ತಮ್ಮ ದಿನನಿತ್ಯದ ದುಡಿತದ ಆಯಾಸ ಪರಿಹಾರಕ್ಕಾಗಿಯೇ ಹಲವು ಮಂದಿ ಮದ್ಯಪಾನವೇ ಮೊದಲಾದ ಕೆಟ್ಟ ಅಭ್ಯಾಸ ಮಾಡುತ್ತಾರೆ. ಮದ್ಯಪಾನ ನಿಷೇಧದಂತಹ ರಾಷ್ಟ್ರೀಯ ಹಿತಕಾರ್ಯವನ್ನು ಕಾಂಗ್ರೆಸು ಮಂತ್ರಿಮಂಡಳಗಳು ಕೈಕೊಂಡಿರುವಾಗ, ಅದರ ಅಭ್ಯಾಸವುಳ್ಳ ಜನರಿಗೆ ಬೇಕಾದ ಇನ್ನೊಂದು ರೀತಿಯ ವಿನೋದ ವಿಹಾರಕ್ಕೆ ರೇಡಿಯೋ ಸಾಧನವಾಗುವುದು!

ಜ್ಞಾನ ಪ್ರಚಾರ

ಪ್ರಪಂಚದ ಪರಿಸ್ಥಿತಿಯನ್ನು ಅನಾಗರಿಕ ಜೀವನದಲ್ಲಿರುವವರಿಗೆ ತಿಳಿಸುವರೆ, ನಿರಕ್ಷರತೆಯ ಕಾರಿರುಳಲ್ಲಿ ಕಂಗೆಟ್ಟಿರುವವರಿಗೆ ವಿದ್ಯೆಯ ಪ್ರಯೋಜನವನ್ನು ವ್ಯಕ್ತಪಡಿಸುವರೆ, ಇದು ಅಮೂಲ್ಯ ಸಾಧನವಾಗುವುದು. ಹಳ್ಳಿಯ ಆರ್ಥಿಕ ಸ್ಥಿತಿಯ ಅಭಿವೃದ್ಧಿಯು ಈ ಮೂಲಕ ಕೊಡುವ ಶಿಕ್ಷಣದಿಂದ ಬಹಳ ಉನ್ನತಿಗೇರುವುದು. ಹಳ್ಳಿಯ ಜನರು ತಮಗೆ ಪ್ರಕೃತಿಯ ಪ್ರಸಾದದಿಂದಲೇ ಒದಗಿದ, ಸುಂದರವಾದ ವಾತಾವರಣದಲ್ಲಿ, ಒಳ್ಳೆಯ ಆರೋಗ್ಯದಿಂದಲೂ, ಉತ್ತಮ ತಿಳುವಳಿಕೆಯಿಂದಲೂ, ಯೋಗ್ಯ ನಡತೆಯಿಂದಲೂ ಮುಂದುವರಿದಲ್ಲಿ ಮುಂದಕ್ಕೆ ಇಡೀ ನಾಡಿನಲ್ಲಿ ಯಾವ ರೀತಿಯ ಜೀವನ ಕ್ರಾಂತಿಯು ಆಗಬಹುದೆಂಬುದನ್ನು ಊಹಿಸುವುದು ಸಾಧ್ಯವಿಲ್ಲ. ರಾಷ್ಟ್ರದ ಏಳಿಗೆಯ ಹಾದಿಯಲ್ಲಿ 'ರೇಡಿಯೋ'ಗಳಿಂದಲೂ ಬಹಳ ಸಹಾಯವಾಗುವುದು ನಿಶ್ಚಯ.

ವಿಜ್ಞಾನ ಯುಗ

ನಿದ್ರೆಮಾಡಿ ಎದ್ದಾಗ ಉದ್ದ ಬೆಳೆಯಬಹುದು!

ಮನುಷ್ಯನು ನಿದ್ರೆಮಾಡಿ ಎದ್ದಾಗ ಉದ್ದ ಬೆಳೆಯುತ್ತಾನೆಂಬ ವಿಷಯವನ್ನು ಅಮೇರಿಕದ ವಿಜ್ಞಾನಶಾಸ್ತ್ರಜ್ಞನೊಬ್ಬನು ಕಂಡುಹಿಡಿದಿದ್ದಾನೆ. ಹಗಲು ಹೊತ್ತು ಕೆಲಸ ಮಾಡುತ್ತಿದ್ದಾಗ ನಮ್ಮ ಬೆಳವಣಿಗೆಯ ನರಗಳೆಲ್ಲಾ ಒತ್ತಿಹಿಡಿಯಲ್ಪಡುವವೆಂದೂ, ರಾತ್ರಿ ನಿದ್ರೆಯಲ್ಲಿ ಅವುಗಳು ಸ್ವತಂತ್ರವಾಗಿ ಬೆಳೆಯಲು ಸಾಧ್ಯವಾಗುವುದೆಂದೂ ತಿಳಿದಿದೆ. ಈ ಶೋಧನೆಯನ್ನು ೪೮ ಮಂದಿ ಹುಡುಗರಿಗೆ ಪ್ರಯೋಗ ಮಾಡಿ ನೋಡಲಾಗಿ, ಪ್ರತಿಸಲವೂ ಅವರು ಮಲಗಿದಾಗ ಇದ್ದ ಉದ್ದಕ್ಕಿಂತ ಬಹಳ ಹೆಚ್ಚಿನ ಮಾರ್ಪಾಟು ನಿದ್ರೆಮಾಡಿದ ಮೇಲೆ ಕಂಡುಹಿಡಿಯಲಾಯಿತು.

ಹಾಲಿನಿಂದ ರೇಷ್ಮೆಯಾದೀತೇ?

ದನದ ಹಾಲನ್ನು ಶುದ್ಧ ರೇಷ್ಮೆಯಾಗಿ ಮಾಡಲು ಯತ್ನಿಸಿ ಬಹಳ ಸಮಯವನ್ನು ಕಳೆದ, ಬೆಂಜಮಿನ್ ರೂಸನೆಂಬ ಜರ್ಮನ್ ಯೆಹೂದ್ಯ ವೈಜ್ಞಾನಿಕನ ಜೀವನವು ಕೊನೆಗೊಂಡಿದೆ. ಆತನು ಈ ತನ್ನ ಶೋಧನೆಗಾಗಿ ೨೫,೦೦೦ ಪವನುಗಳನ್ನು ವ್ಯಯಮಾಡಿದನು. ಈ ಶೋಧನೆಯನ್ನು ಕಂಡುಹಿಡಿದು, ಬಹಳ ದ್ರೊವ್ಯಹಣವಂತನೂ, ಭಾಗ್ಯಶಾಲಿಯೂ ಆಗಬೇಕೆಂದು ಕನವರಿಸಿದ್ದ ಆತನು ಕಡೆಗೆ ಕಾಸಿಗೆ ಗತಿಯಿಲ್ಲದೆ ಮೃತನಾದ. ಆತನ ಹಾಲಿನಿಂದ ರೇಷ್ಮೆಯಾಗುತ್ತದೆಂದು ಕಂಡುಹಿಡಿದಿದ್ದ. ರೇಷ್ಮೆಯನ್ನು ಮಾಡಿಯೂ ಕೃತಾರ್ಥನಾಗಿದ್ದ, ಆದರೆ ಉಪಯೋಗಕ್ಕೆ ಬರುವಂತಹ ರೇಷ್ಮೆ ಮಾತ್ರ ಅವನಿಂದ ಒದಗಿಸಲು ಸಾಧ್ಯವಾಗಲಿಲ್ಲ. ಅವನಿಗೆ ತಾನು ಮಾಡಿದ ರೇಷ್ಮೆಯಲ್ಲಿ ಸೌಂದರ್ಯ, ನುಣುಪು, ಬಲ, ಬಣ್ಣ ಇವೇ ಮೊದಲಾದ ಮುಖ್ಯ ಗುಣಗಳನ್ನು ಜತೆಗೊಳಿಸಲು ಸಾಧ್ಯವಾಗಲಿಲ್ಲ. ಕೆಲವನ್ನು ಸೇರಿಸಿ ಕೃತಾರ್ಥನಾಗಿದ್ದರೂ ಎಲ್ಲಾ ಗುಣಗಳನ್ನೂ ಒಂದು ಮಾಡಲು ಅವನ ಇಡೀ ಜೀವನದಲ್ಲಿಯೇ ಆಗಲಿಲ್ಲ. ಪಾಪ! ತಾನು ಆರಂಭಿಸಿದ ಕೆಲಸವನ್ನು ಹಾಗೆಯೇ ಬಿಟ್ಟು ಕಡೆಯುಸಿರೆಳೆದ.

ಶಸ್ತ್ರಚಿಕಿತ್ಸೆಯಿಂದ ಬೇಸರ ಗುಣವಾಗುತ್ತದೆ!

ನಿಮಗೆ ಆಗಾಗ ಬೇಸರವಾಗುತ್ತದೆಯೆ? ಆದರೆ ಅದನ್ನು ಶಸ್ತ್ರಚಿಕಿತ್ಸೆಯಿಂದ ಗುಣಪಡಿಸುವುದು ಸಾಧ್ಯವಿದೆಯೆಂದು, ವಿಜ್ಞಾನದ ಶೋಧನೆ ತಿಳಿಸಿದೆ. ಆದರೆ ಶಸ್ತ್ರಚಿಕಿತ್ಸೆಯಿಂದ ಯಾರು ತಮ್ಮ ಬೇಸರವನ್ನು ಕಳೆಯಲು ಅಪೇಕ್ಷಿಸುತ್ತಾರೋ, ಅವರು ತಮ್ಮ ಬುದ್ಧಿಶಕ್ತಿಯನ್ನು ಸ್ವಲ್ಪಮಟ್ಟಿಗೆ ಕಳಕೊಳ್ಳಬೇಕಾದ ಸಂದರ್ಭ ಬಂದಲ್ಲಿ ಅದಕ್ಕಾಗಿ ಚಿಂತಿಸಬಾರದು.

ವಾಶಿಂಗ್‌ಟನ್ನಿನ ಒಬ್ಬ ವಿಖ್ಯಾತ ಸರ್ಜನರು, ಕಳೆದ ಎರಡು ವರ್ಷಗಳಿಂದ, ೪೮ ಮಂದಿಯ ಶಸ್ತ್ರಚಿಕಿತ್ಸೆ ಮಾಡಿ ಬೇಸರವಾಗುವುದರಿಂದ ಗುಣಪಡಿಸಿರುವುದಾಗಿ ತಿಳಿಸುತ್ತಾರೆ. ಅತ್ಯಂತ ಔತ್ಸುಕ್ಯ, ಬಹಳ ಬೇಸರ ಇಂತಹ ಅವಸ್ಥೆಯಿಂದ ಕಷ್ಟಪಡುವವರು ಇದರಿಂದ ಗುಣಹೊಂದುತ್ತಾರೆ.

ಹೀಗೆ ಬೇಸರ, ಔತ್ಸುಕ್ಯಗಳಾಗುವುದು ತಲೆಯ ಮುಂಭಾಗದ ಮಿದುಳಿನ ಕ್ರಿಯೆಯಿಂದ. ಆ ಮಿದುಳು ಯಾವಾಗಲೂ ಸ್ವವಿಚಾರವನ್ನು ಹೆಚ್ಚಿಸುತ್ತಾ ಇದ್ದು ತಲೆಯನ್ನು ಕೆಡಿಸಿಬಿಡುತ್ತದೆ. ಶಸ್ತ್ರಚಿಕಿತ್ಸೆ ಮಾಡುವುದರಿಂದ ಮುಂಭಾಗದ ಆ ಮಿದುಳು ತನ್ನ ಕೆಲಸವನ್ನು ಜೋರಾಗಿ ಮಾಡದಂತೆ ತಡೆಯಲಾಗುವುದು. ಇಂತಹ ಮಿದುಳಿಲ್ಲದ ಮೃಗಜಾತಿಗೆ ಜೀವನದಲ್ಲಿ ಬೇಸರವೇ ಆಗುವುದಿಲ್ಲವಂತೆ!

ಕಾಲನಿಯಮವನ್ನು ತೋರಿಸಲಿಕ್ಕೆ ನವೀನ ಸಾಧನ

ಮುಖ್ಯವಾಗಿ ರೈಲಿನಲ್ಲಿ ಬೇರೆ ಬೇರೆ ಕಡೆಗಳಿಗೆ ಪ್ರಯಾಣ ಮಾಡಬೇಕಾದಂಥವರು ಯಾವ ಹೊತ್ತಿನಲ್ಲಿ ಯಾವ ಗಾಡಿಯು ಯಾವ ಕಡೆಗೆ ಹೋಗುತ್ತದೆಂಬುದನ್ನು ರೈಲ್ವೆ ಸ್ಟೇಶನುಗಳಲ್ಲಿ ತೂಗಾಡಿಸಿರುವ ಕಾಲನಿಯಾಮಕ ಪಟ್ಟಿಯನ್ನು ನೋಡಬೇಕಾಗುತ್ತದೆ. ಆದರೆ ಇದನ್ನು ನೋಡಿ ಬೇಕಾದ ಅನುಭವವನ್ನು ಪಡೆಯಲು ತುಂಬಾ ಸಮಯವು ಕಳೆದುಹೋಗುತ್ತದೆ. ಜೀವನ ಸಫಲತೆಯ ಮರ್ಮವನ್ನು ತಿಳಕೊಂಡವರು ಸಮಯವನ್ನು ವ್ಯರ್ಥ ಕಳೆಯಲಿಚ್ಛಿಸುವುದಿಲ್ಲ. ಆದ್ದರಿಂದ ಕಾಲನಿಯಾಮಕ ಪಟ್ಟಿಯ ಪ್ರಯೋಜನವನ್ನು ಪಡೆಯುವ ಉದ್ದೇಶದಿಂದಲೇ ಈಗ ಒಂದು ಯಂತ್ರ ಸಾಧನದ ಆವಿಷ್ಕಾರವಾಗಿರುವುದು. ಈ ಒಂದೊಂದು ಯಂತ್ರವನ್ನು ಪಾಶ್ಚಾತ್ಯ ರಾಷ್ಟ್ರಗಳ ಕೆಲಕೆಲವು ಮುಖ್ಯ ರೈಲ್ವೆ ಸ್ಟೇಶನುಗಳಲ್ಲಿ ಪರೀಕ್ಷಾರ್ಥ ಇಟ್ಟಿರುತ್ತಾರೆ. ಈ ಯಂತ್ರದ ಮೇಲೆ ಆ ಸ್ಟೇಶನಿನಿಂದ ಗಾಡಿಹೋಗುವ ಬೇರೆ ಬೇರೆ ಊರುಗಳ ಹೆಸರುಗಳನ್ನು ಬರೆದಿರುವ ಗುಬ್ಬಿಗಳು ಇವೆ. ಪ್ರಯಾಣಿಕನು ತಾನು ಹೋಗಬೇಕಾದ ಊರಿನ ಗುಬ್ಬಿಯನ್ನು ಒತ್ತಿದರಾಯಿತು. ಕೂಡಲೆ ಅಲ್ಲಿಗೆ ಗಾಡಿಯು ಯಾವ ಸಮಯಕ್ಕೆ ಹೊರಡುತ್ತದೆ ಎಂದು ಬರೆದಿರುವ ಒಂದು ಚೀಟು ಯಂತ್ರದೊಳಗಿಂದ ಮೇಲೆ ಬರುತ್ತದೆ. ಇದನ್ನು ಓದಿ ಪ್ರಯಾಣಿಕನು ತಾನು ಹೊರಡುವ ಸಮಯವನ್ನು ಅತ್ಯಲ್ಪ ಕಾಲದಲ್ಲಿ ತಿಳಕೊಳ್ಳಬಹುದು.

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ನಮ್ಮಲ್ಲಿ ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯ ಸಲ್ಲಕ್ಷಣಗಳು ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ

ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲಾ ಪ್ರಕಾರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಬೀಳುವುದಿಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವುಹೋಗುವುದು ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಾರಿ ಜಂತುಗಳು. ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗವು ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು. ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8-0-0 (ವ್ಹಿ. ಪಿ. ಚಾರ್ಜು 8 ಆಣೆ ಬೇರೆ)

ಎಲ್ಲಾ ಪತ್ರವ್ಯವಹಾರ ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

ಗಳು ಇಂಗ್ಲಿಷಿನಲ್ಲಿ ಬರೆಯಿರಿ. *Sole Manufacturer:* **Dr D. N. JASANI,** Vithalbhai Patal Road, BOMBAY

ಸ್ಟಾಕಿಸ್ಟ: ಮೆಸರ್ಸ್ ಇಲೆಕ್ಟ್ರೊ ಹೊಮ್ಯೊಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ, ಹಂಪನಕಟ್ಟಾ ಮಂಗಳೂರು

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST PAULS CHURCH,
Bolkunje Post, S K
Dated 4 h Jan 1939

To
THE JOINT MANAGERS,
The C P C Co Ltd, Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights some of which I hear were done voluntarily

May the blessings of the almighty fall on you all and may you be able to do much good to the Publ c

Renewing my thanks I remain
Yours Sincerely
(Sd) **P W Farias**

Sri Parshwanathaswami,
PANCHAKALYANA POOJA MAHOSTHAM
Venoor S Kanara 1939

To,
THE JOINT MANAGERS,
The Combind Booking Agency Mangalore

Dear Sirs

Please permit us to express our thanks on behalf of the above committee for the efficient Service ... combind Booking Agency Staff at Venoor to the visitors of the Panchakalyana Pooja Mahostham celebration held this year

Our thanks are also due to Moodabidri Booking Clerk Mr B Krishnayya and also his other mates and Mr Raghavendra Bhandary who had specially come down from Mangalore to see to the needs of and comforts of the travelling Public Thanking you once again

We remain Yours faithfully

Venoor } (Sd) B Chandappa Indra (*Secretary P M Council*) (Sd) M Jagathpal (Sd) M Pachappa Shetty
Dated 6-3-39 } (Sd) Anantharaj Shetty (*Members Panchakalyana Mahostham Committee*)

JOINT MANAGERS,

The Combined Booking Agency,
MANGALORE

The Joint Booking Office,
KODIALBAIL.

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER
A CRORE.

ESTD 1906
CANARA BANK,
LIMITED.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಗುಂಕಾದ ಬೇನೆ, ಪಕ್ಷವಾತ, ಮೊಡಿನ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ರೂ 2—0

ಸ್ವದೇಶಾಭಿಮಾನಿ

ರೂ. 2-13-0

Established 1906 Regd. No. M 340

ಸಂಪುಟ ೩೩] ತಾರೀಕು ೧೪-೭-೧೯೩೯ (14—7—1939) [ಸಂಚಿಕೆ ೨೮

THE

BOMBAY LIFE ASSURANCE COMPANY, LTD.,

(Estd 1908)

THE OFFICE

Which has proved its popularity by its progress

Record of New Bussiness

Proposed	Year	Completed
1,25 50 250	1934	1 04 33 750
1 50 48 915	1935	1 23 28 665
1 68 88 200	1936	1 30 01 500
1 72 579 75	1937	1 40 08 725
176 83 250	**1938**	**144 91 000**

1939-VALUATION YEAR

Please take up a Policy Now and participate in Bonus

To Insure or to Represent please write to or consult

Apply to

KOCHIKAR BROTHERS, LIMITED,

Madras Branch Secretaries

The Bombay Life Assurance Co., Ltd.,

The Bombay Life Building Gandhinagar, UDIPI

or any of our following offices:

Post Box No 337, Mount Road, Madras

Visweshwarapuram Circle, Bangalore City

Charni Road, Girgaum, BOMBAY 4

Car Street, Mangalore

Puthiyara, Calicut

Central Station Road, Trivandrum

MAKE LIFE WORTH-LIVING!

Indigestion Insomnia Dry Cough

Nervousness Weak Heart &c

these make you wiery of Life!

GONSULT US AND BUY

YOUR LIFE'S HAPPINESS!

Oils — that cool the brain and induce sleep

Lehas — that build up your wasted system

Asavas = that regenerate your jaded nerve

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ ಒಣ ಕೆಮ್ಮು

ನರಗಳ ಅಬಲತೆ ದುರ್ಬಲ ಹೃತ್ಕೋಶ ಇವುಗಳು

ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ— ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ ತೈಲಗಳು

ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ ಲೇಹಗಳ

ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ ಆಸವಗಳು

ಒಂದು ಶತಮಾನದ ಅನುಭವದ

ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, — ದ ಕನ್ನಡ

(ಬ್ರಾಂಚ್: ಕುಮಟಿ, ಉತ್ತರ ಕನ್ನಡ)

ಸ್ವದೇಶಾಭಿಮಾನಿ

Swadeshabhimani. Estd 1906

Date 21—7—1939 ತಾರೀಖು ೨೧—೭—೧೯೩೯

ಮಿಸ್ ಪ್ರಭಾ

ಸಚಿತ್ರ

ವಾರಪತ್ರಿಕೆ

ವಿದೇಶಗಳಿಗೆ ಒಂದಾಣೆ
ವಾರ್ಷಿಕ ಚಂದಾ ರೂ 2-0-0

ಸ್ವದೇಶಾಭಿಮಾನಿ

ಟಪ್ಪಾಲು ಹಾಸಲು ಸೇರಿ
ರೂ 2-13-0

Established 1906 • Regd. No. M 3406

ಸಂಪುಟ ೩೩] ತಾರೀಕು ೧೪-೭-೧೯೩೯ (14—7—1939) [ಸಂಚಿಕೆ ೨೮

THE

BOMBAY LIFE ASSURANCE COMPANY, LTD.,

(ESTD 1908)

THE OFFICE

Which has proved its popularity by its progress

Record of New Bussiness

Proposed	Year	Completed
1 25 50 250	1934	1 01 33 750
1,50,18 915	1935	1 23 28 665
1 68 68 200	1936	1 31 [illegible] 500
1 72,579 75	1937	1 40 08 725
176 83 250	**1938**	**144 91 000**

1939-VALUATION YEAR

Please take up a Policy Now and participate in Bonus

[illegible]

Apply to **KOCHIKAR BROTHERS, LIMITED,**

Madras Branch Secretaries

The Bombay Life Assurance Co Ltd

The Bombay Life Building Gandhinagar, UDIPI

or any of our following offices:

Post Box No 337
Mount Road
Madras

Visweshwarapuram Circle
Bangalore City

Charni Road
Girgaum
BOMBAY 4

Car Street
Mangalore

Puthiyara
Calicut

Central Station Road,
Trivandrum

MAKE LIFE WORTH-LIVING!

Indigestion – Insomnia – Dry Cough
Nervousness – Weak Heart &c
these make you weary of Life!

CONSULT US AND BUY
YOUR LIFE'S HAPPINESS!

Oils – [illegible] and induce sleep
Lehas that build-up your wasted system
Asavas – that regenerate your jaded nerves

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ – ನಿದ್ರಾವಿಹೀನತೆ ಒಣ ಕೆಮ್ಮು –
ನರಗಳ ಅಬಲತೆ ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ– ನಿಮ್ಮ ಜೀವಮಾನದ ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ. ಕನ್ನಡ

(ಬ್ರ್ಯಾಂಚ್ ಕುಮಟೆ, ಉತ್ತರ ಕನ್ನಡ)

Edited Printed & Published by A S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 21—7—1939 ತಾರೀಖು ೨೧—೭—೧೯೩೯

ಮಿಸ್ ಪ್ರಭಾ

ಸಚಿತ್ರ
ವಾರಪತ್ರಿಕೆ

ನೋಟಗಳು

ಅಮೇರಿಕಾದಲ್ಲಿರುವ ಹಿಂದೀಯರ ವಿಷಯದಲ್ಲಿ ಇಲ್ಲಿಯ ಅಧಿಕಾರಿಗಳು ಬಹಳ ಹೀನ ರೀತಿಯಿಂದ ವರ್ತಿಸುತ್ತಾರೆ! ಹೆಚ್ಚಾಗಿ ಅಲ್ಲಿಯ ಹಿಂದೀಯರೆಲ್ಲರೂ ವಿದ್ಯಾವಂತರು; ಒಳ್ಳೆಯ ಸಂಸ್ಕೃತಿ ಹೊಂದಿದ ಸಭ್ಯರು; ಸಮಾಜದಲ್ಲಿ ಗೌರವದ ಸ್ಥಾನದಲ್ಲಿ ಇದ್ದವರು; ಹೋಟೆಲುಗಳಲ್ಲಿ, ಸಿನೆಮಾ ಪ್ರದರ್ಶನಗಳಲ್ಲಿ, ಯೂರೋಪಿಯನರು ಕ್ರೈಸ್ತರಾಗಿದ್ದ ಕಾರುಗಳಲ್ಲಿ ಮತ್ತು ಸಾರ್ವಜನಿಕ ಬಸ್ಸುಗಳ ರೈಲುಗಳ ಒಂದನೇ ಎರಡನೇ ತರಗತಿಗಳಲ್ಲಿ ಹೀಗೆ ನಾನಾ ವಿಷಯಗಳಲ್ಲಿ ಹಿಂದೀಯರಿಗೆ ಪ್ರವೇಶವಿಲ್ಲ ಹಕ್ಕಿಲ್ಲ!

◆

ಇದು ಇಟಲಿ ಭೂಪತಿಯ ರಾಜ್ಯದಲ್ಲಿ! ಬ್ರಿಟಿಷ್ ದೊರೆಗಳ ಆಡಳಿತಕ್ಕೊಳಪಟ್ಟಿರುವ ಕೆನ್ಯಾದಲ್ಲಿಯೇ, ಇಟಲಿಯವರಿಗೆ ಯಾವ ಮನ್ನಣೆ, ನಾಗರಿಕ ಸ್ವಾತಂತ್ರ್ಯವುಂಟೋ, ಅದು ಬ್ರಿಟಿಷ್ ಪ್ರಜೆಗಳಾದ ಹಿಂದೀಯರಿಗಿಲ್ಲ! ವಿದೇಶೀಯರಾದ ಇಟಲಿಯನರು, ಕೆನ್ಯಾಕ್ಕೆ ನಿರ್ಭಯರಾಗಿ ಬರಬಹುದು, ಸ್ಥಳಗಳನ್ನು ಉತ್ತಮವಾದ ನಿವಾಸ ಭೂಮಿಗಳನ್ನು ಪಡೆಕೊಂಡು ಸುಖವಾಗಿರಬಹುದು. ಬ್ರಿಟಿಷ್ ಪ್ರಜಾಸಂತತಿಯೇ ಆದ ಭಾರತೀಯರಿಗೆ ಅದೂ ಇಲ್ಲ!

◆

ಹಿಂದೂದೇಶಕ್ಕೇ ಸಂಬಂಧಿಸಿರುವ ಸಿಲೋನಿನಿಂದಲೂ ಹಿಂದೀಯರಿಗೆ ಹೊರಡಲು ಅಪ್ಪಣೆಯಾಗಿದೆ

◆

ಬ್ರಿಟಿಷ್ ವಸಾಹತ್ತುಗಳಲ್ಲಿಯೇ ಹಿಂದೀಯರಿಗೆ ಈ ರೀತಿಯ ಉಪಚಾರವಾದರೆ, ಪರದೇಶೀಯರ ಕೈಯಲ್ಲಿ ಆತೆರದ ಕಷ್ಟಕ್ಕೊಳಗಾಗುವುದರಲ್ಲಿ ಆಶ್ಚರ್ಯವೇನು?

◆

ಟೋಕಿಯೋದಲ್ಲಿರುವ ಬ್ರಿಟಿಷ್ ರಾಯಭಾರಿಯು ಟಿನಿಸ್ಟ್ಸಿನಲ್ಲಿ ಯಾವುದೇ ರೀತಿಯಿಂದಲಾಗಲಿ, ಬ್ರಿಟಿಷ್ ಪ್ರಜೆಗಳಿಗೆ ಆಗುವ ಉದ್ದೇಶ ಪೂರ್ವಕವಾದ ಉಪಟಳವು, ಟೋಕಿಯೋದಲ್ಲಿ ನಡೆಯುವ ಬ್ರಿಟಿಷ್-ಜಾಪಾನರ ಮಾತುಕತೆಯನ್ನು ಹಾಳು ಮಾಡೀತು" ಎನ್ನುತ್ತಾನೆ! ಈ ಎಚ್ಚರ ಕೊಟ್ಟಂತೆಯೇ, ಒಬ್ಬ ಬ್ರಿಟಿಷ್ ನೌಕಾಧಿಕಾರಿಯನ್ನು ಜಪಾನೀಯರು ರಟ್ಟೆಬಿಗಿದರು ಇನ್ನೊಬ್ಬ ಬ್ರಿಟಿಷ್ ಪ್ರಜೆಯನ್ನ ಬ್ರಿಟಿಷ್ ಪ್ರಾಂತದಿಂದಲೇ ಹೊರ ಹಾಕಿದರು

◆

ಬ್ರಿಟಿಷರ ಸೇಧ ಸೂಚನೆಗಾಗಲಿ, ಟೋಕಿಯೋದಲ್ಲಿ ನಡೆಯುವ ರಾಜಿಪಂಚಾಯಿತಿಗಾಗಲಿ ಜಪಾನು ಗಣ್ಯಮಾಡುವುದಿಲ್ಲವೆಂದು ಬ್ರಿಟಿಷರು ತಿಳಿದಿಲ್ಲವೆಂದು ತೋರುತ್ತದೆ.

◆

ಆಫ್ರಿಕದ ಯೂನಿಯನ್ ಸರಕಾರ ಮತ್ತು ಅಲ್ಲಿ ನೆಲೆಸಿರುವ ಹಿಂದೀಯರೊಳಗೆ, ಇದು ವರೆಗಿನ ವ್ಯವಹಾರದಿಂದ ಯಾವ ಪರಿಣಾಮವೂ ಆಗದಿರುವುದರಿಂದ ಅಗಸ್ಟ ಮೊದಲನೆಯ ದಿನ ಸತ್ಯಾಗ್ರಹದ ಆರಂಭ ದಿನವಾಗಿ ಪ್ರಸಿದ್ಧಪಡಿಸಲಾಗಿದೆ

◆

ವಲ್ಲಭಭಾಯಿ ಪಟೇಲರನ್ನು, ಕಾಂಗ್ರೆಸು, ಅಲ್ಲಿನ ಸತ್ಯಾಗ್ರಹ ಆಂದೋಲನವನ್ನು ನಡೆಸಲು ಕಳುಹಿಸುವುದೆಂದು ವಾರ್ತೆ ಹಾಗಾದರೆ ಅಗಸ್ಟ ಒಂದರ ಒಳಗೆ ಅಲ್ಲಿಗೆ ಮುಟ್ಟುವಂತೆ ಪಟೇಲರು ಹೊರಡಲಿರುವರೇ?

◆

ಪಂಡಿತ ನೆಹರುಗಳು ವಿಮಾನದಲ್ಲಿ ಸಿಲೋನಿಗೆ ಬಂದಿಳಿದಿರುವರು; ಸಿಲೋನು ಸರಕಾರದಿಂದ, ಕೆಲಸದಿಂದ ತಳ್ಳಿಹಾಕಲ್ಪಡುವ ಸಾವಿರಾರು ಮಂದಿ ಹಿಂದೀಯರನ್ನು ಬದುಕಿಸಲು ಅವರು ಸಾಹಸಪಡುತ್ತಾರೆ.

ಹಿಂದೀಯರು ವಿದೇಶ ... ವರಿಗೆ ತಿಹರುಗಳ ಅಗ್ರಮಾನವನ್ನು ... ನಿಲುವಾಗ ಜನರನ್ನು ಕುಳ್ಳಿರಿಸಿ ಪ್ರದರ್ಶನ ಮಾಡಲು ಪುರುಸೊತ್ತೇ ಆಗಲಿಲ್ಲ. ನೆಹರುಗಳು ವಿಮಾನದಲ್ಲಿ ತೀವ್ರವಾಗಿ ಹಾರಾಡಿ ಬಂದು, ಭದ್ರವಾಗಿ ಸಿಲೋನಿನಲ್ಲಿ ಮತ್ತದಲ್ಲಿಯೇ ಕಳವಳಪಡಬೇಕೇ?

◆

ಸಿಲೋನಿನ ಮಂತ್ರಿಗಳ ವರ್ತನೆಯು ಬಹಳ ಉಗ್ರವಾಗಿರುವಂತಿದೆ. ಸ್ವಲ್ಪ ಸಮಯಕ್ಕೆ ಹಿಂದೆ ಇವರಲ್ಲಿಯೇ ಒಬ್ಬ ಮಂತ್ರಿಯು ನೆಹರುಗಳ ರಾಯಭಾರಿತನದ ಕುರಿತು "ನಾವು ಪಂಡಿತರನ್ನು ಸ್ವಾಗತಿಸಲಾರೆವು; ಯಾಕಂದರೆ ಅವರು ನಮ್ಮ ದೇಶದ ಪ್ರೀತಿಯಿಂದ ಬರುವುದಿಲ್ಲ, ಆದರೆ ನಾವು ಅವರನ್ನು ಇಲ್ಲಿಂದ ಬೆದರಿಸಿ ಓಡಿಸುವುದಿಲ್ಲ. ನಾವು ಸಂಸ್ಕೃತಿ ಹೊಂದಿದ ವಿದ್ಯಾವಂತರಾದ ಜನಾಂಗಕ್ಕೆ ಸೇರಿದವರು. ಇಂದಿನ ಹಿಂದೀಯರನ್ನು ಉದ್ಯೋಗದಿಂದ ಹೊರಹಾಕುವ ಕಾನೂನನ್ನು ನಾವು ಸ್ವಲ್ಪವೂ ಬದಲಾಯಿಸಲು ಸಾಧ್ಯವಿಲ್ಲ" ಹೀಗೆಂದು ಹೇಳಿರುವರು

◆

ನಮ್ಮ ದೇಶದಲ್ಲಿ ಉದ್ಯೋಗಗಳು ಅಭಿವೃದ್ಧಿ ಸ್ಥಿತಿಯಲ್ಲಿಲ್ಲದಿರುವ ಕಾರಣ, ಕೆಲಸಗಾರರು ತಮಗೆ ಸಹಿಸಲಾರದ ಅನ್ಯಾಯವಾಗಿದ್ದರೂ, ತಾಳ್ಮೆಗೆಟ್ಟು ಮುಷ್ಕರ ಹೂಡುವುದರಿಂದ ಅವರು ಸಂಸ್ಥೆಯನ್ನು ಮತ್ತು ಅದರ ಮಾಲಿಕರನ್ನು ಕಟ್ಟಕಡೆಗೆ ದೇಶದ ವ್ಯಾಪಾರವನ್ನೇ ಹಾಳು ಮಾಡಿದಂತಾಗುತ್ತದೆ ಹಾಗಾಗಿ, ಕೆಲಸಗಾರರು ಇದನ್ನು ಗಮನಿಸಿ ಬಹಳ ತಾಳ್ಮೆ ತೆಕ್ಕೊಳ್ಳಬೇಕು" ಹೀಗೆನ್ನುತ್ತಾರೆ ಪ್ರಧಾನಮಂತ್ರಿ ರಾಜಾಜಿಯವರು

◆

ಕಾಂಗ್ರೆಸು ಮಂತ್ರಿಮಂಡಳಗಳು ಮುಷ್ಕರಗಳ ವಿಷಯ ಕನ್ನು ಸಹಾನುಭೂತಿಯನ್ನು ತೋರಿಸುವುದಿಲ್ಲ ಮುಷ್ಕರಗಳಿಂದ ನಾಡಿನಲ್ಲಿ ಇನ್ನಷ್ಟು ಗೊಂದಲವುಂಟಾಗುವುದೆಂದು ಅವರು ತಿಳಿದಿರುವಂತಿದೆ

◆

ಇಂದಿನ ಸರಕಾರವು ಗೊಂದಲವು ಹುಟ್ಟಿದಂತೆ ಇಂತಹ ಸಂದರ್ಭ ಬಂದಾಗ ಪೋಲೀಸು ಸಹಾಯವನ್ನು ಉಪಯೋಗಿಸಿರುತ್ತದೆ ದೇಶದ ಶಾಂತಿರಕ್ಷಣೆಯನ್ನು ಸರ್ವಥಾ ಮಾಡುವುದು ಸರಕಾರದ ಕರ್ತವ್ಯವಾಗಿದೆ

◆

ಹಿಂದೀ ವಿರೋಧಿ ಚಳವಳಗಾರರನ್ನು ಮದ್ರಾಸು ಕಾಂಗ್ರೆಸು ಸರಕಾರವು ಸೆರೆಮನೆಂ ಕ್ಕಿ ಇರಿಸಬೇಕಾಯಿತು!

◆

ಮದ್ರಾಸಿನ ಪ್ರೆಸ್ ಕೆಲಸಗಾರರ ಗೊಂದಲವನ್ನೂ ಅದೇ ರೀತಿಯಿಂದ ತಣಿಸಲಾಗಿದೆ

◆

ಬೊಂಬಾಯಿಯಲ್ಲಿ ಕೆಲಸಗಾರರು ಮುಷ್ಕರ ಹೂಡಿದಾಗ ಹಲವು ಮಂದಿ ಕೆಲಸಗಾರರ ಜೀವಗಳೇ ಬಲಿಯಾಗಬೇಕಾಯಿತು

◆

ಮಂಗಳೂರಲ್ಲಿಯೂ ಕೆಲವು ಮಂದಿ ಕೆಲಸಗಾರರು ಜಿಲ್ಲೆಯ ಮೋಟರು ಸಂಚಾರವನ್ನು ನಿಲ್ಲಿಸುವ ರೀತಿಯಲ್ಲಿ ವಾಹನಗಳ ದಾರಿಗೆ ಅಡ್ಡನಿಂತು ಉಪದ್ರವಪಿತ್ತರು

◆

ಇಂತಹ ಅಕ್ರಮ ಮುಷ್ಕರಗಳನ್ನು ಕೈಕೊಳ್ಳಬೇಕಾದರೆ, ಕೆಲಸಗಾರರು ಖಂಡಿತವಾಗಿ ದುರ್ಬೋಧನೆಗೆ ಒಳಗಾಗಿರಬೇಕು

◆

ರಾಜಾಜಿಯವರ ಉಪದೇಶವನ್ನು ಅವರು ಚಿತ್ತವಿಟ್ಟು ಓದಿ ನೋಡಿದರೆ ಆಗದೇ?



ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St CALCUTTA

SWADESHABIMANI

Estd 1906.

The Best & the First Medium

For selling and introducing your goods in Karnatak there is no better medium than 'SWADESHABIMANI because it is the only favourite Journal of Karnatics. If your goods are to be sold thro mail orders in Karnatak there is no other way than to advertise in

"SWADESHABHIMANI"

For particulars please write to.

The Advt Manager,
"SWADESHABHIMANI"
MANGALORE.

ಶಕ್ತೈರ್ಮಹಾರ್ಘೈಸ್ತು ಕುರ್ಮಸ ದೇವಾ । ನ ಭೇಜಿರೇ ಭೀಮ ವಿಶೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುವ ಬರುತಿರುವ ॥ ಗರಲಕವರಂಜಿದರೆ! ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ । ತಿಳಿ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ತಾರೀಕು ೨೧—೭—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 21—7—1939

ಕಾಂಗ್ರೆಸಿನ ತತ್ವಗಳನ್ನು ಬುಡಸಹಿತ ಕಿತ್ತೊಗೆಯುವುದೇ?

ಅದು ಸಾಧ್ಯವಿಲ್ಲ!

★ ಬೋಸರಿಗೆ ಬುದ್ಧಿವಂತಿಕೆಯಿಲವೆನ್ನುತ್ತಾರೆ ನೆಹರುಗಳು!

★ ಬಜಾಜರನ್ನು ನಿರ್ಬಂಧದಲ್ಲಿರಿಸಿದ ಜಯಪುರದ ಕಾಠಿಣ್ಯ!

★ ಸಾಕ್ಷರತಾ ಯೋಜನೆಯನ್ನು ಭಾರತವು ಮಾಡಬಾರದೇ?

ವಿಚಾರವಿಲ್ಲದ ಕೆಲಸ!

ಅಖಿಲ ಭಾರತ ಕಾಂಗ್ರೆಸು ಕಮಿಟಿಯು ನಿರ್ಣಯಗಳನ್ನು ಕಾಂಗ್ರೆಸಿನ ಎಡಪಕ್ಷದವರು, ಕಳೆದ ಒಂಬತ್ತನೇ ತಾರೀಕಿನಂದು ನಿಷೇಧಿಸಿದರಷ್ಟೆ? ಆ ಕುರಿತು ಈಗ ಸಮತಾವಾದಿಯಾದ ಪಂಡಿತ ನೆಹರುಗಳೇ ಪತ್ರಿಕೆಯಲ್ಲಿ ಪತ್ರಿಕಾ ಪ್ರತಿನಿಧಿಯೊಡನೆ ಹೀಗೆಂದು ಹೇಳಿದರು —

ಎಡಪಕ್ಷದವರು ಸ್ವಯಂ ಕೃತವಾಗಿ ಜುಲೈ ಒಂಬತ್ತನೇ ತಾರೀಕಿನಂದು ಯಾವ ಕಾರ್ಯವನ್ನು ಕೈಕೊಂಡರೋ ಅದೆ ಅವರ ಉದ್ದೇಶವಾಗಿದ್ದರೆ, ಖಂಡಿತವಾಗಿಯೂ ಅದು ನ್ಯಾಯವಾಗಲಿಲ್ಲ. ನಿಜವಾಗಿಯೂ ಆ ದಿನದ ಕೆಲಸವು ವಿಚಾರವಿಲ್ಲದೆ ಮಾಡಿದ್ದಾಗಿರುತ್ತದೆ. ಮುಂದೆ ಬರಲಿರುವ ಸಂಭವಗಳನ್ನು ಆಲೋಚಿಸದೆ ಕೈಹಚ್ಚಿದ್ದಾಗಿರುತ್ತದೆ. ಅಂದಿನ ಕಾರ್ಯವು ಅನ್ಯೋನ್ಯ ಸಂಘರ್ಷವನ್ನು ಹುಟ್ಟಿಸಿ, ಕಲಹವನ್ನು ಹೆಚ್ಚಿಸುವುದಾಗಿದೆ. ಖಂಡಿತವಾಗಿಯೂ ಇಂತಹ ಕೆಲಸಗಳಿಂದ ಎಡಪಕ್ಷಗಳು ಒಂದಾಗಲಾರವು. ಅದಲ್ಲದೆ, ಇಂದಿನ ಕಾಂಗ್ರೆಸಿನ ಸಂಪೂರ್ಣ ನಿಯಮ ನೀತಿಗಳನ್ನೆಲ್ಲಾ ವಿರೋಧಿಸಿ ಇಡೀ ಕಾಂಗ್ರೆಸನ್ನೇ ಬುಡದಿಂದ ಕೊನೆಯವರೆಗೆ ವ್ಯತ್ಯಾಸಮಾಡಲು ಇವರು ನಿರ್ಣಯ ಮಾಡಿದ್ದರೆ ಆ ದಿನದ ಕಾರ್ಯವು ಸರಿಯೆನ್ನಬಹುದು. ಆದರೆ, ಅಂತಹ ಪರಿಣಾಮವು ಇಂದು ಆಗುವ ಸಂಭವವಿಲ್ಲ.

'ಎಡಪಕ್ಷಗಳ ಆ ಕಾರ್ಯವನ್ನು ಅದರ ತತ್ವಗಳಿಗೇ ಹೋಲಿಸಿ ನೋಡಿದರೂ, ಆ ದಿನದ ಕಾರ್ಯವು ಮಹಾ ಪ್ರಮಾದಕರವಾಗಿದೆ. ಇದರಿಂದ ಕಾಂಗ್ರೆಸಿನಲ್ಲಿರುವ ಅನೇಕ ಕಾರ್ಯಶಕ್ತಿಗಳನ್ನು ದುರ್ಬಲಗೊಳಿಸಿದಂತಾಗುವುದಲ್ಲದೆ, ಕಡೆಗೆ ಮಹಾ ಅನರ್ಥವೇ ಒದಗುವುದು. ನನ್ನ ಸಂದೇಹವೇನೆಂದರೆ, ಇಂದಿನ ಕಾಂಗ್ರೆಸು ಧುರೀಣತೆಯನ್ನು ಬದಲಾಯಿಸುವ ಸಮಯ ಬಂದಿದೆಯೋ ಎಂದು. ಇಂತಹ ಕೆಲಸಗಳಲ್ಲಿ ಎಷ್ಟರ ಮಟ್ಟಿನ ಬುದ್ಧಿವಂತಿಕೆಯುಂಟೆಂದು ನನಗೇ ತಿಳಿಯುವುದಿಲ್ಲ.'

ಜವಾಹಿರಲಾಲರಿಗೇ ಬೋಸರ ಈ ಕೆಲಸದಲ್ಲಿ ಬುದ್ಧಿವಂತಿಕೆಯಿದೆಯೋ ಎಂದು ಸಂಶಯವಾಗುತ್ತದೆ!

ಬಜಾಜರ ಮೇಲೆ ನಿರ್ಬಂಧ!

ಜಯಪುರದಲ್ಲಿ ಶೇಟ್ ಜಮ್ನಾಲಾಲ ಬಜಾಜರನ್ನು ಅಧಿಕಾರಿಗಳು ಇನ್ನೂ ಕೂಡಾ ಕಡೆ ಮನೆಯಲ್ಲಿ ಇಟ್ಟಿರುವ ವಿಚಾರವು ನಿಜವಾಗಿಯೂ ಜನತೆಯನ್ನು ಪರಿಕ್ಷೋಭೆಗೊಳಿಸುವಂತಹದಾಗಿದೆ! ಅವರ ಬಂಧನವಾಗಿ ಸುಮಾರು ಐದು ತಿಂಗಳುಗಳು ದಾಟಿದುವು. ಯಾವ ಸತ್ಯಾಗ್ರಹದ ಸಂಬಂಧವಾಗಿ ಬಜಾಜರನ್ನು ಸರಕಾರವು ಸೆರೆಯಲ್ಲಿರಿಸಿರುವುದೋ ಅದನ್ನು ಇಂದು ನಿಲ್ಲಿಸಲಾಗಿದೆ. ಗಾಂಧಿಜಿಯವರ ಸಂದೇಶದಂತೆ ಅಲ್ಲಿನ ಕಾಂಗ್ರೆಸು ಕಾರ್ಯಕರ್ತರು ತಮ್ಮ ಶಕ್ತಿಯನ್ನು ರಚನಾತ್ಮಕ ಕಾರ್ಯಕ್ಕಾಗಿ ಉಪಯೋಗಿಸುತ್ತಿದ್ದಾರೆ! ಸೆರೆಯಲ್ಲಿದ್ದ ಸತ್ಯಾಗ್ರಹಿಗಳೂ ಕೂಡಾ, ತಮ್ಮ ಬಂಧನದ ಅವಧಿ ಮುಗಿದ ಮೇಲೆ, ರಾಷ್ಟ್ರದ ಹಿತಕ್ಕೋಸ್ಕರ ಯಾವ ಕೆಲಸವು ಅಗತ್ಯವೋ ಅಂತಹ ಗಾಂಧಿಜಿಯವರ ನಿರೂಪಣೆಯಾದ ರಚನಾತ್ಮಕ ಕಾರ್ಯಗಳ ಕಡೆಗೇ ಗಮನವಿಡುವುದು ಸ್ವಭಾವವಿದೆ. ಹಾಗಾಗಿ ಶೇಟ್ ಜಮ್ನಾಲಾಲರನ್ನು ಬಿಡುಗಡೆ ಮಾಡುವುದರಿಂದ ಹಾಗೂ ಜೈಲಿನಲ್ಲಿರುವ ಇತರ ಸತ್ಯಾಗ್ರಹಿಗಳನ್ನು ಬಿಡುವುದರಿಂದ ಯಾವುದೇ ರೀತಿಯಿಂದ ಲಾದರೂ ಪುನಃ ಶಾಸನಭಂಗ ಚಳವಳವು ನಡೆದೀತೆಂದು ವಿಚಾರಿಸುವುದಕ್ಕೆ ಯಾವ ಆಸ್ಪದವೂ ಇರುವುದಿಲ್ಲ. ನಿರ್ಬಂಧವಿರುವ ಬಿಡುಗಡೆಗೆ ಬಜಾಜರಾಗಲಿ, ಅವರ ಅನುಯಾಯಿಗಳಾಗಲಿ ಒಪ್ಪಲಾರರೆಂಬುದು ಖಂಡಿತ. ಆದರೂ ಇಂದು ಜಯಪುರ ದರ್ಬಾರವು ಜಮ್ನಾಲಾಲರನ್ನು ಅವರು ಸಂಸ್ಥಾನದಿಂದ ಹೊರಗೆ ಹೋಗದ ವಿನಹ ಬಿಡುಗಡೆ ಮಾಡುವಂತಿಲ್ಲವೆಂದು ಕೋರುತ್ತದೆ! ಜಯಪುರದಲ್ಲಿ ಸಾಮಾಜಿಕ ಸುಧಾರಣಾ ಕಾರ್ಯಗಳಲ್ಲಿ ಅವರು ಕೈಹಾಕಲೂ, ಅವರನ್ನು ಜಯಪುರದ ದರ್ಬಾರವು ಸಮ್ಮತಿಸಲಾರದು.'

ಇಷ್ಟು ಮಾತ್ರವಲ್ಲದೆ ಬಜಾಜರು ಇಂದು ರೋಗಗ್ರಸ್ತರಾಗಿ ಸಂಕಟಪಡುತ್ತಿದ್ದಾರೆ. ಡಾಕ್ಟರರು ಅವರನ್ನು ವಿದೇಶಕ್ಕೆ ಹೋಗಿ ಅಲ್ಲಿ ಯೋಗ್ಯ ಚಿಕಿತ್ಸೆ ಮಾಡಿಸಬೇಕೆಂದು ಸೂಚಿಸಿದ್ದಾರೆ. ನಿಜವಾಗಿಯೂ ಜಯಪುರ ದರ್ಬಾರವು ಅವರ ಆರೋಗ್ಯವನ್ನು ಮಹತ್ವವಾದ ವಿಚಾರವಾಗಿ ತಿಳಿಯುವುದಾದರೆ, ಅವರನ್ನು ಯಾವ ನಿರ್ಬಂಧವೂ ಇಲ್ಲದೆ ಬಿಡುಗಡೆಮಾಡಬೇಕು, ಯಾತಕ್ಕೆಂದರೆ, ಸಂಸ್ಥಾನದ ಅಧಿಕಾರಿಗಳು, ತಾವು ಮಾಡುವ ಇಂತಹ ಅನ್ಯಾಯದ ಕಾರ್ಯದಲ್ಲಿ ತಮ್ಮ ಗೌರವಕ್ಕೆ ಹಾನಿಯುಂಟೆಂದು ತಿಳಿಯುವುದು. ನಿಯಮದಲ್ಲಿ ಒಂದು ಪಕ್ಷ ಬಜಾಜರು ಬಿಡುಗಡೆಯಾದ ಮೇಲೆ ಇಂದು ಶಾಸನಭಂಗ ಚಳವಳವನ್ನೇ ಹೂಡಿದರಾದರೆ, ಅವರನ್ನು ಪುನಃ ಬಂಧನದಲ್ಲಿಡುವುದು ಅಧಿಕಾರಿಗಳಿಗೆ ಸಂಪೂರ್ಣ ಸಾಧ್ಯವಿರುತ್ತದೆ. ನಿಜವಾಗಿಯೂ ಗಾಂಧಿಜಿಯವರು ಹೇಳಿದ ರೀತಿಯಲ್ಲಿ ದರ್ಬಾರವು ಇಂದು ನಿರ್ಬಂಧವಿಲ್ಲದ ಬಿಡುಗಡೆಯ ನ್ಯಾಯ ಬುದ್ಧಿಯನ್ನು ತೋರಿಸಿ, ಅಮಾನುಷ ಆಚರಣೆಯ ಅಪವಾದದ ಹೊರೆಯನ್ನು ತಪ್ಪಿಸಿಕೊಳ್ಳುವುದು ಕರ್ತವ್ಯವಾಗಿದೆ!

ಆರು ವರ್ಷಗಳಲ್ಲಿ ಸಂಪೂರ್ಣ ಸಾಕ್ಷರತೆ

ಬೀಹಾರಿನ ಸುಪ್ರಸಿದ್ಧ ಡಾ। ಸಯ್ಯದ್ ಮಹಮ್ಮದರವರು ರಾಷ್ಟ್ರದ ಸಾಕ್ಷರತಾ ಸಭೆಯೊಂದರಲ್ಲಿ ಮಾತನಾಡುತ್ತಾ ಹೀಗೆಂದು ಹೇಳಿದರು.

'ಟರ್ಕಿಯಲ್ಲಿ ಪ್ರಯೋಗಕ್ಕೆ ತಂದ ರೀತಿಯಲ್ಲಿ, ಹಿಂದೂದೇಶದಲ್ಲಿಯೂ ಕೂಡಾ ಆರು ವರ್ಷಗಳ ಸಾಕ್ಷರತಾ ಯೋಜನೆಯನ್ನು ಯಾಕೆ ಪ್ರಯೋಗಕ್ಕೆ ತರಬಾರದೆಂಬ ವಿಷಯವಾಗಿ ನನಗೇನೂ ಕಾರಣ ತೋರುವುದಿಲ್ಲ' ವೆಂದು ಬಹಳ ಆಗ್ರಹಪೂರ್ವಕವಾಗಿ ಹೇಳಿದರು. ಇದೇ ಪ್ರಾಂತದಲ್ಲಿ ಮುಖ್ಯವಾಗಿ ಸಂಕ್ರಾಂತಿ ಸ್ಥಳದಲ್ಲಿ ಸ್ಥಾಪಿತವಾದ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ಅವರು ಬಹಳವಾಗಿ ಅಭಿನಂದಿಸಿದರು.

ಡಾ। ಸಯ್ಯದರವರು ಕೇವಲ ಐದು ವರ್ಷಗಳಲ್ಲಿಯೇ ಸಂಪೂರ್ಣ ಸಾಕ್ಷರತಾ ಪ್ರಯೋಗವು ಸಫಲವಾಗಬಹುದು, ಅದು ಸಂಪೂರ್ಣ ಕಷ್ಟಸಾಧ್ಯವಾಗಿಯೂ ಜನತೆಗೆ ಉತ್ಸಾಹಕರವಾಗಿಯೂ ಇರಬೇಕೆಂದು ಅಭಿಪ್ರಾಯಪಟ್ಟರು. ಇಂತಹ ಕೆಲಸದಲ್ಲಿ ಹಳ್ಳಿಹಳ್ಳಿಗಳಲ್ಲಿರುವ ಪ್ರಾಥಮಿಕ ಶಾಲಾ ಉಪಾಧ್ಯಾಯರು ಬಹಳ ಹೆಚ್ಚಿನ ಕಾರ್ಯಭಾಗವನ್ನು ವಹಿಸಿಕೊಳ್ಳಬೇಕೆಂದೂ, ವಿದ್ಯಾರ್ಥಿಗಳೂ ತಮ್ಮ ಬಿಡುವಿನಲ್ಲಿ ಇಂತಹ ರಾಷ್ಟ್ರ ನಿರ್ಮಾಣದ ಕೆಲಸಕ್ಕಾಗಿ ಸಾಧ್ಯ ಸಾಹಸದಿಂದ ಯತ್ನಿಸುವುದು ಆವಶ್ಯವೆಂದೂ ಹೇಳಿದರು.

ರಾಜಕೀಯ ವಿಚಾರವಾಗಿ ಹೆಚ್ಚು ಹೆಚ್ಚು ಆಸಕ್ತಿಯುಳ್ಳವರು, ಮಾತ್ರವಲ್ಲದೆ, ರಾಷ್ಟ್ರಹಿತವನ್ನು ಮಾಡಲು ಮನಸ್ಸುಳ್ಳ ಸರ್ವಪ್ರಥಮವಾಗಿ ಕೈಕೊಳ್ಳತಕ್ಕ ಕೆಲಸವೆಂದರೆ ಇದೇ ಆಗಿದೆ. ಜನತೆಯನ್ನು ಸಂಪೂರ್ಣ ಸಾಕ್ಷರರನ್ನಾಗಿ ಮಾಡಿದ ವಿನಹ ರಾಷ್ಟ್ರದಲ್ಲಿ ಯಾವ ರೀತಿಯ ಪರಿಣಾಮವು ನೆಲೆ ನಿಲ್ಲಲು ಸಾಧ್ಯವಾಗಲಾರದು. ಡಾ. ಸಯ್ಯದರ ಉಪದೇಶವನ್ನು ಎಲ್ಲಾ ಪ್ರಾಂತದ ಪ್ರಾಥಮಿಕ ಶಾಲಾ ಉಪಾಧ್ಯಾಯರೂ ಮಾತ್ರವಲ್ಲದೆ ವಿದ್ಯಾರ್ಥಿಗಳೂ ಕೈಗೆತ್ತಿಕೊಳ್ಳಬೇಕಾಗಿದೆ.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ ಜಮ್ಮಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪುರ, ಮದ್ರಾಸು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಗಾಂಧಿಜಿಯವರ ಸಂದೇಶಗಳು!

ಅಹಿಂಸೆಯನ್ನು ಸಾಧಿಸದೆ ಲೋಕಶಾಂತಿಯು ಸಾಧ್ಯವಿಲ್ಲ

ನರೇಂದ್ರ ಮಂಡಲಗಳ ಕುರಿತು ಮಹಾತ್ಮರ ಹಿತವಾದ!

ಶಾಸನಭಂಗ ಚಳವಳದಲ್ಲಿ ವಿಶ್ವಾಸ ಕಡಿಮೆಯಾಗಿಲ್ಲ

ದೇವರಿಗೆ ಶರಣಾಗುವುದನ್ನು ಮರೆತದ್ದು ತಪ್ಪು!

ನರೇಂದ್ರರು ಪ್ರಜೆಗಳಿಗೆ ಅಧಿಕಾರವನ್ನು ಬಿಟ್ಟುಕೊಡಬೇಕು



ನರೇಂದ್ರ ಮಂಡಳಗಳ ಕುರಿತು ಮಹಾತ್ಮಾಜಿಯವರು ಪ್ರಕಟಿಸಿದ ಹೊಸ ಪ್ರಯೋಗದ ವಿಷಯವಾಗಿ, ಹಲವರು ಸಂಶಯಗ್ರಸ್ತರಾಗಿರುವ ನಿಮಿತ್ತ, ಗಾಂಧಿಜಿಯವರು 'ಹರಿಜನ'ದಲ್ಲಿ ಹೀಗೆಂದು ವಿವರಿಸುತ್ತಾರೆ

"ಇದುವರೆಗೆ ನನ್ನ ಅಭಿಪ್ರಾಯಗಳನ್ನು ತಿಳಿದುಕೊಳ್ಳುತ್ತಿದ್ದ ಕೆಲವರೇ, ನನ್ನ ಇತ್ತೀಚೆಯ ದೇಶೀಯ ಸಂಸ್ಥಾನಗಳ ಪ್ರಕಟಣೆಯ ನಿಜಾರ್ಥವನ್ನು ತಿಳಿದಿಲ್ಲವೆಂದು ಹೇಳುತ್ತಾರೆ ಮಹಾದೇವ ದೇಸಾಯಿ ಮತ್ತು ಪ್ಯಾರೇಲಾಲರು ಅದನ್ನು ಹರಿಜನದ ಮೂಲಕ ವಿವರಿಸುವ ಕೆಲಸಮಾಡಿದ್ದಾರೆ ಅಪಾರ್ಥವನ್ನು ಕಲ್ಪಿಸಿಕೊಂಡವರಿಗೆ, ಆ ಬರವಣಿಗೆಗಳು ಸಹಾಯಮಾಡಿರಬೇಕು ನನ್ನ ಇತ್ತೀಚೆಯ ಲೇಖನ ಮತ್ತು ಕಾರ್ಯಗಳ ಕುರಿತು ನಾನೇ ಅದನ್ನು ತಿಳಿಸುತ್ತೇನೆ:—

"ಶಾಸನಭಂಗ ಚಳವಳ, ವೈಯುಕ್ತಿಕ ಅಥವಾ ಸಾಂಘಿಕ ಚಳವಳ ಈ ಕುರಿತು ನನ್ನ ಅಭಿಪ್ರಾಯ ಬದಲಾಗಲಿಲ್ಲ ಕಾಂಗ್ರೆಸು, ನರೇಂದ್ರ ಮಂಡಳ ಮತ್ತು ಜನತೆಯ ವಿಷಯದಲ್ಲಿಯೂ ನನ್ನ ಅಭಿಪ್ರಾಯವು ಬದಲಾಗಲಿಲ್ಲ ಅನೇಕ ವರ್ಷಗಳಿಂದ, ಸಾರ್ವಭೌಮ ಸರಕಾರದ ಮತ್ತು ನರೇಂದ್ರ ಮಂಡಳಗಳ ಕರ್ತವ್ಯಗಳ ಕುರಿತೂ ನನ್ನ ಅಭಿಮತವು ಬೇರೆಯಾಗಲಿಲ್ಲ. ನನ್ನ ಅಭಿಪ್ರಾಯವಿದು: ನಾನು ದೇವರಲ್ಲಿ ಶರಣುಹೋಗುವುದನ್ನು ಬಿಟ್ಟು ವೈಸರಾಯರನ್ನು ನಂಬಿದ್ದು ತಪ್ಪಾಯಿತು, ದೇವರಲ್ಲಿ ನಾನು ಯಾವ ಕೆಲಸ ಕೈಗೂಡಿಸಬೇಕಿತ್ತೋ, ಅದನ್ನು ಠಾಕೂರ್ ಸಾಹೇಬರಲ್ಲಿ ಕೈಗೂಡಿಸಲು ಯತ್ನಿಸಿದ್ದು ಹಿಂಸೆಯಾಯಿತು

"ರಾಜಕೋಟೆಯ ಪ್ರಸಂಗವು ನಿಜವಾಗಿಯೂ ಗೆಲುವಿನ ಲಾಗಾಯ್ತು ನನ್ನ ಅಹಿಂಸಾ ಕಾರ್ಯದಲ್ಲಿ ಬಹಳ ವಿಶೇಷವಾದ ಕೆಲಸವಾಗಿದ್ದರೂ, ನಾನು ಅಹಿಂಸೆಯನ್ನು ಸಂಪೂರ್ಣವಾಗಿ ಕೊನೆಗಾಣಿಸಲು ಸಮರ್ಥನಾಗಿದ್ದರೆ, ಅದರ ಫಲವು ಮತ್ತಷ್ಟು ಉಜ್ವಲವಾಗುತ್ತಿತ್ತು ಅಹಿಂಸಾ ಮೂಲವಾಗಿ, ಮನೋವ್ಯಾಖ್ಯೆಯಗಳಿಂದ ಮಾಡಿದ ಕೆಲಸದಿಂದ ವಿರೋಧಿಗೆ, ಯಾವ ರೂಪದ ಹಿಂಸೆಯಾಗಲಿ ಆಗುವುದು ಸಾಧ್ಯವೇ ಇಲ್ಲ. ಆದರೆ ನನ್ನ ಕ್ರಿಯೆಯಿಂದ, ರಾಜರಲ್ಲಿ ಮತ್ತು ಅವರ ಬೋಧಕರಲ್ಲಿ ಒಂದು ರೀತಿಯ ಹಿಂಸೆಯು ಒದಗಿ ಬಂತೆಂದು ನಾನು ತಿಳಿದೆ. ಕಾಂಗ್ರೆಸನ್ನು ಅವಿಶ್ವಾಸದಿಂದ ನೋಡಲು ಆರಂಭಿಸಿದರು, ಕೆಲವು ಕಡೆಗಳಲ್ಲಿ ಕಾಂಗ್ರೆಸೆಂಬ ಹೆಸರೇ ಭಯಂಕರವಾಗಿ ಅವರಿಗೆ ಪರಿಣಮಿಸಿತು. ಇದು ನಿಜವಾಗಿಯೂ ಆಗಬಾರದಿತ್ತು.

"ನಾನು ಕಂಡ ಶೋಧನೆಯು ಪೂರ್ಣತೆಯು ಅದರಿಂದ ನನ್ನ ಮೇಲೆ ಆದ ಪರಿಣಾಮದಲ್ಲಿ ಹೊಂದಿಕೊಂಡಿದೆ. ನಾನು ಸತ್ಯಾಗ್ರಹ ಮಾಡುವವರ ಮೇಲೆ ಬಹಳ ತೀಕ್ಷ್ಣವಾದ ಕೇಳಿಕೆಗಳನ್ನು ಮುಂದರಿಸಿದ್ದೇನೆ ಇಂತಹ ತೀಕ್ಷ್ಣವಾದ ಕೇಳಿಕೆಗಳಿಂದ ಬಹಳ ಅಲ್ಪ ಮಂದಿ ಸತ್ಯಾಗ್ರಹಿಗಳೇ ಮುಂದೆ ಬಂದರೆ, ಅದಕ್ಕಾಗಿ ನಾನು ಬೇಸರಿಸುವುದಿಲ್ಲ ಸತ್ಯಾಗ್ರಹವು ನಿಜವಾಗಿಯೂ ವಿಶ್ವೋಪಕಾರಿಯಾದ, ವಿಶ್ವವ್ಯಾಪ್ತವಾದ ಒಂದು ಪ್ರಯೋಗವಾಗಿದ್ದರೆ ಕೇವಲ ಕೆಲವೇ ಮಂದಿಯಿಂದಲಾದರೂ ಅದು ಜಯಶೀಲವಾಗಲೇ ಬೇಕು. ಹೊಸ ಬೆಳಕನ್ನು ನಾನು ಮುಂದವಾಗಿ ಕಾಣುತ್ತೇನೆಂದು ಹೇಳುವಾಗ, ನಾನು ಕೆಲವೇ ಜನರು ಜಯಶೀಲವಾಗಿ ಹೇಗೆ ಕಾರ್ಯ ಸಾಧಿಸುವರೆಂಬ ನಿಶ್ಚಯವಾಗಿ ತಿಳಿದಿಲ್ಲವೆಂದೂ ಖಂಡಿತ ಅಭಿಪ್ರಾಯಪಡುತ್ತೇನೆ ನನ್ನ ಜೀವನದಲ್ಲಿ ಆಗಾಗ ಆದ ಘಟನೆಗಳಿಂದ ನಾನು ಆಲೋಚಿಸುವುದೇನೆಂದರೆ, ನನ್ನ ಮೊದಲನೆಯ ಹೆಜ್ಜೆಯು ಮುಗಿದ ಮೇಲೆ ಮಾತ್ರ ನಾನು ಎರಡನೆಯ ಹೆಜ್ಜೆಯ ಕುರಿತು ತಿಳಿಯಬಲ್ಲವನಾಗಿದ್ದೇನೆ.

"ಕಾರ್ಯ ಮಾಡಲು ಸಮಯ ಸಿದ್ಧವಾದಾಗ, ಅದಕ್ಕೆ ಬೇಕಾದ ಹಂಚಿಕೆಗಳೆಲ್ಲಾ ತನ್ನಷ್ಟಕ್ಕೆ ಒದಗುವವೆಂದು ನಾನು ನಂಬಿರುತ್ತೇನೆ ಆದರೆ ತಾಳ್ಮೆಗೆಟ್ಟ ವಿಮರ್ಶಕನು ಮಾತ್ರ ಕೆಲಸಕ್ಕೆ ಸದಾ ಸಮಯವು ಸಿದ್ಧವಾಗಿದೆಯೆಂದು ಹೇಳುತ್ತೇನೆ ಇಂದು ಸತ್ಯಾಗ್ರಹಕ್ಕೆ ಸಮಯವು ಸನ್ನಿಹಿತವಾಗಿಲ್ಲವೆಂದು ನಾನು ಖಂಡಿತ ನಂಬುತ್ತೇನೆ

"ಇದರ ಕಾರಣಗಳು ಬಹಳ ಸ್ಪಷ್ಟವಾಗಿವೆ ಕಾಂಗ್ರೆಸು ಇಂದು ಇಡೀ ರಾಷ್ಟ್ರದ ಸಮಸ್ತತೆಯಲ್ಲಿ ಸತ್ಯಾಗ್ರಹವನ್ನು ಹೂಡಲು ಸಿದ್ಧವಾಗಿಲ್ಲ ಇಂದು ಕಾಂಗ್ರೆಸಿನಲ್ಲಿ ವಂಚನೆಯುಂಟು, ಕಪಟವುಂಟು, ಕಾಂಗ್ರೆಸಿನಲ್ಲಿ ಶಿಸ್ತು ನಿಯಮಗಳಿಲ್ಲದ ಜನರೂ ಇದ್ದಾರೆ ಪ್ರತಿಸ್ಪರ್ಧಿಸಂಸ್ಥೆಗಳು ಬಂದು, ಬಹುಮತವನ್ನು ಪಡೆದು, ಕಾಂಗ್ರೆಸಿನ ಇಂದಿನ ಧ್ಯೇಯವನ್ನೇ ತಲೆಕೆಳಗೆ ಮಾಡಲು ಯತ್ನಿಸುತ್ತ ಇವೆ ಸತ್ಯಾಗ್ರಹವೆಂಬುದು ಹಿಂದೂದೇಶದ ನಾನಾ ಜಾತಿಗಳೊಳಗೆ ಅನ್ಯೋನ್ಯ ಸೌಹಾರ್ದವಿಲ್ಲದಿದ್ದರೆ ವಿನಹ ಪರಿಣಾಮಕಾರಿಯಾದ ಇಡೀ ರಾಷ್ಟ್ರಸಮಸ್ತತೆಯ ಸತ್ಯಾಗ್ರಹವು ಸಾಧ್ಯವಿರುವುದಿಲ್ಲ

"ಆ ಮೇಲೆ ಅಲ್ಲಿ ಪ್ರಾಂತೀಯ ವಿಷಯದಲ್ಲಿ ಕಾಂಗ್ರೆಸಿನವರು ಸಾಕಷ್ಟು ನ್ಯಾಯಪ್ರಕಾರ ನಡೆಯಲಿಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ ಕಾಂಗ್ರೆಸು ಮಂತ್ರಿಗಳು ಮಾಡುವ ಕೆಲಸದಲ್ಲಿ ಗವರ್ನರರು ಅಡ್ಡಬರದೆ, ಅವರು ತಮ್ಮ ಕರ್ತವ್ಯವನ್ನು ಚೆಂದಗಾಣಿಸಿದ್ದಾರೆ, ಆದರೆ ಹಲವೊಮ್ಮೆ ಕಾಂಗ್ರೆಸು ಸಂಸ್ಥೆಗಳೂ ಹಾಗೂ ಕಾಂಗ್ರೆಸಿನ ಜನರೇ ಅವರಿಗೆ ಉಪದ್ರವ ಮಾಡಿದ್ದಾರೆ. ನಿಜವಾಗಿಯೂ ಮಂತ್ರಿಗಳು ಜನಪ್ರಿಯರಲ್ಲವಾದರೆ ಅವರನ್ನು ತೆಗೆದುಹಾಕಬೇಕಿತ್ತು. ಹಾಗಲ್ಲದೆ ಕಾಂಗ್ರೆಸಿನ ಜನರೇ ಅವರನ್ನು ಎದುರಿಸುವುದರಿಂದ ಕೆಲಸಮಾಡುವುದು ಸಾಧ್ಯವಾಗಲಾರದು.

"ನಾನು ನಿವೇದಿಸಿದ, ಈ ಅಭಿಪ್ರಾಯಗಳನ್ನೆಲ್ಲ ಗಮನಿಸಿದಲ್ಲಿ, ಬೇಗನೇ ಶಾಸನಭಂಗ ಚಳವಳ ನಡೆಸುವುದು ಅಸಾಧ್ಯವೆಂದು ತಿಳಿಯುವುದು ಇದರಿಂದ ನಾನು ಹೆದರುತ್ತೇನೆಂದಾಗುತ್ತದೆಯೇ?

ಹಿಂದೂದೇಶವು ಇಂದು ಅಸಾಧ್ಯವಾದ ವಿಷಮ ಸಂದರ್ಭವನ್ನು ಎದುರಿಸಬೇಕಾಗಿದೆ. ವಿಷಮತೆಯನ್ನು ಎದುರಿಸಬೇಕಾದರೆ, ನಾವು ಹಿಂಸೆಯನ್ನು ಚೆನ್ನಾಗಿ ಅರಿತುಕೊಳ್ಳಬೇಕು ಅದಿಲ್ಲದಿದ್ದರೆ, ರಾಷ್ಟ್ರದಲ್ಲಿ ಬಹುಬೇಗನೇ ಗೊಂದಲ ಮತ್ತು ಹಿಂಸೆಗಳು ತುಂಬಿ ಹೋಗುವವು!"

ನರೇಂದ್ರರಿಗೆ ಮಹಾತ್ಮರ ಉಪದೇಶ

ನರೇಂದ್ರರು ಪ್ರಜೆಗಳ ಮೇಲೆ ತನ್ನ ವಿಶ್ವಾಸವು ಮುಂದೆಯೂ ಉಳಿಯಬೇಕೆಂದು ಮನಸ್ಸುಳ್ಳವರಾದರೆ, ಇಂದಿನ ಪರಿಸ್ಥಿತಿಯನ್ನು ಅರಿತುಕೊಂಡು ಅಹಿಂಸಾ ಮೂಲಕವಾಗಿ ತಮ್ಮಲ್ಲಿರುವ ಅಧಿಕಾರವನ್ನು ಪ್ರಜೆಗಳಿಗೆ ಬಿಟ್ಟುಕೊಡಬೇಕು ನರೇಂದ್ರರು ಕಾಂಗ್ರೆಸಿನ ಶಕ್ತಿಯನ್ನು ಅರಿತುಕೊಳ್ಳಬೇಕು ಪ್ರಜೆಗಳಿಗೆ ನಾಗರಿಕ ಸ್ವಾತಂತ್ರ್ಯವನ್ನು ಕೊಡಬೇಕು, ರಾಷ್ಟ್ರದ ಹಣವನ್ನು ನರೇಂದ್ರರು ವ್ಯಯಮಾಡುವಲ್ಲಿ ಒಂದು ಮಿತಿಯಿರಬೇಕು, ಸ್ವತಂತ್ರವಾದ ಮತ್ತು ಸ್ಥಿರವಾದ ನ್ಯಾಯಸ್ಥಾನವನ್ನು ಏರ್ಪಡಿಸಲು ಪ್ರಜೆಗಳಿಗೆ ಅಧಿಕಾರಗಳನ್ನು ಬಿಟ್ಟುಕೊಡಬೇಕು

ಗಾಂಧಿಜಿಯವರು ಹೀಗೆಂದು ತಮ್ಮ ಸೂಚನೆಗಳನ್ನು ನರೇಂದ್ರರಿಗೆ ಕೊಟ್ಟಿರುತ್ತಾರೆ

೧) "ಪ್ರತ್ಯಕ್ಷವಾಗಿಯಾಗಲಿ, ಅಪ್ರತ್ಯಕ್ಷವಾಗಿಯಾಗಲಿ ಹಿಂಸೆಯನ್ನು ಉದ್ರೇಕಗೊಳಿಸದ ವರೆಗೆ, ಸಂಪೂರ್ಣ ನಾಗರಿಕ ಸ್ವಾತಂತ್ರ್ಯವನ್ನು ಕೊಡಬೇಕು ಇದರಲ್ಲಿ ಮುದ್ರಣ ಸ್ವಾತಂತ್ರ್ಯ ಮೊದಲಾದವೂ ಅಡಕವಾಗುತ್ತವೆ

೨) ಸಂಸ್ಥೆಗಳನ್ನು ಸ್ಥಾಪಿಸಲಿಕ್ಕೂ, ಜವಾಬ್ದಾರೀ ಸರಕಾರವನ್ನು ಸ್ಥಾಪಿಸಲಿಕ್ಕೂ ಜನರನ್ನು ತಯಾರು ಮಾಡುವುದಕ್ಕೆ ಸ್ವಾತಂತ್ರ್ಯ ಕೊಡಬೇಕು.

೩) ಸಂಸ್ಥಾನದ ಶಾಂತಿಯನ್ನು ಹಾನಿಮಾಡದಂತೆ ಹೊರಗಿನ ಹಿಂದೀಯರಿಗೆ ಸಂಸ್ಥಾನಕ್ಕೆ ಬರಲು ಸ್ವಾತಂತ್ರ್ಯವಿರಬೇಕು

೪) ನರೇಂದ್ರರ ನಿಧಿಯು ಸಂಸ್ಥಾನದ ಆದಾಯದಲ್ಲಿ ಒಂದು ಮಿತಿಯಿಂದ ನಡೆಯಬೇಕು

೫) ನ್ಯಾಯ ಸಂಸ್ಥೆಯು ಸಂಪೂರ್ಣ ಸ್ವತಂತ್ರ ಮತ್ತು ಸ್ಥಿರವಾದದ್ದಾಗಿರಬೇಕು. ನಿಷ್ಪಕ್ಷಪಾತವಾಗಿಯೂ, ನ್ಯಾಯವಾಗಿಯೂ ವಿಚಾರಣೆಗಾಗಿ ಪ್ರಾಂತದ ಹೈಕೋರ್ಟಿಗೆ ಪುನರ್ವಿಚಾರಣೆಗೆ ಅಸ್ಪದವಿರಬೇಕು

ನಾನು ಬೇಕೆಂತಲೇ ರಾಜಕೀಯ ಸುಧಾರಣೆಯ ಪ್ರಶ್ನೆಯನ್ನು ಇದರಲ್ಲಿ ಬಿಟ್ಟಿದ್ದೇನೆ ಅದು ಮುಂದಿನ ಸಂದರ್ಭವನ್ನು ಹೊಂದಿಕೊಂಡಿದೆ ಸಾರ್ವಜನಿಕರ ಅಭಿಪ್ರಾಯವು ಯಾವಾಗ ಬಹುಮತ್ಯದಿಂದ ನ್ಯಾಯವನ್ನು ಕೇಳುತ್ತದೋ, ಆಗ ನರೇಂದ್ರರಾದರೂ ಅದಕ್ಕೆ ತಪ್ಪಲು ಸಾಧ್ಯವಿಲ್ಲ

ಹಾಗೂ ಒಂದು ವಿಷಯ ನನಗೆ ನಿರ್ಣಯವಾಗಿದೆ ಇಂದು ನರೇಂದ್ರರು ತಮ್ಮಲ್ಲಿರುವ ಅಧಿಕಾರಗಳನ್ನು ಪ್ರಜೆಗಳಿಗೆ ಬಿಟ್ಟುಕೊಡಬೇಕು ಇದರಿಂದ ಮಾತ್ರ ನರೇಂದ್ರರು ಇಂದಿನ ತಮ್ಮ ಸ್ಥಾನದಲ್ಲಿ ಇರಬಹುದಾಗಿದೆ ಹೀಗೆ ನರೇಂದ್ರರು ಸ್ವಂತ ಇಚ್ಛೆಯಿಂದಲೇ ಅಧಿಕಾರವನ್ನು ಪ್ರಜೆಗಳಿಗೆ ಬಿಟ್ಟುಕೊಟ್ಟರೆ ಅವರು ಪ್ರಜೆಗಳ ವಿಶ್ವಾಸವನ್ನು ಕಳೆದುಕೊಳ್ಳಲಾರರು

"ಇಂದು ಪ್ರಪಂಚವು ಆತ್ಮಘಾತುಕ ಕಾರ್ಯದ ಕಡೆಗೂ ಇಲ್ಲವೇ, ಆರ್ಥಿಕ ಸಾಮಾಜಿಕ, ರಾಜಕೀಯ ರೀತಿಯಿಂದ ಅಹಿಂಸಾತ್ಮಕವಾದ ಸಮಸ್ಯಾ ಪರಿಹಾರಕ್ಕೂ ಸಮೀಪಿಸಿದೆ ಯಾರೇ ಆಗಲಿ ಅಹಿಂಸೆಯಿಂದ ಇಂದಿನ ಸಮಸ್ಯೆಯು ಪರಿಹಾರವಾಗುವುದೆಂದು ತಿಳಿಯುವುದಾದರೆ, ಅವರು ತಮ್ಮ ಎಲ್ಲಾ ಕೆಲಸಗಳಲ್ಲಿಯೂ ಅಹಿಂಸೆಯ ತತ್ವವನ್ನು ಅನುಸರಿಸಿ ನಡೆಯಬೇಕು ಅಹಿಂಸೆ ಎಂಬುದು ವಿಶ್ವಮಾನ್ಯವಾದ ಶಕ್ತಿಯಾಗಿದೆ ಇದನ್ನು ಅಲ್ಲಗಳೆದರೆ ಖಂಡಿತವಾಗಿಯೂ ಲೋಕ ನಾಶವೇ ಆದೀತು

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್.
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಪೋಲೆಂಡಿನ ಉತ್ತರ

ಡಾಂಜಿಗ್ ಪ್ರಶ್ನೆಯೇ ಇನ್ನೂ ಯುರೋಪಿನ ಭವಿಷ್ಯವನ್ನು ನಿರ್ಧರಿಸುವ ಪ್ರಶ್ನೆಯೆಂದೇ ಕಾಣುತ್ತಿದೆ. ಅಲ್ಲಿನ ಸ್ವತಂತ್ರ ನಾಗರಿಕರು ತಾವು ಜರ್ಮನ್ ರೀಶ್‌ಗೆ ಸೇರುವೆವೆಂದು ಹೇಳುತ್ತಾರೆ. ಜರ್ಮನಿಯೂ ವಿಶಾಲ ಜರ್ಮನಿಯಾಗಲು ಡಾಂಜಿಗ್ ನ್ನು ಬೇಡುತ್ತಿದೆ. ಇದಕ್ಕಾಗಿ ಉಭಯತರಲ್ಲಿ ನಡೆದ ಒಳಸಂಚು ಈಗ ಹಣ್ಣಾಗುವ ಸ್ಥಿತಿಯಲ್ಲಿದೆ. ಜರ್ಮನಿಯ ಬಲದಿಂದ ಡಾಂಜಿಗ್ ನಗರವಾಸಿಗಳು ತಮ್ಮ ನಗರವನ್ನೂ, ನೌಕಾಶ್ರಯವನ್ನೂ ಶಸ್ತ್ರಾಸ್ತ್ರಗಳಿಂದ ತುಂಬಿಸಿಕೊಂಡಿದ್ದಾರೆ. ಡಾಂಜಿಗ್ ನಗರವು ಸ್ವತಂತ್ರವಾದರೂ ಅದು ವರ್ಸೆಲಿಸ್ ಒಪ್ಪಂದದ ಶರ್ತಗಳಂತೆ, ಅಂತರಾಷ್ಟ್ರೀಯ ಸಭೆಯ ಆಡಳಿತೆಯಲ್ಲಿರುವ ಪಟ್ಟಣ. ಡಾಂಜಿಗ್ ಪಟ್ಟಣಿಗರ ಈ ಶಸ್ತ್ರ ಸನ್ನಾಹವು ಅದರ ನಿರ್ಮಾಣಕ್ಕೆ ಕಾರಣವಾದ ಶರ್ತಗಳನ್ನು ಒಳಕೊಂಡಿಲ್ಲ. ಆದರೂ ನಾಜಿಗಳ ಧೋರಣೆಯಲ್ಲಿ ಅವರು ಒಪ್ಪಿದ ಸಂಧಾನಗಳಿಗೇ ಬೆಲೆಯಿಲ್ಲದಿರಲು, ಪರರಾಷ್ಟ್ರಗಳು ಹೇರಿಸಿದ ಸಂಧಾನಕ್ಕೆ ಮನ್ನಣೆಯೆಲ್ಲಿಂದ ಬಂದೀತು

ಕಳೆದ ಪಕ್ಷವೆಲ್ಲರ ಆತುರವು ಡಾಂಜಿಗನಲ್ಲಿ ಯುದ್ಧ ವಿಪ್ಲವಕ್ಕೆ ಅವಕಾಶವಾಗುತ್ತಿದೆ ಎಂದು ಬೆದರಿಕೆಯಿತ್ತು. ಇನ್ನಾದರೂ ಆ ಬೆದರಿಕೆ ದೂರವಾಗಿಲ್ಲ. ಹಿಟ್ಲರನು ಡಾಂಜಿಗನ್ನು ತನ್ನ ಅಧೀನ ಸೇರಿಸುವನನೇ. ಇತ್ತ ಆ ನಗರದ ಯುದ್ಧದ ತಯಾರಿಯಾದರೂ ಬೆಳೆಯುತ್ತಿದೆ. ಆದ ಆ ಸ್ಫೋಟನದ ದಿನ ಮಾತ್ರ ತುಸು ದೂರವಾದಂತೆ ಕಾಣುವುದು. ಮುಖ್ಯ ಕಾರಣವೇದರೆ—ಮೊದಲಿಗೆ ಫ್ರಾನ್ಸು ಅನಂತರ ಬ್ರಿಟನ—ಡಾಂಜಿಗ ಪ್ರಶ್ನೆಯಲ್ಲಿ ಪೋಲೆಂಡಿಗೆ ಘಾತವಾಗುವುದಾದರೆ, ತಾವು ಪೋಲೆಂಡಿನ ಬೆಂಬಲಕ್ಕೆ ಬಂದೇವು—ಎಂಬ ಸ್ಪಷ್ಟ ನುಡಿಯೇ ಸರಿ. ಬ್ರಿಟನಿನ ವಿದೇಶೀ ಸಂಬಂಧದ ಮಂತ್ರಿಗಳಾದ ಹೆಲಿಫಾಕ್ಸರು ಅಪೂರ್ವ ಸ್ಪಷ್ಟತೆ, ಸಿಥಿರತೆಯಿಂದ ಬ್ರಿಟನಿನ ಮುಂದಿನ ಧೋರಣೆಯನ್ನು ತಿಳಿಸಿದರು. ಆದರೆ ಅನಂತರವಾದ ಚೆಂಬರ್ಲೇನರ ಭಾಷಣದಲ್ಲಿ—ಎಚ್ಚರವಾದ ಖಂಡಿತ ಧೋರಣೆಯಿತ್ತು. ಈ ಭಾಷಣವು ಚೆಂಬರ್ಲೇನರ ನಿತ್ಯ ಚಂಚಲ ಬುದ್ಧಿಯನ್ನು, ಅನಿರ್ಧಾರವನ್ನು ತುಸುಮಟ್ಟಿಗಾದರೂ ಬಯಲಿಗೆಡಹುತ್ತದೆ. ಡಾಂಜಿಗ ವಿಷಯ ಜುಲುಂ ವರ್ತನೆ ತೋರಿಸಿದಲ್ಲಿ ತಾವು ಜರ್ಮನಿಯ ಇದಿರು ನಿಲ್ಲುವೆವು—ಎಂದು ಮಾತು ಸ್ಪಷ್ಟವಾಯಿತು. ಆದರೆ 'ನ್ಯಾಯವಾದ, ಶಾಂತತೆಗಳಿಂದ ತೀರಿಸಲು ಬರುವ ವ್ಯತ್ಯಾಸಗಳನ್ನು ಹಾಗೇನೆ ತೀರಿಸಬೇಕು' ಎಂದು ಅವರು ಹೇಳುವ ನುಡಿಗಳನ್ನು ಕಂಡರೆ, ಮ್ಯೂನಿಚ್ ನಂಥ ಇನ್ನೊಂದು ಪಂಚಾಯತಿಗೆ ಅವರು ಇನ್ನು ಸಿದ್ಧರಾದಂತೆ ಕಾಣುವುದು. ಈ ವಿಷಯದಲ್ಲಿ ಜರ್ಮನಿಯೇ ತುಸು ನಗುವಂತೆ ಆಗಿದೆ. ಫ್ರಾನ್ಸಿನ ವಿಮರ್ಶಕರು ಚೆಂಬರ್ಲೇನರ ಈ ರೀತಿಯ ಚಂಚಲ ನುಡಿಗಳನ್ನು ಖಂಡಿಸಬೇಕಾಗಿ ಬಂದಿತು. ಚೆಂಬರ್ಲೇನರು ಆಪತ್ತಿನ ಸಮಯದಲ್ಲಿ ನಂಬಲು ಯೋಗ್ಯರಾದ ನಾಯಕರೆಂದು ತಿಳಿಯುವುದು ತೀರ ತಪ್ಪು. ಹಿಂದಿನ ಅವರೆಲ್ಲ ಧೋರಣೆಯು ಈ ಅಪನಂಬುಗೆಗಳನ್ನು ಸ್ಪಷ್ಟಪಡಿಸುವುದು.

ಬ್ರಿಟನಿನಿಂದ ಪೋಲೆಂಡಿಗೆ ಸಾಲ

ಈಗಾಗಲೇ ಬ್ರಿಟನು, ಪೋಲೆಂಡಿನ ಶಸ್ತ್ರಸಿದ್ಧತೆಯ ಬಗ್ಗೆ ೨೦,೦೦೦,೦೦೦ ಪವನುಗಳನ್ನು ಸಾಲವಾಗಿ ಕೊಡುವ ತಯಾರಿಯಲ್ಲಿದೆ. ಇದರ ಎಲ್ಲ ಅವಶ್ಯಕತೆಯನ್ನು ಎಲ್ಲರೂ ಬಲ್ಲರು. ಆದರೆ ನ್ಯೂಜಿಲೆಂಡ್ ನಂಥ ವಸಾಹತುಗಳು ಬ್ರಿಟನಿಗೆ ಸಾಲಕ್ಕಾಗಿ ಬಂದಾಗ, ಬ್ರಿಟನು ಸಾಲಕೊಡಲು ಹಿಂಜರಿಯುವುದನ್ನು ಕಂಡು, ಅಲ್ಲಿನ ವಿಮರ್ಶಕಾರರು 'ಮನೆಯ ಮಗುವಿಗೆ ಮಣ್ಣು, ಹೊರರ ಮಗುವಿಗೆ ಬೆಣ್ಣೆ' ಎಂದು ಬ್ರಿಟನಿನ ಧೋರಣೆಯನ್ನು ಖಂಡಿಸುವಂತೆಯೂ ಆಗಿದೆ

ಅಂಗ್ಯನೋಟ

ಡೆನ್ ಮಾರ್ಕಿನ ವಾಣಿಜ್ಯ ಪರಿಷತ್ತು

ಕಳೆದ ಜೂನು ತಿಂಗಳ ತಾರೀಖು ೨೦ರಲ್ಲಿ ಕಾಪನ್ ಹೇಗನ್ ನಗರದಲ್ಲಿ ಅಂತರಾಷ್ಟ್ರೀಯ ವ್ಯಾಪಾರಿ ಮಂಡಲಗಳ ಪರಿಷತ್ತು ನಡೆಯಿತು. ಅಲ್ಲಿಯೂ ಪ್ರಪಂಚದ ಇಂಧನ ವಿಪ್ಲವ, ಸಮಸ್ಯೆಗಳನ್ನು ಚರ್ಚಿಸಿದರು. ಆದರೆ ಅವರು ವಿಷಯವನ್ನು ನೋಡಿ ಬಗೆ ಬೇರೆ, ದೇಶವಿದೇಶಗಳ ರಾಜಕೀಯ ಮುಖಂಡರು ನೋಡುತ್ತಿರುವ ರೀತಿ ಬೇರೆ ಆಗಿದೆ. ಕಾರಣ—ಕಾಪನ್ ಹೇಗನಿನಲ್ಲಿ ಪ್ರಶ್ನೆಯನ್ನು ಸೇರಿದವರು ಅರ್ಥಶಾಸ್ತ್ರವನ್ನರಿತವರು ವಾಣಿಜ್ಯವನ್ನು ಬಲ್ಲವರು. ವಾಣಿಜ್ಯ ಬೆಳೆಯಲು ದೇಶದೊಳಗಿನ ನಿರ್ಬಂಧದ ಗೋಡೆಯನ್ನು ಕಿತ್ತುಹಾಕಬೇಕೆನ್ನುವವರು. ರಾಷ್ಟ್ರೀಯತೆಯ ಇಂದಿನ ಕೂಗು-ಮೂಲದಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿದೆ. ವ್ಯಾಪರಕ್ಕಾಗಿ, ವ್ಯಾಪಾರಿ ಲಾಭಕ್ಕಾಗಿ ಕೂಗಾಡವ ದೇಶಗಳ ಕೂಗು ಇದು. ಜರ್ಮನಿಯ ಯುದ್ಧಾತುರವಾಗಲಿ, ಇಟಲಿಯ ಬಾಯಾರಿಕೆಯಾಗಲಿ, ಜಪಾನಿನ ಹಸಿವಾಗಲಿ—ಹಣದ ಹಸಿವು ಬಾಯಾರಿಕೆಗಳು. ಈ ಹಸಿವೆ ಅಸೂಯೆ, ಲೋಭಗಳಿಂದಲೇ ಈಗಿನ ರಾಜಕೀಯ ಕಲಹಗಳು ಉಂಟಾಗುವುವು. ಅವನ್ನು ಸಾಧಿಸಲು ಸರಕಾರಗಳು ಶಕ್ತಿಗವಟ್ಟಿ ಶಸ್ತ್ರಸನ್ನಾಹದ ಪಕ್ಷಕ್ಕೆ ಇಳಿದಿರುವುದು

ಈ ಪರಿಷತ್ತಿನಲ್ಲಿ ಪ್ರಕಟಿಸಿದ ಕೆಲವೊಂದು ಅಂಕೆಸಂಖ್ಯೆಗಳು ವಿಸ್ಮಯವನ್ನು ಹುಟ್ಟಿಸುತ್ತಿವೆ

ಆಯಾಯ ದೇಶದ ಸರಕಾರಗಳ ಆಯದಲ್ಲಿ ಯುದ್ಧ ಸನ್ನಾಹವೇ ತಿನ್ನುತ್ತಿರುವ ಅಂಶವು ಹೀಗಿದೆ. ಅದನ್ನು ಮಹಾಯುದ್ಧ ಪೂರ್ವಕ್ಕೆ ಹೋಲಿಸಿ ಇಲ್ಲಿ ತೋರಿಸಿದೆ

	1913	1928	1939
ಜರ್ಮನಿ	55%	41%	(ಅಂದಾಜು 60%ಕ್ಕೆ ಕಡಿಮೆಯಿಲ್ಲದಂತೆ
ಇಟಲಿ	27 2	28	45 48
ಜಪಾನು	36 5	27	72 5
ಫ್ರಾನ್ಸು	40 4	25	.0
ಇಂಗ್ಲೆಂಡು	39	14	47

ಪಕ್ಷದ ವಿಶೇಷ ಲೇಖಕರು:
ಶ್ರೀ। ಶಿವರಾಮ ಕಾರಂತರು

ಯುದ್ಧ ಭೀತಿಯಿಂದ ಕಾದಲ್ಪಡುತ್ತಿರುವ ದೇಶಗಳು ತಮ್ಮ ಆಯದ 40–70%ರಷ್ಟು ಹಣವನ್ನು ಕೇವಲ ಸಾವಿನ ತಯಾರಿಗೇನೆ ಮಾಡುವುದನ್ನು ಕಂಡರೆ ನಮಗೆ ಅದರ ಮಹತ್ವ ತಿಳಿಯುವುದು

ಇಂಥ ಹಾನಿಯ ನಿವಾರಣೆಯು ಯುದ್ಧವಾದರೂ ತೀರ್ಮಾನವಾಗದು. ಒಂದು ಯುದ್ಧ ಮುಂದಿನ ಮತ್ತೊಂದರ ಕಾರಣವು. ಅಲ್ಲಲ್ಲಿ ಮಾಡುತ್ತಿರುವ ರಾಜಕೀಯ ಸಂಧಾನಗಳು ಸಹ—ಆಪತ್ತನ್ನು ಮುಂದೆ ತಳ್ಳುವ ಉಪಾಯಗಳು. ಆಪತ್ತು ಮುಂದೆ ಹೋದಂತೆ ಅಂದುಕೊಳ್ಳುವ ಬಲಿ ಅಧಿಕವಾಗುವುದೆಂಬುದನ್ನು ಮನಗಾಣ ಬೇಡವೇ

ಆದುದರಿಂದಲೇ ಮೇಲೆ ಹೇಳಿದ ವಾಣಿಜ್ಯ ಮಂಡಲಗಳ ಪರಿಷತ್ತಿನವರು, ಯುರೋಪಿನ ಗೊಂದಲವು ನಿವಾರಣೆಗೊಳಬೇಕಾದರೆ ದೇಶ ವಿದೇಶಗಳೊಳಗಿನ ಆರ್ಥಿಕ ಸಂಬಂಧವು—ಸುಗಮವಾಗಬೇಕೆಂದು ಹೇಳುತ್ತಿದ್ದಾರೆ. ತನ್ನ ದೇಶವು ಯಾವುದನ್ನು ಅಗ್ಗವಾಗಿ ಮಾಡಲು ಯೋಗ್ಯವೋ ಅದನ್ನೆ ಮಾಡಬೇಕು—ಸುಂಕದ ಕೃತಕ ಪೇರಿಗೆ ಇರಕೂಡದು, ವ್ಯಾಪಾರೀ ಆವರಣವನ್ನು ಸಮಾನಾಗಿ ಹರಡಿಕೊಳ್ಳುವುದು ಇವೇ ಮೊದಲಾದ ಪ್ರಶ್ನೆಗಳನ್ನು ಬಹಿರಂಗವಾಗಿ ತರ್ಕಿಸಿ ಸಮಸ್ಯೆಯನ್ನು ಬಿಡಿಸಬೇಕು ಎಂದರು

ಈ ಮಾತನ್ನು ಒಪ್ಪಿದರೂ ಬೇರೊಂದು ಪ್ರಶ್ನೆ ಉಳಿಯುವುದು. ರಾಷ್ಟ್ರಗಳ ಸರಕಾರಗಳ ಅಧೀನವಾಗಿ ಮುಖ್ಯ ಉದ್ಯೋಗಗಳು ಇಲ್ಲದಿರುವಷ್ಟು ದಿನ, ಖಾಸಗಿ ಉದ್ಯೋಗಗಳ ವರ್ಚಸ್ಸೇ ಬಲವಾಗಿರುವಷ್ಟು ದಿನ—ಈ ಆರ್ಥಿಕ ಸಂಧಾನವನ್ನು ಮಾಡುವವರಾರ? ಮಾಡಿದರೂ ಒಪ್ಪುವವರಾರು

ಬೊಹೇಮಿಯದ ಸುಳಿಗೆ

ಬೊಹೇಮಿಯದಲ್ಲಿ ಮೊನ್ನೆಯ ತನಕ ಪ್ರಾಂತಿಕ ಸ್ವಾತಂತ್ರ್ಯವಿತ್ತು. ಪೋಲಕ್ಕೆ ರಕ್ಷಕನಾಗಿ ಹಿಟ್ಲರನ ಪ್ರತಿನಿಧಿಯಾದ ಬ್ಯಾರನ್ ಫಾನ್ ನ್ಯೂರತ್ ಇದ್ದಾನೆ. ಆದರೆ ಈಗ ಕಾಯಿದೆಗಳನ್ನು ಬದಲಾಯಿಸುವ ಅಧಿಕಾರವು ಜನರಿಂದ ಕಿತ್ತು ಈ ರಕ್ಷಕನ ಕರಕ್ಕೆ ಕೊಟ್ಟಿದ್ದಾರೆ. ಅವನು ಮುಂದಕ್ಕೆ, ಹಿಂದೆ ಸುಡೆಟನ್ ಗದ್ದಲಕ್ಕೆ ಕಾರಣರಾದ ನಾಜಿಮುಖಂಡರು, ಚೆಕ್ ಜನರ ಮೇಲೆ ತಮಗೆ ಇರುವ ಸೇಡನ್ನು ತೀರಿಸಲು ಕುಳಿತಿದ್ದಾರೆ. ಅವರ ಧೋರಣೆಯೇ ನ್ಯೂರತ್ ನ ಧೋರಣೆ

ಈ ಹೊಸ ಧೋರಣೆಯಿಂದ ಬೊಹೇಮಿಯದ ಯೆಹೂದಿಯರು ತಮ್ಮ ಸೊತ್ತನ್ನು ಕಳೆದುಕೊಳ್ಳುವರು. ಅದು ಎಲ್ಲಿಗೆ ಹೋಗುವುದು! ಸ್ವಾಭಾವಿಕವಾಗಿ—ಯುದ್ಧ ಸಿದ್ಧತೆಗಾಗಿ ಧನಾಭಾವದಿಂದ ನರಳುತ್ತಿರುವ ಹಿಟ್ಲರನ ಕರಕ್ಕೆ ಈ ಹೊಸ ಕಾಯಿದೆಯಿಂದಾಗಿ ಅವನ ಕೈಸೇರಬಹುದಾದ ಸಂಪತ್ತು ೫೦,೦೦೦,೦೦೦–೧೦೦,೦೦೦,೦೦೦ ಪವನುಗಳ ತನಕ ಆಗಬಹುದೆಂದು ಅಂದಾಜುಮಾಡಿದ್ದಾರೆ. ಹಿಟ್ಲರನ ಆರ್ಯಧರ್ಮ ರಕ್ಷಣೆಗೆ ಅಷ್ಟು ಬೆಲೆಯ ಮದ್ದು ಗುಂಡುಗಳೂ ದೊರೆತಂತಾಯಿತು

ಪೂರ್ವದ ಪ್ರಶ್ನೆ

ಟ್ಯೆನ್‌ಸ್ಟಿನ್ ಪ್ರಕರಣವು ತುಸು ಶಾಂತವಾಗಿದೆ. ಜಪಾನಿನ ಪ್ರವೃತ್ತಿಗೆ ಮುಗಿದಿಲ್ಲ. ಬ್ರಿಟಿಷ್ ದ್ವೇಷ—ಅವರ ಮೇಲಿನ ಚಳವಳಿ ಕಡಿಮೆಯಾಗಿಲ್ಲ. ಆದರೆ ಬ್ರಿಟಿಷರನ್ನು ಈ ಪ್ರಾಂತದ ಒಳಗೆ ಹೋಗಿ ಬರುವಾಗ ನಡೆಯುತ್ತಿದ್ದ ಅಪಮಾನ ನಿಂತಿದೆ. ಇತ್ತ ಟೋಕಿಯೋದಲ್ಲಿ ಈ ವಿಷಯವಾಗಿ ಬ್ರಿಟಿಷ ರಾಯಭಾರಿಗೂ, ಟೋಕಿಯೋ ಮಂತ್ರಿಗಳಿಗೂ ಪ್ರಸ್ತಾವ ನಡೆದಿದೆ. ಆದರೆ ಬುಡದಲ್ಲೆ ತೊಡಕು. ಮಾತು ಟ್ಯೆನಿಸ್ಟಿನಿಗೆ ಸಂಬಂಧಿಸಿದ್ದಾಗಿರಬೇಕೆಂದು ಬ್ರಿಟನ್ನು, ಅದು ಜಪಾನಿನೊಡನೆ ಬ್ರಿಟನು ಸಹಕರಿಸುವ ವಿಚಾರದ್ದಾಗಿರಬೇಕೆಂಬುದು—ಜಪಾನಿನ ಸೂಚನೆ. ಇವೆರಡು ತಾಳತಂತಿ ಕೂಡದು. ಹೀಗಾಗಿ ಮುಂದಿನ ವಾರದ ತನಕ—ಪೂರ್ವ ಪ್ರಸ್ತಾವಗಳೇ ನಡೆಯದೆ ಹೋಗಿವೆ

ಇತ್ತ ಒಂದೊರಡಾಗಿ ಕರಾವಳಿಯ ರೇವುಗಳನ್ನು ಜಪಾನು ಸ್ವಾಧೀನ ಪಡಿಸಿಕೊಳ್ಳಲು ಹೊರಟಿದೆ. ಅತ್ತ ಯನಾನ ಪ್ರಾಂತಕ್ಕೆ ಸಹಾಯವನ್ನು ಚೀನ ಮುಖಂಡನಿಂದ ತಪ್ಪಿಸಬೇಕೆಂಬ ಹಂಚಿಕೆ ನಡೆದಿದೆ. ಇದರಿಂದಲೇ ಎಸೆಂಬ್ಲಿ ಇಂಡಿಯಾ ಸರಕಾರವು—ಇಂಡಿಯವನ್ನು ಆಸ್ಸಾಮಿನ ದಾರಿಯಾಗಿ ಬರ್ಮಕ್ಕೆ ಕೂಡಿಸುವ ನೆಲಮಾರ್ಗವು ಅವಶ್ಯವೆಂದು ಆಸ್ಸಾಮಿಗೆ ಸೂಚಿಸಿದೆ

ಇತ್ತ ಜಪಾನು ಸೋವಿಯಟ್ ಸರಕಾರವನ್ನು ಕೆಣಕುವುದೂ ದಿನೇ ದಿನೇ ಹೆಚ್ಚಾಗುತ್ತಿದೆ. ಚಿಕ್ಕ ಒಂದು ಯುದ್ಧ ಅವರೊಳಗೆ ನಡೆದಿದೆ. ಪ್ರಾಯಶಃ ಯುರೋಪಿನ ಕಲಹವು ನಿಶ್ಚಯವೆಂದೂ, ಅದರಿಂದ ಬ್ರಿಟನ್ ಫ್ರಾನ್ಸು ಏನೂ ಮಾಡಲಾರವೆಂದೂ ಜಪಾನು ಸಮಯ ಕಾಯುತ್ತಿರಬೇಕು.

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು. ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ

ಸ್ತ್ರೀಯರಿಗೆ ಋತುಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟಾಕಿಸ್ಟರು: ಪೊಪ್ಯುಲರ್ ಸ್ಟೋರ್ಸ್ ರಥಬೀದಿ, ಮಂಗಳೂರು.

NOTICE

Sealed tenders for the purchase of forest tree growth standing in Kattingeri Basel Mission Compond Shirva village, Udipi Taluk, will be received by the undersigned in his office till the 7th August 1939. Tenders received after that date will not be considered. For particulars of tree-growth please see the locality.

Office of the United Basel Mission Church in India Trust Association.

Mangalore 18—7—'39 — Ch. Jathanna, Attorney for South Kanara Dt.

ಈ ವಾರದಲ್ಲಿ ಮದ್ರಾಸಿನ ಮಂತ್ರಿಗಳು ಏನು ಹೇಳುತ್ತಾರೆ ಬಲ್ಲಿರಾ?

ಮುಷ್ಕರಹೂಡಿ, ರಾಷ್ಟ್ರದ ಉದ್ಯೋಗವನ್ನು ಕೆಡಿಸಬೇಡಿ-ಮಾನ್ಯ ರಾಜಾಜಿ
ಹಿಂದೂಧರ್ಮವು ಪಾವನವಾಯಿತು—ಮಾನ್ಯ ಮುನಿಸ್ವಾಮಿ ಪಿಳ್ಳೆ
ಅಹಿಂಸೆಯಿಂದ ನಾವು ಜಯಹೊಂದುವೆವು—ಮಾನ್ಯ ಸುಬ್ಬರಾಯನ್.
ಫೆಡರೇಶನನ್ನು ಎದುರಿಸಲು ತಯಾರಾಗಿ—ಮಾನ್ಯ ಪ್ರಕಾಶಂ
ಮಾಡಿ ನೋಡುವ ವಿದ್ಯೆ ಬೇಕು—ಮಾನ್ಯ ವಾರ್ಕಿ

ಮಾನ್ಯ ಗೋಪಾಲರೆಡ್ಡಿ
(ಹಿಂದೂ-ಮುಸ್ಲಿಂ ಜಗಳದ ಕುರಿತು)

"ಮುಸ್ಲಿಂ ಕಾಂಗ್ರೆಸ್ ಮಂತ್ರಿಮಂಡಳವನ್ನು ನಿಷ್ಕಾರಣವಾಗಿ ದೂರಬಾರದು. ಅವರು ನಮ್ಮ ನ್ಯಾಯವಾದ ಕೋರಿಕೆಯನ್ನು ಅಗತ್ಯವಾಗಿ ಮುಂದಿಡಬೇಕು. ಆದರೆ ಜಾತಿ, ಮತಧರ್ಮಗಳ ವಿಷಯಗಳನ್ನು ಮುಂದಿಟ್ಟು ಅವರು ಕಲಹಮಾಡಬಾರದು. ಕಾಂಗ್ರೆಸು ಮಂತ್ರಿಮಂಡಳವು ಮುಸ್ಲಿಮರ ವಿಷಯದಲ್ಲಿ ಬಹಳ ಸಹಾಯ ತೋರಿಸಿದೆ. ಇನ್ನು ಅಲ್ಪ ಸಮಯದಲ್ಲಿಯೇ ಹಿಂದೂ ಮುಸ್ಲಿಮರಿಗೆ ಐಕ್ಯವಾಗುವ ಕೆಲಸವನ್ನು ಮಾಡಲು ಕಾಂಗ್ರೆಸು ಯತ್ನಿಸಲಿದೆ. ಸ್ವರಾಜ್ಯಕ್ಕಾಗಿ ಭಾರತವು ಹೋರಾಡುವಲ್ಲಿ ಈ ಹಿಂದೂ ಮುಸ್ಲಿಂ ಐಕ್ಯವೇ ಅರ್ಧ ತೊಂದರೆಯನ್ನು ಇಲ್ಲದೆ ಮಾಡುವುದು" ಹೀಗೆಂದು ಕರ್ನೂಲು ಪೀಪಲ್ಸ್ ಪಾರ್ಕಿನಲ್ಲಿ ಭಾಷಣ ಮಾಡುವಾಗ ಹೇಳಿದರು.

ಮಾನ್ಯ ಡಾ. ಸುಬ್ಬರಾಯನ್
(ಅಹಿಂಸೆಯ ಕುರಿತು)

'ಅಹಿಂಸೆ ಎಂಬುದು, ಬುದ್ಧ, ಕ್ರಿಸ್ತ ಮೊದಲಾದ ಹಲವು ಮಂದಿ ಮಹಾತ್ಮರಿಂದ ಬೋಧಿಸಲ್ಪಟ್ಟಿದೆ, ಯುರೋಪಿನಲ್ಲಿ ಮಹಾತ್ಮಾಕ್ರಿಸ್ತನ ಅನುಯಾಯಿಗಳೇ, ಆತನ ಉಪದೇಶಕ್ಕೆ

ವಿರುದ್ಧವಾಗಿ ಕಾರ್ಯಮಾಡುತ್ತಿದ್ದಾರೆ, ಆದರೆ ಹಿಂದೂದೇಶದಲ್ಲಿ ಮಹಾತ್ಮಾಜಿಯವರ ಮಹಾಪ್ರಭಾವಶಾಲಿಯಾದ ಧುರೀಣತೆಯಿಂದ ಅಹಿಂಸೆಯು ಜಯಶೀಲವಾಗಿದೆ. ಇತರ ರಾಷ್ಟ್ರಗಳು ನಿರ್ದಯ ಹಿಂಸೆಯಿಂದ ಯಾವುದನ್ನು ಸಾಧಿಸಲು ಹೋರಾಡುತ್ತವೋ ಅದನ್ನು ಭಾರತವು ನಿಷ್ಕಲ್ಮಷ ಅಹಿಂಸೆಯಿಂದ ಸಾಧಿಸಲಿದೆ" ಹೀಗೆಂದು ಮಾನ್ಯ ಡಾ ಸುಬ್ಬರಾಯನರು ತಂಜಾವೂರಿನ ವಾಚನಾಲಯದ ಉದ್ಘಾಟನೆಯಂದು ಹೇಳಿದರು

ಪ್ರಧಾನ ಮಂತ್ರಿ ರಾಜಾಜಿ
(ಮುಷ್ಕರದ ಕುರಿತು)

"ಬಿರುಗಾಳಿ ಬಂದಾಗ ಮನಸ್ಯ ಕಣ್ಣು ಕಿವಿ, ಬಾಯಿಯೆಲ್ಲಾ ಧೂಳಿನಿಂದ ತುಂಬುತ್ತದೆ ರಾಜಕೀಯ ವಾತಾವರಣದಲ್ಲಿಯೂ ಹಾಗಿದ್ದ ಬಿರುಗಾಳಿಗಳು ಉಂಟಾಗಿ ಸಾರ್ವಜನಿಕ ಕೆಲಸಗಾರರು ಆ ಧೂಳಿನಿಂದ ಯಾವುದನ್ನಾದರೂ, ಸರಿಯಾಗಿ ಕೇಳಲು, ನೋಡಲೂ ಅನುಭವಿಸಲೂ ಅಸಮರ್ಥರಾಗಿದ್ದಾರೆ. ಕೃಹಕೃತ್ಯಗಳನ್ನು ಯೂನಿಯನ್ನಿನ ಕೆಲಸದೊಡನೆ ಸೇರಿಸಬೇಡಿ. ಒಬ್ಬನಿಗೆ ಸರ್ಪ ಕಚ್ಚಿದುದಾದರೆ ಕೂಡಲೇ ತಡೆಯುತ್ತಾನೆ ಸಾಧ್ಯವಾದರೆ, ಸರ್ಪ ಕಚ್ಚಿದ ಭಾಗವನ್ನೇ ಕಿತ್ತೊಗೆಯುತ್ತಾನೆ! ಹಾಗೆ ಒಬ್ಬನಿಗಾದ ಅಪಚಾರವನ್ನು ಎಲ್ಲರಲ್ಲಿಯೂ ಹರಡಿ, ಸಂಸ್ಥೆಯು ಹಾಳಾಗದಂತೆ ನೋಡುವುದು ಪ್ರತಿಯೊಬ್ಬನ ಜವಾಬ್ದಾರಿಯಾಗಿದೆ

"ಬ್ರಿಟಿಷರಿಗೆ ಇಲ್ಲಿ ಸಂಪೂರ್ಣ ವ್ಯಾಪಾರ ವಹಿವಾಟುಗಳ ಸ್ವಾತಂತ್ರ್ಯವಿಳಿದರೆ, ಅವರು ಈ ದೇಶದ ಒಡೆತನವನ್ನು ಬಿಡಲೂ ತಯಾರಿದ್ದಾರೆ, ಹಾಗಾಗಿ ದೇಶದ ವ್ಯಾಪಾರವು ಎಷ್ಟು ಮಹತ್ವದ್ದೆಂದು ಎಲ್ಲರೂ ತಿಳಿದಿರಬೇಕು ಕೆಲವರು ಕೊಡುವ ತಪ್ಪು ಉಪದೇಶಗಳಿಗೆ ಮರುಳಾಗಿ ರಾಷ್ಟ್ರದವ್ಯಾಪಾರವನ್ನು ಮುಷ್ಕರಹೂಡಿ ಕೆಡಿಸಬಾರದು ಮುಷ್ಕರಗಳಿಂದ ಬಹಳ ಅನರ್ಥವಾಗುತ್ತದೆ. ಸಂಸ್ಥೆಯನ್ನು ವ್ಯಾಪಾರವನ್ನು ಕೆಡಿಸುವುದು ಮಾತ್ರವಲ್ಲ, ತಾವು ನಿರುದ್ಯೋಗಿಗಳಾಗಿ ಸಂಕಷ್ಟವನ್ನನುಭವಿಸಲೂ ಬೇಕಾಗುವುದು ಈ ದೇಶದಲ್ಲಿ ಉದ್ಯೋಗದ ಅಭಿವೃದ್ಧಿಯು ಚೆನ್ನಾಗಿಲ್ಲವೆಂಬುದರಿಂದ ಮಾಲಕರಾದರೂ ಅವರ ಕೆಲಸಗಾರರಿಗೆ ಯೋಗ್ಯ ಸೌಕರ್ಯಗಳನ್ನು ಕೊಡದಿರಬಾರದು ಕೆಲಸಗಾರರು ತಮಗೆ ಏನಾ ಅನ್ಯಾಯವಾಗಿದ್ದರೂ, ತಾಳ್ಮೆಗೆಡಬಾರದು ತಾಳ್ಮೆಯಿಂದ ಅವರು ಸರಕಾರದ ಮತ್ತು ಇತರ ಗೆಳೆಯರ ಸಹಾಯದಿಂದ ಕಾರ್ಯದಲ್ಲಿ ಜಯಶೀಲರಾಗಬಹುದು" ಹೀಗೆಂದು ಪ್ರಧಾನ ಮಂತ್ರಿಗಳು ಮದ್ರಾಸಿನಲ್ಲಿ ಕೆಲಗಾರರಿಗೆ ಹೇಳಿದರು

ಮಾನ್ಯ ಪ್ರಕಾಶಂ
(ರೈತರಿಗೆ ಉಪದೇಶ)

'ಸರಕಾರದ ಮುಂದೆ ಬರಲಿರುವ ಜಮೀನ್ದಾರಿ ಕಾನೂನಿನಿಂದ ರೈತರ ಅನೇಕ ಸಂಕಷ್ಟಗಳು ಕಡಿಮೆಯಾಗಲಿವೆ, ಸರಕಾರದ ಕೈಯಲ್ಲಿ ಬಹಳ ಪ್ರಾಮುಖ್ಯ ವಿಷಯಗಳು ಇವೆ ಅವುಗಳಿಂದ ರೈತರಿಗೆ ತುಂಬಾ ನೆರವಾಗುವುದು ಆದರೆ ರೈತರು ತಮ್ಮ ಸಣ್ಣ ಸಣ್ಣ ವಿಷಯಗಳಿಗಾಗಿ ಚಳವಳ ಮಾಡಿ, ಸರಕಾರದ ಗಮನವನ್ನು ತಿರುಗಿಸಬಾರದು ಕಾಂಗ್ರೆಸು ಮಂತ್ರಿಮಂಡಳದ ಗೌರವವನ್ನು ಕೀಳಾಗಿ ಎಣಿಸುವುದರಿಂದ ರೈತರು ರಾಷ್ಟ್ರದ ಹಾನಿಯನ್ನು ಮಾಡಿಕೊಂಡಂತಾಗುತ್ತದೆ ರೈತರು ನಿಜವಾಗಿಯೂ ಒಳ್ಳೆಯ ಕೆಲಸಗಳನ್ನು ಮಾಡಲು ಮನಸ್ಸುಳ್ಳವರಾದರೆ, ಅವರಿಗಿತ್ತ ಪಂಚಾಯತ ಬೋರ್ಡುಗಳ ಮೂಲಕ ಸಾಕಷ್ಟು ರಚನಾತ್ಮಕ ಕಾರ್ಯಗಳನ್ನು ಸಾಧಿಸಬಹುದಾಗಿದೆ ನಮ್ಮ ಮುಂದೆ ಫೆಡರೇಶನಿನ ಪ್ರಶ್ನೆ ಇದೆ ಅದನ್ನು ಎದುರಿಸಬೇಕು ಕಾಂಗ್ರೆಸು ಕೆಲಸಗಾರರ ಅದಕ್ಕೆ ಪೂರ್ವಸಿದ್ಧತೆ ಮಾಡುವಂತೆ, ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕು' ಹೀಗೆಂದು ಮಾನ್ಯ ಮಂತ್ರಿ ಪ್ರಕಾಶಂರವರು ನಾಯುಡುಪೇಟೆಯಲ್ಲಿ ಜಿಲ್ಲಾ ರೈತರ ಸಮ್ಮೇಳನದಲ್ಲಿ ಭಾಷಣವಿತ್ತರು

ಮಾನ್ಯ ಸಿ. ಜೆ. ವಾರ್ಕಿ
(ವಾರ್ಧಾ ಶಿಕ್ಷಣದ ಕುರಿತು)

'ವಿದ್ಯಾಭ್ಯಾಸದಲ್ಲಿ ಕೈಗಾರಿಕೆಯ ಸ್ಥಾನವು ಮಹತ್ವದ್ದಾಗಿದೆ. ಯಾವುದನ್ನು ಓದಿ ತಿಳಿದುಕೊಳ್ಳುತ್ತೇವೋ ಅದನ್ನು ಕೈಯಿಂದ ಮಾಡಿ ನೋಡುವಂತಹ ವಿದ್ಯಾಭ್ಯಾಸವೂ ಜತೆಜತೆಯಾಗಿ ಕೊಡಲ್ಪಟ್ಟಲ್ಲಿ, ನಿಜವಾದ ವಿದ್ಯಾಭ್ಯಾಸದ ಪೂರ್ಣತೆಯಿದೆ ಇದನ್ನು ಗಾಂಧಿಜಿಯವರ ವಾರ್ಧಾ ವಿದ್ಯಾಯೋಜನೆಯಿಂದ ನಮಗೆ ತೋರಿಸಿದ್ದಾರೆ. ವಾರ್ಧಾದಲ್ಲಿ ಕೊಡಲ್ಪಡುತ್ತಿರುವ ಈ ಶಿಕ್ಷಣದ ಶಾಲೆಗೆ ಕೆಂಟಿನಿಂದ ಅಲ್ಲಿನ ವಿದ್ಯಾಂಗದ ಡೈರೆಕ್ಟರರು ಬಂದು ಅದನ್ನು ಪರೀಕ್ಷಿಸಿದನ್ನ ನಾನು ಅಲ್ಲಿಗೆ ಹೋದಾಗ ಕಂಡೆ ನಿಜವಾಗಿಯೂ ಮಾಡುವ ಮೂಲಕ ಕಲಿಯುವ ಕ್ರಮವು ಉತ್ತಮವೆಂದು ಯೂರೋಪಿಯನ್ ವಿದ್ಯಾಪರೀಕ್ಷಕರೂ ಒಪ್ಪಿರುತ್ತಾರೆ

ಕಾಂಗ್ರೆಸ್ ಸರಕಾರವು ಈ ಪದ್ಧತಿಯನ್ನು ಪ್ರಚಾರದಲ್ಲಿ ತರಲು ಸಾಧಿಸುತ್ತಿದೆ. ನಾವು ಕಲಿಯುವ ವಿಷಯಗಳಲಿ ಏನೂ ಬದಲಾವಣೆ ಇಲ್ಲ, ಆದರೆ ವಿಷಯಗಳನ್ನು ಕಲಿವ ಮಾದರಿಯಲ್ಲಿ ಮಾತ ಬದಲಾವಣೆ ಇರುತ್ತದೆ ಈ ಯೋಜನೆಯ ಸಫಲತೆಯು, ಇಂದು ಅದಕ್ಕಾಗಿ ಶಿಕ್ಷಣ ಪಡೆದು ಬಂದ ಉಪಾಧ್ಯಾಯರ ಸಾಧನೆಯಲ್ಲಿದೆ ಎಂದ ತೊಯಂಬುತ್ತೂರಿನ ಕೈಗಾರಿಕಾ ವಿದ್ಯಾಭ್ಯಾಸ ಶಾಲೆಯ ಆರಂಭ ಭಾಷಣದಲ್ಲಿ ಹೇಳಿದರು

ಡಾ. ಟಿ. ಎಸ್. ಎಸ್ ರಾಜನ್
(ಚಿತ್ರಕಲೆಯ ಕುರಿತು)

"ಮಾನವನು ತನ್ನಂತೆ ಚಿತ್ರದಲ್ಲಿ ಕಾಣುವುದು ಯಾರನ್ನೂ ಕುತೂಹಲಗೊಳಿಸುವುದಿಲ್ಲ, ಕುತೂಹಲಗೊಳಿಸುವವುಗಳು ಭವಿಷ್ಯತ್ತಿನ ದಿವ್ಯದೃಶ್ಯ ಮತ್ತು ಮಾನವ್ಯತೆಯ ಸಾಮರ್ಥ್ಯಗಳು ತನ್ನಿಂದಲೂ ಮುಂದಕ್ಕೆ ನೋಡುವ ದಿವ್ಯದೃಶ್ಯದ ಕುತೂಹಲದಿಂದ, ಕಲಾವಿದನು ಇಡೀ ದಿನ ಚಿತ್ರಕಲೆಯ ಕೋಣೆಯಲ್ಲಿ ದೃಷ್ಟಿಯ ಗಮನವಿಲ್ಲದೆ, ಆರೋಗ್ಯದ ಲಕ್ಷವಿಲದೆ, ಹೊತ್ತುಗಳೆಯುತ್ತಾನೆ. ಆತನನ್ನು ಹೀಗೆ ಮುಗ್ಧನನ್ನಾಗಿ ಮಾಡುವುದು ಮಾನವನಲ್ಲಿ ಸಹಜವಾಗಿರುವ ದಿವ್ಯದರ್ಶನ ಕುತೂಹಲವು ನನಗೆ ಮಾನವನಿಸರ್ಗದಲ್ಲಿ ಮತ್ತು ಮಾನವ ಜೀವನದ ಸತ್ಯದರ್ಶನದಲ್ಲಿ ಅತ್ಯಂತ ವಿಶ್ವಾಸವಿದೆ. ಮಾನವನ ಅತುಲ ಸಾಮರ್ಥ್ಯದಲ್ಲಿಯೂ ನನಗೆ ಅಭಿಮಾನವಿದೆ ನಿಸರ್ಗವನ್ನು ಮತ್ತು ದಿವ್ಯಶಕ್ತಿಗಳನ್ನು ಊಹಿಸಲು ಯಾರಿಗೆ ಸಾಮರ್ಥ್ಯವುಂಟೋ ಅಂಥವರು ಸಹಜವಾಗಿಯೂ ಚಿತ್ರಕಲೆಯ ಪ್ರಯೋಜನ ಮತ್ತು ಸಾಧ್ಯತೆಗಳ ವಿಷಯಗಳನ್ನು ತಿಳಿಯಬಹುದ ಯಾರು ತನಗಿಂತಲೂ ಮಿಗಿಲಾಗಿ ಕಲೆಯನ್ನು ಪ್ರೀತಿಸುತ್ತಾನೋ ಅವನೇ ನಿಜವಾದ ಕಲಾವಿದನು. ನಿಜವಾದ ಪೂರ್ಣವಾದ ಕಲೆಯು ಜನಾಂಗವನ್ನೂ ವ್ಯಕ್ತಿಯನ್ನೂ ಒಂದುಗೂಡಿಸುವಷ್ಟು ಸಾಮರ್ಥ್ಯವುಳ್ಳದ್ದಾಗಿದೆ ಖಂಡಿತವಾಗಿಯೂ ಮಾನವನ ಪ್ರತಿಭಾಶಕ್ತಿಯಿಂದ ಇಡೀ ಜಗತ್ತಿನ ಗುಟ್ಟು ಒಂದು ದಿನ ಹೊರಬೀಳದೆ ಇರಲಾರದು ನಿಜವಾಗಿಯೂ ದೈವಿಕಶಕ್ತಿಯನ್ನು ಮಾನವನು ತನ್ನ ಸಾಮರ್ಥ್ಯ-ಸಂಶೋಧನೆಗಳಿಂದ ಕಂಡುಹುಡುಕಿ ಬಿಟ್ಟರೆ, ಇದಕ್ಕಿಂತ ದೊಡ್ಡ ದೇವರ ಸೇವೆಯನ್ನು ಆತನು ಏನನ್ನು ಮಾಡಬೇಕಾಗಿಲ'

ಮಾನ್ಯ ಮುನಿಸ್ವಾಮಿ ಪಿಳ್ಳೆ
(ದೇವಾಲಯ ಪ್ರವೇಶದ ಕುರಿತು)



"ಹಿಂದು ಧರ್ಮದ ಶ್ರೇಣಿಗಳೆಲ್ಲರೂ ಮಧುರೆಯ ಸಂಭವವನ್ನು ಕೇಳಿ ಅಮಿತ ಆನಂದವನ್ನು ಪಡಲೇ ಬೇಕು. ನನ್ನ ಜಾತಿಗೆ ದೇವಾಲಯಗಳು ನಿಜವಾಗಿ ದೇವರ ಮತ್ತು ಧರ್ಮದ ನಿತ್ಯ ಆವಾಸ ಸ್ಥಾನಗಳೆಂಬ ವಿಶ್ವಾಸವಿದೆ ಮಗುವನ್ನು ಪಡೆದಾಗ ಹೆತ್ತವರಿಗಾದ ಆನಂದ ನನಗಾಗಿದೆ ಹಿಂದೂ ಧರ್ಮವನ್ನು ನಿರ್ಮಲಗೊಳಿಸತ್ತಾ, ಅಭಿವೃದ್ಧಿ ಪಥದಲ್ಲಿ ಈ ಮಧುರೆಯ ದೇವಳ ಪ್ರವೇಶದ ಮಾದರಿಯು ಮಾಡೀತೆಂದು ನಾನು ನಂಬುತ್ತೇನೆ" ಹೀಗೆಂದು ಮಧುರೆಯ ದೇವಾಲಯ ಪ್ರವೇಶದ ಕುರಿತು ಮಾನ್ಯ ಮುನಿಸ್ವಾಮಿ ಪಿಳ್ಳೆಯವರು ಹೇಳಿದರು

The Canara Industrial & Banking Syndicate Ltd.

Head Office: UDIPI (S. India)

ESTD) (1925

MEMBER: **Reserve Bank of India, Bankers' Clearing House, Bombay.**

Five Year Cash Certificates are issued at the price of Rs 8, Rs 80, Rs 400 and Rs 800, repayable on maturity at Rs 10, Rs 100, Rs 500, and Rs 1000 respectively

You can cash the Certificates at any time before maturity.

AN INVESTMENT WHICH IS LIQUID AND YET VERY REMUNERATIVE.

Further particulars can be had from:
The Car Street Branch, Mangalore

GENERAL BANKING BUSINESS TRANSACTED.

ನಗರದ ನವನಾಯಕರು

ಲೇಖಕ: ಶಿವರಾಮ ಕಾರಂತ

ಆರ್ಯಸಮಾಜದ ಅರವಿಂದರಾಯರು

ಅರವಿಂದರಾಯರು ತಾಲೂಕು ಕಛೇರಿಯಲ್ಲಿ ಗುಮಾಸ್ತರು. ಮಂಗಳೂರಿಗೆ ಕಾಲಿರಿಸಿದಾಗ ಅವರು V ಫಾರಂ ವಿದ್ಯಾರ್ಥಿಗಳು. ಅಂದಿನಿಂದ ಇಂದಿಗೆ ಸುಮಾರು ೨೦ ವರ್ಷ ಕಾಲ ಸಲ್ಲುತ್ತಾ ಬಂದಿತು. ಅನೇಕ ಬದಲಾವಣೆಗಳು ಅವರ ಜೀವಮಾನದಲ್ಲಿ ಆಗಿಹೋದುವು; ಊರಲ್ಲೂ ಆದುವು. ಆದರೆ ಒಂದು ಮಾತ್ರ ಅಖಂಡವಾಗಿ ಬದಲಿಸದೆ ಹೋದ ಸಂಗತಿಯೆಂದರೆ ಅರವಿಂದರಾಯರಿಗೂ ಆರ್ಯಸಮಾಜಕ್ಕೂ ಇರುವ ಶ್ರದ್ಧಾಭಕ್ತಿ ವಿಶ್ವಾಸಗಳು. ನಮ್ಮ ಊರಿಗೆ ಆರ್ಯಸಮಾಜವು ಕಾಲಿರಿಸುವ ಮೊದಲೇ ಅವರು ಆರ್ಯರಾಗಿದ್ದರು. ಪಂಜಾಬಿನ ಪೇಪರುಗಳನ್ನು ತರಿಸಿಕೊಂಡು, ಈ ಊರಿನಲ್ಲಿ ವಿದ್ಯಾರ್ಥಿಯಾಗಿರುವಾಗ ಆದಿತ್ಯವಾರ ಬೆಳಿಗ್ಗೆ ಅರ್ಧ ಸೇರು ತುಪ್ಪ, ಕಾಲು ಮಣ ಹಲಸಿನ ಕಟ್ಟಿಗೆಗಳನ್ನು ಸೇರಿಸಿ, ಅರೆಕಾಸಿನ ಬೆಂಕಿಪೆಟ್ಟಿಗೆಯಿಂದ ಉರಿಸಿ—ಹೋಮವನ್ನು ಕ್ರಮ ತಪ್ಪದೆ ನಡೆಯಿಸುತ್ತಿದ್ದರು. ಈಗಲೋ ಅದರಲ್ಲಿ ತುಸು ವ್ಯತ್ಯಾಸ ಬಂದಿದೆ. ಈಗ—ಹಲಸಿನ ಕಟ್ಟಿಗೆ ಹೊಗೆಯ ಬದಲು ದೇವತೆಗಳಿಗೆ ಹೊಗೆಸೊಪ್ಪಿನ ಹೊಗೆ ಪ್ರೀತಿದಾಯಕ ಎಂಬುವ ಹಾಗೆ ನಡೆದಿದೆ ಈ ಬದಲಾವಣೆ.

ಅರವಿಂದರಾಯರ ತಂದೆ ಮೋಹನರಾಯರು ಮದ್ರಾಸು ಸಂಸ್ಥಾನದಲ್ಲಿ ಸರಕಾರಿ ಹುದ್ದೆಯಲ್ಲಿ ತಿರುಗಾಡಿ ತೊಳಲಿ, ಪೆನ್ಶನಿನ ಕಾಲಕ್ಕೆ ಕದ್ರಿಯಲ್ಲಿ ಬಂದು ಬಿಡಾರ ಹೂಡಿದರು. ಆ ಸಮಯದಲ್ಲಿ ಅವರ ಏಕಮಾತ್ರ ಪುತ್ರ ಅರವಿಂದನಿಗೆ ೧೪-೧೫ ವಯಸ್ಸು ಇದ್ದಿರಬೇಕು. ಅವರು ಹುಡುಗನನ್ನು ಹೈಸ್ಕೂಲಿಗೆ ಹತ್ತಿಸಿದರು. ಅವನು ಈ ಮೊದಲು ತಮಿಳು—ತೆಲುಗು—ಮಳಯಾಳಿ ಭಾಷೆಗಳಲ್ಲಿ ಪ್ರವೀಣನಾಗಿ ಮಂಗಳೂರಿನ ಸುದೈವದಿಂದ ಕನ್ನಡ—ತುಳು ಪರಿಣತನಾಗಬೇಕಾಯಿತು. ಈ ಎಡೆಯಲ್ಲೇ ಒಮ್ಮೆ ಪಂಜಾಬಿನ ಪಂಡಿತ ಅಮರಚಂದರು ಮಂಗಳೂರಿಗೆ ಬಂದು 'ಆರ್ಯಧರ್ಮ ಶ್ರೇಷ್ಠತಾ'ದ ಮೇಲೆ ಅಮೋಘ ಉಪನ್ಯಾಸ ಮಾಡಿದರು. ಕ್ರಿಸ್ತಧರ್ಮವು ಮಿಥ್ಯವೆಂದು ಬಲವಾಗಿ ನಿಂದಿಸಿ ತನ್ಮೂಲಕ ಆರ್ಯಧರ್ಮದ ಶ್ರೇಷ್ಠತೆಯನ್ನು ಸಾರಿದರು. ಆ ಉಪನ್ಯಾಸ ಕೇಳಲು ಹೋದವರಲ್ಲಿ ತಂದೆ ಮಗಂದಿರಾದ ಮೋಹನರಾಯರು, ಮತ್ತು ಅರವಿಂದ ಇಬ್ಬರು. ಆ ದಿನದ ಉಪನ್ಯಾಸಕ್ಕೆ ಕೆಲವು ನಾಗರಿಕರೂ ಬಂದಿದ್ದರು. ಹಾಗೆ ಪರವೂರುಗಳಿಂದ ಉಪನ್ಯಾಸಕರು ಬರುವಾಗ, ಅವರಿಗೆ ಮುಖ ತೋರಿಸಲು ಯಾವ ನಮ್ಮ ನಾಯಕರೂ ಹಿಂಜರಿಯುವುದಿಲ್ಲ.

ಊರವರ ಆಗ್ರಹದಿಂದ ಪಂಡಿತ ಅಮರಚಂದರು ಮೂರು ತಿಂಗಳ ಕಾಲ ಆರ್ಯಧರ್ಮ ಪ್ರಚಾರಕ್ಕಾಗಿ ನಿಂತರು. ತಮಗೆ ಕನ್ನಡ—ತುಳು ಕಷ್ಟವಾದುದರಿಂದಲೋ ಏನೋ ಅಂತೂ ಹಿಂದಿ ಭಾಷೆಯು ಆರ್ಯಭಾಷೆಯೆಂದು ಅದರ ಶಿಕ್ಷಣ ತೊಡಗಿದರು. ಅವರು ಬಂದ ಒಂದು ತಿಂಗಳಲ್ಲಿ ಆರ್ಯಸಮಾಜವು ನಮ್ಮ ಊರಿನಲ್ಲಿ ಬೇರೂರಿತು. ಅಮರಚಂದರು ಇರುವಾಗ—ಬ್ರಹ್ಮಸಮಾಜದ ಸದಸ್ಯರೂ, ಉತ್ತಮ ಸಾಂಪ್ರದಾಯಿಕ ಬ್ರಾಹ್ಮಣರೂ, ನಮ್ಮ ಊರಿನ 'ದಳಿತ' ಮುಖಂಡರೂ ಹಿಂಡುಹಿಂಡಾಗಿ ಅವರ ಆದಿತ್ಯವಾರದ ಹವನಗಳಿಗೂ ವೈದಿಕ ಉಪನ್ಯಾಸಗಳಿಗೂ ಬರುತ್ತಿದ್ದರು. ಅವರು ಹೋದ ಮೇಲೆಯೂ ಹಾಗೆಯೇ ನಡೆಯಿತು—ಅಂದರೆ ಹವನ ನಡೆಯಿತು, ಉಪನ್ಯಾಸ ಉಳಿಯಿತು. ಬರುವವರ ಸಂಖ್ಯೆ ಯಥಾವತ್ತಾಗಿ ಶೂನ್ಯವಾಯಿತು.

ಆದರೆ ಆದರ ನಿಷ್ಠೆಯಲ್ಲಿ ಮೋಹನರಾಯರು ಅದ್ವಿತೀಯರಾದರು; ಮಗನು ದ್ವಿತೀಯನಾದ. ದುರ್ದೈವದಿಂದ ಅರವಿಂದ ಪರೀಕ್ಷೆಗೆ ಕುಳಿತಿರಬೇಕಾದ ವರ್ಷವೇ ಮೋಹನರಾಯರು ತೀರಿಕೊಂಡರು. ಪರೀಕ್ಷೆ ಕಳೆದುದಕ್ಕೂ, ಮನೆಯ ಹೊರೆಬಿದ್ದುದಕ್ಕೂ ಸಮನಾಗಿ ಅರವಿಂದ ವ್ಯಾಸಂಗ ಮುಂದರಿಸದೆ ಹೇಗೋ ತಾಲೂಕು ಆಫೀಸಿಗೆ ಸೇರಿಕೊಂಡು ಗುಮಾಸ್ತನಾದ.

ಇದು ಜೀವನದ ಸಂಗ್ರಾಮ. ನಮ್ಮ ಊರಿಗೆ ಸಂಬಂಧಪಟ್ಟ ಮುಖ್ಯ ವಿಷಯವಲ್ಲ. ಆದರೆ ಅರವಿಂದನ ಪರಿಚಯ ನಮ್ಮ ಊರವರಿಗೆ ಆದದ್ದು ಅವನ ಸ್ವತಂತ್ರ ಆರ್ಯಸಮಾಜ ಮತ್ತು ಆರ್ಯತತ್ವಗಳಿಂದಾಗಿ. ಊರಲ್ಲಿ ಆರ್ಯಸಮಾಜ ಸ್ಥಾಪನೆಯಾಯಿತು, ಸನ್ಯಾಸಿಗುಡ್ಡೆಯ ಹೊಂಡವೊಂದರಲ್ಲಿ ಅದರ ಕಟ್ಟಡ ಇಂದಿಗೂ ಭವ್ಯವಾಗಿ ನಿಂತಿದೆ. ಅತ್ತ ಕೆಲವು ವರ್ಷ ಕಾಲ ಆರ್ಯದೂತರು ಉತ್ತರ ಹಿಂದುಸ್ಥಾನದಿಂದ ಬಂದು ಹೋದರು. ಆಗಲೇ ಅರವಿಂದನು ಅಲ್ಲಿನ ಹವನಕವನಗಳಿಗೆ ಹೋಗಿ ಬರುತ್ತಿದ್ದನು.

ಅವನಿಗೆ ಧರ್ಮಾಭಿಮಾನ ಬಹಳ. ಸ್ವಧರ್ಮ ಯಾವುದೆಂಬ ವಿಷಯದಲ್ಲಿ ಕೊರತೆಯಿದ್ದರೂ—ಪರಧರ್ಮಗಳು ಎಷ್ಟು ನೀಚವೆಂಬುದು ಅವನು ಮನಗಂಡವ. ಹೀಗಾಗಿ ಆರ್ಯಧರ್ಮ ಸಂಸ್ಥಾಪನೆಗಾಗಿ ಹೆಣಗಾಡಬೇಕೆಂದು ನಿರ್ಣಯಿಸಿದ. ಐದು ವರ್ಷ ಅವನ ಯತ್ನಗಳು ನಿರಾಶೆಗೊಂಡವು. ಕಾರಣವಿಷ್ಟೆ—ಸಮಾಜದ ಕಾರ್ಯದರ್ಶಿಯೋ ಅಧ್ಯಕ್ಷನೋ ಆಗಿ—ಆರ್ಯಧರ್ಮೋದ್ಧಾರ ಮಾಡಬೇಕೆಂದರೆ, ಆ ಪದವಿಯೆಲ್ಲ ಉಳಿದ ಸಮಯವೆಂದೂ ಬಾರದ, ಚುನಾವಣೆಯ ದಿನವೇ ಬರುತ್ತಿದ್ದ ಹಲವರಿಗೆ ಹೋಯಿತು. ಈ ಅಸಮಾಧಾನ ಬೇಯುತ್ತಿತ್ತು. ಸಾಲದುದಕ್ಕೆ ಒಂದು ದಿನ 'ಆರ್ಯದೂತರಿಗೂ' ಅವನಿಗೂ ಜಟಾಪಟಿ ಬೇರೆ ಹತ್ತಿತು.

ಆರ್ಯದೂತರು ಮುಖ್ಯತಃ ಆರ್ಯರ ಶ್ರೇಷ್ಠತೆಯನ್ನು ಒಪ್ಪುವವರು. ಉಳಿದವರು ಹೇಗೂ ಅನಾರ್ಯರು—ಎಂದು ತಿಳಿಯುವವರು. ಪ್ರಪಂಚದಲ್ಲಿ ಉಳಿದ ಎಲ್ಲಾ ಧರ್ಮಗಳೂ ಮಿಥ್ಯವೆಂದೂ, ದಯಾನಂದರನ್ನು ಬಿಟ್ಟು ಉಳಿದ ಎಲ್ಲಾ ಸಾಧುಗಳು ಅಸಾಧುಗಳೆಂದೂ, ವೇದಗಳನ್ನು ಬಿಟ್ಟು ಉಳಿದೆಲ್ಲವೂ ಸುಳ್ಳೆಂದೂ ಪೌರುಷೇಯವೆಂದೂ ನಂಬುವವರು. ಈ ವಿಷಯದಲ್ಲಿ ಅರವಿಂದನಿಗೆ ಮತಭೇದ ಬಹಳ. ಅವನು ಓದಿದ ಇತಿಹಾಸ ಅರಿಯಾಗಿಯೋ ಏನೋ—ಆರ್ಯರು ದ್ರಾವಿಡರಷ್ಟು ನಾಗರಿಕರಾಗಿರಲಿಲ್ಲ. ಅವರ ಧರ್ಮವೇನೋ ಒಳ್ಳೆಯದೇ—'ಆದರೆ ದೇವರು ಸಂಸ್ಕೃತವನ್ನೇ ಮಾತನಾಡಿರಲಾರನು' ಎಂದೂ ಅವನ ವಾದ. ಆರ್ಯರು ಹುಟ್ಟಿಸಿದ ನಾಲ್ಕು ವರ್ಣ ನಿಯಮಗಳು, ದ್ರಾವಿಡರಿಗೆ ಅನ್ವಯಿಸುವ ಕಾರಣವಿಲ್ಲವೆಂದೂ ಆದುದರಿಂದ ಆರ್ಯತನದ ಹೆಗ್ಗುರುತಾದ ಜನಿವಾರಕ್ಕೆ—ಬೆಲೆಯೇ ಬೇಡವೆಂದೂ ಸುಮ್ಮನೆ ಹೊಲೆಯರಿಗೂ ಯಜ್ಞೋಪವೀತ ಹಾಕಿಸಿ ಹತ್ತಿ ಬೆಲೆ ಏರಿಸುವುದಕ್ಕಿಂತ, ಇದ್ದವರೂ ತೆಗೆದುಹಾಕಿದರೆ ಒಳಿತೆಂದೂ ಅವನ ಮತ. ಈ ಕಾರಣದಿಂದ ಆಗಾಗ ವಾಗ್ಯುದ್ಧಗಳು ಆರ್ಯದೂತರಿಗೂ ಅವನಿಗೂ ನಡೆಯುತ್ತಲೇ ಇದ್ದುವು. ಒಂದು ದಿನ ಯಾರನ್ನೂ ಕೇಳದೆ—ಆರ್ಯಸಮಾಜ ಮಂದಿರದ ಮುಂಗಡ 'ಆರ್ಯಧರ್ಮದ ಸುಧಾರಣೆ' ಎಂಬ ವಿಷಯ ಉಪನ್ಯಾಸದ ವ್ಯವಸ್ಥೆಯನ್ನು ಮಾಡಿದನು. ಒಂದು ಮೂರು ನಾಲ್ಕಾರು ಮಂದಿಯಾದರೂ ಬಹುಮತದಿಂದ 'ನವ ಆರ್ಯ ಸಂಘ' ಎಂಬೊಂದು ಸಂಘವು ಆ ದಿನ ಸ್ಥಾಪಿತವಾಯಿತು. ಈಗಿನ ಕಟ್ಟಡದಲ್ಲಿ ಅದಕ್ಕೆ ಸ್ಥಳ ಸಿಗದಾದರೆ—ಬೇರೊಂದು ಬಾಡಿಗೆ ಮನೆ ಪಡೆಯಬೇಕೆಂದೂ ನಿರ್ಣಯವಾಯಿತು. ಹೊಸ ಆರ್ಯಸಂಘಕ್ಕೆ ಕೋಶಾಧಿಕಾರಿಯೂ, ಅಧ್ಯಕ್ಷನೂ ಅರವಿಂದನಾದನು. ತನ್ನಂತೆ ಹುಮ್ಮಸ್ಸಿನಿಂದ ತುಂಬಿದ ಇನ್ನೊಬ್ಬ ಕಛೇರಿ ಗುಮಾಸ್ತರನ್ನು ಕಾರ್ಯದರ್ಶಿಯಾಗಿ ಮಾಡಿಕೊಂಡ. ಕೆಲಸ ಪ್ರಾರಂಭವಾಯಿತು.

ನಗರದ ಪತಿ ರಸ್ತೆಯ [illegible] ದೊಂದು ವರ್ಷಕಾಲ ಆರ್ಯಸಂಘದ ಬೋರ್ಡು ಅಲೆದಾಡಿತು. ಪ್ರತಿ ವಾರವೂ ಆರ್ಯಸಂಘ ಹವನ ಉಪನ್ಯಾಸಗಳ ವರದಿಯೂ ಪ್ರಕಟವಾಯಿತು. ಆದರೆ ಹಟ ಹಿಡಿದು ಹೋದರೆ—ಉಪನ್ಯಾಸಕರಲ್ಲದೆ ಉಳಿದವರು ಮಂದಿಯಲ್ಲಿ ಸೇರುವಷ್ಟು ಪರತಂತ್ರರಾಗಲಿಲ್ಲ.

ಛಾಪಖಾನೆಯವರ ಬಿಲ್ಲುಗಳು ಬಾಕಿಯಾಗಿ ನವ ಆರ್ಯ ಸಂಘದ ಕೋಶಾಧಿಕಾರಿಗಳು ಶೋಕಾಧಿಕಾರಿಗಳಾದರು. ಮುಂದೆ ಹ್ಯಾಂಡುಬಿಲ್ಲು ಅಚ್ಚುಹಾಕಿಸುವ ವಿಷಯದಲ್ಲಿ ಮುತುವರ್ಜಿ ಕಡಿಮೆಯಾಯಿತು. ಆದರೆ ಸಮಾಜ ಸುಧಾರಣೆಯ ಟಿಕ್ಕಕ್ಕೆ ಕಡಿಮೆಯಾಗಲಿಲ್ಲ. ಜತೆಗೆ ಹಿಂದಿ ಪ್ರಚಾರ, ದಳಿತರ—ಉದ್ಧಾರ ಈಗ ಅವರು ಆದಿದ್ರಾವಿಡರಾಗಿ ಹರಿಜನರಾಗಿದ್ದಾರೆ—ಇಷ್ಟೆಲ್ಲ ಜತೆಯಲ್ಲಿ ಸೇರಿಕೊಂಡಿತ್ತು. ಊಟಕ್ಕೆ ಅನ್ಯ ಆಶ್ರಯವಿದ್ದಿದ್ದರೆ ಕಛೇರಿಯ ಕೆಲಸವನ್ನು ಅರವಿಂದರಾಯರು ಬಿಡುತ್ತಿದ್ದರು.

ಈಗಲೂ ಅರವಿಂದರಾಯರ ವಿಶ್ವಾಸಗಳು ಬಹಳವಾಗಿ ಏಕಮುಖವಾಗಿವೆ. ಹಿಟ್ಲರನ ಉನ್ನತಿಯ ಅನಂತರ ಅವರು ಆರ್ಯಧರ್ಮದ ಏಳಿಗೆಯ ವಿಷಯವಾಗಿ ತುಸು ಭರವಸೆ ತಾಳುತ್ತಿದ್ದಾರೆ. ಹಿಟ್ಲರನಂತೆ ಒಂದು ದಿನ ಹಿಂದುಸ್ಥಾನದಲ್ಲಿ ಒಬ್ಬ ದಯಾನಂದನು ಜನಿಸಿ ತಿರುಗಿ ಇಲ್ಲಿ ಧಾರ್ಮಿಕ ಕ್ರಾಂತಿಯಾಗುವುದೆಂದು ಖಂಡಿತಕ್ಕೆ ಬಂದಿದ್ದಾರೆ.

ವರ್ಷದ ಉಳಿದೆಲ್ಲ ಸಮಯದಲ್ಲೂ, ವಿಷಯ ಅರವಿಂದರಿಗೆ ಮನುಷ್ಯ ಸಹಾಯದ ಮೇಲೆ ವಿಶ್ವಾಸವಿಲ್ಲವಾದರೂ—ಅವನ ಫ್ರೀ ರೀಡಿಂಗ ರೂಮನ್ನು ನಡೆಯಿಸುವ ವಿಚಾರದಲ್ಲೂ, ಅವನೇ ಕಾರ್ಯದರ್ಶಿಯಾಗಿರುವ 'ದಳಿತ ಜನ ಸ್ಕಾಲರ್‌ಶಿಪ್' ಫಂಡ್ ನಡೆಯಿಸುವ ವಿಚಾರದಲ್ಲೂ ಪರರಲ್ಲಿ ತನ್ನ ದೂತನನ್ನು ಕಳುಹಿಸುತ್ತಾನೆ.

ಫ್ರೀರೀಡಿಂಗ ರೂಮು ನಮ್ಮ ಊರಿನ ದೊಡ್ಡ ಸಾರ್ವಜನಿಕ ಸಂಸ್ಥೆ. ಆರ್ಯಸಂಘದ ಮಹಡಿಗೇನೆ ಅದರ ಬೋರ್ಡು ತಾಗಿರುತ್ತಿತ್ತು. ಈಗ ಆರ್ಯ ಸಂಘ ಕರಗಿ ಹೋದುದರಿಂದ—ಯಾವಾಗಲೂ ತೆರೆಯದೆ ಇರುವ ಒಂದು ಮಹಡಿಗೆ ಅದನ್ನು ತಾಗಿಸಿದ್ದಾನೆ. ಪೇಪರುಗಳು ನಾಲ್ಕಾರು ಬರುತ್ತವೆ; ವರದಿ ತಪ್ಪದೆ ಮುದ್ರಣವಾಗುತ್ತದೆ. ನಾಗೇಂದ್ರ ಪೈಗಳನ್ನು ಅದರ ಅಧ್ಯಕ್ಷರಾಗಿ ಮಾಡಿ ವರದಿ ಪ್ರತಿವರ್ಷ ಪ್ರಿಂಟು ಆಗುತ್ತಿದೆ. ವರದಿಯಲ್ಲಿ ಸಾಹುಕಾರರ ಫೊಟೋ ಬರುತ್ತಿದೆಯಾದುದರಿಂದ—ಅದರ ಮುದ್ರಣದ ಬಿಲ್ಲು ನೇರವಾಗಿ ಪೈಗಳ ಖಾತೆಗೆ ಹೋಗುತ್ತದೆ. ಅಪೂರ್ವಕ್ಕೆ ಪೈಗಳನ್ನು ಕಾಣಲು ಅರವಿಂದ ಹೋಗುತ್ತಾನೆ. "ಸ್ವಾಮೀ ನಮ್ಮ ರೀಡಿಂಗ್ ರೂಮಿನಲ್ಲಿ ಹಿಂದೀ ಕ್ಲಾಸು ತೆರೆಯಬೇಕೆಂದಿದ್ದೇನೆ—ಅಂದರೆ ಬಾಡಿಗೆಯನ್ನು ಹಂಚಿ ಹಾಕಬಹುದಲ್ಲ"—ಎನ್ನುತ್ತಾನೆ. ರಾಯರು ಆಗ "ರೀಡಿಂಗ್ ರೂಮಿಗೆ ಯಾರಾದರೂ ಬರುತ್ತಾರೆಯೇ? ಈ ವರ್ಷ ಏನೇನು ಪೇಪರು ಬರುತ್ತಾ ಇವೆ. ಹಾಗೇನಾದರೂ ಬಂದರೆ ಮನೆಗೆ ಕಳುಹಿಸಬಾರದೇ. ಹಿಂದೀ ಪೇಪರು ಯಾವುದೋ [illegible]—ಚಂದ ಚಿತ್ರಗಳು ಬರುವಂಥದು—ಅದನ್ನು ಕಳುಹಿಸಿರಿ"—ಎನ್ನುತ್ತಾರೆ. "ಕಲ್ಯಾಣವೇ—ಅದರ ವರ್ಗಣಿ ಮೊನ್ನೆ ಮುಗಿತಲ್ಲ. 'ಇನ್ನು ವಿಶ್ವಮಿತ್ರ ಬರುತ್ತದೆ. ಮುಂದಿನಿಂದ ಬೇಡವೆಂದು ಮಾಡಿದ್ದೇನೆ. ಅದು ಒಳ್ಳೆ ಸಪ್ಪೆಯಾಗಿ ಕಾಣುತ್ತದೆ—ಬೇರೆ ಏನನ್ನು ಕಳುಹಿಸಲಿ"—ಎಂದು ಕೇಳುತ್ತಾನೆ ಅರವಿಂದ. "ಹೋಗಲಿ ಬಿಡಿ—ಅದರ ಜನ ಓದಲಿಕ್ಕಾದರೂ ಬರುತ್ತಾರೆಯೇ?"

೧೧ನೇ ಪುಟವನ್ನು ನೋಡಿರಿ

ಪುರೋಹಿತ ಶ್ವಾಸಹಾರಿಯಲ್ಲಿ [illegible]

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಾರತೀಯ ಪತ್ರಿಕಾ ಇತಿಹಾಸ

ಶ್ರೀ ತುಷಾರ ಕಾಂತೀ ಘೋಷರ ನಿರೂಪಣೆ

ಇನ್ನಾದರೂ ಪತ್ರಿಕೆಗಳಿಗೆ ಸ್ವಾತಂತ್ರ್ಯ ಕೊಡಲಿ!

ಲಂಡನ್ನಿನಲ್ಲಿ ಜರಗಿದ ಸಾಮ್ರಾಜ್ಯ ಪತ್ರಿಕಾ ಸಂಘದ ಸಮ್ಮೇಳನಕ್ಕೆ 'ಅಮೃತ ಬಜಾರ್ ಪತ್ರಿಕೆ'ಯ ಸಂಪಾದಕರಾದ ಶ್ರೀ. ತುಷಾರಾ ಕಾಂತಿ ಘೋಷರವರು ಕಳೆದ ೧೫೦ ವರ್ಷಗಳಿಂದ ಭಾರತ ಪತ್ರಿಕೆಗಳ ಮೇಲೆ ಶಾಸನದ ನಿರ್ಬಂಧದ ಕುರಿತು ಒಂದು ಬಿನ್ನಹವನ್ನು ಒಪ್ಪಿಸಿದ್ದಾರೆ. ಅದರ ವಿವರವು ಹೀಗೆ:—

"ಹಿಂದೂದೇಶದಲ್ಲಿ ಪತ್ರಿಕೆಗಳ ಪ್ರಚಾರ ವಾದದ್ದು ಬ್ರಿಟಿಷರ ಆಳ್ವಿಕೆಯ ಪರಿಣಾಮವಾಗಿ; ಆದರೆ ಅವುಗಳ ಪ್ರಚಾರಕ್ಕೆ ಆರಂಭಿಸಿದಂದಿನಿಂದ, ನ್ಯಾಯ ಮತ್ತು ಅನ್ಯಾಯಗಳನ್ನು ವಿವೇಚಿಸದೆ ಪತ್ರಿಕೆಗಳನ್ನು ಸದಾ ಅಧಿಕಾರಿಗಳು ತಮ್ಮ ಸ್ವಾಧೀನತೆಯಲ್ಲಿ ಇಟ್ಟುಕೊಂಡಿರಬೇಕಾಗಿ ಸದಾ ಯತ್ನಮಾಡುತ್ತಿದ್ದಾರೆ. ಯಾವುದಾದರೂ ನ್ಯಾಯ ಬದ್ಧವಾದ ಅಭಿಪ್ರಾಯವನ್ನು ಪತ್ರಿಕೆಯು ನಿರ್ಭಯವಾಗಿ ಹೇಳಲು ಸಾಧ್ಯವಿಲ್ಲ. ಇತ್ತೀಚೆಗೆ ಕೆಲವು ನಿರ್ಬಂಧಗಳನ್ನು ಕಡಿಮೆಮಾಡಿದ್ದರೂ, ಅದರಿಂದ ಸಿಗಬೇಕಾದಷ್ಟು ಸ್ವಾತಂತ್ರ್ಯವು ಸಿಗಲಿಲ್ಲ.

೧೭೮೦ರಲ್ಲಿ ಮೊದಲನೆಯ ಭಾರತೀಯ ಪತ್ರಿಕೆಯು ಹೊರಬಿತ್ತು. ಬೆಂಗಾಲ್ ಗಜೆಟ್ ಎಂಬ ಪತ್ರಿಕೆಯನ್ನು ಎಲ್ಲಾ ಪಕ್ಷಗಳಿಗೂ ಸಮವಾಗಿ, ರಾಜಕೀಯ ಮತ್ತು ವ್ಯವಹಾರ ಸಂಬಂಧವಾಗಿ ಜೇಮ್ಸ್ ಅಗಸ್ಟಸ್ ಎಂಬವರು ಆರಂಭಿಸಿದರು. ಆದರೆ ಹುಟ್ಟಿದ ಹತ್ತೇ ತಿಂಗಳ ಅವಧಿಯಲ್ಲಿ ಸರಕಾರದ ಕೋಪಕ್ಕೆ ತುತ್ತಾಗಿ ಪತ್ರಿಕೆಯು ಕೊನೆಗೊಂಡಿತು.

೧೭೯೯ರಂದು ಮದ್ರಾಸಿನಿಂದ ವೆಲ್ಲೆಸ್ಲಿಯು ಕಲ್ಕತ್ತದಲ್ಲಿದ್ದ ಅಲ್‌ಫ್ರೆಡ್ ಕ್ಲಾರ್ಕನಿಗೆ ಗುಪ್ತವಾಗಿ ಪತ್ರಿಕಾ ಸಂಪಾದಕರನ್ನು ಕಾನೂನಿನಿಂದ ತಡೆದು, ಪತ್ರಿಕೆಗಳನ್ನೂ ನಿರ್ನಾಮ ಮಾಡಬೇಕಾಗಿ ಪತ್ರ ಬರೆದಿದ್ದನು. ಈ ಹೆದರಿಕೆಯ ಫಲವಾಗಿ ಯಾವ ಪತ್ರಿಕೆಯಾದರೂ ಸರಕಾರದ ಅಧಿಕಾರಿಗಳಿಂದ ಸಂಪೂರ್ಣ ಪರಿಶೋಧಿತವಾಗದ ವಿನಹ ಪ್ರಕಟಿಸಬಾರದಾಗಿ ಆಯಿತು. ಪ್ರಕಟಿಸಿದಲ್ಲಿ ಅಂತಹವರನ್ನು ಕೂಡಲೇ ದೇಶಾಂತರಕ್ಕೆ ಕಳುಹುವ ಶಿಕ್ಷೆಯು ನಿರ್ಬಂಧಿಸಲಾಯಿತು. ೧೮೦೧ರಲ್ಲಿ ಕಲ್ಕತ್ತಾ ಗಜೇಟಿನ ಸಂಪಾದಕರಿಗೆ ಸೈನ್ಯಕ್ಕೆ ಸಂಬಂಧಿಸಿದ ಯಾವ ವಿಷಯವನ್ನು ಸರಕಾರೀ ಗಜೇಟಿನಲ್ಲಿ ಬಾರದ ವಿನಹ ಪ್ರಕಟಿಸಬಾರದಾಗಿ ಆಜ್ಞೆಯಾಯಿತು.

"೧೮೧೩ರಲ್ಲಿ ಹಾಸ್ಟಿಂಗ್ಸನು ಈ ಕೆಳಗಿನ ನಿರ್ಬಂಧನೆಗಳನ್ನು ಮಾಡಿದನು. (೧) ಎಲ್ಲಾ ಪ್ರೂಫ್‌ಶೀಟುಗಳೂ, ಅದಕ್ಕೆ ಸಂಬಂಧಿಸಿದ ಸೇರ್ಪಡೆಗಳೊಡನೆ ಚೀಫ್ ಸೆಕ್ರೆಟರಿಯವರಿಗೆ ಪರಿಶೋಧನೆಗಾಗಿ ಕಳುಹಿಸಲ್ಪಡಬೇಕು. (೨) ಎಲ್ಲಾ ಕರಪತ್ರ, ಪ್ರಕಟಣೆ ಮೊದಲಾದುವುಗಳು ಸರಕಾರದ ಗಮನಕ್ಕೆ ತರದೆ ಪ್ರಕಟಿಸಬಾರದು. (೩) ಯಾವುದಾದರೊಂದು ಮಾಲಿಕ ಕೃತಿಯ ಶಿರೋನಾಮೆಯನ್ನು ಚೀಫ್ ಸೆಕ್ರೆಟರಿಗೆ ಕಳುಹಿಸಬೇಕು. ಒಂದೋ ಆತನದನ್ನು ಪ್ರಕಟನೆಗೂ ಸಮ್ಮತಿಸಬಹುದು. (೪) ಇದಕ್ಕಿಂತ ಹಿಂದೆ ಪ್ರಕಟವಾದ ಎಲ್ಲಾ ಕಾನೂನುಗಳೂ ಸಂಪೂರ್ಣ ಪ್ರಯೋಗದಲ್ಲಿರಬೇಕು.

"೧೮೩೫ರಲ್ಲಿ ಸುಪ್ರೀಮ್ ಕೌನ್ಸಿಲಿನಲ್ಲಿ ಎಲ್ಲಾ ಪತ್ರಿಕೆಗಳನ್ನು ಸ್ವತಂತ್ರಮಾಡುವ ವಿಷಯ ಚರ್ಚಿತವಾಯಿತು. ವ್ಯಕ್ತಿಶಃ ಹಾಸ್ಟಿಂಗ್ಸನು ಪತ್ರಿಕೆಗಳ ಮೇಲೆ ಹೊರಿಸುವ ನಿರ್ಬಂಧಕ್ಕೆ ಅಡ್ಡಿಯಾಗಿದ್ದನು. ಹಾಗಾಗಿ ಹಾಸ್ಟಿಂಗ್ಸನ ಪ್ರೇರಣೆಯಿಂದ ಏಶ್ಯಾಟಿಕ್ ಮಿರರ್ ಪತ್ರಿಕೆಯ ಸಂಪಾದಕ ಡಾ. ಬ್ರೈಸೆಯವರ ಸಾಹಸದಿಂದ ಪತ್ರಿಕೆಗಳ ಮೇಲೆ ದೇಷಾನ್ವೇಷಣ ವೃತ್ತಿಯು ೧೮೧೮ರಲ್ಲಿ ಇಲ್ಲದಂತಾಯಿತು. ಲಾರ್ಡ್ ಬೆಂಟಿಂಕನ ಕಾಲದಲ್ಲಿ ಪತ್ರಿಕೆಗಳು ಹೆಚ್ಚು ನಿರ್ಬಂಧಕ್ಕೆ ಒಳಗಾಗಲಿಲ್ಲ. ಆ ಮೇಲೆ ಸರ್ ಚಾರ್ಲ್ಸ್ ಮೆಟಕಾಫೆಯ ಆಳ್ವಿಕೆಯಲ್ಲಿ ಪತ್ರಿಕಾ ಸ್ವಾತಂತ್ರ್ಯವು ಕೊಡಲ್ಪಟ್ಟಿತ್ತು. ಆತನ ರಾಜ್ಯ ನೀತಿಯು ಕಂಪನಿಗೆ ಹಿತವಾಗದೆ ಇದ್ದ ನಿಮಿತ್ತ ಆತನು ಕಂಪನಿಯ ಕೆಲಸದಿಂದ ನಿವೃತ್ತನಾಗಬೇಕಾಯಿತು. ಆಮೇಲೆ ೧೮೫೭ನೇ ಇಸವಿಯ ಸಿಪಾಯಿ ದಂಗೆಯ ವರೆಗೆ ಕಾನೂನು ಬಂಧನವು ಪತ್ರಿಕೆಗಳಿಗೆ ಬೀಳಲಿಲ್ಲ. ಅನಂತರ ಆಂಗ್ಲ ಪತ್ರಿಕೆ ಮತ್ತು ದೇಶಭಾಷಾ ಪತ್ರಿಕೆಗಳ ವಿಷಯ ಪ್ರತ್ಯೇಕ ನಿರ್ಬಂಧವು ಹೊರಿಸಲಾಯಿತು. ಇದು ಅಮೃತ ಬಜಾರ್ ಪತ್ರಿಕೆಗೇ ಸಂಬಂಧಿಸಿದ ನಿಮಿತ್ತ, ಆ ಪತ್ರಿಕೆಯನ್ನು ಇಂಗ್ಲಿಷ ಪತ್ರಿಕೆಯಾಗಿ ಮಾಡಬೇಕಾಗಿ ಬಂತು. ಈ ವ್ಯಾಕಾಸತ್ವ ಕೇವಲ ೩೪ ತಾಸುಗಳೊಳಗೇ ಪರಿಣಾಮವನ್ನು ಕೊಟ್ಟಿತು. ಈ ಕುರಿತು ಹೌಸ್ ಒಫ್ ಕಾಮನ್ಸಿನಲ್ಲಿ ಗ್ಲಾಡ್‌ಸ್ಟನ್ನನವರು ಸರಕಾರದ ಧೋರಣೆಯನ್ನು ಖಂಡಿಸಿದರು. ಆದರೆ ಅವರೇ ಹಿಂದೂದೇಶಕ್ಕೆ ಅಧಿಕಾರಿಗಳಾಗಿ ಬಂದಾಗ ತಿರಿಗಿ ಪತ್ರಿಕಾ ಶಾಸನವನ್ನು ಜಾರಿಗೆ ತಂದರು.

"ಬ್ರಿಟಿಷ್ ಸಾಮ್ರಾಜ್ಯಶಾಹಿಯು ಪತ್ರಿಕಾ ಸ್ವಾತಂತ್ರ್ಯವನ್ನು ಕೊಡಬಯಸುವುದಿಲ್ಲ. ಬ್ರಿಟಿಷ್ ಪ್ರಭುತ್ವವು ಜನರ ಸ್ವತಂತ್ರ ವಿಚಾರವನ್ನು ಹೀಗೆ ಶಾಸನದಿಂದ ಅದು ಹಿಡಿದ ಹಾನಿಯನ್ನು ಇನ್ನಾದರೂ ಮನಗಂಡು, ಪತ್ರಿಕಾ ಸ್ವಾತಂತ್ರ್ಯವನ್ನು ಕೊಡಲು ಸಮ್ಮತಿಸುವುದಾಗಿ, ನಾನು ವಿಶ್ವಾಸಪಡುತ್ತೇನೆ."

ಮನೋಹರ ಗ್ರಂಥಮಾಲಾ
ಧಾರವಾಡ.

ಸ್ವತಂತ್ರ ಕಥೆ, ಕಾದಂಬರಿ, ನಾಟಕ, ಹರಟೆ ಮೊದಲಾದ ಮನಮೆಚ್ಚಿಸುವ ಸರಸ ವಾಙ್ಮಯದ ಸುಗ್ಗಿ! ಅಖಿಲ ಕರ್ನಾಟಕದಲ್ಲಿ ಹೆಸರುಪಡೆದ ಬರಹಗಾರರ ಕೈವಾಡ ಮನದ ಹಸಿವೆಯನ್ನು ಹಿಂಗಿಸಿಕೊಳ್ಳಿ!

ಒಂದು ವರ್ಷದಲ್ಲಿ ೧೫೦೦ ಪುಟಗಳುಳ್ಳ ಆರು ಸರಸ ಗ್ರಂಥಗಳು!

ವಾರ್ಷಿಕ ಚಂದಾ ರೂ. ೩-೮-೦

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ತೋರಿಸಲಾಗುವುದು.

ವ್ಯವಸ್ಥಾಪಕ,
ಮನೋಹರ ಗ್ರಂಥಮಾಲಾ
ಧಾರವಾಡ.

PROMPTNESS!

Sadar Bazar, (Camp)
AHMEDABAD,
30TH JUNE, 1939.

THE MANAGING DIRECTOR,
The Popular Insurance Co, Ltd.,
MANGALORE.

Dear Sir,

Re· Claim Policy No. 1307 on the life of my wife Mrs· Anandi Manilal Tripathi·

I heartily congratulate and thank you for the prompt settlement of the above claim in payment of which your Bombay Branch Secretary, Mr. K. N. Gaitonde handed over the cheque for Rs. 965—7—0 on the local Branch of the Imperial Bank of India.

I am sure this prompt service of yours will go a long way in making your Company really popular in our province and I personally wish you success in this humane service.

I am also highly indebted to your Chief Agents—Messrs. B. Trivedi & Co., for their prompt services in this connection.

Thanking you again,

Yours faithfully,
(Sd) RANCHODHLAL JAYSHANKER TRIVEDI,
Headmaster, Cantonment School.

Popular Insurance Company, Ltd., MANGALORE.

ಮಂಗಳೂರು

ಹಿಂದೀ ಶಾಲೆ—ಮಂಗಳೂರು ಕೊಳೂರು ಶೆಟ್ಟಿ ರೋಡಿನ (ನ್ಯೂ ಚಿತ್ರಾ ಟಾಕೀಸಿನ ಸಮೀಪ) ಹಿಂದೀ ಮಂದಿರದಲ್ಲಿ ಇದೇ ಆಗೋಸ್ತು ೧ರಿಂದ ಹಿಂದೀ ವರ್ಗಗಳು ಪ್ರಾರಂಭಿಸಲ್ಪಡುವವು. ಪ್ರಾಥಮಿಕ ಮಧ್ಯಮಾ, ರಾಷ್ಟ್ರಭಾಷಾ, ಪ್ರವೇಶಿಕಾ, ವಿಶಾರದ ಮತ್ತು ವಿಶೇಷ ಯೋಗ್ಯತಾ ಕ್ಲಾಸುಗಳು ಮಾತ್ರವಲ್ಲದೆ ಎಸ್ ಎಸ್ ಎಲ್. ಸಿ ಯ ಹಿಂದೀ ವಿದ್ಯಾರ್ಥಿಗಳಿಗಾಗಿಯೇ ಒಂದು ದರ್ಜೆಯು ತೆರೆಯಲ್ಪಡುವದಾಗಿಯೂ, ಜುಲಾಯಿ ತಾ. ೩೧ರೊಳಗೆ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದಾಗಿಯೂ ಅದರ ಕಾರ್ಯದರ್ಶಿಗಳು ತಿಳಿಸುತ್ತಾರೆ

ವಿದ್ಯಾರ್ಥಿಗಳ ಫೆಡರೇಶನ್—ಗವರ್ನ್ಮೆಂಟ್ ಕಾಲೇಜಿನ ಸಭಾ ಮಂದಿರದಲ್ಲಿ ಮಾನ್ಯ ಶ್ರೀ ಗೋಪಾಲ ರೆಡ್ಡಿಯವರು ವಿದ್ಯಾರ್ಥಿಗಳ ಫೆಡರೇಶನಿನವರ ಮುಂದೆ ಭಾಷಣ ಮಾಡುತ್ತಾ, ಪ್ರಜೆಗಳ ಪರವಾಗಿ ಪ್ರಜೆಗಳಿಂದಲೇ ಆರಿಸಲ್ಪಟ್ಟ ಮಂತ್ರಿಗಳು ಯಾವ ರೀತಿಯಲ್ಲಿ ಕೆಲಸಮಾಡುತ್ತಾರೆಂಬುದನ್ನೂ ಅವರು ಎಷ್ಟು ಜನ ಸಂಸ್ಥೆಗಳಿಗೆ ಉತ್ತರವಾದಿಗಳಾಗಿದ್ದಾರೆಂಬುದನ್ನೂ ತಿಳಿಸಿದರು ಪತ್ರ, ವಿದ್ಯಾರ್ಥಿಗಳು ಶಿಸ್ತು ಪಾಲಿಸಬೇಕೆಂದೂ ಮುಂದಿನ ಹೋರಾಟದಲ್ಲಿ ರಾಷ್ಟ್ರಪಕ್ಷದವರು ಸಹಾಯ ಕೇಳುವಾಗ ವಿದ್ಯಾರ್ಥಿಗಳು ಮುಂದೆ ಬರಬೇಕೆಂದೂ ಹೇಳಿದರು ಡಾ ಶೆಟ್ಟಿಯವರು ಕೆಲ ಮಾತುಗಳನ್ನಾಡಿದ ನಂತರ ಶ್ರೀ ಭಾಸ್ಕರ ಶೆಟ್ಟಿಗಳ ಧನ್ಯವಾದಗಳನ್ನರ್ಪಿಸಿದರು

ಬಡವರಿಗೆ ಶಾಲೆ

ಸ್ಥಳೀಯ ಶ್ರೀ ವೆಂಕಟ್ರಮಣ ದೇವಳದ ಆಶ್ರಯದಲ್ಲೊಂದು ಬಡ ಮಕ್ಕಳಿಗಾಗಿ, ಶಾಲೆ ತೆರೆಯಲ್ಪಟ್ಟಿದೆ ಇದರಲ್ಲಿ ಈಚೆಗೆ ಆರನೇ ಕ್ಲಾಸಿನ ತನಕದ ತರಗತಿಗಳು ಆರಂಭವಾಗಿವೆ ಧರ್ಮಾರ್ಥ ಶಿಕ್ಷಣವಲ್ಲದೆ, ಊಟದ ವ್ಯವಸ್ಥೆಯೂ ಇದ್ದು, ಮಕ್ಕಳು ಬರೇ ಒಂದೆರಡು ಪುಸ್ತಕಗಳ ಖರ್ಚು ವಹಿಸಿದರೆ ಸಾಕಾಗಿದೆ ಎಂದು ತಿಳಿದುಬರುತ್ತದೆ

ಯಕ್ಷಗಾನ ಕಾಲಕ್ಷೇಪ

ಇದೇ ತಾ ೧೫ನೇ ಶನಿವಾರ ರಾತ್ರಿ ೯। ಗಂಟೆಗೆ ಸರಿಯಾಗಿ ಕದ್ರಿ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾವರ್ಧಕ ಸಂಘದ ಆಶ್ರಯದಲ್ಲಿ ಶ್ರೀ। ನಾರಾಯಣ ಅಡಪರ ಹಾಡುವಿಕೆಯಿಂದಲೂ, ಶ್ರೀ ಕಿಟ್ಟಣ್ಣ ಅಡಪರ ಮೃದಂಗ ವಾದನದಿಂದಲೂ 'ವಾಲಿ ಸಂಹಾರ-ಅಂಗದ ಸಂಧಾನ'ವೆಂಬ ಪ್ರಸಂಗದ ಯಕ್ಷಗಾನ ಕಾಲಕ್ಷೇಪವು ಜರಗಿತು

ಯುನಿವರ್ಸಿಟಿ ಎಕ್ಸ್‌ಟೆನ್ ಶನ್ ಬೋರ್ಡ್, ಮಂಗಳೂರು ೧೯೩೯-೪೦ನೇ ಬಗ್ಗೆ ಮೇಲಿನ ಬೋರ್ಡಿನ ಪುನರ್ಘಟನೆಯಾಗಿದೆ ಕಾಲೇಜುಗಳ ಪ್ರಿನ್ಸಿಪಾಲರುಗಳೂ, ಸೆನೆಟ್ ಮೆಂಬರುಗಳೂ, ಎಕೆಡೆಮಿಕ್ ಕೌನ್ಸಿಲಿನ ಸದಸ್ಯರೂ (ಮಂಗಳೂರು, ತಲಚೇರಿ, ಕಲ್ಲಿಕೋಟೆ ಈ ಕೇಂದ್ರಗಳ) ಬೋರ್ಡಿನಲ್ಲಿರುವರು ಸೈ ಎಲೋಶಿಯಸ್ ಕಾಲೇಜಿನ ಪ್ರಿನ್ಸಿಪಾಲರಾದ ರೆ ಫಾ ಟಿ ಗೊನ್ಸಾಲ್ವಿಸ್ ಎಸ್ ಜೆ ಇವರು ಚೆಯರ್ಮನರಾಗಿರುವರು ಈ ಬೋರ್ಡು ಜನರ ಪ್ರಯೋಜನಾರ್ಥವಾಗಿ ತಜ್ಞರ ಉಪನ್ಯಾಸಗಳನ್ನು ಏರ್ಪಡಿಸುವುದು ಕಳೆದ ಬುಧವಾರ (ತಾ ೧೨) ಈ ಬೋರ್ಡಿನ ಸಭೆಯು ಸೇರಿತು ೧೯೩೯-೪೦ರಲ್ಲಿ ಏರ್ಪಡಿಸಬೇಕಾದ ಉಪನ್ಯಾಸಗಳ ಕಾರ್ಯಕ್ರಮವನ್ನು ನಿಶ್ಚಯ ಮಾಡುವುದು ಸಭೆಯ ಉದ್ದೇಶವಾಗಿತ್ತು ಬೋರ್ಡಿನ ಆಶ್ರಯದಲ್ಲಿ ಉಪನ್ಯಾಸಕೊಡಲು ಅನುಕೂಲವಿರುವ ಬೋರ್ಡು ಸದಸ್ಯರೂ ಇತರ ಮಹನೀಯರೂ ಚೆಯರ್ಮನರಿಗಾಗಲಿ ಅಥವಾ ಕಾರ್ಯದರ್ಶಿಗಳಿಗಾಗಲಿ ಬರುವ ತಾ ೨೨ ರೊಳಗೆ ಬರೆದು ತಿಳಿಸಬೇಕಾಗಿ, ಎಕ್ಸ್‌ಟೆನ್ ಶನ್ ಬೋರ್ಡಿನ ಕಾರ್ಯದರ್ಶಿಗಳಾದ ಪ್ರೊ ಎಸ್ ರಾಮಚಂದ್ರ ಅಯ್ಯರ್, ಸೈ. ಎ ಕಾಲೇಜ್ ಮಂಗಳೂರು, ಇವರು ತಿಳಿಸುತ್ತಾರೆ

ತಾಲೂಕು ಸಮಾಚಾರ

ಕಾರ್ಕಳ

ಕಾರ್ಕಳ ಕೇಂದ್ರದ ಬಾಲಿಕಾ ಪಾಠಶಾಲೆಗಳ ಉಪಾಧ್ಯಾಯಿನಿಯರ ತಿಂಗಳ ಸಭೆಯು ತಾ. 1−7−1939ರ ದಿನ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ಶ್ರೀಮತಿ ಯನ್ ಭವಾನಿ ಬಾಯಿಯವರ ಅಧ್ಯಕ್ಷತೆಯಲ್ಲಿ ಕೂಡಿ, ವಿದ್ಯಾಖಾತೆಯಿಂದ ಬಂದ ಕೆಲವು ಸರ್ಕ್ಯುಲಾರುಗಳನ್ನು ಓದಿ ರೆಕಾರ್ಡು ಮಾಡಿದ ತರುವಾಯ, ಹೊಸ ಪಾಠಪಟ್ಟಿಯನ್ನು ಹೇಗೆ ಅನುಸರಿಸಬಹುದೆಂಬ ಕುರಿತು ಸಮಾಲೋಚನೆ ಮಾಡಿತು.

ದಕ್ಷಿಣಭಾರತ ಹಿಂದೀ ಪ್ರಚಾರಸಭೆಯು ಬರುವ 10-9-1939ರ ಪ್ರಾರಂಭಿಕ ಹಿಂದೀ ಪರೀಕ್ಷೆಗಳನ್ನು ಕಾರ್ಕಳ ಕೇಂದ್ರದಿಂದ ಕೊಡಲಿಚ್ಛಿಸುವ ಹಿಂದೀ ಭಾಷಾಭ್ಯಾಸಿಗಳು ಶುಲ್ಕದೊಂದಿಗೆ ತಮ್ಮ ಅರ್ಜಿದಾರ ಪತ್ರಗಳನ್ನು ಇದೇ 6-8-1939ರ ಒಳಗೆ ತನ್ನೊಡನೆ ಕೊಟ್ಟಿದ್ದಾದರೆ ಮುಂದಿನ ವ್ಯವಸ್ಥೆಯನ್ನು ಮಾಡಲಾಗುತ್ತದೆಂದು ಸ್ಥಳೀಯ ಹಿಂದೀ ಪ್ರಚಾರಕ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರ ತಿಳಿಸುತ್ತಾರೆ ಪರೀಕ್ಷಾ ಸಂಬಂಧವಾದ ಇತರ ಮಾಹಿತಿಯನ್ನೂ ಅವರಿಂದ ಪಡೆಯಬಹುದು

ಉಡುಪಿ

ಗೋಪಾಲ ಪುರದಲ್ಲಿ ಚಾತುರ್ಮಾಸ ಆಚರಣೆ—ಸಂಸ್ಕೃತ ಮಹಾ ಪಾಠಶಾಲೆಯ ಗೌರವ ಪಂಡಿತಾಚಾರ್ಯರಾದ ಶ್ರೀ ಶೀರೂರ ಮಠದ ಶಿಷ್ಯರಿಂದ ತೀರ್ಥ ಶ್ರೀಪಾದಂಗಳವರು ಕಲ್ಯಾಣಪುರದ ಗೋಪಾಲ ಪುರದಲ್ಲಿ ಇದೇ ತಾ ೧೨ರಲ್ಲಿ ಚಾತುರ್ಮಾಸ ದೀಕ್ಷೆ ವಹಿಸಿದರು

ಡಾಕ್ಟರ್ ತೋನ್ಸೆ ಶೀನ ಶೆಟ್ಟರು—ಚೆಟ್ಟಿನಾಡಿನ ಡಾಕ್ಟರಾದ ಇವರು ಉನ್ನತ ವ್ಯಾಸಂಗಕ್ಕೆ ವಿಯನ್ನ (ಯುರೋಪು) ಕ್ಕೆ ಹೋಗಿದ್ದು ಅಲ್ಲಿ ಎಂ ಡಿ ಪರೀಕ್ಷೆ ಕೊಟ್ಟು ಈಗ ಅಲ್ಲಿಂದ ಸ್ವದೇಶಕ್ಕೆ ಹೊರಟಿರುವರಾಗಿಯೂ ಇದೇ ತಾ 19ಕ್ಕೆ ಬೊಂಬಾಯಿಗೆ ತಲಪಿರುವರಾಗಿಯೂ ತಿಳಿದುಬರುತ್ತದೆ

ಚ್ಯಾರ್ಮೇನರಾದ ಶ್ರೀ ವೆಂಕಟ್ರಾಯ ಬಾಳಿಗಾ ಎಂ ಎಲ್ ಎ ಇವರು ರಾಜಿನಾಮೆಯನ್ನು ಹಿಂತೆಗೆದ ಕಾರಣ—

ಮೊದಲೇ ನಿಶ್ಚಯ ಮಾಡಿದಂತೆ ತಾ ೮ರಂದು ಮಿ ಅಲ್ಬುಕರ್ಕರ ಭಾವಚಿತ್ರವನ್ನು ಅನಾವರಣ ಮಾಡಲು ಆಗದಿರುವ ವಿಷಯದಲ್ಲಿ ಮಾನ್ಯ ಮಂತ್ರಿಗಳು ಮುನ್ಸಿಪಲ್ ಕಾಂಗ್ರೆಸ್ ಪಾರ್ಟಿಯ ಸಭೆಯಲ್ಲಿ ಭಾವಚಿತ್ರವನ್ನು ಅನಾವರಣ ಮಾಡುವ ವಿಷಯದಲ್ಲಿ ಕೌನ್ಸಿಲಿನ ಆಮಂತ್ರಣವನ್ನು ಅಲ್ಲಗಳೆದದ್ದರಿಂದ ಕೌನ್ಸಿಲಿಗೆ ಯಾವ ರೀತಿಯ ಅವಮರ್ಯಾದೆಯನ್ನೂ ಮಾಡಲು ಅಭಿಪ್ರಾಯ ಪಟ್ಟಿಲ್ಲವೆಂದೂ, ೩೧ರ ಆಗಸ್ಟ್ ತಿಂಗಳ ಆರಂಭದಲ್ಲಿ ಒಂದು ಭಾವಚಿತ್ರವನ್ನು ಅನಾವರಣ ಮಾಡುವುದಾಗಿಯೂ ಕೌನ್ಸಿಲಿನ ಕೆಲವು ಸಭಾಸದರು ಭಾವಚಿತ್ರದ ಅನಾವರಣದ ಕುರಿತು ವಿರುದ್ಧರಾಗಿರುವುದರಿಂದ ಅದಕ್ಕಾಗಿ ಸರಕಾರದಿಂದ ಸೆಂಕ್ಷನು ಪಡೆದಿದೆಯೋ ಎಂದು ಮಂತ್ರಿಗಳು ಕೇಳಿದುದಾಗಿಯೂ, ಅದಕ್ಕೆ ಭಾವಚಿತ್ರವನ್ನು ಅನಾವರಣ ಮಾಡಲು ಅವರಿಗೆ ಆಮಂತ್ರಣ ಕೊಡುವ ಮೊದಲೇ ಅಂತಹ ಸೆಂಕ್ಷನನ್ನು ಸರಕಾರದಿಂದ ಪಡೆದಿರುವುದಾಗಿಯೂ, ವಿವರಿಸಲಾಯಿತು. ಹಾಗಾಗಿ ಮಂತ್ರಿಗಳ ಅಭಿಪ್ರಾಯಕ್ಕೆ ಸಮ್ಮತಿಸಿಯೂ ಮತ್ತು ಪಕ್ಷದ ಅನುಜ್ಞೆಗೆ ಸರಿಯಾಗಿಯೂ ತಾನು ರಾಜಿನಾಮೆಗೆ ಕೊಟ್ಟ ನೋಟೀಸನ್ನು ಹಿಂತೆಗೆದಿರುವದಾಗಿ ಚ್ಯಾರ್ಮ್ಯಾನರಾದ ಶ್ರೀ. ವೆಂಕಟ್ರಾಯ ಬಾಳಿಗರು ಸ್ಪಷ್ಟೀಕರಿಸುತ್ತಾರೆ

ಎಯಿಡೆಡ್ ಶಾಲೆಗಳ ಮೆನೇಜರರ ಯೂನಿಯನ್—ಸ್ಥಾಪನೆಯು ಇದೇ ತಾ 15ನೇ ಬೆಳಿಗ್ಗೆ ಘಂ. 9ಕ್ಕೆ ಉಡುಪಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿಯೂ ಮಧ್ಯಾಹ್ನ 3ಕ್ಕೆ ಮೆನೇಜರರ ಪರಿಷತ್ತು ಡಾ. ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿಯೂ ಜರಗಿತು

ಹೊಸದುರ್ಗ—ಮಾನ್ಯ ಮಂತ್ರಿ ರೆಡ್ಡಿಯವರು ಇಲ್ಲಿಗೆ ಇದೇ ಕಳೆದ ತಾ 12ನೇ ಬುಧವಾರ ಅಪರಾಹ್ನ ೨-೪೦ರ ರೈಲುಗಾಡಿಗೆ ಚಿತ್ತೈಸಿದರು.

ಬೋ ಹಾ ಎ. ಶಾಲೆಯಲ್ಲಿ ಸಾರ್ವಜನಿಕ ಸಭೆ ಜರಗಿ ಮಾನಪತ್ರಗಳು ಸಮರ್ಪಿಸಲ್ಪಟ್ಟವು

ನೀಲೇಶ್ವರದಲ್ಲಿ:—ಹೊಸದುರ್ಗದ ಕಾರ್ಯಕ್ರಮವನ್ನು ತೀರಿಸಿ, ಬೋರ್ಡು ಅಧ್ಯಕ್ಷರಿಂದ ಡಾ, ವಿಟ್ಠಲ ಸೆಟ್ಟರೊಡನೆ ಕಳೆದ ಬುಧವಾರ ಸಂಜೆ ಇಲ್ಲಿಗೆ ಚಿತ್ತೈಸಿದರು

ಊರ ಕಡವಿನ ಬಳಿ ಪುರನಿವಾಸಿಗಳವರನ್ನಿದಿರುಗೊಂಡರು ರಾಜಾಸ್ ಹೈಸ್ಕೂಲಿನ ತನಕ ಮೆರವಣಿಗೆ ನಡೆಯಿತು ಶ್ರೀ। ಸಿ ಕೆ. ರಾಘವನ್ ನಂಬಿಯಾರರು ಶಾಲಾ ಮುಖ್ಯೋಪಾಧ್ಯಾಯರೇ ಮೊದಲಾದವರೊಡನೆ, ಮಂತ್ರಿಗಳನ್ನಿದಿರ್ಗೊಂಡ ಪುಷ್ಪಹಾರಗಳನ್ನಿತ್ತು ಸತ್ಕರಿಸಿದರು

ವಿದ್ಯಾರ್ಥಿ ಸಂಘದವರ ಮಾನಪತ್ರ—ಮರುದಿನ (ತಾ ೧೩) ಗುರುವಾರ ಬೆಳಿಗ್ಗೆ ೮-೩೦ಕ್ಕೆ ಶಾಲೆಯನ್ನು ಸಂದರ್ಶಿಸಿದರು ಹಾಲಿನಲ್ಲಿ ಸಭೆಜರಗಿ ಶಾಲೆಯ ವಿದ್ಯಾರ್ಥಿ ಸಂಘದ ಪರವಾಗಿ ಮಹಮ್ಮದ್ ಕುಂಞಂಬುರವರು ಮಂತ್ರಿಗಳಿಗೆ ಮಾನಪತ್ರವನ್ನರ್ಪಿಸಿದರು

ಮಂತ್ರಿಗಳು ವಿದ್ಯಾರ್ಥಿಗಳಿಗೆ ಸದುಪದೇಶವನ್ನು ಕೊಟ್ಟು ೯-೧೦ರ ಗಾಡಿಗೆ ಚರವತ್ತೂರಿಗೆ ಪ್ರಯಾಣ ಬೆಳೆಸಿದರು.

ಚರ್ವತ್ತೂರು—ಗ್ರಾಮ ರಾಷ್ಟ್ರೀಯ ಸಮ್ಮೇಲನ—ಇಲ್ಲಿಗೆ ಚಿತ್ತೈಸಿದ ಮಂತ್ರಿಯವರು ಇಲ್ಲಿನ ಗ್ರಾಮ ರಾಷ್ಟ್ರೀಯ ಸಮ್ಮೇಲನದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಶ್ರೀ ಸಿ ಕೆ ರಾಘವನ್ ನಂಬಿಯಾರರು ಧ್ವಜಾರೋಹಕರಾಗಿದ್ದರು. ಜಿ ಬೋರ್ಡು ಅಧ್ಯಕ್ಷರು ಅಗ್ರಾಸನವನ್ನು ಅಲಂಕರಿಸಿದ್ದರು

ಕಾಸರಗೋಡು

ಮಂತ್ರಿಗಳ ಆಗಮನ ತಾ ೧೪ರಲ್ಲಿ ಮಂತ್ರಿಗಳಾದ ಮಾನ್ಯ ಶ್ರೀ ಗೋಪಾಲ ರೆಡ್ಡಿಯವರು ಇಲ್ಲಿಗೆ ಚಿತ್ತೈಸಿದರು ವಿ. ಮಹಮದ್ ಚವನ್ನಾಡ್ ಸಾಹೇಬರು ಮಾನ್ಯ ಮಂತ್ರಿಗಳಿಗೂ ಅವರ ಕಾರ್ಯದರ್ಶಿಗಳಾದ ಶ್ರೀ ಭಕ್ತವತ್ಸಲಂರವರಿಗೂ ಪುಷ್ಪಹಾರಗಳನ್ನು ಸಮರ್ಪಿಸಿದರು ಪಂಚಾಯತ ಬೋರ್ಡು ಅಧ್ಯಕ್ಷರು ಮಾನಪತ್ರವನ್ನು ಅರ್ಪಿಸಿದರು

ಕರ್ನಾಟಕ

ಮೈಸೂರು

ಕುಟುಂಬ ಸಹಿತ ಯುವರಾಜರ ಯುರೋಪು ಯಾತ್ರೆ

ಶ್ರೀ. ಮದ್ಯುವರಾಜ ಶ್ರೀ ಕಂಠೀರವ ನರಸಿಂಹ ರಾಜ ಒಡೆಯರವರೂ ಶ್ರೀ ಮದ್ಯುವರಾಣಿಯವರೂ ಪ್ರಿನ್ಸ್ ಜಯಚಾಮರಾಜ ಒಡೆಯರವರೂ ಪ್ರಿನ್ಸೆಸ್ ಸತ್ಯ ಪ್ರೇಮಾ ದೇವಿಯವರೂ ಯುವರಾಜ ಕುಮಾರಿಯರಾದ ವಿಜಯ, ಸುಜಯ ಮತ್ತು ಶ್ರೀ ಜಯ ಚಾಮುಂಡಮ್ಮಣಿಯವರೂ ಯುರೋಪಿನಲ್ಲಿ ಪ್ರವಾಸ ಮಾಡಿ ನೇಪಲ್ಸ್, ರೋಂ, ಪ್ಯಾರಿಸ್, ಜಿನೀವಾ, ಬರ್ಲಿನ್, ವಿಯನ್ನಾ, ಲಂಡನ್ ಮುಂತಾದ ಪ್ರಧಾನ ನಗರಗಳನ್ನು ಸಂದರ್ಶಿಸಿ ಮುಂದಕ್ಕೆ ಅಮೇರಿಕಕ್ಕೆ ಪ್ರಯಾಣಮಾಡಿ ನವರಾತ್ರಿ ಮಹೋತ್ಸವ ಸುಮಾರಿಗೆ ರಾಜಧಾನಿಗೆ ಹಿಂತಿರುಗಲಿರುವರು.

ಶ್ರೀಮದ್ಯುವರಾಣಿಯವರೂ, ಯುವರಾಜ ಕುಮಾರರೂ ಮತ್ತು ಕುಮಾರಿಯರೂ ಪರಿವಾರದ ಇನ್ನಿತರರೂ ಬೆಂಗಳೂರಿಗೆ ಪ್ರಯಾಣ ಮಾಡಿದರು ಮೈಸೂರಿನ ಪ್ರಜೆಗಳು ರಾಜಮನೆತನದವರಿಗೆ ಸುಖ ಸಮುದ್ರ ಯಾನವನ್ನು ಬಯಸುತ್ತಿರುವರು.

ಯೋಗ್ಯತಾಪತ್ರ ದಾನ

ಕಳೆದ ೧೨ನೇ ತಾರೀಕು ಸಂಧ್ಯಾಕಾಲ ಪೌರ ಭವನದಲ್ಲಿ ಹಿಂದೀ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಯೋಗ್ಯತಾ ಪತ್ರ ವಿನಿಯೋಗ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು. ಈ ಸಮಾರಂಭದಲ್ಲಿ ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭೆಯ ಅಧ್ಯಕ್ಷರಾದ ಶ್ರೀಮಾನ್ ಆರ್ ಆರ್ ದಿವಾಕರ್ ಅವರು ಅಗ್ರಾಸನವನ್ನಲಂಕರಿಸಿದ್ದರು ಶ್ರೀ ಆಚಾರ್ಯ ಕಾಕಾ ಕಾಲೇಲ್ಕರ್ ಅವರು ಅಭಿಭಾಷಣ ಮಾಡಿದ್ದರು

ಬೆಳಗಾವಿ

ಉಪನ್ಯಾಸ—ಕರ್ನಾಟಕದ ಉತ್ಕೃಷ್ಟ ಗ್ರಂಥ ಕರ್ತೃಗಳಾದ, ಶ್ರೀಮಾನ್ ಕೆ ಭಾ ಜೋಶಿಯವರು ಕನ್ನಡ ಶಬ್ದದ ಉತ್ಪತ್ತಿಯ ಮೇಲೆ ಒಂದು ಉತ್ತಮ ವಾದ ಉಪನ್ಯಾಸಕೊಟ್ಟರು

ಮುಷ್ಕರ

ಸಾಂಗಲಿ ಸಂಸ್ಥಾನದವರು ತಮ್ಮ ಹಾದಿಯಲ್ಲಿ ಹಾದು ಹೋಗುವ ಮೋಟಾರುಗಳಿಗೆ ಬಹಳ ಟೇಕ್ಸು ವಿಧಿಸಿದ್ದರಿಂದ, ಇಲ್ಲಿಯ ಮೋಟಾರು ಯೂನಿಯನಿನವರು ಸಂಪು ಹೂಡುವವರಿದ್ದಾರೆಂದು ವಾರ್ತೆ

ಧಾರವಾಡ

ಮುಂಬೈ ಸರಕಾರದ ಕನ್ನಡ ಪಠ್ಯಪುಸ್ತಕ ಸಮಿತಿಗೆ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಪ್ರೊ ಎಸ್ ಎಸ್ ಬಸವನಾಳ ಎಂ ಎ. ಇವರು ಸಂಘದ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದಾರೆ

ವೀರರಾಜಪೇಟೆ

ತಲಚೇರಿ ಕಡೆಗೆ ಹೋಗುತ್ತಲಿದ್ದ ಬಸ್ ಒಂದು ಮಕ್ಕಿ ಸಿಂತ ಮತ್ತೊಂದಕ್ಕೆ ದಾಟಲು ಎಡೆಕೊಡುವ ಸಂದರ್ಭದಲ್ಲಿ ಹೊರಗೆ ತಲೆ ಹಾಕಿ ಕುಳಿತಿದ್ದ ಒಬ್ಬ ಪ್ರಯಾಣಿಕನ ಕತ್ತು ಹಿಸುಕಿದಂತಾಗಿ ಆ ನಿರ್ಭಾಗ್ಯನು ತತ್‌ಕ್ಷಣವೇ ಮೃತಪಟ್ಟನಾಗಿ ಸುದ್ದಿ ಪೋಲಿಸ್ ತನಿಖೆ ನಡೆಯುತ್ತಲಿದೆ

ಹಿಂದೂ ಅನಾಥಾಶ್ರಮ

ಶಾಂತಿನಿಕೇತನ : : ಕೊರಾಡಿ

ನಿರ್ಗತಿಕ ಮಕ್ಕಳ ನೀತಿ ಬೋಧೆಗೆ ನಿರುಪಮ ಸೌಕರ್ಯ. ಶಾಂತವಾದ ವಾತಾವರಣದ ಶಾಂತಿನಿಕೇತನ ಬಾಲಕರಿಗೆ ಸುಭದ್ರವಲ್ಲಿ ವಿದ್ಯೆ ಕಲಿಸಲು ಸಕಲರೂ

ಈಗ ತಾನೇ ತೆರೆಯಲ್ಪಟ್ಟ ಅನಾಥಾಶ್ರಮಕ್ಕೆ ಆಶ್ರಯ ಮಕ್ಕಳನು ಕಳುಹಿಸಿರಿ

ಅನಾಥರು ಅನುಭವಕ್ಕೆ ಬರೆಯಿರಿ—

ಎಲ್ಲಾ ಜಾತಿಯವರಿಗೂ ಪ್ರವೇಶವಿದೆ.

ಮೆನೇಜರ್, ಶಾಂತಿನಿಕೇತನ, ಕೊರಾಡಿ, (ದ. ಕ.)

ಸಿಲೋನಿನಲ್ಲಿ ಕಾಂಗ್ರೆಸಿನ ರಾಯಭಾರೀ ನೆಹರುಗಳು

ಸಿಲೋನಿನಲ್ಲಿ ನೆಹರುಗಳು

ಹಿಂದೀಯ ರಾಯಭಾರಿಗಳಾಗಿ ಸಿಲೋನಿಗೆ ಬಂದಿಳಿದ ಪಂಡಿತ ನೆಹರುಗಳಿಗೆ ಸಿಲೋನಿನಲ್ಲಿ ಅಪೂರ್ವ ಸ್ವಾಗತವು ದೊರೆಯಿತು. ಇವರ ಆಗಮನದಿಂದ ಅಲ್ಲಿನ ಭಾರತೀಯರ ಹೃದಯದಲ್ಲಿ ತಮ್ಮ ಹಿಂದಿನ ದೌರ್ಭಾಗ್ಯದ ದಿನಗಳು ಮಾಯವಾದುವೆಂದು ಸಂತೋಷವು ಹೆಚ್ಚಿದಂತೆ ತೋರುತ್ತಿತ್ತು.

ಸಿಲೋನಿನಲ್ಲಿ ವಾಸಿಸಿರುವ ಸಾವಿರಾರು ಮಂದಿ ಹಿಂದೀಯರು ವಿಮಾನ ನಿಲ್ದಾಣಕ್ಕೆ ಬಂದು ತಮ್ಮ ಭಾಗ್ಯವಿಧಾತನಾಗಿ ಬಂದ ನೆಹರುಗಳನ್ನು ಬಹಳ ಸಂಭ್ರಮದಿಂದ ದರ್ಶನಮಾಡಿದರು. ಅದು ಹಿಂದೂದೇಶದ ರಾಯಭಾರಿಗೆ ಉಚಿತವಾದ ಸ್ವಾಗತವಾಗಿತ್ತು. ಸಿಂಹಳದ ಪ್ರಧಾನ ಮಂತ್ರಿಗಳು ಅಸೌಖ್ಯದ ನಿಮಿತ್ತ ಹಾಜರಾಗಲು ಸಾಧ್ಯವಾಗದೆ ಅವರ ಪರವಾಗಿ ಮೇಜರ್ ಕೊತ್ಲವಾಲರೆಂಬ ಮಂತ್ರಿಗಳು ಸ್ವಾಗತ ಮಾಡಲು ಬಂದಿದ್ದರು.

ಒಂದು ತಾಸಿನವರೆಗೆ ಜನತೆಯ ಗೊಂದಲವು ನಿಂತಿರಲಿಲ್ಲ.

ತಾ. ೧೭ರಂದು ಮಂತ್ರಿಮಂಡಲದೊಡನೆ ಸಂಭಾಷಣೆಯನ್ನು ಆರಂಭಿಸಿದರು. ಅನಾರೋಗ್ಯವನ್ನೂ ಗಣಿಸದೆ ಪ್ರಧಾನ ಮಂತ್ರಿಯವರು ಸಂಭಾಷಣೆಗೆ ಬಂದಿರುವರು ಮಂತ್ರಿಗಳು ತಮ್ಮ ನಿರ್ಧಾರಕ್ಕೆ ಯಾವುದೊಂದು ಕಡಿಮೆಮಾಡಲು ಮನಸ್ಸಿಲ್ಲದವರಾಗಿದ್ದರೂ, ಅನ್ಯೋನ್ಯ ಸೌಹಾರ್ದದ ಮಾತುಗಳಿಂದ ಒಳ್ಳೆಯ ಇತ್ಯರ್ಥವು ಆಗುವುದಾಗಿ ತಿಳಿಯುತ್ತದೆ. ೧೮ರಂದು ಅವರು ಇನ್ನೊಮ್ಮೆ ಭೇಟಿಯಾಗುವರು. ಅವರು ಅನೇಕ ಹಿಂದೀ ಪ್ರತಿನಿಧಿಗಳನ್ನು ಕಂಡು ಮಾತನಾಡಿದರು. ಮಂತ್ರಿಮಂಡಲವೂ ಪ್ರತ್ಯೇಕ ಸಭೆ ಸೇರುವುದು. ಸಿಲೋನಿಯರ ವಿಷಯವಾಗಿಯೂ ನೆಹರುಗಳು ಸಂಪೂರ್ಣ ಅನುಭವವಮಾಡಿಕೊಳ್ಳುವರು.

ಶಿಸ್ತು ಜಾರಿಯ ಕುರಿತು ಬೋಸರ ಹೇಳಿಕೆ.

"ಇಂತಹ ಸಮಯದಲ್ಲಿ ನಮ್ಮ ಮೇಲೆ ಶಿಸ್ತು ಜಾರಿಮಾಡುವುದರಿಂದ ನಮಗೆ ಒಳ್ಳೆಯದೆ ಆಗಲಿದೆ. ಅದರಿಂದ ನಾವು ಇನ್ನಷ್ಟು ಮಹಾಜನರ ಸಹಾನುಭೂತಿಯನ್ನು ಪಡೆಯುವೆವು. ನಾವು ಹಾಗೆಮಾಡಲು ನಿಶ್ಚಯಿಸಿದಾಗ ಬಾಬು ರಾಜೇಂದ್ರ ಪ್ರಸಾದರು ಅಂತಹ ಪ್ರಕಟಣೆ ಹೊರಡಿಸುವದಾಗಿ ತಿಳಿದಿರಲಿಲ್ಲ. ಪ್ರಸಾದರ ಅಂತಹ ಹೇಳಿಕೆಯ ಪ್ರಕಟಣೆಯಿದ್ದರೂ ಇಡೀ ದೇಶದಲ್ಲಿ ಬಹುಸಂಖ್ಯಾತರು ಆ ದಿನಾಚರಣೆ ಮಾಡಿರುವುದಾಗಿ ಕೇಳುತ್ತೇವೆ." ಹೀಗೆಂದು ಬೋಸರು ಪತ್ರಿಕಾ ಪ್ರತಿನಿಧಿಯೊಡನೆ ಹೇಳಿದರು.

ತಿರುಚಿನಾಪಳ್ಳಿಯಲ್ಲಿಯೂ ದೇಗುಲ ಪ್ರವೇಶ.

ತ್ರಿಚಿನಾಪಳ್ಳಿ ಜಿಲ್ಲೆಯ ಪುವಲೂರೆಂಬಲ್ಲಿನ ದೇವಾಲಯವನ್ನು ತೆರೆಯುವುದಾಗಿ ಅದರ ಅಧಿಕಾರಿಗಳು ಜಿಲ್ಲಾ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಿಗೆ ಬರೆದರು. ಇಡೀ ಜಿಲ್ಲೆಗೆ ತಾವು ಮಾದರಿ ತೋರಿಸುವುದಾಗಿಯೂ ಅವರು ತಿಳಿಸಿದ್ದರು. ಅನೇಕ ಸ್ಥಳೀಯ ಕಾಂಗ್ರೆಸು ಕೆಲಸಗಾರರು ೨೦ ಮಂದಿ ಹರಿಜನರನ್ನು ಕೂಡಿಸಿಕೊಂಡು ಅಲ್ಲಿ ದೇವಸ್ಥಾನ ಪ್ರವೇಶಮಾಡಿ ಸಾಯಂಕಾಲ ಭಜನಾದಿಗಳನ್ನು ಮಾಡಿದರು. ಅರ್ಚಕರು ಸಂತೋಷದಿಂದ ಹರಿಜನರಿಗೆ ಪ್ರಸಾದವನ್ನಿತ್ತರು. ದೇವಾಲಯದ ಅಧಿಕಾರಿಗಳು ಅವರನ್ನು ಸಂಭ್ರಮದಿಂದ ಸ್ವಾಗತಮಾಡಿದರು.

ಬೊಂಬಾಯಿಯಲ್ಲಿ ಸೈಕಲು ತಯಾರಿಯಾಗುವುದು.

ಲಂಡನಿನಿಂದ ಕೋಟ್ಯಂತರ ರೂಪಾಯಿಗಳ ಬೆಲೆಯ ಸೈಕಲುಗಳು ಹಿಂದೂದೇಶಕ್ಕೆ ವರ್ಷಂಪ್ರತಿ ರವಾನಿಸಲ್ಪಡುತ್ತದೆ. ಜಪಾನು ಸಂಯುಕ್ತ ಅಮೇರಿಕ ಮೊದಲಾದೆಡೆಗಳಿಂದಲೂ ಬಹು ಸೈಕಲುಗಳು ಬರುತ್ತಿವೆ. ಇಂಗ್ಲಿಷು ಸೈಕಲುಗಳಂತಹುಗಳನ್ನೇ ಹಿಂದೂದೇಶದಲ್ಲಿ ಕಡಿಮೆ ಬೆಲೆಗೆ ತಯಾರು ಮಾಡಲು ಸಾಧ್ಯವಿರುವುದಾಗಿ ತಿಳಿದಿದೆ. ಇಂಡಿಯಾ ಸೈಕಲ್ ಲಿಮಿಟೆಡ್ ಎಂಬೊಂದು ಸಂಸ್ಥೆಯು ೨೫ ಲಕ್ಷ ರೂಪಾಯಿಗಳ ಮೂಲಧನದಿಂದ ಸೈಕಲು ತಯಾರಿಗಾಗಿ ಸ್ಥಾಪಿತವಾಗಿದೆ.

ಶಿಸ್ತು ಜಾರಿಯ ಕುರಿತು ಸುಭಾಷರ ಹೇಳಿಕೆ

ಎಲ್ಲೆಲ್ಲಿಯೂ ದೇವಸ್ಥಾನ ಪ್ರವೇಶ!

ಸಂಪಾದಕರು ಸ್ಕೂಲ್ ಫೈನಲಾದರೂ ಆಗಬೇಡವೇ?

ಫಾರ್ವಾರ್ಡ್ ಬ್ಲಾಕಿನಿಂದ ರೋಯಿಸ್ಟ್ ಪಂಗಡವು ಬೇರೆಯಾಯಿತು.

ಬೊಂಬಾಯಿಯಲ್ಲಿ ಶ್ರೀ. ಎಂ. ಎನ್. ರೋಯಿಯವರ ಅಧ್ಯಕ್ಷತೆಯಲ್ಲಿ ಸೇರಿದ ರ್‍ಯಾಡಿಕಲ್ ಕಾಂಗ್ರೆಸು ಪಕ್ಷದ ಸಭೆಯೊಂದರಲ್ಲಿ, ಈ ಪಕ್ಷವು ಫಾರ್ವಾರ್ಡ್ ಬ್ಲಾಕಿನಿಂದ ಸಂಪೂರ್ಣ ಬೇರೆಯಾಗಿರಬೇಕಾಗಿ ನಿರ್ಣಯವಾಯಿತು. ಹಾಗಾಗಿ ಈ ಪಂಗಡದ ಮೂರು ಪ್ರತಿನಿಧಿಗಳ ಸಂಯುಕ್ತ ಎಡಪಕ್ಷದ ಸಮಿತಿಯಿಂದ ರಾಜಿಯಿತ್ತಿರುವರು.

ಅಖಿಲಭಾರತ ಕಾಂಗ್ರೆಸು ಅಧಿವೇಶನ.

ರಾಮನಗರದಲ್ಲಿ ನಡೆಯಲಿರುವ ಬರುವ ಕಾಂಗ್ರೆಸು ಅಧಿವೇಶನದ ಮುಖ್ಯ ಚಪ್ಪರದಲ್ಲಿ ೬೦,೦೦೦ ಮಂದಿಯು ಉಳಕೊಳ್ಳಲು ಸ್ಥಳ ಮಾಡಿದೆ. ಸಬ್‌ಜೆಕ್ಟ್ ಸಮಿತಿಯ ಚಪ್ಪರದಲ್ಲಿ ೫,೦೦೦ ಮಂದಿಗೆ ಉಳಕೊಳ್ಳಲು ಸ್ಥಳಮಾಡುತ್ತದೆ. ೧೦,೦೦೦ ರೂಪಾಯಿಗಳ ವೆಚ್ಚದಿಂದ ಪ್ರದರ್ಶನ ಮಂದಿರಗಳು ನಿರ್ಮಿಸಲ್ಪಡುವವು ೩,೦೦೦ ಮಂದಿ ಪ್ರತಿನಿಧಿಗಳಿಗೆ, ೩,೦೦೦ ಮಂದಿ ಪ್ರೇಕ್ಷಕರಿಗೆ, ೪,೦೦೦ ಮಂದಿ ಕೆಲಸಗಾರರಿಗೆ ಮತ್ತು ಸ್ವಯಂಸೇವಕರಿಗೆ ಉಳಕೊಳ್ಳಲು ೨೦೦ ಗುಡಿಸಲುಗಳು ಕಟ್ಟಲ್ಪಡುವವು ಕುಟುಂಬ ಸಹಿತ ಬರುವವರಿಗೂ ಸೌಕರ್ಯಮಾಡಲಾಗುವುದು. ಮಹಾತ್ಮಾಜಿ ಮತ್ತು ಪ್ರಮುಖರಾದವರಿಗೆ ಪ್ರತ್ಯೇಕ ಮನೆಗಳು ಏರ್ಪಡಿಸಲಾಗಿದೆ ಇದಕ್ಕೆಲ್ಲಾ ೫೦,೦೦೦ ರೂಪಾಯಿಗಳು ಬೇಕಾಗುವವಾಗಿ ನಿಶ್ಚಯಿಸಲಾಗಿದೆ.

ಸುಭಾಷರ ಕರ್ನಾಟಕ ಯಾತ್ರೆ.

ಫಾರ್ವಾರ್ಡ್ ಬ್ಲಾಕಿನ ಪ್ರಚಾರಕ್ಕಾಗಿ ಹೊರಟ ಸುಭಾಷ ಚಂದ್ರ ಬೋಸರು ಧಾರವಾಡ ಹುಬ್ಬಳ್ಳಿ ಮೊದಲಾದ ಕಡೆಗಳಲ್ಲಿ ಪ್ರಯಾಣಮಾಡಿದರು ಬೋಸರ ಕರ್ನಾಟಕ ಯಾತ್ರೆಯಲ್ಲಿ ಮರಾಠರ ಮುಖಂಡರಾದ ಸೇನಾಪತಿ ಬಾಪಟ್‌ರವರು ಅವರ ಜತೆಯಲ್ಲಿದ್ದರು. ಬೆಳಗಾಂ ಹಾವೇರಿ ಮೊದಲಾದೆಡೆಗಳಲ್ಲಿ ಸುಭಾಷರು ಪ್ರಚಾರ ಹೊರಟರು

ಕರ್ನಾಟಕ ಪ್ರಾಂತಿಕ ಫಾರ್ವಾರ್ಡ್ ಬ್ಲಾಕ್ ಸಮಿತಿ

ಕರ್ನಾಟಕದಲ್ಲಿ ಫಾರ್ವಾರ್ಡ್ ಬ್ಲಾಕಿನ ಪ್ರಚಾರಕ್ಕಾಗಿ ನಿಯಮಿತರಾದ ಕಾರ್ಯದರ್ಶಿ ಶ್ರೀ. ಮಂಡ್ಲಿಯವರು ಬೇಗನೇ ತನ್ನ ಪ್ರಚಾರವನ್ನು ಸುರುಮಾಡುವರಂತೆ ಇಂದಿನ ಪ್ರಾಂ. ಕಾಂ. ಕಮಿಟಿಯ ಅಧ್ಯಕ್ಷರಾದ ಹೊಸಮನಿ ಸಿದ್ಧಪ್ಪನವರೇ ಅಧ್ಯಕ್ಷರಾಗಿ ಚುನಾಯಿತರಾಗಿರುವರಂತೆ.

ಸರ್ ಎಸ್. ರಾಧಾಕೃಷ್ಣರವರಿಗೆ ಗೌರವ.

ಹಿಂದೀಯರಲ್ಲಿ ಮೊತ್ತಮೊದಲನೆಯವರಾಗಿ ಸರ್ ಸರ್ವೆಪಳ್ಳಿ ರಾಧಾಕೃಷ್ಣನ್‌ರವರು ಬ್ರಿಟಿಷ್ ಎಕಡಮಿಯ ಫೆಲೋ ಆಗಿ ಆರಿಸಲ್ಪಟ್ಟಿರುವರು.

ಸಿಲೋನಿಗೆ ನೆಹರುಗಳು ತೆರಳಿದರು.

ಸಿಲೋನಿಗೆ ಕಾಂಗ್ರೆಸ್ ಕಡೆಯ ರಾಯಭಾರಿಗಳಾಗಿ ನೆಹರುಗಳು ಪ್ರತ್ಯೇಕ ವಿಮಾನದಲ್ಲಿ ಸಹೋದರಿಯಾದ ಕೃಷ್ಣಾ ಹಾತಿಸಿಂಗ್ ರೊಡನೆ ಹೊರಟರು. ಹೋಗುವಾಗ ದಾರಿಯಲ್ಲಿ ಮದ್ರಾಸಿನಲ್ಲಿ ಒಮ್ಮೆ ಇಳಿಯುವರು. ಜುಲೈ ಅಂತ್ಯದಲ್ಲಿ ಚೈನಾಕ್ಕೆ ನೆಹರುಗಳು ಹೋಗಲಿರುವರುವರೆಂದು ಪ್ರಕಟವಾದ ವಾರ್ತೆಯು ಸರಿಯಲ್ಲವೆಂದು ನೆಹರುಗಳು ತಿಳಿಸಿರುವರು.

ಪತ್ರಿಕಾ ಸಂಪಾದಕರು ಸ್ಕೂಲ್ ಫೈನಲಾದರೂ ಆಗಬೇಡವೇ?

ಹಿಂದೂದೇಶದಲ್ಲಿರುವ ಸಣ್ಣ ಸಣ್ಣ ಪತ್ರಿಕೆಗಳ ನೈತಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಬಗ್ಗೆ ಪತ್ರಿಕಾ ಸಂಪಾದಕರಿಗೆ ಕಡಿಮೆಯಾಗಿ ಇರಬೇಕಾದ ವಿದ್ಯಾಯೋಗ್ಯತೆಯ ಕುರಿತು ನಿರ್ಬಂಧಿಸುವರೆ ಒಂದು ಕಾನೂನನ್ನು ಸೆಂಟ್ರಲ್ ಎಸೆಂಬ್ಲಿಯಲ್ಲಿ ತರುವರೆ ಶ್ರೀ. ಲಾಲಾ ಚಾಂದ್ ಅನವಾಲರಾಯ್‌ಯವರು ನೋಟೀಸು ಕೊಟ್ಟಿರುವರು. ಹಿಂದೂದೇಶದ ಯಾವುದೆ ಯುನಿವರ್ಸಿಟಿಯಲ್ಲಾಗಲಿ ಕಡಿಮೆಯಾಗಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದದವನು ಸಂಪಾದಕನಾಗಲು ಅರ್ಹನಾಗುವುದಿಲ್ಲವೆಂದು ಅದರಲ್ಲಿ ಇದೆ

ಭಾರತದ ಕೇಂದ್ರಶಕ್ತಿಯು ವಾರ್ಧಾದಲ್ಲಿದೆ.

ಬ್ರಿಟನಿನ ಭಾರತ ಹಿತೈಷಿಗಳಲ್ಲೊಬ್ಬರಾದ ಮಿಸ್ ಅಗಥಾ ಹೆರಿಸ್ಸನರವರು ಹಿಂದೂದೇಶದಿಂದ ಮರಳಿ ಇಂಗ್ಲೆಂಡಿನಲ್ಲಿ ಒಂದು ಭಾಷಣದಲ್ಲಿ ಗಾಂಧಿಜಿಯವರ ಕುರಿತು ಹೀಗೆನ್ನುತ್ತಾರೆ

"ಕಳೆದ ಏಳು ತಿಂಗಳಿಂದ ನಾನು ಹಿಂದೂದೇಶದಲ್ಲಿ ಕಂಡ ದೃಶ್ಯ! ಆ ಘಟನೆಗಳು ಚೇತೋಹಾರಿಯಾಗಿವೆ ಹಿಂದೂದೇಶದ ಸ್ತ್ರೀಯರು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾರ್ಯವು ಅದ್ಭುತ ಆವೇಶಗೊಳಿಸುವಂತಹುದು ಹಿಂದೂದೇಶದ ಸಮಸ್ಯೆಯನ್ನು ನಾವು ಬಗೆಹರಿಸದಿದ್ದರೆ, ಲೋಕಶಾಂತಿಗಾಗಿ ನಾವು ಮಾಡುವ ಎಲ್ಲಾ ಕಾರ್ಯಗಳೂ ವ್ಯರ್ಥ!

"ಹಿಂದೂದೇಶದ ಎಲ್ಲಾ ಪ್ರಾಂತದ ಜನರೂ ವಾರ್ಧಾದಲ್ಲಿರುವ ಆ ಮಹಾತ್ಮರಲ್ಲಿಗೆ ಉಪದೇಶಕ್ಕಾಗಿ ಬರುತಿದ್ದಾರೆ. ಮಹಾತ್ಮಾ ಗಾಂಧಿಯವರ ವ್ಯಕ್ತಿತ್ವವು ಅದ್ಭುತವಾಗಿರುವುದು ಅವರ ಪವಿತ್ರ ಸಂದೇಶದಿಂದ ಸಂತೃಪ್ತರಾಗಿ ಜನರು ತಮ್ಮ ಸಮಸ್ಯೆಗಳ ಪರಿಹಾರಗಳನ್ನು ತಿಳಿದು. ತಮ್ಮ ತಮ್ಮ ಕೆಲಸಗಳಿಗೆ ಸುರು ಹಚ್ಚುತ್ತಾರೆ."

ಬೋಸರೆ ಮೊದಲಾದವರ ಮೇಲೆ ಶಿಸ್ತು ಉಂಟೇ?

ಕಳೆದ ತಾ ೯ರ ನಿಷೇಧ ಸಭೆಯಲ್ಲಿ ಭಾಗವಹಿಸಿದವರ ಮೇಲೆ ಖಂಡಿತವಾಗಿಯೂ ಕಾಂಗ್ರೆಸು ಶಿಸ್ತು ಜಾರಿಮಾಡುವುದೆಂದು ತಿಳಿಯಲಾಗಿದೆ, ಮಾತ್ರವಲ್ಲದೆ ಹೀಗೆ ಸಾರ್ವಜನಿಕವಾಗಿ ಕಾಂಗ್ರೆಸ್ಸನ್ನು ನಿಷೇಧಿಸಿ ವರ್ತಿಸಿದವರನ್ನು ಮೂರು ವರ್ಷಕ್ಕಿಂತ ಕಡಿಮೆಯಿಲ್ಲದೆ, ಕಾಂಗ್ರೆಸಿನಲ್ಲಿ ಅಧಿಕಾರ ಸ್ವೀಕಾರ ಮಾಡದಂತೆ ಶಿಸ್ತು ಜಾರಿಮಾಡಲು ಪ್ರಾಂತಿಕ ಕಮಿಟಿಗಳಿಗೆ ಅಧಿಕಾರವು ಕೊಡಲಾಗಿದೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸಿನ ಹಿಂದಣ ವರ್ಕಿಂಗ್ ಕಮಿಟಿ ಸದಸ್ಯರಾದ ನರಿಮೋನರೇ ಮೊದಲಾದವರ ಮೇಲೆಯೂ ಮಾಜಿ ರಾಷ್ಟ್ರಪತಿಗಳಾದ ಸುಭಾಷರ ಮೇಲೆಯೂ ಶಿಸ್ತುಜಾರಿ ಮಾಡತಕ್ಕ ಬೇಕಾಗಿರುವುದರಿಂದ, ಸುಭಾಷರಿಗೆ ಬಂಗಾಳ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಾಗಿರುವುದರಿಂದಲೂ, ಕಾಂಗ್ರೆಸು ವರ್ಕಿಂಗ್ ಕಮಿಟಿಯು ಸಭೆಸೇರಿ ಗಾಂಧಿಜಿಯವರು ಗಡಿನಾಡಿನ ಯಾತ್ರೆಯಿಂದ ಮರಳಿ ಬಂದಾಗ ವಾರ್ಧಾದಲ್ಲಿ ಆ ಕುರಿತು ಇತ್ಯರ್ಥಿಸಲಾಗುವುದೆಂದು ತಿಳಿದುಬರುತ್ತದೆ.

ಅಖಿಲಭಾರತ ಕಾಂಗ್ರೆಸು ಕಮಿಟಿಗೆ ವಿರುದ್ಧ ಪ್ರಚಾರಕ್ಕೆ ಹೊರಟ ಸುಭಾಷ ಬೋಸರು ಬಂಗಾಳ ಕಾಂಗ್ರೆಸು ಕಮಿಟಿಯ ಅಧ್ಯಕ್ಷ ಪದವಿಗೆ ರಾಜಿಕೊಡುವುದು ಹಿತವೆಂದು ನೆಹರುಗಳು ಬೋಸರಿಗೆ ತಿಳಿಸಿರುವರು.

ಕರ್ನಾಟಕ ಪ್ರವಾಸದಿಂದ ಮರಳಿ ಬಂದ ಮೇಲೆ ಸುಭಾಷರು ನೆಹರುಗಳೊಡನೆ ಚರ್ಚಿಸಬಹುದು.

ಎಸೆಂಬ್ಲಿಯಲ್ಲಿ ಅಧ್ಯಕ್ಷರ ಪರಿಷತ್ತು

ಸಿಮ್ಲಾದಲ್ಲಿ ತಾ ೧೮ ಮತ್ತು ೧೯ರಂದು ಎಸೆಂಬ್ಲಿಯ ಸ್ಪೀಕರರ ಸಮ್ಮೇಳನವು ಜರಗುವುದು. ಪ್ರಾಂತಿಕ ಸ್ವಾಯತ್ತೆಯನ್ನು ಸ್ವೀಕರಿಸಿದ ಮೇಲೆ ಇದು ಎರಡನೆಯ ಅಧಿವೇಶನ. ರಾಜನು ಹೇಗೆ ಬಹಳ ದೊಡ್ಡ ಜವಾಬ್ದಾರಿಯನ್ನು ಹೊತ್ತಿರುವನೋ ಹಾಗೆಯೇ ಅಸೆಂಬ್ಲಿಗಳ ಅಧ್ಯಕ್ಷರೂ ಬಹಳ ಚಾಣ್ಮೆಯಿಂದಲೂ ನ್ಯಾಯಪಕ್ಷಪಾತದಿಂದಲೂ ಕಾನೂನಿನ ಗಡಿಯನ್ನು ತಪ್ಪದಂತೆಯೂ ನಡೆಯುವಲ್ಲಿ ಬಹಳ ವಿಷಮ ಸಂಭವಗಳನ್ನು ಎದುರಿಸಬೇಕಾಗಿದೆ. ಅಂತಹವುಗಳಿಗೆ ಪರಿಹಾರಗಳನ್ನು ಈ ಸಮ್ಮೇಳನದಲ್ಲಿ ಚರ್ಚಿಸಲಾಗುವುದು

ಮದ್ರಾಸಿನಲ್ಲಿ ನೆಹರುಗಳು

ಸಿಲೋನಿಗೆ ರಾಯಭಾರಿಗಳಾಗಿ ಹೊರಟ ಪಂಡಿತ ನೆಹರುಗಳು ಟಾಟಾ ಸ್ಪೆಶಲ್ ವಿಮಾನದಲ್ಲಿ ಮದ್ರಾಸಿಗೆ ತಾ. 15ರಲ್ಲು ಬಂದಿಳಿದರು. ಜನ ಸಮುದಾಯವು ಬಹಳ ಉತ್ಸುಕತೆಯಿಂದ ಅವರ ದರ್ಶನವನ್ನು ಹಾರೈಸಿತ್ತು ಪ್ರಧಾನ ಮಂತ್ರಿಗಳೇ ಮೊದಲಾದ ಅಧಿಕಾರಿಗಳು ಪಂಡಿತರನ್ನು ಸ್ವಾಗತಮಾಡಿದರು ನೆಹರುಗಳು ಮಾನ್ಯ ಮಂತ್ರಿ ಡಾ। ಸುಬ್ಬರಾಯನರಲ್ಲಿ ರಾತ್ರಿ ಉಳಕೊಂಡರು ಇವರು ಹೈದರಾಬಾದಿನಲ್ಲಿಳಿದು ಅಲ್ಲಿನ ಸತ್ಯಾಗ್ರಹಿಗಳಿಗೂ ತಕ್ಕ ಉಪದೇಶವಿತ್ತರು!

ದೇಗುಲ ಪ್ರವೇಶಕ್ಕೆ ಮಹಾತ್ಮರ ಆಶೀರ್ವಾದ

ಮಧುರೆಯ ಮೀನಾಕ್ಷಿ ದೇವಾಲಯವು ಹರಿಜನರಿಗೆ ತೆರೆಯಲಾದ ನಿಮಿತ್ತವಾಗಿ ಶ್ರೀಮತಿ ರಮೇಶ್ವರಿ ನೆಹರುಗಳಿಗೆ ಗಾಂಧಿಜಿಯವರು ಅಭಿನಂದನಾಪೂರ್ವಕವಾದ ಸಂದೇಶವನ್ನು ಕಳುಹಿಸಿರುವರು.

ಸಿಂಧ್ ಮಂತ್ರಿಮಂಡಲಕ್ಕೆ ಕಾಂಗ್ರೆಸಿನ ಬೆಂಬಲ ಬೇಕು

ಸಿಂಧ್ ಪ್ರಧಾನ ಮಂತ್ರಿಗಳು ಮೌಲಾನಾ ಅಬುಲ್‌ಕಲಂ ಅಜಾದ್ ಮತ್ತು ಡಾ। ಖಾನ್ ಸಾಹೇಬರೊಡನೆ ಸಿಂಧ ಮಂತ್ರಿಮಂಡಲಕ್ಕೆ ಕಾಂಗ್ರೆಸಿನ ಬೆಂಬಲವಿರುವಂತೆ ಮಾಡಲು ಪ್ರಯತ್ನಿಸುವಂತೆ ಟೆಲಿಫೋನ್ ಮೂಲಕ ಸಂಭಾಷಿಸುತ್ತಿರುವರಾಗಿ ತಿಳಿದಿದೆ.

ಪ್ರಾಚೀನ ದೇಗುಲವು ಹರಿಜನರಿಗೆ ತೆರೆಯಲ್ಪಟ್ಟಿತು!

ತಂಜಾವೂರಿನ ಸುಪ್ರಸಿದ್ಧ ಮಹಾ ದೇವಾಲಯವಾದ, ಹಿಂದಿನ ಸುಪ್ರಸಿದ್ಧ ರಾಜನಾದ ರಾಜ ರಾಜ ಚೋಳನಿಂದ ಕಟ್ಟಲ್ಪಟ್ಟ 1000 ವರ್ಷಗಳಿಗಿಂತ ಹಿಂದಿನ ಶ್ರೀ ಬೃಹದೀಶ್ವರ ದೇವಾಲಯವು ಜುಲೈ ೧೩ರಂದು ಪ್ರಾತಃಕಾಲ ಹರಿಜನರಿಗೆ ತೆರೆಯಲ್ಪಟ್ಟಿತು. ತಂಜಾವೂರಿನ ಮಹಾರಾಜರು ತಮ್ಮ ಅಧೀನದಲ್ಲಿರುವ 90 ಇತರ ದೇವಾಲಯಗಳಲ್ಲಿಯೂ ಹರಿಜನರಿಗೆ ತೆರೆಯುವಂತೆ ಆದೇಶವಿತ್ತಿರುವರು.

ಅಬಿಸೀನಿಯದಲ್ಲಿ ಹಿಂದೀಯರ ಸಂಕಷ್ಟ!

ಬ್ರಿಟಿಷ್ ನೌಕಾಧಿಕಾರಿಯ ಮೇಲೆ ಬೊಂಬು

ರೂಸುವೆಲ್ಟರ ಹಠಸಾಧನೆ

ಬ್ರಿಟನು – ಜಪಾನುಗಳ ಪರಿಸ್ಥಿತಿ

ಬ್ರಿಟನು–ಜಪಾನುಗಳ ವಿಷಮ ಪರಿಸ್ಥಿತಿ ಬಹು ಬೇಗನೇ ವ್ಯವಸ್ಥೆಯಾಗುವ ಸಂಭವವು ತೋರುವುದಿಲ್ಲ. ಟೈನ್‌ಟ್ಸಿನ್‌ನ ಕುರಿತು ಟೋಕಿಯೋದಲ್ಲಿ ಏರ್ಪಟ್ಟ ಒಂದು ಮಾತುಕತೆಯು ನಿಷ್ಫಲವಾಗಿದೆ. ಬ್ರಿಟಿಷರು ಚೈನಾದೊಡನೆ ಸಂಬಂಧವನ್ನು ಕಡಿದುಹಾಕದ ವಿನಹ, ಜಪಾನಿಯರು ಯಾವರೀತಿಯ ಒಪ್ಪಂದಕ್ಕೂ ಎಡೆಗೊಡುವಂತಿಲ್ಲವೆಂದು ತಿಳಿದಿದೆ

ರೊಸುವೆಲ್ಟರು ತಮ್ಮ ಹಂಥವನ್ನು ಸಾಧಿಸುತ್ತಾರೆ.

ಅಮೇರಿಕದ ಅಧ್ಯಕ್ಷರಾದ ರೋಸ್‌ವೆಲ್ಟರ ಕಾನೂನು ಕಾಂಗ್ರೆಸಿನ ಸಭೆಯಲ್ಲಿ ಇನ್ನೊಮ್ಮೆ ವಿಚಾರಕ್ಕೆ ಬಂದು ಅದು ಪಾಸಾಗಲೇಬೇಕಾಗಿ ಹಟತೊಟ್ಟಿರುತ್ತಾರೆ. ಆದರೆ ಸಿನೆಟರ್ ಬೋರಾರವರ ಧುರೀಣತೆಯಿಂದ ನಡೆಸಲ್ಪಡುವ ಐಸಲೇಶನಿಸ್ಟರು ಅದಕ್ಕೆ ಸಮ್ಮತಿಸುವುದಿಲ್ಲ. ಆದರೆ ಪ್ರೆಸಿಡೆಂಟ ರೂಸವೆಲ್ಟರು ಇಂದಿನ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಆ ಕಾನೂನು ಪಾಸಾಗದಿದ್ದಲ್ಲಿ ಸಾಧ್ಯವಿಲ್ಲವೆಂದು, ಅವರು ತಮ್ಮ ಸ್ಪೆಶಲ್ ಅಧಿಕಾರವನ್ನುಪಯೋಗಿಸಿ ಕಾನೂನನ್ನು ಪಾಸಮಾಡಲಿರುವರು

ಡೆಲಾಡಿಯರ ಶಾಂತಿಲಾಲಸೆ

ಫ್ರೆಂಚ್ ರಿಪಬ್ಲಿಕನ್ ಮಹೋತ್ಸವದಂದು ಮಾತನಾಡುತ್ತಾ ಪ್ರಧಾನ ಮಂತ್ರಿ ಎಂ ಡಲಾಡಿಯವರು ಫ್ರೆಂಚರು ಪ್ರಪಂಚದ ಶಾಂತಿಯನ್ನು ಬಯಸುವರೆಂದೂ, ಅದಕ್ಕೆ ವಿರುದ್ಧವಾಗಿ ವರ್ತಿಸುವುದೂ ಶಕ್ತಿಗಳಿಂದ ತಮ್ಮನ್ನು ಕಾಪಾಡಿಕೊಳ್ಳುವುದೂ ನಮ್ಮ ಅಭಿಮತವೆಂದೂ ಹೇಳಿದರು ನಮ್ಮಸೈನ್ಯಶಕ್ತಿಯು ನಮ್ಮನ್ನು ಕೆಣಕಬಂದವರನ್ನು ಇದಿರಿಸಲು ಸಿದ್ಧವಾಗಿದೆಯೆಂದೂ ಹೇಳಿದರು

ರಿಪಬ್ಲಿಕಿನ ಪ್ರೆಸಿಡೆಂಟ್ ಮಿ ಹೋರ್ ಬೆಲಿಶಾರವರು ಸಾಮ್ರಾಟರಿಗೆ ಆಂಗ್ಲೇಯರ ಸಹಭಾಗದ ಕುರಿತುಸಂತೋಷವನ್ನು ಪ್ರದರ್ಶಿಸಿ ಸಂದೇಶವನ್ನು ಕಳುಹಿಸಿರುವರು.

ಅಬಿಸೀನಿಯದಲ್ಲಿ ಹಿಂದೀಯರು

ಇಂಡಿಯಾ ಸರಕಾರದ ಪರವಾಗಿ ರೋಮಿನಲ್ಲಿರುವಬ್ರಿಟಿಷ್ ರಾಯಭಾರಿಯು ಇಟಲಿಯ ಸರಕಾರಕ್ಕೆ ಅಬಿಸೀನಿಯದಲ್ಲಿರುವ ೨೫೦ ಮಂದಿ ಹಿಂದೀಯರ ಮೇಲೆ ಇರುವ ನಿರ್ಬಂಧಗಳನ್ನು ತೆಗೆದುಹಾಕಬೇಕಾಗಿ ಕೇಳಿಕೊಂಡನು. ಸಾರ್ವಜನಿಕ ಸ್ಥಳಗಳಲ್ಲಿ, ವಾಹನಾದಿಗಳಲ್ಲಿ ಯುರೋಪಿಯನರಿಗಿರುವ ಸೌಕರ್ಯಗಳು ಹಿಂದೀಯರಿಗೆ ಅಲ್ಲಿ ಇರುವುದಿಲ್ಲ. ಅಲ್ಲಿರುವ ಎಲ್ಲಾ ಹಿಂದೀಯರು ದೊಡ್ಡದೊಡ್ಡ ವ್ಯಾಪಾರಸ್ಥರೂ ಸಭ್ಯರೂ ಆಗಿರುತ್ತಾರೆ.

ಸೈನ್ಯಕ್ಕೆ ಖರ್ಚು ಹೆಚ್ಚುತ್ತಿದೆ

ಕಾಮನ್ಸ್ ಸಭೆಯಲ್ಲಿ ಬಜೆಟ್ ಚರ್ಚೆಯಂದು ಮಾತನಾಡುತ್ತಾ ರಾಜಕೋಶದ ಪ್ರಧಾನರಾದ ಸರ್ ಜಾನ್ ಸೈಮನರು ಈ ವರ್ಷ ಸೈನ್ಯಕ್ಕೆ ಸಾಧಾರಣ ಮೊದಲು ಅಂದಾಜುಮಾಡಿದಕ್ಕಿಂತ ೧೦೦ ಮಿಲಿಯ ಪವನುಗಳು ಹೆಚ್ಚು ಬೇಕಾಗಬಹುದೆಂದು ಹೇಳಿದರು ಇದಕ್ಕೆ ಸರಕಾರವು ಸಾಲತೆಕ್ಕೊಳ್ಳಬೇಕಾಗಿದೆಯಂತೆ.

ಫ್ರೆಂಚ್ ರಿಪಬ್ಲಿಕ್ ಮಹೋತ್ಸವ

ಫ್ರೆಂಚ್ ರಿಪಬ್ಲಿಕ್ ಮಹೋತ್ಸವವು ತಾ. ೧೪ರಂದು ಜರಗಿತು. ಫ್ರೆಂಚರ ಈ ಮಹೋತ್ಸವದಲ್ಲಿ ಬ್ರಿಟಿಷರು ಬಹಳ ಉತ್ಸಾಹದಿಂದ ಸೇರಿ ಕೆಲಸಮಾಡುತ್ತಾರೆ ಫ್ರೆಂಚ್–ಆಂಗ್ಲರ ಐಕ್ಯರೂಪವನ್ನು ಆ ಮಹೋತ್ಸವದಲ್ಲಿ ಕಾಣಬಹುದಾಗಿತ್ತು. ಯೂನಿಯನ್ ಜಾಕ್ ಮತ್ತು ತ್ರಿವರ್ಣ ರಂಜಿತ ಪತಾಕೆಗಳು ಎಲ್ಲಾ ಮನೆಗಳ ಮೇಲೆ ಕಿಟಕಿಗಳೆಡೆಯಲ್ಲಿ ಸರ್ವತ್ರ ಹಾರಾಡುತ್ತಿತ್ತು

ಫ್ರಾನ್ಸಿಗೆ ಇಟಲಿಯ ನಿರೋಧ

ಟರ್ಕಿಗೆ ಅಲೆಕ್ಸಾಂಡ್ರಿಯವನ್ನು ಸೇರಿಸುವ ಫ್ರಾನ್ಸ್–ಟರ್ಕಿ ಒಪ್ಪಂದದ ಕುರಿತು ಇಟಲಿಯು ತನ್ನ ತೀವ್ರನಿಷೇಧವನ್ನು ಫ್ರೆಂಚ್ ಸರಕಾರಕ್ಕೆ ಕಳುಹಿಸಿರುತ್ತದೆ.

ಇಟಲಿಯು ಕಳುಹಿಸಿದ ಈ ನಿರೋಧವನ್ನು ಫ್ರಾನ್ಸು ಗಣ್ಯ ಮಾಡದೆ ಇದೆ. ಈ ನಿರೋಧವು ಬರುವುದಕ್ಕಿಂತ ಮೊದಲೇ ಸರಕಾರವು ಯಾವ ಕೆಲಸವನ್ನು ಮಾಡಲು ನಿಶ್ಚಯಿಸಿತ್ತೋ ಅದನ್ನು ಇನ್ನು ಮೇಲೆ ಬದಲಾಯಿಸುವುದಿಲ್ಲವೆಂದು ತಿಳಿದಿದೆ.

ಬ್ರಿಟಿಷ್ ವಿರುದ್ಧ ಪ್ರಚಾರ

ಜಪಾನೀಯರು ಬ್ರಿಟಿಷರನ್ನು ಕೆಣಕುತ್ತಿದ್ದಾರೆ ಟ್ಸಿಂಗ್ಟಾವೋದಲ್ಲಿ ಬಂದ ಬ್ರಿಟಿಷರ ಹಡಗೊಂದು ೨೪ ತಾಸುಗಳ ವರೆಗೆ ಪ್ರಯಾಣಿಕರನ್ನಾಗಲಿ ಸಾಮಾನುಗಳನ್ನಾಗಲಿ ಕೆಳಗಿಳಿಸಲು ಬಿಡಲಿಲ್ಲ ಇನ್ನೊಂದು ಹಡಗವು ಮೂರು ದಿನಗಳ ವರೆಗೆ ತಡೆಯಲ್ಪಟ್ಟಿತು. ಬ್ರಿಟಿಷರ ಸಾಮಾನುಗಳು ಬಂದಿಳಿಯದಂತೆ ತುಂಬಾ ಬಹಿಷ್ಕಾರ ಇದೆ ಬ್ರಿಟಿಷರ ಮನೆಗಳಿಗೆ ನೀರು ಸರಬರಾಯಿಯನ್ನು ಜಪಾನು ಸರಕಾರವು ಒದಗಿಸುವುದಿಲ್ಲ ಬ್ರಿಟಿಷ್ ಹಡಗು ಅಧಿಕಾರಿಯ ಮೇಲೆ ಜಪಾನೀಯರ ಗುಂಪೊಂದು ಕಲ್ಲುಗಳನ್ನು ಎಸೆಯುತ್ತಿದ್ದರೂ ಜಪಾನ್ ಅಧಿಕಾರಿಗಳು ಮೌನವಾಗಿದ್ದರು.

ಡಾನ್ಸಿಗ್ ಮುಖಂಡರು ಹಿಟ್ಲರರನ್ನು ಕಂಡರು

ಡಾನ್ಸಿಗಿನಲ್ಲಿರುವ ನಾಜೀ ಮುಖಂಡರಾದ ಹೆರ್ ಪೋರ್‌ಸ್ಟರ್ ಮತ್ತು ಹೆರ್ ಜಾಸ್ಕೆಯವರು ಹಿಟ್ಲರನನ್ನು ಕಂಡು ಮಾತಾಡಿದರು ಎರಡೂವರೆ ತಾಸುಗಳ ತನಕ ಡಾನ್ಸಿಗಿನ ಪರಿಸ್ಥಿತಿಯು ಚರ್ಚಿಸಲ್ಪಟ್ಟಿತು

ಯುರೋಪಿನಲ್ಲಿ ವಿಮಾನಗಳ ಹಾರಾಟ

ಲಂಡನಿಂದ ನೂರ ಐವತ್ತು ಮಿಕ್ಕಿದ ವಿಮಾನಗಳು ಹೊರಟು ಫ್ರಾನ್ಸಿನ ವರೆಗೆ ಹಾರಿ ತಿರಿಗಿ ಎಲ್ಲಿಯೂ ಇಳಿಯದೆ ಲಂಡನಿಗೇ ಹಿಂತಿರುಗಿ ಬಂದಿವೆ. ಈ ಪ್ರಯೋಗವು ಆಂಗ್ಲೋ–ಫ್ರಾನ್ಸುಗಳ ಸಂಬಂಧವನ್ನು ಸೂಚಿಸುವ ಸಲುವಾಗಿದೆಯೆಂದೂ ಮಾತ್ರವಲ್ಲದೆ ವಿಮಾನಶಕ್ತಿಯ ಪರೀಕ್ಷೆ ಹಾಗೂ ಅತ್ಯಾಧುನಿಕ ಸಾಧನೆಗಳ ನಿರೀಕ್ಷಣೆಗಳು ಹೇತುವಾಗಿರುವುವೆಂದೂ ತಿಳಿಯುತ್ತದೆ. ಹೀಗೆ ಲಂಡನಿನಿಂದ ವಿಮಾನದಲ್ಲಿ ಸೈನಿಕರು ಫ್ರಾನ್ಸಿಗೆ ಹಾರಾಟ ಮಾಡಿದಂತೆ, ಅಲ್ಲಿಂದ ಇಲ್ಲಿಗೆ ಬೇಗನೇ ಹಾರಾಟ ಮಾಡಲಿರುವರೆಂದು ತಿಳಿಯುತ್ತದೆ. ಈ ಎಲ್ಲಾ ವಿಮಾನಗಳೂ ದಿನವೊಂದರಲ್ಲಿ ಯುರೋಪಿನ ಯಾವ ಭಾಗಕ್ಕಾದರೂ ಹಾರಿ ಹೋಗಿ ಹಿಂತಿರುಗಿ ಬರಲು ಸಾಧ್ಯವಿರುವಷ್ಟು ತೀವ್ರ ಗತಿಯವುಗಳಾಗಿವೆ.

ಬ್ರಿಟಿಷ್ ನೌಕಾಧಿಕಾರಿಯ ಮೇಲೆ ಬೊಂಬು

ಶಾಂಘಾಯಿಯಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಯ ಮೇಲೆ ಬೊಂಬೆಸೆವ ಯತ್ನಮಾಡಲಾಯಿತು. ಆದರೆ ಯಾರಿಗೂ ಗಾಯವಾಗಲಿಲ್ಲ. ಜಪಾನು ಅಧಿಕಾರಿಗಳು ಈ ಕುರಿತು ಕ್ಷಮೆಬೇಡುತ್ತಾರೆ.

ಬೋಸರಿಗೆ ಮಹಾತ್ಮರ ಬೋಧನೆ!

ಬೊಂಬಯಿಯಲ್ಲಿ ಕಾಂಗ್ರೆಸು ಸರಕಾರವು ಕೈಕೊಂಡ ಪಾನನಿಷೇಧವು ಅಕ್ರಮವಾಯಿತು, ಎಂಬ ವಿಷಯದಲ್ಲಿ ಸುಭಾಷರು ಕೊಟ್ಟ ಪ್ರಕಟಣೆಗೆ ಗಾಂಧಿಜಿಯವರು ವಿಷಾದಿಸಿ ಈ ರೀತಿಯಿಂದ ಹೇಳಿಕೆ ಹೊರಡಿಸಿದ್ದಾರೆ.

"ಸುಭಾಷ ಭೋಸರು ಹೇಳಿದ ಆಕ್ಷೇಪಣೆಗಳಿಂದ ನನಗೆ ಮನಸ್ಸು ನೊಂದಿದೆ ಬೊಂಬಯಿಯಲ್ಲಿದ್ದಾಗ ನನ್ನೊಡನೆ ಸುಭಾಷರು ಮದ್ಯಪಾನ ನಿಷೇಧದ ಕುರಿತು ಮಾತುಕತೆ ನಡೆಸಿದ್ದರು. ಬೊಂಬಯಿ ಮಂತ್ರಿಗಳೊಡನೆ ಈ ಕುರಿತು ಮಾತನಾಡಿರಿ ಎಂದು ನಾನು ಹೇಳಿದೆನು ಹಾಗೆ ಅವರು ಮಾಡಿದರೋ ತಿಳಿಯೆ, ಆದರೆ ಇಂದು ಕಾಂಗ್ರೆಸಿನ ವೈರಿಗಳು ಮಾತನಾಡುವಂತೆ ರಾಷ್ಟ್ರಪತಿಗಳಾಗಿದ್ದ ಸುಭಾಷರೇ ಆಡುವುದು ನನಗೆ ಬಹಳ ವಿಷಾದವನ್ನು ಹುಟ್ಟಿಸುತ್ತದೆ ಇವರು ಬಂಗಾಳ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಾಗಿ ಇಂದು ಇದ್ದಾರೆ! ಇಂದು ಕಾಂಗ್ರೆಸು ವರ್ಕಿಂಗ್ ಕಮಿಟಿಯಲ್ಲಿ ತಾನಿಲ್ಲವೆಂದು ಕಾಂಗ್ರೆಸಿನ ಕಾರ್ಯಕ್ರಮವನ್ನು ಹೀಗೆ ಸರ್ವಥಾ ಮಾಡುತ್ತಿರುವುದು ಅವರಿಗೆ ಭೂಷಣವಲ್ಲ ಬೋಸರ ಹೇಳಿಕೆಯು ಕೇವಲ ವೈಯಕ್ತಿಕ ಯಾರು ಏನೆಂದರೂ ಬೊಂಬಯಿ ಮಂತ್ರಿಗಳು ಮಾಡಿದ ಕಾರ್ಯವು ಯೋಗ್ಯವೇ ಆಯಿತು. ಮದ್ಯಪಾನ ನಿಷೇಧವು ಕಾಂಗ್ರೆಸಿನ ಪ್ರಾಮುಖ್ಯ ಕರ್ತವ್ಯ ಯಾವುದನ್ನು ಹಿಂದಿನ ಸರಕಾರಕ್ಕೆ ಮಾಡಲು ಅಸಾಧ್ಯವಾಯಿತೋ, ಅದನ್ನು ಕಾಂಗ್ರೆಸು ಸರಕಾರವು ಧೈರ್ಯದಿಂದ ಮಾಡಿಬಿಟ್ಟಿದೆ.



"ಕಾಂಗ್ರೆಸು ಸರಕಾರವು ಜನತೆಯ ಬೆಂಬಲವುಳ್ಳದ್ದು ಇದರ ಆಗುಹೋಗುಗಳನ್ನು ತರ್ಕಿಸಿ, ವರ್ಕಿಂಗ್ ಕಮಿಟಿಯು ಎಲ್ಲವನ್ನು ನಿರ್ಣಯಿಸಿದೆ ಇಂದು ಸುಭಾಷ ಬೋಸರು ವರ್ತಿಸುವಂತೆ, ಯಾವ ಕಾಂಗ್ರೆಸು ಕೆಲಸಗಾರನೇ ಬವನಾದರೂ ಖಂಡಿಸಿ ವರ್ತಿಸುವುದು ನಿಜವಾಗಿಯೂ ನೀತಿ ವಿರುದ್ಧವಿದೆ. ಪಾನನಿಷೇಧದಲ್ಲಿ ಜಾತೀಯತೆಯ ಸಂಬಂಧವಿಲ್ಲ. ಸುಭಾಷರು ಇದರಲ್ಲಿ ಜಾತೀಯತೆಯ ವಿಷಯವನ್ನೂ, ಅಲ್ಪ ಸಂಖ್ಯಾಕರ ಪ್ರಶ್ನೆಯನ್ನೂ ಕೂಡಿಸಿ ಮಾತನಾಡುವುದು ನ್ಯಾಯವಲ್ಲ ಮದ್ಯಪಾನ ನಿಷೇಧ ಕೇವಲ ನೈತಿಕ ಸುಧಾರಣೆ ಸಮಸ್ತ ಜಾತಿಯವರೂ ಕುಡುಕತನ ಬಿಟ್ಟಲ್ಲಿ ಒಳ್ಳೆಯವರಾಗುತ್ತಾರೆ ಬೊಂಬಯಿಯಲ್ಲಿ ಸ್ವತ್ತುಗಳ ಮೇಲೆ ತೆರಿಗೆ ಹಾಕಿದ್ದು ನ್ಯಾಯವೇ. ಇದರಿಂದ ಒಳ್ಳೆ ಸಂಪಾದನೆಯುಂಟು. ಕೊಡುವವರೂ ಐಶ್ವರ್ಯವಂತರೇ, ಬಡವರ ಮೇಲಿದ್ದ ಹೊರೆಯು ಇಂದು ಐಶ್ವರ್ಯವಂತರ ಹೆಗಲ ಮೇಲೆ ಬಿದ್ದಿದೆ. ಮಾಲಕರು ನ್ಯಾಯವಾಗಿ ಸರಕಾರಕ್ಕೆ ತೆರಿಗೆ ತೆರಬೇಕು.

"ಪಾರ್ಸಿಗಳು ಧಾರ್ಮಿಕ ಕಾರ್ಯಗಳನ್ನು ಮಾಡಿದಂತವರು; ಶ್ರೀಮಂತರು. ಮದ್ಯಪಾನ ನಿಷೇಧಕ್ಕೆ ಅವರು ಅನುಕೂಲತೆ ಮಾಡಿ ನೆರವಾಗಬೇಕು. ಜನರಲ್ಲಿ ನೀತಿಯ ನೆಲೆಯು ಪಸರಿಸಲು ಅವರು ಸಹಾಯ ಮಾಡಬೇಕು. ಬೊಂಬಾಯಿಯ ಪ್ರಖ್ಯಾತರನೇಕರು ಇದನ್ನು ಪ್ರೋತ್ಸಾಹಿಸಿದ್ದಾರೆ. ಬೋಸರು ತಾವು ಉಚ್ಚರಿಸಿದ ಮಾತುಗಳನ್ನು ಹಿಂದಕ್ಕೆ ತೆಗೆದುಕೊಂಡು ಮದ್ಯಪಾನ ನಿಷೇಧ ಕಾರ್ಯಕ್ಕೆ ನೆರವಾಗಲಿ. ಪಾರ್ಸಿಗಳಿಗೆ ಯೋಗ್ಯ ಸೂಚನೆ ಕೊಡಲಿ. ಹಿಂದಿನ ಕಾಂಗ್ರೆಸಿನ ಅಧ್ಯಕ್ಷರಾಗಿದ್ದ ಸುಭಾಷರು ಇಂದಿನ ರಾಷ್ಟ್ರಪತಿಗಳಿಗೆ ಈ ಕಾರ್ಯದಲ್ಲಿ ಸಹಾಯಮಾಡುವುದು ಅಗತ್ಯವಿರುತ್ತದೆ."

ಹೊಸ ವಾರ್ತೆ

ಅನ್ಯ ರಾಷ್ಟ್ರಗಳು ಮಧ್ಯವರ್ತಿಗಳಾಗಿ ಬರದಿದ್ದಲ್ಲಿ ಡಾನ್ಸಿಗಿನ ವಿಷಯ, ಪೋಲೆಂಡು–ಜರ್ಮನಿಗಳೇ ಯೋಗ್ಯ ಇತ್ಯರ್ಥ ಮಾಡಿಕೊಳ್ಳಬಹುದೆಂಬ ವಿಷಯವಾಗಿ ಹಿಟ್ಲರನು ಆಶಾವಾದಿಯಾಗಿರುವನು.

★

ಬ್ರಿಟಿಷ್ ಮಂತ್ರಿಮಂಡಳದಲ್ಲಿ ಚರ್ಚಿಲ್ಲರನ್ನು ಸೇರಿಸಲು, ಚೆಂಬರ್ಲೇನರು ಸಮ್ಮತಿಸುವುದಿಲ್ಲವೆಂದು ತಿಳಿಯುತ್ತದೆ.

★

ಸಿಲೋನಿನ ಸಂಧಾನದ ಕುರಿತು ಪಂಡಿತ ನೆಹರುಗಳು ಸಿಲೋನು ಬಹಳ ಸಣ್ಣದಾದ ರಾಷ್ಟ್ರವಾದುದರಿಂದ ಪ್ರತ್ಯೇಕವಾಗಿ ನಿಲ್ಲಲು ಸಾಧ್ಯವಿಲ್ಲವೆಂದೂ, ವ್ಯಾಪಾರವೇ ಮೊದಲಾದ ಸಂಬಂಧಗಳಿಗಾಗಿ ಅನ್ಯದೇಶದೊಡನೆ ಸಂಬಂಧ ಮಾಡಬೇಕಾದಲ್ಲಿ ಹಿಂದೂದೇಶಕ್ಕಿಂತ ಸಮೀಪದ ರಾಷ್ಟ್ರವು ಬೇರಿಲ್ಲವೆಂದೂ ಸಿಲೋನಿನ ಮಂತ್ರಿಗಳು ಈ ಕುರಿತು ವಿಶಾಲ ಬುದ್ಧಿಯಿಂದ ಗಮನಿಸುವುದಿಲ್ಲವಾಗಿಯೂ ಅಭಿಪ್ರಾಯಪಡುತ್ತಾರೆ

★

ಬಂಗಾಳದ ರಾಜಕೀಯ ಕೈದಿಗಳು ಅನ್ನತ್ಯಾಗ ಸತ್ಯಾಗ್ರಹವನ್ನು ಬಿಟ್ಟುಬಿಡಬೇಕಾಗಿ ರಾಷ್ಟ್ರಪತಿಗಳು ಆದೇಶವಿತ್ತಿರುವರು.

★

ರಜೆಯ ಸಂಬಳ ಕೊಡುವ ವಿಷಯವಾಗಿ ಅಧಿಕಾರಿಗಳು ಒಪ್ಪದುದರಿಂದ ಪ್ರಭಾತದ ಪ್ರಸಿದ್ಧ ಸಿನೆಮಾ ನಟ ಶಾಂತಾ ಆಪ್ಟೆಯು ಪ್ರಭಾತ ನಗರದ ದ್ವಾರದಲ್ಲಿ ಅನ್ನತ್ಯಾಗ ಸತ್ಯಾಗ್ರಹವನ್ನು ಆರಂಭಿಸಿರುವುದಾಗಿ ವಾರ್ತೆ

★

ಸಾಂಕ್ರಾಮಿಕ ರೋಗಗಳನ್ನು ತಡೆಯಲು ಸಂಯುಕ್ತ ಪ್ರಾಂತದ ಸರಕಾರವು ಒಂದು ಶಾಸನವನ್ನು ತಯಾರಿಸುತ್ತದೆ

★

ರೈತರ ತೊಂದರೆಗಳನ್ನು ಶಾಸನ ಮೂಲಕವಾಗಿ ತೀರ್ಮಾನ ಮಾಡಲು ಬೀಹಾರ್ ಸರಕಾರವು ಒಂದು ಕಾನೂನು ತಯಾರಿಸುತ್ತಿದೆ.

★

ಸುಭಾಷ ಬೋಸರು ಬೊಂಬಯಿಯಲ್ಲಿ ಪಾನನಿರೋಧ ಮಾಡಿದ್ದು ಸರಿಯಲ್ಲವೆಂದು ಹೇಳಿದ್ದಕ್ಕೆ ಉತ್ತರಿಸುತ್ತಾ, ಸರ್ದಾರ ಪಟೇಲರು ಕಾಂ ಕಾರ್ಯಕಾರೀ ಮಂಡಳಿಯ ಉದ್ದೇಶವನ್ನು ವಿವರಿಸಿ ಹೇಳಿ, ಬೋಸರ ಹೇಳಿಕೆಯು ಆಶ್ಚರ್ಯಕರವಾದುದೆಂದು ಹೇಳುತ್ತಾರೆ!

★

ಜರ್ಮನ್ ಲಾ ಮಂಡಳದ ಉತ್ಸವದ ದಿನ ಹಿಟ್ಲರನು, ರಾಜಕೀಯ ವಿಚಾರಗಳ ಕುರಿತು ಯಾವ ಸಂಬಂಧವೂ ಇಲ್ಲದೆ, ಕೇವಲ ಕಲೆಯ ವಿಷಯವಾಗಿಯೇ ಒಂದು ಭಾಷಣವಿತ್ತನು.

★

ಚೆಂಬರ್ಲೇನರು ಆಂಗ್ಲ–ಜಪಾನು ವ್ಯವಹಾರದ ಕುರಿತು ಒಂದು ಹೇಳಿಕೆಯನ್ನು ಹೊರಡಿಸಿ, ಅದರಲ್ಲಿ ಬ್ರಿಟನು ತನ್ನ ಪೂರ್ವ ದೇಶೀಯ ಧೋರಣೆಯ ವಿಷಯ ಯಾ ಮಾತಿನಂತೆಯೂ ನಡೆಯಲು ಸಿದ್ಧವಿಲ್ಲವೆಂದು ಹೇಳುತ್ತಾರೆ

ಸ್ವದೇಶಾಭಿಮಾನಿ

ತಾರೀಖು ೨೧—೬—೧೯೩೯

ಸಿಲೋನಿನ ಪರಿಸ್ಥಿತಿ

"ರಾಜಕೀಯ ದೃಷ್ಟಿಯಿಂದ ಸಮುದ್ರವು ನಮ್ಮನ್ನು ವಿಭಾಗಿಸಬಹುದು; ಆದರೆ ಪರಂಪರೆಯಿಂದ ಬಂದ, ನಿರ್ಮಲ ಮಾನಸಿಕತೆ, ಸುಂದರ ಸೌಹಾರ್ದ, ಚಾರಿತ್ರಿಕ ಸಂಸ್ಕೃತಿಗಳೇ ಮೊದಲಾದುವುಗಳಿಂದ ಇಲ್ಲಿಯೂ ಹಿಂದೂದೇಶದ ವಾತಾವರಣದ ಸುಖವನ್ನೇ ನಾನು ಅನುಭವಿಸುತ್ತೇನೆ ಈ ಎರಡು ದೇಶಗಳೊಳಗೆ ನಡೆದು ಬಂದ, ಇಂತಹ ಮಧುರ ಸಂಬಂಧವನ್ನು ಬಗೆದು, ನಾನು ಇವುಗಳು ಭಿನ್ನದೇಶಗಳಾಗಿವೆಯೆಂದು ತಿಳಿಯುವುದಿಲ್ಲ"ವೆಂದು ಕಾಂಗ್ರೆಸಿನ ರಾಯಭಾರಿಗಳಾದ ಪಂಡಿತ ನೆಹರುಗಳು ಸಿಲೋನಿನಲ್ಲಿ ಹೇಳುತ್ತಾರೆ. ಕಾಂಗ್ರೆಸು ನಂದಿತರನ್ನು ಈ ಪವಿತ್ರ ಕಾರ್ಯಭಾರಕ್ಕೆ ಕಳುಹಿಸುವ ನಿರ್ಣಯ ಮಾಡಿದ ಸಂದರ್ಭದಲ್ಲಿ ಮಹಾತ್ಮಾಜಿಯವರು ತಮ್ಮ ಸಹಜ ವಿಚಾರಪೂರ್ಣವಾದ ಹೇಳಿಕೆಯೊಂದರಲ್ಲಿ "ರಾಮೇಶ್ವರದಿಂದ ಸಿಲೋನಿಗೆ ಹೆಜ್ಜೆಯಿಡುವಾಗ ನಮಗೆ ಅನ್ಯದೇಶವನ್ನು ಹೊಕ್ಕ ಅನುಭವವೇ ಆಗುವುದಿಲ್ಲ, ಆದರೆ ಕೆಲವೊಮ್ಮೆ ರಕ್ತಸಂಬಂಧವುಳ್ಳ ಸೋದರರೇ ಬೇರೆಯಾಗುವುದುಂಟು, ಅಂತೆಯೇ ನೆರೆಕರೆಯವರೂ ಜಗಳಮಾಡಬಹುದು, ಆದರೆ ಮನಸ್ಸಿನ ಕಲ್ಮಷವು ಅಡಗಿದಾಗ, ಹಿಂದಿಗಿಂತಲೂ ವಿಶೇಷವಾದ ಪ್ರೇಮದಿಂದ ನಾವು ಅಭಿನ್ನರಾಗಿ ಒಂದಾಗುತ್ತೇವೆ" ಎಂದು ವ್ಯಕ್ತಪಡಿಸಿರುವರು ನಿಜವಾಗಿಯೂ ವಿಚಾರಿಸಿದರೆ, ಅನೇಕ ಶತಮಾನಗಳಿಂದ ಯಾವ ತರದ ದ್ವೇಷ ಮತ್ಸರಗಳಿಲ್ಲದೆ, ಏಕ ಸಹೋದರ ಭಾವದಿಂದಿದ್ದ ಸಿಲೋನ್ ಮತ್ತು ಹಿಂದೂದೇಶಗಳ ಅನ್ಯೋನ್ಯತೆಯು ಮುರಿದು ಇತ್ತೀಚೆಗೆ ಇಂತಹ ವಿಷಮತೆಯ ವಿಷಜ್ವಾಲೆಯು ಹರಡಿಕೊಳ್ಳುವುದರಲ್ಲಿ ಸಹಜತೆಯಾಗಲೀ ನ್ಯಾಯವಾಗಲಿ ಇದೆಯೋ ಎಂದು ವಿಚಾರಿಸಬೇಕಾಗಿದೆ

ಸಿಲೋನ್ ಸರಕಾರವು ಜುಲಾಯಿ ತಿಂಗಳ ಅಂತ್ಯದೊಳಗೆ ಅಲ್ಲಿನ ಸರಕಾರೀ ಉದ್ಯೋಗದಲ್ಲಿರುವ ೧,೦೦೦ ಹಿಂದೀಯರನ್ನು ತೆಗೆದು ಹಾಕಬೇಕೆಂದೂ, ಈ ವರ್ಷದ ಅವಧಿಯಲ್ಲಿ ಒಟ್ಟಾಗಿ ೮,೦೦೦ ಮಂದಿಯನ್ನು ಹೊರಗೆ ಅಟ್ಟಬೇಕೆಂದೂ ನಿಶ್ಚಯಮಾಡಿದೆ ಇತ್ತೀಚೆಗೆ ಅಲ್ಲಿನ ಸರಕಾರದಲ್ಲಿ ಆದ ಮಾರ್ಪಾಟುಗಳನ್ನು ಗಮನಿಸಿದಲ್ಲಿ ದಿನದಿಂದ ದಿನಕ್ಕೆ ಉದ್ಯೋಗಗಳಲ್ಲಿ ಸಿಲೋನು ದೇಶೀಯರನ್ನೇ ಸೇರಿಸುತ್ತಿದ್ದು ಹಿಂದೀಯರ ಸಂಖ್ಯೆ ಕಡಿಮೆಯಾಗುತ್ತಾ ಬಂದಿರುವುದೂ ತಿಳಿಯ ಬಹುದಾಗಿದೆ ಈ ರೀತಿಯಿಂದ ಹಿಂದೀಯರಿಗೆ ಉದ್ಯೋಗವಿಲ್ಲದಂತೆ ಮಾಡುವ ಕೆಲಸವನ್ನು ಆರಂಭಿಸಿದ್ದು, ಈಗ ಅದಕ್ಕೂ ತಾಳ್ಮೆಯುಲ್ಲದೆ ಒಂದೇ ಸರ್ತಿಯಲ್ಲಿ ಇಷ್ಟೊಂದು ಮಂದಿ ಹಿಂದೀಯರನ್ನೂ ಹೊರಹಾಕುವ ಸರಕಾರದ ನಿರ್ಧಾರದಲ್ಲಿ ಭಯಾನಕ ಸಂಗತಿಗಳು ಅಡಕವಾಗಿವೆ ಇದು ಆತ್ಮಗೌರವಶಾಲಿಗಳೂ, ಕರ್ತವ್ಯದಕ್ಷರೂ ಆದ ಹಿಂದೀಯರ ಅಭಿಮಾನಕ್ಕೆ ಮತ್ತು ಜೀವನಕ್ಕೂ ತಂದ ಬಲವಂತವಾದ ಆಘಾತವಾಗಿದೆ ಇದರಿಂದ ಸಿಲೋನು ಸರಕಾರವು ಹಿಂದೂದೇಶದ ಗೌರವಕ್ಕೂ ಅಪಮರ್ಯಾದೆ ಮಾಡಿದೆ

ಸಿಲೋನಿನಲ್ಲಿ ಹಿಂದೀಯರು ನೆಲಸಿ ಆ ರಾಷ್ಟ್ರದ ಏಳಿಗೆಗಾಗಿ, ಅಮಿತ ಪರಿಶ್ರಮದಿಂದ ದುಡಿದಿದ್ದಾರೆ ಮನುಷ್ಯ ವಸತಿಗೆ ಸಾಧ್ಯವಿಲ್ಲದ ಅನೇಕ ಬಂಜರು ಪ್ರದೇಶಗಳನ್ನು ಸುಂದರನಿವಾಸಭೂಮಿಗಳಾಗಿ, ಮಾರ್ಪಡಿಸಿದ್ದಾರೆ ಅಲ್ಲಿನ ರಾಷ್ಟ್ರೀಯ ವ್ಯಾಪಾರವನ್ನು ಅಭಿವೃದ್ಧಿಗೊಳಿಸಿದ ಕೀರ್ತಿ ಭಾರತೀಯರದು. ಅನ್ಯದೇಶಕ್ಕೆ ಹೋಗಿ ಅಲ್ಲಿ ಶ್ರಮವಹಿಸಿ ದುಡಿದು, ಭಾಗ್ಯಶಾಲಿಗಳಾಗಿ ತಿರಿಗಿ ಜನ್ಮಭೂಮಿಗೆ ಬರಬೇಕೆಂದು ಭಾರತೀಯರು ಅಲ್ಲಿ ಹಾಗೆ ವಿಶ್ರಾಂತಿಯಿಲ್ಲದೆ ದುಡಿಯುವುದರಿಂದ ಮಾತ್ರ ಅವರು ಆ ದೊಡ್ಡ ಗಳಿಕೆಯಲ್ಲಿ ಯಶಸ್ವಿಯಾಗುವರಲ್ಲದೆ, ಸಿಲೋನು ದೇಶವನ್ನು ಹಾಳುಮಾಡಬೇಕೆಂಬ ಬುದ್ಧಿಯು ಅವರಿಗಿಲ್ಲ. ಮೊಟ್ಟಮೊದಲು, ಹೀಗೆ ಸಿಲೋನಿನ ಸಾಂಪತ್ತಿಕ ಸ್ಥಿತಿಯನ್ನು ಹೆಚ್ಚುಮಾಡಿದ ಹಿಂದೀಯರಿಗೆ ಅಲ್ಲಿನ ಸರಕಾರವು ಒಳ್ಳೆಯ ಭರವಸೆಗಳನ್ನೂ ಕೊಟ್ಟಿತ್ತು. ಈಗ ಸಿಲೋನು ಅವರ ಶ್ರಮದಿಂದ ಸುಂದರವಾಗಿ ಸಮೃದ್ಧವಾಗಿ ಬೆಳೆದ ಮೇಲೆ, ಅದಕ್ಕೆ ಕಾರಣರಾದವರನ್ನೂ ಅವರಿಗಿತ್ತ ನಂಬಿಕೆಗಳನ್ನೂ ಮರೆತು ಹೀಗೆ ಬೆನ್ನಟ್ಟುವುದು ಮಹಾ ಅನ್ಯಾಯವಲ್ಲದೆ ಮತ್ತೇನು?

ನೆಹರುಗಳ ಇದುವರೆಗಿನ ಕಾರ್ಯಕ್ರಮವು ಪ್ರಾಥಮಿಕವಾಗಿದೆ. ಅಲ್ಲಿನ ಪರಿಸ್ಥಿತಿಯನ್ನು ಕೂಲಂಕುಷ ತಿಳಿಯದೆ ಯಾವುದೇ ತರದ ಯೋಗ್ಯ ಮತ್ತು ದೃಢವಾದ ಒಪ್ಪಂದಮಾಡುವುದು ಸಾಧ್ಯವಲ್ಲ. ಆದರೆ ನೆಹರುಗಳೇ ಅನ್ನುವಂತೆ ಇಂದಿನ ಪ್ರಪಂಚದ ಪರಿಸ್ಥಿತಿಯಲ್ಲಿ ಜಗತ್ತಿನ ಶಾಂತಿಗಾಗಿ ಸಿಂಹಳೀಯರೂ ಭಾರತೀಯರೂ ಒಂದಾಗಿ ತಮ್ಮ ಸಣ್ಣ ಪುಟ್ಟ ಭೇದಗಳನ್ನು ಮರೆತಿರಬೇಕಾದುದು ನ್ಯಾಯವಾಗಿದೆ ಕೇವಲ ಭಾರತದ ಉದ್ಧಾರಮಾತ್ರವಲ್ಲದೆ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲಿಯೂ ಹೆಚ್ಚಿನ ಆಸಕ್ತಿಯುಳ್ಳ ನೆಹರುಗಳ ಸಂಧಾನವು ಯೋಗ್ಯವಾಗಿ ನೆರವೇರಬಹುದೆಂದು ಆಶಿಸಬಹುದಾಗಿದೆ

ದೇವಸ್ಥಾನ ಪ್ರವೇಶ ರಕ್ಷಣಾಶಾಸನ

ಮದ್ರಾಸಿನ ಗವರ್ನರರ, ತಮ್ಮ ಮಂತ್ರಿಮಂಡಲದ ಹಿತಸೂಚನೆಯನ್ನನುಸರಿಸಿ ಹಿಂದುಗಳಲ್ಲಿ ಇದುವರೆಗೆ ಪ್ರವೇಶವಿಲ್ಲದವರಿಗೆ ದೇವಸ್ಥಾನಗಳಲ್ಲಿ ಪ್ರವೇಶಕೊಡುವ ಸಂದರ್ಭದಲ್ಲಿ, ಸರಕಾರೀ ನೌಕರರ, ದೇವಾಲಯದ ಅಧಿಕಾರಿಗಳ, ಅರ್ಚಕರೇ ಮೊದಲಾದವರ ಮೇಲೆ, ಹಿಂದೆ ಇದ್ದ ಕಾನೂನಿನಂತೆ ಹೊರಿಸಬಹುದಾದ ತಪ್ಪನ್ನು ಪರಿಹರಿಸುವ ರಕ್ಷಣಾಶಾಸನವೊಂದನ್ನು ಹೊರಡಿಸಿದ್ದಾರೆ ಇದು ನ್ಯಾಯ ವಿಧಾಯಕ ಮಂಡಳವು ಸಭೆ ಸೇರದಿದ್ದಾಗ, ಪ್ರಾಂತೀಯ ಸ್ವಾಯತ್ತತೆಯಂತೆ, ಗವರ್ನರರಿಗೆ ಇರುವ ಅಧಿಕಾರವನ್ನು ಹೊಂದಿಕೊಂಡು ಮಾಡಿದ್ದಾಗಿರುತ್ತದೆ ಈ ಶಾಸನದಿಂದ, ಸ್ಥಳೀಯ ಜನತೆಯ ಅಭಿಪ್ರಾಯವು ಅಸ್ಪೃಶ್ಯ ವರ್ಗದವರನ್ನು ದೇವಾಲಯಗಳಿಗೆ ಪ್ರವೇಶಿಸಬಹುದೆಂದಿದ್ದರೆ ಆಚಾರ ಪದ್ಧತಿಗಳಿಗೆ ವಿರುದ್ಧವಿದ್ದರೂ, ಜನರು ತಮ್ಮ ದೇವಾಲಯ ಅಧಿಕಾರಿಗಳು ಗೌರವಿಸುವಂತೆ ಆಗುತ್ತದೆ ಮಧುರೆಯ ಮೀನಾಕ್ಷೀ ದೇವಾಲಯಕ್ಕೆ ಹರಿಜನರನ್ನು ಪ್ರವೇಶಿಸಲು ಬಿಟ್ಟ ವಿಷಯದಲ್ಲಿ ದೇವಾಲಯ ಅಧಿಕಾರಿಗಳೇ ಮೊದಲಾದವರ ಮೇಲೆ ಕೆಲವು ಸನಾತನಿಗಳು ಹೂಡಿದ ವ್ಯಾಜ್ಯದ ಮೂಲ ಕಾರಣವಾಗಿ ಈ ಶಾಸನವು ಹೊರಬಿದ್ದಿರುತ್ತದೆ ಕಾರಣವು ಹೀಗಿದ್ದರೂ, ಶಾಸನವು ಇಡೀ ಪ್ರಾಂತ್ಯಕ್ಕೇ ಅನ್ವಯಿಸುವುದಾಗಿರುತ್ತದೆ

"ಬಲಾತ್ಕಾರವಾಗಲಿ, ಗಲಭೆಯಾಗಲಿ, ಆಕ್ರಮವಾಗಲಿ ಈ ವಿಷಯದಲ್ಲಿ ಬೇಡ, ಶಾಸನ ಮೂಲಕ ಜನರ ಮನಸ್ಸನ್ನು ನೋಯಿಸಿ, ಹರಿಜನರನ್ನು ದೇವಸ್ಥಾನ ಪ್ರವೇಶ ಮಾಡಿಸಬಾರದೆಂದು ಪ್ರಧಾನ ಮಂತ್ರಿ ರಾಜಾಜಿಯವರೇ ಹಿಂದೊಮ್ಮೆ, ಸರಕಾರವು ಶಾಸನ ಮೂಲಕವಾಗಿ ಈ ಸಮಸ್ಯೆಯನ್ನು ಬೇಗನೇ ಮುಗಿಸಿ ಬಿಡಬಹುದಿತ್ತೆಂದು ಹೇಳಿದ ವಿಮರ್ಶಕರಿಗೆ ಉತ್ತರಕೊಟ್ಟಿದ್ದಾರೆ ಮದ್ರಾಸು ಮಂತ್ರಿಮಂಡಳವು ಎಲ್ಲವನ್ನೂ ಶಾಂತ ರೀತಿಯಿಂದ ವಿಚಾರಿಸಿ ಮಾಡುತ್ತಿದೆ ಜನಮತವು ಸನ್ನದ್ಧವಾದಲ್ಲಿ ಮಾತ್ರ ಹರಿಜನರಿಗೆ ದೇವಾಲಯಗಳೊಳಗೆ ಪ್ರವೇಶ ಮಾಡಬಿಡಬಹುದೆಂದು ಕಾಂಗ್ರೆಸು ಮಂತ್ರಿಮಂಡಲವು ಹೇಳುವುದು. ನಿಜವಾಗಿಯೂ ಜಗತ್ತೇ ಮನ್ನಿಸತಕ್ಕ ನ್ಯಾಯವಿದೆ. ಹೀಗೆ ಹೇಳುವ ಕಾಂಗ್ರೆಸು ಮಂತ್ರಿಗಳ ಹೃದಯಗಳಲ್ಲಿ ಸವರ್ಣ ಹಿಂದೀಯರು, ಇಂತಹ ನ್ಯಾಯವಾದ ಸುಧಾರಣೆಗೆ ಆತಂಕಪಡಿಸುವಷ್ಟು ದುಷ್ಟ ಹೃದಯಗಳಲ್ಲವೆಂಬ ಖಂಡಿತ ನಿರ್ಧಾರವೂ ಇದೆ. ರಾಜಾಜಿಯವರು ಎಣಿಸಿದಂತೆ ನ್ಯಾಯವಾಗಿ ಯಾವುದು ಆಗಬೇಕಿತ್ತೋ ಅದು ನ್ಯಾಯರೀತಿಯಿಂದಲೇ ಇಂದು ಆಗಿದೆ

ಸಂಕುಚಿತ ಮನೋವೃತ್ತಿಯ ಸನಾತನಿಗಳೆಂಬವರಲ್ಲಿ ಇನ್ನೂ ಇದನ್ನು ನಿಷೇಧಿಸುವವರು ಇದ್ದಾರೆ. ಹಿಂದೆ ಇದ್ದ ಕಾನೂನಿನಂತೆ, ದೇವಾಲಯಗಳಿಗೆ ಹರಿಜನರು ಪ್ರವೇಶ ಮಾಡಿದ್ದಲ್ಲಿ, ಅವರನ್ನು ಶಿಕ್ಷೆಗೆ ಗುರಿಪಡಿಸಬಹುದಾಗಿತ್ತು! ಅದಕ್ಕೆ ಅಸ್ಪೃಶ್ಯರಿಗೂ ಶಿಕ್ಷೆಯಾಗಬಹುದಿತ್ತು! ಹೀಗಾಗಿ ಅದನ್ನು ಇಂದು ದೇವಾಲಯ ಪ್ರವೇಶಕೊಡಬೇಕೆಂದು ಜನಮತವು ಹೆಚ್ಚುತ್ತಿರುವುದರಿಂದ, ತಿದ್ದುಪಡಿ ಮಾಡುವುದು ಅಗತ್ಯವಾಗಿತ್ತು ಶಾಸನವೆಂದರೆ ಯಾವಾಗಲೂ ಬಹುಮತದ ಒಪ್ಪಿಗೆಗೆ ಬರವಣಿಗೆಯ ಮೂಲಕ ಕೊಡುವ ಒಂದು ರೂಪು ನ್ಯಾಯವಿಧಾಯಕ ಸಭೆಗಳಲ್ಲಿಯೂ ಬಹುಮತದ ಅಭಿಮತವನ್ನು ಜನರ ಪ್ರತಿನಿಧಿಗಳಿಂದ ತಿಳಿದು ಶಾಸನಗಳು ರಚಿಸಲ್ಪಡುತ್ತವೆ ಇದೇ ಸರಕಾರದ ಕರ್ತವ್ಯವೂ ಆಗಿದೆ! ಇಂದಿನ ಈ ದೇವಸ್ಥಾನ ಪ್ರವೇಶ ರಕ್ಷಣಾ ಶಾಸನವನ್ನು ಪ್ರತಿಯೊಬ್ಬ ಸಭ್ಯ ನಾಗರಿಕನೂ ಸ್ವಾಗತಿಸಬೇಕಾಗಿದೆ

ಸ್ವೀಕಾರ—ವಿಮರ್ಶೆ

ದೇವದಾಸ: ಮೂಲಲೇಖಕ ... ಚ್ಚಂದ್ರ ಚಟರ್ಜೀಯವ ... ಅನುವಾದಕ ಶ್ರೀ ಗುರುನಾಥ ಜೋಶಿಯವರು ಪ್ರಕಾಶಕರು ಶ್ರೀ ಮಂಗಳೂರ ಗೋವಿಂದರಾಯರು ಸಾಹಿತ್ಯ ಭಂಡಾರ ಹುಬ್ಬಳ್ಳಿ ... ಆಕಾರದ ... ಪುಟಗಳು, ಬೆಲೆ ಸಾದಾಪ್ರತಿಗೂ ಒಂದು, ಕಾಲಿಕೋ ಪ್ರತಿಗೂ ಒಂದೂವರೆ

ವಂಗೀಯ ಸಾಹಿತ್ಯವು—ಅದರಲ್ಲಿಯೂ ಅಲ್ಲಿನ ಕಾದಂಬರೀ ಕಾರರ ಅದ್ಭುತ—ರಮಣೀಯವಾದ ಕಥನಶೈಲಿಯು ಸಮಸ್ತ ಭಾರತವನ್ನೇ ಬಹರಿಯಲ್ಲಿ ತೇಲಿಸಿದೆ ಬಂಕಿಂಚಂದ್ರರೇ ಮೊದಲಾದವರ ಬಂಗಾಳೀ ಕಾದಂಬರಿಗಳ ಸವಿಯನ್ನು ತಿಳಿಗನ್ನಡ ಶೈಲಿಯಿಂದ ಒಟ್ಟಿಯಿಸಿತೆಂದು ಮೊತ್ತಮೊದಲು ಕಾದಂಬರಿಗಳ ಸವಿಯನ್ನು ಕನ್ನಡಿಗರಿಗೆ ಉಣ್ಣಿಸಿದವರು, ದಿ. ವೆಂಕಟಾಚಾರ್ಯರು. ಇದೀಗ ಕಾದಂಬರಿ ಲೇಖನದಲ್ಲಿ ಕವೀಂದ್ರರವೀಂದ್ರರನ್ನೂ ಮೀರಿದ ಪ್ರತಿಭಾಶಾಲಿಗಳಾದ ಶರಚ್ಚಂದ್ರ ಚಟರ್ಜಿಯವರ ಅಮರಕೃತಿಯೊಂದು ಶ್ರೀ ಗುರುನಾಥ ಜೋಶಿಯವರ ಸರಳಶೈಲಿಯಲ್ಲಿ ಕನ್ನಡಿಗರ ಪಾಲಿಗೆ ರಸದೂಟವನ್ನೀಯಲು ಸಿದ್ಧವಾಗಿದೆ ಭಾಷಾಂತರಗಳಲ್ಲಿ ಹಂದು, ಚಿತ್ರಲೋಕದಲ್ಲಿ ಮೆರೆದು, ರಸಿಕರ ಮನಸ್ಸನ್ನು ಸೂರೆಮಾಡಿದ ಈ ಮೂಲಕೃತಿಯ ವೈಭವವನ್ನು ವಿಮರ್ಶಿಸಿ ವರ್ಣಿಸಿ ಹೇಳುವುದು ಅಸಾಧ್ಯ ಸಾಹಸವೂ ಅವ್ಯಕ್ತಿ ದೋಷವೂ ಆದೀತು

ಮಧ್ಯಮ ತರಗತಿಯ ಮನೆತನದಲ್ಲಿ ಹುಟ್ಟಿ ಬೆಳೆದ ದೇವದಾಸ ಪಾರ್ವತಿಯವರ ನಿಷ್ಕಲ್ಮಷ ಜೀವನ್ನ ಎಳೆ ಹಕ್ಕಿಗಳಂತೆ ಅಜತ ಜೀವಿಗಳು ಪ್ರಕೃತಿಯ ಮಡಲಲ್ಲಿ ನಲಿದಾಡುವ ಆನಂದದ ದಿನಗಳು, ದೇವದಾಸನ ವಿದ್ಯಾರ್ಥಿದೆಶೆಯ ದೂರದ ಜೀವನದಲ್ಲಿಯೂ ಪಾರ್ವತಿಯು ನಿರಂತರ ತನ್ನ ಮನೋಮಂದಿರದಲ್ಲಿ ಕಲ್ಪಿಸಿಕೊಂಡ ಅವರ ಮುಂದಿ ಬಾಳುವೆಯ ಸವಿಕನಸುಗಳು ಕಡೆಗೆ ಹೇಡಿಯಾದ ದೇವದಾಸನಿಂದ ಪ್ರೇಮವಂಚಿತೆಯಾದ ಪಾರ್ವತಿಯ ದುರಂತ ವಿವಾಹಿತ ಜೀವನ, ಆಕೆಯ ಗೃಹಿಣೀ ಧರ್ಮ ಚಂಚಲಚಿತ್ತನಾದ ದೇವದಾಸನ ಬಾಳುವೆಯಲ್ಲಿ ಆದ ಪತನ ಚಂದ್ರಮುಖಿಯು ದೇವದಾಸನಲ್ಲಿ ಕಂಡ ಪ್ರೇಮ ಸೌಂದರ್ಯ ದರ್ಶನ, ಪಾರ್ವತಿಯು ಕೈಹಿಡಿದ ವೃದ್ಧಪತಿ ಚೌಧರಿಗೆ ಆಕೆಯು ಒದಗಿಸಿದ ಗೃಹಸೌಖ್ಯ, ತಾಸು ಗೃಹದ ಅಧಿಕಾರಕ್ಕಾಗಿ ದೇವದಾಸನು ಉಂಡ ಜೀವನದ ಕಹಿಯನುಭವಗಳು, ಕಡೆಗೆ—ಪ್ರಮತ್ತನಾಗಿ—ದುಗ್ಧನಾಗಿ—ಪ್ರೇಮವಂಚಿತನಾಗಿ, ಸ್ಥಿತಿಯಿಲ್ಲದೆ, ಗತಿಯಿಲ್ಲದೆ ಬಾಳುವೆಯ ಕೊನೆಗಂಡ ದೇವದಾಸನ ವಿಷಾದಾಂತ, ಪಾರ್ವತಿಯ—ಸಹಿಸಲಾರದ ಮನದಯಾತನೆ—ಇವೆಲ್ಲವೂ ಕಥೆಯನ್ನು ಓದುತ್ತಿದ್ದಂತೆ ಅಲೆಯಲೆಗಳಾಗಿ ಮೂಡಿ ಬಂದು, ವಾಚಕರನ್ನು ಕಲ್ಪನೆಯಲ್ಲಿ ಮುಳುಗಿಸುವವು. ಪ್ರಕಾಶಕರೇ ಅಂದಂತೆ "ಕಣ್ಣೀರು ಮಿಡಿಯುತ್ತಲೇ ಸಂಪೂರ್ಣ ಓದಿ ಮುಗಿಸಬೇಕಾಗಿದೆ". "ನಮ್ಮ ಸಮಾಜದಲ್ಲಿಯೂ ಪ್ರೇಮ ಕೈದವಾಗಿ ಸಂಕಟಪಡುವ" "ದೇವದಾಸನ ಪಾರ್ವತಿಯರು ಇಡಿಯಾಗಿಯೋ, ಬಿಡಿಯಾಗಿಯೋ" ಇದ್ದಾರೇ? "ಸಾಹಿತ್ಯ ಸೃಷ್ಟಿಯ ಈ ಕರುಣಾ ಮೂರ್ತಿಗಳು—ಪ್ರೇಮವಂಚಿತರು—ಜೀವಂತ ಸೃಷ್ಟಿಯಲ್ಲಿಯೂ ವಿಪುಲವಾಗಿ ಇರಬಹುದೇ' ಎಂಬ ಕುರಿತು ಪ್ರಕಾಶಕರೇ ಮಾಡಿದ ತೀರ್ಮಾನಕ್ಕೆ ನಾವು ಕಂಬನಿದುಂಬಿ ತಲೆದೂಗುತ್ತೇವೆ ಅನುಭವದಲ್ಲಿ ಅಂತಹ ರುದ್ರ ಸತ್ಯವನ್ನು ಎದುರಿಸುವ ಸಂದರ್ಭವು ಯಾವ ಪಾಪಿಗೂ ಬರದಿರಲಿ ಎಂದು ಹಾರೈಸುತ್ತೇವೆ ಎಲ್ಲದಕ್ಕಿಂತಲೂ ಹೆಚ್ಚಾಗಿ, ಪತಿಯ ಸೌಭಾಗ್ಯದಿಂದಲೂ, ಪುತ್ರ ಸುಖದಿಂದಲೂ ದೊರೆಯದ ದೇವದಾಸನ ತಾಯಿಯ ಕರುಣಾಮಯಿಯಾದ ಮೂರ್ತಿಯು ಕಥೆಯ ಕೊನೆಗೆ ನಮ್ಮನ್ನು ಸಂಕಟಗೊಳಿಸುತ್ತದೆ. ಆ ಮಹಾಮಾತೆಯನ್ನು ಕಾದಂಬರೀಕಾರರು ಯಾವ ನೆಲೆಯಲ್ಲಿ ಬಿಟ್ಟಿರುವರೆಂದು ತಿಳಿಯುವುದು ಅಸಾಧ್ಯವಾಗಿ ಅದು ವಾಚಕರಲ್ಲಿ ಕುತೂಹಲವನ್ನು ಹುಟ್ಟಿಸುತ್ತದೆ!

ಶಾಂತಿನಿಕೇತನದ ವಿದ್ಯಾರ್ಥಿ ಶ್ರೀ ಗೋವಿಂದ ಹಳ್ಳಿಕೇರಿ "ಶರಚ್ಚಂದ್ರರ ಜೀವನ ಮತ್ತು ಸಾಹಿತ್ಯ"ದ ಕುರಿತು ಬರೆದ ಚೊಕ್ಕಮುನ್ನುಡಿಯು ಪುಸ್ತಕದ ಅಂತರಂಗ ಸೌಂದರ್ಯವನ್ನು ಇಮ್ಮಡಿಸಿದೆ ಜೀವನ ಸಾಹಿತ್ಯದ ಪರಿಚಯದೊಡನೆ ಶರಚ್ಚಂದ್ರರ ಭಾವಚಿತ್ರವನ್ನೂ ಕೊಟ್ಟು ವಾಚಕರ ಆಗ್ರಹವನ್ನು ಪ್ರಕಾಶಕರು ಪೂರ್ತಿಗೊಳಿಸಿದ್ದಾರೆ

ಶ್ರೀ ಗು... ಜೋಶಿಯವರ ಈ ಸಾಹಸವು ಸರ್ವಾದರಣೀಯವಾಗಿ ಇನ್ನಷ್ಟು ಸಾಹಿತ್ಯಸೇವೆ ಮಾಡಲು ಅವರಿಗೆ ಪ್ರೋತ್ಸಾಹ ಸಿಗಲಿ ಎಂದು ಹಾರೈಸುತ್ತೇವೆ ಸಾಹಿತ್ಯ ಭಂಡಾರವೂ ಕನ್ನಡ ಸರಸ್ವತಿಯ ಸಮಾರಾಧನೆಯನ್ನು ಇನ್ನಷ್ಟು ... ಗೆ ಮಾಡ ... ರಲಿ ಎಂದು ನಮ್ಮ ಕೋರಿಕೆ

ಕವಿಸ್ವಾರ

ಜಯಂತಿ — ... ಸಚಿತ್ರ ... ಸಂಪಾದಕರು ಶ್ರೀ ... ಪಾಟೀಲ ಮಧ್ವರಾಯರು ... ಬೆಟಗೇರಿ ಕೃಷ್ಣಶರ್ಮ ... ವರ್ಗಣಿ ... ಸೀ... ರೂ ... ೧ ... ೦

... ದಿಂದ ... ಸಂದರ್ಭದ ... ಪತ್ರಿಕೆ ... ಕನ್ನಡದಲ್ಲಿ ಹೊಸರಾಗ ಸಾಹಿತ್ಯಕ್ಕೆ ... ಪಾದಕರಾಗಿ ನಡೆಸ ... ಪ್ರಾರಂಭ ... ನೂತನದ ... ಸಂಗ್ರಹದ ಕುರಿತು ವಿವರಿಸಬೇಕಾದುದಿಲ್ಲ ಪ್ರತಿಯೊಂದು ಲೇಖನವನ್ನು ಸಚಿತ್ರವಾಗಿ ಕೊಡುವ ಸಾಹಸವು ಸಂಪೂರ್ಣ ಆದರ್ಶವೂ ಆಗಿದೆ ಜಯಂತಿಯು ವಿಶಾಲ ಕರ್ನಾಟಕದಲ್ಲಿ ವಿಜಯ ಜಯಂತಿಯಾಗಿ ಮೆರೆದು ನಿಲ್ಲಲಿ

ಇಡ್ಯ ವಿದ್ಯಾದಾಯಿನೀ ಶಾಲಾ, ಸರ್ಕ್ಯುಲರ್:—ಇಪ್ಪತ್ತೆರಡು ವರ್ಷಗಳಿಂದ ನಿರಂತರ ವಿದ್ಯಾಂಗದಲ್ಲಿ ಶ್ರಮಿಸುತ್ತಿರುವ ಈ ಸಂಸ್ಥೆಯ ... ನೇ ವಾರ್ಷಿಕ ವರದಿಯು ಹಸ್ತಗತವಾಗಿದೆ ಆ ಸಂಸ್ಥೆಯನ್ನು ನಮ್ಮ ಜಿಲ್ಲೆಯ ಒಂದು ಆದರ್ಶ ವಿದ್ಯಾಮಂದಿರವಾಗಿ ಮಾಡುವ ಭಾರವು ಮಹಾಜನರದು ಶಾಲೆಯು ಉನ್ನತಿಗೇರಲಿ ಎಂದು ಬಯಸುತ್ತೇವೆ

ಜನರಲ್ ಸೇಲ್ಸ್ ಟ್ಯಾಕ್ಸ್ ಮಸೂದೆ:—೧೯೩೯ನೇ ಇಸವಿಯ ಮದ್ರಾಸು ಪ್ರಾಂತಿಕ ಸರಕಾರದ IXನೇ ಕಾಯಿದೆಯಾದ ಸಾಧಾರಣ ವಿಕ್ರಯದ ಮೇಲೆ ತೆರಿಗೆ ಹೊರಿಸುವ ಕಾಯಿದೆ' ಯನ್ನು ಅದರ ಮೂಲ ಪ್ರತಿಯೊಡನೆ ಕನ್ನಡ ಭಾಷಾಂತರವನ್ನೂ ಕೊಟ್ಟಿರುವ ಈ ಚಿಕ್ಕ ಪುಸ್ತಕವು ನಮ್ಮ ಹಸ್ತಗತವಾಗಿದೆ ಶ್ರೀ ವೆಂಕಟ್ರಾಯ ಬಾಳಿಗಾ, ಎಂ ಎಲ್ ಎ ಇವರೇ ತಮ್ಮ ಮುನ್ನುಡಿಯಲ್ಲಿ ಇದರ ಉಪಯೋಗವನ್ನು ವಿವರಿಸಿ ಬರೆದಿದ್ದಾರೆ! ಶ್ರೀ ಕೆ ಎಂ ಬಾಬು ಶೆಟ್ಟರು ಯೋಗ್ಯ ಭಾಷಾಂತರ ಮಾಡಿದ್ದಾರೆ ಕಾಸರಗೋಡಿನ ಶ್ರೀ ಕೆ ವಾಮನ ಶೆಣೈಯವರು ಈ ಪುಸ್ತಕದ ಪ್ರಕಾಶದಿಂದ ಬಹಳ ಉಪಕಾರ ಮಾಡಿದ್ದಾರೆ ಎಲ್ಲರೂ ಹೆಚ್ಚಾಗಿ ವ್ಯಾಪಾರಸ್ಥರು ಅವಶ್ಯ ಓದಬೇಕಾದ ಪುಸ್ತಕ ಬೆಲೆ ನಾಲ್ಕಾಣೆ

ನವಭಾರತದ ನಿರ್ಮಾಣಕ್ಕಾಗಿ ಹೋರಾಡಿದ ಧರ್ಮವೀರ!

[ಸ್ವಾಮಿ ದಯಾನಂದ ಸರಸ್ವತಿಯವರ ಉದಾತ್ತ ಜೀವನ!]

ಕಾಠಿಯಾವಾಡ್! ಇಲ್ಲಿಯೇ ಇಂದಿನ ಭಾರತದ ರಾಷ್ಟ್ರೀಯತೆಯ ಉಗಮವಾದುದು! ಉತ್ತರ ಹಿಂದುಸ್ಥಾನವು ಇಡೀ ಭಾರತದ ಸೇವೆಗಾಗಿ ಎರಡು ಪ್ರಭಾವಶಾಲಿಗಳಾದ ಮಹಾತ್ಮರನ್ನು ಹೆತ್ತು ದಾನವಿತ್ತ ಪುಣ್ಯಸ್ಥಳವಿದು! ಅವರಲ್ಲಿ ಒಬ್ಬರು ಸ್ವಾಮಿ ದಯಾನಂದ ಸರಸ್ವತಿಯವರು, ಇನ್ನೊಬ್ಬರು ಭಾರತದ ಭಾಗ್ಯವಿಧಾತಾ-ಮಹಾತ್ಮಾ ಗಾಂಧಿಯವರು!

ಮೂಲ್ ಶಂಕರ್ ಎಂಬ ಮುದ್ದು ಹೆಸರು ಅವನಿಗೆ ಹೆತ್ತವರಿತ್ತ ನಾಮಕರಣ. ಕಾಠಿಯಾವಾಡಕ್ಕೆ ಉತ್ತರದಲ್ಲಿರುವ, ಮೋರ್ವೀ ಸಂಸ್ಥಾನದ ಒಂದು ಸುಂದರ ಮನೋಹರ ಗ್ರಾಮದ ಮನೆಯೊಂದರಲ್ಲಿ ಮೂಲ್ ಶಂಕರನು ಜನ್ಮತಳೆದನು!

ಮಹಾತ್ಮಾಜಿಯವರು ಇವರ ಜನ್ಮವಾಗಿ ಐವತ್ತು ವರ್ಷಗಳು ದಾಟಿದ ಮೇಲೆ ಕಾಠಿಯಾವಾಡದ ದಕ್ಷಿಣ ಪ್ರಾಂತದಲ್ಲಿ ಪೋರಬಂದರದಲ್ಲಿ ಜನ್ಮಿಸಿದರು! ೨೦ನೇ ಶತಮಾನದಲ್ಲಿ ಹೀಗೆ ಇಬ್ಬರು ಧಾರ್ಮಿಕಯುಗ ಪುರುಷರನ್ನು ಹೆತ್ತ ಈ ಕಾಠಿಯಾವಾಡವು, ಇವರಿಬ್ಬರಿಂದಲೇ ಜಗತ್ತಿನ ದೃಷ್ಟಿಯಲ್ಲಿ ಮಹತ್ವದ ಸ್ಥಾನವನ್ನು ಪಡೆಯಿತು

ಬಾಲ್ಯ ಜೀವನ!

ಇನ್ನೂ ಬಾಲಕನಾಗಿದ್ದಾಗಲೇ, ಮೂಲ್ ಶಂಕರನು, ಹಿಂದೂ ದೇವಾಲಯಗಳಲ್ಲಿ ಆರಾಧಿಸಲ್ಪಡುತ್ತಿರುವ ಮೂರ್ತಿಗಳಲ್ಲಿ ಏನಾದರೂ ದೈವಿಕತೆಯು ಉಂಟೇ ಎಂದು ಸಂದೇಹಪಟ್ಟನು ದೇವರಿಗೆ ಅರ್ಪಿತವಾಗಿದ್ದ ನೈವೇದ್ಯವನ್ನು, ಇಲಿಯು ತಿನ್ನುತ್ತಿದ್ದುದನ್ನು ಕಂಡು ಸಂದೇಹಪಟ್ಟನಂತೆ! ಈ ವಿಷಯವಾಗಿ ತಂದೆತಾಯಿಗಳನ್ನು, ಆ ಜಿಜ್ಞಾಸುವಾದ ಬಾಲಕನು ಆಗಾಗ ಕೇಳುತ್ತಿದ್ದನು ಆದರೆ ಅವರು ಏನೆಂದು ಆತನನ್ನು ತೃಪ್ತಿಪಡಿಸುವರು?

ಹೀಗೆ ಜಿಜ್ಞಾಸುವಾದ ಶಂಕರನ ಚೇಷ್ಟೆಗಳಿಂದ ಹಳ್ಳಿಯ ಸರಳಜೀವನದ ಆತನ ಮಾತಾಪಿತೃಗಳು ಬೇಸರಗೊಂಡವರಾಗಿ ಬೇಗನೇ ಮದುವೆ ಮಾಡಬೇಕೆಂದು ಬಯಸಿದರು ಆದರೆ ಆತನು ಗೃಹತ್ಯಾಗಮಾಡಿ, ಯೋಗಾಭ್ಯಾಸಕ್ಕಾಗಿ ಹಿಂದೂದೇಶದಲ್ಲಿ ಸಂಚಾರ ಮಾಡತೊಡಗಿದನು ಮಥುರಾದೇಶದಲ್ಲಿ ಕಟ್ಟಕಡೆಗೆ ವೃದ್ಧ ಸನ್ಯಾಸಿಗಳ ಪಾದಮೂಲದಲ್ಲಿ ಕುಳಿತು, ವೇದಗಳನ್ನು ಅಭ್ಯಾಸಮಾಡಲು ತೊಡಗಿದನು ೪೦ನೇ ವರ್ಷದಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಸಂಪೂರ್ಣಗೊಳಿಸಿದ ಮೇಲೆ, ಗುರುವಿನ ಆಜ್ಞೆಯಿಂದ ಭಗ್ನವಾದ ತನ್ನ ದೇಶವನ್ನು ಆತನು ಉದ್ಧರಿಸಲು ದೀಕ್ಷೆ ತೊಟ್ಟನು ವೇದಗಳಲ್ಲಿ ಕಂಡ ಸತ್ಯದ ಅರ್ಥವನ್ನು ಜನತೆಯಲ್ಲಿ ಪ್ರಚಾರ ಮಾಡುತ್ತಾ ಹೊರಟು, ಪ್ರಾಚೀನ ಕಾಲದಿಂದಲೇ, ಹಿಂದೂ ದೇಶದಲ್ಲಿದ್ದ ಉತ್ತಮ ಆರ್ಯಜೀವನದ ಮಾದರಿಯನ್ನು ವಿವರಿಸುತ್ತಾ, ಜನರಲ್ಲಿ ನೈತಿಕ ನೆಲೆಯು ನಿಲ್ಲುವಂತೆಯೂ, ರಾಷ್ಟ್ರವು ನೀತಿಯ ಮತ್ತು ಪವಿತ್ರ ಧರ್ಮದ ತಿರುಳನ್ನು ಮನವರಿಕೆ ಮಾಡುವಂತೆಯೂ ಆತನು ತನ್ನ ಪ್ರಚಾರವನ್ನು ಸಾಗಿಸಿದನು!

ಆರ್ಯಸಮಾಜದ ಸ್ಥಾಪನೆ

೧೮೭೫ರಲ್ಲಿ ಸ್ವಾಮಿ ದಯಾನಂದರವರು ಆರ್ಯಸಮಾಜವೆಂಬ ಸಂಸ್ಥೆಯನ್ನು ಸ್ಥಾಪಿಸಿದರು. ಸಾಮಾಜಿಕ, ಧಾರ್ಮಿಕ ತತ್ವಗಳಲ್ಲಿ ಹಿಂದೂಸ್ಥಾನವು ಹಿಂದಿನ ವೇದಕಾಲೀನ ಜೀವನವನ್ನೇ ಅನುಸರಿಸುವಂತೆ, ಹಿಂದೂ ಧರ್ಮದಲ್ಲಿಯೇ ಕ್ರಾಂತಿಯನ್ನು ಅವರು ಬೋಧಿಸಿದರು. ಇಡೀ ತಮ್ಮ ಜೀವನದಲ್ಲಿ, ಇದನ್ನೇ ಬೋಧಿಸಿ, ಅನೇಕ ಪ್ರಖ್ಯಾತರಾದ ಮಹನೀಯರನ್ನು ತನ್ನ ಕಡೆಗೆ ಸೆಳೆಕೊಂಡರು ಅಕಸ್ಮಾತ್ತಾಗಿ, ೧೮೮೩ನೇ ಅಕ್ಟೋಬರ್ ೩೧ರಂದು ಅವರು ತನ್ನ ೫೯ನೇ ಪ್ರಾಯದಲ್ಲಿ ಕೀರ್ತಿಶೇಷರಾದರು ಅವರ ಮರಣವು ಅವರ ಧಾರ್ಮಿಕತೆಯ ಮಹತ್ವದಿಂದಲೂ, ಜೀವನದಲ್ಲಿ ಆದದುರಂತ ಘಟನೆಯಿಂದಲೂ ಸಂಭವಿಸಿದ ನಿಮಿತ್ತ ಅವರು ಧರ್ಮಕ್ಕಾಗಿ ಜೀವತೆತ್ತ ಮಹಾವಿಭೂತಿಗಳ ನೆಲೆಯಲ್ಲಿ ಮನ್ನಣೆಗೊಳ್ಳುತ್ತಿದ್ದಾರೆ!

ದಯಾನಂದರು ಹಿಂದಿಯಲ್ಲಿ ತಮ್ಮ ಪ್ರಚಾರವನ್ನು ಸಾಗಿಸಿದರು ಇಂಗ್ಲಿಷನ್ನು ಅವರು ಅಭ್ಯಾಸಿಸಿರಲಿಲ್ಲ ಹೀಗೆ ಅವರು ರಾಷ್ಟ್ರದ ಜೀವಂತ ಭಾಷೆಯಲ್ಲಿ ತಮ್ಮ ಕಾರ್ಯ ಪ್ರಚಾರ ಮಾಡಿದುದರಿಂದ, ಅದು ರಾಷ್ಟ್ರದ ಜನಜೀವನದಲ್ಲಿ ಬಹಳ ಫಲ ಪರಿಣಾಮವನ್ನು ಹುಟ್ಟಿಸಿತು ಅವರ ಬೋಧನೆಯಲ್ಲಿರುವ ನಿಜವಾದ ರಾಷ್ಟ್ರೀಯತೆಯು ಗಣದಿ ದಲಿಂಗ, ಗ್ರಾಮದ ಜನರನ್ನು ಅವರು ತನ್ನ ಕಡೆಗೆ ಅತ್ಯಂತ ಆಕರ್ಷಿಸಲು ಶಕ್ತರಾದರು

ದಯಾನಂದರ ತತ್ವಗಳು

ದಯಾನಂದರು ಒಂದೇ ಒಂದು ವಿಶ್ವವ್ಯಾಪಿಯಾದ ದೇವರನ್ನು ಆರಾಧಿಸಲು ಹೇಳಿದರು. ಆರಾಧನೆಯು ಮೂರ್ತಿಕಲ್ಪನೆಯಿಂದಲ್ಲ ದೇವಾಲಯದೊಳಗಿನ ದಿವ್ಯಶಕ್ತಿಯ ಜಾಗೃತದಿಂದ ದೇವರಿಂದ ಮಾನವರಿಗೆ ಅರ್ಪಿತವಾದ ಅನೇಕ ಅಮೂಲ್ಯ ವಿಜ್ಞಾನದ ರಹಸ್ಯವು ವೇದಗಳಲ್ಲಿದೆಯೆಂದು ಅವರು ತಿಳಿಸಿದರು.

ವೇದಗಳಲ್ಲಿ, ಹಿಂದುಗಳ ವಿಶ್ವಾಸವಾಗಿರುವ ಕರ್ಮ, ಮತ್ತು ಪಾಪ ಪುಣ್ಯಗಳಂತೆ ಜನ್ಮಪ್ರಾಪ್ತಿಯ ಕುರಿತು, ಅವರು ಖಂಡಿಸಲಿಲ್ಲ ಗೋಮಾತೆಯ ಪಾವಿತ್ರ್ಯವನ್ನು ಅವರು ಸಾರಿದರು ಅನೇಕ ವೇಳೆ ಅವರ ಬೋಧನೆಗೆ ಸನಾತನಿಗಳಿಂದ ತಡೆ ಬಂದರೂ, ಅವರ ಉದಾತ್ತ ಜೀವನವು ಅವುಗಳೆಲ್ಲವನ್ನು ತಡೆಯಲು ಸಮರ್ಥವಾಯಿತು

ಆರ್ಯಸಮಾಜದ ರಾಜಕೀಯ ಪ್ರಾಧಾನ್ಯ!

ಅಖಿಲ ಭಾರತ ರಾಷ್ಟ್ರಸಭೆಯು ಸ್ಥಾಪನೆಯಾಗುವುದಕ್ಕಿಂತ ಮೊದಲೇ ಆರ್ಯಸಮಾಜವು ಮಾಡಿದ ರಾಜಕೀಯ ಪರಿಣಾಮವನ್ನು ಮರೆತುಬಿಡುವುದು ಸಾಧ್ಯವಿಲ್ಲ ಉತ್ತರ ಭಾರತದಲ್ಲಿ ಮಹಾಜಾಗೃತಿಯುಂಟಾಗಿ, ಸಂಯುಕ್ತ ಪ್ರಾಂತ ಪಂಜಾಬ್ ಮೊದಲಾದ ಪ್ರಾಂತಗಳನ್ನೂ ರಾಜಕೀಯ ಕ್ರಾಂತಿಗೆ ತಯಾರಿಮಾಡಿದ ಅದ್ಭುತ ಕೆಲಸವು ಆರ್ಯಸಮಾಜದ್ದು! ಎಲ್ಲಾ ಅವರ ರಾಜಕೀಯ ಅನುಯಾಯಿಗಳಲ್ಲಿಯೂ, ಪ್ರಧಾನರಾಗಿದ್ದವರು 'ಪಂಜಾಬದ ಕೇಸರಿ' ಯೆಂದು ಹೆಸರಾಂತ ಲಾಲಾ ಲಜಪತರಾಯರು!

ಸ್ವಾಮಿ ವಿವೇಕಾನಂದರಿಗಿದ್ದ ರಾಷ್ಟ್ರೀಯತೆಯು ವ್ಯಕ್ತಿತ್ವ ಶಕ್ತಿಯು ಸ್ವಾಮಿ ದಯಾನಂದರಲ್ಲಿಯೂ ಇತ್ತು! ೧೮೫೭ರ ಸಿಪಾಯಿ ದಂಗೆಯ ಮೇಲೆ ಮಣ್ಣು ಪಾಲಾಗಿದ್ದ ಉತ್ತರಭಾರತದ ಜನರ ರಾಷ್ಟ್ರಾಭಿಮಾನವು ಈ ಇಬ್ಬರು ವ್ಯಕ್ತಿಗಳಿಂದ ಬಹಳವಾಗಿ ಉದ್ರೇಕಗೊಂಡಿತು! ವಿವೇಕಾನಂದರು ಹೆಚ್ಚಾಗಿ ಭಾರತದ ದಕ್ಷಿಣ ಮತ್ತು ಪೂರ್ವದಲ್ಲಿಯೇ ತಮ್ಮ ಪ್ರಭಾವವನ್ನು ಬೀರಿದರು

ಆರ್ಯಸಮಾಜದ ಪ್ರಚಾರ!

ರಾಮಕೃಷ್ಣ ಮಿಶನ್ ಚಳವಳಿವು ಎಲ್ಲಿಗೆ ಹರಡಿರಲಿಲ್ಲವೋ ಅಲ್ಲೆಲ್ಲಾ ಆರ್ಯಸಮಾಜದ ಪ್ರಚಾರವು ಸಾಗಿತು. ಹೀಗೆ ರಾಮಕೃಷ್ಣ ಮಿಶನ್ ಮತ್ತು ಆರ್ಯಸಮಾಜಗಳ ಧಾರ್ಮಿಕ ಚಳವಳಿಗಳು ಹಿಂದೀಯರ ರಾಷ್ಟ್ರೀಯ ಜೀವನದಲ್ಲಿ ಅದ್ಭುತ ಕ್ರಾಂತಿಯನ್ನು ಹುಟ್ಟಿಸಿವೆ.

ಆರ್ಯಸಮಾಜದ ಪ್ರಚಾರದ ಮೇಲೆ ಬಾಲ್ಯವಿವಾಹವು ಉತ್ತರಪ್ರಾಂತದಲ್ಲಿ ಬಹಳವಾಗಿ ಕಡಿಮೆಯಾಯಿತೆಂದು ಹೇಳಬಹುದು ಅಸ್ಪೃಶ್ಯರ ಜೀವನದ ಕಡೆಗೆ ಬಹುಮಟ್ಟಿಗೆ ಸಮಾಜದ ದಯಾದೃಷ್ಟಿಯೂ ಬಿತ್ತು ದೇವಾಲಯಗಳಲ್ಲಿ ಆಗುತ್ತಿರುವ ಅನೇಕ ಅನ್ಯಾಯಗಳು, ಇವರ ಮೂರ್ತಿ ಪೂಜಾ ನಿಷೇಧದಿಂದ ನಿಂತುಹೋದವು. ಪ್ರತಿಯೊಂದು ನಗರಗಳಲ್ಲಿಯೂ ವಿಶಾಲವಾದ ಪ್ರಾರ್ಥನಾಭವನಗಳು ನಿರ್ಮಿತವಾಗಿ, ಅಲ್ಲಿ ಪ್ರಾರ್ಥನೆಗಳೂ ವ್ಯಾಖ್ಯಾನಗಳೂ ನಡೆದುವು ಹಿಂದೂದೇಶದ ರಾಜಕೀಯ ಜೀವನದ ಸುಧಾರಣೆಯು ಧಾರ್ಮಿಕ ಸುಧಾರಣೆಯನ್ನು ಬಿಟ್ಟಿಲ್ಲವೆಂಬುದು ಈ ಆರ್ಯಸಮಾಜದ ಪ್ರಚಾರದಿಂದ ತಿಳಿಯಬಹುದಾಗಿದೆ

ಉತ್ತರಭಾರತದಲ್ಲಿ ಕಾಂಗ್ರೆಸಿನ ಪ್ರಚಾರದ ಹಿನ್ನೆಲೆಯಲ್ಲಿ ಆರ್ಯಸಮಾಜದ ಪ್ರಭಾವವೇ ಬಲವಂತವಾಗಿದೆ ಅಲ್ಲಿನ ಪ್ರತಿಯೊಬ್ಬ ರಾಷ್ಟ್ರೀಯ ಮುಖಂಡನೂ ಆರ್ಯಸಮಾಜದ ಮುಖಂಡನೂ ಆಗಿರುತ್ತಾನೆ ಆರ್ಯಸಮಾಜವೂ ಸ್ವಾರ್ಥರಹಿತವಾದ ದಾರಿಯಲ್ಲಿ ರಾಷ್ಟ್ರೀಯ ಹಿತವನ್ನೇ ಮಾಡಿರುತ್ತದೆ!

ವಿದೇಶಗಳಲ್ಲಿಯೂ ಪ್ರಚಾರ

ಫಿಜಿ ದ್ವೀಪದಲ್ಲಿ (ದಕ್ಷಿಣ ಶಾಂತಸಮುದ್ರದಲ್ಲಿ) ಮತ್ತು ಆಫ್ರಿಕದ ನಾಟಾಲ ಪ್ರಾಂತದಲ್ಲಿಯೂ ಆರ್ಯಸಮಾಜದ ಚಳವಳಿವು ಬಲವಂತವಾಗಿದೆ ಹರಿದ್ವಾರ ಮತ್ತು ಬೃಂದಾವನಗಳ ಗುರುಕುಲಗಳಲ್ಲಿ ಶಿಕ್ಷಣವನ್ನು ಪಡೆಯಲು ಅಲ್ಲಿಂದ ತರುಣ ಭಾರತೀಯ ಯುವಕರು ಬರುತ್ತಿದ್ದಾರೆ! ಭಾರತದಿಂದಲೂ ಅನೇಕ ಮಂದಿ ಬೋಧಕರು ಆ ದ್ವೀಪಾಂತರಗಳಿಗೆ ತೆರಳಿರುವರು, ಇಂದಿನ ತರುಣ ಭಾರತದಲ್ಲಿ, ಈ ಚಳವಳಿವು ಅದ್ಭುತ ಪರಿಣಾಮವನ್ನು ಹುಟ್ಟಿಸಿದ್ದು ಮಾತ್ರವಲ್ಲದೆ, ಇಡೀ ವಿಶ್ವದ ವಿಶಾಲತೆಯಲ್ಲಿಯೂ ತನ್ನ ನೆಲೆಯನ್ನು ಸ್ಥಾಪಿಸಿದೆಯೆಂಬುದರಿಂದ ಇದರ ಸ್ಥಾಪನಾಚಾರ್ಯರಾದ ಸ್ವಾಮಿ ದಯಾನಂದ ಸರಸ್ವತಿಯವರ ಮಹತ್ವವು ತಿಳಿಯಬಹುದಾಗಿದೆ!

(ದೀನಬಂಧು ಸಿ ಎಫ್ ಆಂಡ್ರ್ಯೂಸರ ಲೇಖನದಿಂದ)

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಂಟಾಗುವ ಒಳಲಿಕ್ಕೆ ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವೀರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ- ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:
ಆಯುರ್ವೇದಾಶ್ರಮ : ಮದರಾಸು

ಸ್ಟಾಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು



ನೋಟೀಸು

ಕಾರ್ಕಳ ಡಿ। ಮುನ್ಸಿಫ್ ಕೋರ್ಟಿನಲ್ಲಿ

O S No 269/38
R I A. No 434/39

ರಾಮ ಠಾಕುರ್ — ವಾದಿ, ಅರ್ಜಿದಾರ

ಶೀಪಪ್ಪ ಹೆಬ್ಬಾರ ಕೂಡಾ 5 ಜನರು — } ಪ್ರತಿವಾದಿರು ಎದ್ರಿರು

5ನೇ ಎದ್ರಿ ಅಜೆಕಾರು ಪೇಟೆಯಲ್ಲಿರುವ ಗುಂಡ ಯಾನೆ ಗೋಪಾಲಕೃಷ್ಣಯ್ಯನಿಗೆ ತಿಳಿಸುವುದೇನಂದರೆ–

ಸದರಿ ದಾವೆಯ ವಾದಿಯು ಡಿಕ್ರಿ ಐವೇಜನ್ನು ದಾವಾ ಆಸ್ತಿಯ ಮಾರಾಟದಿಂದ ವಸೂಲು ಮಾಡುವರೆ ಈ ದಾವೆಯಲ್ಲಿ ಒಂದು ಫೈನಲ್ ಡಿಕ್ರಿ ಕೊಡಿಸಬೇಕಾಗಿ ಮಾಡಿದ ಸದರಿ ಅರ್ಜಿಯು ಬರುವ ತಾ. 7-8-1939ಕ್ಕೆ ಇಟ್ಟಿರುತ್ತದೆ ಆ ಕುರಿತು ನಿಮಗೆ ಆಕ್ಷೇಪ ಇದ್ದಲ್ಲಿ ನೀವು ಸದರಿ ತಾರೀಕಿನ ದಿನ ಪೂರ್ವಾಹ್ನ ಘಂಟೆ 10ಕ್ಕೆ ಸದರಿ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಸದರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕಾರ್ಕಳ 14-7-39 } D Venkatesh Bhat, ಅರ್ಜಿದಾರನ ಕಡೆ ವಕೀಲ್.

ನಗರದ ನವ ನಾಯಕರು

[೬ನೇ ಪುಟದಿಂದ ಮುಂದುವರಿದುದು]

ಇಲ್ಲ ಪರವಾ ಇಲ್ಲ. ಕಪ್ಪ ಮಟ್ಟಿಗೆ ಪೇಪರು ಓದುತ್ತಾರೆ. ಇನ್ನು ತುಂಬಾ ಜನ ಬರಬಹುದು.'' ಹೊಸ ಮೈದಾನಿನ ಉಪ್ಪರಿಗೆಗೆ ಶಿಫ್ಟ್ ಮಾಡಿದರೆ–ಮೈದಾನಿಗೆ ಬರುವವರು ನಾಲ್ಕು ಮಿನಿಟು ಕೂತುಹೋದಾರು.''

ಗುಟ್ಟು ಹೀಗೆ–ಅರವಿಂದರಾಯರ ಬಿಡಾರವೇ ರೀಡಿಂಗ ರೂಮು. ಅವರು ಈಗ ಕಛೇರಿಯನ್ನು ಬಿಟ್ಟು ಮೈದಾನಿನ ಬಳಿ ಮನೆ ಹುಡುಕಿದ್ದಾರೆ. ಅವರ ಮಹಡಿಯು ಅವರ ಇಸ್ಪೀಟು ಕ್ಲಬ್ಬು. ಆದುದರಿಂದ ಅದೇ ಅನುಕೂಲ ರೀಡಿಂಗ ರೂಮ್ನು. ರೀಡಿಂಗ ರೂಮಿನಲ್ಲಿ ಪೇಪರು ಇಲ್ಲವಾದರೂ ಜನರು, ಇಸ್ಪೀಟು ಇರುವುದುಂಟು. ವರ್ಷಕ್ಕೆ ಒಂದು ವರ್ಧಂತಿ ನಡೆಯಿಸಿ ಚೊಕ್ಕಟವಾಗಿ ನೆಲ ಗುಡಿಸಿ, ಬೆಂಚು ಇಡಿಸಿ, ಸಬ್ ಜಡ್ಜಿಗಳನ್ನೊ ಅವರ ಮನೆಯವರನ್ನೊ ತರಿಸಿ ಅಧ್ಯಕ್ಷ ಸ್ಥಾನದಲ್ಲಿ ಕುಳ್ಳಿರಿಸಿ, ಅವರ ಮುಗ್ಗುಲಿಗೆ ಒಂದು ಕುರ್ಚಿ ಸಾಹುಕಾರರಿಗೂ ಹಾಕಿಸಿದರೆ–ಆಗ ಎಲ್ಲರಿಗೂ ತೃಪ್ತಿಯಾದಂತೆ.

ಈಗೀಗ ಅವರ ಹಿಂದೀ ಪ್ರಚಾರದ ಉಲ್ಲಾಸ ತುಂಬ ಹೆಚ್ಚಿದೆ. ''ರಾಜಗೋಪಾಲಾಚಾರಿ–ಎಂದರೆ ಧೀರ. ಹಿಂದೀ ಕಡ್ಡಾಯ ಮಾಡಿಯೇ ಬಿಟ್ರು. ಮೊದಲು ಮನೆಮನೆಗೆ ಹೋಗಿ ಸಲಾಂ ಹಾಕಿದರೆ ಹಿಂದೀ ಕಲಿಯುವವರಿಲ್ಲ. ಈಗ ದಮ್ಮಯ್ಯ ಎಂದು ಕಲಿಯುತ್ತಾರೆ''— ಎನ್ನುವವರು ಅರವಿಂದರು. ಸಿಂಹಳ ಸರಕಾರದವರು ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡಬೇಕೆಂದೂ, ಬರ್ಮ, ಸಯಾಮುಗಳಲ್ಲಿ ಪೂರ್ವದಲ್ಲಿ ಆರ್ಯ ಸಂಸ್ಕೃತಿ ಹೋಗಿರುವುದರಿಂದ ಅವರೂ ಸಹ ಹಿಂದಿಯನ್ನು ಎಡೋಪ್ಟ್ ಮಾಡತಕ್ಕದೆಂದೂ ಮುಂದಿನ ಅಖಿಲ ದ. ಭಾ. ಹಿಂದೀ ಕಾನ್ಫೆರೆನ್ಸಿನಲ್ಲಿ ಠರಾವು ತರುವ ನಿಶ್ಚಯವು ಸಹ ಆಗಿದೆ.

ಹೆಚ್ಚೇನು ಅವರ ಕಾರ್ಯದ ಫಲವೋ ಎಂಬಂತೆ ನಾಗೇಂದ್ರ ಪೈಗಳ ಎರಡನೆಯ ಮಗಳು ಸುಶೀಲಾ ಇವರಿಂದ ಹಿಂದೀ ಟ್ಯೂಶನ್ನು ಪಡೆದ ಹದಿನೈದೇ ದಿನದಲ್ಲಿ ಪ್ರಾಥಮಿಕ ಪಾಸುಮಾಡಿಯಾಯಿತು. ಮುಂದಿನ ವರ್ಷ ಹೇಗೂ ವಿಶಾರದದಲ್ಲಿ ಕೇಲಬಹುದಂತೆ.

'ಹಿಂದೀ ಭಗಿನೀ ಸೇವಾ ಸಮಿತಿಯ'ಕ್ಕೆ ಖುದ್ದು ಅರವಿಂದನೇ ಕಾರ್ಯದರ್ಶಿ. ಅಂದರೆ ಸಹಿಗಳನ್ನೆಲ್ಲಾ ಹಾಕುವ ಸುಲಭದ ಕೆಲಸ ಸ್ವತಃ ಅವನ ಧ. ಪ. ಉಮಾ ಮಾಡುತ್ತಾಳೆ. ಆದರೆ ಸಂಘದ ಯಾವತ್ತು ಭಾರ ಅರವಿಂದನ ತಲೆಯ ಮೇಲೆ. ಒಂದು ದಿನ, ಪ್ರಥಮ ಬಾರಿಗೆ ಗಂಡಹೆಂಡಿರಿಬ್ಬರೂ ತಾರಾಮತಿ ದಿಗಂಬರರಾಯರ ಮನೆಗೆ ಹೋಗಿದ್ದರು. ಹೋದುದು ತಾರಾಮತಿಯವರನ್ನು ಸಂಘದ ಅಧ್ಯಕ್ಷೆಯರಾಗಿರಿ ಎಂದು ಕೇಳಲು. ಹಾಗೆ–ತಮ್ಮ ಮಿಸೆಸ್‌ರವರನ್ನು ಮನೆಯೊಳಗೆ ಕಳುಹಿಸಿ ತಾವು ಹೊರಗೆ ಕುಳಿತ ಕಾಲಕ್ಕೆ ಹುಲಿಬಾಯಿಗೆ ಬಿದ್ದಂತೆ ದಿಗಂಬರರಾಯರ ಭೇಟಿಯಾಯಿತು. 'ಹೇಗಿದೆ ನಿಮ್ಮ ಆರ್ಯ ಸಂಘ?' ಎಂದು ಅವರು ವಿಚಾರಿಸಿದರು ದಿಗಂಬರರಾಯರು ''ಕಡು ಹಿಂದು ಮಹಾಸಭೆಯವರು''. ಹೀಗಾಗಿ ಅರವಿಂದನಿಗೂ ರಾಯರಿಗೂ ಮತಭೇದ ಬಹಳ. ಅದನ್ನು ಒಟ್ಟಿ ಇಳಿಸಿ ಹೇಳುವುದಾದರೆ—''ಆರ್ಯ ಸಂಘದವರ ಶ್ರೀ ಕೃಷ್ಣ ಮಹಾರಾಜನು ದಿಗಂಬರರಾಯರಿಗೆ ತಾಜಾ ಪರಮಾತ್ಮನು'' ಈ ಒಂದು ವಿಷಯ ಇರುವ ಅಗಾಧ ಭೇದವೊಂದಲ್ಲವಾದರೆ ತಾನು ಆರ್ಯ ಸಂಘದ ಅಧ್ಯಕ್ಷನಾಗುತ್ತಿದ್ದೆ ಎಂದು ಹೇಳುತ್ತಿದ್ದರು. ಆದರೆ ಅರವಿಂದನು ತನ್ನ ತತ್ತ್ವಗಳಿಗಾಗಿ ಸಂಘವನ್ನಾದರೂ ಮುಳುಗಿಕೊಟ್ಟಾನೆಯ ವಿನಹ, ತತ್ವಗಳನ್ನು ಬಿಡುವವನಲ್ಲ. ಹೀಗಾಗಿ ರಾಯರು 'ಹೇಗಿದೆ ನಿಮ್ಮ ಸಂಘ?' ಎಂದುದೂ, ತಮ್ಮ ಸಂಘ ಚಿರನಿದ್ರಾವಸ್ಥೆಯಲ್ಲಿದ್ದುದೂ ಒಂದು ರೀತಿ ಚುಚ್ಚಿದಂತಾಯಿತು. ''ಎಲ್ಲ ಜೋರಾಗಿ ಕೆಲಸ ನಡೆಯುತ್ತಾ ಇದ್ದೇವೆ'' ಎಂದರು. ''ಏನು ಬಂದಿರಿ ಎಂಬುದು ಮುಂದಿನ ಪ್ರಶ್ನೆ......''

''ಇಲ್ಲ–ಹಿಂದೀ ಭಗಿನೀ ಸೇವಾ ಸಮಾಜದ ಪರವಾಗಿ . . . .

''ಹಿಂದೀ ಭಗಿನೀ ಸೇವಾ ಸಮಾಜ! ಹಿಂದಿಯನ್ನು ತೆಗೆದು ಒಲೆಗೆ ಹಾಕಿರಿ; ಯಾಕೆ ನೀವು ಸಂಸ್ಕೃತದ ಪರವಾಗಿ ಚಳವಳಿ ಮಾಡಬಾರದು? ನಮ್ಮ ಶಾಲೆ ಹುಡುಗರಿಗೆ ಕಲಿತ ನಾಲ್ಕು ಸಂಸ್ಕೃತ ಮಂತ್ರಗಳು ಮರೆತುಹೋದ ಕಾಲಕ್ಕೆ– ಸಂಸ್ಕೃತ ಅರ್ಥವನ್ನೊ, ಗೀತೆಯ ತತ್ವವನ್ನೊ ನೀಕ್ಲಿ ಉಪನ್ಯಾಸ ಮಾಡಿ–ಏನಾದರೂ ಚೇತರಿಸುವುದನ್ನು ಬಿಟ್ಟು ರಾಜಗೋಪಾಲಾಚಾರ್ಯರ ಹಿಂದ ಏತಕ್ಕೆ . . ಅದೂ . . . ಗಂಡಸರಿಗೆ. ಹೆಂಗಸರಾದರೆ ಓದಲಿ. . ನಮ್ಮ ತಂಟೆಗೆ ಬರುವುದಿಲ್ಲ . . . ಎರಡು ಹಿಂದೀ ಕಥಾ ಪುಸ್ತಕ ತರಿಸಿ ಹಾಕಿ ಬಿಟ್ಟರೆ—ಹೈ ಕೀ, ಹೈ, ಕೀ ಮಾಡುತ್ತಿರುತ್ತಾರೆ'' ಎಂದರು. ಬಂದ ಕೆಲಸವಲ್ಲದಿದ್ದರೆ ಅರವಿಂದ ಸುಮ್ಮನಿರುತ್ತಿರಲಿಲ್ಲ. ಅಷ್ಟರಲ್ಲಿ–ಮಿಸೆಸ್ ಅರವಿಂದರು ಬಂದವರು ''ಯೇ ಹೈಂ. . , ಎಂದು ತೊಡಗಿ ಮಿಸೆಸ್ ಉಮಾ . . ಏ ಮೀನ್ ಮಿಸೆಸ್ – ಅರವಿಂದ'' ಎಂದು ಪರಿಚಯ ಮಾಡಿಸಿದರು.

ಅಷ್ಟರಲ್ಲಿ ತಾರಾಮತಿಯು ಹೊರಗೆ ಬಂದಳು. ''ನಿಮ್ಮ ಹಾಗೇ ನಾನೂ ಒಂದು ಅಧ್ಯಕ್ಷತನ ಗಂಟು ಹಾಕಿಕೊಂಡೆ; ಹಿಂದೀ ಭಗಿನೀ ಸೇವಾ ಸಮಾಜದ ಸೆಕ್ರೆಟರಿ' ಇವರು. ಅರವಿಂದರನ್ನು ಕಂಡು 'ನಮಸ್ಕಾರ ಪಂಡಿತಜೀ' ಎಂದರು. ತಮ್ಮ ಶ್ರೀಮತಿಯವರು ಸಾರ್ವಜನಿಕ ಗದ್ದುಗೆಗೆ ಏರಿದುದನ್ನು ಕೇಳಿ ದಿಗಂಬರರಾಯರಿಗೆ ನವಯೌವನವೇ ಬಂದಿತು. ''ಏನು ಅವರಿಗೆ ಬಾಯಾರಿಕೆ ವ್ಯವಸ್ಥೆ ಮಾಡಿದೆಯಾ ಅಲ್ಲ ಹೈಂ ಕೀ ಹೈಂ ಕೀ—ಎಂದು ಬರಿಯ ಉಪಚಾರವೇ'' ಎಂದರು.

ಸರಿ, ಕೂಡಲೇ ಟೀ ವ್ಯವಸ್ಥೆಯಾಯಿತು. ದಿಗಂಬರರಾಯರು ಮಂಗಳೂರಿನ ಡರ್ಟಿ ಪಬ್ಲಿಕ್ ಲೈಫಿನ ಮೇಲೆ ಅರ್ಧ ತಾಸು ಉಪನ್ಯಾಸ ಮಾಡಿದರು. ಅರವಿಂದನು ''ನಮ್ಮ ಜನರಿಗೆ ಏನು ಮಾಡಿದರೂ ಉಮೇದು ಬರುವುದಿಲ್ಲ. ಈಗಂತು ಎಲ್ಲರೂ ಪಾಲಿಟಿಕ್ಸಿಗೆ ಗಂಟುಬಿದ್ದಿದ್ದಾರೆ. ನನಗೂ ಒಂದು ಹಟವಿದೆ—ನನ್ನ–ಗುಮಾಸ್ತಿಕೆಗೆ ಲತ್ತೆಕೊಟ್ಟು ಮುಂದಿನ ಬಾರಿ ಮುನ್ಸಿಪಲ್ ಚುನಾವಣೆಗೆ ನಿಲ್ಲಬೇಕೆಂದು''–ಎಂದರು.

ಅಷ್ಟು ಅಂದುದೇ ದಿಗಂಬರರಾಯರಿಗೆ ಸ್ಫೂರ್ತಿಗೆ ಕಾರಣವಾಯಿತು. ಅರವಿಂದನ ವಾಗ್ಸರಣಿಯು ಉಮಾರಿಯ್ಯನಿಗೂ ಮೀರಿದ್ದೆಂದು ತಿಳಿದರು. ನನಗೊಂದು ಯೋಚನೆಯಿದೆ ಮಿ. ಅರವಿಂದ್, ನಮ್ಮ ತಾರಾಮತಿಯನ್ನು ಹೆಂಗಸರ ಸೀಟಿಗೆ ಈ ಬಾರಿ ನಿಲ್ಲಿಸಬೇಕೆಂದು. ಮಿ ಜಾನಕಿರಾಮಚಂದ್ರಯ್ಯ ಮೂರು ಮೀಟಿಂಗ ಅಟೆಂಡ್ ಮಾಡದೆ ಸೀಟು ಕಳೆದುಕೊಂಡರು. ಆ ಖಾಲಿ ಬಿದ್ದ ಸ್ಥಾನಕ್ಕೆ ನಮ್ಮ ತಾರಾಮತಿಯನ್ನು ನಿಲ್ಲಿಸಬೇಕೆಂದಿದೆ. ಆದರೆ ನನ್ನ ವೈರಿಗಳು ಬಹಳ. ಆದುದರಿಂದ ಗೇಸಿ ಪರ್ಟಾಡೋರವರನ್ನು ನಿಲ್ಲಿಸಬೇಕೆಂದಿತ್ತು. ಎಷ್ಟೆಂದರೂ ಅವಳು ಕ್ರಿಶ್ಚನ್. ನಮ್ಮ ಹಿಂದೂಸ್ ಯ್ಯಾರಾದರೂ ನಿಂತರೆ ಎಂದು—ಯಾಕೆ ಮಿಸೆಸ್ ಅರವಿಂದರನ್ನು ನಿಲ್ಲಿಸಬಾರದು? ಎಂದು ಸೂಚಿಸಿದರು.

''ಯೋಚಿಸುವ''

'ನೋ, ನೋ, ಸೀರಿಯಸ್ಲಿ ಯೋಚಿಸಿರಿ ನಾನು ಸಪೋರ್ಟ್ ಮಾಡುತ್ತೇನೆ. ನೋಡುವ– ಈ ಜಾನಕಿ ಹೋಗಿ ಈ ತನಕ ಮಾಡಿದ್ದೇನು''

ಈ ರೀತಿಯಲ್ಲಿ ಮುಖಾಬಿಲೆಯು ಫಲಪ್ರದವಾಯಿತು. ಅದೇ ಭೂತ ಬೆಳೆದು ಬೆಳೆದು, ಹೆಂಡತಿ ಹೇಳಿದರೂ ಕೇಳದೆ–ತಾಲೂಕು ಕಛೇರಿ ಗುಮಾಸ್ತಿಕೆಗೆ ರಾಜೀಕೊಟ್ಟಾದರೂ ಸಾರ್ವಜನಿಕ ಕೆಲಸಕ್ಕೆ ಕಾಲೀಸುವ ಹಂಬಲ ಅರವಿಂದರಿಗೆ ಬಲವಾಯಿತು.

ಕೆಮ್ಮು, ಶೀತ ಮೊದಲಾದ ಬಾಧೆಗಳಿಂದ ಎದೆಯನ್ನು ರಕ್ಷಿಸಿರಿ!

ಕೆಮ್ಮು, ಶ್ವಾಸಕೋಶಗಳನ್ನು ಬಲಗುಂದಿಸುವ ಶೀತ, ಚಳಿಜ್ವರ ಮೊದಲಾದುವುಗಳಿಂದ ನರಳುವಿರಾದರೆ ಕೂಡಲೇ ಪೆಪ್ಸನ್ನು ಸೇವಿಸುವಂತೆ ಜಾಗ್ರತೆಯಾಗಿರಿ. ಈ ವಿಷಹಾರಿ ಶ್ವಾಸನೀಯ ಗುಳಿಗೆಗಳು ಸೇವಿಸಲು ಬಹಳ ರುಚಿಕರ, ಮತ್ತು ಯಾವತ್ತೂ ಬಾಧೆಗಳನ್ನು ಗುಣಪಡಿಸುವಷ್ಟು ಶಕ್ತಿಯುಳ್ಳದ್ದು.

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಆಳವಾಗಿ ಹೊಕ್ಕು ಅಲ್ಲಿರುವ ವಿಷಕಾರಿ ಕ್ರಿಮಿಗಳನ್ನು ನಾಶಮಾಡಿ ಗಂಟಲನ್ನೂ ಎದೆಯ ಬಾಧೆಯನ್ನೂ ಶಮನಗೊಳಿಸುತ್ತದೆ. ಇವು ಶೀತಜ್ವರ ಮೊದಲಾದುವುಗಳಿಗೆ ತಕ್ಕುದಾದ ಔಷಧ.

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂಪಾಯಿ 1–0–0ರಂತೆ ಮಾರುತ್ತಾರೆ.

ಏಜೆಂಟ್ಸ್ —

ಮೆಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು.

ಯಾವಾಗಲೂ ಪೆಪ್ಸನ್ನು ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a

in denominations of

RS. 50/-, 100/-, 500/-, 1,000/-, & 5,000/-

are now issued at all our Branches

For particulars call at or write to any of our nearest Branches.

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

ಹಳೆಯ ಮತ್ತು ಅಸಹ್ಯವಾದ ಕೆಮ್ಮು, ಮತ್ತು ಒಳಜ್ವರ ಇವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುತ್ತದೆ

ಸರದಾರ ಭವನ Sirdar Bhavan

ಫೆಲಿಕ್ಸ್‌ಪೈ ಬಜಾರ್–ಮಂಗಳೂರು.

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೆ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ

Propriter— H R Rao,

Bangalore Guit Emporuim Madras.

ಜವಾಹಿರಲಾಲರ ಲೇಖನ ಶಕ್ತಿ

ಪಂಡಿತ ಜವಾಹಿರಲಾಲರು ಎಷ್ಟು ಪ್ರತಿಭಾವಂತ ರಾಜನೀತಿಜ್ಞರೋ ಅಷ್ಟೇ ಸುಪ್ರಸಿದ್ಧರಾದ ಗ್ರಂಥಕರ್ತರು. ಆತ್ಮಕಥೆ, ಪ್ರಪಂಚದ ಇತಿಹಾಸ ಮೊದಲಾದ ಗ್ರಂಥಗಳು ಅವರ ಅಂತರ್ ರಾಷ್ಟ್ರೀಯ ಪ್ರಖ್ಯಾತಿಯನ್ನು ಬೆಳಗಿಸಿವೆ. ಅವರ ಗ್ರಂಥಗಳ ಮತ್ತು ಲೇಖನಶಕ್ತಿಯ ವಿಹಂಗಮಾವಲೋಕನವೊಂದನ್ನು ಇಲ್ಲಿ ಕೊಡಲಾಗಿದೆ.

ನೆಹರುಗಳ ಲೇಖನ ಶಕ್ತಿ–

ಪಂಡಿತ ಜವಾಹಿರಲಾಲ ನೆಹರುಗಳ ಲೇಖನಿಯ ಶಕ್ತಿಯು ಎಷ್ಟು ಅದ್ಭುತವಾದುದೆಂದೂ, ಅವರು ಎಂತಹ ಅಮೋಘ ಕೃತಿಗಳನ್ನು ಬರೆಯಬಲ್ಲರೆಂದೂ ಜಗತ್ತು ಇನ್ನೂ ಕೂಡಾ ನೋಡಬೇಕಾಗಿದೆ. ಇದುವರೆಗಿನ ಗ್ರಂಥಗಳು ಅವರ ಮಹಾಸಾಧನೆಯಲ್ಲಿ ಕೇವಲ ಒಂದಂಶ. ಸೆರೆಮನೆಯ ಕತ್ತಲುಕೋಣೆಯಲ್ಲಿ ಮಾತ್ರ ಅವರು ಆವೇಶಗೊಂಡು ಬರೆಯಬಲ್ಲವರಲ್ಲ, ಸೆರೆಮನೆಯ ಒಳಗಡೆಯಲ್ಲಿಯೂ, ಹೊರಗಡೆಯಲ್ಲಿಯೂ ಅವರು ಅದ್ಭುತವಾಗಿ ಬರೆವ ಸಾಮರ್ಥ್ಯವುಳ್ಳವರಾಗಿದ್ದಾರೆ, ಆದರೆ ದುರ್ಭಾಗ್ಯದಿಂದಲೋ ಎಂಬಂತೆ, ಸೆರೆಮನೆಯ ಹೊರಗಣ ವಾತಾವರಣದಲ್ಲಿ ಅವರು ಬಿಡುವಿಲ್ಲದೆ ಕಾದಾಡಬೇಕಾಗಿದೆ. ಸುತ್ತಲಿರುವ ಸ್ವತಂತ್ರ ವಾತಾವರಣದಲ್ಲಿ ಕವಿದಿರುವ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಲೆಯನ್ನು ಹರಿಹರಿದು ಅವರು ಮುಂದೆ ನುಗ್ಗಬೇಕಾಗಿದೆ! ಹಾಗಾಗಿ ಆಗಾಗ ರಾಜಕೀಯಕ್ಕೆ ಸಂಬಂಧಿಸಿದ ಕೆಲವು ಬರಹಗಳೂ ಮತ್ತು ನಮ್ಮ ಮುಂದಿರುವ ಕೆಲವು ಸಮಸ್ಯೆಗಳ ಕುರಿತು ಅವರು ಪ್ರಕಟಿಸುತ್ತಿರುವ ಲೇಖನಗಳಲ್ಲದೆ, ಅವರ ನಿಜವಾದ ಸಾಹಿತ್ಯ ಸಂಪತ್ತನ್ನು ತೋರಿಸುವ ಅದ್ಭುತ ಕೃತಿಗಳು ಇನ್ನೂ ಹೊರಡಲಿಲ್ಲ! ನಿತ್ಯವೂ ಕಾರ್ಯತತ್ಪರರಾಗಿ ಅವಿಶ್ರಾಂತರಾಗಿರುವ ಅವರ ಇಂದಿನ ಈ ರೀತಿಯ ಜೀವನದಲ್ಲಿ ನಾವು ಹೆಚ್ಚಿನ ಸಾಹಿತ್ಯ ಗ್ರಂಥಗಳನ್ನು ಆಶಿಸುವಂತೆ ಕಾಣುವುದೂ ಇಲ್ಲ.

ಆತ್ಮಕಥೆ–

ಸಾಹಿತ್ಯ ದೃಷ್ಟಿಯಲ್ಲಿ ಅವರ ಎಲ್ಲಾ ಕೃತಿಗಳಿಗಿಂತಲೂ ಆತ್ಮಕಥೆಗೆ ಬಹಳ ಹೆಚ್ಚಿನ ಮಹತ್ವವು ಸಲ್ಲಬೇಕಾಗಿದೆ. ಈ ಮಹಾಗ್ರಂಥದಲ್ಲಿ ಅವರು ತಮ್ಮ ನಿರ್ಮಲ ಹೃದಯವನ್ನು ಬಿಚ್ಚಿ ತೋರಿಸಿದ್ದಾರೆ, ಆತ್ಮೀಯ ಭಾವನೆಗಳನ್ನು ಹೊರಗೆಡವಿದ್ದಾರೆ. ತನ್ನ ವಿಚಾರತರಂಗವನ್ನು ತೇಲಬಿಟ್ಟಿದ್ದಾರೆ. ಒಬ್ಬ ಅಪಕ್ವ ತರುಣನು, ತನ್ನ ಆದರ್ಶಸಾಧನೆಯನ್ನು ಮುಂದುವರಿಸಿ, ಸಂಪೂರ್ಣ ನೆಲೆಯೊಂದನ್ನು ಬಂದು ಮುಟ್ಟಿದ ಸ್ಥಿತಿಯನ್ನು ನಾವಿಲ್ಲಿ ಕಾಣಬಹುದಾಗಿದೆ. ಅವರು ಮಹಾಮೇಧಾವಿಗಳಾಗಿ ರಾಜನೀತಿಯಲ್ಲಿ ಮೈ ಮರೆದು ಯುದ್ಧ ಹೂಡುವ ಯೋಧರಂತಿರದೆ ಯಾವಾಗಲೂ ಭಾವನಾಮಯರಾಗಿ, ಆವೇಶಪರರಾಗಿ ಮುನ್ನಡೆಸುವ ಮೂರ್ತಿಗಳಾಗಿದ್ದಾರೆ.

ಇಂತಹ ಮಾನಸ ಶಕ್ತಿಯ ಮಹಾ ವರ್ಚಸ್ಸಿನಿಂದ ಕೂಡಿದ ಅವರು ತಮ್ಮ ಲೇಖನಿಯಲ್ಲಿ ಅಲ್ಲಲ್ಲಿ ಯಾರು ರಾಷ್ಟ್ರದ ಕರೆಬಂದಾಗ ಹಿಂದೆ ನಿಂತು ಹೇಡಿಗಳಾಗಿರುವರೋ, ಅವರ ಕಡೆಗೆ ಬೀರಿದ ಪರಿಹಾಸ್ಯದ ನಗೆಯ ಮಾಟವು ಮಹಾ ಮಾಂತ್ರಿಕವಾಗಿದೆ. ಹೇಡಿಗಳ ಹೃದಯವನ್ನು ಕಲಕಿಸುವಂತಿದೆ! ರಾಜಕೀಯಕ್ಕಿಳಿಯುವುದು ತಮ್ಮ ಸ್ವಾರ್ಥದ ಬೇಳೆಯನ್ನು ಬೇಯಿಸುವ ದೃಷ್ಟಿಯಿಂದ ಎಂಬಂತವರನ್ನು, ಹಾಗೂ ಅಧಿಕಾರಲಾಲಸೆಯುಳ್ಳವರನ್ನೂ, ಧುರೀಣತೆಯ ಅಭಿಲಾಷೆಯುಳ್ಳವರನ್ನೂ, ಅವರು ತಮ್ಮ ಕೃತಿಗಳಲ್ಲಿ ಸಾಕಷ್ಟು ಭಂಗಿಸಿದ್ದಾರೆ! ಅಂಥವರ ಹೃದಯದ ಶೂನ್ಯತೆಯನ್ನು ಜಗತ್ತಿಗೆ ಸಾರಿದ್ದಾರೆ!

ಪ್ರಪಂಚದ ಇತಿಹಾಸ–

ಅವರು ಬರೆದ ಪ್ರಪಂಚದ ಇತಿಹಾಸವು ಅದ್ಭುತರಮಣೀಯವಾಗಿದೆ! ಚರಿತ್ರೆಯು ನಮಗೆ ಬೋಧಿಸುವ ಅಂಶಗಳನ್ನು ಅದರ ಪ್ರತಿಯೊಂದು ಪುಟವೂ ನಮಗೆ ಕಲಿಸುತ್ತದೆ! ಇದು ಕೇವಲ ಒಂದು ಚರಿತ್ರೆಯ ಕಥನ ಮಾತ್ರವಲ್ಲ, ಇದು ಚರಿತ್ರೆಯ ತಿರುಳು! ಇದು ಇಂದು ಪ್ರಪಂಚದಲ್ಲಿ ಮಹತ್ವದ ಒಂದು ಚಾರಿತ್ರಿಕ ಗ್ರಂಥ! ಇದು ಕೇವಲ ಹುಡುಗರು ಮಾತ್ರ ಓದುಕಲಿಯುವಂತಹುದಲ್ಲ, ಎಲ್ಲಾ ಜನರಿಗೂ ಎಲ್ಲಾ ಸಮಯಕ್ಕೂ ಓದಲು ಅಭಿರುಚಿಯುಳ್ಳದ್ದು. ಪಂಡಿತ ನೆಹರುಗಳ ಅದ್ಭುತ ಜ್ಞಾನದ ಸುಂದರ ಸಂಗ್ರಹವಿದು!

ಇತರ ಕೃತಿಗಳು–

ಇನ್ನು ಅವರದು ಅನೇಕ ರಾಜಕೀಯ ಸಮಸ್ಯೆಗಳ ಕುರಿತು ಬರೆದ ಲೇಖನಗಳು ಇವೆ. ರಾಜಕೀಯ ವಿರೋಧಿಗಳ ಹೃದಯವನ್ನು ಹದಗೆಡಿಸುವ ಅವರ ಮಾರ್ಮಿಕ ವಿಚಾರಸರಣಿ! ಅವರಿಂದ ಯಾರು ಉತ್ತರವನ್ನು ಪಡೆಯಲು ಆಶಿಸುತ್ತಾರೋ, ಅಂಥವರಿಗೆ ನೆಹರುಗಳು ತಮ್ಮ ಉತ್ತರದ ನಿರ್ದಯ ಒದೆತದಿಂದ ಸರಿಯಾಗಿ ಹೊಡೆಯುತ್ತಾರೆ!

ನೆಹರುಗಳು ಹಲವು ಪ್ರಾಂತದ ಸುಂದರ ಪ್ರಾಕೃತಿಕ ವರ್ಣನೆಗಳನ್ನು ಬರೆದಿದ್ದಾರೆ! ಕಾಶ್ಮೀರ ಮೊದಲಾದ ದೃಶ್ಯಗಳ ವರ್ಣನೆಗಳು ನಿಜವಾಗಿಯೂ ಗದ್ಯರೂಪದಲ್ಲಿದ್ದರೂ ಅವುಗಳ ಸಾಹಿತ್ಯ ಸಂಪತ್ತು ಕವಿತೆಯನ್ನು ಮೀರಿ ಹೋಗಿದೆ!

ಗಾಂಧೀ–ನೆಹರುಗಳ ಶೈಲಿಭೇದ–

ಮಹಾತ್ಮಾಜಿಯವರ ಶೈಲಿಯು ತೀಕ್ಷ್ಣವಾದದ್ದು, ಸರಳವಾದುದು, ಪ್ರತ್ಯಕ್ಷ ಪರಿಣಾಮವಾದುದು, ಮತ್ತು ಮಹಾಶಕ್ತಿಯುಳ್ಳದ್ದು. ಹಾಗಾಗಿ ಜನತೆಯಲ್ಲಿ ದೊಡ್ಡ ಪರಿಣಾಮವನ್ನುಂಟುಮಾಡುತ್ತದೆ! ಅವರ ಮಾತುಗಳು ನಮ್ಮ ಹೃದಯದಲಿ ಒಂದು ಸ್ಥಿರವಾದ ಸ್ಥಾನವನ್ನು ಪಡಕೊಂಡಿವೆ. ಅವರಲ್ಲಿ ಭಾಷಣಗಳು ಮತ್ತು ಲೇಖನಗಳು ಹೆಚ್ಚಿನ ಸಾಹಿತ್ಯ ಸೌಂದರ್ಯವಿಲ್ಲದವುಗಳಾಗಿ, ಹೃದಯದಿಂದಲೇ ಬಂದಂತೆ, ಸಂಪೂರ್ಣ ಪರಿಣಾಮ ಮಾತ್ರ ಪ್ರಯೋಜನವುಳ್ಳವುಗಳು. ಹಾಗಾಗಿ ಅವಕ್ಕೆ ಒಂದು ದೈವಿಕವಾದ ಸೌಂದರ್ಯವಿದೆ.

ನೆಹರುಗಳ ಮಾತುಗಳ ಸಾಮಾನ್ಯ ಜನತೆಗೆ ಹಿಡಿದದ್ದಲ್ಲ. ಅವುಗಳು ಹೆಚ್ಚಿನ ಬುದ್ಧಿ ಜ್ಞಾನವುಳ್ಳವರಿಗೆ ಮತ್ತು ಹೆಚ್ಚು ಸಾಹಿತ್ಯ ವ್ಯವಸಾಯ ಮಾಡಿದವರಿಗೆ ಸರಿಯಾದುವುಗಳಾಗಿವೆ. ಅವುಗಳೆಲ್ಲಾ ಅವರ ಆಗಾಗಿನ ವಾತಾವರಣದಂತೆ, ಅವರ ವಿಚಾರಗಳು ಹರಿದು ಹೋದಂತೆ ಅವರ ಪ್ರಸನ್ನತೆಯು ತಿರುಗಿದಂತೆ, ಕವಿತಾಮಯವಾಗಿ ಬರುವವು. ಹಾಗಾಗಿ ನೆಹರುಗಳ ಗ್ರಂಥ, ಭಾಷಣಗಳಲ್ಲಿ ಸ್ಥಿರವಾದ ಸಾಹಿತ್ಯಸೌಂದರ್ಯವಿರುತ್ತದೆ.

ಸಾಹಿತ್ಯ ಸಂಪತ್ತು–

ನೆಹರುಗಳಲ್ಲಿರುವ ಅಂತಹ ಅದ್ಭುತ ಸಾಹಿತ್ಯ ಸಂಪತ್ತಿನಿಂದ ಬಹಳ ಅಮೂಲ್ಯ ಗ್ರಂಥಗಳನ್ನು ನಾವು ಎದುರನೋಡಬಹುದು. ಆದರೆ ರಾಜಕೀಯ ಆಂದೋಲನವು ಅವರ ಹೆಚ್ಚಿನ ಸಮಯವನ್ನು ನುಂಗಿಬಿಡುತ್ತದೆ! ಬರ್ನಾರ್ಡ್ ಶಾರವರು ಹೇಳಿದಂತೆ ಪಂಡಿತ ನೆಹರುಗಳು ಒಬ್ಬ ಮಹಾಲೋಕ ಪ್ರಖ್ಯಾತವ್ಯಕ್ತಿಗಳಾಗಬಹುದು. ಆದರೆ, ಹಿಂದೂದೇಶದಲ್ಲಿಯೇ ಅವರ ಹೆಚ್ಚಿನ ಸಮಯವು ವ್ಯಯವಾಗುತ್ತದೆ! ಇಲ್ಲಿನ ಸ್ವಾತಂತ್ರ್ಯದ ಹೋರಾಟವು ಅವರಿಗೆ ಇತರ ಕಾರ್ಯಗಳಿಗೆ ಎಡೆಯಿಲ್ಲದಂತೆ ಮಾಡಿದೆ. ಇದರ ಬಿಡುಗಡೆ ಅಥವಾ ನಿವೃತ್ತಿಯಾದಲ್ಲಿ ಮುಂದಕ್ಕೆ ಎಂತಹ ಅದ್ಭುತ ಗ್ರಂಥಗಳನ್ನು ಅವರು ಬರೆದಾರೆಂದು ನಾವು ಊಹಿಸಬಹುದಾಗಿದೆ.

THE

Bank of Mangalore Ltd.,

MANGALORE

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit** 3½% **on daily balances.

All kinds of banking business transacted

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ 1 ಪೌಂಡಿಗೆ ರೂ 3-8-0 ಸಪೆಶಲ್ ಮಾರ್ಕ ಸಾರಥಿ ನಸ್ಯ 1 ಪೌಂಡಿಗೆ ರೂ 3 0 0 (ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ

ಏಜೆಂಟರು ಬೇಕಾಗಿದ್ದಾರೆ

ಎಡ್ರೆಸ್:

ಎ ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಪ್ರಾಂತದ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ

ಏಜಂಟರ ಸಲುವಾಗಿ ಕಾರಖಾನೆದಾರರ ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲೈಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನಿಮಾದಲ್ಲಿ ತೋರಿಸುವರು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತ ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಟೇಷನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮಾಲು ಪರದೇಶದಿಂದ ಒಯುವಂತ ಉಂಟು ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ್. ವಾಘ್ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ

ಹೊನ್ನಾವರ ಏಜಂಟ್ — ಟಿ ಎಚ್. ಭಕ್ತಾ   ಗದಗ - ವಿ. ಎಸ್. ನಿಟ್ಟಿ

ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜೆಂಟ್ — ಡಾ. ಕೆ ಭಾಸ್ಕರ ಪೈ.

ಸ್ಪೆಶಲ್ ಏಜಂಟ್ — ಟಿ ಸ್ಟಿ. ಹೊನ್ನಾವರ

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಂಬಯಿ ಸರ್ಟಿಫಿಕೇಟು—ಡಾ ವೈದ್ಯ ಎಲ್ ಸಿ ಪಿ ಎಸ್, ಕೆಳವಾಮಾಹಿತ ಛಾಜೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರ ದಪ್ಪಿಯ ಕ್ರಯ ರೂ ೪-೧೦-೦ ವಿ ಪಿ

ವಿಳಾಸ ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C

ಹಿಟ್ಲರನ ಹಿನ್ನೆಲೆಯಲ್ಲಿರುವ ಬಲಭೀಮ ಗೋರಿಂಗ್!

ಗೋರಿಂಗನ ಸೈನಿಕ ಜೀವನ

ಯುದ್ಧತೃಷೆಯಿಂದ ಬಾಯಾರಿದ ನಾಜೀಪಕ್ಷದ ಅಧಿನಾಯಕ ಮುಂದಿನ ಜರ್ಮನಿಯ ಸರ್ವಾಧಿಕಾರಿ ಗೋರಿಂಗ್!

ಏನು ಅದ್ಭುತ ಆಕಾರವೋ ಅವನದು? ಎಂತಹ ಅತುಲ ಸಾಮರ್ಥ್ಯವೋ ಅವನಲ್ಲಿ? ಹಿಟ್ಲರನ ಹಿಂದೆ ನಿಂತು ಜಗತ್ತನ್ನು ತನ್ನ ಉಗ್ರ ಶಕ್ತಿಯಿಂದ ಬೆದರಿಸುತ್ತಿರುವ, ಭೂತಾಕೃತಿಯ ಗೋರಿಂಗನ ಜೀವನದ ಪರಿಚಯವಿದೆಯೆ?

"ನಿರ್ದಯತೆ ಸರಳತೆ, ಕಪಟತನ, ಧೈರ್ಯ ಕಾರ್ಯಪಟುತ್ವ, ಸುಖಾಭಿಲಾಷೆ, ಹಟಮಾರಿತನ ಇವುಗಳು ಆತನಲ್ಲಿ ಮುನ್ನೂರು ಪೌಂಡುಗಳಷ್ಟು ತುಂಬಿವೆ" ಎಂದು ಪ್ರಸಿದ್ಧ ಆಂಗ್ಲೇಯ ಪತ್ರಿಕೋದ್ಯಮಿಗಳೊಬ್ಬರು ಜನರಲ್ ಗೋರಿಂಗನ ಕುರಿತು ಹೇಳಿದ್ದಾರೆ! ನಿಜವಾಗಿಯೂ ಗೋರಿಂಗನು ಒಂದು ಕಲಹಪ್ರಿಯವಾದ ಹಿಂಸ್ರಜಂತುವೇ ಆಗಿದ್ದಾನೆ.

ಭಯಂಕರವಾದ ಆಕೃತಿ, ಅದ್ಭುತವಾದ ಸಾಮರ್ಥ್ಯ ಇವುಗಳೆರಡರಿಂದಲೂ ಆತನು ಒಂದು ರಾಕ್ಷಸೀ ಸ್ವರೂಪನೇ ಆಗಿದ್ದಾನೆ. ಹಿಟ್ಲರನ ನಾಜೀ ಪಡೆಯಲ್ಲಿ, ಮೊದಲನೆಯ ನಂಬರ್ ಆಗಿರುವ ಗೋಬೆಲ್ಸನನ್ನು ಬಿಟ್ಟರೆ ದ್ವಿತೀಯ ಸ್ಥಾನದಲ್ಲಿ ನಿಂತವನೀತ! ಗೋರಿಂಗನು ಪ್ರಶ್ಯದ ಪ್ರಧಾನ ಮಂತ್ರಿ, ವಿಮಾನಮಂತ್ರಿ, ವಿಮಾನದಳದ ಸೇನಾಪತಿ, ರೀಶ್‌ಸ್ಟಾಗಿನ ಪ್ರೆಸಿಡೆಂಟ್, ಪ್ರಶ್ಯದ ಗುಪ್ತಪೋಲೀಸರ ಮುಖ್ಯಸ್ಥ, ಆತನು ಜರ್ಮನಿಯಲ್ಲಿ ಏನೆಲ್ಲಾ ಆಗಿದ್ದಾನೆ! ಈ ಪದವಿಗಳು, ಅಧಿಕಾರಗಳೇ ಆತನ ಇಂದಿನ ಶಕ್ತಿಸಾಮರ್ಥ್ಯವನ್ನು ತಿಳಿಯಲು ಸಾಕಾಗಿವೆ. ಎಲ್ಲದಕ್ಕಿಂತಲೂ ಆತನು ಜರ್ಮನಿಯ ಸೈನ್ಯಾಧಿಕಾರಿ ಮತ್ತು ರಕ್ಷಣಾಮಂತ್ರಿಯೂ ಆಗಿದ್ದಾನೆ.

ಮಹಾದಳಪತಿ

ಗೋರಿಂಗನು ಬವೇರಿಯ ದೇಶದ ಸಾಹುಕಾರನ ಸಿವಿಲ್ ಅಧಿಕಾರಿಯೊಬ್ಬನ ಮಗನು, ಆತನು ಮೊದಲು ತನ್ನ ಸೈನ್ಯಶಿಕ್ಷಣವನ್ನು ಪದಾತಿದಳದಲ್ಲಿ ಕಲಿತಿದ್ದನು. ಆದರೆ, ಆ ಮೇಲೆ ಮಹಾಯುದ್ಧದ ಸಮಯದಲ್ಲಿ ಆತನು ವಿಮಾನದಳವನ್ನು ನಡೆಸಿದನು. ಗೋರಿಂಗನು ಯುದ್ಧರಂಗಕ್ಕೆ ಲೆಫ್ಟಿನೆಂಟನಾಗಿ ಇಳಿದಾಗ ಕೇವಲ ಇಪ್ಪತ್ತು ವರ್ಷದವನಾಗಿದ್ದ! ಅದರಲ್ಲಿ ಬಹುಬೇಗನೇ ಆತನು ಕಮಾಂಡರನಾಗಿ ನಿಯುಕ್ತನಾದ! ಮಹಾಯುದ್ಧವು ಕೊನೆಗಾಣುವುದರೊಳಗಾಗಿ ಗೋರಿಂಗನು ಜರ್ಮನಿಯ ಅತ್ಯುತ್ತಮ ವಿಮಾನಯುದ್ಧ ಸಮರ್ಥನೆಂದು ಹೆಸರು ವಾಸಿಯಾದನು. ಯಾವಾಗಲೂ ಆತನು ಪ್ರಕೃತಿಯಿಂದಲೇ ಯುದ್ಧಪ್ರಿಯನಾದರೂ ಅತ್ಯಂತ ನಿಪುಣನಾದ ದಳಪತಿಯೂ ಆಗಿದ್ದಾನೆ.

ಮಹಾಯುದ್ಧವು ಮುಗಿದ ಮೇಲೆ

ಮಹಾಯುದ್ಧವು ಮುಗಿದ ಮೇಲೆ ಗೋರಿಂಗನು ಸ್ವೀಡನಿಗೆ ಹೋದನು. ಅಲ್ಲಿ ವಿಮಾನಪಡೆಯಲ್ಲಿ ವೈಮಾನಿಕನಾಗಿ ಸೇರಿದನು. ಆಗ ಆತನು ಒಬ್ಬ ಅತ್ಯಂತ ಸುಂದರಿಯಾದ ಸ್ವೀಡಿಷ್ ಹುಡುಗಿಯೊಡನೆ ಪ್ರಣಯ ಮಾಡಿದನು. ಆದರೆ ಆತನ ಜೀವನದ ಮೊದಲನೆಯ ಆ ಪ್ರಣಯ ಕಥೆಯು ಪ್ರಣಯಿನಿಯ ಮರಣದಲ್ಲಿ ವಿಷಾದಾಂತವಾಗಿ ಕೊನೆಗೊಂಡಿತು. ಆ ಮೇಲೆ ಆತನು ಮ್ಯೂನಿಕ್ಕಿಗೆ ಮರಳಿದನು. ಅಲ್ಲಿ ಆತನು, ಹಿಟ್ಲರನನ್ನೂ ಆತನ ಕಂದುಬಣ್ಣದ ಅಂಗಿಯವರನ್ನೂ ಕಂಡನು. ಹಿಟ್ಲರನ ಯುದ್ಧತೃಷ್ಣೆಗೆ ರಾಜಕೀಯ ವಿಚಾರಗಳಿಗೆ ಗೋರಿಂಗನ ಹೃದಯವು ಸೆಳೆಯಲ್ಪಟ್ಟಿತು. ಹಾಗಾಗಿ ಹಿಟ್ಲರನ ಜೊತೆಯಲ್ಲಿ ಗೋರಿಂಗನೂ ಸೇರಿದನು. ಹಿಟ್ಲರನ ಹಿಂಬದಿಯಲ್ಲಿ ಗೋರಿಂಗನು ನಿಂತುಕೊಂಡನು.

ವೈಮಾನಿಕ ಸೈನ್ಯದಲ್ಲಿ ಉಪಯೋಗಿಸಿದ ಬುದ್ಧಿವಂತಿಕೆಯನ್ನೇ ಆತನು ನಾಜೀ ಪಕ್ಷವನ್ನು ಬಲಪಡಿಸುವುದರಲ್ಲಿಯೂ ಉಪಯೋಗಿಸಿದನು. ಗೋರಿಂಗನು ತನ್ನ ಶತ್ರುವನ್ನು ಅಭಿವೃದ್ಧಿಯಾಗಲು ಬಿಡುವಂತಿಲ್ಲ. ತನ್ನ ಹಿಡಿತಕ್ಕೆ ಸಿಕ್ಕಿದಾಗ ಸಂಪೂರ್ಣ ಚಚ್ಚಿ ಪುಡಿಮಾಡುವಷ್ಟು ನಿರ್ದಯನವನು. ಯಾವ ವಿಧದಿಂದಲಾದರೂ ಶತ್ರುವನ್ನು ತನ್ನ ಹಿಡಿತಕ್ಕೆ ತರದಿದ್ದಲ್ಲಿ ಗೋರಿಂಗನಿಗೆ ನಿದ್ದೆಬೀಳುವಂತಿಲ್ಲ!

ಹಿಟ್ಲರನಿಗೂ ಅಂತಹ ಒಬ್ಬ ಮನುಷ್ಯನ ಸಹಾಯದ ಅವಶ್ಯಕತೆಯು ತುಂಬಾ ಇತ್ತು. ಇಪ್ಪತ್ತೇಳು ವರ್ಷಗಳ ಗೋರಿಂಗನಿಗೆ ಹಿಟ್ಲರನು, ತನ್ನ ಪಕ್ಷದ ಸ್ಥಾಪನೆಗೆ ಒಪ್ಪಿಗೆಯಿತ್ತನು. ಆತನು ತನ್ನ ಕೆಲಸವನ್ನು ಅದ್ಭುತ ಶಕ್ತಿಯಿಂದ ಮಾಡಿ ಮುಗಿಸಿ ಕಡೆಗೊಂದು ದಿನ ಪ್ರಪಂಚವೇ ದಿಗಿಲುಗೊಳ್ಳುವಂತೆ ತನ್ನ ಪಕ್ಷದ ನಾಯಕನಾದ ಹಿಟ್ಲರರೊಡನೆ ಮ್ಯುನಿಕಿಗೆ ನಡೆದು ಅಲ್ಲಿ ವಿರೋಧಿಗಳನ್ನು ಇದಿರಿಸಿದನು. ಗೋರಿಂಗನಿಗೆ ಬಹಳ ಗಾಯವಾಯಿತು. ಆತನನ್ನು ಕೂಡಲೇ ಆಸ್ಟ್ರಿಯಾಕ್ಕೆ ತೆಕ್ಕೊಂಡು ಹೋದರು, ಅಲ್ಲಿಂದ ಇಟಲಿಗೊಯ್ದರು. ೧೯೨೭ರಲ್ಲಿ ಗೋರಿಂಗನು ಜರ್ಮನಿಗೆ ಮರಳಿದನು.

ಗೋರಿಂಗನು ರಾಜಕೀಯದಲ್ಲಿ ಮಹಾ ಕ್ರಾಂತಿಪುರುಷನು. ಅವನು ಎಂದೆಂದೂ ಕಾರ್ಯಸಾಹಸದಲ್ಲಿ ಜಯವುಂಟೆಂದು ದೃಢ ನಿರ್ಧಾರವುಳ್ಳವನು. ಆತನು ಕೆಲವು ಭಾಷಣಗಳನ್ನು ಮಾತ್ರ ಮಾಡಿದನು. ಆದರೆ ಹಿಟ್ಲರನು ೧೯೩೩ರಲ್ಲಿ ವಿಜಯವನ್ನು ಪಡೆದಾಗ ಅದಕ್ಕಾಗಿ ಗೋರಿಂಗನು ತನ್ನ ಸಂಪೂರ್ಣ ಶಕ್ತಿಯಿಂದ ಕಾದಾಡಿದನು. ಗೋರಿಂಗನು ರೀಶ್‌ಸ್ಟಾಗಿನ ಪ್ರೆಸಿಡೆಂಟನಾಗಿ ಚುನಾಯಿತನಾದನು. ತನ್ನ ಅಂತರಾಳದಲ್ಲಿ ಅಡಗಿದ್ದ ಸಾಮರ್ಥ್ಯವನ್ನು ಪ್ರಪಂಚಕ್ಕೆ ಪ್ರದರ್ಶಿಸಲು ಗೋರಿಂಗನು ಯಾವಾಗಲೂ ಆತುರಗೊಂಡಿರುವನು.

ಜರ್ಮನಿಯ ವಿಮಾನಬಲ್ಲ ನಿರ್ಮಾಣ

ಜರ್ಮನಿಯ ವಿಮಾನಬಲವನ್ನು ಇಷ್ಟು ಪ್ರಬಲವಾಗಿ ನಿರ್ಮಾಣಮಾಡಿದವನು ಗೋರಿಂಗನು. ಕೇವಲ ಮೂರೇ ವರ್ಷದಲ್ಲಿ ಗೋರಿಂಗನು ಇಡೀ ಪ್ರಪಂಚದಲ್ಲಿ ಅತ್ಯಂತ ಮಹತ್ವದ ವಿಮಾನ ಸೈನ್ಯವನ್ನು ನಿರ್ಮಿಸಲು ಸಮರ್ಥನಾದನು. ಗೋರಿಂಗನು ಈ ತನ್ನ ಕಾರ್ಯವನ್ನು ಬಹು ಗುಪ್ತವಾಗಿ ನಡೆಸಿದನು. ಕಡೆಗೆ ಒಂದು ದಿನ ಮಾತ್ರ ಜರ್ಮನಿಯ ಈ ಅದ್ಭುತ ಸೈನ್ಯಶಕ್ತಿಯ ವಿಷಯ ಕೇಳಿ ಇಡೀ ಜಗತ್ತು ಬೆರಗಾಯಿತು. ಹಿಟ್ಲರನು ೧೯೩೫ರಂದು ಜರ್ಮನಿಯ ಸೈನ್ಯವು ಬ್ರಿಟನಿನ ಸೈನ್ಯಕ್ಕಿಂತ ಪ್ರಬಲವಾಗಿದೆಯೆಂದು ಹೇಳಿದ ಮಾತನ್ನು ಕೇಳಿ ಸರ್ ಜಾನ್ ಸೈಮನರೂ ವಿ. ಎಂಟೋನಿ ಏಡನರೂ ಆಶ್ಚರ್ಯಗೊಂಡಿದ್ದರು. ಇದೆಲ್ಲಾ ಗೋರಿಂಗನ ಘನಕಾರ್ಯವಾಗಿದೆ.

ಗೋರಿಂಗನ ಅಂತರಂಗ ಜೀವನ

ಈ ಕೆಲಸಗಳನ್ನು ಮುಗಿಸಿದ ಮೇಲೆ, ಗೋರಿಂಗನು ತನ್ನ ಸ್ವಂತ ಮನೆಯೊಂದನ್ನು ಕಟ್ಟಿಸಿದ. ಆತನಿಗೆ ಕೆಲವೇ ಮಿತ್ರರಿದ್ದರು. ಆದರೆ ಅವರನ್ನೆಲ್ಲಾ ಬಿಟ್ಟು ಕಟ್ಟಕಡೆಗೆ ಒಬ್ಬ ಗೆಳತಿಯನ್ನು ಮಾಡಿಕೊಂಡ. ಎಮ್ಮಿ ಸೊನೆಮನ್ ೩೬ ವರ್ಷ ಪ್ರಾಯದ ವಿಧವೆಯನ್ನು ಕೈಹಿಡಿದ, ಆತನಿಗೂ ಇದು ಎರಡನೆಯ ಮದುವೆಯಾಗಿದೆ. ಒಂದು ಸಿಂಹದ ಮರಿಯನ್ನು ಗೋರಿಂಗನು ಬಹಳವಾಗಿ ಪ್ರೀತಿಸುತಿದ್ದ, ಕಡೆಗೆ ಆಕೆಗಾಗಿ, ಸಿಂಹದ ಮರಿಯನ್ನು ಬಿಟ್ಟುಕೊಟ್ಟನು. ಆದರೂ ವನ್ಯಮೃಗಗಳ ಮೇಲೆ ಗೋರಿಂಗನಿಗೆ ಬಹಳ ಪ್ರೀತಿಯಿದೆ.

ಬಹಳ ದೂರದರ್ಶಿ

ಈ ಭೀಮಾಕೃತಿಯ ಗೋರಿಂಗನು ಬಹಳ ದೂರದರ್ಶಿ! ಯಾವಾಗಲೂ ಯುದ್ಧವು ಸಂಭವಿಸಬಹುದೇ ಎಂದು ಕನವರಿಸುತಿದ್ದಾನೆ. ಹೀಗೆ ಕನವರಿಸುವುದರೊಡನೆ, ಅದಕ್ಕಾಗಿ ಸರ್ವಸಿದ್ಧತೆಗಳನ್ನೂ ಮಾಡುತಿದ್ದಾನೆ. ಆದರೆ ತನಗಿಂತ ಬಲಶಾಲಿಯಾದ ಶತ್ರುವಿನೊಡನೆ ಆತನು ಯುದ್ಧ ಹೂಡುವ ವಿಷಯ ಅಂಜಿದಂತಿದೆ. ಬ್ರಿಟನ್ನು ಮತ್ತು ರಶ್ಯಾ ಇವುಗಳು ಶಸ್ತ್ರಸಂಗ್ರಹ ಮಾಡುತ್ತಿರುವ ವಿಷಯ ಕೇಳಿ ಗೋರಿಂಗನು ಕಳವಳಗೊಂಡಿದ್ದಾನೆ.

ತನ್ನ ಮೈಭಾರವನ್ನು ಕಡಿಮೆಮಾಡಲು ಗೋರಿಂಗನು ಬಹಳ ಜಾಗ್ರತೆ ತೆಕ್ಕೊಳ್ಳುತ್ತಾನೆ, ಮೈಭಾರವಿದ್ದವರ ಅದೃಷ್ಟವು ಅಷ್ಟು ಒಳ್ಳೆಯದಲ್ಲವಂತೆ! ಇದರಿಂದ ಜರ್ಮನ್ ರಾಷ್ಟ್ರವು ಆಹಾರಸಾಮಗ್ರಿಯಲ್ಲಿ ಸ್ವಲ್ಪ ಹೆಚ್ಚು ಉಳಿಸಿದಂತಾಗುವುದು. ಈಗಾಗಲೇ ಗೋರಿಂಗನು ಮೂವತ್ತು ಪೌಂಡು ಭಾರ ಕಡಿಮೆಯಾಗಿದ್ದಾನೆ. ಹಿಟ್ಲರನು ಒಂದು ವರ್ಷ ಮಾಡಿದ್ದನ್ನು ಗೋರಿಂಗನು ವಾರ ಒಂದರಲ್ಲಿ ಮಾಡಿಬಿಡುತ್ತಾನೆ. ಹಿಟ್ಲರನ ಬಳಿಕ ಸರ್ವಾಧಿಕಾರಿಯಾಗುವನೇ ಎಂಬುದು ಎಲ್ಲರ ಕುತೂಹಲ!

ಬಹುಕಾಲದಿಂದ ಭಾರತದ ಮಹಾಜನರ ಮೆಚ್ಚುಗೆಯ ಎರಡು ಉತ್ತಮ ವಾಚುಗಳು!

ವೆಸ್ಟ್ ಎಂಡ್ ವಾಚ್ ಕಂಪೆನಿಯ ಜನಮನ್ನಣೆಯನ್ನು ಪಡೆದ ಹಳೇ ಮಾದರಿಯ ಗಡಿಯಾರಗಳಿಗೆ ಸಮಕಟ್ಟಾದವುಗಳು ಯಾವುದೂ ಇಲ್ಲ. ಅವುಗಳ ದೀರ್ಘ ಬಾಳಿಕೆಯೂ ಬಹುಕಾಲದಿಂದ ಪರೀಕ್ಷಿಸಲ್ಪಟ್ಟಿದ್ದರಿಂದಲೇ ಇಂದು ಅದು

ಸಾಧಾರಣ ಬೆಲೆಯಲ್ಲಿ ಜನರ ಮೆಚ್ಚುಗೆ ಪಡೆಯಲು ಕಾರಣವಾಯಿತು. ಆದರೆ ಅದೇ ವಾಚುಗಳನ್ನು ಮಹಾಜನರ ಸುಧಾರಣೆಗನುಸಾರವಾಗಿ ಚಿತ್ರದಲ್ಲಿ ತೋರಿಸಲ್ಪಟ್ಟಂತೆ ಹೊಸ ಆಕಾರಗಳಲ್ಲಿ ಒದಗಿಸುತ್ತಿರುವೆವು. ಸಾಧಾರಣ ಬೆಲೆಯ ಬಹುಕಾಲದಿಂದಲೂ ಮೆಚ್ಚುಗೆ ಪಡೆದ ಈ ವಾಚುಗಳನ್ನೆ ಕೊಂಡುಕೊಳ್ಳಿರಿ.

ಪುಕ್ಕಟೆಯಾಗಿ ಸಿಗುವ ಕೆಟಲಾಗಿಗೆ ಬರೆಯಿರಿ.

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬಾಯಿ ಮತ್ತು ಕಲ್ಕತ್ತ.

WEST END WATCH Co

BOMBAY CALCUTTA

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ್ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜುನಾವಣೆಯ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ,

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು

ಶ್ರೇಷ್ಠ ತರದ

ದೃಷ್ಟಿಚಕ್ರಗಳಿಗೆ

ರಬ್ಬರು ಮೊಹರುಗಳಿಗೆ

ನಾಯಕ್ ಸ್ಟೋರ್ಸ್,

ರಥಬೀದಿ, ಮಂಗಳೂರು.

ಇನ್ನು ಪೆಟ್ರೋಲಿನ ದುಂದುವೆಚ್ಚವಿಲ್ಲ

ಪೆಟ್ರೋಲಿಗೆ ಸರಿಯಾದ ಗುಣವುಳ್ಳ ಒಂದು ಯೋಗ್ಯವಾದ ಬದಲಿ (substitude) ಯನ್ನು ಕಂಡುಹಿಡಿಯಲು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ವೈಜ್ಞಾನಿಕರು, ಎಂಜಿನಿಯರರು ಮತ್ತು ಸಂಶೋಧಕರು ಬಹಳವಾಗಿ ಯತ್ನಿಸುತ್ತಿದ್ದಾರೆ! ಪೆಟ್ರೋಲನ್ನು ಬಿಟ್ಟು ಅದಕ್ಕೆ ಬದಲಾಗಿ ಅನೇಕ ವಸ್ತುಗಳನ್ನು ಉಪಯೋಗಿಸಿ ಬೇರೆ ಬೇರೆ ತರದಲ್ಲಿ ಅವರ ಗುಣದೋಷಗಳನ್ನು ಪರೀಕ್ಷಿಸಿ ನೋಡಿದ್ದಾರೆ! ಅದರಲ್ಲಿ ಹೆಚ್ಚಿನ ಜಯಶಾಲಿಯಾದ ಪ್ರಯೋಗವಾಗಬೇಕಾದರೆ ಅದು ಬಹಳ ಕಡಿಮೆ ಖರ್ಚಿನದ್ದಾಗಬೇಕು!

ಇಟಲಿಯನರು ಪೆರಾರಾ ಡವ್ರಗಿನಿಂದ ತಯಾರಿಸಿದ ಗ್ಯಾಸುಗಳನ್ನು ಪೆಟ್ರೋಲಿನ ಬದಲಿಗೆ ಉಪಯೋಗಿಸಿ ನೋಡಿರುವರು ೧೫೦ ಎಚ್ ಪಿ ಇಂಜಿನುಳ್ಳ ಒಂದು ಮೋಟರು ಬಸ್ಸು ೧೨೦ ಜನ ಪ್ರಯಾಣಿಕರನ್ನು ಕೂತು ಕೊಳ್ಳಿಸಿ ಈ ಗ್ಯಾಸಿನಿಂದ ನಡೆಸಲ್ಪಡುತ್ತದೆ!

ಕೋರ್ಸಿಕಾ ಮತ್ತು ಪ್ರೊವಿನ್ಸ್ ದೇಶಗಳಿಂದ ಈಗ ಮಸಿಯ ಗ್ಯಾಸನ್ನು ಪೆಟ್ರೋಲಿಗೆ ಬದಲು ಕಾರುಗಳಿಗೆ ಉಪಯೋಗಿಸಲು ಸಾಧ್ಯವಾಗುತ್ತದೆಯೆಂಬ ವಾರ್ತೆಯು ಬಂದಿದೆ ಇದು ಪೆಟ್ರೋಲಿಗಿಂತ ೭೫%ರಷ್ಟು ಕಡಿಮೆ ಕ್ರಯವುಳ್ಳದ್ದಾಗಿದೆ ಆದರೆ ಪೆಟ್ರೋಲಿಗಿಂತ ಇದರಲ್ಲಿ ಆಗುವ ಒಂದು ತೊಡಕೆಂದರೆ, ಇದನ್ನು ಉಪಯೋಗಿಸಿ ಕಾರನ್ನು 'ಸ್ಟಾರ್ಟ್' ಮಾಡಲಿಕ್ಕೆ ಬಹಳ ಸಮಯ ಹಿಡಿಯುತ್ತದೆ! ಕೋರ್ಸಿಕಾದಲ್ಲಿ ಈ ಗ್ಯಾಸನ್ನು ಉಪಯೋಗಿಸಿದ ಕಾರುಗಳಿಗೆ ತೆರಿಗೆಯನ್ನೂ ಹೊರಿಸಲಿಲ್ಲ, ಇದಕ್ಕೆ ಬೇಕಾದಷ್ಟು ಸಾಮಾನುಗಳನ್ನು ಅಲ್ಲಿನ ಕಾಡುಗಳಿಂದ ದೊರಕಿಸಲೂ ಬಹುದಾಗಿದೆ ಬಹಳ ಭಾರವನ್ನು ತುಂಬಿಸಿದ ಲೋರಿಗಳನ್ನು ಪರ್ವತದ ಹಾದಿಯಲ್ಲಿ ನಡೆಸಲೂ ಈ ಗ್ಯಾಸುಗಳು ಸಾಕಷ್ಟು ಸಮರ್ಥವಾಗಿವೆಯೆಂದು ಪ್ರಯೋಗದಿಂದ ತಿಳಿದುಬಂದಿದೆ

ಅಮೇರಿಕದ ಇನ್ನೊಬ್ಬ ಸಂಶೋಧಕನು ಇನ್ನೊಂದು ಬಗೆಯ ಬದಲಿಯನ್ನು ಕಂಡು ಹುಡುಕಿದ್ದಾನೆ ಸ್ವಲ್ಪ ಎಣ್ಣೆ, ನೀರು ಮತ್ತೊಂದು ರಸಾಯನ ದ್ರವ್ಯ ಇವುಗಳ ಆವಿಯನ್ನು ಮಾಡಿ, ಅದನ್ನು ಗ್ಯಾಸಾಗಿ ಉಪಯೋಗಿಸುವುದು ಈ ಶೋಧನೆಯಾಗಿದೆ ಬುರೇಟರಿನ ಬದಲು ಒಂದು ಪ್ರತ್ಯೇಕ ಸಾಧನವನ್ನು ಕಾರಿಗೆ ಇಡಬೇಕಾಗಿದೆ ಈ ಸಂಶೋಧಕನು ಇದರಿಂದ ಒಂದು ಗ್ಯಾಲನ್ ಗ್ಯಾಸಿನಿಂದ ೪೫ ಮೈಲುಗಳ ಪ್ರಯಾಣ ಮಾಡಬಹುದಾಗಿ ಭರವಸೆ ಹೇಳುತ್ತಾನೆ.

ಬ್ರಿಟನಿನಲ್ಲಿ ತೈಲಶೋಧನಾ ಪ್ರಯತ್ನ

ಕಳೆದ ಎರಡು ವರ್ಷಗಳಿಂದ ಬ್ರಿಟನಿನಲ್ಲಿ ತೈಲಶೋಧನೆಯು ಬಹಳವಾಗಿ ನಡೆಯುತ್ತಿದೆ ದಕ್ಷಿಣ ಇಂಗ್ಲೆಂಡು, ಸ್ಕಾಟ್‌ಲಾಂಡ್, ಮಿಡ್‌ಲೇಂಡುಗಳಲ್ಲಿ ಎಲ್ಲಿ ಎಣ್ಣೆಯ ಗಣಿಗಳಿವೆಯೆಂದು ಹುಡುಕಲು ಅರ್ಧ ಮಿಲಿಯ ಪವನುಗಳಿಗಿಂತ ಹೆಚ್ಚಿನ ಹಣವು ವ್ಯಯವಾಡಲಾಗಿದೆ! ಸಾಧಾರಣ ೧೨ ಮೈಲಗಳಷ್ಟು ಜಾಗವು ಸಂಶೋಧನೆಗೊಳಗಾಗಿದೆ ಸುಮಾರು ೧೬ ಸ್ಥಳಗಳಲ್ಲಿ ಮಾಡಿದ ಶೋಧನೆಗಳಲ್ಲಿ ಕೇವಲ ಎರಡು ಕಡೆಗಳಲ್ಲಿ ಮಾತ್ರ ಪ್ರಯೋಜನವು ಕಂಡಿದೆ ಈ ಭಾವಿಗಳಿಂದ ೨೦೦ ಟನ್ನು ಎಣ್ಣೆ ಮಾತ್ರ ಒದಗಿದೆ ಕೆಲಸವು ಈಗಲೂ ಆಗುತ್ತಾ ಇದೆ

ಪ್ರಪಂಚದ ಜನಸಂಖ್ಯೆಯಲ್ಲಿ ಮಿತಿಯುಂಟೆ?

ಈ ಶತಮಾನದ ಮೊದಲನೆಯ ಮೂರು ಭಾಗಗಳಲ್ಲಿ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಜನಸಂಖ್ಯೆಯು ಕಡಮೆಯಾಯಿತು. ಜರ್ಮನಿ, ಆಸ್ಟ್ರಿಯಾ, ಇಂಗ್ಲೆಂಡು, ಸ್ಕೋಟ್ಲೇಂಡ್ ಮತ್ತು ಐಯರ್ಲೇಂಡುಗಳಲ್ಲಿ ಕ್ರಮಶಃ ಸೇಕಡಾ ೫೯,೬೦,೫೦,೪೧,೩೪ ಮತ್ತು ೧೫ರಂತೆ ಕಡಿಮೆಯಾಗಿತ್ತು.

ವಿಜ್ಞಾನ ಯುಗ

ಆದರೆ ಈಗ ಜನಸಂಖ್ಯೆಯು ಹೆಚ್ಚಾಗುತ್ತಿದೆ ಇಡೀ ಪ್ರಪಂಚದ ಸಂಖ್ಯೆಯಂತೆ ಇಂದಿನ ಸಂಖ್ಯೆಯು ವರ್ಷಕ್ಕೆ 1%ನಂತೆ ಹೆಚ್ಚುತ್ತಿದೆ ಹೀಗೆ ಹೆಚ್ಚಾಗುತ್ತಾ ಹೋದರೂ ಬರುವ ೭೦ ವರ್ಷಗಳಲ್ಲಿ ಪ್ರಪಂಚದ ಜನಸಂಖ್ಯೆಯು ಇಮ್ಮಡಿಯಾದೀತು! ಇದರಲ್ಲಿ ವಿಚಕ್ಷಣರಾದವರು ಈ 1%ರ ಹೆಚ್ಚಳವು ಎಂದೆಂದೂ ಉಳಿದೀತೇ ಎಂಬ ಸಂಶಯವುಳ್ಳವರಾಗಿದ್ದಾರೆ ಇಂದಿನ ಜಗತ್ತಿನ ಜನಸಂಖ್ಯೆಯು ೨೧೦೫ ಮಿಲಿಯವೆಂದು ತಿಳಿಯುತ್ತದೆ ಇದು ೩೦೦ ವರ್ಷಗಳಿಗಿಂತ ಹಿಂದಿನ ಜನಸಂಖ್ಯೆಗಿಂತ ಐದು ಪಾಲು ಅಧಿಕವಾಗಿದೆ

ವಿಟೆಮಿನ್‌ನಿಂದ ಕಿವುಡುತನದ ಪರಿಹಾರ

ಕಿವುಡುತನವನ್ನು ಇಲ್ಲದೆ ಮಾಡಲು ಸಾನ್ ಫ್ರಾನ್ಸಿಸ್ಕೋದ ದಕ್ಷಿಣ ಪಾಸಿಫಿಕ್ ಆಸ್ಪತ್ರೆಯ ಡಾಕ್ಟರ್ ಗ್ರಾಂಟ್ ಸೆಲ್ ಫ್ರಿಜ್ ಎಂಬವರು ಹೊಸತೊಂದು ಶೋಧನೆಯನ್ನು ತಯಾರಿಸಿದ್ದಾರೆ

ಕಿವುಡುತನವು ಸಾಧಾರಣವಾಗಿ ಆಗುವ ಕಾರಣವೆಂದರೆ ಶ್ರವಣೇಂದ್ರಿಯಕ್ಕೆ ಸಂಬಂಧಿಸಿರುವ ನರವೊಂದಕ್ಕೆ ಆಘಾತವಾಗುವುದು ಐದು ವರ್ಷಗಳ ಹಿಂದೆ ಆ ಡಾಕ್ಟರರು ಕಂಡು ಹಿಡಿದದ್ದೇನೆಂದರೆ ಶ್ರವಣೇಂದ್ರಿಯದ ನರಕ್ಕೆ ಪುಷ್ಟಿಕೊಡುವ ವಿಟಮಿನ್ 'ಬಿ'ಯನ್ನು ಕಿತ್ತಿದಿರುವುದರಿಂದ ಕಿವುಡತನವು ಸುರವಾಗವುದೆಂದು ಇಂತಹ ಶ್ರವಣ ಶಕ್ತಿಯ ತೊಂದರೆಯುಳ್ಳವರಿಗೆ ವಿಟಮಿನ್ ಬಿ ಯುಳ್ಳ ಆಹಾರ, ಮದ್ದು, ಇಂಜೆಕ್ಷನುಗಳಿಂದ ಅವರು ಪ್ರಯೋಗಿಸಿ ಅದರಲ್ಲಿ ಜಯಶೀಲರಾಗಿರುವರೆಂದು ತಿಳಿದಿದೆ!

ಹೀಗೆ ಐದಾರು ಇಂಜೆಕ್ಷನುಗಳನ್ನು ಕೊಟ್ಟು ಸಫಲರಾದ ವೇಳೆ ಅವರು ಸಾನ್ ಫ್ರಾನ್ಸಿಸ್ಕೋದಲ್ಲಿರುವ ವೈದ್ಯವೃತ್ತಿಯವರಿಗೆಲ್ಲಾ ಈ ಪ್ರಯೋಗ ಮಾಡಿ ಕಿವುಡತನವನ್ನು ಗುಣಪಡಿಸಬಹುದಾಗಿ ಹೇಳಿದರು ಎಳೆಯ ಪ್ರಾಯದವರಿಗೆ ಮಾತ್ರ ಇದರಿಂದ ಖಂಡಿತ ಗುಣವಾಗುವುದೆಂದೂ, ಮುದಿ ಪ್ರಾಯದವರಿಗೆ ಬಹಳ ಅಪರೂಪವಾಗಿ ಗುಣವಾಗುವುದೆಂದೂ, ಗುಣವಾಗದಿದ್ದರೂ ಬಹಳ ಸಮಯಗಳ ಪ್ರಯೋಗ ಬೇಕಾಗುವುದೆಂದೂ ತಿಳಿದಿದೆ.

ಮೆದುಳಿನಲ್ಲಿ ದ್ವಿವೃತ್ತಿ

ಮನುಷ್ಯನು ಅನೇಕ ಸಲ ಅನಾವಶ್ಯಕವಾಗಿ ಕೆಲವು ಕೆಲಸಗಳನ್ನು ಮಾಡುತ್ತಾನೆ ಜೂಜು, ಕಳವು, ವಂಚನೆ, ಮೊದಲಾದುವುಗಳು ಬಾಹಿರವಾದ ಕಾರ್ಯಗಳೆಂದು ತಿಳಿದಿದ್ದರೂ ಅದನ್ನು ಮಾಡುವುದು ಯಾವ ಕಾರಣದಿಂದ ಎಂದು ಹೊಸ ಶೋಧನೆಯೊಂದನ್ನು ನ್ಯೂಯಾರ್ಕಿನ ಡಾ ಕಾರ್ಲೆಟನ್ ಸೈಮನ್ ಎಂಬವರು ಕಂಡು ಹಿಡಿದಿದ್ದಾರೆ!

ಮನುಷ್ಯನಿಗೆ ಕೈ, ಕಾಲು, ಕಣ್ಣು ಮೊದಲಾದುವುಗಳೆಲ್ಲಾ ಎರಡಿರುವಂತೆ ತಲೆ ಮೆದುಳಿನಲ್ಲಿಯೂ ಎರಡು ವೃತ್ತಿಗಳುಂಟು, ಸಹಜವಾಗಿರುತ್ತದೆ ಬಲಹೀನವಾಗಿರುವ ಮೆದುಳು ಹೆಚ್ಚು ಕ್ರಿಯೆಯನ್ನು ಮಾಡತೊಡಗಿದರೆ ಮನುಷ್ಯನು ಇಂತಹ ಅನಾವಶ್ಯಕವಾದ ಕೆಲಸಗಳಿಗೆ ಕೈ ಹಚ್ಚುತ್ತಾನೆ! ಹಲವೊಮ್ಮೆ ತುಂಬಾ ಹಣವಂತರಾದವರೂ ಚಿಲ್ಲರೆ ವಸ್ತುಗಳನ್ನು ಕದ್ದುಕೊಳ್ಳುತ್ತಾರೆ ಇದಕ್ಕೆ ಇಂತಹ ಮೆದುಳಿನ ಶಕ್ತಿಯು ಅದಲು ಬದಲೇ ಕಾರಣವೆಂದು ಡಾಕ್ಟರರ ಅಭಿಮತ

ಸಸ್ಯಜೀವನದಲ್ಲಿ ತನ್ಮಯನಾಗಿದ್ದ ವಿಜ್ಞಾನಿ!

ಸಸ್ಯಶಾಸ್ತ್ರದ ಶೋಧನೆಯಲ್ಲಿ ಇಡೀ ತನ್ನ ಜೀವನವನ್ನು ವ್ಯಯಿಸಿದ ಥೋಮಸ್ ಪಾವೆಲ್ಲ ಎಂಬ ವೈಜ್ಞಾನಿಕನ ಜೀವನ ಚರಿತ್ರೆಯು ನಿಜವಾಗಿಯೂ ರಸಮಯವಾಗಿದೆ!

ಬಾಲಕ ಥೋಮಸನು ಸಸ್ಯಸಮೃದ್ಧವಾಗಿದ್ದ ಸ್ಥಳಗಳಲ್ಲಿ ಬಹಳ ಉಲ್ಲಾಸದಿಂದ ದಿನವಿಡೀ ಕಳೆಯುವುದಿತ್ತು! ಪರ್ವತ, ದರಿ ಕಂದರಗಳ ಯಾತ್ರೆ ಮಾಡುತ್ತಿದ್ದಾಗ, ಎಲ್ಲೆಡೆಗಳಲ್ಲಿಯೂ ಸುಂದರ ಸಸ್ಯಶಾಲಿನಿಯಾದ ಪ್ರಕೃತಿಯು ಅತನನ್ನು ಬೆರಗುಗೊಳಿಸುತ್ತಿತ್ತು! ವಿಶಾಲವಾದ ಪೊದರುಗಳುಳ್ಳ ಮೈದಾನ, ಉನ್ನತೋನ್ನತ ಅರಣ್ಯ, ಹರಿವ ನಿರ್ಝರಿಣಿ, ಹಿಮವತ್ ಪರ್ವತಾವಳಿ, ಇವುಗಳು ಆತನಲ್ಲಿ ರಸೋದ್ರೇಕವನ್ನು ಹುಟ್ಟಿಸುತ್ತಿದ್ದುವು!

ದಿನ ಹೋದಂತೆ ಆತನ ಈ ಸಸ್ಯಪ್ರೇಮವು ಹೆಚ್ಚುತ್ತಾ ಬಂತು ಈ ರೀತಿಯ ಉತ್ಸುಕತೆಯಿಂದ ಆತನು ನಾನಾ ಪ್ರಾಂತಗಳಲ್ಲಿ ಅಲೆದಾಡಿದನು ಅಲ್ಲಲ್ಲಿ ನಿಂತು, ಪ್ರಕೃತಿಯಲ್ಲಿ ಸಸ್ಯವರ್ಗದ ನೆಲೆಯನ್ನು ಗಮನಿಸುತ್ತಾ, ಅವುಗಳ ಸೊಬಗನ್ನು ಅನುಭವಿಸುತ್ತಾ ಆತನು ಸಾಗುತ್ತಿದ್ದನು! ಹೀಗೆ ತನ್ನ ಪ್ರಾಂತವಾದ ಅಮೇರಿಕದಲ್ಲಿ ದಿನವಿಡೀ ಅಲೆದಾಡಿ, ರಾತ್ರಿಗೆ ತಾನು ಕಂಡ ಜಗತ್ತಿನ ಸೊಬಗಿನ ಸವಿನೆನಪುಗಳನ್ನು ಬರೆದಿಡುತ್ತಿದ್ದನು

ಯಾವ ಸ್ಥಳಗಳನ್ನು ಪಾಶ್ಚಾತ್ಯರು ಪ್ರವೇಶಿಸಲು ಭಯಪಡುತ್ತಿದ್ದರೋ, ಅಲ್ಲೆಲ್ಲಾ ಆತನು ಅಲೆದಾಡಿದನು. ಆತನು ಪ್ರಕೃತಿಯಿಂದಲೇ ನಿರ್ಭಯನಾಗಿದ್ದನು ಕಾನನ ವಾಸಿಗಳಾದ ಕ್ರೂರ ಮಾನವರೊಡನೆ ಸೇರಿಕೊಂಡು, ಅವರ ಮಕ್ಕಳಿಗೆ ಕತೆ ಹೇಳುತ್ತಾ ಆತನು ಅವರೊಡನೆ ಮಿಶ್ರವಾಗಿದ್ದನು

೧೮೭೯ರಿಂದ ಆತನು ತಾನು ಸಂಗ್ರಹಿಸಿದ ಸಸ್ಯಜಾತಿಗಳನ್ನು ಬೇರೆ ಬೇರೆ ವಿಭಾಗವಾಗಿ ವಿಂಗಡಿಸಿ ಉಲ್ಲೇಖಿಸಿದನು ಇಂತಹ ಕಾರ್ಯದಲ್ಲಿ ಆತನೇ ಮೊದಲಿಗನಾದುದರಿಂದ ಎಷ್ಟು ತಾಳ್ಮೆಯಿಂದ ದುಡಿಯಬೇಕಿತ್ತೆಂಬ ವಿಷಯವನ್ನು ನಾವು ಗಮನಿಸಬೇಕಾಗಿದೆ ಆತನು ತನ್ನ ಶೋಧೆಯನ್ನು ಸಂಗ್ರಹಿಸಿ ಬರೆದು ಪುಸ್ತಕದ ರೂಪದಲ್ಲಿ ತಂದನು. ಆದರೆ ಆ ಕಾಲದಲ್ಲಿ ಅದನ್ನು ಅಚ್ಚುಮಾಡಲು ತಕ್ಕ ಮುದ್ರಾಲಯಗಳು ಇರದಿದ್ದುದರಿಂದ, ಆ ಕೆಲಸವನ್ನು ಆತನೇ ಕೈಗೊಂಡು, ಎಂಟು ವರ್ಷಗಳ ಅನಂತರ ತನ್ನ ಶೋಧನಾಫಲವಾದ ಪುಸ್ತಕವನ್ನು ಪ್ರಪಂಚದ ದೃಷ್ಟಿಪಥಕ್ಕೆ ತಂದನು

ಆತನು ತನ್ನ ೫೦ನೇ ವಯಸ್ಸಿನಲ್ಲಿ ವಿವಾಹವಾದನು ಆತನು ಇಡೀ ಜೀವಮಾನದಲ್ಲಿ ಸಸ್ಯಜಾತಿಗಳ ಶೋಧನೆಯಲ್ಲೇ ಕಳೆದನಲ್ಲದೆ, ಹಣವನ್ನು ಮಾಡುವುದು ಆತನಿಗೆ ಗೊತ್ತೇ ಇರಲಿಲ್ಲ ಆತನು ಹೀಗೆ ನಿರಂತರ ದುಡಿಯುತ್ತಿದ್ದುದು, ಕೇವಲ ಸಸ್ಯಜಾತಿಯ ಮೇಲಣ ಪ್ರೇಮದಿಂದ

೧೯೧೨ ಡಿಸೆಂಬರ ೩ನೇ ದಿನ ಆತನು ಮೃತಿಹೊಂದಿದನು ಸರಳ ಜೀವಿ! ಧೈರ್ಯಶಾಲಿ, ಮಿತಭಾಷಿ ಅದ್ಭುತಸಾಹಸಿ, ಮಹಾವಿಜ್ಞಾನಿ ಇಂತಹ ಮಹನೀಯರು ಜಗತ್ತಿನಲ್ಲಿ ಕೆಲವರೇ ಇದ್ದಾರೆ!

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲಾ ಪ್ರಕಾರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು, ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಬೀಳುವುದಿಲ್ಲ

ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವುಹೋಗುವುದು ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರಮಾರ್ಗದ ಒಳಸಿಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ–ಕೊಕಸ' ಎಂಬ ವಿಷಾರಿ ಜಂತುಗಳು ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗವು ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. ೩–0–0 (ವ್ಹಿ ಪಿ ಚಾರ್ಜು 8 ಆಣೆ ಬೇರೆ)

ಎಲ್ಲಾ ಪತ್ರವ್ಯವಹಾರ ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾ ಪಟೇಲ್ ರೋಡ್, ಮುಂಬಯಿ 4 ಗಳು ಇಂಗ್ಲಿಷಿನಲ್ಲಿ ಬರೆಯಿರಿ

Sole Manufacturer **Dr D. N. JASANI,** Vithalbhai Patal Road, BOMBAY

ಸ್ಟಾಕಿಸ್ಟ ಮೆಸರ್ಸ್ ಇಲೆಕ್ಟ್ರೊ ಹೊಮ್ಯೊಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ ಹಂಪನಕಟ್ಟಾ ಮಂಗಳೂರು

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST. PAULS CHURCH,
Bolkonje Post, S. K
Dated 4th Jan. 1939.

To
THE JOINT MANAGERS,
The C. P. C. Co. Ltd., Mangalore.

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress.

The glorious success of our congress is also due to your exertion in putting up the various lights some of which I hear were done voluntarily.

May the blessings of the almighty fall on you all and may you be able to do much good to the Public.

Renewing my thanks, I remain,
Yours Sincerely,
(Sd.) **P. W. Farias.**

Sri Parshwanathaswami,
PANCHAKALYANA POOJA MAHOSTHAM,
Venoor, S. Kanara, 1939.

To,
THE JOINT MANAGERS,
The Combind Booking Agency, Mangalore.

Dear Sirs,

Please permit us to express our thanks on behalf of the above committee for the efficient Service rendered by your combind Booking Agency Staff at Venoor to the visitors of the Panchakalyana Pooja Mahosthamam celebration held this year.

Our thanks are also due to Moodabidri Booking Clerk Mr. B. Krishnnayya and also his other mates and Mr. Raghavendra Bhandary who had specially come down from Mangalore to see to the needs of and comforts of the travelling Public. Thanking you once again,

We remain, Yours faithfully,

Venoor, Dated 6-2-'39. } (Sd.) B. Chandappa Indra, (*Secretary, P. M. Council.*) (Sd.) M. Jagathpal; (Sd.) M. Pachappa Shetty, (Sd.) Anantharaj Shetty, (*Members, Panchakalyana Maaosthamam Committee.*)

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಚಾಕು ಕೊಯ್ಯುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಮದನಕಾಮೇಶ್ವರ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೆಪಿ.
P. O. Peridepi (ಕೊಡಗು)

HOUNSA

ಹಂಸಾಸ್ನೋ ಮತ್ತು ಬ್ರಿಲ್ಲೆಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಲ್ಕಟ್ಟೆ, ಬಜಾರ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕೆರದ ಗುಡ್ಡು ಮುಡಿಗೆ	1—14—0	—
" ದುಯಂ " "	1—12—0	1—12—0
" ಅವ್ವಲ್ ಸುಗ್ಗಿ "	1—12—0	—
" ದುಯಂ " "	1—10—0	—
ಅಕ್ಕಿ ಅವ್ವಲ್ ಗಿಡ್ಡು "	4—12—0	4—12—0
" ದುಯಂ " "	4—8—0	4—10—0
" ಅವ್ವಲ್ ಸುಗ್ಗಿ "	4—7—0	4—7—0
" ದುಯಂ " "	4—3—0	4—5—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
" ಸಿಪ್ಪೆ ಇದ್ದದು "	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
" ದಿಲ್‌ಪಸಂದ "	52—8—0	—
ತೆಂಗಿನ ಎಣ್ಣೆ ಮುಡಿಕ್ಕೆ	3—6—0	3—6—0
ಸಿಪ್ಪೆಯುದ್ದ ಅಡಕೆ 1000ಕ್ಕೆ	3—8—0	4—4—0
ಗೇರುಬೀಜ ಮುಡಿಗೆ	8—10—	8—10—0
ಕಬ್ಬಿನ ಬೆಲ್ಲ ಖಂಡಿಗೆ	52—8—0	57—8—0
ಒಣಮೆಣಸು ಹಂಡಪೋಟಿಗೆ	14—8—0	15—8—0

ಸ್ವದೇಶಾಭಿಮಾನಿ

Established 1906 • Regd. No. M 3406

ಸಂಪುಟ ೩೩] ತಾರೀಖು ೨೧–೭–೧೯೩೯ (21–7–1939) [ಸಂಚಿಕೆ ೨೯

THE

BOMBAY LIFE ASSURANCE COMPANY, LTD.,

(ESTD: 1908.)

THE OFFICE

Which has proved its popularity by its progress;

Record of New Bussiness

Proposed.	Year.	Completed.
1,25,50,250	1934	1,04,88,750
1,50,48,915	1935	1,23,28,665
1,68,88.200	1936	1,36.01.500
1,72,579,75-	1937	1,40,08,725
[illegible]76,83,250	1938	144,91,000

1939- VALUATION YEAR.

Please take up a Policy Now and participate in Bonus.

To Insure or to Represent it pays you to consult us:

Apply to — **KOCHIKAR BROTHERS, LIMITED,**

Madras Branch Secretaries,

The Bombay Life Assurance Co., Ltd.,

The Bombay Life Building : : : : Gandhinagar, UDIPI.

or any of our following offices:

Post Box No. 337, Mount Road, Madras.

Visweshwarapuram Circle, Bangalore City.

Charni Road, Girgaum, BOMBAY 4.

Car Street, Mangalore.

Puthiyara, Calicut.

Central Station Road, Trivandrum.

MAKE LIFE WORTH-LIVING!

Indigestion – Insomnia – Dry Cough – Nervousness – Weak Heart &c.,

these make you wiery of Life!

GONSULT US AND BUY

YOUR LIFE'S HAPPINESS!

Oils – that cool the brain and induce sleep.

Lehas – that build-up your wasted system.

Asavas – that regenerate your jaded nerves.

All Genuine Ayurvedic Preparations-

-from this huge Ayurvedic Concern of a Century Standing–

Bhuvanendra Products, Ltd.,

Katapady, S. Kanara.

(BRANCH–KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ – ನಿದ್ರಾವಿಹೀನತೆ – ಒಣ ಕೆಮ್ಮು – ನರಗಳ ಅಬಲತೆ – ದುರ್ಬಲ ಹೃತ್ಕ್ಲೇಶ – ಇವುಗಳು

ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು

ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು

ನಿಶ್ಶೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ

ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ. ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 28--7 1939

ತಾರೀಖು ೨೮—೭—೧೯೩೯

ಸಚಿತ್ರ

ವಾರಪತ್ರಿಕೆ

ನೋಟಗಳು

ಡಾನ್ಜಿಗ್ಗಿನ ವಿಷಯವೊತ್ತಯು, ಗೊಂದಲವಿಲ್ಲದೆಯೂ ಕೊನೆಗೊಳ್ಳುವುದೆಂದು ಹಿಟ್ಲರನು ಭರವಸೆಯಲ್ಲಿರುವುದಾಗಿ, ಜರ್ಮನಿಯ ಅಧಿಕಾರೀ ವರ್ಗದ ಪ್ರಕಟಣೆಯೊಂದು ತಿಳಿಸುತ್ತದೆ!

◆

ಇತರರ ಮಧ್ಯಸ್ಥಿಕೆಯಿಲ್ಲದೆ ಡಾನ್ಜಿಗಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಹಿಟ್ಲರನು ಆಶಿಸುತ್ತಾನೆ!

◆

ಇತ್ತೀಚೆಗೆ ಬ್ರಿಟನ್ ಫ್ರಾನ್ಸುಗಳು 'ಕಲಹಪ್ರಿಯ'ರನ್ನು ಎದುರಿಸಲು ಯುದ್ಧಹೂಡಲು ಸಿದ್ಧರಾಗಿರುವವೆಂದು ಪ್ರಕಟವಾಗಿದೆ. ರಷ್ಯ ಮತ್ತು ಇತರ ರಾಷ್ಟ್ರಗಳ ಸಂಬಂಧಕ್ಕಾಗಿ ಒಪ್ಪಂದಗಳ ವ್ಯೂಹ ರಚನೆಯೇ ಆಗಿದೆ. ಈ ಸಂಬಂಧವು ಪೂರ್ತಿಗೊಳ್ಳಬೇಕಾದರೆ ಬಹಳ ಸಮಯ ಹೋಗಬೇಕಾದೀತೆಂದು ಹಿಟ್ಲರನಿಗೆ ಗೊತ್ತೇ ಇದೆ

◆

ಅದೇಕಾರಣವೇ ಹಿಟ್ಲರನು ತಿರುಗಿ ಒಮ್ಮೆ ಕಳೆದ ಮ್ಯುನಿಕ್‌ನ ಶಾಂತಿಸ್ಥಾಪನೆಯಂತಹ ಇನ್ನೊಂದು ಶಾಂತಿಸ್ಥಾಪನೆಗೆ ಮನಸ್ಸು ಮಾಡಿರಬೇಕು!

◆

ಶಾಂತಿಯಿಂದಲೇ ಹಿಟ್ಲರನು ಡಾನ್ಜಿಗನ್ನು ಸ್ವಾಧೀನಮಾಡಿದರೆ, ನಿಜವಾಗಿಯೂ ಇದು ಮಹತ್ವವಾದ ಶಾಂತಿಸ್ಥಾಪನೆಯ ಕಾರ್ಯವಲ್ಲವೇ?

◆

ತನ್ನ ಭವಿಷ್ಯದ ಕುರಿತು ಹಿಟ್ಲರನು ತನ್ನ ಜೋಯಿಸರೊಡನೆ ವಿಚಾರಿಸಿದ್ದಾಗಿ ತಿಳಿಯುತ್ತದೆ

◆

ಮಂಗಳಗ್ರಹವು ಹಿಟ್ಲರನಿಗೆ ಅವಮಂಗಳವನ್ನು ತಂದೀಬಿಡುವುದಂತೆ!

◆

ಹಿಟ್ಲರನು ಯುದ್ಧಕ್ಕೆ ಕೈಹಾಕಬಾರದಾಗಿ ಅವರ ಉಪದೇಶ!

◆

ಹಿಟ್ಲರನು ತನ್ನ ಜೋಯಿಸರ ಮಾತಿನಿಂದ ಹೀಗೆ ಶಾಂತಿಯಿಂದಲೇ ಡಾನ್ಜಿಗನ್ನು ವಶಪಡಿಸಲು ಮನಸ್ಸುಮಾಡಿರಬೇಕು

◆

ಹಿಟ್ಲರನನ್ನೂ ಹೀಗೆ ಸಪ್ಪೆಯಾಗಿ ಮಾಡಿದ ಜೋಯಿಸರ ಭವಿಷ್ಯವು ನಿಜವಾಗಿಯೂ ಪ್ರಶಂಸನೀಯವಾದದ್ದು!

◆

ಗಡಿನಾಡಿನ ಗುಡ್ಡಗಾಡಿನ ಜನರನ್ನು ಹದಕ್ಕೆ ತರಲು ಇದುವರೆಗೆ ಭಾರತ ಸರಕಾರವು ಮೆಶಿನ್ ಗನ್ನುಗಳನ್ನೋ ವಿಮಾನಗಳನ್ನೋ ಉಪಯೋಗಿಸಬೇಕಿತ್ತು ಆದರೆ ಮುಂದಕ್ಕೆ ಸರಕಾರವು ಬೇರೆ ಉಪಾಯಗಳನ್ನು ಹುಡುಕುವುದಾಗಿ ವಾರ್ತೆಯಿದೆ!

◆

ಸರಕಾರವು ಆ ಜನರು ವಾಸವಾಗಿರುವ ಸ್ಥಳಗಳಿಗೆ ಗಲಭೆಯಿಲ್ಲದೆ ಜನರನ್ನು ಕಳುಹಿಸಿ, ಅವರೊಡನೆ ಸೇರಿದ್ದು ಅವರಿಗೆ ವಿದ್ಯಾಭ್ಯಾಸವನ್ನೂ ಹಣಸಹಾಯವನ್ನೂ ಕೊಡುವ ಯೋಚನೆಮಾಡಿದೆ

◆

ಗಾಂಧಿಜಿಯವರ ಕೈಕೆಳಗೆ ಅಖಿಲಭಾರತ ಚರಕಾ ಸಂಘದವರು ಇದಕ್ಕೆ ಇನ್ನೊಂದು ಹಂಚಿಕೆ ಮಾಡಿದ್ದಾರೆ!

◆

ಅಖಿಲಭಾರತ ಚರಕಾಸಂಘದ ಶಾಖೆಗಳನ್ನು ತೆರೆದು, ಅಲ್ಲಿನ ಜನರನ್ನು ಖಾದೀ ಕೆಲಸದಲ್ಲಿ ತಯಾರು ಮಾಡುವುದರ ಮೂಲಕ, ಅವರಲ್ಲಿ ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಭಾವವನ್ನು ಬೀರುವುದು ಚರಕಾಸಂಘದ ಧ್ಯೇಯವಾಗಿದೆ

◆

ಸರಕಾರವಾದರೂ ಕೋವಿ ಗುಂಡುಗಳಿಂದ ಜನರನ್ನು ಹೆದರಿಸಿ ಆಳುವುದಕ್ಕಿಂತ, ಗಾಂಧಿಜಿಯವರ ರೀತಿಯನ್ನು ಅನುಸರಿಸಿದ್ದು ಯುಕ್ತವೇ ಆಯಿತು

◆

ಗುಂಡಿನ ವಿಸ್ತಾರಿಗೀಕ ಚರಕವನ್ನೇ ಕೈಯಲ್ಲಿ ಹಿಡಿಯಲು ಸಂಕೋಚಪಟ್ಟರೆ, ನಿಜವಾಗಿಯೂ ಗಾಂಧಿಜಿಯವರು ದೊಡ್ಡ ವಿಜಯವನ್ನು ಪಡೆದರು.

◆

ಹಿಂದೂದೇಶದ ಪಶುಗಳ ಪರಿಸ್ಥಿತಿಯನ್ನು ಸುಧಾರಿಸುವರೆ ವೈಸ್‌ರಾಯರಿತ್ತ ಸೂಚನೆಯು ಈಗಾಗಲೇ ಒಂದು ಸಂಸ್ಥೆಯ ರೂಪವನ್ನು ಹೊಂದಿದೆ,

◆

ಒಳ್ಳೆಯ ಹೋರಿಗಳನ್ನು ಸಾಕುವ ಯೋಜನೆಯು ನಿಜವಾಗಿಯೂ ಅತ್ಯಂತ ಮಹತ್ವವಾದದ್ದು, ಇಂತಹ 8400 ಹೋರಿಗಳನ್ನು ಈ ವರ್ಷವೇ ಒದಗಿಸುವುದಾಗಿನಿಶ್ಚಯವಾಗಿದೆ.

◆

ಬರುವ ವರ್ಷದಲ್ಲಿ ಹೋರಿಗಳ ಸಂಖ್ಯೆಯು 8000ದ ತನಕ ಏರಬಹುದಾಗಿ ಅಂದಾಜು ಮಾಡಲಾಗಿದೆ.

◆

ಪಶುಗಳನ್ನು ಪೂಜಿಸುವ, ಹಿಂದೀಯರ ಜೀವನದಲ್ಲಿ ನಿಜವಾಗಿಯೂ ಸಂಘದ ಚಟುವಟಿಕೆಗಳಿಗೆ ಅತ್ಯಂತ ಪ್ರಾಧಾನ್ಯತೆ ಸಿಗಬೇಕು ಹಿಂದೀಯ ರೈತನಿಗೆ ಇದು ಒಂದು ಮಹತ್ವದ 'ವರ'ವಾಗಿ ಪರಿಣಮಿಸುವುದು

◆

ಬಸ್ಸು ಸರ್ವಿಸುಗಳನ್ನು ಜಿಲ್ಲಾಬೋರ್ಡುಗಳು ವಹಿಕೊಳ್ಳುವ ವಿಷಯ ಈಗಾಗಲೇ ಸರಕಾರವು ವಿಚಾರಮಾಡಲು ಪ್ರಾರಂಭಿಸಿದೆ

◆

ಮದ್ರಾಸಿನಲ್ಲಿ ಸೇರಿದ ರೈಲ್ವೇ ಅಧಿಕಾರಿಗಳ ಮತ್ತು ಮಂತ್ರಿಗಳ ಸಭೆಯೊಂದರಲ್ಲಿ ರೈಲ್ವೆಗಳೊಡನೆ ಬಸ್ಸು ಕಂಪೆನಿಗಳ ಸ್ಪರ್ಧೆಯ ವಿಷಯವು ಆಲೋಚಿಸಲಾಯಿತು.

◆

ರೈಲ್ವೆ ಕಂಪನಿಯವರು, ಇಂತಹ ರೈಲ್ವೆ ಮತ್ತು ಬಸ್ಸುಗಳ ಸ್ಪರ್ಧೆಯನ್ನು ನಿಲ್ಲಿಸುವ ಸಲುವಾಗಿ, ಜಿಲ್ಲಾ ಬೋರ್ಡುಗಳನ್ನು ಪಾಲುಗಾರರಾಗಿ ತೆಕ್ಕೊಂಡು, ಬಸ್ಸು ಸರ್ವೀಸುಗಳನ್ನು ನಡೆಸುವ ವಿಷಯ ಸೂಚನೆಯಿತ್ತಿರುವರಾಗಿ ತಿಳಿಯುತ್ತದೆ

◆

ಹೀಗೆ ಈ ಸಮಸ್ಯೆಯನ್ನು ಪರಿಹರಿಸಲು ಸರಕಾರವು ಯೋಚಿಸುವಾಗ, ಬಸ್ಸು ಕಂಪನಿಗಳನ್ನು ನಡೆಸಲು ಎರಡು ಪಕ್ಷದವರು ಮುಂದೆ ಬಂದಿರುತ್ತಾರೆ

◆

ಸರಕಾರವು ಈ ಪ್ರಶ್ನೆಯನ್ನು ಹೇಗೆ ನಿಶ್ಚಯಿಸುವುದೋ ನೋಡತಕ್ಕದ್ದಿದೆ

ನೋಟಿಸು.

ಕಾಸರಗೋಡು ಡಿ। ಮು। ಕೋರ್ಟಿನಲ್ಲಿ

O S No 114/1939

ಕೆ ನಾರಾಯಣ ನಾಯ್ಕ ಅಂಪಯಾನೆ ರಾಮಚಂದ್ರ ನಾಯ್ಕರ ಮಗ ಕೈಪಾಡಿ ಗ್ರಾಮ ಕುಂಬಳೆ } ವಾದಿ

ಮತ್ತು

ವೆಂಕಟಭಟ್ಟ ಯಾನೆ ವೆಂಕಟಹೆಬ್ಬಾರಕಾಡಮನೆ ಗೋಪಾಲಕೃಷ್ಣ ಹೆಬ್ಬಾರರ ಮಗ ಇಚ್ಲಂಪಾಡಿ ಗ್ರಾಮ ಕಾವಣಕೆರೆ } ಪ್ರತಿವಾದಿ

ಇವರೊಳಗೆ

ಸದ್ರಿ ವ್ಯವಹರಣೆಯ ವಾದಿಕಡೆಯಿಂದ ಈ ಮೂಲಕ ತಿಳಿಸುವುದೇನೆಂದರೆ—

ಸದ್ರಿ ಪ್ರತಿವಾದಿಯು ತಾ 3-9-1917 ರಲ್ಲು ರಿಜಿಸ್ತ್ರಿಪಿಸಿ ಬರಕೊಟ್ಟ ಆರವಾರ ದಸ್ತ್ಯಾವೇಜು ಶರ್ತಪ್ರಕಾರ 1938 ನೇ ಇಸ್ವಿ ಪಾಲ್ಗುಣ ಬ। 30 ಕ್ಕೆ ಬರತಕ್ಕ ಮಿಗ್ತಿ ಐವೇಜು ರೂಪಾಯಿ 58-2-0 ನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲುಮಾಡಿದ ಸದ್ರಿ ವ್ಯಾಜ್ಯವು ತಾರೀಕು 18-8-1939 ಕ್ಕೆ ತನಿಗೆ ಇಟ್ಟಿರುತ್ತದೆ ಆ ದಿವಸ ಹಗಲು 10 ಘಂಟೆಗೆ ಪ್ರತಿವಾದಿಯು ಕೋರ್ಟಿನಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಪ್ರತಿವಾದಿಯ ಗೈರುಹಾಜರಿಯಿಂದ ವಾದಿಯ ಗುಣಕ್ಕೆ ಡಿಕ್ರಿ ಕೊಡೋಣಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

Kasargod 26-7-39 } **K. Vittal Nayak,** Advocate for petitioner

THE

Bank of Mangalore Ltd.,

MANGALORE.

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

All kinds of banking business transacted

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ ಎಲ್ಲರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ 1 ವೀಸಕ್ಕೆ ರೂ 3 ೪-0 ನವಿಲಿನ ಮಾರ್ಕು ಸಾರಥಿ ನಸ್ಯ 1 ವೀಸಕ್ಕೆ ರೂ 3 0 0

(ವಿ. ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ಎಡ್ರೆಸು –

ಎ ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ ಬಿ ನಂಬ್ರ 47 ಮದ್ರಾಸು

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾಪ್ ಟೊಯ್ಲೆಟಿಗೆ ಕನ್ನಡ ನಾಡಿನ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲೈಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತ ಕೊಡುವರು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಟೇಷನ್ ಡೆಲಿವರಿ ಕೊಡುವರು ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ ಮಾಲು ಪರದೇಶದಿಂದ ಬರುವ ಕೆ ಉಂಟು ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು ಕನ್ನಡ, ಮರಾಠಿ ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ

ಎಸ್. ಎಮ್. ವಾಘ್ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜಂಟ್ — ಪಿ ಎಚ್. ಭಟ್ಕಾ ಗದಗ – ವಿ ಎಸ್. ನಿಟ್ಟೆ.

ಮೈಸೂರು, ಕೊರ್ಗ ದಕ್ಷಿಣ ಕನ್ನಡಾ ಏಜೆಂಟ್ — ಡಾ. ಕೆ ಭಾಸ್ಕರ ಪೈ.

ಸ್ಪೆಶಲ್ ಏಜಂಟ್ — ಬಿ ವ್ಹಿ. ಹೊನ್ನಾವರ

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರೆ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇರುದಂತೆ ಸುರುವಿಡುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ನೋಡಲೇ ಕೂಡಾ [illegible] ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು — [illegible] ವೈದ್ಯ ಎಲ್. ಸಿ. ಪಿ ಎಸ್, ಕೆಳವಾ ಬರೆದು ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦ ವಿ ಪಿ. ಖ ಜ

ವಿಳಾಸ. ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, (S. M. C.

ರಕ್ಷ್ಯನ್ನಿರ್ಹಾರ್ಯಸ್ತು ತುಷ್ಟಾನ ದೇವಾ । ನ ಭೇಜಿರೇ ಭೀಮ ವಿಶೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿ ಗದರಿಂ । ಹಲುಸವಾಯಿತೆ! ಮತೆ ವಿಶ್ವವ ಸುಡುವ ಬರುತಿರುವ ॥ ಗರಲಕವರಂಜಿದರೆ! ಸುಧೆಯನು ಮರೆತು ಕ್ಷುಬ್ಧರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥

ತಾರೀಕು ೨೮—೭—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 28—7—1939

ಪ್ರಾಂತೀಯ ರಾಜ್ಯಭರಣವು ನಮಗೆ ಶಾಪವೇ?

ಶ್ರೀ ಜಮ್‌ಶೇಡ್ಜಿ ಮೆಹತಾರವರು ಒಂದು ಪತ್ರದಲ್ಲಿ ಮಹಾತ್ಮಾಗಾಂಧಿಯವರೊಡನೆ ಹೀಗೆಂದ ಕಂಬನಿದುಂಬಿ ಬಿನ್ನವಿಸಿಕೊಂಡರು

"ಪ್ರಾಂತಿಕ ರಾಜ್ಯಭರಣವು ಹಿಂದೂದೇಶದಲ್ಲಿ ಪ್ರಾರಂಭವಾದ ಮೇಲೆ, ಪ್ರಾಂತಗಳಲ್ಲಿ ಪ್ರಾಂತೀಯ ದುರಭಿಮಾನ ಮತ್ತು ಮತ್ಸರಗಳು ಹೆಚ್ಚುತ್ತಿರುವುದನ್ನು ನೋಡಿ ಯಾವನಾದರೂ ಸಂತಾಪಪಡಬೇಕಾಗಿದೆ. ಪ್ರಾಂತಿಕ ರಾಜ್ಯಭರಣವು ನಮಗೆ ಅನಿಷ್ಟಕಾರಿಯಾದ ಶಾಪವಾಗಿದೆ. ಸ್ವಲ್ಪ ಸಮಯದ ಹಿಂದೆ ನನ್ನ ನಾಡು ಎಂದರೆ 'ಭರತಭೂಮಿ'ಯೆಂಬ ಅಭಿಮಾನವಿದ್ದದ್ದು ಈಗ ನನ್ನ ಪ್ರಾಂತವೆಂಬ ಮನಸಂಕೋಚವು ಜನತೆಯಲ್ಲಿ ಹೆಚ್ಚಿದೆ. ಮಹಾತ್ಮಾಜೀ ನೀವು ಈ ಕುರಿತು ದೇಶಕ್ಕೆ ಎಚ್ಚರಿಕೆ ಕೊಡಲಾರಿರೇ?" ಸಹಜವಾಗಿ ಈ ಪತ್ರದಲ್ಲಿ ಲಿಖಿತವಾದ ಅಂಶವು ಯಾವನನ್ನಾದರೂ ಸಂಕಟಗೊಳಿಸುವುದು. ಅಂತೆಯೇ ಸಂತಾಪಗೊಂಡು ಮಹಾತ್ಮರು ಹೀಗೆಂದು 'ಹರಿಜನ'ದಲ್ಲಿ ಬರೆಯುತ್ತಾರೆ —

'ಜಮ್‌ಶೇಡ್ಜಿಯವರು ಹೇಳಿದ ಆರೋಪವು ಸತ್ಯವಾದದ್ದು. ನಿಜವಾಗಿಯೂ ಒಳ್ಳೆಯ ರೀತಿಯ ಪ್ರಾಂತಾಭಿಮಾನವು ಯಾವಾಗಲೂ ಇದೆ ಮತ್ತು ಇನ್ನೂ ಇರಬೇಕಾಗಿದೆ. ಆದರೆ ನಮ್ಮ ಪ್ರಾಂತಾಭಿಮಾನವು ಸಂಕೋಚದ್ದಾಗಿ ಕೀಳು ನೆಲೆಯಲ್ಲಿರಬಾರದು. ಪ್ರಾಂತಾಭಿಮಾನವು ಇಡೀ ರಾಷ್ಟ್ರದ ಏಳಿಗೆಗೆ ಸಹಾಯಕಾರಿಯಾಗಿರಬೇಕು. ಮಹಾನದಿಯು ಉಪನದಿಗಳ ಸಂಗಮದಿಂದ ಶಕ್ತಿಪೂರ್ಣವಾಗುವಂತೆ, ಯೋಗ್ಯವಾದ ಪ್ರಾಂತಾಭಿಮಾನದಿಂದ ಇಡೀ ರಾಷ್ಟ್ರವು ಬೆಳೆದುಬರಬೇಕು. ಪ್ರಾಂತದಲ್ಲಿ ಆಗುವ ಪ್ರತಿಯೊಂದು ಕಾರ್ಯವೂ ಇಡೀ ರಾಷ್ಟ್ರವನ್ನೇ ಬೆಳಗಿಸಬೇಕು!

"ಕವೀಂದ್ರ ರವೀಂದ್ರನಾಥ ಠಾಗೋರರ ಅಮರ ಕೃತಿಗಳು ಬಂಗಾಳವನ್ನು ಎಂತು ಬೆಳಬೆಳಗಿಸಿವೆಯೋ, ಅಂತೆಯೇ ನಿಖಿಲಭಾರತಕ್ಕೇ ಕೀರ್ತಿ ತಂದಿವೆ. ದಾದಾಭಾಯಿ ನವರೋಜಿಯವರು ಪಾರ್ಸಿಗಳಿಗಾಗಿ, ಬೊಂಬಾಯಿಗಾಗಿ ಎಷ್ಟು ಸೇವೆಸಲ್ಲಿಸಿದ್ದಾರೋ, ಅಷ್ಟೇ ಇಡೀ ಭರತಭೂಮಿಗೇ ಸಲ್ಲಿಸಿದ್ದಾರೆ. ಹೀಗಿರುವಾಗ ನಮ್ಮಲ್ಲಿ ಪ್ರಾಂತಾಭಿಮಾನದಿಂದ ಅನ್ಯೋನ್ಯ ಮತ್ಸರಗಳುಂಟಾಗುವುದು ಒಳ್ಳೆಯದಲ್ಲ! ಪ್ರತಿಯೊಂದು ಪ್ರಾಂತವೂ ಬೆಳೆಯಬೇಕು. ಅದರೊಡನೆ ಇಡೀ ಭಾರತವೇ ಉದ್ಧಾರವಾಗಬೇಕು! ಹಿಂದೂದೇಶವನ್ನು ಇತರೆ ಪ್ರಾಂತಗಳ ಸಂಪರ್ಕವಿಲ್ಲದೆ, ಭಿನ್ನಭಿನ್ನವಾಗಿ ವಿಂಗಡಿಸುವಂತಹ ಧೋರಣೆಯು ನ್ಯಾಯವಲ್ಲ. ಹಿಂದೂದೇಶವು ಸ್ವತಂತ್ರರಾಷ್ಟ್ರವಾಗಿ, ವಿಶಾಲ ವಿಶ್ವದ ಏಳಿಗೆಗೆ ಸಹಾಯಮಾಡಬೇಕಾಗಿದೆ. ನಮ್ಮ ದೇಶಾಭಿಮಾನವು ಅನ್ಯರನ್ನು ದ್ವೇಷಿಸುವ ತಂದಾಗಿರಲೇ ಬಾರದು. ಇತರ ರಾಷ್ಟ್ರಗಳು, ಹಾಳಾಗಿ ನಾವು ಒಳ್ಳೆದಾಗಲು ಬಯಸಬಾರದು. ನಾವು ಹಿಂದೂದೇಶದ ನಾಗರಿಕರೆನ್ನುವುದಕ್ಕಿಂತಲೂ ನಾವು ಜಗತ್ತಿನ ನಾಗರಿಕರೆಂದ ಹೇಳಲೂ ತಯಾರಾಗಬೇಕು. ಆದರೆ ನಾವು ಸ್ವತಂತ್ರವಾದ ಹಿಂದೂದೇಶದ ನಾಗರಿಕರಾಗುವುದು ಹೇಗೆ? ದ ತಿಳಿಯದಿದ್ದರೆ ಅಂತಹ ಸಂದರ್ಭವು ನಮ್ಮ ಜೀವನದಲ್ಲಿ ಒದಗಲಾರದು. ಇಂತಹ ವಿಷಕಾರಿಯಾದ ಪ್ರಾಂತದ ದುರಭಿಮಾನವನ್ನು ನಾವು ನಮ್ಮಲ್ಲಿಂದ ಕಿತ್ತುಹಾಕದೆ, ಆ ಭಾಗ್ಯವು ನಮ್ಮನ್ನು ಸಮೀಪಿಸುವ ಹಾಗಿಲ್ಲ. ನಿಜವಾಗಿಯೂ ಯೋಗ್ಯರಾಷ್ಟ್ರೀಯ ಜೀವನವೆಂದು ವ್ಯಕ್ತಿಯಿಂದ ಮೊದಲಾಗಿ ಆರಂಭವಾಗಬೇಕು. ನಾನು ಸ್ವತಂತ್ರ ಮತ್ತು ಶಕ್ತಿವಂತನಾಗುವುದರಿಂದ ನನ್ನ ನೆರೆಕರೆಯವರೂ ಹಾಗೆಯೇ ಆಗಬೇಕೆಂಬ ಅಪೇಕ್ಷೆಯು ನನಗಿರಬೇಕು. ನಾವು ಹೀಗೆ ವ್ಯಕ್ತಿರೂಪದಿಂದಲೂ ಪ್ರಾಂತರೂಪದಿಂದಲೂ ನಮ್ಮ ಮಾತೃಭೂಮಿಯ ಸೇವೆಯನ್ನು ಸಲ್ಲಿಸುವುದರಿಂದ ಒಳ್ಳೆಯ ಫಲವನ್ನು ಪಡೆಯಬೇಕಾಗಿದೆ.'

ಉಪನದಿಗಳು ಮಹಾನದಿಯ ಪ್ರವಾಹವನ್ನು ಬಲಗೊಳಿಸಬೇಕು

ಪ್ರಾಂತಾಭಿಮಾನಿಗಳಿಗೆ ಮಹಾತ್ಮರ ಎಚ್ಚರಿಕೆ!

ಮದ್ಯಪಾನ ನಿಷೇಧದ ಕುರಿತು ಕಾಂಗ್ರೆಸಿನ ಕರ್ತವ್ಯ

ಕೇಂದ್ರಸರಕಾರವನ್ನು ಕಾಂಗ್ರೆಸು ಒತ್ತಾಯಪಡಿಸುವುದೇ?

ಅಹಮ್ಮದಾಬಾದಿನಲ್ಲಿ ಇತ್ತೀಚೆಗೆ ಕೂಡಿದ ಸಭೆಯಲ್ಲಿ ಭಾಷಣಮಾಡುತ್ತಾ ಸರ್ದಾರ ಪಟೇಲರು ಕಾಂಗ್ರೆಸಿನ ಪ್ರಾಮುಖ್ಯ ನಿರ್ಣಯವಾದ ಮದ್ಯಪಾನ ನಿಷೇಧದ ಕುರಿತ ಹೀಗೆಂದರು —

'ಬರುವ ವರ್ಷದಲ್ಲಿ ಕೇಂದ್ರ ಸರಕಾರದೊಡನೆ ಸೈನ್ಯದ ವೆಚ್ಚವನ್ನೋ ಅಥವಾ ಇನ್ನಿತರ ವೆಚ್ಚವನ್ನೋ ಕಡಿಮೆ ಮಾಡಿ, ಇಡೀ ರಾಷ್ಟ್ರದಲ್ಲಿಯೇ ಮದ್ಯಪಾನ ನಿಷೇಧವನ್ನು ಜಯಶಾಲಿಯಾಗಿ ಮಾಡಲು ಕಾಂಗ್ರೆಸು ಸರಕಾರವು ಖಂಡಿತವಾಗಿಯೂ ಸಾಧಿಸುವುದು. ಹೀಗೆ ಮಾಡಲು ಸಾಧ್ಯವಾಗದಿದ್ದರೆ ಕಾಂಗ್ರೆಸು ಅಧಿಕಾರದಲ್ಲಿ ಇರುವುದೂ ಸಾಧ್ಯವಿಲ್ಲ. ನಿಜವಾಗಿ ನಮ್ಮ ಹೋರಾಟವು ಜಯಶಾಲಿಯಾಗಬೇಕಾದರೆ, ನಮಗೆ ನೀತಿಯ ಹಿನ್ನೆಲೆ ಬೇಕು. ಸೈನ್ಯಕ್ಕೆ ಹಣವು ಬೇಕೆಂದು ನಮ್ಮಗೆ ಬ್ರಿಟಿಷ್ ಸರಕಾರಕ್ಕೆ ಹೇಳುವುದೂ, ರಾಷ್ಟ್ರದ ಮುಖಂಡರನ್ನು ಬಂಧಿಸಿದಂತೆ ವಿಧಿಸುವುದೂ, ಅಥವಾ ಮದ್ಯಪಾನ ನಿಷೇಧ ಕಾರ್ಯಕ್ರಮವು ತಪ್ಪಾಯಿತೆನ್ನುವುದೂ ಬುದ್ಧಿವಂತಿಕೆಯಲ್ಲ! ಹೀಗೆ ಮಾಡುವುದರಿಂದ ನಾವು ಜನತೆಯನ್ನು ಹೋರಾಟಕ್ಕೆ ಸಿದ್ಧಮಾಡಿದಂತಾಗುವುದಿಲ್ಲ.

'ಕಾಂಗ್ರೆಸು ಸರಕಾರವು ವರ್ಕಿಂಗ್ ಕಮಿಟಿಯ ಪ್ರಾಮುಖ್ಯ ನಿರ್ಣಯದಂತೆ ಎಷ್ಟೇ ನಷ್ಟಕಷ್ಟಗಳು ಬಂದರೂ ಮದ್ಯಪಾನ ನಿಷೇಧ ಕಾರ್ಯಕ್ರಮವನ್ನು ಬಿಡಲಾಗುವುದಿಲ್ಲ. ಯಾರು ಇದರಿಂದ ಹೊಸ ತೆರಿಗೆಯನ್ನು ತೆರಬೇಕಾಗಿ ಬಂದಿದೆಯೋ ಅಂತವರು, ಇದುವರೆಗೆ ನಮ್ಮ ಮಕ್ಕಳು ಮದ್ಯದ ಆದಾಯದಿಂದ ವಿದ್ಯೆ ಪಡೆಯುತ್ತಿದ್ದರೆಂದು ತಿಳಿದಿರಬೇಕು! ಮದ್ಯಪಾನ ನಿಷೇಧ ನಿರ್ಣಯವು ಕಾಂಗ್ರೆಸು ಕಾರ್ಯಕಾರೀಮಂಡಳಿಯಲ್ಲಿ ಮಂಜೂರಾದದ್ದು ಆರಂಭದ ದಿನಗಳ ಗಾಢ ಚಿಂತೆಯಾಗಿ, ಸೋಶಿಯಲಿಸ್ಟ್ ಮುಖಂಡರ ಒಪ್ಪಿಗೆಯಿಂದ. ಮದ್ಯಪಾನ ನಿಷೇಧ ಕಾರ್ಯದ ಬಡಜನರು ಈಗ ಮದ್ಯಸಮುದ್ರದಲ್ಲಿರುವಾಗ, ಬಡಗಳಿಗೆ ಕೊಡುವ ತೆರಿಗೆ ವಸೂಲಿಮಾಡುವುದು ನ್ಯಾಯವಲ್ಲ. ಮದ್ಯಪಾನ ನಿಷೇಧ ಚಳವಳಿಯ ಯಶಸ್ಸಿನಿಂದ ನೈತಿಕ, ದೈಹಿಕ, ಆರ್ಥಿಕ ಸ್ಥಿತಿಗಳಿಂದ ಇಡೀ ರಾಷ್ಟ್ರದಲ್ಲಿ ಹೊಸ ಚೈತನ್ಯ ಬರದಿದ್ದರೆ ಕಾಂಗ್ರೆಸಿನ ಕಾರ್ಯಕ್ರಮವನ್ನು ಕಾಂಗ್ರೆಸು ಅಧಿಕಾರದಲ್ಲಿದ್ದಾಗ ಜಾರಿಗೆ ತರದೆ ಇನ್ನು ಯಾವಾಗ ಜಾರಿಗೆ ತರುವುದು?

ಕಾಂಗ್ರೆಸಿನ ಸ್ವತಂತ್ರ್ಯ ಹೋರಾಟವು ಇಂತಹ ಹಿಂಸಾಮಯ ಸ್ಥಿತಿಯಿಂದ ಪೀಡಿತವಾಗಿದೆ. ಕಾಂಗ್ರೆಸ್ ಸೈನಿಕರು ಮೊದಲು ತಮ್ಮ ಹೃದಯದ ದೌರ್ಬಲ್ಯವನ್ನು ಕಿತ್ತೆಸೆಯಬೇಕು. ತಾಳ್ಮೆಗೆಡುವುದರಿಂದ ಸ್ವರಾಜ್ಯ ಸಿಗದು. ಯಾರು ತಮ್ಮ ನಂಬಿಕೆಯ ನಿರ್ಣಯವನ್ನು ಅನುಸರಿಸುವುದಿಲ್ಲವೋ ಅವರನ್ನು ನಂಬಲು ಸಾಧ್ಯವಿಲ್ಲ. ದಂಡಿಯ ಉಪ್ಪಿನ ಸತ್ಯಾಗ್ರಹದಿಂದ ನನ್ನ ಹಾಗಿದ್ದ ಮುದುಕನೂ ಧೈರ್ಯಗೆಡದಿದ್ದಾನೆ. ಇಂದಿನ ಯುವಕರು ಅಂತಹ ಕಾರ್ಯಗಳನ್ನು ಮಾಡಬೇಕು, ಯಾಕೆಂದರೆ ಯೌವನ ಬಹಳ ಕ್ಷಣಭಂಗುರವಾದದ್ದು. ಅವರೆ ಅಂತಹ ಯೌವನದಲ್ಲಿ ಮಾಡಿದ ಸಾಹಸಗಳನ್ನು ವಾರ್ಧಕ್ಯದಲ್ಲಿ ನೆನಪು ಮಾಡಿಕೊಂಡಿರುವುದು ಬಹಳ ಸುಖಕರವಾದದ್ದು.'

Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE

ESTED 1906

CANARA BANK, LIMITED.

ಶ್ರೇಷ್ಠ ತರದ

ದೃಷ್ಟಿಚಕ್ರಗಳಿಗೆ



ರಬ್ಬರು ಮೊಹರುಗಳಿಗೆ

ನಾಯಕ್ ಸ್ಟೋರ್ಸ್,

ರಥಬೀದಿ, ಮಂಗಳೂರು.

ಗಾಂಧಿಜಿಯವರ ಸಂದೇಶಗಳು

ಭಾರತೀಯ ಜೀವನ ರಹಸ್ಯವು ಗಾಂಧೀವಾದದಲ್ಲಿ ಅಡಕವಾಗಿದೆ

ಮದ್ಯಪಾನ ನಿಷೇಧವು ಕಾಂಗ್ರೆಸಿನ ಮಹತ್ವದ ನಿರ್ಣಯ

ಸತ್ಯಾಗ್ರಹವನ್ನು ಹೂಡಲು ಅಹಿಂಸೆಯ ಶಿಕ್ಷಣ ಬೇಕು

"ಹಿಂದೂ-ಮುಸ್ಲಿಮರ ಐಕ್ಯವಿಲ್ಲದೆ ಹಿಂದೂದೇಶವು ಸ್ವಾತಂತ್ರ್ಯವನ್ನು ಪಡೆಯಲಾರದು" ಹೀಗೆಂದು ಅಬೋಟಾಬಾದಿನ ಪ್ರಚಂಡ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ ಮಹಾತ್ಮಾ ಗಾಂಧಿಜಿಯವರು ಹೇಳಿದರು. ಅವರು ಮಾತನಾಡುತ್ತಾ ಹಲವರು ತನ್ನ ಯತ್ನದಿಂದ ಹಿಂದೂ ಮುಸ್ಲಿಮ್ ಐಕ್ಯವು ಸಾಧಿಸೀತೆಂದು ಹೇಳುತ್ತಾರೆ. ಆದರೆ ನನ್ನೊಡನೆ ಸಮಿಪಿಸಿ ಕೆಲಸ ಮಾಡಿದವರಿಗೆ, ಅವನ್ನ ನನ್ನೊಬ್ಬನ ಯತ್ನಕ್ಕೆ ಮಿಗಿಲಾದ ಕಾರ್ಯವೆಂಬುದು ತಿಳಿಯದಿರದು ಎಂದರು

"ಇದೀ ನನ್ನ ಜೀವನದಲ್ಲಿ ಬಹುದೊಡ್ಡ ಉದ್ದೇಶವೆಂದರೆ ಐಕ್ಯಸಾಧನೆಯು. ಅದಿಲ್ಲವಾದರೆ ಸಂಪೂರ್ಣ ಸ್ವಾತಂತ್ರ್ಯವು ಸಾಧ್ಯವೇ ಇಲ್ಲ ಅನೇಕ ವರ್ಷಗಳಿಂದ ನಾನು ಈ ಸಮಸ್ಯೆಯನ್ನು ಬಗೆಹರಿಸಲು ಯತ್ನಿಸುತ್ತಿದ್ದೇನೆ. ಆದರೆ ಇದುವರೆಗಿನ ನನ್ನ ಎಲ್ಲಾ ಕಾರ್ಯಗಳೂ ನಿಷ್ಫಲವಾಗಿವೆ ದೇವರು ಎಷ್ಟಿಯಾದರೂ ಮನಸ್ಸು ಮಾಡಿದರೆ, ಅವನ ಹೊರತು ಈ ಬಹಳ ದಿನಗಳ ಕಾರ್ಯವನ್ನು ಪೂರೈಸಿಕೊಳ್ಳುವುದು ಸಾಧ್ಯವಾಗಿದೆ ಶಾಸನಭಂಗ ಚಳವಳವಾದರೂ ಯಶಸ್ವಿಯಾಗಿ ಆಗಬೇಕಾದರೆ ಹಿಂದೂದೇಶದ ಮೂವತ್ತು ಕೋಟಿ ಮಾನವರೂ ಇದರಲ್ಲಿ ಐಕ್ಯರಾಗಿ ಕೆಲಸ ಮಾಡಬೇಕು ಅನ್ಯೋನ್ಯ ಪ್ರತಿಯೊಬ್ಬರೂ ವಿಷಯಗಳನ್ನು ವಿಶಾಲ ಹೃದಯ ದಿಂದ ತಿಳಿದುಕೊಳ್ಳಬೇಕು

"ಗಡಿನಾಡಿನಲ್ಲಿ ಇಷ್ಟು ದಿನಗಳ ಮಾತಕತೆಗಳಿಂದ, ಇಲ್ಲಿಯೂ ಇಂತಹ ಐಕ್ಯವಿಲ್ಲದ ತೊಂದರೆ ಬಂದಿದೆಯೆಂದು ತಿಳಿದು ನಾನು ವಿಷಾದಗೊಳ್ಳುತ್ತೇನೆ ಖಾನ್ ಅಬ್ದುಲ್ ಗಫಾರ್ ಖಾನರು ಅದ್ಭುತ ಕಾರ್ಯ ಮಾಡಿದ ಮಹನೀಯರು. ಜನರು ಅವರ ಮಾತನ್ನು ಶಿರಸಾವಹಿಸಿ ನಡೆಸಬೇಕು ಅವರು ಹೀಗೆ ಮಾಡಿದರೆ ಇತರ ಪ್ರಾಂತಗಳಿಗೂ ಒಂದು ಮಾದರಿ ಸಾರವನ್ನು ಕಲಿಸಿದಂತಾಗುತ್ತದೆ ಗಡಿನಾಡಿನಲ್ಲಿ ನಿಜವಾಗಿಯೂ ದಾರಿದ್ರ್ಯವು ಹರಡಿದೆ ಆ ಭಯಂಕರ ರೋಗವನ್ನು ಕಡೆಗಟ್ಟಲು ಎಲ್ಲರೂ ಏಕಮನಸ್ಸಿನಿಂದ ಹೋರಾಡಬೇಕಾಗಿದೆ" ಹೀಗೆಂದು ಗಾಂಧಿಜಿಯವರೆಂದರು

ಮದ್ರಾಸಿನ ಯುವಕ ಸಂಘವೊಂದರಲ್ಲಿ ಭಾಷಣಮಾಡುತ್ತಾ ಡಾ। ಪಟ್ಟಾಭಿಯವರು ಗಾಂಧಿವಾದದ ಕುರಿತು ಹೀಗೆಂದು ಹೇಳಿರುತ್ತಾರೆ.—

"ಗಾಂಧಿವಾದದ ಕುರಿತು ಒಬ್ಬನು ಚೆನ್ನಾಗಿ ತಿಳಿಯಬೇಕಾದರೆ, ಹಿಂದೂದೇಶಕ್ಕೆ ಬ್ರಿಟಿಷರು ಆಕ್ರಮಣ ಮಾಡಿದಮೇಲೆ ಆದ ವಿಷಮ ಪರಿಸ್ಥಿತಿಯ ಅರಿವು ಅವನಿಗಿರಬೇಕು. ಗಾಂಧಿವಾದದಲ್ಲಿ ಭಾರತೀಯ ಜೀವನದ ಮೂಲಭೂತ ತತ್ವಗಳು ಅಡಕವಾಗಿವೆ ಬ್ರಿಟಿಷರು ಬಂದಮೇಲೆ ಭಾರತೀಯರ ಹಲವು ಸಂಸ್ಕೃತಿಗಳು ನಾಶವಾಗತೊಡಗಿದುವು. ಭಾರತೀಯರ ಜೀವನದಲ್ಲಿ ಸರಳತೆಯು ಮಾಯವಾಯಿತು. ಗಾಂಧೀವಾದವು ಈ ಪರಿಸ್ಥಿತಿಯನ್ನು ಬದಲಾಯಿಸಲು ಬಂದ ಮಹಾತತ್ವವಾಗಿದೆ

ನಿಜವಾಗಿಯೂ ಎಲ್ಲರನ್ನೂ ಸಮಾನವಾಗಿ ಬಂಧಿಸಿದ ಒಂದು ದೊಡ್ಡ ಪಾರತಂತ್ರ್ಯದ ಪಾಶವೆಂದರೆ ನಾವೆಲ್ಲರೂ ಧರಿಸಿದ್ದ ಪರದೇಶೀ ವಸ್ತ್ರವಾಗಿದೆ ಬ್ರಿಟಿಷರು ಬರುವುದಕ್ಕಿಂತ ಮೊದಲು ಹಿಂದೂದೇಶವು ನಯವಾದ ವಸ್ತ್ರಗಳಿಗಾಗಿ ಬಹಳ ಪ್ರಖ್ಯಾತವಾಗಿತ್ತು ಇಂತಹ ಉದ್ಯೋಗವು ಸಂಪೂರ್ಣನಿರ್ನಾಮವೇ ಆಗಿರುತ್ತದೆ ಆದ್ದರಿಂದಲೇ ಗಾಂಧಿಜಿಯವರು, ತಾಯ್ನಾಡಿನ ಕುರಿತು ಅಭಿಮಾನವುಳ್ಳವರೆಲ್ಲರೂ ಸ್ವದೇಶೀ ವಸ್ತ್ರಗಳನ್ನು ಉಡಬೇಕೆಂದ ಹೇಳಿದರು ನಿಜವಾಗಿಯೂ ಹಿಂದೂದೇಶವಿಂದು ಸ್ವರಾಜ್ಯವನ್ನು ಕಳೆಕೊಂಡದ್ದು, ಇಲ್ಲಿ ಕೈಗಾರಿಕೆಯ ವಸ್ತ್ರದ ಅವನತಿಯಿಂದ ನಮಗೆ ಬೇಕಾದ ಬಟ್ಟೆಗಳನ್ನು ನಾವು ನಮ್ಮ ದೇಶದಲ್ಲಿ ತಯಾರಿಸಬಲ್ಲೆವಾದರೆ, ಖಂಡಿತವಾಗಿಯೂ ನಾವು ಸಂಪೂರ್ಣ ಸ್ವರಾಜ್ಯವನ್ನ ಪಡೆದಂತೆಯೇ ಆಯಿತು ಖಾದಿಯಲ್ಲಿ ಸಂಪೂರ್ಣ ವಿಶ್ವಾಸವಿರುವುದೇ ಗಾಂಧೀತತ್ವದ ಪ್ರಧಾನವಾದೊಂದು ವಿಷಯವಾಗಿದೆ ಗಾಂಧಿತತ್ವವು ಭಾರತದ ರಾಜಕೀಯ ಅಧಿಕಾರವನ್ನು ಪಡೆಯಲು ಬಯಸುತ್ತದೆ ಒಬ್ಬನಮೇಲೆ ಗಾಂಧಿವಾದವು, ಇಡೀ ರಾಷ್ಟ್ರದ ಸಂಸ್ಕೃತಿಯ ಪುನರುದ್ಧಾರಕ್ಕಾಗಿ ಇರುತ್ತದೆ ಗಾಂಧಿವಾದದ ತತ್ವವು ಆತ್ಮಶಕ್ತಿಯನ್ನು ಹೆಚ್ಚಿಸುವುದು, ಪರಾವಲಂಬನವನ್ನು ಸಮೂಲತಃ ಕಡಿದು ಹಾಕುವುದೇ ಇತರ ಪಾಶ್ಚಾತ್ಯ ದೇಶಗಳೂ ಇದನ್ನು ಅನುಸರಿಸಿದಲ್ಲಿ ಖಂಡಿತವಾಗಿಯೂ ಇಂದು ಯೂರೋಪಿನಲ್ಲಿ ಆಗುವ ಭಯಂಕರ ಅನ್ಯಾಯವು ನಿಂತುಹೋಗುವುದು ಗಾಂಧಿವಾದವು ಇಡೀ ಜಗತ್ತಿನಲ್ಲಿ ಶಾಂತಿಸ್ಥಾಪನೆಯ ತತ್ವವನ್ನು ಹೇಳುತ್ತದೆ ಅಹಿಂಸೆಯೇ ಅದರ ಮೂಲ ಗಾಂಧೀವಾದವು ಇಂದು ಅವನತಿಯನ್ನು ಹೊಂದಿದೆಯೆನ್ನುವವರಿಗೆ ನಿಜವಾದ ವಿಷಯದ ಅರಿವಿಲ್ಲ

ಡಾ। ಪಟ್ಟಾಭಿಯವರು ಕಾಂಗ್ರೆಸು ಭವನದಲ್ಲಿ ಇಂದಿನ ಕಾಂಗ್ರೆಸಿನ ಮತಭೇದಗಳ ಕುರಿತು ಮಾತನಾಡುತ್ತಾ ಮಹಾತ್ಮಾಜಿಯವರ ಪ್ರಭಾವದ ಕುರಿತು ಹೀಗೆಂದರು

"ಸಂಪೂರ್ಣ ಹಿಂಸೆಯನ್ನು ಬಿಟ್ಟು, ಶಾಂತರೀತಿಯಿಂದ ಕಾರ್ಯವನ್ನು ಆರಂಭಿಸಿದರೆ ನಿಮ್ಮ ಗುರಿಯನ್ನು ಮುಟ್ಟಬಹುದೆಂದು ನಮಗೆ ತಿಳಿಸಿದ ಪ್ರಭಾವಶಾಲಿಯಾದ ವ್ಯಕ್ತಿಯೆಂದರೆ ಮಹಾತ್ಮಾ ಗಾಂಧಿಯವರು. ಉಪ್ಪಿನ ಕರವನ್ನು ಮುರಿಯುವಂತಹ ಕೆಲಸದಿಂದ ಸ್ವರಾಜ್ಯವನ್ನು ಸಂಪಾದಿಸುವ ಗಾಂಧಿಜಿಯವರ, ಅಂದಿನ ಹೇಳಿಕೆಗೆ ಜನರು ನಗಾಡಿದ್ದರು. ಪ್ರಪಂಚಕ್ಕೆ ಹಿಂದೂದೇಶದ ನೈತಿಕ ಅಧಿಕಾರವನ್ನು ನಡೆಸುವ ಪ್ರಧಾನ ಶಕ್ತಿಯು ಮಹಾತ್ಮಾಜಿಯವರೆಂದು ಅಂದು ಆಂಗ್ಲರು ತಿಳಿದರು. ಮಹಾತ್ಮಾಜಿಯವರು, ಸತ್ಯಾಗ್ರಹವನ್ನು ನಿಲ್ಲಿಸಿದರು. ತಾಳ್ಮೆಯಿಲ್ಲದ ಕೆಲಮಂದಿಯು ಅವರನ್ನು ಅದಕ್ಕಾಗಿ ದೂರುವವರಿದ್ದಾರೆ ಆದರೆ ತನ್ನ ಸತ್ಯಾಗ್ರಹದ ಸರಳವಾದ ದಾರಿಯಲ್ಲಿ ಜನತೆಯು ತಪ್ಪದೆ ನಡೆಯಲು ಚೆನ್ನಾಗಿ ಶಿಕ್ಷಣ ಪಡೆದಿಲ್ಲವೆಂದು ತಿಳಿದುದರಿಂದ, ಅವರು ಅಂದು ಹಾಗೆ ಮಾಡಬೇಕಾಯಿತು. ಇಂದು ಇದನ್ನು ಮರೆತು ಯುವಕರು ತಾಳ್ಮೆಗೆಟ್ಟಿದ್ದಾರೆ ಯುವಕರು ಕಣ್ಣುಗಾಣಿ ಸಪ್ಪೆಯಾಗದಿರಲಿ, ಪ್ರಾಗತಿಪಥದಲ್ಲಿ, ಮುಂದುವರಿಯುವ ಉತ್ಸಾಹವು ಅವರಿಗೆ ಇರಬೇಕು ಆದರೆ ಇಂತಹ ಉತ್ಸಾಹದಲ್ಲಿ ಅವರು ತಮ್ಮ ಹಿರಿಯರ ಕಾರ್ಯಗಳಿಗೆ ಸಲ್ಲತಕ್ಕ ಗೌರವವನ್ನು ಕೊಡಲು ಮರೆಯಬಾರದು"

ಮದ್ಯಪಾನ ನಿಷೇಧದ ಕುರಿತು ಕಾಂಗ್ರೆಸು ಕಾರ್ಯಕಾರೀ ಮಂಡಳಿಯು ನಿರ್ಣಯ ಮಾಡಿದಾಗ ಗಾಂಧಿಜಿಯವರು ಹೀಗೆಂದರು –

"ಕಾಂಗ್ರೆಸಿನ ಇತಿಹಾಸದಲ್ಲಿ ಇದು ಮಹತ್ವದ ನಿರ್ಣಯವಾಗಿದೆ ಮದ್ಯಪಾನ ನಿಷೇಧವಾಗಬೇಕೆಂಬ ಕೂಗು ನಮ್ಮಲ್ಲಿ ಬಹಳ ಸಮಯದಿಂದ ಎದ್ದಿದೆ ಆರಂಭದಿಂದ, ಅದು ಕಾಂಗ್ರೆಸಿನ ಪ್ರಧಾನ ರಚನಾತ್ಮಕ ಕಾರ್ಯಗಳಲ್ಲಿ ಒಂದಾಗಿ ಸೇರಿಸಲ್ಪಟ್ಟಿತ್ತು ಆದ್ದರಿಂದ ಕಾಂಗ್ರೆಸ ಇಂದು ಅಧಿಕಾರಕ್ಕೆ ಬಂದ ಮೇಲೆ ಮದ್ಯಪಾನ ನಿಷೇಧದ ಕಾರ್ಯಕ್ರಮವನ್ನು ಇಡೀ ಹಿಂದೂದೇಶದಲ್ಲಿ ಜಾರಿಮಾಡದಿರಲು ಸಾಧ್ಯವಿಲ್ಲ. ಅಧಿಕಾರವನ್ನು ಸ್ವೀಕರಿಸಿದಂದಿನಿಂದ ಮಂತ್ರಿಗಳು ಕೋಟ್ಯಂತರ ರೂಪಾಯಿಗಳ ಆದಾಯವನ್ನು ಇದರಿಂದ ಕಳೆದುಕೊಳ್ಳಬೇಕಾಗಿದೆ ಯಾವ ಪ್ರಾಂತಗಳಲ್ಲಿ ಕಾಂಗ್ರೆಸಿನ ಅಧಿಕಾರವಿಲ್ಲವೋ, ಆ ಪ್ರಾಂತಗಳ ಮಂತ್ರಿಗಳೂ ಕೂಡಾ ಈ ಕಾಂಗ್ರೆಸು ಮಂತ್ರಿಮಂಡಲದ ಧೋರಣೆಯನ್ನು ಅನುಕರಿಸುವುದು ಯೋಗ್ಯವಾಗಿದೆ

"ಹಲವರು ಮದ್ಯಪಾನ ನಿಷೇಧವು ಸಾಧ್ಯವಿಲ್ಲವೆಂದೂ, ಆರ್ಥಿಕ ಸಂಬಂಧವು ಸರಿಬೀಳದೆಂದೂ ಹೇಳುತ್ತಾರೆ ಮತ್ತೆ ಕೆಲವರು ಕುಡುಕರು ಹೇಗಾದರೂ ಕುಡಿಯದೆ ಇರಲಿಕ್ಕಿಲ್ಲವೆಂದೂ ಹೇಳುವವರಿದ್ದಾರೆ ಆದರೆ ನಮಗೆ ಅಂತಹ ಹೆದರಿಕೆಯಿಲ್ಲ ಜನತೆಯು ಈ ಗೌರವಪೂರ್ಣವಾದ ಸುಧಾರಣೆಯನ್ನು ಒಪ್ಪಿಕೊಳ್ಳಲು ಖಂಡಿತವಾಗಿಯೂ ಹಿಂದರಿಯಲಾರದೆಂದು ನಾನು ತಿಳಿಯುತ್ತೇನೆ ಇಂತಹ ಪ್ರಬಲವಾದ ಚಳವಳದ ಯಶಸ್ವಿತೆಗೆ ನಮ್ಮ ಹಿಂದೀಯರ ಯುರೋಪೀಯನರದೇ ಮಾತ್ರವಲ್ಲ ವಿಶಾಲ ವಿಶ್ವದ ಮಹಾಮೇಧಾವಿಗಳೆಲ್ಲರ ಆಶೀರ್ವಾದವನ್ನು ಪಡೆಯಬಹುದಾಗಿದೆ

"ನಿಜವಾಗಿಯೂ ಹಿಂದೂದೇಶದ ನೈತಿಕ ಸುಧಾರಣೆಯು ಮದ್ಯಪಾನ ನಿಷೇಧದಿಂದ ಈಗ ಈ ಸಂದರ್ಭದಲ್ಲಿ ಮೊದಲಾಗಿ ಇಡೀ ದೇಶದಲ್ಲಿ ಮಾಡತಕ್ಕ ಕೆಲಸವು ಮದ್ಯದಂಗಡಿಗಳನ್ನು ಮುಚ್ಚುವುದು

"ಸರ್ಕಾರದ ಲಾಭವು ಕಡಿಮೆಯಾಗುವುದೆಂಬುದಕ್ಕೆ ನನ್ನ ಸೂಚನೆಯಿಷ್ಟೆ ವಿದ್ಯಾಭ್ಯಾಸವನ್ನು ಸ್ವಂತ ಸಂಪಾದನೆಯುಳ್ಳದ್ದನ್ನಾಗಿ ಮಾಡುವುದರಿಂದ ಸರಕಾರಕ್ಕೆ ವ್ಯಯವು ಕಡಿಮೆಯಾಗುತ್ತದೆ ಹೊಸ ತೆರಿಗೆಗಳನ್ನು ಹಾಕಬೇಕು ಹೆಗಲನ್ನು ಬಲಿಸುವ ತೆರಿಗೆ ಮರಣತೆರಿಗೆ ಮೊದಲಾದ ರೀತಿಯಿಂದ ಸರಕಾರವು ಹೊಸ ಆದಾಯವನ್ನು ಪಡೆಯಬೇಕಾಗಿದೆ ಅನ್ಯಾಯವನ್ನು ಸಹಿಸದ ಖಂಡಿತವಾಗಿಯೂ ಜನರು ಇಂತಹ ತೆರಿಗೆಗಳನ್ನು ಹಾಕಿದಲ್ಲಿ ಯಾವ ಪ್ರತಿಭಟನೆಯಿಲ್ಲದೆ ತೆರಲು ಸಿದ್ಧರಾದಾರು ಸೈನ್ಯಖಾತೆಯ ಖರ್ಚು ಬಹಳವಾಗಿ ಆಗುತ್ತದೆ ಪ್ರಾಂತಿಕ ಸರಕಾರಗಳು ಆ ಖರ್ಚನ್ನು ಕಡಿಮೆಮಾಡಲು ಒತ್ತಾಯ ಮಾಡಬಹುದು ಪ್ರಾಂತದ ಶಾಂತರಕ್ಷಣೆಯ ಆವಶ್ಯಕತೆಗೆ ಸೈನ್ಯದ ಸಹಾಯವು ಆಗತ್ಯವಿಲ್ಲ"

ಸರದಾರ ಭವನ Sirdar Bhavan

ಫೆಲಿಕ್ಸ್ ಪೈ ಬಜಾರ್–ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ ಎಲ್ಲಾ ಮೇಲ್ಮೈಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ.

Propriter— **H R Rao,**
Bangalore Guit Emporuim Madras

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ. ಜಮ್ಮಿ ವೆಂಕಟರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿ. ಲಿವರ್ ಮತ್ತು ಸ್ಪ್ಲೀನ್ ಸ್ಪೆಷಿಯಲಿಸ್ಟು, ಮೈಲಾಪುರ, ಮದ್ರಾಸು.

ಯೂರೋಪದಲ್ಲಿ ಗುಪ್ತ ಪೋಲೀಸರ ಮಹಾಜಾಲ

ಸರ್ವಾಧಿಕಾರಿಗಳ ಆಟವು ಇವರಿಂದಲೇ ನಡೆಯುವುದು

ಸಂದೇಹದ ಮೇಲೆ ಕೈದು—ಅನ್ಯಾಯವಾಗಿ ಶಿಕ್ಷೆ!

ನಾಗರಿಕರ ದುರಂತ ಅವಸ್ಥೆ

ಯೂರೋಪಿನ ಪ್ರಾಯಶಃ ಬಹು ಭಾಗವು ಈಗ ಸರ್ವಾಧಿಕಾರಿಗಳ ಶಾಸನ ಸೂತ್ರಗಳಿಂದ ಬಂಧಿತವಾಗಿದೆ. ರಷ್ಯ, ಜರ್ಮನಿ, ಇಟಲಿ, ಟರ್ಕಿ—ಈ ಎಲ್ಲಾ ದೇಶಗಳಲ್ಲಿ ಸರ್ವಾಧಿಕಾರಿಗಳ ಸರ್ವತಂತ್ರ ಸ್ವತಂತ್ರ ನಿರಂಕುಶ ಅಧಿಕಾರವು ನಡೆಯುತ್ತಾ ಇದೆ. ಬಾಲ್ಟಿಕ ರಾಷ್ಟ್ರಗಳು, ಬಾಲ್ಕನ್ ರಾಷ್ಟ್ರಗಳು ಇತ್ಯಾದಿ ಒಂದಲ್ಲ ಒಂದು ವಿಧದಿಂದ ಈ ಸರ್ವಾಧಿಕಾರಿಗಳ ಅಂಕೆಗೆ ಒಳಪಟ್ಟಿರುತ್ತವೆ. ಸರ್ವಾಧಿಕಾರಿಗಳ ನಿರಂಕುಶ ಅಧಿಕಾರವು ಪಶುಬಲದ ಮೂಲಕ ನಡೆಯಬೇಕಾದ್ದು—ಅವರಿಗೆ ಹಗಲೂ ರಾತ್ರಿ ಶತ್ರುಗಳ ಆಕ್ರಮಣ ಮತ್ತು ಪ್ರಾಣಘಾತದ ಭಯವು ಇದ್ದಿರುತ್ತದೆ. ಆದ್ದರಿಂದ ಪ್ರಜಾಪ್ರಭುತ್ವದಲ್ಲಿರುವದಕ್ಕಿಂತಲೂ ಸರ್ವಾಧಿಕಾರಿಗಳ ರಾಜ್ಯದಲ್ಲಿ ಅವರ ಪ್ರಾಣರಕ್ಷಣೆಗೂ, ಶಾಸನ ಪದ್ಧತಿಯ ರಕ್ಷಣೆಗೂ ಗುಪ್ತ ಪೋಲೀಸರ ದೊಡ್ಡ ಪಡೆಯು ಅಗತ್ಯವಿರುತ್ತದೆ.

ಗೂಢಚಾರರ ಸಾಮ್ರಾಜ್ಯ

ಜರ್ಮನಿಯಲ್ಲಿ ೨೭೦೦೦ ಗುಪ್ತ ಪೋಲೀಸರ ದೊಡ್ಡ ಜಾಲವು ಹರಡಿರುತ್ತದೆಂದು ಹೇಳಲಾಗುತ್ತದೆ. ರಷ್ಯದಲ್ಲಿ ೩೦೦,೦೦೦ ಗುಪ್ತ ಪೋಲೀಸರು ಇರುತ್ತಾರೆ. ಇಟಲಿಯಲ್ಲಿರುವ ಗುಪ್ತ ಪೋಲೀಸರ ಸಂಖ್ಯೆ ಎಷ್ಟು ದೊಡ್ಡದೆಂಬುದು ತಿಳಿದುಬಂದಿರುವುದಿಲ್ಲ. ಆದರೂ ಅದು ಇತರ ದೇಶಗಳಲ್ಲಿರುವುದಕ್ಕಿಂತ ಕಡಿಮೆಯಾಗಿರುವುದಿಲ್ಲ. ಮುಸಲೋನಿಯ ನಿರೀಕ್ಷಣೆಯಲ್ಲಿ ಅಲ್ಲಿ ಗುಪ್ತ ಪೋಲೀಸರ ಒಂದು ದೊಡ್ಡ ಸಂಸ್ಥೆಗಳು ದಿನದ ಇಪ್ಪತ್ತನಾಲ್ಕು ತಾಸು ಕೆಲಸ ಮಾಡುತ್ತ ಇರುತ್ತದೆ. ಈ ಸಂಸ್ಥೆಗಳು ದೇಶ ವಿದೇಶಗಳಲ್ಲಿ ನಡೆಯುತ್ತಲಿರುವ ಅನೇಕ ರಾಜಕೀಯ ರಹಸ್ಯಗಳನ್ನು ತಿಳಿಯುವುದು ಮಾತ್ರವಲ್ಲದೆ, ಈ ಸಂಸ್ಥೆಗಳು ಪರಸ್ಪರ ಒಂದರೊಂದರ ಮೇಲೂ ವಕ್ರದೃಷ್ಟಿಯನ್ನು ಇಟ್ಟಿರುತ್ತವೆ. ಈ ಎಲ್ಲಾ ಗುಪ್ತ ಪೋಲೀಸರು ತಮ್ಮ ಕೆಲಸ ಕಾರ್ಯಗಳಲ್ಲಿ ಒಳ್ಳೇ ಪ್ರವೀಣರೂ ಕುಶಲರೂ ದಕ್ಷರೂ ಆಗಿರುತ್ತಾರೆ.

ಜರ್ಮನಿ, ಇಟಲಿ, ಲಿಥುವೇನಿಯಾ, ಪೋಲಾಂಡ, ರಷ್ಯ, ಯುಗೊಸ್ಲೇವಿಯ, ಟರ್ಕಿ, ಬಲ್ಗೇರಿಯಗಳಲ್ಲಿ ಗುಪ್ತ ಪೋಲೀಸರ ಸಾಮ್ರಾಜ್ಯವೇ ಇದೆ. ಈ ದೇಶಗಳಲ್ಲಿ ಎಲ್ಲೆಲ್ಲೂ ಅವರ ಪ್ರಭಾವವು ಪ್ರಕಟವಾಗಿಯೂ ಗುಪ್ತರೂಪದಲ್ಲಿಯೂ ಕಂಡುಬರುತ್ತದೆ. ರಾಜ್ಯಾಧಿಕಾರಿಗಳು ಮಾತ್ರವಲ್ಲ, ಹೊರದೇಶಗಳ ಬೇಹಿನವರು ಮಾತ್ರವಲ್ಲ. ಆ ರಾಜ್ಯಗಳ ಸರ್ವಸಾಮಾನ್ಯ ಪ್ರಜೆಗಳು ಕೂಡ ಈ ಗೂಢಚಾರರ ಉಪಟಳವನ್ನು ಸಹಿಸಲಾರದವರಾಗಿ ಇರುತ್ತಾರೆ. ಎಲ್ಲಿಯೋ ದೂರದ ಒಂದು ಮೂಲೆಯ ಹಳ್ಳಿಯಲ್ಲಿರುವ ಒಬ್ಬ ನಿರಪರಾಧಿ ಒಕ್ಕಲಿಗನ ಮನೆಯನ್ನು ಈ ಗೂಢಚಾರರು ಮಧ್ಯರಾತ್ರಿಯ ಸಮಯಕ್ಕೆ ಅನಿರೀಕ್ಷಿತವಾಗಿ ಬಂದು ಹೊಕ್ಕುವುದೂ, ಮನೆಯಲ್ಲಿರುವ ಒಕ್ಕಲಿಗನ ಪರಿವಾರವನ್ನು ಕೈದುಮಾಡಿ ಕೊಂಡುಹೋಗುವುದೂ, ನ್ಯಾಯವಿಚಾರಣೆ ಯಾವುದೂ ಇಲ್ಲದೆ, ಕೇವಲ ಸಂದೇಹದ ಮೇಲೆಯೇ ಅವರನ್ನು ಹಿಡಿದು ಶಿಕ್ಷಿಸುವುದೂ, ಪ್ರಾಣದಂಡನೆಯನ್ನು ಕೊಡುವುದೂ, ಆ ರಾಜ್ಯಗಳಲ್ಲಿ ನಡೆಯುತ್ತಿರುವ ನಿತ್ಯ ಘಟನೆಗಳಾಗಿವೆ. 'ನಿರಪರಾಧಿಗಳಾದ ಅವರಿಗೇಕೆ ಶಿಕ್ಷೆ?' ಎಂದು ಕೇಳಿದ್ದಾದರೂ ಕೂಡ ಸರ್ವಾಧಿಕಾರಿಗಳು ಕೊಡುವ ಒಂದೇ ಒಂದು ಉತ್ತರವೆಂದರೆ— 'ರಾಜ್ಯದ ಭದ್ರತೆಗೆ ಅವರ ನೀತಿ ನಡತೆಗಳು ಭಯಾನಕವಾಗಿದ್ದವು' ಎಂಬುದೇ ಆಗಿದೆ!

ಎಲ್ಲೆಲ್ಲೂ ಗೂಢಚಾರರು

ಯುರೋಪಿನ ಈ ರಾಜ್ಯಗಳಲ್ಲಿ ಎಲ್ಲಿ ಗೂಢಚಾರರು ಇದ್ದಾರೆ, ಎಲ್ಲಿ ಇರುವುದಿಲ್ಲ ಎಂದು ಹೇಳುವುದು ಕಠಿನ ಸಾಧ್ಯವಾಗಿದೆ. ಹೊಟೇಲು ಮನೆಗಳ ನೌಕರ ಚಾಕರರೊಳಗೂ ಕೆಲವು ಮಂದಿ ಗೂಢಚಾರರು ಇರುವುದು ಸಂಭವನೀಯವಾಗಿದೆ. ನೆರೆಹೊರೆಯವರೂ ಅಲ್ಲ, ನಿಮ್ಮ ಸನ್ಮಿತ್ರರು ಎಂದು ಅನ್ನಿಸಿಕೊಳ್ಳುವವರು ಕೂಡ ಗೂಢಚಾರರಾಗಿರಬಹುದು. ತಂದೆಯು ಮಗನ ಮೇಲೆ, ಮಗನು ತಂದೆಯ ಮೇಲೆ, ಹೆಂಡತಿ ಗಂಡನ ಮೇಲೆ, ಗಂಡ ಹೆಂಡತಿ ಮೇಲೆ ಗೂಢಚಾರ ದೃಷ್ಟಿಯನ್ನು ಇಡುತ್ತಿರುವರೆಂದು ಗೊತ್ತಾದರೆ ಅದು ಯುರೋಪದ ಈ ರಾಜ್ಯಗಳಲ್ಲಿ ಆಶ್ಚರ್ಯ ಸಂಗತಿಯಾಗುವುದಿಲ್ಲ. ಅಪರಾಧಗಳಾಗಿ ಶಿಕ್ಷೆಗೆ ಗುರಿಯಾದವರನ್ನು ಕೂಡ ಗೂಢಚಾರ ವೃತ್ತಿಗೆ ತೊಡಗಿಸುವುದುಂಟು. ಅಂತೂ ಗುಪ್ತರಹಸ್ಯಗಳನ್ನು ತಿಳಿಯಲಿಕ್ಕೆ ಸರ್ವಾಧಿಕಾರಿಗಳು ಯಾರನ್ನು ಗೂಢಚಾರವೃತ್ತಿಗೆ ಇಟ್ಟುಕೊಳ್ಳುತ್ತಾರೆ, ಯಾರನ್ನು ಇಟ್ಟುಕೊಳ್ಳುವುದಿಲ್ಲ ಎಂಬುದಕ್ಕೆ ಯಾವ ನಿಯಮವೂ ಇರುವುದಿಲ್ಲ.

ಹಿಟ್ಲರ ಮಿತ್ರರ ಕೊಲೆಯ ಅನಂತರ

ಹಿಟ್ಲರನು ಅಧಿಕಾರಕ್ಕೆ ಬಂದ ಕೆಲವೇ ತಿಂಗಳುಗಳ ಅನಂತರ, ಅವನನ್ನು ಪದಚ್ಯುತನನ್ನಾಗಿ ಮಾಡಲಿಕ್ಕೆ ಪ್ರಯತ್ನಿಸಿದರೆಂದು ಹಿಟ್ಲರನು ತನ್ನ ಅನೇಕ ಮಿತ್ರರ ಕೊಲೆಮಾಡಿದನಷ್ಟೆ! ಈ ಕೊಲೆಗೆ ಹಿಟ್ಲರನ ಗೂಢಚಾರರು ಅವನಿಗೆ ಕಳುಹಿಸಿಕೊಟ್ಟ ವರದಿಗಳೇ ಕಾರಣಗಳಾಗಿದ್ದವು. ಆ ಸಮಯದ ಒಂದು ಘಟನೆಯನ್ನು ಮಿ. ಪೀಟರ್ ಫ್ಲೊರೆನ್ಸ ಎಂಬವರು ಹೀಗೆ ಉಲ್ಲೇಖಿಸಿದ್ದಾರೆ. ಆ ಕೊಲೆಯ ಕಾಲಕ್ಕೆ ಮಿ. ಪೀಟರ ಫ್ಲೊರೆನ್ಸರು ಮ್ಯೂನಿಚ್‌ನ ಒಂದು ಹೊಟೇಲಿನಲ್ಲಿ ಉಳಕೊಂಡಿದ್ದರು. ಅವರು ಹೇಳಿರುವುದೇನೆಂದರೆ:—

'ಜರ್ಮನ ಪ್ರಚಾರ ವಿಭಾಗದ ಒಬ್ಬ ಉದ್ಯೋಗಸ್ಥರಾದ ನನ್ನ ಜರ್ಮನ ಮಿತ್ರನ ಒಟ್ಟಿಗೆ ಕೂತು ನಾನು ಊಟಮಾಡುತ್ತಾ ಇದ್ದೆ. ನನ್ನ ಕೋಣೆಯ ಇನ್ನೊಂದು ಮೂಲೆಯಲ್ಲಿ ಇನ್ನೊಬ್ಬ ಪ್ರಾಯಸ್ಥನು ಕೂತು ಊಟಮಾಡುತ್ತಿದ್ದನು. ಅಷ್ಟರಲ್ಲಿ ಇಬ್ಬರು ಅಪರಿಚಿತರು ಮೆಲ್ಲಗೆ ಕೋಣೆಯನ್ನು ನುಸುಳಿ ಆ ಪ್ರಾಯಸ್ಥನ ಹಿಂದೆ ಬಂದು ಕೂತರು. ಅವರಿಬ್ಬರ ಕಣ್ಣುಗಳು ಆ ಪ್ರಾಯಸ್ಥನ ಮೇಲೆಯೇ ನಟ್ಟಿದ್ದುವು. ಅವರು ಸಶಂಕಿತ ದೃಷ್ಟಿಯಿಂದ ಅವನನ್ನು ಕಾಣುತ್ತ ಇದ್ದರು. ಯುರೋಪದ ಅನೇಕ ರಾಜಧಾನಿಗಳಲ್ಲಿ ಅನೇಕಬಾರಿ ನಾನು ಇಂಥ ದೃಶ್ಯಗಳನ್ನು ಕಂಡಿದ್ದೆ, ಆದರೂ ಕುತೂಹಲಪಟ್ಟು ನಾನು ನನ್ನ ಮಿತ್ರನನ್ನು ಕೇಳಿದೆ. ಆ ಪ್ರಾಯಸ್ಥನ ವಿಮಾನ ಸಂಚಾಲಕನಾಗಿದ್ದ. ವಿಮಾನ ಸಂಚಾಲನವನ್ನು ಕಲಿಸಲಿಕ್ಕೆ ಅವನು ರಷ್ಯಕ್ಕೆ ಹೋಗಿದ್ದ, ಅಲ್ಲಿ ಬೊಲ್ಶೆವಿಸಮ್ ತತ್ವಗಳಿಂದ ಪ್ರಭಾವಿತನಾಗಿ ಸ್ವದೇಶಕ್ಕೆ ಮರಳಿದ. ಈಗ ಅವನು ಆ ಜರ್ಮನಿಯಲ್ಲಿ ಆ ತತ್ವ ಪ್ರಚಾರ ಮಾಡಲಿಕ್ಕೆ ಇಚ್ಛಿಸುತ್ತಾನೆ. ಒಂದಲ್ಲ ಒಂದು ದಿನ ಅವನ ಮೇಲೆ ಆಪತ್ತು ಬಂದೇ ಬರುವದು ಎಂದು ನನ್ನ ಮಿತ್ರನು ನನಗೆ ಹೇಳಿದ.

ಇಬ್ಬರೂ ಗೂಢಚಾರರಾಗಿದ್ದರು

'ಆ ಆಪತ್ತಿನ ದಿನವು ಅಂದೇ ಬಂದಹಾಗೆ ನನಗೆ ಸಂದೇಹವಾಯಿತು. ಅವನ ಹಿಂದೆ ಬಂದು ಕೂತವರು ಹಿಟ್ಲರನ ಗೂಢಚಾರರಾಗಿದ್ದರೆಂಬುದು ಅವರ ಮಾತುನಡತೆಗಳಿಂದ ನನಗೆ ಸ್ಪಷ್ಟವಾಗಿತ್ತು. ಅವರು ಆ ಪ್ರಾಯಸ್ಥನನ್ನು ಮಾತನಾಡಿಸುತ್ತ ಕರಕೊಂಡು ಎಲ್ಲಿಗೋ ಹೋಗಿಬಿಟ್ಟರು. ಆ ಮೇಲೆ ನನ್ನ ಇನ್ನೊಬ್ಬ ಮಿತ್ರನೊಂದಿಗೆ ಟೆಲಿಫೋನು ಮಾಡಿ ವಿಚಾರಿಸಿದಾಗ ಅವನು ಒಂದು ಎತ್ತರ ಮನೆಯ ಕಿಟಿಕಿಯಿಂದ ಕೆಳಗೆ ಹಾರಿ ಪ್ರಾಣಘಾತ ಮಾಡಿಕೊಂಡನೆಂದು ಮರುದಿನ ಆ ಮಿತ್ರನು ನನಗೆ ತಿಳಿಸಿದ! ಗೂಢಚಾರರ ಉಪಟಳವನ್ನು ಸಹಿಸಲಾರದೆಯೆ ಆ ಬಡಪಾಯಿಯು ಆತ್ಮಘಾತ ಮಾಡಿಕೊಂಡಿತ್ತು! ಇಲ್ಲವಾದರೆ ಅವನನ್ನು ಯಾವುದೊಂದು ಕನ್ಸೆಂಟ್ರೇಶನ ಕೇಂಪಿಗೆ ಒಯ್ದುಬಿಡುವದು ನಿಶ್ಚಯವಾಗಿತ್ತು. ಕೇಂಪಿನ ನರಕಯಾತನೆಗಳನ್ನು ಅನುಭವಿಸುವುದಕ್ಕಿಂತ ಆತ್ಮಘಾತ ಮಾಡಿಕೊಳ್ಳುವುದು ಸುಖಪ್ರದವೂ ಸುಲಭವೂ ಆಗಿತ್ತು. ಜರ್ಮನ ಸರಕಾರವು ಕೂಡ ಇಂಥ ಘಾತಗಳಿಗೆ ವಿಶೇಷ ಲಕ್ಷ್ಯವನ್ನು ಕೊಡುತ್ತಿದ್ದಿಲ್ಲ.' ರಾಜ್ಯದ ಭದ್ರತೆಗೆ ಇಂಥ ಹತ್ಯೆಗಳಾದರೆ ಒಳ್ಳೆಯದೆಂದೇ ಅದರ ಅಭಿಪ್ರಾಯವಾಗಿದೆ?

ಜರ್ಮನಿಯಲ್ಲಿ ಮಾತ್ರವಲ್ಲ, ಇತರ ಸರ್ವಾಧಿಕಾರಿಗಳಲ್ಲಿ ಕೂಡ ಇಂಥ ಘಟನೆಗಳು ದಿನಂಪ್ರತಿ ನಡೆಯುತ್ತಲೇ ಇರುತ್ತವೆ. ಗೂಢಚಾರರ ವಕ್ರದೃಷ್ಟಿಗೆ ನಿರಪರಾಧಿಗಳಾದವರು ಕೂಡ ಬಲಿಯಾಗುವದು ದೊಡ್ಡ ಮಾತಲ್ಲ. ಖಾಸಗಿ ವೈರತ್ವದಿಂದ ಒಬ್ಬರನ್ನೊಬ್ಬರು ಗೂಢಚಾರರ ರಕ್ತದಾನಕ್ಕೆ ಬಲಿಕೊಡುವದೂ ಇದೆ. ಗುಪ್ತ ಪೋಲೀಸರು ಯೂರೋಪಿನ ಸರ್ವಾಧಿಕಾರಿ ರಾಜ್ಯಗಳಲ್ಲಿ ಸರ್ವ ಶಕ್ತಿವಂತರಾಗಿ ಇರುತ್ತಾರೆ.

ಸೃಷ್ಟಿಸ್ಥಿತಿ ಲಯಕರ್ತರು

ಯೂರೋಪಿನ ಸೃಷ್ಟಿಸ್ಥಿತಿ ಲಯಕರ್ತರು ಯೂರೋಪಿನ ಈ ಗೂಢಚಾರರೇ ಆಗಿದ್ದಾರೆ. ಯೂರೋಪಿನ ರಾಜಕಾರಣಗಳಲ್ಲಿ ಈ ಗೂಢಚಾರರೇ ಹೊಸ ಹೊಸ ಸಮಸ್ಯೆಗಳನ್ನು ಸೃಷ್ಟಿಸುವರು, ಅವರೇ ಅವುಗಳನ್ನು ಪಾಲಿಸುವರು, ಮತ್ತೆ ಅವರೇ ಅವುಗಳನ್ನು ಬಿಡಿಸಿ ನಾಶಮಾಡುವರು. ಸರ್ವಾಧಿಕಾರಿಗಳ ಅಸ್ತಿತ್ವವೂ ಅಧಿಕಾರವೂ ಸುರಕ್ಷಿತವಾಗಿರುವದು ಕೇವಲ ಈ ಗೂಢಚಾರರ ನೆರವಿನಿಂದಲೇ! ಈ ಗೂಢಚಾರರು ಸಮಯ ಸಮಯಕ್ಕೆ ರಹಸ್ಯಗಳನ್ನು ತಿಳಿದು ತಮ್ಮ ಸರಕಾರಗಳಿಗೆ ತಿಳಿಸುತ್ತಿದ್ದಿಲ್ಲವಾದರೆ ಹಿಟ್ಲರ ಮುಸಲೋನಿಯರ ಅಧಃಪತನ ಮತ್ತು ಸರ್ವನಾಶವು ಎಂದೋ ಆಗಿ ಹೋಗುತ್ತಿತ್ತು.

ಮನೋಹರ ಗ್ರಂಥಮಾಲಾ

ಧಾರವಾಡ.

ಸ್ವತಂತ್ರ ಕಥೆ, ಕಾದಂಬರಿ, ನಾಟಕ, ಹರಟೆ ಮೊದಲಾದ ಮನಮೆಚ್ಚಿಸುವ ಸರಸ ವಾಙ್ಮಯದ ಸುಗ್ಗಿ! ಅಖಿಲ ಕರ್ನಾಟಕದಲ್ಲಿ ಹೆಸರುಪಡೆದ ಬರಹಗಾರರ ಕೈವಾಡ ಮನದ ಹಸಿವೆಯನ್ನು ಹಿಂಗಿಸಿಕೊಳ್ಳಿ!

ಒಂದು ವರ್ಷದಲ್ಲಿ ೧೫೦೦ ಪುಟಗಳುಳ್ಳ ಆರು ಸರಸ ಗ್ರಂಥಗಳು!

ವಾರ್ಷಿಕ ಚಂದಾ ರೂ. ೩-೮-೦

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ತೋರಿಸಲಾಗುವುದು

ವ್ಯವಸ್ಥಾಪಕ,

ಮನೋಹರ ಗ್ರಂಥಮಾಲಾ

ಧಾರವಾಡ.

ಹಿಂದೂ ಅನಾಥಾಶ್ರಮ

ಶಾಂತಿನಿಕೇತನ : : ಕೂರಾಡಿ

ನಿರ್ಗತಿಕ ಮಕ್ಕಳ ನೀತಿ ಬೋಧೆಗೆ ನಿರುಪಮ ಸೌಕರ್ಯ, ಶಾಂತವಾದ ವಾತಾವರಣದ ಶಾಂತಿನಿಕೇತನ ಬಾಲಕರಿಗೆ ಸುಲಭದಲ್ಲಿ ವಿದ್ಯೆಕಲಿಸಲು ಸಕಲರೂ

ಈಗ ತಾನೇ ತೆರೆಯಲ್ಪಟ್ಟ ಅನಾಥಾಶ್ರಮಕ್ಕೆ ಅಕ್ಕರೆಯ ಮಕ್ಕಳನ್ನು ಕಳುಹಿಸಿರಿ.

ಅನಾಥರು ಅನುಭವಕ್ಕೆ ಬರೆಯಿರಿ—

ಎಲ್ಲಾ ಜಾತಿಯವರಿಗೂ ಪ್ರವೇಶವಿದೆ.

ಮೆನೇಜರ್, ಶಾಂತಿನಿಕೇತನ, ಕೂರಾಡಿ, (ದ. ಕ.)

ಮದ್ರಾಸು ಮಂತ್ರಿಮಂಡಳದ ರಚನಾತ್ಮಕ ಚಟುವಟಿಕೆಗಳು

ಮಾನ್ಯ ಗಿರಿಯವರು
(ವಿದ್ಯಾವಂತರ ನಿರುದ್ಯೋಗ ನಿವಾರಣೆಯ ಕುರಿತು)

ವಿದ್ಯಾವಂತರಾದ ನಿರುದ್ಯೋಗೀ ಯುವಕರಿಗೆ ಕೆಲಸಕೊಡುವ ವಿಷಯದಲ್ಲಿ ಸರಕಾರವು ಅತ್ಯಂತ ವಿಚಾರದಲ್ಲಿದೆ. ಅನೇಕ ವಿಧದ ಸೂಚನೆಗಳು ಸರಕಾರದ ಮುಂದಿವೆ. ಅವರಿಗೆ, ಸಹಕಾರ ಪದ್ಧತಿಯ [illegible]ಗಳಲ್ಲಿ ಸಣ್ಣ ಸಣ್ಣ ಕಾಲೊನಿಗಳನ್ನು ಕಟ್ಟಿ ಅಲ್ಲಿ ಕೃಷಿಯ ಕೆಲಸವನ್ನು ಮಾಡುವಂತೆ, ಮತ್ತು ಅವರವರ ಉದ್ಯೋಗಗಳಲ್ಲಿ ಸಾಕಷ್ಟು ಸಾಮರ್ಥ್ಯವನ್ನು ಅವರು ತೋರಿಸಿ ತಮ್ಮ ಜೀವನವನ್ನು ನಡೆಸಲು ಅಣಿಗೊಳ್ಳುವಂತೆ ಸರಕಾರದವರು ಒಂದು ಯೋಜನೆಯನ್ನು ನಿಶ್ಚಯಿಸಿರುತ್ತಾರೆ ಹೀಗೆ ಮಾಡುವುದರಿಂದ ಅವರು ಹೇಗೆ ಉದ್ಯೋಗದಲ್ಲಿ ನಿರತರಾಗಿ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುತ್ತಾರೆಂದು ಸರಕಾರವು ತಿಳಿಯಬಹುದಾಗಿದೆ ಈ ವಿಷಯದಲ್ಲಿ ಸರಕಾರವು ಸ್ವಲ್ಪ ಅನುಭವವನ್ನು ಹೊಂದಿದೆ. ಈ ಕಾಲೋನಿಗಳಲ್ಲಿ ವಿದ್ಯಾವಂತ ಯುವಕರಿಗೆ ಉದ್ಯೋಗಮಾಡಲು ಬಿಟ್ಟ ವಿಷಯದಲ್ಲಿ ಏನೂ ಪ್ರಯೋಜನ ಕಾಣಲಿಲ್ಲ. ಕಾಲೋನಿಗಳ ಯೋಜನೆಯಿಂದ ಕೆಲಸಮಾಡಿದವರು, ಕೆಲವು ಯುವಕರನ್ನು ಕೆಲಸಮಾಡಲು ಬರಹೇಳಿ, ಮೊದಲು ಬಂದಾಗ, ಊಟ, ಉಡಿಗೆ, ತಿಂಡಿ, ಕಾಫಿಗಳನ್ನು ಕೊಟ್ಟು ಸತ್ಕಾರಮಾಡಿ ಅವರನ್ನು ನ್ಯಾಯರೀತಿಯಲ್ಲಿ ದುಡಿಸಿದರೂ, ಅವರು ಕೆಲವೇ ದಿವಸಗಳಲ್ಲಿ ಅಲ್ಲಿಂದ ತಿಳಿಸದೇ ಜಾರಿಬಿಡುತ್ತಾರೆ ಕಡೆಗೆ ಒಬ್ಬರೋ ಇಬ್ಬರೋ ಉಳಿಯುತ್ತಾರೆ ಆದರೂ ನನಗೆ ಭರವಸೆಯಿದೆ ಈ ಕಾಲೋನಿಗಳಲ್ಲಿ ದುಡಿತವಮಾಡಿಸುವ ಯೋಜನೆಯು ಎಲ್ಲಾ ವಿಧದಿಂದಲೂ ನಡೆಯಬೇಕೆಂದು ನಾನು ಅಭಿಪ್ರಾಯಪಡುತ್ತೇನೆ ನಿರುದ್ಯೋಗೀ ವಿದ್ಯಾವಂತ ಯುವಕರನ್ನು ಅಲ್ಲಿಗೆ ಬರಮಾಡಿ, ಸಾಮಾನ್ಯ ಕೃಷಿಕರಂತೆ ದುಡಿಸುವುದು ಮಾತ್ರವಲ್ಲ. ಬೇರೆ ಉದ್ಯೋಗಗಳನ್ನೂ ಮಾಡಲೂ ಸಹಕರಿಸಿ, ಅವರು ಒಳ್ಳೆಯ ಓದ್ಯೋಗಿಕ ಸುಧಾರಣೆ ಮಾಡುವಂತೆ ಕಲ್ಪಿಸಬೇಕು' ಹೀಗೆಂದು ಕೊಯಂಬುತ್ತೂರು ಕೃಷಿ ಆಫೀಸರರ ಸಮ್ಮೇಳನದಲ್ಲಿ ಮಾನ್ಯ ಗಿರಿಯವರು ವಿವರಿಸಿದರು

ಮಾನ್ಯ ರೆಡ್ಡಿಯವರು
(ಪಂಚಾಯಿತು ಕ್ರಮ ಕುರಿತು)

'ಪಂಚಾಯಿತು ಬೋರ್ಡುಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡಬೇಕು ಪ್ರತಿಯೊಂದು ಗ್ರಾಮವೂ, ಆಯಾಯ ಗ್ರಾಮದ ಆಡಳಿತೆಯನ್ನು ಮಾಡುವುದನ್ನು ಅರಿತುಕೊಳ್ಳಬೇಕಾದದು ಅವಶ್ಯ ಮತ್ತು ನ್ಯಾಯವಾಗಿದೆ ಆದರೆ ನಮ್ಮ ದೇಶದ ಪರಿಸ್ಥಿತಿಯು ಹೀಗೆ ಬಹಳ ಮಂದಗತಿಯಿಂದ ಕಾರ್ಯವಾಗುವಂತೆ ಮಾಡಿದೆ ಪ್ರತಿಯೊಂದು ಗ್ರಾಮಕ್ಕೂ ಅದರ ಅವಸ್ಥೆ, ಸಂಕಷ್ಟಗಳು ತುಂಬಾ ಇವೆ, ಹಾಗಾಗಿ ಅವುಗಳನ್ನು ಪರಿಹರಿಸಬೇಕಾದರೆ ಸ್ವಾರ್ಥತ್ಯಾಗಿಗಳಾದ ಕೆಲಸಗಾರರನ್ನೇ ಪಂಚಾಯ್ತುಗಳಿಗೆ ಆರಿಸಬೇಕು ಹಿಂದಿನ ಗ್ರಾಮ ಆಡಳಿತೆಯ ಪದ್ಧತಿಯನ್ನು ಇನ್ನೊಮ್ಮೆ ಜಾರಿಗೆ ತಂದು, ನಮ್ಮ ದೇಶದ (ಪ್ರತಿಯೊಂದು ಹಳ್ಳಿಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ಅವಶ್ಯವಿದೆ ಹಣವು ಈ ವಿಷಯದಲ್ಲಿ ದೊಡ್ಡ ವಿಷಯವಲ್ಲ, ನಮಗೆ ಬೇಕಾದದ್ದು ನಿಜವಾಗಿಯೂ ಸ್ವಾರ್ಥತ್ಯಾಗ ಮಾಡಲು ಸಿದ್ಧರಾದ ಕೆಲಸಗಾರರು ಸಾರ್ವಜನಿಕ ಸೇವೆ ಮಾಡಬೇಕೆಂದು ಉತ್ಸಾಹಿತರಾದ ಪುಣ್ಯಾತ್ಮರು ಮುಂದೆ ಬರಬೇಕು. ಕಾಂಗ್ರೆಸು ಮಂತ್ರಿಮಂಡಳವು ಮಾಡುವ ಚಟುವಟಿಕೆಗಳಿಂದ ರಾಷ್ಟ್ರದ ಜನತೆಯಲ್ಲಿ ಅಂತಹ ಮನೋಭಾವನೆಯು ಖಂಡಿತವಾಗಿ ಬಂದೀತು ' ಹೀಗೆಂದು ಮಾನ್ಯ ರೆಡ್ಡಿಯವರು ಕಾಸರಗೋಡು ಪಂಚಾಯತ ಮಾನಪತ್ರಕ್ಕೆ ಉತ್ತರವಿತ್ತಾಗ ಅಂದರು.

ಮಾನ್ಯ ಡಾ|| ರಾಜನ್
(ಡಾಕ್ಟರರಿಗೆ ಉಪದೇಶ)

"ವೈದ್ಯಕೀಯ ಜೀವನವೆಂಬುದು ನಿಜವಾಗಿಯೂ ಘನವಾದದ್ದು. ಆದ್ದರಿಂದ ಪ್ರತಿಯೊಬ್ಬ ಡಾಕ್ಟರರೂ ತಮ್ಮ ವೃತ್ತಿಯ ಗೌರವವನ್ನು ಉಳಿಸಿಕೊಳ್ಳಲು ಯತ್ನಿಸಬೇಕು ರೋಗವೆಂಬುದು ಪ್ರಕೃತಿಗೆ ವಿರುದ್ಧವಾಗಿ ಜೀವಿಸುವ ಮನುಷ್ಯನಿಗೆ ಒಂದು ಶಿಕ್ಷೆ. ಇಂದಿನ ಹಿಂದೂದೇಶದ ಬಡತನವು ಅಂತಹ ಸ್ಥಿತಿಯನ್ನು ಹೆಚ್ಚಿಸಿದೆ. ಹಳ್ಳಿಯ ಜನರ ರೋಗಸುಧಾರಣೆಯಾಗಲು ಡಾಕ್ಟರರು ಅವರಿಗೆ ಸಹಾಯ ಮಾಡಬೇಕು ರೋಗವನ್ನು ಸಂಪೂರ್ಣ ನಿಲ್ಲಿಸಬೇಕು ಮತ್ತು ಅದನ್ನು ಕ್ರಮಪ್ರಕಾರ ನಿರೀಕ್ಷಿಸುತ್ತಿರಬೇಕು ಡಾಕ್ಟರರು ವೈದ್ಯಶಾಸ್ತ್ರದ ಅಭಿವೃದ್ಧಿಯ ವಿಷಯದಲ್ಲಿ ಹೆಚ್ಚು ಆಸಕ್ತರಾಗಿರಬೇಕು ರೋಗಿ ಮತ್ತು ಡಾಕ್ಟರರೊಳಗೆ ಅನ್ಯೋನ್ಯ ವಿಶ್ವಾಸವಿದ್ದರೆ ರೋಗವು ಸರಿಯಾಗಿ ಗುಣಪಡಿಸಬಹುದಾಗಿದೆ ಮರ್ಯಾದೆಯಿಂದ ಮತ್ತು ಹೃತ್ಪೂರ್ವಕದಿಂದ ಕೆಲಸಮಾಡುವ ಡಾಕ್ಟರರಿಂದ ನಿಜವಾಗಿಯೂ ಲೋಕವು ಉಪಕಾರ ಹೊಂದೀತು '' ಹೀಗೆಂದು ಡಾ. ರಾಜನರವರು ಸೇಲಮಿನ ವೈದ್ಯ ಸಂಘದ ಆಶ್ರಯದಲ್ಲಿ ಭಾಷಣವಿತ್ತರು

ಮಾನ್ಯ ಡಾ. ಸುಬ್ಬರಾಯನ್
(ಕಾಂಗ್ರೆಸ್ ಸರಕಾರದ ಕಾರ್ಯದ ಕುರಿತು)

"ಇಂದು ಎಂಟು ಪ್ರಾಂತಗಳು ಕಾಂಗ್ರೆಸ್ ಅಧಿಕಾರದಲ್ಲಿದೆ, ಆದರೆ ಕೇಂದ್ರ ಸರಕಾರವು ವಿದೇಶೀಯರ ಕೈವಶವಿರುವವರೆಗೆ ನಮಗೆ ಸ್ವಾತಂತ್ರ್ಯವಿಲ್ಲ ಹಲವೊಮ್ಮೆ ಕೇಂದ್ರಸರಕಾರದಲ್ಲಿರುವ ಕಾಂಗ್ರೆಸ್ ಪಕ್ಷದ ಸದಸ್ಯರು ಇಲ್ಲಿ ಸದಸ್ಯರಾಗಿ ನಿಂತುಕೊಳ್ಳುವುದು ಪ್ರಯೋಜನವುಂಟೋ ಇಲ್ಲವೋ ಎಂದೂ ಶಂಕಿಸುತ್ತಿದ್ದಾರೆ. ಅವರು ಅಲ್ಲಿ ನಮ್ಮ ರಾಷ್ಟ್ರದ ಕೇಳಿಕೆಯನ್ನು ಬ್ರಿಟಿಷರ ಮುಂದಿಡುತ್ತಾರೆ ದಿಲ್ಲಿಯಲ್ಲಿ ಸಾರ್ವಜನಿಕ ನಿಧಿಯು ವ್ಯರ್ಥವಾಗಿ ಹಾಳಾಗುತ್ತದೆ ನಿಜವಾಗಿಯೂ ಇದಕ್ಕೆಲ್ಲಾ ಒಂದೇ ಪರಿಹಾರೋಪಾಯವೆಂದರೆ ಗಾಂಧಿಜಿಯವರ ಧುರೀಣತೆಯಿಂದ ನಾವು ನಮ್ಮ ಸ್ವಾತಂತ್ರ್ಯ ಚಳವಳವನ್ನು ನಡೆಸುವುದು ಕಾಂಗ್ರೆಸು ಇಂದು ಅವರ ಉಚ್ಚಧುರೀಣತೆಯಿಂದ ರಾಷ್ಟ್ರದ ಈ ಘನವಾದ ಉದ್ದೇಶಕ್ಕಾಗಿ ಹೋರಾಡುತ್ತಿದೆ ಹೀಗಿರುವಾಗ, ಕಾಂಗ್ರೆಸಿನೊಳಗೆ ಜಗಳಾಡದೆ, ಕಾಂಗ್ರೆಸಿನ ಧ್ವಜದಡಿಯಲ್ಲಿ ಎಲ್ಲರೂ ಒಂದಾಗಬೇಕು'' ಹೀಗೆಂದು ಮಾನ್ಯ ಮಂತ್ರಿ ಡಾ ಸುಬ್ಬರಾಯನರು ಪಾಲ್ಘಾಟು ಟೌನ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಭಾಷಣವಿತ್ತಾಗ ಹೇಳಿದರು.

ಪ್ರಧಾನ ಮಂತ್ರಿ ರಾಜಾಜಿಯವರು
(ಚರಿತ್ರೆಯ ಮಹತ್ವದ ಕುರಿತು)

"ಚರಿತ್ರೆಯ ಅಭ್ಯಾಸದಿಂದ ನಮಗೆ ಬೇರೆ ಬೇರೆ ಸಂದರ್ಭಗಳಲ್ಲಿ ಜನರು ಹೇಗೆ ಹೇಗೆ ವರ್ತಿಸಿದರು ಎಂದು ತಿಳಿಯುತ್ತದೆ, ಅದರಿಂದ ನಮ್ಮ ಜೀವನದಲ್ಲಿಯೂ ಒಂದು ಗುಣವನ್ನು ನಾವು ಕಲಿತುಕೊಳ್ಳಬಹುದಾಗಿದೆ ನನ್ನ ಕೈಯಲ್ಲಿ ಯಾವದಾದರೊಂದು ಪುಸ್ತಕವು ಬಂದಾಗ ನನಗೆ ಅದನ್ನು ಓದಿಮುಗಿಸಲು ಸಮಯ ಸಿಗುವುದಿಲ್ಲವಾದರೂ, ಹಲವು ವರ್ಷಗಳಿಂದ, ಹಿಂದಿಗಿಂತ ಇಂದು ವಿದ್ಯೆಯು ಬಹಳ ಅಭಿವೃದ್ಧಿಯಾಗಿದೆಯೆಂದು ತಿಳಿಯುತ್ತದೆ ವಿಜ್ಞಾನವಂತೂ ಬಹಳ ಪ್ರಗತಿಹೊಂದಿದೆ ಚರಿತ್ರೆಯನ್ನು ಕಲಿಸುವ ಪದ್ಧತಿಯಲ್ಲಿ ಚರಿತ್ರೆಯ ಅಭಿರುಚಿಯು ಹುಟ್ಟುವಂತೆ ಮಾಡಬೇಕು ಕೇವಲ ಘಟನೆಗಳು ನಡೆದ ದಿನಗಳನ್ನು ಕಲಿಯುವಂತೆ ಮಾಡುವುದು, ಅದನ್ನು ಬರೆದರೆ ತೇರ್ಗಡೆ ಮಾಡುವುದು ಇಂತಹ ಕ್ರಮದಿಂದ ಚರಿತ್ರೆಯ ಪ್ರಾಧಾನ್ಯತೆಯೇ ಹೋಗುತ್ತದೆ ಚರಿತ್ರೆಯನ್ನು ಬಹಳ ಆನಂದದಾಯಕ ರೀತಿಯಲ್ಲಿ ಕಲಿಸಬೇಕು. ಹಾಗೆ ಕಲಿಸಿದರೆ ಮಾತ್ರ ಚರಿತ್ರೆಯು ವಿಜ್ಞಾನದಷ್ಟೇ ಪ್ರಾಮುಖ್ಯವೂ ಆನಂದದಾಯಕವೂ ಆಗುವುದು'' ಹೀಗೆಂದು ಮದ್ರಾಸು ಮೆನ್ಸ್ ಟ್ರೈನಿಂಗ್ ಕಾಲೇಜಿನ ಚರಿತ್ರಾ ಸಂಘದ ಪ್ರಾರಂಭ ಭಾಷಣದಲ್ಲಿ ಹೇಳಿದರು

ಮಾನ್ಯ ಮುನಿಸ್ವಾಮಿ ಪಿಳ್ಳೆ
(ಕಾಂಗ್ರೆಸ್ ಸರಕಾರದ ಕಾರ್ಯಗಳ ಕುರಿತು)

"ಕಾಂಗ್ರೆಸು ಅಧಿಕಾರವನ್ನು ವಹಿಸಿಕೊಂಡ ಮೇಲೆ ಜನರಲ್ಲಿ ಜಾಗೃತಿಯುಂಟಾಗಿದೆ ಜನರು ನಿರ್ಭಯದಿಂದ ತಲೆಯೆತ್ತಿ ನಡೆಯುತ್ತಾರೆ ನಾವು ಪರತಂತ್ರರಾಜ್ಯದಲ್ಲಿ ಹುಟ್ಟಿದ್ದೇವೆ ಆದರೆ ನಮ್ಮ ಮಕ್ಕಳಾದರೂ ಸ್ವತಂತ್ರರಾಗಿ ಜೀವಿಸುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ ಅಧಿಕಾರವನ್ನು ಸ್ವೀಕರಿಸಿದ ಕಾಂಗ್ರೆಸಿನ ಕೆಲಸಗಾರರು ತಮ್ಮಲ್ಲಿರುವ ಕ್ರಾಂತಿ ವಿಚಾರಗಳನ್ನು ಬಿಟ್ಟುಬಿಟ್ಟಿದ್ದಾರೆಂಬ ಆರೋಪವಿದೆ. ಕಾಂಗ್ರೆಸಿನಲ್ಲಿ ಅಧಿಕಾರಬಂದನಂತರ ಈ ಪ್ರಾಂತದಲ್ಲಿ ರೈತರ ಸಾಲನಿವಾರಣೆಯ ಶಾಸನವನ್ನು ಮಾಡಿದರು ಅನೇಕ ಮಂದಿ ರೈತರು ಸಾಲದ ಹೊರೆಯಿಂದ ಕಂಗಾಲಾಗುವವರು ಇದರಿಂದ ಜೀವಗೊಂಡಿದ್ದಾರೆ. ನಿಜವಾಗಿಯೂ ಇದು ಕ್ರಾಂತಿಯಲ್ಲವೇ? ಮದ್ಯಪಾನದಿಂದ ಬಡಜನರು ಕಂಗಾಲಾಗುತ್ತಿದ್ದರು, ಅದನ್ನು ನಿಷೇಧಿಸಿದ್ದು ಕ್ರಾಂತಿಯಲ್ಲವೇ? ಮಧುರೆಯಲ್ಲಿ ಹರಿಜನರಿಗೆ ದೇವಾಲಯ ಪ್ರವೇಶವಾಯಿತು ಇವೆಲ್ಲಾ ಕ್ರಾಂತಿಯಲ್ಲದಿದ್ದರೆ ಇನ್ನೇನು ಕ್ರಾಂತಿಯೆಂಬುದು ನನಗೆ ಅರ್ಥವಾಗುವುದಿಲ್ಲ'' ಹೀಗೆಂದು ಮದ್ರಾಸಿನಲ್ಲಿ ಸಭೆಯೊಂದರಲ್ಲಿ ಹೇಳಿ ಮಾನ್ಯ ಮುನಿಸ್ವಾಮಿ ಪಿಳ್ಳೆಯವರು ಕಾಂಗ್ರೆಸು ಮಂತ್ರಿಮಂಡಲದೊಡನೆ ಸಹಕರಿಸುವಂತೆ ಕೇಳಿಕೊಂಡರು.

THE
Canara Banking Corporation Ltd.,
(INCORPORATED IN BRITISH INDIA)

THREE YEARS' CASH CERTIFICATES

bearing interest at 4%p. a
in denominations of

RS. 50/-,100/-,500/-,1,000/-, & 5,000/
are now issued at all our Branches.

For particulars call at or write to
any of our nearest Branches.

ಜಾಗರೂಕರಾಗಿರಿ!
ಮುಂಜಾನೆ ಸೇವಿಸಿರಿ!

ಕ್ರಮವಾಗಿ ಒಂದು ಗ್ಲಾಸು ಉಕ್ಕಿಬರುವ ಎಂಡ್ರೂಸ್ ಲವಣವನ್ನು ಸೇವಿಸಿದ್ದಲ್ಲಿ ಆರೋಗ್ಯದ ಮೊದಲಿನ ಸೂತ್ರವಾದ ನಿಮ್ಮ ಅಂತರೇಂದ್ರಿಯಗಳನ್ನು ಶುದ್ಧಗೊಳಿಸುವುದು

ANDREWS
LIVER SALT

ಎಂಡ್ರೂಸ್ ಲವಣವು ಈಗ ಮಿತವ್ಯಯವಾದ ಡಬ್ಬಿಗಳಲ್ಲಿ ದೊರಕುತ್ತದೆ (ದೊಡ್ಡ ಟಿನ್ನು 1 4-0 ಚಿಕ್ಕ ಟಿನ್ನು 0-11-0) ಮೊದಲಿನ ಬಾಟ್ಲಿಗಳನ್ನು ಪಡಕೊಳ್ಳುವುದರಿಂದಲೂ ಲಾಭದಾಯಕವಾದದ್ದು ಪ್ರತೀ ಒಬ್ಬರು ಎಂಡ್ರೂಸ್ ಲಿವರ್ ಲವಣದಿಂದ ದೊರಕುವ ಪ್ರಯೋಜನವನ್ನು ಹೊಂದಬಹುದು ಉತ್ತಮ ಲವಣಗಳಿಂದ ಕೂಡಿ ಅಂತರೇಂದ್ರಿಯಗಳನ್ನು ಶುದ್ಧಗೊಳಿಸುವ ಪ್ರಾಕೃತಿಕ ಭೇದಿಯ ಔಷಧಿಗಳಿಂದ ಮಾಡಲ್ಪಟ್ಟಿದೆ ಎಂಡ್ರೂಸ್ ಡಬ್ಬಿಗಳಲ್ಲಿ ಬಹಳ ಉತ್ತಮವಾದದ್ದು ಆದರೂ ಈ ಮೊದಲು ನಿಮಗೆ ಚಿರಪರಿಚಿತವಾದ ಲವಣವು ಬಾಟ್ಲಿಗಳಲ್ಲಿಯೂ ದೊರಕುತ್ತದೆ

ಅಂತರೇಂದ್ರಿಯ ಶುದ್ಧಿಗೆ ಉತ್ತಮವಾದದ್ದು.

785

ಮು| ಕೌ| ಮೃತ್ಯುಂಜಯ ರಾಯರು

ಮುನಿಸಿಪಾಲಿಟಿಗೂ, ತನಗೂ ಪ್ರಾಚೀನ ಕಾಲದ ಋಣಾನುಬಂಧವಿದೆ, ಅದನ್ನು ದೇವರು ಬಂದರೂ ಕಡಿಯಲಾರರು' ಎಂದು ನಿಶ್ಚಿತವಾಗಿ ತಿಳಿದವರಲ್ಲಿ ಮೃತ್ಯುಂಜಯ ರಾಯರು ಒಬ್ಬರು. ಈ ರೀತಿಯ ತಿಳುವಳಿಕೆ ಒಮ್ಮೆ ಮುನ್ಸಿಪಾಲಿಟಿಗೆ ಕಾಲಿರಿಸಿದರೇನೆ, ಸಾಮಾನ್ಯರಿಗೆ ಬರುತ್ತದೆ. ಆ ವೇಳೆ ಮೂರು ವರ್ಷದ ಅವಧಿ ಮುಗಿಯಿತೆಂದರೆ, ಮನೆಗೆ ಬಂದ ಹೆಂಡತಿಯನ್ನು ತವರಿಗೆ ಕಳುಹಿಸುವಷ್ಟು ವ್ಯಥೆಯಾಗುತ್ತದೆ. ತವರಿಂದ ಅವಳು ಬಂದೇ ಬರುತ್ತಾಳೆ. ಬರುವಾಗ ಮೇಲೆ ಕಾಣಿಕೆಯಾಗಿ ಒಂದು ಮಗು ಬರುತ್ತದೆ—ಎಂದು ತಿಳಿಯುವುದು ಹಗಲು ಕನಸು. ಈ ಕನಸು ನಿಶ್ಚಯವಾಗಿ ಕಾಂಟೆಸ್ಟು ಇಲ್ಲದೆ—ಸೀಟು ದೊರೆತರೆ ಮುಗಿಯಿತು—'ನಾನು ಈ ಸ್ಥಳಕ್ಕೇ ಅದ್ವಿತೀಯ'ನೆಂಬ ಭಾವನೆ ಬಂದೇ ಬರುತ್ತದೆ

ಹೀಗಿರುವಲ್ಲಿ ಒಂಭತ್ತು ವರ್ಷಕ್ಕೆ ಮಿಕ್ಕಿ ... ಲೀಪು ಇಲ್ಲದೆ ಆರಿಸಿ ಬಂದ ಮೃತ್ಯುಂಜಯ ರಾಯರು, ಈ ಬಾರಿಯ ಚುನಾವಣೆಯಲ್ಲಿ ನಿರಾತಂಕವಾಗಿ ಆರಿಸಿ ಬರಬೇಕು—ಎಂದು ತಿಳಿಯುವುದರಲ್ಲಿ ತಪ್ಪೇನು? 'ಮುನ್ಸಿಪಲ್ ಸೀಟು' ನನ್ನ ಜನ್ಮಸಿದ್ಧವಾದ ಹಕ್ಕು—ಎಂದು ತಿಳಿಯುವ ಭಟ ಒಬ್ಬನಿದ್ದರೆ ಆ ಬಿರುದು ನಮ್ಮ ಮೃತ್ಯುಂಜಯರಾಯರಿಗೆ ಸಲಬೇಕು. ಹೆಸರು ಮೃತ್ಯುಂಜಯರೆಂದು ...ದರೆ ಮುಪ್ಪು ಅವರನ್ನು ಮೃತ್ಯುವಿನ ಬಳಿ 'ಈಗಲೋ ಇನ್ನೊಂದು ಗಳಿಗೆಗೋ' ಎಂದು ಕರೆಯುತ್ತಿದೆ ಎಂದು ಎಡಿಟರ್ ಶಿವರಾಯ್ಯ ಹೇಳುತ್ತಿದ್ದನೆ. ಹೇಗೂ ಇರಲಿ—ಮೃತ್ಯುಂಜಯರಾಯರ ಸ್ವತಃ ಮೃತ್ಯುವನ್ನು, ಮುನ್ಸಿಪಲ್ ವೈರಿಗಳನ್ನು ವೀರರಂತೆ ಒಂದೇ ಸನನೆ ಕಾಡಾಕಾಡಿ ಯುದ್ಧಮಾಡುತ್ತಿದ್ದಾರೆ. ಕಳೆದ ಚುನಾವಣೆಯ ಸಮಯ ಅವರ ಬಿಳಿ ಮೀಸೆ ಕರಿದಾಗಿತ್ತು. ಅನಂತರ ಅವರು ಕಾಂಗ್ರೆಸ್ಸು ಪಾರ್ಟಿ ಸೇರಿ ಖಾದಿಯ ಬಿಳಿಯ ...ಕ್ಕೆ ಮನಸೋತ ನಂತರ, ಟೋಪಿ ಬಿಳಿದಾಯಿತ, ಬಿಳೇ ಮೀಸೆ ಬಿಳಿದಾಗಿಯೇ ಉಳಿಯಿತು.

ಬಿಳು ಕೂಳ್ಳ ದಪ್ಪಗಿನ ಅಳ ಅವರು ಒಳಿ ಖಾದಿ ಧರಿಸಲಿ, ಕರಿ ಅಂಗಿ ತೊಡಲಿ—ಅವರ ಹರದಪ್ಪದಿಂದಾಗಿ ಒಂದು ಹಿಮಾಲಯದ ಕರಡಿಯಂತೆಯೋ, ಇಲ್ಲವೆ ಹಿಮಕರಡಿಯಂತೆಯೋ ಕಾಣುತ್ತಾರೆ. ಉರುಟು ಮುಖ, ಉರುಟು ಚೌಕ ಮಾತ. ಅವರು ಆಡುವ ಮಾತುಗಳು ಮುಖ್ಯತಃ ಅವರಿಗೆ ತಿಳಿಯುತ್ತದೆಂದು ಹೇಳಲಾರೆವು. ಹೀಗಾಗಿ ನಮಗೆ ತಿಳಿದೀತೆನ್ನುವುದು ಹೇಗೆ? ಆದರೂ ಅವರ ಕೋಪ, ಆರ್ಭಟಗಳೆಂದರೆ ಘಟ್ಟದ ಒರೆ ಹುಲಿಗೂ ಬಾರದು. ಮೃತ್ಯುಂಜಯ ರಾಯರಿಗೆ ಕೋಪ ಬಂದಿದೆಯಾದರೆ ಆ ದಿನದ ವಿಶೇಷ ವಾರ್ತೆಯೆಂದು ತಿಳಿಯಬೇಕು. ಕಾರಣ ಅವರ ಸಿಟ್ಟು ಚಿಲ್ಲರೆ ವಿಷಯಗಳಿಗೆ ಬರುವಂತಿಲ್ಲ. ಅದರ ಬಿಸಿ ನೂರಾರು ವ್ಯಕ್ತಿಗಳಿಗೆ ನಾಟಿರುತ್ತದೆ. ಅವರಿಗೆ ಈ ಮೊದಲು ಚುನಾವಣೆಯಲ್ಲಿ ಯಾರಾರು ವಿಪ್ಲಕಾರಿಗಳು ಆಗಿದ್ದಾರೋ ಅವರನ್ನು ಸ್ಮರಿಸಿಯೇ ಅವರ ಕೋಪಕ್ಕೆ ಪುಟಬರಬೇಕ. ಹಾಗೆ ಸಿಟ್ಟಾಗಿ ಬಲಿಯಾದ ದಿವಸ—ಅವರು ಮನೆಯಲ್ಲಿ ಊಟಕ್ಕೆ ಕುಳಿತರೆ ಪಾತ್ರೆ ಬರಿದಾದರೂ ಏಳುವಂತಿಲ್ಲ; ಉಂಡಿದ್ದೇನೆ ಎಂಬುದು ತಿಳಿಯುವಂತೆಯೂ ಇಲ್ಲ. ಅಂಥ ಅಪೂರ್ವ ವ್ಯಕ್ತಿಗಳು ಮುನಿಸಿಪಲ್ ಸದನದಲ್ಲಿ ಕಾಲಿರಿಸಿದ ಇತಿಹಾಸ ಬಹಳ ಸವಿಯಾದದ್ದು. ಮುನಿಸಿಪಾಲಿಟಿ—ಎಂದರೆ ಅದೊಂದು ವಿಶ್ವನಾಟಕ. ನವರಸಗಳು ಅನ್ನುವುದಕ್ಕಿಂತ ಎಲ್ಲ ನವರಸಗಳ ಸಂಚಿಕೆ. ಮೃತ್ಯುಂಜಯರಾಯರ ಪ್ರಥಮ ಇಲೆಕ್ಷನು ಆದ ವರ್ಷ—ನವರಲ್ಲಿ ಮುಖ್ಯವಾಗಿ ಕೃಸ್ತ—ಕ್ರೈಸ್ತೇತರ ವೈಮನಸ್ಸು ಇಲೆಕ್ಷನಿನ—ಮುಖ್ಯ ಹಲಗೆಯಾಗಿತ್ತು

ನಗರದ ನವ ನಾಯಕರು

[ಲೇಖಕ: ಶಿವರಾಮ ಕಾರಂತ.]

ಒಂದು ಕಡೆ ಭಂಡಾರಿಗಳು—ರೇಗೋರನ್ನು ಇದಿರಿಸಿದರು, ಇನ್ನೊಂದು ಕಡೆ ಬ್ರಿಟೋರು—ಪ್ರಭುಗಳನ್ನು ಇದಿರಿಸಿದರು—ಮತ್ತೊಂದು ಕಡೆ ನಾಯ್ಕರು—ಪರ್ಟಾಡೋರನ್ನು ಇದಿರಿಸಿದರು. ಕ್ರಿಶ್ಚನ ವಾರ್ಡರರ ಹತ್ತಿರ ಪ್ರಭು, ನಾಯ್ಕರುಗಳೆಲ್ಲ ಹೋಗುವಾಗ 'ಮದ್ದಾಂ—ನಾನು ಬೋಳೂರು ವಾರ್ಡಿನಲ್ಲಿ ನಿಮ್ಮ ಫೆರ್ನಾಂದೀಸರಿಗೇನೆ ಕೆಲಸ ಮಾಡುತ್ತೇನೆ' ಅಂದರು. ಹಿಂದೂ ವೋಟರರ ಹತ್ತಿರ ಹೋಗುವಾಗ 'ಊರು ಅವರಿಗೆ ಮಾರಿಹೋಯಿತೇ' ಎಂದರು. ಸ್ವಜಾತಿಯವರಲ್ಲಿಗೆ ಹೋಗುವಾಗ—'ನಮ್ಮ ಜಾತಿಯವರ ಇಷ್ಟು ಮನೆಯಿದ್ದು ಒಂದು ರಿಪ್ಪಯೋ, ದಂಟಿಯೋ—ಇಲ್ಲಿ ನಿಲ್ಲುವುದೆಂದರೆ ನಾಚಿಕೆಗೇಡಿತನ' ಎಂದರು. ಇಂಥ ಆವರಣದಲ್ಲಿ ಮೃತ್ಯುಂಜಯ ರಾಯರು ಎದ್ದರು. ಅವರಾಗ ಬಂದರಿನ ಸಮೀಪ ಜವುಳಿ ಅಂಗಡಿ ಇರಿಸಿದ್ದರು. ವ್ಯಾಪಾರ ಕುಂಟ ಇತ್ತು. ಅನ್ನುತ್ತಾರೆ, ಸಾಲಕೊಟ್ಟು ಇಲ್ಲಿ ಈಗ ಅನ್ನುವವರಿದ್ದಾರೆ—ಏನೂ ಇರಲಿ ಅವರ ಅಂಗಡಿಗೆ ಬಂದರದವರೆಲ್ಲ ಮೊಸೂಮಿನಲ್ಲಿ ಇಸ್ಪೀಟು ಆಡಲು ಬರುತ್ತಿದ್ದರು. ಅಲ್ಲಿ ನಮ್ಮ ನರಸಿಂಹ ನಾಯ್ಕರು 'ಹೌದಯ್ಯ—ಮರ್ತಪ್ಪನವರೇ—ನೀವು ಕದ್ರಿ ವಾರ್ಡಿಗೆ ನಿಲ್ಲಬೇಕು. ಅಲ್ಲಿನ ಸೀಟಿಗೆ ಎರಡೂ ಕ್ರಿಶ್ಚನು ಉಮೇದುವಾರರೇ. ಏಕೆ—ನಿಲ್ಲಿ ನೀವು ಬ್ರಾಹ್ಮಣರಿಗಿರಲಿ ಒಂದು''—ಎಂದು ಕದ್ರಿ ವಾರ್ಡಿನ ಕುಲಾಸೋರವರು ತಮ್ಮ ವಾರ್ಡಿನ ಪರ್ಟಾಡರಿಗೆ ಸಹಾಯ ಮಾಡುತ್ತಾರೆಂದು ಇವರನ್ನು ಅಲ್ಲಿಗೆ ನಿಲ್ಲಿಸುವ ಉಪಾಯ ನಾಯ್ಕರಿಗೆ ಬಂದಿತ. ವ್ಯಾಪಾರ ಇಳಿಮುಖವಾಗುವಾಗ ಗೌರವಕ್ಕೊಂದು ದಾರಿಯಾಗಲಿ ಎಂದು ಮೃತ್ಯುಂಜಯರಾಯರಿಗೆ ಬುದ್ಧಿ ಬಂದಿತು. ಸರಿ—ಅವರು ಹಳೆ ಬಾಕಿ ವಸೂಲಿಯನ್ನು ಬಿಟ್ಟು ನಿತ್ಯವೂ ಕದ್ರಿಯಲ್ಲಿ ಬಲವಾಗಿ ಚಳವಳ ಹೂಡಿದರು. ಕೊನೆಗೆ ಇಬ್ಬರು ಕ್ರಿಶ್ಚನರಲ್ಲು ತಮ್ಮ ದೂತರನ್ನು ಕಳುಹಿಸಿ—ನಿಮ್ಮೊಳಗೆ ಜಗಳ ಬೇಡ, ನಿಮಗೆ ಪ್ರಭುಗಳ ಪೈಕಿಯವರ ಜಗಳದೆ—ಸಮ ಅನ್ನಿ. ನಮ್ಮ ಜಾತಿಯವನೆ ಮನೆ ಈ ಊರಲ್ಲಿ ನಾಲ್ಕು ಸಹ ಇಲ್ಲ''—ಎಂದರು. ಕುಲಾಸರಿಗೆ ಆಶ್ಚರ್ಯವಾಯಿತು. ''ನೀವು ಮರ್ತು—ಅಂದರೆ ಗೌ ಸಾ''ಅಲ್ಲವೇ—ಎಂದು ಕೇಳಿದರು'' ಥೂ ಥೂ. ನಾನು ಹಸೆ—ಮೃತ್ಯುಂಜಯ ಎಂದು ಅವರ ಬಾಯಲ್ಲಿ ಹೊರಡದುದಕ್ಕೆ ಮರ್ತುಮಾಡಿ ಹಾಕಿದರು. ಬಂದರದವರೆಲ್ಲ ಗೌ ಸಾ—ಅಲ್ಲಿ—ಅಲ್ಲಿ ಎಲ್ಲಿ ಜಾತಿಯವರೂ ಇದ್ದಾರೆ''—ಎಂದರು. ಅಂತು ಬಹಳ ಸಂಧಿ ಸಲಾಮುಗಳಿಂದ ನಾಮಿನೇಶನಿನ ದಿವಸವೇ ಮೃತ್ಯುಂಜಯರ ಚೀಟಿ ಮೇಲೆ ಬಿತ್ತು. ಇಬ್ಬರು ಕ್ರಿಶ್ಚನರೂ ಹಿಂದೆಗೆದರು. ಸರಿ—ಮೀಸೆ ಮೇಲಾಗಿಸಿ ಅವರು ತಿರುಗಿದರು. ನಾಯ್ಕರಿಗೆ ಅಸೂಯೆಗೆ ಕಾರಣವಾಯಿತು. 'ನಾನು ಕುಲಾಸರಿಗೆ ಹಿಂದೆಗೆಯಲು ಹೇಳಿದವ ಈಗ ನೀವು ನನಗೆ ಪರ್ಟಾಡರ ಇದಿರು ಸಹಾಯಮಾಡಬೇಕು—ಎಂದರು. ಕೆಲಸವಾದದ್ದೆ ದೊಡ್ಡದೆಂದು ತಿಳಿದ ಮೃತ್ಯುಂಜಯ ರಾಯರು 'ಯಾರಿಗೆ ಬೇಕು ಈ ಗೊಂದಲ'—ಎಂದರು.

ಸರಿ ಮೂರು ವರ್ಷದ ಮೂಲಿಗೇಣಿ ಕಾಯಂ ಆಯಿತು. ಜಾತಿ ಜಾತಿಗಳ ತುರ್ಪು ಹೂಡಿ ಇಲೆಕ್ಷನು ಮುಗಿಯಿತ. ಒಳಗಿಂದೊಳಗೆ ಜಾತಿಯವರು ಜಾತಿಯವರಿಗೆ ಕತ್ತರಿಯಿಟ್ಟು—ಕೊನೆಗೆ ಮುಂಚಿನಂತೆ ಆಯಿತು. ಈ ಅವಧಿಯ ಬಳಿಕ ಬೀದಿಯಲ್ಲಿ ನಡೆಯುತ್ತಿರುವ ಮೃತ್ಯುಂಜಯರಾಯರು ಬಹಳ ಕಾರ್ಯಮಾಡಿದರು. ಪ್ರತಿ ಮೀಟಿಂಗಿನಲ್ಲಿ ಪ್ರತಿ ಠರಾವಿನ ವಿಷಯ ಅವರ ಉಪನ್ಯಾಸವಿತ್ತು. ಕೊನೆಗೆ ಆ ಲೆಕ್ಚರು ಯಾರಿಗೂ ರುಚಿಸಲಿಲ್ಲವೆಂದು—ನಿಲ್ಲಿಸಿದರು. ಪಾಪದ ಮುನಿಸಿಪಲ್ ಶಾಲೆಗಳನ್ನು ಸಂದರ್ಶಿಸಿ ಮೀಸೆ ಕಾಯಿಸುತ್ತ ಮೇಸ್ಟರುಗಳ ಮೇಲೆ ಪಾರುಪತ್ಯ ನಡೆಯಿಸತೊಡಗಿದರು. ಮೇಸ್ಟರ ವರ್ಗಾವರ್ಗಿಯಾಗಲಿ ಯೋಗ್ಯತೆಯ ಮೂಲಕ ಅಂದರೆ ಮೃತ್ಯುಂಜಯರಾಯರ ಮೂಲಕವೇ ಮಾತುಗಳು ಅಧ್ಯಕ್ಷರಿಗೆ ಬೀಳುವುದೆಂಬ ವಿಶ್ವಾಸ ಮಾಸ್ಟರುಗಳಿಗೆ ಬಂದಿತು. ಇದಕ್ಕೆ ಹೆಚ್ಚಿನ ಭದ್ರತೆಯೇನು ಬೇಕು

ಹಗಲು ಕನಸಿನಂತೆ ಮೂರು ವರ್ಷ ಮೂರು ದಿನದಂತೆ ಕಳೆದು ಹೊಸ ಚುನಾವಣೆ ಕಾಲಿರಿಸಿತು. ಈ ವರ್ಷವೂ ಕದ್ರಿಯ ಮುಂದು ನಾಥನನ ಸೇವೆ ಮೃತ್ಯುಂಜಯರಾಯರು ಮುಂದಾದರು. ತಿರುಗಿ ಆ ದೂರದ ಊರನ್ನು ಕಾಣುವ ಯೋಗ ಬಂದುದಕ್ಕಾಗಿ ಹರ್ಷಪಟ್ಟರು. ಆದರೆ ಅಲ್ಲಿಗೆ ನಾಯ್ಕರು, ಸುಬ್ಬರಾಯರು, ಕುಲಾಸರು—ಮೂವರು ನಿಲ್ಲುವರೆಂಬ ಸುದ್ದಿ ಹುಟ್ಟಿತು. ''ಹಾಗಾದರೆ ಬಂದರದವನಿಗೆ ಒಂದರೇ ಗತಿ ಎಂದು ಕುಳಿತರೆ—ಅಲ್ಲಿ ಸಾಹುಕಾರರ ಗಲಾಟೆ ಶುರುವಾಯಿತ. ಬೋಳಾರದ ಮಾರಿಗುಡಿಯಲ್ಲೂ ಎಡೆಯಿಲ್ಲ—ಸಾವಿರಸಾವಿರಕ್ಕೆ ಕಟ್ಟಾರಿರುವ ಭಟ್ಟರು ಬಂದರು. ಒಟ್ಟಾರೆ ಗಡಿಬಿಡಿಯಾಯಿತು. ಹಣ ಖರ್ಚುಮಾಡಲು ಇಲ್ಲ—ಅಥವಾ ಮನಸ್ಸಿಲ್ಲ. ಇನ್ನುಳಿದ ದಾರಿ ಪಂಗಡ ಸೇರಲು, ಖುದ್ದ ಊರಿಗೆ ಹೋಗಿ ''ನಾನು ಗೌ ಸಾ| ರ ಅಭಿಮಾನಿ'' ಎಂದು ಅಲ್ಲಿನ ಗೆಳೆಯರನ್ನು ಕೇಳತೊಡಗಿದ್ದರು. ಅವರ ಎದುರಿಗೆ ನಾರಾಯಣ ಪ್ರಭುಗಳು ನೀವು ಒಂದರಕ್ಕೆ ನಿಲ್ಲಿ. ನನಗೆ ಇಲ್ಲಿ ಅನುಕೂಲವಿದೆ ಎಂದರೆ ಅವರನ್ನು ಒಲಿಸಿಕೊಳ್ಳುವ ವೇಳೆಗೆ ಒಬ್ಬರು ಸಾರಸ್ವತ ಬಂಧುಗಳಿಗೆ ದೇಶೋದ್ಧಾರದ ನನಪಾಯಿತು. ಸರಿ ಅವರು ''ಆ ಕರಡಿಗೆ ಏಕೆ ಓಟು ಎಂದು ಚಳವಳ ಹೂಡಿದ'' ಇವರು ಆ 'ಗಣ್ಣಬೆಗೆ ಏಕೆ' ಎಂದು ಕ್ರಾಂತಿಹಾಡಿದರ ... ಮುಖ್ಯವಾಗಿ ಎಷ್ಟೋ ಯನ್ನು ಬೈಯಲು. ಎಷ್ಟು ನಿವಗಳು ...ಕಸೀ ... ಅಪನಲ್ಲಿ ಸೃಷ್ಟಿಮಾಡಿ ತಂದು ಪಸಾರಮಾಡಿದರು. ಆದರೂ ಎದುರಾಳಿ ಬಲವಾಗಿದ್ದರು. ಈ ಆಪತ್ತಿನ ಕಾಲಕ್ಕೆ ತಳಮಳಿಸುವಾಗ ದಿಗಂಬರರಾಯರಿಗೆ ನಿಮ್ಮ ನಿಮ್ಮ ಸಾ| ಗೂಬೆಗೂ ಆಗುವುದಿಲ್ಲ ಎಂಬ ಸ್ವಪ್ನ ಸಿಕ್ಕಿತು. ಸರಿ—ನೇರಾಗಿ ಹೋಗಿ ದಿಗಂಬರರಾಯರ ಕಾಲನ್ನು ಹಿಡಿದು ಅವರನ್ನು ಸ್ತುತಿಯಿಂದ ಅಭಿಷೇಕ ಮಾಡಿಸಿದರು. ತೇರು ಹೊರಡಿಸಿದಂತೆ ಅವರನ್ನು ಹೊರಡಿಸಿಕೊಂಡು ವೋಟರರ ಮನೆ ಮೆರವಣಿಗೆ ಮಾಡಿಸಲು ಪ್ರಾರಂಭ. ಮೇಲೆ ೧೨,೦೦೦ ರೂಪಾಯಿಗೆ ಮೃತ್ಯುಂಜರಾಯರು ದಿಗಂಬರರಾಯರ ಹೆಸರಿಗೆ ಅಡವು ದಸ್ತಾವೇಜು ಮಾಡುತ್ತಿದ್ದಾರೆ—ಇಲೆಕ್ಷನಿಗಾಗಿ ಎಂಬ ಧಮಾಮು ಹೊರಟಿತು. ಏನಿಲ್ಲದೆ ಇಲೆಕ್ಷನಿಗೆ ಮೂರುದಿನದ ಮುಂಚೆ ಇದಿರಾಳಿಯು ನನಗೆ ಆದ ಖರ್ಚು ೫೦೦ ಕೊಟ್ಟರೆ ನಾನು ಹಿಂದಕ್ಕೆ ನಿಲ್ಲುತ್ತೇನೆ ಎಂದು ಹೇಳಿ ಕಳುಹಿಸಿದನು. ಹಾಗೂ ಹೀಗೂ ರಾಜಿಯಾಗಿ ೩೦೦ಕ್ಕೆ ಇತ್ಯರ್ಥವಾಗಿ ತಿರುಗಿ ಮುನ್ಸಿಪಲ್ ಮೂರುವರ್ಷದ ಹಕ್ಕು ಸ್ಥಾಪನೆಯಾಯಿತು.

ಮೂರನೆಯ ಇಲೆಕ್ಷನಿನಲ್ಲಿ ಕಡು ಜಸ್ಟಿಸ್ ಪಾರ್ಟಿಗಳ ಕಾರಿನಲ್ಲೇ ತಿರುಗಿ ಎಲ್ಲರನ್ನು ನಿಂದಿಸುತ್ತ ಚುನಾವಣೆಯಲ್ಲು ಗೆದ್ದು ಇದಿರಾಳಿಯನ್ನು ಸೋಲಿಸಿದರು. ದಿನೇ ದಿನೇ ಈ ಸರ್ವಿಸಿನ ಮಹಾತ್ಮೆಯಿಂದ ಅವರಿಗೆ ಹಾದಿಯಲ್ಲಿ ಕೈ ಎತ್ತುವರ ಸಂಖ್ಯೆ ಅಪರಿಮಿತವಾಯಿತು. ಒಮ್ಮೆ ದಾರಿಯಲ್ಲಿ ಹೋಗುವಾಗ 'ಆ ಕೆಳಗಿನ ನಮಸ್ತೆಮ ನೋಡಿ ಅಧ್ಯಕ್ಷರೇ—ನನಗೆ ನಮ

[೧೪ನೇ ಪುಟಕ್ಕೆ ಮುಂದುವರಿಯುವುದು]

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು. ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ

ಸ್ತ್ರೀಯರಿಗೆ ಋತು ಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ಕಟ್ಟಿತು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಥಳೀಯ ಸ್ಟಾಕಿಸ್ಟರು ಪೋಪ್ಯುಲರ್ ಸ್ಟೋರ್ಸ್ ರಥಬೀದಿ, ಮಂಗಳೂರು.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—K. R. GURU, *Managing Director*

ಮೊರಿಶಸ್ಸಿನ ಪ್ರವಾಸಿ ಭಾರತೀಯರು

ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಪ್ರವಾಸಿ ಭಾರತೀಯರು ಹೋಗಿ ವಾಸವಾಗಿದ್ದಾರೆ. ಇವರಲ್ಲಿ ಕೆಲವರು ಸ್ವೇಚ್ಛೆಯಿಂದ ವಿದೇಶಗಳಿಗೆ ಹೋಗಿ ವಾಣಿಜ್ಯ, ವ್ಯವಸಾಯಗಳ ಮೂಲಕ ತಮ್ಮ ಜೀವನವನ್ನು ನಡೆಸುತ್ತಾ ಇದ್ದಾರೆ. ಆದರೆ ಇವರಲ್ಲಿ ಬಹುತೇಕ ಜನರು ಸ್ವೇಚ್ಛೆಯಿಂದ ಅಲ್ಲ. ಪರಂತು ತಮ್ಮ ಮತ್ತು ತಮ್ಮನ್ನು ಅವಲಂಬಿಸಿರುವ ಕುಟುಂಬದ ಜನರ ಹೊಟ್ಟೆಯನ್ನು ತಾಳಲಾರದೆಯೇ, ಅದನ್ನು ದೂರವಾಡುವ ಉಪಾಯವನ್ನು ಹುಡುಕಿಕೊಂಡು ವಿದೇಶಗಳಿಗೆ ಹೋದವರಿದ್ದಾರೆ. ಈ ಜನರು ಪುನಃ ಸ್ವದೇಶವನ್ನು ಕಾಣಲಿಕ್ಕೆ ಎಷ್ಟೋ ವ್ಯಾಕುಲರಾಗಿರುವರು. ಕೆನಿಯ, ಮಲಯ, ಮೊರಿಶ್ಯಸ್ ಇತ್ಯಾದಿ ಉಪನಿವೇಶಗಳಲ್ಲಿ ಇಂಥ ಅನೇಕ ಮಂದಿ ಭಾರತೀಯರು ವಾಸವಾಗಿ ಇದ್ದಿರುತ್ತಾರೆ.

ಮೊರಿಶ್ಯಸ್

ಮೊರಿಶ್ಯಸ್ ಎಂಬುದು ಒಂದು ಸಮುದ್ರ ದ್ವೀಪವಾಗಿದೆ. ಇದು ಕಲ್ಕತ್ತೆಯಿಂದ ೩,೫೦೦ ಮೈಲು ದೂರ ಹಿಂದೂ ಮಹಾಸಾಗರದಲ್ಲಿದೆ ಸುಮಾರು ನಾಲ್ಕು ಸಾವಿರ ವರ್ಷಗಳ ಪೂರ್ವದಲ್ಲಿ ಒಬ್ಬ ಪೋರ್ಚುಗೀಸ ನಾವಿಕನು ಈ ದ್ವೀಪವನ್ನು ಕಂಡುಹಿಡಿದನು. ಅವನ ಹೆಸರು ಡೋನ್-ಪೆಟ್ರೊ-ಮೆಸ್ಕರ್-ಗನಾಜಿ ಎಂದಿತ್ತು. ಅವನು ಪೊರ್ತುಗಲಿನಲ್ಲಿ ವಾಸವಾಗಿದ್ದನು. ಭಾರತವನ್ನು ಹುಡುಕುತ್ತಾ ಪೋರ್ಚುಗೀಸ ನಾವಿಕರು ಹಿಂದೂ ಮಹಾಸಾಗರವನ್ನು ಸಂಚರಿಸುತ್ತಿದ್ದಾಗ ಗನಾಜನು ಆಕಸ್ಮಿತವಾಗಿ ಮೊರಿಶ್ಯಸನ್ನು ಕಂಡುಕೊಂಡನು. ಆದರೆ ಅವನಾಗಲಿ, ಅವನ ಹಡಗಿನಲ್ಲಿದ್ದ ಇತರ ಯಾರೇ ಆಗಲಿ, ಅಲ್ಲಿ ವಾಸಮಾಡಿಕೊಳ್ಳಲಿಲ್ಲ ೧೫೯೮ರ ತನಕ ಯಾರ ದೃಷ್ಟಿಯೂ ಆ ದ್ವೀಪದ ಕಡೆಗೆ ಹೊರಳಲಿಲ್ಲ. ಅನಂತರವೇ ಜನರು ಈ ದ್ವೀಪದ ಮಹತ್ವನ್ನು ಕಂಡುಕೊಂಡರು. ೧೬೩೮ರಲ್ಲಿ ಕೆಲವರು ಡಚ್ಚರು ಬಂದು ಈ ದ್ವೀಪದಲ್ಲಿ ವಾಸವಾದರು. ೧೭೧೦ರ ತನಕ ಆ ದ್ವೀಪದಲ್ಲಿ ಡಚ್ಚರ ಪ್ರಭಾವವೇ ವಿಶೇಷವಾಗಿ ಇರುತಿತ್ತು.

ಬ್ರಿಟಿಸರ ಅಧಿಕಾರ ಸ್ಥಾಪನೆ

ಆ ಮೇಲೆ ಈ ದ್ವೀಪದ ಮೇಲೆ ಫ್ರೆಂಚರ ಅಧಿಕಾರವಾಯಿತು ಪರಂತು ಮುಂದೆ ೧೦೦ ವರ್ಷಗಳ ತನಕ ಯೂರೋಪದಲ್ಲಿ ಫ್ರೆಂಚರಿಗೂ ಬ್ರಿಟಿಷರಿಗೂ ಆಗಾಗ ಲಡಾಯಿಗಳಾಗುತಿದ್ದವು. ಈ ಸಂಘರ್ಷದ ಪರಿಣಾಮವಾಗಿ ೧೮೧೦ರಲ್ಲಿ ಬ್ರಿಟನು ಈ ದ್ವೀಪವನ್ನು ಫ್ರಾನ್ಸಿನಿಂದ ಕಿತ್ತುಕೊಂಡಿತು ಅಂದಿನಿಂದ ಇಂದಿನ ತನಕ ಅದು ಬ್ರಿಟಿಷರ ಅಧೀನದಲ್ಲಿದೆ. ಈ ದ್ವೀಪವು ೭೦೫ ಚದರ ಮೈಲು ವಿಸ್ತಾರವಾಗಿದೆ. ಇದರ ಮಣ್ಣು ಬಹಳ ಫಲವತ್ತಾಗಿದೆ. ಇಲ್ಲಿ ಚಾ, ಹೊಗೆಸೊಪ್ಪು ಮತ್ತು ಇದರಂಥ ಇತರ ಅನೇಕ ಪದಾರ್ಥಗಳು ಸುಲುಸಾಗಿ ಬೆಳೆಯುತ್ತವೆ. ಆದರೆ ಕಬ್ಬಿನ ಬೆಳೆಯು ಈಗೀಗ ಬಹಳ ವಿಶೇಷವಾಗಿದೆ. ಮೊರಿಶ್ಯಸನ ಉನ್ನತಿಯ ಕಾರಣವು ಈ ಕಬ್ಬಿನ ಬೆಳೆಯೇ ಆಗಿದೆ. ಈಗ ಅಲ್ಲಿ ೬೦ ಸಕ್ಕರೆಯ ಕಾರ್ಖಾನೆಗಳಿವೆ. ಆರೇಳು ಕಾರ್ಖಾನೆಗಳು ಇಂಗ್ಲಿಷರದ್ದಾಗಿವೆ ಉಳಿದವುಗಳು ಭಾರತೀಯರ ಒಡೆತನದಲ್ಲಿವೆ.

ಜನಸಂಖ್ಯೆ

ಮೊರಿಶಸ್ಸಿನ ಜನಸಂಖ್ಯೆ ನಾಲ್ಕು ಲಕ್ಷವಾಗಿದೆ. ಅವರಲ್ಲಿ ಮೂರುವರೆ ಲಕ್ಷ ಭಾರತೀಯರಾಗಿರುವರು. ಭಾರತೀಯರಲ್ಲಿ ಅಧಿಕಾಂಶರು ಬಿಹಾರ ಮತ್ತು ಸಂಯುಕ್ತ ಪ್ರಾಂತಗಳಿಂದ ಬಂದವರಾಗಿರುತ್ತಾರೆ. ಅವರು ಮೊರಿಶಸ್ಸನ್ನು ತಮ್ಮ ಮಾತೃಭೂಮಿಯನ್ನಾಗಿ ಮಾಡಿಕೊಂಡಿಲ್ಲ. ವಿವಾಹಾದಿ ಶುಭಕಾರ್ಯಗಳಿಗೆ ಅವರು ಆಗಾಗ ಭಾರತಕ್ಕೆ ಬರುತ್ತಾರೆ. ಶ್ರೀಮಂತರಾದವರು ಹೀಗೆ ಮಾಡುತ್ತಾರೆ; ಪರಂತು ಅಷ್ಟು ಶ್ರೀಮಂತರಲ್ಲದವರು ಅಲ್ಲಿಯೇ ಕುಲಗೋತ್ರಾದಿಗಳನ್ನು ವಿಚಾರಿಸಿಕೊಂಡು ವಿವಾಹಾದಿಗಳನ್ನು ನಡೆಸುತ್ತಾರೆ.

ಮೊರಿಶಸ್ಸಿನ ಭಾರತೀಯರು

ಭಾರತೀಯರಲ್ಲಿ ಬಹುಮಂದಿ ಜನರು ಸನಾತನ ಧರ್ಮಾವಲಂಬಿಗಳಾಗಿ ಇರುತ್ತಾರೆ. ಅಲ್ಲಿ ಅನೇಕ ಹಿಂದೂ ದೇವಾಲಯಗಳಿರುತ್ತವೆ. ಸನಾತನ ಧರ್ಮಪ್ರಚಾರಿಣಿ ಸಭೆಯ ಮೂಲಕ ಅಲ್ಲಿ ಧರ್ಮಪ್ರಚಾರ ಕಾರ್ಯವು ನಡೆಯುತ್ತದೆ. ಮೊರಿಶಸ್ಸನಲ್ಲಿ ೩೬ ದೊಡ್ಡ ದೇವಾಲಯಗಳಿರುವವು. ಅಲ್ಲಿ ಪ್ರವಾಸೀ ಭಾರತೀಯರ ನಿರೀಕ್ಷಣದಲ್ಲಿ ಅನೇಕ ಸಂಘಸಂಸ್ಥೆಗಳ ಸಂಚಾಲನವಾಗುತ್ತಲಿದೆ. ಅವುಗಳಲ್ಲಿ ಹಿಂದೂ ಮಹಾಸಭೆ, ಕ್ಷತ್ರಿಯಸಭೆ, ಬ್ರಾಹ್ಮಣ ಸಭೆ, ಠಾಕೂರ ಸಂಘಟನ ಸಭೆ, ಆರ್ಯಪ್ರತಿನಿಧಿ ಸಭೆ ಮತ್ತು ಪರೋಪಕಾರಿ ಸಭೆಗಳು ಮುಖ್ಯವಾಗಿವೆ. ಬಾಲಕರ ಶಿಕ್ಷಣಕ್ಕಾಗಿ ಅಲ್ಲಿ ಭಾರತೀಯರ ೪೦ ಪಾಠಶಾಲೆಗಳಿವೆ. ಇವುಗಳಲ್ಲಿ ಪ್ರಾಥಮಿಕ ಶಿಕ್ಷಣವು ಧರ್ಮಾರ್ಥ ಕೊಡಲ್ಪಡುತ್ತದೆ. ಇಂಗ್ಲೀಷ ಮತ್ತು ಫ್ರೆಂಚ ಭಾಷೆಗಳೊಂದಿಗೆ ಪ್ರತಿನಿತ್ಯ ಒಂದೊಂದು ತಾಸಿನ ತನಕ ಹಿಂದುಸ್ತಾನಿಯನ್ನು ಸಹ ಕಲಿಸಲಾಗುತ್ತದೆ. ಮೊರಿಶಸ್ಸಿನಲ್ಲಿ ವಾಸವಾಗಿರುವ ಭಾರತೀಯರ ಆಚಾರ ವಿಚಾರ, ಉಡಿಗೆತೊಡಿಗೆ, ರೀತಿಸಂಪ್ರದಾಯಗಳೆಲ್ಲ ಭಾರತೀಯ ಕ್ರಮಗಳನ್ನೇ ಅನುಸರಿಸಿ ಇರುತ್ತವೆ.

ವ್ಯಾಪಾರ ವ್ಯವಹಾರ

ಮೊರಿಶಸ್ಸಿಗೆ ಬೇಕಾದ ಆಹಾರ ಪದಾರ್ಥಗಳು ಹೊರದೇಶಗಳಿಂದ ಬರಬೇಕಾಗಿದೆ ಅಕ್ಕಿಯು ಹೆಚ್ಚಾಗಿ ಹಿಂದುಸ್ತಾನದಿಂದ ಬರುತ್ತವೆ ಗೋದಿಯು ಸಹ ಅಲ್ಲಿಂದಲೇ ಬರುತ್ತದೆ. ಆದರೆ ಡೆನ್ಮಾರ್ಕ, ಫ್ರಾನ್ಸ, ಇಟಲಿಗಳಿಂದಲೂ ಗೋಧಿಯು ದೊಡ್ಡ ಪ್ರಮಾಣದಲ್ಲಿ ಬರುತ್ತದೆ ಚೀನ, ಸಿಲೋನುಗಳಿಂದ ಚಾ, ಹಿಂದುಸ್ತಾನ ಮತ್ತು ಅರೇಬಿಯದಿಂದ ಕಾಫಿ, ಫ್ರಾನ್ಸ ಸ್ಪೈನ ಪೋರ್ಚುಗಿಲ್ ಮತ್ತು ಅಲ್ಜೀರಿಯದಿಂದ ಮದ್ಯವು ಆಮದಾಗುತ್ತದೆ ಮನೆಗಳು ಮರಗಳಿಂದ ಕಟ್ಟಲ್ಪಡುವುದೇ ಹೆಚ್ಚು. ಮನೆಮರಗಳನ್ನು ಕಟ್ಟಲಿಕ್ಕೆ ಬೇಕಾದ ಸೋಪಿನ ಮರಗಳು ಸಿಂಗಾಪುರ ಮತ್ತು ಹಿಂದುಸ್ತಾನದಿಂದ ಬರುತ್ತವೆ

ಹಿಂದೂ ಮುಸಲ್ಮಾನ ಸಮಸ್ಯೆ

ಮೊರಿಶಸ್ಸಿನಲ್ಲಿ ಹಿಂದುಗಳು ಅಧಿಕರಾಗಿದ್ದಾರಾದರೂ ಅಲ್ಲಿ ಮುಸಲ್ಮಾನರೂ ಇರುತ್ತಾರೆ ಆದರೆ ಮೊರಿಶಸ್ಸಿನ ಹಿಂದು ಮುಸಲ್ಮಾನರು ಪರಸ್ಪರ ಪ್ರೇಮದಿಂದ ವ್ಯವಹರಿಸುವರು ಆದ್ದರಿಂದ ಅಲ್ಲಿ ಹಿಂದುಸ್ತಾನದಲ್ಲಿದ್ದಂತೆ ಹಿಂದು ಮುಸಲ್ಮಾನರೊಳಗಿನ ಕಚ್ಚಾಟದ ಸಮಸ್ಯೆ ಇರುವುದಿಲ್ಲ. ಪೋರ್ಟ ಲುಯಿಸ ನಗರದಲ್ಲಿ ಮುಸಲ್ಮಾನರ ಸ್ವಂತದ ಒಂದು ಮಸೀದಿಯು ಕಟ್ಟಲ್ಪಟ್ಟಿದೆ. ಅಲ್ಲಿ ಕೆಲವು ಜನ ಪಾರಸೀಯರೂ ಒಂದಿದ್ದಿರುವರು. ವ್ಯಾಪಾರದಲ್ಲಿ ಅವರು ತುಂಬಾ ಕುಶಲತನವನ್ನು ತೋರಿಸುತ್ತಿರುವರು. ಅವರು ಇಂಗ್ಲಿಷ ಕಲಿಯುವದರಲ್ಲಿ ತುಂಬಾ ಚಾಣ್ಮೆಯನ್ನು ತೋರಿಸುತ್ತಿದ್ದಾರೆಂದು ಇಂಗ್ಲೀಷರೇ ಹೇಳುತಿದ್ದಾರೆ.

ಉದ್ಯೋಗ ವೃತ್ತಿ

ಹೆಚ್ಚಿನ ಪ್ರವಾಸೀ ಭಾರತೀಯರು ಮೊರಿಶಸ್ಸಿನಲ್ಲಿ ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸಮಾಡಿಕೊಂಡು ಇರುತ್ತಾರೆ ಕೂಲಿಯಿಂದ ಅವರ ಜೀವನವಾಗುತ್ತದೆ ಓದುಬರಹ ಬಲ್ಲವರು ಅಲ್ಲಿ ವ್ಯಾಪಾರ ಮಾಡುತ್ತಾರೆ ಮೊರಿಶಸ್ಸಿನ ರೋಯಲ್ ಕೋಲೆಜಿನಲ್ಲಿ ಶಿಕ್ಷಣಪಡೆದವರು ಸರಕಾರಿ ನೌಕರಿಗಳಲ್ಲಿ ಇರುತ್ತಾರೆ. ಸರಕಾರಿ ಉದ್ಯೋಗದಲ್ಲಿರುವ ಇಂಥ ಅನೇಕ ಮಂದಿ ಭಾರತೀಯರು ಅಲ್ಲಿ ಕಾಣಸಿಗುತ್ತಾರೆ. ಮೊರಿಶಸ್ಸಿನಲ್ಲಿ ಚೀನಿಯರೂ ವಾಸವಾಗಿದ್ದಾರೆ ಮೊರಿಶಸ್ಸಿನ ಪ್ರತಿಯೊಂದು ದೊಡ್ಡ ನಗರದಲ್ಲಿ ಚೀನಿಯರ ಕೆಲವು ಅಂಗಡಿಗಳನ್ನಾದರೂ ಕಾಣಬಹುದು ಚೀನಿಯರು ಸ್ವಭಾವದಿಂದ ಶಾಂತರೂ, ಆಡಂಬರವಿಲ್ಲದೆ ವ್ಯಾಪಾರ ಮಾಡಿಕೊಂಡು ಬರುವವರೂ ಆಗಿದ್ದಾರೆ ಪೋರ್ಟ ಲುಯಿಸ ಮತ್ತು ಇತರ ಕೆಲವು ಊರುಗಳಲ್ಲಿ ಚೀನಿಯರ ಪಗೋಡಾ ಅಥವಾ ಪ್ರಾರ್ಥನಾಮಂದಿರಗಳಿವೆ ಚೀನಿಯರೂ ಭಾರತೀಯರೂ ಬಹಳ ಪ್ರೇಮದಿಂದ ವ್ಯವಹರಿಸುತ್ತಾರೆ. ಹೀಗೆ ಮೊರಿಶಸ್ಸಿನಲ್ಲಿ ಬೇರೆ ಬೇರೆ ಜಾತಿ ಮತ ಸಂಪ್ರದಾಯಗಳ ಜನರು ವಾಸವಾಗಿರುವರಾದರೂ, ಅಲ್ಲಿ ಧಾರ್ಮಿಕ ವಿಷಯಗಳನ್ನು ತೆಗೆದುಕೊಂಡು ಜಗಳಗಳಾಗುವುದಿಲ್ಲವೆಂಬುದು ಸಂತೋಷದ ಸಂಗತಿಯಾಗಿದೆ

ಶಾಸನ ವ್ಯವಸ್ಥೆ

ಒಬ್ಬ ಗವರ್ನರರ ಮೂಲಕ ಮೊರಿಶಸ್ಸ ದ್ವೀಪದ ಶಾಸನವಾಗುತ್ತದೆ. ಮೊದಲು ಐದು ವರ್ಷಗಳಿಗೊಮ್ಮೆ ಗವರ್ನರರ ನೇಮಕವಾಗುತ್ತಿತ್ತು; ಈಗ ಏಳು ವರ್ಷಗಳಿಗೊಮ್ಮೆ ಆಗುತ್ತದೆ. ಗವರ್ನರ್‌ರ ಅಧೀನತೆಯಲ್ಲಿ ಎರಡು ಕಾಯದೆ ಸಭೆಗಳಿವೆ. ಲೆಜಿಸ್ಲೇಟಿವ ಕೌನ್ಸಿಲಿನಲ್ಲಿ ೧೯ ಮಂದಿ ಸದಸ್ಯರಿರುತ್ತಾರೆ. ಅವರಲ್ಲಿ ೧೦ ಮಂದಿ ಆರಿಸಲ್ಪಟ್ಟವರೂ ೯ ಮಂದಿ ಸರಕಾರದಿಂದ ನೇಮಿಸಲ್ಪಟ್ಟವರೂ ಆಗಿದ್ದಾರೆ. ಐದು ವರ್ಷಗಳಿಗೊಮ್ಮೆ ಈ ಸದಸ್ಯರ ಚುನಾವಣೆಯಾಗುತ್ತದೆ. ಮಧ್ಯದಲ್ಲಿ ಉಪಚುನಾವಣೆಯಾಗುವುದೂ ಇದೆ.

ಪ್ರೌಢಶಿಕ್ಷಣದ ಅನುಕೂಲತೆ

ಕುರಿಯೋಪಿ ಎಂಬ ಸ್ಥಾನದಲ್ಲಿ ಸರಕಾರದ ಕಡೆಯಿಂದ ಒಂದು ಕೋಲೆಜಿನ ಸ್ಥಾಪನೆಯಾಗಿದೆ. ಇದರಲ್ಲಿ ಯಾವ ಭೇದಭಾವವೂ ಇಲ್ಲದೆ ಬಾಲಕರಿಗೆ ಪ್ರೌಢಶಿಕ್ಷಣವನ್ನು ಕೊಡುತ್ತಾರೆ. ಇದರ ಹೆಸರು ರೊಯಲ್ ಕೋಲೇಜು ಎಂದು ಇದೆ. ಇದರ ಅಧೀನದಲ್ಲಿ ಬೇರೆ ೧೦-೧೨ ಶಾಲೆಗಳು ಇವೆ. ಮೊರಿಶಸ್ಸಿನಲ್ಲಿ ಹಿಂದೂ ಮುಸಲ್ಮಾನರು ಭೇದವಿಲ್ಲದೆ ವಾಸವಾಗಿದ್ದಾರೆ.

"ವಿಶ್ವಮಿತ್ರ"

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಮಕ್ಕಳಿಗೆ

ಡೋಂಗರೆ

ಬಾಲಾಮೃತವು

ಆದರ್ಶಕರವಾದ

ಪೌಷ್ಟಿಕ.

ಇದರಿಂದ ಜ್ವರ ಮತ್ತು ಕೆಮ್ಮು ಇಲ್ಲದಂತಾಗಿ

ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಉದರವೇದನೆಯಿಂದಾಗಿ ನಿದ್ದೆಯಿಲ್ಲ!

ಜೀರ್ಣೇಂದ್ರಿಯಗಳು ಸರಿಯಾಗಿ ಕಾರ್ಯ ಮಾಡದಿದ್ದರೆ ದೇಹಕ್ಕೆ ಅನೇಕ ತರದ ರೋಗಗಳು ಬಂದೊದಗುತ್ತದೆಂಬುದು ಹೊಟ್ಟೆನೋವಿನಿಂದ ನರಳುವ ಪ್ರತಿಯೊಬ್ಬನಿಗೆ ತಿಳಿದಿರುವುದು. ರುಚಿ ಇಲ್ಲದಿರುವುದು, ಹಸಿವೆಯಾಗದಿರುವುದು, ನಿತ್ರಾಣ ಆಲಸ್ಯ ಇವೆಲ್ಲವೂ ಹೊಟ್ಟೆನೋವಿನಿಂದ ಉಂಟಾಗಿ ಅದು ಗುಣವಾಗದೆ ಈ ಬಾಧೆಗಳು ಪರಿಹಾರವಾಗುವಂತಿಲ್ಲ

ವಿ ಡಬ್ಲ್ಯು ಆರ್. ಎಂಬವರಿಗೆ ಉದರವೇದನೆಯಿಂದ ರಾತ್ರೆ ನಿದ್ದೆ ಬೀಳುತ್ತಿರಲಿಲ್ಲ ಅವರು ತನ್ನ ಅನುಭವವನ್ನು ಈ ರೀತಿಯಾಗಿ ಬರೆಯುತ್ತಾರೆ. 'ಸಿದ್ಧ ಲೋಕವಿಖ್ಯಾತವಾದ ಮೆಕ್ಲಿನ್ ಬ್ರಾಂಡ ಸ್ಟೊಮಕ್ ಪೌಡರಿನೊದನೆ ನನ್ನ ಸಮಾಗಮ ಹೇಗಾಯಿತೆಂದು ತಿಳಿಸುವುದು ನನ್ನ ಮುಖ್ಯ ಕರ್ತವ್ಯವಾಗಿರುತ್ತದೆ. ಒಂದು ರಾತ್ರಿ ನನ್ನ ಮಾವನ ಕೂಡೆ ನನಗೆ ಹೊಟ್ಟೆನೋವು ಮತ್ತು ಎದೆಯುರಿಯಿಂದಾಗಿ ಆರು ತಿಂಗಳಿಂದ ನಿದ್ದೆಯು ಬೀಳುವುದಿಲ್ಲವೆಂದು ಹೇಳಿದೆ ಅವರು ನನಗೆ ಮೆಕ್ಲಿನ್ ಬ್ರಾಂಡ ಸ್ಟೊಮಕ್ ಪೌಡರನ್ನು ಪರೀಕ್ಷಿಸ ಬೇಕೆಂದು ತಿಳಿಸಿ ಒಂದಿಷ್ಟು ಸೇವಿಸಲು ಕೊಟ್ಟರು. ಆಗ ನಾನು ಅವರಿಗೆ ಹಾಸ್ಯಮಾಡಿ ತಾನು ಎಲ್ಲಾ ಔಷಧಿಗಳನ್ನು ಉಪಯೋಗಿಸಿರುವೆನೆಂದೂ ಆದರೂ ನನ್ನ ಅಜೀರ್ಣ ಮತ್ತು ಎದೆಯುರಿತವು ಗುಣವಾಗಲಿಲ್ಲವೆಂದು ತಿಳಿಸಿದೆ. ಹ್ಯಾಗಾದರೂ ನಾನು ಅದನ್ನು ಪರೀಕ್ಷಿಸಿದೆ, ನನಗೆ ಇದರಿಂದ ಬಹಳ ಗುಣವು ಕಂಡುಬಂದಿರುವುದು ಇದು ಬಹಳ ಆಶ್ಚರ್ಯಕರವಾದ ಔಷಧಿ ನನಗೆ ಈ ಔಷಧಿಯು ಪ್ರಾರಂಭದಲ್ಲಿಯೇ ತಿಳಿಯುತಿದ್ದರೆ ಬಹಳ ಉತ್ತಮವಿತ್ತು.'

ನೀವು ಯಾರಾದರೂ ಮೇಲೆ ಬರೆದವರಂತೆ ಉದರವೇದನೆಯನ್ನೂ ಅಜೀರ್ಣವನ್ನೂ ಹೋಗಲಾಡಿಸುವುದರಲ್ಲಿ ನಿರಾಶರಾಗಿರುವಿರಾದರೆ ಎಷ್ಟೋ ಔಷಧಿಗಳಿಂದ ಗುಣವಾಗದ ಉದರವೇದನೆ, ಎದೆಯುರಿತ ಮೊದಲಾದುವನ್ನು ನಿವಾರಿಸಿ ಸಾವಿರಾರು ಜನರಿಗೆ ಸಂತೋಷವನ್ನೀಯುವ ಈ ಔಷಧಿಯನ್ನು ಉಪಯೋಗಿಸಿರಿ. ಇಂದೇ ಒಂದು ಬಾಟ್ಲಿ ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರನ್ನು ಕೊಂಡುಕೊಳ್ಳಿರಿ. ಬಾಟ್ಲಿಯ ಮೇಲೂ, ಪೆಟ್ಟಿಗೆಯ ಮೇಲೂ

Alex. C. Maclean

ಎಂಬ ಸಹಿಯೂ ಪೆಟ್ಟಿಗೆಯ ಮೇಲೆ ಕೆಂಪು ಸೀಲು ಇದ್ದರೆ ಮಾತ್ರ ಅದು ಖಾತ್ರಿಯಾದ ಔಷಧಿಯಾಗಿರುತ್ತದೆ ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ ಪೆಟ್ಟಿಗೆಯೊಳಗಿರುವ ಬಾಟ್ಲಿಗಳಲ್ಲಿ ದೊರಕುತ್ತದೆ (ಹುಡಿ ಯಾ ಮಾತ್ರೆ ರೂಪದಲ್ಲಿ) ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

700

ಮಂಗಳೂರು ಸಮಾಚಾರ

ಸಂಸ್ಕೃತಭಾಷಣ:—ಗವರ್ನಮೆಂಟ್ ಕಾಲೇಜಿನ ಸೀನಿಯರ್ ಸಂಸ್ಕೃತ ಸಂಘದ ಪ್ರಾರಂಭ ಭಾಷಣವು ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳಿಂದ ತಾ. ೨೬–೭–೩೯ರಂದು ಕೊಡಲ್ಪಟ್ಟಿತು ಭಾಷಣಗಾರರು ತಮ್ಮ ಉಪನ್ಯಾಸದಲ್ಲಿ ಸಂಸ್ಕೃತ ಭಾಷೆಯ ಪ್ರಾಚೀನತೆ, ಇಂದಿನ ಅವನತಿಯ ಕಾರಣ, ಹಿಂದೂದೇಶದಲ್ಲಿ ಸಂಸ್ಕೃತದ ವಿಶಿಷ್ಟಸ್ಥಾನ ಇವುಗಳ ಕುರಿತು ವಿವರಿಸಿ, ಇಂದಿನ ರಾಷ್ಟ್ರೀಯತೆಯ ಕಾಲದಲ್ಲಿ ಸಂಸ್ಕೃತ ಭಾಷೆಯ ಪುನರುಜ್ಜೀವನಕ್ಕಾಗಿ ಸಂಸ್ಕೃತಾಭಿಮಾನಿಗಳು ಯತ್ನಿಸಬೇಕಾಗಿ ಹೇಳಿದರು

ಉಪನ್ಯಾಸ:—ಇಂಗ್ಲಾಂಡಿನಲ್ಲಿ ಕ್ಷಯರೋಗದ ವಿಚಾರದಲ್ಲಿ ಅನುಭವ ಪಡೆದು ಮಂಗಳೂರಿಗೆ ಹಿಂತಿರುಗಿದ್ದ ಡಾ ಎಮ್ ಉಮೇಶರಾವ್ ಎಲ್ ಎಮ್ ಎಂಡ್ ಎಸ್ (ಮದ್ರಾಸ್) ಮತ್ತು ಟಿ. ಡಿ ಡಿ (ವೇಲ್ಸ್) ಇವರು ಮಹಿಳಾ ಸಭೆಯಲ್ಲಿ "ಹೆಂಗಸರು ಮತ್ತು ಮಕ್ಕಳಲ್ಲಿ ಕ್ಷಯರೋಗ" ಎಂಬ ವಿಚಾರವಾಗಿ ಭಾಷಣವಿತ್ತರು.

ಜನ್ಮ ಟಾಪು:—ಅರೂರು ಸೀತಾರಾಮ ಎಂಬಾತನಿಗೆ, ನಮ್ಮ ಜಿಲ್ಲಾ ಜಡ್ಜರಾದ ಶ್ರೀ ರಾಜಗೋಪಾಲಾಚಾರಿಯವರು ತಾ ೨೧ರಂದು, ಕೊಲೆಪಾತಕದ ನಿಮಿತ್ತ, ಜನ್ಮ ಟಾಪು ಶಿಕ್ಷೆಯನ್ನು ವಿಧಿಸಿದರು. ಕಳೆದ ಫೆಬ್ರವರಿ ೧೭ರಂದು ಅಪಾದಿತ ಸೀತಾರಾಮನ ತನ್ನ ಹೆಂಡತಿ ಸರಸಮ್ಮಯಾನೆ ಸರಸ್ವತಿಯೊಡನೆ ಹೊಲದಲ್ಲಿ ಮೇಣಸು ಕೊಯ್ಯುತ್ತಿದ್ದ ಆ ವೇಳೆಗೆ ಅವಳ ಬೆಂಡೋಲೆಯನ್ನು ಅಡವಿಡಲು ಕೊಡುವಂತೆ ಕೇಳಲು, ಆಕೆ ನಿರಾಕರಿಸಲು, ಅಪಾದಿತನು ಅವನ ಕತ್ತಿಗೆಯನ್ನು ಚೂರಿಯಿಂದ ತಿವಿದನು ಇದರಿಂದಾಗಿ ಆಕೆ ತಾ ೨೦ರಂದು ಉಡುಪಿ ಆಸ್ಪತ್ರೆಯಲ್ಲಿ ಮೃತಳಾದಳು ಅಪಾದಿತನು, ಮನಬಂದಂತೆ ಹಣ ವ್ಯಯಿಸುತ್ತಿದ್ದ, ಜೂಗಾರಿಕೋರನೂ ಆಗಿದ್ದನಂತೆ ಅಲ್ಲದೆ, ಹಿ ದೊಮ್ಮೆ ಹೆಂಡತಿಯ ಬೆಂಡೋಲೆ ಅಡವಿಟ್ಟಿದ್ದನಂತೆ ಅಪಾದಿತನು, ತಾನ ಅಪರಾಧ ಮಾಡಿಲ್ಲವೆಂದು ವಾದಿಸಿದ ಎಸೆಸರರು ಅಪಾದಿತ ನಿರಪರಾಧಿಯೆಂದು ಅಭಿಪ್ರಾಯ ಪಟ್ಟರೂ, ಜಡ್ಜರು ಆತ ಅಪರಾಧಿ, ಆದರೆ ಪರಿಣಾಮ ತಿಳಿಯದೆ ದುಡುಕಿ ಮಾಡಿದ ಅಪರಾಧವಾದುದರಿಂದ ಜನ್ಮಾಂತರ ಶಿಕ್ಷೆ ಕೊಟ್ಟಿದ್ದೇನೆ ಎಂದು ಅಭಿಪ್ರಾಯಪಟ್ಟರು.

ಬೀಡಿ ಕೆಲಸಗಾರರು:—ಜಿಲ್ಲಾ ಬೀಡಿ ವರ್ಕರ್ಸ್ ಯೂನಿಯನಿನ ಸಭೆಯೊಂದು, ತಾ ೨೩ನೇ ಸಂಜೆ ೬ಕ್ಕೆ ಶ್ರೀ. ಎಸ್ ಎನ್ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಜರಗಿತು ಆಗೋಸ್ತು ೧ನೇ ತಾರೀಕಿನಿಂದ ಜಾರಿಯಲ್ಲಿ ಬರಲಿರುವ ಹೊಗೆಸೊಪ್ಪಿನ ಕರದಿಂದಾಗಿ, ಮಾಲಕರು ಕೆಲಸಗಾರರ ಮೇಲೆ ಈ ಕರದ ಭಾರವನ್ನು ಹೊರಿಸಿ, ಅವರ ವೇತನದಲ್ಲಿ ಕಡಿತ ತರಲೂ ಬಹುದಾದುದರಿಂದ, ಕೆಲಸಗಾರರ ಹಿತರಕ್ಷಣೆಯ ನಿಮಿತ್ತ ತಕ್ಕ ಕಾರ್ಯಕ್ರಮ ಕೈಕೊಳ್ಳಲು ಯೋಚಿಸಲಾಯಿತು

ಮಲಬಾರಿನ ಬೀಡಿ ಕೆಲಸಗಾರರ ಹಾಗೂ ಇಲ್ಲಿನವರ ಸ್ಥಿತಿ ಒಂದೇ ರೀತಿಯದಿರುವುದರಿಂದ, ಅಲ್ಲಿನವರ ಪರಿಷತ್ತೊಂದು, ಜುಲೈ ೩೦ಕ್ಕೆ ಜರಗಲಿರುವುದರಿಂದ, ಈ ಜಿಲ್ಲೆಯ ಬೀಡಿ ಕೆಲಸಗಾರರ ಕುರಿತಾದ ವಿಚಾರ ವಿವೇಚನೆಯ ಬಗೆಗೆ ಸಂಘದ ಅಧ್ಯಕ್ಷರನ್ನು ಆ ಕಡೆ, ಪರಿಷತ್ತಿಗೆ ಕಳುಹುವದಾಗಿ ನಿರ್ಣಯಿಸಲಾಯಿತು ಈ ವಿಷಯದಲ್ಲಿ, ಕೆಲಸಗಾರರ ಹಿತರಕ್ಷಣಾ ಬಗೆಗೆ ಕಲೆಕ್ಟರರು, ಲೇಬರ್ ಆಫೀಸರ್, ಮಂತ್ರಿಗಳೇ ಮುಂತಾದವರಿಗೆ ಮನವಿ ಮಾಡಿಕೊಳ್ಳಲೂ ಯೋಚಿಸಲಾಯಿತು

ನಮ್ಮ ಜಿಲ್ಲೆಯ ವಿದ್ಯಾಧಿಕಾರಿಗಳು:—ನಮ್ಮ ಡಿ ಇ ಓ ಗಳಾಗಿ ಶ್ರೀ. ಯು ಕಣ್ಣಪ್ಪ ಎಂ ಎ. ಎಲ್ ಟಿ ಯವರು ವರ್ಗಾಯಿಸಲ್ಪಟ್ಟಿದ್ದಾರೆ

ಆಗಮನ:—ಪ್ರಸಿದ್ಧ ಸರ್ಜನರಾದ ಕರ್ನಲ್ ಮಿರಾಜ್‌ಕರ್‌ರವರು ಮಂಗಳೂರಿಗೆ ಚಿತ್ತೈಸಿರುವರು

೧೩ನೇ ಬೆಂದೂರು ವಾರ್ಡ್ ತೆರಿಗೆದಾರರ ಸಂಘ:—ಕಳೆದ ತಾ. ೧೫ರಿಂದ ಸದಸ್ಯರನ್ನು ಸೇರಿಸುವ ಕಾರ್ಯ ನಡೆಯುತ್ತಿದೆ. ಆಗೋಸ್ತು ತಿಂಗಳ ಆದಿಭಾಗದಲ್ಲಿ ಸಂಘಕ್ಕೆ ಸೇರಿದ ಎಲ್ಲಾ ಮತದಾರರ ಮಹಾ ಸಭೆಯು ಸೇರಿ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ಆರಿಸುವುದಲ್ಲದೆ, ಈ ವರ್ಷ ಅನುಸರಿಸಬೇಕಾದ ಕಾರ್ಯಕ್ರಮವನ್ನು ನಿರ್ಧರಿಸಲಾಗುವುದು ತಾತ್ಕಾಲಿಕ ಕಾರ್ಯನಿರ್ವಾಹಕ ಮಂಡಳಿಯವರು, ಆಗೋಸ್ತು ತಾ. ೭ರಿಂದ ಹಿಂದಿ ಕ್ಲಾಸನ್ನು, ರಾತ್ರಿ ಶಾಲೆಯನ್ನೂ ತೆರೆಯಬೇಕೆಂದು ಯೋಚಿಸಿದ್ದಾರೆ ಸೇರಲಿಷ್ಟವುಳ್ಳವರು ರಾಷ್ಟ್ರಬಂಧು ಕಾರ್ಯಾಲಯದಲ್ಲಿಯಾಗಲಿ ಅಥವಾ ಪ್ರೊ ಎಸ್ ರಾಮಚಂದ್ರ ಅಯ್ಯರ್, ನವ್ಯಾಸಿ ಗುಡ್ಡೆ ರೋಡ್, ಇವರ ಹತ್ತಿರವಾಗಲಿ ತಿಳಿಸಬಹುದು ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಾಗಲಿ ಅಥವಾ ಆರ್ಯ ಸಮಾಜ ಮಂದಿರದಲ್ಲಾಗಲಿ ಕ್ಲಾಸುಗಳು ಏರ್ಪಡಿಸಲ್ಪಡುವುವು, ಎಂದು ಸಂಬಂಧಿಸಿದವರು ತಿಳಿಸುತ್ತಾರೆ

ಮಂಗಳೂರಿನ "ಕೆನರಾ ಸ್ಕೂಲ್ ಆಫ್ ಕಮ್ಮರ್ಸ್" ಆಡಳಿತದಾರರು ಉಚ್ಚ ಬ್ಯಾಂಕಿಂಗ್ ವಿಧಾನ, ಬುಕ್ ಕೀಪಿಂಗ್ ಮೊದಲಾದ ವಿಷಯಗಳನ್ನು ಇದೇ ಆಗೋಸ್ತಿನಿಂದ ಪ್ರಾರಂಭಿಸುವರು ಅದಕ್ಕಾಗಿ ಡಿಪ್ಲೊಮಾ ಪಡೆದವರನ್ನು ನೇಮಿಸಲಾಗಿದೆ ನಮ್ಮ ಅದಿಪತ್ಯಗಳಲ್ಲಿ ಇಂಥಾ ಸಂಸ್ಥೆಗಳು ಮೂರು ಮಾತ್ರ ಇವೆ.

ಜಿಲ್ಲಾ ಕಲೆಕ್ಟರ್:—ಜಿಲ್ಲಾ ಕಲೆಕ್ಟರರಾಗಿರುವ ದಿವಾನ್ ಬಹದ್ದೂರ್ ಶ್ರೀ ಎಮ್ ವಿ ವೆಲ್ಲೋಡಿಯವರು ಇದೇ ಆಗೋಸ್ತು ತಾ ೧೭ರಿಂದ ೨೩ನೇ ಡಿಸೆಂಬರದ ವರೆಗೆ ರಜೆ ಪಡೆಯುವರು ಅನಂತರ ಇವರು ಕೆಲಸದಿಂದ ನಿವೃತ್ತರಾಗಲಿರುವರು

ಪ್ರೊ ರಾಮಚಂದ್ರ ಅಯ್ಯರ್‌ರವರು:—ಕಳೆದ ಎಪ್ರಿಲ್ ತಿಂಗಳಲ್ಲಿ ದ ಕ ಜಿಲ್ಲಾ ಟೀಚರ್ಸ್ ಗಿಲ್ಡಿನವರು ಪ್ರೊ ಎಸ್ ರಾಮಚಂದ್ರ ಅಯ್ಯರರನ್ನು ಮದ್ರಾಸಿನ ಸೌತ್ ಇಂಡಿಯನ್ ಟೀಚರ್ಸ್ ಯೂನಿಯನಿನ ಎಕ್ಸಿಕ್ಯೂಟಿವ್ ಬೋರ್ಡಿಗೆ ಆರಿಸಿದ್ದರು ಈಗ ಅವರನ್ನು ಆ ಸಂಸ್ಥೆಯ ವರ್ಕಿಂಗ್ ಕಮಿಟಿಗೆ ಚುನಾಯಿಸಲಾಗಿದೆ

ದೀನಬಂಧು ಅನಾಥಾಶ್ರಮಕ್ಕೆ ಉದಾರ ದಾನ:—ಸ್ಥಳೀಯ ಏಕಮಾತ್ರ ಸಂಸ್ಥೆ ದೀನಬಂಧು ಅನಾಥಾಶ್ರಮದ ಪ್ರಧಾನ ಸಂಚಾಲಕರಾದ ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಯವರ ವಿಶೇಷ ವಿನಂತಿಯ ಮೇರೆಗೆ ಹಿಂದೂ ಧರ್ಮದ ಪ್ರಾಣಸ್ವರೂಪರೂ, ಅಖಿಲ ಭಾರತ ವರ್ಷದಲ್ಲಿ ಪ್ರಸಿದ್ಧ ದಾನವೀರರೂ ಆಗಿರುವ ಶ್ರೀಮಾನ್ ಸೇಠ್ ಶ್ರೀ ಜುಗಲ್ ಕಿಶೋರ್ ಬಿರ್ಲಾರವರು ಈ ಆಶ್ರಮಕ್ಕೆ ರೂ ೫೦ನ್ನು ನಗದಾಗಿ ಕೊಟ್ಟಿದ್ದಾರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ

ತಾಲೂಕು ಸಮಾಚಾರ

ಉಡುಪಿ

ತಾ ೨೦ಕ್ಕೆ ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಸಾಧಾರಣ ಸಭೆಯು ನಗರಾಧ್ಯಕ್ಷರಾದ ಶ್ರೀ ಎ ಲಕ್ಷ್ಮೀನಾರಾಯಣರಾಯರ ಸಭಾಧಿಪತ್ಯದಲ್ಲಿ ಜರಗಿತು ೧೬ರಲ್ಲಿ ೧೩ ಸದಸ್ಯರು ಹಾಜರಿದ್ದರು ಚಾಲ್ತಿ ವರ್ಷದ ಆಯುವ್ಯಯದ ಅಂದಾಜು ಪತ್ರಿಕೆಯ ಮೇಲೆ ಸರಕಾರದ ಸೂಚನೆಗಳು ರಿಕಾರ್ಡು ಮಾಡಲಾಯಿತು ಉಡುಪಿಯಲ್ಲಿ ನಿರಕ್ಷರತಾ ನಿವಾರಣೆ ಒಗ್ಗೆ ಜರಗಿಸಲಾಗುವ ಶಾಲೆಗೆ ಧನಸಹಾಯವು ಮಂಜೂರು ಮಾಡಲ್ಪಟ್ಟಿತು. ಸರಕಾರಿ ಆಸ್ಪತ್ರೆಯಿಂದ ರೋಮನ್ ಕೆಥೊಲಿಕ್ ಇಗರ್ಜಿಯ ವರೆಗೆ ನಿರ್ಮಿಸಲಾದ ರಸ್ತೆ ಬದಿಯಲ್ಲಿನ ಕಾಲ್ದಾರಿಯ ಕಾಮಗಾರಿಕೆಯು ಮಂಜೂರುಮಾಡಲಾದುದಲ್ಲದೆ ಅದನ್ನು ಮುಂದರಿಸಿ ಡಿ ಮು ಕೋರ್ಟಿನ ಬಳಿ ವರೆಗೆ ಮುಂದರಿಸಬೇಕೆಂದಾಯಿತು

ತಾ ೨೧ಕ್ಕೆ ಸಹಾ ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಸಾಧಾರಣ ಸಭೆಯು ಅಧ್ಯಕ್ಷರಾದ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು ಸಾಮಾನ್ಯ ವಿಷಯಗಳೂ ಅಪ್ಪೀಲುಗಳೂ ವಿವೇಚಿಸಲಾದವು.

ಕುಂಬಳೆ

ಜಿಲ್ಲಾ ಬೋರ್ಡು ಶಾಲೆಗಳ ಉಪಾಧ್ಯಾಯರ ಅವಘಾಹನೆಗೆ ಶಾಲೆಗಳಲ್ಲಿ ಪಾರಶ್ವರವಾಗುವುದು ಜೂನ್ ತಿಂಗಳಲ್ಲಿ ಅದರಿಂದ ಬಡ ಮುಸ್ಲಿಂ ವಿದ್ಯಾರ್ಥಿಗಳಿಗೆ ಈ ವರೆಗೆ ಪುಸ್ತಕ ಸ್ಲೇಟುಗಳು ಸಿಕ್ಕದೆ ಅನೇಕ ಮಕ್ಕಳು ಶಾಲೆ ಬಿಡಬೇಕಾಯ್ತು ಇನ್ನನೇಕರು ಪುಸ್ತಕ ಸ್ಲೇಟುಗಳಿಲ್ಲದೆ ಕಷ್ಟಪಡುತಿದ್ದಾರೆ. ಈ ವಿಷಯ ನಾನು ವಿಚಾರಿಸಿದಲ್ಲಿ ಅನೇಕ ಉಪಾಧ್ಯಾಯರು ಇದಕ್ಕಾಗಿ ಬೋರ್ಡಿಗೆ ಬರೆದದ್ದಲ್ಲದೆ ಈ ವರೆಗೆ ಉತ್ತರ ಸಿಕ್ಕಲಿಲ್ಲ ಇನಾದರೂ ಹುಕುಂ ಸಿಕ್ಕದಿರುವಲ್ಲಿ ತಿರುಗಿ ಬರೆದು, ಬರೆಯದಿರುವವರು ಇನ್ನಾದರೂ ಬರೆದು, ಸಾಧ್ಯವಿದ್ದವರು ಬೋರ್ಡು ಆಫೀಸಿಗೆ ಹೋಗಿಯಾದರೂ ಹುಕುಂ ಪಡೆದು ಆದಷ್ಟು ಬೇಗನೆ ಪುಸ್ತಕ ಸ್ಲೇಟುಗಳು ಲಭಿಸುವಂತೆ ಯತ್ನಿಸಬೇಕಾಗಿರತ್ತದೆ ಈ ವಿಷಯದಲ್ಲಿ ನನ್ನ ಸಹಾಯ ಅವಶ್ಯವಿದ್ದರೆ ನನಗೆ ತಿಳಿಸಿದ್ದಲ್ಲಿ ನನ್ನಿಂದಾಗುವಷ್ಟನ್ನು ಮಾಡುವದಕ್ಕೆ ಸಿದ್ಧನಿದ್ದೇನೆ ಎಂದು ಜಿಲ್ಲಾ ಮುಸ್ಲಿಂ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ಎಂ ಸಿ ಮಮ್ಮಿಯವರು ತಿಳಿಸುತ್ತಾರೆ

ಪೆರಡಾಲ

ಮಹಾಜನ ಸಂಸ್ಕೃತ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘದ ಒಂದು ಕಮಿಟಿ ಸಭೆಯು ತಾ ೧೬–೭–೩೯ರಲ್ಲಿ ಸದ್ರಿ ಶಾಲೆಯಲ್ಲಿ ಜರಗಿತು ಕಮಿಟಿಯ ಮೆಂಬರರಲ್ಲೊಬ್ಬರಾದ ಶ್ರೀ ಯಂ ಜಿ ಮಹಲಿಂಗ ಭಟ್ಟರು, ಸಂಘದ ಅಧ್ಯಕ್ಷರಾದ ಶ್ರೀ ಪರ್ತಾಜೆ ವೆಂಕಟರಮಣ ಭಟ್ಟ, ಇವರು ತಮ್ಮ ಸ್ವಂತ ಮನೆಯಿಂದ ಕಾರ್ಯಕರ್ತರಾಗಿ ಹೊರಟು ಹೋಗುವ ಸಮಯ ದಾರಿಯಲ್ಲಿ ಅದೃಷ್ಟವಶಾತ್ ಅಡಿ ತಪ್ಪಿ ಬಿದ್ದು ಕಾಲೊಂದು ಮುರಿದ ಹಾಗೂ ವೈದ್ಯಶಾಲೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವ ಶೋಕ ವಾರ್ತೆಯನ್ನು ಸೂಚಿಸಿದರು

ಮಲ್ಪೆ

ಮಲ್ಪೆ ಬಂದರವನ್ನು ವೃದ್ಧಿಗೊಳಿಸಲು 60,000 ರೂಪಾಯಿಗಳನ್ನು ಗುಂಜೂರು ಮಾಡಲಾಗಿದೆ ಬೇಗನೇ ಕೆಲಸಕ್ಕೆ ಪ್ರಾರಂಭಿಸಲಾಗುವುದು. ಪಶ್ಚಿಮ ಕರಾವಳಿಯಲ್ಲಿ ಇದು ಅತ್ಯಂತ ಸುರಕ್ಷಿತ ಬಂದರವೆಂದು ತಿಳಿಯಲಾಗಿದೆ.

ಕಾಸರಗೋಡು

ನೀಲೇಶ್ವರ—ಇಂಗ್ಲಿಷ್ ತಾರ್ಕಿಕ ಸಂಘ ಇಲ್ಲಿಯ ರಾಜಾಸ್ ಹೈಸ್ಕೂಲಿನಲ್ಲಿ ಇಂಗ್ಲಿಷ್ ತರ್ಕ ಸಂಘದ ಉದ್ಘಾಟನಾ ಉತ್ಸವವನ್ನು ಕಳೆದ ತಾ ೧೫ನೇ ಶನಿವಾರ ಶ್ರೀ ವರದ ರಾಜುಲು ನಾಯ್ಡು, ರೆವಿನ್ಯೂ ಡಿವಿಜನಲ್ ಆಫೀಸರ, ಪುತ್ತೂರು ಅವರು ನೆರವೇರಿಸಿದರು ವಿದ್ಯಾರ್ಥಿಗಳ ಕರ್ತವ್ಯದ ಕುರಿತು ಭಾಷಣ ಮಾಡುತ್ತಾ ಅವರು ಸಂಸ್ಕೃತ ಭಾಷಾಭ್ಯಾಸದ ಅವಶ್ಯತೆಯನ್ನು ವಿವರಿಸಿ, ಇಂದಿನ ವಿದ್ಯಾಭ್ಯಾಸದ ಕುಂದುಕೊರತೆಗಳನ್ನು ತೋರಿಸಿ, ರಾಷ್ಟ್ರೀಯ ರಂಗಕ್ಕೆ ವಿದ್ಯಾರ್ಥಿಗಳು ದುಡುಕಿ ದುಮುಕಬಾರದೆಂದು ಹೇಳಿದರು.

ಕುಂದಾಪುರ

ನೆರೆಯಲ್ಲಿ ಹೆಂಗಸರಿಬ್ಬರ ಮರಣ—ಕಳೆದ ತಾ ೧೯ರಲ್ಲಿ ಕುಂದಾಪುರದ ಸಮೀಪದ ಹಲ್ನಾಡು ಗ್ರಾಮದಲ್ಲಿ ನೆರೆ ಬಂದು ಬೈಲಿನ ಗದ್ದೆಗಳೆಲ್ಲಾ ಮುಳುಗಿ ಜನರು ಎಷ್ಟೋ ಸ್ಥಳಗಳಲ್ಲಿ ಗದ್ದೆಗಳಲ್ಲೂ ದೋಣಿಯ ಮೇಲೆ ಹೋಗಬೇಕಾಗಿತ್ತು ಹಾಗೆ ಹೋಗುತ್ತಿದ್ದ ದೋಣಿಯೊಂದು ಮುಳುಗಿ ಆ ದೋಣಿಯಲ್ಲಿದ್ದ ಕಜನರು ನೀರು ಪಾಲಾದರು ಐವರು ಹೇಗೋ ಪಾರಾಗಿರುವರು ಇಬ್ಬರು ಹೆಂಗಸರು (ಒಂದೇ ಮನೆಯವರು) ಮುಡಿದರೆಂದು ತಿಳಿಯುತ್ತದೆ

ಅಕಾಲ ಮರಣ—ಬಡಾಕೆರೆಯೆಂಬಲ್ಲಿ ತೆಂಗಿನ ಮರವೊಂದು ಬಿದ್ದು ಒಬ್ಬನು ಸತ್ತು ಹೋದನೆಂದು ತಿಳಿದುಬಂದಿದೆ

ಹಿಂದೀ ಕ್ಲಾಸುಗಳು—ಸ್ಥಳೀಯ ಕರ್ನಾಟಕ ಸಾಹಿತ್ಯ ಸಂಘ, ಮೂಕಾಂಬಾ ಟ್ರ್ಯಾನ್ಸ್‌ಲೇಟಿಂಗ್ ಶಾಲೆ, ವಜ್ರಾಂಗ ಬಲಿ ವ್ಯಾಯಾಮಶಾಲೆ, ಈ ೩ ಸ್ಥಳಗಳಲ್ಲಿ ಇಲ್ಲಿಯ ಹಿಂದೀ ಪ್ರಚಾರಕರಾದ ಶ್ರೀ ರಾಮಕೃಷ್ಣ ನಾಡರಿಂದ ಹಿಂದೀ ಕ್ಲಾಸುಗಳ ತೆರೆಯಲ್ಪಟ್ಟಿವೆ ೩೦ಕ್ಕಿಂತಲೂ ಹೆಚ್ಚಾದ ವಿದ್ಯಾರ್ಥಿಗಳು ಹಿಂದೀ ಕಲಿಯುತ್ತಿದ್ದಾರೆ

ಪುತ್ತೂರು

ರಾಮಕುಂಜ—ಇಲ್ಲಿಯ ಸಂಸ್ಕೃತ ಪಾಠಶಾಲೆಯ, ಬೋರ್ಡಿಂಗಿನ ವಿದ್ಯಾರ್ಥಿಗಳಿಂದ, ಇತ್ತೀಚೆಗೆ ಒಂದು ತಾರ್ಕಿಕ ಸಂಘವು ಸ್ಥಾಪಿಸಲ್ಪಟ್ಟು, ತನ್ಮೂಲಕ ತಮ್ಮ ವಾಕ್ಪಾಟವವನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಪಡುವ ವಿಷಯವು ಬಹಳ ಸಂತೋಷಕರವಾಗಿದೆ

ಕಾರ್ಕಳ

ಇಲ್ಲಿಯ ಪ್ರಸಿದ್ಧ ವಕೀಲರೊಬ್ಬರ ಗುಮಾಸ್ತರಾಗಿದ್ದ ಶ್ರೀ ವಾಸುದೇವರಾವ್ ಎಂಬವರು ಹೈದರಾಬಾದಿನ ಆರ್ಯ ಸತ್ಯಾಗ್ರಹದಲ್ಲಿ ಭಾಗವಹಿಸುವದಕ್ಕೋಸ್ಕರ ಶೋಲ್ಲಾಪುರಕ್ಕೆ ಹೊರಟುಹೋಗಿರುತ್ತಾರೆ ತಾ ೩೦ರಂದು ಇಲ್ಲಿ ಹೈದರಾಬಾದ ದಿನಾಚರಣೆಯು ಪ್ರಭಾತ ಫೇರಿ, ಸಭೆ, ಭಾಷಣಾದಿಗಳ ಮೂಲಕ ಸಾಂಗವಾಗಿ ನಡೆಯಿತು

ಕರ್ನಾಟಕ ಹರಿಜನ ಸೇವಾಸಂಘದ ಕಾರ್ಯದರ್ಶಿಗಳೂ, ಅಖಿಲಭಾರತ ಹರಿಜನ ಸೇವಾ ಸಂಘದ ಸೇವಕರಲ್ಲೊಬ್ಬರೂ ಆದ ಇಲ್ಲಿಯ ವಕೀಲ ಶ್ರೀ ಕೆ. ಪಿ ಕಾಮತ್ ಯೆಂ.ಎ. ಬಿ. ಯಲ್.ರವರು ಮದ್ರಾಸು ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನ ಕಡೆಯಿಂದ ಮಂಜೇಶ್ವರಂ ಶ್ರೀ ಮದನಂತೇಶ್ವರ ದೇವಸ್ಥಾನದ ಕಮಿಶನರರಾಗಿ ನೇಮಕವನ್ನು ಹೊಂದಿದ್ದಾರೆ

ಕರ್ನಾಟಕ ಸಮಾಚಾರ

ನಂಜನಗೂಡು

ಶ್ರೀ ಸೋದೇ ಮಠದ ಶ್ರೀ ಶ್ರೀಪಾದಂಗಳವರು.—ಶ್ರೀಪಾದಂಗಳವರು "ಸತ್ಕರ್ಮ ಮತ್ತು ಸ್ತ್ರೀ ಶಿಕ್ಷಣ"ವೆಂಬ ಈ ಎರಡು ವಿಷಯಗಳಲ್ಲಿ ತಾ. 23–7–39ನೇ ದಿನ ಅಪರಾಹ್ನ ಘಂಟೆ 5–30ರಿಂದ ಒಂದೂವರೆ ತಾಸು ತನಕ ನಂಜನಗೂಡು ಶ್ರೀ ರಾಘವೇಂದ್ರ ಮಠದಲ್ಲಿ ಉಪನ್ಯಾಸವಿತ್ತರು. ಈ ಉಪನ್ಯಾಸಕ್ಕೆ ಲೌಕಿಕ ವೈದಿಕ ಸ್ತ್ರೀಪುರುಷರೆಲ್ಲರೂ ಸೇರಿದ್ದರು ಸತ್ಕರ್ಮ ಮತ್ತು ಸ್ತ್ರೀಶಿಕ್ಷಣವೆಂಬ ಸ್ವರಸವಾದ ಶ್ರೀಪಾದಂಗಳವರ ಉಪನ್ಯಾಸವು ಜನಸಮುದಾಯಕ್ಕೆಲ್ಲಾ ಆನಂದವನ್ನುಂಟುಮಾಡಿತು.

ಬೆಂಗಳೂರು

ಕೈಗಾರಿಕೆ ಮತ್ತು ವಾಣಿಜ್ಯ ಬೋರ್ಡಿನ ಸಭೆ:—ಕೈಗಾರಿಕೆ ಮತ್ತು ವಾಣಿಜ್ಯ ಬೋರ್ಡಿನ ಸಭೆಯು ಪ್ರಥಮ ಸಚಿವರಾದ ರಾಜಮಂತ್ರ ಪ್ರವೀಣ ಎನ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಜುಲೈ ೧೫ನೇ ತಾರೀಖು ಮಧ್ಯಾಹ್ನ ನಡೆಯಿತು.

ಕನ್ನಡ ಟೈಪ್‌ರೈಟರ್ ವ್ಯವಸ್ಥೆಗೆ ಉತ್ತೇಜನ ಕೊಡುವ ವಿಚಾರವನ್ನು ಬೋರ್ಡು ಪರಿಶೀಲಿಸಿತು.

ಬೆಳಗಾವಿ ಕೆಮಿಕಲ್ ವಾರ್‌ಫೇರ್ ಸ್ಕೂಲು:—ಈ ಶಾಲೆಯಲ್ಲಿ ಖಾಲಿಬಿದ್ದ ಸ್ಥಳಗಳಿಗೆ, ಬೊಂಬಾಯಿ ಮದ್ರಾಸ್ ಮತ್ತು ಕಲ್ಕತ್ತಾ ಪ್ರಾಂತಿಕ ಸರಕಾರಗಳು ಆರಿಸಿದ ಜನರನ್ನೇ ತೆಗೆದುಕೊಳ್ಳುವವರಿದ್ದಾರೆಂದು ತಿಳಿದುಬರತ್ತದೆ ಈ ಶಾಲೆಯಲ್ಲಿ ಅವರಿಗೆ ವಿಮಾನದಾಳಿಯಿಂದ ಸಂರಕ್ಷಿಸಿಕೊಳ್ಳುವದನ್ನೂ ಮತ್ತು ವಿಮಾನದಾಳಿಯಿಂದ ಅಪಾಯ ಹೊಂದಿದವರನ್ನು ರಕ್ಷಿಸುವ ಉಪಾಯಗಳನ್ನು ಕಲಿಸುವರು

ಅಖಿಲ ಭಾರತ ಮಹಿಳಾ ಪರಿಷತ್ತಿನ ಸಭೆ:—ಅಖಿಲ ಭಾರತ ಮಹಿಳಾ ಪರಿಷತ್ತಿನ ಸಭೆಯು ಜುಲೈ ೨೯ಕ್ಕೆ ಸಾಂಗಲಿಯಲ್ಲಿ ನಿಶ್ಚಿತವಾಗಿ ಕೂಡುವದು ಆ ಸಮಯದಲ್ಲಿ ಒಂದು ಗೃಹ ಕೈಗಾರಿಕೆಗಳ ಪ್ರದರ್ಶನವನ್ನು ಏರ್ಪಡಿಸುವ ವ್ಯವಸ್ಥೆ ನಡೆದಿದೆ

ಉದ್ಘಾಟನೆ:—ಬೊಂಬಾಯಿ ಸರಕಾರದ ಪಬ್ಲಿಕ್ ವರ್ಕ್ಸ ಖಾತೆಯ ಮಂತ್ರಿಗಳಾದ ಮಾನ್ಯ ನೂರಿಯವರು ಧಾರವಾಡದ ಸಾಕ್ಷರತಾ ಪ್ರಚಾರದ ಚಳವಳಿಯ ಉದ್ಘಾಟನೆಯನ್ನು ಮಾಡುವವರಿದ್ದಾರೆ.

ವಿಜಾಪುರ

ಪುರೋಗಾಮಿ ಮಂಡಲದ ಸ್ಥಾಪನೆ—ಇಲ್ಲಿ ಪುರೋಗಾಮಿ ಕಾಂಗ್ರೆಸ್ ಮಂಡಲವನ್ನು ಸ್ಥಾಪಿಸಲು ಶ್ರೀ. ದಾಮಣ್ಣಾ ಮಾಮುದಪಲ್ಲಿ, ಇವರು ಬಹಳ ಉತ್ಸಾಹದಿಂದ ಕಾರ್ಯ ನಡೆಸಿದ್ದಾರೆ. ಶ್ರೀ. ಮಾಮುದಪಲ್ಲಿಯವರು ನಾಗರಿಕರಿಗೆ ತಮ್ಮ ಕಾರ್ಯದಲ್ಲಿ ಸಹಕರಿಸಲು ಕೇಳಿಕೊಂಡಿದ್ದಾರೆ.

ಭಾರತ ಸರಕಾರಕ್ಕೆ ಗಾಂಧಿಜಿಯವರ ಉಪದೇಶ ಬೇಕು

ನೆಹರುಗಳು ಸಿಲೋನಿನಿಂದ ಮರಳಿದರು
ಹೈದರಬಾದು ರಾಜಕೀಯ ಸುಧಾರಣೆ
ಗಡಿನಾಡಿನಲ್ಲಿ ಖಾದೀ ಪ್ರಚಾರಕಾರ್ಯ



ಸಿಲೋನಿನಲ್ಲಿ ನೆಹರುಗಳು

ನೆಹರುಗಳು ಸಿಲೋನಿನ ಮಂತ್ರಿಮಂಡಲದೊಡನೆ ಮಾತುಕತೆ ನಡೆಸಿದಂತೆ, ಹಿಂದೀಯರನ್ನು ಹೊರಹಾಕುವ ನೋಟೀಸನ್ನು ಸರಕಾರವು ಕೊಡುವ ನಿಶ್ಚಯವನ್ನು ಹಿಂದೆಗೆದಿರುವುದಾಗಿಯೂ, ರಿಪೇಟ್ರಿಯೇಶನ್ ಬಿಲ್ಲನ್ನು ತಿರಿಗಿ ವಿಚಾರಿಸಿ, ತಿದ್ದುಪಡಿ ಮಾಡುವುದಾಗಿಯೂ ತಿಳಿದಿದೆ.

ನೆಹರುಗಳು ಬರುವಾಗ ಮಾರ್ಗಬದಿಗಳಲ್ಲಿ ಸಾವಿರಾರು ಮಂದಿ ಬಡ ಕೂಲಿಗಾರರು, ನೂರಾರು ಮೈಲುಗಳ ದೂರದಿಂದ ತಮ್ಮ ರಕ್ಷಕರಾಗಿ ಬಂದ ನೆಹರುಗಳನ್ನು ಸಂದರ್ಶಿಸಲು ನೆರೆದಿದ್ದರು. ತಮ್ಮ ಹೆಂಗುಸರು [illegible]ಗಳನ್ನು ಹೊತ್ತುಕೊಂಡು ಗುಂಪಾಗಿ ನೆಹರುಗಳ [illegible]ನಲ್ಲಿ ಬಂದಿದ್ದರು. ನೆಹರುಗಳು ಕಾರನ್ನು ನಿಲ್ಲಿಸಲು ಅವರು ಗೋವಿಂದಾ ಗೋವಿಂದಾ ಎಂದು ಅವರಿಗೆ ಪ್ರಣಾಮ ಮಾಡಿದರು. ಅವರ ಮಾತೃಭಾಷೆಯಲ್ಲಿ ಮಾತನಾಡಲು ಸಾಧ್ಯವಿಲ್ಲದೆ, ತುಂಬಿದ ಅಭಿಪ್ರಾಯಗಳುಳ್ಳ ಅವರ ಮುಖಭಾವದಿಂದಲೇ ಇಂಗಿತವನ್ನು ತಿಳಕೊಂಡು ನೆಹರುಗಳು ಕೆಲಮಾತುಗಳನ್ನು ಹಿಂದೂಸ್ಥಾನಿಯಲ್ಲಿ ಹೇಳಿದರು.

ಕಾರು ಮುಂದಕ್ಕೆ ಹೋಗುತ್ತಿದ್ದಂತೆ ಜವಾಹರಲಾಲರು ತಮ್ಮ ಆತ್ಮಕಥೆಯಲ್ಲಿ ವರ್ಣಿಸಿರುವ ಒಂದು ಸುಂದರ ಸ್ಥಳವನ್ನು ಕಂಡು ಕಾರಿನಿಂದಿಳಿದು ಓಡಲು ಸುರುಮಾಡಿದರು. ಅವರ ತಂಗಿಯು ಜವಾಹರ್ ಜವಾಹರ್ ಎಂದು ಕೂಗಲು ಹಿಂತಿರುಗಿ ಬಂದು 'ನನಗೆ ಆನಂದವಾಗಿತ್ತು, ನೀನು ಪೀಟಿಯವಳು' ಎಂದು ಹೇಳಿದರು. ಹೋದಲ್ಲಾ ಕಡೆಗಳಲ್ಲಿಯೂ ಅವರಿಗೆ ಅಭೂತಪೂರ್ವ ಸ್ವಾಗತವಾಗಿತ್ತು.

ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿತು

ಹೈದರಾಬಾದಿನಲ್ಲಿ ಸುಧಾರಣಾ ಯೋಜನೆಯು ಪ್ರಕಟವಾದ ಮೇಲೆ, ಆರ್ಯ ಸಮಾಜ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿದೆ ಗಾಂಧಿಜಿಯವರನ್ನು ಸಂದರ್ಶಿಸಿ, ಅವರ ಅಭಿಪ್ರಾಯವನ್ನು ಸತ್ಯಾಗ್ರಹೀ ಮುಖಂಡರು ಕೇಳಿದ್ದಾರೆ ಧಾರ್ಮಿಕ ಸ್ವಾತಂತ್ರ್ಯ ಮೂಲವಾದ ಸುಧಾರಣೆಯಾಗಬೇಕೆಂಬ ವಿಷಯದಲ್ಲಿ ಚರ್ಚಿಸಲಾಗುವುದು.

ಸರ್ದಾರರು ಬರೋಡಾದಲ್ಲಿ

ಸರ್ದಾರ ಪಟೇಲರು ಬರೋಡಾ ಸಂಸ್ಥಾನದಲ್ಲಿ ಸಂಚರಿಸುತ್ತಾರೆ. ಎಲ್ಲೆಲ್ಲೂ ಅತ್ಯಂತ ವಿಜೃಂಭಣೆಯಿಂದ ಸ್ವಾಗತವಾಗುತ್ತದೆ. ಬರೋಡ ಪ್ರಜಾ ಮಂಡಲದ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಸರ್ದಾರರು ಅಧ್ಯಕ್ಷತನ ವಹಿಸಿದರು

ಗಡಿನಾಡಿನಲ್ಲಿ ಖಾದೀ ಕಾರ್ಯ

ಗಾಂಧಿಜಿ ಮತ್ತು ಗಡಿನಾಡಿನ ಮಂತ್ರಿಮಂಡಳದ ಔದ್ಯೋಗಿಕ ಮಂತ್ರಿಗಳಾದ ಖಾಜಿ ಅತುಲ್ಲಾಖಾನ ಇವರೊಡನೆ ಗಡಿನಾಡಿನಲ್ಲಿ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ವಿಷಯವಾಗಿ ಮಾತುಕತೆಯಾಯಿತು. ಮಂತ್ರಿಗಳಿಗೆ ಗಾಂಧಿಜಿಯವರು ಅನೇಕ ಉಪಯುಕ್ತವಾದ ಸೂಚನೆಗಳನ್ನಿತ್ತಿರುವರು.

ಭಾರತ ಸರಕಾರಕ್ಕೆ ಗಾಂಧಿಜಿಯವರ ಉಪದೇಶ ಬೇಕು

ದಕ್ಷಿಣ ಆಫ್ರಿಕದಲ್ಲಿರುವ ಹಿಂದೀಯರ ಪರಿಸ್ಥಿತಿಯ ಸುಧಾರಣೆಯ ಬಗ್ಗೆ, ಭಾರತ ಸರಕಾರವು ಗಾಂಧಿಜಿಯವರ ಅಭಿಪ್ರಾಯವನ್ನು ಕೇಳುತ್ತಿದೆಯೆಂದೂ, ಹಲವು ತಿಂಗಳುಗಳಿಂದ ಗಾಂಧಿಜಿ ಮತ್ತು ಸರಕಾರಗಳೊಳಗೆ ಪತ್ರವ್ಯವಹಾರವು ನಡೆಯುತ್ತದೆಂದೂ, ಅವಶ್ಯ ಬಿದ್ದಲ್ಲಿ ಗಾಂಧಿಜಿಯವರು ಸಿಮ್ಲಾಕ್ಕೆ ತೆರಳುವರೆಂದೂ ತಿಳಿದುಬರುತ್ತದೆ. ಗಾಂಧಿಜಿಯವರು ಬೊಂಬಾಯಿಯಲ್ಲಿದ್ದಾಗ ವಿದೇಶೀಯ ಮಂತ್ರಿಗಳ ಅಧಿಕಾರದಲ್ಲಿದ್ದ ಭಾರತ ಸರಕಾರದ ಸೆಕ್ರೆಟರಿಗಳಾದ ಶ್ರೀ ಗಿರಿಜಾಶಂಕರ ಬಜಪಾಯಿಯವರು ಗಾಂಧಿಜಿಯವರನ್ನು ಸಂದರ್ಶಿಸಿದ್ದರು

ಯುದ್ಧವು ನಿಶ್ಚಯ

ಶ್ರೀ ಭುಲಾಭಾಯಿ ದೇಸಾಯಿಯವರು ಪತ್ರಿಕಾ ಪ್ರತಿನಿಧಿಯೊಡನೆ ಅಂತರ್ರಾಷ್ಟ್ರೀಯ

ಪರಿಸ್ಥಿತಿಯ ಕುರಿತು ಮಾತನಾಡುತ್ತಾ, ಇಂದು ಯೂರೋಪಿನಲ್ಲಿ ಪ್ರತಿಯೊಂದು ನಿಮಿಷದಲ್ಲಿಯೂ, ಯುದ್ಧವು ಸಂಭವಿಸಬಹುದೆಂಬ ಹೆದರಿಕೆ ಇದ್ದೇ ಇದೆ. ಇಂಗ್ಲೆಂಡು ತನ್ನ ಉಪಾಯದಿಂದ ಇಂದು ತಪ್ಪಿಸುವುದಾದರೂ ಇಂದಿನ ಯುದ್ಧವನ್ನು ತಪ್ಪಿಸಬೇಕಾದರೆ ಪೋಲೆಂಡನ್ನು ಜರ್ಮನಿಗೆ ಬಿಟ್ಟುಕೊಡಬೇಕು ಜರ್ಮನಿಯು ಹೇಗಿದ್ದರೂ ಡಾನ್ಜಿಗನ್ನು ಸ್ವಾಧೀನಪಡಿಸದೆ ಬಿಡುವುದಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಯುದ್ಧವು ನಿವಾರಿಸಲಾಗದು ಎಂಬುದು ಹೀಗೆಂದು ದೇಸಾಯಿಯವರ ಅಭಿಮತ

ವಾರ್ಧಾದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಆಗಸ್ಟ್ ಎರಡನೆ ವಾರದಲ್ಲಿ ಅಖಿಲಭಾರತ ಕಾಂಗ್ರೆಸ್ ಸಭೆಯ ವರ್ಕಿಂಗ್ ಕಮಿಟಿಯ ಸಭೆಯು ವಾರ್ಧಾದಲ್ಲಿ ಸೇರಲಿರುವುದು ಗಾಂಧಿಜಿಯವರ ಅಭಿಪ್ರಾಯವನ್ನು ಕೆಲವು ಪ್ರಾಮುಖ್ಯ ವಿಷಯಗಳ ಕುರಿತು ಕೇಳಬೇಕಾದುದರಿಂದ ವಾರ್ಧಾದಲ್ಲಿ ಸಭೆಜರಗಿಸಬೇಕಾಗಿ ರಾಷ್ಟ್ರಪತಿಗಳು ಆಜ್ಞೆಮಾಡಿರುವರು.

ನಾತಾಲದಲ್ಲಿ ಹಿಂದೀಯರು

ನಾತಾಲದಲ್ಲಿರುವ ಹಿಂದೀಯರು ಇದುವರೆಗೆ ಇದ್ದ ಎರಡು ರಾಜಕೀಯ ಸಂಸ್ಥೆಗಳನ್ನು ಒಂದೇ ರಾಜಕೀಯ ಸಂಸ್ಥೆಯಾಗಿ ಮಾಡುವ ನಿಶ್ಚಯವಮಾಡಿರುತ್ತಾರೆ. ಆ ಸಂಸ್ಥೆಯ ಹೆಸರನ್ನು ಮಹಾತ್ಮಾಜಿಯವರು ಸೂಚಿಸಬೇಕಂತೆ. ಅಂತೂ ಇನ್ನು ಮುಂದೆ ಹಿಂದೀಯರೆಲ್ಲರೂ ಒಂದೇ ಅಭಿಪ್ರಾಯದಿಂದ ಕೂಡಿ ಕೆಲಸಮಾಡುವ ನಿರ್ಧಾರಮಾಡಿರುವರಾಗಿ ತಿಳಿಯಬಹುದಾಗಿದೆ.

ರಾಜಕೋಟೆಯ ಸುಧಾರಣೆ

ರಾಜಕೋಟ ಸುಧಾರಣೆಯ ಪತ್ರವು ಹೊರಬಿದ್ದಿದೆ. ಚುನಾವಣೆಯ ಕ್ರಮ, ಮತದಾರರಿಗೆ ಇರಬೇಕಾದ ಯೋಗ್ಯತೆ ಇತ್ಯಾದಿಗಳ ಕುರಿತು ಪ್ರಕಟವಾಗಿದೆ ಎಸೆಂಬ್ಲಿಯಲ್ಲಿ ಒಟ್ಟು ಇರಬೇಕಾದ ಸದಸ್ಯರ ಸಂಖ್ಯೆ ಆ ಮೇಲೆ ಚುನಾಯಿತರಾಗಿ ಬರುವ ಸದಸ್ಯರು ಮತ್ತು ನೇಮಕ ಮಾಡುವ ಸದಸ್ಯರು ಎಷ್ಟು ಹಾಗೂ ಅದರ ಪ್ರೆಸಿಡೆಂಟರು ಚುನಾಯಿತರಾಗುವವರೋ ಅಥವಾ ನೇಮಕವಾಗುವವರೋ ಈ ಕುರಿತು ನಿಶ್ಚಯವಾಗಿಲ್ಲ ಹೊಸ ತೆರಿಗೆ ಹಾಕುವುದರಲ್ಲಿ, ಬಜೆಟ್ ತಯಾರಿಸುವುದರಲ್ಲಿ ಎಸೆಂಬ್ಲಿಗೆ ಇರುವ ಅಧಿಕಾರ ಮೊದಲಾದ ವಿಷಯಗಳು ಇತ್ಯರ್ಥವಾಗಿಲ್ಲ ಈ ಕುರಿತು ರಾಜಕೋಟದ ನಾಗರಿಕರು ತಮ್ಮ ಅಭಿಪ್ರಾಯವನ್ನು ಹೇಳುವಲ್ಲಿ ಸಂಸ್ಥಾನದ ಮತ್ತು ಪ್ರಜೆಗಳ ಹಿತವನ್ನೂ ಮತ್ತು ಸಂಸ್ಥಾನದ ವಿದ್ಯೆ ಮತ್ತು ಆರ್ಥಿಕ ಸ್ಥಿತಿಗತಿಗಳನ್ನೂ ವಿಚಾರಿಸಿಕೊಳ್ಳಬೇಕೆಂದು ದರ್ಬಾರ್ ವೀರವಲ್ಲರು ಪ್ರಕಟಣೆ ಕೊಟ್ಟಿದ್ದಾರೆ

ಬಂಗಾಳದ ರಾಜಕೀಯ ಕೈದಿಗಳ ನಿರಶನ

ಬಂಗಾಳದ ರಾಜಕೀಯ ಕೈದಿಗಳು ನಿರಶನವನ್ನು ಆರಂಭಿಸಿದ್ದಾರಷ್ಟೆ? ಯಾರ. ಏನೆಂದರೂ ಅವರು ಬಿಡುವ ಹಾಗಿಲ್ಲ. [illegible] ಆಲೀಪುರ ಜೈಲಿನಲ್ಲಿರುವ ಈ ರಾಜಕೀಯ ಕೈದಿಗಳನ್ನು ಡಾ। ಬಿಧನ್‌ಚಂದ್ರ ರಾಯರವರು ಸಂದರ್ಶಿಸಿ ಬಂಗಾಳ ಸರಕಾರಕ್ಕೆ ಈ ಅನಗತ್ಯವನ್ನು ಇಲ್ಲದೆಮಾಡಲು ಒಂದು ಸೂಚನೆ ಕೊಟ್ಟಿರುತ್ತಾರೆ ಅದರ ವಿಷಯವಾಗಿ ಯಾವುದೂ ತಿಳಿದುಬಂದಿಲ್ಲ

ಸ್ವಾಮಿ ಭವಾನಿ ದಯಾಲ್

ಬೊಂಬಾಯಿ ಪ್ರದೇಶ [illegible] ಇಂಡಿಯನ್ ಕಾಂಗ್ರೆಸಿನ ಅಧ್ಯಕ್ಷರಾದ ಸ್ವಾಮಿ ಭವಾನೀ ದಯಾಲರಿಗೆ [illegible] ದಕ್ಷಿಣ ಆಫ್ರಿಕಕ್ಕೆ ಬರುವಂತೆ ತಂತಿ ಬಂದಿದೆ ಅಲ್ಲಿನ ಪರಿಸ್ಥಿತಿಯು ವಿಷಮವಾದ್ದರಿಂದ, ತನ್ನ ಆರೋಗ್ಯವನ್ನೂ ಗಮನಿಸದೆ ಅವರು ಆಗಸ್ಟ ಬರುವ ತಿಂಗಳ ಎರಡರಂದು ಹೊರಡುವರು

ಬೋಸರ ನಿಲವೇನು?

ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಠರಾವುಗಳನ್ನು ಖಂಡಿಸಿ ಅಭಿಪ್ರಾಯವಿತ್ತ



ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಸುಭಾಷ ಬೋಸರಿಗೂ ಇನ್ನೂ ಕೆಲವರಿಗೂ ಅವರು ಕಾಂಗ್ರೆಸಿನ ದೃಷ್ಟಿಯಿಂದ ತಮ್ಮ ನಿಲವೇನೆಂದು ವಿವರಿಸಬೇಕಾಗಿ ರಾಷ್ಟ್ರಪತಿಗಳು ಕೇಳಿದ್ದಾರೆ.

ಗಾಂಧಿಜಿಯವರ ಕಾರ್ಯಕ್ರಮ

ಮಹಾತ್ಮಗಾಂಧಿಯವರು ಜುಲೈ ತಾ. ೩೧ರಂದು ಅಬೋಟಾಬಾದನ್ನು ಬಿಟ್ಟು ವಾರ್ಧಾಕ್ಕೆ ತಲಪುವರು. ಕಾಶ್ಮೀರಕ್ಕೆ ಹೋಗಬೇಕೆಂದು ಗಾಂಧಿಜಿಯವರು ನಿಶ್ಚಯಿಸಿದ್ದು ಅಲ್ಲಿಗೆ ಹೋಗಲು ಆಗದೆ ಇರುವ ವಿಷಯದಲ್ಲಿ ತಮ್ಮ ವಿಷಾದವನ್ನು ಸೂಚಿಸಿದರು.

ಸಿಂಧದ ಪ್ರಧಾನರು ವಿಲಾಯಿತಿಗೆ ಹೋಗುವರು

ಸಿಂಧದ ಪ್ರಧಾನ ಮಂತ್ರಿಗಳು ವಿಲಾಯತಿಗೆ ಹೋಗುವ ವಿಷಯದಲ್ಲಿ ಯಾವ ರಾಜಕೀಯ ಸಂಗತಿಗಳೂ ಸೇರಿಲ್ಲವೆಂದೂ, ಅದು ಕೇವಲ ವಿರಾಮ ವಿಹಾರಕ್ಕಾಗಿದೆಯೆಂದೂ ತಿಳಿದಿದೆ. ಲಂಡನಿನಲ್ಲಿ ಲಾರ್ಡ್ ಜೆಟ್ಲೆಂಡರೊಡನೆ ಮಾತುಕತೆಯಾಡುವ ವಿಷಯದಲ್ಲಿ ಯಾವ ಏರ್ಪಾಡು ಕೂಡಾ ಮಾಡಿರುವುದಿಲ್ಲ

ಗವರ್ನರ್ ಮತ್ತು ಗಾಂಧಿಜಿ ಭೇಟಿ

ಗಡಿನಾಡು ಪ್ರಾಂತ್ಯದ ಗವರ್ನರರು ಗಾಂಧಿಜಿಯವರನ್ನು ಭೇಟಿಮಾಡಲು ಅಬೋಟಾಬಾದಿಗೆ ಬಂದಿರುವರು. ಈ ಸಂದರ್ಭದಲ್ಲಿ ಗಡಿನಾಡಿನ ಸಮಸ್ಯೆಗಳ ಕುರಿತು ಗಾಂಧಿಜಿಯವರು ಗವರ್ನರರೊಡನೆ ಮಾತುಕತೆ ನಡೆಸುವರಾಗಿ ತಿಳಿದುಬರುತ್ತದೆ.

ಗವರ್ನರರ ಮಸೂದೆಯ ವಿಷಯ ರಾಜಾಜಿಯವರ ಹೇಳಿಕೆ

ಮದ್ರಾಸು ಕಾಂಗ್ರೆಸು ಹೌಸಿನಲ್ಲಿ ಸೇರಿದ ಸಭೆಯಲ್ಲಿ ಮಾತನಾಡುತ್ತಾ ಪ್ರಧಾನ ಮಂತ್ರಿ ಗೋಪಾಲಾಚಾರಿಯವರು, ಗವರ್ನರರು ಪ್ರಕಟಿಸಿದ ದೇವಸ್ಥಾನ ಪ್ರವೇಶದ ರಕ್ಷಣಾ ಮಸೂದೆಯ ಕುರಿತು ಹೇಳುತ್ತಾ ಅದು ಕಾಂಗ್ರೆಸಿನ ಶಕ್ತಿಯ ಚಿಹ್ನೆಯೆಂದೂ, ದೇವಸ್ಥಾನವನ್ನು ಹರಿಜನರಿಗೆ ಪ್ರವೇಶಮಾಡಿಸುವ ಸಂದರ್ಭದಲ್ಲಿ, ಕಾಂಗ್ರೆಸು ಅಧಿಕಾರದಲ್ಲಿದ್ದು ಹಾಗೆ ಪ್ರವೇಶವಿತ್ತವರನ್ನು ಕಾನೂನಿನ ಬಾಧೆಯಿಂದ ಉಳಿಸುವಂತೆ ಮಾಡುವುದು ಕಾಂಗ್ರೆಸು ಮಂತ್ರಿಮಂಡಲದ ಕರ್ತವ್ಯವೆಂದೂ ಹಾಗೆ ಮಾಡಲು ಆಗದಿದ್ದಲ್ಲಿ ಕಾಂಗ್ರೆಸು ಅಧಿಕಾರದಿಂದ ರಾಜೀನಾಮೆ ಇತ್ತು, ಹೊರಬರುವುದೇ ಒಳಿತೆಂದೂ ಹೇಳಿದರು.

ಬಂಗಾಳ ರಾಜಕೀಯ ಕೈದಿ ದಿನಾಚರಣೆ

ಮಹಾತ್ಮಾಗಾಂಧಿಜಿಯವರು ಬಂಗಾಳದ ರಾಜಕೀಯ ಕೈದಿಗಳು ಅವರ ನಿರಶನ ವ್ರತವನ್ನು ಬಿಟ್ಟುಕೊಡಬೇಕಾಗಿಯೂ, ಸಾರ್ವಜನಿಕರಿಗೆ ಆ ಕುರಿತು ಕಾಪ [illegible]ಗಳನ್ನು ಕೈಕೊಳ್ಳುವರೆ ಸಂದರ್ಭವೀಯಬೇಕಾಗಿಯೂ ಶರಚ್ಚಂದ್ರಬೋಸರು ಹಾಗೆ ಸೂಚಿಸುವಂತೆ ಬರೆದಿರುವರು

ರಾಷ್ಟ್ರಪತಿಗಳು ಅಖಿಲಭಾರತದಲ್ಲಿ ರಾಜಕೀಯ ಕೈದಿಗಳ ದಿನಾಚರಣೆಯು ಆಚರಿಸಲ್ಪಡಬೇಕಾಗಿಯೂ, ಅದಕ್ಕೆ ಇಂತಹದೇ ನಿಶ್ಚಿತವಾದ ದಿನವನ್ನು ಗೊತ್ತುಪಡಿಸುವುದು ಅಗತ್ಯವಿಲ್ಲವೆಂದೂ ಪ್ರಕಟಣೆ ಕೊಟ್ಟಿರುತ್ತಾರೆ.

'ಫಾರ್ವರ್ಡ್ ಬ್ಲಾಕಿಗೆ ಧ್ಯೇಯವಿಲ್ಲ'

ಪಂಡಿತ ನೆಹರುಗಳು ಸಿಲೋನಿನ ಯುನಿವರ್ಸಿಟಿ ಕಾಲೇಜಿನ ವಿದ್ಯಾರ್ಥಿಗಳಿಗೆ ಭಾಷಣ ಮಾಡುತ್ತಾ ಹೀಗೆಂದರು.

"ಕಳೆದ ಎರಡು ವರ್ಷಗಳಿಂದ ಹಿಂದೂದೇಶದಲ್ಲಿ ಸಮತಾವಾದವು ಸಂಘಶಕ್ತಿಯನ್ನು ಕಳೆದುಕೊಂಡಿದೆ ಕಾಂಗ್ರೆಸು ಸಂಸ್ಥೆಯು ಇಂದು ಹಿಂದೂದೇಶದಲ್ಲಿರುವ ಪ್ರತಿಯೊಂದು ವಾಗತಿಕ ಶಕ್ತಿಯನ್ನು ತನ್ನ ಸ್ವಾಧೀನತೆಯಲ್ಲಿ ಇಟ್ಟಿರುತ್ತದೆ ಕಾಂಗ್ರೆಸು ಸಾಮ್ರಾಜ್ಯಶಾಹೀ ವಿರುದ್ಧವಾಗಿ ಎದುರಾಡುವ ಹಿಂದೂದೇಶದ ಏಕಮಾತ್ರ ಸಂಸ್ಥೆ. ಕಾಂಗ್ರೆಸಿನಲ್ಲಿ ಸೋಶಿಯಲಿಸ್ಟರ ಪಕ್ಷವು ಬಂದಕೂಡಲೇ, ಅವರು ಅಧಿಕಾರವನ್ನು ಸ್ವಾಧೀನ ಪಡಿಸುವ ಮರುಳುತನಕ್ಕೆ ಬಿದ್ದರು

'ಈಗ ಎಡಪಕ್ಷಗಳ ಸಂಘಟನೆಯೆಂಬ ಹೆಸರಿನಲ್ಲಿ ಫಾರ್ವರ್ಡ್ ಬ್ಲಾಕ್ ಸುಭಾಷರ ಮುಂದಾಳುತನದಿಂದ ಆಗಿದೆ ಇದರ ತತ್ವವೇನೊ? ಪ್ರಯೋಜನವೇನೋ? ಆವಶ್ಯಕತೆಯೇನೋ, ನನಗೆ ತಿಳಿಯುವುದಿಲ್ಲ! ಕಾಂಗ್ರೆಸನ್ನು ಕೆಡಿಸುವ ಧ್ಯೇಯದ—ವ್ಯಕ್ತಿ ದ್ವೇಷದ ಮಂದಿ ಕೆಲವರು ಅದರಲ್ಲಿದ್ದಾರೆ.

ಡಾನ್ಜಿಗ್ ಸಮಸ್ಯೆಯು ಶಾಂತಿಯಲ್ಲಿ ಕೊನೆಗೊಳ್ಳುವುದೆ?

ಹಿಟ್ಲರನ ಭರವಸೆ ಹಾಗಿದೆ!

ಟಾಂಗನೀಕದ ಹಿಂದೀಯರ ದುರದೃಷ್ಟ

ಪೋಲೆಂಡು ಸಂಧಿಮಾಡುವುದೇ?

ಮಿ. ಚೆಂಬರ್ಲಿನರಿಗೆ ಇನ್ನೂ ಆಶೆಯಿದೆ

ರಶ್ಯಾ ಒಪ್ಪಂದವು ಆಗುವುದೇ ಎಂದು ಕಾಮನ್ಸ್ ಸಭೆಯಲಿ ಪ್ರಶ್ನೆಮಾಡಿದ್ದಕ್ಕೆ ಮಿ. ಚೆಂಬರ್ಲಿನರು ಹಾಗೆ ಆಗುವುದೆಂಬ ಭರವಸೆ ಮಾಡುವವನಾಗಿದೇನೆ ಎನ್ನುತ್ತಾರೆ

ಪೋಲೆಂಡಿನವನಿಗೆ ಗುಂಡು

ಪೋಲೆಂಡಿನ ಆಫೀಸರನೊಬ್ಬನಿಗೆ ಜರ್ಮನ್ ಆಫೀಸರನು ಪೋಲೆಂಡಿನ ಭೂಮಿಯಲ್ಲಿ ಗುಂಡಿಕ್ಕಿರುವನು. ಪೋಲೆಂಡಿನ ಅಧಿಕಾರಿಗಳ ಆ ಜರ್ಮನನನ್ನು ಕರೆದು ವಿಚಾರಿಸಿದಾಗ ತಾನು ಆತ್ಮರಕ್ಷಣೆಗಾಗಿ ಹಾಗೆ ಮಾಡಿದುದಾಗಿ ಹೇಳುತ್ತಾನೆ. ಡಾನ್ಜಿಗ್ ಸೆನೇಟಿನಲ್ಲಿ ಈ ಅಪರಾಧದ ವಿಮರ್ಶೆ ಸಂಭಾವಸೂಚನೆಯಾಗಿದೆ

ಆಂಗ್ಲೊ-ಜಪಾನ್ ಒಪ್ಪಂದ

ಆಂಗ್ಲ ಜಪಾನು ದೇಶಗಳ ಒಪ್ಪಂದವು ಆಗುವುದೆಂದು ಟೋಕಿಯೋ ಮತ್ತು ಲಂಡನುಗಳಲಿ ಒಂದೇ ದಿನ ಒಪ್ಪಂದ ಕರಾರು ಪ್ರಕಟಿಸಲ್ಪಡುವುದೆಂದೂ ತಿಳಿದಿದೆ. ಜಪಾನು ಪ್ರಧಾನ ಮಂತ್ರಿಗಳು ಬ್ರಿಟಿಷರು ಚೈನಕೆ ಬೆಂಬಲಕೊಡದ ಜಾರಿಸಿದ ಪರಿಶಾಸನ ಶಿಫಾರಸಿಯೊಡನೆ ಹೇಳಿದರು. ಈ ನೂತನ ಒಪ್ಪಂದ ಚೀನಾದೇಶದಲ್ಲಿ ಬಹಳ ವಿಚಾರಕ್ಕೆ ಎಡೆಮಾಡಿದೆ

ಫ್ರಾನ್ಸಿನಲ್ಲಿ ನಾಜೀಪ್ರಚಾರ

ಫ್ರಾನ್ಸಿನಲಿ ನಾಜಿಗಳ ಪ್ರಚಾರವು ಬಹಳ ಗುಪ್ತವಾಗಿ ನಡೆಯುತ್ತಿರುವುದಾಗಿ ವಾರ್ತೆ ಕೇಳುತದೆ. ನಾಜೀತತ್ವಗಳನ್ನು ಪ್ರಚಾರಪಡಿಸುವವೆಂಬ ಸಂಶಯದಿಂದ ಎರಡು ಪತ್ರಿಕೆಗಳನ್ನು ಫ್ರಾನ್ಸ್ ಸರಕಾರವು ಬಹಿಷ್ಕರಿಸಿದೆ

‘ಚೈನವು ಖಂಡಿತ ಜೈಸಬೇಕು’

‘ಇಂದು ಚೈನದ ಸಿದ್ಧತೆಯು ದಿನದಿಂದ ದಿನಕ್ಕೆ ಹೆಚ್ಚುತಿದೆ. ಯುದ್ಧವು ಸುರುವಾದಾಗ ಕೇವಲ ಎಂಟು ಲಕ್ಷ ಮಂದಿ ಮಾತ್ರ ಇದ್ದರು. ಆದರೆ ಇಂದು ೨೫ ಮಿಲಿಯಕ್ಕಿಂತಲೂ ಹೆಚ್ಚು ಸೈನಿಕರಿದ್ದಾರೆ. ಚೈನಾದಲ್ಲಿ ಕಡಿಮೆಗೆಂದರೂ ಮಿಲಿಯ ಶಕ್ತಿವಂತರಾದ ಯುವಕರು ಇದ್ದಾರೆ. ಅವರೆಲ್ಲರೂ ಒಂದಲ್ಲ ಸಮಯದಲ್ಲಿಯೇ ಯುದ್ಧಕ್ಕೆ ಬೇಕಾದರೆ ಸಿದ್ಧರಾಗಿ ಬರುವರು. ಮಾರ್ಶಾಲ್ ಚಿಯಾಂಗ್‌ಶೈಕಾಕರಿಂದ ಬಡ ಚೈನದ ಸಿಪಾಯಿಯ ವರೆಗೆ ಪ್ರತಿಯೊಬ್ಬರಿಗೂ ಯುದ್ಧದಲ್ಲಿ ಗೆಲ್ಲುವ ಭರವಸೆಯಿರುತ್ತದೆ’’ ಹೀಗೆಂದು ಯುದ್ಧದ ವೈಸ್ ಮಿನಿಸ್ಟರನಾದ ಜನರಲ್ ಚೆಂಚೆಂಗನ ಸಿದ್ಧಾಂತ.

ಟಿಬೆಟಿಗೆ ಐದು ವರ್ಷ ಪ್ರಾಯದ ಹುಡುಗ

ಟಿಬೆಟಿನ ಮಧ್ಯಂತರ ಮುಂದಿಯು ಆರಸನಾಗಿ ಚೈನಾದಲ್ಲಿದ್ದ ಐದು ವರ್ಷ ಪ್ರಾಯದ ಕೃಷಿಕ ಹುಡುಗನಿಗೆ ಪಟ್ಟಕಟ್ಟಿರುವರು. ಆತನೇ ಹಕ್ಕುದಾರನಾದ ದಲಾಯಿಲಾಮನೆಂದೂ, ಐದು ವರ್ಷಗಳಿಂದ ಹುಡುಕುತ್ತಿದ್ದು ಈಗ ಸಿಕ್ಕಿದುದಾಗಿಯೂ ತಿಳಿದಿದೆ

ಕಳೆದ ದಲಾಯಿಲಾಮನು ೧೯೩೩ನೇ ಡಿಸೆಂಬರದಲ್ಲಿ ತೀರಿಹೋದಾಗಲು, ಅದೇ ಸಮಯ ದಲಿ ಹುಟ್ಟಿದ ಮಗುವಿನ ಶರೀರದಲ್ಲಿ, ಆ ಆತ್ಮವು ಹೋಗುವುದೆಂಬ ವಿಶ್ವಾಸದಂತೆ ಈ ಹುಡುಗು ದಲಾಯಿಲಾಮನಾಗಿದೆ

ಸ್ಲೊವೇಕಿಯದ ಹೊಸ ರಾಜ್ಯಪದ್ಧತಿ

ಸ್ಲೊವೇಕಿಯ ಪಾರ್ಲಿಮೆಂಟು ಹೊಸ ರಾಜ್ಯಪದ್ಧತಿಯನ್ನು ಅಂಗೀಕರಿಸಿದೆ. ಇನ್ನು ಮುಂದೆ ಒಂದೇ ಪಕ್ಷದಿಂದ ಆರಿಸಲಾದ ಸದಸ್ಯರು ಐದು ವರ್ಷಗಳ ಅವಧಿಯ ವರೆಗೆ ಇರಬಹುದು. ಅಂತಹ ಆಯ್ಕೆಯಿಂದ ಪದಸ್ಥರಿಂದ ಏಳು ವರ್ಷದ ಅವಧಿಯ ತನಕ ಅಧಿಕಾರವುಳ್ಳ ಒಬ್ಬ ಪ್ರೆಸಿಡೆಂಟನನ್ನು ಆರಿಸಲಾಗುವುದು. ಈ ರೀತಿಯ ರಿಪಬ್ಲಿಕ್ ಸರಕಾರವು ರಚಿತವಾಯಿತು. ಪ್ರೆಸಿಡೆಂಟರಿಗೊಬ್ಬರಿಗೆ ಮಾತ್ರ ಅಂತರ್‌ರಾಷ್ಟ್ರೀಯ ಒಪ್ಪಂದ, ಪಾರ್ಲಿಮೆಂಟನ್ನು ರದು ಮಾಡುವ ಹಕ್ಕು, ಸೈನ್ಯವನ್ನು ತಯಾರಿಸುವ ಬಾಧ್ಯತೆ ಮೊದಲಾದವುಗಳಿವೆ. ಅವರೇ ಸೈನ್ಯದ ಮುಖ್ಯಾಧಿಕಾರಿಗಳು

ಹಿಟ್ಲರನ ಭರವಸೆ

ಡಾನ್ಜಿಗನ್ನು ತಾನು ಖಂಡಿತ ಸ್ವಾಧೀನಪಡಿಸುವುದಾಗಿ ಹಿಟ್ಲರನು ಸ್ಪಷ್ಟ ಮಾಡಿ ಅದಕ್ಕೆ ಬೇಕಾದ ಸನ್ನಾಹಗಳನ್ನು ಮಾಡುತ್ತಿದ್ದಾನಷ್ಟೆ. ಇಂತಹ ಸಂದರ್ಭದಲ್ಲಿ ಖಂಡಿತವಾಗಿಯೂ ಯುದ್ಧವಾಗುವ ಸಂಭವವಿದೆಯೆಂದು ಎಲ್ಲರೂ ತಿಳಿದಿದ್ದರು. ಹಿಟ್ಲರನು ಯುದ್ಧಕ್ಕೆ ಬೇಕಾದ ಸನ್ನಾಹಗಳನ್ನು ಮಾಡುವುದಿಷ್ಟರಲ್ಲಿ, ಡಾನ್ಜಿಗನ್ನು ಸ್ವಲ್ಪವೂ ಯುದ್ಧಕೋಲಾಹಲವಿಲ್ಲದೆ ತಾನು ಸ್ವಾಧೀನಪಡಿಸಬಹುದಾಗಿ ಆತನು ಭರವಸಪಟ್ಟಿರುವಂತೆ ತಿಳಿಯುತ್ತದೆ

ಪೋಲೆಂಡು ಸಂಧಿಮಾಡುವುದೇ?

ಇತ್ತೀಚೆಗಿನ ವಾರ್ತೆಯಂತೆ, ಪೋಲೆಂಡು ಕೂಡಾ ತನ್ನ ಗೌರವ ಮತ್ತು ನ್ಯಾಯಗಳಿಗೆ ಆತಂಕ ಬರದಿದ್ದಲ್ಲಿ ಜರ್ಮನಿಯೊಡನೆ ಸಂಧಾನ ಮಾಡಲು ಮನಸ್ಸುಳ್ಳದ್ದಾಗಿದೆಯೆಂದು ವಾರ್ತೆ

ಒಂದು ವಾರದಿಂದ ಡಾನ್ಜಿಗಿನಲ್ಲಿ ಯಾವ ಗಲಭೆಯೂ ಇರುವುದಿಲ್ಲ.

ಜಪಾನೀಯರ ವಿಜಯ

ಚೆಂಕಿಂಗಿಗೆ ಜಪಾನು ಸೈನಿಕರು ತುಂಬಾ ಯುದ್ಧ ಸಾಮಗ್ರಿಯೊಡನೆ ಬಂದು ಸಿದ್ಧರಾಗಿದ್ದಾರೆ. ಸ್ವಾಟೋವಿನ ಬಳಿಯ ಚೆಂಗಾಫೂ ಯೆಂಬ ಕರಾವಳಿಯ ನಗರವು ಜಪಾನೀಯರ ವಶವಾಗಿದೆ. ಚೈನೀಯರ ಪ್ರಧಾನ ನಗರವಾದ ಕ್ವೆಚೌ ಎಂಬುದು ಸ್ವಾಧೀನವಾಗಲಾಗಿದೆ.

ರಶ್ಯಾ-ಜಪಾನೀಯರ ತಿಕ್ಕಾಟ

ಮಂಚೂಕೋ ಗಡಿಯಲ್ಲಿ ಮತ್ತು ಮಂಗೋಲಿಯದಲ್ಲಿ ರಶ್ಯ ಮತ್ತು ಜಪಾನುಗಳ ಸೈನಿಕರೊಳಗೆ ಆಗಾಗ ತಿಕ್ಕಟವಾಗುತ್ತಿದೆ. ಜಪಾನೀಯರ ಮೂವತ್ತೊಂಬತ್ತು ವಿಮಾನಗಳನ್ನು ರಶ್ಯದವರು ಗುಂಡಿಕ್ಕಿ ಧ್ವಂಸಮಾಡಿದರು.

ತೆಟಿಸನ್ನು ಮೇಲೆತ್ತುವ ಯತ್ನ ನಿಷ್ಫಲ

ಜಲಾಮಗ್ನವಾದ ಬ್ರಿಟಿಷ್ ಸಬ್ ಮೆರಿನ್ ತೆಟಿಸನ್ನು ಮೇಲೆತ್ತಿಹಾಕುವ ಯತ್ನವು ನಿಷ್ಫಲವಾಯಿತು. ಹೀಗೆ ಅಸಾಧ್ಯಯತ್ನದಿಂದಲೂ ಮೇಲೆತ್ತಲು ಆಗದೆ ಇದ್ದದ್ದು ಬಹಳ ನಿರಾಶೆಯನ್ನು ಹುಟ್ಟಿಸಿದೆ. ಇನ್ನೊಮ್ಮೆ ಮೇಲೆತ್ತುವ ಯತ್ನಮಾಡಲು ಸಿದ್ಧತೆ ನಡೆಯುತ್ತಲಿದೆ

ಟ್ಯಾಂಗಾನಿಕದ ಹಿಂದೀಯರ ಮೇಲೆ ನಾಜಿಗಳ ಆರೋಪ

ಟ್ಯಾಂಗಾನಿಕದಲ್ಲಿರುವ ಹಿಂದೀಯರ ಮೇಲೆ ಬರ್ಲಿನಿನ ಅಧಿಕಾರೀ ಪತ್ರಿಕೆಯೊಂದು ಬಹಳ ಕಟುವಾಗಿ ಟೀಕೆ ಮಾಡಿದೆ. ಅಲ್ಲಿನ ಭಾರತೀಯರು ಸಂಪಾದನೆ ಮಾಡಿ ಹಿಂದೂದೇಶಕ್ಕೆ ಹಣ ಕಳುಹಿಸುವರೆಂದೂ ಆದರಿಂದ ಯೂರೋಪನ್ನು ಅವರು ಸುಲಿಗೆಮಾಡುತ್ತಿರುವರೆಂದೂ ಪತ್ರಿಕೆಯ ಆಲಾಪ

ಹಂಗೇರಿಗೆ ಜರ್ಮನರ ಬೆದರಿಕೆ

ಹಂಗೇರಿಯಲ್ಲಿರುವ ಸ್ಲೊವೇಕಿಯ ಮತ್ತು ಜರ್ಮನ್ ಜನರನ್ನು ಒಳ್ಳೆಯ ರೀತಿಯಿಂದ ಅಲ್ಲಿನ ಅರಸರವು ನಡೆಸದಿದ್ದ ಪಕ್ಷದಲ್ಲಿ ಹಂಗೇರಿಯನ್ನು ಜರ್ಮನಿ ಆಕ್ರಮಿಸುವುದಾಗಿ ಸ್ಲೊವೇಕಿಯದಲ್ಲಿನ ಜರ್ಮನ್ ಅಲ್ಪಸಂಖ್ಯಾಕರ ಧುರೀಣನಾದ ಹೆರ್ ಕಾರ್ಮಸಿನ್ ಎಂಬವನು ಬೆದರಿಕೆ ಹುಟ್ಟಿಸುತ್ತಾನೆ.

ಸ್ವಸ್ತಿಕಾಧ್ವಜ

ಹಿಟ್ಲರನ ನಾಜೀಪಕ್ಷದ ಧ್ವಜವಾದ ಸ್ವಸ್ತಿಕಾ ಧ್ವಜವು ಯುದ್ಧಕ್ಕಿಂತ ಮೊದಲಿದ್ದ ಕೈಸರ್ ಭೂಮಿತಿಯ ಜರ್ಮನಿಗಿಂತ ವಿಶಾಲವಾದ ಸ್ಥಳಗಳಲ್ಲಿ ಹಾರಾಡುತ್ತಿದೆಯೆಂದು ಜನರಲ್ ಗೋರಿಂಗನು ಬರ್ಲಿನಿನ ರಿಶ್‌ಕನ್ಸ್ರಿಲನ್ ಓವ್ ಪೋರಿಸ್ಟ್ರಿಯ ಉದ್ಘಾಟನಾ ಸಮಯದಲ್ಲಿ ಹೇಳಿದನು

ಜರ್ಮನ್ ವಸ್ತುಗಳಿಗೆ ಬಹಿಷ್ಕಾರ

ಪೋಲೆಂಡಿನಲಿ ಸೇರಿದ ವ್ಯಾಪಾರಕರ ಸಭೆಯೊಂದರಲ್ಲಿ ಸಂಪೂರ್ಣವಾಗಿ ಜರ್ಮನ್ ಸಾಮಾನುಗಳನ್ನು ಬಹಿಷ್ಕರಿಸುವ ನಿರ್ಣಯ ಮಾಡಿ ಸರಕಾರವು ಇದನ್ನು ಮನ್ನಿಸಬೇಕೆಂದು ಕೇಳಿಕೊಂಡಿದ್ದರು. ಪೋಲೆಂಡಿನ ದಾಕ್ಷರರು ಜರ್ಮನಿಯಿಂದ ಔಷಧ ತರಿಸುವುದನ್ನು ನಿಷೇಧಿಸಿರುವರು. ಜರ್ಮನ್ ಕಾಗದ, ಪುಸ್ತಕ, ಪತ್ರಿಕೆ ಇವೆಲ್ಲವೂ ಬಹಿಷ್ಕೃತವಾಗಿವೆ.

ಸೇನಾಪತಿ ಬಾಪಟರು ಜಲಸಮಾಧಿ ಹೊಂದುವುದಿಲ್ಲ

ಸಾರ್ವಜನಿಕರ ಅಭಿಪ್ರಾಯಕ್ಕೆ ಮನ್ನಣೆ

ರಾಷ್ಟ್ರಕಾರ್ಯದಲ್ಲಿಯೇ ಜೀವನ ಸವೆಸುವರು

“ಸಾರ್ವಜನಿಕರ ಸೇವೆಯೇ ನನ್ನ ಕರ್ತವ್ಯವಾದ್ದರಿಂದ ಅವರ ಇಚ್ಛೆಗನುಸಾರವಾಗಿ ನಾನು ನನ್ನ ಜಲಸಮಾಧಿಯ ನಿರ್ಧಾರವನ್ನು ಬಿಟ್ಟುಕೊಟ್ಟಿದ್ದೇನೆ” ಎಂಬುದಾಗಿ ಸೇನಾಪತಿ ಬಾಪಟರವರು ಪತ್ರಿಕೆಯ ಮೂಲಕ ಜಾಹೀರ ಮಾಡಿದ್ದಾರೆ. ರಾಷ್ಟ್ರದ ಐಕ್ಯ ಮತ್ತು ಸ್ವಾತಂತ್ರ್ಯಕ್ಕಾಗಿ ೨೩-೭-೩೯ನೆಯ ದಿನ ಮುಳಾಮುಠಾ ಸಂಗಮದ ಹತ್ತಿರ ಜಲಸಮಾಧಿಯನ್ನು ಹೊಂದಬೇಕೆಂದು ಅವರು ನಿರ್ಧರಿಸಿದ್ದರು. ಸೇನಾಪತಿ ಬಾಪಟರವರು ಹೊರಡಿಸಿದ ತಮ್ಮ ಪ್ರಕಟಣೆಯಲ್ಲಿ ಈ ರೀತಿ ಬರೆಯುತ್ತಾರೆ “ನಾನು ಜಲಸಮಾಧಿಯನ್ನು ಹೊಂದಬೇಕೆಂದು ಮಾಡಿದ ನಿರ್ಧಾರಕ್ಕೆ ಸಾರ್ವಜನಿಕರು ಒಪ್ಪಲಿಲ್ಲ. ಅದಕ್ಕೆ ಪ್ರತಿಬಂಧ ಮಾಡುವ ಉಪಾಯಗಳನ್ನು ಅವರು ಯೋಚಿಸಹತ್ತಿದ್ದಾರೆ. ನಾನು ಸ್ವೀಕರಿಸಿದ ಧೋರಣೆಯನ್ನು ಸಾರ್ವಜನಿಕರು ವಿರೋಧಿಸುತ್ತಿರುವುದು ತಪ್ಪೆಂದು ನನಗೆ ಎನಿಸುತ್ತಿದ್ದರೂ ಅವರ ವಿರೋಧವನ್ನು ಲೆಕ್ಕಿಸದೆ ನಾನು ನನ್ನ ಈ ಕಾರ್ಯವನ್ನು ಈಡೇರಿಸಲಾರೆ”

ಸೇನಾಪತಿ ಬಾಪಟರವರು ೨ ವರ್ಷಗಳ ಹಿಂದೆ ರತ್ನಾಗಿರಿ ಸೆರೆಮನೆಯಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವಾಗ ಅವರು ಜಲಸಮಾಧಿಯನ್ನು ಹೊಂದಬೇಕೆಂಬುದಾಗಿ ನಿರ್ಧರಿಸಿದ್ದರು. ಅನಂತರ ೨ ತಿಂಗಳ ಹಿಂದೆ ಸೇನಾಪತಿಯವರು ಇದೇ ನಿರ್ಧಾರವನ್ನು ಪ್ರಸಿದ್ಧಿಸಿ ೨೩-೭-೩೯ನೆಯ ದಿವಸ ಮುಳಾಮುಠಾ ಸಂಗಮದಲ್ಲಿ ಜಲಸಮಾಧಿಯನ್ನು ಹೊಂದುವದಾಗಿ ಪತ್ರಿಕಾ ಪ್ರಕಟಣೆಯ ಮುಖಾಂತರ ಸಾರಿದ್ದರು. ತಾವು ಈ ರೀತಿ ಜಲಸಮಾಧಿ ಹೊಂದುವಾಗ ಸರಕಾರದವರು ಪ್ರತಿಬಂಧಿಸಿದರೆ ಮರಣಕೊಂದ ಪ್ರೀತಿಯ ತುರಂಗದಲ್ಲಿಯೇ ಆಯುಷ್ಯವನ್ನು ಕಳೆಯುವುದಾಗಿ ನಿರ್ಧರಿಸಿದ್ದರು. ಕಳೆದ ರವಿವಾರ ದಿನ ಬಾಪಟರವರು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿ ಸಾರಿ ಜಲಸಮಾಧಿ ಹೊಂದಲು ಸರಕಾರದವರು ಅಡ್ಡಿ ಮಾಡಿದರೆ ತುರಂಗದಿಂದ ಹೊರಗೆ ಬಂದಬಳಿಕ ಉಳಿದ ಆಯುಷ್ಯವೆಲ್ಲ ರಾಷ್ಟ್ರಕಾರ್ಯದಲ್ಲಿ ಕಳೆಯುವೆನಾಗಿ ಜಾಹೀರಮಾಡಿದ್ದರು.

ಹೊಸ ವಾರ್ತೆ

ಸಿಲೋನಿಗೆ ಭಾರತದ ರಾಯಭಾರಿಯಾಗಿ ಹೋದ ಪಂಡಿತ ಜವಾಹಿರಲಾಲ ನೆಹರೂ ಅಲ್ಲಿನ ತನ್ನ ಕಾರ್ಯಗಳನ್ನು ಮುಗಿಸಿ ಮದ್ರಾಸಿಗೆ ಹಿಂತೆರಳಿರುವನು. ಸಿಲೋನಿನ ಮಂತ್ರಿಗಳೊಡನೆ ಮಾತುಕತೆಯು ಮುಗಿದರೂ ಅದರಿಂದ ಯಾವ ನಿಶ್ಚಯದ ತೀರ್ಮಾನವೂ ಬರಲಿಲ್ಲವೆಂದು ಕಾಣಬರುವುದು. ಆದರೆ ಇಂದಲ್ಲ ನಾಳೆ, ಅವರ ಆಗಮನವು ಕೇವಲ ಅನ್ಯೋನ್ಯ ರಾಷ್ಟ್ರಗಳ ಪ್ರೇಮಸಂಬಂಧವನ್ನೇ ಹೆಚ್ಚು ಮಾಡುವಂತಹುದಾಗಿತ್ತೆಂದೂ ಹೇಳಿದರು

★

ಸಾಂಧಿಸ್ಥಾನ ಸಮಿತಿಯ ಸದಸ್ಯರು ಈಗ ಕರಾಚಿಗೆ ಸಂದರ್ಶನ ಸಮರ್ಥವಾಗಿ ಬಂದಿರುವುದು

★

ಸಿಲೋನಿನ ಪ್ರಧಾನ ಮಂತ್ರಿ ಜಯತಿಲಕರವರು ಒಜೆಟ್ ಮೀಟಿಂಗಿನ ಭಾಷಣದಲ್ಲಿ ಸಿಲೋನಿನ ಪಂಡಿತ ನೆಹರೂಗಳ ಆಗಮನದ ವಿಷಯವಾಗಿ ಮಾತನಾಡ ತಕ್ಕ, ಸಿಲೋನಿನ ಮತ್ತು ಹಿಂದೀಯರ ವಿಷಯ ಸ್ವಲ್ಪವೂ ಅಪಪ್ರಚಾರವು ಆಗದೆಯೆಂದೂ, ಪಂಡಿತ ನೆಹರೂಗಳು ಉಜ್ವಲದೇಶಾಭಿಮಾನಿಗಳಾಗಿರುವುದರಿಂದ ಸಿಲೋನೀಯರನ್ನು ರಾಷ್ಟ್ರಘಾತುಕಕಾರ್ಯ ಮಾಡಲು ಅಭಿಲಾಷೆಪಡ

★

ರಾಷ್ಟ್ರಪತಿ ಬಾಬೂರಾಜೇಂದ್ರ ಪ್ರಸಾದರು ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಗಾಗಿ ಬಂಗಾಳದ ಗೃಹಮಂತ್ರಿಗಳನ್ನು ಕಂಡು ಮಾತನಾಡಿದರು.

★

ಸಂಯುಕ್ತ ಪ್ರಾಂತದ ಅಸೆಂಬ್ಲಿಯು ಕಾಂಗ್ರೆಸ್ ಪಾರ್ಟಿಯ ಮಂತ್ರಿಮಂಡಲದಲ್ಲಿ ತನ್ನ ಪೂರ್ಣ ನಂಬಿಕೆಯನ್ನು ವ್ಯಕ್ತಪಡಿಸಿದರು.

★

ಆಂಗ್ಲ ಜಪಾನೀಯರ ಒಪ್ಪಂದದ ವಿಷಯದ ವಿವರವನ್ನು ಪ್ರಧಾನ ಮಂತ್ರಿಗಳು ಪಾರ್ಲಿಮೆಂಟಿನ ಸಭೆಯಲ್ಲಿ ವಿವರಿಸಿ ಹೇಳಿದರು.

ಸ್ವದೇಶಾಭಿಮಾನಿ

ಕಾರ್ತೀಕ ೨೮—೬—೧೯೪೯

ಪಶುರಕ್ಷಣೆ

ಕಳೆದ ವರ್ಷದಲ್ಲಿ ಆರಂಭವಾದ ಅಖಿಲ ಭಾರತ ಪಶುಪ್ರದರ್ಶನದ ಚಟುವಟಿಕೆಯು ಕೇವಲ ಒಂದೇ ವರ್ಷದ ಅಲ್ಪ ಅವಧಿಯಲ್ಲಿ ಸಂಘರೂಪವನ್ನು ಹೊಂದಿ ಉಪಯುಕ್ತ ಕೆಲಸಗಳನ್ನು ಪಡೆಯಲು ನಿಶ್ಚಯಿಸಿದ್ದು ನಿಜವಾಗಿಯೂ ಪ್ರಶಂಸಾರ್ಹವಾದ ಸಾಹಸದ ಮಾತಾಗಿದೆ.

ಪಶುಪ್ರದರ್ಶನವನ್ನು ಮಾತ್ರ ನಡೆಸುವುದಕ್ಕಿಂತ, ಪಶುಗಳ ಜೀವನ ಮತ್ತು ಪೋಷಣೆಗಳ ರೀತಿಯನ್ನು ಸುಧಾರಿಸುವ ಉದ್ದೇಶದಿಂದ ಸಂಘರೂಪದಲ್ಲಿ ಕಾರ್ಯವನ್ನು ಕೈಕೊಳ್ಳುವುದು ಬಹಳ ಅವಶ್ಯವಿರುತ್ತದೆ. ಈ ಯೋಜನೆಯನ್ನು ಆರಂಭಿಸಿದ ವೈಸರಾಯರು ಬಹು ಉತ್ಸಾಹದಿಂದ ಈ ಬಗೆಗಾಗಿ ಯತ್ನಿಸಿ, ಹಿಂದೀಯ ರೈತರ ಜೀವನದ ಸಮಸ್ಯೆಯೊಂದನ್ನು ಬಿಡಿಸಲು ಮಹೋಪಕಾರ ಮಾಡಿದ್ದಾರೆ. ಉತ್ತಮ ಜಾತಿಯ ಹೋರಿಗಳನ್ನು ಒದಗಿಸಿ ಸಾಕುವುದರಿಂದ ಮುಂಬರುವ ಒಳ್ಳೆಯ ಪಶು ಸಂತತಿಯೇ ನಾಡಿನಲ್ಲಿ ಆಗುವಂತೆ ಈ ಸಂಘವು ಕಾರ್ಯಮಾಡುವದು. ಈ ವರ್ಷದಲ್ಲಿ ಅಂತಹ ಉತ್ತಮ ಜಾತಿಯ ೩,೮೦೦ ಹೋರಿಗಳನ್ನು ಸಾಕುವ ಸಿದ್ಧತೆ ಮಾಡಿದೆ. ಬರುವ ವರ್ಷಕ್ಕೆ ಈ ಸಂಖ್ಯೆಯು ೮,೦೦೦ಕ್ಕಿಂತಲೂ ಮೀರಬಹುದಾಗಿ ಊಹಿಸಲಾಗಿದೆ.

"ಜಗತ್ತಿನ ಪಶುಗಳ ಪಟದಲ್ಲಿ, ಭಾರತದ ಪಶುಗಳನ್ನು ಗುರುತಿಸುವಂತಾಗಬೇಕೆಂದು ವೈಸರಾಯರೇ ಅಂದಂತೆ, ಭಾರತದಲ್ಲಿಯೂ ಉತ್ತಮ ಜಾತಿಯ ಪಶುಗಳ ಸಂಖ್ಯೆಯೇ ಹೆಚ್ಚುವಂತೆ ಮಾಡುವ ಈ ಅಖಿಲಭಾರತ ಯೋಜನೆಯು ಯಶಸ್ವಿಯಾಗಿ ನಡೆಯಬೇಕಾದದ್ದು ಸಮಯೋಚಿತವೂ ಅವಶ್ಯವೂ ಇರುತ್ತದೆ.

ಹಿಂದೂದೇಶವು ಪುರಾತನ ಕಾಲದಿಂದಲೇ ಪಶು ಪೂಜೆಗೆ ಪ್ರಖ್ಯಾತವಾದುದು. ಹಿಂದಿನ ಕಾಲದಲ್ಲಿ ಅತ್ಯುತ್ತಮ ಜಾತಿಯ ನಾನಾ ವಿಧದ ಪಶುಗಳು ಇಲ್ಲಿ ಸಮೃದ್ಧವಾಗಿದ್ದುವು. ಈಗ ಕೆಲಸಮಯದಿಂದ ಬಹಳ ಅವನತಿಗಿಳಿದಿದ್ದು, ಆ ಬಗ್ಗೆ ಸರಕಾರವು ಗಮನ ಕೊಡುವುದು ಅವಶ್ಯವಾಗಿರುತ್ತದೆ. ಈ ಅಖಿಲಭಾರತ ಪಶು ಜೀವನ ಸುಧಾರಣೆಯ ಯತ್ನದಲ್ಲಿ ಪ್ರಾಂತಿಕ ಸರಕಾರಗಳು ಅತ್ಯಂತ ಉತ್ಸಾಹ ತಕೊಳ್ಳುವುದು ಕಾರ್ಯದ ಯಶಸ್ವಿತೆಗೆ ಬಹಳ ಸಹಕಾರಿಯಾಗುವುದು.

ಇಂದು ಹಳ್ಳಿಯ ಪಶುಪೋಷಣೆಯ ವಿಧಾನದಲ್ಲಿ, ಬಹಳ ಕ್ರಾಂತಿಯು ಆಗಬೇಕಾಗಿದೆ. ರೈತನು ತನ್ನ ಹಟ್ಟಿಯಲ್ಲಿ ಹುಟ್ಟಿದ್ದು ಎಂಬುದರಿಂದ, ಪಶುವನ್ನು ನಿಷ್ಪ್ರಯೋಜಕನಾದರೂ ಸಾಕುತ್ತಾನೆ. ಆದರೆ ಸ್ವಲ್ಪ ಅಧಿಕ ಖರ್ಚಿನಿಂದ ತನ್ನ ಪೋಷಣೆಯಲ್ಲಿ ಇಮ್ಮಡಿ ಲಾಭವನ್ನು ಆತನು ಪಡೆಯಬಹುದಾಗಿದ್ದರೆ, ಖಂಡಿತವಾಗಿಯೂ ಅದರಿಂದ ರೈತನು ತನ್ನ ಇಂದಿನ ನಿಕೃಷ್ಟ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ಹೀಗೆ ಮಾಡಬೇಕಾದರೆ, ಇದರ ಯೋಗ್ಯ ರೀತಿಯ ಪ್ರಚಾರವು ನಡೆಯಬೇಕು. ಪ್ರಗತಿಯು ಅಷ್ಟು ತೀವ್ರವಾಗಿ ಕಂಡುಬರದಿದ್ದರೂ, ದಿನದಿಂದ ದಿನಕ್ಕೆ ಈ ಸುಧಾರಣೆಯಿಂದ ಕೃಷಿಕರ ಜೀವನವು, ಆರ್ಥಿಕ ಸ್ಥಿತಿಯೂ ಬಹುಮಟ್ಟಿಗೆ ಲಾಭದಾಯಕವಾಗುವುದು.

ಹೀಗಾಗಿ, ಹಿಂದೆ ಆಗಿದ್ದ ಎರಡು ಪ್ರದರ್ಶನಗಳು ನಿಜವಾಗಿಯೂ ಜನರ ಮನಸ್ಸಿನಲ್ಲಿ ಕ್ರಾಂತಿಯನ್ನ ಹುಟ್ಟಿಸಿವೆ. ಇಂದು ಪಶು ಪೋಷಣಾ ಸಂಘವೊಂದು ಸ್ಥಾಪಿತವಾಗಿದೆ. ಅಲ್ಲಲ್ಲಿ ಸ್ಥಳೀಕ ಸಂಘಗಳು ಶಾಖೆಗಳಾಗಿ ಸ್ಥಾಪಿತವಾಗಿವೆ. ಪಂಜಾಬ ಒಂದರಲ್ಲಿಯೇ ೧೫,೦೦೦ ಸದಸ್ಯರುಳ್ಳ ೭೦೯ ಸಂಘಗಳು ಇರುತ್ತವೆ. ಇಂತಹ ಸುಧಾರಣೆಯನ್ನು ಜಾರಿಗೆ ತರಬೇಕಾದರೆ, ಹಣವೆಷ್ಟರ ಮಟ್ಟಿಗೆ ಅಗತ್ಯವೋ ಬುದ್ಧಿವಂತಿಕೆಯು ಅಷ್ಟೇ ಅವಶ್ಯವಿರುತ್ತದೆ. ಈ ರೀತಿಯ ಫಲಕಾರಿಯಾದ ಉದ್ದೇಶದಿಂದ ಆರಂಭಿಸಲ್ಪಟ್ಟ ಈ ಸಂಘದ ಎಲ್ಲಾ ಚಟುವಟಿಕೆಗಳಿಗೆ ಎಲ್ಲೆಡೆಗಳಲ್ಲಿಯೂ ಯೋಗ್ಯ ಪ್ರೋತ್ಸಾಹವು ದೊರೆಯುವುದೆಂದು ಹಾರೈಸಬಹುದಾಗಿದೆ.

ಪ್ರಾಂತಾಭಿಮಾನ

ಉದ್ದೇಶದಲ್ಲಿ ವಿಶಾಲ ಬುದ್ಧಿಯುಳ್ಳದಿದ್ದರೆ, ಹಲವೊಮ್ಮೆ ಗೊಂದಲಗಳುಂಟಾಗುವುದುಂಟು. ಸೌಕರ್ಯದ, ಸಂಸ್ಕೃತಿಯ ದೃಷ್ಟಿಯಿಂದ ಪ್ರಾಂತಗಳ ಏಕೀಕರಣವಾಗುವುದು ಅವಶ್ಯವಿದೆ. ಇಂದು ಹರಿಹಂಚಾಗಿ ವಿಭಜಿಸಲ್ಪಟ್ಟ, ಬೇರೆ ಬೇರೆ ಭಾಷಾಪ್ರಾಂತಗಳು ಒಂದಾಗುವುದರಲ್ಲಿ ನ್ಯಾಯವೂ ಇದೆ, ಆದರೆ ಪ್ರಾಂತದ ಅಭಿಮಾನವು ನಮ್ಮನ್ನು ಸಂಕೋಚಕ್ಕೆ ಎಳೆಯಬಾರದು. ಇಂದು ಭಾರತದೇಶದಲ್ಲಿ ಇಂತಹ ಪ್ರಾಂತಾಭಿಮಾನದ ಭೂತನಾಟ್ಯವು ಆರಂಭವಾಗಿದೆಯೆಂಬ ಬೆದರಿಕೆ ಗಾಂಧಿಜಿಯವರಿಗೂ ತಲಪಿ, ಅವರು ತಮ್ಮ ಸ್ಪಷ್ಟವಾದ ಮಾತಿನಿಂದ ಭಾರತೀಯರನ್ನು ಎಚ್ಚರಗೊಳಿಸಿದ್ದಾರೆ.

ಭಾರತದ ಸ್ವಾತಂತ್ರ್ಯವೇ ಭಾರತೀಯರ ಧ್ಯೇಯ. ನಮ್ಮ ಪ್ರಾಂತಾಭಿಮಾನದ ಚಳವಳವು ಭಾರತದ ಸ್ವಾತಂತ್ರ್ಯ ಚಳವಳಕ್ಕೆ ಹಾನಿಕರವಂತಹುದಾಗಿರಬಹುದು. ಪ್ರಾಂತಪ್ರಾಂತಗಳು ಅನ್ಯೋನ್ಯ ಜಗಳಾಡುವುದರಿಂದ ಸಮಸ್ತ ಪ್ರಾಂತಗಳ ಐಕ್ಯಸ್ವಾತಂತ್ರ್ಯವು ಕನಸಿನ ಕೂಪ್ಪರಿಗೆಯಾಗುವುದು. ಆದಕಾರಣ ಮಹಾತ್ಮರೆಂದಂತೆ ನಮ್ಮ ಇಂದಿನ ಗುರಿಯ ಕಡೆಗೆ ಲಕ್ಷ್ಯವಿಟ್ಟು ನಾವು ಪ್ರಾಂತಾಭಿಮಾನವನ್ನು ಯೋಗ್ಯರೂಪದಲ್ಲಿ ಬೆಳೆಯ ಬಿಡುವುದು ಅವಶ್ಯವಿದೆ.

ಕೊಂಕಣಿ ಭಾಷಾ ಪರಿಷತ್ತು

ಕಾರವಾರದಲ್ಲಿ ಅಂಕೋಲೆಯ ರಾ। ವಿಶ್ವನಾಥ ಪಾಂಡುರಂಗ ಪ್ರಭು ಇವರ ಅಧ್ಯಕ್ಷತೆಯಿಂದ ಕೊಂಕಣಿ ಭಾಷಾ ಪರಿಷತ್ತೊಂದು ಜರಗಿತು. ಕೊಂಕಣಿ ಭಾಷೆಯೂ ಇಂದು, ಹಿಂದೀ ಮೊದಲಾದ ಭಾರತೀಯ ಭಾಷೆಗಳಂತೆ ಜೀವಂತ ಭಾಷೆಯೆಂದೂ, ಕೊಂಕಣಿ ಭಾಷಾಭಿಮಾನಿಗಳು ಆ ಬಗೆಗೆ ಯತ್ನಮಾಡುವುದು ಅಗತ್ಯವೆಂದೂ 'ಕುಮಟಾ'ದ 'ಕಾನಡಾ ವೃತ್ತ' ಪತ್ರಿಕೆಯು ಹೀಗೆಂದು ಬರೆಯುತ್ತದೆ:

"ಕೊಂಕಣಿ ಭಾಷೆ ಸ್ವತಂತ್ರವಾದ ಭಾಷೆಯೆಂದು ಈವಾಗ ಪ್ರತಿಪಾದಿಸುವದವಶ್ಯವಿಲ್ಲ. ಡಾ। ವಿಲ್ಸನ್, ಡಾ। ರಾಮಕೃಷ್ಣ ಗೋಪಾಳ ಭಾಂಡಾರಕರ ಪ್ರಭೃತಿ ಭಾಷಾವಿಷಯದ ಪ್ರಾಜ್ಞರು ಕೊಂಕಣಿ ಪ್ರತ್ಯೇಕ ಭಾಷೆಯೆಂದು ಸಿದ್ಧಪಡಿಸಿದ್ದಾರೆ. ಈಗಲೂ ಗೋವಪ್ರಾಂತದಲ್ಲಿ ನಮ್ಮ ಕ್ರಿಶ್ಚನ್ ಬಾಂಧವರು ಕೊಂಕಣಿ ಭಾಷೆಯಿಂದ ಪತ್ರಿಕೆಗಳನ್ನು ಹೊರಡಿಸಿ ಕೊಂಕಣಿಯ ಸೇವೆ ಮಾಡುತ್ತಾರೆ. ಬ್ರಿಟಿಶ ಹಿಂದುಸ್ಥಾನದಲ್ಲಿಯೇ ಕೊಂಕಣಿಗರು ಪ್ರಾಂತ ಭಾಷೆಯನ್ನು ಸ್ವೀಕರಿಸಿದರು. ಕೊಂಕಣಿಯಲ್ಲಿ ಗ್ರಂಥಭಾಂಡಾರವಿಲ್ಲ, ಕೊಂಕಣಿಗಳ ಮೂಲಕ ಕೊಂಕಣಿ ಭಾಷೆ ಊರ್ಜಿತಾವಸ್ಥೆಗೆ ಬರಲಿಲ್ಲ. ಗೋವಪ್ರಾಂತಕ ಪ್ರಾಂತವು ವಿದೇಶೀಯರ ರಾಜ್ಯಭಾರಕ್ಕೆ ಸೇರಿ ನಮ್ಮ ಮತ್ತು ಗೋವಪ್ರಾಂತದವರ ಹಿತಸಂಬಂಧಗಳೂ ವಿಚಾರಗಳೂ ಭಿನ್ನ ಭಿನ್ನವಾಗಿ ಪರಸ್ಪರ ಸಹಕಾರವಿಲ್ಲದ್ದರಿಂದ ಕೊಂಕಣಿಯ ಉತ್ಕರ್ಷಕ್ಕಾಗಲಿ ಪ್ರಚಾರಕ್ಕಾಗಲಿ ತಕ್ಕಷ್ಟು ಇಂಬು ದೊರೆಯಲಿಲ್ಲ. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ಕಾರವಾರದೊಳಗಿನ ಕೊಂಕಣಿಗರು ಕೊಂಕಣಿಯ ಉತ್ಕರ್ಷಕ್ಕಾಗಿ ಪರಿಷತ್ತು ಸೇರಿಸಿಕೊಂಡು ವಿಚಾರಮಾಡಿದ್ದು ಅಭಿನಂದನೀಯವೆಂದು ನಮ್ಮ ಅಭಿಪ್ರಾಯ. ಕೊಂಕಣಿ ಪರಿಷತ್ತು ಉತ್ತರೋತ್ತರ ಅಭಿವೃದ್ಧಿ ಹೊಂದಿ ಕೊಂಕಣಿ ಗ್ರಂಥಭಾಂಡಾರ ಬೇಗನೆ ತಯಾರಾಗಲೆಂದು ನಾವು ಹರಸುತ್ತೇವೆ.

ಕೊಂಕಣಿ ಲಿಪಿಯ ಕುರಿತು ಮತಭೇದವುಂಟು. ಕೊಂಕಣಿಗೆ ಲಿಪಿಯೇ ಇಲ್ಲವಾಗಿ ವಾದಿಸುವವರಿದ್ದಾರೆ. ಆದರೆ ಸಂಸ್ಕೃತದಿಂದ ಕೊಂಕಣಿ ಭಾಷೆ ಜನ್ಮಹೊಂದಿತೆಂದು ಸಿದ್ಧವಾದ ಬಳಿಕ, ಲಿಪಿಯ ವಾದವೇ ಉಳಿಯುವುದಿಲ್ಲ. ರಾಷ್ಟ್ರಭಾಷೆಯಾದ ಹಿಂದೀ ಭಾಷೆಗೆ ಸ್ವತಂತ್ರ ಲಿಪಿಯಿಲ್ಲ, ಪ್ರಾಕೃತ ಭಾಷೆಗೆ ಸ್ವತಂತ್ರ ಲಿಪಿಯಿಲ್ಲ. ಈ ಮೂರು ಭಾಷೆಗಳಿಗೆ ಒಂದೇ ದೇವನಾಗರಿ ಲಿಪಿ. ಈ ಲಿಪಿಯನ್ನು ಈವಾಗ ಎಲ್ಲರೂ ಕಲಿಯುವಂತೆ ಏರ್ಪಾಟಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಸಹ ಹಿಂದೀ ಭಾಷೆ ಕಲಿಸಲ್ಪಡುತ್ತದೆ. ಅದೇ ಲಿಪಿಯನ್ನು ಕೊಂಕಣಿ ಭಾಷೆಗೆ ಉಪಯೋಗಿಸಿದರಾಯಿತು. ಆ ಬಗ್ಗೆ ಪ್ರತ್ಯೇಕವಾದ ಪರಿಶ್ರಮ ಅಗತ್ಯವಿಲ್ಲ. ಕೊಂಕಣಿ ಭಾಷೆ ನಮ್ಮ ಮಾತೃಭಾಷೆಯಾದ್ದರಿಂದ ಆ ಭಾಷೆಯ ಜ್ಞಾನ ನಮಗೆ ಸುಲಭವಾಗಿ ದೊರೆಯುವಂತಿದೆ. ಮಾತೃಭಾಷೆಯಿಂದಲೇ ಶಿಕ್ಷಣ ಕೊಡಬೇಕೆಂದು ಈವಾಗ ಮುಂಬಾಯಿ ಸರಕಾರದ ಧೋರಣವುಂಟು. ಬಹುಜನ ಸಮಾಜದಲ್ಲಿ ಶಿಕ್ಷಣದ ಪ್ರಸಾರವಾಗಬೇಕಾದರೆ ಮಾತೃಭಾಷೆಯೇ ಬೋಧನಾ ಭಾಷೆಯಾಗಿರಬೇಕೆಂದು ವಿದ್ಯಾನಿಧಿಗಳೆಲ್ಲರೂ ಒಪ್ಪುತ್ತಾರೆ. ಕೊಂಕಣಿ ಭಾಷೆಯನ್ನಾಡುವವರ ಲೋಕಸಂಖ್ಯೆ ೨೦—೨೫ ಲಕ್ಷಕ್ಕೆ ಮುಟ್ಟಬಹುದು. ಮುಂಬಯಿ ಸರಕಾರವು ಶಿಕ್ಷಣಪ್ರಸಾರದ ಯೋಜನೆಯಲ್ಲಿ ಕೊಂಕಣಿ ಭಾಷೆಯನ್ನಾಡುವವರ ಬಗ್ಗೆ ಪ್ರತ್ಯೇಕ ಕ್ರಮಿಕ ಪುಸ್ತಕಗಳನ್ನು ತಯಾರಿಸಬೇಕೆಂದು ಪರಿಷತ್ತಿನಲ್ಲಾದ ತೀರ್ಮಾನವನ್ನು ನಾವು ಪುರಸ್ಕರಿಸುತ್ತೇವೆ. ಕ್ರಮಿಕ ಪುಸ್ತಕ ಮಂಡಳದಲ್ಲಿ ಕೊಂಕಣಿ ಭಾಷೆ ಬಲ್ಲ ಪ್ರಮುಖರಿಗೆ ನೇಮಿಸಬೇಕಾಗಿಯೂ ನಾವು ಸೂಚಿಸುತ್ತೇವೆ. ಕಾರವಾರದಲ್ಲಿ ಕೊಂಕಣಿಗರು ಪರಿಷತ್ತನ್ನು ಸೇರಿಸಿ ಕೊಂಕಣಿಯ ಪುರಸ್ಕಾರ ಮಾಡಿದ ಬಗ್ಗೆ ಅಖಿಲ ಕೊಂಕಣಿಗ ಸಮಾಜವು ಅವರಿಗೆ ಕೃತಜ್ಞವಾಗಿರುವುದು."

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

ದಿವಂಗತ ಶ್ರೀ ಇ ಎ ಬಾಸ್ಕರರಾಯರ ಜ್ಞಾಪಕ ಸ್ಪರ್ಧೆ

ದಿವಂಗತ ಶ್ರೀ ಇ ಎ ಬಾಸ್ಕರರಾಯರ ಹೆಸರಿನಲ್ಲಿ ಕನ್ನಡಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪ್ರೋತ್ಸಾಹಕ ಒಂದು ಏರ್ಪಾಡನ್ನು ನಡೆಸಬೇಕೆಂಬ ಉದ್ದೇಶ್ಯದಿಂದ ಶ್ರೀ ಬಾಸ್ಕರರಾಯರ ತಾಯಿಯವರಾದ ಶ್ರೀಮತಿ ಎ ಶೇಷಮ್ಮನವರು ಒಂದು ಜ್ಞಾಪಕನಿಧಿಯನ್ನು ಪರಿಷತ್ತಿಗೆ ಕೊಟ್ಟಿರುವುದು ಸರಿಯಷ್ಟೆ. ಈ ಜ್ಞಾಪಕನಿಧಿಯ ಸಂಬಂಧದಲ್ಲಿ ಈ ವರ್ಷ (1949ರಲ್ಲಿ) ಸಣ್ಣ ಕತೆಯ ಸ್ಪರ್ಧೆಯನು ಏರ್ಪಡಿಸತಕ್ಕದೆಂದು ನಿಶ್ಚಯವಾಗಿದೆ.

ನಿಯಮಗಳು

1 ಸ್ಪರ್ಧೆಯ ವಿಷಯ ಒಂದು ಸಣ್ಣ ಕಥೆ,

2 ಕತೆ ಸ್ವಂತವಾಗಿರಬೇಕು. ಇದುವರೆಗೆ ಅಚ್ಚಾಗಿಬಾರದು. ಭಾಷಾಂತರವಾಗಲೀ ರೂಪಾಂತರವಾಗಲಿ ಕೂಡದು.

3 ಕತೆ ಫುಲ್ಸ್‌ಕ್ಯಾಪ್ ಆಕಾರದ ೧೫ ಪುಟಗಳ ಪರಿಮಿತಿಯಲ್ಲಿ ಇರಬೇಕು ಮತ್ತು ಅದನ್ನು ಕಾಗದದ ಒಂದೇ ಪಕ್ಕದಲ್ಲಿ ಶಾಯಿಯಲ್ಲಿ ಸ್ಪಷ್ಟಾಕ್ಷರಗಳಲ್ಲಿ ಬರೆದಿರಬೇಕು.

4 ೧೯೪೯ನೇ ಇಸವಿ ಡಿಸೆಂಬರ್ ೧೫ನೆಯ ತಾರೀಖಿನೊಳಗಾಗಿ ಪರಿಷತ್ತಿನ ಕಚೇರಿಗೆ ಕತೆ ಕಳಿಸಬೇಕು.

5 ಅತ್ಯುತ್ತಮವೆಂದು ಪರೀಕ್ಷಾ ಸಮಿತಿ ತೀರ್ಮಾನಿಸಿದ ಕತೆಗೆ ೫೦ ರೂಪಾಯಿಗಳ ಬೆಲೆಯ ಬಹುಮಾನವನ್ನು ಕೊಡಲಾಗುವುದು.

6. ಬಹುಮಾನವನ್ನು ಪಡೆದ ಕತೆಯನ್ನು ಪ್ರಕಟಿಸಲು ಪರಿಷತ್ತಿಗೆ ಹಕ್ಕು ಇರುತ್ತದೆ.

7. ಬಹುಮಾನಕ್ಕೆ ಅರ್ಹವಾದ ಕತೆ ಬಾರದಿದ್ದಲ್ಲಿ ಬಹುಮಾನವನ್ನು ಕೊಡದೆ ಇರುವ ಹಕ್ಕು ಪರಿಷತ್ತಿಗೆ ಇದೆ.

8. ಸಾಕಷ್ಟು ಸಂಖ್ಯೆಯಲ್ಲಿ ಕತೆಗಳು ಬಾರದಿದ್ದಲ್ಲಿ ಸ್ಪರ್ಧೆಯನ್ನು ನಿಲ್ಲಿಸಿದರೂ ನಿಲ್ಲಿಸಬಹುದು.

ವಿಶೇಷ ಸೂಚನೆ

ಈ ಸ್ಪರ್ಧೆಯಲ್ಲಿ ಹಿಂದೆ ಬಹುಮಾನವನ್ನು ಪಡೆದವರು ನಿಲ್ಲಬಾರದು. ಬಂದ ಕತೆಯನ್ನು ಹಿಂದಕ್ಕೆ ಕಳುಹಿಸಲಾಗುವುದಿಲ್ಲವಾದುದರಿಂದ ಸ್ಪರ್ಧಿಗಳು ಕಡೆಯ ಒಂದು ಪ್ರತಿಯನ್ನು ತಮ್ಮಲ್ಲಿ ಉಳಿಸಿಕೊಳ್ಳಬೇಕೆಂದು ಪ್ರಾರ್ಥನೆ.

ಕತೆಯನ್ನೂ ಸ್ಪರ್ಧೆಯ ವಿಚಾರದ ಕಾಗದಗಳನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು.

ಸಿ ಕೆ ವೆಂಕಟರಾಮಯ್ಯ,
ಗೌರವ ಕಾರ್ಯದರ್ಶಿ,
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು

ಸ್ವೀಕಾರ--ವಿಮರ್ಶೆ

ಸುಳಿವು–ಹೊಳವು:– (ಪ್ರಬಂಧ ಸಂಗ್ರಹ) ಸಂಪಾದಕ ಜಿ. ಬಿ. ಜೋಶಿ, ಮನೋಹರ ಗ್ರಂಥಮಾಲಾ ಧಾರವಾಡ. ಕ್ರೌನ್ ೧/೮ ಆಕಾರದ ೯+೧೯೩ ಪುಟಗಳು. ಬೆಲೆ ರೂ ಒಂದು.

ಕನ್ನಡದಲ್ಲಿ ಹೆಸರಾಂತ ಹಲವು ಬರಹಗಾರರ ಇಪ್ಪತ್ತಾರು ಪ್ರಬಂಧಗಳ ಸಂಗ್ರಹವಿದು. ಧಾರವಾಡದ ಮನೋಹರ ಗ್ರಂಥಮಾಲೆಯ ಮೂವತ್ತೈದನೇ ಕುಸುಮವಾಗಿ ಇದು ಅರಳಿದೆ. ಶ್ರೀ ಗೋಕಾಕರ ವಿದ್ವತ್ಪೂರ್ಣವಾದ ಮುನ್ನುಡಿಯು ಈ ಗ್ರಂಥದ ಅವಗಾಹನೆಗೆ ಕೈದೀವಿಗೆಯಾಗಿದೆ. ಕನ್ನಡದಲ್ಲಿ ಪ್ರಬಂಧ ಸಾಹಿತ್ಯದ ಬರವಣಿಗೆಗಾಗಿ ಶ್ರಮಪಡುವವರಿಗೆ ಈ ಗ್ರಂಥವು ಬಹುಮಟ್ಟಿಗೆ ಬೆಂಬಲವಾಗುವುದು.

ಕನ್ನಡದಲ್ಲಿ ನವೀನ ಸಾಹಿತ್ಯವು ಸೃಷ್ಟಿಯಾಗುತ್ತಿದೆ. ಕಾದಂಬರಿಗಳು ಸಣ್ಣ ಕತೆಗಳು, ಏಕಾಂಕರೂಪಕಗಳು ರುದ್ರ ನಾಟಕಗಳು ಭಾವಗೀತೆಗಳು ಇವೇ ಮೊದಲಾದುವು ಹೊಸಗನ್ನಡ ಸಾಹಿತ್ಯದ ಸಂಪತ್ತನ್ನು ಬೆಳೆಸಿವೆ. ಇವುಗಳ ಸಾಲಿಗೆ ಹರಟೆ ಪ್ರಬಂಧಗಳೂ ಸೇರಿ ಹೊಸಗನ್ನಡ ಸಾಹಿತ್ಯದ ಪ್ರವಾಹವನ್ನು ಒಂದು ಪೂರ್ಣತೆಯ ಕಡೆಗೆ ಒಯ್ಯುವ ಸಾಹಸವನ್ನು ಆಧುನಿಕರು ಮಾಡುತ್ತಿದ್ದಾರೆ. ಈ ವಿಧದ ಕಾರ್ಯದಲ್ಲ ಈ ಗ್ರಂಥವು ಮಹತ್ವದ ಸ್ಥಾನವನ್ನು ಪಡೆಯುತ್ತದಾಗಿದೆ. ವಿಚಾರ ಭಾವನೆಗಳು ವರ್ಣನಾ ಸ್ವೈರ ವಿಹಾರ ಪಡೆದ ಅನುಕರಣೆ ಜೀವನದ ಈ ರೀತಿ. ವಿವಿಧ ಧರ್ಮಗಳೇ ಈ ಬರಹಗಳ ಪ್ರಚೋದಕ ವಸ್ತುಗಳಾಗಿವೆ. ರಸಿಕರಿಗೆ—ಸಾಹಿತ್ಯಾಭ್ಯಾಸಿಗಳಿಗೆ ಕತೆ—ಕಾದಂಬರಿಗಳಂತೆ, ಕವನ—ಕಾವ್ಯಗಳಂತೆ ಪ್ರಬಂಧಗಳೂ ಕೊನೆಗಾಣದ ಹರ್ಷವನ್ನೇ ಉಂಟುಮಾಡುವವು.

ಕನ್ನಡದ ಇಪ್ಪತ್ತಾರು ಮಂದಿ ಪ್ರಸಿದ್ಧ ಲೇಖಕರ ಲೇಖನ ವೈಶಿಷ್ಟ್ಯವು ಪ್ರತಿಯೊಂದು ಪ್ರಬಂಧದಲ್ಲಿಯೂ ಪ್ರತ್ಯೇಕವಾಗಿ ಒಡಮೂಡಿವೆ. ಕತೆಗಾರರು, ಕಥಾಶೈಲಿಯನ್ನೂ ತತ್ವಜ್ಞರು ತಾತ್ವಿಕ ವಿಚಾರಗಳನ್ನೂ ನಗೆಗಾರರು ಹಾಸ್ಯವನ್ನೂ ವಿಮರ್ಶಕರು ವಿಮರ್ಶಾರೀತಿಯನ್ನೂ ಕವಿಗಳು ಕವನಶೈಲಿಯನ್ನೂ ತಮ್ಮ ಲೇಖನಗಳಲ್ಲಿ ತಂದು ಕೂಡಿಸಿ ಸಮಸ್ತರಿಂದ ಗ್ರಂಥದ ಮನೋಹರತೆಯನ್ನು ಹೆಚ್ಚಿಸಿದ್ದಾರೆ.

ಶ್ರೀ ಕಾರಂತರನ್ನುಳಿದು ದಕ್ಷಿಣ ಕನ್ನಡದ ಲೇಖಕರ ಬರೆಹಗಳಿಲ್ಲ. ಶ್ರೀ ಗೋವಿಂದ ಪೈ, ಕಡೆಂಗೋಡ್ಲು ಶಂಕರ ಭಟ್ಟ, ಎಂ ಎನ್ ಕಾಮತ್ ಮೊದಲಾದ ಉತ್ತಮ ಪ್ರಬಂಧ ಲೇಖಕರ ನೆರವನ್ನು ಪ್ರಕಾಶಕರು ಪಡೆಯಲಾಗದಿದ್ದುದು ಪುಸ್ತಕದ ಪೂರ್ಣತೆಗೆ ಕೊರತೆಯಾಗಿಯೇ ಉಳಿದಿದೆ.

ಶ್ರೀ ಜಿ ಬಿ ಜೋಶಿಯವರು ಮನೋಹರ ಗ್ರಂಥಮಾಲೆಯ ಮೂಲಕ ಕನ್ನಡಿಗರಿಗೆ ೩೫ ಶಾಶ್ವತ ಗ್ರಂಥಗಳನ್ನು ಒದಗಿಸಿಕೊಟ್ಟು ಮಹಾ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಈ ಅದ್ಭುತ ಉತ್ಸಾಹಕ್ಕೆ ಮಹಾಜನರ ನೆರವು ದೊರಕಲಿ ಎಂದು ಹಾರೈಸುತ್ತೇವೆ.

ಕಯ್ಯಾರ

ವಸಂತ—(ಕನ್ನಡ ಮಾಸ ಪತ್ರಿಕೆ) ಸಂಪಾದಕರು—ಶ್ರೀ ಎಸ್ ಕೆ ಕುಲಕರ್ಣಿ ಎಂ ಎ ಗದಗ.

ಉತ್ತಮ ವರ್ಗದ ಕನ್ನಡ ಮಾಸ ಪತ್ರಿಕೆ. ಶ್ರೀ ಗಳಾದ ಆಲೂರ ವೆಂಕಟರಾಯರು, ಬೇಂದ್ರೆಯವರು, ಪ್ರೊ. ಎಂ ಎಸ್ ಕುಲಕರ್ಣಿ ಮೊದಲಾದ ಹೆಸರಾಂತ ಲೇಖಕರ ಬರೆಹಗಳಿವೆ. ಕನ್ನಡದ ಏಳಿಗೆಯಲ್ಲಿ ಈ ಪತ್ರಿಕೆಯು ಸರ್ವತೋಮುಖವಾದ ಚಳವಳ ನಡೆಸಿ ಅಭಿವೃದ್ಧಿ ಹೊಂದಲೆಂದು ಹಾರೈಕೆ.

ಕಾರಣ ಪುರುಷ:—ಲೇಖಕರು ರಂ ಶ್ರೀ ಮುಗಳಿ ಎಂ ಎ, ಬಿ ಟಿ ಮನೋಹರ ಗ್ರಂಥ ಮಾಲೆಯ ಪ್ರಕಟಣೆ. ವಿಮರ್ಶೆಯು ಮುಂದಿನ ಸಂಚಿಕೆಯಲ್ಲಿ.

ಹರಿಜನೋದ್ಧಾರಕ ಭಗವಾನ್ ಗೌತಮ ಬುದ್ಧ!

★

ಹುಟ್ಟಿನಿಂದ ಹೊಲೆಯ, ಮುಟ್ಟಬೇಡ ಎನ್ನುವಿರಾ? ನೀತಿಯ ನೆಲೆಯಿಲ್ಲದಿದ್ದರೂ, ಜಾತಿಯಿಂದ ಬ್ರಾಹ್ಮಣನಾದರೆ—ಉತ್ತಮನೆನಿಸ

ಬಹುದೇ? ಭಗವಾನ್ ಬುದ್ಧದೇವನ ಜೀವನದಲ್ಲಿ ನಡೆದ ಈ ಘಟನೆಗಳು ಈ ಪ್ರಶ್ನೆಗಳಿಗೆ ಉತ್ತರ ಕೊಡುವವು

★

ಭಾರತ ಭೂಮಿಯು ಅನೇಕ ಯುಗಪುರುಷರಿಗೆ ಜನ್ಮವಿತ್ತಿದೆ; ಲೋಕದಲ್ಲಿ ಅನ್ಯಾಯವು ತುಂಬಿದ್ದಾಗ, ಅದನ್ನು ತಡೆಗಟ್ಟುವ ಸಲುವಾಗಿ ಬಹುಮಂದಿಯು ಭಾರತೀಯ ಬಸುರಲ್ಲಿ ಹುಟ್ಟಿಬಂದು, ದೇಶದ, ಧರ್ಮದ ಸೇವೆಯನ್ನು ಸಲ್ಲಿಸಿ ಹೆಸರುವಾಸಿಗಳಾದರು.

ಅಂತವರಲ್ಲಿ, ಭಗವಾನ್ ಬುದ್ಧದೇವನೂ ಒಬ್ಬನು! ಅಂದು ಹಿಂಸೆಯು 'ಮಡಿನಲ್ಲೇ' ಹರಡಿತ್ತು! 'ಅಶ್ವಮೇಧ' 'ಅಜಮೇಧ' ಮೊದಲಾದ ಪುಣ್ಯಕಾರ್ಯಗಳ ನೆವನದಿಂದ ಧಾರ್ಮಿಕರೆಂದೆನಿಸಿಕೊಳ್ಳುವವರೇ, ನಿರಪರಾಧಿಗಳಾದ ಜೀವಿಗಳ ಕುತ್ತಿಗೆ ಹಿಂಡಿ, ರಕ್ತಪಾನ ಮಾಡುವ ಹವ್ಯಾಸಕ್ಕೆ ಬಿದ್ದಿದ್ದರು. ಉತ್ತಮ ಆಚಾರವಂತರಾದವರೇ, ಧರ್ಮದ ನಿಜವಾದ ನೆಲೆಯನ್ನು ಬಿಟ್ಟು, ಅನ್ಯಾಯಕ್ಕೆ ಕೈಹಚ್ಚಿದಾಗ, ಇನ್ನಿತರರ ಪಾಡೇನು? ಕ್ರಾಂತಿಯ—ಹಿಂಸೆಯ ಹೊನಲು ಹರಿದು, ಪುಣ್ಯಭೂಮಿಯೇ ಕಲುಷಿತವಾದಂತಾಯಿತು! ಕರುಣಾಮಯಿಯಾದ ವಸುಂಧರೆಯು, ಇದನ್ನು ಸಹಿಸದೆ ಎದೆಕರಗಿ ಮೊರೆಯಿಟ್ಟಳು!

ಶುದ್ಧೋದನ ಮಾಯಾವತಿಯರ ಬಸುರಲ್ಲಿ ಶಾಕ್ಯವಂಶದಲ್ಲಿ—ಸಿದ್ಧಾರ್ಥನು ಉದಿಸಿದನು. ತನ್ನ ಅಪರವಯಸ್ಸಿನಲ್ಲಿ ಮುದ್ದುಕುವರನ ಮುಖವನ್ನು ಕಂಡು ಶುದ್ಧೋದನನು ಹಿಂಹಿಗ್ಗಿದನು. ದಿನದಿಂದ ದಿನಕ್ಕೆ ಪೂರ್ಣಚಂದಿರನಂತೆ ಬೆಳೆಯುವ ಪುತ್ರನ ಅಂಗೋಪಾಂಗಗಳನ್ನೂ ಆಟಪಾಟಗಳನ್ನೂ ನೋಡಿ, ಮಾತೆ ಮಾಯಾವತಿಯು ತಲ್ಲೀನಳಾದಳು.

ಬಾಲ್ಯದಿಂದಲೇ ಸಿದ್ಧಾರ್ಥನ ಮನಸ್ಸು ಕರುಣೆಯಿಂದಲೇ ಕೂಡಿತ್ತು! ದರಿದ್ರರನ್ನು ದುಃಖಿತರನ್ನು—ರೋಗಿಗಳನ್ನು ಕಂಡಾಗ ಆತನಿಗೆ ಸಿಗುವ ವ್ಯಥೆಗಾಗಿ ಶುದ್ಧೋದನನು ಸಿದ್ಧಾರ್ಥನನ್ನು ಪ್ರಪಂಚದ ನಿಷ್ಠುರಗಳಿಂದ ದೂರವಾಗಿರಿಸಿ, ವಿಲಾಸ ವೈಭವದಿಂದ ಸಾಕಿದನು!

ಪ್ರಾಯ ತುಂಬಲು ಆತನಿಗೆ ಯಶೋಧರೆ ಎಂಬ ಸುಂದರಿಯಾದ ರಾಜಕುವರಿಯೊಡನೆ ಪಾಣಿಗ್ರಹಣವಾಯಿತು. ಅವರ ಗರ್ಭದಲ್ಲಿ ಒಂದು ಪುತ್ರ ಸಂತಾನವೂ ಹುಟ್ಟಿತು!

ದೀನರ—ಆರ್ತರ ಮೊರೆಯು ಆತನನ್ನು ಎಡೆಬಿಡದೆ ಎಚ್ಚರಿಸಿತೋ ಏನೋ? ಸಿದ್ಧಾರ್ಥನು ಒಂದು ದಿನ ಇರುಳು ರಾಜಗೃಹವನ್ನೂ ಸರ್ವಸ್ವವನ್ನೂ ಬಿಟ್ಟು, ವಿಶಾಲ ವಿಶ್ವದ ಕರುಣಾಪಥದಲ್ಲಿ ಕಾಲಿಟ್ಟನು!

ಪ್ರಪಂಚದ ನಶ್ವರತೆಯನ್ನು ಮನಗಂಡು ಭೋಗ ಭಾಗ್ಯಗಳಿಗೆ ಹೇಸಿ, ರಾಜಪೀಠವನ್ನು ನಿಸ್ವಾರ್ಥವಾಗಿ ಬಗೆದು, ಪ್ರಾಣಿವರ್ಗಕ್ಕೇ ಜೀವನ್ಮುಕ್ತಿಯನ್ನು ಅರಸಲು ಹೋದ ಶಾಕ್ಯ ರಾಜಪುತ್ರ ಸಿದ್ಧಾರ್ಥನ ಜೀವನವು ಅನೇಕ ಮಹಾ ಅದ್ಭುತ ಕಾರ್ಯಗಳಿಂದ ಮನೋಹರವಾಗಿದೆ. ಕಷ್ಟದಿಂದ, ರೋಗದಿಂದ, ಹಸಿವಿನಿಂದ, ಕಡೆಗೆ ಮೃತ್ಯುವಿನ ಭಯಂಕರ ಮುಖದಿಂದ ಜೀವಜಾಲಗಳನ್ನು ತಪ್ಪಿಸುವ ಸಲುವಾಗಿ, ಆತನ ಬಾಳುವೆಯು ಸಫಲವಾಯಿತು. ಅಂತಹ ಮಹಾತ್ಮನು ಹೇಗೆ ಹರಿಜನರನ್ನೂ ಉದ್ಧಾರ ಮಾಡಿದನೆಂಬ ವಿಷಯವು ಬಹಳ ಮಹತ್ವದ್ದಾಗಿದೆ.

ಶ್ರಾವಸ್ತಿಯಲ್ಲಿ ಭಗವಾನ್ ಬುದ್ಧನು ವಾಸಮಾಡುತ್ತಿದ್ದಾಗ, ಭಿಕ್ಷೆಗೆಂದು ಒಂದು ಪ್ರಾತಃಕಾಲ ನಗರದ ಅಭಿಮುಖವಾಗಿ ಹೊರಟನು. ಈ ಸಮಯದಲ್ಲಿ ಭಾರದ್ವಜನೆಂಬ ಬ್ರಾಹ್ಮಣನು, ತನ್ನ ಮನೆಯಲ್ಲಿ ಪೂಜೆಮಾಡುತ್ತಿದ್ದನು. ಗೌತಮನು ಬರುತ್ತಿರುವುದನ್ನು ಕಂಡು, ಆತನು "ಎಲೈ ಶ್ರವಣಕನೇ, ವೃಷಲನೇ, (ಅಸ್ಪೃಶ್ಯ) ದೂರ, ದೂರ ನಿಲ್ಲು" ಎಂದು ಆಕ್ಷೇಪಿಸಿದನು. ಬುದ್ಧದೇವನು ಶಾಂತಮನಸ್ಸಿನಿಂದ, ಗಂಭೀರನಾಗಿ "ಎಲೈ ಬ್ರಾಹ್ಮಣನೇ, ವೃಷಲನೆಂದರೆ ಯಾರೆಂದು ನಿನಗೆ ಗೊತ್ತಿದೆಯೇ?" ಎಂದು ಪ್ರಶ್ನಿಸಿದನು. ಬ್ರಾಹ್ಮಣನು ಇದರಿಂದ ಬೆರಗಾಗಿ "ಎಲೈ ಗೌತಮನೇ, ವೃಷಲನೆಂದರೆ ಯಾರೆಂದೂ, ವೃಷಲನಾಗುವುದು ಯಾವ ಕಾರಣದಿಂದಲೆಂದೂ ನನಗೆ ನಿಜವಾಗಿ ಗೊತ್ತಿಲ್ಲ. ದಯಮಾಡಿ ಆ ವಿಷಯವನ್ನು ಬೋಧಿಸು" ಎಂದು ಆಗ್ರಹಪೂರ್ವಕವಾಗಿ ಬಿನ್ನವಿಸಿಕೊಂಡನು. ಭಗವಾನ್ ಬುದ್ಧನು ಹೀಗೆಂದು ಉಪದೇಶಿಸಿದನು.

"ಯಾವ ಮನುಷ್ಯನು ಕೋಪ, ಮತ್ಸರ, ಕಪಟತನ ಮತ್ತು ದುಷ್ಟ ವಿಚಾರಗಳನ್ನು ಮಾಡುತ್ತಾನೋ, ಯಾವನು ಜೀವಜಾಲಗಳಿಗೆ ತನ್ನ ಜೀವನದಲ್ಲಿ ಒಂದೇ ಸಲವಾದರೂ ಬೇನೆ ಮಾಡಿದ್ದಾನೋ, ಯಾವನು ಕಾಡಿನಲ್ಲಿ ಪರ್ವತದಲ್ಲಿಯೇ ಇರಲಿ ಪರರ ಸೊತ್ತನ್ನು ಅಪಹರಿಸುವನೋ, ಯಾವನು ತೆಗೊಂಡ ಋಣವನ್ನು ತೆರದೆ ಪರಾರಿಯಾಗುತ್ತಾನೋ, ಯಾವನು ತನಗಾಗಿಯಾಗಲಿ, ಅನ್ಯರಿಗಾಗಿಯಾಗಲಿ, ಅಥವಾ ಧನಾರ್ಜನೆಯ ಲಾಲಸೆಯಿಂದಾಗಲಿ ಸುಳ್ಳು ಹೇಳುತ್ತಾನೋ, ಯಾವನು ಬಲಾತ್ಕಾರದಿಂದಾಗಲಿ, ಒಪ್ಪಿಗೆಯಿಂದಾಗಲಿ ಪರಸ್ತ್ರೀಯಲ್ಲಿ ಪ್ರೇಮ ಮಾಡುತ್ತಾನೋ, ಯಾವನು ತನ್ನ ಕುರಿತು ಅಧಿಕ ಅಹಂಕಾರಪಟ್ಟುಕೊಳ್ಳುತ್ತಾನೋ, ಅವನು ವೃಷಲನು ಎಂದರೆ ಅಸ್ಪೃಶ್ಯನು. ಅಲ್ಲದೆ ಜನ್ಮದಿಂದ ಯಾರೂ ಅಸ್ಪೃಶ್ಯನಾಗಲಿ, ಬ್ರಾಹ್ಮಣನಾಗಲಿ ಆಗುವುದಿಲ್ಲ".

ಬುದ್ಧನ ಈ ವಿಚಾರಪೂರ್ಣವಾದ ಸಿದ್ಧಾಂತಯುಕ್ತವಾದ ಬೋಧನಾತತ್ವಗಳು ಬ್ರಾಹ್ಮಣನನ್ನು ಅಜ್ಞಾನದಿಂದ ಎಚ್ಚರಗೊಳಿಸಿದವು. ಆತನು ಬುದ್ಧನನ್ನು ಕರೆತಂದು ಸತ್ಕರಿಸಿದನು. ತನ್ನ ನಿಖಿಲ ಐಶ್ವರ್ಯವನ್ನೂ ಬಡಬಗ್ಗರಿಗಾಗಿ ದಾನವಾಗಿತ್ತು, ಬುದ್ಧನ ಶಿಷ್ಯನಾಗಿ ಸೇರಿ ಭಿಕ್ಷುಕನಾದನು!

೨

ಹಲವು ಹರಿಜನರು ಬುದ್ಧಭಿಕ್ಷುಗಳೂ ಸನ್ಯಾಸಿಗಳೂ ಆಗಿದ್ದರು. ಸುನೀತನೆಂಬವನು ಅಂತಹ ಪ್ರಖ್ಯಾತರಾದ ಸನ್ಯಾಸಿಯರಲ್ಲಿ ಒಬ್ಬ. ಆತನು ಮೊದಲು ರಾಜಗೃಹದಲ್ಲಿದ್ದ ಒಬ್ಬ ಹೂತೋಟದ ಕೂಲಿಯಾಗಿದ್ದ. ಒಮ್ಮೆ ಆತನು ಹೂತೋಟದಲ್ಲಿ ಕಸಗುಡಿಸುತ್ತಾ, ಕಸ್ಮಲಗಳನ್ನು ಹೆಗಲಲ್ಲಿರುವ ಬುಟ್ಟಿಯಲ್ಲಿ ಹೊತ್ತುಕೊಂಡು ಹೋಗುತ್ತಿರಲು, ನಗರಾಭಿಮುಖನಾಗಿ ಬರುವ ಬುದ್ಧದೇವನನ್ನು ಕಂಡನು. ಮನುಷ್ಯರ ಹೃದಯಗಳಲ್ಲಿರುವ ಕಷ್ಟಗಳನ್ನು ತೊಳೆಯುತ್ತ ಬರುವ ಮಹಾತ್ಮನ ದಿವ್ಯ ವಿಗ್ರಹವನ್ನು ಕಂಡು, ಆತನ ದಿವ್ಯವಾಣಿಗೆ ಮನಸೋತು, ಸುನೀತನು ಚಿತ್ರಗತ ಮೂರ್ತಿಯಂತೆ ನಿಂತುಬಿಟ್ಟನು. ಆತನ ಅಂತರ್ಯವನ್ನು ತಿಳಿದು ಭಗವಾನನು "ಬಂಧುವೇ ನೀನು ಪ್ರಪಂಚದ ಸುಖವನ್ನು ಬಿಡಬಲ್ಲೆಯಾ?" ಎಂದು ಪ್ರಶ್ನಿಸಿದನು. ಸುನೀತನು ಗುರುಚರಣದಲ್ಲಿ ಶರಣಾದನು. ಬುದ್ಧನು ಆತನ ವಿಷಯದಲ್ಲಿ ಪ್ರತ್ಯೇಕ ಆಸಕ್ತಿಯನ್ನು ತೆಗೆದುಕೊಂಡು, ಧರ್ಮತತ್ವವನ್ನು ತಿಳಿಸುತ್ತಾ ಬಂದಂತೆ, ದಿನದಿಂದ ದಿನಕ್ಕೆ ಸುನೀತನು ಇತರ ಶಿಷ್ಯರಿಗಿಂತಲೂ ಅಭಿವೃದ್ಧಿಯನ್ನು ತೋರಿಸಿದನು. ಮುಂದೆ ಸನ್ಯಾಸಿಯಾಗಿ ತನ್ನ ಜೀವನವನ್ನು ಉತ್ತಮ ಆದರ್ಶದಲ್ಲಿ ನಡೆಸಿದನು. ತನ್ನ ಜೀವನದ ಘಟನೆಯ ಕುರಿತು ಆತನೇ ಪಾಲಿಭಾಷೆಯಲ್ಲಿ ಸುಂದರವಾದ ಶೈಲಿಯಲ್ಲಿ ವಿವರಿಸಿದ್ದಾನೆ.

"ರತ್ತಿಯಾ ಪಟಮಂ ಯಾಮಂ ಪುಬ್ಬಜಾತಿ ಮನುಸ್ಸರಿಂ, ರತ್ತಿಯಾ ಮಜ್ಝಿಮಂ ಯಾಮಂ ದಿಬ್ಬ ಚಕ್ಖುಂ ವಿಸೋಧಿತಂ, ರತ್ತಿಯಾ ಪಚ್ಛಿಮೇ ಯಾಮೇ ತಮೋ ಖಂಧಂ ಪದಾಲಯಿಂ" ಎಂದರೆ ಬುದ್ಧದೇವನ ಬೋಧಾಮೃತವು ದೊರಕಿದಮೇಲೆ ರಾತ್ರಿಯ ಪೂರ್ವಯಾಮದಲ್ಲಿ ನನಗೆ ಪೂರ್ವಜನ್ಮಗಳ ಸ್ಮರಣೆ ಬಂತು, ರಾತ್ರಿಯ ಮಧ್ಯಯಾಮದಲ್ಲಿ ನನಗೆ ದಿವ್ಯಚಕ್ಷುವು ಹೊಳೆಯಿತು; ರಾತ್ರಿಯ ಅಪರಯಾಮದಲ್ಲಿ ನನ್ನನ್ನು ಆವರಿಸಿದ್ದ ಅಜ್ಞಾನವು ತೊಲಗಿಹೋಯಿತು" ಎಂದು ಅವನು ಹೇಳಿದ್ದಾನೆ.

ಶ್ವಾಪಕ ಮತ್ತು ಸುಪ್ರಿಯಾ ಎಂಬ ಇನ್ನಿಬ್ಬರು ಹರಿಜನ ಶಿಷ್ಯರೂ ಬುದ್ಧದೇವನ ಆಶ್ರಯದಲ್ಲಿದ್ದರು. ಪ್ರಸವವೇದನೆಯಿಂದ ಶ್ವಾಪಕನ ತಾಯಿಯು ಮೂರ್ಛಿತಳಾಗಿದ್ದಳು. ಬಂಧುಗಳು ಆಕೆಯು ಸತ್ತಳೆಂದು ಗ್ರಹಿಸಿ, ಚಿತೆಯಲ್ಲಿಟ್ಟು ಬೆಂಕಿಕೊಟ್ಟರು; ಪ್ರಾಣಿಸುಳಿ ಬಂದು ಅಗ್ನಿಯು ಉರಿಯಲಿಲ್ಲ. ಚಿತೆಯ ಮೇಲೆ ಆಕೆಯು ಶ್ವಾಪಕನಿಗೆ ಜನ್ಮವಿತ್ತಳು. ಕಾವಲುಗಾರರು ತೆಗೆದುಕೊಂಡುಹೋಗಿ ಆತನನ್ನು ಕಾಪಾಡಿದರು. ಏಳುವರ್ಷದ ಬಾಲಕ ಸುಪ್ರಿಯನನ್ನು ಕಂಡು, ಆತನ ತೇಜಸ್ಸಿಗೆ ಮೆಚ್ಚಿ ಭಗವಾನ್ ಬುದ್ಧನು ತನ್ನ ರಕ್ಷಣೆಯಲ್ಲಿ ಸ್ವೀಕರಿಸಿಕೊಂಡನು. ಅದೇ ಶ್ವಾಪಕನೇ ಮುಂದೆ ಹರ್ಷಿತನಾಗಿ ಸಹೋದರ ಭಿಕ್ಷುಗಳಿಗೆ ವಿಶ್ವಪ್ರೇಮವನ್ನು ಬೋಧಿಸಿದನು. ಆತನೇ ತನ್ನ ವಿಷಯದಲ್ಲಿ—

"ಧರೇಮಿ ಅಂತಿಮಂ ದೇಹಂ ಅಹೋ ಧಮ್ಮ ಸುಧಮ್ಮತಾ" ಎಂದಿದ್ದಾನೆ. ಅಂದರೆ ಇದೇ ನನ್ನ ಕೊನೆಯ ಜನ್ಮ; ಅಹೋ ಧರ್ಮಪ್ರಭಾವವೇ! ನಿಜವಾಗಿಯೂ ಭಗವಾನ್ ಬುದ್ಧನು ಹರಿಜನ ಬಂಧು, ಮಾತ್ರವಲ್ಲ ಹರಿಜನೋದ್ಧಾರಕನು!

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಾಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು

The Canara Industrial & Banking Syndicate Ltd.

Head Office: UDIPI (S. India)

ESTD) (1925

MEMBER: Reserve Bank of India, Bankers' Clearing House, Bombay.

Five Year Cash Certificates are issued at the price of Rs. 8, Rs. 80, Rs. 400 and Rs. 800, repayable on maturity at Rs. 10, Rs. 100, Rs. 500, and Rs. 1000 respectively.

You can cash the Certificates at any time be maturity

AN INVESTMENT WHICH IS LIQUID AND YET VERY REMUNERATIVE.

Further particulars can be had from: The Car Street Branch, Mangalore.

GENERAL BANKING BUSINESS TRANSACTED.

ಹೊಗೆಸೊಪ್ಪು ಸೇದುವಿಕೆಯ ಇತಿ ಹಾಸ!

ಬಹು ಕಾಲದಿಂದ ಮಾನವ ಸಂತತಿಗೆ ಅಂಟಿದ ರೋಗ!

ಗ್ರಂಥಕರ್ತರೂ ರಾಜನೀತಿಜ್ಞರೂ ಇದಕ್ಕೆ ಬಲಿಯಾಗಿದ್ದಾರೆ! ಹಿಟ್ಲರ್-ಮುಸಲೋನಿಗಳಿಗೆ ಇದರ ಅಭ್ಯಾಸವೇ ಇಲ್ಲ! ಜಿನ್ನಾ-ಸಪ್ರುಗಳಿಗೆ ಅದಿಲ್ಲದೆ ಸಾಧ್ಯವೇ ಇಲ್ಲ!

ಹೊಗೆಸೊಪ್ಪು ಸೇದುವ ಅಭ್ಯಾಸವು ಬಹಳ ಹಿಂದಿನ ಕಾಲದಿಂದಲೇ ನಡೆದುಬಂದಿದೆ. ಕ್ರಿಸ್ಟೋಫರ್ ಕೊಲಂಬಸನು ೧೪೯೨ರಲ್ಲಿ ವೆಸ್ಟ್ ಇಂಡೀಸನ್ನು ಕಂಡು ಹುಡುಕಿದಾಗ ಕ್ಯೂಬಾದಲ್ಲಿರುವ ಕೆಂಪು ಚರ್ಮದ ಜನರು ಬಾಯಿಂದ ಹೊಗೆ ಬಿಡುವುದನ್ನು ಕಂಡನು 'ಸಿಗಾರ'ನ್ನು ಆಗಲೇ ಕಟ್ಟಿ ಸೇದುತ್ತಿದ್ದರು.

ಹದಿನಾರನೇ ಶತಮಾನದ ಅಪರಾರ್ಧದಲ್ಲಿ ಇಂಗ್ಲೆಂಡಿಗೆ ಈ ಅಭ್ಯಾಸವು ಮೊದಲು ಬಂತು. ಎಲಿಜಬೆತ್ ರಾಣಿಯು ಕಾಲದ ನೌಕಾಧಿಕಾರಿಗಳಲ್ಲಿ ಒಬ್ಬನಾದ ಸರ್. ಜಾನ್ ಹಾಕಿನ್ಸನು ಮೊದಲು ಇದನ್ನು ೧೫೬೫ರಲ್ಲಿ ಅಲ್ಲಿಗೆ ತಂದುದಾಗಿಯೂ ಕೆಲವರು ೧೫೮೫ರಲ್ಲಿ ಸರ್. ವಾಲ್ಟರ್ ರಾಲಿಯು ತಂದುದಾಗಿಯೂ ಹೇಳುತ್ತಾರೆ.

ಫ್ರಾನ್ಸ್ ಜರ್ಮನಿಗಳ ೩೦ ವರ್ಷಗಳ ಕದನದ ಸಮಯದಲ್ಲಿ ಹೊಗೆಸೊಪ್ಪಿನ ಸೇದುವಿಕೆಯು ಯುರೋಪಿನಲ್ಲಿ ಪ್ರಬಲವಾಯಿತು. ನೆಪೋಲಿಯನನ ಯುದ್ಧದ ಸಮಯ, ಬ್ರಿಟನಿಗೆ ಸಿಗಾರುಗಳು ಬಂದುವು. ಮಹಾಯುದ್ಧದ ಕಾಲದಲ್ಲಿ ಸ್ತ್ರೀಯರು ಮತ್ತು ಪುರುಷರು ಬಹಳ ವಿಶೇಷವಾಗಿ ಹೊಗೆ ಸೇದಲು ಅಭ್ಯಸಿಸಿದರು.

ಜಗತ್ತಿನಲ್ಲಿ ಹೆಚ್ಚು ಹೊಗೆಸೇದುವ ರಾಷ್ಟ್ರಗಳು

ಜಗತ್ತಿನಲ್ಲಿ ಹೆಚ್ಚು ಹೊಗೆಸೇದುವ ರಾಷ್ಟ್ರಗಳಲ್ಲಿ ಅಮೇರಿಕವು ಪ್ರಾಮುಖ್ಯವಾಗಿದೆ ಅಲ್ಲಿ ಸರಾಸರಿ ವರ್ಷಕ್ಕೆ ತಲೆ ಒಂದಕ್ಕೆ ೧೦,೪೫ ಸಿಗರೇಟುಗಳ ಖರ್ಚಾಗುತ್ತವೆ. ಬ್ರಿಟನು ಎರಡನೆಯ ಪಂಕ್ತಿಗೆ ನಿಲ್ಲುತ್ತದೆ ಇಲ್ಲಿ ಸರಾಸರಿ, ತಲೆ ಒಂದರ ಲೆಕ್ಕಕ್ಕೆ ೯೪೩ ಸಿಗರೇಟುಗಳು ಖರ್ಚಾಗುವುವು ಮೆಕ್ಸಿಕೋ, ಬೆಲ್ಜಿಯಂ, ಫ್ರಾನ್ಸು ಇವುಗಳು ಆ ಮೇಲೆ ಅನುಕ್ರಮವಾಗಿ ನಿಲ್ಲುತ್ತವೆ

ಹಿಂದೂದೇಶದಲ್ಲಿ ಹೊಗೆಸೊಪ್ಪು

ಹಿಂದೂದೇಶದಲ್ಲಿ ಕ್ರಿ. ಶ ೭ನೇ ಶತಮಾನ ಮೊದಲ್ಗೊಂಡು ಈ ಅಭ್ಯಾಸವು ಇದೆಯೆಂದು ತಿಳಿದುಬರುತ್ತದೆ. ೧೬೨೩ರಿಂದ ಆರಂಭಿಸಿ ಹೊಗೆಸೊಪ್ಪು ವಿಶೇಷ ಪ್ರಚಾರವಾಯಿತು. ಇಲ್ಲಿ ಇಂದು ಪ್ರತಿವರ್ಷಕ್ಕೆ ೭,೩೦೦೦ ಮಿಲಿಯ ಸಿಗರೇಟುಗಳು ಸೇದಲ್ಪಡುತ್ತವೆ. ನಮ್ಮ ದೇಶದಲ್ಲಿ ಬಹಳ ಹೆಚ್ಚು ಸೇದುವ ಪ್ರಾಂತ್ಯವು ಸಿಂಧ ಪ್ರಾಂತ್ಯ!

ಹಿಂದೂದೇಶದಲ್ಲಿ ಬೀಡಿಯು ಬಹಳ ಪ್ರಚಾರದಲ್ಲಿದೆ. ಸಾಮಾನ್ಯ ಎಲ್ಲಾ ಜನರೂ ಇಂದು ಇದರ ಅಭ್ಯಾಸದವರೇ ಆಗಿದ್ದಾರೆ ಆ ಮೇಲೆ ಇಲ್ಲಿ ಹೊಗೆಸೊಪ್ಪನ್ನು ಎಲೆಯೊಡನೆ ಪುಡಿಯಾಗಿ, ಹೀಗೆ ನಾನಾ ವಿಧದಿಂದ ಉಪಯೋಗಿಸುತ್ತಾರೆ. ಹಿಂದೂದೇಶದಲ್ಲಿ ಸಾವಿರ ಮಿಲಿಯಕ್ಕಿಂತ ಮಿಕ್ಕಿದ ಪೌಂಡುಗಳನ್ನು ಹೊಗೆಸೊಪ್ಪು ಆಗುತ್ತದೆ ಅದು ಸಾಕಾಗದೆ ಅಮೇರಿಕ ಮತ್ತು ಯುರೋಪು ದೇಶಗಳಿಂದ ಬಹಳವಾಗಿ ಇಲ್ಲಿಗೆ ಹೊಗೆಸೊಪ್ಪು ಬರುತ್ತದೆ.

ಹೆಚ್ಚು ಹೊಗೆಸೇದುವವರು

ಪ್ರಸಿದ್ಧ ಗ್ರಂಥಕರ್ತರು ಹಲವರು ಬಹಳ ಸೇದುವವರಿದ್ದಾರೆ. ಚಾರ್ಲ್ಸ್ ಲೇಂಬನಿಗೆ ಹೊಗೆ ಸೇದದೆ ಬರೆಯುವುದನ್ನೇ ಆಗುತ್ತಿರಲಿಲ್ಲ. ಸರ್. ಜಾಮ್ಸ್ ಬೆರ್‍ರಿಯು ತನ್ನ ಪೈಪನ್ನು ಮುಗಿಸದೆ ಬರೆಯಲು ಕುಳಿತುಕೊಳ್ಳುತ್ತಿರಲಿಲ್ಲ. ಎಡ್ಗರ್ ವಾಲ್ಲೇಸನು ಹೊಗೆ ಸೇದುವ ಹುಚ್ಚನು

ಇರದಿರುವ ರಾಜನೀತಿಜ್ಞರಲ್ಲಿ ಚರ್ಚಿಲ್ಲರು ಪ್ರಸಿದ್ಧ ಹೊಗೆ ಸೇದುವವರು, ಚಾಲ್ಡ್ವಿನ್ನರು ಅದಕ್ಕಿಂತ ಜೋರು'

ಫ್ರಾನ್ಸಿನ ನೆಪೋಲಿಯನ್ ಬಹಳ ಸೇದುವವನು. ಒಮ್ಮೆಗೆ ಏಳೆಂಟು ಸಿಗರೇಟು ಎಳೆಯುವನು. ಪ್ರೆಸಿಡೆಂಟ್ ರೂಸ್‌ವೆಲ್ಟ್ ಸೇದುವುದರಲ್ಲಿ ಏನೂ ಕಡಿಮೆಯವನಲ್ಲ!

ಹಿಂದೀಯರಲ್ಲಿ ಮಿ ಜಿನ್ನಾ ಮತ್ತು ಸರ್ ತೇಜಬಹದ್ದೂರ್ ಸಪ್ರುಗಳು ಬಹಳ ಪ್ರಸಿದ್ಧರಾದ ಹೊಗೆಸೇದುವವರು. ಸಪ್ರುಗಳಿಗೆ ಒಮ್ಮೆ ಪೈಪು, ಆ ಮೇಲೆ ಸಿಗಾರ್, ಮತ್ತೆ ಸಿಗರೇಟ್ ಬಳಿಕ ಹುಕ್ಕಾ ಹೀಗೆ ಹೊಗೆಸೊಪ್ಪಿನ ಪ್ರೇಯಸಿಯೊಡನೆ ವಿಧವಿಧದ ಕ್ರೀಡೆಯಾಡುವ ರಸಿಕತೆಯು ಇದೆ ಆಗಾಗ ಹೊಗೆಸೊಪ್ಪು ಸೇರಿಸಿ ಎಲೆಯನ್ನೂ ತಿನ್ನುತ್ತಾರೆ

ಹೊಗೆ ಸೇದದವರು

ಪ್ರಖ್ಯಾತ ಯೂರೋಪಿಯನ್ ಗ್ರಂಥಕರ್ತರಾದ ಜಾರ್ಜ್ ಬರ್ನಾರ್ಡ್‌ಷಾರವರು ಹೊಗೆ ಸೇದುವುದೇ ಇಲ್ಲ! (ಮಾಂಸಾಹಾರವನ್ನೂ ಮಾಡುವುದಿಲ್ಲ) ಹಿಟ್ಲರನೂ ಅಭ್ಯಾಸವನ್ನು ಬಿಟ್ಟವನು! "ಜನರು ಶತಮಾನದವರೆಗೆ ಬದುಕಬಹುದು, ಆದರೆ ಹೊಗೆ ಸೇದುವುದು, ಟೀ, ಕಾಫಿ, ಇವುಗಳನ್ನು ಬಿಟ್ಟುಬಿಡಬೇಕು'' ಇದು ಆತನ ಉಪದೇಶ

ಮುಸಲೋನಿ ಮತ್ತು ಹಿಟ್ಲರರಿಬ್ಬರೂ ಹೊಗೆ ಸೇದುವುದಾಗಲಿ, ಮದ್ಯಪಾನಮಾಡುವುದಾಗಲಿ ಇಲ್ಲ

ಹೀಗಿದ್ದರೂ ಇಂದಿನ ಯುಗದಲಿ ಹೊಗೆ ಸೇದುವುದೆಂದು ಬಹಳದೊಡ್ಡ ಅಭ್ಯಾಸವಾಗಿದೆ

ನಗರದ ನವ ನಾಯಕರು

[೭ನೇ ಪುಟದಿಂದ ಮುಂದುವರಿದುದು]

ಸ್ಕಾರ ಮಾಡದೆ ಸಹ ಎದುರಿಗೆ ನಗುತ್ತ ಹೋದ' ಎಂದು ದೂರು ಹೇಳಿದರು. ಆವರು ನಕ್ಷದನ್ನು ಕಂಡು, ಅವನ ಹೆಸರೇನಿರಬಹುದೆಂದು ತಿಳ್ಳಿಗನ ಮಾಸ್ತರನ್ನು ವಿಚಾರಿಸಿ ಒಂದು ಮುನ್ಸಿಪಲ್ ಶಾಲೆಗೆ ಲಗ್ಗೆಯೇರಿನೋಡ ಹೋದರು ಎದುರಿಗೇನೆ ತೆಳ್ಳಗಿನ ಮಾಸ್ತರರು ಇದ್ದರು. ಇವರನ್ನು ನಮಸ್ಕರಿಸಿ ಮಹಾ ಸಂಭ್ರಮದಿಂದ ಒಳಕ್ಕೆ ಒಯ್ದರು. ಉರಿದು ಬಂದ ಇವರು ಅವರ ಉಪಚಾರಕ್ಕೆ ಮರುಳಾಗಬೇಕಾಯಿತು. ಮೇಲೆ 'ಈ ತೆಳ್ಳಗಿನ ಮಾಸ್ತರರಿಗೆ ಮೀಸೆಯಿದೆ. ಅವರಿಗೆ ಇದ್ದಿರಲಿಲ್ಲ. ಈ ಎರಡು ದಿವಸಗಳಲ್ಲಿ ಇಷ್ಟು ದೊಡ್ಡ ಮೀಸೆ ಹುಟ್ಟಲಾರದು' ಎಂದು ನಿರ್ಣಯಿಸಿ, ತನಗೆ ನಮಸ್ಕಾರ ಮಾಡದ ಆ ಪಾಪಿಯು ಮುನ್ಸಿಪಲ್ ಮಾಸ್ತರನಲ್ಲವೆಂದು ನಿರ್ಣಯಿಸಬೇಕಾಯಿತು. ಆದರೆ ಮನಸ್ಸಿನ ಕೋಪ ಅಪ್ಪಿತು. ಅವನು ತಿರುಗಿ ಸಿಕ್ಕಿದ್ದರೆ, ತನಗೆ ಹಕ್ಕಿದ್ದರೆ—ಅವನನ್ನು ಮುನ್ಸಿಪಲ್ ಶಾಲೆಗೆ ಸೇರಿಸಿ ಆ ಒಳಿತವಾದರೂ ೬ ಟ್ರಾನ್ಸ್‌ಫರು ಮಾಡಿಸುತ್ತಿದ್ದೆ—ಎಂದು ಯೋಚಿಸುತ್ತಿದ್ದರು

ತಿರುಗಿ ನಾಲ್ಕು ವರ್ಷ ಮೂರು ದಿವಸ ಈ ಕಾಲದಲ್ಲಿ ಆದ ಬದಲಾವಣೆಯೆಂದರೆ ಕರಿ ಮೀಸೆ ಬಿಳಿದಾಗಿ, ತಿರುಗಿ ಕರಿ ಬಣ್ಣದಿಂದ ಬಿಳಿದಾದುದು ಅಂಗಡಿಯ ವ್ಯಾಪಾರವೇ ನಿಂತು 'ಕೇವಲ ಗತವೈಭವದ ಸಾಹುಕಾರಿಕೆಯಿಂದ ಹರಣ ಮಾಡುತ್ತಿರುವುದು ಆದರೂ ಚುನಾವಣೆಯಲ್ಲಿ ತನ್ನ ಹೆಸರು ಕಾಣದೆ ಹೋದರೆ ಅನ್ನ ರುಚಿಸದು. ಏನು ಮಾಡಲಿ ಕಾಂಗ್ರೆಸಿನ ರಾಜ್ಯಭಾರ ಬಂದಿದೆ, ಸಾಲದುದಕ್ಕೆ ಹಿಂದಿನ ಬಾರಿ ಜಸ್ಟೀಸುಗಳ ಕಾಲತು ನಡೆಸಿದ ಕಲಂಕ ಮೇರೆಮೀರಿ... ಆದರೇನು—ಇಲೆಕ್ಷನಿಗೆ ಪೂರ್ವದಲ್ಲಿ ಬಂದ ಜವಾಹಿರಲಾಲರನ್ನು ಮನೆಗೇನೆ ಕರೆದುಕೊಂಡು ಹೋಗಿ ಕಾಫಿ ಕುಡಿಸಿದರು. ಅವರಂತೆ ಉಡುಗೆ ಮಾಡಿಸಿದರು ಅವರು ಬಂದ ಮುಂಚಿನ ದಿನವೇ 'ಟಿನ್ನರ್ ಕೋಟು' ಆವರು

ಸರಿ ಚುನಾವಣೆಯ ಕಾಂಗ್ರೆಸು ಧುರೀಣರಲ್ಲಿ ಮೃತ್ಯುಂಜಯರಾಯರ ಮನೆಯ ಗೋಣಿ ಸಹ ಬಾಡಿಯದೇ ಆಯಿತು ಒಂದೆರಡು ವೈದಾಸಿನ ಉಪನ್ಯಾಸಗಳನ್ನು ಮಾಡಿದರು. ಕ್ರಮವಾಗಿ ಚುನಾವಣೆಗೆ ಹೇಗೆ ಬಾಯಿ ಬಿಡಿಸಬೇಕೋ ಹಾಗೆ ಹಾಗೆ ಬಿಡಿಸಿ ಮುನ್ಸಿಪಲ್ ಅಸ್ಥಾನ ಏರಿದರು. ಈಗ ಅವರು ಮಾತನಾಡುವ ಆರ್ಭಟೆ ಕೇಳಬೇಕು—ರಾಜಗೋಪಾಲಾಚಾರ್ಯರೇ ಸುಳ್ಳು ಇವರು ನಿಜ—ಎನ್ನುವಂಥ ಧೋರಣೆ... ಮಾತು ಮಾತಿಗೆ ಹೋಲ್ ಮೆಜಾರಿಟಿಯ ಭಾರದಿಂದಲೇ ಮಾತು, ಕಾಂಗ್ರೆಸಿಗೆ ವಿರೋಧ ಎಂದರೆ 'ಹುಲಿಗಳ ಮುಂದೆ ಇಲಿಗಳು ಆಡಿದಂತೆ' ಎನ್ನುತ್ತಾರೆ. ಹಳೆಯ ಖಾದಿ ಅಂಗಿಗಳು ಕೇವಲ ಮೀಟಿಂಗಿನ ದಿವಸ, ಅದೂ ಕಡ್ಡಾಯವಲ್ಲ, ಹಾಕಿಕೊಂಡು ಸುಧಾರಿಸುತ್ತ ದಿನಹರಣ ಮಾಡುತ್ತಿದ್ದಾರೆ. ಆದರೆ ಒಂದು ಅಸಂತೃಪ್ತಿ ಅವರಿಗೆ ೧೨ ವರ್ಷ ಸರ್ವಿಸು ಆದುದಕ್ಕೆ ಒಂದು ಚೆಯರ್‌ಮೇನ್‌ಗಿರಿ ಸಿಗಬಾರದೇ ಎಂದು.

ಇತ್ತ ಸುಭಾಷರ ಫಾರ್‌ವರ್ಡ್ ಬ್ಲಾಕಿನ ವಿಚಾರ ಬಹಳ ಆತುರರಾಗಿದ್ದರು ಆ ಪಂಗಡದ ಲೀಡರ್ ಆಗಿ ಮುಂದಿನ ಚುನಾವಣೆಯಲ್ಲಿ ಮುನಿಸಿಪಲ್ ಗದ್ದುಗೆಯನ್ನೇ ಏರುವ ಯೋಚನೆಯಿಂದ. ಆದರೆ ತತ್ಕಾಲಕ್ಕೆ ಅದರ ವಿಷಯ ಅನುಮಾನವೆಂದು—ಉಳಿದ ಕೀಳು ದರ್ಜೆಯ ಪಾರ್ಟಿ ಜನಗಳನ್ನು ಹಳಿಯುತ್ತಾ ದಿನಕಳೆಯುತ್ತಾರೆ

ಮೃತ್ಯುಂಜಯ ರಾಯರ ಜಾತಕ ನೋಡಿದವರೊಬ್ಬರಂದಿದ್ದಾರೆ 'ನಿಮಗೆ ಬರುವ ವರ್ಷ ಗಂಡವಿದೆ—ಅದು ತಪ್ಪಿದರೆ ಇನ್ನು ೧೨ ವರ್ಷ ಮುಲಾಜಿಲ್ಲ' ಎಂದ ಅವರು ರಾಯರ ಆಯುಸ್ಸಿನ ವಿಚಾರ ಅಂದುದಂತೆ ಆದರೆ ರಾಯರಿಗೆ ಆ ಕಂಟಕ ಈ ಸೀಟಿನದೇ ಎಂದು ನಿಶ್ಚಯ ಈ ಮುಂದಿನ ಸಾಹಸಿಕ್ಕಿದರೆ ಮತ್ತೆ ೧೨ ವರ್ಷಕ್ಕೆ ಚಿಂತೆಯಿಲ್ಲ—ಎಂದು ತಿಳಿದಿದ್ದಾರೆ. ಖಂಡಿತವಾಗಿಯೂ ಆ ಮೊದಲು ಸತ್ತ ಮಾತ ಬೇಕಾದ ಕಲ್ಪನೆಯೆಂದ, ಅವರಿಗೆ ಖಚಿತವಾಗಿದೆ

OPPORTUNITY

Now offered to up-country clients to do ready and forward business in Cotton, Gold, Silver, Wheat, Linseed, Stocks & Shares & through East India Cotton Association, Bombay Bullion Exchange, Marwari Chamber of Commerce etc, of Bombay.

Prompt Service, latest inforamation and Moderate Charges

For terms of business write to

Hindustan Cotton Company, Limited

106, Cowasji Patel Street, Fort, Bombay

ಪುರೋಹಿತ ಶ್ವಾಸಹಾರಿಯಲ್ಲಿ ಅಂಥ ಕ್ರಮ...

ಪುರೋಹಿತ ಶ್ವಾಸಹಾರಿ ದಮ್ಮಿಗೆ ಗುಣಕಾರಿ

ಸಿನೆಮಾ ಸುಂದರಿಯರಿಗೆ ಮರುಳಾಗುವ ಮಾನವರು!

ಅವರು ಪ್ರಮತ್ತರಂತೆ! — ಅದು ನಿಜವೇ?

ಸಿನೆಮಾ ರಾಣಿಯೊಡನೆಯೇ ಕೇಳಿ!

ಸ್ತ್ರೀಯರ ಮೋಹಕ್ಕೆ ಮರುಳಾಗಿ, ಅವರ ಬೆನ್ನಹಿಂದೆ ಅಲೆದಾಡುವ ಈ ಹುಚ್ಚುತನವು ಬಹಳ ಕಾಲ ಹಿಂದಿನಿಂದಲೇ ಪುರುಷವರ್ಗಕ್ಕೆ ಸಿಕ್ಕಿದ ಶಾಪ! ಅದು ಹೇಗಿದ್ದರೂ, ಇತ್ತೀಚೆಗೆ ಸಿನೆಮಾ ಸುಂದರಿಯರಲ್ಲಿ ಮೋಹಗೊಂಡು ನಿರಾಶೆಗೊಳ್ಳುವ ಯುವಕರ ಕಥೆಯು ನಿಜವಾಗಿಯೂ ಕರುಣಾಜನಕವಾಗಿದೆ!

ಕಥೆಯನ್ನೇ ಕಟ್ಟಿದರು

ಇಡೀ ಜಗತ್ತಿನಲ್ಲಿ ಸಿನೆಮಾ ಸುಂದರಿಯರಿರುವ ಅತ್ಯಂತ ವಿಶೇಷವಾದ 'ನಂದನವನ'ವೆಂದರೆ ಹೊಲೀವುಡ್! ಸುಪ್ರಸಿದ್ಧ ಗ್ರಂಥಕರ್ತೆಯಾದ ಫೈತ್ ಬಾಲ್ಡ್‌ವಿನ್ನಳು ಸಿನೆಮಾ ಸುಂದರಿಯರಿಗಾಗಿ ಮೋಹಗೊಂಡು ಮರುಳಾಗುವವರ ಕುರಿತು 'ಗಂಡಸರು ಅಂತಹ ಹುಚ್ಚರು' ಎಂಬ ಕಥೆಯನ್ನೇ ಬರೆದಿರುವಳು! ಆ ಕಥೆಯನ್ನು ಈಗ ಸಿನೆಮಾವಾಗಿ ತೋರಿಸುವ ಸಿದ್ಧತೆಯಾಗಿದೆ. ಆ ಕಥೆಯಲ್ಲಿರುವ ನಾಯಕಿಯೇ ತನ್ನ ಬಾಯಿಯಿಂದ 'ನಿಜವಾಗಿಯೂ ಗಂಡಸರು ಭ್ರಾಂತ'ರೆಂಬ ಉದ್ಗಾರ ತೆಗೆಯುತ್ತಾಳೆ!

ನಿಜವಾಗಿಯೂ ನಡೆಯಿತು

ಆದರೆ ಅದೊಂದು ಬರೆದ ಕಥೆಯೆನ್ನುವ! ನಿಜವಾಗಿಯೂ ಈಗ ನಡೆಯುವ ಹೀಗಿದ್ದ ಕಥೆಗಳೂ ತುಂಬಾ ಇವೆ. ಐಶ್ವರ್ಯವಂತರಾದ ಅನೇಕ ಯುವಕರು ಹೊಲಿವುಡ್ಡಿಗೆ ಹೋಗಿ ತಾವು ಕನವರಿಸುವ ಸುಂದರಿಯರನ್ನು ಬೆಂಬತ್ತಿ ತಮ್ಮ ಐಶ್ವರ್ಯವನ್ನು ನೀರುಪಾಲಾಗಿ ಹರಿಸಿದ ಕಥೆಗಳೆಷ್ಟೋ ಕೇಳಿಬರುತ್ತದೆ. ಅನೇಕರು ಹಾಗೆ ಅಪಾರ ಹಣವನ್ನು ವ್ಯಯಮಾಡಿ ಕೃತಾರ್ಥರಾದವರೂ ಇದ್ದಾರೆ! ಆದರೆ ಬಹು ಮಂದಿ ಭಗ್ನಹೃದಯರಾಗಿ ಹಿಂದೆ ಬಂದಿರುವರೇ!

ಇದು ಯೂರೋಪಿನ ಸ್ಥಿತಿಯಾಯಿತು. ಹಿಂದೂದೇಶದ ಜನರಿಗೂ ಈ ರೋಗ ತಟ್ಟದೆ ಇಲ್ಲ. ಒಬ್ಬ ಐಶ್ವರ್ಯವಂತನು ತಾನು ಸಿನೆಮಾದಲ್ಲಿ ಕಂಡ ಸುಂದರಿಯನ್ನು ಕೈಹಿಡಿಯಲು (...ಕೆ ಮಿಸ್ ...) ಬೊಂಬಾಯಿಗೆ ತೆರಳಿದ! ಬಹಳ ಸಮಯ ಅವಳ ಬೆನ್ನುಹಿಡಿದು ಹೋದ! ಆಕೆಯೂ ಮರುಳು ಮಾಡಿದಳು. ಇವನ ಕಿಸೆಯ ಹಣ ಮುಗಿದಂತೆ, ಆಕೆಯ ಪ್ರೇಮವೂ ಕುಗ್ಗಿತು. ಪಾಪ! ಅತನು ನಿರಾಶನಾಗಿ ಹಿಂತಿರುಗಿದ! ಆದರೆ ಹುಚ್ಚನಾಗಿ ಹೋದವನು ಬುದ್ಧಿವಂತನಾಗಿಯೇ ಮರಳಿದ!

ಸಿನೆಮಾ ರಾಣಿಯರ ಜೀವನದ ಗುರಿಯೇನು?

ಹೆಚ್ಚಾಗಿ ಸಿನೆಮಾ ಸುಂದರಿಯರು ಸಿನೆಮಾ ನಿರ್ದೇಶಕರನ್ನು ಮತ್ತು ನಿರ್ಮಾಪಕರಾದವರನ್ನೇ ವರಿಸುವುದು ಸಾಮಾನ್ಯವಾಗಿದೆ! ನಿಜವಾಗಿ ಹೀಗೆ ಅವರು ಮಾಡುವಲ್ಲಿ ತನಗೆ ಮುಖ್ಯಪಾತ್ರವು ಸಿಗಬೇಕು, ಪ್ರಸಿದ್ಧಿಗೆ ಬರಬೇಕು, ಐಶ್ವರ್ಯವಂತಳಾಗಬೇಕೆಂಬ ಹಂಬಲವೇ ಎಲ್ಲಕ್ಕಿಂತಲೂ ಹೆಚ್ಚಾಗಿರುವುದು! ಯೂರೋಪು ದೇಶದಲ್ಲಿ ಹೆಚ್ಚಾಗಿ ಹೀಗೆ ಮದುವೆಯಾದವುಗಳು ಆ ಮೇಲೆ ವಿವಾಹವಿಚ್ಛೇದವೂ ಆಗಿವೆ! ಆದರೆ ಹಿಂದೂದೇಶದಲ್ಲಿ ವಿವಾಹವಿಚ್ಛೇದವಾಗುವುದು ಸಾಧ್ಯವಿಲ್ಲದಾಗಿದೆ! ನಿಜವಾಗಿಯೂ ಸಿನೆಮಾ ಸುಂದರಿಯರಿಗೆ ಬೇಕಾದುದು ತಮ್ಮ ಜೀವನ ವೃತ್ತಿಯುಳ್ಳದೆ ಪ್ರೇಮವಲ್ಲ.

ಅವಳೇ ಬುದ್ಧಿ ಕಲಿಸಿದಳು!

ಒಬ್ಬ ಯುವಕನ ಕಥೆಯು ಕೇಳತಕ್ಕದ್ದಿದೆ. ಆತನ ತಂದೆಯು ಬಹಳ ಐಶ್ವರ್ಯವಂತ ಮಗನು ಒಬ್ಬಳ ಮೇಲೆ ಮತ್ತೊಬ್ಬಳೆಂಬಂತೆ ಸಿನೆಮಾ ರಾಣಿಗಳನ್ನು ಪ್ರೀತಿಸತೊಡಗಿದ. ಎಲ್ಲವರೂ ಅವನನ್ನು ಮೋಸಮಾಡಿದರು! ಆತನೇ ತನ್ನ ಪ್ರೇಯಸಿಯೊಬ್ಬಳಿಗೆ ಪ್ರಾಮುಖ್ಯ ಪಾತ್ರ ಕೊಡಲು (ಬೇರೆ ಕಂಪೆನಿಗಳಲ್ಲಿ ಸಿಗದಿರುವುದರಿಂದ) ಸ್ವತಃ ಫಿಲ್ಮ್ ಕಂಪನಿ ಮಾಡಿದ, ತಂದೆಯೊಡನೆ ಹಣಕ್ಕಾಗಿ ಹೋದ! ಆದರೆ ಅವರು ಆತನನ್ನು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನಲ್ಲವೆಂದು ತಿಳಿಸಿದರು. ಈ ಸುದ್ದಿ ಆ ಸಿನೆಮಾ ರಾಣಿಗೂ ಮುಟ್ಟಿತು. ಆಕೆಯ ಪ್ರೇಮವೂ ಅದರೊಡನೆ ಮಾಯವಾಯಿತು. ಆದರೆ ಈಗ ಆತನಿಗೆ ಮದುವೆಯಾಗಿದೆ! ಈಗ ತಂದೆತಾಯಿಗಳ ನಿಜವಾದ ಕುಮಾರನೇ ಆಗಿ ಆತನ ಹಿಂದಿನ ಸೊತ್ತು ಇಮ್ಮಡಿಯಾಗಿ ಬೆಳೆದಿದೆ! "ಸಿನೆಮಾರಾಣಿಗೆ ನಮಸ್ಕಾರ. ಆಕೆ ತನಗೆ ಬಹಳ ಚಿಕ್ಕಂದಿನಲ್ಲಿಯೇ ಒಳ್ಳೆಯ ಬುದ್ಧಿವಂತಿಕೆಯನ್ನು ಕಲಿಸಿದಳು" ಆತನು ಹೀಗೆ ಹೇಳುತ್ತಾನೆ.

ಪ್ರೇಮ ಹೃದಯವಿಲ್ಲ

ನಿಜವಾಗಿ ಸಿನೆಮಾದಲ್ಲಿ ಪ್ರಖ್ಯಾತಿ ಬರಬೇಕೆಂದು ಅಭಿಲಾಷೆಯುಳ್ಳವಳು ಯಾರನ್ನೂ ಪ್ರೇಮ ಮಾಡುವುದಿಲ್ಲ! ಆಕೆಗೆ ಸಿನೆಮಾದ ನಿರ್ದೇಶಕ ಮತ್ತು ನಿರ್ಮಾಪಕರ ಮೇಲೆ ಮಾತ್ರ ದೃಷ್ಟಿ ಇರುತ್ತದೆ. ಏಕೆಂದರೆ ಅವಳ ಜೀವನದ ಅಭಿವೃದ್ಧಿಯು ಅವರ ಆಶ್ರಯವನ್ನು ಹೊಂದಿಕೊಂಡಿದೆ.

ಅಪರೂಪವಾಗಿ ಕೆಲವರು ಪ್ರೇಮ ಹೃದಯದ ಮುಗ್ಧ ಬಾಲಿಕೆಯರೂ ಇದ್ದಾರೆ! ತಮ್ಮ ದೆಯ ಪ್ರೇಮ ಝರಿಗೆ ತಡೆಬಂದಲ್ಲಿ ತಮ್ಮ ಸಿನೆಮಾ ಪ್ರಖ್ಯಾತಿಗೂ 'ಛೀ'ಗೈದು ಹೊರಬಂದವರೂ ಕಾಣಸಿಗುತ್ತಾರೆ. ಇದ ಕಗ್ಗತ್ತಲೆಯಲ್ಲಿ ಮಿಂಚು ಹೊಳೆದಂತೆ!

ನಿಜವಾಗಿಯೂ ಎಲ್ಲಾ ಗಂಡಸರೂ ಹುಚ್ಚರಲ್ಲ! ಆದರೆ ಯಾರು ಕೇವಲ ಸಿನೆಮಾ ಖ್ಯಾತಿಗಾಗಿ ಅದೇ ಜೀವನಕ್ಕಾಗಿ ಚಲಚ್ಚಿತ್ರದಲ್ಲಿ ಕುಣಿದಾಡುತ್ತಾರೋ, ಅಂತಹ ಸಿನೆಮಾ ಸುಂದರಿಯರನ್ನು ಕಂಡು ಮೋಹಿತರಾಗಿ ಮರುಳುಗೊಳ್ಳುವ ಗಂಡಸರು (ಮಿಸ್ ಆಗಿರಲಿ) ಖಂಡಿತವಾಗಿಯೂ ಹುಚ್ಚರು! ಆ ಕುಮಾರಿಯೇ ಜೀವನದ ಮಾರಿ!

ಉಜ್ವಲ ಸಿನೆಮಾ ನಟಿ ಗೋಹರ್

ಸಿನೆಮಾ ಪ್ರೇಕ್ಷಕರಿಗೆ ಗೋಹರಳ ಪರಿಚಯವು ಹೊಸತಲ್ಲ. ಸಂಗೀತದಲ್ಲಿ ಆಕೆಯ ಅನುಪಮ ಸಾಮರ್ಥ್ಯ, ಬಹು ಭಾಷೆಗಳಲ್ಲಿ ಆಕೆಗಿರುವ ನೈಪುಣ್ಯ, ಗುಜರಾಥಿ, ಹಿಂದಿ, ಮರಾಠಿ, ಇಂಗ್ಲಿಷ್, ಉರ್ದು ಇದೇ ಪ್ರೌಢ ಲಾದ ಭಾಷೆಗಳಲ್ಲಿ ಸ್ವಚ್ಛವಾಗಿ ಸ್ಫುಟವಾಗಿ ಉಚ್ಚರಿಸುವ ಆಕೆಯ ಶಕ್ತಿ ಇವುಗಳಿಗೆ ಸಿನೆಮಾ ಪ್ರಿಯರು ಮರುಳಾಗಿದ್ದಾರೆ.

ಆದರೆ ಆಕೆ ಇತ್ತೀಚೆಗೆ ವರ್ಷವೊಂದರಿಂದ ಯಾವ ಚಿತ್ರದಲ್ಲಿಯೂ ಕಂಡುಬಂದಿಲ್ಲವೆಂದು ಚಿತ್ರಲೋಕದಿಂದ ವಿಶ್ರಾಂತಿ ಹೊಂದಿದಳೆಂದು ಹಲವರು ತಿಳಕೊಂಡಂತಿದೆ. ಮೋತೀಲಾಲನೊಡನೆ ಗೋಹಾರ್ 'ಅಚ್ಚುತ್' ಎಂಬ ಚಿತ್ರದಲ್ಲಿ ಈಗ ಪಾತ್ರವನ್ನು ಅಭಿನಯಿಸುತ್ತಿದ್ದಾಳೆ. ಚಿತ್ರಪ್ರೇಕ್ಷಕರ ಕಣ್ಣುಗಳನ್ನು ಸೂರೆಗೈಯಲು ಬೇಗನೇ ಆ ಭವ್ಯ ಮನೋಹರ ದೃಶ್ಯವು ತೆರೆಯ ಮುಂದೆ ನಲಿಯಲಿದೆ.

ಗೋಹರ್ ಎಂದೂ ಸಮಾಜದ ಮಾನಸಿಕತೆಯನ್ನು ತಿಳಕೊಂಡವಳಂತೆ ಅವರಿಗೆ ಸಮಾಧಾನವನ್ನು ಕೊಡ ಬಂತೆ ಅಭಿನಯಿಸ ವ ಸಾಮರ್ಥ್ಯವನ್ನು ಗಳಿಸಿಕೊಂಡಿದ್ದಾಳೆ. 'ಅಚ್ಚುತ್' ಚಿತ್ರದಲ್ಲಿ ಏಕಾಂಗಿಯಾದೊಬ್ಬ ಅಸ್ಪೃಶ್ಯ ಕನ್ನಿಕೆಯ ಪಾತ್ರದಲಿ ತನ್ನ ಆದರ್ಶವನ್ನು ಅಭಿನಯ ರೂಪದಿಂದ, ಭವ್ಯವಾಗಿ, ರಮಣೀಯವಾಗಿ ಚಿತ್ರಿಸಿದ್ದಾಳೆ.

ಆಕೆಯ ಜೀವನವು ಬಹಳ ವಿಶೇಷತೆಯಿಂದ ಕೂಡಿದೆ. ಆಕೆಯ ಜೀವನ ...ವ ಮಾಡಿಕೊಂಡವನಿಗೆ ಅವಳ ತನ್ನ ಅಂತರಂಗಿಕ ಶಕ್ತಿಯನ್ನು ಹೆಚ್ಚಿಸಿಕೊಂಡ ವಿಷಯ ತಿಳಿಯದಿರದು. ಸಿನೆಮಾ ಪ್ರಪಂಚದಲ್ಲಿ — ಅನೇಕ ಬಣ್ಣದ ಬೀಸಣಿಗೆಗಳ ಕೃತಕ ಸೌಂದರ್ಯ ತೆರನಲ್ಲದೆ, ಶುದ್ಧ ಗಂಭೀರ್ಯ, ಸ್ತ್ರೀತ್ವದ ನೆಲೆಯುಳ್ಳ ಪ್ರಸಿದ್ಧನಟಿ ಗೋಹರ್!

ಗೋಹರಳು ತನ್ನ ಜೀವನವನ್ನು ಬಹು ಸರಳತೆಯಿಂದ ನಡೆಸುತ್ತಾಳೆ. ತನ್ನ ಮಂದಿರದಲ್ಲಿ ಏಕಾಂಗಿನಿಯಾಗಿ ಓದುತ್ತಲೂ, ಅಭ್ಯಾಸ ಮಾಡುತ್ತಲೂ, ಗೃಹಕೃತ್ಯ ನಡೆಸುತ್ತಲೂ ಇರುತ್ತಾಳೆ. ಅಡಿಗೆ ಮಾಡುವುದರಲ್ಲಿ ಆಕೆಗೆ ಹೆಚ್ಚಿನ ಅಭಿರುಚಿಯುಂಟು. ಆದರೆ ತನ್ನಲ್ಲಿಗೆ ಬಂದ ಅತಿಥಿಗಳಿಗೆ ಆಕೆಯೇ ಬಡಿಸುತ್ತಾಳೆ! ಮಾನವ ಜೀವಿಗಳ ಮೇಲೆ ಆಕೆಗಿರುವ ಕರುಣೆ ಅಪಾರವಾದದ್ದು.

ಅನೇಕ ಸಮಯಗಳಿಂದ ಆಕೆ ರಣಜಿತ್ ಫಿಲ್ಮ್ ಕಂಪೆನಿಯಲ್ಲಿ ಶ್ರೀ ಚಂದುಲಾಲ ಶಹಾರವರ ಜತೆ ಪ್ರೊಪ್ರೈಟರಳಾಗಿದ್ದಾಳೆ. ಲಾಹೋರಲಿ ಸಿನೆಮಾನಟಿಯೊಬ್ಬಳ ಹೊಟ್ಟೆಯಲ್ಲಿಯೇ ಜನ್ಮಪಡೆದಳು. ಮಾತೆಯಿಂದ ಮಗಳು ಅದೇ ಕಲೆಯನ್ನು ಅಭ್ಯಸಿಸಿದಳು. 'ಕೃಷ್ಣ ಫಿಲ್ಮ್ ಕಂಪೆನಿ'ಯಲ್ಲಿ, ಆ ಮೇಲೆ ಕೊಹಿನೂರು ಫಿಲ್ಮ್ ಕಂಪೆನಿಯಲ್ಲಿ, ಆ ಮೇಲೆ ಜಗದೀಶ ಫಿಲ್ಮ್ ಕಂಪೆನಿ, ಬಳಿಕ ತನ್ನ ಜತೆಗಾರರಾದ ಶಹಾರೊಡನೆ ರಣಜಿತ್ ಫಿಲ್ಮ್ ಕಂಪನಿಯಲ್ಲಿ ಗೋಹರಳು ತನ್ನ ಕಲಾಪ್ರತಿಭೆಯನ್ನು ಮೆರೆಸಿ ಜಗತ್ತನ್ನು ಮುಗ್ಧವಾಗಿ ಮಾಡಿದ್ದಾಳೆ. ತನ್ನ ಅತ್ಯುತ್ತಮ ನಟನಾ ಸಾಮರ್ಥ್ಯಕ್ಕೆ ಆಕೆ ಸುವರ್ಣಪದಕವನ್ನೂ ಪಡೆದಳು.

ಆಕೆ ಕೇವಲ ಮುಗ್ಧ ಬಾಲಿಕೆ ಪಾತ್ರವಲ್ಲ, ಕುದರೆಸವಾರಿ, ಖಡ್ಗಯುದ್ಧ, ಈಟಿ ಕಲಾಂಗಗಳಲ್ಲಿಯೂ ಕುಶಲತೆಯನ್ನು ಪಡೆದ ಕಠೋರ ಶಕ್ತಿಸ್ವರೂಪಿಣಿಯಾಗಿದ್ದಾಳೆ. ಇಂದು ಆಕೆ ಅಭಿನಯಿಸುವ 'ಅಚ್ಚುತ್' ಚಿತ್ರವು ಅತ್ಯುತ್ತಮ ಪ್ರದರ್ಶನವಾಗುವುದೆಂದು ಶ್ರೀ ಶಹಾರವರ ಕಲ್ಪನೆಯಾಗಿದೆ. ಇದು ಇಂಗ್ಲಿಷು, ಹಿಂದೀ, ಗುಜರಾತಿ ಭಾಷೆಗಳಲ್ಲಿ ತಯಾರಾಗುತ್ತಿದೆ.

ಶಾಂತಾ ಆಪ್ಟೆಯ ಉಪವಾಸದ ಘಟನೆ

ಪ್ರಭಾತ ಫಿಲ್ಮ್ ಕಂಪೆನಿಯ ಅಧಿಕಾರಿವರ್ಗಕ್ಕೂ ಶ್ರೀಮತಿ ಶಾಂತಾ ಆಪ್ಟೆಗೂ ವಿರೋಧವುಂಟಾಗಿ ಇದು ಆಕೆಯ ಉಪವಾಸಕ್ಕೆ ಕಾರಣವಾಯಿತು.

ಕೆಲ ಸಮಯದಿಂದ ಶಾಂತಾ ಆಪ್ಟೆಯನ್ನು ಪ್ರಭಾತ ಫಿಲ್ಮ್ ಕಂಪೆನಿಯವರು ದೂರವಿರಿಸಿದ್ದರು. ಇದು ಆಕೆಯ ಮನಸ್ಸನ್ನು ಉದ್ವಿಗ್ನಗೊಳಿಸಿತು. ತನ್ನ ಕೋರಿಕೆಯನ್ನು ಕೇಳದ ವಿನಹ ಉಪವಾಸ ನಿಲ್ಲಿಸುವುದಿಲ್ಲವಾಗಿ ಆಕೆ ಪ್ರಭಾತ ನಗರದ ಬಾಗಿಲಲ್ಲಿ ನಿರ್ಧಾರಮಾಡಿ ಕುಳಿತಳು.

ಉಪವಾಸವು ನ್ಯಾಯವೋ ಅನ್ಯಾಯವೋ ಎಂಬ ವಿಚಾರವಲ್ಲ. ಡಾಕ್ಟರರ ಸೂಚನೆಯಂತೆ ಕಂಪೆನಿಯ ಅಧಿಕಾರಿಗಳು ಬಂದು, ಆಕೆಯು ನಿರಶನವ್ರತವನ್ನು ಬಿಟ್ಟುಕೊಟ್ಟಲ್ಲಿ ಎಲ್ಲವನ್ನೂ ವಿಚಾರಿಸಬಹುದಾಗಿ ಹೇಳಿದರು. ಅಂತೂ ಕಟ್ಟಕಡೆಗೆ ಉಪವಾಸವೇನೋ ಕೊನೆಗೊಂಡಿತು.

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು/ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:
ಆಯುರ್ವೇದಾಶ್ರಮ :: ಮದರಾಸು.



ಸ್ಟಾಕಿಸ್ಟರು
ಪೊಪ್ಯುಲರ್ ಸ್ಟೋರ್‍ಸ್, ರಥಬೀದಿ, ಮಂಗಳೂರು.

ಪೋಲೆಂಡಿನ ಇಂದಿನ ಪರಿಸ್ಥಿತಿ

ಯುದ್ಧದ ಕಾರ್ಮೋಡವು ಯುರೋಪಿನ ದಿಗಂತವನ್ನೆಲ್ಲ ವ್ಯಾಪಿಸಿಕೊಂಡಿದೆ. ರಾಷ್ಟ್ರ ಸಂಘದ ಅಂಕೆಯಲ್ಲಿರುವ ಡಾಂಝಿಗ ನಗರದ ಉಪಯೋಗವನ್ನು ವರ್ಸಲ್ಲೀ ಒಪ್ಪಂದದನ್ವಯ ಪೋಲಂಡು ಮಾಡಿಕೊಳ್ಳುತ್ತದೆ.

ಪೋಲಂಡು ಯುರೋಪಿನ ದೃಷ್ಟಿಯಿಂದ ಅದೊಂದು ಮಹತ್ವದ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಪೋಲೆಂಡಿನ ಜನರು ಬಹಳ ಬುದ್ಧಿವಂತರು. ಕೊಪರ್ನಿಕಸ್ ಎಂಬ ಮಹಾಪುರುಷನು ಪೋಲೆಂಡಿನಲ್ಲಿಯೇ ಅವತರಿಸಿದ್ದನು ಅಮೇರಿಕದ ಕ್ರಾಂತಿಯಲ್ಲಿ ಭಾಗವಹಿಸಿದ ಮೂವರು ವಿದೇಶೀಯರಲ್ಲಿ ಇಬ್ಬರು ಮಹಾಪುರುಷರು ಪೋಲೆಂಡಿನವರು. ಇಂದಾದರೂ ಪೇದರೆವೆಸ್ಕಿ, ರುಬಿನ್‌ಸ್ಟೀಯಿನ, ಕಾನ್ರಡ ರೀಮಂಟ, ಮೆದವರ್ ಕ್ಯೂರಿ ಮೊದಲಾದವರು ಜಗತ್ಪ್ರಸಿದ್ಧ ಸಾಹಿತಿಗಳು. ಯುರೋಪಿನಲ್ಲಿ ಮೊಟ್ಟಮೊದಲು ವಿದ್ಯಾ ಇಲಾಖೆಯನ್ನು ಸ್ಥಾಪಿಸಿದ ಕೀರ್ತಿಯು ಪೋಲೆಂಡಿಗೆ ಸಲ್ಲುವುದು ಪಾರ್ಲಿಮೆಂಟೂ ಮೊದಲು ಅಲ್ಲಿಯೇ ಹುಟ್ಟಿತು ಜನರ ಹಕ್ಕುಬಾಧ್ಯತೆಗಳ ಬಗ್ಗೆ ಕಾಯಿದೆಯೂ ಅಲ್ಲಿಯೇ ಮೊಟ್ಟಮೊದಲು ಆರಂಭವಾಯಿತು

ಒಂದು ಕಾಲದಲ್ಲಿ ಪೋಲಂಡು ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿ ಆಳಿದ ದೇಶ ಇಂದು ಆ ವೈಭವದ ಕಾಲದ ೩/೫ ಅಂಶದಷ್ಟೇ ರಾಜ್ಯವಿದ್ದು, ಆರ್ಥಿಕ ದುಸ್ಥಿತಿಗೆ ಈಡಾಗಿದೆ ಅದು ಕೃಷಿಕರ ರಾಷ್ಟ್ರ ಉತ್ಪನ್ನವೂ ಕಡಿಮೆ ಇದೆ ಜನಸಂಖ್ಯೆ ಸುಮಾರು ೩॥ ಕೋಟಿ ಇದೆ ಗೋದಿ ಹಾಗು ಬಟಾಟಿ ಇವೇ ಅವರ ಮುಖ್ಯ ಆಹಾರ ಉಪ್ಪಿನ ಖರ್ಚನ್ನು ಉಳಿಸಿಕೊಳ್ಳುವುದಕ್ಕಾಗಿ ಒಂದು ಸಲ ಬೇಯಿಸಿದ ನೀರಿನಲ್ಲಿ ಹಲವಾರು ಬಾರಿ ಬಟಾಟೆಯನ್ನು ಬೇಯಿಸುತ್ತಾರೆ

ಮನುಷ್ಯರು ಅರೆಹೊಟ್ಟೆ ಅಥವಾ ಉಪವಾಸವಿದ್ದು ಕಾಲಹರಣ ಮಾಡುತ್ತಾರೆ

೧೯೩೩ರಲ್ಲಿ ಯುರೋಪಿನಲ್ಲಿ ಎಲ್ಲೆಲ್ಲಿಯೂ ಬಡತನದ ಬೇಗೆಯು ಇತ್ತು ಇಂಥ ದುಸ್ಥಿತಿಯಲ್ಲಿಯೂ ಆ ದೇಶದಲ್ಲಿ ಒಕ್ಕಟ್ಟಿತ್ತು

ಪೋಲಂಡದ ಆತ್ಮವಿಶ್ವಾಸವು ಮಹತ್ತಾದುದು ಬಾಲ್ಟಿಕ ಸಾಗರದಿಂದ ಕ್ರಿಮಿಂಟಾದವರೆಗೆ ಒಂದು ಕಾಲದಲ್ಲಿ ತನ್ನ ಸಾಮ್ರಾಜ್ಯವು ವಿಸ್ತರಿಸಿತ್ತು ಆ ಪರಿಸ್ಥಿತಿಗೆ ಬರುವುದಕ್ಕೆ ತಾವು ಜರ್ಮನರೊಡನೆ ಹೆಣಗಾಡಬೇಕಾಯಿತು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ ಆದರೆ ಕೊನೆಗೆ ಘಟನೆಯಲ್ಲಿ ಹಲವು ಅನುಚಿತ ಬದಲಾವಣೆಗಳಾಗಿ ಪೋಲಂಡಿನ ಶಕ್ತಿಯು ಕುಗ್ಗಿತು ಮಹಾಯುದ್ಧದ ಕಾಲದಲ್ಲಿ ರಶ್ಯದೊಡನೆ ಹೋರಾಡಿ ವರ್ಸಲೀ ಒಪ್ಪಂದದನ್ವಯ ಅತ್ಯುನ್ನತಿಯ ಕಾಲದ ತಮ್ಮ ಸಾಮ್ರಾಜ್ಯದ ೩/೫ ಅಂಶವನ್ನು ಸಂಪಾದಿಸಿಕೊಂಡಿತು ಇದೀಗ ಯುರೋಪಿನ ಆರನೇ ದೊಡ್ಡ ರಾಷ್ಟ್ರ

ಬೆಲ್ಜಿಯಮವನ್ನು ಬಿಟ್ಟರೆ ಯುದ್ಧದ ಕಾಲದಲ್ಲಿ ಪೋಲಂಡಿನಷ್ಟು ನಷ್ಟವು ಯಾವ ರಾಷ್ಟ್ರಕ್ಕೂ ಆಗಲ್ಲ ಕಳೆದುಹೋದ ಶಕ್ತಿಯನ್ನು ಪುನರುಜ್ಜೀವನಗೊಳಿಸುವದಕ್ಕೆಂದು ಪೋಲಂಡು ಸಾಹಸಪಟ್ಟಿತು ಆಡಳಿತ ಪದ್ಧತಿಯನ್ನು ಒಂದುಗೂಡಿಸಿ ಬಲವುಳ್ಳ ಒಂದು ಕೇಂದ್ರ ಸರಕಾರವನ್ನು ನಿರ್ಮಿಸಿಕೊಂಡಿತು ಅಲ್ಲಿಯ ಪರಿಸ್ಥಿತಿಯಲ್ಲಿಯೂ ಮಹತ್ವದ ಬದಲಾವಣೆಯಾಗಿದೆ.

ಒಕ್ಕಟ್ಟಿಗಿರುವ ಮುಖ್ಯ ಅಡಚಣೆಯೆಂದರೆ ದೇಶದಲ್ಲಿ ಐಕ್ಯ ಇಲ್ಲ ಮೂರರಲ್ಲಿ ಒಂದು ಪಾಲಷ್ಟು ಅಲ್ಪ ಸಂಖ್ಯಾಕರು ದೇಶದಲ್ಲೆಲ್ಲ ಹರಡಿರುವರು ಅಲ್ಪ ಸಂಖ್ಯಾಕರಲ್ಲಿ ಜರ್ಮನ್ನರ ಭಯವೇ ಹೆಚ್ಚು. ಅಲ್ಲಿ ೨॥ ಲಕ್ಷ ಜರ್ಮನರು, ೩೩ ಲಕ್ಷ ಯೆಹೂದಿಯರು, ೫೦ ಲಕ್ಷ ಉಕ್ರೇನಿಯರು ಇದ್ದಾರೆ.

ಅಮೇರಿಕನರ ದೃಷ್ಟಿಯಿಂದ ಪೋಲಂಡವು ಪ್ರಜಾಪ್ರಭುತ್ವ ರಾಷ್ಟ್ರವಲ್ಲ. ಆದರೆ ಅದು ಏಕಾಧಿಪನ ಕೈಯಲ್ಲಿ ನಡೆಯುವ ನಿರಂಕುಶ ಪ್ರಭುತ್ವ ರಾಷ್ಟ್ರವೂ ಅಲ್ಲ ಪಾರ್ಲಿಮೆಂಟಿನಲ್ಲಿ ಒಂದು ಪ್ರಬಲ ಪಂಗಡವಿದೆ. ಇದಕ್ಕೆ ಸೈನ್ಯದ ಬೆಂಬಲವೂ ಇದೆ. ಈ ಪಕ್ಷದವರು ಸಾಮಾನ್ಯ ತರಗತಿಯವರು. ಅಲ್ಲಿ ಸೌಮ್ಯವಾದಿ ಮತ್ತು ಸಾಮ್ಯವಾದಿಗಳ ಜಗಳವಿದ್ದೇ ಇದೆ ಯೆಹೂದಿಯರ ಜನಸಂಖ್ಯೆಯು ಹೆಚ್ಚಿದ್ದರೂ ಅವರಿಗೆ ಪ್ರತಿಬಂಧಕ ಮಾಡುವ ಯಾವ ಯೋಜನೆಯೂ ಜಾರಿಯಲ್ಲಿಲ್ಲ. ಪೋಲಂಡವು ಫ್ಯಾಸಿಜಂ ಪದ್ಧತಿಯನ್ನಾಗಲಿ, ಸಾಮ್ಯವಾದವನ್ನಾಗಲಿ ನಂಬುವುದಿಲ್ಲ. ಅದರ ಬೆಳವಣಿಗೆಗೂ ಅವಕಾಶಕೊಡುವುದಿಲ್ಲ.

ಜರ್ಮನಿ ಮತ್ತು ರಶಿಯಾ ದೇಶಗಳ ಪರಸ್ಪರ ಸಂಬಂಧಕ್ಕೂ ಪೋಲೆಂಡಕ್ಕೂ ನಿಕಟವಾದ ಸಂಬಂಧವಿದೆ ಇವರೊಳಗೆ ಯುದ್ಧವಾದರೆ ಪೋಲೆಂಡದ ಭೂಕ್ಷೇತ್ರದಲ್ಲಿಯೇ ಆಗಬೇಕು. ಜರ್ಮನಿಗೆ ಜಯವಾಗಲಿ ಅಥವಾ ರಶಿಯಾಕ್ಕೆ ಜಯವಾಗಲಿ, ಪೋಲೆಂಡದ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದು ಅನಿವಾರ್ಯ

ಸದ್ಯದ ಪರಿಸ್ಥಿತಿಯ ಮೇಲಿಂದ ಹೇಳಬೇಕಾದರೆ ಜರ್ಮನಿ ರಶಿಯಾಗಳ ನಡುವೆ ಒಪ್ಪಂದವಾಗುವುದು ಅನಿವಾರ್ಯ ರಶಿಯಾದಲ್ಲಿ ಬೇಕಾದಷ್ಟು ಅಸಿದ್ಧ ಸರಕುಗಳಿರುವವು ಅವುಗಳಿಂದ ಸಾಮಾಗ್ರಿಗಳನ್ನು ತಯಾರಿಸುವುದಕ್ಕೆ ಜರ್ಮನಿಯ ತಜ್ಞರ ಸಹಾಯಬೇಕು ಇವೆರಡು ರಾಷ್ಟ್ರಗಳಿಗೆ ಒಪ್ಪಂದವಾದರೂ ಪೋಲೆಂಡಕ್ಕೆ ಯುದ್ಧವಾದಷ್ಟೇ ಭಯವಿದೆ

ಪೋಲೆಂಡಿನ ವಿದೇಶ ನೀತಿಯೂ ದ್ವಿಮುಖವಾಗಿದೆ ಮೊದಲನೆಯದಾಗಿ ಇವೆರಡು ರಾಷ್ಟ್ರಗಳಿಗೆ ಐಕ್ಯವಾಗಬಾರದು ಎರಡನೆಯದಾಗಿ ಇವೆರಡರಲ್ಲಿ ಯಾವುದೇ ರಾಷ್ಟ್ರವು ತಮ್ಮ ಮೇಲೇರಿ ಬಂದರೂ ಹೊರಗಿನ ಸಹಾಯ ಬೇಕು ಡಾಂಝಿಗವು ಜರ್ಮನಿಯ ಕೈವಶವಾದರೆ ಸುತ್ತುಮುತ್ತಿನ ಭೂಭಾಗಗಳು ಕೈತಪ್ಪುವವು

ಜರ್ಮನಿಯೊಡನೆ ಹೋರಾಟವಾದಾಗ ಪೋಲೆಂಡಿಗೆ ರಶಿಯಾದ ಸಹಾಯವು ದೊರಕಿಲ್ಲ ಪೋಲರು ರಶಿಯಾದ ಸಹಾಯವನ್ನು ಬಯಸಲಿಲ್ಲ ಇದಕ್ಕೆ ಅಲ್ಲಿಯ ಬೋಲ್ಶೆವಿಜಂ ಪದ್ಧತಿಯೇ ಕಾರಣವಾಯಿತು ಇಷ್ಟಿದ್ದರೂ ಪೋಲೆಂಡವು ಪ್ರಬಲ ಕೋಟೆಯಂತೆ ಅಡ್ಡನಿಂತು ಯುರೋಪದ ಪ್ರಜಾಪ್ರಭುತ್ವವನ್ನು ಕಾಪಾಡಿತು ರಶಿಯನರೂ ಪೋಲರೂ ಒಂದೇ ಸ್ಲೋವಿಕ್ ಜನಾಂಗದವರು ಅವರಲ್ಲಿ ಒಕ್ಕಟ್ಟಾಗಬಾರದೆಂದಲ್ಲ ಪೋಲೆಂಡಿನ ಸಹಾಯಕ್ಕೆ ಜನ ಕಳುಹಿಸುವುದಕ್ಕೂ ರಶಿಯಾಕ್ಕೆ ಹೆಚ್ಚು ಅನುಕೂಲತೆಗಳಿವೆ ಪೋಲೆಂಡಿನ ಉಜ್ವಲ ಪರಂಪರೆ, ಆತ್ಮವಿಶ್ವಾಸ ಹಾಗೂ ಒಕ್ಕಟ್ಟು ಅವರನ್ನು ಈ ವರೆಗೂ ಉಳಿಸಿದೆ ಮುಂದಾದರೂ ಉಳಿಸಬಹುದು (ಸಂ ಕ)

ನೋಟಿಸು.

ಕಾಸರಗೋಡು ಡಿ। ಮು। ಕೋರ್ಟಿನಲ್ಲಿ

O P. No 85/39

ಕೆ ಅಂಬಾ ಬ್ಯಾ, ಕೊಸಹೆಂಗಸಿನ ಮಗಳು ವ ರಾಮಚರಣ ಪಾಂಡೇಯರ ಪತ್ನಿ ಕಾಸರಗೋಡು ತಾಲುಕು ಕಳಂಗ್ರಿ ಗ್ರಾಮ ಕೊರಕೋಡದಲ್ಲಿರುವವಳು } ಅರ್ಜಿದಾರಳು

ಸದ್ರಿ ಅರ್ಜಿದಾರಳ ಕಡೆಯಿಂದ ಈಮೂಲಕ ತಿಳಿಸುವುದೇನೆಂದರೆ—

ಅರ್ಜಿದಾರಳ ತಾಯಿ ಮೃತನಟ್ಟ ಕೊಸಹೆಂಗಸಿಗೆ ಕಾಸರಗೋಡು ಪಂಚ್ಯಾತು ಕೋರ್ಟ ಸ್ಮಾಲ್ ನಂಬ್ರ 55/38ನೇ ಡಿಕ್ರಿ ಪ್ರಕಾರ ಬರತಕ್ಕ ಐವೇಜು, ವಸೂಲಿ ಕುರಿತು ಅರ್ಜಿದಾರಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 10-8-1939ಕ್ಕೆ ತನ್ನಿಗೆ ಇಟ್ಟಿರುತ್ತದೆ ಆ ಕುರಿತು ಆಕ್ಷೇಪವಿದ್ದವರು ಆ ದಿವಸ ಕೋರ್ಟ ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗಿಯದೆ.

Kasargod 26-7 39 } **K. Vittal Nayak**
Advocate for petitioner.



ನಿಮ್ಮ ಚರ್ಮವನ್ನು ಶುಚಿಯಾಗಿಯೂ ಆರೋಗ್ಯಕರವಾಗಿಯೂ ಇಡಿರಿ

ಪ್ರತೀ ರಾತ್ರಿಯೂ ಜ್ಯಾಂಬಕನ್ನು ಸವರಿಸಿರಿ.

ಅಸಹ್ಯವಾದ ಚರ್ಮವ್ಯಾಧಿಗೆ, ಕುರುವಿಗೆ ಮತ್ತು ಉದ್ದುರಿಗೆ ಪ್ರತೀ ರಾತ್ರಿಯೂ ಜ್ಯಾಂಬಕನ್ನು ಚೆನ್ನಾಗಿ ಸವರಿಸಿದರೆ ಅದು ಗುಣವಾಗುವುದು ಜ್ಯಾಂಬಕಿನಲ್ಲಿರುವಂತ ಉತ್ತಮವಾದ ಗಿಡಮೂಲಿಕೆಗಳ ಎಣ್ಣೆಯು ಚರ್ಮದಲ್ಲಿರುವಂತ ರಂಧ್ರಗಳಿಂದ ಒಳಪ್ರವೇಶಿಸಿ ಬೇನೆಯಿರುವಂತ ನಾಡಿಗಳನ್ನು ಗುಣಪಡಿಸುತ್ತದೆ ಜ್ಯಾಂಬಕು ಚರ್ಮವನ್ನು ಯಾವಾಗಲೂ ಆರೋಗ್ಯಕರವಾಗಿಯೂ ಮೃದುವಾಗಿಯೂ ಇರಿಸುತ್ತದೆ. ಪ್ರತೀ ಕಡೆಗಳಲ್ಲಿಯೂ ಡಾಕ್ಟರರ ಮತ್ತು ನರ್ಸುಗಳು ಕುರು, ಉದ್ದು, ಗಜ್ಜಿ ಮುಂತಾದ ಚರ್ಮವ್ಯಾಧಿಯನ್ನು ಗುಣಪಡಿಸಲು ಜ್ಯಾಂಬಕು ಉತ್ತಮವಾದುದೆಂದು ಹೊಗಳುತ್ತಾರೆ.

ಎಲ್ಲಾ ಔಷಧಿ ವ್ಯಾಪಾರಂಗಳಲ್ಲಿ ಪೆಟ್ಟಿಗೆಗೆ ರೂ 1 ಮತ್ತು 2-4-0 ರಂತೆ ಏಜೆಂಟ್ಸ್ ಮಾರುತ್ತಾರೆ.

ಮೆಸರ್ಸ್ ದಾಥಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಆಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St, CALCUTTA

ನೋಟೀಸು.

CANARA BANK, LTD., KUMBLA.

ಕೆನರಾ ಬ್ಯಾಂಕ್ ಲಿಮಿಟೆಡ್, ಕುಂಬಳೆ.

ಈ ಕೆಳಗೆ ಹೆಸರು ಕಾಣಿಸಿದವರ ಇದರ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ ವ ಅವುಗಳ ಬಡ್ಡಿಯನ್ನಾಗಲೀ ಕ್ಲಪ್ತ ವ್ಯಾಧೆಗೆ ಕೊಡದೆ ಇದ್ದು, ಆ ಕುರಿತು ಸದ್ರಿಯವರಿಗೆ ರಿಜಿಸ್ಟ್ರನೋಟೀಸು ಕೊಟ್ಟಲ್ಲಿ, ಕೆಲವರಿಗೆ ಜ್ಯಾರಿಯಾಗಿಯೂ ಕೆಲವರಿಗೆ ಜ್ಯಾರಿಯಾಗದೆ ಇನ್ಕಾರು ಮಾಡಿ ವಾಪಾಸು ಬಂದಿರುವುದರಿಂದಲೂ, ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಸದ್ರಿ ಸಾಲಗಾರರು ಅವರಿಂದ ಸಲ್ಲತಕ್ಕ ಬಹಾ ಅಸ್ಲು ಬಡ್ಡಿ ವಗೈರೆಯನ್ನು ಇದೇ ೧೯೩೯ನೇ ಇಸ್ವಿ ಆಗೋಸ್ತು ತಿಂಗಳ ತಾರೀಕು ೯ರ ಒಳಗೆ ಸಲ್ಲಿಸಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ ಸದ್ರಿ ನಗಗಳನ್ನು ೧೯೩೯ನೇ ಇಸ್ವಿ ಆಗೋಸ್ತು ತಿಂಗಳ ತಾ ೧೨ನೇ ಶನಿವಾರ ಮಧ್ಯಾಹ್ನ ಘಂಟೆ ೧೨ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಬೇರೆ ಯಾವುದಾದರೂ ಒಂದು ದಿವಸ ಪುನಃ ನೋಟೀಸು ವಗೈರೆ ಕೊಡದೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುವು

ಜಂಖ್ಯಾ ನಂಬ್ರ	ಲೋನು ನಂಬ್ರ	ಹೆಸರು ವ ವಿಳಾಸ	ಅಸಲು ಐವೇಜು
1	G L 363/37	ಮಹಮ್ಮದ್ ಬ್ಯಾರಿ ಪಕ್ರಾಬ ಬ್ಯಾರಿಗಳ ಮಗ, ಬಾಡೂರು, ಅಂಗಡಿಮೊಗರು	34—0—0
2	G. L 254/37	ಎಚ್. ವಾಸುದೇವಮ್ಮಯ್ಯ, ಕೇಶವಮ್ಮಯ್ಯನವರ ಮಗ, ಹೇರೂರು, ಕುಂಬಳೆ	40—0—0
3	S L 505/38	ಅಬ್ದುಲ್ಲ ಬ್ಯಾರಿ, ಮಹಮ್ಮದ್ ಬ್ಯಾರಿಗಳ ಮಗ, ಕುಡಾಲ್ ಮರ್ಕಳ, ಅಂಗಡಿಮೊಗರು	6—0—0
4.	S. L. 722/38.	ಪೋಕ್ರ ಬ್ಯಾರಿ, ಮಾಯಿಕುಟ್ಟಿ ಬ್ಯಾರಿಗಳ ಮಗ, ಯೆಡ್ನಾಡು, ಕುಂಬಳೆ	20—0—0
5	S L 905/38	ಈಸುಬು ಬ್ಯಾರಿ, ಬಾಪುಬ್ಯಾರಿಗಳ ಮಗ, ಊಜಾರುಉಳ್ವಾರು ಕುಂಬಳೆ	20—0—0
6	S L 1001/38	ಮಮ್ಮುಂಞ ಬ್ಯಾರಿ, ಬದ್ದುಕುಂಞ ಬ್ಯಾರಿಗಳ ಮಗ, ಊಜಾರುಉಳ್ವಾರು, ಕುಂಬಳೆ	5—0—0
7	S L 1021/38	ಮಹಮ್ಮದ್ ಬ್ಯಾರಿ, ಬೀರಾಯಿನ ಹಾಜಿಗಳ ಮಗ, ಇಚ್ಲಂಗೋಡು, ಕುಂಬಳೆ	15—0—0
8	S. L. 1027/38	ಫಸ್ತ್ಯಾಮ್ ಫೆರ್ನಾಂಡಿಸ್, ಕುಂಬಳೆ	6—0—0
9	S L 806/38	ಮಮ್ಮುಂಞ ಬ್ಯಾರಿ, ಮೊಯಿದುಕುಂಞ ಬ್ಯಾರಿಗಳ ಮಗ, ಮಾಕೂರು ಬಂಬ್ರಾಣ, ಕುಂಬಳೆ	23—0—0
10	S L 542/38	ಮಹಮ್ಮದ್ ಬ್ಯಾರಿ, ಪಕ್ರಾಬ ಬ್ಯಾರಿಗಳ ಮಗ, ಬಾಡೂರು, ಅಂಗಡಿಮೊಗರು	12—0—0

ಈ ನೋಟೀಸು ಖರ್ಚು ಅಲ್ಲಾದಾ

Office of the Bank, KUMBLA Dated 25—7—'39. }

M. Shridhara Kini,
Agent.

ಮೋಟುಗಾಲಿನ ಮಾಟಗಾರ ಹಿಟ್ಲರನ 'ಶಕುನಿ' ಗೋಬೆಲ್ಸ್!

★ ನಾಜೀ ಪಕ್ಷದ ಪ್ರಚಾರವೇ ಆತನ ಜೀವನದ ಗುರಿ!

★ ರಾಜ್ಯಸೂತ್ರವನ್ನೂ ನಡೆಸುವ ಹಿಟ್ಲರನ ಬಲಗೈ ಬಂಟ!

★ ಯೆಹೂದ್ಯ ಮತ್ತು ಸೋಶಿಯಲಿಸ್ಟರ ಭಯಂಕರ ವೈರಿ!

ವಿಲಿಯಮ್ಸ್‌ರ ಮುಂದೆ ಜರ್ಮನರನ್ನು ಹಿಟ್ಲರನು ಹೇಳಿದಂತೆ ಕುಣಿಸಿದ ಐಂದ್ರಜಾಲಕರೊಬ್ಬರಲ್ಲಿ ಜೋಸೆಫ್ ಗೋಬೆಲ್ಸನು ಪ್ರಸಿದ್ಧನು. ಬಾಯಿಬಿಟ್ಟು ಅರ್ಭಟಿಸುವುದು ಹಿಟ್ಲರನಾದರೂ, ಆತನ ಹೃದಯದಲ್ಲಿ ಹುದುಗಿದ್ದಂತೆ ಹಿಟ್ಲರನ ಧ್ವನಿಗೆ ವೀರಾವೇಶ ತುಂಬಿಸುವವನು ಗೋಬೆಲ್ಸನೇ! 'ಅತ್ಯಂತ ದ್ವೇಷಿಸಲ್ಪಡುವ ನಾಜೀ' ಎಂಬುದು ಆತನಿಗೆ ಹಲವರಿಟ್ಟ ಅಡ್ಡ ಹೆಸರು! ಆತನು ಪ್ರತಿ ನಿಮಿಷದಲ್ಲಿಯೂ ವಿಚಾರಮಗ್ನನಾಗಿದ್ದು, ಯಾವ ಹಂಚಿಕೆಗಳನ್ನೋ ಹೂಡುವುದರಲ್ಲಿ ತನ್ಮಯನಾಗಿ ಬಿಡುವವನಾದರೂ, ಸಮಯ ಬಂದಾಗ, ಇಡೀ ಜರ್ಮನ್ ದೇಶದಲ್ಲಿ ಜನರ ಕಿವಿ ಬಾಯಿಗಳಲ್ಲಿ ಹೊಕ್ಕು, ತನ್ನ ಪ್ರಚಾರವನ್ನು ಪ್ರಬಲವಾಗಿ ಸಾಧಿಸಿ ಜನತೆಯನ್ನು ಉದ್ರೇಕಗೊಳಿಸುವ ವಿದ್ಯುಚ್ಛಕ್ತಿಯಂತಹ ಆತನಾಗಿದ್ದಾನೆ! ಪ್ರಚಾರ ಶಾಖೆಯ ಮಂತ್ರಿ ಪದವಿಯಲ್ಲಿದ್ದು, ತನ್ನ ಅಧಿಕಾರಕ್ಕೆ ಸರಿಯಾಗಿ, ಪ್ರಚಾರ ನಿಪುಣನಾದ ಗೋಬೆಲ್ಸನು, ಪ್ರತಿಯೊಬ್ಬರಿಗೂ ಭಯಾನಕ ಮೂರ್ತಿಯಾಗಿದ್ದಾನೆ. ಹುಟ್ಟುವಾಗಲೇ ಕಾಲಿನ ಮೋಟುತನವುಳ್ಳವನಾಗಿ, ತನ್ನ ಈ ದುರಾದೃಷ್ಟತೆಗೆ ಕೊರಗುತ್ತಿರುವ ಗೋಬೆಲ್ಸನು, ಒಂದು ಪ್ರತ್ಯೇಕ ಜೋಡನ್ನು ಧರಿಸಿ ಜೀವನರಥವನ್ನು ದೂಡುತ್ತಾನೆ.

೧೮೯೭ರಲ್ಲಿ ಪಾಲ್ ಜೋಸೆಫ್ ಗೋಬೆಲ್ಸನು ರೈನ್‌ಲೇಂಡಿನಲ್ಲಿ ಒಬ್ಬ ಫ್ಯಾಕ್ಟರೀ ಮೇನೇಜರನ ಮಗನಾಗಿ ಹುಟ್ಟಿದನು. ಕೆಥೋಲಿಕ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದನು. ಎಂಟು ಯುನಿವರ್ಸಿಟಿಗಳಲ್ಲಿ ಮುಂದಿನ ವಿದ್ಯಾಭ್ಯಾಸ ಮಾಡಿದನು. ತನ್ನ ಆರಂಭ ಜೀವನವಾಗಿ ಪತ್ರಿಕೋದ್ಯಮವನ್ನು ಕೈಕೊಂಡನು. ತನ್ನ ೨೫ನೇ ವರ್ಷದಲ್ಲಿ ಹಿಟ್ಲರನನ್ನು ಸಂಧಿಸಿ, ಆತನ ಸಾಮರ್ಥ್ಯಕ್ಕೆ ಬೆರಗಾಗಿ, ಅವನ ಜೊತೆಹಿಡಿದನು. ಕೇವಲ ನಾಲ್ಕೇ ವರ್ಷಗಳಲ್ಲಿ ಹಿಟ್ಲರನ ಅಭ್ಯುದಯಕ್ಕೆ ಬೇಕಾದ ಪೂರ್ವ ಸಿದ್ಧತೆಗಳನ್ನು ಮಾಡಿದನು. ನಿಜವಾಗಿಯೂ ಹಿಟ್ಲರಶಾಹಿಯ ಮಹಾ ಐಂದ್ರಜಾಲವನ್ನು ಜರ್ಮನಿಯಲ್ಲಿ ಮಾಡಿತೋರಿಸಿದ ಮಾಟಗಾರನೆಂದರೆ ಗೋಬೆಲ್ಸನು.

ಹೈದಲ್‌ಬರ್ಗ್ ಯುನಿವರ್ಸಿಟಿಯಲ್ಲಿ ಗೋಬೆಲ್ಸನು ತತ್ವಜ್ಞಾನವನ್ನು ಅಭ್ಯಾಸಿಸಿ ಡಾಕ್ಟರ್ ಬಿರುದನ್ನು ಪಡೆದನು. ಮಹಾಯುದ್ಧದ ಸಮಯದಲ್ಲಿ, ತನ್ನ ಶರೀರದ ಅಶಕ್ತತೆಯ ನಿಮಿತ್ತ ರಣರಂಗಕ್ಕಿಳಿದು ಕಾದಾಡಲು ಸಾಧ್ಯವಿಲ್ಲದವನಾಗಿ ತನ್ನ ಸಮಯವನ್ನು ಓದುವುದರಲ್ಲಿ ಕಳೆದನು. ೧೯೨೨ರಂದು ಆತನು ನಾಜಿ ಪಕ್ಷವನ್ನು ಸೇರಿದನು. ೧೯೨೬ರಲ್ಲಿಯೇ ಅದರ ಮುಖಂಡನಾದನು! ೧೯೩೦ರಲ್ಲಿ ರೀಶ್‌ಸ್ಟೇಗಿನ ಸದಸ್ಯನಾಗಿ ಆರಿಸಲ್ಪಟ್ಟನು.

ಈ ಸಮಯಗಳಲ್ಲಿ ಗೋಬೆಲ್ಸನು ಹಿಟ್ಲರನಿಗೆ ಆಂದೋಲನ ಕಾರ್ಯದ ಮತ್ತು ಸಂಘಟನಾ ಕಾರ್ಯದ ಕುರಿತು ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದನು. ಹಿಟ್ಲರನಿಗೆ ಪ್ರಚಾರಕಾರ್ಯದಲ್ಲಿರುವ ಮಹತ್ವದ ಕುರಿತು ಎಚ್ಚರವಿತ್ತನು. ಜರ್ಮನಿಯ ಅಧಿಕಾರ ಸೂತ್ರವನ್ನು ೧೯೩೩ರಲ್ಲಿ ಕೈಯಲ್ಲಿ ಹಿಡಕೊಂಡು ನಡೆಸಲು ನಿಶ್ಚಯಿಸಿದ್ದು, ಹಿಟ್ಲರನು ಮಾತ್ರವಲ್ಲ—ಹಿಟ್ಲರ್, ಗೋಬೆಲ್ಸ ಈ ದ್ವಂದ್ವಗಳು! ೧೯೩೩ರಲ್ಲಿಯೇ ಆತನಿಗೆ ಪ್ರಚಾರ ಶಾಖೆಯ ಮಂತ್ರಿಪದವಿಯು ಕೊಡಲ್ಪಟ್ಟಿತು. ಭಯಂಕರ ಸಾಮರ್ಥ್ಯವನ್ನು ಉಪಯೋಗಿಸಿ ಗೋಬೆಲ್ಸನು ತನ್ನ ಕಾರ್ಯಗಳನ್ನು ಪೂರೈಸಿದನು. ಆದ್ದರಿಂದ ಆತನು ಇಂದು ಇಷ್ಟೊಂದು ವಿಜಯಿಯಾಗಿರುವನು. ಇಂದು ಅಖಿಲ ಜರ್ಮನಿಯ ಸಂಪೂರ್ಣ ಶಕ್ತಿಯನ್ನು ತನ್ನ ಸ್ವಾಧೀನತೆಯಲ್ಲಿ ಮಾಡಿಕೊಂಡಿರುವ ಪ್ರಭಾವಶಾಲಿಯೆಂದರೆ ಗೋಬೆಲ್ಸ್!

ಅಧಿಕಾರಕ್ಕೆ ಏರಿದ್ದೇ ತಡ, ತನ್ನ ಪಕ್ಷವನ್ನು ಮತ್ತು ಅಧಿಕಾರವನ್ನು ಆತನು ಬೆಳಸತೊಡಗಿದನು. ಜರ್ಮನಿಯ ಪತ್ರಿಕೆಗಳ, ರೇಡಿಯೋ, ಚಲಚ್ಚಿತ್ರ ಇವೆಲ್ಲಾ ಆತನ ಕೈಗೊಂಬೆಗಳಾದುವು. ಇಂದು ಜರ್ಮನ್ ಪತ್ರಿಕೆಗಳಿಗೆ ಇಂತಿಂತಹ ವಿಷಯಗಳನ್ನೇ ಪ್ರಕಟಿಸಬೇಕೆಂದು ಸೂಚನೆ ಕೊಡುವುದು ಮಾತ್ರವಲ್ಲ, ಹಲವೊಮ್ಮೆ ಪ್ರಿಂಟು ಮಾಡಬೇಕಾದ ವಿಷಯಗಳು ಗೋಬೆಲ್ಸನಿಂದ ತಲೆಬರಹದೊಡನೆ ಬರೆದು ಕಳುಹಿಸಲ್ಪಡುತ್ತವೆ. ನಾಜಿಗಳಲ್ಲಿ ಗೋಬೆಲ್ಸನಂತೆ ವಿಚಕ್ಷಣನಾದ ಭಾಷಾ ಪ್ರಭುತ್ವವುಳ್ಳವನಿಲ್ಲ. 'ನಾವು ಬೆಣ್ಣೆಯನ್ನಾದರೂ ಬಿಟ್ಟೇವು, ಕೋವಿಯನ್ನು ಬಿಟ್ಟಿರಲು ಸಾಧ್ಯವಿಲ್ಲ' ಹೀಗೆಂದು ಅರ್ಭಟಿಸಿ ಹೇಳಿದ ಗೋಬೆಲ್ಸನ ಒಂದು ಮಾತು, ರಾಜಕೀಯ ವಾಗ್ಮಿಗಳ ನಿತ್ಯದ ಮಾತಾಗಿದೆ.

ಆತನಿಗೆ ಇರುವ ವಾಕ್‌ಶಕ್ತಿಯು ಅದ್ಭುತವಾದದ್ದು! ತಾನು ಭಾಷಣ ಕೊಡುವಾಗ, ಕೈ ಬಾಯಿಗಳನ್ನು ಶರೀರವನ್ನು ಆತನ ಕಂಡಾಬಟ್ಟೆ ಅಲುಗಾಡಿಸುತ್ತಾನೆ. ಗೋಬೆಲ್ಸನ ವಿಷಯವಾಗಿ ಬಂದಂತ ಯಾವುದೇ ಸುದ್ದಿಯಾಗಲಿ, ಅದು ಸತ್ಯವೋ ಸುಳ್ಳೋ ಎಂಬ ಕುರಿತು ಅನುಮಾನವೇ ಅವಶ್ಯವಿಲ್ಲ.

ಆತನು ಸಾಹಿತ್ಯ, ಚಲಚ್ಚಿತ್ರ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ತನ್ನ ಸ್ವಾರ್ಥದ ಪ್ರಚಾರಕ್ಕೆ ಹೊರಟು, ಅವುಗಳ ಸ್ವಕೀಯತೆಯನ್ನೇ ನಾಶಮಾಡಿ ಬಿಟ್ಟಿದ್ದಾನೆ! ಪ್ರತಿಯೊಂದೂ ಆತನ ಸ್ವಾರ್ಥದ ಕೈಗೊಂಬೆಗಳಾಗಿ ಕುಣಿಯುತ್ತವೆ. ಜರ್ಮನಿಯ ಸಾಹಿತ್ಯ, ಸಂಗೀತ, ನಾಟಕ, ಚಲಚ್ಚಿತ್ರ ಮೊದಲಾದುವುಗಳು ಒಮ್ಮೆ ನಾಜಿಪದ್ಧತಿಯ 'ಇತಿಶ್ರೀ'ಯನ್ನು ಅಭ್ಯಸಿಸಿ ಬಿಟ್ಟರೆ ಕಡೆಗೆ ತಮ್ಮದೇ ಆದ ಒಂದು ಹೊಸ ರೂಪವನ್ನು ಪಡೆಯುವವೆಂದು ಆತ ತಿಳಿಕೊಂಡಿದ್ದಾನೆ. ಅದೇ ಅವನ ಉದ್ದೇಶವೂ ಆಗಿದೆ.

ಆತನ ವರ್ಣದ್ವೇಷವು ಯಹೂದ್ಯರನ್ನು ಜರ್ಮನಿಯಿಂದ ಹೊರ ಅಟ್ಟುವಂತೆ ಮಾಡಿದೆ. ಸೋಶಿಯಲಿಸ್ಟ್ ಮತ್ತು ಯೆಹೂದ್ಯರ ಮೇಲಿರುವ ದ್ವೇಷದಿಂದಲೇ ಬಹಳ ವಿಜಯಹೊಂದಿದ್ದಾನೆ.

ಗೋಬೆಲ್ಸನ ವಂಶಪರಂಪರೆಯ ವಿಷಯವೇನೂ ತಿಳಿದಿಲ್ಲ. ಅದು ಇನ್ನೂ ಗುಪ್ತವಾಗಿದೆ. ಆತನ ಕುಲೀನತೆಯ ಕುರಿತು ಜನರೇನೇನೋ ಆಡುತ್ತಾರೆ. ಮಹಾಪುರುಷರ ಮತ್ತು ಮಹಾನದಿಗಳ ಮೂಲವನ್ನು ವಿಚಾರಿಸಬಾರದಂತೆ!

ದೇವರ ದಿವ್ಯ ಸನ್ನಿಧಿಯಲ್ಲಿ ಇಂದು ಮಕ್ಕಳೆಲ್ಲಾ ಒಂದಾದರು!

ಮಧುರೆಯ ದೇವಾಲಯಕ್ಕೆ ಹರಿಜನ ಪ್ರವೇಶವಾದ ಕುರಿತು ರಾಜಾಜಿಯವರು ಮಾಡಿದ ಚಾರಿತ್ರಿಕ ಮಹತ್ವದ ಭಾಷಣ.



ಮಧುರೆಯ ಮಹಾಮೀನಾಕ್ಷಿ ದೇವಾಲಯವು ದಲಿತ ಹರಿಜನರಿಗೆ ಮುಕ್ತದ್ವಾರವಾಯಿತು. ಆ ಸಂದರ್ಭದಲ್ಲಿ, ಹಲವು ಸಮಯಗಳಿಂದ ಕನವರಿಸುತ್ತಿದ್ದ ವಿಷಯವು ಪ್ರತ್ಯಕ್ಷವಾಗಿ ಆದ ಸಂತೋಷದ ಉದ್ರೇಕದಿಂದ ಪ್ರಸನ್ನರಾದ ಪ್ರಧಾನ ಮಂತ್ರಿ ರಾಜಾಜಿಯವರು ಚಾರಿತ್ರಾರ್ಹವಾದ ಭಾಷಣವೊಂದನ್ನಿತ್ತರು. ಅದರ ಸಾರಾಂಶ ಹೀಗಿದೆ:

"ಮಧುರೆಯಲ್ಲಿ ಇಂತಹ ಅಪೂರ್ವ ಸಂಭವವೊಂದು ನಡೆದ ವಾರ್ತೆಯನ್ನು ಕೇಳಿದಾಗ ನನಗಾದ ಆನಂದಕ್ಕೆ ಪಾರವೇ ಇರಲಿಲ್ಲ. ಆಗ ನನಗೆ ಆನಂದ ಸಂತೋಷದಿಂದ ನಾನು ಪರವಶನಾಗಿ ಪ್ರಮುಕ್ತನೇ ಆಗಿದ್ದೆ, ಇಡೀ ರಾತ್ರಿ ನಾನು ಎವೆಯಿಕ್ಕಲಿಲ್ಲ. ಇತರ ಯಾವ ಕಾರ್ಯಗಳನ್ನು ಮಾಡಲೂ ನನ್ನ ಮನಸ್ಸಿಗೆ ಸಾಧ್ಯವಿರಲಿಲ್ಲ. ನಿಜವಾಗಿ ನನಗೆ ಅದನ್ನು ನಂಬಲಿಕ್ಕೆ ಆಗಲಿಲ್ಲ. ನಂಬಲು ಸಾಧ್ಯವಿಲ್ಲದಿರುವಷ್ಟು ಮಹತ್ವವಾದ ಕೆಲಸವೇ ನಡೆಯಿತು. ನಾನು ಆ ಕುರಿತು ಪತ್ರಿಕೆಯಲ್ಲಿ ಬಂದ ವಾರ್ತೆಯನ್ನು ಓದಿದೆ—ಪುನಃ ಓದಿದೆ, ಮರುಳಾಗಿ, ನನ್ನ ಮಿತ್ರರೊಡನೆ ಕೇಳಿದೆ. ಕಟಕಷ್ಟಗೆ ನಿಜವಾಗಿಯೂ ಒಂದು [illegible] ವಾದದ್ದೇ ಸರಿ. [illegible] ಹಲವರಿಗೆ ನನ್ನ [illegible] ದ ಗಂಭೀರ [illegible] ಅಪರಿಮಿತ ಆನಂದ [illegible] ಬಹುದು. [illegible] ಯ ಎಲ್ಲ [illegible] ದೇವರು, ದೇವಾಲಯಗಳ ಕುರಿತ ವಿಚಾರವುಳ್ಳವರಾಗಿರಲಿಕ್ಕಿಲ್ಲ. ನಮಗೆ ಆಗುವ ಆನಂದವು ಕಾಂಗ್ರೆಸಿನ ವಿಜಯವೆ [illegible] ರೀತಿಯಿಂದ ಹರಿಜನರಿಗೆ [illegible] ನ್ಯಾಯ ಸಿಕ್ಕಿತ ಎಂಬ ಸಂತೋಷವೇ ನನ್ನ ಆನಂದವಾಗಿದೆ.

"ಇಷ್ಟು ಬೇಗನೇ ಇಂತಹ ಅದ್ಭುತ ಸುಧಾರಣೆಯಾದೀತೆಂದು ನಾನು ಎಣಿಸಿರಲಿಲ್ಲ. ನನಗೆ ದೇವರಲ್ಲಿ ಅಚಲ ವಿಶ್ವಾಸವಿತ್ತು. ಖಂಡಿತವಾಗಿಯೂ ಕಾರ್ಯವಾಗಲೇ ಬೇಕೆಂದು ನಂಬಿದ್ದೆ. ಆದರೆ ನಾನು ಊಹಿಸುವುದಕ್ಕಿಂತ ಮೊದಲೇ ದೇವರು ಅದನ್ನು ಒದಗಿಸಿದರು.

'ಹಿಂದೂ ಶಾಸ್ತ್ರವು ವಿಶಾಲವಾದ ಸಾಗರದಂತಿದೆ. ತಾನು ಬಲೆ ಬೀಸಲು ತಿಳಿದಿದ್ದರೆ ಮಾತ್ರ ಅದರ ತಳದಿಂದ ಅಮೂಲ್ಯ ಮುತ್ತು ರತ್ನಗಳನ್ನು ಪಡೆಯಬಹುದು. ನಿಜವಾಗಿಯೂ ಈ ಸುಧಾರಣೆಯ ಯಶಸ್ವಿತೆಯು, ಕೇವಲ ದೇವಾಲಯ ಪ್ರವೇಶದಲ್ಲಿ ನಿಲ್ಲಲಿಲ್ಲ, ಎಲ್ಲರ ಹೃದಯವೂ ಪ್ರೇಮದಿಂದ ಮುಕ್ತದ್ವಾರವಾಗಬೇಕು. ಎಲ್ಲದಕ್ಕಿಂತಲೂ ಮೇಲಾಗಿ, ಇದುವರೆಗೆ ಅಸ್ಪೃಶ್ಯತೆ ಪಾಲಿಸುತ್ತಿದ್ದವರ ಹೃದಯಗಳೇ ಮೊದಲಾಗಿ ತೆರೆಯಲ್ಪಡಬೇಕು. ಮಧುರೆಯಲ್ಲಿ ಹುಟ್ಟಿದ ಈ ಮಗುವು ದಿನದಿಂದ ದಿನಕ್ಕೆ ಬೆಳೆದು ಬಾಳಬೇಕು. ಅದನ್ನು ಬೆಳೆಸಿ ಬಾಳಿಸುವುದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯವಾಗಿದೆ. ನಿಜವಾಗಿಯೂ ಎಲ್ಲದಕ್ಕಿಂತಲೂ ಉತ್ತಮವಾದ ಸುಧಾರಣೆ ಎಂದರೆ ನಿಮ್ಮ ಹೃದಯಗಳನ್ನು ಹರಿಜನರಿಗೆ ತೆರೆದಿಡಿರಿ. ನಿಜವಾಗಿಯೂ ಇಂತಹ ಮಹಾಪವಿತ್ರವಾದ ಯುಗದಲ್ಲಿ ಹುಟ್ಟಿದ ನಾವೆಲ್ಲರೂ ಧನ್ಯರು! ವಿಶೇಷವಾಗಿ ಈ ಪವಾಡಕ್ಕೆ ಮೂಲ ಪುರುಷರಾದ [illegible] ಧನ್ಯರು.

ಹಲವರು ಇದರಿಂದ ರಾಷ್ಟ್ರಕ್ಕೆ ಆದ ಲಾಭವೇನೆಂದು ಕೇಳಬಹುದು, ಇದರಿಂದ ಉದ್ಯೋಗವಾಗಲಿ ಆಹಾರವಾಗಲಿ ಸಿಗುವುದಿಲ್ಲವೆಂದು ಹೇಳುವರು ಕಾಂಗ್ರೆಸಿನ ಕಾರ್ಯಕ್ಕೆ ತಡೆಮಾಡುವ ರಾಷ್ಟ್ರಘಾತುಕರು. ಆದರೆ ನಿಜವಾಗಿಯೂ ಹರಿಜನ ದೇವಾಲಯ ಪ್ರವೇಶದಲ್ಲಿ ನಿಜವಾಗಿಯ [illegible] ಕೆಲಸಮಾಡುವವರು ಅದು ತಮ್ಮ ಕರ್ತವ್ಯವೆಂದು ದುಡಿಯುತ್ತಾರೆ. ತಮ್ಮ ಬಂಧುಗಳಾದ ಹರಿಜನರ ಪಾಲಿಗೆ ತಾವು ಮಾಡತಕ್ಕ ಕರ್ತವ್ಯವನ್ನು ಅವರು ಮಾಡುತ್ತಾರೆ. ದೇವರ ಸನ್ನಿಧಿಯಲ್ಲಿ ಆತನ ಎಲ್ಲಾ ಮಕ್ಕಳನ್ನೂ ಒಂದುಗೂಡಿಸುವುದು ತಮ್ಮ ಕರ್ತವ್ಯವೆಂದು ಅವರು ದುಡಿಯುತ್ತಾರೆ. ಎಲ್ಲರೂ ಈ ಪವಿತ್ರರಾಗಿದ್ದ ಜನರೊಂದಿಗೆ ದಿನನಿತ್ಯ ದೇವಾಲಯಗಳಿಗೆ ಹೋಗಲಿ." ಹೀಗೆಂದರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗಳಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ವಿಜ್ಞಾನ ಯುಗ

ಚಂದ್ರಮಂಡಳದ ಅದ್ಭುತ ನೋಟ!

ನಮ್ಮ ಸಮೀಪದ ಗ್ರಹವೆಂದರೆ ಚಂದ್ರಮಂಡಳವು. ಗೆಲಿಲೋವಿನ ಅಸಮರ್ಪಕವಾದ ಯಂತ್ರದ ಸಹಾಯದಿಂದಲೇ ಅದನ್ನು ೧೧,೫೦೦ ಮೈಲುಗಳ ಅಂತರದಲ್ಲಿ ಮಾನವ ಲೋಕವು ನೋಡುವಂತೆ ಆಗಿದೆ. ಆದರೆ ಇತ್ತೀಚಿಗೆ ತಯಾರಿಸಲ್ಪಟ್ಟ, ೨೦೦ ಇಂಚಿನ ಟೆಲಿಸ್ಕೋಪಿನ ಸಹಾಯದಿಂದ ಚಂದ್ರಮಂಡಳವು ಕೇವಲ ೨೫ ಮೈಲುಗಳ ಸಮೀಪಕ್ಕೆ ಅಂತರಕ್ಕೆ ಎಳೆಯಲ್ಪಟ್ಟು, ಅಲ್ಲಿನ ವಿವರಗಳನ್ನು ಪರೀಕ್ಷಿಸುವುದು ಸಾಧ್ಯವಾಗಬಹುದಾಗಿ ನಂಬಿಕೆಯಿದೆ. ನಿಜವಾಗಿಯೂ, ಈ ವಿಚಾರವು ಮನುಷ್ಯನ ಮನಸ್ಸಿನಲ್ಲಿ ಅದ್ಭುತಕ್ರಾಂತಿಯನ್ನೇ ಹುಟ್ಟಿಸಿದೆ. ಆ ಲೋಕದ ವಿಚಾರ, ಅಲ್ಲಿನ ವಸತಿ, ಪ್ರಾಕೃತಿಕಲಕ್ಷಣವೇ ಮೊದಲಾದುವುಗಳ ಅನುಭವ ಮಾಡಿಕೊಳ್ಳಲು ವೈಜ್ಞಾನಿಕರ ಮನಸ್ಸು ಹರಿದೋಡುತ್ತಿದೆ. ಇಂದು ಏನೆಲ್ಲಾ ವಿಚಾರಗಳು ವೈಜ್ಞಾನಿಕರ ಅವಗಾಹನೆಗೆ ಬಂದಿವೆಯೋ, ಇನ್ನು ಅದಕ್ಕಿಂತಲೂ ಅಧಿಕ ವಿಷಯಗಳು ಅಜ್ಞಾನದ ಕಾಳಗರ್ಭದಲ್ಲಿ ಅಡಗಿರಬಹುದು

ಚಂದ್ರಮಂಡಳವು ನಿಶ್ಶಬ್ದವಾಗಿ ರುದ್ರಗಂಭೀರವಾಗಿದೆಯೆಂದು ತಿಳಿಯುತ್ತದೆ. ಚಂದ್ರಮಂಡಳದಲ್ಲಿ ನೀರೂ ಇರುವುದಿಲ್ಲವೆಂಬುದೂ, ಸೂರ್ಯ ಕಿರಣದ ಪ್ರವೇಶವಿಲ್ಲವೆಂದೂ, ಊಹೆ. ಗಾಳಿ ಬಿಸಿಲುಗಳಿಂದ ರಕ್ಷಿಸಲು ಮನೆಯ ಮಾಡುಗಳಾಗಲಿ, ಮಳೆ ಧೂಳುಗಳಿಂದ ತಡೆಯಲು ಕಿಟಿಕಿ ಬಾಗಿಲುಗಳಾಗಲಿ ಏನೇನೂ ಅವಶ್ಯವಿರುವುದಿಲ್ಲ.

ನಮ್ಮ ಲೋಕದ ಗಣನೆಯಂತೆ, ಸೂರ್ಯೋದಯದಿಂದ ಸೂರ್ಯಾಸ್ತಮಾನದವರೆಗಿನ ಅಲ್ಲಿನ ಒಂದು ದಿನದ ಲೆಕ್ಕವು ಸಾಧಾರಣ ಇಲ್ಲಿ ಎರಡು ವಾರಗಳ ದೀರ್ಘದಷ್ಟಾಗಬಹುದು. ಚಂದ್ರಮಂಡಳದ ಹಗಲಿನ ಆಕಾಶವೂ ನಮ್ಮ ರಾತ್ರಿ ಆಕಾಶದ ಕತ್ತಲೆಯಂತೆ ಎಂದೆಂದೂ ಅಂಧಕಾರಮಯವಾಗಿಯೂ ಇರುವುದು

ಸೂರ್ಯೋದಯ ಮತ್ತು ಅಸ್ತಮಾನಗಳ ಕೆಂಜಾಯೆಯು, ಭೂಮಿಯಂತೆ ಅಲ್ಲಿ ಕಾಣಲಾರದು. ಯಾವ ಬಣ್ಣವೂ ಅಲ್ಲಿ ವ್ಯಕ್ತವಾಗುವುದಿಲ್ಲ. ಬೆಳಕು, ಗಾಳಿ, ನೀರು ಇವುಗಳ ಅಭಾವದಿಂದಾಗಿ, ಅಲ್ಲಿ ಮನುಷ್ಯ ವಸತಿಗೆ ಆಸ್ಪದವಿಲ್ಲವೆಂದು ತಿಳಿದಿದೆ. ಜೀವಜಂತುಗಳು ಇರಲು ಸಾಧ್ಯವಿಯೋ ಇಲ್ಲವೋ, ಅಂತೂ ಅದು ಭೂವಿಭಾಗದಂತೆ ಇರುವುದಿಲ್ಲವೆಂಬುದು ಖಂಡಿತ. ಇದೀ ಸ್ಥಳವೇ ಕಪ್ಪಾಗಿದೆ. ಮೊದಲು, ಮೊದಲು ಸ್ಥಳದ ಕಪ್ಪು ಬಣ್ಣವನ್ನೇ ಜಲಮಯವಾದ ಸಮುದ್ರವನ್ನಾಗಿ ವೈಜ್ಞಾನಿಕರು ತಿಳಿದುಕೊಂಡಿದ್ದರು

೨,೧೬೦ ಮೈಲುಗಳಷ್ಟು ವಿಸ್ತೀರ್ಣದ ಗ್ರಹಮಂಡಳವು ಭೂಮಿಯ ⅙ ಅಂಶದಷ್ಟು ಮಾತ್ರ ಭಾರವುಳ್ಳದ್ದಾಗಿದೆ. ಹೀಗಾಗಿ, ೧೫೦ ಪೌಂಡುಗಳುಭಾರವುಳ್ಳ ಮನುಷ್ಯನು, ಅಲ್ಲಿ ಕೇವಲ ೨೫ ಪೌಂಡುಗಳ ಭಾರವುಳ್ಳವನಾಗಿರುವನು.

ನಿಜವಾಗಿಯೂ, ಗಾಳಿ, ನೀರು, ಬಣ್ಣಗವುಗಳು ಯಾವುವೂ ಇಲ್ಲದೆ, ಭಯಂಕರ ಮೌನವಾಗಿರುವ ವಾತಾವರಣ, ಮೋಡ, ಕಿರಣ, ಇವುಗಳಿಲ್ಲದೆ ಶೋಭಾಹೀನವಾದ ಆಕಾಶ, ಜಡ, ನಿರ್ಜೀವನಮಾನ ಜಂತುಗಳುಳ್ಳ ಲೋಕ, ವಾರ ವಾರಗಳಿಗಿಂತಲೂ ದೀರ್ಘವಾದ ದಿನಗಳು, ಎಂತಹ ಅದ್ಭುತಸೃಷ್ಟಿಯಿದು! ಈಗ ಮಾನವನು ಆಲೋಕಕ್ಕೂ ಹಾರಲು ನೋಡುತ್ತಾನೆ.

ಜಲಬಿಂದುವಿನಲ್ಲಿರುವ ಜೀವಜಾಲಗಳು

ಒಂದು ನೀರಿನಲ್ಲಿ ಕೋಟ್ಯಂತರ ಜೀವಜಾಲಗಳು ಅನ್ಯೋನ್ಯ ಕಲಹಮಾಡುತ್ತಾ, ಮೊದಲಾಗಿ ನಾನಾ ತೆರದ ಕಾರ್ಯಗಳಲ್ಲಿ ವ್ಯಾಪೃತವಾಗಿ ಇರುತ್ತವೆ. ಇದು ಒಂದು ಹೊಸ ಸೃಷ್ಟಿಯೇ ಆಗಿದೆ. ಒಬ್ಬ ನೂತನ ವೈಜ್ಞಾನಿಕ ಸಂಶೋಧಕನು ಈ ಹೊಸ ಸೃಷ್ಟಿಯನ್ನು ಮಾನವನು ತನ್ನ ಪ್ರತ್ಯಕ್ಷ ದೃಷ್ಟಿಯಿಂದ ಪರೀಕ್ಷಿಸಿ ನೋಡಬಹುದಾಗಿ ಹೇಳುತ್ತಾನೆ. ಇಂಚಿನ ಸಾವಿರದೊಂದು ಪಾಲಿನಷ್ಟು ಆಕೃತಿಯುಳ್ಳ ಜಂತುವನ್ನು ನಮ್ಮ ನಿಜದೃಷ್ಟಿಯಿಂದ ನೋಡಬಹುದಾಗಿದೆ. ಅವುಗಳ ವಿಚಿತ್ರವು ಆಕಾರ ಮತ್ತು ಸುಂದರ ಬಣ್ಣಗಳನ್ನು ಪರೀಕ್ಷಿಸಬಹುದು. ನೀರಿನ ಹನಿಯ ಆಶ್ಚರ್ಯ ಲೋಕದಲ್ಲಿರುವ ವಿಚಿತ್ರ ವಿಷಯಗಳನ್ನು ನೋಡುವುದು ನಿಜವಾಗಿಯೂ ಕುತೂಹಲವನ್ನು ಹುಟ್ಟಿಸತಕ್ಕ ವಿಷಯವೇ ಆಗಿದೆ.

ಹೊಸರೀತಿಯ ಫೌಂಟೆನ್ ಪೆನ್ನು

ಇನ್ನು ಮುಂದೆ ಕೆಂಪು ಮತ್ತು ಇತರ ಬಣ್ಣಗಳ ಶಾಯಿಗಳ ಉಪಯೋಗಕ್ಕಾಗಿ ಯಾರೂ ಕೂಡಾ ಎರಡು ಫೌಂಟನ್ ಪೆನ್ನುಗಳನ್ನು ಇಟ್ಟುಕೊಳ್ಳಬೇಕಾದ ಅವಶ್ಯಕತೆಯಿಲ್ಲ, ಇದೊಂದು ನೂತನ ಶೋಧನೆ. ಈ ಪೆನ್ನಿನಲ್ಲಿ ಎರಡು ತರದ ಶಾಯಿಗಳನ್ನೂ ಒಮ್ಮೆಯೇ ತುಂಬಿಸಬಹುದಾಗಿದೆ. ಬೇಕಾದಾಗ ಆಯಾಯ ಶಾಯಿಗಳಿಗೆ ಸಂಬಂಧಿಸಿದ ಮುಳ್ಳನ್ನು ಒತ್ತಿದರೆ ಮುಗಿಯಿತು.

ರಾಕ್ಷಸ ಹೆಜ್ಜೆಯು ಕಾಣಸಿಕ್ಕಿತು

ವಾಶಿಂಗ್‌ಟನ್ ಬ್ಲೇಕ್ ಡಯಮಂಡ್ ಕಲ್ಲಿದ್ದಲ್ಲಿನ ಕಣಿವೆಯೊಂದರಲ್ಲಿ ಹಿಂದಿನ ಚಾರಿತ್ರಿಕ ಯುಗಕ್ಕೆ ಸಂಬಂಧಿಸಿದ ಒಂದು ಅದ್ಭುತ ಹೆಜ್ಜೆಯ ಗುರುತು ಕಾಣಸಿಕ್ಕಿತು ಇದು ೪೨ ಇಂಚುಗಳಷ್ಟು ಉದ್ದವುಳ್ಳದ್ದಾಗಿ, ಮೂರು ಫೀಟುಗಳಷ್ಟು ಅಗಲವುಳ್ಳದ್ದಾಗಿದೆ.

ಸಸ್ಯಜಾತಿಯ ಬೆಳವಣಿಗೆಗೆ ಔಷಧಿ!

ಕೆನಡಾದ ವಿಜ್ಞಾನಿಗಳಾದ ಡಾ॥ ಎಸ್. ಎಚ್ ಗ್ರೇಸ್ ಎಂಬವರು ಸಲ್ಲೀ ನಿಲೀವೈಡ್ ಎಂಬ ಒಂದು ಹೊಸ ಔಷಧಿಯನ್ನ ಕಂಡುಹುಡುಕಿದ್ದಾರೆ. ಇದು ಅನೇಕ ಸಸ್ಯಜಾತಿಯ ರೋಗಗಳನ್ನು ಗುಣಮಾಡುವುದು ಮಾತ್ರವಲ್ಲದೆ, ಇದರ ಉಪಯೋಗದಿಂದ ಸಸಿಗಳ ಬೆಳವಣಿಗೆಯೂ ಹೆಚ್ಚಾಗುತ್ತದೆ

ಎತ್ತರದಲ್ಲಿ ಹಣ್ಣೂ ಕಲ್ಲಾಗುತ್ತವೆಯೆ?

ವಿಶಾಲವಾದ, ವಾಯುಲೋಕದಲ್ಲಿ ವಿಹಾರಮಾಡುವ ಆನಂದವೇನೋ, ಬಹಳ ಆನಂದದಾಯಕವಾದ ವಿಷಯವಾದರೂ, ಅದರಿಂದ ಕೆಲವು ಕೆಡುಕುಗಳು ಇರುವುದಾಗಿಯೂ ತಿಳಿದುಬರುತ್ತದೆ ಮೋಸ್ಕೋದಿಂದ ಕೆನಡಾಕ್ಕೆ ಹಾರಾಟಮಾಡಿದ ಒಬ್ಬ ವೈಮಾನಿಕನು ಹೀಗೆಂದು ಅಭಿಪ್ರಾಯಪಡುತ್ತಾನೆ.

"ಉತ್ತರ ವಾತಾವರಣದಲ್ಲಿ ಸ್ವಲ್ಪ ರುಚಿಕರವಾದ ಆಹಾರವೂ ಅತ್ಯಂತ ರುಚಿಯುಳ್ಳದ್ದಾಗಿ ತಿನ್ನಲು ಸಾಧ್ಯವಿಲ್ಲದಂತಾಗುತ್ತದೆ. ನಾವು ಅಲ್ಲಿಗೆ ಚೋಕಲೇಟ್‌ಗಳನ್ನು ತೆಗೊಂಡು ಹೋಗಿದ್ದೆವು ಅವುಗಳು ತಿನ್ನಲು ಸಾಧ್ಯವಿಲ್ಲದಷ್ಟು ಸಿಹಿಯಾಗಿದ್ದುವು ನಮ್ಮ ನಾಲಗೆಯ ರುಚಿಯೇ ಕೆಟ್ಟುಹೋದಂತೆ ಆಯಿತು; ಹಾಗಾಗಿ ನಮ್ಮೊಡನೆ ಕುಂಬಾ ಆಹಾರ ಪದಾರ್ಥಗಳಿದ್ದೂ, ಇಡೀ ನಮ್ಮ ಯಾತ್ರೆಯಲ್ಲಿ ನಾವು ಬಹಳ ಹಸಿದೇ ಇರಬೇಕಾಯಿತು. ನಮ್ಮ ಹತ್ತಿರ ಹಣ್ಣು ಹಂಪಲುಗಳಿದ್ದುವು ಆದರೆ ಅವುಗಳು ಕಲ್ಲಿನಷ್ಟು ಗಟ್ಟಿಯಾಗಿ, ಅವುಗಳನ್ನು ತುಂಡುಮಾಡುವುದೇ ನಮಗೆ ಅಸಾಧ್ಯವಾಯಿತು."

ಜೀವವು ಹೇಗೆ ಬಂತು?

ಈ ಭೂಮಿಯಲ್ಲಿ ಜೀವವು ಹೇಗೆಮೊದಲಾಗಿ ಉಂಟಾಯಿತು? ಲಂಡನಿನ ಡಾಕ್ಟರರೊಬ್ಬರು ಈ ಪ್ರಶ್ನೆಯನ್ನು ವೈಜ್ಞಾನಿಕರ ಮುಂದಿರಿಸಿದ್ದಾರೆ

ಅವರು ತಮ್ಮ 'ಹೇಗೆ ಜೀವವು ಆಯಿತು?' ಎಂಬ ಪುಸ್ತಕದಲ್ಲಿ, ಜಗತ್ತು ತಂಪಾದಂತೆ ಬಂದಾಗ ಅದ ಶಿಲೆಯಿಂದಾಗಲಿ, ನೀರಿನಿಂದಾಗಲಿ, ಗಾಳಿಯಿಂದಾಗಲಿ ಜೀವವು ಉಂಟಾಗದೆ, ಇವೆಲ್ಲವುಗಳ ಸಂಯೋಜನೆಯಲ್ಲಿ ಆಯಿತೆಂದು ಅಭಿಪ್ರಾಯಪಡುತ್ತಾರೆ ಶಿಲಾ ಮತ್ತು ವಾಯುಗಳ ಸಂಮಿಶ್ರಣವು ಮೊತ್ತಮೊದಲು ಜೀವಂತ ಪದಾರ್ಥವನ್ನು ಸೃಷ್ಟಿಸಿತೆಂದೂ, ಆ ಮೇಲೆ ಸೂರ್ಯ ಕಿರಣದ ಕಾರ್ಯದಿಂದ ಅದು ಸಂಪೂರ್ಣವಾಯಿತೆಂದೂ ಅವರ ಅಭಿಪ್ರಾಯ

ಶೀತಭಯವಿಲ್ಲದ ಅದ್ಭುತ ವ್ಯಕ್ತಿ!

ಅಮೇರಿಕದ ಕೆನಡಾದಲ್ಲಿ ಶೀತಭಯವಿಲ್ಲದ ಒಬ್ಬ ಅದ್ಭುತ ವ್ಯಕ್ತಿ ಇದ್ದಾನೆ. ಶ್ರೀ ಕೂರ ಹೆಕ್ಮಿಯಾನ ಎಂಬುದು ಅವನ ಹೆಸರು. ಅರ್ಮೇನಿಯಾ ದೇಶದವನಾಗಿದ್ದು, ಈಗ ಕೆನಡಾದಲ್ಲಿ ಬಂದು ವಾಸವಾಗಿದ್ದಾನೆ! ಇವನಿಗೆ ಶೀತ ಭಯವು ಒಂದಿಷ್ಟೂ ಇರುವುದಿಲ್ಲ. ಸಾಮಾನ್ಯವಾಗಿ ಬೆತ್ತಲೆಯಾಗಿ ಮಂಜುಗಡ್ಡೆಯ ಮೇಲೆ ಕೂತುಕೊಳ್ಳುವಾಗ ಮನುಷ್ಯರು ಮರಗಟ್ಟಿ ಸಾಯುವರು. ಆದರೆ ಹೆಕ್ಮೀನನು ಎಷ್ಟು ಕಾಲ ಬೇಕಾದರೂ ಮಂಜುಗಡ್ಡೆಯ ಮೇಲೆ ಕೂತುಕೊಂಡಿರಬಲ್ಲನು. ಹಾಗೆ ಕೂತುಕೊಂಡಿದ್ದಾಗ ಇತರರಂತೆ ಅವನೂ ಮರಗಟ್ಟುವನು ಮೈಯೆಲ್ಲಾ ನೀಲ ಹಸುರು ಬಣ್ಣಕ್ಕೆ ತಿರುಗುವುದು, ತೋರಿಕೆಗೆ ಸತ್ತಂತೇ ಆಗುವನು ಆದರೆ ಇತರರಂತೆ ಅವನು ಮಾತ್ರ ಸಾಯುವುದಿಲ್ಲ!

ಈ ವಿಚಿತ್ರ ಶಕ್ತಿಯ ಜ್ಞಾನವು ಹೆಕ್ಮೀನನಿಗೆ ಆಕಸ್ಮಿಕವಾಗಿ ಉಂಟಾಯಿತು ಒಂದು ದಿನ ಅವನು ನೀರುಗಡ್ಡೆ ಕಟ್ಟಿದ ಒಂಟೇರಿಯೋ ಸರೋವರದಲ್ಲಿ ಬಿದ್ದು ಬಿಟ್ಟ. ಅವನ ಉಡಿಗೆ ತೊಡಿಗೆಗಳ ಮೇಲೆ ಹಿಮ ಬಿದ್ದು ಹಾಳೆಯಾದುವು ಶೀತವು ಫೆರನ್ಹೀಟ್ ಕ್ರಮದಲ್ಲಿ ಸೊನ್ನೆಗಿಂತ ೩೫೦ ಕಡಿಮೆಯಾಗಿತ್ತು ಆದರೂ ಅವನಿಗೆ ಯಾವ ಕಷ್ಟವೂ ಕಾಣಲಿಲ್ಲ. ಈಗ ತನ್ನ ಈ ಅದ್ಭುತ ಶಕ್ತಿಯ ಪ್ರದರ್ಶನಮಾಡಿ ಅವನ ಜೀವನವಾಗುತ್ತದೆ ಪ್ರತಿನಿತ್ಯ ನೂರಾರು ಮಂದಿ ಅವನನ್ನು ಕಾಣಲಿಕ್ಕೆ ಬರುವರು; ಪದಳುತ್ತಾ ಏನಾದರೂ ಕೊಟ್ಟು ಹೋಗುವರು; ಹೆಕ್ಮೀನನ ಈ ವಿಚಿತ್ರ ಶಕ್ತಿಯ ಕಾರಣವನ್ನು ಹುಡುಕಲಿಕ್ಕೆ ಅಮೇರಿಕದ ದೊಡ್ಡ ದೊಡ್ಡ ವೈಜ್ಞಾನಿಕ ವೈದ್ಯರೂ ಅಸಮರ್ಥರಾಗಿದ್ದಾರೆ.

NOTICE

Sealed tenders for the purchase of forest tree growth standing in Kattingeri Basel Mission Compond Shirva village, Udipi Taluk, will be received by the undersigned in his office till the 7th August 1939. Tenders received after that date will not be considered. For particulars of tree growth please see the locality

Office of the United Basel Mission Church in India Trust Association.

Mangalore 18—7—39

Ch. Jathanna
Attorney for
South Kanara Dt.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲಾ ಪ್ರಕಾರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಬೀಳುವುದಿಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವುಹೋಗುವುದು. ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರಮಾರ್ಗದಬಸಿಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಾರಿ ಜಂತುಗಳು ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗವು ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿನಾಶವಾಗುವುವು. ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8-0-0 (ವ್ಹಿ. ಪಿ. ಚಾರ್ಜು 8 ಆಣೆ ಬೇರೆ)

ಎಲ್ಲಾ ಪತ್ರವ್ಯವಹಾರ ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4 ಗಳು ಇಂಗ್ಲಿಷಿನಲ್ಲಿ ಬರೆಯಿರಿ. *Sole Manufacturer:* Dr. D. N. JASANI, Vithalbhai Patal Road, BOMBAY.

ಸ್ಟಾಕಿಸ್ಟ ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತಿ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್ ಹಂಪನಕಟ್ಟಾ ಮಂಗಳೂರು.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST. PAULS CHURCH,
Bolkunje Post, S K
Dated 4 h Jan 1939

To
THE JOINT MANAGERS,
The C. P C. Co. Ltd, Mangalore

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights some of which I hear were done voluntarily.

May the blessings of the almighty fall on you all and may you be able to do much good to the Public

Renewing my thanks, I remain,
Yours Sincerely,
(Sd) P W Farias

Sri Parshwanathaswami,
PANCHAKALYANA POOJA MAHOSTHAM,
Venoor, S Kanara, 1939

To,
THE JOINT MANAGERS,
The Combind Booking Agency, Mangalore.

Dear Sirs,

Please permit us to express our thanks on behalf of the above committee for the efficient Service rendered by your combined Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Moodabidri Booking Clerk Mr B Krishnanayya and also his other mates and Mr Raghavendra Bhandary who had specially come down from Mangalore to see to the needs of and comforts of the travelling Public Thanking you once again,

We remain, Yours faithfully,

Venoor, Dated 6-2-'39 (Sd) B Chandappa Indra, (*Secretary, P M Council*) (Sd) M. Jagathpal; (Sd) M Pechappa Shetty (Sd) Anantharaj Shetty, (*Members, Panchakalyana Mahosthamam Committee*)

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಬಿಳಿತೊನ್ನು, ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುವುದು

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸದನ, ಪೆರಿಡೆಪಿ.
P. O. Peridepi (ಸಲ್ಲಾರು ತಾ.)

HOUNSA

ಹಂಸಾ ಸೋಪ್ ಮತ್ತು ಬ್ರಿಲ್ಲೆಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಕರ್ಣಬ್ಯಾ ಬಜಾರ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ಇಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡ ಮುಡಿಗೆ	1—14—0	—
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡ ,,	4—12—0	4—14—0
,, ದುಯಂ ,, ,,	4—8—0	4—10—0
,, ಅವ್ವಲ್ ಸುಗ್ಗಿ ,,	4—8—0	4—8—0
,, ದುಯಂ ,, ,,	4—5—0	4—6—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
,, ಸಿಪ್ಪೆ ಇದ್ದದು ,,	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
,, ದಿಲ್‌ಪಸಂದ ,,	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	2—8—0	3—8—0
ಗೇರುಬೀಜ ಮುಡಿಗೆ	8—8—	8—8—0
ಕಬ್ಬಿನ ಬೆಲ್ಲ ಖಂಡಿಗೆ	47—8—0	53—12—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	14—8—0	15—8—0

ಸ್ವದೇಶಾಭಿಮಾನಿ

Established 1906 Regd. No. M 3406

ಸಂಪುಟ ೩೪] ಶುಕ್ರವಾರ ೨೮–೭–೧೯೩೯ (28—7—1939) [ಸಂಚಿಕೆ ೪೦.

THE

BOMBAY LIFE ASSURANCE COMPANY, LTD.,

(Estd: 1908.)

THE OFFICE

Which has proved its popularity by its progress

Record of New Bussiness

Proposed.	Year.	Completed.
1,25,50,250	1934	1,04,83,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,98,725
176,83,250	**1938**	**144,91,000**

1939- VALUATION YEAR.

Please take up a Policy Now and participate in Bonus.

To Insure or to Represent it pays you to consult us:—

Apply to **KOCHIKAR BROTHERS, LIMITED,**

Madras Branch Secretaries,

The Bombay Life Assurance Co., Ltd.,

The Bombay Life Building : : : : Gandhinagar, UDIPI.

or any of our following offices:

Post Box No. 337,
Mount Road,
Madras.

Visweshwarapuram Circle,
Bangalore City.

Charni Road,
Girgaum,
BOMBAY 4.

Car Street,
Mangalore.

Puthiyara,
Calicut.

Central Station Road,
Trivandrum.

MAKE LIFE WORTH-LIVING!

Indigestion—Insomnia—Dry Cough—
Nervousness—Weak Heart &c.,
these make you wiery of Life!

CONSULT US AND BUY
YOUR LIFE'S HAPPINESS!

Oils – that cool the brain and induce sleep.
Lehas – that build-up your wasted system.
Asavas = that regenerate your jaded nerves.

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ – ನಿದ್ರಾವಿಹೀನತೆ – ಒಣ ಕೆಮ್ಮು –
ನರಗಳ ಅಬಲತೆ – ದುರ್ಬಲ ಹೃತ್ಕೋಶ – ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ. ಕನ್ನಡ

(ಬ್ರಾಂಚ್: ಕುಮಟ್ಯ, ಉ. ಕನ್ನಡ.)

ಸ್ವದೇಶಾಭಿಮಾನಿ
Swadeshabhimani. Estd 1906

Date 4-8 1939 ತಾರೀಖು ೪-೮-೧೯೩೯

ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು.

ಸಚಿತ್ರ

ವಾರಪತ್ರಿಕೆ

ನೋಟಗಳು

ಎರಡು ವಾರಗಳ ಹಿಂದೆ ಚೇಂಬರ್ಲೇನರು [illegible] ಬ್ರಿಟನು ಯಾವ ಹೇಳಿಕೆಯಾತಿಯೂ ನಡೆಯಲಾರದೆಂದು ಹೇಳಿದ್ದರು.

◆

ಇಂದಿನ ಅವರ ವಿದೇಶೀಯ ರಾಜ್ಯನೀತಿಯನ್ನು ವಿಚಾರಿಸಿದರೆ, ಜಪಾನಿನ ಹೇಳಿಕೆಗೆ ಬ್ರಿಟನು ತಲೆಬಾಗಿರುವುದೆಂದು ತಿಳಿಯಬಹುದಾಗಿದೆ.

◆

ಟ್ರೈನ್‌ಟ್ಸಿನ್ ಗೊಂದಲದ ಇತ್ಯರ್ಥವೆಂದರೆ, ಸಂಪೂರ್ಣ ಜಪಾನಿಗೆ ಬ್ರಿಟನು ತಲೆಬಗ್ಗಿಸಿದ ಹಾಗಿಯೇ!

◆

ಜಪಾನನ್ನು ಸಂತೋಷಪಡಿಸುವ ಸಲುವಾಗಿ, ಚೇಂಬರ್ಲೇನ್ನರು ತಮ್ಮ ಎಲ್ಲಾ ನ್ಯಾಯನೀತಿಗಳನ್ನೂ ಬಿಟ್ಟು ಬಿಟ್ಟಿದ್ದಾರೆ!

◆

ಎಲ್ಲಿಯವರೆಗಿನ ಬ್ರಿಟನು ಹೀಗೆ ಶರಣಾಗುತ್ತದೆಂಬ ವಿಷಯವು ಇನ್ನೂ ನೋಡತಕ್ಕದಿದೆ!

◆

ಬ್ರಿಟನಿನಲ್ಲಿ ಇಂದಿನ ಜನತೆಯು ಅಧಿಕ್ಯಾಯ ರಶ್ಯಾದೊಡನೆ ಒಪ್ಪಂದಮಾಡಲು ಅನುಕೂಲವಾಗಿದ್ದರೂ, ಕಳೆದ ನಾಲ್ಕು ತಿಂಗಳಿಂದ ಆ ವಿಷಯವಾಗಿ ಏನೂ ಕಾರ್ಯವು ಕೈಗೂಡಿದಂತೆ ಕಂಡುಬರುವುದಿಲ್ಲ.

◆

ಇಂತಹ ಶರಣಾಗುವ ನೀತಿಯಿಂದ ಯೂರೋಪಿನ ಯುದ್ಧ ಸಂಭವವು ಮುಂದೆ ಹೋಗಬಹುದಾಗಿದೆ!

◆

ಚೇಂಬರ್ಲೇನರು ಹಿಟ್ಲರನೊಡನೆ ಸಂಧಿ ಮಾಡಿಕೊಳ್ಳುವರೆಂದೂ, ಅದಕ್ಕೆ ಅನುಕೂಲ ಪರಿಸ್ಥಿತಿಯನ್ನು ನಿರೀಕ್ಷಿಸುತ್ತಿರುವರೆಂದೂ, ಅವರ ರೀತಿ ನೀತಿಗಳನ್ನು ತಿಳಿದವರು ವಿಚಾರಿಸಬಹುದಾಗಿದೆ!

◆

ಜರ್ಮನಿಗೆ ಬ್ರಿಟನು ಸಾಲ ಕೊಡುವುದೆಂಬ ಇಂದಿನ ವಾರ್ತೆಯು ಇದನ್ನು ಪುಷ್ಟೀಕರಿಸುತ್ತದೆ

◆

ಮದ್ರಾಸು ಪ್ರಾಂತದಲ್ಲಿ ಹೊಗೆಸೊಪ್ಪಿನ ಕಾನೂನು ಆಗಸ್ಟ್ ಒಂದರಿಂದ ಜಾರಿಯಲ್ಲಿ ಬಂದಿರುತ್ತದೆ

◆

ಈ ತೆರಿಗೆಯ ನಿಷೇಧ ಸೂಚಕವಾಗಿ, ಕೆಲವು ಹೊಗೆಸೊಪ್ಪಿನ ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಮುಚ್ಚುವ ಆಲೋಚನೆಯಲ್ಲಿರುವರೆಂದು ತಿಳಿಯುತ್ತದೆ

◆

ಯಾವ ವ್ಯಾಪಾರಿಯನ್ನಾದರೂ, ತೆರಿಗೆ ತೆರುವ ವಿಷಯದಾಗಿ ಸಮಾಧಾನ ಪಡಿಸುವುದು ಸಾಧ್ಯವೇ ಇಲ್ಲ

◆

ಕೆಲವು ವರ್ಷಗಳ ಹಿಂದೆ ಆದಾಯ ತೆರಿಗೆಯ ವಿಷಯದಲ್ಲಿಯೂ ಇದೇ ರೀತಿಯ ನಿಷೇಧ ಪ್ರದರ್ಶನವಿತ್ತು.

◆

ಆದರೆ ಈಗ ಪ್ರತಿಯೊಬ್ಬ ವ್ಯಾಪಾರಿಯೂ ಆದಾಯತೆರಿಗೆಗಾಗಿಯಾದರೂ ಒಳ್ಳೆಯ ಲೆಕ್ಕಪತ್ರವಿಟ್ಟುಕೊಳ್ಳಲು ಕಲಿತುಕೊಂಡಿರುತ್ತಾನೆ.

◆

ಎಲ್ಲಿಯವರೆಗೆ ಹೊಗೆಸೊಪ್ಪಿನ ಉಪಯೋಗವಿರುವುದೋ, ಅಷ್ಟು ಕಾಲ ಅದರ ಹೊಗೆಸೊಪ್ಪಿನ ವ್ಯಾಪಾರವೂ ಇರುವುದು.

[illegible] ನಾದ ಕಂಗೆ.

◆

ವ್ಯಾಪಾರಿಯು ಯಾವಾಗಲೂ ತೆರಿಗೆ [illegible] ಮಧ್ಯಸ್ಥನು ಮಾತ್ರ ಆಗಿದ್ದಾನೆ.

◆

ಹೀಗಾಗಿ ಸರಕಾರದ ಕಾನೂನು ಮತ್ತು ತೆರಿಗೆಯ ಹೊರೆಯು ವ್ಯಾಪಾರಸ್ಥರಿಗೆ ಯಾವ ರೀತಿಯಿಂದಲೂ ನಷ್ಟ ಮಾಡಲಾರದು.

◆

ಚಿಲ್ಲರೆ ಬೀಡಾ ಅಂಗಡಿಯವನೂ ಕೂಡಾ ಈ ಕಾನೂನಿನಂತೆ ಒಳ್ಳೆಯ ಲೆಕ್ಕಪತ್ರವಿಟ್ಟುಕೊಳ್ಳಬೇಕಾಗಿದೆ.

◆

ಹಾಗೆ ಮಾಡಿದರೆ ಮಾತ್ರ ವ್ಯಾಪಾರದಲ್ಲಿ ಅಭಿವೃದ್ಧಿಯಾದೀತು.

◆

ಹೊಗೆಸೊಪ್ಪಿನ ವ್ಯಾಪಾರಿಗಳು ನಿಷೇಧ ಸೂಚಿಸುವುದರಲ್ಲಿ ಏನೂ ಅರ್ಥವಿಲ್ಲ.

◆

ಮದ್ಯಪಾನ ನಿಷೇಧದಿಂದಲಾಗಿ ಆಗಸ್ಟ್ ಒಂದರ ಮೇಲೆ ಬೊಂಬಾಯಿ ಸರಕಾರವು ಸಂಪೂರ್ಣ 'ಬತ್ತಿ' ಹೋಗುವುದು.

◆

ಗಾಂಧೀಜಿಯವರು, ರಾಜಾಜಿಯವರೂ ಮದ್ಯಪಾನ ನಿಷೇಧವು ಜಯಶಾಲಿಯಾಗಲು ಬೊಂಬಾಯಿಗೆ ಶುಭಸಂದೇಶಗಳನ್ನು ಕಳುಹಿಸಿರುತ್ತಾರೆ.

◆

ಬೊಂಬಾಯಿ ರೇಡಿಯೋದಲ್ಲಿ ಇಂತಹ ಸಂದೇಶಗಳ ಪ್ರವಾಹವೇ ಹುಂಬಿದೆ.

◆

ಇಂತಹ ಸಂದೇಶಗಳಿಂದಲಾದರೂ ಬೊಂಬಾಯಿಯ ಮದ್ಯದ ವ್ಯಾಪಾರಿಗಳು ಸ್ವಲ್ಪ ಸಮಾಧಾನಪಟ್ಟಿರಬಹುದು.

◆

ಆದರೆ ಅದೇ ದಿನ ಮದ್ರಾಸಿನ ಹೊಗೆಸೊಪ್ಪಿನ ವ್ಯಾಪಾರಿಗಳು ಸಮಾಧಾನಗೊಳ್ಳುವಂತೆ ಯಾರು ಏನು ಸಂದೇಶ ಕಳುಹಿಸಿಲ್ಲ. ಅದರ ಬದಲು ಲೈಸನ್ಸು ಪಡೆಯದವರು ಶಿಕ್ಷೆಗೆ ಗುರಿಯಾಗುವುದೆಂದೂ ಅವರನ್ನು ಎಚ್ಚರಿಸಲಾಗಿದೆ

◆

ಇದಕ್ಕಾಗಿ ಮಾತ್ರ ಮದ್ರಾಸಿನ ಹೊಗೆಸೊಪ್ಪಿನ ವ್ಯಾಪಾರಸ್ಥರು ನಿಷೇಧ ಸೂಚಿಸಿರಬೇಕು

◆

ಬಂಗಾಳ ರಾಜಕೀಯ ಕೈದಿಗಳ ಪರಿಸ್ಥಿತಿಯು ಬಹಳ ವಿಷಮಾವಸ್ಥೆಗೆ ಬಂದು ಮುಟ್ಟಿದೆ.

◆

ಅವರು ಉಪವಾಸವನ್ನು ಬಿಟ್ಟುಕೊಡಬೇಕಾಗಿ ಕಾಂಗ್ರೆಸಿನ ಕಡೆಯಿಂದ ರಾಷ್ಟ್ರಪತಿಗಳೂ, ಮಹಾತ್ಮಾಜಿಯವರ ಕಡೆಯಿಂದ ಶ್ರೀ. ಮಹಾದೇವ ದೇಸಾಯಿಯವರೂ ಬಂದು ಬೇಡಿಕೊಂಡರು.

◆

ನಮ್ಮ ಬಿಡುಗಡೆಯಲ್ಲಿ ಮಹಾತ್ಮಾಜಿ ಮತ್ತು ಕಾಂಗ್ರೆಸಿನ ಯತ್ನಗಳು ವಿಫಲವಾದುದನ್ನು ಕಂಡು ನಾವು ಈ ಪ್ರಾಣಾಂತಿಕ ಪರಿಸ್ಥಿತಿಯನ್ನು ಎದುರಿಸಲು ನಿಶ್ಚಯಿಸಿರುವುದಾಗಿಯೂ, ಇಟ್ಟ ಹೆಜ್ಜೆಯನ್ನು ಹಿಂದೆಗೆಯುವುದಿಲ್ಲವಾಗಿಯೂ ಶರತ್ತುಗಳಿಲ್ಲದೆ ಬಿಡುಗಡೆಯಾಗಬೇಕಾಗಿಯೂ ಅವರು ಹೇಳಿದರು.

◆

ಅವರು ಉಪವಾಸ ಬಿಡದಿದ್ದಲ್ಲಿ ಬಂಗಾಳ ಸರಕಾರವಾದರೂ ತಟಸ್ಥವಾಗಿರುವುದೆಂದು ಮಂತ್ರಿಗಳು ಹೇಳುತ್ತಾರೆ.

◆

ರಾಷ್ಟ್ರಪತಿಗಳು ಈ ವಿಷಯವನ್ನು ವರ್ಕಿಂ

ಒಂದು ರುಚಿಕರವಾದ

ಪಾನೀಯ

ತಂಪಾದ, ಪೋಷಿಸುವ

ಮತ್ತು

ಸಂರಕ್ಷಿಸುವ

ತಣ್ಣಗಾದ "ಓವಲ್ಟಿನ್" ಪಾನೀಯವನ್ನು ಒಂದು ಗ್ಲಾಸ್ ತಣ್ಣಗಿನ ಹಾಲಿಗೆ ಎರಡು ಚಮಚೆಯಷ್ಟು 'ಓವಲ್ಟಿನ್'ನ್ನು ಬೆರಸಿ ಚೆನ್ನಾಗಿ ಕದಡಿಸಿ ಕೂಡಲೇ ತಯಾರಿಸಬಹುದು ಇದರ ಗುಣವು ಮೆಚ್ಚುಗೆಯ ಪಾನೀಯ ಮಾತ್ರವಲ್ಲದೆ ದೇಹವನ್ನ ಪೋಷಿಸಿ ಬಲವನ್ನೂ ಧಾತುವನ್ನೂ ವೃದ್ಧಿ ಮಾಡುತ್ತದೆ

ಒಂದು ಗ್ಲಾಸು ತಂಪಾದ 'ಓವಲ್ಟಿನ್'ನ್ನು ಇಂದೇ ಪರೀಕ್ಷಿಸಿರಿ 'ಓವಲ್ಟಿನ್' ತಣ್ಣಗಾಗಿ ಯಾ ಬಿಸಿಯಾಗಿ ಸೇವಿಸಿದರೂ ಒಂದೇ ತೆರನಾಗಿರುತ್ತದೆ ಅದು ಮಾಗಿ ನೆನೆಹಾಕಿ ಹುರಿದ ಬಾರ್ಲಿ, ದನದ ಹಸಿ ಹಾಲು, ಅಮೂಲ್ಯವಾದ ಪ್ರಾಕೃತಿಕ ವಿಟಮಿನ್ (ಆಹಾರ ಸತ್ವ) ಮತ್ತು ಅನೇಕ ರಂಜಕಗಳಿಂದ ಕೂಡಿದ ಪೌಷ್ಟಿಕ ಆಹಾರವಾಗಿರುತ್ತದೆ 'ಓವಲ್ಟಿನ್'ನೊಡನೆ ಗುಣದಲ್ಲಿಯೂ, ಪರಿಪೂರ್ಣದಲ್ಲಿಯೂ, ಬೆಲೆಯಲ್ಲಿಯೂ ಇದರ ಹೋಲಿಕೆಯು ಬೇರೆ ಪಾನೀಯಗಳೇ ಇಲ್ಲ. ಬದಲಿ ಪಾನೀಯಗಳ ಗೊಡವೆಯನ್ನೇ ಬಿಡಿರಿ

'ಓವಲ್ಟಿನ್'

OVALTINE [illegible]

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ವಿತರಣಾಕಾರರು: ಜೇಮ್ಸ್ ರೈಟ್ ಲಿಮಿಟೆಡ್,

ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ.

'ಓವಲ್ಟಿನ್' ಬಿಸ್ಕುಟುಗಳು ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು. ಎಲ್ಲಾ ಸಮಯಕೂ ಉತ್ತಮವಾದ ಬಿಸ್ಕುಟುಗಳು ಅವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ ನಾಲ್ಕು ಔನ್ಸು ಮತ್ತು ೮ ಔನ್ಸು ಪೇಕೆಟುಗಳಲ್ಲಿಯೂ ಒಂದು ರಾತ್ಲಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ

OV/30/39

ತನ್ನ ನಿಶ್ಚಿತವಾದ ಧೋರಣೆಯನ್ನು ಆ ಮೇಲೆ ಪ್ರಕಟಿಸಬಹುದಾಗಿದೆ.

◆

ಇಂತಹ ಸಂದಿಗ್ಧವಾದ ವಿಷಮ ಪರಿಸ್ಥಿತಿಯಲ್ಲಿ ರಾಷ್ಟ್ರದ ದೃಷ್ಟಿಯು ಆ ಕಡೆಗೆ ತಿರುಗಿದೆ.

◆

ಬೋಸ-ನೆಹರುಗಳೊಳಗೆ ವಾಗ್ಯುದ್ಧವೇ

ಪುರೋಗಾಮಿ ಪಕ್ಷದಂತಹವುಗಳು ಕಾಂಗ್ರೆಸಿನ ಮೂಲತತ್ವವನ್ನೇ ಅಡಿಮೇಲುಮಾಡುವವೆಂದು ನೆಹರುಗಳ ಶಂಕೆ!

◆

ಸೋಶಿಯಲಿಸಂ ಬಿಟ್ಟು 'ಫಾಸಿಸಂ'ಗೆ ಹಾರ ಬೇಡಿ ಎಂದು ಬೋಸರಿಗೆ ನೆಹರುಗಳ

ರಕ್ಷ್ಯಂ ಮಹಾರ್ಘ್ಯಸ್ತು ತುಷ್ಟನ ದೇವಾ । ನ ಭೇಜಿರೇ ಭೀಮ ವಿಶೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ದೊರೆಯಲಸುವನು ರತ್ನಗಳು ಸಾ । ಗರವ ಮಥಿಸಲು ಸುರರ್ ಗದರಿಂ ಹಥುವವಾಯ್ತು, ಮತ್ತೆ ವಿಶ್ವವ ಸುಡುತ ಬರುತಿರುವ ॥ ಗರಲಕವರಂಜದರೆ! ಸುಧೆಯನ್ ಮರೆಕ, ಕ್ಷುದ್ರದ ತೆರದಿ ಕುಳಿತರೆ । ಕೆಲಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ತಾರೀಕು [illegible] — ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ — ತಾರೀಕು 4—8—1939

ರಾಜಕೀಯ ಕೈದಿಗಳ ಉಪವಾಸಕ್ಕಾಗಿ ಕಾಂಗ್ರೆಸ್ಸು ಮಂತ್ರಿಮಂಡಲವು ರಾಜಿ ಕೊಡಬೇಕಾಗಿಲ್ಲ

ಪಂಡಿತ್ ನೆಹರುಗಳ ಹೇಳಿಕೆ

ಇಂದಿನ ಘಟನಗೆ ನಮ್ಮ ದೌರ್ಬಲ್ಯವೇ ಕಾರಣ

ಕಾಂಗ್ರೆಸು ಮಂತ್ರಿಮಂಡಲವು ಯುದ್ಧದ ವಿಷಯಕ್ಕಾಗಿ ರಾಜಿ ಕೊಡಲಿ

ರಾಷ್ಟ್ರಪತಿ ಮತ್ತು ದೇಸಾಯಿಗಳು ಕೈದಿಗಳನ್ನು ಸಂದರ್ಶಿಸಿದರು

ಕಲಕತ್ತೆಯಲ್ಲಿ ಕಾಂಗ್ರೆಸು ಧುರೀಣರು

ಬೊಂಬಯಿ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಆಶ್ರಯದಲ್ಲಿ ಶ್ರೀ ಭೂಲಾಬಾಯಿ ದೇಸಾಯಿಯವರ ಅಧ್ಯಕ್ಷತೆಯಿಂದ ನೆರೆದ ಸಭೆಯಲ್ಲಿ ಪಂಡಿತ ನೆಹರುಗಳು ಬಂಗಾಳ ರಾಜಕೀಯ ಕೈದಿಗಳ ವಿಷಯವಾಗಿ ಭಾಷಣ ಕೊಡುತ್ತಾ ಹೀಗೆಂದು ಹೇಳಿದರು—

‘ಈ ವಿಷಯದಲ್ಲಿ ನಿರಾಶಾಮಯವಾದ ಸಂದಿಗ್ಧ ಪರಿಸ್ಥಿತಿಯು ಹರಡಿದೆ [illegible] ಲು ನಿಜವಾದ ದಾರುಣ ಪರಿಸ್ಥಿತಿಯೇ ನೆಂದು ನಾವು ತಿಳಕೊಳ್ಳಬೇಕು ಮೊದಲಾಗಿ ನಾವು ಅಖಿಲ ಭಾರತದ ವಿಷಯವೆಂದರೆ ಯಾವುದೆಂದು [illegible] ‘ಇದನ್ನು ಅಖಿಲ ಭಾರತದ ವಿಷಯವಾಗಿ ಮಾಡಿ’ ಎಂದು ಜನರು ಹೇಳುವದನ್ನು ಕೇಳಿ ನನಗೆ ಅನೇಕ ಸಲ ಆಶ್ಚರ್ಯವಾಗುತ್ತದೆ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ವಿಷಯವು, [illegible] ಪ್ರಾಂತಿಕ ವಿಷಯವಲ್ಲ, ಅದು ಅಖಿಲ ಭಾರತದ ವಿಷಯವೇ ಆಗಿರುತ್ತದೆ ನಾನು ಕಾಂಗ್ರೆಸು ಮಂತ್ರಿಮಂಡಲಗಳು ರಾಜಿ ಕೊಡಬಾರದೆಂದು ಹೇಳುವಾಗ, ಅವುಗಳು ರಾಜಿ ಕೊಟ್ಟು ಹೊರಗೆ ಬರಲೇ ಬಾರದೆಂಬ ಅಭಿಪ್ರಾಯವುಳ್ಳವನಾಗಿದ್ದೇನೆಂದು ಯಾರೂ ತಿಳಿಯದಿರಲಿ ಆದರೆ ರಾಜಿ ಕೊಡುವ ಕಾರಣವು ಏನಾದರೂ ಮೂಲಭೂತ ತತ್ವಗಳುಳ್ಳವುಗಳಾಗಿರಬೇಕು. ಯುದ್ಧದ ವಿಷಯ ಹಾಗೆ

‘ಇಂದು ನಾವು ಮಾಡುವ ಈ ಕಲಹ ಕಾರಣಗಳು, ಬ್ರಿಟಿಷ್ ಸರಕಾರದೊಡನೆ ಪ್ರತ್ಯಕ್ಷವಾಗಿ ಪರಿಣಾಮವಾಗುವಂತಹವುಗಳಲ್ಲ ಕೈದಿಗಳ ಬಿಡುಗಡೆಯ ವಿಷಯದಲ್ಲಿ ಬಂಗಾಳ ಸರಕಾರವು ಸಂಪೂರ್ಣ ಜವಾಬ್ದಾರಿಯುಳ್ಳದ್ದಾಗಿದೆ ಹಕ್ಕು ಮಂತ್ರಿಮಂಡಳವೂ ಕೂಡಾ ಚುನಾಯಿತವಾದ ಬಹುಪಕ್ಷದ ಬೆಂಬಲವನ್ನು ಪಡೆದಿದೆ

ಯೆಂ[illegible] ದನ್ನು ನಾವು ಗಮನಿಸಬೇಕು ನಾನು [illegible] ಪ್ರಾಂತದ [illegible] ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆ [illegible] ರಾಜಿ ಕೊಡುತ್ತೇನೆಂದು ಹೇಳಿದೆನಾದರೆ ಅದು ನನ್ನ ವಿಷಯವಲ್ಲ. ಭಾರತ ಸರಕಾರಕ್ಕೆ ಅದರಲ್ಲಿ [illegible] ವಿಲ್ಲ ಆದರೂ ಬಂಗಾಳ [illegible] ಅಧಿಕಾರ [illegible] [illegible]

‘ನಿಜವಾಗಿಯೂ ಇದು ಒಂದು ಮಹತ್ವವಾದ ವಿಷಯವಾಗಿದೆ. ಇಂಡಿಯಾ ಸರಕಾರವನ್ನು ಸಂಬಂಧಿಸಿದ ಯಾವುದಾದರೂ ಮೂಲಭೂತ ತತ್ವಗಳನ್ನು ಹಿಡಿದು ಮಂತ್ರಿಗಳು ರಾಜಿ ನಾಮೆ ಕೊಟ್ಟಲ್ಲಿ ನಾನು ಸಂತೋಷಪಟ್ಟೇನು ನಿಜವಾಗಿಯೂ ನಾವು ಬಲವಂತರಾಗಿದ್ದರೆ, ಇಂತಹ ಘಟನೆಯೇ ಒದಗುತ್ತಿರಲಿಲ್ಲ ಬಂಗಾಳದಲ್ಲಿ ಮತ್ತು ಇದೀ ದೇಶದಲ್ಲಿರುವ ನಮ್ಮ ದೌರ್ಬಲ್ಯವನ್ನು ತೋರಿಸುವಂತೆ ಇಂತಹ ಅವಸ್ಥೆಯು ನಮಗೆ ಈಗ ಒದಗಿದೆ ನಾವೀಗ ಏನು ಮಾಡಬಹುದು?

‘ಇಂದು ಬಂಗಾಳವು ಪ್ರಜಾಪ್ರಭುತ್ವ ರೀತಿಯಿಂದ ನಿಜವಾಗಿಯೂ ಆರಿಸಲ್ಪಟ್ಟ ಮಂತ್ರಿಮಂಡಲವುಳ್ಳದ್ದಾಗಿದೆ ಬಂಗಾಳದ ಮಂತ್ರಿಮಂಡಳವು ಈ ವಿಷಯದಿಂದ [illegible] ಬಂಗಾಳದ ಮಂತ್ರಿಮಂಡಳದ [illegible] ಕೈದಿಗಳ ಬಿಡುಗಡೆ [illegible] ಆದರೆ [illegible] ಮಂತ್ರಿಮಂಡಳವನ್ನು [illegible] ಬಂಗಾಳದ [illegible] ಗಳಲ್ಲಿ [illegible]

[illegible] ನಾವು [illegible] ನಮ್ಮ [illegible] ಆದರೆ [illegible] ನಮ್ಮ [illegible] ಸಮಸ್ಯೆಗಳನ್ನು [illegible] ಪಂಡಿತನೆಹರುಗಳ [illegible] ಭಾಷಣಮಾಡಿದ ಬಳಿಕ ಅಧ್ಯಕ್ಷರಾಗಿದ್ದ ಶ್ರೀ ದೇಸಾಯಿಯವರು ಈ ಠರಾವನ್ನು ಓದಿದರು

‘ಬೊಂಬಾಯಿಯ ನಾಗರಿಕರ ಈ ಸಭೆಯು, ಬಂಗಾಳಪ್ರಾಂತದ ಎರಡು ಸೆರೆಮನೆಗಳಲ್ಲಿ, ರಾಜಕೀಯ ಕೈದಿಗಳು ಉಪವಾಸವನ್ನು ಕೈಕೊಂಡ ವಿಷಯವನ್ನು ಬಹಳ ದಾರುಣ ಸಂಕಷ್ಟದ ವಿಷಯವಾಗಿ ವಿಚಾರಿಸುತ್ತದೆ, ಕಳೆದ ಒಂದೆ ವರ್ಷದಿಂದ ಬಂಗಾಳದ ಮಂತ್ರಿಮಂಡಳವು ಈ ರಾಜಕೀಯ ಕೈದಿಗಳ ಬಿಡುಗಡೆಯ ವಿಷಯವಾಗಿ [illegible] ದವುದಾಗಿ ಹೇಳಿದ್ದರೂ, ಇದುವರೆಗೆ ಎಲ್ಲರನ್ನು ಬಿಡುಗಡೆಮಾಡದಿರುವ ವಿಷಯವು [illegible] ಜವಾಗಿಯೂ [illegible] ಕಾರಣವಾಗಿದೆ, ಆದರೂ ಬಂಗಾಳದ ರಾಜಕೀಯ ಕೈದಿಗಳು ಮಹಾತ್ಮಾಜಿ ಮತ್ತು ಕಾಂಗ್ರೆಸಿನ ಶಕ್ತಿಯನ್ನು ಹೆಚ್ಚಿಸುವ ಸಲುವಾಗಿ, ಉಪವಾಸ ವ್ರತವನ್ನು [illegible] ಆದರೊಡನೆ ಬಿನ್ನಹ ಮಾಡುವ ಸಂದರ್ಭದಲ್ಲಿ, ಈ ಸಭೆಯು ಬಂಗಾಳದ ಮಂತ್ರಿಮಂಡಳವು ಮುಂದೆ ಬರಲಿರುವ ದಾರುಣ ಪರಿಸ್ಥಿತಿಯ ಪರಿಹಾರಕ್ಕಾಗಿ, ತಡಮಾಡದೆ, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕಾಗಿಯೂ ಬಿನ್ನವಿಸಿಕೊಳ್ಳುತ್ತದೆ’

ಮಹಾತ್ಮಾಜಿಯವರ [illegible] ರಾಜಕೀಯ ಕೈದಿಗಳ [illegible] ಉಪವಾಸ [illegible] [illegible]

[illegible] ಬೇರೆ [illegible] ರಾಜಕೀಯ ಕೈದಿಗಳ [illegible] ರಾಜಕೀಯ ಕೈದಿಗಳ [illegible] ಗಡೆಯ ವಿಷಯವಾಗಿ ಅವರ [illegible]

ರಾಷ್ಟ್ರಪತಿಗಳು ಮತ್ತು ದೇಸಾಯಿಗಳು [illegible] ರಾಜಕೀಯ ಕೈದಿಗಳ [illegible] ವಿಷಯವಾಗಿ [illegible]

ಅಲ್ಲಿ [illegible] ಸೆಂಟ್ರಲ್ ಜೈಲು ಮತ್ತು [illegible] ಜೈಲುಗಳನ್ನು ಸಂದರ್ಶಿಸಿ ರಾಜಕೀಯ ಕೈದಿಗಳನ್ನು ಕಂಡು ಮಾತನಾಡಿದರು

ಪತ್ರಿಕಾ ಪ್ರತಿನಿಧಿಗಳು [illegible] ರಾಷ್ಟ್ರಪತಿಗಳು [illegible] ವಿಷಯದಲ್ಲಿ [illegible] ಹೇಳಿದರು

ಶ್ರೀ [illegible] [illegible]

ಜಾಹೀರಾತುಗಳಿಗೆ
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು:
ಪ್ರತಿಫಲಬರುವಂತೆ ಸಾಧಿಸುವುದು

ಮದ್ರಾಸು ಮಂತ್ರಿಮಂಡಳ

ಸವರ್ಣ ಹಿಂದೀಯರ ಸಮ್ಮತಿಯಿಂದ ಹರಿಜನರಿಗೆ ಕ್ಷೇತ್ರ ಪ್ರವೇಶವಾಗಬೇಕು!

ಮಾನ್ಯ ಡಾ. ರಾಜನ್



(ಹರಿಜನ ದೇವಾಲಯ ಪ್ರವೇಶದ ಕುರಿತು).

"ನೀವು ದೇವಸ್ಥಾನದ ಅಧಿಕಾರಗಳನ್ನು ಹರಿಜನ ದೇವಾಲಯ ಪ್ರವೇಶದ ಸಲುವಾಗಿ ಒಪ್ಪಿಸಿದರೆ ಸಾಲದು; ನಿಮ್ಮ ಕೆಲಸವು ಕೇವಲ ಅಂತಹವರನ್ನು ಒಪ್ಪಿಸುವುದರಲ್ಲಿಲ್ಲ. ದೇವಾಲಯಕ್ಕೆ ಹೋಗುವ ಹಿಂದುಗಳ ಬಹುಮಂದಿಯ ಮನಸ್ಸನ್ನು ನೀವು ಒಪ್ಪಿಸಬೇಕು; ಅವರ ಒಪ್ಪಿಗೆ ಇರಬೇಕು. ಹಾಗೆ ಮಾಡದಿದ್ದರೆ ಶಾಂತಿಯಿಂದ ಕೆಲಸವಾಗದೆ ತುಂಬಾ ಗೊಂದಲಗಳಾಗುವುದು ಸಾಧ್ಯವಿದೆ. ಮೊದಲನೆಯ ಆ ಕೆಲಸವನ್ನು ಮಾಡಿದ ಮೇಲೆ ದೇವಸ್ಥಾನದಲ್ಲಿ ಕೆಲಸಮಾಡುವ ಅರ್ಚಕರೇ ಮೊದಲಾದವರು ಅದಕ್ಕೆ ಸಮ್ಮತಿಯುಳ್ಳವರಾಗಿದ್ದಾರೋ ಎಂಬ ವಿಷಯವಾಗಿಯೂ ನೀವು ಆಲೋಚಿಸಬೇಕು ಅವರು ಅಭಿಪ್ರಾಯವುಳ್ಳವರಾಗಿರದಿದ್ದರೆ ನಿಮಗೆ ಹರಿಜನರನ್ನು ದೇವಾಲಯ ಪ್ರವೇಶ ಮಾಡಿಸಲು ನೈತಿಕ ಅಧಿಕಾರವಿರುವುದಿಲ್ಲ. ಒಟ್ಟಾರೆಯಿಂದ ಹರಿಜನ ದೇವಾಲಯ ಪ್ರವೇಶದ ಕೆಲಸವು ಬಹು ಮಂದಿ ಹಿಂದುಗಳ ಸಂಪೂರ್ಣ ಅನುಮತಿಯಿಂದ ಆಗಬೇಕಾಗಿದೆ. ಹಾಗಾದರೆ ಮಾತ್ರ ಮುಂದಕ್ಕೆ ಯಾವುದೇ ರೀತಿಯಿಂದ ಆಗಲಿ ತೊಂದರೆಗಳು ಬರುವಹಾಗಿಲ್ಲ ಸಾರ್ವಜನಿಕ ಅಭಿಪ್ರಾಯದ ಭದ್ರವಾದ ನೆಲೆಯಿಂದ ಯಾರು ನ್ಯಾಯವಾಗಿ ಕಾರ್ಯ ಮಾಡುತ್ತಾರೋ ಅಂತಹವರನ್ನು ಮಾತ್ರ ಕಾನೂನು ರಕ್ಷಿಸುತ್ತದೆ ನಾನಿದನ್ನು ಹೇಳುವುದೇಕೆಂದರೆ, ನೀವು ವಹಿಸುವ ಯಾವುದೇ ಅಜಾಗ್ರತೆಯ ಕೆಲಸವಾದರೂ ಸರಕಾರದ ಮೇಲೆ ಹೊರಿಸಲ್ಪಡಬಾರದೆಂದು ನಾನು ವ್ಯಕ್ತಿಶಃ ಅಭಿಪ್ರಾಯ ಪಡುವುದೇನೆಂದರೆ, ಸಂಬಂಧಪಟ್ಟವರ ಸಂಪೂರ್ಣ ಸಮ್ಮತಿಯನ್ನು ಪಡೆಯದೆ, ದೇವಾಲಯಗಳಿಗೆ ಹರಿಜನ ಪ್ರವೇಶ ಮಾಡಿಸುವ ವಿಷಯವನ್ನು ಬಲವಂತ ಮಾಡಬಾರದು ಇದಕ್ಕೆ ಸ್ವಲ್ಪ ಸಮಯ ಹೋದರೂ ಚಿಂತೆಯಿಲ್ಲ. ಒಟ್ಟಿನ ಮೇಲೆ ನಮಗೆ ಆಗಬೇಕಾದದ್ದೇನೆಂದರೆ ಶಾಂತ ಮನೋಭಾವನೆಯಿಂದ ಸವರ್ಣ ಹಿಂದೀಯರು ಹರಿಜನರನ್ನು ದೇವಾಲಯಗಳೊಳಗೆ ಪ್ರವೇಶಮಾಡಿಸುವ ನ್ಯಾಯವಾದ ಕೆಲಸ. ಇದ್ದರಿಂದ ನನ್ನ ಸೂಚನೆಗಳನ್ನು ಗಮನಿಸುವಿರಾಗಿ ನಂಬುತ್ತೇನೆ" ಹೀಗೆಂದು ಮಾಯಾವರದ ದೇವಾಲಯ ಪ್ರವೇಶದ ಕುರಿತು ಅಲ್ಲಿನ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳು ಮಂತ್ರಿಗಳಿಗೆ ಕಾಗದ ಬರೆದದ್ದಕ್ಕೆ ಡಾ. ರಾಜನರು ಉತ್ತರ ವಿತ್ತಿರುವರು.

ಮಾನ್ಯ ವಾರ್ಕಿ
(ವಿದ್ಯಾಭ್ಯಾಸದ ಕುರಿತು)

"ಸರಕಾರದ ದೊಡ್ಡದೊಂದು ಸಮಸ್ಯೆಯೆಂದರೆ ಪ್ರಾಥಮಿಕ ವಿದ್ಯಾಭ್ಯಾಸದ ವಿಷಯ. ದಾರಿದ್ರ್ಯದಿಂದ ಕಂಗಾಲಾದ ನಮ್ಮ ದೇಶದಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ತರುವುದು ಅವಶ್ಯವಿದ್ದಲ್ಲಿ ಮಧ್ಯಾಹ್ನದ ಊಟವೇ ಮೊದಲಾದ ಸೌಕರ್ಯವನ್ನು ಸಹಾ ಒದಗಿಸುವುದು ನಮ್ಮ ಅಗತ್ಯವಿದೆ. ಇಂತಹ ಕೆಲಸವನ್ನು ಸರಕಾರವೇ ನಡೆಸುವುದು ಸಾಧ್ಯವಿಲ್ಲ. ಸರಕಾರದ ಮುಖಾಂತರ ಉದಾರ ಬುದ್ಧಿಯ ಸಾರ್ವಜನಿಕರು ನೆರವಾದಲ್ಲಿ ಇದು ಸಂಪೂರ್ಣ ಯಶಸ್ವಿಯಾಗುವುದು.

"ಮೋಂಟಿಸೋರೀ ವಿದ್ಯಾಪದ್ಧತಿಗಿಂತಲೂ ವಾರ್ಧಾ ವಿದ್ಯಾಪದ್ಧತಿಯು ಬಹಳ ಉತ್ತಮವಾದದ್ದು ದೊಡ್ಡ ದೊಡ್ಡ ನಗರಗಳಿಗೆ ಹೆಚ್ಚು ಹಣ ಖರ್ಚು ಮಾಡಿ ಉಪಾಧ್ಯಾಯರನ್ನು ಶಿಕ್ಷಣದ ಕುರಿತು ಅಭ್ಯಾಸಮಾಡಲು ಕಳುಹಿಸುವುದಕ್ಕಿಂತ, ಕೊಯಂಬುತ್ತೂರಿಗೋ, ಮುಸಲೀಪಟ್ಟಣಕ್ಕೋ, ಅಥವಾ ವಾರ್ಧಾಕ್ಕೇ ಆಗಲಿ ಉಪಾಧ್ಯಾಯರನ್ನು ವಾರ್ಧಾವಿದ್ಯಾಪದ್ಧತಿಯ ಅಭ್ಯಾಸದ ಸಲುವಾಗಿ ಕಳುಹಿಸುವುದು ಒಳ್ಳೆಯದು

ಸರಕಾರವು ವಾರ್ಧಾ ವಿದ್ಯಾಶಿಕ್ಷಣವನ್ನು ಬೇಗನೇ ಪ್ರಾಂತದಲ್ಲಿ ಜಾರಿಗೆ ತರಲು ಆಲೋಚನೆ ಮಾಡುತ್ತಿದೆ. ಪ್ರಾಂತದ ಕೆಲವು ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಬರುವ ವರ್ಷವೇ ವಾರ್ಧಾ ಯೋಜನೆಯ ಮಾದರಿ ತರಗತಿಗಳು ತೆರೆಯಲ್ಪಡುವವು. ಇದೇ ಪ್ರಾಂತದ ಎಲ್ಲಾ ವಿದ್ಯಾಸಂಸ್ಥೆಗಳಲ್ಲಿಯೂ ವಾರ್ಧಾ ಪದ್ಧತಿಯಿಂದ ಸರಕಾರವು ವಿದ್ಯಾಭ್ಯಾಸವನ್ನು ಕೊಡುವ ಏರ್ಪಾಡು ಮಾಡಬಹುದಾಗಿ ನಿರೀಕ್ಷೆಯಿದೆ" ಹೀಗೆಂದು ಗುಂಟೂರು ಮುನ್ಸಿಪಲ್ ಕೌನ್ಸಿಲಿನ ಮನವಿಗೆ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ವಾರ್ಕಿಯವರು ಹೇಳಿದರು.

ಮಾನ್ಯ ವಾರ್ಕಿಯವರು ಗುಂಟೂರಿನಲ್ಲಿ ಒಂದು ಭಾಷಣಮಾಡುತ್ತಾ ಇಂದಿನ ಭಾರತದ ರಾಷ್ಟ್ರೀಯ ಸರಕಾರವು ದೇಶದ ನಿರುದ್ಯೋಗ ನಿವಾರಣೆಗಾಗಿ ಬಹಳ ಯುಕ್ತಿಸುತ್ತಿದೆಯೆಂದೂ, ಕೈಗಾರಿಕೆಯೇ ಪ್ರಧಾನವಾಗಿರುವ ವಿದ್ಯಾಭ್ಯಾಸವನ್ನು ಕೊಡುವ ಮೂಲಕ ನಿರುದ್ಯೋಗ ಸಮಸ್ಯೆಯು ಪರಿಹಾರವಾಗುವುದೆಂದು ಹೇಳಿದರು.

ಪ್ರಧಾನಮಂತ್ರಿ ರಾಜಾಜಿ
(ಕಾಂಗ್ರೆಸು ಮಂತ್ರಿಗಳ ಕುರಿತು)

"ವ್ಯಕ್ತಿ ಯೊಬ್ಬನಿಂದ ಎಷ್ಟು ಯತ್ನಿಸಿದರೂ ಅನೇಕ ಕೆಲಸಗಳು ಮಾಡಲು ಆಗುವುದಿಲ್ಲ; ಆದರೆ ಸಾರ್ವಜನಿಕರ ಸಹಾಯದಿಂದ ಅದು ಸುಲಭವಾಗಿ ಕೊನೆಗೊಳ್ಳುವುದು ಸರಕಾರಕ್ಕೆ ಸಾರ್ವಜನಿಕ ಸಹಾಯವು ದೊರಕುವುದು ಅವಶ್ಯವಿದೆ. ಹಿಂದಿನ ಕಾಲದಲ್ಲಿ ಮಂತ್ರಿಗಳಿಗೆ ಸ್ಥಳೀಕ ಸಂಸ್ಥೆಗಳು ತಮ್ಮ ಕಷ್ಟವನ್ನು ಬಿನ್ನವಿಸಿಕೊಂಡಾಗ, ಅವರು ತಮಗೆ ಇಷ್ಟವಿದ್ದಂತೆ ತಾವು ಕೆಲಸಮಾಡುತ್ತಾ ಸ್ಥಳೀಕ ಸಂಸ್ಥೆಗಳು ಅವುಗಳಿಗೆ ಬೇಕಾದಂತೆ ಕಾರ್ಯಮಾಡಲು ಬಿಡುವುದು ಕ್ರಮವಾಗಿತ್ತು. ಆದರೆ ಇಂದಿನ ಮಂತ್ರಿಗಳಾದ ಶ್ರೀ ಗೋಪಾಲ ರೆಡ್ಡಿಯವರು ಹೇಗೆ ಹೃತ್ಪೂರ್ವಕವಾಗಿ ಅವರೊಡನೆ ಇರುತ್ತಾರೆಂದು ತಿಳಿದರೆ ನಿಜವಾಗಿ ಸಂತೋಷವಾಗುತ್ತದೆ. ನಾನಾದರೆ ಮುದುಕನಾದೆ, ಮುಂದಿನ ಚುನಾವಣೆಗೆ ನಿಲ್ಲದಿರಬಹುದು; ಆದರೆ ಯುವಕರಾದ ಶ್ರೀ. ರೆಡ್ಡಿಯವರು ತಮ್ಮ ಇಂತಹ ಹೃತ್ಪೂರ್ವಕವಾದ ಕಾರ್ಯದಿಂದ ಮುಂದಿನ ಚುನಾವಣೆಗಳನ್ನು ಎದುರಿಸಿ ಮಂತ್ರಿಗಳಾಗಬೇಕಾಗಿದೆ. ಸ್ಪಷ್ಟವಾಗಿ ಮಾತನಾಡುವುದು ಕಾಂಗ್ರೆಸಿನ ಧರ್ಮ, ಹಾಗಾಗಿ ನಾವು ಸ್ಪಷ್ಟ ಮಾತನಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವಾಗಿದೆ ಕಾಂಗ್ರೆಸಿನ ಮಂತ್ರಿಗಳು, ಅಲ್ಪಕಾರ್ಯಗಳಿಗಾದರೂ ಜನರು ಕಳುಹಿಸುವ ತಂತಿ, ಪತ್ರ ಮೊದಲಾದವುಗಳ ರಾಶಿ ರಾಶಿಯನ್ನು ದಿನಂಪ್ರತಿ ನೋಡಬೇಕಾಗಿದೆ.



ಮುಂದಿನ ದಿನದಲ್ಲಿ ಕಾಂಗ್ರೆಸು ಕೆಲಸಗಾರನಲ್ಲದವನು ಮಂತ್ರಿಪದವಿಯನ್ನೇರಲು ಅಸಮರ್ಥನಾಗುವನೆಂದು ನನ್ನ ದೃಢ ನಂಬಿಕೆ. ಇಂದು ಸರಕಾರದ ಅಧಿಕಾರಿಗಳೆಂಬವರು ತಮ್ಮ ಇಷ್ಟಬಂದಂತೆ ಸ್ವತಂತ್ರವಾಗಿ ಕೆಲಸ ಮಾಡುವ ಹಾಗಿಲ್ಲ, ಪ್ರತಿಯೊಬ್ಬರೂ ಕಾಂಗ್ರೆಸು ಮಂತ್ರಿಮಂಡಳದ ಸೂಚನೆಯಂತೆ ವರ್ತಿಸುತ್ತಾರೆ ಯಾವಾಗಲೂ ಅಧಿಕಾರದಲ್ಲಿದ್ದವರೂ ಮತ್ತು ಸಾರ್ವಜನಿಕರೂ ಅನ್ಯೋನ್ಯ ಅಭಿಪ್ರಾಯಗಳ ವಿನಿಮಯ ಮಾಡಿಕೊಂಡು ಸೌಹಾರ್ದದಿಂದಿರುವುದು ಅಗತ್ಯವಿದೆ' ಹೀಗೆಂದು ಪ್ರಧಾನ್ ಮಂತ್ರಿ ರಾಜಾಜಿಯವರು ಪತ್ತಿಕೋಟೆಯಲ್ಲಿ ಗ್ರಾಮೋದ್ಧಾರಕ ಯೋಜನೆಯ ವಾರ್ಷಿಕ ದಿನಾಚರಣೆಯೊಂದು ನಾರಿದರು.

OPPORTUNITY

Now offered to up-country clients to do ready and forward business in Cotton, Gold, Silver, Wheat, Linseed, Stocks & Shares & through E. India Cotton Association, Bombay Bullion Exchange, Marwari Chamber of Commerce etc. of Bombay.

Prompt Service latest inforamation and Moderate Charges

For terms of business write to

Hindustan Cotton Company, Limited
106, Cowasji Patel Street, Fort, Bombay

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.



[illegible]

ಪುರೋಹಿತ ಶ್ವಾಸಹಾರಿಯಲ್ಲಿ [illegible]

ಪುರೋಹಿತ ಶ್ವಾಸಹಾರಿ ದಮ್ಮಿಗೆ ಗುಣಕಾರಿ

ರಂಗಣ್ಣನು ಹುಟ್ಟು ಚಿತ್ರಗಾರ. ಮನುಷ್ಯಾಕೃತಿಯನ್ನು ಬಿಡಿಸುವುದರಲ್ಲಿ ಅವನದು ನುರಿತ ಕೈ. ತನ್ನ ಜೀವಮಾನದಲ್ಲಿ, ಆತನು ಕೃತಾರ್ಥನಾಗಿ ಎರಡು ಚಿತ್ರಗಳನ್ನು ಬರೆದ. ಮೊದಲನೆಯದು ಒಂದು ಮುಗ್ಧ ಬಾಲಿಕೆಯ ಚಿತ್ರ; ಎರಡನೆಯದು ಹಳೆಮುದುಕಿ ಹಣ್ಣುಮಾರುವಾಕೆಯೊಬ್ಬಳದು. ಆ ಬಾಲಿಕೆಯ ಚಿತ್ರವು ಆತನು ತನ್ನ ಯವ್ವನದ ಕಾಲದಲ್ಲಿ ಬರೆದುದು; ಅದರಿಂದ ಅಪಾರವಾದ ಐಶ್ವರ್ಯವೂ ದೊರಕಿತು. ಹಣ್ಣುಮಾರುವ ಮುದುಕಿಯನ್ನು ಆತನು ಇಳಿವಯಸ್ಸಿನಲ್ಲಿ ಚಿತ್ರಿಸಿದ್ದು; ಕೊನೆಯ ಕಾಲದ ಕೈಚಳಕವದು; ಅದೇ ಆತನ ಮರಣಕ್ಕೆ ಕಾರಣವೂ ಆಯಿತು.

ರಂಗಣ್ಣನಿಗೆ ಅರುವತ್ತು ವರ್ಷ ಪ್ರಾಯ. ಹಿಂದಿನ ಆತನ ಕೀರ್ತಿಯು ಸವೆಯುತ್ತಾ ಬಂದಿದೆ. ರಸಿಕ ಚಿತ್ರಗಾರನ ಜೀವನವು ನಿರಾಶಮಯವಾಗಿದೆ. ಆದರೆ ಕಡೆಗೊಮ್ಮೆ ಆ ಹಳೆಯ ಮುದುಕೆ 'ಹಣ್ಣು ಮಾರುವಾಕೆ' ಆತನ ಹಿಂದಿನ ಕಲಾಶಕ್ತಿಯನ್ನು—ಸುಪ್ತಚೇತನವನ್ನು ಪುನರುಜ್ಜೀವನಗೊಳಿಸಿದಳು. ಆತ ಮೊದಲು ಆ ಮುದಿ ಹೆಂಗುಸನ್ನು ಕಂಡಾಗ ನಾವಿಬ್ಬರೂ 'ಮಾರ್ಕೆಟ್ ರೋಡಿ'ನ ಜನಸಂದಣಿಯಲ್ಲಿ ಬೆರೆತು ಸಂಜೆಹೊತ್ತಿಗೆ ಸಂಚಾರ ಹೊರಟಿದ್ದೆವು. ಹಲವಾರು ಪ್ರಶ್ನೆ ಕೇಳಿದರೆ ರಂಗಣ್ಣ ಒಮ್ಮೆ ಬಾಯಿ ಬಿಡುತಿದ್ದ. ಆತನ ಜೀವನದ ಸವಿಸ್ತಾರ ಪರಿಚಯವಿದ್ದ ನನಗೆ ಇದೇನೂ ಹೊಸತಾಗಿರಲಿಲ್ಲ.

"ನೋಡು" ಬೆನ್ನು ಹಿಡಿದು ನನ್ನನ್ನು ಹಿಂದಕ್ಕೆ ಜಗ್ಗಿ ರಂಗಣ್ಣ ಹೇಳಿದ. "ಆ ಹೆಂಗುಸಿನ ಮುಖವನ್ನೊಮ್ಮೆ ನೋಡ!" ಆತನು ಗುರುತಿಸಿದ ಕಡೆಗೆ ನಾನು ನೋಡಿದೆ. ಮುದುಕಿ ಹಣ್ಣು ಮಾರುವಾಕೆಯೊಬ್ಬಳು, ಕಾಲಬುಡದಲ್ಲಿ ಬುಟ್ಟಿಯನ್ನು ಇಟ್ಟಿದ್ದು, ಹಣ್ಣುಗಳನ್ನು ಹಿಡಿದು ಕೈಚಾಚಿ ನಿಂತಿದ್ದಳು. 'ಹಣ್ಣುಗಳನ್ನು ಕೊಂಡುಕೊಳ್ಳಿರೆಂದು' ಅವಳು ಕೂಗುತ್ತಿರಲಿಲ್ಲ. ಆಕೆಯ ಮೌನ ದಯಾರ್ದ್ರ ದೃಷ್ಟಿಯು ಗ್ರಾಹಕರೊಡನೆ ಬಿನ್ನಹಮಾಡುತ್ತಿದ್ದುವು. ಬಹಳ ಸಮಯದಿಂದ ಆಕೆ ಈ ಕೆಲಸದಲ್ಲಿದ್ದು ಜೀವನದಲ್ಲಿ ಬೇಸತ್ತು ಬೆಂಡಾಗಿರಬೇಕೆಂದು ಅವಳ ಮುಖಭಾವವೇ ಸೂಚಿಸುತ್ತಿತ್ತು.

"ಏನು ರಂಗಣ್ಣ! ನನ್ನ ಮಾತು ಆತನ ಕಿವಿಗೆ ಬಿದ್ದಂತೆ ತೋರಲಿಲ್ಲ. ತನ್ನ ಧ್ಯಾನದಲ್ಲಿಯೇ ಆತ ಮಗ್ನನಾಗಿದ್ದ ಸ್ವಲ್ಪ ಹೊತ್ತಿನ ಮೇಲೆ "ಆ ಹೆಂಗುಸಿನ ಆಕೃತಿ ಎಷ್ಟು ಪರಿಪೂರ್ಣವಾದುದು ಆ ಮೇಲೆ . . ಇದು ವರೆಗೆ ಇಷ್ಟು ಪೂರ್ಣ ಸೌಂದರ್ಯದ ಆಕಾರವನ್ನು ಕಂಡಿಲ್ಲ. ಚಿತ್ರಬರೆಯಲು ಆಕೆ ಸಮ್ಮತಿ ಕೊಟ್ಟರೆ . . . ಜಗತ್ತಿಗೆ ಇನ್ನೊಮ್ಮೆ ನನ್ನ ಕಲಾಶಕ್ತಿಯನ್ನು ತೋರಿಸಲು ಸಂದರ್ಭವೊದಗುತಿತ್ತು." ಹೀಗೆಂದು ನಿಟ್ಟುಸಿರೆಳೆದು ಹೇಳಿದ.

ತಿರಿಗಿ ನಾನೊಮ್ಮೆ ಆ ಹೆಂಗುಸನ್ನು ನೋಡಿದೆ. ಕಲಾವಿದನನ್ನು ಉದ್ರೇಕಗೊಳಿಸುವ ಭವ್ಯ ಮನೋಹರ ಆಕೃತಿ ಆಕೆಯದು. ದೇಹವು ಬವಣೆಗೊಂಡು ಬಾಡಿದ್ದರೂ, ಮುಖದಲ್ಲಿ ವ್ಯಕ್ತವಾಗುವ ನಿರ್ಮಲ ಸೌಂದರ್ಯ! ರಂಗಣ್ಣನ ಹೃದಯವನ್ನು ಇದು ಮಾರ್ಮಿಕವಾಗಿ ನಾಟಿರಬೇಕು. ಹೃದಯ ಅಂತರಾಳದಲ್ಲಿದ್ದ ಅಳಲು, ಆದರೂ ಭದ್ರವಾಗಿ ಮುಚ್ಚಿದ ತುಟಿಗಳ ಗಂಭೀರತೆಯಲ್ಲಿ ವ್ಯಕ್ತವಾಗುವ ಧೈರ್ಯ; ಇವು ಯಾವನನ್ನಾದರೂ ಆಕೆಯ ಕಡೆಗೆ ಸೆಳೆದು, ಅವಳ ಜೀವನದ ಸಂಕಷ್ಟದ ಅನುಭವಗಳನ್ನು ಪರಿಚಯಮಾಡಿಕೊಳ್ಳುವ ಹಂಬಲವನ್ನು ಹುಟ್ಟಿಸುತಿತ್ತು.

ರಂಗಣ್ಣ ಇಷ್ಟರಲ್ಲಿಯೇ ಹಣ್ಣು ಮಾರುವ ಆ ಮುದುಕಿಯ ಬಳಿ ಹೋಗಿ ನಿಂತಿದ್ದ. ಸಂಭಾಷಣೆಗಳೂ ನಡೆದುವು. ತನ್ನ ಚಿತ್ರ ಬರೆಯಲು ಆಕೆ ಏನೂ ಸಮ್ಮತಿ ಕೊಡುವಂತೆ ಕಂಡುಬರಲಿಲ್ಲ. ಆತನನ್ನು ಏನೋ ಒಂದು ಶಂಕೆ—ಭಯಗಳಿಂದ ಎವೆಯಿಕ್ಕದೆ ನೋಡುತಿದ್ದಳು. ರಂಗಣ್ಣನು ಬಿನ್ನಹಮಾಡಿಕೊಂಡಂತೆ, ಆಕೆ ಮತ್ತಷ್ಟು ಕಳವಳಗೊಂಡಳು. ಇಷ್ಟರಲ್ಲಿ ನಾನೇ ಮುಂದೆ ಹೋಗಿ, ರಂಗಣ್ಣನ ಪರವಾಗಿ ವಾದಿಸಿದೆ.

ವಾರದ ಕಥೆ—

ಎರಡು ಚಿತ್ರಗಳು

"ಇಲ್ಲಿ ಕೇಳು, ಇದರಿಂದ ನೀನು ಏನೂ ನಷ್ಟಹೊಂದಬೇಕಾದ್ದಿಲ್ಲ; ನಿನಗೂ ಒಳ್ಳೆಯ ಸಂಭಾವನೆ ಸಿಗುತ್ತದೆ . . ."

"ದುಡ್ಡಿಗಾಗಿ ನಾನು ಕಸುಬು ಮಾಡುವುದಿಲ್ಲ." ಆಕೆ ನಿರ್ಧಾರದಿಂದ ಹೇಳಿದಳು.

"ಇರಲಿ; ಇದರಿಂದ ನೀನು ನನ್ನ ಗೆಳೆಯನಿಗೆ ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಇತ್ತೀಚೆಗೆ ಆತನು ತನ್ನ ಕೀರ್ತಿಯನ್ನು ಕಳಕೊಂಡಿದ್ದಾನೆ. ನಿನ್ನನ್ನು ಒಳಿತಾಗಿ ಆತ ಚಿತ್ರಿಸಬಲ್ಲನಾದರೆ, ಅದರಿಂದ ಕಳಕೊಂಡ ತನ್ನ ಪ್ರಸಿದ್ಧಿಯನ್ನು ಮರಳಿ ಪಡೆಯಬಹುದು ನೀನು ಆತನಿಗೆ ಬಹಳ ದಯೆ ತೋರಿಸಿದಂತಾಗುತ್ತದೆ. ಅದರಿಂದ ನಿನಗೂ ಅಲ್ಪ ಹಣಬರುವುದಾದರೆ . . ."

ಆಕೆ ಕ್ಷಣಹೊತ್ತು ಮಾತನಾಡಲಿಲ್ಲ. ಕಟ್ಟಕಡೆಗೆ ಸಮ್ಮತಿಸಿದಳು. ರಂಗಣ್ಣನ ಮನೆಯ ಪರಿಚಯವನ್ನು ಅವಳಿಗೆ ತಿಳಿಸಿ ನಾನು ಗೆಳೆಯನನ್ನು ಅಲ್ಲಿಂದ ಹೊರಡಿಸಿದೆ

"ಆಕೆ ಬರುವುದಿಲ್ಲ" ರಂಗಣ್ಣ ದಾರಿಯಲ್ಲಿ ಬರುವಾಗ ಹೇಳಿದ.

"ಖಂಡಿತವಾಗಿಯೂ ಆಕೆ ಬರದೆ ಇರುವುದಿಲ್ಲ" ನಾನು ಗೆಳೆಯನನ್ನು ಸಮಾಧಾನಪಡಿಸಿದೆ.

ನನ್ನ ಮನಸ್ಸಿನಲ್ಲಿಯೂ ಹಲವಾರು ವಿಚಾರಗಳು ಹೊಳೆದುವು. ಹುಟ್ಟಿನಿಂದಲೇ ಅವಳಿಗೆ ಈ ವೃತ್ತಿಯು ಬಂದಿರಲಿಕ್ಕಿಲ್ಲವೆಂದೂ ಜೀವನದ ಯಾತನೆಯಲ್ಲಿ ಈಕೆ ಸಂಕಟಪಡುತ್ತಿರುವಳೆಂದೂ, ಉತ್ತಮ ಕುಲೀನತೆಯುಳ್ಳವಳಿರಬೇಕೆಂದೂ ಹೀಗಿದ್ದರೆ ಆಕೆ ಚಿತ್ರ ಬಿಡಿಸಲು ಸಮ್ಮತಿಸಲಾರಳೆಂದೂ ನನ್ನ ಹೃದಯದಲ್ಲಿಯೇ ಕಲ್ಪನೆಗಳು ಮೂಡಿ ಮುಳುಗುತಿದ್ದುವು

ಹೇಳಿದ ಹೊತ್ತಿಗೆ ಸರಿಯಾಗಿ ಮರುದಿವಸ ರಂಗಣ್ಣನ ಮನೆಗೆ ಬಂದಳು. ಆತನ ಗೊಂದಲವೂ ಕಡಿಮೆಯಾಯಿತು. ಚಿತ್ರಗಾರನು ತನ್ನ ಕಾರ್ಯವನ್ನು ಅವಿಶ್ರಾಂತವಾಗಿ ಆರಂಭಿಸಿದ. ಅದೇ ಮುಖಮುದ್ರೆ, ಅದೇ ಧೈರ್ಯ, ಅದೇ ಚಿಂತೆ ಇವುಗಳುಳ್ಳ ಆಕೆಯು ಪ್ರತಿನಿತ್ಯ ರಂಗಣ್ಣನ ಮನೆಗೆ ಬಂದು ಹೋಗುತಿದ್ದಳು. ಇತ್ತೀಚೆಗೆ ಇನ್ನಷ್ಟು ಉದ್ವಿಗ್ನಳಾಗಿ ಸಂಕಟಗೊಂಡವಳಂತೆ ಕಾಣುತಿದ್ದಳ

ಒಂದು ದಿನ ರಂಗಣ್ಣ ಚಿತ್ರಿಸುತ್ತಿದ್ದಂತೆ ನಾನೂ ಅಲ್ಲಿಗೆ ಬಂದೆ; ನನ್ನನ್ನು ಆತ ಒಳಗೆ ಕರೆದ. ಆಕೆಯ ಮುಖದಲ್ಲಿ ಕಂಬನಿ ಸುರಿಯುತಿತ್ತು "ಇನ್ನು ಬಹಳಕಾಲ ಹೀಗೆ ಇರಲು ಆಗುವುದಿಲ್ಲ; ಬಹಳ ಕಷ್ಟವಾಗುತ್ತದೆ" ಎಂದಳು

"ನಿನ್ನ ಪ್ರಾಯದಲ್ಲಿ ಹೀಗೆ ಚಿತ್ರಕ್ಕಾಗಿ ಬಹಳ ಹೊತ್ತು ನಿಂತುಕೊಳ್ಳುವುದು ಬಹು ಕಷ್ಟ" ಹೀಗೆಂದು ನಾನವಳನ್ನು ಸಮಾಧಾನಪಡಿಸಿದೆ. ಆಕೆ ತಲೆ ಅಲ್ಲಾಡಿಸಿದಳು.

"ನಮ್ಮ ರಂಗಣ್ಣ ಇಂದು ಹಿಂದಿನ ಚಿತ್ರಗಾರನೇ ಆಗಿದ್ದಾನೆ. ಈಗೊಮ್ಮೆ ಇಳಿಪ್ರಾಯದ ಯೌವನಕಾಲದ ಕಲಾಸಾಮರ್ಥ್ಯವು ಅದೇ ಶವು ಅವನಲ್ಲಿ ಬಂದಿದೆ ಆತನ ಪ್ರಾಧಾನ್ಯತೆಗೆ ಕಾರಣವಾದ ಚಿತ್ರವು ಅದು ಆ ಮುಗ್ಧ ಬಾಲಿಕೆಯದು" ಹೀಗೆಂದು ಗೋಡೆಯಲ್ಲಿ ತೂಗಾಡಿಸಿದ ಆ ಚಿತ್ರದ ಕಡೆಗೆ ನಾನು ಆಕೆಯ ದೃಷ್ಟಿಯೆಳೆದೆ "ಇಂದಿಗೆ ಸುಮಾರು ಸೂವತ್ತು ವರ್ಷಗಳಾದರೂ, ಆತ ಆಕೆಯನ್ನು ಇನ್ನೂ ಮರೆತಿಲ್ಲ" ಎಂದೆ.

"ಹಾಗೆಂದರೆ?" ಆಶ್ಚರ್ಯದ ತೊದಲುಗಳಿಂದ ಆಕೆ ಪ್ರಶ್ನಿಸಿದಳು.

Constructive Banking

An understanding of how a modern Bank can operate to make itself useful to the individual, to business, and, to the public, has enabled the CANARA BANK to have thousands of depositors and to build resources exceeding a Crore

. . And this is but the be ginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE

ESTED 1906

CANARA BANK, LIMITED.

NACET

ವಿಶಿಷ್ಟತೆ ಮತ್ತು ಬೆಲೆಗೆ ನೆಸೆಟ್ ಕ್ಷೌರದ ಸೆಟ್ಟನ್ನು ಸರಿಗಟ್ಟುವವುಗಳಿಲ್ಲ. ಈ ಸೆಟ್ಟಿನಲ್ಲಿ ಒಂದು ನೆಸೆಟ್ ರೇಜರ್ ಎರಡು ನೆಸೆಟ್ ಬ್ಲೇಡುಗಳು ಒಂದು ಅಚ್ಚುಕಟ್ಟಾದ ಪೆಟ್ಟಿಗೆಯಲ್ಲಿರುತ್ತವೆ ಇಷ್ಟು ಕಡಿಮೆ ಕ್ರಯದಲ್ಲಿ ಅನೇಕ ಬಾರಿ ಸರಿಯಾಗಿ ಕ್ಷೌರಮಾಡುವಂಥ ಗುಣವುಳ್ಳ ಈ ಬ್ಲೇಡುಗಳನ್ನು ಮೀರಿದವುಗಳಿಲ್ಲ



ನೆಸೆಟ್ ಬ್ಲೇಡುಗಳು ೧೦ಕ್ಕೆ 10

ಒಂದು ಸೆಟ್ಟಿಗೆ ಆಣೆ 10

"ನನ್ನ ಗೆಳೆಯ ಬಹಳ ದೌರ್ಭಾಗ್ಯದ ಮನುಷ್ಯ; ಅದೆಲ್ಲಾ ಆ ಹುಡುಗಿಯಿಂದಾಯಿತು; ನಿಜವಾಗಿಯೂ ಆಕೆ ಸುಂದರಿಯಾಗಿಲ್ಲವೇ?"

"ಎಳೆಯ ಹುಡುಗಿ. ಆ ಪ್ರಾಯದಲ್ಲಿ ಯಾರಾದರೂ ಚಂದವಾಗಿರುತ್ತಾರೆ; ಆದರೆ ಆ ಬೆಡಗು ಬಹುಕಾಲ ನಿಲ್ಲಲಾರದು" ಹೀಗೆಂದು ಆಕೆ ಸ್ಪಷ್ಟರೀತಿಯಿಂದ ನುಡಿದಳು.

"ಆ ಚಿತ್ರವು" ನಾನು ಮಾತನ್ನು ಮುಂದುವರಿಸಿದೆ. "ರಂಗಣ್ಣನ ಮೊದಲನೆಯ ಜಯಶಾಲಿಯಾದ ಕಲಾಕೃತಿ; ಹತ್ತು ಸಾವಿರ ರೂಪಾಯಿಗಳ ಕ್ರಯಕ್ಕೆ ಆತ ಅದನ್ನು ಮಾರಾಟಮಾಡಿದ. ಅದನ್ನು ತಿರಿಗಿ ಪಡೆಯಬೇಕಾದರೆ ಅದಕ್ಕಿಂತ ಇಮ್ಮಡಿ ತೆರಬೇಕಾಯಿತು"

ಹೆಂಗುಸು ಚಿತ್ರದ ಕಡೆಗೆ ಮತ್ತೊಮ್ಮೆ ನಿಶ್ಚಲಳಾಗಿ ನಿಟ್ಟಿಸಿನೋಡಿದಳು. ಇಪ್ಪತ್ತು ವರ್ಷದ, ತುಂಬಿದ ಪ್ರಾಯ, ಸುಂದರಯುವತಿ; ರಂಗಣ್ಣನೂ ತನ್ನ ಆರಂಭದ ಕಲಾಸಾಮರ್ಥ್ಯವು ಅದರಲ್ಲಿ ತುಂಬಿ ತುಳುಕುವಂತೆ ಚಿತ್ರಿಸಿದ್ದ.

"ಇದನ್ನು ತಿರಿಗಿಯಾತಕ್ಕೆ ಪಡಕೊಳ್ಳಬೇಕಾಯಿತು?" ಸಾಶಕಳಾಗಿ ಕೇಳಿದಳು

'ಆದಲ್ಲಾ ದೊಡ್ಡಕತೆ ಅವರಿಬ್ಬರೂ ಅನ್ಯೋನ್ಯ ಪ್ರೇಮಿಗಳಾಗಿದ್ದರು ಆಕೆ ಕುಲೀನ ಮನೆತನದವಳು ಒಬ್ಬಳ ಐಶ್ವರ್ಯವಂತರ ಮನೆತನದ ಕನ್ನಿಕೆ, ಆದರೆ ರಂಗಣ್ಣನಲ್ಲಿ ಆಕೆಯ ಮನಸ್ಸು ನಟ್ಟಿತು ಈತನಿಗೆ ಆಗಾಗ ಅವಶ್ಯವಿದ್ದರೆ ಹಣವನ್ನು ತಂದುಕೊಡುತ್ತಿದ್ದಳು ರಂಗಣ್ಣನಿಗೆ ಮೈ ಸ್ವಸ್ಥವಿಲ್ಲದಾಗ, ಆರೋಗ್ಯ ಪರಿಚಾರಕಿಯಂತೆ ಉಪಚರಿಸುವಳು. ಎಷ್ಟೇ ಆಯಾಸವಾದರೂ, ತನ್ನ ಚಿತ್ರಬರೆಯಲು, ನಿನ್ನಂತೆ ಬಹಳ ಹೊತ್ತು ನಿಂತುಕೊಳ್ಳುವಳು. ಕಟ್ಟಕಡೆಗೆ ಮನೆಯವರು ಇವರ ಪ್ರೇಮ ಸಂಬಂಧಕ್ಕಾಗಿ ಅವಳನ್ನು ಮನೆಯಿಂದ ಹೊರಹಾಕಿದರು.'

'ಮುಂದೇನಾಯಿತು?' ನಿಟ್ಟುಸಿರಿಟ್ಟು ಕೇಳಿದಳು.

'ಆಕೆಯ ಚಿತ್ರವನ್ನು ರಂಗಣ್ಣ ಬರೆದ, ಜಯಶಾಲಿಯಾಗಿ ಬರೆದ ತನ್ನ ಕಲಾಸಾಮರ್ಥ್ಯವನ್ನು ತುಂಬಿಸಿ ಚಿತ್ರಿಸಿದ ರಂಗಣ್ಣನ ಹೆಸರು ಅದರಿಂದ ಪ್ರಸಿದ್ಧಿಯಾಯಿತು. ಅದನ್ನು ಹತ್ತು ಸಾವಿರ ರೂಪಾಯಿಗಳಿಗೆ ಮಾರಾಟಮಾಡಿ, ಬಹು ಭಾಗ್ಯಶಾಲಿಯಾದ

'ಆ ಮೇಲೆ?' ಹರ್ಷಿತಳಾಗಿ ಕೇಳಿದಳು.

'ರಂಗಣ್ಣ ಹೇರಳ ಹಣವನ್ನು ಸಂಪಾದಿಸಿದ ಕೂಡಲೆ ಆತನ ಹೃದಯವನ್ನು ದುರಭಿಮಾನವು ಪ್ರವೇಶಮಾಡಿತು ತನ್ನ ಜತೆಗಾತಿಯಾಗಿರಲು ಆಕೆಯು ಯೋಗ್ಯಳಲ್ಲವೆಂದು ಭಾವಿಸಿದ. ಯಾವಾಕೆ ಈತನನ್ನು ಪ್ರೇಮಿಸಿ ತನ್ನ ಬಂಧುಬಳಗವನ್ನೂ ಬಿಟ್ಟು ಬಂದಿದ್ದಳೋ, ಯಾವಳ ಚಿತ್ರದಿಂದ ಅಪಾರ ಐಶ್ವರ್ಯವನ್ನು ಸಂಪಾದಿಸಿದನೋ, ಆಕೆಯನ್ನು ರಂಗಣ್ಣ ಮದುವೆಯಾಗುವುದಿಲ್ಲವೆಂದು ಒಂದು ದಿನ ಖಂಡಿತ ಹೇಳಿ ಬಿಟ್ಟ ಅವಳು ಇಲ್ಲಿಂದ ಹೊರಟುಹೋದಳು. ಆ ಮೇಲೆ ರಂಗಣ್ಣ ಅವಳನ್ನು ಕಂಡಿಲ್ಲ ಹಾಗೆಯೇ ಈಗ ಜೀವನದಲ್ಲಿ ರಸವಿಲ್ಲದವನಂತೆ, ನಿಷ್ಠುರನಾಗಿ ಆತನು ಕಾಣುತ್ತಾನೆ. ಆಕೆ ಬಿಟ್ಟು ಹೋದ ಮೇಲೆ, ಆತನ ಕೀರ್ತಿಯೂ, ಕಲಾಶಕ್ತಿಯೂ ದಿನದಿಂದ ದಿನಕ್ಕೆ ಬಿಟ್ಟುಹೋಯಿತು. ಆ ಮೇಲೆ ಒಂದೇ ಒಂದು ಚಿತ್ರವನ್ನಾದರೂ ರಂಗಣ್ಣ ಬಿಡಿಸಲಿಲ್ಲ' ಹೀಗೆಂದು ಹೇಳಿ ಮುಗಿಸಿದೆ.

'ನಿಜವಾಗಿಯೂ, ಇದೊಂದು ಕರುಣಾಮಯವಾದ ಕಥೆ' ಹಣ್ಣು ಮಾರುವ ಮುದುಕಿ ತಲೆತಗ್ಗಿಸಿ ಹೇಳಿದಳು. 'ಜೀವನವು ಹೀಗೆ ನಿರರ್ಥಕವಾದ ಅನೇಕ ದುರಭಿಪ್ರಾಯಗಳಿಂದ ತುಂಬಿ ನಿಜವಾಗಿ ಹಾಳಾಗುತ್ತದೆ' ಎಂದಳು.

ಮುಂದೆ ಒಂದೆರಡು ದಿವಸಗಳಲ್ಲಿ ರಂಗಣ್ಣ ಚಿತ್ರವನ್ನು ಪೂರ್ತಿಗೊಳಿಸಿದ. ತನ್ನ

(೯ನೆಯ ಪುಟವನ್ನು ನೋಡಿರಿ)

ಗುಪ್ತರಹಸ್ಯಗಳನ್ನು ★

ತಿಳಕೊಳ್ಳುವ ಗೂಢಚಾರರ ವಿಚಿತ್ರ ಪ್ರಯತ್ನ ವಿಶೇಷ!

ಗುಪ್ತರಹಸ್ಯಗಳನ್ನು ತಿಳಿಕೊಳ್ಳುವ ಗೂಢಚಾರರ ಇತಿಹಾಸವು [illegible]ಯಾಥಾಗಿ ಲ್ಲವಾದಲ್ಲ; ಅದು ಬಹು ಪ್ರಾಚೀನವಾಗಿ ಇರುತ್ತದೆ. ಭಾರತದಲ್ಲಿ ಕೂಡ ಬಹು ಪ್ರಾಚೀನ ಕಾಲದಿಂದ ಗುಪ್ತಚರ ವಿಭಾಗವು ವ್ಯವಸ್ಥಿತ ರೂಪದಿಂದ ನಡೆಸಲಾಗುತ್ತಿತ್ತು ಎಂದು ಇತಿಹಾಸವು ಹೇಳುತ್ತದೆ. ಚಂದ್ರಗುಪ್ತನಂಥ ಹಿಂದೂ ಸಮ್ರಾಟರ ಕಾಲದಲ್ಲಿ ಅಷ್ಟೇ ಅಲ್ಲ, ರಾಮಾಯಣ, ಮಹಾಭಾರತ ಕಾಲಗಳಲ್ಲಿ ಕೂಡ ಭಾರತೀಯ ಗುಪ್ತಚಾರ ವಿಭಾಗವು ಮಹತ್ವದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬರುತ್ತದೆ! ಪ್ರಾಮುಖ್ಯ ವಿಚಾರಗಳಲ್ಲಿ ಗುಪ್ತಚಾರರ ಸಲಹೆಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ರಷ್ಯದ ಪೀಟರ್ ಮಹಾಶಯರಂಥ ಪಾಶ್ಚಾತ್ಯ ರಾಜಕುಮಾರರು ತಮ್ಮ ಪ್ರಾರಂಭ ಜೀವನದಲ್ಲಿ ಗುಪ್ತಚರ ಕಲೆಯ ಅಭ್ಯಾಸಮಾಡಿಕೊಂಡು ಇರುತ್ತಿದ್ದರು. ಯುರೋಪಿನ ಮಧ್ಯಯುಗದಲ್ಲಿ ಧಾರ್ಮಿಕ ಕಾರ್ಯಗಳ ಎಲ್ಲ ಉತ್ತರದಾಯಿತ್ವವು ಕೇವಲ ಗೂಢಚಾರರ ಸಫಲತೆ ಮತ್ತು ವಿಫಲತೆಯನ್ನು ಹೊಂದಿಕೊಂಡಿರುತ್ತಿತ್ತು. ಮೊಗಲಾಯಿ ಚಕ್ರವರ್ತಿಗಳ ಇತಿಹಾಸವು ಗೂಢಚಾರರ ರೋಮಾಂಚನಕಾರಿ ಕತೆಗಳಿಂದ ತುಂಬಿಕೊಂಡು ಇರುತ್ತದೆ. ಮೊಗಲಾಯಿ ಸಮ್ರಾಟರ ವಿಜಯದ ಕಾರಣವು ಗೂಢಚಾರರೇ ಮೊಗಲ್ ಸಾಮ್ರಾಜ್ಯದ ಶವಪೆಟ್ಟಿಗೆಗೆ ಕೊನೆಯ ಕೀಲನ್ನು ಬಡಿದರು!

ವೈಜ್ಞಾನಿಕ ಕಾಲದಲ್ಲಿ

ಇದು ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸದ ಮಾತಾಯಿತು. ಆಗ ವಿಜ್ಞಾನವು ಪೂರ್ಣ ಶೈಶವಾವಸ್ಥೆಯಲ್ಲಿ ಇರುತ್ತಿತ್ತು. ಆದರೆ ಈಗ ವೈಜ್ಞಾನಿಕ ಉನ್ನತಿಯೊಂದಿಗೆ ಗುಪ್ತಚರ ಕಲೆಯ ವಿಕಾಸವು ಎಷ್ಟಾಗಿರುವದೋ, ಅದನ್ನು ಊಹಿಸಿದ ಮಾತ್ರಕ್ಕೇ ಎದೆ ಝುಂ ನಡುಗುತ್ತದೆ. ಮಹಾಯುದ್ಧ ಕಾಲದಲ್ಲಿ ಏನಸಿತ್ಯ ಎಷ್ಟು ಮಂದಿ ಗೂಢಚಾರರು ಗುಂಡಿನ ಬಾಯಿಗೆ ಆಹುತಿಯಾಗುತ್ತಿದ್ದರು ಎಂಬುದನ್ನು ಲೆಕ್ಕಕ್ಕೆ ತಾರದೆ ಇದ್ದರೂ, ಈಗ ಶಾಂತಿಯ ಸಮಯದಲ್ಲಿ ಸಹ, ಪ್ರತಿವರ್ಷ, ಪ್ರತಿಯೊಂದು ಪಾಶ್ಚಾತ್ಯ ರಾಷ್ಟ್ರದಲ್ಲಿ ನೂರಾರು ಮಂದಿ ಗೂಢಚಾರರ ಕೊಲೆಯಾಗುತ್ತಿದೆ ಎಂಬುದನ್ನು ತಿಳಿದು ಯಾರಿಗೆ ತಾನೆ ಆಶ್ಚರ್ಯವಾಗದೆ ಇರಲಿಕ್ಕಿಲ್ಲ?. 1914ರಲ್ಲಿ ರಷ್ಯದ ಝಾರನು ಪ್ರತಿತಿಂಗಳು ನಾಲ್ಕು ಲಕ್ಷ ಪವನುಗಳನ್ನು ಗೂಢಚಾರರಿಗಾಗಿ ಖರ್ಚುಮಾಡುತ್ತಿದ್ದನು. ಆಗ ಜರ್ಮನಿಯು ಪ್ರತಿತಿಂಗಳಿಗೆ 150 ಲಕ್ಷ ಮಾರ್ಕುಗಳು ಮತ್ತು ಬ್ರಿಟನು 15 ಲಕ್ಷ ಪವನುಗಳನ್ನು ಇದಕ್ಕಾಗಿ ಖರ್ಚುಮಾಡುತ್ತಿದ್ದವು ಎಂಬುದು ಆ ಕಾಲದ ವರದಿಗಳಿಂದ ಸ್ಪಷ್ಟವಾಗುತ್ತದೆ.

ಗೂಢಚಾರರು ತಮ್ಮ ಕಾರ್ಯಸಾಧನೆಗಳಿಗಾಗಿ ಎಂಥೆಂಥ ಉಪಾಯಗಳನ್ನು ಕೈಗೆತ್ತಿಗೆದುಕೊಳ್ಳುತ್ತಾರೆ ಎಂಬುದನ್ನು ಕೂಲಂಕಷವಾಗಿ ತಿಳಕೊಳ್ಳುವದು ಪ್ರಯಾಸದ ಸಂಗತಿಯಾಗಿದೆ, ಆದರೆ ವಿಶೇಷಜ್ಞರು ಬಹುಪ್ರಯಾಸದಿಂದ ಕೆಲವು ಸಂಗತಿಗಳನ್ನು ತಿಳಕೊಂಡು ಪ್ರಕಟಿಸಿದ್ದಾರೆ. ಅವು ಬಹು ಸ್ವಾರಸ್ಯದ್ದಾಗಿಯೂ ಅದ್ಭುತವಾಗಿಯೂ ಕಾಣುತ್ತವೆ.

ಜರ್ಮನ-ಗೂಢಚಾರರ ಉಪಾಯಗಳು

ಮಹಾ ಯುದ್ಧಕಾಲದಲ್ಲಿ ಜರ್ಮನ ಸರಕಾರದ ಗೂಢಚಾರರ ಮೇಲಧಿಕಾರಿಗಳು ಫ್ರಾನ್ಸಿನಲ್ಲಿರುವ ತಮ್ಮ ಗೂಢಚಾರರೊಂದಿಗೆ ಪತ್ರವ್ಯವಹಾರವನ್ನು ಮಾಡುವಾಗ, ಸಂಗೀತದ ಸ್ವರ ಲಿಪಿಗಳನ್ನು ಸಾಂಕೇತಿಕ ಭಾಷೆಯಲ್ಲಿ ಉಪಯೋಗಿಸುತ್ತಿದ್ದರು. ಮ್ಯೂಸೊಟಿಸ್ ದಾಲ್ಗಾ ಎಂಬ ಸಿದ್ಧಗೀತದ ನೂರಾರು ಪ್ರತಿಗಳು ಫ್ರಾನ್ಸಿಗೆ ಕಳುಹಿಸಲ್ಪಡುತ್ತಿದ್ದುವು. ಆ ಪ್ರತಿಗಳಲ್ಲಿರುವ ಸಂಗೀತ ಸ್ವರ ಲಿಪಿಗಳ ಮೂಲಕವೇ ಜರ್ಮನಿಯಿಂದ ಗುಪ್ತ ಸಂದೇಶಗಳು ಕಳುಹಿಸಲ್ಪಡುತ್ತಿದ್ದುವೆಂಬ ಬಗ್ಗೆ ಆಗ ಯಾರಿಗೂ ಸಂದೇಹವುಂಟಾಗಿರಲಿಲ್ಲ. ಆದರೆ ಫ್ರಾನ್ಸಿನ ಒಂದು ಬಂದರಿನಲ್ಲಿದ್ದ ಒಬ್ಬ ವ್ಯಕ್ತಿಯ ಮೇಲೆ ಫ್ರಾನ್ಸಿನ ಅಧಿಕಾರಿಗಳ ಸಂದೇಹ ದೃಷ್ಟಿಯಿತ್ತು. ಅವನಿಗೆ ಬರುವ ಎಲ್ಲಾ ಕಾಗದಪತ್ರಗಳ ಮೇಲೆ ಅವರು ಕಣ್ಣಿಟ್ಟಿದ್ದರು. ಮೇಲೆ ಹೇಳಿದ ಸಂಗೀತ ಪುಸ್ತಕದ ಪ್ರತಿಗಳು ಅವನಿಗೆ ಪ್ರತಿ ವಾರವೂ ಬರುತ್ತಿದ್ದುವು. ಈ ಎಲ್ಲಾ ಪ್ರತಿಗಳ ಫೋಟೋ ತೆಗೆದಿಡಲಾಗಿತ್ತು. ಅವುಗಳನ್ನು ಒಂದರೊಂದಿಗೆ ಹೋಲಿಸುವಾಗ, ಪ್ರತಿಯೊಂದು ಪ್ರತಿಯ ಶೀರ್ಷಿಕವು ಒಂದೇ ಆಗಿದ್ದರೂ ಸ್ವರ ಲಿಪಿಗಳಲ್ಲಿ ವ್ಯತ್ಯಾಸವಿದ್ದುದು ಕಂಡುಬಂದಿತು. ಆದ್ದರಿಂದಲೇ ಅವುಗಳಲ್ಲಿ ಏನೋ ಗುಪ್ತ ಸೂಚನೆಯಿದ್ದಿರಬೇಕೆಂಬ ಅನುಮಾನವುಂಟಾಯಿತು.

ಜರ್ಮನ ಗೂಢಚಾರರು ತಮ್ಮ ಗುಪ್ತ ಸಂದೇಶಗಳನ್ನು ಬರೆಯಲಿಕ್ಕೆ ಒಂದು ವಿಚಿತ್ರ ಶಾಯಿಯನ್ನು ಉಪಯೋಗಿಸುತ್ತಿದ್ದರು, ಆ ಶಾಯಿಯಲ್ಲಿ ಬರೆದ ಸಂದೇಶಗಳನ್ನು ಓದಬೇಕಾದವರು ಮಾತ್ರ ಓದಬಲ್ಲವರಾಗುತ್ತಿದ್ದರು. ಹೀಗೆ ಬೇರೆ ಬೇರೆ ಉಪಾಯಗಳಿಂದ ಜರ್ಮನ ಗೂಢಚಾರರು ಬಹಳ ಸಮಯದವರೆಗೆ ಗುಪ್ತ ಸಂದೇಶಗಳನ್ನು ಕಳುಹಿಸಿ ಕೊಡುತ್ತ ಇರುತ್ತಿದ್ದರು. ಕೆಲವರು ಶತ್ರುಪಕ್ಷಗಳ ಕೋಟೆ ಕೊತ್ತಳ, ವ್ಯೂಹ ರಚನಾದಿಗಳ ರಹಸ್ಯಗಳನ್ನು ಚಿತ್ರ ಲಿಪಿಯ ಮೂಲಕ ಕಳುಹಿಸುತ್ತಿದ್ದರು. ಈ ಚಿತ್ರಲಿಪಿಯ ರಹಸ್ಯವನ್ನು ತಿಳಿಯುವದು ಬಹು ಸೂಕ್ಷ್ಮ ಬುದ್ಧಿಯವರಿಗೂ ಅಸಾಧ್ಯವೆನ್ನಿಸುತ್ತಿತ್ತು.

ರಷ್ಯನರ ಕೆಲವು ಪ್ರಯತ್ನಗಳು

ಸೋವಿಯೆಟ್ ರಷ್ಯದ ಗೂಢಚಾರರು ತಮ್ಮ ಸಂದೇಶಗಳನ್ನು ಕಳುಹಿಸುತ್ತಿದ್ದುದಾಗಿ ತಿಳಿದುಬಂದಿದೆ. ಈ ಮೊಟ್ಟೆಗಳನ್ನು ಇತರ ಸಾಧಾರಣ ಮೊಟ್ಟೆಗಳೊಂದಿಗೆ ಬೆರಸಿ, ಮೊಟ್ಟೆ ಮಾರುವವರ ಮೂಲಕ, ವಿಳಾಸದಾರರಿಗೆ ಕಳುಹಿಸಿಕೊಡಲಾಗುತ್ತಿದ್ದುವು. ಈಚೆಗೆ ನಡೆದ ಒಂದು ಘಟನೆಯು ಈ ಪ್ರಕಾರವಿದೆ. ಗೂಢಚಾರರು ಕಳುಹಿಸಿದ ಕೆಲವು ಬೇಯಿಸಿದ ಮೊಟ್ಟೆಗಳನ್ನು ಒಡೆಯಲಾಗಿ ಆ ಮೊಟ್ಟೆಗಳ ಬಿಳಿ ಪದಾರ್ಥದ ಮೇಲೆ ಬೂದು ಬಣ್ಣದ ಕೆಲವು ಅಕ್ಷರಗಳು ಸ್ಪಷ್ಟವಾಗಿ ತೋರಿಬಂದುವು. ಸಕ್ಕರೆ ಬೆರಸಿದ ಪಟಿಕಾರದ ಒಂದು ನೀರಿನಿಂದ ಮೊಟ್ಟೆಗಳ ಮೇಲೆ ಬರೆದರೆ, ಬರೆದ ಅಕ್ಷರಗಳು ಮೊಟ್ಟೆಗಳ ಮೇಲ್ಭಾಗದಲ್ಲಿ ಕಾಣಿಸಿಕೊಳ್ಳುವದಿಲ್ಲ; ಆದರೆ ಅಂತರ್ಭಾಗದಲ್ಲಿ ಚೆನ್ನಾಗಿ ಮೂಡುತ್ತವೆಂಬುದು ಮತ್ತೆ ಶೋಧನೆಯಿಂದ ತಿಳಿಯಿತು.

ಒಂದು ಬಾರಿ ಶತ್ರುಪಕ್ಷದ ಒಬ್ಬ ಗೂಢಚಾರನು ಇಂಗ್ಲಾಂಡಿಗೆ ಕಳುಹಿಸಲ್ಪಟ್ಟನು. ಅವನ ಹತ್ತಿರ ಟಪ್ಪಾಲು ಚೀಟುಗಳ ಒಂದು ಸಂಗ್ರಹವಲ್ಲದೆ, ಸೈನ್ಯದ ವಿಭಾಗದವರು ಸಂದೇಹಪಡಬಹುದಾದ ಬೇರೆ ಯಾವ ವಸ್ತು ಒಡವೆಗಳೂ ಇದ್ದಿರಲಿಲ್ಲ. ಆದರೆ ಆ ಸಂಗ್ರಹದೊಳಗಿನ ಟಪ್ಪಾಲು ಚೀಟುಗಳು ಬಹು ಮಹತ್ವದವುಗಳಾಗಿದ್ದುವು. ಬ್ರಿಟನಿನ ಯಾವ ಬಂದರಿನಿಂದ ಯಾವ ಜಾತಿಯ ಟಪ್ಪಾಲುಚೀಟನ್ನು ವಿಳಾಸದಾರರಿಗೆ ಕಳುಹಿಸಿಕೊಡಲಾಗುತ್ತಿತ್ತೋ, ಆ ದಿನ, ಆ ಬಂದರಿನಲ್ಲಿ ಅಷ್ಟೇ ಸಂಖ್ಯೆಯ ಹಡಗುಗಳು ಇದ್ದುವೆಂಬ ಸೂಚನೆಯು ವಿಳಾಸದಾರನಿಗೆ ಸಿಕ್ಕುತಿತ್ತು. ಉದಾಹರಣೆಗಾಗಿ ಲೀವರ್‌ಪೂಲ್ ಬಂದರದಿಂದ ಒಂದನೇ ತಾರೀಕಿನ ದಿನ ಮೂರು ಮೊಂಟೆ ನಿಗ್ರೋ ಚೀಟುಗಳು, ಎರಡು ಮೋಲು ಪ್ರದೇಶದ ಚೀಟುಗಳು ಮತ್ತು ನಾಲ್ಕು ಚಿಲಿದೇಶದ ಚೀಟುಗಳನ್ನು ಕಳುಹಿಸಿದ್ದಾರೆ, ಲೀವರ್‌ಪೂಲ್ ಬಂದರಿನಲ್ಲಿ ಒಂದನೇ ತಾರೀಕಿನ ದಿನ ಮೂರು ಯುದ್ಧನಾವೆಗಳು, ಎರಡು ಕ್ರೂಜರುಗಳು ಮತ್ತು ನಾಲ್ಕು ಯುದ್ಧವಿಮಾನಗಳು ಇದ್ದುವೆಂಬರ್ಥದ ಬೋಧವಾಗುತ್ತಿತ್ತು. ಯಾರಿಗೂ ತಿಳಿಯದಂತೆ ಒಂದು ವಿಶೇಷ ಪ್ರಕಾರದ ಅದ್ಭುತ ಅದೃಶ್ಯ ಬಣ್ಣದ ಕಿರಣಗಳ ಮೂಲಕವೂ ಸೂರ್ಯಪ್ರಕಾಶದಲ್ಲಿ ಸಂದೇಶಗಳನ್ನು ಕಳುಹಿಸಿಕೊಡಲಾಗುತ್ತಿತ್ತು. ಆ ಕಿರಣಗಳನ್ನು ಕೆಲವು ನೂರು ಮೈಲುಗಳ ದೂರದಿಂದ ಕೂಡ ಒಂದು ವಿಚಿತ್ರ ಗಾಜಿನ ಮೂಲಕ ಸಂಗ್ರಹಿಸಿ ಸಂದೇಶಗಳನ್ನು ತಿಳಿಯುತ್ತಿದ್ದರು. ಬಹಳ ಎತ್ತರದಲ್ಲಿ ಹಾರುವ ವಿಮಾನಗಳ ಮೂಲಕವೂ ಗುಪ್ತ ಕಿರಣಗಳಿಂದ ಗೂಢಚಾರರು ಸಂದೇಶಗಳನ್ನು ಕಳುಹಿಸಿ ಕೊಡಬಲ್ಲರು.

ವಿಚಿತ್ರ ಸಂಗತಿಗಳು

ಕೈಚೀಲ, ಕಾಲುಚೀಲ, ಗವಸು ಮೊದಲಾದುವುಗಳಲ್ಲಿ ವಿಚಿತ್ರ ಪ್ರಕಾರ ಚಿತ್ರಬಲೆಗಳ ಕೆಲಸಮಾಡಿ ಗೂಢಚಾರರು ಗುಪ್ತಸಂದೇಶಗಳನ್ನು ಕಳುಹಿಸಿಕೊಡುತ್ತಿರುತ್ತಾರೆ. ಕಳೆದ ಮಹಾಯುದ್ಧ ಕಾಲದಲ್ಲಿ ಒಬ್ಬ ಗೂಢಚಾರ ಮಹಿಳೆಯು ತನ್ನ ಕೆಲಸಕಾರ್ಯಗಳನ್ನು ಸಾಧಿಸಿಕೊಳ್ಳುತ್ತಿದ್ದಳು.

ಜಪಾನು ಮಂಚೂರಿಯವನ್ನು ಆಕ್ರಮಿಸಿದ ಸಂಬಂಧ ರಾಷ್ಟ್ರಸಂಘದ ಅಧಿವೇಶನದಲ್ಲಿ ಚರ್ಚೆಯಾಗುತ್ತಿದ್ದಾಗ ಜಪಾನೀ ಗೂಢಚಾರರು ಹೋಟೇಲು ನೌಕರರಿಗೆ ತುಂಬಾ ಲಂಚ ಕೊಟ್ಟು, ಜಿನೇವಕ್ಕೆ ಬಂದಿದ್ದ ಜನಾಂಗ ಸಂಘದ ಪ್ರತಿನಿಧಿಗಳು ಬಿಸಾಡಿದ ಕಾಗದಚೂರುಗಳನ್ನು ಸಂಪಾದಿಸಿ ಜೋಡಿಸಿ, ಅವುಗಳಲ್ಲಿ ಬರೆದು ಇದ್ದ ಸಾಂಕೇತಿಕ ಲಿಪಿಯಿಂದ ತುಂಬಾ ಪ್ರಯೋಜನ ಪಡೆದಿದ್ದರು.

ಒಂದು ರಾಷ್ಟ್ರವು ಬಂದೂಕಿನ ತೋಟೆಗಳಲ್ಲಿ ವಿಷಕೀಟಾಣುಗಳನ್ನು ಸೇರಿಸಿ ಶತ್ರುರಾಷ್ಟ್ರಗಳಿಗೆ ಕಳುಹಿಸಿಕೊಡುತ್ತಲಿತ್ತು. ಒಂದೇ ಒಂದು ತೋಟೆಯನ್ನು ಸುಡುವದರಿಂದ ನೂರಾರು ಜೀವಿಗಳನ್ನು ಸಾಯಬೀಳಿಸುವ ಅದೊಂದು ಉಪಾಯವಾಗಿತ್ತು. ಹಾಗೆಯೇ ಮಹಾಯುದ್ಧ ಕಾಲದಲ್ಲಿ ಫೌಂಟನ್ ಪೆನ್ನುಗಳ ಮೂಲಕ ವಾಂತಿಭೇದಿಯ ಕೀಟಾಣುಗಳನ್ನು ಕಳುಹಿಸಿದ್ದರು. ಅಂಥ ಒಂದೇ ಒಂದು ಪೆನ್ನನ್ನು ಉಪಯೋಗಿಸಿದ್ದಾದರೆ ಊರಿಗೆ ಊರೇ ವಾಂತಿಭೇದಿಯಿಂದ ಮಣ್ಣುಪಾಲಾಗುತ್ತಿತ್ತು. ಆದರೆ ಗೂಢಚಾರರ ವೈಜ್ಞಾನಿಕ ಉಪಾಯಗಳಿಂದ ಈ ಪ್ರಯತ್ನಗಳು ನಿಷ್ಫಲವಾದುವು.

ಗೂಢಚಾರರು ಇದೊಂದು ಉಪಾಯದಿಂದಲೂ ಗುಪ್ತಸಂದೇಶಗಳನ್ನು ಬರೆದು ಕಳುಹಿಸುತ್ತಿದ್ದರೆಂದು ಈಗ ಪ್ರಕಟವಾಗಿದೆ. ಎಸ್ಪಿರಿನ ಗುಳಿಗೆಗಳನ್ನು ನೀರಿನಲ್ಲಿ ಬಿಡುವದರಿಂದ ಆ ನೀರು ವಿಚಿತ್ರ ಪ್ರಕಾರದ ಶಾಯಿಯಾಗುತ್ತದೆ. ಅದರಿಂದ ಕಾಗದದ ಮೇಲೆ ಬರೆದ ಅಕ್ಷರಗಳು ಕಾಣುವದಿಲ್ಲ. ಆದರೆ ಆದೇ ಕಾಗದವನ್ನು ಇನ್ನೊಂದು ರಾಸಾಯನಿಕ ದ್ರಾವಕದಲ್ಲಿ ಮುಳುಗಿಸಿದಾಗ ಅಕ್ಷರಗಳು ಸ್ಪಷ್ಟವಾಗಿ ಎದ್ದು ಬರುತ್ತವೆ. ಗೂಢಚಾರರು ಇಂಥ ದ್ರಾವಕವನ್ನು ಉಪಯೋಗಿಸುವರು. ಇಂಥ ಉಪಾಯಗಳು ಆಧುನಿಕ ಗೂಢಚಾರರಿಗೆ ಸರ್ವಸಾಧಾರಣ ಮತ್ತು ಮಕ್ಕಳ ಆಟದಂತೆ ಇರುವವು. ಅವರು ಕೈಕೊಳ್ಳುವ ಇತರ ಮಹತ್ವದ ಉಪಾಯಗಳ ರಹಸ್ಯಗಳನ್ನು ತಿಳಕೊಳ್ಳಲಿಕ್ಕೆ ಭಗೀರಥ ಪ್ರಯತ್ನಗಳನ್ನು ಮಾಡಿದ್ದಾದರೂ, ಅವು ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗಿದೆ.

«ವಿಶ್ವಮಿತ್ರ»

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಟಾಗುವ ಬಳಲಿಕೆ, ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವೀರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ (ರಿ)

ಸ್ತ್ರೀಪುರುಷರು ವಯೋಭೇಧವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:
ಆಯುರ್ವೇದಾಶ್ರಮ : : ಮದರಾಸು

ಸ್ಟಾಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS.

For 2 Years 5% 1 Year 4½% For 6 months 4% 3 months 3½%

Auction Chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—K. R. GURU, *Managing Director*

ಪ್ರಜಾಸತ್ತೆ ಮತ್ತು ಸರ್ವಾಧಿಕಾರಿತ್ವ

ಭಿನ್ನ ಭಿನ್ನ ದೇಶಕಾಲ ಪರಿಸ್ಥಿತಿಗಳಿಗೆ

ಎರಡೂ - - - - ಯೋಗ್ಯ!

> ಜರ್ಮನಿ, ಇಟಲಿ, ರಷ್ಯ, ಟರ್ಕಿಗಳಲ್ಲಿ ಸರ್ವಾಧಿಕಾರತ್ವವಿದೆ. ಇಂಗ್ಲೆಂಡ, ಫ್ರಾನ್ಸ, ಅಮೇರಿಕಗಳಲ್ಲಿ ಪ್ರಜಾಪ್ರಭುತ್ವವಿದೆ. ಅದೇಕೆ ಹಾಗೆ? ಸರ್ವಾಧಿಕಾರತ್ವವಿರುವಲ್ಲಿ, ಪ್ರಜಾಪ್ರಭುತ್ವ ಯಾಕೆ ಉಂಟಾಗಬಾರದು? ಪ್ರಜಾಸತ್ತೆ ಇರುವ ರಾಷ್ಟ್ರಗಳಲ್ಲಿ ಸರ್ವಾಧಿಕಾರತ್ವವು ಯಾಕೆ ಬರಕೂಡದು? ಶ್ರೀ ಧರ್ಮವೀರ ವೋರಾರವರು 'ಟ್ವೆಂಟಿಯತ್ ಸೆಂಚುರಿ'ಯಲ್ಲಿ ಒಂದು ಲೇಖನವನ್ನು ಬರೆದು, ಈ ಪ್ರಶ್ನೆಗಳನ್ನು ಉತ್ತರಿಸುತ್ತಾ ಭಿನ್ನ ಭಿನ್ನ ದೇಶ ಕಾಲ ಪರಿಸ್ಥಿತಿಗಳಲ್ಲಿ ಎರಡೂ ಸರಕಾರ ಪದ್ಧತಿಗಳು ಯೋಗ್ಯ ಮತ್ತು ಆವಶ್ಯಕವೆಂಬುದನ್ನು ದೃಷ್ಟಾಂತಗಳನ್ನು ಕೊಟ್ಟು ವಿವರಿಸಿದ್ದಾರೆ. ಆ ಲೇಖನದ ಸಾರಾಂಶವನ್ನು ಇಲ್ಲಿ ಕೊಟ್ಟಿರುತ್ತದೆ.

ಸರ್ವಾಧಿಕಾರತ್ವವಿರುವ ಎಲ್ಲಾ ರಾಷ್ಟ್ರಗಳ ಸರಕಾರಗಳನ್ನು ತಿರಸ್ಕಾರ ಮತ್ತು ತಾತ್ಸಾರ ದೃಷ್ಟಿಯಿಂದ ಕಾಣುವುದು ಈಗ ಪ್ರಜಾಪ್ರಭುತ್ವವಿರುವ ರಾಷ್ಟ್ರಗಳ ಲೋಕ ರೂಢಿಯಾಗಿ ಹೋಗಿದೆ. ಸರ್ವಾಧಿಕಾರಿಗಳು ಅತ್ಯಾಚಾರಿ ರಾಕ್ಷಸರೆಂದೂ, ಅವರು ತಮ್ಮ ಪಶು ಬಲದ ಮೂಲಕ ಜನರನ್ನು ಹಿಂಸಿಸಿ, ಆಳುತ್ತಿರುವರೆಂದೂ ಸಾಮಾನ್ಯವಾಗಿ ಊಹಿಸುವಂತಿದೆ. ಅದೇ ಪ್ರಕಾರ ಪ್ರಜಾಪ್ರಭುತ್ವವೆಂದರೆ, ಅದು ನಿರ್ದೋಷವಾದದ್ದು ಮತ್ತು ಸರ್ವಗುಣ ಸಂಪನ್ನವಾದದ್ದು ಎಂದು ಜನರು ತಿಳಿಯುತ್ತಾರೆ.

ಆದರೆ ಇದು ಯಥಾರ್ಥವಾದ ಅಭಿಪ್ರಾಯವಾಗಿರುವುದಿಲ್ಲ. ಸರ್ವಾಧಿಕಾರತ್ವವು ಸಂಪೂರ್ಣ ದೋಷಮಯವಾದದ್ದೂ ಅಲ್ಲ, ಪ್ರಜಾಪ್ರಭುತ್ವವು ಪೂರ್ಣ ನಿರ್ದೋಷವಾದದ್ದೂ ಅಲ್ಲ. ಒಂದರೊಡನೊಂದು ಸ್ಪರ್ಧೆಗೆ ನಿಂತಿರುವ ಅವು ಎರಡು ಸ್ವತಂತ್ರ ಬೇರೆ ಬೇರೆ ಸರಕಾರ ಪದ್ಧತಿಗಳಾಗಿರುವುದೂ ಇಲ್ಲ. ಪ್ರಜಾಪ್ರಭುತ್ವವು ಸಫಲವಾಗಬೇಕಾದರೆ ಅದಕ್ಕೆ ಅನುಕೂಲ ವಾತಾವರಣವು ಬೇಕು. ಇಲ್ಲದಲ್ಲಿ ಅದ ಫಲಿತಕ್ಕೆ ಒದಗುವುದಿಲ್ಲ.

ಪ್ರಜಾಪ್ರಭುತ್ವದ ಸಫಲತೆ

ಎಂಥ ವರ್ಣ ಮತ್ತು ಗೌರವವನ್ನು ಕೊಟ್ಟಿದ್ದಾದರೂ ಪ್ರಜಾಪ್ರಭುತ್ವದ ಬೀಜವು ಅಂಕುರ ಒಡೆದು ಸಸಿಯಾಗಿ, ಮರವಾಗಿ ಬೆಳೆಯಬಾರದು. ಪ್ರಜಾಪ್ರಭುತ್ವದ ಬೀಜವು ಒಡೆದು, ಅದರೊಳಗಿಂದ ಲಹಲಹಿಸಿ ಬೆಳೆಯುವ ಮರವು ಏಳಬೇಕಾದರೆ, ಅದಕ್ಕಾಗಿ ಮೊದಲು ಕೆಲವು ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಅಗತ್ಯವಾಗಿದೆ. ಮೊದಲಾಗಿ ಅನೇಕ ತಲೆಗಳಿಂದ ರಾಜಕೀಯ ಕ್ಷೇತ್ರದಲ್ಲಿ ದುಡಿದು ಪ್ರತ್ಯಕ್ಷ ಅನುಭವವನ್ನು ಪಡೆದ ಪಾರ್ಟಿಗಳಿರಬೇಕು. ತತ್ವನಿಷ್ಠೆಯನ್ನು ತೋರಿಸದೆ ಬರೇ ಸ್ವಾರ್ಥಸಾಧನೆಗಾಗಿ ಒಟ್ಟು ಸೇರಿದ ವ್ಯಕ್ತಿಸಮೂಹವು ಪಾರ್ಟಿಯೆನ್ನಿಸಿಕೊಳ್ಳಲಾರದು. ಅಂಥ ಪಾರ್ಟಿಗಳಿಂದ ಪ್ರಜಾಪ್ರಭುತ್ವವು ಸಫಲವಾಗುವುದಿಲ್ಲ. ಇಂಥ ತತ್ವನಿಷ್ಠೆ ಮತ್ತು ವ್ಯವಹಾರಿಕ ಜ್ಞಾನ ಮತ್ತು ಅನುಭವಗಳ ಅಭಾವವಿದ್ದುದರಿಂದಲೇ ಕಳೆದ ಮಹಾಯುದ್ಧಾನಂತರ ಉಂಟಾದ ಯೂರೋಪಿನ ಅನೇಕ ಪ್ರಜಾಪ್ರಭುತ್ವಗಳು ಈಗ ಮಣ್ಣುಪಾಲಾಗಿವೆ. ಯುರೋಪಿನ ಯುದ್ಧಾನಂತರ ಪ್ರಜಾಪ್ರಭುತ್ವಗಳ ಮಾತು ಹಾಗಿರಲಿ, ಅಮೇರಿಕದಲ್ಲಿ ಕೂಡ ಪ್ರಜಾಪ್ರಭುತ್ವವು ಪೂರ್ಣ ಫಲವನ್ನು ಕೊಟ್ಟಿರುವುದಿಲ್ಲ. ಅಮೇರಿಕದಲ್ಲಿ ಪ್ರಜಾಪ್ರಭುತ್ವವು ಸ್ಥಾಪಿತವಾಗಿ ಮೂರು ಶತಮಾನಗಳು ಕಳೆದುಹೋದುವಾದರೂ, ಅದಕ್ಕೆ ಬ್ರಿಟನ ಫ್ರಾನ್ಸಗಳ ಪ್ರಜಾಪ್ರಭುತ್ವಗಳಿಗೆ ಪ್ರಾಪ್ತವಾದ ಉಚ್ಚ ಸ್ಥಾನಮಾನಗಳು ಎಂದೂ ದೊರೆಯಲಾರವು.

ಪ್ರಜಾಪ್ರಭುತ್ವವು ಸಫಲವಾಗಬೇಕಾದರೆ ಅದರಲ್ಲಿ ಸೇರಿದ್ದ ಪಾರ್ಟಿಗಳು ಪ್ರಜಾಪ್ರಭುತ್ವ ಸರಕಾರ ಕ್ರಮವನ್ನು ನಿಸ್ಸಂಕೋಚವಾಗಿ ಒಪ್ಪಿ, ಅದರ ರಕ್ಷಣೆಗೆ ತಮ್ಮ ಸರ್ವಸ್ವವನ್ನು ಬಲಿಕೊಡಲು ಸಿದ್ಧರಿರಬೇಕು. ಪ್ರಮುಖ್ಯ ವಿಷಯಗಳ ಕುರಿತು ಎಲ್ಲ ಪಾರ್ಟಿಗಳ ಒಮ್ಮತವಿದ್ದು, ಗೌಣ ವಿಷಯಗಳಲ್ಲಿ ಮಾತ್ರ ಅವು ಭಿನ್ನಾಭಿಪ್ರಾಯಗಳನ್ನಿಟ್ಟುಕೊಳ್ಳುವುವಾದರೆ, ಅಧಿಕಾರಾರೂಢವಾದ ಒಂದು ಪಾರ್ಟಿಯು ಪದಚ್ಯುತವಾಗಿ, ಇನ್ನೊಂದು ಅಧಿಕಾರಕ್ಕೆ ಬರುವಾಗ ಸರ್ವತ್ರ ಅನಾಯಕತ್ವವೇ ಕಂಡು ಬರಬಹುದು.

ಮೂರನೆಯದಾಗಿ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ರಾಷ್ಟ್ರದ ಸಂಸ್ಕೃತಿ ಮತ್ತು ವಿಚಾರ ಪ್ರವಾಹವು ಒಂದೇಯಾಗಿರುವುದು ಅಗತ್ಯ. ಭಿನ್ನ ಭಿನ್ನ ಸಂಸ್ಕೃತಿ ಮತ್ತು ವಿಚಾರ ಪ್ರವಾಹವುಳ್ಳ ಬೇರೆ ಬೇರೆ ಪಾರ್ಟಿಗಳು ಸ್ನೇಹದಿಂದ ಪ್ರಜಾಪ್ರಭುತ್ವ ಸರಕಾರವನ್ನು ನಡೆಸುವುದು ಸಾಧ್ಯವಿಲ್ಲ. ಅಂಥ ಸಂದರ್ಭದಲ್ಲಿ ಭಿನ್ನ ಭಿನ್ನ ಸಂಸ್ಕೃತಿ ಮತ್ತು ವಿಚಾರವುಳ್ಳ ಪಂಗಡಗಳೊಳಗೆ ಸಂಘರ್ಷವುಂಟಾಗುವುದು ಅವಶ್ಯಂಭಾವಿಯಾಗಿದೆ. ಯಾಕೆಂದರೆ ಆ ಪಾರ್ಟಿಗಳ ಸ್ವಾರ್ಥವು ಒಂದರಿಂದೊಂದು ತೀರಾ ಬೇರೆಯಾಗಿರುವುದು. ಪ್ರಜಾಪ್ರಭುತ್ವವು ಸಫಲವಾಗಬೇಕಾದರೆ ಸರಕಾರಕ್ಕೆ ಜಾತೀಯ ಮತ್ತು ಪಕ್ಷೀಯ ಸಂಕುಚಿತ ದೃಷ್ಟಿ ಇರುವುದಕ್ಕಿಂತ ರಾಷ್ಟ್ರೀಯ ಮತ್ತು ಸಾಮಾಜಿಕ ವಿಶಾಲ ದೃಷ್ಟಿಯಿರಬೇಕು. ಸಾಂಸ್ಕೃತಿಕ ಭಿನ್ನತೆಯಿರುವ ಪಾರ್ಟಿಗಳಿಗೆ ಈ ವಿಶಾಲ ದೃಷ್ಟಿಯು ಬರುವುದು ಅಸಂಭವವಾಗಿದೆ. ಅಲ್ಲವಾದರೆ ಅಧಿಕಾರಾರೂಢವಾದ ಪಾರ್ಟಿಯು ಪ್ರಾಮುಖ್ಯ ವಿಚಾರಗಳನ್ನು ಮೂಲೆಗೊತ್ತಿ ಅಮುಖ್ಯ ವಿಚಾರಗಳಲ್ಲಿಯೇ ದಿನ ಕಳೆಯಬೇಕಾಗುವುದು. ಇಂಥ ಪಾರ್ಟಿಯು ಬಹು ದಿನಗಳ ತನಕ ಅಧಿಕಾರದಲ್ಲಿರಲಾರದು.

ಬ್ರಿಟನು ಫ್ರಾನ್ಸುಗಳ ಉಚ್ಚತೆಯ ಕಾರಣ

ಪ್ರಜಾಪ್ರಭುತ್ವ ಸರಕಾರಗಳ ಸಫಲತೆಗೆ ಬ್ರಿಟನು ಫ್ರಾನ್ಸುಗಳು ಉತ್ತಮ ನಿದರ್ಶನಗಳಾಗಿವೆ. ಆದರೆ ಯುದ್ಧಾನಂತರದ ಯೂರೋಪಿನ ಪ್ರಜಾಪ್ರಭುತ್ವಗಳಲ್ಲಿ ಪ್ರಾರಂಭದಿಂದಿದ್ದ ದೋಷಗಳು ಯಾವುವೂ ಬ್ರಿಟನು ಫ್ರಾನ್ಸಗಳ ಪ್ರಜಾಪ್ರಭುತ್ವಗಳಲ್ಲಿರಲಿಲ್ಲ. ಪ್ರಾಕೃತಿಕ ಸನ್ನಿವೇಶ ಮತ್ತು ಕ್ರಮಾನುಗತವಾದ ವಿಕಾಸವಾಗಿ ಬ್ರಿಟನು ಫ್ರಾನ್ಸು ಪ್ರಜಾಪ್ರಭುತ್ವಗಳಿಗೆ ಈಗಿನ ಉಚ್ಚ ಸ್ಥಾನಮಾನಗಳು ಪ್ರಾಪ್ತವಾಗಿವೆ. ಈ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವಗಳು ಸ್ಥಾಪಿತವಾಗಿ ಶತಮಾನಗಳು ಕಳೆದುವು. ಅವು ಒಂದೇ ದಿನ ಒಂದೇ ಮುಹೂರ್ತದಲ್ಲಿ ಸ್ಥಾಪಿತವಾಗಲಿಲ್ಲ. ಒಂದೊಂದೇ ತರಗತಿಯಲ್ಲಿ ಅಭ್ಯಾಸನಡೆಸಿ ಸಫಲನಾಗಿ ದೊಡ್ಡ ಪರೀಕ್ಷೆಯಲ್ಲಿ ಕೃತಾರ್ಥನಾದ ವಿದ್ಯಾರ್ಥಿಯಂತೆ ಈ ರಾಷ್ಟ್ರಗಳು ಸಫಲಸಾಧನೆಯ ಮೂಲಕ ಉಚ್ಚಸ್ಥಾನಕ್ಕೆ ಬಂದಿವೆ. ಬ್ರಿಟನಿನಲ್ಲಿ ಲೇಬರ್ ಪಾರ್ಟಿ ಇರುವುದಾದರೂ, ಅದು ಕ್ರಾಂತಿಯ ಮೂಲಕ ತನ್ನ ಉದ್ದೇಶವನ್ನು ಸಾಧಿಸುವ ಇಚ್ಛೆ ಉಳ್ಳದ್ದಾಗಿಲ್ಲ. ಪ್ರಪಂಚದ ಸಮಾಜವಾದಿಗಳು ಕ್ರಾಂತಿಯ ಮೂಲಕ ಆರ್ಥಿಕ ಮತ್ತು ಸಾಮಾಜಿಕ ವಿಷಮತೆಯನ್ನು ಸಮೂಲ ನಷ್ಟಮಾಡಬೇಕೆಂಬ ಧೋರಣೆವುಳ್ಳವರಾಗಿದ್ದಾರಾದರೂ, ಬ್ರಿಟನಿನ ಸಮಾಜವಾದಿಗಳು, ಪ್ರಜಾಪ್ರಭುತ್ವವನ್ನು ಒಪ್ಪಿ, ಪಾರ್ಲಿಮೆಂಟರಿ ಕಾರ್ಯಕ್ರಮದ ಮೂಲಕವೇ ಸಮಾಜವಾದಿಗಳ ಉದ್ದೇಶವನ್ನು ಸಾಧಿಸುವ ಇಚ್ಛೆಯಿಂದಿದೆ. ಅಲ್ಲವಾದರೆ ಬ್ರಿಟನಿನಲ್ಲಿ ಪ್ರಜಾಪ್ರಭುತ್ವವು ಎಂದೋ ಮಣ್ಣು ಮುಕ್ಕುತಿತ್ತು.

ಜರ್ಮನಿ ಇಟಲಿಗಳಲ್ಲಿ ಸರ್ವಾಧಿಕಾರಿಗಳೇಕೆ?

ಈಗ ಜರ್ಮನಿ ಇಟಲಿ ಮೊದಲಾದ ಕೆಲವು ರಾಷ್ಟ್ರಗಳಲ್ಲಿ ಸರ್ವಾಧಿಕಾರಿಗಳು ಯಾಕೆ ಇದ್ದಾರೆಂಬುದನ್ನು ತಿಳಕೊಳ್ಳಬಹುದು. ಈ ರಾಷ್ಟ್ರಗಳ ರಾಜಕೀಯ ಪಾರ್ಟಿ ಪಂಗಡಗಳಿಗೆ ಪ್ರಜಾಪ್ರಭುತ್ವ ಸರಕಾರ ಕ್ರಮವನ್ನು ಅನುಸರಿಸುವ ಯೋಗ್ಯತೆ ಮತ್ತು ಅನುಭವಗಳಿದ್ದಿರಲಿಲ್ಲ. ಆ ರಾಷ್ಟ್ರಗಳ ತಾತ್ಕಾಲೀಕ ಸರಕಾರಗಳು ದುರ್ಬಲವಾಗಿದ್ದುವು. ಅವು ಆ ರಾಷ್ಟ್ರಗಳ ಎಲ್ಲಾ ಪಾರ್ಟಿಗಳ ಗೌರವ ಆದರಗಳಿಗೆ ಪಾತ್ರವಾಗಿರಲಿಲ್ಲ. ಎಲ್ಲರನ್ನು ಸಂತೋಷಪಡಿಸಲಿಕ್ಕೆ ಮಾಡಿದ ತುಚ್ಛ ಪ್ರಯತ್ನ ಮತ್ತು ವರ್ಸಲೆ ಒಪ್ಪಂದದಿಂದ ಉಂಟಾದ ಅತೃಪ್ತಿಯ ದೆಸೆಯಿಂದಾಗಿ ಆ ರಾಷ್ಟ್ರಗಳ ರಾಜಕೀಯ ವಾತಾವರಣವು ಬಹಳ ಪ್ರಕ್ಷುಬ್ಧವಾಗಿತ್ತು. ಆದ್ದರಿಂದ ಈ ಸಂದರ್ಭದಲ್ಲಿ ರಾಷ್ಟ್ರದ ಸ್ಥಿತಿಗತಿಗಳನ್ನು ಸುಧಾರಿಸುವ ಕಾರ್ಯಕ್ರಮದ ಬಿಡಾರ ಕಟ್ಟಿಕೊಳ್ಳುವ ಯಾವ ಪಾರ್ಟಿಗಾದರೂ ಜನತೆಯ ಸಹಾಯ ಸಹಾನುಭೂತಿಗಳು ಸುಲಭದಲ್ಲಿ ದೊರೆಯುತ್ತಿದ್ದುವು. ಆದರೆ ಈ ರಾಷ್ಟ್ರಗಳ ಸಮಾಜವಾದಿಗಳು ಆಗ ಸುಸಂಘಟಿತರಾಗಿ ಇಲ್ಲದುದರಿಂದ, ಅವರು ಅಧಿಕಾರಕ್ಕೆ ಬರುವ ಈ ಅನುಕೂಲ ಸಂದರ್ಭದ ಸದುಪಯೋಗ ಮಾಡಿಕೊಳ್ಳಲಾರದೆ ಹೋದರು. ಪರಂತು ಭಂಡವಾಳಿಗರಿಗೆ ಎಲ್ಲಾ ಅನುಕೂಲವಾಗಿದ್ದುದರಿಂದ ಅವರು ಅತೃಪ್ತ ಮತ್ತು ಅಸಂತುಷ್ಟ ಎಲ್ಲರನ್ನು ತಮ್ಮೊಳಗೆ ಸೇರಿಸಿಕೊಂಡು ಅಧಿಕಾರಕ್ಕೆ ಬಂದರು. ಅದೇ ಈ ರಾಷ್ಟ್ರಗಳಲ್ಲಿ ಸರ್ವಾಧಿಕಾರತ್ವದ ಸ್ಥಾಪನೆಗೆ ಕಾರಣವಾಯಿತು.

ಆದರೆ ಬ್ರಿಟನ ಫ್ರಾನ್ಸುಗಳ ಮಾತು ಹಾಗಿರಲಿಲ್ಲ. ಅಲ್ಲಿ ನಿಜವಾದ ಒಂದು ಸಮಾಜವಾದಿ ಪಂಗಡದ ಪ್ರಾದುರ್ಭಾವಕ್ಕೆ ಅವಕಾಶವಿದ್ದಿರಲಿಲ್ಲ. ವರ್ಸಲೆ ಒಪ್ಪಂದವು ಈ ರಾಷ್ಟ್ರಗಳಿಗೆ ಜಗತ್ತಿನ ವ್ಯಾಪಾರದಲ್ಲಿ ಅನುಕೂಲಸ್ಥಾನವನ್ನು ಕಲ್ಪಿಸಿಕೊಟ್ಟಿತ್ತು. ಯುದ್ಧ ಮೂಲಕ ಉಂಟಾದ ನಷ್ಟವನ್ನು ಅವರು ಸುಲಭದಲ್ಲಿ ಭರ್ತಿಮಾಡಿಕೊಳ್ಳಲಿಕ್ಕೆ ಸಮರ್ಥರಾದರು. ಅನಂತರ ಆರ್ಥಿಕ ಮುಗ್ಗಟ್ಟು ಉಂಟಾದರೂ, ಸದ್ಯದಲ್ಲೇ ಆ ದುಸ್ಥಿತಿಯಿಂದ ಪಾರಾಗಬಹುದೆಂಬ ಆಶೆಯು ಕ್ರಾಂತಿಯನ್ನುಂಟುಮಾಡಲಿಲ್ಲ. ಮತ್ತು ಆ ಕಷ್ಟಕಾಲದಲ್ಲಿ ಕೂಡ, ಈ ರಾಷ್ಟ್ರಗಳ ಸ್ಥಿತಿಗತಿಗಳು ಜರ್ಮನಿ, ಇಟಲಿಗಳ ಜನರ ಸ್ಥಿತಿಗತಿಗಳಷ್ಟು ಕೆಟ್ಟುಹೋಗಿರಲಿಲ್ಲ. ಆದ್ದರಿಂದ ಬ್ರಿಟನ ಫ್ರಾನ್ಸಗಳ ಪ್ರಜಾಪ್ರಭುತ್ವಗಳಿಗೆ ಈ ಆಪತ್ತಿನಿಂದ ಏನೂ ಕ್ಷತಿಯುಂಟಾಗಲಿಲ್ಲ.

ಬ್ರಿಟನ ಫ್ರಾನ್ಸುಗಳಲ್ಲಿಯೂ ಸರ್ವಾಧಿಕಾರವಿದೆ

ಬ್ರಿಟನು ಫ್ರಾನ್ಸುಗಳು ಪ್ರಜಾಪ್ರಭುತ್ವ ರಾಜ್ಯಗಳಾದರೂ, ಅವುಗಳಲ್ಲಿಯೂ ಕೂಡ ಒಂದು ಬಗೆಯ ಸರ್ವಾಧಿಕಾರವಿದ್ದಿರುವುದನ್ನು ಕಾಣಬಹುದು. ಇದರಿಂದಲೇ ಪ್ರಜಾಪ್ರಭುತ್ವ ಸರಕಾರ ಕ್ರಮವು ಪೂರ್ಣ ನಿರ್ದೋಷವಲ್ಲವೆಂದು ಗೊತ್ತಾಗುತ್ತದೆ. ಯುದ್ಧಕಾಲದಲ್ಲಿ ಬ್ರಿಟನಿನ ಪ್ರಜೆಗಳಿಗೆ ನಾಗರೀಕ ಹಕ್ಕು ಸ್ವಾತಂತ್ರ್ಯಗಳು ಇದ್ದಿರಲಿಲ್ಲ. ಅವುಗಳನ್ನೆಲ್ಲ ಕಿತ್ತುಕೊಂಡು ಬ್ರಿಟಿಷ ಸರಕಾರವು ಸರ್ವಾಧಿಕಾರವನ್ನು ನಡೆಸಿತ್ತು. ಗತಕಾಲದ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಅಮೇರಿಕದ ಪ್ರೆಸಿಡೆಂಟರಿಗೆ ಕೂಡ ಸರ್ವಾಧಿಕಾರಗಳು ಪ್ರಾಪ್ತವಾಗಿ ಇದ್ದುವು.

ಆದ್ದರಿಂದ ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರತ್ವಗಳು ಒಂದರೊಡನೊಂದು ಸ್ಪರ್ಧೆಗೆ ನಿಂತ ಎರಡು ಸ್ವತಂತ್ರ ಸರಕಾರ ಕ್ರಮಗಳಾಗಿ ಇರುವುದಿಲ್ಲ. ಬೇರೆ ಬೇರೆ ದೇಶಗಳ ಕಾಲ ಪರಿಸ್ಥಿತಿಗಳ ಆವಶ್ಯಕತೆಗಳನ್ನು ಪೂರೈಸಲಿಕ್ಕೆ ಅವೆರಡು ಪರಿಶೋಧನೆಗಳಷ್ಟೇ ಆಗಿವೆ. ಒಂದು ರಾಷ್ಟ್ರಕ್ಕೆ ಪ್ರಜಾಪ್ರಭುತ್ವವು ಪ್ರಯೋಜನಕಾರಿಯಾಗಿ ಪರಿಣಮಿಸುವುದಾದರೆ ಇನ್ನೊಂದಕ್ಕೆ ಸರ್ವಾಧಿಕಾರತ್ವವೇ ಉಪಯುಕ್ತವಾಗಬಹುದು. ಆದ್ದರಿಂದ ಒಂದರಿಂದ ಇನ್ನೊಂದನ್ನು ಉಚ್ಚ ಅಥವಾ ನೀಚವೆಂದು ತಿಳಿಯುವುದರಲ್ಲಿ ಅರ್ಥವಿಲ್ಲ. ಸ್ತ್ರೀ ಪುರುಷ ಎರಡು ಜಾತಿಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಉಚ್ಚ ಮತ್ತು ಮುಖ್ಯವಾಗಿ ಇರುವಂತೆ, ಇವೆರಡು ಸರಕಾರ ಕ್ರಮಗಳು ಭಿನ್ನ ಭಿನ್ನ ದೇಶ ಕಾಲ ಪರಿಸ್ಥಿತಿಗಳಲ್ಲಿ ಅವವುಗಳ ಸ್ಥಾನದಲ್ಲಿ ಒಂದೇ ಸಮನಾಗಿ ಉಚ್ಚ ಮತ್ತು ಮುಖ್ಯವಾಗಿ ಇರುವುವು.

THE

Bank of Mangalore Ltd.,

MANGALORE

ESTD 19[illegible]

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit** 3½% **on daily balances.

All kinds of banking business transacted

ಸಮಾಜ ಸಂಘಟನೆಯೂ ಸ್ತ್ರೀಪುರುಷರ ಸಹಕಾರವೂ

ಸ್ತ್ರೀಯರು ಪುರುಷರಿಗಿಂತ ಹಿಂದಾಗಿದ್ದಾರೆ. ಆದ್ದರಿಂದ ಸಮಾಜ ಸಂಘಟನೆಯು ಅಸಾಧ್ಯವಲ್ಲದಿದ್ದರೆ ಕಠಿನತರವಾಗಿದೆ. ಸ್ತ್ರೀಯರು ಹಿಂದಾಗಿರಲಿಕ್ಕೆ ಹತ್ತು ಹಲವು ಕಾರಣಗಳಿರಬಹುದು. ಪರಂತು ಗೃಹಕೃತ್ಯ, ಶಿಶು ಸಂಗೋಪನ ಇತ್ಯಾದಿ ಕೆಲಸಗಳ ಭಾರ ಮತ್ತು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳಿಂದ ವಂಚಿತರಾಗಿರುವುದು, ಅವರು ಹಿಂದುಳಿದಿರುವುದರ ಮುಖ್ಯ ಕಾರಣಗಳಾಗಿವೆ. ಪುರುಷರು ಸ್ತ್ರೀಯರೊಂದಿಗೆ ಸಹಕರಿಸಿ, ಅವರನ್ನು ಮುಂದಕ್ಕೆ ತರುವುದಾದರೆ ಸಮಾಜ ಸಂಘಟನೆಯು ಸುಲಭವಾಗುವುದೆಂಬುದು ಈ ಲೇಖದಲ್ಲಿ ಪ್ರತಿಪಾದಿಸಲ್ಪಟ್ಟಿರುತ್ತದೆ.

(ಲೇಖಕ: ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ ಕಾರ್ಕಳ)

ಸ್ತ್ರೀಯರು ಎಂದೆಂದಿನಿಂದ ಮಹತ್ವದ ಕಾರ್ಯಗಳನ್ನು ಮಾಡಿ ಬಂದಿದ್ದಾರೆ. ಸಮಾಜವು ಏನೂ ಸಂಘಟಿತವಾಗಿಲ್ಲದಿದ್ದ ಬಹು ಪುರಾತನ ಕಾಲದಲ್ಲಿ ಕೂಡ ಅವರು ಮಹತ್ವಪೂರ್ಣ ಕಾರ್ಯಗಳನ್ನು ಮಾಡಿ ಬಂದಿರುವರು. ಪ್ರಾಚೀನ ಕಾಲದಲ್ಲಿ—ವಿವಾಹಕ್ರಮದ ಆವಿಷ್ಕಾರವಾಗುವ ಮೊದಲು—ಸ್ತ್ರೀ ಪುರುಷ ಸಂಬಂಧವು ಸ್ವಾಭಾವಿಕವಾಗಿದ್ದಿತು. ಪಶುಪ್ರಾಣಿಗಳು ಕಾಮಾಚಾರದಿಂದ ಸಂತಾನೋತ್ಪತ್ತಿ ಮಾಡಿಕೊಳ್ಳುವಂತೆ ಆ ಕಾಲದಲ್ಲಿ ಸ್ತ್ರೀ ಪುರುಷರೂ ಕಾಮ ಭಾವನೆಯಿಂದ ಪ್ರೇರಿತರಾಗಿ ಸಂತಾನೋತ್ಪತ್ತಿ ಮಾಡಿಕೊಳ್ಳುತಿದ್ದರು. ಆಗ ವಿವಾಹಕ್ರಮವು ಇದ್ದಿಲ್ಲವೆಂಬುದರಿಂದ ಸ್ತ್ರೀಪುರುಷರು ವ್ಯಭಿಚಾರಿಗಳೂ ವಿಷಯ ಲಂಪಟರೂ ಆಗಿದ್ದರು ಎಂದು ತಿಳಿಯಕೂಡದು. ಪರಂತು ಆಗ ಅವರು ವಿವಾಹ ಧರ್ಮದಿಂದ ಬಂಧಿತರಾಗಿರಲಿಲ್ಲ. ಆದರೂ ಆ ಕಾಲದಲ್ಲಿ ಕೂಡ ಹುಟ್ಟಿದ ಸಂತಾನದ ಲಾಲನೆ ಪಾಲನೆಯ ಭಾರವು ಸ್ತ್ರೀಯರ ಮೇಲೆಯೇ ಬಿದ್ದು ಇರುತಿತ್ತು. ಪುರುಷರು ಆ ಕಡೆಗೆ ಕಣ್ಣೆತ್ತಿ ಕೂಡ ನೋಡುತ್ತಿರಲಿಲ್ಲ. ಸ್ತ್ರೀಯರೇ ತಾವು ಆ ಕೆಲಸಗಳನ್ನು ಮಾಡಿಬರುತಿದ್ದರು.

ಸಭ್ಯತೆಯು ವಿಕಾಸವಾಗುತಿದ್ದಂತೆ

ಮುಂದೆ ಪುರುಷರು ಸ್ವೇಚ್ಛಾವಿಹಾರಿಗಳಾಗಿರುವದು ಅಸಾಧ್ಯವಾಯಿತು. ಕಾಲ ಮತ್ತು ವಾತಾವರಣದಲ್ಲಿ ಸ್ಥಿತ್ಯಂತರಗಳಾದಂತೆ ಅವರು ಪಂಗಡಕಟ್ಟಿಕೊಂಡಿರುವದು ಅವಶ್ಯಕವಾಯಿತು. ಹೀಗೆ ಸಮಾಜ ಸಂಘಟನೆಗೆ ಆರಂಭವಾಯಿತು. ಸಂಘಟಿತರಾಗಿ ಜನರು ಕೃಷಿ, ಬೇಟೆ, ಪಶುಪಾಲನ ಮೊದಲಾದ ಜೀವನ ವೃತ್ತಿಗಳನ್ನು ಅನುಸರಿಸಿ ಕಾಲಯಾಪನೆ ಮಾಡಬೇಕಾಯಿತು. ಆದರೆ ಆಗಲೂ ಸ್ತ್ರೀಯರ ವ್ಯವಹಾರ ಕ್ಷೇತ್ರದಲ್ಲಿ ಪರಿವರ್ತನೆಯಾಗಲಿಲ್ಲ. ಸ್ತ್ರೀಯರ ಮೇಲಿನ ಪುರುಷರ ದೃಷ್ಟಿ ಮೊದಲಿನಂತೆಯೇ ವಕ್ರವಾಗಿರುತಿತ್ತು. ಸ್ತ್ರೀಯರು ಭೋಗವಸ್ತುವೆಂಬುದು ಪುರುಷರ ಅಭಿಪ್ರಾಯವಾಗಿದ್ದಿತು. ಪಂಗಡ ಪಂಗಡಗಳೊಳಗೆ ಲಡಾಯಿ, ಜಗಳಗಳಾಗಿ ಒಂದು ಪಂಗಡವು ಇನ್ನೊಂದನ್ನು ಗೆದ್ದಾಗ, ಗೆದ್ದ ಪಂಗಡದ ಪುರುಷರು ಸೋತ ಪಂಗಡದ ಸ್ತ್ರೀಯರನ್ನು ಮನೆ ದಾಸಿಯರನ್ನಾಗಿ ಮಾಡಿಕೊಳ್ಳುವ ಪರಿಪಾಟ ಸಾರ್ವತ್ರಿಕವಾಗಿದ್ದಿತು.

ರಾಜ್ಯ ನಿರ್ಮಾಣವಾದ ಮೇಲೆ

ಕಾಲವು ಕಳೆದಂತೆ ಇನ್ನೂ ಇನ್ನೂ ಸಭ್ಯತೆಯು ವಿಕಾಸವಾಗುತ್ತ ಬಂದಿತು. ಪರಂತು ಸ್ತ್ರೀ ಪುರುಷ ಸಂಬಂಧದಲ್ಲಿ ಹೇಳಿ ತೋರಿಸುವಂಥ ಬದಲಾವಣೆಗಳಾಗಲಿಲ್ಲ. ರಾಜ್ಯ ನಿರ್ಮಾಣವಾಗಿ, ಅನ್ಯಾಯ ಅಥವಾ ಅನಾಚಾರಕ್ಕೆ ದಂಡ ವಿಧಾನವು ಏರ್ಪಟ್ಟರೂ, ಅದೆಲ್ಲ ಸಾಮಾನ್ಯತಃ ಏಕಪಕ್ಷೀಯವಾಗಿದ್ದಿತು. ವಿವಾಹ ಕ್ರಮವು ಬಳಕೆಗೆ ಬಂದಿತಾದರೂ, ಅದರ ಮೇಲಿನ ನಿರ್ಬಂಧಗಳೆಲ್ಲ ಪುರುಷರಿಗೆ ಅನುಕೂಲವಾಗಿರುತಿದ್ದುವು. ಅರಬೀ, ಗ್ರೀಕ ಸಭ್ಯತೆಗಳಲ್ಲಿ ಸ್ತ್ರೀಯರು ಪುರುಷರಿಗೆ ಪೂರ್ಣ ಅಧೀನರಾಗಿರುತಿದ್ದುದು ಕಂಡುಬರುತ್ತದೆ. ಆ ಸಮಾಜಗಳಲ್ಲಿ ಸ್ತ್ರೀಯರ ಕ್ರಯ ವಿಕ್ರಯಗಳು ಕೂಡ ಆಗುತಿದ್ದುವು. ಪರಂತು ಆರ್ಯ ಸಭ್ಯತೆಯಲ್ಲಿ ಸ್ತ್ರೀಯರ ಸ್ಥಾನಮಾನಗಳು ಅಷ್ಟು ನೀಚವಾಗಿರಲಿಲ್ಲ. ಹಾಗೆಂದು ಅವು ಅಭಿಮಾನದಿಂದ ತಲೆ ಎತ್ತಿ ಹಿಡಿಯಲಿಕ್ಕೆ ಅಷ್ಟು ಉಚ್ಚವಾಗಿಯೂ ಇರಲಿಲ್ಲ. ಸ್ತ್ರೀಯರಿಗೆ ಪಾತಿವ್ರತ್ಯದ ಕುರಿತು ಎಷ್ಟು ಬೋಧನೆಯಾಗುತ್ತಿತ್ತೋ ಅಷ್ಟು ಬೋಧನೆಯು ಪುರುಷರಿಗೆ ಪತ್ನಿ ವ್ರತದ ಕುರಿತು ಆಗುತ್ತಿರಲಿಲ್ಲ. ಆದರೂ ಇತರ ಸಮಾಜಗಳಿಗಿಂತ ಇಲ್ಲಿ ಸ್ತ್ರೀಯರಿಗೆ ಮಾನಮನ್ನಣೆಗಳು ದೊರೆಯುತಿದ್ದುವೆನ್ನಬಹುದು.

ಸ್ತ್ರೀಯರು ಪುರುಷರಿಗೆ ಸಮಾನರು

ಸಾಯುಷ್ಯ ಸೃಷ್ಟಿಯ ಆರಂಭದಿಂದ ಆಗಿರಬಾರದೇಕೆ? — ಪುರುಷರು ಸ್ತ್ರೀಯರನ್ನು ತಮ್ಮ ಉದ್ಧಟತನ ಮತ್ತು ಸ್ವಾರ್ಥದಿಂದ ಹಿಂದಿಟ್ಟು ಬಂದಿದ್ದಾರಾದರೂ, ಅವರು ಪುರುಷರಿಗೆ ಯಾವದರಲ್ಲಿಯೂ ಕಡಿಮೆ ಎನ್ನಿಸಿರುವದಿಲ್ಲ. ಸ್ತ್ರೀಯರ ಮೇಲೆ ಪುರುಷರ ನಿರ್ಬಂಧವಿದ್ದುದಾದರೂ, ಅವರು ಸಮಯ ಸಿಕ್ಕಿದಾಗಲೆಲ್ಲ ತಮ್ಮ ಯೋಗ್ಯತೆಯ ಪ್ರದರ್ಶನ ಮಾಡುತ್ತ ಬಂದಿರುವರು. ಇದಕ್ಕೆ ವೇದ ಪುರಾಣ ಇತಿಹಾಸಗಳಲ್ಲಿ ತುಂಬಾ ಉದಾಹರಣೆಗಳು ದೊರೆಯುತ್ತವೆ. ಭಾರತದಲ್ಲಂತೂ ಗಾರ್ಗಿ, ಲೋಪಾಮುದ್ರೆ ಮೊದಲಾದವರು ವೇದಕಾಲದಿಂದಲೂ ಪ್ರಸಿದ್ಧರಾಗಿರುವರು. ಹಾಗಿರುವಾಗ ಸ್ವಾರ್ಥಾಂಧರಾಗಿ ಪುರುಷರು ಸ್ತ್ರೀಯರನ್ನು ಒತ್ತಿಡುವುದು ಸಮಾಜ ಸಂಘಟನೆ ಮತ್ತು ಸಮಾಜೋನ್ನತಿಯ ದೃಷ್ಟಿಯಿಂದ ಪರಮ ಅನ್ಯಾಯವಾಗಿದೆ. ಪುರುಷರ ನಿರ್ಬಂಧ ದಬ್ಬಾಳಿಕೆಗಳಿದ್ದೂ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಮೊದಲಾದ ಎಲ್ಲ ವ್ಯವಹಾರ ಕ್ಷೇತ್ರಗಳಲ್ಲಿ ಸ್ತ್ರೀಯರು ಪುರುಷರನ್ನು ನಾಚಿಸುವಂಥ ಕೆಲಸ ಕಾರ್ಯಗಳನ್ನು ಮಾಡಿ ಅಜರಾಮರರಾಗಬಲ್ಲರಾದರೆ, ಅಂಥ ನಿರ್ಬಂಧ ದಬ್ಬಾಳಿಕೆಗಳಿಲ್ಲದೆ ಸ್ವತಂತ್ರರಾಗಿರುವಾಗ ಅವರು ಎಂಥೆಂಥ ಕೆಲಸಗಳನ್ನು ಮಾಡಿ ಸಮಾಜಕ್ಕೂ ದೇಶಕ್ಕೂ ಉಪಕಾರ ಮಾಡಬಲ್ಲರೆಂಬುದನ್ನು ನಾವು ಯೋಚಿಸಬೇಕು.

ಪುರುಷರ ಕರ್ತವ್ಯ

ಆದ್ದರಿಂದ ಸಮಾಜದ ಹಿತದೃಷ್ಟಿಯನ್ನು ಇಟ್ಟುಕೊಂಡು ಪುರುಷರು ಸ್ತ್ರೀಯರ ಮೇಲಿರುವ ಅನ್ಯಾಯದ ನಿರ್ಬಂಧಗಳನ್ನು ತೆಗೆದುಹಾಕಿ, ಅವರಿಗೂ ಸ್ವಾತಂತ್ರ್ಯವನ್ನು ಕೊಡಬೇಕಾಗಿದೆ. ಸಮಾಜದ ಸಂಘಟನೆಗೂ ಉನ್ನತಿಗೂ ಪುರುಷ ಸ್ವಾತಂತ್ರ್ಯವು ಎಷ್ಟು ಅಗತ್ಯವೋ ಸ್ತ್ರೀ ಸ್ವಾತಂತ್ರ್ಯವೂ ಅಷ್ಟೇ ಅಗತ್ಯವಾಗಿರುವದು. ಪುರುಷರ ಶಕ್ತಿವಿಕಾಸಕ್ಕೂ ಅದು ಸಹಾಯವಾಗುತ್ತದೆ. ಗೃಹಕೃತ್ಯ ಶಿಶುಸಂಗೋಪನ ಇತ್ಯಾದಿ ಕೆಲಸಗಳ ಭಾರದಿಂದಲೂ ಸಾಮಾಜಿಕ ಆರ್ಥಿಕ, ಮತ್ತು ರಾಜಕೀಯ ಅಧಿಕಾರಗಳಿಂದ ವಂಚಿತರಾಗಿರುವದರಿಂದಲೂ ಸ್ತ್ರೀಯರು ಹಿಂದಾಗಿದ್ದಾರೆ. ಪುರುಷರು ಸ್ತ್ರೀಯರೊಂದಿಗೆ ಸಹಕರಿಸಿ ಅವರ ಕೆಲಸದ ಭಾರವನ್ನು ಇಳಿಸಬೇಕು. ಅವರ ಅಧಿಕಾರಗಳನ್ನು ಅವರಿಗೆ ಕೊಡಬೇಕು. ಆಗ ಸಮಾಜ ಸಂಘಟನೆಯು ಬಹು ಸುಲಭವಾಗುವದು. ಈ ಸಂಘಟನೆಯಿಂದ ಸಮಾಜೋನ್ನತಿಯೂ ಸುಲಭಸಾಧ್ಯವಾಗುವುದು.

ಕಾಲುಕುಂಟು ಮತ್ತು ವ್ರಣಗಳಿಗೆ ಅದ್ಭುತವಾದ ಔಷಧಿ!

ಜ್ಯಾಂಬಕು ಒಂದು ಸಣ್ಣ ಕಲೆಯನ್ನು ಕೂಡಾ ಬಿಡುವುದಿಲ್ಲ.

ಜಾತುವಿಕೆ, ವ್ರಣ ಮತ್ತು ಕಾಲುಕುಂಟು ಮುಂತಾದವು ಕೇವಲ ಒಂದು ಸಣ್ಣ ಪರಚುವಿಕೆಯಿಂದ ಬಂಬಹುದು ಆದರೆ ಅವು ಗುಣವಾಗಬೇಕೆಂದರೆ ಎಲ್ಲಾ ಕಡೆಗಳಲ್ಲಿಯೂ ಜ್ಯಾಂಬಕನ್ನೇ ಉಪಯೋಗಿಸುತ್ತಾರೆ. ಜ್ಯಾಂಬಕಿನಲ್ಲಿರುವ ಗಿಡಬೇರುಗಳ ಔಷಧೀಯ ಎಣ್ಣೆಯು ನರನಾಡಿಗಳನು ಪ್ರವೇಶಿಸಿ ನೋವನ್ನು ಗುಣಪಡಿಸುತ್ತದೆ ಬಾತುವಿಕೆಯನ್ನು ಕಡಿಮೆಮಾಡುತ್ತದೆ ಜ್ಯಾಂಬಕು ವಿಷಕ್ರಿಮಿಗಳನ್ನು ನಾಶಮಾಡಿ ವ್ರಣಗಳಿಂದ ಬರಬಹುದಾದ ರಸಿಗೆಯನ್ನು ಒಣಗಿಸಿ ಒಂದೂ ಕಲೆಯುಂಟಾಗದಂತೆ ಗುಣಪಡಿಸುತ್ತದೆ. ಎಲ್ಲಾ ಔಷಧ ವ್ಯಾಪಾರಿಗಳು ಜ್ಯಾಂಬಕನ್ನು ರೂಪಾಯಿ 1 ಮತ್ತು 2—4—0ರಂತೆ ಮಾರುತ್ತಾರೆ.

ಏಜಂಟ್ಸ್

ಮೆಸರ್ಸ್ ದಂಥಾ ಮತ್ತು ಕಂಪೆನಿ

ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪಾಚಿಕೊಬ್ಬುಗಳಿಂದ ವಿರಹಿತವಾದದ್ದು

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4%p. a
in denominations of

RS. 50/-,100/-,500/-,1,000/-, & 5,000/
are now issued at all our Branches

For particulars call at or write to any of our nearest Branches.

ಹಿಂದೂ ಅನಾಥಾಶ್ರಮ

ಶಾಂತಿನಿಕೇತನ : : ಕೂರಾಡಿ

ನಿರ್ಗತಿಕ ಮಕ್ಕಳ ನೀತಿ ಬೋಧೆಗೆ ನಿರುಪಮ ಸೌಕರ್ಯ ಶಾಂತವಾದ ವಾತಾವರಣದ ಶಾಂತಿನಿಕೇತನ ಬಾಲಕರಿಗೆ ಸುಲಭದಲ್ಲಿ ವಿದ್ಯೆ ಕಲಿಸಲು ಸಕಲರೂ

ಈಗ ತಾನೇ ತೆರೆಯಲ್ಪಟ್ಟ ಅನಾಥಾಶ್ರಮಕ್ಕೆ ಅಕ್ಕರೆಯ ಮಕ್ಕಳನ್ನು ಕಳುಹಿಸಿರಿ

ಅನಾಥರು ಅನುಭವಕ್ಕೆ ಬರೆಯಿರಿ—

ಎಲ್ಲಾ ಜಾತಿಯವರಿಗೂ ಪ್ರವೇಶವಿದೆ.

ಮೆನೇಜರ, ಶಾಂತಿನಿಕೇತನ, ಕೂರಾಡಿ, (ದ ಕ.)

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಕು ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧ ಸಾರಥಿ ನಸ್ಯ 1 ವೀಸಕ್ಕೆ ರೂ 3-8-0 ನವೀನ ಮಾರ್ಕು ಸಾರಥಿ ನಸ್ಯ 1 ವೀಸಕ್ಕೆ ರೂ. 3 0 0

(ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ಎಡ್ರೆಸು —

ಎ ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಆಫ್ ಮೆಡ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

ಮಂಗಳೂರು ಸಮಾಚಾರ

ಮಂಗಳೂರಿಗೆ ಹೊಸ ಜಿಲ್ಲಾ ಕಲೆಕ್ಟರರು

ಈಗಿನ ಜಿಲ್ಲಾ ಕಲೆಕ್ಟರರಾದ ದಿವಾನ್ ಬಹದ್ದೂರ್ ಯಂ. ವಿ. ವೆಲ್ಲೋಡಿಯವರು ಉದ್ಯೋಗದಿಂದ ನಿವೃತ್ತಿ ಹೊಂದಲಿರುವರು. ಅವರ ಸ್ಥಾನಕ್ಕೆ ಈಗ ಪ್ರಕೃತ ರಜೆಯ ಮೇಲಿರುವ, ಮದ್ರಾಸ್ ಪಬ್ಲಿಕ್ ಸರ್ವಿಸ್ ಕಮಿಶನಿನ ಕಾರ್ಯದರ್ಶಿಗಳಾಗಿದ್ದ ರಾವ್ ಬಹದ್ದೂರ್ ಸಿ. ಪಿ. ಕರುಣಾಕರ ಮೆನನ್‌ರವರು ನೇಮಕ ಹೊಂದಿದ್ದಾರೆ; ರಜೆ ಮುಗಿದೊಡನೆ ಅಧಿಕಾರ ಸ್ವೀಕರಿಸುವರು.

ಪ್ರೆಸ್ ಕೆಲಸಗಾರರ ಸಂಘ

ಕಳೆದ ತಾ. ೨೨ನೇ ಶನಿವಾರ ಮೇಲಿನ ಸಂಘದ ಮಹಾಸಭೆ ನಡೆದು, ಲೆಕ್ಕ ಪತ್ರ ವರದಿ ಓದಲ್ಪಟ್ಟು ಸ್ವೀಕರಿಸಲ್ಪಟ್ಟಿತು. ಕಳೆದ ವರ್ಷದಲ್ಲಿದ್ದವರೇ ಈ ವರ್ಷವೂ ಅಧ್ಯಕ್ಷರಾಗಿಯೂ ಜನರಲ್ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಇತರ ಕೆಲ ಅಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆದು ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ಆರಿಸಿದ ಬಳಿಕ ಸಭೆಯು ಕೊನೆಗೊಂಡಿತು.

ಮಂಗಳೂರು ವಿದ್ಯಾರ್ಥಿ ಸಂಘದ ಸಾಕ್ಷರತಾ ಪ್ರಸಾರಣೆ

ಈ ಸಂಘದವರು ಹತ್ತು ವರ್ಷ ಪ್ರಾಯದ ಮೇಲಿನ ಅವಿದ್ಯಾವಂತರಾದ ಜನರಿಗೆ ವಿದ್ಯೆಯನ್ನು ಆರು ತಿಂಗಳೊಳಗಾಗಿ ಕಲಿಸುವುದಕ್ಕಾಗಿ ಸಂಧ್ಯಾಕಾಲದ ಶಾಲೆಗಳನ್ನು ಸದ್ಯಕ್ಕೆ ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿಯೂ, ಕೊಡಿಯಾಲಬೈಲಿನಲ್ಲಿಯೂ ತೆರೆಯುವರು. ಹತ್ತು ವರ್ಷ ಪ್ರಾಯದ ಮೇಲಿನ ಮತ್ತು ದೊಡ್ಡವರ ಪ್ರಯೋಜನಾರ್ಥವಾಗಿ ಹಿಂದೀ ಕ್ಲಾಸುಗಳನ್ನು ಪಟ್ಟಣದ ಬೇರೆಬೇರೆ ಕಡೆಗಳಲ್ಲಿ ತೆರೆಯುವರು.

ಜಿಲ್ಲಾ ಕಲೆಕ್ಟರರಿಗೆ ಸನ್ಮಾನ

ಹುದ್ದೆಯಿಂದ ನಿವೃತ್ತರಾಗಲಿರುವ ಮಾನ್ಯ ಜಿಲ್ಲಾ ಕಲೆಕ್ಟರರಾದ ದಿ. ಬ. ಯಂ. ವಿ. ವೆಲ್ಲೋಡಿಯವರ ಭಾವಚಿತ್ರದ ಅನಾವರಣವು ತಾ. ೨೮ನೇ ಸಾಯಂಕಾಲ ಫೆಲಿಕ್ಸ್ ಪೈ ಬಜಾರಿನಲ್ಲಿರುವ ಡಿ. ಮ್ಯೂಜಿಯಂ ಹಾಲಿನಲ್ಲಿ ಮಾನ್ಯ ಜಿಲ್ಲಾ ಜಡ್ಜರಿಂದ ನೆರವೇರಿಸಲ್ಪಟ್ಟಿತು. ಶ್ರೀ ಫೆಲಿಕ್ಸ್ ಅಲ್ಬುಕರ್ಕರು ಆಮಂತ್ರಿತರನ್ನು ಸ್ವಾಗತಿಸಿ ಟೀಪಾರ್ಟಿಯಿತ್ತರು. ಜಡ್ಜರು ವೆಲ್ಲೋಡಿಯವರ ಕಾರ್ಯದಕ್ಷತೆಯ ಗುಣಗಳನ್ನು ವರ್ಣಿಸಿ, ಚಿರಾಯುಗಳಾಗಿ ತಮ್ಮ ವಿಶ್ರಾಂತಿಯನ್ನು ಉತ್ತಮರೀತಿಯಲ್ಲಿ ಅನುಭವಿಸಲೆಂದು ಕೋರಿದರು. ವೆಲ್ಲೋಡಿಯವರು ಫೆಲಿಕ್ಸ್ ಅಲ್ಬುಕರ್ಕರನ್ನೂ, ಜಡ್ಜರನ್ನೂ ವಂದಿಸಿದರು. ಫೆಲಿಕ್ಸ್ ಅಲ್ಬುಕರ್ಕರು ಕಲೆಕ್ಟರರಿಗೂ, ಜಡ್ಜರಿಗೂ, ಇತರ ಮಾನ್ಯ ಗೃಹಸ್ಥರಿಗೂ ಧನ್ಯವಾದಗಳನ್ನರ್ಪಿಸಿದರು.

ಅಭಿವಂದನಾ ಸಭೆ

ಸ್ಥಳೀಯ ವೆಬ್‌ಸ್ಟರ್ ಮಾರ್ಕೆಟಿನ ವಿಚಾರದಲ್ಲಿ ಸರಕಾರದವರು ಯೋಗ್ಯವಾದ ಅಪ್ಪಣೆಯನ್ನು ದಯಪಾಲಿಸಿದ ನಿಮಿತ್ತ, ಸರಕಾರವನ್ನು ಅಭಿವಂದಿಸುವದಕ್ಕಾಗಿ, ಸಾರ್ವಜನಿಕ ಸಭೆಯೊಂದು ಸ್ಥಳೀಯ ಮೈದಾನಿನಲ್ಲಿ ಕಳೆದ ಆದಿತ್ಯವಾರ ಸಂಜೆ, ವಕೀಲ್ ಕೆ. ಆರ್. ಆಚಾರ್, ಇವರ ಅಧ್ಯಕ್ಷತೆಯಲ್ಲಿ ಜರಗಿ ಹಲ ಸದ್ಗೃಹಸ್ಥರು ಮಾತನಾಡುತ್ತ ಸರಕಾರದ ತೀರ್ಮಾನ, ಮುನಿಸಿಪಾಲಿಟಿಯ ಅಪ್ರಬುದ್ಧತೆ ಮುಂದೆ ನಡೆಸಲಿರುವ ಕಾರ್ಯಕ್ರಮ ಮೊದಲಾದುವುಗಳ ಕುರಿತು ವಿವರಿಸಿದರು.

ಜಿಲ್ಲಾ ಹರಿಜನ ಸೇವಕ ಸಂಘ:— ಈ ಸಂಘದ ಸಭೆಯು ಜುಲಾಯಿ ಹತ್ತರಂದು ಕೊಡಿಯಾಲಬೈಲ್ ಡಿ. ಸಿ. ಎಂ. ಸಭಾಭವನದಲ್ಲಿ ಸೇರಿತು.

ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಹರಿಜನ ವಿದ್ಯಾರ್ಥಿಗಳೇ ಮೊದಲಾದವರಿಂದ ಸಹಾಯ ದ್ರವ್ಯಕ್ಕಾಗಿ ಬಂದ ಮನವಿಗಳ ಕುರಿತು ವಿಚಾರಣೆಯಾಯಿತು.

ಶ್ರೀ ಎಸ್. ಎಸ್. ಕಿಲ್ಲೆಯವರನ್ನು ಪ್ರಚಾರ ಕಾರ್ಯದರ್ಶಿಯಾಗಿ ನೇಮಕ ಮಾಡಲಾಯಿತು. ಸೆಂಟ್ರಲ್ ಬೋರ್ಡಿನವರು ಶ್ರೀ ಕಿಲ್ಲೆಯವರನ್ನು ಈ ಜಿಲ್ಲೆಯ ಹರಿಜನ ಸೇವಕರಾಗಿ ನೇಮಕಮಾಡುವಂತೆ ಕೇಳಿಕೊಳ್ಳಲಾಯಿತು.

ಅಣ್ಣಂಸ್ಪೂರದಿಂದ ಖಾದೀ ಪ್ರಚಾರಕರಾದ ಶ್ರೀ ಎಚ್. ನಾರಾಯಣರಾಯರ ಸೂಚನೆಗಳನ್ನು ವಿಚಾರಮಾಡುವುದಾಗಿಯೂ, ಅವರು ಅದಕ್ಕೆ ಬೇಕಾದ ಯೋಜನೆಯನ್ನು ಕಳುಹಿಸಿಕೊಡಬೇಕಾಗಿಯೂ ಕೇಳಿಕೊಳ್ಳಬೇಕಾಗಿ ನಿರ್ಣಯವಾಯಿತು.

ಸುಪ್ರಸಿದ್ಧ ಪುಣ್ಯಕ್ಷೇತ್ರವಾದ ಮಧುರೆಯ ಮೀನಾಕ್ಷಿ ದೇವಾಲಯ ಮತ್ತು ತಮಿಳುನಾಡಿನ ಇನ್ನನೇಕ ದೇವಾಲಯಗಳ ಉತ್ತಮ ಆದರ್ಶವನ್ನು ಅನುಸರಿಸಿ, ನಮ್ಮ ಜಿಲ್ಲೆಯ ದೇವಾಲಯಗಳೂ ಹರಿಜನರಿಗೆ ಮುಕ್ತದ್ವಾರವಾಗುವಂತೆ ಸ್ಥಳೀಕ ಪತ್ರಿಕೆಗಳ ಮುಖಾಂತರ ಬಿನ್ನಹ ಮಾಡಿಕೊಳ್ಳಬೇಕಾಗಿ ನಿಶ್ಚಯವಾಯಿತು. ಉಪಾಧ್ಯಕ್ಷರು, ಶ್ರೀ ಗಳಾದ ಅಚ್ಯುತ ಬಾಳಿಗ, ಕಿಲ್ಲೆ, ಕೆ. ಆರ್ ಕಾರಂತ, ಗೋವಿಂದ ರಾವ್, ಸಿ ಎಲ್. ಪುಣಿಚಿತ್ತಾಯ, ಉಮೇಶ ರಾವ್, ಇವರಿಂದ ಕೂಡಿದ ಸಮಿತಿಯೊಂದು ಏರ್ಪಟ್ಟು, ಹಿರಿಯಡ್ಕ, ಉಪ್ಪಿನಂಗಡಿ, ಬಂಟ್ವಾಳ, ಮಡಮಣಂಬೂರು, ಕಟಪಾಡಿ, ಕಟೀಲ್ ಈ ದೇವಾಲಯಗಳ ಅಧಿಕಾರಿಗಳೊಡನೆ ವ್ಯವಹಾರ ನಡೆಸಿ, ಆ ಕಡೆಗಳಿಗೆ ಸಂದರ್ಶನಕೊಟ್ಟು, ಬೇಕಾದ ಪ್ರಚಾರ ಕಾರ್ಯವನ್ನು ಮಾಡುವಂತೆ ನಿಶ್ಚಯವಾದ ಮೇಲೆ, ಯೋಗ್ಯವಾತಾವರಣವು ಕಲ್ಪಿಸಲ್ಪಟ್ಟಾಗ ಶ್ರೀ ರಮೇಶ್ವರಿ ನೆಹರುಗಳನ್ನು ಈ ಜಿಲ್ಲೆಗೆ ಸಂದರ್ಶನ ಕೊಡಬೇಕೆಂದು ಬಿನ್ನವಿಸಿಕೊಳ್ಳಬೇಕಾಗಿಯೂ ನಿರ್ಣಯವಾಯಿತು.

ನಗರ ಸಭೆ:— ಜುಲಾಯಿ ೨೯ನೇ ಸಾಯಂಕಾಲ ೫ ಘಂಟೆಗೆ ಮಂಗಳೂರು ನಗರ ಸಭೆಯು ಅಧ್ಯಕ್ಷರಾದ ಶ್ರೀ. ವೆಂಕಟರಾಯ ಬಾಳಿಗರ ಅಧ್ಯಕ್ಷತೆಯಿಂದ ಸೇರಿತು. ಸಭಾರಂಭದಲ್ಲಿ ಶ್ರೀ ರಂಗರಾವ್ ತಲಚೇರಿಕರರು ಅಧ್ಯಕ್ಷರೊಡನೆ ರಾಜಿನಾಮೆಯ ವಿಷಯ ಪ್ರಶ್ನೆ ಮಾಡಿದರು ಅಧ್ಯಕ್ಷರ ಉತ್ತರಕೊಟ್ಟ ಮೇಲೆ ವೆಬ್‌ಸ್ಟರ್ ಮಾರ್ಕೆಟಿನ ವಿಷಯ ಸರಕಾರದ ತೀರ್ಪು ಓದಲಾಯಿತು ಇತರ ವಿಷಯಗಳನ್ನು ಆಲೋಚಿಸಿ ಸಭೆಯು ಕೊನೆಗೊಂಡಿತು ಬರುವ ಸಭೆಯು ಇದೇ ತಿಂಗಳ ತಾರೀಕು ೭ನೇ ಸೋಮವಾರ ಜರಗುವುದು.

ಕಾಸರಗೋಡು ಸಮಾಚಾರ

ಕಾರ್ಕಳ

ಸ್ಥಳೀಯ ಕಾಸ್ಮೊಪೊಲಿಟನ್ ಕ್ಲಬ್ಬಿನ ವಾರ್ಷಿಕೋತ್ಸವವು ತಾ. ೨೩ ೭–೩೯ರ ದಿನ ಸಾಯಂಕಾಲ ಶ್ರೀ ಕೆ. ಸದಾನಂದ ಹೆಗ್ಡೆ ಬಿ. ಎ. ಬಿ ಯಲ್. ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಮೊದಲು ಲಘೂಪಹಾರದಿಂದ ಆಮಂತ್ರಿತ ಅತಿಥಿಗಳು ಸತ್ಕರಿಸಲ್ಪಟ್ಟ ತರುವಾಯ, ಕಾರ್ಯದರ್ಶಿಗಳಾದ ಶ್ರೀ ಕೆ. ಶ್ರೀನಿವಾಸ ಹೆಗ್ಡೆರು ವರದಿಯನ್ನು ಓದಿದರು. ಅಧ್ಯಕ್ಷರು ಕ್ಲಬ್ಬು ಜೀವನದ ಆವಶ್ಯಕತೆಯ ಕುರಿತು ಭಾಷಣಕೊಟ್ಟು, ಈ ಕ್ಲಬ್ಬಿನ ಚಟುವಟಿಕೆಗಳನ್ನು ತುಂಬಾ ಶ್ಲಾಘಿಸಿದರು. ಮುಂದಿನ ವರ್ಷಕ್ಕೆ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ ಶ್ರೀ ವಿ ಪೋಲಾ ರೆಡ್ಡಿ ಬಿ. ಎ. ಬಿ ಎಲ್. ರವರು ಕ್ಲಬ್ಬಿನ ಅಧ್ಯಕ್ಷರಾಗಿರಲಿಕ್ಕೆ ಸಮ್ಮತಿಸಿರುವುದನ್ನು ಘೋಷಿಸಿದ ತರುವಾಯ ಶ್ರೀ ಕೆ. ಎಸ್ ಆಚಾರ್ಯರು ಧನ್ಯವಾದ ಸಮರ್ಪಣೆ ಮಾಡಿದರು.

ಕಾರ್ಕಳ ನಂಬ್ರ ೩೮೯ನೇ ಲೋಕಲ್ ಬೋರ್ಡ ಸರ್ವೆಂಟ್ಸ ಕೋಪರೇಟಿವ್ ಸೊಸೈಟಿ ಲಿಮಿಟೆಡ್ಡಿನ ಸದಸ್ಯರ ಮಹಾಸಭೆಯು ಕಳೆದ ವಾರ ಕೂಡಿ ಹೊಸ ವರ್ಷಕ್ಕೆ ಶ್ರೀಗಳಾದ ಕೆ. ರಾಘವೇಂದ್ರ ರಾವ್, ಎಮ್. ಹನುಮಂತ ನಾಯಕ, ಎ ದಾಮೋದರ ಶೆಣೈ, ಕೆ. ಗೋವಿಂದ ಶೆಟ್ಟಿ ಮತ್ತು ವ್ಹಿ. ವಿಟ್ಠಲದಾಸ ಶೆಣೈಯವರು ಡೈರೆಕ್ಟರರಾಗಿ ಆರಿಸಲ್ಪಟ್ಟರು

ಹಿಂದಿನ ಈ ವರ್ಷ ಈ ಸಂಘಕ್ಕೆ ೧೦೨೨ ರೂ ಲಾಭವಾಗಿದೆ

ಇಲ್ಲಿಯ ಶ್ರೀ. ವಿವೇಕಾನಂದ ಕ್ಲಬ್ ಮತ್ತು ವಾಚನಾಲಯದ ಸದಸ್ಯರ ಒಂದು ಸಭೆಯು ತಾ ೩೦–೭–೩೯ರ ದಿನ ಸಾಯಂಕಾಲ ಶ್ರೀ ಕೆ ಮಾಧವ ಜ್ಯೋಸರ ಅಧ್ಯಕ್ಷತೆಯಲ್ಲಿ ಕೂಡಿ ಶ್ರೀ ಗಳಾದ ಕೆ. ವೆಂಕಟೇಶ ಕಾಮತ್ ಬಿ ಎ. (ಆನರ್ಸ) ಎಲ್ ಟಿ. ವಿದ್ವಾನರು ಅಧ್ಯಕ್ಷರಾಗಿ ಕೆ. ಶ್ರೀನಿವಾಸ ಹೆಗ್ಡೆ, ಎಮ್ ವಿಟ್ಠಲದಾಸ ಶೆಣೈ, ಕೆ ಮಾಧವ ಜ್ಯೋಸಿ ಮತ್ತು ಕೆ. ಕೃಷ್ಣ ಪೈಯವರು ಸದಸ್ಯರಾಗಿರುವ ಕಾರ್ಯನಿರ್ವಾಹಕ ಸಮಿತಿಯು ಸರ್ವಾನುಮತಿಯಿಂದ ಆರಿಸಲ್ಪಟ್ಟಿತು. ಸದಸ್ಯರೆಲ್ಲರು ಕೊಂಕಣಿ ಭಾಷೆ ತಿಳಿದವರಾದ್ದರಿಂದ ಸಭಾ ಕಾರ್ಯಕ್ರಮಗಳು ಕೊಂಕಣಿಯಲ್ಲೇ ನಡೆದದ್ದು ಒಂದು ವಿಶೇಷವಾಗಿದೆ.

ಫರಂಗಿಪೇಟೆ:— ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಮೊದಲನೆಯ ಮಾಸಿಕ ಸಭೆಯು ಕಳೆದ ತಾ. ೨೨–೭–೩೯ರಲ್ಲಿ ಶ್ರೀ ರಾಮ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮೇರಮಜ್ಲು ಶಾಲಾ ಸಹಾಯಕ ಉಪಾಧ್ಯಾಯರಾದ ಶ್ರೀ.ಪಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಕಾಸರಗೋಡು

ಸಭೆ:— ಇಲ್ಲಿಯ ಮಿಶ್ಯನ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿ ಸಂಘದ ಒಂದು ಸಭೆಯು ತಾ. ೨೬ರಲ್ಲಿ ಶ್ರೀಮತಿ ಸೀತಮ್ಮ, ವಿದ್ವಾನ್, ಇವರಲ್ಲಿ ಅಧ್ಯಕ್ಷತೆಯಲ್ಲಿ ಜರಗಿತು. ಸ್ತ್ರೀ ವಿದ್ಯಾಭ್ಯಾಸವು ಅಗತ್ಯವೋ ಅಲ್ಲವೋ ಎಂಬ ವಿಷಯವಾಗಿ ಬಾಲಕ ಬಾಲಿಕೆಯರು ಚರ್ಚಿಸಿದರು ಅಧ್ಯಕ್ಷೆಯರು ತಮ್ಮ ಅಮೂಲ್ಯ ಅಭಿಪ್ರಾಯಗಳನ್ನಿತ್ತು ಭಾಷಣಮಾಡಿದರು.

ಹೈಸ್ಕೂಲು ಕರ್ನಾಟಕ ಸಂಘ:— ಕಳೆದ ತಾ. ೨೦ನೇ ಗುರುವಾರ ಸಂಜೆ ಇಲ್ಲಿಯ ಬೋರ್ಡ ಹೈಸ್ಕೂಲಿನ ಕರ್ನಾಟಕ ಸಭೆಯೊಂದು ನಮ್ಮಲ್ಲಿನ ಪ್ರಸಿದ್ಧ ಸಾಹಿತಿಗಳಲೊಬ್ಬರಾದ ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಚಿತ್ತಾಯರ ಅಧ್ಯಕ್ಷತೆಯಲ್ಲಿ ಜರಗಿತು ವಿದ್ಯಾರ್ಥಿಗಳನೇಕರು ಈ ತರ್ಕ ಸಂಘದ ಆವಶ್ಯಕತೆಯ ಕುರಿತು ಮಾತಾಡಿದರು.

ನೀಲೇಶ್ವರ

ಹೊಸ ವಾಚನಾಲಯ:— ನೀಲೇಶ್ವರ ಪೇಟೆಯ ಉಪಶಾಖೆಯಾದ ಪೇರೋಳಿನಲ್ಲಿ ಸಾರ್ವಜನಿಕ ವಾಚನಾಲಯವೊಂದು ಕಳೆದ ವಾರ ತೆರೆಯಲ್ಪಟ್ಟಿತು ಮಹಾ ಕವಿ ಕುಟ್ಟಿ ಮಾಸ್ತರವರು ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು.

ಕನ್ನಡ ಸಾಹಿತ್ಯ ಸಂಘ:— ಇಲ್ಲಿನ ರಾಜಾ ಹೈಸ್ಕೂಲಿನ ಕನ್ನಡ ಸಾಹಿತ್ಯ ಸಂಘವನ್ನು ಹೊಸ ದುರ್ಗ ಶ್ರೀ ಪಿ. ಕಣ್ಣನ್ ನಾಯರರು ಉದ್ಘಾಟನೆ ಮಾಡಿದರು. ಪ್ರಾಪಂಚಿಕ ಪರಿಸ್ಥಿತಿ ಮತ್ತು ಅದರಲ್ಲಿ ವಿದ್ಯಾರ್ಥಿಗಳ ನೀತಿ ಎಂಬುದರ ಕುರಿತು ಅವರು ಕನ್ನಡದಲ್ಲಿ ಭಾಷಣವಿತ್ತರು

ಕಿನ್ನಿಗೋಳಿ

ಇಲ್ಲಿಯ ಸ್ಟೇಟ್ ಮೇರಿಸ್ ಇಗರ್ಜಿಯ ಲೆಕ್ಕ ಒಪ್ಪಿಸುವ ಜಾರಿತ ಎಂಬ ಮಹಾಸಭೆಯು ತಾ ೨೩–೭ ೩೯ನೇ ಆದಿತ್ಯವಾರ ರೇ ಫಾ. ಎಮ್ ಎಸ್. ಫೆರ್ನಾಂದಿಸರ ಅಧ್ಯಕ್ಷತೆಯಲ್ಲಿ ಜರಗಿತು ಅಂದು ಮೊದಲಿನ ಜನರಲ್ ಜೆ. ಬಿ ಸೇರರಿಂದ ಹೊಸ ಪ್ರೊಕ್ಯುರೇಟರಾದ ಶ್ರೀ. ಜೂಜೆ ಸಿಕ್ವೇರರು ಚಾರ್ಜನ್ನು ವಹಿಸಿದ ನಂತರ ಕೆಲವು ನಿರ್ಣಯಗಳಾದ ಮೇಲೆ ಅಂದಿನ ಸಭೆಯು ಕೊನೆಗೊಂಡಿತು

ಕಡೇಕಾರು:— ತಾ. ೧೬–೭–೩೯ನೇ ಅಪರಾಹ್ನ ಘಂಟೆ ೩ಕ್ಕೆ ಡಿ ಬೋ. ಮೆಂಬರರಾದ ಡಾ ಪಿ ಜಿ. ಆಚಾರ್ಯ ಅಧ್ಯಕ್ಷತೆಯಲ್ಲಿ ಕಡೇಕಾರು ಬೋರ್ಡು ಶಾಲೆಯ ಪ್ರಥಮ ವಾರ್ಷಿಕ ವರ್ಧಂತ್ಯುತ್ಸವವು ಜರಗಿತು. ಈ ಸಮಾರಂಭಕ್ಕೆ ಊರ ಮಹನೀಯರೆಲ್ಲರೂ ನೆರೆದುದಲ್ಲದೆ ಉಡುಪಿಯಿಂದ ಕೂಡಾ ಮಹಾನುಭಾವರು ದಯಮಾಡಿದ್ದರು.

ಪುತ್ತೂರು ರೂರಲ್ ಕ್ರೆಡಿಟ್ ಸಂಘದ ವರ್ಷಾವಧಿ ಮಹಾಸಭೆ:— ಕಳೆದ ತಾ. ೨೩ನೇ ಅಪರಾಹ್ನ ೩ ಘಂಟೆಗೆ ಸಂಘದ ಆಫೀಸಿನಲ್ಲಿ ಶ್ರೀ. ಬಿ. ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಡೆಯಿಂದ ಒಂದು ವಾಚಕ ಮಂದಿರ ಮತ್ತು ವಯಸ್ಕರ ವಿದ್ಯಾಭ್ಯಾಸ ಕಾರ್ಯ ಕೂಡೆ ಬರುವ ದಸರೆ ಸಮಯದಲ್ಲಿ ಪ್ರಾರಂಭಿಸುವರಾಗಿ ತಿಳಿದುಬರುತ್ತದೆ. ಕಳೆದ ವರ್ಷದಲ್ಲಿ ಸಂಘದ ಡೈರೆಕ್ಟರರ ಪ್ರಯತ್ನದಿಂದ ಹೆಚ್ಚು ಸದಸ್ಯರು ಸಂಘಕ್ಕೆ ಸೇರಿದ್ದಲ್ಲದೆ, ಕಿನ್ನಲಾಗಿ ಜೊತೆ ಬಾಕಿ ಇರುವ ಸಾಲವು ಅತಿ ಕಡಿಮೆಯಿಂತ ಸಂಘದ ರಿಪೋರ್ಟಿನಿಂದ ತಿಳಿದು ಬರುತ್ತದೆ.

ಕರ್ನಾಟಕ ಸಮಾಚಾರ

ಬೆಳಗಾವಿ

ಕರ್ನಾಟಕ ಪ್ರಾಂತಿಕ ಫಾರ್ವರ್ಡ ಬ್ಲಾಕಿನ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಮಂಡಗಿ ವಕೀಲರು ಪ್ರಜಾ...ರವಾಗಿ ಗೋಕಾಕ ಮುಂತಾದ ಕಡೆಗಳಲ್ಲಿ ಸಂಚರಿಸಿ ಬಂದರು. ಶ್ರೀ ಮುಂಕಣ ವಕೀಲ ಎಂಬವರು ಶ್ರೀ ಅಂಗಡಿಯವರ ಸಹಾಯ ಪ್ರಕಾರ ಕರ್ನಾಟಕದ ವಿವಿಧ ಭಾಗಗಳಲ್ಲಿ ಸಂಚರಿಸುತ್ತಿದ್ದಾರೆ ಬ್ಲಾಕಿಗೆ ಪ್ರತ್ಯೇಕ ಸಂಸ್ಥೆಗಳನ್ನು ಏರ್ಪಡಿಸುವ ವ್ಯವಸ್ಥೆ ನಡೆದಿದೆ

ಇಲ್ಲಿಯ ಕಲೆಕ್ಟರರು ಜಿಲ್ಲಾ ಲೋಕಲ್ ಬೋರ್ಡಿಗೆ ಕರ್ನಾಟಕ ಏಕೀಕರಣದ ವಿಷಯವಾಗಿ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿದರು ಕಾರಣ ಆ ವಿಷಯವು ಕಳೆದ ಜಿಲ್ಲಾ ಬೋರ್ಡಿನ ಸಭೆಯಲ್ಲಿ ಚರ್ಚಿಸಲ್ಪಟ್ಟು ಕರ್ನಾಟಕದ ಏಕೀಕರಣವು ಅತ್ಯವಶ್ಯವಿದೆ, ಎಂಬ ಗೊತ್ತುವಳಿಯು ಸರ್ವಾನುಮತದಿಂದ ಪಾಸಾಯಿತು ಅದರಂತೆ ಕಲೆಕ್ಟರರಿಗೆ ತಿಳಿಸಲಾಯಿತೆಂದು ತಿಳಿಯುತ್ತದೆ.

ಬೆಂಗಳೂರು

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಶ್ರೀ. ಹೆಚ್ ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಜವಾಬ್ದಾರಿ ಸರಕಾರದ ವಿಷಯದಲ್ಲಿ ಕಾಂಗ್ರೆಸಿನವರಿಗೂ ದಿವಾನರಿಗೂ ಸಂಧಾನ ನಡೆಸಿ ಒಂದು ತೀರ್ಮಾನಕ್ಕೆ ಬರಲು ಕಾಂಗ್ರೆಸಿನವರು ಬರೆದ ಪತ್ರಕ್ಕೆ ದಿವಾನರು ಯಾವ ಕಾರಣವನ್ನೂ ಹೇಳದೆ ಕಾಂಗ್ರೆಸ್ ಅಧ್ಯಕ್ಷರಿಗೆ ಭೇಟಿಕೊಡಲು ನಿರಾಕರಿಸಿದ್ದನ್ನು ವಿಸ್ತಾರದಿಂದ ಸೂಚಿಸಿ, ಮತ್ತೊ ದಿವಾನರನ್ನು ಭೇಟಿಮಾಡಬೇಕೆಂದು ತೀರ್ಮಾನವಾಯಿತು. ಶ್ರೀ ಮನ್ನಹಾಜಾಜರ ಮೇಲೂ ಮತ್ತು ಇತರರ ಮೇಲೂ ವೈಯಕ್ತಿಕ ಅಪವಾದನೆಗಳನ್ನು ಮಾಡಕೂಡದೆಂದು ತೀರ್ಮಾನವಾಯಿತು. ಜುಲಾಯಿ ೩೧ನೇ ತಾರೀಕು ಸಂಸ್ಥಾನಾದ್ಯಂತವೂ ಸಂಪೂರ್ಣ ಜವಾಬ್ದಾರಿ ಸರಕಾರದ ದಿನವನ್ನು ಆಚರಿಸಬೇಕೆಂದೂ, ಕಾಂಗ್ರೆಸಿನ ಗುರಿಯನ್ನು ಮುಟ್ಟಲು ಆಗಿಂದಾಗ್ಗೆ ಕಾಂಗ್ರೆಸ್ ಕೊಡುವ ಸೂಚನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಜನರು ಪ್ರಮಾಣ ತೆಗೆದುಕೊಳ್ಳಬೇಕೆಂದೂ, ಸಂಸ್ಥಾನದಲ್ಲಿರುವ ಎಲ್ಲಾ ಕಾಂಗ್ರೆಸ್ ಕಮಿಟಿಯು ಜವಾಬ್ದಾರಿ ಸರಕಾರವನ್ನು ಗಳಿಸಲು ತೀವ್ರವಾದ ಚಳವಳಿಯನ್ನು ಹೂಡಬೇಕು ಅದು ಶಾಂತಿಯುತವಾಗಿರಬೇಕು ಎಂಬುದಾಗಿ ವರ್ಕಿಂಗ್ ಕಮಿಟಿಯು ತೀರ್ಮಾನಿಸಿತು.

ಕೃಷ್ಣರಾಜನಗರ ಸಭೆ

ಕೃಷ್ಣರಾಜ ಮೈನರ್ ಪೌರ ಸಭೆಯಲ್ಲಿ ಖಾಲಿ ಬಿದ್ದಿರುವ ನಾಲ್ಕು ಚುನಾಯಿತ ಸದಸ್ಯರ ಸ್ಥಾನಗಳಿಗೆ ಉಪ ಚುನಾವಣೆಯು ಆಗಸ್ಟ್ ೨೮ನೇ ತಾರೀಕು ನಡೆಯುವುದು.

ಸಂಪಾಜೆ

ಚೆಂಬು ಗ್ರಾಮದ ಪಾಲೆ ಕಮುಡನ ಮಗ ನಾರ್ಕುಲನೆಂಬ ೪ ವರ್ಷದ ಹುಡುಗನು ಕಳೆದ ತಿಂಗಳ ತಾ. ೭ರಲ್ಲಿ ಗದ್ದೆಗೆಂದು ಹೋದವನು ದಾರಿ ತಪ್ಪಿ ಪರಾರಿಯಾಗಿದ್ದನೆಂದೂ, ಇತ್ತಲಾಗಿ ಆತನ ಮೂಳೆಗಳು ಸದರಿ ಗ್ರಾಮದ ಬೆಟ್ಟದಲ್ಲಿ ಈ ತಾ ೨೦ರಲ್ಲಿ ಪತ್ತೆಯಾಗಿದೆಯೆಂದೂ ಪೋಲೀಸರು ತನಿಖೆ ನಡೆಸಿದರಾಗಿ ವರ್ತಮಾನ

ಮಡಿಕೇರಿ

ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗು ಅಕ್ಟೋಬರ್ ತಾ. ೪ರಲ್ಲಿ ಜರಗುವದೆಂದು ವರ್ತಮಾನ.

೧೯೪೦ನೇ ದಶೆಂಬರಕ್ಕೆ ಅಂತ್ಯವಾಗುವ ನ್ಯಾಯವಿಧಾಯಕ ಸಭೆಯ ಅವಧಿಯನ್ನು ೧೯೪೧ನೇ ಮಾರ್ಚ ತಿಂಗಳ ವರೆಗೆ ಮುಂದರಿಸುವ ಬಗ್ಗೆ ವಿಚಾರಗಳಾಗುತ್ತಿವೆಯೆಂದು ವಾರ್ತೆ.

ಸ್ವದೇಶಾಭಿಮಾನಿ

ತಾರೀಕು ೪—೮—೧೯೩೯

ಬೊಂಬಾಯಿಯಲ್ಲಿ ಮದ್ಯಪಾನ ನಿಷೇಧ

ಬೊಂಬಾಯಿಯ ಒಂದೂವರೆ ಮಿಲಿಯ ಜನರು, ಆಗಸ್ಟ್ ಒಂದರಂದು ತಮ್ಮ ನಗರದಲ್ಲಿ ಸಂಪೂರ್ಣ ವ್ಯತ್ಯಾಸವಾದ ಹೊಸತೊಂದು ವಾತಾವರಣವನ್ನು ಕಂಡರು. ಎಂಟು ನೂರಕ್ಕೆ ಮಿಕ್ಕಿದ ಮದ್ಯದಂಗಡಿಗಳು ಎಂದೆಂದೂ ಮುಚ್ಚಿ ಮುಂದಕ್ಕೆ ಯಾವ ಕಾಲದಲ್ಲಿಯೂ ತೆರೆಯಲಾಗದಂತೆ ಭದ್ರವಾಗಿ ಮುಚ್ಚಲ್ಪಟ್ಟು ಜನರು ತಮ್ಮ ಕುಡಿಕತನದಿಂದ ಸಂಪೂರ್ಣ ನಿವೃತ್ತರಾಗುವಂತೆ ಮಾಡಿದ್ದು, ನಿಜವಾಗಿಯೂ ಬೊಂಬಾಯಿ ನಗರದ ಇತಿಹಾಸದಲ್ಲಿ ಚಿರಸ್ಮರಣೀಯವಾದ ವಿಷಯವಾಗಿದೆ ಬೊಂಬಯಿಯು ಇದರಿಂದ ಇನ್ನಷ್ಟು ಸೌಭಾಗ್ಯಶಾಲಿಯಾದ ನಗರವಾಗಿ ಅಭಿವೃದ್ಧಿ ಹೊಂದುವುದೆಂದು ಯಾವನಾದರೂ ನಿರೀಕ್ಷಿಸಬಹುದಾಗಿದೆ ಗಾಂಧಿಜಿಯವರು ಹೇಳಿದಂತೆ ಈ ಸುಧಾರಣೆಯನ್ನು ತರಲು ಕಾರ್ಯ ಪ್ರವೃತ್ತರಾದ ಲಕ್ಷಾಂತರ ಸಾಹಸಿಗರಿಂದ ಬೊಂಬಯಿ ನಗರದ ಚರಿತ್ರೆಯಲ್ಲಿ ಹೊಸ ಅಧ್ಯಾಯವೊಂದು ತೆರೆಯಲ್ಪಟ್ಟಿತು ಅಂತಹ ನಗರದಲ್ಲಿ ಮದ್ಯಪಾನ ನಿಷೇಧವನ್ನು ಕಾರ್ಯರೂಪಕ್ಕೆ ತಂದು ಕಾಂಗ್ರೆಸು ಮಂತ್ರಿಮಂಡಲವು ತನ್ನ ಅದ್ಭುತ ಶಕ್ತಿಸಾಮರ್ಥ್ಯಗಳನ್ನು ಇಂದು ಜಗತ್ತಿಗೆ ಸಾರಿದೆ ವಿರುದ್ಧ ಪಕ್ಷದ ಸ್ವಾರ್ಥಿಗಳ ಹಲವಾರು ಪ್ರತಿಷೇಧಗಳನ್ನು ಎದುರಿಸಿ, ಖೇರ್ ಮಂತ್ರಿಮಂಡಳವು, ಈ ಪ್ರಯೋಗವನ್ನು ಕಾರ್ಯರೂಪಕ್ಕೆ ತರುವಾಗ ಮುಂದಿರುವ ಪ್ರತಿಯೊಂದು ಪ್ರತಿನಿಷೇಧದ ಸಂಕಷ್ಟವನ್ನು ಆಲೋಚನೆ ತಂದಿದ್ದರೂ, ಅದಕ್ಕಿಂತ ಹೆಚ್ಚಾಗಿ ಇದರಿಂದಾಗುವ ಪ್ರಯೋಜನವನ್ನು ಗಮನದಲ್ಲಿಟ್ಟು ಈ ಅದ್ಭುತ ಸಾಹಸಕ್ಕೆ ಮನ ಮಾಡಿರಬೇಕೆಂದು ಹೇಳಬಹುದಾಗಿದೆ

ಕಾರ್ಯವನ್ನು ಪ್ರಯೋಗಕ್ಕೆ ತರುವಲ್ಲಿ ಬೊಂಬಯಿ ನಗರದ ಪ್ರಬಲ ಜನಮತವು ಕಾಂಗ್ರೆಸು ಮಂತ್ರಿಮಂಡಲಕ್ಕೆ ನೆರವಾಗಿದೆಯೆಂಬುದು, ಸ್ವಯಂಸೇವಕರಾಗಿ ಕೆಲಸಮಾಡಲು ಮುಂಬಂದ ಅಸಂಖ್ಯಾತ ಜನರ ಗಣನೆಯಿಂದಲೂ ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸಲು ನಿರ್ಧಾರಮಾಡಿದ ಅಲ್ಲಿನ ಆರುನೂರಕ್ಕೆ ಮಿಕ್ಕಿದ ಸಂಘ ಸಂಸ್ಥೆಗಳ ಸಹಕಾರದಿಂದಲೂ ವ್ಯಕ್ತವಾಗುತ್ತದೆ ವಿದ್ಯಾರ್ಥಿಗಳೂ, ಅಧ್ಯಾಪಕರೂ ವ್ಯಾಯಾಮ ಸಂಘಗಳೂ, ಮೊದಲಾದವು ಮದ್ಯಪಾನದ ಯಶಸ್ವಿತೆಗಾಗಿ ತಮ್ಮ ಸಂಪೂರ್ಣ ಸಹಾಯವನ್ನು ಕೊಡಲು ಇಂದು ಪ್ರತಿಜ್ಞೆ ತೊಟ್ಟಿವೆ

ಹಲವಾರು ವರ್ಷಗಳಿಂದ ಗಾಂಧಿಜೀ ಮೊದಲಾದವರು ಈ ಉತ್ತಮ ಸುಧಾರಣೆಗಾಗಿ ಶ್ರಮವಹಿಸಿ ದುಡಿಯುತ್ತಿದ್ದಾರೆ, ಇಷ್ಟು ತೀವ್ರವಾಗಿ ಮದ್ಯಪಾನ ನಿಷೇಧವು ರಾಷ್ಟ್ರದಲ್ಲಿ ಆಗಬೇಕಾದರೆ, ಇದರ ಎಲ್ಲಾ ಕೀರ್ತಿಯು ಅಂತಹ ಆರಂಭಗಾರರಿಗೇ ಸಲ್ಲತಕ್ಕದ್ದಾಗಿದೆ ನಾಳೆಗೆ ಬೊಂಬಾಯಿ ನಗರವು ಅಖಿಲ ಪ್ರಪಂಚದಲ್ಲಿ ಮಹಾಸ ಧಾರಣೆಯೊಂದನ್ನು ಜಯಶೀಲವಾಗಿ ಮಾಡಿದ ವಿಷಯವನ್ನು ಅಭಿಮಾನಪೂರ್ವಕವಾಗಿ ಜಗತ್ತಿನೆದುರು ಹೇಳಿಕೊಳ್ಳಬಹುದಾಗಿದೆ. ಬೊಂಬಾಯಿಯ ಈ ಸಾಹಸಕಾರ್ಯದಲ್ಲಿ ಇಡೀ ರಾಷ್ಟ್ರವೇ ಸಹಾನುಭೂತಿಯನ್ನೂ ಸಂತೋಷವನ್ನೂ ವ್ಯಕ್ತಪಡಿಸುತ್ತದೆ.

ಬಂಗಾಳದ ರಾಜಕೀಯ ಕೈದಿಗಳು

ಬಂಗಾಳದ ಎರಡು ಸೆರೆಮನೆಗಳಲ್ಲಿ ರಾಜಕೀಯ ಕೈದಿಗಳು ಉಪವಾಸ ವ್ರತವನ್ನು ಬಿಡದೆ ಮುಂದುವರಿಸುವ ನಿಮಿತ್ತ, ಬಹಳ ಸಂಕಷ್ಟದ ಸಂದರ್ಭವು ಬಂದೊದಗಿದೆ. ಬಂಗಾಳ ಮಂತ್ರಿಮಂಡಳವು ಹಿಂದೆ ನಿಶ್ಚಯಿಸಿದಂತೆ ಮಾಡಿದ್ದರೆ ಇಂತಹ ಪರಿಸ್ಥಿತಿಯು ಒದಗುತ್ತಲೇ ಇರಲಿಲ್ಲ. ಕೆಲವು ಕೈದಿಗಳನ್ನು ಬಿಡುಗಡೆ ಮಾಡಿದ್ದರೂ, ಇನ್ನನೇಕರು ಸೆರೆಮನೆಯ ಕೂಪದಲ್ಲಿ ನರಳುತ್ತಿದ್ದಾರೆ ಅವರನ್ನು ಬಿಡುಗಡೆಮಾಡಿ, ಶಾಂತ ವಾತಾವರಣವನ್ನು ಕಲ್ಪಿಸುವುದು ಸರಕಾರದ ನ್ಯಾಯವಾದ ನೀತಿಯಾಗಿದೆ

ಆದರೆ ಇಂದು ಹೀಗೆ ಹಠಯೋಗ ಮಾಡಿ, ಖಂಡಿತ ಉಪವಾಸ ಬೀಳುವ ರಾಜಕೀಯ ಕೈದಿಗಳ ವರ್ತನೆಯು ಅಷ್ಟೊಂದು ಅಭಿಮಾನಕ್ಕೆ ಕಾರಣವಾಗಿಲ್ಲ ರಾಷ್ಟ್ರಕ್ಕಾಗಿ ಅಷ್ಟೊಂದು ಸಂಕಷ್ಟವನ್ನು ಅನುಭವಿಸಿದ ಅವರು, ಹೀಗೆ ಸರಕಾರ, ಕಾಂಗ್ರೆಸು, ಮಹಾತ್ಮಾಜಿ ಇವರೆಲ್ಲರಿಗೂ ಬಹಳ ಬಿಕ್ಕಟ್ಟು ಉಂಟುಮಾಡಿದ ವಿಷಯವು ಅಷ್ಟು ಉಚಿತವಾಗಲಾರದು. ಮಹಾತ್ಮಾಜಿಯವರು ಅವರ ಬಿಡುಗಡೆಗಾಗಿ ಕಳೆದ ಒಂದು ವರ್ಷದಿಂದ ನಿರಂತರ ಯತ್ನಮಾಡುತ್ತಿದ್ದಾರೆ ಉಪವಾಸ ಮಾಡಬಾರದಾಗಿ ತಮ್ಮ ಸಂದೇಶವನ್ನು ಕಳುಹಿಸಿರುತ್ತಾರೆ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಕಲ್ಕತ್ತದ ವರೆಗೆ ಹೋಗಿ, ಅವರನ್ನು ಸಂದರ್ಶಿಸಿ, ಕಾಂಗ್ರೆಸಿಗೆ ಅವರ ವಿಚಾರದಲ್ಲಿ ಕಾರ್ಯಮಾಡಲು ಅವಕಾಶ ಕೊಡುವ ಸಲುವಾಗಿ ಉಪವಾಸವನ್ನು ಬಿಟ್ಟುಕೊಡಬೇಕಾಗಿ ಹೇಳಿರುತ್ತಾರೆ ಇಂತಹ ಸಂದರ್ಭದಲ್ಲಿ ತಮ್ಮ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ರಾಜಕೀಯ ಕೈದಿಗಳು ಉಪವಾಸ ಬಿಟ್ಟುಕೊಟ್ಟು, ದೇಶದ ಧುರೀಣರಿಗೆ ತಮ್ಮ ಬಿಡುಗಡೆಯ ವಿಷಯದಲಿಯೇ ನೆರವಾಗುವುದು ಅಗತ್ಯವೂ ಸಂದರ್ಭೋಚಿತವೂ ಆಗಿದೆ ಹಾಗೆ ಮಾಡಿದಲ್ಲಿ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಸಮಾಧಾನದಿಂದ, ಸಂಪೂರ್ಣ ವಿಚಾರದಿಂದ ಈ ಕುರಿತು ಯೋಗ್ಯವಾದೊಂದು ನಿರ್ಧಾರವನ್ನು ಮಾಡಲು ಅವಸರವು ಸಿಗುವಂತಾಗುವುದು

ದ್ವಂದ ಯುದ್ಧ!

ಪಂಡಿತ ನೆಹರು ಮತ್ತು ಸ ಭಾಷಬೋಸರೊಳಗೆ ವಾಗ್ಯುದ್ಧಗಳು ಸುರುವಾದಂತಿದೆ ಸಿಲೋನಿನ ಸವತಾವಾದಿ ಸಭೆಯೊಂದರಲ್ಲಿ ನೆಹರುಗಳು ಭಾಷಣ ಮಾಡುತ್ತಾ ಸುಭಾಷಬೋಸರ ಪುರೋಗಾಮಿ ಪಕ್ಷವು ಕೇವಲ ಸಮಯಾನುಸಾರಿಯಾದುದೆಂದೂ, ಧ್ಯೇಯವಿಲ್ಲದುದೆಂದೂ 'ಫ್ಯಾಸಿಸಂ' ತತ್ವದ್ದೆಂದೂ ಹೇಳಿದರು ಅದರಿಂದ ಕೆರಳಿದ ಸುಭಾಷಬೋಸರು ಹೀಗೆಂದು ಗರ್ಜಿಸಿದರು

"ಯಾರು ಎಡಪಕ್ಷದವರೆಂದು ಹೇಳಿಕೊಂಡು, ಬಲಪಕ್ಷದವರೊಡನೆ ತಿರುಗಾಡುತ್ತಿದ್ದರೋ ಯಾರು ಕೋಣೆಯ ಒಳಗಿದ್ದಾಗ ಒಂದು ವಿಧ, ಹೊರಗೆ ಬಂದಾಗ ಇನ್ನೊಂದು ವಿಧ ಮಾತನಾಡುತ್ತಾರೋ, ಅವರು ನಿಜವಾಗಿಯೂ ಸಮಯಾನುಸಾರಿಗಳು ಮತ್ತು ಧ್ಯೇಯವಿಲ್ಲದವರು, 'ಫ್ಯಾಸಿಸಂ' ಪ್ರಚಾರ ಮಾಡಬೇಕಾದರ, ಫಾಸಿಸ್ಟರು ಯಾರಿದ್ದಾರೆ? ಯಾರು ಕಾಂಗ್ರೆಸಿನಲ್ಲಿರುವ 'ಫ್ಯಾಸಿಸಂ' ವರ್ತನೆಯನ್ನು ಖಂಡಿಸುತ್ತಾರೋ ಅವರು ಫ್ಯಾಸಿಸ್ಟರೋ, ಇಲ್ಲವೇ, ಅಂತಹವರೊಡನೆ ಸೇರಿಕೊಂಡು ಅವರ ಕಾರ್ಯಗಳನ್ನು ಅನುಮೋದಿಸಿಕೊಂಡು, ಗುಟ್ಟಾಗಿ ವರ್ಕಿಂಗ್ ಕಮಿಟಿಯೊಡನೆ ಸೇರಿದ್ದು ನಿರ್ಣಯಗಳನ್ನು ತಯಾರಿಸುವವರು ಫ್ಯಾಸಿಸ್ಟರೋ ತಿಳಿಯದಾಗಿದೆ"

ಈ ಕೋಪದ ಮಾತು ನೆಹರುಗಳಿಗೆ ಆಶ್ಚರ್ಯವನ್ನುಂಟುಮಾಡಿದೆ. 'ನನಗೆ ವ್ಯಕ್ತಿಗತವಾದ ವಿಮರ್ಶೆ ಆಗುವುದಿಲ್ಲ. ನಾನು ಅದನ್ನ ಹೇಸುತ್ತೇನೆ. ನನ್ನ ಅಭಿಮತವು ಯಾವುದಾದರೊಂದು ಪಕ್ಷದ ವಿಷಯದಲ್ಲಿ ವಿರುದ್ಧ ಎಂಬುದು. ನಾನು ಆ ಬಗ್ಗೆ ಹೇಳಿದ ಮಾತುಗಳು ಆ ಪಕ್ಷದ ಧೋರಣೆಯ ಕುರಿತು ಟೀಕೆಯಲ್ಲದೆ ವ್ಯಕ್ತಿ ಟೀಕೆಯಲ್ಲ'ವೆಂದು ಅವರು ಸ್ಪಷ್ಟಪಡಿಸುತ್ತಾರೆ

ಇನ್ನಾದರೂ ಬೋಸರಿಗೆ ಪಂಡಿತ ನೆಹರುಗಳ ಟೀಕೆಯು ಅರ್ಥವಾದೀತೆಂದು ನಂಬಬಹುದಾಗಿದೆ

ಹೊಗೆಸೊಪ್ಪಿನ ಕಾನೂನು

ಮದ್ರಾಸು ಸರಕಾರದ ಹೊಗೆಸೊಪ್ಪಿನ ಕಾನೂನು, ೧೯೩೯ನೇ ಇಸವಿ ಆಗಸ್ಟ್ ತಿಂಗಳ ಒಂದನೇ ತಾರೀಕಿನಿಂದ ಪ್ರಾಂತದಲ್ಲಿ ಜಾರಿಗೆ ಬಂದಿದೆ ಆ ಕುರಿತು ವ್ಯಾಪಾರಸ್ಥರು ಬೇಕಾದ ಅನುಭವಗಳನ್ನು ಪಡಕೊಳ್ಳುವುದು ಅವಶ್ಯವಿರುತ್ತದೆ ಅದರಲ್ಲಿಯೂ ಚಿಲ್ಲರೆ ವ್ಯಾಪಾರಿಗಳಿಗೆ ಈ ಸಂದರ್ಭದಲ್ಲಿ ಏನುಮಾಡಬೇಕು, ಯಾರಿಂದ ಲೈಸನ್ಸು ಪಡಕೊಳ್ಳಬೇಕು, ಹೇಗೆ ಅದನ್ನು ಪಡಕೊಳ್ಳುವುದು, ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು ಯಾರು, ಅವರು ಎಲ್ಲಿರುತ್ತಾರೆ, ತೆರಿಗೆಯನ್ನು ಹೇಗೆ ತೆರುವುದು ಮೊದಲಾದ ವಿಷಯಗಳು ಚೆನ್ನಾಗಿ ಗೊತ್ತಿರುವುದಿಲ್ಲ ಆ ಬಗ್ಗೆ ಆ ಎಲ್ಲಾ ವಿಷಯಗಳ ಸ್ಪಷ್ಟೀಕರಣಕ್ಕಾಗಿ ಈ ಸಂಚಿಕೆಯಲ್ಲಿ ಹೊಗೆಸೊಪ್ಪಿನ ಕಾನೂನಿನ ಪುರವಣಿ ಸಂಚಿಕೆಯೊಂದನ್ನು ಪ್ರತ್ಯೇಕ ಕೊಡಲಾಗಿದೆ ಇದರಲ್ಲಿ ಮದ್ರಾಸಿನ ಹೊಗೆಸೊಪ್ಪಿನ ಕಾನೂನಿನ ವಿವರ ಚಿಲ್ಲರೆ ವ್ಯಾಪಾರಿಗಳಿಗೆ ಅವಶ್ಯವಿರುವ ಸೂಚನೆಗಳ, ತೆರಿಗೆಯ ದರಗಳು, ಲೆಕ್ಕಪತ್ರ ಇಡುವ ವಿಧಾನ, ಲೈಸನ್ಸು ಕೊಡುವ ಸಿಬ್ಬಂದಿಯ ಪರಿಚಯ, ಕಾನೂನಿಗೆ ತಪ್ಪಿದಲ್ಲಿ ಆಗುವ ದಂಡನೆ, ಅರ್ಜಿಫಾರ್ಮಿನ ನಮೂನೆಗಳ ಕುರಿತು ಸ್ಪಷ್ಟ ವಿಷಯಗಳು ಸೂಚಿತವಾಗಿವೆ ಇದು ಸರ್ವರಿಗೂ ಉಪಕಾರಿಯಾಗುವುದೆಂದು ನಂಬಲಾಗಿದೆ

ಹೊಸ ವಾರ್ತೆ

ಹೌಸ್ ಓಫ್ ಕಾಮನ್ಸಿನಲ್ಲಿ ವಿದೇಶ ರಾಜನೀತಿಯ ಕುರಿತು ಚರ್ಚೆಯು ಆರಂಭವಾಗಿದೆ

★

ಡಾನ್ಸಿಗ್ ಮತ್ತು ಪೋಲೆಂಡ್ ಇವುಗಳೊಳಗೆ ವ್ಯಾಪಾರ ಸ್ಪರ್ಧೆಯು ಆರಂಭವಾಗುವ ಸಂಭವವಿದೆ

★

ರಶ್ಯಾದೊಡನೆ ಒಪ್ಪಂದವಾಗಬಹುದೆಂದು ಚೆಂಬರ್ಲಿನರು ಭರವಸೆಯಿಂದಿದ್ದಾರೆ

★

ಬಂಗಾಳ ರಾಜಕೀಯ ಕೈದಿಗಳು ಉಪವಾಸವನ್ನು ಬಿಟ್ಟುಕೊಡಲು ಇಚ್ಛೆಪಡುವುದಿಲ್ಲ ಬಂಗಾಳದ ಮಂತ್ರಿಮಂಡಳವು ಆ ಕುರಿತು ಸಭೆ ಸೇರಿ ಆಲೋಚನೆ ಮಾಡುತ್ತಿದೆ

★

ಬೊಂಬಾಯಿಯಲ್ಲಿ ಆಗಸ್ಟ್ ಒಂದರಂದು ಸಂಪೂರ್ಣ ಮದ್ಯಪಾನ ನಿಷೇಧವಾಗಿದೆ ಮಹಾತ್ಮಾಜಿ ಮೊದಲಾದವರು ಶುಭ ಸಂದೇಶಗಳನ್ನು ಕಳುಹಿಸಿದ್ದಾರೆ

★

ಬೊಂಬಯಿಯಲ್ಲಿ ಮದ್ಯಪಾನ ನಿಷೇಧವು ಸಂಪೂರ್ಣ ಶಾಂತರೀತಿಯೋ ನಡೆಯಿತು ಮೊದಲಿನ ದಿನಸ ಕುಡಿಕರು ತಮ್ಮ ಕೊನೆಯ ಕುಡಿಯುವಿಕೆಯನ್ನು ತೀರಿಸುವ ದೃಶ್ಯವು ಪ್ರೇಕ್ಷಣೀಯವಾಗಿತ್ತು

ಹನ್ನೊಂದು ಗಂಟೆಯ ಹೊತ್ತಿಗೆ ಮದ್ಯದಂಗಡಿಗಳಿಗೆ ಹೋಗಿ ಬಾಕಿಯಿದ್ದ ಪಾತ್ರೆಗಳಿಗೆ ಮೊಹರುಹಾಕಿ ಭದ್ರಮಾಡಿಟ್ಟರು

ಪ್ರಧಾನ ಮಂತ್ರಿಗಳಾದ ಬಿ ಜಿ. ಖೇರರು ಪ್ರಾಂತೀಕಾಲ ಮದ್ಯಪಾನ ನಿಷೇಧವನ್ನು ಪ್ರಕಟಪಡಿಸಿದರ

ತಮ್ಮ ಆರಂಭ ಭಾಷಣದಲ್ಲಿ ಈ ನ್ಯಾಯವಾದ ಮತ್ತು ಗೌರವಪೂರ್ವಕವಾದ ಯೋಜನೆಯು ಖಂಡಿತ ಜಯಶೀಲವಾಗುವುದೆಂದು ಹೇಳಿದರು.

ಹಲವು ದೇವಾಲಯಗಳು ತೆರೆಯಲ್ಪಟ್ಟವು

ತಿನ್ನವೆಲ್ಲಿ ಜಿಲ್ಲೆಯ ತೆಂಕಾಶಿಯಲ್ಲಿ ಕಾಶೀ ವಿಶ್ವನಾಥದೇವಾಲಯಕ್ಕೆ ಹರಿಜನ ಪ್ರವೇಶವಾಯಿತು ಹರಿಜನ ಸೇವಕರು ಸಾರ್ವಜನಿಕ ಸಭೆಗಳನ್ನೇರ್ಪಡಿಸಿ, ಜನಮತವನ್ನು ಈ ಕಾರ್ಯದಲ್ಲಿ ಸಹಾನುಭೂತಿಯುಳ್ಳ ಹಾಗೆ ಮಾಡುತ್ತಿದ್ದಾರೆ ಗುರುವಾಯೂರ್, ಕುಡ್ಲೂರ್ ಮೊದಲಾದ ಕಡೆಗಳಲ್ಲಿ ಹರಿಜನ ದೇವಾಲಯ ಪ್ರವೇಶದ ಕುರಿತು ಸಂತೋಷ ಸೂಚಕ ಸಭೆಗಳಾದವು

ಉಟಕಮಂಡಿನ ನಾಯಕರ್ ದೇವಾಲಯವು ಹರಿಜನರಿಗೆ ತೆರೆಯಲ್ಪಟ್ಟಿತು.

ಅನಂತಪುರ ಜಿಲ್ಲೆಯ ಕದಿರಿ ತಾಲೂಕಿನ ಕುರುವ ಲ ಎಂಬಲ್ಲಿನ ಶ್ರೀ ಚೆನ್ನಕೇಶವ ಸ್ವಾಮಿ ದೇವಲಾಯವು ಹರಿಜನರಿಗೆ ತೆರೆಯಲ್ಪಟ್ಟಿತು

ಅಪರವಾಗಿ ಒಂದು ಸಾರ್ವಜನಿಕ ಸಭೆ ಜರಗಿ ಅನೇಕ ಕಾಂಗ್ರೆಸು ಮುಖಂಡರು ದೇವಳ ಪ್ರವೇಶ ಮಹತ್ವದ ಕುರಿತು ವಿವರಿಸಿ ಭಾಷಣಮಾಡಿದರು

ಸಂಸ್ಥಾನಗಳ ಕುರಿತು ಗಾಂಧಿಜಿಯವರು

ಸಾರ್ವಭೌಮ ಸರಕಾರವಾಗಲಿ ಆಶ್ರಿತ ರಾಜರಾಗಲಿ ಕಾಂಗ್ರೆಸನ್ನು ಅಲ್ಲಗಳೆದು ಮುಂದೆಹೋಗುವುದು ಸಾಧ್ಯವಿಲ್ಲ ಯಾಕೆಂದರೆ ಜನರು ಕಾಂಗ್ರೆಸಿನ ಆಶ್ರಯದಲ್ಲಿ ತಮ್ಮ ವಿಚಾರ ಶಕ್ತಿಗಳನ್ನು ತಿಳಿಸಿಕೊಂಡಿದ್ದಾರೆ ಕಾಂಗ್ರೆಸು ನಾಯಕರನ್ನು ಮುನ್ನಡೆಸಬೇಕಾಗಿದೆ ಯಾವ ಜನರ ಪ್ರಕೃತಿಸಹಜವಾಗಿ ಒಂದೇ ರಕ್ತ ಸಂಬಂಧದಿಂದ ಸಮಾಜದ ದೃಷ್ಟಿಯಿಂದಲೂ ಆರ್ಥಿಕ ದೃಷ್ಟಿಯಿಂದಲೂ ಒಂದೇ ಆಗಿದ್ದಾರೋ, ಅವರು ಬೇರೆಯಾಗಿರುವುದು ಸಾಧ್ಯವಿಲ್ಲ' ಹೀಗೆಂದು ಗಾಂಧೀಜಿಯವರು ಹೇಳುತ್ತಾರೆ

ಮಂಗಳೂರು ಟೌನ್ ಕೊಂಗ್ರೆಸ್ ಕಮಿಟಿ

ತಾ ೨-೮-೩೯ರಲ್ಲು ಸಂಜೆ ೫ ಗಂಟೆ ೩೦ಕ್ಕೆ ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷ ಶ್ರೀ ಕೊಂಚಾಡಿ ಕೇಶವ ಶೆಣ್ಯೆಯವರ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯು ವರದಿ

ಮದ್ರಾಸು ಸರಕಾರದ ಜಿ ಓ ನಂಬ್ರದ ಪ್ರಕಾರ ಟೌನ್ ಕಾಂಗ್ರೆಸ್ ಕಮಿಟಿಯು ತನ್ನ ಸದಸ್ಯತನಕ್ಕೆ ಶ್ರೀ ಯು. ಲಕ್ಷ್ಮಣ ಶೆಣೈ ಮತ್ತು ಶ್ರೀ ವಿ ಎಸ್. ಬಿಜೂರರು ಕೊಟ್ಟ ರಾಜಿನಾಮೆಯನ್ನು ಅಂಗೀಕರಿಸಲಾಯಿತು. ಆದರೆ ಬಿಜೂರರು ತಮ್ಮ ರಾಜಿನಾಮೆಯ ಕೊನೆಯ ಭಾಗದಲ್ಲಿ ಸೂಚಿಸಿದುದಕ್ಕೆ ಕಮಿಟಿಯು ತನ್ನ ಆಕ್ಷೇಪವನ್ನು ಸೂಚಿಸುತ್ತದೆ. ಇವರಿಬ್ಬರ ರಾಜೆಯಿಂದ ಖಾಲಿಯಾದ ಟೌನ್ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಎರಡು ಸ್ಥಾನಗಳಿಗೆ ಮುಂದಿನ ಮಹಾಸಭೆವರೆಗೆ ಶ್ರೀ ಯು. ಎಸ್ ಎನ್ ಹೊಳ್ಳ ಮತ್ತು ಬಾಬು ದೇವಡಿಗ ಇವರನ್ನು ನೇಮಿಸಲಾಯಿತು.

ಕಾಂಗ್ರೆಸ ಪ್ರಾಥಮಿಕ ಸದಸ್ಯರನ್ನು ದಾಖಲುಮಾಡುವರೇ ಈ ಹಿಂದೆ ಕಮಿಟಿಯು ಮಂಜೂರು ಮಾಡಿದ ರಿವಾಜಿಗೆ ಈ ಕೆಳಗಣ ಸೂಚನೆಯನ್ನು ಕೂಡಿಸಲಾಯಿತು

ಕಾರ್ಯಕಾರಿ ಮಂಡಳಿಯ ಸದಸ್ಯರು ಆಫೀಸಿನಿಂದ ಪುಸ್ತಕಗಳನ್ನು ಪಡೆದು ಮೆಂಬರರನ್ನು ದಾಖಿಲು ಮಾಡಲು ಅರ್ಹರು ಆದರೆ ಇವರು ಒಂದೊಂದೇ ಪುಸ್ತಕವನ್ನು ಕಾರ್ಯದರ್ಶಿಯವರಿಂದ ಪಡೆದು ಈ ಪುಸ್ತಕವನ್ನೂ ಮತ್ತು ಈ ಪುಸ್ತಕದ ಬಾಬ್ತು ಸಂಪೂರ್ಣ ಹಣವನ್ನು ಕೊಟ್ಟು ಬಾಕಿ ಪುಸಕನನ್ನು ಪಡೆಯತಕ್ಕದ್ದು ಎಲ್ಲಾ ಮೆಂಬರರು ತಮ್ಮ ಪಕ್ಕಿರುವ ಪುಸ್ತಕಗಳನ್ನೂ ಆ ಬಾಬ್ತು ಹಣವನ್ನೂ ಸೆಪ್ಟಂಬರ ತಿಂಗಳ ಮೊದಲನೇ ವಾರದ ಒಳಗೆ ಆಫೀಸಿಗೆ ಕಳ್ಳಿಸತಕ್ಕದ್ದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಗಾಂಧಿಜಿಯವರ ಸಂದೇಶಗಳು

ಅದ್ಭುತವಾದೊಂದು ಘಟನೆ

ಮಧುರೆಯ ಮಹಾ ಮೀನಾಕ್ಷಿ ದೇವಾಲಯವು 'ಹರಿಜನ'ರಿಗೆ ಮುಕ್ತದ್ವಾರವಾದ ವಿಷಯದಲ್ಲಿ ಮಹಾತ್ಮಾ ಗಾಂಧಿಯವರು ಹರ್ಷಿತರಾಗಿ ಹೀಗೆಂದು ತಮ್ಮ ಅಭಿಪ್ರಾಯವನ್ನು ಪ್ರಕಟಿಸುತ್ತಾರೆ—,

'ಜೂನ್ ೧೩ನೇ ದಿನ ಮಧುರಾದಲಿ ಜರಗಿದ ಹರಿಜನ ದೇವಸ್ಥಾನ ಪ್ರವೇಶ ಪರಿಷತ್ತಿನಲ್ಲಿ ಶ್ರೀಮತಿ ರಮೇಶ್ವರೀ ನೆಹರುರವರು ಕೊಟ್ಟ ಭಾಷಣವು ನನ್ನ ಮುಂದಿದೆ ಆ ದಿನದ ಸಭೆಗೆ ಬಂದು ಸೇರಿದ ಸಭಿಕರ ಬಹುಸಂಖ್ಯೆಯನ್ನೂ, ಅವರು ತೋರಿಸಿದ ಉತ್ಸಾಹವನ್ನೂ ವಿವರಿಸಿ ಉತ್ತೇಜಿತರಾಗಿ ಆಕೆ ನನಗೆ ಬರೆದ ಪತ್ರವೂ ನನ್ನ ಮುಂದಿದೆ. ಅವರು ಮಧುರೆಯ ಮೀನಾಕ್ಷೀ ದೇವಾಲಯವು ಹರಿಜನರಿಗೆ ತೆರೆಯಲ್ಪಡುವುದೆಂಬ ಆಸೆಯನ್ನು ಅದರಲ್ಲಿ ಪ್ರಕಟಿಸಿದ್ದರು. ಇಷ್ಟು ಬೇಗನೇ ದೇವಸ್ಥಾನದ ಬಾಗಿಲು ಹರಿಜನರಿಗೆ ತೆರೆಯಲ್ಪಡುವುದೆಂಬ ವಿಷಯು ನಾನು ಆಗ ಗ್ರಹಿಸಿರಲೇ ಇಲ್ಲ ನಿಜವಾಗಿಯೂ ಕಳೆದ ೮ನೇ ತಾರೀಕಿನಲ್ಲಿ ಅದ್ಭುತ ಕೆಲಸವೊಂದು ಆಗಿಹೋಯಿತು

'ಅಸ್ಪೃಶ್ಯತಾ ನಿವಾರಣಾ ಆಂದೋಲನಾ ಕಾರ್ಯದಲ್ಲಿ ಹಾಗೂ ಹರಿಜನ ದೇವಾಲಯ ಪ್ರವೇಶ ಚಳವಳದಲ್ಲಿ ಇದು ಅತ್ಯಂತ ಮಹತ್ವವಾದ ಘಟನೆಯಾಗಿದೆ. ತಿರುವಾಂಕೂರಿನ ದೇವಾಲಯವನ್ನು ಹರಿಜನರಿಗೆ ತೆರೆದಿಟ್ಟ ರಾಜಶಾಸನವು ನಿಸ್ಸಂಶಯವಾಗಿ ದೊಡ್ಡದೊಂದು ಪ್ರಗತಿ ಪರವಾದ ಕೆಲಸವೇ ಆಗಿದೆ. ಆದರೆ ಅದು ಮಹಾರಾಜರ ಆಜ್ಞಾಪಾಲನೆಯ ಬುದ್ಧಿಯಿಂದ ಆದದ್ದು ಅವರಿಗೆ ಒಳ್ಳೆಯ ಬುದ್ಧಿವಂತರಾದ ದಿವಾನರ ನೆರವಿತ್ತು ಮಹಾರಾಜ, ಮಹಾರಾಣಿ ಮತ್ತು ದಿವಾನರು ಸೇರಿ ಆ ಸುಧಾರಣೆಯನ್ನು ತಂದರು ಆದರೆ ಮಧುರಾ ದೇವಾಲಯ ಪ್ರವೇಶದ ವಿಷಯವು ಅದಕ್ಕಿಂತ ಹೆಚ್ಚು ಪ್ರಾಮುಖ್ಯತೆಯುಳ್ಳದ್ದು, ಏಕೆಂದರೆ ಇಲ್ಲಿ ಸಾರ್ವಜನಿಕರ ಅಭಿಪ್ರಾಯವೇ ಇಂತಹ ನ್ಯಾಯಬದ್ಧವಾದ ಸುಧಾರಣೆಗೆ ಆಸ್ಪದ ಕೊಟ್ಟಿತು ಮೀನಾಕ್ಷೀ ದೇವಾಲಯಕ್ಕೆ ಹೋಗುವವರ ವಿಚಾರದಲ್ಲಿಯ ಪರಿಸ್ಥಿತಿಯು ಇಂದು ಸುಧಾರಣೆಯಾಗಿದೆಯೆಂಬುದು ಇದರಿಂದ ವ್ಯಕ್ತವಾಗುತ್ತದೆ. ಶ್ರೀ ವೈದ್ಯನಾಥ ಅಯ್ಯರ್ ಮತ್ತು ಅವರ ಸಹಕಾರಿಗಳು ಹೀಗೆ ಸಾರ್ವಜನಿಕರ ಮನಸ್ಸನ್ನು ಬದಲಾಯಿಸಲು ಮಾಡಿದ ಸಾಹಸಕ್ಕಾಗಿ ಹೆಚ್ಚು ಪ್ರಶಂಸೆಗೆ ಅರ್ಹರಾಗಿರುತ್ತಾರೆ

'ಈ ಉತ್ತಮ ಆದರ್ಶವನ್ನು ದಕ್ಷಿಣ ದೇಶದ ಇತರ ದೇವಾಲಯಗಳು ಅನುಸರಿಸಲಿ ಎಂದು ಆಶಿಸಬೇಕಾಗಿದೆ ಸಾರ್ವಜನಿಕರು ಇದಕ್ಕಾಗಿ ಅವಸರ ಮಾಡಿ ಉದ್ವಿಗ್ನರಾಗುವುದು ಅಗತ್ಯವಿಲ್ಲ. ದೇವಾಲಯಕ್ಕೆ ಹೋಗುವ ಜನರ ಅಭಿಪ್ರಾಯವೇ ಹೆಚ್ಚು ಪ್ರಧಾನವಾದದ್ದು. ಅವರು ತಮ್ಮ ನಿಶ್ಚಿತವಾದ ತೀರ್ಮಾನವನ್ನು ಹೇಳಬೇಕು ಹರಿಜನ ಕೆಲಸಗಾರರು ಇಂತಹ ಸಂದರ್ಭದಲ್ಲಿ ಯಾವ ಅನ್ಯಾಯವೂ ಆಗದಂತೆ ನೋಡಿಕೊಳ್ಳಬೇಕು ಹರಿಜನರಿಗಾಗಿ ತೆರೆದಿಡಲಾದ ಪ್ರತಿಯೊಂದು ದೇವಾಲಯಗಳೂ ಹೊರಗೂ, ಒಳಗೂ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಬೇಕು. ಅಂತಹ ದೇವಾಲಯಗಳ ಪಾವಿತ್ರ್ಯವು ಯಾವ ರೀತಿಯಿಂದಲಾದರೂ ಹಾಳಾಗಬಾರದು. ಇಂತಹ ಶುದ್ಧ ಧಾರ್ಮಿಕ ಕ್ರಿಯೆಯಲ್ಲಿ ಯಾವ ರಾಜಕೀಯ ತತ್ವವನ್ನೂ ಸೇರಿಸಬಾರದು. ಹರಿಜನರಿಗೂ ದೇವಾಲಯಗಳನ್ನು ಅವರಿಗೆ ತೆರೆದಿಡುವ ವಿಷಯದಲ್ಲಿರುವ ಧಾರ್ಮಿಕ ತತ್ವವನ್ನು ಬೋಧಿಸಬೇಕು.'

ಕಳ್ಳು ಮಾಡುವವರು ನಿರುದ್ಯೋಗಿಗಳಾಗಲಿಕ್ಕಿಲ್ಲ

ಬೊಂಬಾಯಿಯ ಮಂತ್ರಿಮಂಡಲವು ಮದ್ಯಪಾನ ನಿಷೇಧ ಕಾರ್ಯದಿಂದಾಗಿ ಬಹುವಿಧವಾದ ಟೀಕೆಗೆ ಗುರಿಯಾಗಿದೆ ಹೀಗೆ ಟೀಕೆ ಮಾಡುವವರಲ್ಲಿ ಕಳ್ಳುಮಾಡುವವರು (ಭಂಡಾರಿಗಳ) ಪ್ರಧಾನ ಮಂತ್ರಿಯವರಿಗೆ ತಮ್ಮ ಬಿನ್ನಹವೊಂದನ್ನು ಕಳುಹಿಸಿ, ಅದರಲ್ಲಿ, ತಮಗೆ ಈ ವೃತ್ತಿಯ ಸೈನ್ಯದಲ್ಲಿ ತಾವು ಸಲ್ಲಿಸಿದ ಸೇವೆಗೆ ಬ್ರಿಟಿಷ್ ರಾಜರಿಂದ ದೊರೆತ ಗೌರವವೆಂದೂ, ಇತ್ತೀಚೆಗೆ ತಮಗೆ ಅನೇಕ ಸೌಕರ್ಯಗಳು ಹೋಗಿದ್ದರೂ ತಮ್ಮದೇ ಆದ ಸ್ವತಂತ್ರ ವೃತ್ತಿಯೆಂದಾದರೂ ಇತ್ತೆಂದೂ ಇಂದು ತಾವು ೮,೦೦೦ಕ್ಕೆ ಮಿಕ್ಕಿದಷ್ಟು ಜನರು ಇದರಲ್ಲಿ ಇರುವುದರಿಂದ ಮದ್ಯಪಾನ ನಿಷೇಧ ಮಾಡಿದಲ್ಲಿ, ತಮ್ಮ ಜೀವನಕ್ಕಾಗಿ ತಾವು ಕಾಂಗ್ರೆಸು ಮಾಡಿದಂತಹ ಚಳವಳವನ್ನಾಗಲಿ, ಅಥವಾ ಇನ್ನಾವ ವಿಧದ ಸಾಧ್ಯ ಚಳವಳಿಗಳನ್ನಾಗಲಿ ಮಾಡಬೇಕಾಗ ಬಹುದೆಂದೂ ತಿಳಿಸುತ್ತಾರೆ ಇವರಿಗೆ ಉತ್ತರ ರೂಪವಾಗಿ ಬರೆಯುತ್ತಾ ಹರಿಜನದಲ್ಲಿ ಮಹಾತ್ಮಾಜಿಯವರು ಹೀಗೆಂದು ಪ್ರಕಟಿಸಿದ್ದಾರೆ

'ಹೀಗೆ ಮನವಿ ಮಾಡಿದವರು ತೋರಿಸಿದ ಹೆದರಿಕೆಯು ಸರಕಾರದ ನಿರ್ಣಯವನ್ನು ತಡೆಯಲಾರದು ಸರಕಾರವು ನ್ಯಾಯವಾದ ಕಾರಣಕ್ಕೆ ಮಾತ್ರ ಬಗ್ಗಬೇಕಲ್ಲದೆ ಹೆದರಿಕೆಗಲ್ಲ ಕಳ್ಳುಮಾಡುವವರಿಗೆ ಒಳ್ಳೆಯ ಆಸ್ಪದವಿದೆ ಸಾರ್ವಜನಿಕರ ಕೃಪೆಯನ್ನು ಅವರು ಯಾಕೆ ಪಡೆಯಬಾರದು? ಮಂತ್ರಿಗಳು ಎಲ್ಲಾ ರೀತಿಯ ಹೆದರಿಕೆಗಳನ್ನು ಎದುರಿಸುತ್ತಾ, ನ್ಯಾಯಸಮ್ಮತವಾದ ಕಾರ್ಯವನ್ನು ಮಾಡಲು ಯತ್ನಿಸುತ್ತಿದ್ದಾರೆ. ಪ್ರಜಾಸಮ್ಮತ ಚುನಾವಣಾ ಪದ್ಧತಿಯಿಂದ ಚುನಾಯಿತರಾದ ಮಂತ್ರಿಗಳಿಗೆ, ಇಂತಹ ಹಿಂಸಾ ಪ್ರವೃತ್ತಿಯು ಬೆಳೆಯುವ ಕಾಲಗಳಲ್ಲಿ ಹೆದರಿಕೆಗಳು ಸಾಮಾನ್ಯ ಬರತಕ್ಕವುಗಳೇ ಅವರು ತಮ್ಮ ಕರ್ತವ್ಯವೆಂದು ತಿಳಿದದ್ದನ್ನು ಪೂರ್ತಿಗೊಳಿಸಬೇಕಾದಲ್ಲಿ ತಮ್ಮ ಅಧಿಕಾರ ಮತ್ತು ಜೀವಿತವನ್ನಾದರೂ ಅರ್ಪಿಸುವ ಸಂದರ್ಭ ಬಂದರೂ ಉದ್ದೇಶವನ್ನು ಮರೆಯಲಾರರು ಅಥವಾ ನ್ಯಾಯವು ದೊರಕಬೇಕೆಂದು ಮಾಡಿದ ಮನವಿಯು 'ಬೆದರಿಕೆ' ಹಾಕುವಂತೆ ಕೊನೆಗೊಂಡದ್ದರಿಂದ ಅವರು ನ್ಯಾಯವಾಗಿದ್ದದೆ ಕೋಪಗೊಳ್ಳುವುದೂ ಸಾಧ್ಯವಿಲ್ಲ ಮಂತ್ರಿಗಳು ಪ್ರತಿಯೊಬ್ಬ ಕಳ್ಳುಮಾಡುವವನಿಗೂ, ಅವನಿಗೆ ಅಭ್ಯಾಸವಿದ್ದ ಕೆಲಸದಲ್ಲಿಯೇ ವೃತ್ತಿಯು ಸಿಗುವಂತೆ ಯತ್ನಿಸುವುದರಲ್ಲಿ ಯಾವಾಗಲೂ ಸಿದ್ಧರಿದ್ದಾರೆ ಕಳ್ಳುಮಾಡುವವರ ಇಂದು ತಮ್ಮ ನಿವಾರಣೆಯನ್ನು ಕಂಡುಹುಡುಕುವ ಕೆಲಸದಲ್ಲಿ ಮಂತ್ರಿಗಳ ಸಹಾಯವನ್ನೂ ಪಡೆಯಬಹುದು. ಆದರೆ ಅವರು ತೆಗೆಯಬೇಕಾದದ್ದು ಮುಂದಕ್ಕೆ ಮದ್ಯವಲ್ಲ, ನೀರಾದ ಸಮಯದಲ್ಲಿ ನೀರಾ, ಇತರ ಸಮಯದಲ್ಲಿ ಬೆಲ್ಲಕ್ಕೆ ಬೇಕಾದ ಕಳ್ಳು

'ಇದಕ್ಕೆ ಗೌರವಪೂರ್ವಕವಾದ ಜಾಗರೂಕತೆ ಮತ್ತು ಸ್ಥಿರ ಬುದ್ಧಿ ಬೇಕು. ನೀರಾವನ್ನು ಕುಡಿಯುವ ಅಭ್ಯಾಸ ಮಾಡಬೇಕೆಂದೇನೂ ಇಲ್ಲ ನೀರೋ ಕಳ್ಳಿನ ಸ್ವಾದವನ್ನು ಪಡೆಯಲಾರದು ಅದರಲ್ಲಿ ಸ್ವಲ್ಪಾಂಶ ಮಾದಕ ಗುಣವಿದ್ದರೂ, ಮದ್ಯದಿಂದ ಅದು ತೀರಾ ಭಿನ್ನವಾಗಿದೆ ಶುದ್ಧವಾದ 'ನೀರೋ' ಸಕ್ಕರೆಯಂತೆ ಒಳ್ಳೆಯ ಆಹಾರ ವಸ್ತುವಾಗಿದೆ. ನೀರೋ ರುಚಿಯಾಗಿರುವಂತೆ ಕಳ್ಳು ರುಚಿಯಾಗಿಲ್ಲ. ನೀರೋವನ್ನು ಬೆಲ್ಲವನ್ನಾಗಿಯೂ ಮಾಡಬಹುದು ಕಬ್ಬಿನ ಬೆಲ್ಲಕ್ಕಿಂತ ತಾಳೆಯ ತೆಂಗಿನ ಮರಗಳ ಬೆಲ್ಲವು ಯಾವಾಗಲೂ ಒಳ್ಳೆಯದು. ಮತ್ತು ರುಚಿಯಲ್ಲಿಯೂ ಇದು ಉತ್ತಮವಾಗಿದೆ. ಮರದಿಂದ ತಯಾರುಮಾಡಿದ ಬೆಲ್ಲವು, ಸರಿಯಾಗಿ ಜಾಗ್ರತೆಯಿಂದ ತಯಾರುಮಾಡಿದಲ್ಲಿ ಕಬ್ಬಿನ ಬೆಲ್ಲಕ್ಕಿಂತ ಶುದ್ಧವಾಗಿರುವುದೆಂದು ನಂಬಬಹುದಾಗಿದೆ ಇದರಿಂದ ಅನೇಕ ರೀತಿಯ ಸಿಹಿ ತಿಂಡಿಗಳನ್ನು ತಯಾರಿಸಬಹುದು ಇಂತಹ ಮಹತ್ವದ ಕೆಲಸಗಳನ್ನು ಮಾಡಲು ಕಳ್ಳುಮಾಡುವವರ (ಭಂಡಾರಿಗಳ) ಸಹಾಯವು ಅವಶ್ಯವಿದೆ ಅವರು ಮನಸ್ಸು ಮಾಡಿ ನೆರವಾದರೆ ತಾವೂ ಲಾಭ ಪಡೆಯಬಹುದು, ಸರಕಾರಕ್ಕೂ ಸಹಾಯಮಾಡಬಹುದಾಗಿದೆ'

ಮದ್ಯಪಾನ ನಿಷೇಧಕ್ಕೆ ಬ್ರಿಟಿಷರ ಬೆಂಬಲ

ಶಿಪಿಲ್ಪಿನ ಬ್ರಿಟಿಷ್ ಟೆಂಪರೆನ್ಸ್ ಲೀಗಿನವರು ಗಾಂಧಿಜಿಯವರಿಗೆ ಈ ಕೆಳಗಿನ ಪತ್ರವೊಂದನ್ನು ಕಳುಹಿಸಿದ್ದಾರೆ

"ಇತ್ತೀಚೆಗೆ ಸೇರಿದ ಬ್ರಿಟಿಷ್ ಟೆಂಪರೆನ್ಸ್ ಲೀಗಿನಲ್ಲಿ ಈ ಕೆಳಗಿನ ಠರಾವು ೧ ಮತದಿಂದ ಮಂಜೂರಾಯಿತು

"ಈ ಸಂಘವು ಭಾರತದೇಶದಲ್ಲಿ ಮದ್ಯಪಾನ ಮತ್ತು ಅಮಲು ಪದಾರ್ಥಗಳ ನಿಷೇಧ ಮಾಡುವ ರಾಷ್ಟ್ರೀಯ ಪಕ್ಷದ ಕಾರ್ಯಗಳಿಗೆ ತನ್ನ ಶುಭ ಸಂದೇಶವನ್ನು ಕಳುಹಿಸುತ್ತದೆ, ಈ ಸುಧಾರಣೆಯ ಕಾರ್ಯಕ್ರಮಕ್ಕೆ ಬ್ರಿಟನಿನಲ್ಲಿ ಎಲ್ಲಾ ಜನರೂ ವಿಶೇಷವಾಗಿ ಕ್ರಿಸ್ತಿಯನರು, ಇದು ತಮ್ಮ ಕರ್ತವ್ಯವೆಂದು ಗ್ರಹಿಸಿ ಸಹಾನುಭೂತಿಯನ್ನೂ ಪ್ರೋತ್ಸಾಹವನ್ನೂ ತೋರಿಸಬೇಕು

"ನಾವು ಹಿಂದೂದೇಶದಲ್ಲಿ ನೀವು ಮಾಡುವ ಇಂತಹ ಲೋಕೋಪಕಾರೀ ಸುಧಾರಣೆಗಳನ್ನು ನೋಡುತ್ತಿದ್ದೇವೆ ನಮ್ಮ ಸಹಾನುಭೂತಿ ಬೆಂಬಲಗಳನ್ನು ಸದಾ ನೀಡಲು ಸಿದ್ಧರಿದ್ದೇವೆ

The Canara Industrial & Banking Syndicate Ltd.

Head Office: UDIPI (S. India)

ESTD) (1925

MEMBER: Reserve Bank of India, Bankers' Clearing House, Bombay.

Five Year Cash Certificates are issued at the price of Rs. 8, Rs. 80, Rs. 400and Rs. 800, repayable on maturity at Rs. 10, Rs 100, Rs 500, and Rs. 1000 respectively

You can cash the Certificates at any time before maturity.

AN INVESTMENT WHICH IS LIQUID AND YET VERY REMUNERATIVE.

Further particulars can be had from: The Car Street Branch, Mangalore

GENERAL BANKING BUSINESS TRANSACTED.

ಮಧುರೆಯ ಮೀನಾಕ್ಷಿ ದೇವಾಲಯ

[ದ್ರಾವಿಡ ಸಂಸ್ಕೃತಿ ನಾಗರಿಕತೆಗಳ ಮಾತೃ ಮಂದಿರವಾಗಿದ್ದು, ಇತಿಹಾಸದ ಪ್ರಾಚೀನತೆಯಿಂದಲೂ, ಶಿಲ್ಪಕಲಾ ವೈಭವದಿಂದಲೂ ದಕ್ಷಿಣ ಭಾರತದ ಪ್ರಸಿದ್ಧ ನಗರವಾಗಿದ್ದು, ಸರ್ವ ಧರ್ಮ ಸಹಿಷ್ಣುತೆಯನ್ನು ಬಹು ಕಾಲದಿಂದಲೇ ಮಾದರಿಯಾಗಿ ತೋರಿಸಿದ್ದ ಮಧುರಾ ನಗರವು ಇಂದು ಹರಿಜನರಿಗೆ ದೇವಾಲಯಗಳನ್ನು ಮುಕ್ತದ್ವಾರ ಮಾಡಿ ಅಖಿಲ ಭಾರತಕ್ಕೇ ಆದರ್ಶವಾಗಿದೆ ಆ ಸ್ಥಳದ ಇತಿಹಾಸವು ಇಲ್ಲಿ ಸೂಕ್ಷ್ಮವಾಗಿ ಕೊಡಲಾಗಿದೆ]

[illegible] ಸಂಶಯಪಡಬಹುದು; ಎಂಬುದೇ ಇರಬಹುದು; ಆದರೆ ಸಾವಿರಾರು ಮಂದಿ ಭಕ್ತರ ಮನಸ್ಸಿಗೆ ಶಾಂತಿ ಸಂತೃಪ್ತಿಗಳನ್ನು ಕೊಡುಗೆಯಿತ್ತ ಹಲವು ಪ್ರಸಿದ್ಧ ದೇವಾಲಯಗಳು, ಹಿಂದೂ ದೇಶದಲ್ಲಿವೆ. ಅಂತಹ ಇತಿಹಾಸ ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲಿ ಮಧುರೆಯ ಮೀನಾಕ್ಷೀ ದೇವಾಲಯವೂ ಒಂದು. ಅದರ ಇತಿಹಾಸ, ಕಲಾ ವೈಭವ, ಪ್ರಾಚೀನತೆ, ಧರ್ಮ ಸಹಿಷ್ಣುತೆ ಇವುಗಳು ಅತ್ಯಂತ ಪ್ರಖ್ಯಾತವಾಗಿವೆ.

ಚಾರಿತ್ರಿಕ ಮಹತ್ವ

೨೦೦೦ ವರ್ಷಗಳ ಹಿಂದೆಯೇ ಮಧುರೆಯು ಅನೇಕ ಬದಲಾವಣೆಗಳನ್ನು ಕಂಡಿತ್ತು ಅನೇಕ ರಾಜವಂಶಗಳು ಉದಿಸಿ, ಆಳಿ, ಅಳಿದು, ಕಟ್ಟಕಡೆಗೆ ತಮ್ಮ ಚರಿತ್ರೆಯನ್ನು ಸಾರಲು ಮಣ್ಣಿನಲ್ಲಿ ಕೆಲವೊಂದು ಭಗ್ನಾವಶೇಷಗಳನ್ನು ಮಾತ್ರ ಉಳಿಸಿಹೋಗಿವೆ ಕಾಲನ ಕಾಲ ತುಳಿತಕ್ಕೆ ಸಿಲುಕದೆ ಮಧುರೆ ಮಹಾ ದೇವಾಲಯವು ಮಾತ್ರ ಇಂದೂ ತನ್ನ ವೈಭವವನ್ನು ಸಾರುತ್ತದೆ.

ಸ್ಥಳಪುರಾಣದಂತೆ, ಪಾಂಡ್ಯರಾಜನಾದ ಕುಲಶೇಖರ ಪಾಂಡ್ಯನಿಗೆ ಅಲ್ಲಿನ ಸುಂದರೇಶ್ವರ ಎಂಬ ದೇವತೆಯು ಪ್ರತ್ಯಕ್ಷವಾಗಿ, ನನ್ನ ದೇವಾಲಯಕ್ಕೆ ಸುತ್ತ ಒಂದು ನಗರವನ್ನು ನಿರ್ಮಾಣ ಮಾಡುವಂತೆ, ಕನಸಿನಲ್ಲಿ ಬಂದು ಹೇಳಿದಂತೆಯೂ, ಆತನು ಅದನ್ನು ಪೂರ್ತಿ ಮಾಡಲು, ಆ ನಗರಕ್ಕೆ ಏನು ಹೆಸರಿಡುವುದೆಂದು ಚಿಂತೆಮಾಡುತ್ತಿರಲು, ದೇವತೆಯೇ ಪುನಃ ದರ್ಶನವಾಗಿ, ಅಮೃತದ ವೃಷ್ಟಿಯನ್ನು ಸುರಿಸಿದ್ದಂತೆಯೂ 'ಮಧುರಂ' (ಸಿಹಿ) ಎಂಬ ಹೆಸರನ್ನು ಸೂಚಿಸಿದಂತೆಯೂ ವರ್ಣಿತವಾಗಿದೆ

ಆದರೆ ಚರಿತ್ರೆಯ ಆಧಾರದಂತೆ ಅಲ್ಲಿಗೆ ಬಂದು ನೆಲಸಿದ ಆರ್ಯರು ಯಮುನಾನದಿಯ ದಡದಲ್ಲಿರುವ ಮಥುರಾ ನಗರದ ಹೆಸರನ್ನೇ ಇದಕ್ಕೆ ಕೊಟ್ಟಿರಬೇಕೆಂದು ತಿಳಿದುಬರುತ್ತದೆ

ಅಗಸ್ಟಸನ ಕಾಲದ ರೋಮನ ನಾಣ್ಯಗಳು ಮಧುರೆಯಲ್ಲಿ ಸಿಕ್ಕಿರುವುದರಿಂದ, ಇಲ್ಲಿಗೆ ರೋಮನ್ನರು ವ್ಯಾಪಾರಕ್ಕಾಗಿ ಬಂದಿರಬೇಕೆಂದು ಗೊತ್ತಾಗುತ್ತದೆ

ಮಧುರೆಯು ಒಳ್ಳೆಯ ಐಶ್ವರ್ಯದಿಂದ ಕೂಡಿದ ನಗರವಾಯಿತು ತಮಿಳ ಸಂಸ್ಕೃತಿಯು ಅಲ್ಲಿ ಅಭಿವೃದ್ಧಿ ಹೊಂದಿತು ನಾಲ್ಕನೆ ಮತ್ತು ಮೂರನೇ ಶತಮಾನಗಳ ತಮಿಳು ಕವಿಗಳು ಮತ್ತು ವಿದ್ವಾಂಸರು, ಮಧುರೆಯ ತಮಿಳು ಸಂಘದ ಪ್ರಶಸ್ತಿಯನ್ನು ಪಡೆಯದೆ ತಮ್ಮ ಕೃತಿಯು ಸಫಲವಾಯಿತೆಂದು ತಿಳಿಯುತ್ತಿರಲಿಲ್ಲ

೧೧ನೇ ಶತಮಾನದಲ್ಲಿ ಪಾಂಡ್ಯರನ್ನು ಗೆದ್ದು ಚೋಳರು ರಾಜ್ಯವನ್ನು ಕಟ್ಟಿದರು ರಾಜಾಧಿರಾಜ ಚೋಳನು (೧೦೧೮–೧೦೧೭) ಸಿಂಹಾಸನದಲ್ಲಿದ್ದಾಗ ಪಾಂಡ್ಯರು ತಿರಿಗಿ ಕ್ರಾಂತಿಯನ್ನೆಬ್ಬಿಸಿದ್ದರೂ, ಅವರ ಶಕ್ತಿಯು ಅಲ್ಲಿಯೇ ಅಡಗಿಸಲ್ಪಟ್ಟಿತು ೧೩ನೇ ಶತಮಾನದವರೆಗೆ ಚೋಳರು ರಾಜ್ಯವಾಳಿದರು ಆದರೆ ಕಟ್ಟಕಡೆಗೆ ಮಾರವರ್ಮಸುಂದರ ಪಾಂಡ್ಯ ಮತ್ತು ಜಾತವರ್ಮಸುಂದರ ಪಾಂಡ್ಯರ ಕಾಲದಲ್ಲಿ ತಿರಿಗಿ ಪಾಂಡ್ಯ ಭೂಪತಿಗಳೆ ರಾಜ್ಯವಾಳಿದರು

೧೪ನೇ ಶತಮಾನದಲ್ಲಿ ಮುಸ್ಲಿಮರು ಮಧುರೆಯನ್ನು ಆಕ್ರಮಿಸಿದರು ಆದರೆ ೧೩೬೫ರಲ್ಲಿ ವಿಜಯನಗರ ರಾಜ್ಯದ ಸೇನಾಧಿಪತಿ ಕಂಪನ ಎಂಬವನು ಅವರನ್ನು ಮಧುರೆಯಿಂದ ಓಡಿಸಿದನು ಆತನ ವಂಶದವರೆ, ವಿಜಯನಗರದ ಅರಸರ ಸಾಮಂತರಾಗಿ, ಮಧುರೆಯಲ್ಲಿ ೧೪೪೪ರವರೆಗೆ ರಾಜ್ಯವಾಳಿದರು. ಆ ಮೇಲೆ ಸ್ವಲ್ಪ ಕಾಲದವರೆಗೆ ತೆಲುಗು ರಾಜರ ವಶಕ್ಕೆ ಮಧುರೆಯು ಹೋಯಿತು ಆ ಮೇಲೆ ಪ್ರಭಾವಶಾಲಿಗಳಾದ ನಾಯಕವಂಶದ ಅರಸರ ಸ್ವಾಧೀನತೆಯಲ್ಲಿ ಮಧುರೆಯು ಬಹುಕಾಲ ವಿದ್ದು ಅಭಿವೃದ್ಧಿಗೊಂಡಿತು

ನಾಯಕರ ಒಡೆತನವು ಮಧುರೆಯಲ್ಲಿ ಸ್ಥಾಪನೆಯಾದ ವಿಷಯ ಚರಿತ್ರೆಯಲ್ಲಿ ಒಂದು ರಸಮಯವಾದ ವರ್ಣನೆಯಾಗಿದೆ ೧೫೫೯ರಲ್ಲಿ ತಂಜಾವೂರಿನ ರಾಜನಾದ ವೀರಶೇಖರ ಚೋಳನು, ಪಾಂಡ್ಯ ಭೂಮಿಯನ್ನು ಆಕ್ರಮಿಸಿದನು ಪಾಂಡ್ಯನು ವಿಜಯನಗರದ ಅರಸರ ಶರಣುಹೋದನು ರೋಷಗೊಂಡ ವಿಜಯನಗರದ ರಾಜನು ನಾಗಮನಾಯಕನೆಂಬ ಸೇನಾಪತಿಯನ್ನು ಕಳುಹಿಸಿ ತಂಜಾವೂರಿನ ಅರಸನ ದರ್ಪವನ್ನು ತಗ್ಗಿಸಿದನು ಆದರೆ ಆ ನಾಯಕನೆ ಅಲ್ಲಿ ವಿಜಯನಗರದ ಅರಸರ ಹೇಳಿಕೆಗೆ ವಿರುದ್ಧವಾಗಿ ರಾಜನೆಂದು ನೆಲೆ ನಿಂತನು

ಕೂಡಿ ನಡೆದು ತಂದೆಯೊಡನೆಯೇ ಕಾದಾಟ ಮಾಡಿ, ಆತನನ್ನು ಸೆರೆಹಿಡಿದು ತಂದನು ಆ ಬಳಿಕ ವಿಜಯನಗರದ ಅರಸನು, ಆ ವಿಜಯೀ ಯುವಕನಿಗೆ ಮಧುರಾ ನಗರದ ಒಡೆತನವನ್ನು ಇತ್ತನು ಆತನೇ ನಾಯಕವಂಶದ ಸ್ಥಾಪಕನೂ ಸುಪ್ರಸಿದ್ಧನೂ ಆದ ವಿಶ್ವನಾಥನಾಯಕನು ಆ ಮೇಲೆ ಮಗನಾದ ವಿಶ್ವನಾಥನ ಬಿನ್ನಹದಿಂದ ತಂದೆಯೂ ಬಂಧನದಿಂದ ಬಿಡುಗಡೆ ಹೊಂದಿದನು

ಆ ಮೇಲೆ ೨೦೦ ವರ್ಷಗಳ ತನಕ ಈ ನಾಯಕ ಮನೆತನದ ಅರಸರಿಂದ ಮಧುರಾ ನಗರವು ಆಳಲ್ಪಟ್ಟಿತು ಒಟ್ಟು ಹದಿನೈದ ಮಂದಿ ನಾಯಕ ವಂಶದ ರಾಜರು ರಾಜ್ಯವಾಳಿ



ಇದರಿಂದ ಕುಪಿತನಾದ ವಿಜಯನಗರದ ಅರಸನು, ತನ್ನ ಆಸ್ಥಾನದಲ್ಲಿ 'ನನ್ನ ಉಪ್ಪನ್ನ ಉಣ್ಣುವವರಲ್ಲಿ, ಯಾರೂ ಆ ವಿಶ್ವಾಸಘಾತಕನ ಶಿರಚ್ಛೇದನ ಮಾಡಿ ತರಲಾರಿರೇ?' ಎಂದು ಗರ್ಜಿಸಿದನು! ಆದರೆ ಅಂತಹ ಧೀರನ ತಲೆಯನ್ನು ಕಡಿದು ತರುವುದು ಅಷ್ಟೇನೂ ಸುಲಭ ಕೆಲಸವಲ್ಲವಾಗಿ ಸಭಿಕರೊಬ್ಬರೊಬ್ಬರ ಮುಖವನ್ನೊಬ್ಬರು ನೋಡುತಾ ಮೂಕರಾಗಿ ಕುಳಿತುಕೊಂಡಿದ್ದರು ಅರಸನ ಅದೇ ಪ್ರಶ್ನೆಯನ್ನು ತಿರಿಗಿ ಕೇಳಿದನು ಒಬ್ಬ ತರುಣನು ಸಭೆಯಲ್ಲಿ ಎದ್ದು ನಿಂತನು ಆತನ ಮುಖದಲ್ಲಿ ನಾಚಿಕೆ ಮತ್ತು ಕೋಪಗಳು ಕಿಡಿ ಮಸಗುತ್ತಿದ್ದವು "ಆತನು ನನ್ನ ತಂದೆಯೇ ಆಗಿದ್ದರೂ, ಅವನನ್ನು ಕೊಂದಾಗಲಿ, ಜೀವಂತವಾಗಿಯಾಗಲಿ ನಾನು ನಿಮ್ಮ ಪಾದದ ಬಳಿಗೆ ತಂದು ಒಪ್ಪಿಸುತ್ತೇನೆ" ಹೀಗೆಂದು ಆತನು ಮಾತು ಕೊಟ್ಟನು. ಈ ನವತರುಣನು ಸೈನ್ಯವನ್ನು

ದರು ೧೭೩೬ರಲ್ಲಿ ಆ ವಂಶದ ಕಡೆಯ ಅರಸನ ವಿಷಕಿಂದು [illegible] ವಂಶವು [illegible] ೧೭೬೩ರಲ್ಲಿ ತಿರಿಗಿ ಮಧುರೆಯು ಮುಸಲ್ಮಾನರ ಕೈವಶವಾಯಿತು ಆ ಮೇಲೆ ೧೮೦೧ರಲ್ಲಿ ಆರ್ಕಾಟಿನ ನವಾಬನು ಈಸ್ಟ್ ಇಂಡಿಯಾ ಕಂಪೆನಿಗೆ ಕರ್ನಾಟಿಕ್ ಮತ್ತು ಅದರ ಆಶ್ರಿತ ಭೂಮಿಗಳನ್ನು ಕೊಟ್ಟಂದಿನಿಂದ ಹೊಸಚರಿತ್ರೆಯೇ ಆರಂಭವಾಯಿತು

ಶಿಲ್ಪ ಕಲಾ ವೈಭವ

ಮೀನಾಕ್ಷಿ ದೇವಾಲಯ ಮತ್ತು ವಿಶ್ವನಾಥ ಮಂಟಪವೆಂಬ ಅರಮನೆ ಇವೆರಡೂ ದ್ರಾವಿಡ ಶಿಲ್ಪ ವೈಭವದ ಶಾಶ್ವತ ಗುರುತುಗಳಾಗಿ ನಿಂತಿವೆ ಮಧುರಾ ದೇವಾಲಯವು ೨೫ ಎಕ್ರೆ ಭೂಮಿಯಲ್ಲಿ ವಿಶಾಲವಾಗಿ ಕಟ್ಟಲ್ಪಟ್ಟಿದೆ ದೇವಾಲಯವನ್ನು ನಾಲ್ಕು ಎತ್ತರದ ಶಿಲೆಯ ಗೋಡೆಗಳು ಸುತ್ತುವರಿದಿವೆ ಗೋಪುರವು ೧೫೨ ಫೀಟು ಎತ್ತರವಾಗಿ ಭವ್ಯವಾಗಿ ನಿಂತಿದೆ

ದೇವಾಲಯದ ಮಧ್ಯದಲ್ಲಿ "ಸುವರ್ಣ ಪದ್ಮ ಸರಸ್ಸು" ಎಂಬುದಿದೆ ಸಾವಿರಕಂಬದ "ಬೆಳ್ಳಿಯ ಭವನ"ವೊಂದಿದೆ ಇದರಲ್ಲಿಯೇ ಪ್ರಾಚೀನ ದ್ರಾವಿಡ ವಿದ್ವಾಂಸರು ಸಭೆ ಸೇರುತ್ತಿದ್ದರು ಹೀಗೆ ಸಾವಿರ ಕಂಬದ ಅನೇಕ ಭವನಗಳಿವೆ ಇವು ಪ್ರಾಚೀನ ದ್ರಾವಿಡ ಶಿಲ್ಪದ ಕಲಾವೈಭವದ ಚಿಹ್ನೆಯಾಗಿವೆ. ನಿಜವಾದ ಇಲ್ಲಿನ ಸೌಂದರ್ಯವು ಇವುಗಳಲ್ಲಿರದೆ ಇವುಗಳ ರಚನೆ ಮತ್ತು ಸಂಯೋಜನೆಗಳಲ್ಲಿವೆ. ಈ ಭವನದ ಬಾಗಿಲಲ್ಲಿ ವಿಶ್ವನಾಥನಾಯಕನ ಸಹಪ್ರೋತ್ತಮನಾದ ಆರ್ಯನಾಯಕ ಮುದಲಿಯ ವಿಗ್ರಹವಿದೆ ಮೀನಾಕ್ಷೀ ದೇವಾಲಯವು ದಕ್ಷಿಣ ಭಾರತದ ಇತರ ಶಿಲ್ಪ ಕಲಾದೇವಾಲಯಗಳಿಗಿಂತ 'ರೂಪಚಿತ್ರಣ'ದಲ್ಲಿ ವಿಶೇಷವಾಗಿ ಪ್ರಶಂಸನೀಯವಾಗಿದೆ ಇಲ್ಲಿ ರಾಜರಾಣಿಯರ, ಸಚಿವರ, ಆಸ್ಥಾನದ, ಸಾಧುಸಂತರೇ ಮೊದಲಾದವರ ರೂಪ ಚಿತ್ರಗಳಿವೆ ಹಿಂದೂ ಧರ್ಮವು ದೇವರ ಕಲ್ಪನಾ ರೂಪ ಚಿತ್ರಣವನ್ನಲ್ಲದೆ, ಮಾನವ ಮೂರ್ತಿಗಳನ್ನು ಪ್ರಾಕೃತಿಕವಾಗಿ ಚಿತ್ರಿಸುವುದಿಲ್ಲವೆಂಬ ಅಪವಾದವನ್ನು ನಾವು ಇವುಗಳನ್ನು ತೋರಿಸಿ ಕಳೆಯಬಹುದು ನಿಜವಾಗಿ ರಕ್ತ ಮತ್ತು ಮಾಂಸ ಎಲುಬುಗಳಿಂದ ಕೂಡಿದ ದೇಹಕೃತಿಗಳ ಸೌಂದರ್ಯವೇ ಈ ಚಿತ್ರ ಶಿಲ್ಪಗಳಲ್ಲಿ ಎದ್ದು ಕಾಣುತ್ತದೆ

ದಕ್ಷಿಣಭಾರತದ ಸಂಸ್ಕೃತಿ, ನಾಗರಿಕತೆಗಳಿಗೆ ಮಧುರೆಯು ಅಪಾರ ಕ್ಷೇತ್ರವಾಗಿದೆ ಬೇರೆಬೇರೆ ಮತಧರ್ಮಗಳಲ್ಲಿ ವಿಶ್ವಾಸವುಳ್ಳವರೂ ಅಲ್ಲಿ ಬಂದು ಹಿಂದೆಯೇ ನೆಲೆಸಿದ್ದರು. ಕ್ರಿಶ್ಚಿಯನರೂ ಮುಸ್ಲಿಮರೂ ತಮ್ಮ ತಮ್ಮ ದೇವಾಲಯಗಳನ್ನು ಕಟ್ಟಿಸಿದ್ದಾರೆ ಮುಸ್ಲಿಮರೂ ಕ್ರಿಶ್ಚಿಯನರೂ ಅಲ್ಲಿ ತಂಗಿರುವ [illegible] ಜಾತಿಯತೆಯ ಜಗಳವು ಇರುವುದೇ [illegible] ಎಂಬಲ್ಲಿ ಒಂದು ಹಳೆಯ ಪ್ರಸಿದ್ಧ ಹಿಂದೂ ದೇವಾಲಯವೂ ಮುಸ್ಲಿಂ ಮಸೀದಿಯೂ ಹತ್ತಿರ ಹತ್ತಿರ ಕಟ್ಟಲ್ಪಟ್ಟಿದೆ

ಇಂತಹ ಇತಿಹಾಸ ಪ್ರಸಿದ್ಧ ಮಾತೃ ಸರ್ವ ಧರ್ಮ ಸಮಭಾವನೆಯ ಪುಣ್ಯಕ್ಷೇತ್ರವಾದ ಮಧುರೆಯು ದಕ್ಷಿಣ ಹಿಂದೂದೇಶದಲ್ಲಿ ಸರ್ವ [illegible] ಆದರ್ಶನಗರವಾಗಿದ್ದು ಇಂದು ಹರಿಜನರಿಗೂ ದೇವಾಲಯ ಪ್ರವೇಶ ಕೊಟ್ಟ ವಿಷಯ ಹಿಂದೂದೇಶಕ್ಕೆ ಗೌರವವನ್ನು ತರುವಂತಹುದಾಗಿದೆ

DIAMONDS! DIAMONDS!

BEST BRILLIANCY!

K. R. K. SHET,

MANGALORE

[illegible] ಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ ಶೆಟ್, ಜುವೆಲ್ಲರ್,

ಮಂಗಳೂರು

ಹೊಗೆಸೊಪ್ಪಿನ ಚಿಲ್ಲರೆ ವ್ಯಾಪಾರಿಗಳಿಗೆ ಅವಶ್ಯ ಸೂಚನೆಗಳು

[ಮದ್ರಾಸು ಸರಕಾರದ ಹೊಗೆಸೊಪ್ಪಿನ ಕಾನೂನು 1939ನೇ ಇಸವಿ, ಆಗಸ್ಟ್ ಒಂದರಿಂದ ಜಾರಿಗೆ ಬಂದಿದೆಯಷ್ಟೆ? ಆ ಕುರಿತು ಚಿಲ್ಲರೆ ವ್ಯಾಪಾರಿಗಳು ಏನು ಮಾಡಬೇಕಾಗಿದೆ; ಹೇಗೆ ಯಾರಿಂದ ಲೈಸನ್ಸು ಪಡೆಯುವುದು ಹೇಗೆ ಯಾರ ಮುಖಾಂತರ ತೆರಿಗೆ ತೆರುವುದು ಮೊದಲಾದ ವಿಷಯಗಳು ಈ ಕೆಳಗೆ ಸ್ಪಷ್ಟವಾಗಿ ಸರಕಾರದ ಪ್ರಕಟಣೆಯ ಆಧಾರದಿಂದ ಕೊಡಲಾಗಿದೆ.]

1 ಇದರ ಉದ್ದೇಶವೇನು?

ಹೊಗೆಸೊಪ್ಪಿನ ಕಾನೂನಿನಿಂದ ಚಿಲ್ಲರೆಯಾಗಿ ಹೊಗೆಸೊಪ್ಪು ಮಾರಾಟ ಮಾಡುತ್ತಿದ್ದವರಿಗೆ ಬಹಳ ಕಷ್ಟವಾಯಿತೆಂದೂ, ಮುಂದಕ್ಕೆ ಅವರು ತಮ್ಮ ಆ ಉದ್ಯೋಗವನ್ನೇ ಬಿಟ್ಟುಬಿಡಬೇಕಾದೀತೆಂದೂ, ಹೊಗೆಸೊಪ್ಪಿನ ಕಾನೂನಿನ ವಿಷಯ ಸರಿಯಾದ ಅನುಭವವಿಲ್ಲದವರು ಹೇಳುತ್ತಾರೆ. ಎಲ್ಲಾ ಚಿಲ್ಲರೆ ಹೊಗೆಸೊಪ್ಪಿನ ವ್ಯಾಪಾರಿಗಳೂ ಈ ಕಾನೂನಿನಂತೆ ಏನು ಮಾಡಬೇಕಾಗಿದೆಯೆಂಬುದನ್ನು ವಿವರಗೊಳಿಸುವ ಸಲುವಾಗಿಯೂ, ಮೇಲೆ ಹೇಳಿದ ಕೆಲವರ ಅಪಪ್ರಚಾರವು ಸರಿಯಾದುದಲ್ಲವೆಂದು ತಿಳಿಸುವ ಸಲುವಾಗಿಯೂ ಈ ಪ್ರಕಟಣೆಯನ್ನು ಕೊಡಲಾಗಿದೆ. ಆದರೆ ಇಲ್ಲಿ ಕೇವಲ ಚಿಲ್ಲರೆ ವ್ಯಾಪಾರಿಗಳಿಗೆ ಮಾತ್ರ ಸಂಬಂಧಿಸಿದ ವಿಷಯವಿದ್ದು, ಅವರು ಯಾವ ಕಾಲದಲ್ಲಿ ಹೇಗೆ ಹೇಗೆ ನಡೆದುಕೊಳ್ಳಬೇಕೆಂಬ ಸಂಗತಿಗಳು ಸರಳವಾದ ಭಾಷೆಯಲ್ಲಿ ವಿವರಿಸಲಾಗಿದೆ.

2 ನೀವು ಲೈಸನ್ಸು ಪಡಕೊಳ್ಳಬೇಕಾದದ್ದು ಏಕೆ?

ನಿಮ್ಮ ಅಂಗಡಿಯಲ್ಲಿ ಈ ಕೆಳಗೆ ಕೊಟ್ಟ ಯಾವುದೇ ವಸ್ತುಗಳನ್ನಾದರೂ ಮಾರಾಟ ಮಾಡುತ್ತೀರಾ?

೧) ಸಿಗರೇಟುಗಳು
೨) ಸಿಗಾರ್‌ಗಳು
೩) ಚುರೂಟುಗಳು
೪) ಬೀಡಿಗಳು
೫) ಪುಡಿ
೬) ಹೊಗೆ ಸೇದುವ ಸಲುವಾಗಿರುವ ಹೊಗೆಸೊಪ್ಪು

ಈ ಪಟ್ಟಿಯಲ್ಲಿ ಎಲೆಯೊಡನೆ ತಿನ್ನುವ ಹೊಗೆಸೊಪ್ಪು ಸೇರಿಸಲ್ಪಟ್ಟಿಲ್ಲವೆಂದು ನೀವು ನೋಡಬಹುದು. ನೀವು ಎಲೆ ಅಡಿಕೆಯೊಡನೆ ತಿನ್ನುವ ಹೊಗೆಸೊಪ್ಪನ್ನು ಮಾತ್ರ ಮಾರಾಟಮಾಡುವುದಾದರೆ ಹೊಗೆಸೊಪ್ಪಿನ ಕಾನೂನೇ ನಿಮಗೆ ಲಾಗೂವಾಗುವುದಿಲ್ಲ. ಅಂಥವರು ಆ ಕಾನೂನಿನ ವಿಷಯ ಏನೊಂದೂ ವಿಚಾರ ಕೆಳೆದುಕೊಳ್ಳದೆ, ವ್ಯಾಪಾರವನ್ನು ನಡೆಸಬಹುದು. ಆದರೆ ನೀವು ಸಿಗರೇಟು, ಚುರೂಟು, ಸಿಗಾರು, ಬೀಡಿ ಹೊಗೆಸೇದುವ ಹೊಗೆಸೊಪ್ಪು, ಪುಡಿ ಇವುಗಳನ್ನು ಮಾರಾಟ ಮಾಡುವಲ್ಲಿ ನಿಮ್ಮ ವ್ಯಾಪಾರವನ್ನು ನಡೆಸಬೇಕಾದರೆ ಆಗಸ್ಟ ಒಂದರ ಮೇಲೆ ಲೈಸನ್ಸು ಪಡಕೊಳ್ಳಲೇಬೇಕಾಗಿದೆ.

3 ಕೂಡಲೇ ನೀವು ಏನು ಮಾಡಬೇಕು?

ನೀವು ಲೈಸನ್ಸಿಗಾಗಿ ದುಡ್ಡು ಕೊಡುವುದಾಗಲಿ, ನಿಮ್ಮ ಅರ್ಜಿಯೊಡನೆ ಸ್ಟಾಂಪನ್ನು ಇಟ್ಟು ಕಳುಹಿಸುವುದಾಗಲಿ ಅವಶ್ಯವಿಲ್ಲ. ಯಾರು ಆಗಸ್ಟ್ ಒಂದರ ನಂತರ, ಮೇಲೆ ಹೇಳಿದ ಸಿಗರೇಟು, ಸಿಗಾರು ಚುರೂಟು ಪುಡಿ, ಬೀಡಿಗಳೇ ಮೊದಲಾದವುಗಳನ್ನು ಮಾರಲು ಇಚ್ಛೆಪಡುತ್ತಾರೋ ಅವರು, ಹಾಗೆಂದು ತಿಳಿಸುವ ಪತ್ರವೊಂದನ್ನು ತಾಲೂಕು ತಹಶೀಲ್ದಾರರ C/o ಬರೆದು, ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ಕಳುಹಿಸಬೇಕು. ನೀವು ಈಗಾಗಲೇ ಈ ರೀತಿ ಪತ್ರ ಕಳಿಸಿರದಿದ್ದರೆ, ಕೂಡಲೇ ಕಳಿಸಿ. ಇದಕ್ಕೆ ನಿಮಗೆ ಏನೂ ಖರ್ಚು ಬೀಳುವುದಿಲ್ಲ. ಈ ಪತ್ರವನ್ನು ನೀವು ಕಳುಹಿಸಿದರೆ ಆಗಸ್ಟ ಒಂದರ ಮೇಲೂ ಲೈಸೆನ್ಸು ಇಲ್ಲದೆ ನಿಮ್ಮ ವ್ಯಾಪಾರವನ್ನು ಕೆಲಸಮಯ ಮುಂದುವರಿಸಬಹುದು. ಯಾವಾಗ ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರು ನಿಮಗೆ ಒಂದು ಅರ್ಜಿ ಫೋರ್ಮು ಕಳುಹಿಸುತ್ತಾರೋ, ಆಗ ನೀವು ಲೈಸನ್ಸಿಗೆ ಅರ್ಜಿಮಾಡಬೇಕು.

4 ಲೈಸನ್ಸನ್ನು ಪಡೆಯುವುದು ಹೇಗೆ?

(೧) ಯಾರಿಗೆ ಅರ್ಜಿ ಬರೆಯಬೇಕು?

ಬಹುಶಃ ನಿಮಗೆ ಯಾರು ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರೆಂದು ಗೊತ್ತಿರಲಿಕ್ಕಿಲ್ಲ. ಅವರು ಹೊಗೆಸೊಪ್ಪಿನ ತೆರಿಗೆಯನ್ನು ಸಂಗ್ರಹಿಸಲು ಸರಕಾರದಿಂದ ನಿಯಮಿಸಲ್ಪಟ್ಟ ಹೊಸ ಉದ್ಯೋಗಸ್ಥರು, ಹೊಗೆಸೊಪ್ಪು ಮಾರಾಟ ಮಾಡುವವರು, ಈ ಹೊಗೆಸೊಪ್ಪಿನ ಕಾನೂನಿನಂತೆ, ಏನೆಲ್ಲಾ ಮಾಡತಕ್ಕದ್ದು ಎಂದು ಹೇಳಿ ಅವರಿಗೆ ಸಹಾಯ ಮಾಡುವವರೂ ಅವರೇ ಆಗಿದ್ದಾರೆ. ಪ್ರತಿಯೊಂದು ತಾಲೂಕು ಮತ್ತು ಹೆಚ್ಚಾಗಿ ಪ್ರತಿಯೊಂದು ದೊಡ್ಡ ನಗರಕ್ಕೂ ಒಬ್ಬೊಬ್ಬ ಕಮರ್ಶಿಯಲ್ ಟೇಕ್ಸ್ ಆಫೀಸರರು ಇರುತ್ತಾರೆ. ನಿಮ್ಮ ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರು ಎಲ್ಲಿ ಇದ್ದಾರೆಂದು ನಿಮಗೆ ತಿಳಿಯದಿದ್ದಲ್ಲಿ, ನೀವು ತಾಲೂಕು ಆಫೀಸಿನಲ್ಲಿ ಕೇಳಿ ತಿಳಕೊಳ್ಳಬಹುದು. ಹೆಚ್ಚಿನ ಸ್ಥಳಗಳಲ್ಲಿ, ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರು ತಾಲೂಕು ಆಫೀಸಿನಲ್ಲಿಯೇ ತಮ್ಮ ಆಫೀಸು ಮಾಡುತ್ತಾರೆ. ನೀವು ಹೊಗೆಸೊಪ್ಪಿನ ವ್ಯಾಪಾರ ಮಾಡುತ್ತೀರೆಂಬ ವಿಷಯವಾಗಿ ಪತ್ರಮುಖಾಂತರ ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ತಿಳಿಸದಿದ್ದರೆ, ಹಾಗೆಂದು ಅವರ ಮುಖತಃ ಹೇಳಿ ಅವರಿಂದ ಅರ್ಜಿಯ ಫೋರ್ಮನ್ನು ಪಡಕೊಳ್ಳಬೇಕು. ನೀವು ಮೊದಲೇ ಪತ್ರ ಬರೆದಿದ್ದರೆ ಅವರಾಗಿಯೇ ಅರ್ಜಿಫೋರ್ಮನ್ನು ನಿಮಗೆ ಕಳುಹಿಸಿಕೊಡುವರು.

(೨) ಅರ್ಜಿಫೋರ್ಮನ್ನು ಬರೆದು ತುಂಬಿಸುವುದು ಹೇಗೆ?

'ಅರ್ಜಿಫೋರ್ಮ' ಎಂದರೆ ಏನು? ಅರ್ಜಿಫೋರ್ಮು ಎಂದರೆ, ನೀವು, ನಿಮಗೆ ಲೈಸನ್ಸು ಕೊಡಬೇಕೆಂದು ಅಸಿಸ್ಟಾಂಟ ಕಮರ್ಶಿಯಲ್ ಟಾಕ್ಸ್ ಆಫೀಸರರೊಡನೆ ಕೇಳುವ ಒಂದು ಛಾಪಿಸಿದ ಕಾಗದ. ನಿಮಗೆ ಅದನ್ನು ಬರೆದು ತುಂಬಿಸಲು ತಿಳಿಯದಿದ್ದರೆ ಅಸಿಸ್ಟಾಂಟ್ ಕಮರ್ಶಿಯಲ್ ಟಾಕ್ಸ್ ಆಫೀಸರರು ಹೇಗೆ ಬರೆದು ತುಂಬಿಸುವುದೆಂದು, ಹೇಳಿ ಸಹಾಯ ಮಾಡುವರು.

ನಿಮಗೆ ಒಂದಕ್ಕಿಂತ ಹೆಚ್ಚು ಹೊಗೆಸೊಪ್ಪು ಮಾರಾಟ ಮಾಡುವ ಅಂಗಡಿಗಳಿದ್ದರೆ, ಪ್ರತಿಯೊಂದು ಅಂಗಡಿಗೂ ಪ್ರತ್ಯೇಕ ಪ್ರತ್ಯೇಕ ಲೈಸನ್ಸು ನೀವು ಪಡಕೊಳ್ಳಬೇಕು. ಅರ್ಜಿಫೋರ್ಮಿನಲ್ಲಿ ಬರೆದು ತುಂಬಿಸುವುದು ಸುಲಭದ ಕೆಲಸ. ನೀವು ತಿಳಿಸಬೇಕಾದ ವಿಷಯಗಳು ಯಾವವುಗಳೆಂದರೆ —

೧ ನಿಮ್ಮ ಹೆಸರು
೨ ನಿಮ್ಮ ವಾಸಸ್ಥಾನ
೩ ನೀವು ಹೊಗೆಸೊಪ್ಪನ್ನು ಮಾರಾಟ ಮಾಡುವ ಅಂಗಡಿಯೆಲ್ಲಿದೆ ಎಂದು
೪ ೧೯೩೮ನೇ ಇಸವಿ ಎಪ್ರಿಲ್ ತಿಂಗಳಿಂದ ೧೯೩೯ನೇ ಮಾರ್ಚ ತಿಂಗಳಿಗೆ ಅಂತ್ಯವಾಗುವ ವರ್ಷದಲ್ಲಿ ನೀವು ಎಷ್ಟು ಹೊಗೆಸೊಪ್ಪು ಮಾರಾಟ ಮಾಡಿದಿರೆಂದು.

ನೀವು ೧೯೩೮ನೇ ಎಪ್ರಿಲಿನಿಂದ ೧೯೩೯ನೇ ಮಾರ್ಚಿಗೆ ಅಂತ್ಯವಾಗುವ ವರ್ಷದಲ್ಲಿ ಮಾರಾಟ ಮಾಡಿದ ಹೊಗೆಸೊಪ್ಪಿನ ವಿಷಯ ಸರಿಯಾದ ಲೆಕ್ಕ ಪತ್ರವಿರದಿದ್ದಲ್ಲಿ ಒಂದು ಅಂದಾಜನ್ನು ತಿಳಿಸಿ. ನೀವು ಕಳೆದ ವರ್ಷ ಹೊಗೆಸೊಪ್ಪಿನ ವ್ಯಾಪಾರ ಮಾಡದೆ ಇದ್ದು, ಈ ವರ್ಷ ಹೊಸದಾಗಿ ವ್ಯಾಪಾರ ಆರಂಭ ಮಾಡುವುದಿದ್ದರೆ, ವರ್ಷವೊಂದಕ್ಕೆ ಎಷ್ಟು ಹೊಗೆಸೊಪ್ಪು ಮಾರಾಟಮಾಡಲು ಅಭಿಪ್ರಾಯ ಪಡುತ್ತೀರಿ ಎಂಬುದನ್ನು ತಿಳಿಸಿ. ನೀವು ಒಂದು ರೂಪಾಯಿ ಬೆಲೆಯ ಸಿಗರೇಟು ಇಲ್ಲವೇ ಬೀಡಿ ಮೊದಲಾದುವುಗಳನ್ನು ದಿನವೊಂದಕ್ಕೆ ಮಾರಾಟ ಮಾಡಲು ಅಭಿಪ್ರಾಯ ಪಡುತ್ತಿದ್ದರೆ, ಒಂದು ವರ್ಷಕ್ಕೆ ೩೬೫ ರೂಪಾಯಿ ಬೆಲೆಬಾಳುವ ಹೊಗೆಸೊಪ್ಪು ಮಾರಾಟ ಮಾಡುವಿರಿ. ಹಾಗಾಗಿ ವರ್ಷವೊಂದರ ಮಾರಾಟಮಾಡುವ ಹೊಗೆಸೊಪ್ಪಿನ ಕ್ರಯ ನೀವು ೩೬೫ ರೂಪಾಯಿಗಳೆಂದು ತಿಳಿಸಿರಿ. ನೀವು ಕೇವಲ ದಿನವೊಂದು ಎಂಟು ಆಣೆಯ ಹೊಗೆಸೊಪ್ಪನ್ನು ಮಾತ್ರ ಮಾರಾಟಮಾಡಲು ಅಭಿಪ್ರಾಯ ಪಡುವುದಿದ್ದರೆ, ವರ್ಷವೊಂದರ ೧೮೨ ರೂಪಾಯಿ ಬೆಲೆಯ ಹೊಗೆಸೊಪ್ಪೆಂದು ತಿಳಿಸಿ. ಅಸಿಸ್ಟಾಂಟ್ ಕಮರ್ಶಿಯಲ್ ಟಾಕ್ಸ್ ಆಫೀಸರರು ನೀವೆಷ್ಟು ಲಾಭ ಪಡೆಯುವಿರೆಂದು ತಿಳಿಯಲು ಇಚ್ಛೆ ಪಡುವುದಿಲ್ಲವೆಂಬುದನ್ನು ನೆನಪಿನಲ್ಲಿಡಿರಿ. ಅಥವಾ ನೀವು ಸ್ಟಾಕಾಗಿಟ್ಟ ಹೊಗೆಸೊಪ್ಪಿಗೆ ಎಷ್ಟು ಬೆಲೆ ಬರಬಹುದೆಂದೂ ಅವರಿಗೆ ತಿಳಿಯುವ ಅಪೇಕ್ಷೆಯಿಲ್ಲ, ಅವರಿಗೆ ಬೇಕಾದದ್ದು ವರ್ಷವೊಂದರ ನೀವು ಎಷ್ಟು ಬೆಲೆಯ ಹೊಗೆಸೊಪ್ಪು ಮಾರಾಟಮಾಡುತ್ತೀರಿ ಎಂಬುದು ಮಾತ್ರ.

ನಿಮಗೆ ಅರ್ಜಿ ಫೋರ್ಮು ಸಿಕ್ಕಿದ ಮೇಲೆ, ಅದರೊಳಗಡೆ ಬರೆದು ತುಂಬಿಸುವವುಗಳನ್ನು ಮುಗಿಸಿ ಹದಿನೈದು ದಿನಗಳೊಳಗೆ ತಿರಿಗಿ ಅಸಿಸ್ಟಾಂಟ್ ಕಮರ್ಶಿಯಲ್ ಟಾಕ್ಸ್ ಆಫೀಸರರಿಗೆ ಕಳುಹಿಸಬೇಕು. ನೀವು ತಿಳಿಸಿದ ಎಲ್ಲಾ ವಿವರಗಳನ್ನು ಅವರು ವಿಶ್ವಾಸಪೂರ್ವಕವಾಗಿ ಇಟ್ಟುಕೊಳ್ಳುವರು.

5 ನಿಮ್ಮ ಲೈಸನ್ಸಿನಿಂದ ಏನಾಗಬೇಕು?

ನಿಮ್ಮ ಅರ್ಜಿಯ ಫಾರ್ಮನ್ನು ಅಸಿಸ್ಟಾಂಟ್ ಕಮರ್ಶಿಯಲ್ ಟಾಕ್ಸ್ ಆಫೀಸರರು ಪಡೆದ ಕೂಡಲೇ ನಿಮಗೆ ಲೈಸನ್ಸು ಕಳುಹಿಸುವರು. ನೀವು ಈ ಲೈಸನ್ಸಿಗೆ ಏನೂ ಹಣ ತೆರಬೇಕಾಗಿಲ್ಲವೆಂಬುದನ್ನು ನೆನಪಿನಲ್ಲಿಡಿರಿ. ಲೈಸನ್ಸನ್ನು ನಿಮ್ಮ ಅಂಗಡಿಯಲ್ಲಿಯೇ ಇಟ್ಟುಕೊಳ್ಳಬೇಕು. ಯಾವ ಆಫೀಸರರಾದರೂ ನೋಡಬೇಕೆಂದು ಕೇಳಿದರೆ ನೀವು ಅದನ್ನು ತೋರಿಸಬೇಕು. ನಿಮ್ಮ ಹತ್ತಿರ ಲೈಸನ್ಸಿದ್ದರೆ, ಅವರು ನಿಮಗೇನು ತೊಂದರೆ ಕೊಡಲಾರರು. ನೀವು ಅಂಗಡಿ ಇಡದೆ ಹೊಗೆಸೊಪ್ಪು ಹೊತ್ತು ಮಾರಾಟಮಾಡುವವರಾಗಿದ್ದರೆ, ಲೈಸನ್ಸು ನಿಮ್ಮ ಕೈಯಲ್ಲಿಯೇ ಇರಬೇಕು. ಆಫೀಸರರು ಕೇಳಿದರೆ ನೀವು ತೋರಿಸಬೇಕು. ಯಾರ ಹತ್ತಿರ ಲೈಸನ್ಸಿದೆಯೋ ಅಂತಹ ವ್ಯಾಪಾರಿಗಳಿಗೆ ವ್ಯಾಪಾರದಲ್ಲಿ ಯಾವ ತೊಂದರೆಯೂ ಇಲ್ಲ.

6 ಪ್ರತಿ ತಿಂಗಳಿಗೂ ನೀವು ಎಷ್ಟು ತೆರಿಗೆ ತೆರಬೇಕು?

ಲೈಸನ್ಸಿನಲ್ಲಿಯೇ, ಅಸಿಸ್ಟಾಂಟ್ ಕಮರ್ಶಿಯಲ್ ಟಾಕ್ಸ್ ಆಫೀಸರರು, ನೀವು ತಿಂಗಳೊಂದರ ಎಷ್ಟು ತೆರಿಗೆ ತೆರಬೇಕೆಂಬುದನ್ನು ತಿಳಿಸುವರು. ಹೊಗೆಸೊಪ್ಪನ್ನು ಮಾರಾಟಮಾಡುವ ಪ್ರತಿಯೊಬ್ಬ ಮನುಷ್ಯನೂ ಈಗ ಸರಕಾರಕ್ಕೆ ಸ್ವಲ್ಪ ತೆರಿಗೆ ತೆರಬೇಕಾಗಿದೆ. ನೀವು ವರ್ಷ ಒಂದಕ್ಕೆ 200 ರೂಪಾಯಿಗಳ ಅಥವಾ ಅದಕ್ಕಿಂತ ಕಡಿಮೆ ಬೆಲೆಯಷ್ಟು ಹೊಗೆಸೊಪ್ಪು ಮಾರಾಟ ಮಾಡುವುದಿದ್ದರೆ, ತಿಂಗಳಿಗೆ ಎಂಟಾಣೆ ತೆರಿಗೆ ತೆರಬೇಕು. ನೀವು 400 ರೂಪಾಯಿ ಮಿಕ್ಕದ 200 ರೂಪಾಯಿಗಳಿಂದ ಮೇಲಿನ ಕ್ರಯದ ಹೊಗೆಸೊಪ್ಪು ವರ್ಷ ಒಂದರ ಮಾರಾಟ ಮಾಡುವುದಿದ್ದರೆ, ತಿಂಗಳಿಗೆ ಒಂದು ರೂಪಾಯಿ ತೆರಿಗೆ ತೆರಬೇಕು. ವರ್ಷಕ್ಕೆ 400 ರೂಪಾಯಿಗಳಿಗಿಂತ ಮಿಕ್ಕಿದ ಕ್ರಯದ ಹೊಗೆಸೊಪ್ಪನ್ನು ನೀವು ಮಾರಾಟ ಮಾಡುವುದಿದ್ದರೆ ಮದ್ರಾಸು ಸರಕಾರದ ಹೊಗೆಸೊಪ್ಪಿನ ಕಾನೂನಿನ ನಿಬಂಧನೆಗೆ ಅನುಸಾರವಾಗಿ, ಅಸಿಸ್ಟಾಂಟ್ ಕಮರ್ಶಿಯಲ್ ಟಾಕ್ಸ್ ಆಫೀಸರರು ನೀವು ತೆರಬೇಕಾದ ತೆರಿಗೆಯ ವಿವರವನ್ನು ತಿಳಿಸುವರು.

7 ಮಾಸಂಪ್ರತಿ ತೆರಿಗೆಯನ್ನು ಯಾವಾಗ ತೆರುವುದು?

ಯಾವಾಗ ತೆರಿಗೆ ತೆರಬೇಕೆಂಬ ವಿಷಯ ಅಸಿಸ್ಟಾಂಟ್ ಕಮರ್ಶಿಯಲ್ ಟಾಕ್ಸ್ ಆಫೀಸರರು ನಿಮ್ಮ ಲೈಸನ್ಸಿನಲ್ಲಿ ತಿಳಿಸುವರು. ನಿಮ್ಮ ಲೈಸನ್ಸಿನಲ್ಲಿ ತಿಳಿಸಿದ, ತೆರಿಗೆಯ ಹಣವನ್ನು, ನೀವು ಮುಂದಿನ ತಿಂಗಳ ಹತ್ತನೆ ತಾರೀಕಿನ ಒಳಗೆ ತೆರಬೇಕು. ಅಂದರೆ ನೀವು ಮೊದಲಾಗಿ ತೆರಿಗೆ ತೆರಬೇಕಾದ ತಿಂಗಳು ಆಗಸ್ಟು. ಆದರೆ, ನಿಮ್ಮ ಆ ತಿಂಗಳ ತೆರಿಗೆಯನ್ನು ಸಪ್ಟಂಬರ ಹತ್ತನೇ ತಾರೀಕಿನ ದಿನ ಅಥವಾ ಅದರೊಳಗೆ ತೆರಬೇಕು. ಆ ಮೇಲೆ ಸಪ್ಟಂಬರ ತಿಂಗಳ ತೆರಿಗೆಯನ್ನು ಅಕ್ಟೋಬರ ತಿಂಗಳ ಹತ್ತರೊಳಗೆ ತೆರಬೇಕು. ಹೀಗೆ ಇದರ ಕ್ರಮವಾಗಿದೆ.

8 ನಿಮ್ಮ ತಿಂಗಳ ತೆರಿಗೆಯನ್ನು ಹೇಗೆ ತೆರುವುದು?

ನಿಮ್ಮ ಲೈಸನ್ಸಿನಲ್ಲಿಯೇ ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರು, ನೀವು ಹೇಗೆ ತೆರಿಗೆ ತೆರಬೇಕೆಂಬುವ ವಿಷಯ ತಿಳಿಸುವರು. ನೀವು ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರು ವಾಸಮಾಡುವ ಪಟ್ಟಣದಲ್ಲಿಯೇ ಇರುವುದಿದ್ದರೆ, ನಿಮಗೆ ಏನೂ ತೊಂದರೆಯಿಲ್ಲ. ಅವರೇ ಪ್ರತಿ ತಿಂಗಳೂ ನಿಮ್ಮ ಅಂಗಡಿಗೆ ತೆರಿಗೆ ವಸೂಲು ಮಾಡಲು ಬಿಲ್ಲ ಕಲೆಕ್ಟರನ್ನು ಕಳುಹಿಸುವರು. ಈ ಬಿಲ್ ಕಲೆಕ್ಟರನು ತಾನು ಯಾರೆಂದು ತಿಳಿಸಲು ಅಧಿಕಾರ ಪತ್ರವನ್ನು ಪಡಕೊಂಡವನಿರುತ್ತಾನೆ, ಮಾತ್ರವಲ್ಲದೆ ನೀವು ತೆತ್ತ ತೆರಿಗೆಗೆ ಅಚ್ಚಾದ ರಶೀದಿಯನ್ನು ಕೊಡುವನು. ನೀವೊಂದು ಹಳ್ಳಿಯಲ್ಲಿ ಇರುವುದಿದ್ದರೆ, ನೀವು ಮಾಸಿಕ ತೆರಿಗೆಯನ್ನು ಹಳ್ಳಿಯ ಮುಖ್ಯ ಸರಕಾರೀ ಅಧಿಕಾರಿಗಳ ವಶ ತೆರಬೇಕು. ಅವರೇ ನಿಮಗೆ ತೆರಿಗೆ ಕಟ್ಟಿದಕ್ಕಾಗಿ ಅಚ್ಚಾದ ರಶೀದಿಯನ್ನು ಕೊಡುವರು. ನಿಮ್ಮ ಲೈಸನ್ಸಿನಲ್ಲಿ ಬರೆದಿರುವುದನ್ನು ನೀವು ಓದಿದರೆ ತೆರಿಗೆಯನ್ನು ಹೇಗೆ ತೆರಬೇಕೆಂದು ನಿಮಗೇ ತಿಳಿದೀತು.

9 ಹೊಸ ಲೈಸೆನ್ಸುಗಳನ್ನು ಪಡಕೊಳ್ಳುವುದು

ಸರಕಾರೀ ವರ್ಷವು ಎಪ್ರಿಲ್ ಒಂದರಿಂದ ಮುಂದಿನ ಎಪ್ರಿಲ್ ಒಂದರ ವರೆಗೆ. ನೀವು ಈಗ ಪಡೆಯುವ ಲೈಸನ್ಸು, 1940ನೇ ಇಸವಿ ಮಾರ್ಚ 30ನೇ ತಾರೀಕಿನ ತನಕದ ವರೆಗೆ ನಡಾಗಿರುತ್ತದೆ. ಆ ಮೇಲೆ ಮುಂದಿನ ವರ್ಷದ ವ್ಯಾಪಾರದ ಬಗ್ಗೆ ನೀವು ಹೊಸ ಲೈಸನ್ಸನ್ನು ಪಡಕೊಳ್ಳಬೇಕಾಗಿದೆ. ಇದನ್ನು ಪಡೆಯಲು ನಿಮಗೆ ಏನೂ ತೊಂದರೆಯಾಗಲಾರದು. ಆದರೆ ನೀವು ನಿಮಗೆ ಮೊದಲಿನ ಲೈಸನ್ಸುಕೊಟ್ಟ ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ, 1940ನೇ ಇಸವಿ ಮಾರ್ಚ ಒಂದರ ಮೊದಲು ಬರೆದುಕೊಳ್ಳಬೇಕು. ಹೊಸ ಲೈಸನ್ಸು ಕೂಡಾ ನಿಮಗೆ ಹಣ ತೆರದೇ ಕೊಡಲ್ಪಡುವುದು. ನೀವು ಹೊಸ ಲೈಸನ್ಸಿಗೆ ಬರೆಯುವಾಗ, ಮೊದಲಿನ ಲೈಸನ್ಸಿನ ಬಗ್ಗೆ ತುಂಬಿಸಿದ ಅರ್ಜಿಫಾರ್ಮಿನಲ್ಲಿ ವಿವರಗಳನ್ನು ಬರೆ

ಷ್ಟು ತಿಳಿಸಬೇಕು; ಆದರೆ ವರ್ಷಕ್ಕೆ ನೀವು ಎಷ್ಟು ಹೊಗೆಸೊಪ್ಪು ಮಾರಾಟ ಮಾಡುತ್ತೀರೆಂಬ ವಿಷಯವಾಗಿ ತಿರಿಗಿ ತಿಳಿಸಬೇಕಾಗಿಲ್ಲ. ಈ ಫಾರ್ಮುಗಳನ್ನು ನೀವು ಅಸಿಸ್ಟೆಂಟ್ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಿಂದ ಪಡೆಕೊಳ್ಳಬಹುದು. ಪ್ರತಿಯೊಂದು ಲೈಸನ್ಸು ಮಾರ್ಚಿ ತಿಂಗಳ ವರೆಗೆ ಅಧಿಕಾರವುಳ್ಳವುಗಳು. ಆ ಮೇಲೆ ಯಾವಾಗಲೂ, ಹೊಸ ಲೈಸನ್ಸು ಪಡೆಕೊಳ್ಳಬೇಕು

10 ನಿಮ್ಮ ಲೈಸನ್ಸಿನ ವಿಷಯ ಇನ್ನೂ ಕೆಲವು ಅಭಿಪ್ರಾಯಗಳು

ಈ ಲೈಸನ್ಸು ನಿಮ್ಮ ಹೆಸರಲ್ಲಿ ಕೊಡಲ್ಪಡುವುದು. ಆದರೆ ನೀವು ನಿಮ್ಮ ಅಂಗಡಿ ಮತ್ತು ಹೊಗೆಸೊಪ್ಪನ್ನು ಇನ್ನೊಬ್ಬನಿಗೆ ಮಾರಾಟ ಮಾಡಿದರೆ, ನಿಮ್ಮ ಲೈಸನ್ಸನ್ನು ಯಾರಿಗೂ ಮಾರಾಟಮಾಡಕೂಡದು. ಆದರೆ ಅದನ್ನು ಪಡೆಕೊಂಡವನು, ಸುಲಭವಾಗಿ ಏನೂ ಖರ್ಚಿಲ್ಲದೆ, ಅವನ ಹೆಸರಲ್ಲಿಯೇ ಹೊಸ ಲೈಸನ್ಸು ಪಡೆಕೊಳ್ಳಬಹುದು ನೀವು ನಿಮ್ಮ ಅಂಗಡಿಯನ್ನು ಒಂದುಕಡೆಯಿಂದ ಇನ್ನೊಂದು ಕಡೆಗೆ ಒಯ್ದರೆ, ಆ ವಿಷಯದ ವಿವರವನ್ನು, ಅಸಿಸ್ಟೆಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ತಿಳಿಸಬೇಕು ಅವರು ನಿಮ್ಮ ಲೈಸನ್ಸಿನಲ್ಲಿ ನಿಮ್ಮ ಹೊಸ ಎಡ್ರೆಸನ್ನು ಬದಲಾಯಿಸಿ ಬರೆಯುವರು ಇದಕ್ಕೆ ನೀವು ಏನೂ ಹಣ ತೆರಬೇಕಾಗಿಲ್ಲ ನಿಮ್ಮ ಲೈಸನ್ಸನ್ನು ಜಾಗ್ರತೆಯಿಂದ ಇಟ್ಟುಕೊಳ್ಳಿ ನೀವು ಲೈಸನ್ಸನ್ನು ಕಳಕೊಂಡರೆ, ಅದರ ತಾಜಾ ಪ್ರತಿಯೊಂದನ್ನು ನಾಲ್ಕಾಣೆ ತೆತ್ತರೆ ಅಸಿಸ್ಟೆಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರಿಂದ ಪಡೆಕೊಳ್ಳಬಹುದು

11 ಲೆಕ್ಕಪತ್ರ ಇಡುವ ಕ್ರಮ

ನೀವು ೧೯೩೯ನೇ ಇಸವಿ ಆಗಸ್ಟ ಒಂದರ ಮೇಲೆ ಬೀಡಿ ಸಿಗರೇಟು ಮೊದಲಾದವುಗಳನ್ನು ಮಾರಾಟ ಮಾಡುವವರಿದ್ದರೆ, ಹೊಗೆಸೊಪ್ಪಿನ ಕಾನೂನಿನಂತೆ ಹೊಗೆಸೊಪ್ಪನ್ನು ಎಷ್ಟಕ್ಕೆ ಮಾರಾಟ ಮಾಡಿದಿರಿ, ಎಷ್ಟು ಹೊಗೆಸೊಪ್ಪು ಯಾರಿಂದ ಪಡೆಕೊಂಡಿರಿ ಎಂಬ ವಿಷಯವಾಗಿ ಲೆಕ್ಕ ಇಡಬೇಕು ಸಣ್ಣ ಅಂಗಡಿಯವರು ದೊಡ್ಡ ಲೆಕ್ಕಪತ್ರಗಳನ್ನಿಟ್ಟು ಕ್ಲಾರ್ಕರಿಗೆ ಸಂಬಳಕೊಡಬೇಕೆಂದು ಸರಕಾರದ ಅಪೇಕ್ಷೆಯಿಲ್ಲ. ಅವರು ಒಂದು ಲೆಕ್ಕದ ಪುಸ್ತಕದಲ್ಲಿ, ಒಂದು ಬದಿಯಲ್ಲಿ, ಎಷ್ಟು ಹೊಗೆಸೊಪ್ಪನ್ನು ಯಾರಿಂದ ಪಡೆಕೊಂಡರೆಂಬ ವಿವರವನ್ನೂ ಇನ್ನೊಂದು ಬದಿಯಲ್ಲಿ ದಿನನಿತ್ಯ ಎಷ್ಟು ಪೆಕೆಟು ಸಿಗರೇಟು ಬೀಡಿ, ಚುರೂಟುಗಳೂ ಹುಡಿ ಮತ್ತು ಹೊಗೆ ಸೇದುವ ಹೊಗೆಸೊಪ್ಪುಗಳನ್ನೂ ಮಾರಾಟವಾದಿದ್ದರೆಂದೂ, ಎಷ್ಟಕ್ಕೆ ಮಾರಾಟವಾದಿದರೆಂದೂ ಲೆಕ್ಕವಿಟ್ಟಿರಬೇಕು

ಉದಾ —

ತೆಕ್ಕೊಂಡದ್ದು	ಮಾರಾಟಮಾಡಿದ್ದು
ಆಗಸ್ಟ 1 'ಬಿ' ನ್ಯಾಡು ಮತ್ತು ಕಂಪೆನಿಯವರಿಂದ 50 ಪೇಕೆಟು ಸಿಗರೇಟು 100 ಕಟ್ಟು ಬೀಡಿ.	ಆಗಸ್ಟ 1 2 ಪಾಕೆಟ್ ಸಿಗರೇಟು 5 ಆಣೆ. 6 ಕಟ್ಟು ಬೀಡಿ 6 ,, 1 ಪೆಕೆಟು ಚುರೂಟು 3 ಆಣೆ
	ಒಟ್ಟು 14 ಆಣೆ.

ಈ ರೀತಿಯಲ್ಲಿ ಯಾರಿಗೆ ಓದಲು ಬರೆಯಲು ಬರುತ್ತದೋ ಅಂತಹ ಪ್ರತಿಯೊಬ್ಬ ವ್ಯಾಪಾರಿಯೂ, ಹೀಗೆ-ಲೆಕ್ಕಪತ್ರವನ್ನು ಇಡಬೇಕು. ಹಾಗಾದರೆ ತನ್ನ ಸ್ಟಾಕಿನ ವಿಷಯದಲ್ಲಿ ಅವನು ಸರಿಯಾದ ಅಭಿಪ್ರಾಯ ಮಾಡಿಕೊಳ್ಳಬಹುದು. ಈ ಲೆಕ್ಕವನ್ನು ನೀವು ಯಾರಿಗೂ ಕಳುಹಿಸಬೇಕಾಗಿಲ್ಲ ನೀವು ನಿಮ್ಮ ಅಂಗಡಿಯಲ್ಲಿಯೇ ಇಟ್ಟುಕೊಳ್ಳಿ. ಆಫಿಸರರು ಬಂದು ಕೇಳಿದರೆ ಮಾತ್ರ ತೋರಿಸಿರಿ

12 ಸಣ್ಣ ಸಣ್ಣ ವ್ಯಾಪಾರಿಗಳು ಲೆಕ್ಕವಿಡಬೇಕಾಗಿಲ್ಲ

ಬಹಳ ಸಣ್ಣ ರೀತಿಯಿಂದ ಹೊಗೆಸೊಪ್ಪು ವ್ಯಾಪಾರ ಮಾಡುವವರು, ಓದುಬರಹ ಗೊತ್ತಿಲ್ಲದವರೂ ಆಗಿದ್ದರೆ, ಅಂತಹವರನ್ನು ಲೆಕ್ಕಪತ್ರವಿಡದಿದ್ದರೂ ಕ್ಷಮಿಸಬೇಕಾಗಿ ಸರಕಾರವು ಅಸಿಸ್ಟೆಂಟ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಿಗೆ ತಿಳಿಸಿದೆ. ಆದ್ದರಿಂದ ನೀವು ಸಣ್ಣ ವ್ಯಾಪಾರಿಗಳೂ, ಓದುಬರಹ ಗೊತ್ತಿಲ್ಲದವರೂ ಆಗಿದ್ದರೆ ಹಾಗೆಂದು ಅಸಿಸ್ಟೆಂಟ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಿಗೆ ತಿಳಿಸಿ, ಅವರ ಅನುಮತಿಯನ್ನು ಮೊದಲಾಗಿ ಪಡೆದುಕೊಳ್ಳಬೇಕು.

13 ಈ ವಿವರಣೆಗಳು ಕೇವಲ ಚಿಲ್ಲರೆ ವ್ಯಾಪಾರಿಗಳಿಗೆ

ಈ ಮೇಲೆ, ತಿಳಿಸೋಣಾದ ಎಲ್ಲಾ ವಿವರಣೆಗಳೂ ಕೇವಲ ಚಿಲ್ಲರೆ ವ್ಯಾಪಾರ ಮಾಡುವವರಿಗೆ ಸಂಬಂಧಿಸಿದ್ದಾಗಿರುತ್ತವೆ ನೀವು ಈ ಸೂಚನೆಗಳನ್ನು, ಗಮನಕ್ಕೆ ತಂದು, ಅದರಂತೆ ನಡೆದರೆ ನಿಮ್ಮ ವ್ಯಾಪಾರದಲ್ಲಿ ಯಾವ ತೊಂದರೆಯೂ ಬರಲಾರದು

ನೀವು ದೊಡ್ಡ ರೀತಿಯಿಂದ ಹೊಗೆಸೊಪ್ಪಿನ ವ್ಯಾಪಾರ ಮಾಡುವುದಿದ್ದರೆ, ಹೊಗೆಸೊಪ್ಪನ್ನು ಹದಮಾಡಿ ತಯಾರಿಸುವುದಿದ್ದರೆ, ಅದಕ್ಕೆ ಬೇಕಾದ ಇನ್ನೂ ಕೆಲವು ಸೂಚನೆಗಳಿವೆ ಅಂತಹ ದೊಡ್ಡ ವ್ಯಾಪಾರಿಗಳು ಇತರ ಸೂಚನೆಗಳನ್ನು ಪ್ರತ್ಯೇಕ ತಿಳಕೊಳ್ಳಬೇಕು

14 ಅಸಿಸ್ಟೆಂಟ ಕಮರ್ಶಿಯಲ್ ಆಫೀಸರರು ನಿಮಗೆ ತೊಂದರೆಗಳಲ್ಲಿ ಸಹಾಯ ಮಾಡಬೇಕು

ಅಸಿಸ್ಟೆಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರಿಂದ ಕಳುಹಿಸೋಣಾದ ಯಾವ ಆರ್ಡರೇ ಆಗಲಿ, ನಿಮಗೆ ತೃಪ್ತಿಕರವಾಗದಿದ್ದ ಪಕ್ಷದಲ್ಲಿ, ನಿಮ್ಮ ಮುಖ್ಯ ನಗರದಲ್ಲಿರುವ ಅವರಿಗೆ ನೀವು ಆ ಕುರಿತು ಅಪೀಲು ಮಾಡಬಹುದು ಹೊಗೆಸೊಪ್ಪಿನ ಕಾನೂನಿನಂತೆ, ನೀವು ಏನೆಲ್ಲಾ ಮಾಡತಕ್ಕದ್ದು ಎಂಬ ವಿಷಯವಾಗಿ, ನಿಮಗೆ ಸೂಚನೆ ಕೊಟ್ಟು ಸಹಾಯ ಮಾಡಬೇಕೆಂದು ಸರಕಾರವು ಅಸಿಸ್ಟೆಂಟ ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ಆಜ್ಞೆಯಿತ್ತಿದೆ ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ನೀವು ಭಯಪಡಬೇಡಿ ನಿಮಗೆ ಏನಾದರೂ ಸಂದೇಹ—ಸಂಕಷ್ಟಗಳು ಬಂದರೆ ಕೂಡಲೇ ಅವರಲ್ಲಿಗೆ ಹೋಗಿ ಹೇಳಿ, ಅವರು ಅದರ ನಿವಾರಣೋಪಾಯವನ್ನು ತಿಳಿಸುವರು

ತೆರಿಗೆ ಹೊರಿಸಲ್ಪಡುವ ವಿಧಾನಗಳು

ಪಬ್ಲಿಕ್ ಇನ್‌ಫೊರ್ಮೇಷನ್ (ಪ್ರಕಟಣಾ ಖಾತೆಯ) ಮಂತ್ರಿಯವರು ಈ ಕೆಳಗಣ ಪ್ರಕಟಣೆಯನ್ನು ಹೊರಡಿಸಿರುತ್ತಾರೆ —

ಇತ್ತೀಚೆಗೆ ಕಾನೂನಾಗಿ ಏರ್ಪಟ್ಟಿರುವ ೧೯೩೯ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೊರಿಸುವ ಮತ್ತು ಅವುಗಳ ಬಗ್ಗೆ ಲೈಸೆನ್ಸು ಕೊಡುವ ಕುರಿತು) ಆಕ್ಟಿನಲ್ಲಿ ಕಲೆಕ್ಟರರಿಂದ ಕೊಡಲ್ಪಟ್ಟ ಒಂದು ಲೈಸನ್ಸಿನ ಮೇರೆಗೆ ವಿನಾ ಯಾವನಾದರೂ ಮನುಷ್ಯನು, ಯಾವುದಾದರೂ ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ಚಿಲ್ಲರೆಯಾಗಿ ಮಾರಾಟ ಮಾಡಲು ಅಥವಾ ಯಾವುದಾದರೂ ನಮೂನೆಯ ಹೊಗೆಸೊಪ್ಪನ್ನು ರಖಮಾಗಿ ಮಾರಾಟ ಮಾಡಲು ಯಾ ಅನ್ಯಥಾ ಒಬ್ಬ ರಖಂ ವ್ಯಾಪಾರಿಯಾಗಿ, ತಯಾರಿಸುವವನಾಗಿ, ದಲಾಲಿಯಾಗಿ ಯಾ ಕಮಿಶನ್ ಏಜಂಟನಾಗಿ ಹೊಗೆಸೊಪ್ಪಿನ ವ್ಯಾಪಾರವನ್ನು ನಡೆಸಲು ತಕ್ಕುದಲ್ಲವೆಂದು ನಿಬಂಧಿಸೋಣಾಗಿದೆ ಒಂದು ಕ್ಲಬ್ಬಿನವರು ಅವರ ಮೆಂಬರುಗಳಿಗೆ ಇಲ್ಲವೆ ಒಂದು ಹೊಟೇಲಿನವರು, ಅವರ ಅತಿಥಿಗಳಿಗೆ ಯಾ ಗಿರಾಕಿಗಳಿಗೆ ಹೊಗೆಸೊಪ್ಪನ್ನು ಒದಗಿಸಿಕೊಡೋಣವು ಮತ್ತು [ರಖಮಾಗಿ ಆಗಲಿ ಚಿಲ್ಲರೆಯಾಗಿ ಆಗಲಿ] ಒಬ್ಬ ತಯಾರಿಸುವವನು ಆತನಿಂದ ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ಮಾರಾಟ ಮಾಡೋಣವು ಈ ಆಕ್ಟಿನ ಉದ್ದೇಶದ ಬಗ್ಗೆ 'ಮಾರಾಟಗಳು' ಆಗಿರುತ್ತವೆ.

೨. ಒಬ್ಬ ಹೊಗೆಸೊಪ್ಪು ಬೆಳೆಯಿಸುವವನು ಎಲೆಯ ರೂಪದಲ್ಲಿ ವಿಕ್ರಯಿಸುವ ಉದ್ದೇಶದ ಬಗ್ಗೆ ಆತನಿಂದ ಬೆಳೆಯಿಸೋಣಾದ-ಆತನಿಂದ ಬೆಳೆಯಿಸಿ, ಹದಮಾಡೋಣಾದ ಯಾವುದಾದರೂ ಹೊಗೆಸೊಪ್ಪನ್ನು, ಎಲೆಯ ರೂಪದಲ್ಲಿ, ಲೈಸನ್ಸು ಆಗಲಿ ನಿರ್ಬಂಧ ಆಗಲಿ ಇಲ್ಲದೆ ಮಾರಾಟಮಾಡಬಹುದು

೩. 'ಹೊಗೆಸೊಪ್ಪು' ಎಂಬುದರಲಿ ತಯಾರಿಸಲ್ಪಟ್ಟ ಹೊಗೆಸೊಪ್ಪು, ಹದಮಾಡಿದ ಮತ್ತು ಹದಮಾಡದ ಹೊಗೆಸೊಪ್ಪು, ಹೊಗೆಸೊಪ್ಪಿನಿಂದ ಸಿದ್ಧಪಡಿಸಿದ ಯಾವುದಾದರೂ ಯಾ ಅದರ ಮಿಶ್ರಣ ಮತ್ತು ಹೊಗೆಸೊಪ್ಪಿನ ಗಿಡದ ಎಲೆ, ಇವೆಲ್ಲಾ ಸೇರುತ್ತವೆ 'ತಯಾರಿಸಲ್ಪಟ್ಟ ಹೊಗೆಸೊಪ್ಪು' ಎಂದರೆ ಸಿಗಾರುಗಳು, ಚುರೂಟುಗಳು, ಸಿಗರೇಟುಗಳು, ಸಿಗರೇಟಿನ ಬಗ್ಗಿನ ಸೊಪ್ಪು, ಪ್ಯಾಪಿನ ಬಗ್ಗಿನ ಸೊಪ್ಪು, ಬೀಡಿಗಳು ಮತ್ತು ನಸ್ಯ ಎಂಬುದಾಗಿ ಅರ್ಥವಾಗುತ್ತದೆ, ಪರಂತು ಅದರಲ್ಲಿ ತಿನ್ನುವ ಹೊಗೆಸೊಪ್ಪು, ಅಥವಾ ಇನ್ನೂ ಹೆಚ್ಚಿನ ತಯಾರಿ ವಿಧಾನದ ಬಗ್ಗೆ ಉದ್ದೇಶಿಸಲ್ಪಟ್ಟ ಹೊಗೆಸೊಪ್ಪಿನಿಂದ ಸಿದ್ಧಪಡಿಸಿದ ಯಾವುದಾದರೂ ಪದಾರ್ಥವು ಯಾ ಅದರ ಮಿಶ್ರಣವು ಸೇರುವುದಿಲ್ಲ

೪ [೧] ತಯಾರಿಸಲ್ಪಡದ ಹೊಗೆಸೊಪ್ಪಿನ ರಖಂ ವ್ಯಾಪಾರಿಗಳಿಗೆ, [೨] ತಯಾರಿಸಲ್ಪಟ್ಟ ಹೊಗೆಸೊಪ್ಪಿನ ರಖಂ ವ್ಯಾಪಾರಿಗಳಿಗೆ, [೩] ತಯಾರಿಸುವವರಿಗೆ, [೪] ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು [೫] ದಲಾಲಿಗಳಿಗೆ ಯಾ ಕಮಿಶನ್ ಏಜಂಟುಗಳಿಗೆ, ಪ್ರತ್ಯೇಕ ಲೈಸನ್ಸುಗಳು ಕೊಡೋಣಾಗುವುವು

ಒಬ್ಬನೇ ಮನುಷ್ಯನು, ಒಂದೇ ಫರ್ಮ್ ಯಾ ಕಂಪೆನಿಯು ಎರಡು ಯಾ ಅಧಿಕ ನೆಲೆಗಳಲ್ಲಿ ಕೆಲಸಮಾಡುವಲ್ಲಿ ಪ್ರತಿ ಕೆಲಸದ ವಿಷಯದಲ್ಲಿ ಒಂದು ಪ್ರತ್ಯೇಕ ಲೈಸನ್ಸು ಪಡೆಕೊಳ್ಳಬೇಕಾಗುವುದು ಪರಂತು, ತಯಾರಿಸುವವನ ಲೈಸೆನ್ಸು ತಯಾರಿಸೋಣಾದ ಹೊಗೆಸೊಪ್ಪಿನ ರಖಂ ಮಾರಾಟಕ್ಕೆ ಸಹಾ ಲಗಾವಾಗುತ್ತದೆ

ಒಬ್ಬ ಚಿಲ್ಲರೆ ವ್ಯಾಪಾರಿಗೆ ಲೈಸನ್ಸು ಕೊಡುವ ಬಗ್ಗೆ ಯಾವ ಫೀಸೂ ಹೊರಿಸಲ್ಪಡುವುದಿಲ್ಲ ಪರಂತು ಪ್ರತಿ ಚಿಲ್ಲರೆ ವ್ಯಾಪಾರಿಯು ತಯಾರಿಸಲ್ಪಟ್ಟ ಹೊಗೆಸೊಪ್ಪಿನ ಆತನ ಚಿಲ್ಲರೆ ಮಾರಾಟಗಳಲ್ಲಿ ಬಂದ ಒಟ್ಟು ಮೊಬಲಗಿನ ಮೇಲೆ A ಅವಶಿಷ್ಟದಲ್ಲಿ ನಮೂದಿಸಲ್ಪಟ್ಟ ದರಗಳ ಮೇರೆಗೆ ಒಂದು ತೆರಿಗೆಯನ್ನು ಪಾವತಿ ಮಾಡಬೇಕಾಗುವುದು

೫ ಪ್ರತಿ ರಖಂ ವ್ಯಾಪಾರಿಯು ತಯಾರಿಸಲ್ಪಟ್ಟ ಹೊಗೆಸೊಪ್ಪಿನ ಆತನ ರಖಂ ಮಾರಾಟಗಳಲ್ಲಿ ಬಂದ ಒಟ್ಟು ಮೊಬಲಗಿನ ಮೇಲೆ ಶೇಕಡ ಎರಡರಷ್ಟು ತೆರಿಗೆ ಪಾವತಿ ಮಾಡಬೇಕಾಗುವುದು ಪರಂತು, ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲಣ ಈ ತೆರಿಗೆಯನ್ನು ರಖಂ ವ್ಯಾಪಾರಿಗಳಿಗೆ ಒದಗಿಸಿ ಕೊಡುವ ಬಗ್ಗೆ ವರ್ಷವೊಂದಕ್ಕೆ ರೂಪಾಯಿ ೧೦೦೦ಕ್ಕೆ ಮೀರಿದ ಮೌಲ್ಯದ ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ತಯಾರಿಸುವ ಯಾವನಾದರೂ ಮನುಷ್ಯನು ಸಲಾಯಿಸಬೇಕಾಗಿರವುದಿಲ್ಲ ಚಿಲರೆಯಾಗಿ ಆಗಲಿ ರಖಂ ಆಗಿಯಾಗಲಿ ಮಾಡಿದ ತಯಾರಿಸಲ್ಪಡದ ಹೊಗೆಸೊಪ್ಪಿನ ಮಾರಾಟದ ವಿಷಯದಲ್ಲಿ ಆ ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲೆ ಯಾವ ತೆರಿಗೆಯೂ ಹೊರಿಸಲ್ಪಡತಕ್ಕುದಲ್ಲ

೬ B ಅವಶಿಷ್ಟದಲ್ಲಿ ನಮೂದಿಸಲ್ಪಟ್ಟ ದರಗಳ ಮೇಲೆ ವಾರ್ಷಿಕ ಫೀಸನ್ನು ಪಾವತಿ ಮಾಡಿದ್ದಲ್ಲಿ, ರಖಂ ವ್ಯಾಪಾರಿಗಳಿಗೆ, ತಯಾರಿಸುವವರಿಗೆ, ದಲಾಲಿಗಳಿಗೆ ಮತ್ತು ಕಮಿಶನ್ ಏಜಂಟುಗಳಿಗೆ ಲೈಸನ್ಸ್‌ಗಳು ಕೊಡೋಣಾಗುವುವು. ತಮ್ಮ ರಖಂ ಮಾರಾಟಗಳ ಮೇಲೆ ಮಾರಾಟದಲ್ಲಿ ಬಂದು ಒಟ್ಟು ಮೊಬಲಗಿನ ಮೇಲಣ ತೆರಿಗೆಯನ್ನು ಪಾವತಿ ಮಾಡುವ ಮನುಷ್ಯರ ಸಂಗತಿಯಲ್ಲಿ, ಒಂದು ಲೈಸನ್ಸಿನ ಬಗ್ಗೆ ಅವರು ತೆರಬೇಕಾದ ಫೀಸು B ಅವಶಿಷ್ಟದಲ್ಲಿ ನಮೂದಿಸಲ್ಪಟ್ಟ ಫೀಸಿನ ಬದಲಾಗಿ ೧೦ ರೂಪಾಯಿಗೆ ಕಡಿಮೆಮಾಡಲ್ಪಡುವುದು.

೭. ಹೊಗೆಸೊಪ್ಪನ್ನು ಯಾವ ವಿಧದಲ್ಲಿಯೂ ಉಪಯೋಗಿಸುವುದಕ್ಕೆ ಸದರಿ ಆಕ್ಟಿನಲ್ಲಿ ನಿರ್ಬಂಧವೇನೂ ಇಲ್ಲ. ಪರಂತು, ಅದರಲ್ಲಿ ಖಾಸಗಿ ಉಪಯೋಗದ ಬಗ್ಗೆ ಯಾವಾಗಲೂ ಒಮ್ಮೆಗೆ ಒಂದು ಲೈಸನ್ಸ್ ಇಲ್ಲದೆ ಸ್ವಾಧೀನದಲ್ಲಿಟ್ಟುಕೊಳ್ಳಬಹುದಾದ ವಿಷಯದಲ್ಲಿ ಪರಮಾಧಿಕ ಪೇದಾಶನ್ನು ನಿರ್ದೇಶಿಸುವರೆ ಗವರ್ನಮೆಂಟಿನವರಿಗೆ ಅಧಿಕಾರ ಕೊಡಲಾಗಿದೆ

೮ ಒಂದಕ್ಕಿಂತ ಅಧಿಕ ಅಂಗಡಿಗಳು ಯಾ ವ್ಯಾಪಾರದ ಸ್ಥಳಗಳು ಇರುವ ಒಬ್ಬ ಲೈಸನ್ಸ್‌ದಾರನು ಅಂಥ ಪ್ರತಿ ಅಂಗಡಿಯ ಯಾ ವ್ಯಾಪಾರದ ಸ್ಥಳದ ವಿಷಯದಲ್ಲಿ ಒಂದು ಪ್ರತ್ಯೇಕ ಲೈಸನ್ಸ್ ಪಡಕೊಳ್ಳಬೇಕಾಗಿ ವಿಧಿಸಲ್ಪಡುವನು

೯ ಪ್ರತಿ ಲೈಸನ್ಸ್‌ದಾರನು ಲೆಕ್ಕದ ಪುಸ್ತಕಗಳನ್ನು ಇಡಲು ಮತ್ತು ಆ ಉದ್ದೇಶದ ಬಗ್ಗೆ ನಿರ್ದೇಶಿಸಲ್ಪಡಬಹುದಾದಂಥ ಫಾರ್ಮುಗಳಲ್ಲಿ ಕಾಲಾನುಕಾಲಿಕ ರಿಟರ್ನುಗಳನ್ನು ಕಳುಹಿಸಲು ವಿಧಿಸಲ್ಪಡಬಹದು

೧೦ ಹೊಗೆಸೊಪ್ಪಿನ ಮಾರಾಟದ ಬಗ್ಗೆ ಕೊಡಲ್ಪಟ್ಟ ಲೈಸನ್ಸ್‌ಗಳಿಗೆ ಮತ್ತು ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲಣ ತೆರಿಗೆಯ ಪಾವತಿ ಸಂಬಂಧಪಟ್ಟ ಸದರಿ ಆಕ್ಟಿನ ನಿಬಂಧನೆಗಳ ಪೈಕಿ ಯಾವುದನ್ನಾದರೂ ಉಲ್ಲಂಘಿಸಿದ ಯಾವನಾದರೂ ಮನುಷ್ಯನು ೧೦೦೦ ರೂಪಾಯಿ ವರೆಗಿನ ಜುಲ್ಮಾನೆಯಿಂದ ಮತ್ತು ಸದರಿ ಉಲ್ಲಂಘನೆಯು ಮುಂದುವರಿಯುತ್ತಿರುವ ಪ್ರತಿ ದಿನದ ಬಗ್ಗೆ ೫೦ ರೂಪಾಯಿ ವರೆಗಿನ ಹೆಚ್ಚಿನ ಜುಲ್ಮಾನೆಯಿಂದ ಶಿಕ್ಷಿಸಲ್ಪಡಲು ಗುರಿಯಾಗತಕ್ಕದ್ದು ಒಬ್ಬ ಹೊಗೆಸೊಪ್ಪಿನ (ಟೊಬಾಕೊ) ಆಫೀಸರರಿಗೆ ಆತನ ಅಧಿಕಾರಗಳನ್ನು ಯಾ ಕರ್ತವ್ಯಗಳನ್ನು ಚಲಾಯಿಸುವಲ್ಲಿ ಬುದ್ಧಿಪೂರ್ವಕವಾಗಿ ಆತಂಕಪಡಿಸಿದ ಯಾವನೊಬ್ಬ ಮನುಷ್ಯನು ಮೂರು ತಿಂಗಳ ವರೆಗಿನ ಕೈದಿನ ಶಿಕ್ಷೆ ಯಾ ೫೦೦ ರೂಪಾಯಿ ವರೆಗಿನ ಜುಲ್ಮಾನೆ ಅಥವಾ ಇವೆರಡಕ್ಕೂ ಗುರಿಯಾಗತಕ್ಕವನೆ ಸದರಿ ಆಕ್ಟಿಗೆ ವಿರೋಧವಾದ ಯಾವತ್ತೂ ತಕ್ಸೀರುಗಳು ಜಾಮೀನು ಕೊಡಲ್ಪಡದ ತಕ್ಸೀರುಗಳಾಗಿವೆ

೧೧ ಮಾರಾಟದಲ್ಲಿ ಬಂದ ಒಟ್ಟು ಮೊಬಲಗನ್ನು ನಿರ್ಣಯಿಸುವ ಮತ್ತು ತೆರಿಗೆಯನ್ನು ಹೊರಿಸುವ ವಸೂಲುಮಾಡುವ ವಿಧಾನವನ್ನು ಕಲೆಕ್ಟರರ ವ ಟೊಬಾಕೊ ಆಫೀಸರರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಮತ್ತು ಅವರಿಂದ ಅನುಸರಿಲ್ಪಡಬೇಕಾದ ನಡವಳಿಕೆಯನ್ನು ನಿರ್ದೇಶಿಸಿ, ಮತ್ತು ಸದರಿ ಆಕ್ಟಿನ ಪರಿಪಾಲನೆಯ ವಿಷಯದಲ್ಲಿ ಸಾಮಾನ್ಯವಾಗಿ ಸಂಬಂಧಿಸಿ ಮಾಡೋಣಾಗುವ ಕ್ರಮಗಳು ಬೇಗನೆ ಪ್ರಕಟಿಸೋಣಾಗುವವು

ಇಷ್ಟೇ ಅಲ್ಲದೆ, ಫಲಾನಾ ತರಗತಿಗಳ ಆಫೀಸರಗಳು ಈ ಆಕ್ಟು ಮೇರೆಗಿನ ಕಲೆಕ್ಟರರ ನಾನಾ ಕರ್ತವ್ಯಗಳನ್ನು ನಡೆಸಬೇಕೆಂಬುದನ್ನು ತಿಳಿಸುವ ಮತ್ತು ಲೈಸನ್ಸ್‌ಗಳನ್ನು ಪಡಕೊಳ್ಳುವ ವಿಧಾನದ ಕುರಿತು ಆಜ್ಞೆಗಳಿರುವ ಇಸ್ತಿಹಾರುಗಳು ಪ್ರಚರಗೊಳಿಸಲ್ಪಡುವವು

ಬಿ. ಜಿ ಹೋಲ್ಡ್ಸ್‌ವರ್ತ್
ಗವರ್ನಮೆಂಟ್ ಸೆಕ್ರೆಟರಿ

A—ಅವಶಿಷ್ಟ

ತಯಾರಿಸಲ್ಪಟ್ಟ ಹೊಗೆಸೊಪ್ಪಿನ ಚಿಲ್ಲರೆ ಮಾರಾಟಗಳ ಮೇಲೆ ಹೊರಿಸಲ್ಪಡುವ ಮಾರಾಟದಿಂದ ಬಂದ ಒಟ್ಟು ಮೊಬಲಗಿನ ಮೇಲಣ ತೆರಿಗೆಯ ದರಗಳು —

a ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ಇನ್ನೂರು ರೂಪಾಯಿಗಳಿಗೆ ಮೀರದಿದ್ದ ಪಕ್ಷದಲ್ಲಿ — ವರ್ಷ ಒಂದಕ್ಕೆ ಆರು ರೂಪಾಯಿ

b ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ಇನ್ನೂರು ರೂಪಾಯಿಗೆ ಮೀರಿದ್ದು ಪರಂತು ನಾನ್ನೂರು ರೂಪಾಯಿಗೆ ಮೀರದಿದ್ದ ಪಕ್ಷದಲ್ಲಿ—ವರ್ಷ ಒಂದಕ್ಕೆ ಹನ್ನೆರಡು ರೂಪಾಯಿ.

೮. ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ನಾನ್ನೂರು ರೂಪಾಯಿಗೆ ಮೀರಿದ್ದ ಪಕ್ಷದಲ್ಲಿ—ವರ್ಷ ಒಂದಕ್ಕೆ ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಪೈಕಿ, ಮೊದಲನೆಯ ನಾನ್ನೂರು ರೂಪಾಯಿಗಳ ಮೇಲೆ ಶೇಕಡ ಮೂರರಷ್ಟು ಮತ್ತು ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲೆ ಶೇಕಡ ಹತ್ತರಷ್ಟು

B—ಅವಶಿಷ್ಟ

೫ (೧)ನೇ ಪ್ರಕರಣದಲ್ಲಿ ನಮೂದಿಸಲ್ಪಟ್ಟ ದರಗಳು.

(i) ಹದಮಾಡಿದ ಯಾ ಹದಮಾಡದ ಹೊಗೆಸೊಪ್ಪಿನ ಎಲೆಯನ್ನು ಅಥವಾ (ತಯಾರಿಸಲ್ಪಟ್ಟ ಹೊಗೆಸೊಪ್ಪು ಆಗಿರದ) ಹೊಗೆಸೊಪ್ಪಿನಿಂದ ಸಿದ್ಧಪಡಿಸಿದ ಯಾವುದಾದರೂ ಪದಾರ್ಥವನ್ನು ಯಾ ಅದರ ಮಿಶ್ರಣವನ್ನು ಅದರ ವ್ಯಾಪಾರ ನಡೆಸುವ ಬಗ್ಗೆ ಇಲ್ಲವೆ ಅದನ್ನು ತಯಾರಿಸಲ್ಪಟ್ಟ ಹೊಗೆಸೊಪ್ಪನ್ನಾಗಿ ಮಾರ್ಪಡಿಸುವ ಬಗ್ಗೆ ಮಾರಾಟಮಾಡುವ ಯಾ ಕೊಂಡುಕೊಳ್ಳುವ ಯಾವನಾದರೂ ರಖಂ ವ್ಯಾಪಾರಿಯು ನೂರು ರೂಪಾಯಿ

ಪರಂತು ಸಣ್ಣ ಪ್ರಮಾಣದಲ್ಲಿ ವ್ಯಾಪಾರ ನಡೆಸುವ ಯಾವನಾದರೂ ಮನುಷ್ಯನಿಗೆ—

(a) ಆತನ ವ್ಯಾಪಾರದಲ್ಲಿ ಬಂದ ಒಟ್ಟು ಮೊಬಲಗು ವರ್ಷ ಒಂದಕ್ಕೆ ಒಂದು ಸಾವಿರ ರೂಪಾಯಿಗಿಂತ ಕಡಿಮೆ ಎಂಬುದಾಗಿ ಅಂದಾಜು ಮಾಡಲ್ಪಟ್ಟ ಪಕ್ಷದಲ್ಲಿ ವರ್ಷ ಒಂದಕ್ಕೆ ಐದು ರೂಪಾಯಿ ಫೀಸನ್ನು ವಸೂಲುಮಾಡಿ

(b) ಆತನ ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ಒಂದು ಸಾವಿರ ರೂಪಾಯಿ ಯಾ ಅದಕ್ಕೂ ಅಧಿಕ, ಪರಂತು ಮೂರು ಸಾವಿರ ರೂಪಾಯಿಗಿಂತ ಕಡಿಮೆ ಎಂಬ ದಾಗಿ ಅಂದಾಜು ಮಾಡಲ್ಪಟ್ಟ ಪಕ್ಷದಲ್ಲಿ, ವರ್ಷ ಒಂದಕ್ಕೆ ಹತ್ತು ರೂಪಾಯಿ ಫೀಸನ್ನು ವಸೂಲುಮಾಡಿ

ಕಲೆಕ್ಟರರು ಒಂದು ಲೈಸನ್ಸನ್ನು ಕೊಡಬಹುದು

(ii) ಕೆಳಗಿನ (iii)ನೇ ಬಾಬು ಲಗಾವಾಗುವ ಒಬ್ಬ ತಯಾರಿಸುವವನಾಗಿರದ ಇತರ ಯಾವನಾದರೂ ರಖಂ ವ್ಯಾಪಾರಿಯು ಐವತ್ತು ರೂಪಾಯಿ

(iii) (a) ಯಾವ ತಯಾರಿಸುವವನ ನಿವೇಶನಗಳಿಗೆ ೧೯೩೪ನೇ ಇಸವಿಯ ಕಾರ್ಖಾನೆಗಳ ಕುರಿತು ಆಕ್ಟು ಲಗಾವಾಗುತ್ತದೋ ಯಾ ವ್ಯಾಪ್ತಗೊಳಿಸೋಣಾಗಿದೆಯೋ ಮತ್ತು ಯಾವ ತಯಾರಿಸುವವನ ನಿವೇಶನಗಳಲ್ಲಿ ಇನ್ನೂರು ಯಾ ಅದಕ್ಕೂ ಅಧಿಕ ಮಂದಿ ಕೆಲಸಮಾಡುತ್ತಾರೋ ಅಥವಾ ಕಳೆದು ಹೋದ ಹನ್ನೆರಡು ತಿಂಗಳುಗಳ ಪೈಕಿ ಯಾವುದೊಂದು ದಿನದಲ್ಲಿ ಕೆಲಸ ಮಾಡುತ್ತಿದ್ದರೋ ಆ ಯಾವನಾದರೂ ತಯಾರಿಸುವವನು ನೂರು ರೂಪಾಯಿ.

b ೧೯೩೪ನೇ ಇಸವಿಯ ಕಾರ್ಖಾನೆಗಳ ಕುರಿತು ಆಕ್ಟು ಯಾವ ತಯಾರಿಸುವವನ ನಿವೇಶನಗಳಿಗೆ ಲಗಾವಾಗುತ್ತದೋ ಯಾ ವ್ಯಾಪ್ತಗೊಳಿಸಲ್ಪಟ್ಟಿದೆಯೋ ಯಾ ಇತರ ಯಾವನಾದರೂ ತಯಾರಿಸುವವನೂ ಐವತ್ತು ರೂಪಾಯಿ

c ಯಾವ ತಯಾರಿಸುವವನ ನಿವೇಶನಗಳಿಗೆ ೧೯೩೪ನೇ ಇಸವಿಯ ಕಾರ್ಖಾನೆಗಳ ಕುರಿತ ಆಕ್ಟು ಲಗಾವಾಗುವುದಿಲ್ಲವೋ ಮತ್ತು ವ್ಯಾಪ್ತಗೊಳಿಸಲ್ಪಟ್ಟಿಲ್ಲವೋ ಆ ಯಾವನಾದರೂ ತಯಾರಿಸುವವನು ಎರಡು ರೂಪಾಯಿ

iv ಒಬ್ಬ ದಲಾಲಿ ಯಾ ಕಮಿಶನ್ ಏಜಂಟ್ ಐವತ್ತು ರೂಪಾಯಿ

(10-7-1939) 1939ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೊರಿಸುವ ಮತ್ತು ಅವುಗಳ ಬಗ್ಗೆ ಲೈಸನ್ಸು ಕೊಡುವ ಕುರಿತು) ಆಕ್ಟು (1939ನೇ ಇಸವಿಯ 8ನೇ ನಂಬರು ಮದ್ರಾಸ್ ಆಕ್ಟು)

೧೯೩೯ನೇ ಇಸವಿಯ ಜೂನ್ ೨೧ನೇ ತಾರೀಖಿನ ಒಂದು ಇಸ್ತಿಹಾರಿನಲ್ಲಿ ಗವರ್ನ್‌ಮೆಂಟಿನವರು ಪರ್ಯಾಲೋಚನೆಗೆ ತೆಗೆದುಕೊಳ್ಳಲು ಉದ್ದೇಶಿಸಿದ್ದ ಹೊಗೆಸೊಪ್ಪಿನ ತೆರಿಗೆಯ ಕುರಿತ ಆಕ್ಟು ಮೇರೆಗಿನ ಕ್ರಮಗಳು ಒಂದು ಮನವಿಯನ್ನು ಮಹಾಜನರ ತಿಳುವಳಿಕೆಯ—ವ—ವಿಮರ್ಶೆಯ ಬಗ್ಗೆ ಪ್ರಚುರಗೊಳಿಸಿದ್ದರು ಅನೇಕ ಸೂಚನೆಗಳು ತಲುಪಿವೆ, ಮತ್ತು ಅವು ಗವರ್ನ್‌ಮೆಂಟಿನವರ ಪರಿಶೀಲನೆಯಲ್ಲಿವೆ. ತಲುಪಿದ ಸಮಸ್ತ ಸೂಚನೆಗಳನ್ನು ಪರಿಶೀಲಿಸಿದ ತರುವಾಯ ಗವರ್ನ್‌ಮೆಂಟಿನವರು ಅಂತ್ಯರಾಗಿ ನಿರ್ಣಯಿಸಿದ ಮೇರೆಗಿನ ಕ್ರಮಗಳನ್ನು ಪ್ರಚುರಗೊಳಿಸುವರು.

೨ ತನ್ಮಧ್ಯೆ ೧೯೩೯ನೇ ಇಸವಿ ಜೂನ್ ೨೧ನೇ ತಾರೀಖಿನಲ್ಲಿಯೂ ೧೯೩೯ನೇ ಇಸವಿ ಜೂನ್ ೨೯ನೇ ತಾರೀಖಿನಲ್ಲಿಯೂ ಪ್ರಚುರಗೊಳಿಸಿದ ಪ್ರಕಟಣೆಗಳ ಶರತುಗಳನ್ನು ಪುನಃ ಮಹಾಜನರ ಲಕ್ಷ್ಯಕ್ಕೆ ತರಲು ಗವರ್ನ್‌ಮೆಂಟಿನವರು ಅಪೇಕ್ಷಿಸುತ್ತಾರೆ, ಅವುಗಳಲ್ಲಿ ಮುಂದಿನ ಆಗಸ್ಟ್ ತಿಂಗಳ ಮೊದಲನೇ ತಾರೀಖಿನಲ್ಲಿ ಮತ್ತು ಆ ತರುವಾಯ ಹೊಗೆಸೊಪ್ಪಿನ ವ್ಯಾಪಾರಮಾಡುವ ಬಗ್ಗೆ ಹೊಗೆಸೊಪ್ಪಿನ ತೆರಿಗೆಯ ಕುರಿತ ಆಕ್ಟು ಮೇರೆಗೆ ಬೇಕಾದ ಲೈಸನ್ಸು ಪಡೆಯುವುದರಲ್ಲಿ ವಿಳಂಬವಾಗಲೀ ಅಡಚಣೆಯಾಗಲೀ ಉಂಟಾಗುವ ನಿಮಿತ್ತ, ಹೊಗೆಸೊಪ್ಪಿನ ವ್ಯಾಪಾರದ ಸಂಬಂಧವಾಗಿ ಯಾವನೊಬ್ಬ ಮನುಷ್ಯನಿಗೆ ಯಾವ ರೀತಿಯಲ್ಲಿಯೂ ಬಾಧಕವಾಗಕೂಡದೆಂದು ದೃಢಪಡಿಸಿಕೊಳ್ಳುವರೆ ಮಾಡೋಣಾದ ವಿಶೇಷ ಏರ್ಪಾಡುಗಳ ಕುರಿತು ಒಂದು ವಿವರವು ಕೊಡೋಣಾಗಿತ್ತು ಮೇಲೆ ಸೂಚಿಸೋಣಾದ ಪ್ರಕಟಣೆಗಳಲ್ಲಿ ನಮೂದಿಸಲ್ಪಟ್ಟ ಇಂಟಿಮೇಶನ್ (ಸಮಾಚಾರ ಕೊಡುವ) ಫಾರ್ಮುಗಳು ಸಮಸ್ತ ತಾಲೂಕು ಆಫೀಸುಗಳಲ್ಲಿ ದೊರೆಯುತ್ತವೆ, ಮತ್ತು ಯಾವತ್ತೂ ರಖಂ—ವ—ಚಿಲ್ಲರೆ ಹೊಗೆಸೊಪ್ಪಿನ ವ್ಯಾಪಾರಿಗಳು, ತಯಾರಿಸುವವರು, ದಲಾಲಿಗಳು ಮತ್ತು ಕಮಿಶನ್ ಏಜಂಟುಗಳು ಅವರವರ ಇಂಟಿಮೇಶನ್ ಫೋರ್ಮುಗಳನ್ನು ಸ್ಥಳೀಕ ತಾಲೂಕು ಆಫೀಸಿಗೆ ಆದಷ್ಟು ಬೇಗನೆ ಕಳುಹಿಸಬೇಕೆಂದು ಅವರಿಗೆ ಸಲಹೆ ಕೊಡೋಣಾಗುತ್ತಿದೆ ಒಮ್ಮೆ ಅವರು ಹೀಗೆ ಮಾಡಿದರೆಂದರೆ, ಅವರು ಒಂದು ಲೈಸೆನ್ಸು ಇಲ್ಲದೆ ವ್ಯಾಪಾರ ನಡೆಸಲು ಸಾಧ್ಯವಾಗುತ್ತದೆ

೩ ಮೇಲೆ ಹೇಳಿದಂತೆ ಅರ್ಜಿಮಾಡಿರುವ ಕೆಲ್ಲರಿಗೂ ಸದರಿ ಆಕ್ಟಿನ ಮೇರೆಗೆ ಅವಶ್ಯವಾದ ಲೈಸೆನ್ಸಿನ ಬಗ್ಗೆ ಅರ್ಜಿ ಕೊಡುವ ಕುರಿತು ಫಾರ್ಮು ಸದರಿ ತೆರಿಗೆ ವಿಷಯದಲ್ಲಿ ಆಡಳಿತೆ ನಡೆಸಲು ತೊಡಗಿರುವ ಸಿಬ್ಬಂದಿಯವರಿಂದ ಒದಗಿಸಿಕೊಡೋಣಾಗುವುದು ಇಷ್ಟೇ ಅಲ್ಲದೆ, ಅವರು ಅಗತ್ಯವಾದ ಲೈಸನ್ಸಿನ ನಮೂನೆಯ ವಿಷಯದಲ್ಲಿ ಅಥವಾ ಅರ್ಜಿಯ ಫಾರ್ಮನ್ನು ಭರ್ತಿಮಾಡುವ ವಿಧಾನದ ವಿಷಯದಲ್ಲಿ ಅಪೇಕ್ಷಿಸಲ್ಪಡಬಹುದಾದ ಯಾವುದಾದರೂ ಸಮಾಚಾರವನ್ನಾಗಲೀ ಸಲಹೆಯನ್ನಾಗಲೀ ಕೊಡುವರು

೪ ಸದರಿ ಆಕ್ಟು ಮೇರೆಗಿನ ಕ್ರಮಗಳು ಮತ್ತು ಇಸ್ತಿಹಾರಗಳು ಪ್ರಚುರಗೊಳಿಸೋಣಾದಲ್ಲಿ, ಅವುಗಳಲ್ಲಿ ಸದರಿ ಆಕ್ಟು ಮೇರೆಗಿನ ನಾನಾ ಕೆಲಸಗಳನ್ನು ನಡೆಸಲು ಅಧಿಕಾರಗೊಳಿಸಲ್ಪಟ್ಟ ಆಫೀಸರುಗಳು ಸಂಬಂಧವಾಗಿ ಸಾಂಪದಾಯಿಕ ಸಮಾಚಾರವು ಇರುವುದು ಸದರೀ ಏರ್ಪಾಡುಗಳ ಕುರಿತ ಒಂದು ಸಾಮಾನ್ಯ ಸಂಕ್ಷೇಪವು ಈ ಕೆಳಗೆ ಕೊಡೋಣಾಗಿದೆ

ಹೊಗೆಸೊಪ್ಪಿನ ತೆರಿಗೆಯ ಆಡಳಿತೆಯು ಕಮ್ಮರ್ಶಿಯಲ್ ಟ್ಯಾಕ್ಸಸ್ (ವ್ಯಾಪಾರೀ ತೆರಿಗೆಗಳ) ಡಿಪಾರ್ಟ್‌ಮೆಂಟ್ ಎಂಬ ಒಂದು ಹೊಸ ಹಂಗಾಮಿ ಡಿಪಾರ್ಟ್‌ಮೆಂಟಿನ ಕೈಯಲ್ಲಿರುವುದು

ಪ್ರತಿ ಡಿಸ್ಟ್ರಿಕ್ಟಿನಲ್ಲಿ ಸದರಿ ತೆರಿಗೆಯ ಆಡಳಿತೆಯು ಸದರಿ ಡಿಸ್ಟ್ರಿಕ್ಟಿನ ಹೆಡ್‌ಕ್ವಾರ್ಟರ್‌ನಲ್ಲಿ ಮೊಕ್ಕಾಂವುಳ್ಳ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಎಂಬುದಾಗಿ ಕರೆಯಲ್ಪಟ್ಟ ಒಬ್ಬ ಆಫೀಸರನ ಸಾಮಾನ್ಯ ಮೇಲ್ವಿಚಾರಣೆಯ ಕೆಳಗಿರುವುದು ಈ ಆಫೀಸರು ಸ್ವತಃ ಯಾವ ತೆರಿಗೆ ಹೊರಿಸುವ ಕೆಲಸವನ್ನೂ ಮಾಡುವುದಿಲ್ಲ, ಪರಂತು ಸದರಿ ಡಿಸ್ಟ್ರಿಕ್ಟಿನಲ್ಲಿಯ ಅಸಿಸ್ಟೆಂಟ್—ವ—ಡಿಪ್ಯೂಟಿ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರುಗಳ ಹುಕುಮುಗಳ ಮೇಲಿಂದಾದ ಸಮಸ್ತ ಅಪೀಲುಗಳ ಕುರಿತು ವಿಚಾರಿಸುವನು.

ಕಮ್ಮರ್ಶಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನ ಕೆಲಸದ ಸಾಮಾನ್ಯ ಮೇಲ್ವಿಚಾರವು ಕಮ್ಮರ್ಶಿಯಲ್ ಟ್ಯಾಕ್ಸಸ್ ಕಮಿಶನರರಲ್ಲಿ ನಿವಿಷ್ಟವಾಗಿರುವುದು ಈತನು ರೆವಿನ್ಯೂ ಬೋರ್ಡಿನ ಒಬ್ಬ ಮೆಂಬರಾಗಿರುತ್ತಾನೆ.

ಪ್ರತಿ ತಾಲೂಕಿನ ಬಗ್ಗೆ ಒಬ್ಬ ಅಸಿಸ್ಟೆಂಟ್ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರು ಇರುವನು. ಪರಂತು, ಕೆಲವು ಸಂಗತಿಗಳಲ್ಲಿ ಎರಡು ತಾಲೂಕುಗಳು ಒಬ್ಬನೇ ಆಫೀಸರನ ತಳಗೆ ಸೇರಿಸಿಡಲ್ಪಟ್ಟಿವೆ ಇವರ ಜೊತೆಗೆ, ದೊಡ್ಡ ದೊಡ್ಡ ಪಟ್ಟಣಗಳ ಬಗ್ಗೆ ಒಬ್ಬ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರು ಇರುವರು. ಮದ್ರಾಸ್ ಶಹರಿನಲ್ಲಿ ಒಬ್ಬ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರು ಇದ್ದು, ಆತನಿಗೆ ಸಾಕಾದಷ್ಟು ಮಂದಿ ಅಸಿಸ್ಟೆಂಟ್ ಆಫೀಸರುಗಳು ಇರುವರು

ಈ ಅಸಿಸ್ಟೆಂಟ್ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರುಗಳು ಯಾವ ಚಿಲ್ಲರೆ ವ್ಯಾಪಾರಿಗಳ ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ವರ್ಷವೊಂದಕ್ಕೆ ರೂ ೧೦೦೦ಕ್ಕೆ ಮೀರುವುದಿಲ್ಲವೋ ಆ ಚಿಲ್ಲರೆ ವ್ಯಾಪಾರಿಗಳ ಸಂಗತಿಯಲ್ಲಿ ಲೈಸೆನ್ಸುಗಳನ್ನು ಕೊಡುವರು ಮತ್ತು ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲಣ ತೆರಿಗೆಯನ್ನು ಹೊರಿಸುವರು ಇಷ್ಟೇ ಅಲ್ಲದೆ, ಅವರು ಖಾಸಗಿಯಾಗಿ ಸ್ವಾಧೀನತೆಯಲ್ಲಿ ಇಟ್ಟುಕೊಳ್ಳುವ ಹೊಗೆಸೊಪ್ಪಿನ ಪರಿಮಿತಿಗೆ ಮೀರಿದ ಹೊಗೆಸೊಪ್ಪನ್ನು ಸ್ವಾಧೀನತೆಯಲ್ಲಿ ಇಟ್ಟುಕೊಳ್ಳುವ ಬಗ್ಗೆ ವಿಶೇಷ (ಸ್ಪೆಷಲ್) ಪರ್ಮಿಟುಗಳನ್ನು ಕೊಡುವರು

ವಾಡಿಕೆಯಾಗಿ ಪ್ರತಿ ಡಿಸ್ಟ್ರಿಕ್ಟಿನಲ್ಲಿ, ಅದರ ಹೆಡ್ ಕ್ವಾರ್ಟರ್ಸ್‌ನಲ್ಲಿ ಮೊಕ್ಕಾಂವುಳ್ಳ ಒಬ್ಬ ಡಿಪ್ಯೂಟಿ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಇರುವನು. ಪರಂತು, ಕೆಲವು ಡಿಸ್ಟ್ರಿಕ್ಟುಗಳಲ್ಲಿ ಒಬ್ಬನಿಗಿಂತ ಅಧಿಕ ಮಂದಿ ಡಿಪ್ಯೂಟಿ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರುಗಳು ಇರುವರು.

ಯಾವ ಚಿಲ್ಲರೆ ವ್ಯಾಪಾರಿಗಳ ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ರೂ ೧೦೦೦ಕ್ಕೆ ಮೀರುತ್ತದೋ ಆ ಚಿಲ್ಲರೆ ವ್ಯಾಪಾರಿಗಳ ಬಗ್ಗಿನ ಲೈಸನ್ಸುಗಳನ್ನು ಮತ್ತು ರಖಂ ವ್ಯಾಪಾರಿಗಳ, ತಯಾರಿಸುವವರ, ದಲಾಲಿಗಳ ಮತ್ತು ಕಮಿಶನ್ ಏಜಂಟುಗಳ ಬಗ್ಗಿನ ಸಮಸ್ತ ಲೈಸನ್ಸುಗಳನ್ನು ಡಿಪ್ಯೂಟಿ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರು ಕೊಡುವನು ಇಷ್ಟೇ ಅಲ್ಲದೆ, ಈ ಆಫೀಸರುಗಳು ತಯಾರಿಸಲ್ಪಟ್ಟ ಹೊಗೆಸೊಪ್ಪಿನ ಯಾವತ್ತು ರಖಂ ಮಾರಾಟದ ವಿಷಯದಲ್ಲಿಯೂ, ಯಾವ ವ್ಯಾಪಾರಿಗಳ ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ರೂ ೧೦೦೦ಕ್ಕೆ ಮೀರಿದೆಯೋ ಆ ವ್ಯಾಪಾರಿಗಳ ಯಾವತ್ತು ಚಿಲ್ಲರೆ ಮಾರಾಟಗಳ ವಿಷಯದಲ್ಲಿಯೂ, ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲಣ ತೆರಿಗೆಯನ್ನು ಹೊರಿಸುವರು

ಲೈಸೆನ್ಸು ಕೊಡುವ ಆಫೀಸರುಗಳು ತಾವು ಲೈಸೆನ್ಸು ಕೊಟ್ಟಿರುವ ಯಾವನೊಬ್ಬ ವ್ಯಾಪಾರಿ ಇತ್ಯಾದಿ ಮನುಷ್ಯನಿಂದ ಅರ್ಜಿ ಮಾಡೋಣಾದಲ್ಲಿ ಸಂಚರಿಸುತ್ತಿರುವ ಮಾರಾಟವಾದ ಪದಾರ್ಥಗಳ ಬಗ್ಗೂ ಪತ್ತೆಗಳ ಬಗ್ಗೂ ಪರ್ಮಿಟುಗಳನ್ನು ಮತ್ತು ಅವಶ್ಯವಾದಲ್ಲೆಲ್ಲಾ ಖಾಸಗಿಯಾಗಿ ಸ್ವಾಧೀನತೆಯಲ್ಲಿ ಇಟ್ಟುಕೊಳ್ಳುವ ಹೊಗೆಸೊಪ್ಪಿನ ಪರಿಮಿತಿಗೆ ಮೀರಿದ ಹೊಗೆಸೊಪ್ಪನ್ನು ಸ್ವಾಧೀನತೆಯಲ್ಲಿ ಇಟ್ಟುಕೊಳ್ಳುವ ಬಗ್ಗೆ ಪರ್ಮಿಟುಗಳನ್ನು ಕೊಡುವರು

ಲೈಸೆನ್ಸುಗಳ ಬಗ್ಗೂ ಪರ್ಮಿಟುಗಳ ಬಗ್ಗೂ ಅರ್ಜಿಗಳು ಅವನ್ನು ಕೊಡುವರೆ ಅಧಿಕಾರಗೊಳಿಸಲ್ಪಟ್ಟ ಆಫೀಸರ ಮೇಲ್ವಿಳಾಸಕ್ಕೆ ನೇರಾಗಿ ಕಳುಹಿಸಲ್ಪಡಬೇಕು.

ತೆರಿಗೆಯ ವಸೂಲಿಯ ವಿಷಯದಲ್ಲಿ ಅದು ಯಾವತ್ತು ಸಂಗತಿಗಳಲ್ಲಿ ಪ್ರತಿ ತಿಂಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು, ಮತ್ತು ಒಬ್ಬ ಅಸಿಸ್ಟೆಂಟ್ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರ ಹೆಡ್‌ಕ್ವಾರ್ಟರಿನಲ್ಲಿ ವಾಸಮಾಡುವ ಸ್ವಲ್ಪ ತರಿಗೆ ಹೊರಿಸಲ್ಪಟ್ಟವರ ಸಂಗತಿಯಲ್ಲಿ ಸದರಿ ತೆರಿಗೆಯನ್ನು ಬಿಲ್ ಕಲೆಕ್ಟರುಗಳು ವಸೂಲು ಮಾಡುವರು ನಾಡು ಪ್ರದೇಶಗಳಲ್ಲಿ ವಾಸಮಾಡುವ ತೆರಿಗೆ ಹೊರಿಸಲ್ಪಟ್ಟವರ ಸಂಗತಿಯಲ್ಲಿ ಸದರಿ ತೆರಿಗೆಯು ಸಂಬಂಧಪಟ್ಟ ಗ್ರಾಮ ಮುಖ್ಯಸ್ಥನಿಗೆ ಪಾವತಿ ಮಾಡಲ್ಪಡಬೇಕು ಮತ್ತು ಆತನು ಪ್ರತಿ ಪಾವತಿಯ ಬಗ್ಗೆ ತಕ್ಕ ಫಾರಮಿನಲ್ಲಿ ಒಂದು ರಶೀದಿ ಕೊಡುವನು, ಹೆಚ್ಚು ತೆರಿಗೆ ಹೊರಿಸಲ್ಪಟ್ಟವರ ಸಂಗತಿಯಲ್ಲಿ ಅವರ ತೆರಿಗೆಯ ಮೊಬಲಗು ಚೆಕ್ಕಿನ ಮೂಲಕ ತೆರಿಗೆ ಹೊರಿಸುವ ಆಫೀಸರಿಗಾಗಲಿ, ಚೆಕ್ಕಿನ ಮೂಲಕ—ಯಾ—ನಗದಾಗಿ ಸಬ್ ಟ್ರೆಜರಿಗಾಗಲಿ ಪಾವತಿ ಮಾಡಲ್ಪಡಬಹುದು

ಡಿಸ್ಟ್ರಿಕ್ಟುಗಳ ಕಲೆಕ್ಟರುಗಳು ಆಯಾ ಡಿಸ್ಟ್ರಿಕ್ಟಿನಲ್ಲಿಯ ಪ್ರತಿ ಅಸಿಸ್ಟೆಂಟ್—ವ—ಡಿಪ್ಯೂಟಿ ಕಮ್ಮರ್ಶಿಯಲ್ ಟ್ಯಾಕ್ಸ್ ಆಫೀಸರ ಹೆಡ್ ಕ್ವಾರ್ಟರುಗಳನ್ನು ಮತ್ತು ಅವರವರ ಅಧಿಕಾರ ಸರಹದ್ದನ್ನು ತಿಳಿಸುವ ಒಂದು ಪಟ್ಟಿಯನ್ನು ಆಯಾ ಡಿಸ್ಟ್ರಿಕ್ಟ್ ಗಜೇಟಿನಲ್ಲಿ ಕ್ರಮೇಣ ಪ್ರಚುರಗೊಳಿಸುವರು.

(17-7-1939) 1939ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೊರಿಸುವ ಮತ್ತು ಅವುಗಳ ಬಗ್ಗೆ ಲೈಸನ್ಸು ಕೊಡುವ ಕುರಿತು) ಆಕ್ಟು—ಕ್ರಮಗಳು—ಇಸ್ತಿಹಾರುಗಳು—

೧೯೩೯ನೇ ಇಸವಿಯ ಜೂನ್ 21ನೇ ತಾರೀಖಿನ ಫೋರ್ಟ್ ಸೈಂಟ್ ಜಾರ್ಜ್ ಗಜೇಟಿನ ಒಂದು ವಿಶೇಷ ಸಂಚಿಕೆಯಲ್ಲಿ, ೧೯೩೯ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೊರಿಸುವ ಮತ್ತು ಅವುಗಳ ಬಗ್ಗೆ ಲೈಸನ್ಸು ಕೊಡುವ ಕುರಿತು) ಆಕ್ಟಿನ ಮೇರೆಗಿನ ಮುಸಾವಿದಾ ಕ್ರಮಗಳು ಮತ್ತು ಇಸ್ತಿಹಾರುಗಳು ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಚುರಗೊಳಿಸಲ್ಪಟ್ಟಿದ್ದುವು ಮತ್ತು ಸೂಚನೆಗಳನ್ನು ಕಳುಹಿಸಿಕೊಡುವ ಬಗ್ಗೆ ಹತ್ತು ದಿನಗಳ ವಾಯಿದೆಯು ಕೊಡೋಣಾಗಿತ್ತು ಬೇರೆ ಬೇರೆ ಕಡೆಗಳಿಂದ ಅನೇಕಾನೇಕ ಮನವಿಗಳು ತಲ್ಪಿದ್ದುವು ಮತ್ತು ಅವುಗಳನ್ನು ಗವರ್ನ್‌ಮೆಂಟಿನವರು ಜಾಗರೂಕತೆಯಿಂದ ಪರಿಶೀಲಿಸಿರುತ್ತಾರೆ

2 23ನೇ ಕ್ರಮ ಲೆಕ್ಕಗಳನ್ನು ಇಡೋಣ—ಸದರಿ ಮನವಿಗಳ ಪೈಕಿ ಹೆಚ್ಚಿನವು ಲೆಕ್ಕಗಳನ್ನು ಇಡುವುದರ ಕುರಿತು ೨೩ನೇ ಕ್ರಮಕ್ಕೆ ಸಂಬಂಧಪಡುತ್ತವೆ.

(i) ಅವುಗಳಲ್ಲಿ—

(a) ಸಣ್ಣ ಸಣ್ಣ ಚಿಲ್ಲರೆ ವ್ಯಾಪಾರಿಗಳು ಓದು ಬರಹ ತಿಳಿಯದವರಾದ ಕಾರಣ ಅವರಿಗೆ ಲೆಕ್ಕಗಳನ್ನು ಇಡಲು ಸಾಧ್ಯವಿಲ್ಲವೆಂತಲೂ,

(b) ರಖಂ ವ್ಯಾಪಾರಿಗಳಿಗೆ ಅವರ ಯಾವತ್ತು ವ್ಯವಹಾರಗಳಲ್ಲಿಯ ಗಿರಾಕಿಗಳ ಹೆಸರನ್ನೂ ಮೇಲ್ವಿಳಾಸವನ್ನೂ ಒದಗಿಸಿಕೊಡಲು ಸಾಧ್ಯವಿಲ್ಲವೆಂತಲೂ ಹೇಳೋಣಾಗಿದೆ

ಮೇಲಿನ (a) ವಿಷಯದ ಕುರಿತು, ಬಹಳ ಮಟ್ಟಿಗೆ ಪ್ರತಿ ಚಿಲ್ಲರೆ ವ್ಯಾಪಾರಿಯು ಕ್ರೆಡಿಟ್ (ಪತ್ತಿನ ಯಾನೆ ಸಾಲದ) ಮೇಲೆ ಕೊಂಡುಕೊಳ್ಳುತ್ತಾನೆಂದು, ಹೀಗಾಗಿ ಸದರಿ ಕ್ರಮದ (i) ರಿಂದ (iii)ರ ವರೆಗಿನ ಕ್ಲಾಸುಗಳಲ್ಲಿ ವಿಧಿಸೋಣಾದ ವಿವರಗಳನ್ನು ಆತನು ಆ ಮೊದಲೇ ಬರೆದಿಟ್ಟುಕೊಂಡು ಬಂದಿರಬೇಕೆಂದೂ, ಆದ ಕಾರಣ ನಿರ್ದೇಶಿಸಲ್ಪಟ್ಟ ಲೆಕ್ಕಗಳನ್ನು ಇಡಲು ಆತನಿಗೆ ಕಷ್ಟವಾಗಲಾರದೆಂದೂ ಗವರ್ನ್‌ಮೆಂಟಿನವರಿಗೆ ತಿಳಿದು ಬಂದಿದೆ (b) ವಿಷಯದ ಕುರಿತು ರಖಂ ವ್ಯಾಪಾರಿಗಳು ಹೆಚ್ಚಾಗಿ ಅವರ ವ್ಯಾಪಾರವನ್ನು ಪತ್ತಿನ ಮೇಲೆ ನಡೆಸುತ್ತಾರೆ, ಹೀಗಾಗಿ, ಸದರಿ ಕ್ರಮದಲ್ಲಿ ವಿಧಿಸೋಣಾದ ವಿವರಗಳನ್ನು ಅವರ ವ್ಯಾಪಾರದ ಸಾಮಾನ್ಯ ಧೋರಣೆಯಲ್ಲಿಯೇ ನಿರುಪಾಯವಾಗಿ ಬರೆಯಬೇಕಾಗುತ್ತದೆ ಇಷ್ಟೇ ಅಲ್ಲದೆ, ಅವರಿಂದ ಕೊಂಡುಕೊಂಡವರೆಲ್ಲರೂ ಲೈಸನ್ಸುದಾರರೇ ಎಂದು ದೃಢಪಡಿಸಿಕೊಳ್ಳುವುದು ಅವರ ಸ್ವಪ್ರಯೋಜನಾರ್ಥವಾಗಿದೆ, ಯಾಕೆ ದರೆ, ಅವರು ಹಾಗೆ ಮಾಡದಿದ್ದರೆ ಅವರು ರಖಂ ವ್ಯಾಪಾರ ನಡೆಸುವ ಬಗ್ಗೆ ಮಾತ್ರವೇ ಲೈಸೆನ್ಸು ಹೊಂದಿದ್ದರೂ ಚಿಲ್ಲರೆ ವ್ಯಾಪಾರಗಳನ್ನು ನಡೆಸಿದ, ಅಥವಾ ವಾಸ್ತವವಾಗಿ ಚಿಲ್ಲರೆ ವ್ಯಾಪಾರವಾಗಿದ್ದ ಒಂದು ವ್ಯವಹಾರವನ್ನು ರಖಂ ವ್ಯಾಪಾರವೆಂದು ರಿಟರ್ನಿನಲ್ಲಿ ಕಾಣಿಸಿದ, ಇಲವೇ ಖಾಸಗಿಯಾಗಿ ಸ್ವಾಧೀನತೆಯಲ್ಲಿಟ್ಟುಕೊಳ್ಳಬಹುದಾದ ಪರಿಮಿತಿಗಳಿಗೆ ಮೀರಿದ ಒಂದು ಜೋದಾತನ್ನು ಒಬ್ಬ ಖಾಸಗಿ ಮನುಷ್ಯನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳುವುದಕ್ಕೆ ಮದ್ದತುಕೊಟ್ಟ ತಕ್ಸೀರಿಗೆ ಗುರಿಯಾಗಬಹುದು.

(ii) ಒಬ್ಬ ಲೈಸನ್ಸುದಾರನಿಂದ ಇಡೋಣಾದ ಲೆಕ್ಕಗಳಲ್ಲಿ ತಯಾರಿಸಲ್ಪಟ್ಟ ಪ್ರತಿ ವಿವರದ ಹೊಗೆಸೊಪ್ಪಿನ ಸರಬರಾಯಿಗಳನ್ನೂ ಮಾರಾಟಗಳನ್ನೂ ತೋರಿಸಿರತಕ್ಕದ್ದೆಂದು ೨೩ (೧) (i) ವ (iii)ನೇ ಕ್ರಮದಲ್ಲಿರುವ ನಿಬಂಧನೆಯು ತಪ್ಪಾಗಿ ಅರ್ಥಮಾಡಿಕೊಳ್ಳಲ್ಪಟ್ಟಿರುವಂತೆ ತೋರುತ್ತದೆ ಪ್ರತಿ ವಿಧದ ಯಾ ತರದ ಸಿಗರೇಟು ಯಾ ಬೀಡಿಯ ವಿಷಯದಲ್ಲಿಯ ವ್ಯವಹಾರಗಳ ಕುರಿತು ಒಂದು ಪ್ರತ್ಯೇಕ ಲೆಕ್ಕ

ವನ್ನು ಇಡಬೇಕೆಂದು ಇರಾಧಿಸಲ್ಪಟ್ಟಿಲ್ಲವೆಂದೂ ಪರಂತು ೩೩ನೇ ಕ್ರಮದಲ್ಲಿ ನಮೂದಿಸಲ್ಪಟ್ಟ ಹೊಗೆಸೊಪ್ಪಿನ ಪ್ರತಿ ನಮೂನೆಯ ವಿಷಯದಲ್ಲಿ ಮಾತ್ರ ಪ್ರತಿ ಪ್ರತ್ಯೇಕ ಲೆಕ್ಕಗಳನ್ನು ಇಡತಕ್ಕದೆಂದೂ, ೨೩ನೇ ಕ್ರಮದಲ್ಲಿಯ 'ಪ್ರತಿ ವಿವರದ ಹೊಗೆಸೊಪ್ಪು' ಎಂಬ ಮಾತನ್ನು ಅದೇ ರೀತಿಯಾಗಿ ಅರ್ಥಮಾಡಿಕೊಳ್ಳತಕ್ಕದ್ದೆಂದೂ ಸ್ಪಷ್ಟಪಡಿಸಲು ಗವರ್ನಮೆಂಟಿನವರು ಅಪೇಕ್ಷಿಸುತ್ತಾರೆ.

(iii) ಇಷ್ಟೇ ಅಲ್ಲದೆ, ಪ್ರತಿ ವ್ಯವಹಾರದ ತಪಶೀಲುಗಳ ಕುರಿತು ಯಾವುದೊಂದು ಸರಕಾರಿ ಆಫೀಸಿನಲ್ಲಿರುವ ರೆಕಾರ್ಡು ವ್ಯಾಪಾರಿಗಳಿಗೂ ಗಿರಾಕಿಗಳಿಗೂ ಮಧ್ಯೆ ವೈಮನಸ್ಸಿಗೆ ಕಾರಣವಾಗುವ ಸಂಭವವಿದೆಯೆಂದೂ ಮನವಿಗಳಲ್ಲಿ ಹೇಳೋಣಾಗಿದೆ. ಈ ವಿಷಯದಲ್ಲಿ ಸದರಿ ತೆರಿಗೆಯ ಆಡಳಿತೆ ನಡೆಸುವಲ್ಲಿ ತಮಗೆ ತಿಲುಪುವ ಸಮಾಚಾರವನ್ನು ಯಾವತ್ತು ಆಫೀಸರುಗಳ ಗುಟ್ಟಿನಲ್ಲಿ ಇಟ್ಟಿರಬೇಕೆಂದು ಅವರಿಗೆ ಸದರಿ ಕ್ರಮಗಳು ಕಠಿಣವಾಗಿ ವಿಧಿಸುತ್ತವೆ ಎಂದು ಹೇಳಬಹುದು.

3. ೨೬ನೇ ಕ್ರಮ. ಖಾಸಗಿಯಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವ ಪರಿಮಿತಿ—ಖಾಸಗಿಯಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವ ಕೇದಾರಿನ ವಿಷಯದಲ್ಲಿ ಈ ಕ್ರಮದಲ್ಲಿ ಗೊತ್ತುಪಡಿಸೋಣಾದ ಪರಿಮಿತಿಗಳನ್ನು ಏರಿಸಬೇಕೆಂದು ಅನೇಕ ಮನವಿಗಳು ಬಂದಿವೆ. ಮಾಡೋಣಾದ ಮನವಿಗಳನ್ನು ಜಾಗರೂಕತೆಯಿಂದ ಪರ್ಯಾಲೋಚಿಸಿದ ತರುವಾಯ, ಖಾಸಗಿಯಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವ ಪರಮಾಧಿಕ ಪರಿಮಿತಿಯನ್ನು ಬೀಡಿಗಳ ವಿಷಯದಲ್ಲಿ ೧೦೦ರಿಂದ ೨೦೦ಕ್ಕೆ ಏರಿಸಬೇಕೆಂದೂ, ಸಿಗರೇಟ್ ಹೊಗೆಸೊಪ್ಪಿನ ವಿಷಯದಲ್ಲಿ ೪ ಔನ್ಸಿನಿಂದ ೧ ರಾತ್ತಲಿಗೆ ಏರಿಸಬೇಕೆಂದೂ ನಿರ್ಣಯಿಸೋಣಾಗಿಯದೆ. ಸದರಿ ಕ್ರಮಗಳಲ್ಲಿ ಈಗ ನಿಬಂಧಿಸಿರುವ ಕೇದಾರುಗಳು ಸಾಮಾನ್ಯ ವಿದ್ಯಮಾನಗಳಲ್ಲಿ ಸಮರ್ಪಕವಾದುವುವೆಂದೂ ವಿಶೇಷ ಸಂದರ್ಭಗಳ ಬಗ್ಗೆ ಅಸಾಧಾರಣವಾದ ವಿದ್ಯಮಾನಗಳಿರುವ ಮನುಷ್ಯರ ವಿಷಯದಲ್ಲಿ ಸದರಿ ಕ್ರಮದಿಂದ ಅನುಮತಿ ಕೊಡೋಣಾದ ಕೇದಾರುಗಳಿಗಿಂತ ಹೆಚ್ಚಿಗೆಯ ಕೇದಾರುಗಳ ಹೊಗೆಸೊಪ್ಪನ್ನು ಸ್ವಾಧೀನದಲ್ಲಿಟ್ಟುಕೊಳ್ಳುವ ಬಗ್ಗಿನ ವಿಶೇಷ ಪರ್ಮಿಟುಗಳನ್ನು ಕೊಡುವ ಕುರಿತು ನಿಬಂಧಿಸಿರುವ ಕ್ರಮವು ಯುಕ್ತವೂ ನ್ಯಾಯವೂ ಆದ ಅವಶ್ಯಕತೆಗಳನ್ನು ಈಡೇರಿಸುತ್ತವೆಂದು ಭಾವಿಸಲಾಗಿದೆ. ಪರಂತು ಹಿಂದೂ ಉತ್ತರಕ್ರಿಯೆಗಳು ನಡೆಯುವಲ್ಲಿ, ಹಂಚುವ ಬಗ್ಗೆ ಬೇಕಾದ ಹೊಗೆಸೊಪ್ಪಿನ ಸಂಗತಿಯು ವಿಶೇಷವಾಗಿ ಪರ್ಯಾಲೋಚಿಸಬೇಕಾದ್ದು ಅಗತ್ಯವೆಂಬುದು ಒಪ್ಪಿಕೊಳ್ಳೋಣಾಗಿದೆ ಮತ್ತು ಅದೇ ರೀತಿಯಲ್ಲಿ ಅಂಥ ಸಂಗತಿಗಳಲ್ಲಿ ವಿಶೇಷ ಪರ್ಮಿಟುಗಳನ್ನು ಕೊಡುವರೆ ಗ್ರಾಮ ಮುಖ್ಯಸ್ಥರನ್ನು ಅಧಿಕಾರಗೊಳಿಸಿ ಸದರಿ ಕ್ರಮಗಳಲ್ಲಿ ಒಂದು ನಿಬಂಧನೆಯನ್ನು ಸೇರಿಸೋಣಾಗಿದೆ. ಗಾಡಿ ಹೊಡೆಯುವವರೂ ಇತರ ಒಯ್ಯುವವರೂ ಬೆಳೆಸುವವರಿಂದ ಯಾ ಲೈಸನ್ಸುದಾರರಿಂದ ಬರಹ ಮೂಲಕವಾಗಿ ಅಧಿಕಾರಂಗಳನ್ನು ಹೊಂದಿರುವುದಾದರೆ, ಖಾಸಗಿಯಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವ ಪರಿಮಿತಿಗೆ ಮೀರಿದ ಹೊಗೆಸೊಪ್ಪನ್ನು ಒಯ್ಯಬಹುದೆಂಬ ಕುರಿತು ಸಹಾಸಿಬಂಧನೆಯು ಮಾಡೋಣಾಗಿದೆ.

4 ಒಬ್ಬ ದಲಾಲಿಯಾಗಿ—ಯಾ—ಕಮ್ಮಿಶನ್ ಏಜಂಟ್ ಆಗಿ ಲೈಸೆನ್ಸ್ ಕೊಡೋಣಾದ ಒಬ್ಬ ಮನುಷ್ಯನು ಅಂಥ ಲೈಸನ್ಸಿನ ಮೇರಿಗೆ ಆತನ ಗಿರಾಕಿಗಳ ಬಾಬತು ಹೊಗೆಸೊಪ್ಪನ್ನು, ಅವರ ತರಫಿನಲ್ಲಿ ಮಾರಾಟಮಾಡುವ ಉದ್ದೇಶದ ಬಗ್ಗೆ ಆತನ ಕೋಣೆಗಳಲ್ಲಿ ದಾಸ್ತಾನು ಇಡಬಹುದೋ ಎಂಬ ಕುರಿತು ವಿಚಾರಣೆ ನಡೆಸೋಣಾಗಿದೆ 'ದಲಾಲಿ—ಯಾ—ಕಮ್ಮಿಶನ್ ಏಜಂಟ್' ಎಂಬ ಶಬ್ದಕ್ಕೆ ಸದರಿ ಆಕ್ಟಿನಲ್ಲಿ ಇತರರಿಗಾಗಿ ಹೊಗೆಸೊಪ್ಪನ್ನು ವಿಕ್ರಯಿಸುವ—ಯಾ—ಕೊಂಡುಕೊಳ್ಳುವ ವಿಷಯದಲ್ಲಿ ಮಾತುಕತೆ ನಡೆಸಿ ಕರಾರುಗಳನ್ನು ಮಾಡುವ ಒಬ್ಬ ಮನುಷ್ಯನೆಂಬುದಾಗಿ ವಿವರಿಸಲಾಗಿದೆ. ಈ ಅರ್ಥವಿವರಣೆಯು ಒಬ್ಬ ದಲಾಲಿ—ಯಾ—ಕಮ್ಮಿಶನ್ ಏಜಂಟನು ಆತನ ನಿವೇಶನಗಳಲ್ಲಿ ಹೊಗೆಸೊಪ್ಪನ್ನು, ಅದು ಆತನ ಸ್ವಂತ ಸ್ವತ್ತಾಗಿದಿರಬಹುದಾದಾಗ್ಯೂ ಕೂಡ, ದಾಸ್ತಾನಿಟ್ಟು ಮಾರಾಟ ಮಾಡುವುದಕ್ಕೆ ಲಗಾವಾಗುವುದಿಲ್ಲ ಆದುದರಿಂದ, ಇತರರಿಗಾಗಿ ಹೊಗೆಸೊಪ್ಪನ್ನು ವಿಕ್ರಯಿಸುವ—ಯಾ—ಕೊಂಡುಕೊಳ್ಳುವ ವಿಷಯದಲ್ಲಿ ಮಾತುಕತೆ ನಡೆಸಿ ಕರಾರುಗಳನ್ನು ಮಾಡುವುದಷ್ಟೇ ಅಲ್ಲದೆ ಮಾರಾಟದ ಉದ್ದೇಶದ ಬಗ್ಗೆ ಒಬ್ಬ ಏಜಂಟನಾಗಿ ಇತರರ ಬಾಬತು ಹೊಗೆಸೊಪ್ಪನ್ನು ದಾಸ್ತಾನು ಸಹಾ ಮಾಡುವ ಒಬ್ಬ ದಲಾಲಿ ಯಾ ಕಮ್ಮಿಶನ್ ಏಜಂಟನು ಒಬ್ಬ ದಲಾಲಿ—ಯಾ—ಕಮ್ಮಿಶನ್ ಏಜಂಟನಾಗಿ ಕೆಲಸ ನಡೆಸಲು ಅಗತ್ಯವಾಗಿರುವ ಲೈಸನ್ಸಿನ ಜೊತೆಗೆ ಹೆಚ್ಚಿಗೆಯಾಗಿ ಒಬ್ಬ ವ್ಯಾಪಾರಿಯಾಗಿ ಕೆಲಸ ನಡೆಸಲು ತಕ್ಕ ಫಾರ್ಮಿನಲ್ಲಿ ಒಂದು ಲೈಸೆನ್ಸನ್ನು ಪಡಕೊಳ್ಳತಕ್ಕದೆಂದೂ ಕ್ರಮಗಳಲ್ಲಿ ಸ್ಪಷ್ಟಪಡಿಸೋಣಾಗಿದೆ.

5. ೯ನೆ. ಕ್ರಮದ ವಿಷಯದಲ್ಲಿ, ಒಂದು ವ್ಯಾಪಾರವು ಮಾರಾಟಮಾಡೋಣಾದಲ್ಲಿ—ಯಾ ಪರಭಾರೆ ಮಾಡೋಣಾದಲ್ಲಿ ಒಂದು ಹೊಸ ಲೈಸನ್ಸನ್ನು ಪಡೆಯಬೇಕೆಂದು ಒತ್ತಾಯಿಸಕೂಡದೆಂದೂ, ಅಂಥ ಸಂಗತಿಗಳಲ್ಲಿ ಸದರಿ ಲೈಸನ್ಸನ್ನು ತಿದ್ದುಪಡಿ ಮಾಡಿಸಿಕೊಂಡರೆ ಸಾಕಾಗಿರತಕ್ಕದ್ದೆಂದೂ ಸೂಚಿಸಲಾಗಿದೆ. ಪ್ರತಿ ಲೈಸೆನ್ಸು ಫಲಾನಾ ಲೈಸನ್ಸುದಾರನಿಗೆ ಸ್ವತಃ ಕೊಡೋಣಾಗಿದೆಯೆಂದು ಭಾವಿಸಲ್ಪಟ್ಟಿದೆ ಈ ತತ್ವಕ್ಕೆ ಮೀರಿ ನಡೆಯಕೂಡದು ಪರಂತು ಒಬ್ಬ ಲೈಸನ್ಸುದಾರನು ಆತನ ವ್ಯಾಪಾರವನ್ನು ಪರಭಾರೆ ಮಾಡಿದಾಗ ಪರಭಾರೆಮಾಡಿಕೊಂಡವನಿಗೆ ಲೈಸೆನ್ಸು ಫೀಸು ಮಾಫಿಯಿಂದ ಒಂದು ಹೊಸ ಲೈಸನ್ಸು ಕೊಡುವರೆ ನಿಬಂಧನೆ ಮಾಡಲಾಗಿದೆ.

6. ಒಬ್ಬ ಲೈಸೆನ್ಸುದಾರನು ವ್ಯಾಪಾರ ನಡೆಸುವ ನಿವೇಶನಗಳನ್ನು ಬದಲಾಯಿಸಲು ಉದ್ದೇಶಿಸಿದ್ದರ ಕುರಿತು ಸಮಾಚಾರಕೊಡುವ ಬಗ್ಗೆ ೧೦ನೇ ಕ್ರಮದಲ್ಲಿ ನಿರ್ದೇಶಿಸೋಣಾದ ೧೫ ದಿನಗಳ ಕಾಲಪರಿಮಿತಿಯನ್ನು ತೆಗೆದು ಹಾಕಬೇಕೆಂದು ಒಂದು ಮನವಿಯು ಮಾಡೋಣಾಗಿದೆ ಅಂಥ ಸಂಗತಿಗಳಲ್ಲಿ ಒಂದು ಕಾಲಪರಿಮಿತಿಯು ಅವಶ್ಯವೆಂದೂ, ೧೫ ದಿನಗಳ ಒಂದು ಅವಧಿಯು ಅನ್ಯಾಯವಾಗಿರುವುದಿಲ್ಲವೆಂದೂ ಭಾವಿಸಲಾಗಿದೆ ಅಸಾಧಾರಣ ವಿದ್ಯಮಾನಗಳಲ್ಲಿ ಸದರಿ ಪರಿಮಿತಿಯು ಸಡಿಲವಾಗಿ ಬಿಟ್ಟುಬಿಡೋಣಾಗುವುದು

7. ೨೯ (೧) (i)ನೇ ಕ್ರಮದಲ್ಲಿ ನಿರ್ದೇಶಿಸಲ್ಪಟ್ಟ ತಿಂಗಳ ಗಸ್ತಿನ ರಿಟರ್ನುಗಳ ಕಳುಹಿಸುವ ಬಗ್ಗಿನ ವಾಯಿದೆಯನ್ನು ಸದರಿ ತಿಂಗಳ ೧೫ನೇ ತಾರೀಕಿನಿಂದ ೨೫ನೇ ತಾರೀಕಿಗೆ ಮುಂದರಿಸಬೇಕೆಂಬ ಸೂಚನೆಯು ಅಂಗೀಕರಿಸಲಟ್ಟಿಲ್ಲ ಪ್ರತಿ ತಿಂಗಳ ೧೦ನೇ ತಾರೀಕಿಗೆ ಮುಂಚೆ ಅವರವರ ರಿಟರ್ನುಗಳನ್ನು ಕಳುಹಿಸಲು ವ್ಯಾಪಾರಿಗಳಿಗೆ ಯಾವ ನಿಜವಾದ ಅಡಚಣೆಯೂ ಉಂಟಾಗಲಾರದೆಂದು ವಿಚಾರಣೆಗಳಿಂದ ಗವರ್ನಮೆಂಟಿನವರಿಗೆ ತಿಳಿದುಬಂದಿದೆ

8. ೪೦ನೇ ಕ್ರಮದ ವಿಷಯದಲ್ಲಿ, ಮುಟ್ಟುಗೋಲು ಪಡಿಸೋಣವು ಅನ್ಯಾಯವಾಗಿದೆ ಎಂದು ಯಾ ಕಾನೂನಿಗೆ ವಿರೋಧವಾಗಿದೆ ಎಂದು ಕಂಡುಬಂದಲ್ಲಿ, ಮಾಲೀಕನು ಮುಟ್ಟುಗೋಲು ಪಡಿಸೋಣಾದ ಕಾಲದಲ್ಲಿಯ ಆತನ ಸಾಮಾನುಗಳ ವಾಸ್ತವವಾದ ಮೌಲ್ಯವನ್ನು ಪಡೆಯಬೇಕೇ ವಿನಾ ಅವುಗಳ ಮಾರಾಟದಲ್ಲಿ ಹುಟ್ಟಿಬಂದ ಮೊಬಲಗನ್ನು ಮಾತ್ರ ಪಡೆಯತಕ್ಕದಲ್ಲವೆಂದು ಸೂಚಿಸೋಣಾಗಿದೆ ಪಸ್ತುತದಲ್ಲಿರುವ ೧೯೩೭ನೇ ಇಸವಿಯ ಮದ್ರಾಸ್ ಮಾನಸಿರೋಧದ ಕುರಿತ ಆಕ್ಟಿನ ಮೇರಿಗಿನ ಕ್ರಮಗಳ ರೀತಿಯಲ್ಲಿಯೇ ನಿರ್ವಹಿಸೋಣಾಗಿವೆ ಆದುದರಿಂದ ಸದರಿ ಕ್ರಮಗಳನ್ನು ತಪ್ಪಿಸಲು ಮಾಡಲು ಉದ್ದೇಶಿಸೋಣಾಗಿರುವುದಿಲ್ಲ

9 ಬೀಡಿಗಳನ್ನು ತಯಾರಿಸುವುದರಲ್ಲಿ ಕೆಲಸಕ್ಕಿಡಲ್ಪಟ್ಟು ಅವರವರ ಮನೆಗಳಲ್ಲಿಯೇ ತಯಾರಿಸುವವನ ಬಗ್ಗೆ ಕೆಲಸಮಾಲೀಕನು ಬಿಡೋಣಾದ ಕೂಲಿ ಕೆಲಸದವನನ್ನು ಖಾಸಗಿಯಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವ ಪರಿಮಿತಿಗಳನ್ನು ನಿರ್ದೇಶಿಸಿ ಮಾಡೋಣಾದ ಕ್ರಮದ ಸಲುವಳಿಯಿಂದ ವಿನಾಯಿಸಬೇಕೆಂಬುದು ಇನ್ನೊಂದು ಸೂಚನೆ ಯಾವ ಸ್ಥಳದಲ್ಲಿ ಕೆಲಸಗಾರರು ಬೀಡಿಗಳನ್ನು ತಯಾರಿಸುತ್ತಾರೋ ಆ ಪ್ರತಿ ಸ್ಥಳದ ವಿಷಯದಲ್ಲಿ ಸದರಿ ಆಕ್ಟಿನ ೫ (ii) (c)ನೇ ಪ್ರಕರಣದ ಮೇರಿಗೆ ಒಂದು ಪ್ರತ್ಯೇಕ ಲೈಸೆನ್ಸುದಾರನ ಸಂಗತಿಯಲ್ಲಿ ಖಾಸಗಿಯಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವ ಕುರಿತ ಪರಿಮಿತಿಯು ಲಗಾವಾಗುವುದಿಲ್ಲ.

10. ೧೯೩೯-೪೦ನೇ ನಗದಿಯಾತ್ ವರ್ಷದಲ್ಲಿ ಒಂದು ಇಡೀ ವರ್ಷದ ಬಗ್ಗೆ ಸದರಿ ಆಕ್ಟು ಸಲುವಳಿಯಲ್ಲಿರುವುದಿಲ್ಲವಾದ ಕಾರಣ, ಆ ವರ್ಷದ ಬಗ್ಗೆ ಪಾವತಿಯಾಗಬೇಕಾದ ಲೈಸನ್ಸು ಫೀಸನ್ನು ದಾಮಾಶಿಯ ಮೇರಿಗೆ ಕಡಿಮೆಮಾಡಬೇಕೆಂದು ಸೂಚಿಸೋಣಾಗಿದೆ. ಗವರ್ನಮೆಂಟಿನವರು ಸದರಿ ೧೯೩೯—೪೦ನೇ ನಗದಿಯಾತ್ ವರ್ಷದ ಬಗ್ಗೆ ಸದರಿ ಆಕ್ಟಿನ ೫ನೇ ಪ್ರಕರಣದ ಮೇರಿಗೆ ಗೊತ್ತುಪಡಿಸೋಣಾದ ವಾರ್ಷಿಕ ಫೀಸಿನ ಮೊಬಲಗಿನ ಪೈಕಿ ಮೂರರಲ್ಲಿ ಎರಡಂಶದಷ್ಟು ಮಾತ್ರವೇ ಹೋರಿಸತಕ್ಕದ್ದೆಂದು ನಿರ್ಣಯಿಸಿರುತ್ತಾರೆ.

11. ಇಷ್ಟೇ ಅಲ್ಲದೆ, ೧೬ರಿಂದ ೨೦ರ ವರೆಗಿನ ಕ್ರಮಗಳಲ್ಲಿ ವಿವರಿಸೋಣಾದ ತಾತ್ಕಾಲಿಕವಾಗಿ ತೆರಿಗೆ ಹೋರಿಸುವ ಪದ್ಧತಿ ಮೇರೆಗಿನ ಒಬ್ಬ ಲೈಸನ್ಸುದಾರನು ಸದರಿ ವರ್ಷದ ಅವಧಿಯಲ್ಲಿ ಸಹಾ ಯಾವಾಗಲಾದರೂ ೨೧ನೇ ಕ್ರಮದಲ್ಲಿ ವಿವರಿಸೋಣಾಗಿರುವ ತೆರಿಗೆಯ ಪದ್ಧತಿಗೆ ಬದಲಾಯಿಸಿಕೊಳ್ಳಬಹುದೆಂಬುದನ್ನು ಸ್ಪಷ್ಟಪಡಿಸಿ ಸದರಿ ಕ್ರಮಗಳನ್ನು ತಿದ್ದುಪಡಿ ಮಾಡಲಾಗಿದೆ.

12 ಮದ್ರಾಸ್ ಪ್ರಾವಿನ್ಸಿನ ಹೊರಗಿನ ಹೊಗೆಸೊಪ್ಪಿನ ವ್ಯಾಪಾರಿಗಳು ಈ ಪ್ರಾವಿನ್ಸಿನಲ್ಲಿ ವ್ಯಾಪಾರ ನಡೆಸಬೇಕೆಂದು ಅಥವಾ ಈ ಪ್ರಾವಿನ್ಸಿಗೆ ಅವರವರ ಸೇಲ್ಸ್‌ಮೆನ್ (ಮಾರಾಟದ ಮನುಷ್ಯ)ರನ್ನು ಯಾ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಅಪೇಕ್ಷಿಸಿದ್ದೇ ಆದರೆ, ಅವರು ತಮ್ಮ ಬಗ್ಗಾಗಲಿ ಅವರಿಂದ ಕೆಲಸಕ್ಕಿಡಲ್ಪಟ್ಟವರ ಬಗ್ಗಾಗಲಿ ಸದರಿ ಆಕ್ಟಿನ ಯಾ ಕ್ರಮಗಳ ಮೇರಿಗೆ ಲೈಸನ್ಸುಗಳನ್ನೂ ಪರ್ಮಿಟುಗಳನ್ನೂ ಪಡೆಯತಕ್ಕದೆಂದು ಅವರು ಸ್ಪಷ್ಟವಾಗಿ ತಿಳಿದಿರತಕ್ಕದ್ದು

(21—6—1939)

ನಂ ೫೪೭—೧೯೩೯ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೋರಿಸುವ ಮತ್ತು ಅದರ ವ್ಯಾಪಾರದ ಬಗ್ಗೆ ಲೈಸನ್ಸ್ ಕೊಡುವ ಕುರಿತು) ೧೯೩೯ನೇ ಇಸವಿಯ ೪ನೇ ನಂಬರು ಮದ್ರಾಸ ಆಕ್ಟಿನ ೧ನೇ ಪ್ರಕರಣದ (೩)ನೇ ಉಪಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವಲ್ಲಿ ಘನಹೊಂದಿದ ಮದ್ರಾಸ್ ಗವರ್ನರರು (ಈ ಮೊದಲೇ ಸಲುವಳಿಯಲ್ಲಿ ಬಂದಿರುವ ೧ನೇ ಪ್ರಕರಣದ ಹೊರತು) ಸದರಿ ಆಕ್ಟಿನ ಬೇರೆ ಎಲ್ಲಾ ನಿಬಂಧನೆಗಳು ೧೯೩೯ನೇ ಇಸವಿ ಆಗೋಸ್ತು ತಿಂಗಳ ಮೊದಲನೆ ತಾರೀಕಿನಲ್ಲಿ ಮತ್ತು ಆ ತಾರೀಕಿನಿಂದ ಇಡೀ ಮದ್ರಾಸ್ ಪ್ರಾವಿನ್ಸಿಗೆ ಲಗಾವಾಗತಕ್ಕದ್ದೆಂದು ಇದರ ಮೂಲಕವಾಗಿ ಸೂಚಿಸುತ್ತಾರೆ.

೧೯೩೯ನೇ ಇಸವಿ ಜೂನ್ ೨೧ನೇ ತಾರೀಕಿನ ನಂ ೫೪೭ನೇ ಪ್ರಕಟಣೆ

1 ೧೯೩೯ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೋರಿಸುವ ಮತ್ತು ಅದರ ವ್ಯಾಪಾರದ ಬಗ್ಗೆ ಲೈಸನ್ಸು ಕೊಡುವ ಕುರಿತು) ಆಕ್ಟು ೧೯೩೯ನೇ ಇಸವಿ ಆಗೋಸ್ತು ೧ನೇ ತಾರೀಕಿನಲ್ಲಿ ಮತ್ತು ಆ ತಾರೀಕಿನಿಂದ ಸಲುವಳಿಯಲ್ಲಿ ಬರತಕ್ಕದೆಂದು ಪ್ರಚುರಗೊಳಿಸೋಣಾಗಿದೆ. ಆ ಆಕ್ಟಿನ ಮೇರಿಗೆ ಯಾವನಾದರೂ ಮನುಷ್ಯನು ಲೈಸನ್ಸು ಕೊಡುವ ಆಫೀಸರಿಂದ ಸದರಿ ಉದ್ದೇಶದ ಬಗ್ಗೆ ಆತನು ಒಂದು ಲೈಸನ್ಸು ಪಡೆದಿದ್ದರೇನೇ ವಿನಾ ಯಾವ ನಮೂನೆಯಲ್ಲಿಯೂ ಹೊಗೆಸೊಪ್ಪನ್ನು ರಖಮಾಗಿ ಮಾರಾಟ ಮಾಡಕೂಡದು ಅಥವಾ ಒಬ್ಬ ರಖಂ ವ್ಯಾಪಾರಿಯಾಗಿ, ತಯಾರಿಸುವವನಾಗಿ—ಯಾ—ಕಮಿಶನ್ ಏಜಂಟಾಗಿ ಹೊಗೆಸೊಪ್ಪಿನ ವ್ಯಾಪಾರವನ್ನು ನಡೆಸಕೂಡದು ಅದೇ ರೀತಿಯಾಗಿ ಒಂದು ಅಂಗಡಿಯ ಬಾಗಿಲಿ, ಹೊತ್ತು ಮಾರಾಟ ಮಾಡುವ ಮೂಲಕವಾಗಿ ಆಗಲಿ, ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ಎಂದರೆ ಸಿಗಾರುಗಳು, ಚುರೂಟುಗಳು, ಸಿಗರೇಟುಗಳು, ಸಿಗರೇಟು ಸೇದುವ ಬಗ್ಗಿನ ಹೊಗೆಸೊಪ್ಪು, ಪೈಪಿನಿಂದ ಸೇದುವ ಬಗ್ಗಿನ ಹೊಗೆಸೊಪ್ಪು, ಬೀಡಿಗಳು ಮತ್ತು ನಸ್ಯ ಇವನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಬಗ್ಗೆ ಒಂದು ಲೈಸನ್ಸು ಅಗತ್ಯವಿದೆ. ಮೆಲ್ಲುವ ಹೊಗೆಸೊಪ್ಪನ್ನು ಚಿಲ್ಲರೆಯಾಗಿ ಮಾರಾಟಮಾಡುವರೆ ಯಾವುದಾದರೂ ಲೈಸನ್ಸು ಅಗತ್ಯವಿಲ್ಲ. ಒಂದು ಲೈಸೆನ್ಸಿಲ್ಲದೆ ೧೯೩೯ನೇ ಇಸವಿ ಆಗೋಸ್ತು ೧ನೇ ತಾರೀಕಿನಲಿ ಮತ್ತು ಆ ತರುವಾಯ [illegible] ಹೊಗೆಸೊಪ್ಪಿನ ವ್ಯಾಪಾರ ನಡೆಸಿದ ಯಾವನಾದರೂ ಮನುಷ್ಯನು ಫಿರ್ಯಾದಿ ವ್ಯವಹರಣೆ ನಡಸಲ್ಪಡಲು ಗುರಿಯಾಗುತ್ತಾನೆ.

2 ಅಗತ್ಯವಾದ ಲೈಸನ್ಸುಗಳಿಗಾಗಿ ಅರ್ಜಿ ಮಾಡಿ ಅವುಗಳನ್ನು ಪಡೆಯುವರೆ ವ್ಯಾಪಾರಿಗಳಿಗೆ ಸ್ವಲ್ಪಕಾಲ ಹಿಡಿಯುವುದಾದ ಕಾರಣ ವ್ಯಾಪಾರಿಗಳಿಗೆ ಅಸೌಖ್ಯರ್ಯ ಉಂಟಾಗದಂತೆ ಮಾಡುವರೆ ಈ ಕೆಳಗಿನ ಅನುಜ್ಞೆಗಳು ಕೊಡಲ್ಪಟ್ಟಿವೆ. ಈ ಅನುಜ್ಞೆಗಳಿಗೆ ಅನುಸಾರವಾಗಿ ನಡೆದುಕೊಂಡ ಮನುಷ್ಯರು ಒಂದು ಲೈಸನ್ಸು ಇಲ್ಲದೆ ಹೊಗೆಸೊಪ್ಪಿನ ವ್ಯಾಪಾರ ನಡೆಸಿದ ಬಗ್ಗೆ ಅವರ ಮೇಲೆ ಕ್ರಮ ಜರಗಿಸಲ್ಪಡುವುದಿಲ್ಲ.

3 ಅನುಜ್ಞೆಗಳು—೧೯೩೯ನೇ ಇಸವಿ ಆಗೋಸ್ತು ೧ನೇ ತಾರೀಕಿನಲ್ಲಿ ಮತ್ತು ಆ ತರುವಾಯ ರಖಮಾಗಿ ಯಾವದಾದರೂ ನಮೂನೆಯಲ್ಲಿ ಹೊಗೆಸೊಪ್ಪನ್ನು ಮಾರಾಟ ಮಾಡಲು ಅಥವಾ ಒಬ್ಬ ರಖಂ ವ್ಯಾಪಾರಿಯಾಗಿ, ತಯಾರಿಸುವವನಾಗಿ—ಯಾ—ಕಮಿಶನ್ ಏಜಂಟನಾಗಿ ಹೊಗೆಸೊಪ್ಪಿನ ವ್ಯಾಪಾರ ನಡೆಸಲು ಅಪೇಕ್ಷಿಸುವ ಸಮಸ್ತ ಮನುಷ್ಯರು ಹಾಗೆ ಮಾಡುವರೆ ಅವರಿಗಿರುವ ಉದ್ದೇಶವನ್ನು ಇದಕ್ಕೆ ಲಗತ್ ಇಟ್ಟಿರುವ ಇಂಟಿಮೇಶನ್ (ಸಮಾಚಾರ ಕೊಡುವ) ಫಾರ್ಮಿನಲ್ಲಿ ಕೂಡಲೇ ತಿಳಿಸತಕ್ಕದ್ದು ಈ ಫಾರ್ಮನ್ನು ಅರ್ಜಿದಾರರು ಕೈಬರಹದಿಂದ ತಯಾರಿಸಬಹುದು ಮತ್ತು ಅದನ್ನು ಸದರಿ ಅರ್ಜಿದಾರನಿಗೆ ಆತನ ವ್ಯಾಪಾರದ ಸ್ಥಳ—ಯಾ—ಸ್ಥಳಗಳು ಇರುವ ಅಥವಾ ಒಬ್ಬ ಹೊತ್ತು ಮಾರಾಟಮಾಡುವವನ ಸಂಗತಿಯಲ್ಲಿ ಆತನು ಸಾಧಾರಣವಾಗಿ ವಾಸಮಾಡುವ ತಾಲೂಕಿನ ತಹಸಿಲ್ದಾರರವರು ಮೇಲ್ವಿಚಾರಣೆ ನಡೆಸುವ ಅಸಿಸ್ಟಂಟ್ ಕಮಿಶನರ್ ಫೀಸ್ ಆಫೀಸರಿಗೆ ಕೊಡಬೇಕೆಂಬುದಾಗಿ ರೆಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಬೇಕು

4 ಮೇಲಿನ ಸಮಾಚಾರ ಕೊಟ್ಟಿರುವ ಸಮಸ್ತ ಮನುಷ್ಯರಿಗೆ ಕಮಿಶನರ್ ಆಫ್ ಟೇಕ್ಸ್ (ವ್ಯಾಪಾರಿ ತೆರಿಗೆಯ) [illegible] ಅರ್ಜಿಯ [illegible] ಅವರು ಲೈಸನ್ಸಿನ ಬಗ್ಗೆ ಹೋರಿಸಲ್ಪಡತಕ್ಕ ಫೀಸು [illegible] ಇದ್ದರೆ [illegible] ಸದರಿ ಅರ್ಜಿಯ [illegible] ತಾರೀಕಿನ [illegible] ಸದರಿ ಇಂಟಿಮೇಶನ್ ಫಾರ್ಮಿನ ಬಗ್ಗಾಗಲಿ ಅರ್ಜಿಯ ಫಾರ್ಮಿನ ಬಗ್ಗಾಗಲಿ ಯಾವ ಸ್ಟಾಂಪೂ ಅಗತ್ಯವಿಲ್ಲ

5 ಮೇಲಿನ ಅನುಜ್ಞೆಗಳನ್ನು ಅನುಸರಿಸಲು ತಪ್ಪಿ ೧೯೩೯ನೇ ಇಸವಿ ಆಗೋಸ್ತು ೧ನೇ ತಾರೀಕಿನಲ್ಲಿ ಮತ್ತು ಆ ತರುವಾಯ ಸದರಿ ಆಕ್ಟಿನ ನಿಬಂಧನೆಗಳಿಗೆ ವಿರೋಧವಾಗಿ ಒಂದು ಲೈಸನ್ಸಿಲ್ಲದೆ ಹೊಗೆಸೊಪ್ಪಿನ ವ್ಯಾಪಾರ ನಡೆಸಿದ ಮನುಷ್ಯರ ಮೇಲೆ ಫಿರ್ಯಾದು ವ್ಯವಹರಣೆ ನಡೆಸಲ್ಪಡುವುದೆಂದು ಸಾರ್ವಜನಿಕರಿಗೆ ಖಂಡಿತವಾಗಿ ಎಚ್ಚರಿಕೆ ಕೊಡೋಣಾಗುತ್ತಿದೆ.

ಇಂಟಿಮೇಶನ್ (ಸಮಾಚಾರಕೊಡುವ) ಫಾರ್ಮ್.

ಎಂಬ ನಾನು .

ತಯಾರಿಸಲ್ಪಟ್ಟ ಹೊಗೆಸೊಪ್ಪಿನ ರಖಂ ಅಥವಾ ತಯಾರಿಸಲ್ಪಟ್ಟ ಹೊಗೆಸೊಪ್ಪಿನ ವಿನಾ ಇತರ ಹೊಗೆಸೊಪ್ಪಿನ ರಖಂ ವ್ಯಾಪಾರಿಯಾಗಿ ಅಥವಾ ತಯಾರಿಸುವವನಾಗಿ ಅಥವಾ ದಲಾಲಿಯಾಗಿ—ಯಾ—ಕಮಿಶನ್ ಏಜಂಟಾಗಿ ಅಥವಾ ಚಿಲ್ಲರೆ ವ್ಯಾಪಾರಿಯಾಗಿ ಅಥವಾ ಹೊತ್ತು ಮಾರಾಟಮಾಡುವವನಾಗಿ ಲೈಸೆನ್ಸ್ ಕೊಡಲ್ಪಡಬೇಕೆಂದು ಅಪೇಕ್ಷಿಸುತ್ತೇನೆ

(ಮೇಲಿನ ಬಾಬುಗಳಲ್ಲಿ ಯಾವುದು ಸಂಬಂಧಪಡುತ್ತದೋ ಅದನ್ನು ಸೇರಿಸುವುದು)

ನಾನು ಒಂದು ಅರ್ಜಿಯ ಫಾರ್ಮು ತಲುಪಿದ ಹದಿನೈದು ದಿನಗಳೊಳಗಾಗಿ ಒಂದು ಲೈಸನ್ಸಿನ ಬಗ್ಗೆ ಅರ್ಜಿಮಾಡಿ ಆ ಕುರಿತು ಹೋರಿಸಲ್ಪಡಬಹುದಾದ ಫೀಸನ್ನು ಪಾವತಿ ಮಾಡುತ್ತೇನೆಂದೂ ಮತ್ತು ಹೋರಿಸಲ್ಪಡಬಹುದಾದ ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲಿನ ಎಷ್ಟಾದರೂ ತೆರಿಗೆಯನ್ನು ತೆರತಕ್ಕ ತಾರೀಕಿನಲ್ಲಿ ಪಾವತಿಮಾಡುತ್ತೇನೆಂದೂ ಜವಾಬ್ದಾರಿ ವಹಿಸುತ್ತೇನೆ

ನನ್ನ ವ್ಯಾಪಾರದ ಸ್ಥಳವು . . ಲ್ಲಿದೆ
ಮತ್ತು ನನ್ನ ಸಾಮಾನ್ಯ ವಾಸಸ್ಥಳವು . ಲ್ಲಿದೆ

ಚಲಚ್ಚಿತ್ರ ಪ್ರಪಂಚ

ಮಿ। ಜೋಗ್ ಮತ್ತು ಮಿಸ್ ಆಶಾಲತಾ ಇವರು 'ಬ್ರೇಂಡೀ ಬೋಟ್ಲ್' ಎಂಬ ಹಂಸ ಚಿತ್ರದಲ್ಲಿ

ಬ್ರೇಂಡೀ ಬೋಟ್ಲ್

ಹಂಸ ಚಿತ್ರ ಕಂಪನಿಯವರು ಮದ್ಯಪಾನ ನಿಷೇಧ ಚಳವಳದ ಪ್ರಚಾರದ ಉದ್ದೇಶದಿಂದ, 'ಬ್ರೇಂಡೀ ಬೋಟ್ಲ್' ಎಂಬ ಅದ್ವಿತೀಯ ಸಾಮಾಜಿಕ ಚಿತ್ರವೊಂದನ್ನು ತಯಾರಿಸಿದ್ದಾರೆ. ಅಖಿಲ ಭಾರತದಲ್ಲಿ ಇಂದು ಆ ಚಿತ್ರವು ಬಹಳ ಪ್ರಚಾರಕಾರಿಯಾಗಿ ಸ್ವಾಗತಿಸಲ್ಪಡುತ್ತದೆ. ಮಾಸ್ಟರ್ ವಿನಾಯಕರ ನುರಿತ ನಿರ್ದೇಶಕತ್ವದಿಂದ ರಮಣೀಯವಾಗಿದೆ. ಮಾಸ್ಟರ್ ವಿನಾಯಕ್, ಮಿಸ್ ಮೀನಾಕ್ಷಿ ಜೋಗ್, ಸಾಳ್ವಿ, ಮಿಸ್ ಆಶಾಲತಾ ಇವರು ಇದರಲ್ಲಿ ಪಾತ್ರ ವಹಿಸಿರುವರು.

ಇನ್ನೊಂದು ಹೊಸ ಚಿತ್ರ

ಹಂಸ ಚಿತ್ರ ಕಂಪೆನಿಯವರು ಈಗ 'ಸಂಗಾಮ ಶೋಧ್' ಎಂಬ ಹೊಸ ಚಿತ್ರವೊಂದನ್ನು ತಯಾರಿಸಿದ್ದಾರೆ. ಇದರಲ್ಲಿ ಮಿಸ್ ಮೀನಾಕ್ಷಿ, ವಿಮಲ ಶಾರದಾ, ಉಷಾದೇವಿ, ಜೋಗ್, ಸಾಳ್ವಿ ಇವರು ಅಭಿನಯಿಸಿರುವರು. ಆಗಸ್ಟ್ ಪ್ರಥಮ ವಾರದಲ್ಲಿ ಈ ಚಿತ್ರವು ಪ್ರದರ್ಶಿತವಾಗುವುದು.

ಅದೇ ಕಂಪನಿಯ 'ಅರ್ಧಾಂಗೀ' ಎಂಬ ಚಿತ್ರವು ಈಗ ಸಿದ್ಧವಾಗುತ್ತಿದೆ.

ಅಂತರ್ರಾಷ್ಟ್ರೀಯ ಸಿನೇಮಾ ಉತ್ಸವ

ಅಂತರಾಷ್ಟ್ರೀಯ ಚಲಚ್ಚಿತ್ರದ ಉತ್ಸವವು ವೆನೀಸಿನಲ್ಲಿ ಸೇರಿತು. ಅಲ್ಲಿ ಪ್ರಪಂಚದ ಉತ್ತಮ ಚಿತ್ರಗಳನ್ನು ಆರಿಸಿ ತೆಗೆಯಲಾಗುವುದು. ಇದುವರೆಗೆ ಪ್ರಖ್ಯಾತ ಚಿತ್ರಗಳೆಂದು ಹೆಸರುವಾಸಿಯಾದವುಗಳ 'ಬೋರ್ನ್ ಟು ಡಾನ್ಸ್', 'ಅನ್ನ ಕೆರೆನಿನ್ನಾ', 'ಮೇರ್ಲಿಂಗ್' ಮತ್ತು 'ಲಾ ಕೆರ್ಮೆಸ್ ಹೆರೋಯಿಕ್' ಇವುಗಳು ಅಲ್ಲದೆ, ಭಾರತೀಯ ಚಿತ್ರಗಳಲ್ಲಿ 'ಸೀತಾ' 'ಅಮೃತಮಂಥನ' ಮತ್ತು 'ತುಕಾರಾಮ' ಇವುಗಳು.

ಮಯೂರಾ

ಇಂದಿಗೆ ಕೆಲವು ವರ್ಷಗಳ ಹಿಂದೆ ನಟಿಯೂ ನರ್ತಕಿಯೂ ಆದ ಹಿಂದೂ ಯುವತಿಯೊಬ್ಬಳು ಭಾರತವನ್ನು ಬಿಟ್ಟು ತನ್ನ ಭವಿಷ್ಯವನ್ನು ಬೆಳಗಿಸಲು ಪಾಶ್ಚಾತ್ಯದೇಶಕ್ಕೆ ಪ್ರಯಾಣವಾಡಿದಳು.

ಇಂದು ಆಕೆ ಪಾಶ್ಚಾತ್ಯ ದೇಶದಲ್ಲಿ ಅನೇಕ ಚಲಚ್ಚಿತ್ರಗಳಲ್ಲಿ ನಾಟಕಗಳಲ್ಲಿ ಅಭಿನಯಿಸಿದ್ದು ಮಾತ್ರವಲ್ಲದೆ, ಇತ್ತೀಚೆಗೆ 'ದಿ ಮೈಸೀಸ್ ಬಂಗಲೋ' ಎಂಬ ಆಂಗ್ಲ ಚಿತ್ರಪಟದಲ್ಲಿ ಅಭಿನಯ ಮಾಡುತ್ತಾಳೆ.

ಆಕೆಯ ಹೆಸರೇ ಮಯೂರಾ ಎಂದು. ಹಿಂದೆ ಅನೇಕ ಹಿಂದೀ ಉರ್ದು ನಾಟ್ಯಪಟಗಳಲ್ಲಿ ಪಾತ್ರವಹಿಸಿ ಪ್ರಸಿದ್ಧಿಯನ್ನು ಪಡೆದಿರುವಳು.

ಇಂದು ಲಂಡನಿನಲ್ಲಿ ಆಕೆ ಬಹಳ ಪ್ರಸಿದ್ಧಿಗೆ ಬಂದಿದ್ದಾಳೆ. ಅನೇಕ ನಾಟಕದಲ್ಲಿ ಪಾತ್ರ ವಹಿಸಿ ಭಾರತದ ಕಲಾವೈಭವವನ್ನು ಮೆರೆಸಿದ್ದಾಳೆ. 'ಭಾರತಮಾತಾ' ನಾಟಕದಲ್ಲಿ ಆಕೆ ಮುಖ್ಯ ಪಾತ್ರಧಾರಿಣಿಯಾಗಿದ್ದಾಳೆ.

ಕೆಲ ಸಮಯದಿಂದ ಲಂಡನಿನಲ್ಲಿ ಭಾರತೀಯ ನರ್ತನಕಲೆಯ ಕುರಿತು ಕಲಿಸಲು ಒಂದು ಶಾಲೆಯಲ್ಲಿ ಅಧ್ಯಾಪಕಿಯಾಗಿದ್ದಳು. ಆದರೆ ಇತ್ತೀಚೆಗೆ ತನ್ನದೇ ಒಂದು ನರ್ತನಶಾಲೆಯನ್ನು ಆರಂಭಿಸಿದ್ದಾಳೆ.

ರಣಜಿತಾ ಕಂಪೆನಿಯವರು ತಯಾರಿಸಿದ 'ಸಂತ ತುಳಸೀದಾಸ್' ಎಂಬ ಚಿತ್ರದಲ್ಲಿ ವಿಷ್ಣುಪಂತ ಪಗ್ನೀಸ್

ಸ್ಟುಡಿಯೋ ವಸ್ತು ಸಂಗ್ರಹಾಲಯವಾಗುವುದು

ಯುದ್ಧವು ಸಂಭವಿಸುವ ಪಕ್ಷದಲ್ಲಿ ಇಂಗ್ಲೆಂಡಿನ ದೊಡ್ಡ ಸ್ಟುಡಿಯೋಗಳನ್ನು ಯುದ್ಧ ಸಾಮಗ್ರಿಗಳನ್ನು ತುಂಬಿಸಿಡುವ ಸಲುವಾಗಿ ಉಪಯೋಗಿಸುವುದೆಂದು ನಿಶ್ಚಯವಾಗಿದೆ. ೫೦,೦೦೦ ಪವನುಗಳನ್ನು ಖರ್ಚು ಮಾಡಿ ಕಟ್ಟಿದ ಸ್ಟುಡಿಯೋಗಳು ಆ ಉಪಯೋಗಕ್ಕೆ ಬೀಳುವವು.

ಮಿನರ್ವಾ ಕಂಪೆನಿಯ ರೂಪರಾಣಿ ಮಿಸ್ ನಸೀಮ್.

ನಾಜೀ ಬೇಹುಗಾರ

ಹೋಲೆಂಡಿನಲ್ಲಿ 'ನಾಜೀ ಬೇಹುಗಾರ'ನೆಂಬ ಚಲಚ್ಚಿತ್ರವನ್ನು ಪ್ರದರ್ಶಿಸಬಾರದಾಗಿ ನಿಷೇಧಾಜ್ಞೆ ಹೊರಡಿದೆ.

ಪಾಶ್ಚಾತ್ಯ ದೇಶದಲ್ಲಿ ಹಿಂದೀ ನಟರನ್ನು ನಾಯಿಗಳಿಗಿಂತ ಕಡೆ ನೋಡುತ್ತಾರೆ.

ಬಂಗಾಳಿ ಯುವಕರಾದ ಶ್ರೀ ಹಿರಾಸೇನರು ತಮ್ಮ ಅನುಭವದಿಂದ, ಹಿಂದೀಯರನ್ನು ಪಾಶ್ಚಾತ್ಯ ಚಲಚ್ಚಿತ್ರಗಳಲ್ಲಿ ನಾಯಿಗಳಿಗಿಂತ ಕಡೆಯಾಗಿ ನೋಡುತ್ತಾರೆಂದು ತಿಳಿಸುತ್ತಾರೆ. ಅವರ ಅನುಭವವು ಹೀಗಿದೆ –

"ನಾನು, 'ದಿ ಡ್ರಮ್' ಎಂಬ ಚಿತ್ರದಲ್ಲಿ ಪಾತ್ರವಹಿಸಲು ಒಪ್ಪಿಕೊಂಡೆ. ಇದರಲ್ಲಿ ಸಾಬೂ ರೇಮಂಡ್ ಮಾಸೇಯೊಡನೆ ಪಾತ್ರವಹಿಸುತ್ತಾನೆ. ಇನ್ನೂ ಅನೇಕ ಹಿಂದೀಯರು ಇದರಲ್ಲಿ ಪಾತ್ರವಹಿಸುವರು. ಉತ್ತರ ಭಾರತದ ದೃಶ್ಯಗಳಿಗೆ ಸರಿಸಮಾನವಾದ ಸೌಂದರ್ಯವುಳ್ಳ ವೇಲ್ಸಿನ ದೃಶ್ಯಗಳನ್ನು ತೆಗೆದರು.

ಅವೆಲ್ಲ ಪರ್ವತದ ಬುಡದ ಡೇರೆಯಲ್ಲಿ ಸಿನೇಮಾದಲ್ಲಿ ಹಿಂದೀಯ ಸಿಪಾಯಿಗಳಾಗಿ ಪಾತ್ರವಹಿಸಲು ಕರೆತಂದಿದ್ದ 400 ಮಂದಿ ಹಿಂದೀಯರಿದ್ದರು. ಆ ದಿನ ತೆಗೆಯಬೇಕಾದ ಚಿತ್ರವು ಪರ್ವತದ ಮೇಲೆ ಆಗುವ ದೊಡ್ಡ ಯುದ್ಧದ ದೃಶ್ಯವಾಗಿತ್ತು. ಮೇಲೆ ಹೋಗಬೇಕೆಂದು ಆಜ್ಞೆಯಾದಾಗ ಹಿಂದೀಯರು ಮಾತ್ರ ಕಷ್ಟದಿಂದ ಮೇಲೆ ಹತ್ತಿದರು. ಇಂಗ್ಲೀಷ ಸೈನಿಕರು ಸಿಗರೇಟುಗಳನ್ನು ಸೇದುತ್ತಾ ಸುಖವಾಗಿದ್ದರು.

'ಸ್ಟುಡಿಯೋದಲ್ಲಿಯೂ ಹಿಂದೀಯರ ಸಂಕಷ್ಟವು ಹೇಳತಕ್ಕದ್ದಲ್ಲ. ಪ್ರತಿಯೊಂದು ಪಾಶ್ಚಾತ್ಯ ನಟನಿಗೂ ಪ್ರತ್ಯೇಕ ಡ್ರೆಸ್ಸು ಮಾಡುವ ಕೋಣೆಗಳಿವೆ, ನಮಗೆ ಹಿಂದೀಯರಿಗೆ ಮಾತ್ರ ಒಂದೇ ಒಂದು ಕೊಠಡಿಯಿತ್ತು. ನಾವು ದನಗಳು ಹಟ್ಟಿಯಲ್ಲಿ ಕೂಡುವಂತೆ ಅಲ್ಲಿ ಕೂಡಿರುತ್ತೇವೆ. ನಮಗೆ ಅಲ್ಲಿ ಕುಳಿತುಕೊಳ್ಳಲು ಆಸನವೂ ಇಲ್ಲ. ಕುರ್ಚಿ ಮೇಜುಗಳಿಲ್ಲದಿದ್ದರೂ ಬೆಂಚುಗಳೂ ನಮಗೆ ಕೊಡಲ್ಪಡುವುದಿಲ್ಲ. ಕಟ್ಟಕಡೆ ಬ್ರೇಕ್ ಫಾಸ್ಟಿಗೆ ಇದು ಸಮಯವಾಗಿದೆ. ನಮಗೆ ಕೊಡುವ ಆಹಾರವು ಕೊಳಕು ಮತ್ತು ಬಹಿರಂಗ ಸ್ಥಳದಲ್ಲಿ ಬೇಯಿಸಲ್ಪಡುವುದು. ಗಾಳಿಯು ಬೀಸಿ ನೆಲದ ಧೂಳು ತಟ್ಟೆಗೆ ಬೀಳುತ್ತಿದ್ದಂತೆ, ಅದರೊಡನೆ ವಿಕೃತವಾಗಿರುವ ಆಹಾರವನ್ನು ನಾವು ನೆಲದಮೇಲೆ ಕುಳಿತು ತಿನ್ನಬೇಕಾಗಿದೆ.

ಹೀಗಿದೆ ಅಲ್ಲಿಯೂ ಕಪ್ಪು ಬಿಳಿ ಜನಗಳ ಭೇದ



ನಿರ್ದೇಶಕ ವಿನಾಯಕ್, ಮಿ ಸಾಳ್ವಿ ಮತ್ತು ಮಿಸ್ ಮೀನಾಕ್ಷೀ ಇವರು 'ಬ್ರೇಂಡಿ ಬೋಟ್ಲ್' ಎಂಬ ಹಂಸ ಚಿತ್ರದಲ್ಲಿ.

ಸಾಗರ ಕಂಪೆನಿಯ ಅತ್ಯುತ್ತಮ ನಟಿ



ಯುರೋಪಿನ ಶಾಂತಿಸಾಧಕ ಪ್ರೆಸಿಡೆಂಟ್ ರೂಸ್‌ವೆಲ್ಟ್

ಸರ್ವಾಧಿಕಾರಿಗಳು ಭಯಕಂಪಿತರಾಗಿದ್ದಾರೆ! ಆಕಾರದಂತೆ ಹೃದಯವೂ ವಿಶಾಲವಾಗಿದೆ!! ಅಂತರಂಗ-ಬಹಿರಂಗಗಳ ಸೂಕ್ಷ್ಮ ಪರಿಚಯ

ಅ[illegible] ಪ್ರಭಾವಶಾಲಿಗಳಾದ ರಾಷ್ಟ್ರಾಧಿಪತಿಗಳು [illegible] ಇಂದಿನ ಶಾಂತಿನಾದವು ಯುರೋಪಿನ ರಾಜಕೀಯರಂಗವನ್ನು ವಿಮುಖವಾಗಿ ಮಾಡಿದೆ. ಸರ್ವಾಧಿಕಾರಿಗಳು ಅವರನ್ನು ಕಂಡು ಭಯಭೀತರಾಗಿ ನಡುಗುತ್ತಿದಂತೆ, ಪ್ರಜಾಪ್ರಭುತ್ವರಾಷ್ಟ್ರಗಳು ರಕ್ಷಣೆಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ಅವರ ಕಡೆಗೆ ಆಶಾಪೂರ್ಣವಾಗಿ ನೋಡುತ್ತಿವೆ.

ಅಮೇರಿಕವು ಜಗತ್ತಿನಲ್ಲಿರುವ ಎಲ್ಲಾ ರಾಷ್ಟ್ರಗಳಿಗಿಂತಲೂ ಹೆಚ್ಚು ಸಿರಿತನದ ನಾಡು. ಜಗತ್ತಿನ ಯಾವ ಸಾಮ್ರಾಟನಿಗಾಗಲಿ ಸರ್ವಾಧಿಕಾರಿಗಾಗಲಿ ಇರುವ ಸಾಮರ್ಥ್ಯಕ್ಕಿಂತ ಇಂದಿನ ಅಮೇರಿಕದ ಚುನಾಯಿತ ಅಧ್ಯಕ್ಷರಾದ ರೂಸ್‌ವೆಲ್ಟರಿಗಿದೆ. ಅಮೇರಿಕದ ಜಲ, ನೆಲ, ವಾಯು, ಸೈನ್ಯಗಳ ಮುಖ್ಯಾಧಿಕಾರಿಯೂ, ಸ್ವದೇಶವಿದೇಶ ರಾಜ್ಯನೀತಿಯ ಸ್ವತಂತ್ರನೂ ಅವರು ಆಗಿದ್ದಾರೆ.

೧೩,೦,೦೦೦,೦೦೦ ಮಂದಿ ಅಮೇರಿಕನರು ನಾಲ್ಕು ವರ್ಷಗಳಿಗೊಮ್ಮೆ ತಮ್ಮ ಅಧ್ಯಕ್ಷನನ್ನು ಆರಿಸುತ್ತಾರೆ. ರೂಸ್‌ವೆಲ್ಟರು ಎರಡು ಸಲ ಹೀಗೆ ಆರಿಸಲ್ಪಟ್ಟಿದ್ದಾರೆ. ಅಮೇರಿಕವು ಪ್ರಪಂಚದ ಅರ್ಧಪಾಲಿನಷ್ಟು ಸಾಮಾನುಗಳನ್ನು ತನ್ನಲ್ಲಿಯೇ ತಯಾರಿಸುತ್ತದೆ. ಜಗತ್ತಿನಲ್ಲಿ ⅔ ಪಾಲು ಬಂಗಾರವು ಅಮೇರಿಕದಲ್ಲಿದೆ. ಬಹು ದೊಡ್ಡ ಕಬ್ಬಿಣದ ಗಣಿಗಳು, ಮಹತ್ವದ ಎಣ್ಣೆಯ ಬಾವಿಗಳು, ವಿಪುಲವಾದ ಇತರ ಖನಿಜಗಳು ಯಾವ ದೇಶದಲ್ಲಿ ಸಿಗುತ್ತವೋ ಅಂತಹ ರಾಷ್ಟ್ರದ ಚುನಾಯಿತ ಅಧ್ಯಕ್ಷರಾಗಿದ್ದಾರೆ ರೂಸ್‌ವೆಲ್ಟರು.

ಅವರ ಶರೀರವು ಮಹತ್ತಾಗಿರುವಂತೆ ಗುಣವೂ ವಿಶಾಲವಾಗಿದೆ. ಭಾಷಣವೇದಿಕೆಯಲ್ಲಿ ರೂಸ್‌ವೆಲ್ಟರ ದೀರ್ಘವಾದ ಗಂಭೀರವಾದ ಆಕೃತಿಯು ನಿಶ್ಚಲವಾಗಿ ಮತ್ತು ನೀಟಾಗಿ ಭವ್ಯವಾಗಿ ತೋರುತ್ತದೆ. ಭಾಷಣಕೊಡುವಾಗ ಕೈಗಳು ಅಲುಗಾಡುವುದೇ ಇಲ್ಲ. ಧ್ವನಿಶೈಲಿ ಮಾತ್ರ ವಿಷಯದ ಘನಸ್ತಿಕೆಗೆ ಸರಿಯಾಗಿ ತಿರುಗುತ್ತದೆ.

ರೂಸ್‌ವೆಲ್ಟರು ಅಮೇರಿಕದಲ್ಲಿ ಅತ್ಯಂತ ಪ್ರೀತಿಸಲ್ಪಡುವವರೂ, ಅತ್ಯಂತ ದ್ವೇಷಿಸಲ್ಪಡುವವರೂ ಆಗಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಅವರಿಗೆ ಅನೇಕ ಭಯಂಕರ ಶತ್ರುಗಳಿದ್ದಾರೆ. ಅವರನ್ನು ದ್ವೇಷಿಸುವವರು ಅವರ ರಾಜಕೀಯ ತತ್ವಕ್ಕಾಗಿ ಮಾತ್ರ ಹಾಗೆ ಮಾಡುತ್ತಾರೆ. ಆದರೆ ಮನುಷ್ಯನ ನೆಲೆಯಲ್ಲಿ ಎಲ್ಲರೂ ಅವರನ್ನು ಮೆಚ್ಚುತ್ತಾರೆ.

ಅಮೇರಿಕದ ಐಶ್ವರ್ಯ, ಸ್ವಾತಂತ್ರ್ಯ, ಸುಖಸಂಪತ್ತುಗಳನ್ನು ತಿರಿಗಿ ಸ್ಥಾಪಿಸುವ ಭರವಸೆಯಿಂದ ಜನರನ್ನು ಸ್ವಾಧೀನಪಡಿಸುತ್ತಾ ರೂಸ್‌ವೆಲ್ಟರು ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟರು. ಇದರ ಫಲವಾಗಿ ಅವರ ಡೀಲ್ ಪಕ್ಷವು ಸ್ಥಾಪಿತವಾಯಿತು. ಆದರೆ ಅಧಿಕಾರಕ್ಕೆ ಬಂದ ಮೇಲೆ ಯಾವುದೆಲ್ಲಾ ಮಾಡಬೇಕೆಂದು ಅವರು ಬಗೆದಿದ್ದರೋ ಅದೆಲ್ಲಾ ಮಾಡುವುದಾಗಲಿಲ್ಲ. ರಾಷ್ಟ್ರದ ಆರ್ಥಿಕ ವಿಚಾರವು ಅವರ ಕೈತಪ್ಪಿ ಹೋಯಿತು. ಅದನ್ನು ಅವರ ಗೆಳೆಯ ಹೆರಿ ಹೋಪ್‌ಕಿನ್ಸ್ ಎಂಬಾತನ ವಶಬಿಟ್ಟಿದ್ದಾರೆ. ಎಲ್ಲಾ ಅವರ ಹಂಚಿಕೆಗಳು ಫಲಕಾರಿಯಾಗದಿದ್ದರೂ, ಸಾಮಾನ್ಯ ಮನುಷ್ಯನೊಬ್ಬನು ದುಡಿಯಲು ಮತ್ತು ಜೀವಿಸಲು ಬೇಕಾದ ಸೌಕರ್ಯಗಳು ಒದಗಿಸಲ್ಪಟ್ಟಿವೆ.

ಸರ್ವಾಧಿಕಾರಿಗಳ ಪದ.ಹತಿಯಿಂದ ಜಗತ್ತಿನ ಶಾಂತಿಸ್ವಾತಂತ್ರ್ಯಗಳು ಪುಡಿಯಾಗುತ್ತಿದ್ದಾಗ, ಪ್ರಜಾಸತ್ತಾತ್ಮಕ ರಾಷ್ಟ್ರಗಳನ್ನು ಇದನ್ನು ಕಂಡು ತತ್ತರ ನಡುಗುತ್ತಿರುವಾಗ, ರೂಸ್‌ವೆಲ್ಟರು ಮುಂದೆ ಬಂದು ಶಾಂತಿಸ್ವಾತಂತ್ರ್ಯಗಳ ಪತಾಕೆಯನ್ನು ಹಿಡಿದು ನಿಂತಿದ್ದಾರೆ. ಅವರ ಸಿಂಹನಾದವು ಯುರೋಪಿನ ಉದ್ದಗಲಗಳಲ್ಲಿ ಮಾರ್ದನಿಗೊಂಡಿವೆ. ಹಿಟ್ಲರ್, ಮುಸಲಿನಿಗಳು ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಈ ಬಲವಂತವಾದ ಸಹಾಯವನ್ನು ಕಂಡು ಇಬ್ಬರು ಬೆರಗಾಗಿದ್ದಾರೆ.

ರೂಸ್‌ವೆಲ್ಟರಿಗೆ ಅರ್ಧಾಂಗವಾತ ರೋಗವು ತಗಲಿದ್ದೆ. ಡಾಕ್ಟರರು ಬಹಳ ಯತ್ನದಿಂದ ಅದನ್ನು ಗುಣಪಡಿಸಿದ್ದಾರೆ. ಸಾರ್ವಜನಿಕ ಭಾಷಣ ಕೊಡುವಲ್ಲಿ ಅವರಿಗೆ ತೊಂದರೆಯಾಗುವುದಿಲ್ಲ. ಆದರೂ ಹಲವು ಸಲ ಅದರ ನೋವಿನಬಾಧೆ ತಪ್ಪದೆ ಬಿಡುವುದಿಲ್ಲ.

ಇಂದು ೫೭ ವರ್ಷ ಪ್ರಾಯ. ಅವರ ತಾಯಿ ೮೪ ವರ್ಷದ ಮುದುಕಿ ಸೆರಾಡೆಲನೋ ರೂಸ್‌ವೆಲ್ಟಳು ಈಗಲೂ ಜೀವಿಸುತ್ತಿದ್ದಾಳೆ. ಇಷ್ಟು ಪ್ರಾಯದವಳಾದರೂ ಆಕೆ ಗಟ್ಟಿಮುಟ್ಟಾಗಿದ್ದಾಳೆ. ರೂಸ್‌ವೆಲ್ಟರ ಮಡದಿಗೆ ೫೪ ವರ್ಷ ಪ್ರಾಯ. ಆಕೆ ಒಳ್ಳೆಯ ಭಾಷಣಗಾರ್ತಿ, ಲೇಖಕಿ, ಮತ್ತು ಸ್ತ್ರೀಯಾಣ ಆಸಕ್ತಳು. ಇದೀ ಕುಟುಂಬದಲ್ಲಿ ನಿರಂತರ ಕಾರ್ಯತತ್ಪರರಾಗಿರುವವಳು ಅವಳೇ. ರೇಡಿಯೋ ಮತ್ತು ಪತ್ರಿಕೆಗಳ ಮೂಲಕ ರಾಜಕೀಯ ಸಾಮಾಜಿಕ ವಿಷಯಗಳ ಕುರಿತು ಆಕೆ ಪ್ರಚಾರ ಮಾಡುತ್ತಿದ್ದಾಳೆ. ಸಾಧಾರಣ ವರ್ಷಕ್ಕೆ ೧೫೦ಕ್ಕೆ ಮಿಕ್ಕಿ ಭಾಷಣಕೊಡುತ್ತಾಳೆ. ಪ್ರತಿಸರ್ತಿಯೂ ಏನಾದರೊಂದು ಹೊಸ ವಿಷಯವಾಗಿ ಮಾತನಾಡುತ್ತಾಳೆ. ವಾರಕ್ಕೆ ಆರೇಳು ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆಯುತ್ತಾಳೆ. ಅವುಗಳನ್ನು ಹೋಟೇಲು ಕೋಣೆಗಳಲ್ಲಿಯೋ ಅಲ್ಲಿಯೋ ಇಲ್ಲಿಯೋ ಬರೆಯುತ್ತಾಳೆ. ಆದರೆ ಅವುಗಳು ಅಷ್ಟು ನಿರ್ಮೂಲವಾಗಿ, ವಿಚಾರಪೂರ್ಣವಾಗಿ, ಸಮ್ಮಯಕ್ಕೆ ಸರಿಯಾಗಿ ಇರುತ್ತವೆ. ಕಾರ್ಯತತ್ಪರತೆಯಲ್ಲಿ ರೂಸ್‌ವೆಲ್ಟರನ್ನೂ ಮೀರಿಸಿದ್ದಾಳೆ.

ರೂಸ್‌ವೆಲ್ಟರು ತಮ್ಮ ಆರಂಭಜೀವನವನ್ನು ಸಮುದ್ರಸಾಹಸದಲ್ಲಿ ಕಳೆದರು. ಒಳ್ಳೆಯ ಈ ಜುಗಾರರು. ಇದೀ ಯುರೋಪವನ್ನು ಸುತ್ತಿದ್ದಾರೆ. ರಾಜಕೀಯದ ಪ್ರತಿಯೊಂದು ಅಂಶದಲ್ಲಿಯೂ ಅವರು ಕೈಹಾಕಿ ನೋಡಿದ್ದಾರೆ.

ಅವರಿಗೆ ಸದಾ ಸಹಾಯಿಯಾಗಿ ನಿಂತ ಅವರ ಪರಮಮಿತ್ರನು ಲುಯಿಸ್ ಹೋವೇ ಎಂಬ ಪತ್ರಿಕೋದ್ಯಮಿ. ರೂಸ್‌ವೆಲ್ಟರ ಜೀವನದಲ್ಲಿ ಅನೇಕ ವಿಜಯಗಳನ್ನು ತರಲು ಆತನು ಯತ್ನಿಸಿದನು.

೧೯೩೨-೩೩ರ ದುರ್ಗಂತ ದಿನಗಳಲ್ಲಿ ರೂಸ್‌ವೆಲ್ಟರ ಅಭಿವೃದ್ಧಿಯಾಯಿತು. ಜನರು ಅಂದು ನಿರ್ಗತಿಕರಂತಿದ್ದರು, ಯಾರ ಜೀವನದಲ್ಲಿಯೂ ತೃಪ್ತಿಯಿರಲಿಲ್ಲ, ಹಸಿವು ಜನರನ್ನು ನುಂಗುತಿತ್ತು. ಎಲ್ಲರೂ ನಿರಾಶರಾಗಿದ್ದರು, ವ್ಯಾಪಾರಸ್ಥರು, ಬೇಂಕಿನವರು, ಸರಕಾರೀ ಉದ್ಯೋಗಸ್ಥರೂ ಬಹಳವಾಗಿ ಬಳಲಿದ್ದರು.

ಇಂತಹ ಸಮಯದ ಸಾಧನೆಯನ್ನು ಮಾಡಿಕೊಳ್ಳಲು ಮಿತ್ರ ಲೂಯಿಸ್ ಹೋವೆಯು ಪ್ರೆಸಿಡೆಂಟರನ್ನು ಎಚ್ಚರಿಸಿದ. ತನ್ನ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟು, ಹೋವೆ ಮತ್ತು ರೂಸ್‌ವೆಲ್ಟರು ಮುಂದೆ ಬಂದರು. ಅವರ ನೀತಿಯು, ಧೋರಣೆಯು ಜನತೆಯ ಚಿತ್ತವನು ಆಕರ್ಷಿಸಿತು. ಅಮೇರಿಕದ ಅಧ್ಯಕ್ಷರಾಗಿ ಅವರು ಚುನಾಯಿಸಲ್ಪಟ್ಟರು.

ರೂಸ್‌ವೆಲ್ಟರ ಅಂತರಂಗ ಜೀವನವು ಬಹಳ ಪ್ರೇಮಮಯವಾದದ್ದು. ಅವರಿಗೆ ಮುದ್ದಾದ ಮಡದಿ ಎಂದೂ ನೆರವಾಗಿ ನಿಲ್ಲುತ್ತಾಳೆ. ಮನೆಯ ಹೊರಗಡೆ ಮತ್ತು ಒಳಗಡೆ ಅವರ ಬೆಂಬತ್ತಿ ಸಹಕರಿಸುತ್ತಾಳೆ. ಅವರಿಗೆ ನಾಲ್ಕು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಹುಡುಗಿ, ಹೀಗೆ ಐದು ಮಂದಿ ಮಕ್ಕಳು ಇದ್ದಾರೆ. ಅನ್ನಾ ಎಂಬವಳು ಅವರ ಮೊದಲ ಮಗಳು. [illegible] ತನ್ನ ಗಂಡನು ನಡೆಸುವ ಪತ್ರಿಕೆಯಲ್ಲಿ ಮಹಿಳಾ ಪುಟದ ಸಂಪಾದಕಿಯಾಗಿದ್ದಾಳೆ. ಆಕೆ ಮೂವತ್ತೆರಡು ವರ್ಷ ಪ್ರಾಯದವಳು. ಎರಡನೆಯವ ಮೂವತ್ತೊಂದು ವರ್ಷದವ, ಜೇಮ್ಸ್ ಎಂಬವ. ಆತನಿಗೂ ವಿವಾಹವಾಗಿದೆ. ತಂದೆಯು ಅಧ್ಯಕ್ಷನಾಗಿ ಬಂದ ಮೇಲೆ ಇನ್ಶೂರೆನ್ಸಿನಿಂದ ಆತನು ತುಂಬಾ ಹಣ ಮಾಡಿದ್ದಾನೆ. ಇತ್ತೀಚೆಗೆ ತನ್ನ ಆ ಉದ್ಯೋಗವನ್ನು ಬಿಟ್ಟು, ಆತನು ಹೋಲಿವುಡ್ಡಿಗೆ ಹೋಗಿ ಚಿತ್ರಪಟದಲ್ಲಿ ಪಾತ್ರವಹಿಸಲು ಯತ್ನ ಮಾಡುತ್ತಿದ್ದಾನೆ.

ಎಲಿಯೊಟ್ ಎಂಬವನು ಇಪ್ಪತ್ತೆಂಟು ವರ್ಷ ಪ್ರಾಯದ ಎರಡನೆಯ ಮಗ. ಆತನಿಗೂ ವಿವಾಹವಾಗಿದೆ. ರೇಡಿಯೋದಲ್ಲಿ ಕೆಲಸ ಮಾಡುತ್ತಾನೆ. ಕೆಲಸಮಯ ತನ್ನ ತಂದೆಯ ರಾಜಕೀಯ ತತ್ವವನ್ನು ಕಟುವಾಗಿ ಟೀಕೆ ಮಾಡುತ್ತಿದ್ದ. ಆತನ ಮೇಲಿನವನು ಇಪ್ಪತ್ತನಾಲ್ಕು ವರ್ಷ ಪ್ರಾಯದ ಪ್ರಾಂಕ್ಲಿನನು. ಆತನಿಗೂ ಮದುವೆಯಾಗಿದೆ. ಈಗಲೂ ಅಭ್ಯಾಸ ಮಾಡುತ್ತಾನೆ. ಜಾಡ್ ಎಂಬವನು ಇಪ್ಪತ್ತಮೂರು ವರ್ಷ ಪ್ರಾಯದವನು. ಆತನಿಗೂ ವಿವಾಹವಾಗಿದೆ. ಪಸ್ಸ್ ಡಿಪಾರ್ಟ್‌ಮೆಂಟ್ ಸ್ಟೋರಿನಲ್ಲಿ ಆತ ಕೆಲಸಕ್ಕಿದ್ದ. ಈಗ ಅದನ್ನು ಬಿಟ್ಟಿದ್ದಾನೆ. ಮುಂದಕ್ಕೆ ಏನು ಮಾಡಬೇಕೆಂದು ವಿಚಾರದಲ್ಲಿದ್ದಾನೆ.

ರೂಸ್‌ವೆಲ್ಟರ ಬಳಗದವರಿಗೆ ಸ್ವಾತಂತ್ರ್ಯವೆಂದರೆ ಎಲ್ಲದಕ್ಕಿಂತಲೂ ಹೆಚ್ಚು. ಅಂತಹ ವಾತಾವರಣದಲ್ಲಿಯೇ ಈ ಮಕ್ಕಳು ಬೆಳೆದಿದ್ದಾರೆ. ಹಾಗಾಗಿ ಸಾರ್ವಜನಿಕ ವಿಷಯಗಳಲ್ಲಿ ಒಬ್ಬನ ಅಭಿಪ್ರಾಯಕ್ಕೆ ಇನ್ನೊಬ್ಬನ ಅಭಿಪ್ರಾಯವು ವಿರುದ್ಧ ನಿಲ್ಲುತ್ತದೆ. ಆದರೂ ಪ್ರತಿಯೊಬ್ಬನೂ ಅನ್ಯೋನ್ಯ ಪ್ರೇಮದಿಂದಿದ್ದಾರೆ. ಅಧ್ಯಕ್ಷ ರೂಸ್‌ವೆಲ್ಟರೂ ತನ್ನ ಕುಟುಂಬದ ಬಂಧನದಲ್ಲಿ ಬಹಳವಾಗಿ ಇದ್ದಾರೆ.

ರೂಸ್‌ವೆಲ್ಟರು ಮಂತ್ರಿಮಂಡಳದೊಡನೆ ಸಂಭಾಷಣೆ ನಡೆಸುತ್ತಿದ್ದಂತೆ ಪತ್ರಿಕೋದ್ಯಮಿಗಳಿಗೂ ಗಮನಕೊಡುತ್ತಾರೆ. ಪ್ರತಿಯೊಬ್ಬನನ್ನು ಆತನ ಕ್ರಿಶ್ಚಿಯನ್ ಹೆಸರಿನಿಂದ ಕರೆದು ಸಂಭಾಷಣೆ ಮಾಡುತ್ತಾರೆ. ಪ್ರತಿಯೊಬ್ಬ ಪತ್ರಿಕೋದ್ಯಮಿಯ ಪರಿಚಯವೂ ಅವರಿಗಿದೆ. ಹಲವು ಸಲ ಅವರು ಅದ್ಭುತ ಕಾರ್ಯ ಮಾಡುತ್ತಾರೆ. ಅವರಿಗೆ ತಮಾಷೆಯ ಸ್ವಭಾವವೂ.

[೧೯ನೇ ಪುಟವನ್ನು ನೋಡಿರಿ]

ಲೋಧ್ರ

ಸತೀಮಣಿಯರಿಗೆ : ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು
ಮನೆಗೆಲ್ಲಾ ಬೆಳಕು, ಬೆಳದಿಂಗಳು.
ಆದ್ದರಿಂದಲೇ ಸ್ತ್ರೀಯರ ಆರೋಗ್ಯವು
ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತುಸಂಬಂಧವಾದ
ದೋಷಗಳಿಂದ ಶರೀರವು ಕೃಶಿಸಿ
ಸಂತಾನ ವಾಂಛೆಯು ಸಫಲತೆ
ಹೊಂದದು. ಆದರೆ ಲೋಧ್ರವನ್ನು
ಸೇವಿಸಿದರೆ ಸ್ತ್ರೀಯರಿಗೆ ಸತ್ಸಂ
ತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟಾಕಿಸ್ಟರು: ಪೊಪ್ಯುಲರ್ ಸ್ಟೋರ್ಸ್ ರಥಬೀದಿ, ಮಂಗಳೂರು.

ಬೊಂಬಾಯಿಯಲ್ಲಿ ಮದ್ಯಪಾನ ನಿಷೇಧ

ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಯ ಯತ್ನ

ಬಜಾಜರನ್ನು ಸಂದರ್ಶಿಸಲು ಅನುಮತಿ ದೊರೆಯಲಿಲ್ಲ!

ವಾರ್ಧಾದಲ್ಲಿ ಮಹಾತ್ಮಾಜಿಯವರು

ಗಾಂಧಿಜಿಯವರು ಗಡಿನಾಡಿನಿಂದ ಮರಳಿದರು

ಗಡಿನಾಡನ್ನು ಬಿಟ್ಟು, ತಕ್ಷಶಿಲೆಯ ಮಾರ್ಗವಾಗಿ ವಾರ್ಧಾಕ್ಕೆ ತಾ. ೨೮ರಂದು ಬಂದು ತಲುಪಿದರು. ಮಧ್ಯದಲ್ಲಿ ದಿಲ್ಲಿಯಲ್ಲಿ ಸ್ವಲ್ಪ ಪ್ರಯಾಣ ನಿಲ್ಲಿಸಿದರು.

ಗಡಿನಾಡನ್ನು ಬಿಡುವಾಗ, ಪ್ರಧಾನರಾದ ಡಾ. ಖಾನ್ ಸಾಹೇಬರು, ಖಾಜಿ ಅಥುಲಾ ಖಾನ್ (ವಿದ್ಯಾ ಮಂತ್ರಿ) ರಾವ್ ಸಾಹೇಬ್ ಪರಮಾನಂದ ಇವರೇ ಮೊದಲಾದವರು ಅವರನ್ನು ಬೀಳ್ಕೊಟ್ಟರು. ಖಾನ್ ಅಬ್ದುಲ್ ಗಫರ್‌ಖಾನರು ತಕ್ಷಶಿಲೆಯ ವರೆಗೆ ಒಟ್ಟಿಗೆ ಬಂದರು.

ಗಡಿನಾಡಿನ ಗವರ್ನರರೊಡನೆ ಗಾಂಧಿಜಿಯವರು ಅನೇಕ ಪ್ರಾಂತಿಕ ಸಮಸ್ಯೆಗಳ ಕುರಿತು ಚರ್ಚಿಸಿದರು.

ಹೈದರಾಬಾದು ಸುಧಾರಣೆಯ ಕುರಿತು ಮಾಲವೀಯರ ಅಭಿಪ್ರಾಯ

ಹೈದರಾಬಾದಿನ ನಿಜಾಮರು ಪ್ರಜೆಗಳಿಗೆ ನೀಡಿದ ರಾಜಕೀಯ ಸುಧಾರಣೆಯು ತೃಪ್ತಿಕರವಾಗಿಲ್ಲವೆಂದು ಪಂಡಿತ ಮದನಮೋಹನ ಮಾಲವೀಯರು ಈ ರೀತಿಯಾಗಿ ಬರೆಯುತ್ತಾರೆ:

"ನಿಜಾಮರು ಕೊಟ್ಟ ಸುಧಾರಣೆಯು ರಾಜಕೀಯ ದೃಷ್ಟಿಯಿಂದ ತೀರಾ ಅಸಂತೃಪ್ತವಾಗಿದೆ ಹಲವು ವಿಷಯಗಳಲ್ಲಿ ತುಂಬಾ ಆಕ್ಷೇಪಣೆಗಳನ್ನು ಹೇಳಬಹುದಾಗಿದೆ. ಶೇಕಡಾ ೯೦ರಂತೆ ಇರುವ ಅಲ್ಪಸಂಖ್ಯಾಕರಿಗೂ ಶೇಕಡಾ ೮೫ರಂತೆ ಇರುವ ಬಹುಸಂಖ್ಯಾಕರಿಗೂ, ಈ ಸುಧಾರಣೆಯಂತೆ ಲೆಜಿಸ್ಲೇಟಿವ್ ಎಸೆಂಬ್ಲಿ, ಕೌನ್ಸಿಲು, ಲೋಕಲ್ ಬೋರ್ಡು ಮೊದಲಾದವುಗಳಲ್ಲಿ ಒಂದೇರೀತಿಯ ಪ್ರಾತಿನಿಧ್ಯವು ಕೊಡಲ್ಪಟ್ಟದ್ದು ತೀರಾ ದೂಷಣೀಯವಾದದ್ದು. ಆದರೆ ನನ್ನ ಅಭಿಪ್ರಾಯದಂತೆ ಲೆಜಿಸ್ಲೇಟಿವ್ ಎಸೆಂಬ್ಲಿಗಳೊಳಗೂ ಹೊರಗೆ ಭಾಷಣವೇದಿಕೆಗಳಲ್ಲಿಯೂ ಪತ್ರಿಕೆಗಳಲ್ಲಿಯೂ ಸಾರ್ವಜನಿಕರು ವಿಷಯಗಳನ್ನು ನಿರ್ಭಯರಾಗಿ ಹೇಳುವ ಸಂದರ್ಭವನ್ನು ಈ ಸುಧಾರಣೆಯು ಕೊಡುವುದೆಂಬುದರಲ್ಲಿ ಸಂಶಯವಿಲ್ಲ. ಇದರಿಂದ ಹೈದರಾಬಾದಿನಲ್ಲಿ ರಾಜಕೀಯ ವಾತಾವರಣವನ್ನು ಸೃಷ್ಟಿಮಾಡಿ ಜಾಗ್ರತಿ ಹುಟ್ಟಿಸಬಹುದಾದದರಿಂದ, ಇಂದಿನ ಯೋಜನೆಯು ತೀರಾ ಅಸಮರ್ಪಕವಾಗಿದ್ದರೂ ಇದರಿಂದ ನಮಗೆ ಎಷ್ಟು ಪ್ರಯೋಜನವಾಗಬಹುದೋ ಅಷ್ಟನ್ನು ಪಡೆದುಕೊಳ್ಳಬೇಕಾಗಿ ನನ್ನ ಅಭಿಪ್ರಾಯ.

"ಸತ್ಯಾಗ್ರಹವನ್ನು ಆರ್ಯಸಮಾಜದವರು ನಿಲ್ಲಿಸಿದ ವಿಷಯ, ನಾನು ಸಂತೋಷಗೊಂಡಿದ್ದೇನೆ. ಆರ್ಯಸಮಾಜದವರು ಹಿಂದುಗಳು ಯಾವ ಪ್ರಾಥಮಿಕ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ವಾದಿಸುತ್ತಾರೋ ಅದನ್ನು ಹೈದರಾಬಾದು ಸರಕಾರವು ಕೊಡಲು ಉದಾಸೀನ ಮಾಡಬಾರದಾಗಿ ನನ್ನ ಸೂಚನೆ. ಎಲ್ಲಾ ಸತ್ಯಾಗ್ರಹೀ ಕೈದಿಗಳನ್ನು ಬೇಗನೇ ನೈಜಾಮ ಸರಕಾರವು ಬಿಡುಗಡೆ ಮಾಡುವುದಾಗಿ ನಾನು ನಂಬುತ್ತೇನೆ. ಬಂಧನದಲ್ಲಿ ಅನೇಕ ಮಂದಿ ಪ್ರಸಿದ್ಧರಾದವರಿದ್ದಾರೆ. ಅವರನ್ನು ಹಾಗೆ ಸೆರೆಮನೆಯಲ್ಲಿ ಬಿಡುವುದರಿಂದ ಸಾರ್ವಜನಿಕರನ್ನು ನೋಯಿಸಿದಂತಾಗುವುದು."

ಸೇಟ್ ಗೋವಿಂದದಾಸರು ಪ್ರಾಂತಿಕ ದಂಡಾಧಿಕಾರಿಗಳು

ಕಾಂಗ್ರೆಸು ಸಭೆಯಲ್ಲಿ ನಿರ್ಣಯವಾದಂತೆ ಕಾಂಗ್ರೆಸಿನ ಶುದ್ಧೀಕರಣ ದೃಷ್ಟಿಯಿಂದ ದಂಡಾಧಿಕಾರಿಗಳನ್ನು(Tribunal) ನೇಮಿಸಬೇಕಾಗಿದೆಯಷ್ಟೆ? ಮಹಾಕೋಸಲ ಪ್ರಾಂತಿಕ ಕಾಂಗ್ರೆಸು ಕಮಿಟಿಯ ದಂಡಾಧಿಕಾರಿಗಳ ಅಧ್ಯಕ್ಷರಾಗಿ ಸೇಟ್ ಗೋವಿಂದದಾಸರು ಆರಿಸಲ್ಪಟ್ಟಿದ್ದಾರೆ.

ಮಹಾಕೋಸಲ ಪ್ರಾಂತಿಕ ಕಾಂಗ್ರೆಸು ಕಮಿಟಿಯು ಮಹಲಕ್ಷ್ಮೀ ನಾರಾಯಣದಾಸರ ಧುರೀಣತೆಯಿಂದ ಹದಿನಾಲ್ಕು ಜಿಲ್ಲೆಗಳಲ್ಲಿ ಸ್ವಯಂ ಸೇವಕರನ್ನು ತರಬೇತಿ ಮಾಡುವ ಕಾರ್ಯವನ್ನು ಕೈಕೊಂಡಿದೆ.

ಬಜಾಜರನ್ನು ಸಂದರ್ಶಿಸಲು ಅವರ ಮಗನಿಗೇ ಅನುಮತಿ ಸಿಗಲಿಲ್ಲ.

ಜಯಪುರ ಜೈಲಿನಲ್ಲಿರುವ ಸೇಟ್ ಜಮ್ನಾಲಾಲ್ ಬಜಾಜರ ಆರೋಗ್ಯವು ಕೆಟ್ಟಿರುವುದೆಂದು ಕೇಳಿ ಅವರ ಪುತ್ರ ಕಮಲನಾರಾಯಣ ಬಜಾಜ ಮತ್ತು ಶ್ರೀಯುತ ಶಂಕರಲಾಲ್ ಬೇಂಕರರು ನೋಡಲು ಅನುಮತಿ ಕೇಳಿದಾಗ, ಜಯಪುರದ ಪ್ರಧಾನ ಮಂತ್ರಿಗಳು ಅನುಮತಿ ಕೊಡಲು ತಿರಸ್ಕರಿಸಿದರು.

ಕೆಲವು ದಿವಸಗಳ ಹಿಂದೆ ಅನಾರೋಗ್ಯದ ನಿಮಿತ್ತ ಜಯಪುರದ ಪ್ರಧಾನ ಮಂತ್ರಿಗಳಾದ ಮಿ ಎಚ್ ಜೆ. ಕೋಟರು ರಾಜಿಕೊಡುವರೆಂದು ಪ್ರಕಟವಾಗಿತ್ತು. ಹಾಗೆ ಅವರು ಮಾಡುವುದಿಲ್ಲವೆಂದು ಪ್ರಕಟಿಸಿದ್ದಾರೆ.

ಸೇನಗುಪ್ತರ ಸ್ಮಾರಕ

ದೇಶಪ್ರಿಯ ಜತೀಂದ್ರ ಮೋಹನ ಸೇನಗುಪ್ತರ ಆರನೇ ವಾರ್ಷಿಕ ದಿನದ ಸ್ಮಾರಕವು ಕಲ್ಕತ್ತದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಸಮಾಧಿಯ ಬಳಿಗೆ ಜನಸಂದಣಿಯು ಹೋಗಿ ಹೂಮಾಲೆಗಳನ್ನು ಅರ್ಪಿಸಿದರು. ಅನೇಕ ಕಾಂಗ್ರೆಸು ಮುಂದಾಳುಗಳು ಸೇನಗುಪ್ತರ ಗುಣಕಥನ ಮಾಡಿದರು. ಅವರ ಸ್ಮಾರಕವೊಂದನ್ನು ಮಾಡುವ ಏರ್ಪಾಡು ಗೈಯಲಾಯಿತು.

"ವಂದೇ ಮಾತರಂ" ಹಾಡುವುದು ದೇಶಾಭಿಮಾನಿಗಳ ಕರ್ತವ್ಯ

'ವಂದೇ ಮಾತರಂ' ಹಾಡುವ ವಿಷಯದಲ್ಲಿ ಹಿಂದೆ ಮಹಾತ್ಮಾ ಗಾಂಧಿಯವರು ಪ್ರಕಟಿಸಿದ ಹೇಳಿಕೆಯ ಕುರಿತು ಕೆಲವು ವಿದ್ಯಾರ್ಥಿಗಳು ಸಂದಿಗ್ಧರಾಗಿ ಪ್ರಶ್ನೆ ಮಾಡಿದ ವಿಷಯ ಗಾಂಧಿಜಿಯವರು ಈ ವಾರದ ಹರಿಜನದಲ್ಲಿ ಹೀಗೆಂದು ಸ್ಪಷ್ಟೀಕರಿಸುತ್ತಾರೆ.

"ಹೈದರಾಬಾದಿನ ಕೆಲವು ವಿದ್ಯಾರ್ಥಿಗಳಲ್ಲಿ ನನ್ನ 'ವಂದೇಮಾತರಂ' ಹಾಡಿನ ಕುರಿತು ಕೊಟ್ಟ ಹೇಳಿಕೆಯು ಸಂದೇಹವನ್ನುಂಟುಮಾಡಿದೆಯೆಂದು ನನ್ನೊಡನೆ ಆಕ್ಷೇಪ ಬಂದಿದೆ. ಎಲ್ಲಿ ಒಬ್ಬನೇ ಒಬ್ಬನಾದರೂ ಆಕ್ಷೇಪವೆತ್ತುತ್ತಾನೋ ಅಂತಹ ಸಭೆಗಳಲ್ಲಿ, ಕಾಂಗ್ರೆಸು ಸಭೆಯೇ ಆಗಿದ್ದರೂ, ವಂದೇ ಮಾತರಂ ಹಾಡಬಾರದಾಗಿ ನಾನು ಹೇಳಿದ್ದೆ. ಆದರೆ ಆಕ್ಷೇಪವಿಲ್ಲದಲ್ಲಿ ಹಾಡುವುದು ಕರ್ತವ್ಯವಾಗಿದೆ. ಆಕ್ಷೇಪವಿರುವಲ್ಲಿ ಅದನ್ನು ಹಾಡುವುದರಿಂದ ಕೆಲವು ವೇಳೆ ಅನರ್ಥಗಳಾಗುತ್ತವೆ. ಆದರೆ ಹಲವು ದೇಶಾಭಿಮಾನಿಗಳಾದವರಿಗೆ 'ವಂದೇ ಮಾತರಂ' ಹಾಡು ಧಾರ್ಮಿಕ ಕರ್ತವ್ಯದಷ್ಟೇ ಮಹತ್ವವುಳ್ಳದ್ದಾಗಿರುತ್ತದೆಯೆಂಬುದನ್ನು ನಾನು ಬಲ್ಲವನಾಗಿದ್ದೇನೆ."

ಶ್ರೀಮತಿ ಸರೋಜಿನಿ ನಾಯಿಡು

ದೇಶ್ಯಾದಲ್ಲಿ ಅನೇಕ ಸಭೆಗಳಲ್ಲಿ ಶ್ರೀಮತಿ ಸರೋಜಿನಿ ದೇವಿಯವರು ಭಾಷಣಮಾಡಿದರು. ಢಾಕಾ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಭಾಷಣವನ್ನು ಈ ವರ್ಷ ಸರೋಜಿನಿಯವರು ಕೊಡುವರಾಗಿ ತಿಳಿದಿದೆ. ವೈಸ್ ಚಾನ್ಸಲರ ಅತಿಥಿಯಾಗಿರುವರು. ಪ್ರತಿಯೊಂದು ದಿನವೂ ವಿಪುಲಕಾರ್ಯಕ್ರಮವಿರುತ್ತದೆ.

ಪ್ರಥಮ ಭಾರತೀಯ ಮಹಿಳೆ

ಸಿಮ್ಲಾ ಯೂನಿಯನ್ ಏಕಡಮಿಯ ಅಸಿಸ್ಟೆಂಟ್ ಹೆಡ್‌ಮಾಸ್ತರರಾದ ಶ್ರೀ. ಬಿ. ಘೋಷ್ ಇವರ ಸಹೋದರಿ ಕುಮಾರಿ ಲೀಲಾ ಘೋಷರೆಂಬ ಭಾರತೀಯ ಮಹಿಳೆಯರಲ್ಲಿ ಇದೇ ಪ್ರಥಮವಾಗಿ ಇಂಡಿಯಾ ಸರಕಾರದ ಡಿಫೆನ್ಸ್ ಇಲಾಖೆಯ ಮಿನಿಸ್ಟೀರಿಯಲ್ ಸರ್ವೀಸಿನಲ್ಲಿ ನೇಮಕವಾಗಿದ್ದಾರೆ. ಆಕೆ ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಶನ್ ಪರೀಕ್ಷೆಯಲ್ಲಿ ಕೇರ್ಗಡೆ ಹೊಂದಿದವರಾಗಿರುತ್ತಾರೆ.

ಮಾನ್ಯ ವಾರ್ಕಿಯವರ ಗಡಿಬಿಡಿ

ನಂದ್ಯಾಲಕ್ಕೆ ಬಂದಿರುವ ಮಾನ್ಯ ವಾರ್ಕಿಯವರು, ಅವರ ಆಗಮನದ ಪರವಾಗಿ ಸ್ಥಳೀಕ ಕಾಂಗ್ರೆಸು ಕಮಿಟಿಯವರಿಂದ ಏರ್ಪಡಿಸಲ್ಪಟ್ಟ ಒಂದು ಸಭೆಯ ನೋಟೀಸನ್ನು ಅವರಿಗೆ ಕೊಟ್ಟು ಅದನ್ನು ಸಿಟ್ಟಿನಿಂದ ಹರಿದು, ಅವರನ್ನು ನೋಡಹೋಗಿದ್ದ ಕೆಲ ಪ್ರಸಿದ್ಧ ಕಾಂಗ್ರೆಸು ಕೆಲಸಗಾರರಿಗೆ ಮಾಡಿದ ಅಪಮಾನಕ್ಕಾಗಿ ಒಂದು ನಿಷೇಧ ಸಭೆಯು ಜರಗಿ, ಅವರಿಗೆ ಯಾವ ರೀತಿಯಿಂದಲೂ ಸ್ವಾಗತವನ್ನು ಕೊಡಬಾರದಾಗಿಯೂ, ಮುನ್ಸಿಪಾಲಿಟಿಯವರು ಏರ್ಪಡಿಸಿದ ಮಾನಪತ್ರವು ಕೊಡಬಾರದೆಂದೂ, ಈ ವಿಷಯದಲ್ಲಿ ಅಖಿಲಭಾರತ ಕಾಂಗ್ರೆಸು ಕಮಿಟಿ ಎಸೆಂಬ್ಲಿ ಕಾಂಗ್ರೆಸ್‌ಪಾರ್ಟಿ ಇವರು ಯೋಗ್ಯವಾದ ಕ್ರಮವನ್ನು ತೆಕ್ಕೊಳ್ಳಬೇಕಾಗಿ ಠರಾವಾಯಿತು.

ಹಾಗೆಯೆ ಮುನ್ಸಿಪಲ್ ಮೀಟಿಂಗಿನಲ್ಲಿ ಸೇರಿದ ಸದಸ್ಯರ ಬಹುಮತದಿಂದ ಮಾನಪತ್ರವು ರದ್ದಾಯಿತು.

ತಾನು ಸೌಖ್ಯವಿಲ್ಲದ ನಿಮಿತ್ತ ತಾನು ಬೇಡವೆಂದಿದ್ದರೂ, ಕಾಂಗ್ರೆಸು ಕಮಿಟಿಯವರು ತನ್ನ ಸಮ್ಮತಿಯಿಲ್ಲದೆ ಹಾಗೆ ಸಭೆ ಜರಗಿಸಿದುದರಿಂದ, ತಾನು ಹಾಗೆ ಮಾಡಬೇಕಾಯಿತೆಂದು ಮಾನ್ಯ ವಾರ್ಕಿಯವರು ಹೇಳುತ್ತಾರೆ.

ಬಂಗಾಳ ಕಾಂಗ್ರೆಸು ಎಕ್ಸಿಕ್ಯುಟಿವ್ ಕೌನ್ಸಿಲಿನ ಸದಸ್ಯತನಕ್ಕೆ ಡಾ। ಘೋಷರ ರಾಜಿನಾಮೆ

ಅಖಿಲಭಾರತ ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸದಸ್ಯರೂ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಎಕ್ಸಕ್ಯುಟಿವ್ ಕೌನ್ಸಿಲಿನ ಸದಸ್ಯರೂ ಆಗಿರುವ ಡಾ. ಪ್ರಫುಲ್ಲಚಂದ್ರ ಘೋಷರು ಮುಲಾಯಿ ಅತ್ತರಿಂದ ತಮ್ಮ ರಾಜಿನಾಮೆಯಿತ್ತಿರುವರು.

ಡಾ. ಬಿ ಸಿ. ರೋಯ ಮತ್ತು ಶ್ರೀ। ಕಿರಣ್ ಶಂಕರರಾಯ್ ಇವರೂ ಕೂಡಾ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಎಕ್ಸಕ್ಯುಟಿವ ಕೌನ್ಸಿಲಿನ ಸದಸ್ಯತನಕ್ಕೆ ರಾಜಿನಾಮೆ ಕೊಡುವರಾಗಿ ತಿಳಿದುಬರುತ್ತದೆ.

ಹೈದರಬಾದಿನಲ್ಲಿ ಜಾತೀಯ ಜಗಳ

ಹೈದರಾಬಾದಿನಲ್ಲಿ ತಾ ೨೮ರಂದು ಭಯಂಕರ ಗಲಭೆಯಾಯಿತು. ಇಂದಿನ ಹೊಸ 'ಸುಧಾರಣೆ'ಯನ್ನು ಸಮರ್ಥಿಸಿ ೩೦೦೦೦ ಜನರ ಮೆರವಣಿಗೆಯೊಂದು ಹೊರಟಿತ್ತು. ಆಗ ಕೆಲವು ಮುಸ್ಲಿಮರು ಗಲಭೆಯೆಬ್ಬಿಸಿ 'ನವಭಾರತ'ವೆಂಬ ನಾಗಪುರದ ಪತ್ರಿಕೆಯಲ್ಲಿ ಉದ್ಯೋಗದಲ್ಲಿರುವವನನ್ನು ಹಿಂದಿನಿಂದ ಬಂದು ತಿವಿದರು. ಒಬ್ಬ ಬೇಂಕರನಿಗೆ ಚೆನ್ನಾಗಿ ಗಾಯವಾಗಿದೆ.

ವಾರ್ಧಾದಲ್ಲಿ ಗಾಂಧಿಜಿಯವರು

ಗಡಿನಾಡಿನ ಯಾತ್ರೆಯನ್ನು ಮುಗಿಸಿ ಮರಳಿ ಬಂದ ಗಾಂಧಿಜಿಯವರಿಗೆ ವಾರ್ಧಾದಲ್ಲಿ ಸಂಭ್ರಮದ ಸ್ವಾಗತವಾಯಿತು! ಗಾಂಧಿಜಿಯವರು ಯಾತ್ರೆಯಿಂದ ಹೆಚ್ಚು ಬಳಲಿದಂತೆ ಕಂಡು ಬಂದರು ಮುಂದಕ್ಕೆ ಎರಡು ತಿಂಗಳ ವರೆಗೆ ಸೇಗಾವಿನಲ್ಲಿಯೇ ಇರುವುದಾಗಿ ಹೇಳಿದರು.

ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಯ ಯತ್ನ

ಬಂಗಾಳದ ಪ್ರಧಾನರಾದ ಹಕ್ಕರವರು ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಪತ್ರಕ್ಕೆ ರಾಜಕೀಯ ಕೈದಿಗಳು ನಿರಶನ ವ್ರತವನ್ನು ಬಿಟ್ಟುಕೊಡುವ ಸಂದರ್ಭದಲ್ಲಿ ತಾನು ಅವರ ಬಿಡುಗಡೆಗಾಗಿ ಯತ್ನಿಸುವುದಾಗಿ ಉತ್ತರಕೊಟ್ಟಿರುವರೆಂದು ತಿಳಿಯುತ್ತದೆ.

ಬಂಗಾಳ ರಾಜಕೀಯ ಕೈದಿಗಳ ವಿಷಯವಾಗಿ ವಿಚಾರಿಸುವದನ್ನು ಬೇಗನೇ ಬಂಗಾಳ ಸರಕಾರವು ಬಿಡುಗಡೆ ಮಾಡಬೇಕೆಂದೂ ಕಳೆದ ವರ್ಷದಿಂದ ಆರಂಭಿಸಿ, ಮಹಾತ್ಮಾ ಗಾಂಧಿಯವರು ಮಾಡುತ್ತಿದ್ದ ಯತ್ನಕ್ಕೆ ಮರ್ಯಾದೆ ಕೊಟ್ಟು, ರಾಷ್ಟ್ರವು ತಾಳ್ಮೆಗೆಟ್ಟದಂತೆ ನೋಡುವುದು ಸರಕಾರದ ಕರ್ತವ್ಯವೆಂದೂ ಸರೋಜಿನಿ ದೇವಿಯವರು ಹೇಳಿದರು.

ಬಂಗಾಳದ ರಾಜಕೀಯ ಕೈದಿಗಳನ್ನು ಬಂಗಾಳ ಸರಕಾರವು ಬಿಡುಗಡೆ ಮಾಡದಿದ್ದರೆ ಅದಕ್ಕಾಗಿ ಇಡೀ ಹಿಂದೂಸ್ಥಾನದಲ್ಲಿ ಕಾಂಗ್ರೆಸು ಮಂತ್ರಿಮಂಡಳಗಳು ರಾಜಿಕೊಡಬೇಕಾಗಿದೆಯೆಂದು ನೆಹರುಗಳು ಹೇಳುತ್ತಾರೆ.

ರಾಜಕೀಯ ಕೈದಿಗಳನ್ನು ಶರ್ತಗಳಿಲ್ಲದೆ ಬಿಡುಗಡೆಮಾಡಬೇಕಾಗಿ, ಬಂಗಾಳದಲ್ಲಿ ಸಾವಿರ ಮಂದಿ ಸ್ವಯಂಸೇವಕರು ಸಿದ್ಧರಾಗಿ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಸುಭಾಸ ಬೋಸರು ಹೇಳುತ್ತಾರೆ.

ರಾಜಕೀಯ ಕೈದಿಗಳ ಬಿಡುಗಡೆಯ ವಿಷಯವಾಗಿ ತಿರಿಗಿ ರಾಷ್ಟ್ರಪತಿಗಳು ಡಾಕ್ತ ಬಿ. ಸಿ. ರೋಯ, ಶರಚ್ಚಂದ್ರ ಬೋಸ್, ಮಹಾದೇವ ದೇಸಾಯಿಗಳು ಮೂರುವರೆ ತಾಸುಗಳ ತನಕ ಮಾತನಾಡಿ, ತಿರಿಗಿ ಒಮ್ಮೆ ಅವರನ್ನು ಉಪವಾಸ ಬಿಟ್ಟುಕೊಡಬೇಕಾಗಿ ತಿಳಿಸಬೇಕಾಗಿ ನಿಶ್ಚಯವಾಯಿತು.

ಕೈದಿಗಳು ತಾವು ಉಪವಾಸ ಬಿಡಬೇಕಾಗಿದ್ದರೆ, ಅದರಿಂದ ಇಂತಹ ದಿನಗಳಲ್ಲಿ ಹೇಗೆಯೋ ಮಾಡಲಾಗುವುದೆಂಬ ಭರವಸೆಯನ್ನು ಕಾಂಗ್ರೆಸು ಮುಖಂಡರು ಕೊಡಬೇಕಾಗಿ ಕೇಳಿರುವರು. ಈ ಕೇಳಿಕೆಯಂತೆ ರಾಷ್ಟ್ರಪತಿಗಳು ಹೋಮ್ ಮಿನಿಸ್ಟರರೊಡನೆ ಮಾತುಕತೆ ನಡೆಸುತ್ತಾರೆ.

ಬೊಂಬಾಯಿಯಲ್ಲಿ ಮದ್ಯಪಾನ ನಿಷೇಧ

ಆಗಸ್ಟ್ ಒಂದರಿಂದ ಬೊಂಬಾಯಿಯಲ್ಲಿ ಮದ್ಯಪಾನ ನಿಷೇಧವು ಜಾರಿಗೆ ಬಂತು. ಅನೇಕ ಕಾಂಗ್ರೆಸು ಮುಖಂಡರು ತಮ್ಮ ಹಾರ್ದಿಕ ಸಹಾನುಭೂತಿ ಸಂದೇಶಗಳನ್ನು ಕಳುಹಿಸುತ್ತಾರೆ. ಕಾಂಗ್ರೆಸ್ ಜನರಲ್ ಸೆಕ್ರೆಟರಿ ಶ್ರೀ ಕೃಪಾಲಾನಿಯವರು, ಮಹಾತ್ಮಾ ಗಾಂಧಿಯವರು ರಾಷ್ಟ್ರಪತಿಗಳು, ರಾಜಗೋಪಾಲಾಚಾರ್ಯರೇ ಮೊದಲಾದವರು ಸಂದೇಶ ಕಳುಹಿಸಿರುವರು.

ಹಿಮಾಲಯವನ್ನೇರಿ ಸತ್ತರು

ಪೋಲಿಂಡಿನ ಸಾಹಸಿಗರು ಹಿಮಾಲಯವನ್ನೇರಲು ಯತ್ನಮಾಡಿ, ಮೇಲಿನಿಂದ ಹಿಮಗಡ್ಡೆ ಬಿದ್ದು ಅವರಲ್ಲಿ ಇಬ್ಬರು ಸತ್ತಿರುವರಾಗಿ ತಿಳಿದಿದೆ. ಇವರು ಮೌಂಟ್ ನಂದಾದೇವಿಯ ವರೆಗೆ ಹತ್ತಿದವರು. (೨೩,೩೦೦ ಫೀಟುಗಳ ಎತ್ತರ)

ತ್ರಿರಾಷ್ಟ್ರಗಳ ಒಪ್ಪಂದವು ಸಂಭವನೀಯವಾಗಿದೆ

ಜಪಾನರು ಬ್ರಿಟಿಷರನ್ನು ಹೆದರಿಸುತ್ತಾರೆ

ದಕ್ಷಿಣ ಆಫ್ರಿಕದ ಚಳವಳವು ಮುಂದುವರಿದಿದೆ

ಫ್ರಾನ್ಸಿನಲ್ಲಿ ವಿಚಿತ್ರ ತೆರಿಗೆ

ತ್ರಿರಾಷ್ಟ್ರಗಳ ಒಪ್ಪಂದ

ಬ್ರಿಟನು—ಫ್ರಾನ್ಸು—ರಷ್ಯಾ ದೇಶಗಳ ಒಪ್ಪಂದವು ಬೇಗನೆ ಆಗುವ ಸೂಚನೆಯಿದೆ. ಅದನ್ನು ಬೇಗನೆ ಮೊಸ್ಕೊವದಲ್ಲಿ ಆ ಕುರಿತು ಮಾತುಕತೆ ನಡೆಯುವುದು. ಕೆಲವು ರಾಜಕೀಯ ವಿಷಯಗಳ ಮಾತ್ರ ಇನ್ನು ನಿಶ್ಚಯವಾಗಬೇಕಾಗಿದೆ ಅವುಗಳೂ ಬೇಗನೇ ಇತ್ಯರ್ಥವಾಗಬಹುದು. ಇಂಗ್ಲೆಂಡು-ಫ್ರಾನ್ಸು ರಷ್ಯಗಳು ಕಳೆದ ಮಹಾಯುದ್ಧದಂತೆ ತಿರಿಗಿ ಒಮ್ಮೆ ಒಂದಾಗುವ ಸಂಭವದ ಸೂಚನೆಯಿದೆ

ತ್ರಿರಾಷ್ಟ್ರಗಳ ಒಪ್ಪಂದದ ಕುರಿತು ಬರುವ ವಾರದ ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ಸ್ಪಷ್ಟ ಪ್ರಕಟಣೆ ಕೊಡುವುದಾಗಿ ಚೆಂಬರ್ಲೆನರು ಹೇಳುತ್ತಾರೆ

ಜಪಾನಿಯರು ಬ್ರಿಟಿಷರನ್ನು ಹೆದರಿಸುತ್ತಾರೆ

ಜಪಾನು ಬ್ರಿಟನ ಒಪ್ಪಂದವಾಯಿತಷ್ಟೆ! ಬ್ರಿಟನು ತನ್ನ ಹಿಂದಿನ ಎಲ್ಲಾ ಗೌರವಗಳನ್ನು ಮರೆತು ಚೈನಕ್ಕೆ ಸಹಾಯನೀಡುವುದಿಲ್ಲವಾಗಿ ಒಪ್ಪಂದಕ್ಕೆ ಸಹಿ ಹಾಕಿದೆ ಆದರೆ ಬ್ರಿಟನು ತನ್ನ ಸಮ್ಮತಿಗಳನ್ನು ನಿಜವಾಗಿ ಕಾರ್ಯರೂಪಕ್ಕೆ ತಂದ ವಿನಹ ಜಪಾನಿಯರು ಸುಮ್ಮಗಿರುವುದಿಲ್ಲ ಟ್ಯೆಂಟ್ಸಿನಿನಲ್ಲಿರುವ ಬ್ರಿಟಿಷರ ಸ್ಥಳಗಳನ್ನು ಇನ್ನೂ ಜಪಾನೀಯರು ಅವರಿಗೆ ಜುಲೂಂ ಮಾಡುತ್ತಾ ಇದ್ದಾರೆ

ಇತ್ತ ಚೈನದ ವಿದೇಶಾಂಗ ಮಂತ್ರಿಯು ಇಂದಿನ ಬ್ರಿಟಿಷ್ ಧೋರಣೆಯ ಕುರಿತು ಮಾತನಾಡುತ್ತಾ ಇನ್ನೂ ಆಶಾವಾದಿಯಾಗಿರುವಂತೆ ಕಾಣುತ್ತಿದೆ ಹಿಂದಿನ ಬ್ರಿಟನಿನ ನಿರ್ಣಯದಂತೆ ಕಳಹಕಂಟಕವಾದ ರಾಷ್ಟ್ರಗಳನ್ನು ಎದುರಿಸಲು ನಿಜವಾಗಿಯೂ ಬ್ರಿಟನು ಚೈನಕ್ಕೆ ಸಹಾಯ ಕೊಡುವುದೆಂದೂ ಇಂತಹ ನೈತಿಕ ಸಹಾಯವನ್ನು ಬ್ರಿಟನಿನಿಂದ ಚೈನವು ಪಡೆಯಲು ಹಾರೈಸುತ್ತಿದೆಯೆಂದು ಪ್ರಕಟಿಸುತ್ತಾರೆ

ಫ್ರಾನ್ಸಿನ ವಿಚಿತ್ರ ತೆರಿಗೆ

ಮದುವೆಯಾಗದವರು, ಮಕ್ಕಳಿಲ್ಲದ ದಂಪತಿಗಳು, ಇಂತವರು ಹೊಸ ತೆರಿಗೆಯನ್ನು ತೆರಬೇಕಾಗಿ ಫ್ರಾನ್ಸು ಸರಕಾರವು ಆಜ್ಞೆ ಮಾಡಿದೆ

ಫ್ರಾನ್ಸು ದೇಶದ ಜನಸಂಖ್ಯೆಯನ್ನು ಹೆಚ್ಚು ಮಾಡುವ ಸಲುವಾಗಿ, ಸರಕಾರಕ್ಕೆ ಅಗತ್ಯವಿರುವ ಆರು ಮಿಲಿಯ ಸ್ಟರ್ಲಿಂಗಿನಷ್ಟು ಹಣವನ್ನು ಸಾರ್ವಜನಿಕರಿಂದ ಎತ್ತಲು ಈ ಹಂಚಿಕೆಯು ಹೂಡಲಾಗಿದೆ

ಮಕ್ಕಳಿಲ್ಲದ ವಿಧವೆಯರು, ಗಂಡರಿಲ್ಲದ ಹೆಂಗುಸರು, ಹೆಂಡತಿಯಿಲ್ಲದ ಗಂಡುಸರೂ ಕೂಡ ಈ ತೆರಿಗೆಯನ್ನು ತೆರಬೇಕಾಗಿರುತ್ತದೆ ಈ ಕಾನೂನಿನಂತೆ ಸಾರ್ವಜನಿಕರ ನೀತಿಗೆ ಹಾನಿಕಾರಕವಾದ ಯಾವುದೇ ಪ್ರದರ್ಶನಾದಿಗಳನ್ನೂ ಮಾಡಬಾರದಾಗಿಯೂ ಹಾಗೆ ಮಾಡಿದಲ್ಲಿ ಒಂದು ವರ್ಷದಿಂದ ಐದು ವರ್ಷಗಳ ಸಜೆಯು ವಿಧಿಸಲ್ಪಡುವುದಾಗಿಯೂ ತಿಳಿಸಿದೆ

ಈ ಕಾನೂನಿನಂತೆ ಮಕ್ಕಳನ್ನು ಹುಟ್ಟಿಸುವವರಿಗೆ, ಸಾಕುವವರಿಗೆ, ಹುಟ್ಟಿದ ಮಕ್ಕಳಿಗೂ ಕೂಡ ಅನೇಕ ಸೌಕರ್ಯಗಳನ್ನು ಸರಕಾರವು ಒದಗಿಸುವುದು.

ಸ್ಪೈಯಿನಿನ ರಾಷ್ಟ್ರೀಯೋತ್ಪಾದಕಾರ್ಯ

ಹದಿನೆಂಟು ವರ್ಷಕ್ಕಿಂತ ಮೇಲಿನ ಐವತ್ತು ವರ್ಷ ಪ್ರಾಯದ ಒಳಗಿನ ಪ್ರತಿಯೊಬ್ಬ ಸ್ಪೈಯಿನಿನವನೂ ಕೂಡ ಅಲ್ಲಿನ ರಾಷ್ಟ್ರೀಯ ಪರಿಷ್ಕರಣ ಕಾರ್ಯಕ್ಕಾಗಿ ಹದಿನೈದು ದಿನಗಳ ತನಕ ಕೆಲಸ ಮಾಡಬೇಕೆಂದೂ, ಅಲ್ಲವಾದರೆ ಹದಿನೈದು ದಿವಸಗಳ ಕೂಲಿಯನ್ನು ತೆರಬೇಕೆಂದೂ ಸರಕಾರದ ಆಜ್ಞೆ

ಬ್ರಿಟನು ತನ್ನ ಶಕ್ತಿಯನ್ನು ತೋರಿಸುವುದು

ಬ್ರಿಟನಿನ ಜಲ, ನೆಲ, ಆಕಾಶ ಸೈನ್ಯಗಳ ಶಕ್ತಿಪ್ರದರ್ಶನವೊಂದು ಬರುವ ಆಗಸ್ಟ ತಿಂಗಳಲ್ಲಿ ನಡೆಯುವುದು ಅವುಗಳ ಪರೀಕ್ಷೆಯನ್ನು ಹೀಗೆ ಮಾಡಲಾಗುವುದು. ಬ್ರಿಟಿಷ್ ಸರಕಾರದ ಈ ಯೋಜನೆಯು ಕೇವಲ ಯುರೋಪಿನಲ್ಲಿ ಮಾತ್ರವಲ್ಲ, ಅದರ ಆಡಳಿತೆಯ ಅಧಿಕಾರವುಳ್ಳ ಅಖಿಲ ರಾಷ್ಟ್ರಗಳಲ್ಲಿರುವ ಸೈನ್ಯಶಕ್ತಿಯ ಪರೀಕ್ಷೆಗಳ ಕೆಲಸವೂ ಆಗಬೇಕಾಗಿದೆಯೆಂದು ಅಂಡರ್ ಸೆಕ್ರೆಟರಿ ಕೆಪ್ಟನ್ ಬಲ್ಫ್ರರರವರು ಅಭಿಪ್ರಾಯ ಪಡುತ್ತಾರೆ

ದಕ್ಷಿಣ ಆಫ್ರಿಕದ ಹಿಂದೀಯರ ಚಳವಳವು ಮುಂದುವರಿಯಿತು

ಮಹಾತ್ಮಾ ಗಾಂಧಿಯವರ ಅಪ್ಪಣೆಯಂತೆ ದಕ್ಷಿಣ ಆಫ್ರಿಕದ ಹಿಂದೀಯರು ತಮ್ಮ ಚಳವಳವನ್ನು ಮುಂದುವರಿಸಿರುವರು ಆ ವಿಷಯವಾಗಿ ಆ ಚಳವಳಗಾರರ ಮುಖಂಡರಾದ ಡಾ ದಾದೂ ಇವರು ತಮ್ಮ ಪ್ರಕಟಣೆಯಲ್ಲಿ, ಮಹಾತ್ಮಾ ಗಾಂಧಿಯವರು ನಮಗೆ ಆದೇಶವಿತ್ತಂತೆ ಇದನ್ನು ಮುಂದುವರಿಸಲಾಗಿದೆಯೆಂದೂ, ಗಾಂಧಿಜಿಯವರು ಆಫ್ರಿಕವನ್ನು ಬಿಟ್ಟುಹೋಗಿ ಬಹಳ ಕಾಲವಾದರೂ ಅವರಿಗೆ ಹಿಂದೀಯರಾದ ನಮ್ಮ ಮೇಲೆ ಅತ್ಯಂತ ಅಭಿಮಾನವಿರುವುದಾಗಿಯೂ, ಗಾಂಧಿಜಿಯವರು ಅಧಿಕಾರಿಗಳೊಡನೆ ನಡೆಸುವ ವ್ಯವಹಾರವು ಇಲ್ಲಿನ ಹಿಂದೀಯರ ದೌರ್ಭಾಗ್ಯವನ್ನು ಕಡಿಮೆಮಾಡಿ ಸಮಾಧಾನಕರವಾಗಿ ಕೊನೆಗಾಣುವಂತಾಗಲಿ ಎಂದು ಅಭಿಪ್ರಾಯಪಡುತ್ತಾರೆ

ಜಪಾನಿಯರು ಬ್ರಿಟಿಷರನ್ನು ಬಂಧಿಸಿದರು

ಶಾಂಗಾಯಿಯಲ್ಲಿ ಜಪಾನಿಯರು ನಾಲ್ಕು ಮಂದಿ ಬ್ರಿಟಿಷರನ್ನು ಹಿಡಿದುನಿಲ್ಲಿಸಿದರು, ಅದು ಮಾತ್ರವಲ್ಲದೆ ಬ್ರಿಟಿಷರ ಸೈನ್ಯವೊಂದನ್ನೂ ಮತ್ತು ಲೋರಿಯೊಂದನ್ನು ಹಿಡಿದುನಿಲ್ಲಿಸಿದರು

ಬ್ರಿಟಿಷ್ ಮತ್ತು ಜಪಾನೀ ಸೈನ್ಯಾಧಿಪತಿಗಳ ತನಿಖೆ ನಡೆಸಿದಮೇಲೆ ಬ್ರಿಟಿಷರನ್ನು ಬಂಧನದಿಂದ ಬಿಡುಗಡೆ ಮಾಡಿದರು

ಬ್ರಿಟಿಷ್ ಅಧಿಕಾರಿಗಳು ಜಪಾನೀಯರ ಈ ವರ್ತನೆಯನ್ನು ಖಂಡಿಸಿದ್ದಾರೆ

ಶಾನ್ಸಿಂಗಿನಿಂದ ಹದಿನಾರುಮಂದಿ ಬ್ರಿಟಿಷ್ ಮಿಶನರಿಗಳನ್ನು ಹೊರಹಾಕಿದ್ದಾರೆ ಅವರು ಆ ದೇಶವನ್ನೇ ಬಿಟ್ಟುಹೋಗಬೇಕಾಗಿ ಕಟ್ಟಾಜ್ಞೆ ಹೊರಡಿದೆ

ರಷ್ಯಾದೊಡನೆ ಮಾತುಕತೆ

ರಷ್ಯಾದೊಡನೆ ಬ್ರಿಟಿಷ್ ಫ್ರಾನ್ಸಗಳ ಮಾತುಕತೆಯ ಸಿದ್ಧತೆಯು ಭರದಿಂದ ಸಾಗುತ್ತದೆ ಫ್ರೆಂಚ್ ಸರಕಾರವು ಈ ಕುರಿತು ಜನರಲ್ ಇಲೆಕ್ಷನ್‌ನ್ನೂ ಮುಂದುವರಿಸಿದೆ ಮುಖ್ಯ ವಿಷಯಗಳ ಸಂಬಂಧ ಬ್ರಿಟಿಷ್, ಫ್ರಾನ್ಸ್, ರಷ್ಯಾ ಸೈನಿಕರೊಳಗೆ ಬರುವ ವಾರದಲ್ಲಿ ಮಾತುಕತೆಯು ಸುರುವಾಗುವುದು

ಸೈಕ್‌ಲಿನಲ್ಲಿ ೪೦,೦೦೦ ಮೈಲುಗಳ ಪ್ರಯಾಣ

ಹಿಂದೂದೇಶದ ಮೂರು ಮಂದಿ ಸೈಕಲು ಪ್ರಯಾಣಿಕರು ೪೦ ೦೦೦ ಮೈಲುಗಳಷ್ಟು ಪ್ರಯಾಣಮಾಡಿ ಜಪಾನಿಗೆ ಬಂದಿರುವರು. ೧೯೩೩ರಲ್ಲಿ ಅವರು ಬೊಂಬಾಯಿಯಿಂದ ಹೊರಟರು ದಾರಿಯಲ್ಲಿ ಹಸಿವು ಆಯಾಸ, ಮರುಳು, ಆನೆ, ಹುಲಿಗಳ ಬಾಯಿಗಳಿಂದ ತಪ್ಪಿಸಿ ಈ ಒಂದು ಯಾತ್ರೆ ಮಾಡಿದ್ದಾರೆ ವಸಂತವನ್ನು ಸೈಕಲಿನ ಮೇಲೆಯೇ ಸುತ್ತಿ ಗಳಿಸಿ ನೇಪಿಯಲ್ಲಿ ತಿರುಗಿ ಸ್ವದೇಶಕ್ಕೆ ಮರಳಲು ಆಶೆಪಡುತ್ತಾರೆ.

ಫೆಡರೇಶನನ್ನು ಭಾರತದ ಮೇಲೆ ಹೊರಿಸಬೇಡಿ

ಭಾರತದಲ್ಲಿ ಯೆಹೂದ್ಯರ ವ್ಯಾಪಾರದ ಹಂಚಿಕೆ

ಪಂಡಿತ ಜವಹರಲಾಲ ನೆಹರುಗಳು

ಪಂಡಿತ ಜವಹಿರಲಾಲ ನೆಹರುಗಳು

ಸಿಲೋನಿನ ಪ್ರವಾಸವನ್ನು ಮುಗಿಸಿ ಹಿಂತೆರಳಿದ ಜವಾಹಿರಲಾಲ ನೆಹರುಗಳು 'ಯಾವ ಉದ್ದೇಶವನ್ನು ಸಾಧಿಸಲು ನಾನು ಸಿಲೋನಿಗೆ ಹೋದೆನೋ ಆ ಉದ್ದೇಶವು ಸಫಲವಾಯಿತೆಂದು ಸಂಪೂರ್ಣ ಸಮಾಧಾನವು ನನಗಿಲ್ಲವೆಂದು ಮದ್ರಾಸಿನ ಸಭೆಯಲ್ಲಿ ಹೇಳಿದರು

ಪುರೋಗಾಮಿ ಪಕ್ಷದ ಧೋರಣೆಗೆ ಸ್ಪಷ್ಟತೆಯಿಲ್ಲದಿರುವುದರಿಂದ, ಸಂಧಿ ಸಾಧಕರಾದ ಜನರು ಅದರಲ್ಲಿ ಸೇರಿ ತಮ್ಮ ಪ್ರತಿಷ್ಠೆ ಮತ್ತು ಸಾಹಸಗಳಿಗಾಗಿ ಹೊಸ ಪಕ್ಷವನ್ನು ಕಟ್ಟಿಕೊಂಡು ಕಾಂಗ್ರೆಸಿನ ಶಕ್ತಿಯನ್ನು ಕುಂದಿಸಬಹುದು ಎಂದರು

"ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮವನ್ನು ಮುಂದುವರಿಸಿ, ಸ್ವರಾಜ್ಯವನ್ನು ಪಡೆಯಲು ಕಳೆದ ಹಲವಾರು ವರ್ಷಗಳಿಂದ ಕಾಂಗ್ರೆಸು ಸಂಸ್ಥೆಯು ನಮಗೆ ಸಾಧನವಾಗಿದೆ, ಇಂತಹ ಪರಿಣಾಮಕಾರಿ ಸಂಸ್ಥೆಯನ್ನು ಯಾರಾದರೂ ಇಂದ ಹಾಳುಮಾಡದಿರಲಿ ನಮ್ಮಲ್ಲಿ ಬುದ್ಧಿ ಸಾಮರ್ಥ್ಯಕ್ಕೆ ಎಂದೂ ಕಡಿಮೆಯಿಲ್ಲ, ಆದರೆ ನಮ್ಮ ದೌರ್ಭಾಗ್ಯದಿಂದ ಅನೈಕ್ಯವು ನಮ್ಮಲ್ಲಿದೆ, ಕಾಂಗ್ರೆಸಿನ ಶಿಸ್ತಿಗೆ ನಾವು ಶರಣಾಗಬೇಕು ಪ್ರಜಾಪ್ರಭುತ್ವ ಸಂಸ್ಥೆಗೆ ಶಿಸ್ತೇ ಜೀವಾಳವಾಗಿದೆ"ಯೆಂದರು

ಧಾಮಿ ಸಂಸ್ಥಾನದಲ್ಲಿ ಗುಂಡು ಹಾರಿಸಿದ ವಿಷಯವಾಗಿ ನೆಹರುಗಳು ಮಾತನಾಡುತ್ತಾ ಈ ಕುರಿತು ಸಾರ್ವಭೌಮ ಸರಕಾರವೂ ಸಂಸ್ಥಾನವೂ ಯೋಗ್ಯ ಸಮಾಲೋಚನೆ ಮಾಡಬೇಕಾಗಿ ಹೇಳಿದರು

'ಚೈನಾದಿಂದ ನನಗೆ ಅಲ್ಲಿಗೆ ಬರಬೇಕಾಗಿ ಅನೇಕ ಆಮಂತ್ರಣಗಳು ಬರುತ್ತಿವೆ, ಆದರೆ ಇಂದಿನ ಪರಿಸ್ಥಿತಿಯಲಿ ಭಾರತದಲ್ಲಿ ರಾಜಕೀಯ ಕೈದಿಗಳ ಬಿಡುಗಡೆಯೇ ಮೊದಲಾದ ವಿಷಯಗಳು ನನ್ನ ವಿಚಾರವನ್ನು ಆ ಕಡೆಗೆ ಆಕರ್ಷಿಸುತ್ತವೆ ಹಾಗೆಯೇ ಅಂತರಾಷ್ಟ್ರೀಯ ವಿಚಾರಕ್ಕೂ ನನ್ನ ಗಮನವು ಸೆಳೆಯಲ್ಪಡುತ್ತದೆ ಹಿಂದುದೇಶವನ್ನು ಬಿಟ್ಟುಹೋಗಲು ನನಗೆ ಅವಕಾಶವು ಒದಗಿದಲ್ಲಿ ನಾನು ಚೈನಕ್ಕೆ ಹೋಗಬಹುದೆಂದು ನೆಹರುಗಳು ತಿಳಿಸಿದರು

ಫೆಡರೇಶನನ್ನು ಭಾರತದ ಮೇಲೆ ಹೊರಿಸಬೇಡಿ

ವೈಸರಾಯರಲ್ಲಿ ಜಿನ್ನಾರವರ ಹೇಳಿಕೆ

ಭಾರತದೇಶವು ಫೆಡರೇಶನನ್ನು ಖಂಡಿತವಾಗಿಯೂ ಅಪೇಕ್ಷಿಸುವುದಿಲ್ಲ, ಎಲ್ಲಾ ಕಡೆಗಳಿಂದಲೂ ಅದಕ್ಕೆ ವಿರೋಧಗಳಿವೆ ಹೀಗಿರುವಾಗ, ಇಲ್ಲಿಗೆ ಫೆಡರೇಶನನ್ನು ಹೇರಿಸಬೇಡಿ ಯೆಂದು ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಿ ಮಹಮ್ಮದಾಲಿ ಜಿನ್ನಾರವರ ವೈಸರಾಯರಿಗೆ ಒಂದು ಹೇಳಿಕೆಯನ್ನು ಕಳುಹಿಸಿದ್ದಾರೆ

ಭಾರತದಲ್ಲಿ ಯೆಹೂದ್ಯರ ವ್ಯಾಪಾರದ ಹಂಚಿಕೆ

ಹಿಂದೂದೇಶದಲ್ಲಿ ಬಂದು ನೆಲಸಿದ ಯೆಹೂದ್ಯ ವ್ಯಾಪಾರಸ್ಥರು ಕೆಲವು ಹಂಚಿಕೆಗಳನ್ನು ಹೂಡಿ ತಮ್ಮ ಕುಶಲತೆಯನ್ನೂ ಇಲ್ಲಿಯೂ ಮಾಡುತ್ತಿರುವುದಾಗಿ ಬ್ರಿಟಿಷ್ ಪತ್ರಿಕೆಗಳು ಹೇಳುತ್ತವೆ

ಹಿಂದೂದೇಶದಲ್ಲಿ ಅವರು ಅನೇಕ ಕಾರ್ಖಾನೆಗಳನ್ನು ತೆರೆಯಬೇಕೆಂದು ನಿಶ್ಚಯಮಾಡಿರುತ್ತಾರೆ, ಆದರೆ ಅವುಗಳಿಂದ ಹಿಂದೂದೇಶದ ಜನರು, ಕಾಸಿನಷ್ಟಾದರೂ ಲಾಭಪಡೆಯುವ ಹಾಗಿಲ್ಲ

ಒಬ್ಬ ಯೆಹೂದ್ಯ ವ್ಯಾಪಾರಿಯೊಡನೆ "ಹಿಂದೀಯ ಕೆಲಸಗಾರರಿಗೆ ನೀವು ನಿಮ್ಮ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಇಡುತ್ತೀರಾ?" ಎಂದು ಕೇಳಿದ್ದಕ್ಕೆ ಆತ ಹೀಗೆಂದನಂತೆ "ಎಂದಾದರೂ ಅಂತಹ ತಪ್ಪನ್ನು ನಾವು ಹಾಗೆಮಾಡಲಾರೆವು ಬಹಳ ಸ್ವಲ್ಪ ಮಂದಿ ಭಾರತೀಯರನ್ನು ನಾವು ಕೆಲಸದಲ್ಲಿಡುವೆವು ಕೂಲಿಗಳೇ ಮೊದಲಾದವರನ್ನು ಬಿಟ್ಟು ನಂಬಿಗೆಯ ಎಲ್ಲಾ ಕೆಲಸಗಳೂ ಯೆಹೂದ್ಯರಿಗೇ ಕೊಡಲಾಗುವವು. ನಮ್ಮ ವ್ಯಾಪಾರದ ಮಾಹಿತಿಯನ್ನು ಹಿಂದೀಯರಿಗೆ ಕಲಿಸಲು ನಾವು ಇಚ್ಛಿಸುವುದಿಲ್ಲ. ಹಾಗಾಗಿ ನಮ್ಮ ಜನರನ್ನು ಮಾತ್ರ ನಾವು ಕೆಲಸದಲ್ಲಿ ನೇಮಿಸುವೆವು

"ಆದರೆ ಹಿಂದೂದೇಶದ ಜನರಿಗೆ ಕಡಿಮೆ ಸಂಬಳ ಕೊಟ್ಟು ಕೆಲಸ ಮಾಡಿಸಬಹುದು ನಿಮ್ಮ ಜನರಿಗೆ ಹೆಚ್ಚು ಸಂಬಳ ಕೊಡಬೇಕಾಗುವುದಷ್ಟೆ?" ಎಂದು ಕೇಳಿದಾಗ ಆತನು ಹೀಗೆಂದನು "ಆ ವಿಷಯವು ನಮಗೆ ತಿಳಿದಿದೆ, ಆದರೆ ಹಾಸ್ಟೆಲುಗಳನ್ನು ಮಾಡಿ, ಅವುಗಳಲ್ಲಿ ಒಟ್ಟಾಗಿ ಜೀವಿಸುವ ಸೌಕರ್ಯ ಮಾಡಿದಲ್ಲಿ ಸಂಬಳ ಹೆಚ್ಚು ಕೊಡಬೇಕಾದ ಅವಶ್ಯವಿಲವೆಂದು" ಆ ವ್ಯಾಪಾರಿಯು ಹೇಳಿದನು

ಹೀಗೆ ಮಾಡದ ಪಕ್ಷದಲ್ಲಿ ಅವರಿಗೆ ಸಹಕಾರ ಸಿಗಲಾರದೆಂದು ತಿಳಿಸಿದಾಗ, ನಾವು ಕೆಲವು ಐಶ್ವರ್ಯವಂತರಾದ ಹಿಂದೀಯರನ್ನು ನಮ್ಮ ಕಂಪೆನಿಗಳ ಡೈರೆಕ್ಟರರಾಗಿ ಮಾಡುವೆವೆಂದೂ ಅವರಿಂದ ನಮ್ಮ ಲಾಭವನ್ನು ನಾವು ಪಡೆಯಲು ತೊಂದರೆಯಾಗಲಾರದೆಂದೂ ಆತನು ತಿಳಿಸಿದರ

ಪಿಶಾಚಿಯು ಶಾಲೆಯ ಸಂಬಳ ಕೊಟ್ಟಿತು

ಫಿರೋಜಪುರದಲ್ಲಿ ಈ ಒಂದ ಕತೆ ಚ ... ಇತ್ತೀಚೆಗೆ ಟಾಂಗದವರನ್ನೆ ವಿಶ್ವಾಸ ಮಾಡಿಗೆ ಒಬ್ಬ ಬಂಗಾಳೀ ಯುವತಿಯು ಪಿಶಾಚಿಯು ಒಬ್ಬ ಹುಡುಗನಿಗೆ ಹಿಡಿದು ಆತನನ್ನು ಕೊಲ್ಲುವದಾಗಿ ಹೆದರಿಸುತ್ತದೆ ಅವರ ಕಥೆಯು ಹೀಗೆ ಇದೆ

ಕಳೆದ ಆರು ತಿಂಗಳ ಹಿಂದೆ ಆ ಹುಡುಗ ಸಮೀಪದ ಬಾವಿಯೊಂದಕ್ಕೆ ನೀರು ತರಲು ಹೋಗಿದ್ದ ಬಾವಿಯ ನೀರ ಮೇಲಕ್ಕೆತ್ತುವಲ್ಲಿ ಹಗ್ಗವು ತುಂಡಾಯಿತು ಹಾಗಾಗಿ ಅವನು ಹಿಂತಿರುಗಿ ಬರುವಾಗ ದಾರಿಯಲ್ಲಿ ಒಂದು ಮನೆಯಲ್ಲಿ ಒಬ್ಬ ಹುಡುಗಿಯು ಆತನನ್ನು ಕರೆದಳು. ಆತನು ಆ ಮನೆಗೆ ಹೋದನು ಹುಡುಗಿ ಆತನಿಗೆ ತಿನ್ನಲು ಹಣ್ಣು ಮೊದಲಾದವುಗಳನ್ನು ಕೊಟ್ಟಳು ಆಮೇಲೆ ಹುಡುಗನೊಡನೆ ತನ್ನನ್ನು ಮದುವೆಯಾಗಬೇಕಾಗಿಯೂ ಈ ಸಂಗತಿಯನ್ನು ಮಾತ್ರ ಯಾರಿಗೂ ತಿಳಿಸಬಾರದಾಗಿಯೂ ತಿಳಿಸಿದರೆ ಆತನನ್ನು ಕೊಂದಿಕ್ಕುವುದಾಗಿಯೂ ಹೆದರಿಸಿದಳು.

ಆತನು ಮನೆಗೆ ಬಂದು ಈ ವಿಷಯವನ್ನು ತಂದೆತಾಯಿಗಳೊಡನೆ ಹೇಳಿದ ಅವರ ಆ ಮನೆಯು ಭೂತದ ಮನೆಯೆಂದೂ ಅಲ್ಲಿ ಒಬ್ಬ ಬಂಗಾಳಿ ಹುಡುಗಿಯ ಪ್ರೇತವಿರುವುದೆಂದೂ ಹೇಳಿದರು ಅವರು ಅಲ್ಲಿಗೆ ಹೋಗಿ ನೋಡಲು ಅಲ್ಲಿ ಯಾರೂ ಇರಲಿಲ್ಲ

ಕೆಲದಿನಗಳಲ್ಲಿ ಅದೇ ಹುಡುಗಿಯು ಆತನಿಗೆ ತಿರುಗಿ ಕಾಣಸಿಕ್ಕಿ ಗುಟ್ಟನ್ನು ತಂದೆತಾಯಿಗಳೊಡನೆ ಹೇಳಿದಕ್ಕಾಗಿ ಕೆಲದಿನಗಳಲ್ಲಿ ಆತನನ್ನು ಕೊಲ್ಲುವುದಾಗಿ ಹೇಳಿದಳು ಅದು ಮಾತ್ರವಲ್ಲದೆ ಅವನು ವಿಶ್ವವಿದ್ಯಾಲಯದ ಒಂದು ಸಂಸ್ಕೃತ ಪರೀಕ್ಷೆಗೆ ಕುಳಿತುಕೊಳ್ಳುವವನಾದ್ದರಿಂದ ಆ ಪರೀಕ್ಷೆಯಲಿ ಒಂದು ಭಾಗದಲ್ಲಿ ಫೈಲಾಗುವುದಾಗಿಯೂ, ಆತನ ಕಾಲೇಜು ಫೀಸನ್ನು ತಾನೇ ತೆರುವುದಾಗಿಯೂ ಹೇಳಿದಳು

ಸ್ವಲ್ಪ ದಿನಗಳಲ್ಲಿ ಇವನಿಗೆ ಮೂರ್ಛೆ ಮೊದಲಾದವುಗಳು ಸುರುವಾಗಿವೆ ಕಾಲೇಜು ಫೀಸನ್ನು ಕಟ್ಟಲು ಹಣ ಕಳುಹಿಸಿದಾಗ, ಅದನ್ನು ಮೊದಲೇ ಯಾರೋ ಕಟ್ಟಿರುವುದಾಗಿ ಕಾಲೇಜಿನ ಅಧಿಕಾರಿಗಳು ತಿಳಿಸಿದರು ಹೀಗೆಂದು ಒಂದು ವಾರ್ತೆ.

ಸಿನೇಮಾ ನಟಿಗಳ ಜೀವನ ರಹಸ್ಯ

೨. ಸಬಿತಾದೇವಿ

ಇಂದು ಭಾರತೀಯ ಚಲಚ್ಚಿತ್ರ ಪ್ರಪಂಚದಲ್ಲಿ ತನ್ನ ಸಿನೇಮಾ ಚರ್ಯೆಗೆಯ ವಿಷಯ ಅತ್ಯಂತ ಸುಖಸಂತೋಷದಿಂದ ಅಭಿಮಾನ ಪಡುತ್ತಿರುವ ತಾರೆ ಸಬಿತಾದೇವಿ. ಅವಳು ತನ್ನ ಉದ್ಯೋಗವನ್ನು ಜೀವಕ್ಕಿಂತಲೂ ಅಧಿಕವೆಂದು ಭಾವಿಸುತ್ತಿರುವಳು ಇತ್ತೀಚೆಗೆ ಇವಳು ಪಾತ್ರವಹಿಸಿದ ಚಲಚ್ಚಿತ್ರಗಳನ್ನು ನೋಡುವುದೆಂದರೆ ಪ್ರತಿಯೊಬ್ಬನೂ ಮೆಚ್ಚುತ್ತಿರುವನು

ಈಕೆಗೆ ಚಿಕ್ಕಂದಿನಿಂದಲೇ ಸಿನೇಮಾ ನಾಟಕ ಮೊದಲಾದುವುದನ್ನು ನೋಡುವುದೆಂದರೆ ಬಹಳ ಆಸೆ. ಈಕೆಯ ತಂದೆಯು ಕೂಡಾ ನಾಟಕದ ಪ್ರಸಿದ್ಧ ರೀಕಾಕಾರನಾಗಿದ್ದನು, ಇವಳ ತಂದೆಯು ಕಲ್ಕತ್ತ ನಿವಾಸಿಯಾಗಿದ್ದನು ತಂದೆಯೊಡನೆ ಈಕೆಯು ಆಗಾಗ ಇಟೇಲಿಯನ್ ಮತ್ತು ರಷ್ಯನ್ ನಾಟಕಗೃಹಗಳಿಗೆ ಹೋಗುತಿದ್ದಳು. ಒಂದು ಬಾರಿ ಈಕೆಯು ಒಂದು ನಾಟಕದಲ್ಲಿ ಕಂಡ ಹಂಸ ನೃತ್ಯದ ಕುರಿತು ಒಂದು ಕಾವ್ಯವನ್ನು ಕಟ್ಟಿದಳು ವೇಳೆಯಾದ್ಧಾಗ ಕಥೆಗಳನ್ನು ಬರೆದು ಪತ್ರಿಕೆಗಳಿಗೆ ಪ್ರಕಟಣೆಗೆ ಕೊಡುತಿದ್ದಳು ಇವಳ ಈ ಬಾಲ್ಯದ ಉತ್ಸಾಹ ಕುತೂಹಲಗಳೇ ಆಕೆಯ ಮುಂದಿನ ಅಭಿನಯ ಸಾಹಿತ್ಯಕ್ಕೆ ಬುನಾದಿಯಾಗಿ ಪರಿಣಮಿಸಿತು

೧೯೩೨ನೇ ವರ್ಷದಲ್ಲಿ ಸಬಿತಾದೇವಿಯು ಕಲ್ಕತ್ತದ ಬ್ರಿಟಿಷ್ ಡೊಮಿನಿಯನ್ ಸಿಲ್ಕ್ ಎಂಬ ಚಲಚ್ಚಿತ್ರ ಕಂಪೆನಿಯೊಂದನ್ನು ಸೇರಿದಳು ಇಲ್ಲಿಂದಲೇ ಆಕೆಯ ಸಿನೇಮಾ ಜೀವನಕ್ಕೆ ಪ್ರಾರಂಭವಾಯಿತು ಪ್ರಾರಂಭದಲ್ಲಿ ಅವಳು "ಫ್ಲೇಮ್ಸ್ ಓಫ್ ಫ್ಲೆಷ್" ಎಂಬ ಚಿತ್ರವೊಂದರಲ್ಲಿ ಅಭಿನಯಿಸಿದಳು. ಅಲ್ಲಿಂದ ಆಕೆಯು ಕಂಪನಿಯನ್ನು ಬದಲಾಯಿಸುತ್ತಾ ಕಟ್ಟಕಡೆಗೆ ೧೯೩೩ರಲ್ಲಿ ಮುಂಬಾಯಿಯ ಸಾಗರ ಕಂಪೆನಿಯಲ್ಲಿ ಸೇರಿದಳು ಅಲ್ಲಿ ಅವಳ ಪ್ರಥಮದ ಸಾಹಸವೇ ಅತ್ಯಂತ ಪ್ರಶಂಸೆಹೊಂದಿತು ಕಲ್ಕತ್ತದಲ್ಲಿ ಪ್ರಾರಂಭದಲ್ಲಿ ಅಭಿನಯಿಸಿದ ಚಿತ್ರಗಳಲ್ಲಿ "ಕದಹಾರ ಭಾಗ್ಯ ಲಕ್ಷ್ಮಿ" "ಅಪರಾಧ" ಎಂಬ ಚಿತ್ರಗಳೇ ಬಹಳ ಹೆಸರುವಾಸಿಯಾದುವು ಅವಳು ಇತ್ತೀಚೆಗೆ ಸಾಗರ ಕಂಪೆನಿಯನ್ನು ಸೇರಿದ ಮೇಲೆ ಅಭಿನಯಿಸಿದ ಚಿತ್ರಗಳಲ್ಲಿ "ಪ್ರತಿಕಾರವು ತನ್ನದು" "ಡಾ। ಮಾಧುರಿಕಾ" "ಜೀವನಲತಾ" "೩೦೦ ದಿವಸಗಳ ನಂತರ" ಎಂಬ ಚಿತ್ರಗಳೇ ಈಕೆಯ ಯಶಸ್ಸನ್ನು ಜಗತ್ತಿಗೆ ಸಾರಿತು ಪ್ರಸಿದ್ಧ ಸಾಹಿತಿಗಳಾದ ಮಾನ್ಯ ಕೆ ಎಂ ಮುನ್ಷಿಯವರ ಗುಜರಾಥಿ ಲೇಖನವನ್ನು ಆಧರಿಸಿ ತಯಾರಿಸಿದ '೩೦೦ ದಿನಗಳ ನಂತರ'ವೆಂಬ ಚಲಚ್ಚಿತ್ರದಲ್ಲಿ "ಶಾರದಾ" ಭೂಮಿಕೆಯಲ್ಲಿ ಅಭಿನಯಿಸಿದ ಅಭಿನಯವು ಆಕೆಯ ಹೆಸರನ್ನು ಚಲಚ್ಚಿತ್ರ ಪ್ರಪಂಚದ ದಿಗಂತಕ್ಕೆ ಮುಟ್ಟಿಸಿತು ಈಕೆಯ ಅಭಿನಯದ ಪ್ರಾಶಸ್ತ್ಯದಲ್ಲಿ ಸ್ವಲ್ಪ ಭಾಗವು ಸಾಗರದ ಕುಶಲ ದಿಗ್ದರ್ಶಕರಿಂದ ಎಸ್ ಎಲ್ ಬಾಬಾನಿ ಯವರಿಗೂ ಸಲ್ಲತಕ್ಕದ್ದು ಸಬಿತಾದೇವಿಯು ಅಭಿನಯಿಸಿದ ಚಿತ್ರಗಳು ಅಷ್ಟೊಂದು ಹೆಸರು ಪಡೆಯಲು ದಿಗ್ದರ್ಶಕರ ಕಲಾನೈಪುಣ್ಯವು ಕೊಂಚ ಮಟ್ಟಿಗೆ ಕಾರಣವಾಗಿದ್ದಿತು.

ಸಬಿತಾದೇವಿಯು ಈಗ ಸಾಗರ ಕಂಪೆನಿಯನ್ನು ತೊರೆದು ಸುದರ್ಶನ ಪ್ರೊಡಕ್ಷನ್ ಎಂಬ ಕಂಪನಿಯೊಂದಕ್ಕೆ ಪಾಲುಗಾರಿಕೆಯಾಗಿ ಸೇರಿರುವಳು. ಈ ಕಂಪೆನಿಯಲ್ಲಿ ಈಗಾಗಲೇ ಪ್ರಸಿದ್ಧ ನಟನಟಿಯರಾದ ಮೋತಿಲಾಲ್, ಮಜಹರಖಾನ್, ವಾಸಂತಿ ಮೊದಲಾದವರು ಸೇರಿರುವರು ಈ ಕಂಪೆನಿಯವರು ಬೇಗನೆ "ಪ್ರಾತಃಕಾಲ" ಎಂಬ ಗ್ರಾಮಜೀವನವನ್ನು ಚಿತ್ರಿಸುವ ಚಿತ್ರವೊಂದನ್ನು ತಯಾರಿಸಲಿರುವರು. ಇದರಲ್ಲಿ ಸಬಿತಾದೇವಿಯೇ ಪ್ರಧಾನ ಪಾತ್ರವನ್ನು ವಹಿಸುವಳು.

ಸಬಿತಾದೇವಿಯ ಸಿನೇಮಾ ಜೀವನ ವೈಖರಿಯು ಇತರ ಸಿನೇಮಾ ತಾರೆಗಳಿಂದ ತೀರ ಭಿನ್ನವಾಗಿರುವುದು. ಅನೇಕ ಭಾರತ ಚಲಚ್ಚಿತ್ರ ಸ್ಟುಡಿಯೊಗಳಲ್ಲಿ ನಟನಟಿಯರು ತಾವು ತಮ್ಮ ಪಾತ್ರವನ್ನು ಅಭಿನಯಿಸುವ ಕೆಲವೇ ತಾಸುಗಳ ಮೊದಲು ಅಭಿನಯ ಸಲಿರುವ ಸೀನರಿ ಮತ್ತು ಪಾತ್ರಸಳನ್ನು ಅಭ್ಯಾಸಿಸಲು ಪ್ರಾರಂಭಿಸುವರು ಆದರೆ ಸಬಿತಾದೇವಿಯು ಪಾತ್ರ ಅನೇಕ ದಿನಗಳ ಮೊದಲಾಗಿಯೇ ಅದನ್ನು ಚೆನ್ನಾಗಿ ಅಭ್ಯಾಸಿಸಿ ಸಂಭಾಷಣೆಗಳನ್ನು ವಾಕ್ಸರಣಿಗಳನ್ನೂ ಸರಿಯಾಗಿ ಮನನ ಮಾಡುವಳು

ಈಕೆಯ ಅಭಿನಯ ಕೌಶಲ್ಯ ತಿಳಿದಂಗಿದ ಸಾವಿರಾರು ಜನರು ಅಂಡಮಾನ, ವೆಸ್ಟ್ ಇಂಡೀಸ್, ಸಿಲೋನ್ ದಕ್ಷಿಣ ಅಮೇರಿಕಾ ಮೊದಲಾದ ಕಡೆಗಳಿಂದ ಸಬಿತಾದೇವಿಯನ್ನು ಅವಳ ಅಭಿನಯವನ್ನು ಪ್ರಶಂಸಿಸಿ ಪತ್ರಗಳನ್ನು ಬರೆಯುತ್ತಿರುವರು ಅವೆಲ್ಲವುಗಳಿಗೂ ಅವಳೇ ಸ್ವಹಸ್ತ ಉತ್ತರವನ್ನು ಬರೆಯುತ್ತಿರುವಳು ಅವಳು ಅಭಿನಯಿಸುವ ದಿನದಂದು ಬಹಳ ಗಂಭೀರ ಚಿತ್ತದಿಂದಿರುವಳು ಪಾತ್ರವಲ್ಲದೆ ಅಭಿನಯಿಸುವ ಸಮಯ ಯಾರನ್ನು ಆ ಪ್ರದೇಶಕ್ಕೆ ಬರಗೊಡುವುದಿಲ್ಲ

ಖಾಸಗಿ ಜೀವನದಲ್ಲಿ ಅವಳ ತಾಯಿಯು ಅವಳಿಗೆ ಮಾರ್ಗದರ್ಶಕಳಾಗಿರುವಳು. ಆಗಾಗ ಮಗಳ ಅಭಿನಯ ವಿಷಯ ಕಠಿಣವಾಗಿ ಟೀಕಿಸುತ್ತಿರುವಳು ಸಬಿತಾದೇವಿಯ ಖಾಸಗಿ ಜೀವನವು ಇತರ ಸಿನೇಮಾ ನಟಿಯರಂತೆ ಪ್ರತಿಬಿಂಬವಾಗಿರುವುದು ಬಹಿರಂಗವಾದ ಸಭೆ ಸಮಾರಂಭ ಕೂಟ ಮೊದಲಾದವುಗಳಲ್ಲಿ ಭಾಗವಹಿಸುವುದಿಲ್ಲ ಹೆಚ್ಚು ಜನರು ಪರಿಚಿತರು ಇದ್ದರೆ ಇವಳಿಗೆ ಒಗ್ಗದು ತನ್ನ ಛಂದಾದ ಮನೆಯಲ್ಲಿಯೇ ತಾನು ಸಹೋದರ ಸಹೋದರಿಯರೊಡನೆ ಅಧಿಕ ಸಮಯವನ್ನು ಕಳೆಯುತ್ತಿರುವಳ

ಈಕೆಗೆ ಪಾಶ್ಚಾತ್ಯ ನಟನಟಿಯರಲ್ಲಿ ಗ್ರೆಟಾಗಾರ್ಬೊ ನೋರ್ಮಾಶೀರರ್, ಲಾರಾ ಸ್ಟರ್ಲಿಂಗ್ ಬೆಟ್ಟಿಡೇವಿಸ್, ಚಾರ್ಲ್ಸ್‌ಬೋಯರ್, ಲೆಸ್ಲಿಹೊವರ್ಡ್ ಚಾರ್ಲ್ಸ್ ಲೋಫ್ಟನ್ ... ವಿಷಯ ಬಹಳ ಮೆಚ್ಚುಗೆಯನ್ನು ತೋರಿಸುತ್ತಿರುವಳು ... ಬರೆದ ನಾಟಕನ್ನು ಓದುವುದೆಂದರೆ ಇವಳಿಗೆ ಬಹಳ ಅಭಿರುಚಿ

ಈಕೆಯ ಮುಂದಿನ ಅಭಿನಯವು ಭಾರತ ಚಲಚ್ಚಿತ್ರದಲ್ಲಿ ಪರಮ ಚಿರಸ್ಮರಣೀಯವಾಗಬಹುದೆಂದು ಭಾವಿಸಲಾಗಿದೆ

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿಸ್ರಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರಾಗಲು ಸಿದ್ಧರಾದವರ ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸೈನ್ಬೋರ್ಡುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸಲಾಗುವುದು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹೀರಾತೆ ಕೊಡಲಾಗುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಕೆಲೆಂಡರುಗಳು ಕೊಡಲ್ಪಡುವುವು ೪) ಸ್ಟೇಷನ್ ಡಲಿವರಿ ಕೊಡುವರು ನಮ್ಮ ಕಿಮ್ಮತ್ತಿನ ಸ್ಪರ್ಧೆಯಿಲ್ಲ ಮಾಲು ಸರಿಯಾದಿಂದ ಒದಗುವಂತೆ ಉತ್ತಮ ಏಜಂಟರಿಗೆ ಹೆಚ್ಚಿನ ಕಮಿಷನ್ ಕೊಡಲಾಗುವುದು ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ್. ಷಾಹ್ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜಂಟ್.—ಪಿ. ಎಚ್. ಭಟ್ಟ. ಗದಗ.—ವಿ. ಎಸ್. ಶೆಟ್ಟಿ.

ಮೈಸೂರು, ಕೊಡಗು, ದಕ್ಷಿಣ ಕನ್ನಡಕ್ಕೆ ಏಜಂಟ್ —ಡಾ. ಕೆ. ಭಾಸ್ಕರ ಪೈ.

ಸ್ಪೆಶಲ್ ಏಜಂಟ್ —ಬಿ ಪ್ಪಿ. ಹೊನ್ನಾವರ

ಸತ್ಯಾಗ್ರಹ ವಿಶ್ವವಿದ್ಯಾಲಯ

ಡಾ. ಪಟ್ಟಾಭಿ ಸೀತಾರಾಮಯ್ಯನವರು ಮೊನ್ನೆಯೊಂದು ಭಾಷಣದಲ್ಲಿ ಗಾಂಧಿಜಿಯವರನ್ನು ಸತ್ಯಾಗ್ರಹ ವಿಶ್ವವಿದ್ಯಾಲಯದ ವೈಸ್ ಛಾನ್ಸಲರೆಂದು ಕರೆದ ವಿಷಯವಾಗಿ ಬರೆಯುತ್ತಾ ಲೀಡರ್ ಪತ್ರಿಕೆಯು ಸತ್ಯಾಗ್ರಹ ವಿಶ್ವವಿದ್ಯಾಲಯವೊಂದು ಅಗತ್ಯವಿದೆಯೆಂದು ಬರೆಯುತ್ತದೆ

"ಮಾದಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಕಾಂಗ್ರೆಸು ಮುಖಂಡರು ಅಖಿಲಭಾರತ ಚರಕಾ ಸಂಘವನ್ನು ಸ್ಥಾಪಿಸಿದರು. ವಿದ್ಯಾಪದ್ಧತಿಯನ್ನು ಸಧಾರಿಸುವ ಸಲುವಾಗಿ ವಿದ್ಯಾ ಶಿಕ್ಷಣಕ್ರಮವು ಆರಂಭಿಸಲ್ಪಟ್ಟಿತು ಹಾಗೆಯೇ ಸತ್ಯಾಗ್ರಹಿಗಳು ಶಿಕ್ಷಣ ಹೊಂದುವ ಸಲುವಾಗಿ ಒಂದು ವಿಶ್ವವಿದ್ಯಾಲಯವಿರಬೇಕಾದದ್ದು ಅವಶ್ಯವಿರುತ್ತದೆ

"ದೇಶದಲ್ಲಿ ಹೆಚ್ಚಾಗಿ ಯಾವುದಾದರೊಂದು ಪ್ರತ್ಯೇಕ ಕಲೆಯಲ್ಲಿ ಕುಶಲರಾದವರು ಅದನ್ನು ಇತರರಿಗೆ ತಿಳಿಸುವುದಿಲ್ಲ. ಆದ್ದರಿಂದ ಅವರ ಕಲೆಯು ಅವರ ನಂತರ ಬೆಳೆಯುವುದಿಲ್ಲ, ಆದರೆ ಸತ್ಯಾಗ್ರಹವು ಹಾಗಾಗಬಾರದು

"ಮಹಾತ್ಮಾ ಗಾಂಧಿಯವರು ಸತ್ಯಾಗ್ರಹದ ವಿಷಯದಲ್ಲಿ ಬಹಳವಾಗಿ ನುರಿತವರು ಹಾಗಾಗಿ ಸತ್ಯಾಗ್ರಹಿಗಳಿಗೆ ಅದರ ಸರಿಯಾದ ತತ್ವವನ್ನು ಅವರು ತಮ್ಮ ಅನುಭವದಿಂದ ತಿಳಿಸಿ ಖಚಿತ ಮಾಡಬೇಕು ಆದಕಾರಣ ಅವರು ಜೀವಂತರಿರುವಾಗಲೇ ಒಂದು ಸತ್ಯಾಗ್ರಹ ವಿಶ್ವವಿದ್ಯಾಲಯವು ಸ್ಥಾಪಿತವಾಗಿ ಸತ್ಯಾಗ್ರಹದ ವಿಷಯವಾದ ಅವರ ಪೂರ್ಣ ಅನುಭವದ ಶಿಕ್ಷಣವು ದೇಶಕ್ಕೆ ಸಿಗುವಂತಾಗಬೇಕು ಮನುಷ್ಯರು ಹುಟ್ಟಬಹುದು, ಸಾಯಬಹುದು, ಆದರೆ ಸತ್ಯಾಗ್ರಹವು ಎಂದೆಂದೂ ಅವಿನಾಶಿಯಾಗಿ ತಿಳಿಯಬೇಕು.

"ಪಾಶ್ಚಾತ್ಯ ರಾಷ್ಟ್ರಗಳು ಪೌರ್ವಾತ್ಯ ರಾಷ್ಟ್ರಗಳಿಂದ ಏನಾದರೊಂದು ಹೊಸ ಕಲೆಯನ್ನು ಕಲಿತು ಅದನ್ನು ತಮ್ಮ ದೇಶದಲ್ಲಿ ಬಹಳ ಅಭಿವೃದ್ಧಿಗೊಳಿಸಿ ಪ್ರಸಿದ್ಧಿಗೆ ಬಂದಿವೆ; ಆದರೆ ಸತ್ಯಾಗ್ರಹದ ವಿಷಯದಲ್ಲಿಯಾದರೂ ಹಿಂದೂದೇಶವೇ ಸಂಪೂರ್ಣ ಈ ತತ್ವವನ್ನು ಜಗತ್ತಿಗೆ ಸಾರಿ ಲೋಕಕ್ಕೆ ಆದರ್ಶವಾಗಲಿ"

ಶೀಯಾ ಮುಸ್ಲೀಮರು ಹಿಂದೂ ಮಹಾಸಭೆಗೆ ಸೇರುವರು

ಸಂಯುಕ್ತ ಪ್ರಾಂತದಲ್ಲಿ ಆಗುತ್ತಿರುವ ಮುಸ್ಲಿಮರ ಪಂಗಡಗಳಾದ ಶೀಯಾಸುನ್ನಿಗಳ ಕಲಹದ ಕಾರಣವಾಗಿ ೪೫ ಮಂದಿ ಶೀಯಾ ಮುಸ್ಲಿಮರು ಹಿಂದೂ ಮಹಾಸಭೆಯ ಸದಸ್ಯರಾಗಿರುವರೆ ಅಭಿಪ್ರಾಯಪಟ್ಟಿರುವರು. ಅವರ ಸಭೆಯೊಂದರಲ್ಲಿ ಅವರು ಹಿಂದುಗಳ ಹಕ್ಕುಬಾಧ್ಯತೆಗಳಿಗೆ ಆಕ್ಷೇಪಿಸದಂತೆಯೂ ಸಾರ್ವಜನಿಕ ಸ್ಥಳಬೀದಿಗಳಲ್ಲಿ ಸಂಗೀತ ಬಾರಿಸುವುದಕ್ಕೆ ವಿರೋಧ ಹಿಡಿಯುವುದಿಲ್ಲವಾಗಿಯೂ, ಗೋವಧೆ ಮೊದಲಾದವುಗಳನ್ನು ಮಾಡುವುದಿಲ್ಲವಾಗಿಯೂ ಹಿಂದೂಗಳಿಗೆ ಭರವಸೆ ಕೊಟ್ಟಿರುತ್ತಾರೆ

ಶೀಯಾ ಪಂಗಡಿಗರಾದ ಈ ಮುಸ್ಲಿಮರ ನಿಜವಾದ ರಾಷ್ಟ್ರೀಯ ಬುದ್ಧಿಯನ್ನು ಕೊಂಡಾಡಿ ಹಿಂದೂಮಹಾಸಭೆಯ ಅಧ್ಯಕ್ಷರಾದ ಶ್ರೀ ವಿ ಡಿ ಸಾವರ್ಕಾರರೂ, ಶೀಯಾರು, ಹಿಂದೂ ಮಹಾಸಭೆಯವರು ಹೀಗೆ ಅನ್ಯೋನ್ಯ ವಿಚಾರ ವಿನಿಮಯ ಮಾಡಿಕೊಳ್ಳುವುದು ಸ್ವಾಗತಾರ್ಹವಾದುದೆಂದೂ, ಆದರೆ ಅವರು ಪರಸ್ಪರ ಬೇರೆ ಸಂಸ್ಥೆಗಳಲ್ಲಿ ಇರುವುದು ಅಗತ್ಯವೆಂದೂ, ಹಿಂದೂ ಮಹಾಸಭೆಯು ಕೇವಲ ಜನ್ಮ ಹಿಂದುಗಳ ಸಂಸ್ಥೆಯೆಂದೂ ತಿಳಿಸಿರುವರು"

ಗಾಂಧಿಜಿಯವರು ಅಹಿಂಸಾತತ್ವದ ಆಧಾರದಲ್ಲಿ ಸತ್ಯಾಗ್ರಹ ಚಳವಳವನ್ನು ಆ ಪ್ರಯೋಗದಲ್ಲಿ ... ಶಸ್ತ್ರಗಳಾದವನು ಇಂದಿನ ಯುದ್ಧಯುಗದಲ್ಲಿ ರಾಷ್ಟ್ರದ ಸ್ವಾತಂತ್ರ್ಯ, ಹಾಗೂ ಕಟ್ಟಕಡೆಗೆ ಜಗತ್ತಿನ ಶಾಂತಿಗಾಗಿಯೂ ಸತ್ಯಾಗ್ರಹವೊಂದೇ ಸಾಕೆಂದು ಅವರ ಸ್ಥಾಪನೆ ಜಯಶೀಲರಾಗುತ್ತಾರೆ. ಅವರ ಸಂಪೂರ್ಣತೆಯು ಅವರಿಂದಲೇ ಆಗಬೇಕು.

ದೊಡ್ಡ ಮನುಷ್ಯರ ತಲೆಗೆ ಸತ್ತ ಮೇಲೂ ಬೆಲೆಯುಂಟು!

ಜಾರ್ಜ್ ಬರ್ನಾರ್ಡ್ ಷಾರವರ ತಲೆಗೆ ೫೦೦೦ ಪವನುಗಳ ಕ್ರಯ!

ಬರ್ನಾರ್ಡ್ ಷಾರವರ ತಲೆಯನ್ನು ೫,೦೦೦ ಪವನುಗಳ ಮೌಲ್ಯಕ್ಕೆ ಅವರು ಸತ್ತ ಮೇಲೆ ತೆಕ್ಕೊಳ್ಳುವುದಾಗಿ ಅವರೊಡನೆ ಕೇಳಿದ್ದಾರೆ. ಅವರ ತಲೆಯಲ್ಲಿ ಏನು ಅದ್ಭುತವಿದೆಯೆಂದು ಶೋಧನೆ ಮಾಡಲು ಆತನು ಹೀಗೆ ಕೇಳಿದುದಾಗಿದೆ. ಆದರೆ ದೊಡ್ಡ ದೊಡ್ಡ ಬುದ್ಧಿಶಾಲಿಗಳ ಮಿದುಳುಗಳನ್ನು ಸತ್ತ ಮೇಲೆ ಶೋಧಿಸುವುದರಿಂದ ಏನಾದರೂ ಪ್ರಯೋಜನವಿದೆಯೇ ಎಂಬುದು ಸಂಶಯಾತ್ಮಕವಾದ ವಿಷಯವಾಗಿದೆ. ಬುದ್ಧಿಶಾಲಿಗಳಾಗಲು ಏನು ವಿಶೇಷ ಶಕ್ತಿಯು ಮಿದುಳಲ್ಲಿ ಇದೆಯೆಂಬುದನ್ನು ವೈಜ್ಞಾನಿಕರು ಕಂಡುಹುಡುಕಿದರಾದರೆ, ಮುಂದಕ್ಕೆ ಬುದ್ಧಿಯಿಲ್ಲದವರನ್ನೂ ಚುರುಕುಬುದ್ಧಿಯವರನ್ನಾಗಿ ಮಾಡಲು ವೈಜ್ಞಾನಿಕರು ಪ್ರಯತ್ನಪಡುತ್ತಾರೆ.

೧೮೫೦ರಲ್ಲಿ ನೆಪೋಲಿಯನನು ತೀರಿಹೋದಂದಿನಿಂದ ಮೇಲೆ, ವೈಜ್ಞಾನಿಕರು ಮಿದುಳನ್ನು ಪರೀಕ್ಷಿಸುವ ವಿಷಯದಲ್ಲಿ ಬಹಳ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ನೆಪೋಲಿಯನನಲ್ಲಿರುವ ಧೈರ್ಯ, ಸಾಮರ್ಥ್ಯ ಇವುಗಳು ಮಿದುಳಿನ ಆಕಾರ, ಭಾರ ಇವುಗಳಲ್ಲಿ ಯಾವುದರಲ್ಲಿಯಾದರೂ ಅಡಕವಾಗಿದೆಯೇ ಎಂದು ಅವರ ಶೋಧನೆಯಾಗಿದೆ. ಹೀಗೆ ನೆಪೋಲಿಯನನ ತಲೆಯನ್ನು ಕೊರೆದು ನೋಡಿದ ವೈಜ್ಞಾನಿಕರು, ಆರೋಗಿಯಾಗಿದ್ದವನ ಮಿದುಳು ಸಾಮಾನ್ಯ ಮನುಷ್ಯರ ಮಿದುಳಿಗಿಂತ ಸಣ್ಣದಾಗಿದ್ದುದಾಗಿ ಕಂಡರು. ಆ ಮೇಲೆ ಸಣ್ಣ ಮಿದುಳುಳ್ಳವರು, ಹೆಚ್ಚು ಹುಷಾರಾಗಿರುತ್ತಾರೆಯೆಂಬ ಅಭಿಪ್ರಾಯವು ಪ್ರಸಿದ್ಧವಾಯಿತು.

ಹೀಗೆ ವೈಜ್ಞಾನಿಕರ ಕೈಗೆ ಆಹುತಿಯಾದವನು, ಮೊದಲನೆಯ ಬಾರಿಯಾಗಿ ನೆಪೋಲಿಯನನೇ ಅಲ್ಲ. ೧೭೪೫ರಲ್ಲಿ ಡೀನ್ ಸ್ವಿಫ್ಟ್ ಎಂಬವನನ್ನೂ ಹೀಗೆ ತಲೆಕೊರೆದು ನೋಡಿದ್ದಾರೆ. ಸ್ವಿಫ್ಟನ ತಲೆಯನ್ನು ಶೋಧಿಸಿ, ವೈಜ್ಞಾನಿಕರು ಬೇರೊಂದು ಇತ್ಯರ್ಥ ಮಾಡಿದ್ದರೆ, ಆತನ ತಲೆಯು ಬಹಳ ಭಾರವಾಗಿದ್ದು ದೊಡ್ಡದಾಗಿತ್ತು. ಹಾಗಾಗಿ, ದೊಡ್ಡ ಮಿದುಳಿದ್ದವರು ಹೆಚ್ಚು ಬುದ್ಧಿವಂತರೆಂಬ ನಿರ್ಣಯಕ್ಕೆ ಬಂದಿದ್ದರು. ಆದರೆ ಈ ಯಾವ ಶೋಧನೆಯನ್ನು ನಂಬಲಿಕ್ಕಾಗುವುದಿಲ್ಲ. ಏಕೆಂದರೆ ಸ್ವಿಫ್ಟನು ಸಾಯುವಾಗ ಹುಚ್ಚನಾಗಿ ಸತ್ತವನು. ವೈಜ್ಞಾನಿಕರು ದೊಡ್ಡ ಮನುಷ್ಯರು ಹುಚ್ಚರಾಗಿಯೇ ಸಾಯಬೇಕೆಂದು ನಿರ್ಣಯ ಮಾಡಿದರೆ, ಅವರ ಶೋಧನೆಯೂ ಸಮರ್ಪಕವಾದೀತು.

ಹಾಡುಗಾರರ ಕಂಠಶೋಧನೆ

ಇತ್ತೀಚೆಗೆ ವೈಜ್ಞಾನಿಕರು ಬಹಳ ಕೆಲಸಗಳನ್ನು ಹಾಡುತ್ತಿದ್ದಾನೆ, ಅದ್ಭುತವಾಗಿ ಗಾನ ಮಾಡುವ ಸಂಗೀತಕುಶಲರಲ್ಲಿ ಏನು ವೈಶಿಷ್ಟ್ಯವಿದೆಯೆಂದು ಪರೀಕ್ಷಿಸಲು ಅವರು ಹುಡುಗರ ಕೊರಳು ಕೊಯ್ದು ಪರೀಕ್ಷೆ ಮಾಡಿದರು. ಆದರೆ ಹಾಗೆ ಅವರು ಸ್ವರ್ಗೀಯ ಗಾನ ಮಾಡಲು ಏನು ಕಾರಣವಿರಬಹುದೆಂಬ ವಿಷಯವಾಗಿ ಕಂಡುಹುಡುಕಲು ಅವರಿಗೆ ಆಗಲೇ ಇಲ್ಲ.

ಸ್ವಿಫ್ಟ್ ಮತ್ತು ನೆಪೋಲಿಯನರು ಆದ ಮೇಲೆ ವೈಜ್ಞಾನಿಕರ ಶಸ್ತ್ರಕ್ಕೆ ತಲೆಯೊಡ್ಡಿದವನು, ೧೯೨೧ರಲ್ಲಿ ಪ್ರಸಿದ್ಧಗಾಯಕ ಎನ್ರಿಕೋ ಕರುಸೊ ಎಂಬವನು.

ಕರುಸನ ಕುತ್ತಿಗೆಯನ್ನು ಅವರು ಬಹಳವಾಗಿ ಶೋಧಿಸಿ, ಶಬ್ದಹೊರಡುವ ಅಲ್ಲಿನ ಅವಯವ, ನರಗಳೆನ್ನೆಲ್ಲಾ ಕೊಯ್ದು, ಎಲ್ಲಿ ಇಂತಹ ಮಧುರ ಸ್ವರವು ಹೊರಡುತ್ತದೆಯೆಂದು ಪರೀಕ್ಷಿಸಿದರು. ಆ ಮೇಲೆ ಇತ್ತೀಚೆಗೆ ತೀರಿಹೋದ ಡಾಮೆನೆಲ್ಲಿ ಮೆಲ್ಬಾಳೆಂಬವಳ ವಿಷಯವಾಗಿ ಶಸ್ತ್ರಪ್ರಯೋಗವಾಡಲು ವೈಜ್ಞಾನಿಕರಿಗೆ ಮನಸಿತ್ತು. ಆದರೆ ಸಾರ್ವಜನಿಕರ ಅಭಿಪ್ರಾಯವು ಅದಕ್ಕೆ ಸಮ್ಮತಿಯುಳ್ಳದ್ದಾಗಿ ಆಕೆಯ ಸಮಾಧಿಯೊಡನೆ ಆವಳ ಸಂಗೀತ ಕೌಶಲ್ಯದ ಜಿಜ್ಞಾಸೆಯೂ ಸಮಾಧಿಯಾಯಿತು. ಅದನ್ನು ಕೆದಕಿ ನೋಡಲು ವೈಜ್ಞಾನಿಕರು ಸಮರ್ಥರಾಗಲಿಲ್ಲ.

ನೆಪೋಲಿಯನನಿಗೆ ಸಣ್ಣ ಮಿದುಳಿತ್ತು, ಸ್ವಿಫ್ಟಿಗೆ ದೊಡ್ಡ ಮಿದುಳಿತ್ತು; ಹೀಗೆ ಮಿದುಳು ಒಂದಕ್ಕೊಂದು ವಿರುದ್ಧ ಆಕಾರ, ಭಾರಗಳುಳ್ಳದ್ದಾದರೂ ಅವರಿಬ್ಬರೂ ಅದ್ಭುತ ಪ್ರತಿಭಾಶಾಲಿಗಳು. ಕರುಸೋ ಮತ್ತು ಮೆಲ್ಬಾ, ಇವರಿಬ್ಬರ ಕುತ್ತಿಗೆಯ ಆಕೃತಿಯೂ ವಿಭಿನ್ನವಾಗಿದ್ದರೂ, ಅವರಿಬ್ಬರೂ ಅನುಪಮ ಸಂಗೀತ ಕುಶಲರಾಗಿದ್ದರು. ಶೇಕ್ಸ್‌ಪೀಯರ್ ಕವಿಯ ಮಿದುಳೂ ಕೂಡ ನಾವು ಗ್ರಹಿಸುವಂತೆ, ಸಾಮಾನ್ಯ ಮನುಷ್ಯರ ಮಿದುಳಿನ ಆಕೃತಿಯುಳ್ಳದ್ದೇ ಆಗಿರಬೇಕು. ಆದರೆ ಮಹಾಗ್ರಂಥಗಳನ್ನು ಆ ಕವಿಯು ಬರೆದಿದ್ದಾನೆ!

ನಿಜವಾಗಿಯೂ ಇಂತಹ ಶೋಧನೆಗಳಿಂದ ವೈಜ್ಞಾನಿಕರು ಏನೂ ಬುದ್ಧಿಯಿಲ್ಲದವನ ತಲೆಯಲ್ಲಿ ಸ್ವಲ್ಪವಾದರೂ ಬುದ್ಧಿ ಕೂಡಿಸುವಂತೆಯೋ, ಕತ್ತೆಯಂತೆ ಗಾನಮಾಡುವವನ ಕಂಠವನ್ನು ಸುಶ್ರಾವ್ಯವಾಗಿ ಹಾಡುವಂತೆಯೋ ಪ್ರಯತ್ನಿಸಿದರೆ ಏನಾದರೊಂದು ಪ್ರಯೋಜನವುಂಟು, ಅದಲ್ಲದೆ ವ್ಯರ್ಥವಾಗಿ ದೊಡ್ಡ ದೊಡ್ಡ ಮನುಷ್ಯರ ತಲೆಗಳನ್ನು ಹಿಡಿದು ಕೊರೆದು ನೋಡುವುದರಲ್ಲಿ "ಸ್ವಾರ್ಥ್ಯವಿಲ್ಲವೆಂದು" ಯಾರಾದರೂ ಹೇಳಬಹುದು.

ಆಧುನಿಕ ನೆಪೋಲಿಯನನಾದ ಮುಸ್ಸೊಲೋನಿಯ ತಲೆಯನ್ನೂ, ಆಧುನಿಕ 'ಸ್ವಿಫ್ಟ'ನಾದ ಬರ್ನಾರ್ಡ್‌ಷಾರ ತಲೆಯನ್ನೂ ಕೊಯ್ದು ನೋಡಿ ಅನ್ಯೋನ್ಯ ಫಲಿತಾಂಶಗಳನ್ನು ತೂಗಿ ವೈಜ್ಞಾನಿಕರು ಕಡೆಗೆ ಒಂದು ನಿರ್ಣಯಕ್ಕೆ ಬಂದರೂ ಬರಬಹುದು.

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಕುದುವಾಗುವುದಿಲ್ಲ. ಮೂರಲೇ ಪೂರಾ [illegible] ಔಷಧ ಬೇಡಿರಿ. ಮುಂಬಯಿ ಸರ್ಟಿಫಿಕೇಟು ದಾ. ವೈದ್ಯ ಎಲ್. ಸಿ. ಪಿ. ಎಸ್. [illegible], ಆದೇ ಈ ಚೂರ್ಣದಿಂದ ಯಾವ [illegible] ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರ ಡಬ್ಬಿಯ ಕ್ರಯ ರೂ ೪-೦-೦ ವಿ. ಪಿ.

ವಿಳಾಸ: ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.

SWADESHABIMANI

Estd. 1906.

The Best & the First Medium

For selling and introducing your goods in Karnatak there is no better medium than 'SWADESHABIMANI' because it is the only favourite Journal of Karnatics. If your goods are to be sold thro' mail orders in Karnatak there is no other way than to advertise in

"SWADESHABHIMANI"

For particulars please write to:

The Advt. Manager,
"SWADESHABHIMANI"
MANGALORE

ಭಾರತೀಯ ಸಂಸ್ಕೃತಿಯಲ್ಲಿ—

ಗೋಪೂಜೆಯ ಪ್ರಾಧಾನ್ಯತೆ



'ಎತ್ತು ಭೂಮಿಯನ್ನು ಹೊತ್ತಿದೆ' ಎಂಬ ಹಿಂದಿನ ನಂಬಿಕೆಯಲ್ಲಿ ನಿಜವಾಗಿಯೂ ಸತ್ಯಾಂಶವಿರಬೇಕೆಂಬ ವಿಚಾರವು ಇಂದು ಗ್ರಾಮೋದ್ಧಾರ ಚಳವಳದ ಕಡೆಗೆ ಗಮನ ಕೊಡುವ ಪ್ರತಿಯೊಬ್ಬನಿಗೂ ವಿಶದವಾದೀತು. ಇದರ ನಿಜವಾದ ಅರ್ಥವೇನೆಂದರೆ, ಈ ಭೂಮಿಯ ಏಳಿಗೆ, ರಾಜಪ್ರಜೆಗಳ ಅಭ್ಯುದಯ ಇವೆಲ್ಲಾ ಕೃಷಿಯಲ್ಲಿ ಆಧರಿಸಿದೆಯೆಂದ ಕೃಷಿಯು ಸಂಪೂರ್ಣ ಜೀವಜೀವಾಳವೆಂದರೆ ಎತ್ತಲ್ಲದೆ ಬೇರಿಲ್ಲ.

ಎತ್ತಿನ ಪ್ರಾಧಾನ್ಯತೆ

ಕೃಷಿಯನ್ನು ಬಿಟ್ಟರೂ, ಎತ್ತು, ದನ ಈ ಪಶುಜಾತಿಯ ಸಹಾಯವು ಮಾನವ ಜೀವನಕ್ಕೆ ಬಹಳವಾಗಿ ಬೇಕಾಗಿದೆ. ಹಾಗಾಗಿಯೇ ಪ್ರಾಚೀನ ಆರ್ಯರಲ್ಲಿ ಗೋಮಾತೆಯ ಪೂಜೆಯು ಅಷ್ಟು ಪ್ರಾಧಾನ್ಯತೆಗೆ ಬಂದಿರಬೇಕು. ಧಾರ್ಮಿಕ ಕೃತ್ಯವಾಗಿ ಹಿಂದೀಯರಲ್ಲಿ ಮಾತ್ರವಲ್ಲ ಈಜಿಪ್ಟ್ ದೇಶೀಯರಲ್ಲಿಯೂ ಗೋಪೂಜೆಯು ಇದೆ.

ಜಗತ್ತು ಅಭಿವೃದ್ಧಿಯ ಪಥದಲ್ಲಿ ಮುಂದುವರಿದಂತೆ ಮಾನವನನ್ನು ನಾಗರಿಕತೆಯ ಕಡೆಗೆ ಆಧರಿಸಿ ಬೆಳೆಸಿದ ಪಶುಜಾತಿಗಳಲ್ಲಿ ಎತ್ತು ಮತ್ತು ಕುದುರೆ ಇವುಗಳಿಗೆ ಪ್ರಾಧಾನ್ಯತೆಯು ಸಲಬೇಕು. ಈ ಎರಡು ಜಾತಿಯ ಪ್ರಾಣಿಗಳ ಯೋಗ್ಯತೆ ಮತ್ತು ಘನತೆಯನ್ನು ಹಿಂದಿನ ರಾಜರು ಚೆನ್ನಾಗಿ ತಿಳಿದಿದ್ದರು. ಈಜಿಪ್ತಿನ ಸುಲ್ತಾನ ಮಸೂದ್ III, ಶಧ ಪಿಸೆಜ್ II, ಎಪೊಲೊ ಡೊಟಸ್, ಮಹಮ್ಮದ್ ಬಿನ್ ಸಾಮ್, ಪೃಥ್ವೀರಾಜ್ ಇವರೇ ಮೊದಲಾದವರ ನಾಣ್ಯಗಳಲ್ಲಿ ಗೋವಿನ ಚಿತ್ರವನ್ನು ನಾವು ಕಾಣಬಹುದು. ಕೆಲವು ಚಿತ್ರಗಳಲ್ಲಿ ಒಂದು ಬದಿಯಲ್ಲಿ ಎತ್ತು ಇನ್ನೊಂದು ಬದಿಯಲ್ಲಿ ಕುದುರೆ ಇವುಗಳೂ ಇವೆ.

ಎತ್ತಿನ ಚಿತ್ರದಿಂದ ಭೂಮಿಯ ಬೆಳೆ ಭಾಗ್ಯಗಳೂ, ಹಾಗೂ ಪ್ರಜಾಸಂತತಿಯ ಸುಖಸಂಪತ್ತೂ, ಕುದುರೆಯ ಚಿತ್ರದಿಂದ ಸೈನ್ಯಶಕ್ತಿ ಮತ್ತು ದೇಶರಕ್ಷಣೆ ಸಾಮರ್ಥ್ಯಗಳನ್ನು ಇವುಗಳೂ ಸೂಚಿಸುವವುಗಳಾಗಿರಬೇಕು. ನಿಜವಾಗಿಯೂ ಈ ಎರಡು ಸಂಗತಿಗಳು ಯಾವ ರಾಷ್ಟ್ರದಲ್ಲಿ ಸಮೃದ್ಧವಾಗಿದೆಯೋ ಅಲ್ಲಿನ ರಾಜರೂ ಪ್ರಜೆಗಳೂ ಸುಖದಿಂದಿರುವುದರಲ್ಲಿ ಸಂಶಯವೇನು?

ಆರ್ಯಕಾಲದ ಗೌರವ

ಆರ್ಯರು ಎಷ್ಟರ ಮಟ್ಟಿಗೆ ಎತ್ತಿಗೆ ಪ್ರಾಧಾನ್ಯತೆ ಕೊಡುತ್ತಿದ್ದರೆಂಬ ವಿಷಯ ಆಧಾರಪೂರ್ವಕವಾಗಿ ಬರೆಯುವ ಅವಶ್ಯಕತೆ ಇಲ್ಲ. ಭಾರತದೇಶದ ಉತ್ತರ ಪೂರ್ವ ಭಾಗವನ್ನು ಗೆದ್ದಾಗ ಗ್ರೀಸೊಬೇಕ್ಟ್ರಿಯನ್ ಜನರು ತಮ್ಮ ಚಿಹ್ನೆಯಾದ ಹರ್ಕ್ಯುಲಿಸಿನ ಚಿತ್ರವನ್ನು ಬಿಟ್ಟು ಎತ್ತಿನ ಚಿತ್ರವನ್ನು ಹಾಕಲು ಸುರು ಮಾಡಿದರು. ೨೦೦೦ ವರ್ಷಗಳ ಹಿಂದಿನ ಎಪೊಲ್ಲೋಡೋಟಸಿನ ನಾಣ್ಯದಲ್ಲಿ ಎತ್ತಿನ ಸುಂದರ ಚಿತ್ರವು ಇದೆ, ಆ ಚಿತ್ರದ ಮೇಲೆ ಪಾಲಿ ಸಂಸ್ಕೃತ ಭಾಷೆಗಳಲ್ಲಿ ಅಕ್ಷರಗಳೂ ಕೆತ್ತಲ್ಪಟ್ಟಿವೆ.

ಚೈನದಿಂದ ಬಂದ ಕುಷನ ರಾಜರು ಕೂಡಾ ಪಂಜಾಬನ್ನು ಗೆದ್ದ ಮೇಲೆ ಎತ್ತಿನ ಚಿತ್ರದ ನಾಣ್ಯಗಳನ್ನು ಹೊಡೆಸಿದರು. ಕಾಡ್ಫಿಸೆಸಿನ ನಾಣ್ಯವು ೧,೯೦೦ ವರ್ಷ ಹಿಂದಿನದಾಗಿದ್ದು ನಂದಿ ಮತ್ತು ಶಿವ ಇವರ ಚಿತ್ರಗಳು ಕೆತ್ತಲ್ಪಟ್ಟಿವೆ. ರಜಪೂತ ಪ್ರಸಿದ್ಧ ರಾಜನಾದ ಪೃಥ್ವೀರಾಜನ ನಾಣ್ಯದಲ್ಲಿ (೧೧೯೨) ಒಂದು ಕಡೆಯಿಂದ ಒಬ್ಬ ಕುದುರೆಸವಾರನ ಚಿತ್ರವೂ, ಇನ್ನೊಂದು ಕಡೆಯಿಂದ ಎತ್ತೂ ಚಿತ್ರಿಸಲಾಗಿದೆ. ಸಾಮಾನ್ಯವಾಗಿ ಪಂಜಾಬ್ ಮತ್ತು ಮಧ್ಯಭಾರತದಲ್ಲಿ ಆಳಿದ ಎಲ್ಲಾ ಅರಸರೂ ತಮ್ಮ ನಾಣ್ಯಗಳಲ್ಲಿ ಇದೇ ಚಿತ್ರಗಳನ್ನು ಬರೆದಿದ್ದಾರೆ.

ಮುಸ್ಲಿಮರೂ ಗೌರವಿಸುತ್ತಿದ್ದರು

ಹಿಂದೂದೇಶವನ್ನು ಗೆದ್ದು ಆಳಿದ ಮುಸ್ಲಿಂ ರಾಜರೂ ಗೋವೃಷಭಗಳ ಕುರಿತು ಅತ್ಯಂತ ಗೌರವ ತೋರಿಸುತ್ತಿದ್ದರು. ಅವರ ನಾಣ್ಯಗಳಲ್ಲಿಯೂ ಇಂತಹುವೇ ಚಿತ್ರಗಳು ಇದ್ದುವು. ಸುಲ್ತಾನ್ ಮಹಮ್ಮದ್ ಗಜನಿಯ ವಂಶಸ್ಥ ಸುಲ್ತಾನ ಮಸೂದ ಮತ್ತು ಮಹಮ್ಮದ್ ಬಿನ್ ಸಾಮ್ ಇವರ ನಾಣ್ಯಗಳು ಇದಕ್ಕೆ ಉದಾಹರಣೆಯಾಗಿದೆ.

ಹೀಗೆ ಎಷ್ಟೋ ಉದಾಹರಣೆಗಳನ್ನು ನಾವು ಹೇಳಬಹುದು. ಇಂದೂ ಕೂಡಾ ಅನೇಕ ಆಶ್ರಿತ ರಾಜರು ತಮ್ಮ ನಾಣ್ಯಗಳಲ್ಲಿ ಎತ್ತಿನ ಚಿತ್ರವನ್ನು ಕೊಡುತ್ತಾರೆ.

ಇಂದಿನ ವೈಸರಾಯರ ಆದರ

ಇಂದಿನ ಭಾರತದ ವೈಸರಾಯರೂ, ಗವರ್ನರ್ ಜನರಲರೂ ಆದ ಮಾರ್ಕ್ವಿಸ್ ಲಿನ್‌ಲಿತ್‌ಗೋ ಇವರೂ ಎತ್ತುಗಳ ಕಡೆಗೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತಿರುವರೆಂಬ ವಿಷಯವು ನಿಜವಾಗಿಯೂ ಸಂತೋಷಜನಕವಾಗಿದೆ. ಡಿಲ್ಲಿಯಲ್ಲಿ ಸೇರಿದ ದ್ವಿತೀಯ ಗೋಪ್ರದರ್ಶನಕ್ಕೆ ಅನೇಕ ಮಂದಿ ಸೇರಿದ್ದರು. ಇಂತಹ ಪ್ರದರ್ಶನಗಳಿಂದ ಅಖಿಲಭಾರತದಲ್ಲಿ ನಿಜವಾಗಿಯೂ ಗೋಜಾತಿಯ ಏಳಿಗೆಯ ಕಡೆಗೆ ಗಮನ ಬೀಳುವುದೆಂದು ಖಂಡಿತ ತಿಳಿಯಬಹುದಾಗಿದೆ. ನಮ್ಮ ದೇಶದ ಆಧಾರಸ್ತಂಭಗಳೆಂದರೆ ಗೋವು ಮತ್ತು ಎತ್ತುಗಳು. ಅವುಗಳ ಸಾಕುವಿಕೆಯ ಕಡೆಗೆ ಸಾಕಷ್ಟು ಗಮನಕೊಡುವುದು ದೇಶದ ಸುಖರಕ್ಷಣೆಯ ದೃಷ್ಟಿಯಿಂದ

ಎರಡು ಚಿತ್ರಗಳು

(೫ನೇ ಪುಟದಿಂದ ಮುಂದುವರಿದುದು)

ಕಳೆದುಹೋದ ಹಿಂದಿನ ಪ್ರಸಿದ್ಧಿಯನ್ನು ಈ ಚಿತ್ರದಿಂದ ತಿರಿಗಿ ಪಡೆಯಬೇಕೆಂದು ಆತನು ಬಹಳವಾಗಿ ಪ್ರಯತ್ನಿಸಿದ್ದ. ಸಂಪೂರ್ಣ ಮುಗಿಸಿದ ಮೇಲೆ ನನ್ನನ್ನು ಕರೆದು ತನ್ನ ಚಿತ್ರವನ್ನು ತೋರಿಸಿದ. ನಾನು ಆಶ್ಚರ್ಯ ಆನಂದ ಪುಳಕಿತನಾದೆ.

'ನಿನ್ನ ಅಭಿಪ್ರಾಯವೇನು?' ಕೇಳಿದ ರಂಗಣ್ಣ.

'ಅದ್ಭುತವಾಗಿದೆ, ಹಿಂದೆ ಎಂದೂ ನೀನು ಹೀಗೆ ನಿನ್ನ ಸಂಪೂರ್ಣ ಕಲಾಶಕ್ತಿಯನ್ನು ಚಿತ್ರಗಳಲ್ಲಿ ತೋರಿಸಲಿಲ್ಲ.'

ರಂಗಣ್ಣನು ತಿರಿಗಿ ಮಾತನಾಡಲಿಲ್ಲ. ಆದರೆ ಆತನ ಹೃದಯವು ಸಂತೋಷಗೊಂಡಿತೆಂದು ನಾನು ತಿಳಿದೆ.

'ನೀನು ಆಕೆಯ ದುಃಖ, ಆಸೆ ಭರವಸೆಗಳ ಭಾವಗಳನ್ನು ಅದ್ಭುತವಾಗಿ ಚಿತ್ರಿಸಿರುತ್ತಿ. ಆವಳ ಹೃದಯವನ್ನೇ ಹೊಕ್ಕು ಪರೀಕ್ಷಿಸಿ ನೋಡಿದವನಂತೆ ಆಕೆಯ ಸಹಜವಾದ ಮುಖಭಾವಗಳಿಗೆ ನೀನು ವ್ಯಕ್ತಪಡಿಸಿ ಭಾವನೆಗಳನ್ನು ತುಂಬಿಸಿದ್ದೀ!'

ಚಿತ್ರದಿಂದ ನನ್ನ ದೃಷ್ಟಿಯನ್ನು ಆ ಹೆಂಗುಸಿನ ಕಡೆಗೆ ತಿರುಗಿಸಿದೆ. ಆಕೆ ಬಹಳವಾಗಿ ದಣಿದು ತಾನು ಕುಳಿತಿದ್ದ ಕುರ್ಚಿಯಲ್ಲಿ ಜಾರಿಬಿದ್ದು ಹೋಗಿದ್ದಳು.

ರಂಗಣ್ಣ ಮಾತನಾಡಲೇ ಇಲ್ಲ. ಈ ಎಲ್ಲಾ ಮಾತುಗಳನ್ನು ಆತ ಗಮನಿಸಿದ್ದನೋ ಇಲ್ಲವೊ? ವಿಚಾರ ಮಗ್ನನಾಗಿದ್ದ.

'ನಿನ್ನ ಜೀವಮಾನದಲ್ಲಿ ಎರಡು ಉತ್ತಮ ಕಲಾಕೃತಿಗಳನ್ನು ಇಬ್ಬರು ಸ್ತ್ರೀಯರ ಸಹಾಯದಿಂದ ನೀನು ಚಿತ್ರಿಸಿದ ವಿಷಯವು ನಿಜವಾಗಿಯೂ ಕುತೂಹಲಜನಕವಾದದ್ದು' ಎಂದು ನಾನೇ ರಂಗಣ್ಣನ ಧ್ಯಾನವನ್ನು ಒಡೆಸಿದೆ.

ರಂಗಣ್ಣನ ಕಣ್ಣು ಒಂದು ಚಿತ್ರವಿಂದ ಇನ್ನೊಂದು ಚಿತ್ರದ ಕಡೆಗೆ ಅತ್ತಿತ್ತ ಹರಿಯತೊಡಗಿತು. ಒಂದು ಚಿತ್ರವು ತನ್ನ ಜೀವನದ ಉಲ್ಲಾಸವನ್ನು ತೋರಿಸಿ ರೋಮಾಂಚನಗೊಳಿಸುವಂತಹ ಕೃತಿ! ಇನ್ನೊಂದು ಹೃದಯದ ನಿಷ್ಠುರತೆಯನ್ನು ಕೆದಕಿ ಗಾಢ ದುಃಖದ ಬೇನೆಯನ್ನು ಉದ್ರೇಕಿಸುತ್ತದೆ.

ಏನೋ ಮಿಂಚಿನಂತೆ ನನ್ನ ಕಣ್ಮುಂದೆ ಒಂದು ಸಿನಹು ಹೊಳೆಯಿತು. ಸರಿ ಈಗ ತಿಳಿಯಿತು! ಆ ಮುಗ್ಧಬಾಲಿಕೆ—ಈ ಹೆಣ್ಣು ಮಗಳು, ಇಬ್ಬರೂ ಒಂದೇ! ಮುಖದ ಭಂಗಿ ಮಾತ್ರ ಬೇರೆ. ಮಂದಸ್ಮಿತವು ಇಂದು ಮಾಯವಾಗಿದೆ. ಆದರೆ ಅದೇ ರೂಪು, ಅದೇ ನೋಟ. ಆಕೆಯೇ ಇವಳು.

ಈ ಆನಂದದಿಂದ ನಾನು ಪರವಶನಾಗಿ, ಗೆಳೆಯನನ್ನು ಕರೆದು ಏನೋ ಹೇಳಬೇಕೆಂದು ಭಾವಿಸುವಷ್ಟರಲ್ಲಿಯೇ ಆ ಹೆಂಗುಸು ನನ್ನ ಬಳಿಗೆ ಬಂದು ನಿಂತಿದ್ದಳು. ಚಕಿತಳಾಗಿ ನನ್ನನ್ನು ಎಚ್ಚರಿಸುವಂತೆ ಇತ್ತು. ನನ್ನೊಡನೆ ಅವಳ ಕಣ್ಣುಗಳೇ ಸುಮ್ಮಗಿರಲು ಬೇಡುವಂತಿದ್ದುವು.

'ಅಪರಿ! ಇನ್ನೂ ನನ್ನ ಪರಿಚಯವಾಗಿಲ್ಲ, ಪ್ರಿಯ?' ಆಕೆ ಮಾತು ಮುಗಿಸಬೇಕಾದರೆ ರಂಗಣ್ಣ ಬಂದು ಅವಳ ಕಾಲಬುಡದಲ್ಲಿ ಬಿದ್ದುಬಿಟ್ಟ! ಒಂದು ಮಾತು ಹೇಳಲೂ ಅವನಿಗೆ ಆಗ ಶಕ್ತಿಯಿರಲಿಲ್ಲ! ಆ ಹಣ್ಣಾಗಿರುವ ಹೆಂಗುಸು ಕಂಬನಿ ಸುರಿಸುತ್ತಾ ನೆಲಕ್ಕೆ ಕುಸಿದು, ಆತನ ತಲೆಯಮೇಲೆ ಕೈಯ್ಯಿಟ್ಟು ದಿಗಿದಳು. ರಂಗಣ್ಣ ವಿಕಾರಕಾರವಾಗಿ ಕಣ್ಣರಳಿಸಿ ನೋಡುತ್ತಿದ್ದ. 'ಪ್ರಿಯಾ, ಪ್ರಿಯಾ' ಆಕೆ ಕೂಗಿದಳು. ಉತ್ತರವಿಲ್ಲ. ರಂಗಣ್ಣ ತೀರಿಹೋಗಿದ್ದ!

ಆಕೆ ರಂಗಣ್ಣನ ಶವದ ಮೇಲೆ ಬಿದ್ದುಬಿಟ್ಟಳು. ಮೇಲೆತ್ತಲು ನಾನು ಯತ್ನಿಸಿದೆ. ಆದರೆ ಎರಡು ಚಿತ್ರಗಳೂ ಮಿಲನಗೊಂಡಿದ್ದುವು.

(ಇಂಗ್ಲಿಷ್ ಕತೆಯೊಂದರ ಆಧಾರದಿಂದ)

— ದುರ್ಗಾದಾಸ

ಯುರೋಪಿನ ಶಾಂತಿಸಾಧಕ ಪ್ರೆಸಿಡೆಂಟ್ ರೂಸ್‌ವೆಲ್ಟ್

[೧೪ನೇ ಪುಟದಿಂದ ಮುಂದುವರಿದುದು]

ಉಂಟು. ಉತ್ತರವನ್ನು ಕೂಡಲೇ ಕೊಡುತ್ತಾರೆ. ಬೇಸರ ಬಂದಾಗ ಅವರ ತಮಾಷೆ ಬಿಟ್ಟುಹೋಗುತ್ತದೆ. ಸಾಮಾಜಿಕ ಸುಧಾರ್ಕ ರಾಜಕೀಯ ಕುಶಲರಾದ ರೂಸ್‌ವೆಲ್ಟರು ಆಗ ಉಗ್ರವ್ಯಾಕ್ತಿಗಳಾಗುತ್ತಾರೆ. ಮುಖ್ಯವಾಗಿ ಮುಖ್ಯ ತೀರ್ಮಾನಗಳಲ್ಲಿ ಅವರು ಅರಿತಿದ್ದಾರೆ. ಬಹಳ ಸಾದಾ ಜೀವನ ನಡೆಸುತ್ತಾರೆ. ಮೀನು ಹಿಡಿಯುತ್ತಿರುವಾಗ, ತನ್ನ ಹಂಚಿಕೆಗಳನ್ನೆಲ್ಲಾ ಮಾಡುತ್ತಾರೆ. ಆಗಾಗ ಚಲಚ್ಚಿತ್ರಗಳನ್ನು ಸಂದರ್ಶಿಸುತ್ತಾರೆ. ಹೆಚ್ಚಾಗಿ ನಡು ಇರುಳು ವರೆಗೆ ಕಾರ್ಯತತ್ಪರರಾಗಿರುತ್ತಾರೆ. ಬಹಳ ಮುಂಜಾನೆಗೆ ಎದ್ದು, ತಿರಗಿ ಕಾರ್ಯಮಾಡುತ್ತಾರೆ.

ರೂಸ್‌ವೆಲ್ಟರಿಗೆ ಕುಡಿತನದ ಅಭ್ಯಾಸವಿಲ್ಲ. ಆದೆ ಹೊಗೆಬಿಡುತ್ತಾರೆ. ಈಜಾಡುವುದರಲ್ಲಿ ಅವರಿಗೆ ಅತ್ಯಂತ ಆಸಕ್ತಿಯಿದೆ. ಬಹಳ ಲಘು ಆಹಾರವನ್ನು ತೆಗೆದುಕೊಳ್ಳುತ್ತಾರೆ. ಆದಿತ್ಯವಾರದ ರಾತ್ರಿಯ ಊಟವು ಅವರಿಗೆ ಅತ್ಯಂತ ವಿಶೇಷವು, ಹಲವು ಮಿತ್ರರನ್ನೂ ಆ ದಿನ ಊಟಕ್ಕೆ ಕರೆಯುತ್ತಾರೆ.

ಎಲ್ಲದಕ್ಕಿಂತಲೂ ಮಿಗಿಲಾಗಿ ನಾವು ಅವರಲ್ಲಿ ಕಾಣುವಂತಹದು ಅವರ ಉದಾರವಾದ ಕರುಣಾಪೂರ್ಣವಾದ ಹೃದಯ. ದೀನರ ಬಗೆಗಾಗಿ ದಯೆತೋರಿಸುವುದು ಅವರಿಗೆ ನಿತ್ಯದ ಹವ್ಯಾಸ. ನ್ಯೂಯಾರ್ಕಿನ ಗವರ್ನರರಾಗಿದ್ದಾಗ ಒಂದು ಘಟನೆ ನಡೆಯಿತು. ಒಬ್ಬ ಸ್ಪೆನೋಗ್ರಾಫರಳ ಒಂದು ಕೈಯಿಂದ ಟೈಪು ಮಾಡುತ್ತಿದ್ದಳು. 'ಏನು' ಹೀಗೆಂದರು ರೂಸ್‌ವೆಲ್ಟರು. ಕಳಿಸೋವಿದೆಯೆಂದಳಾಕೆ. ಆಕೆಗೆ ಕೆಲಸದಿಂದ ರಜೆ ಕೊಟ್ಟು ತನ್ನ ಕಾರಿನಲ್ಲಿ ಕೂತುಕೊಳ್ಳಿಸಿ, ಮನೆಗೆ ಕಟ್ಟು ಕಳುಹಿಸಿದರು. ಅವಳಿಗೆ ಬೇಕಾದ ಮದ್ದೂ ಮತ್ತು ಎರಡು ಡಜನು ಕಿತ್ತಳೆ ಹಣ್ಣುಗಳನ್ನು ಒದಗಿಸಿ ಕೊಟ್ಟರು.

ಹೀಗಿದ್ದ ಘಟನೆಗಳು ಅವರ ಜೀವನದಲ್ಲಿ ದಿನನಿತ್ಯದ ಸಂಭವಗಳಾಗಿವೆ. ಹೀಗೆಯೋ ತಪ್ಪುಗಾರರ ವಿಷಯ ಅವರು ಅತ್ಯಂತ ನಿರ್ದಯರು ಆಗಿದ್ದಾರೆ. 'ಈ ನಾಡನ್ನು ಮಿಲ್ಲಗಳ ವಶಕ್ತಿಗೊಳಿಸಬೇಕು. ದೇವರ ಕೃಪೆಯಿಂದ ನಾನದನ್ನು ಮಾಡಬಯಸುತ್ತೇನೆ'' ಹೀಗೆಂದು ಒಮ್ಮೆ ಒಬ್ಬ ಇಂಗ್ಲಿಷ ಗೆಳೆಯನೊಡನೆ ಅವರು ಹೇಳಿದರು.

ಎಷ್ಟು ಭಯಂಕರರಾಗಿದ್ದಾರೆಯೋ, ಅಷ್ಟೇ ದಯಾಪರರೂ ಆಗಿದ್ದಾರೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಒಳ್ಳೆ ಗೃಹಸ್ಥರು. ಅವರಿಗೆ ಅದ್ಭುತವಾದ ಜ್ಞಾಪಕಶಕ್ತಿಯಿದೆ. ಯಾವ ನಡೆಯುವ ವಿಷಯವೇ ಆಗಲಿ ಅವರಿಗೆ ತಿಳಿಸಿದರೆ, 'ಹೋ ಅದನ್ನು ನಾನು ನಿನ್ನೆ ತಿಳಿದಿದ್ದೆ'' ಎಂದು ಅವರು ಕೂಡಲೇ ಹೇಳುವರು. ಯಾವ ವಿಷಯವನ್ನೂ ಅವರು ತಿಳಿಯದೇ ಇರುವುದಿಲ್ಲ.

ಮುಂದಕ್ಕೆ ಮೂರನೇ ಸಲ ಅಮೇರಿಕದ ಅಧ್ಯಕ್ಷರಾಗಿ ಅವರು ಚುನಾಯಿತರಾಗಿ ಒರುವರೇ ಎಂಬ ವಿಷಯವಾಗಿ ಭವಿಷ್ಯ ಹೇಳುವುದು ಅಷ್ಟೇನೂ ಸುಲಭವಲ್ಲ. ಈಗಾಗಲೇ ಅವರು ತನ್ನ 'ಡೀಲಿ'ನ ಚರಿತ್ರೆಯನ್ನು ಬರೆಯಲು ಆರಂಭಿಸಿರುವರು.

ರೂಸ್‌ವೆಲ್ಟರ ಅಧ್ಯಕ್ಷಸ್ಥಾನಕ್ಕೆ ಬಂದ ಕೂಡಲೇ, ಪ್ರೊಫೆಸರರನ್ನೂ ವ್ಯವಹಾರ ಕುಶಲರನ್ನೂ ಹಿತಸೂಚನೆಗೆ ಕರೆದು ಅವರ ಅಭಿಪ್ರಾಯಗಳನ್ನು ಕೇಳಿದರು. ರಾಜಕೀಯ ಆಟದಿಂದಲೇ ಹೊಟ್ಟೆತುಂಬಿಸುವವರನ್ನು ಆಧರಿಸಿದೆ, ರಾಷ್ಟ್ರದಲ್ಲಿರುವ ಉತ್ತಮ ಮೇಧಾವಿಗಳ ಅಭಿಮತವನ್ನು ಕೇಳುವುದಕ್ಕೆ ರೂಸ್‌ವೆಲ್ಟರು ಮನಸ್ಸು ಮಾಡಿದ್ದರಲ್ಲಿ ನಿಜವಾಗಿಯೂ ಬುದ್ಧಿವಂತಿಕೆಯಿದೆ. ಹೀಗೆ ರೂಸ್‌ವೆಲ್ಟರ ಜೀವನವು ಅವಶ್ಯವಾಗಿ ಗಮನನೀಯವಾದ ಅನೇಕ ವಿಷಯಗಳಿಂದ ಕೂಡಿರುತ್ತವೆ.

ನಿಮಗೆ ಗಂಟ್ಲುಬೇನೆಯಿರುವುದೆ?

ಲಾರಿಂಜೈಟಿಸ್, ಟೊನ್ಸಿಲ್ಲೈಟಿಸ್ ಮತ್ತು ಕ್ವಿನ್ಸಿ ಎಂಬ ಗಂಟ್ಲು ರೋಗಗಳಿಗೆ ಕಾರಣವಾಗುವ ರೋಗಾಣುಗಳು ನಿಮ್ಮ ದೇಹವನ್ನು ಪ್ರವೇಶಿಸುವುದು ಬಾಯಿಯ ಗಂಟ್ಲಿನ ಮೂಲಕ. ಆದುದರಿಂದ ನಿಮ್ಮ ಗಂಟ್ಲು ಪೀಡೆಗಳನ್ನು ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿ ಗುಣಪಡಿಸಿಕೊಳ್ಳಿರಿ.

ಪೆಪ್ಸ್ ಗುಳಿಗೆಗಳು ನಿಮ್ಮ ಬಾಯಲ್ಲಿ ಕರಗುತ್ತಲು ಪಾ, ಕೊಡುವ ವಿಷಧ್ನೀಯ ಧೂಮವು ನಿಮ್ಮ ಶ್ವಾಸಕೋಶದ ನಳಿಗೆಗಳನ್ನು ಪ್ರವೇಶಿಸುವುದು. ಆದರಿಂದ ನಿಮ್ಮ ಶ್ವಾಸಕೋಶವು ರೋಗಗಳನ್ನು ತಡೆಯುವ ಸಾಮರ್ಥ್ಯವನ್ನು ಹೊಂದುವುದು. ಈ ಧೂಮದಿಂದ ಕಂಠನಾಳದಲ್ಲಿರುವ ಉರಿತವು ಕಡಮೆಯಾಗುವುದು, ಎಲ್ಲಾ ರೋಗಾಣುಗಳನ್ನು ನಾಶಪಡಿಸುವುದು, ಸಿಂಬಳವನ್ನು ಕಡಮೆ ಮಾಡುವುದು. ಮಳೆಗಾಲದ ಶೀತ ಸಮ್ಬಂಧ ರೋಗಗಳನ್ನು ಎದುರಾಯಿಸುವರೆ ನಿಮಗೆ ಹೆಚ್ಚಿನ ಬಲವನ್ನು ಕೊಡುವುದು. ಎಲ್ಲಾ ದವಾಖಾನೆಗಳಲ್ಲಿ ರೂಪಾಯಿ ಒಂದರ ಪ್ರಕಾರ ಮಾರಾಟವಾಗುತ್ತದೆ.

ಏಜಂಟ್ಸ್:

ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದ್ರಾಸು.

ಯಾವಾಗಲೂ ಪೆಪ್ಸನ್ನೇ ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಮಕ್ಕಳಿಗೆ

ಡೋಂಗರೆ

ಬಾಲಾಮೃತವು

ಆದರ್ಶಕರವಾದ

ಪೌಷ್ಟಿಕ.

ಇದರಿಂದ ಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಮಕ್ಕಳ ಎಲ್ಲಾ ಸ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ — ಜಮ್ಮಿ ವೆಂಕಟ್ರಮಣಯ್ಯ

ವಿಶೇಷ ಪತ್ರಿಕೆ ಬರೆಯಿರಿ — ಲಿವರ್ ಮತ್ತು ಸ್ಲೀನ್ ಸ್ಪೆಷಿಯಲಿಸ್ಟ್, ಮೈಲಾಪುರ, ಮದ್ರಾಸು.

ಸರದಾರ ಭವನ Sirdar Bhavan

ಹೈಲೆಸ್ಸ್ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೋಣೆಗಳು ಸರ್ವರ ಹಿತಕ್ಕೆ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ.

Propruter— H. R. Rao.

Bangalore Guit Emporium Madras

ಲೋಕಮಾನ್ಯ ಬಾಲ ಗಂಗಾಧರ ತಿಲಕರು

[ಜೀವನದ ಪುಣ್ಯ ಸ್ಮರಣೆ]

ಲೇಖಕ:- ಕಯ್ಯಾರ ಕಿಞ್ಞಣ್ಣ ರೈ ವಿದ್ವಾನ್.

"ಸ್ವರಾಜ್ಯವೇ ನನ್ನ ಜನ್ಮಸಿದ್ಧವಾದ ಹಕ್ಕು" ಎಂದು ಸಿಂಹನಾದವನ್ನು ಮಾಡಿ, ಪಾರತಂತ್ರ್ಯದ ಪಾಶದಲ್ಲಿ ಬಂಧಿತರಾಗಿದ್ದ ಭಾರತೀಯರನ್ನು ೪೦ ವರ್ಷಗಳ ಹಿಂದೆ ಜಡನಿದ್ರೆಯಿಂದ ಹೊಡೆದೆಬ್ಬಿಸಿದ ಮಹಾಪುರುಷರು ಶ್ರೀ ಲೋಕಮಾನ್ಯ ಬಾಲಗಂಗಾಧರ ತಿಲಕರು. ೧೯೨೦ನೇ ಇಸವಿಯ ಅಗಸ್ಟ್ ತಿಂಗಳ ಮೊದಲನೆಯ ತಾರೀಕಿನ ದಿನ ಅವರ ಪಾರ್ಥಿವ ಶರೀರವು ನಮ್ಮಿಂದ ಕಣ್ಮರೆಯಾಯಿತು. ಆದರೆ ಅವರು ಹೊತ್ತಿಸಿದ ದೇಶಾಭಿಮಾನದ ಜ್ಯೋತಿಯು ವಿಶಾಲಭಾರತದಲ್ಲಿಯೇ ಪ್ರಜ್ವಲಿಸುತ್ತಿದೆ. ಅವರ ಅಂದಿನ ರಣಗರ್ಜನೆಯು ಇಂದೂ ನಮ್ಮ ಕಿವಿಯಲ್ಲಿ ಪ್ರತಿಧ್ವನಿಗೊಡುತ್ತಿದೆ. ಅವರ ಅಸಾಧಾರಣ ವ್ಯಕ್ತಿತ್ವವು ಭಾರತೀಯರನ್ನು ಸ್ವಾತಂತ್ರ್ಯ ಪಥದಲ್ಲಿ ಸದಾ ಮುನ್ನಡೆಸುತ್ತಿದೆ. ಅವರ ಅಂದಿನ ಅವಿಶ್ರಾಂತವಾದ ದೇಶಸೇವೆಯು ಈಗಲೂ ನಮಗೆ ಆದರ್ಶವಾಗಿದೆ. ಅವರ ಆತ್ಮವು ಸಮಸ್ತ ಭಾರತದ ವಿಶಾಲ ವಾತಾವರಣದಲ್ಲಿ ಹರಡಿದ್ದು, ಎಂದೆಂದೂ ಸಹನೆಯಿಲ್ಲದೆ ರಣಘೋಷವನ್ನು ಹುಟ್ಟಿಸುತ್ತಿದೆ! ಜನ್ಮಸಿದ್ಧ ಹಕ್ಕಾದ ಸ್ವರಾಜ್ಯವು ದೊರೆಯುವ ತನಕ ಅವರ ಆತ್ಮಕ್ಕೆ ವಿಶ್ರಾಂತಿ ದೊರೆಯುವುದು ಸಾಧ್ಯವುಂಟೇ?

ಲೋಕಮಾನ್ಯ ತಿಲಕರು ಹುಟ್ಟಿದ ಪರಿಸ್ಥಿತಿಯನ್ನು ವಿಚಾರಿಸಿದರೆ, ಅವರಿಂದ ಆದ ಮಹಾಕಾರ್ಯದ ಅರ್ಥವಾದೀತು. ಅಂದು ಜನರು ಆಂಗ್ಲೇಯ ವಿದ್ಯಾಬುದ್ಧಿಗಳಿಂದ ಮೋಹಿತರಾಗಿದ್ದರು. ಸರಕಾರದ ಅಧಿಕಾರಲಾಲಸೆಯು ಜನರ ಬಾಯಿಯಲ್ಲಿ ನೀರೂರಿಸುತ್ತಿತ್ತು! ಇಂಗ್ಲಿಷು ವಿದ್ಯಾಭ್ಯಾಸ ಪಡೆದನೆಂದರೆ, ಆತನು ಉಚ್ಚಾಧಿಕಾರವನ್ನು ಹೊಂದಿದನೆಂದೂ; ಆತನ ಇತರ ಸೋದರ ಭಾರತೀಯರನ್ನು ಯಾವ ರೀತಿಯಿಂದಲಾದರೂ ಸುಲಿಯಲು ಸಾಮರ್ಥ್ಯವುಳ್ಳವನೆಂದೂ ಅಗತ್ತು. ಲೋಕಮಾನ್ಯರು ಇಂಗ್ಲಿಷಿನಲ್ಲಿ ಉಚ್ಚ ವಿದ್ಯೆಯನ್ನು ಗಳಿಸಿದ್ದರು. ವಕಾಲತ್ತು ನಡೆಸದಿದ್ದರೂ ಕಾನೂನನ್ನು ಚನ್ನಾಗಿ ಅಭ್ಯಾಸಮಾಡಿದ್ದರು. ಅಂದಿನ ಕಾಲದಲ್ಲಿ ಒಬ್ಬನು ಅಧಿಕಾರಕ್ಕೆ ಬರಬೇಕಾದರೆ ಯಾವ ಯಾವ ಗುಣಗಳು ಅವಶ್ಯವಿತ್ತೋ; ಅವೆಲ್ಲಾ ಅವರಲ್ಲಿ ತುಂಬಿತ್ತು. ಆದರೆ ಅವರು ತಮ್ಮ ಜ್ಞಾನವನ್ನು, ವಿದ್ಯಾಯೋಗ್ಯತೆಗಳನ್ನು ಸ್ವಾರ್ಥಕ್ಕಾಗಿ ಉಪಯೋಗಿಸದೆ ಇಡೀ ಭರತಖಂಡದ ಸೇವೆಗಾಗಿ ಧಾರೆಯೆರೆದರು. ಭರತಮಾತೆಯ ದಾರಿದ್ರ್ಯ ಸಂವೇದನೆಯು ಹಾಗೂ ಪಾರತಂತ್ರ್ಯ ಬಂಧನವು ಅವರನ್ನು ರಾಜಕೀಯ ರಂಗಕ್ಕೆಳೆದು ಮಹಾ ಸೇವೆಯು ಸಲ್ಲಿಸುವಂತೆ ಮಾಡಿತು. ಇಂದು ಭಾರತದ ರಾಜಕೀಯ ಆಂದೋಲನವು ಎಂದರೆ ಕಾಂಗ್ರೆಸು ಚಳವಳಿಯು ಇಷ್ಟೊಂದು ಪ್ರಬಲವಾಗಬೇಕಿದ್ದರೆ, ಮಹಾತ್ಮಾಜಿಯವರ ಧುರೀಣತೆಯು ಪ್ರಾಮುಖ್ಯವಾದರೂ ಕಾಂಗ್ರೆಸಿನಲ್ಲಿ ಈ ರೀತಿಯ ರಾಜಕೀಯ ಕ್ರಾಂತಿಯ ಬೀಜವನ್ನು ಬಿತ್ತಿದ ಮೊತ್ತಮೊದಲಿಗರು ಲೋಕಮಾನ್ಯ ತಿಲಕರು.

ಮಹಾರಾಷ್ಟ್ರದೇಶದ ರತ್ನಗಿರಿಯೆಂಬಲ್ಲಿ ೧೮೫೬ನೇ ಇಸವಿ ಜೂಲಾಯಿ ತಿಂಗಳ ೨೩ರಂದು ಕುಲೀನ ಮರಾಠಾಬ್ರಾಹ್ಮಣ ದಂಪತಿಗಳ ಪುಣ್ಯಗರ್ಭದಲ್ಲಿ ತಿಲಕರು ಜನ್ಮವೆತ್ತಿದರು. ಎಳೆಯ ಪ್ರಾಯದಲ್ಲಿ ಅವರಿಗೆ ಪೂನಾ ವಿದ್ಯಾಮಂದಿರದಲ್ಲಿ ಅಭ್ಯಾಸವಾಯಿತು. ಆ ವಿದ್ಯೆಯು ಪಾಶ್ಚಾತ್ಯ ಪದ್ಧತಿಯನ್ನು ಬಿಟ್ಟು ಶುದ್ಧ ಭಾರತೀಯ ಕ್ರಮದಲ್ಲಿ ಕೊಡಲ್ಪಟ್ಟ ಕಾರಣ, ಮುಂದಿನ ಅವರ ಜೀವನದಲ್ಲಿ ಆ ಸಂಸ್ಕೃತಿಯೇ ಮಹಾ ಪ್ರಭಾವವನ್ನು ಬೀರಿತ್ತು. ಅವರು ಸಂಸ್ಕೃತದಲ್ಲಿ ಮಹಾ ವಿದ್ವಾಂಸರಾಗಿದ್ದರು. ಸಂಸ್ಕೃತದಲ್ಲಿ ಸಾಹಿತ್ಯ, ಕಾವ್ಯ, ಶಾಸ್ತ್ರ ವ್ಯಾಕರಣ ಮೊದಲಾದವುಗಳನ್ನು ಚನ್ನಾಗಿ ಅಭ್ಯಾಸ ಮಾಡಿದ್ದರು. ಆದುದರಿಂದಲೇ ಮುಂದಕ್ಕೆ ಅವರು ಕಾರಾಗೃಹವಾಸದಲ್ಲಿದ್ದಾಗ ಪ್ರಪಂಚವೇ ಬೆರಗಾಗುವಂತೆ, ಗೀತೆಯ ಕುರಿತು ವಿಸ್ತಾರವಾದ ಅರ್ಥಗರ್ಭಿತವಾದ, ಅಧಿಕಾರಯುಕ್ತವಾದ 'ಗೀತಾ ರಹಸ್ಯ'ವೆಂಬ ಪುಸ್ತಕವೊಂದನ್ನು ಬರೆದು ಭಾರತೀಯ ಜ್ಞಾನಭಂಡಾರದ ಅಮೂಲ್ಯತೆಯನ್ನು ಜಗತ್ತಿಗೆ ಸಾರಿದರು. ಅದು ಮಾತ್ರವಲ್ಲದೆ ವೈದಿಕ ಸಾಹಿತ್ಯ ಚರಿತ್ರೆಯ ಕುರಿತು ಅವರು ಶೋಧನಾತ್ಮಕ ಗ್ರಂಥವನ್ನೂ ಬರೆದಿದ್ದಾರೆ. ಅವರು ಬಹಳ ಪ್ರಭಾವಶಾಲಿಗಳಾದ ಲೇಖಕರೂ ಆಗಿದ್ದರು. ಯಾವುದೇ ವಿಷಯವನ್ನೇ ಆಗಲಿ ವಿಚಕ್ಷಣತೆಯಿಂದಲೂ, ಸಂಪೂರ್ಣತೆಯಿಂದಲೂ, ತೀಕ್ಷ್ಣತೆಯಿಂದಲೂ ವಿಮರ್ಶಿಸಿ ಬರೆಯುವ ಲೇಖನಶಕ್ತಿಯು ಅವರ ಕೈವಶವಾಗಿತ್ತು. ಅಂತೆಯೇ ಅವರು ಪ್ರಸಿದ್ಧರಾದ ಪತ್ರಿಕಾ ಕರ್ತರಾಗಿದ್ದರು; ಇಂಗ್ಲಿಷಿನಲ್ಲಿ ಅಚ್ಚಾಗುವ 'ಮರಾಠಾ' ವಾರಪತ್ರಿಕೆ, ಮತ್ತು ಮರಾಠಿಯಲ್ಲಿ ಅಚ್ಚಾಗುವ 'ಕೇಸರೀ' ವಾರಪತ್ರಿಕೆ ಇವೆರಡರ ಸ್ಥಾಪಕ ಮತ್ತು ಸಂಪಾದಕರು ಅವರೇ ಆಗಿದ್ದರು.

ರಾಜಕೀಯ ಸ್ವಾತಂತ್ರ್ಯದ ಕುರಿತು ಚಳವಳಿವು ತಿಲಕರಿಗಿಂತ ಮೊದಲೇ ಆರಂಭವಾಗಿತ್ತು. ಹಲವರಿಗೆ ಪಾರತಂತ್ರ್ಯದ ಸಂಕಲೆಯು ನೋವು ಕಟ್ಟಿತ್ತು. ಸ್ವರಾಜ್ಯದ ದಿವ್ಯ ಸ್ವಪ್ನವು ಹಲವರನ್ನು ಮರುಳುಮಾಡಿತ್ತು. ಆದರೆ ಸ್ವರಾಜ್ಯದ ಪ್ರಶ್ನೆಯನ್ನು ಧೈರ್ಯಪೂರ್ವಕವಾಗಿ ಎದುರಿಸುವ ಶಕ್ತಿಯು ತಿಲಕರಂತೆ ಬೇರೆ ಯಾರಲ್ಲಿಯೂ ತುಂಬಿರಲಿಲ್ಲ. ಕೇವಲ ಮನವಿಗಳ, ಬಿನ್ನಹಗಳ ರೂಪದಿಂದ ಭಾರತೀಯ ಮುಖಂಡರನೇಕರು ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊಡನೆ ಮೊರೆಯಿಡುತ್ತಿದ್ದರು. ಲೋಕಮಾನ್ಯ ತಿಲಕರು ಅಂದಿನ ಸ್ವಾತಂತ್ರ್ಯ ಆಂದೋಲನಕ್ಕೆ ನೂತನ ಚೇತನವನ್ನು ಕೊಟ್ಟರು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ದುರ್ನೀತಿಯನ್ನು ಕಟುವಾಗಿ ಖಂಡಿಸಿದರು. ಅಂದಿನ ರಾಜ್ಯಭರಣಕ್ರಮವನ್ನು ಪ್ರತ್ಯಕ್ಷವಾಗಿ ಎದುರಿಸಿ ಸಾರ್ವಜನಿಕರಲ್ಲಿ ನಿರ್ಭಯದ ಸ್ವಾತಂತ್ರ್ಯ ವಾತಾವರಣವನ್ನು ಕಲ್ಪಿಸಿದರು. ಇಂತಹ ಪ್ರತ್ಯಕ್ಷ ಚಳವಳಿದ ಪರಿಣಾಮವಾಗಿ, ಸರಕಾರವು ಲೋಕಮಾನ್ಯ ತಿಲಕರನ್ನು ಬಂಧನದಲ್ಲಿಟ್ಟು ಬವಣೆಗೊಳಿಸಿತು!

ಜನತೆಯ ಮುಂದಾಳುಗಳಲ್ಲಿ ಇರಬೇಕಾದ ಗುಣಗಳು ತಿಲಕರಲ್ಲಿ ತುಂಬಿದ್ದುವು. ಸಾರ್ವಜನಿಕ ಭಾಷಣಕೊಡುವುದರಲ್ಲಿ ಅವರಿಗೆ ವಾಕ್ ಶಕ್ತಿಯು ಅಸ್ಖಲಿತವಾಗಿತ್ತು. ಅವರ ಭಾಷಣವೊಂದರ ಪರಿಣಾಮವಾಗಿಯೇ ೧೮೯೮ರಂದು ೧೮ ತಿಂಗಳ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಹೋಮ್ ರೂಲ್ ಚಳವಳಿದಲ್ಲಿ ಮುಂದಾಳುಗಳಾಗಿ ಕೆಲಸಮಾಡಿ ಆ ಮೇಲೆ ಅಖಿಲಭಾರತ ಕಾಂಗ್ರೆಸಿನಲ್ಲಿಯೂ ಅವರು ತಮ್ಮ ಪ್ರಭಾವವನ್ನು ಸ್ಥಾಪಿಸಿದರು.

ಲೋಕಮಾನ್ಯತಿಲಕ ಮತ್ತು ಗೋಪಾಲಕೃಷ್ಣ ಗೋಖಲೆ; ಇವರಲ್ಲಿ ಆಗಾಗ ಅಭಿಪ್ರಾಯಭೇದಗಳು ಹುಟ್ಟುತ್ತಿದ್ದುವು. ಅದರ ಉದ್ದೇಶದಲ್ಲಿ ಇಬ್ಬರೂ ಒಂದಾಗಿದ್ದರು. ಹಾಗಾಗಿ ಕೊನೆತನಕವೂ ಅನ್ಯೋನ್ಯ ಮೈತ್ರಿಯು ಅವರಲ್ಲಿ ಬೆಳೆದಿತ್ತು. ಇವರಲ್ಲಿ ಯಾರು ಹೆಚ್ಚು ಯಾರು ಕಡಿಮೆಯೆನ್ನುವುದು ಸಾಧ್ಯವಿಲ್ಲ. ತಿಲಕರು ಪ್ರತ್ಯಕ್ಷವಾಗಿ ಟೀಕಿಸುವ ದೇಶಾಭಿಮಾನಿಗಳಾದರೆ, ಗೋಖಲೆಯವರು ಸರಕಾರದ ಅಧಿಕಾರಿಗಳೊಡನೆ ಸ್ನೇಹಿತರಾಗಿ ಸೇರಿ, ಭಾರತದ ಹಿತಕ್ಕಾಗಿ ಶ್ರಮಿಸುವವರಾಗಿದ್ದರು. ಒಬ್ಬರು ದೇಶಾಭಿಮಾನಿಗಳಾಗಿ ಸರಕಾರದ ಕೋಪಕೆ ಪಾತ್ರರಾಗಿದ್ದರೆ, ಇನ್ನೊಬ್ಬರು ದೇಶಾಭಿಮಾನಿಗಳಿಂದೂ ಸರಕಾರದ ಮಿತ್ರರಿಂದೂ ಹೆಸರು ಪಡೆದಿದ್ದರು. ಅಂತೂ ಅವರ ಧೋರಣೆಗಳು ಉಗ್ರ-ಮಂದವಾಗಿದ್ದುವಲ್ಲದೆ ಉದ್ದೇಶದಲ್ಲಿ ಭೇದವಿರಲಿಲ್ಲ.

ಲೋಕಮಾನ್ಯ ತಿಲಕರಿಗೆ ಗಣಿತ ಜ್ಯೋತಿಷ ಶಾಸ್ತ್ರಗಳಲ್ಲಿ ಅದ್ಭುತವಾದ ಪಾಂಡಿತ್ಯವಿತ್ತು. ಅವರ ಶಾಸ್ತ್ರೀಯ ಜ್ಞಾನ, ರಾಜಕೀಯ ನಿರ್ಭಯ ಧುರೀಣತೆ, ಅಸದೃಶವಾದ ಮೇಧಾಶಕ್ತಿ, ಅನುಪಮ ವಾಕ್ಚರಣೆ, ಅಪ್ರತಿಹತವಾದ ಲೇಖನಸಾಮರ್ಥ್ಯ ಇವೆಲ್ಲವುಗಳ ಫಲವಾಗಿ 'ಲೋಕಮಾನ್ಯ' ಎಂಬ ಬಿರುದು ಅವರಿಗೆ ಒಪ್ಪುವಂತಹುದೇ ಆಗಿತ್ತು. ಎಂತಹ ವಿಪತ್ತು ಬಂದರೂ, ಅವುಗಳನ್ನು ಎದುರಿಸಿ ದೇಶಸೇವೆಗಾಗಿ ಸಿದ್ಧನಾಗಿ ನಿಲ್ಲುವ ಮಹಾಯೋಧರು ಅವರಾಗಿದ್ದರು. ಲೋಕದಲ್ಲಿ ಹೆಚ್ಚಿನ ಮಾನ್ಯತೆಯನ್ನು ಪಡೆಯಬೇಕಾದರೆ ಇಂತಹ ಗುಣಗಳು ಇರದೆ ಸಾಧ್ಯವೇ ಇಲ್ಲ.

ಭಾರತವು ಇಂದು ಇಂತಹ ಜಾಗೃತಿಯ ಸ್ಥಿತಿಗೆ ಮುಟ್ಟಿದ್ದರೆ, ಅದಕ್ಕಾಗಿ ಶಕ್ತಿಮೀರಿ ಸಾಹಸಮಾಡಿದ ಮೂಲ ಪುರುಷರಲ್ಲಿ ಲೋಕಮಾನ್ಯ ತಿಲಕರೂ ಒಬ್ಬರು. ಭಾರತದ ಉದ್ಧಾರಕ್ಕಾಗಿ ತಮ್ಮ ದೇಹವನ್ನು ಧಾರೆಯೆರೆದರು. ಅವರನ್ನು ಯಾವ ಮಹೋದ್ದೇಶವು- ಸ್ವಾತಂತ್ರ್ಯ ಪ್ರೇಮವು ಅಂದು ಆ ರೀತಿ ಅವಿಶ್ರಾಂತರಾಗಿ ದುಡಿಯುವಂತೆ ಮಾಡಿತೋ, ಆ ಧ್ಯೇಯವಾದ ಭಾರತದ ಸ್ವರಾಜ್ಯ ಸಾಧನೆಯ ಕಾರ್ಯದಲ್ಲಿ ನಾವು ನೆರವಾದರೆನೇ ಅವರ ಪುಣ್ಯದಿನದ ಸ್ಮರಣೆಯನ್ನು ನಿಜವಾಗಿ ಮಾಡಿದಂತಾಗುವುದು.

ಪ್ರಕಟಣೆ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 538/1931.

R. E. P. No. 354/1939.

ರಾಮಪ್ಪಯ್ಯ-ವಾದಿ-ಅರ್ಜಿದಾರ

ಮತ್ತು

ರಾಮಚಂದ್ರ ಭಟ್ಟ ಪಗ್ಯೆರೆ-ಪ್ರತಿವಾದಿಗಳು- ರೆಸ್ಪೊಂಡೆಂಟರು.

ಇವರೊಳಗೆ-

ಸದ್ರಿ ವ್ಯವಹಾರದ 8ನೇ ಮುಳಿಯಾದ 4ನೇ ಪ್ರತಿವಾದಿಳ- ಸರಸ್ವತಿ ಯಾನೆ ಸೀತಾ ಪತಿ ಅಮ್ಮಾ, ಪುಂಡಲಿಕ ಪೈ ರ ವಿಧವೆ, ಮಂಗಳೂರು ಕ್ಯಾಡಾರದಲ್ಲಿ ತಕೀಲರು ಬೋಳ ನಾಗೇಶರಾಯರ ಮನೆಯಲ್ಲಿರುವವಳು. ಇವರಿಗೆ-

ಸದ್ರಿ ಡಿಕ್ರಿ ಪ್ರಕಾರ ನಡಿಸಿದ ಮೇಲಿನ ಅಮಲ್ ಜಾರಿಯಲ್ಲಿ ಅರ್ಜಿದಾರನು ನಿಮ್ಮ ಮೇಲೆ ಕಡಿತ ಯಾಕೆ ಅಮಲ್ ಜಾರಿ ನಡಿಸ ಕೂಡದು ಎಂಬ ಸಬಬು ತೋರಿಸಲಿಕೆ [illegible] 18-8-1939ಕ್ಕೆ ಇಟ್ಟಿದೆ. ಆ ದಿನ ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ನೀವು ಹಾಜರಾಗಬೇಕೆಂತ ಈ ಮೂಲಕ ನಿಮಗೆ ತಿಳಿಸಿಕೊಡೋಣವಾಗಿದೆ. ಅದಕ್ಕೆ ತಪ್ಪಿದ್ದಲ್ಲಿ ನಿಮ್ಮ ಗೈರಹಾಜ್ರಿಯಲ್ಲಿ ಸದ್ರಿ ಅಮಲ್ ಜಾರಿಯು ಮುಂದರಿಸಲಾದೀತು ಎಂಬ ಸಂಗತಿ ನೀವು ಈ ಮೂಲಕ ತಿಳಿದಿರತಕ್ಕದ್ದು.

ಕೋರ್ಟು ಹುಕುಂ ಪ್ರಕಾರ.

ಮೊಕ್ಕಾಂ, ಕಾರ್ಕಳ } M. S. ADHIKARI,
ತಾ. 29-7-'39. } ಅರ್ಜಿದಾರನ ಕಡೆ ವಕೀಲ.

Kanarese No. 10



"ದುಬಾರಿ ಗುಣವುಳ್ಳ ಕುಟಿಕುರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆನು. ಇದು ನನ್ನ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೇ ಅಂದವಾಗಿರಿಸುವುದು. ಪರಿಮಳ ಮತ್ತು ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಸಂತವಿಸಿ ವಾಸಿಮಾಡಿ ವಿಷಹಾರಕವಾದ ಗುಣವಿರುವುದು. ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ನಿಮ್ಮ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡುವುದು. ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ (Cuticura) ಸಾಬೂನನ್ನು ಕೊಂಡುಕೊಳ್ಳಿರಿ!

ಕುಟಿಕುರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು. ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು-ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು.

ಕುಟಿಕೂರಾ ಸೋಪ್

Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ (ಮಿತಿಯಲಿಕ್ಕೆ) ಮತ್ತು ಸಣ್ಣ ಬಿಲ್ಲೆಯ (ಪರಿಚಯದ ಸೈಜು) ಆಕಾರದಲ್ಲಿಯೂ ದೊರಕುವುದು.

ಮನೋಹರ ಗ್ರಂಥಮಾಲಾ

ಧಾರವಾಡ.

ಸ್ವತಂತ್ರ ಕಥೆ, ಕಾದಂಬರಿ, ನಾಟಕ, ಹರಟೆ ಮೊದಲಾದ ಮನಮೆಚ್ಚಿಸುವ ಸರಸ ವಾಙ್ಮಯದ ಸುಗ್ಗಿ! ಅಖಿಲ ಕರ್ನಾಟಕದಲ್ಲಿ ಹೆಸರುಪಡೆದ ಬರಹಗಾರರ ಕೈವಾಡ ಮನದ ಹಸಿವೆಯನ್ನು ಹಿಂಗಿಸಿಕೊಳ್ಳಿ!

ಒಂದು ವರ್ಷದಲ್ಲಿ ೧೫೦೦ ಪುಟಗಳುಳ್ಳ ಆರು ಸರಸ ಗ್ರಂಥಗಳು!

ವಾರ್ಷಿಕ ಚಂದಾ ರೂ. ೩-೮-೦

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ತೋರಿಸಲಾಗುವುದು.

ವ್ಯವಸ್ಥಾಪಕ,

ಮನೋಹರ ಗ್ರಂಥಮಾಲಾ

ಧಾರವಾಡ.

ಸ್ವೀಕಾರ—ವಿಮರ್ಶೆ

ಕಾರಣ ಪುರುಷ–(ಸಾಮಾಜಿಕ ಕಾದಂಬರಿ) ಬರೆದವರು — ಶ್ರೀ ರಾ. ಶ್ರೀ. ಮುಗಳಿ, ಎಂ. ಎ. ಬಿ. ಟಿ. ಪ್ರಕಾಶಕರು — ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ಕ್ರೌನ್ ೧/೮ ಆಕಾರದ ೧೪೯ ಪುಟಗಳು ಬೆಲೆ ರೂ ಒಂದು

ಇದೊಂದು ಸ್ವತಂತ್ರ ಸಾಮಾಜಿಕ ಕಾದಂಬರಿ ಕನ್ನಡವೇ ಕಥಾವಸ್ತು, ಕನ್ನಡದ ಸೇವೆಗಾಗಿ ಹಂಬಲಿಸುವ ಕಾದಂಬರಿಕಾರರು, ಕನ್ನಡಿಗರಲ್ಲಿ ಇಂದು ತಲೆಯೆತ್ತಿರುವ ಸೇವಾಕಾಂಕ್ಷೆಯನ್ನು, ಇಂದು ಆಗುತ್ತಿರುವ ಕಾರ್ಯಗಳ ದೂಷರೇಖೆಗಳನ್ನು, ಇಂದಿನ ಧುರೀಣರ ಹಲವಾರು ವ್ಯರ್ಥಶ್ರಮಗಳನ್ನು, ಯುವಕರ ಬಗೆಯ ವಿಧವಿಧ ಭಾವನೆಗಳನ್ನು ಕಥಾನಿರೂಪಣದ ರೂಪದಲ್ಲಿ ಚಂದವಾಗಿ ವಿವರಿಸಿದ್ದಾರೆ ಭಾರತದ ಸೇವೆ, ಕನ್ನಡದ ಸೇವೆ, ಇವುಗಳೆರಡೂ ಅಭಿನ್ನವಾಗಿ ಹೆಣೆದಿರುವ ವಿಷಯವೂ ಇಲ್ಲಿ ಒಡಮೂಡಿದೆ ಇಂದಿನ ವ್ಯರ್ಥಶ್ರಮಗಳನ್ನು ಕಂಡು, ನಿರಾಶರಾಗದೆ, ಮುಂದಕ್ಕೆ ಕನ್ನಡವನ್ನು ಉದ್ಧರಿಸುವ ಒಬ್ಬ ಕಾರಣಪುರುಷನು ಬರುತ್ತಾನೆ, ಅಂತಹ ಕಾರಣಪುರುಷನ ಬರವಿನ ಕಾಲಕ್ಕೆ ಭಾರತ ಕನ್ನಡ ಕೂಡಿಯೇ ಕಾಣುವವು ಎಂಬ ಆಸೆ ಭರವಸೆಗಳ ಉದ್ಗಾರದಿಂದ ಅಂತಹ ದಿವ್ಯ ಸ್ವಪ್ನದಿಂದ ಕಥೆಯು ಕೊನೆಗೊಳ್ಳುತ್ತದೆ.

ವಾಮಣ್ಣ, ಆತನ ಮಡದಿ ಪದ್ಮಕ್ಕ ಇಂತಹ ದಂಪತಿಗಳು ಕನ್ನಡಿಗರ ಮನೆಮನೆಯಲ್ಲಿಯೂ ಕಾಣುವಂತವರು. ವಾಮಣ್ಣ ಸಾಹಸಿ ಆದರ್ಶವಾದಿ, ಆಧುನಿಕ ಉತ್ತಮ ಜೀವನದ ಸವಿಗಾಗಿ ಆಶಿಸುವವ, ಕನ್ನಡದ ಸೇವೆಗಾಗಿ ಹಂಬಲಿಸುತ್ತಾನೆ, ಜೀವನದ ಎಂತಹ ನಿಷ್ಠುರಗಳಲ್ಲಿಯಾದರೂ ಕನ್ನಡದ ಪ್ರೇಮವು ಆತನ ಹೃದಯವನ್ನು ಅಪ್ಪಿ ಹಿಡಿದೇ ಇರುತ್ತದೆ ಇದರೆ ಪದ್ಮಕ್ಕ ಹಳ್ಳಿಯ ಗರತಿ ಶೀಲಾ ನಾಚಿಕೆಯ ಸ್ವಭಾವದಾಕೆ ಆಧುನಿಕ ಜೀವನದ ಬೆಳಕು ಕಾಣದವಳು ಗಂಡನನ್ನು ಹೊಂದಿಕೊಂಡಿದ್ದರೂ ಆತನ ಮನದ ಏರಿಳಿತಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಅರಿಯಳಾಕೆ, ಆದರೆ ತನ್ನ ಮೌನದ ಪ್ರೇಮ ಸಂಭಾವನೆಯಿಂದಲೇ ಕೈಹಿಡಿದ ಗಂಡನಿಗೆ ಆನಂದವನ್ನು ಉಣ್ಣಿಸುತ್ತಾಳೆ ಇವರೇ ಈ ಕನ್ನಡಿಗ ದಂಪತಿಗಳೇ ಕಥಾನಾಯಕ—ನಾಯಕಿಯರು.

ಇನ್ನು ಕೆಲವು ಆದರ್ಶ ಜೀವನಗಳನ್ನು ಕಾದಂಬರಿಕಾರರು ಚಿತ್ರಿಸಿದ್ದಾರೆ ಪ್ರಪಂಚದ ಸತ್ಯವನ್ನು ಕಂಡು ಜೀವನವನ್ನು ಒಂದು ನಿಶ್ಚಯದ ಹಾದಿಯಲ್ಲಿ ನಡೆಸಿ, ಕನ್ನಡದ ಸೇವೆಯೇ ಜೀವಾಳವಾಗಿ ಉಳ್ಳ 'ಕನ್ನಡ ಕೋಗಿಲೆ' ಆನಂದ ಮೂರ್ತಿಯವರು, ಜೀವನದಲ್ಲಿ ರುದ್ರ ಸತ್ಯವನ್ನು ಶೋಧಿಸುವ ಸಾಹಸಮಾಡಿದ ಪ್ರೊ ಸತ್ಯಕಾಮರು, ಗರ್ವದ ಗುಡ್ಡೆಯಿಂದ ನಿರಭಿಮಾನದ ಸುಂದರ ಸಮತಲಕ್ಕೆ ಬಂದು ಮುಟ್ಟಿದ ಸತ್ಯಕಾಮರ ಪತ್ನಿ ಕಮಲ ಕಿಶೋರಿ ಜೀವನವನ್ನು ತಮಾಷೆಯಾಗಿ ಕಂಡ ಮುರಳಿ, ಎಡೆಗಾಣಿಕೆ ಸ್ವಭಾವಗಳಿಲ್ಲದ ಕನ್ನಡ ಧುರೀಣರಾದ ಕಲ್ಯಾಣರಾಯರು, ಪ್ರಪಂಚವು ಹೇಗಿದ್ದರೂ ತನ್ನ ಸ್ವಾರ್ಥದ ದುಡಿತದಲ್ಲಿಯೇ ಜೀವ ಸವೆವ ಭೀಮರಾಯರು, ದರಿದ್ರ ಕನ್ನಡಿಗ ನರಸ ಮತ್ತು ಆತನ ಸಂಸಾರ, ಸಮಾಜದ ಕಟ್ಟಳೆಯಿಂದ ಬಾಳುವೆಯಲ್ಲಿ ವಿಶ್ರಾಂತಿ ಪಡೆಯದ ವಿಧವೆ, ಸುಗುಣಾಬಾಯಿ ಈ ಎಲ್ಲಾ ಕಥಾಪಾತ್ರಗಳೂ ಇಂದಿನ ಕನ್ನಡದ ಸ್ವರೂಪವನ್ನು ನಮ್ಮ ಕಣ್ಮುಂದೆ ಕಟ್ಟುತ್ತವೆ ಇಷ್ಟು ಪಾತ್ರಗಳಿಂದ, ಕನ್ನಡ ಜೀವನದ ವಿವಿಧ ರೀತಿಯ ಬಾಳುವೆಗಳನ್ನು ಚಿತ್ರಿಸಲು ಸಾಧ್ಯವೆಂಬೇ ಎಂದೂ ಅನಿಸುತ್ತದೆ. ಕನ್ನಡ ಪರಿಸ್ಥಿತಿಯನ್ನು ತೆರೆದ ಕಣ್ಣಿಂದ ಪರೀಕ್ಷಿಸಿದ ಬರೆಹಗಾರರು ಈ ಮನೋಹರವಾದ ಕಥಾವಸ್ತುವನ್ನು ಆಯ್ದುಕೊಂಡಿದ್ದಾರೆ

ಕವಿಗಳಾದ ಶ್ರೀ ಮುಗಳಿಯವರು ಹಲವೆಡೆ ವಾಕ್ಯಗಳಲ್ಲಿಯೂ ಕವಿತಾ ಭಾವನೆಗಳನ್ನು ಹರಿಸಿದ್ದಾರೆ ಅಚ್ಚಗನ್ನಡ ಸರಣಿಯು ಎದುಗನ್ನು ಸೆಳೆಕೊಂಡು ಮುಂದುವರಿಯುತ್ತದೆ ಕನ್ನಡದ ಬಗೆಗಾಗಿ, ಕನ್ನಡಿಗರ ಕರ್ತವ್ಯಕ್ಕಾಗಿ ಕನ್ನಡ ಯುವಕರ ಆದರ್ಶಕ್ಕಾಗಿ ಅಲ್ಲಲ್ಲಿ ಅನೇಕ ಮಾತುಗಳು ಉಪದೇಶ ವಾಕ್ಯದಂತೆ ಹೊರಬಿದ್ದಿವೆ ಇದೀ ಕಾದಂಬರಿಯ ಕಥಾ ನಿರ್ಮಾಣವೇ ಕನ್ನಡದ ಉದ್ಧಾರದ ಸಲುವಾಗಿರುವ ಒಂದು ದಿವ್ಯ ಕಲ್ಪನೆಯಾದುದರಿಂದ, ಅಂತಹ ಮಾತುಗಳು ಬರುವುದು ಸಂದರ್ಭೋಚಿತವೂ, ಸುಂದರವೂ ಆಗಿವೆ

ಇತರ ಭಾಷೆಗಳಲ್ಲಿರುವ ಉತ್ತಮ ಸ್ವತಂತ್ರ ಕಾದಂಬರಿಗಳನ್ನೇ ಓದಿ ಅಭ್ಯಾಸವಾಗಿರುವ ಕನ್ನಡಿಗರಿಗೆ ಕನ್ನಡದಲ್ಲಿಯೂ ಸ್ವತಂತ್ರವಾದ ಮನೋಹರ ಕಾದಂಬರಿಗಳ ಬಗೆಗೆ ಆಸೆ ಹುಟ್ಟುವುದು ಸಹಜವಿದೆ. ಅಂತಹ ಬಹುಕಾಲದ ನಿರೀಕ್ಷೆಯನ್ನು ಈಗ ಶ್ರೀ ಮುಗಳಿಯಂತ ಸಮರ್ಥ ಕಾದಂಬರಿಕಾರರು ಮುಂಬರಿದು ಕೈಗೊಂಡು ಸಲ್ಲಿಸಲು ಯತ್ನಿಸುವುದು ಕನ್ನಡದ ಶುಭಚಿಹ್ನೆಯಾಗಿದೆ ಆಧುನಿಕ ಕನ್ನಡ ಸಾಹಿತ್ಯದ ಕೆಲವು ಉತ್ತಮ ಕೃತಿಗಳಲ್ಲಿ ಇದೂ ಒಂದಾಗಿ ಬಹುಕಾಲ ಬಾಳುವಂತಹದಾಗಿದೆ.

— ಕಯ್ಯಾರ

PAPER

An observant Englishman, or a Finn, may well wonder at a recent development in the States of Georgia, Florida, Alabama, Mississippi and Lousiana. As one drives through hundreds of miles of pine forest, one sees a new industry in the making that threatens Canadian and Finnish paper pulp.

Hitherto, pulpwood for newspapers has come mostly from bleak regions having forests of spruce and fir. But an American chemist has recently developed a process for utilizing the much quicker growing pines of the southern states. Of these there are literally millions of acres.

Unfortunately, these southern pine forests are mostly on the Atlantic coastal plain and along the Gulf Coast where malaria is more serious than in any other part of the United States. Neither Canada nor Finland needs to meet this hazard, but their trees grow far more slowly.

The health authorities in these American states are cooperating with the very large paper companies who are eagerly grasping at this new source of pulpwood. Placards are posted telling the workers that they invite malaria if they don't protect themselves with quinine.

The prophylactic dose preferred in America is six grains of quinine a day, while actual malaria sufferers are given twenty grains a day for 5—7 days, children proporationately less. To thousands of negro workers in this new paper industry quinine is as necessary as their logging machinery.

ಮಿತವ್ಯಯದ ಟಿನ್ನುಗಳು!

ದೊಡ್ಡ ಸೈಜು (8 ಔನ್ಸು) ರೂ 1–4–0
(ದೊಡ್ಡ ಬಾಟ್ಲಿಗಳಲ್ಲಿರುವಷ್ಟೇ ಇರುತ್ತದೆ)
ಸಣ್ಣ ಸೈಜು (4 ಔನ್ಸು) ಆಣೆ 11

ಹೆಚ್ಚು ಬೆಲೆ ಯಾಕೆ ಕೊಡುತ್ತೀರಿ?

ಎಂಡ್ರೂಸ್ ಮಿತವ್ಯಯದ ಟಿನ್ನುಗಳಲ್ಲಿ ಆರೋಗ್ಯವನ್ನುಂಟುಮಾಡುವ ಗುಣವೂ, ಮನೋಹರವಾದ ರುಚಿಯೂ ಉತ್ತಮಗೊಳಿಸಲ್ಪಟ್ಟಿದೆ ಮತ್ತು 8 ಔನ್ಸಿನ ದೊಡ್ಡ ಸೈಜಿನ ಟಿನ್ನಿಂದ 6 ಆಣೆಯೂ 4 ಔನ್ಸಿನ ಸಣ್ಣ ಟಿನ್ನಿನಿಂದ 5 ಆಣೆಯೂ ನಿಮಗೆ ಉಳಿತಾಯವಾಗುತ್ತದೆ ಮೊದಲಿನ ಬಾಟ್ಲಿಯ ಕ್ರಯವು ರೂ 1–10–0 ಮತ್ತು ರೂ 1 ಆಗಿತ್ತು ಅಸಾಮಾನ್ಯವಾದ ಸೂಕ್ಷ್ಮದಿಂದ ತಯಾರಿಸಲ್ಪಟ್ಟ ಈ ಎಂಡ್ರೂಸ್ ಲವಣವು ಭಯಂಕರವಾದ ಅಜೀರ್ಣದ ಭಯವನ್ನು ನಿವಾರಿಸುತ್ತದೆ, ಜೀರ್ಣೇಂದ್ರಿಯಗಳನ್ನು ಸರಿಯಾಗಿರಿಸುತ್ತದೆ ಆಮ್ಲವನ್ನು ನಾಶಮಾಡುತ್ತದೆ ಮತ್ತು ದೇಹದ ಒಳಭಾಗಗಳನ್ನು ಪುಷ್ಟಿಗೊಳಿಸುತ್ತದೆ

ಈಗಲೇ ಸೇವಿಸಲು ಪ್ರಾರಂಭಿಸಿರಿ–ಪ್ರತಿದಿವಸ ಬೆಳಿಗ್ಗೆ ಒಂದು ಯಾ ಎರಡು ಚಮಚೆ ಎಂಡ್ರೂಸ್ ಲವಣವನ್ನು ಸೇವಿಸಿರಿ–ಆರೋಗ್ಯವನ್ನು ಕಾಪಾಡುವುದಕ್ಕೆ—ಎಂಡ್ರೂಸ್ ಲವಣವನ್ನು ಯಾವಾಗಲೂ ಸೇವಿಸಿರಿ.

ಎಂಡ್ರೂಸ್ ಲವಣಕ್ಕೆ ಜೀರ್ಣಕರಣದಿಂದ ವ್ಯತಿರಿಕ್ತವಾದ ಸ್ಥಾನವಾಗಿ ಉಳಿವ ಒಂದು ಗುಣವಿರುತ್ತದೆ ಇದರಿಂದಹೊಟ್ಟೆಯ ಯಾವುದಾದರೂ ಹಾನಿ ಉಂಟಾದರೆ ಕ್ರಮಗೊಳಿಸುತ್ತದೆ

ಎಂಡ್ರೂಸ್ ಯಕೃತ್ ಲವಣದಿಂದಲೂ ಮಹಾ ಗುಣವು ದೊರೆಯುವುದಾದರೆ ಒಂದು ಯಾ ಎರಡು ಚಮಚೆಯಷ್ಟು ಲವಣವನ್ನು ಒಂದು ಗ್ಲಾಸು ನೀರಿಗೆ ಹಾಕಿ ಕದಡಿಸಿರಿ ಈ ಟಿನ್ನುಗಳಲ್ಲಿ ಬಾಟ್ಲಿಗಳಲ್ಲಿರುವಷ್ಟೇ ಲವಣವಿರುತ್ತದೆ ಆದರೆ ಬೆಲೆ ಕಡಿಮೆ!

ಎಂಡ್ರೂಸ್ ಲಿವರ್ ಸಾಲ್ಟು ಬಹಳ ಶುದ್ಧವಾಗಿ ತಯಾರಿಸಲ್ಪಡುತ್ತದೆ ಮತ್ತು ಇದನ್ನು ತಯಾರಿಸುವಾಗ ಇದಕ್ಕೆ ಕೈ ಸೋಂಕುವುದಿಲ್ಲ
ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ
ಎಂಡ್ರೂಸ್ ಲಿವರ್ ಸಾಲ್ಟ್ ದೇಹದ ಒಳಭಾಗವನ್ನು ಶುದ್ಧಪಡಿಸುತ್ತದೆ!



654A

ANDREWS
LIVER SALT
for Inner Cleanliness

ವಿಜ್ಞಾನ ಯುಗ

ಸೂರ್ಯಸ್ನಾನದ ಪ್ರಯೋಜನ

ಸೂರ್ಯಾರಾಧನೆಯ ಇತಿಹಾಸವು ಪ್ರಪಂಚದಲ್ಲಿ ಬಹಳ ಹಿಂದಿನದು. ಪ್ರಾಚೀನ ಆರ್ಯರು ಸೂರ್ಯಾರಾಧಕರಾಗಿದ್ದರು. ಈಜಿಪ್ತಿನವರು ಅರ್ ಎಂಬ ಸೂರ್ಯ ದೇವತೆಯನ್ನು ಆರಾಧಿಸುತ್ತಿದ್ದ ಚರಿತ್ರೆಯು ಕ್ರಿಸ್ತಜನನಕ್ಕೇ ಹಿಂದಿನ ಕಥೆಯಾಗಿದೆ. ಪ್ರಾಚೀನ ಗ್ರೀಕ್ ರೋಮನರೂ ಸೂರ್ಯನ ವಿಷಯ ತಿಳಿದಿದ್ದರು. ಎಲ್ಲೋಪೆಥಿಕ್ ಮದ್ದಿನ ಆರಂಭಿಕನಾದ ಹಿಪ್ಪೋಕ್ರೇಟ್ಸ್ ಎಂಬವನೇ ಸೂರ್ಯಸ್ನಾನದ ಮಹತ್ವವನ್ನು ತಿಳಿದಿದ್ದ. ನವೀನ ಕಾಲೀನ ಡಾಕ್ಟರನಾದ ಫಿನ್ಸನ್ ಎಂಬವನು ಚರ್ಮಕ್ಷಯವನ್ನು ಸೂರ್ಯಸ್ನಾನದಿಂದ ಗುಣಪಡಿಸಿದನು. ಸ್ವಿಜರ್ಲೆಂಡಿನ ಡಾಕ್ಟರನೊಬ್ಬನು ಅನೇಕ ವರ್ಷಗಳ ನಗರವಾಸಗಳನ್ನು ಮುಗಿಸಿ ತನ್ನ ಜನ್ಮ ಸ್ಥಳವಾದ ಹಳ್ಳಿಗೆ ಬಂದು ಅಲ್ಲಿ ನಿಶಕ್ತರಾದ ಜನರನ್ನು ಕೇವಲ ಸೂರ್ಯಸ್ನಾನದಿಂದಲೇ ಗುಣಪಡಿಸಿದನು.

ಆದರೆ ಸೂರ್ಯಸ್ನಾನವು ಯೋಗ್ಯ ರೀತಿಯಿಂದ ಮಾಡಿದಲ್ಲಿ ಮಾತ್ರ ದೇಹವನ್ನು ಆರೋಗ್ಯದಿಂದಿಡುತ್ತದೆ. ಹಾಗೆ ಯಾವ ಯಾವ ರೋಗಗಳಿಗೆ ಹೇಗೆ ಹೇಗೆ ಪ್ರಯೋಗಮಾಡಿ ಗುಣಪಡಿಸಬಹುದೆಂಬ ವಿಷಯವು ಇನ್ನೂ ಸ್ಪಷ್ಟವಾಗಿರುವುದಿಲ್ಲ.

ಸರಿಯಾದ ರೀತಿಯಿಂದ ಪಡೆದ ಸೂರ್ಯಸ್ನಾನವು ಆರೋಗ್ಯವನ್ನು ಹೆಚ್ಚಿಸಿ, ಆಹಾರ ರುಚಿಯನ್ನೂ, ಜೀರ್ಣಶಕ್ತಿಯನ್ನೂ ಅಭಿವೃದ್ಧಿಗೊಳಿಸುತ್ತದೆ. ಆಯಾಸವನ್ನು ಕಡಿಮೆಮಾಡಿ ಸುಖನಿದ್ರೆಯನ್ನು ಕೊಡುತ್ತದೆ. ಮಾಂಸಖಂಡಗಳನ್ನು ಪುಷ್ಟಿಗೊಳಿಸಿ, ರೋಗವು ತಗಲದಂತೆ ಶರೀರವನ್ನು ಶಕ್ತಿಗೊಳಿಸುತ್ತದೆ; ಮಾತ್ರವಲ್ಲದೆ ಬುದ್ಧಿಶಕ್ತಿಯನ್ನೂ ಹೆಚ್ಚಿಸುತ್ತದೆ. ಚರ್ಮವನ್ನು ನಿರ್ಮಲಗೊಳಿಸಿ ಹೊಳಪುಳ್ಳದ್ದಾಗಿ ಮಾಡುತ್ತದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ, ರಕ್ತಶುದ್ಧಿಯನ್ನು ಮಾಡಿ, ರಕ್ತವನ್ನು ಶರೀರದಲ್ಲಿ ಹೆಚ್ಚಿಸುತ್ತದೆ.

ಆದರೆ ಅನೇಕ ಸಲ, ಅಯೋಗ್ಯ ಮತ್ತು ಅಕ್ರಮ ರೀತಿಯಿಂದ ಸೂರ್ಯಸ್ನಾನ ಮಾಡಿದವರ ಕುರಿತು ಪ್ರಕೃತಿಯೇ ಅವರನ್ನು ಎಚ್ಚರಗೊಳಿಸುತ್ತದೆ. ಹೆಚ್ಚಾಗಿ ಮೈ ಉರಿಯುವಿಕೆ ಸುಟ್ಟು ಹೋದಂತಹ ಚರ್ಮ, ಮಾಂಸಖಂಡಗಳ ಆಯಾಸ, ವಿಶ್ರಾಂತಿಯಿಲ್ಲದ ನಿದ್ದೆ, ಮೈ ಕಾವು, ಅಜೀರ್ಣ ಇವೇ ಮೊದಲಾದವು ಮನುಷ್ಯನನ್ನು ಅನಾರೋಗ್ಯದಿಂದ ಎಚ್ಚರಗೊಳಿಸುತ್ತವೆ. ಇಂತಹ ಚಿಹ್ನೆಗಳು ತಲೆದೋರಿದೊಡನೆಯೇ ಪ್ರತಿಯೊಬ್ಬನೂ ತನ್ನ ಶರೀರದ ವಿಷಯದಲ್ಲಿ ಜಾಗ್ರತೆ ಕೈಕೊಳ್ಳುತ್ತಾನೆ. ಹಲವು ಸಲ ಸೂರ್ಯ ಕಿರಣಗಳ ಅಕ್ರಮ ಉಪಯೋಗವೇ ಇಂತಹ ಅನಾರೋಗ್ಯದ ಸೂಚನೆಯನ್ನು ಕೊಡುವುದುಂಟು. ಹೆಚ್ಚಾಗಿ ಪ್ರಾಯಕುಂದಿದ ತರುಣರಿಗೆ ಇಂತಹ ಅನಾರೋಗ್ಯವು ಹುಟ್ಟುವ ಹಾಗಿಲ್ಲ. ಎಳೆಯವರು ಮತ್ತು ಮುದುಕರು ಬಹಳ ಜಾಗರೂಕರಾಗಿರಬೇಕು.

ಹೃದಯದ ರೋಗದಿಂದ ನರಳುವವರು, ಮೈಕಾವುಳ್ಳವರು, ಅಂಡಕೋಶದ ತೊಂದರೆಯುಳ್ಳವರು, ಮಧುಮೇಹದ ರೋಗಿಗಳು, ಹೃತ್ಕೋಶದ ಕ್ರಿಯವುಳ್ಳವರು, ಇಂತಹವರೆಲ್ಲರೂ ಸೂರ್ಯಸ್ನಾನವನ್ನು ಪಡೆಯುವುದಕ್ಕಿಂತ ಮೊದಲು, ತಮ್ಮ ತಮ್ಮ ಡಾಕ್ಟರರ ಸಲಹೆಯನ್ನು ಪಡೆಕೊಳ್ಳುವುದು ಒಳ್ಳೆಯದು.

ಸೂರ್ಯ ಸ್ನಾನದ ಕುರಿತು ಡಾ। ರೋಲಿಯರೆಂಬವರು ಈ ಸೂಚನೆಯನ್ನು ಕೊಡುತ್ತಾರೆ. ಶರೀರವನ್ನು ಬತ್ತಲೆಯಾಗಿ ಗಾಳಿಗೆ ಒಡ್ಡಬೇಕು. ಮೊದಲನೆಯ ದಿನ ಐದು ನಿಮಿಷಗಳ ವರೆಗೆ ಕೇವಲ ಪಾದಗಳಿಗೆ ಸೂರ್ಯನ ಬೆಳಕು, ಎರಡನೆಯ ದಿನ ಹತ್ತು ನಿಮಿಷಗಳ ವರೆಗೆ ಕಾಲುಗಳಿಗೆ, ಮೂರನೆಯ ದಿನ ಹದಿನೈದು ನಿಮಿಷಗಳ ವರೆಗೆ ಪಾದಗಳಿಗೆ, ಹತ್ತು ನಿಮಿಷಗಳ ವರೆಗೆ ಕಾಲುಗಳಿಗೆ, ಐದು ನಿಮಿಷಗಳ ವರೆಗೆ ತೊಡೆಗಳಿಗೆ, ನಾಲ್ಕನೆಯ ದಿವಸ, ಇಪ್ಪತ್ತು ನಿಮಿಷಗಳ ವರೆಗೆ ಪಾದಗಳಿಗೆ, ಹದಿನೈದು ನಿಮಿಷಗಳ ವರೆಗೆ ಕಾಲುಗಳಿಗೆ, ಹತ್ತು ನಿಮಿಷಗಳ ವರೆಗೆ ತೊಡೆಗಳಿಗೆ ಐದು ನಿಮಿಷಗಳ ವರೆಗೆ ಹೊಟ್ಟೆಗೆ, ಐದನೆಯ ದಿನ, ಇಪ್ಪತ್ತೈದು ನಿಮಿಷಗಳ ತನಕ ಪಾದಗಳಿಗೆ, ಇಪ್ಪತ್ತು ನಿಮಿಷ ಕಾಲುಗಳಿಗೆ, ಹದಿನೈದು ನಿಮಿಷ ತೊಡೆಗಳಿಗೆ, ಹತ್ತು ನಿಮಿಷ ಹೊಟ್ಟೆಗೆ, ಐದು ನಿಮಿಷಗಳ ತನಕ ಎದೆಗೆ, ಹಾಗೆಯೇ ಆರನೆಯ ದಿನ ಐದೈದು ನಿಮಿಷಗಳನ್ನೂ ಹೆಚ್ಚಿಸಿ ಇಡೀ ಶರೀರಕ್ಕೆ ಸೂರ್ಯ ಸ್ನಾನವನ್ನು ಕೊಡಬೇಕು. ಏಳನೇ ದಿನದ ಆರಂಭಿಸಿ, ಕ್ರಮಪ್ರಕಾರ ಸಮಯವನ್ನು ಹೆಚ್ಚಿಸುತ್ತಾ ಎರಡು ಮೂರು ಗಂಟೆಗಳ ತನಕ ಸೂರ್ಯಸ್ನಾನ ಪಡೆಯಬಹುದು. ಒಳ್ಳೆಯ ಆರೋಗ್ಯವಂತರಾದವರು ಈ ಅಭ್ಯಾಸವನ್ನು ಬೇಸಿಗೆಯಲ್ಲೂ ಮುಂದವರಿಸಬಹುದು. ಆದರೆ ಅವರಿಂದ ಒಬ್ಬ ಡಾಕ್ಟರರು ಯಾರೇ ಆಗಲಿ ಪ್ರಥಮತಃ ಹದಿನೈದು ನಿಮಿಷಗಳಿಗಿಂತ ಹೆಚ್ಚು ಸೂರ್ಯಸ್ನಾನ ಮಾಡಬಾರದೆಂದು ಹೇಳುತ್ತಾರೆ.

ಮಕ್ಕಳ ವಿಷಯದಲ್ಲಿ ಇದು ಅಗಲಾರದು. ಅವರನ್ನು ವಾರಕ್ಕೆ ಕೇವಲ ಒಂದೆರಡು ದಿನ ಮಾತ್ರ ಬಹಳ ಅಲ್ಪ ಸಮಯಗಳ ತನಕ ಸೂರ್ಯ ಸ್ನಾನ ಮಾಡಿಸಬಹುದು.

ರಕ್ತದ ಅಧಿಕ ಒತ್ತಾಟ –

ಆಗಾಗ ಮಹಾತ್ಮಾ ಗಾಂಧಿಯವರು ರಕ್ತದ ಅಧಿಕ ಒತ್ತಾಟದಿಂದ ಬೇನೆಬೀಳುತ್ತಿರುವರೆಂದು ನಾವು ವರ್ತಮಾನ ಪತ್ರಿಕೆಗಳಲ್ಲಿ ಓದುತ್ತೇವೆ. ಆದರೆ ಇದೆಂತಹವುದು ಎಂಬುದು ನಮ್ಮಲ್ಲಿ ಸಹಜವಾಗಿ ಕುತೂಹಲವನ್ನು ಹುಟ್ಟಿಸುವಂತಹ ವಿಷಯವಾಗಿದೆ. ಹೃದಯದ ಪ್ರತಿಯೊಂದು ಹೊಡೆತಕ್ಕೂ, ಸ್ವಲ್ಪ ರಕ್ತವು ರಕ್ತನಾಳಗಳಲ್ಲಿ ತುಂಬಿಸಲ್ಪಡುತ್ತದೆ, ರಕ್ತನಾಳದ ಪದರಿಯಲ್ಲಿ ಒತ್ತಲ್ಪಡುವ ರಕ್ತದ ಒತ್ತಾಟವೇ "ರಕ್ತದ ಒತ್ತಾಟ"ವೆಂದು ಕರೆಯಲ್ಪಡುತ್ತದೆ. ಈ ರಕ್ತದ ಒತ್ತಾಟದ ಪರಿಣಾಮವು, ಹೃತ್ಕೋಶದ ಬಡಿತದ ಶಕ್ತಿಯನ್ನೂ, ರಕ್ತದ ಪರಿಮಾಣವನ್ನೂ, ಪದರಿಯ ನಯತ್ವವನ್ನೂ ಹೊಂದಿಕೊಂಡು ಇರುತ್ತದೆ.

ನಾಲ್ವತ್ತು ವರ್ಷಕ್ಕಿಂತ ಮೇಲಿನವರಿಗೆ ಅಧಿಕ ರಕ್ತದ ಒತ್ತಾಟದ ಬೇನೆಯು ಇರುವುದು ಸಾಧಾರಣವಾಗಿ ಕಡಿಮೆ. ಈ ರಕ್ತದ ಒತ್ತಾಟವನ್ನು ಅಳೆಯಲು ಈಗ ಯಂತ್ರವೂ ಸಿದ್ಧವಾಗಿದೆ. ಹೀಗೆ ರಕ್ತದ ಅಧಿಕ ಒತ್ತಾಟವು ಹೆಚ್ಚು ಸಮಯದ ವರೆಗೆ, ಆದರೆ ಇದರಿಂದ ಹೃದಯದಲ್ಲಿ ಒಂದು ಕಿಡ್ನಿಗಳಲ್ಲಿ ಒಂದು ರೀತಿಯಿಂದ ಹೊಸರೋಗವೇ ಆಗುತ್ತದೆ. ಹೀಗೆ ಒಮ್ಮೆ ಅದು ಆಗಿಬಿಟ್ಟರೆ ಮತ್ತೆ ಎಂದೆಂದೂ ಈ ರಕ್ತದ ಅಧಿಕ ಒತ್ತಾಟವು ಇದ್ದೇ ಇರುತ್ತದೆ. ಆದರೆ ಹೀಗಾಗಲು ಕಾರಣವೇನೆಂಬ ವಿಷಯವಾಗಿ ಇನ್ನೂ ವೈದ್ಯಕೀಯ ಜನರು ತಿಳುವಳಿಕೆಗೆ ಬಂದಿಲ್ಲ. ಇದು ಬೇರೆ ಯಾವ ರೋಗದ ಪರಿಣಾಮವಾಗಿ ಆಗುವಂತಹದ್ದಿದ್ದರೆ, ಅನೇಕ ಒಂದು ರೋಗವೆಂದು ತಿಳಿದರೆ. ಇದು ಕಟ್ಟಕಡೆಗೆ ಜೀವನದ ಕೊನೆಗಾಣಿಸ ಮತ್ತು ಭಯಂಕರ ಪರಿಣಾಮವನ್ನುಂಟುಮಾಡಲೂ ಒಹುದಾದಾಗಿರುತ್ತದೆ. ಈ ರೋಗದಲ್ಲಿ ನರಗಳು ಮತ್ತು ರಕ್ತನಾಳಗಳು ಸೇರಿರುತ್ತವೆ.

ಈ ರೋಗಿಗಳಲ್ಲಿ ಮಹಾತ್ಮಾ ಗಾಂಧಿಯವರು ಒಂದು ಉತ್ತಮ ಮಾದರಿಯಾಗಿದ್ದಾರೆಂದು ಡಾಕ್ಟರರನೇಕರು ಅಭಿಪ್ರಾಯ ಪಡುತ್ತಾರೆ.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ನೋಟಿಸು

ಕಾಸರಗೋಡು ಡಿ ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 171/1939.

T. B ಮೊಯಿದೀಂ ಕುಂಞ ಬ್ಯಾರಿ . ವಾದಿ
ಮುಹಮ್ಮದ ಬ್ಯಾರಿ ಸಹಾ . . ಪ್ರತಿವಾದಿರು.

ಇವರೊಳಗೆ–

2ನೇ ಪ್ರತಿವಾದಿಳು ಬೀಪಾತುಮ್ಮ ಪ್ಯಾಟೆಪಟ್ಟು ಮೊಯಿದೀಂ ಕುಟ್ಟಿ ಬ್ಯಾರಿಯ ಹೆಂಡ್ತಿ ಮ, ಎಡ್ನಾಡಿಲ್ ಅಂದು ಮಗಳು, ಕಾಸರಗೋಡು ತಾಲೂಕು ತೆಕ್ಕಿಲ್ ಗ್ರಾಮದಲ್ಲಿರುವವಳು

ಸದ್ರಿ 2ನೇ ಪ್ರತಿವಾದಿಳಿಗೆ–

ವಾದಿಗೆ 1ನೇ ಪ್ರತಿವಾದಿ ಕೂಡಾ 2 ಜನರು ಬರಕೊಟ್ಟ ಪ್ರೋಮಿಸರಿ ನೋಟಿನ ಅಸಲು ಬಡ್ಡಿ ಕೂಡಿ ರೂ 346-14-0ಕ್ಕೆ ವಾದಿಯು ದಾಖಲು ಮಾಡಿದ ಮೊಕ್ಕದ್ದಮೆ ವ್ಯಾಜ್ಯವು ತಾರೀಕು 26-8-1939ಕ್ಕೆ ಇಟ್ಟಿರುವುದರಿಂದ 2ನೇ ಪ್ರತಿವಾದಿಳು ಈ ದಿವಸ ಹಾಜರಾಗದಿದ್ದರೆ ಅವಳ ಮೇಲೆ ಎಕ್ಸ್ ಪಾರ್ಟಿಯಾಗಿ ತೀರ್ಮಾನವಾಗುವುದೆಂಬ ಸಂಗತಿ ತಿಳಿಸಿಯದೆ

ಕಾಸರಗೋಡು, (Sd) P AHMAD
27-7 39 Advocate for Plaintiff

ಶ್ರೇಷ್ಠ ತರದ
ದೃಷ್ಟಿ ಚಕ್ರಗಳಿಗೆ

ರಬ್ಬರು ಮೊಹರುಗಳಿಗೆ
ನಾಯಕ್ ಸ್ಟೋರ್ಸ್,
ರಥಬೀದಿ, ಮಂಗಳೂರು

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ
ಆಶ್ಚರ್ಯಕರವಾದ ಔಷಧಿ.
ಡಾ। ಜಸಾನಿಯವರ
ಜಗತ್ಪ್ರಸಿದ್ಧ
ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲಾ ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ. ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು. ಮೂತ್ರಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ–ಕೊಕಸ' ಎಂಬ ವಿಷಾಣು ಜಂತುಗಳ ಅದೇ ಮಾದರಿ ಸ್ತ್ರೀಯರಿಗಾದ ಭಯಂಕರ ಪ್ರದರರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು. ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವ್ಹಿ. ಪಿ. ಚಾರ್ಜ 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಬರೆಯಿರಿ. ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer. Dr. D. N. JASANI, Vithalbhai Patel Road BOMBAY

ಸ್ಟಾಕಿಸ್ಟರು. ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್ಪೆನ್ಸರಿ, ಕೆಮಿಸ್ಟ ಮತ್ತು ಡ್ರಗ್ಗಿಸ್ಟ್, ಹಂಪನಕಟ್ಟಾ, ಮಂಗಳೂರು

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST. PAULS CHURCH,
Bolkunje Post, S. K
Dated 4th Jan. 1939.

To
THE JOINT MANAGERS,
The C. P. C. Co. Ltd., Mangalore.

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress.

The glorious success of our congress is also due to your exertion in putting up the various lights some of which I hear were done volunterily.

May the blessings of the almighty fall on you all and may you be able to do much good to the Public.

Renewing my thanks, I remain,
Yours Sincerely,
(Sd.) **P. W. Farias.**

Sri Parshwanathaswami,
PANCHAKALYANA POOJA MAHOSTHAN
Venoor, S. Kanara, 1939.

To,
THE JOINT MANAGERS,
The Combind Booking Agency, Mangalore.

Dear Sirs,

Please permit us to express our thanks on behalf of the above committee for the efficient Service rendered by your combind Booking Agency Staff at Venoor to the visitors of the Panchakalyana Pooja Mahosthamam celebration held this year.

Our thanks are also due to Moodabidri Booking Clerk Mr. B. Krishnayya and also his other mates and Mr. Raghavendra Bhandary who had specially come down from Mangalore to see to the needs of and comforts of the travelling Public. Thanking you once again,

We remain, Yours faithfully,

Venoor, Dated 6-2-'39. (Sd.) B. Chandappa Indra, (*Secretary, P. M. Council.*) (Sd.) M. Jagathpal; (Sd.) M. Pachappa Shetty, (Sd.) Anantharaj Shetty, (*Members, Panchakalyana Maaosthamam Committee.*)

JOINT MANAGERS.

The Combined Booking Agency, MANGALORE.

The Joint Booking Office, KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಚಾಕು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿ, ತುರಿಕಜ್ಜಿ, ಹುಳುಕಡ್ಡಿ, ಚಿಕ್ಕ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ

(ಶ್ರೀ)ಮಂಗಳೂರಲಿ ಆ ಕಂಪೆನಿಯಲ್ಲಿ ದೊರೆಯುವುದು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು ೩ ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ. ಚಾರ್ಜು ಪ್ರತ್ಯೇಕ)

ಪಿ. ಕೆ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೆಪಿ.
P. O. Peridepi (ಕಲ್ಲೂರು ದ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋರಿಕಟ್ಟಾ ಬಜಾರ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ	1—14—0	—
" ದುಯಂ " "	1—12—0	1—12—0
" ಅವ್ವಲ್ ಸುಗ್ಗಿ "	1—12—0	—
" ದುಯಂ " "	1—10—0	—
ಅಕ್ಕಿ ಅವ್ವಲ್ ಗುಡ್ಡು "	4—12—0	4—14—0
" ದುಯಂ " "	4—8—0	4—10—0
" ಅವ್ವಲ್ ಸುಗ್ಗಿ "	4—8—0	4—8—0
" ದುಯಂ " "	4—5—0	4—6—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
" ಸಿಪ್ಪೆ ಇದ್ದದು "	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
" ದಿಲ್‌ಪಸಂದ "	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	2—8—0	3—8—0
ಗೇರುಬೀಜ ಮುಡಿಗೆ	3—8—	3—8—0
ಕಬ್ಬಿನ ಬೆಲ್ಲ ಖಂಡಿಗೆ	47—8—0	53—12—0
ಒಳ್ಳೆಮೆಣಸು ಹಂಡ್ರೆಡ್‌ವೇಟಿಗೆ	14—8—0	15—8—0

ಸ್ವದೇಶಾಭಿಮಾನಿ

Established 1906 — Regd. No. M 3406

ಸಂಪುಟ ೩೩] ಶುಕ್ರವಾರ ೪-೮-೧೯೩೯ (4—8—1939) [ಸಂಚಿಕೆ ೩೦

THE

BOMBAY LIFE ASSURANCE COMPANY, LTD.,

(ESTD: 1908.)

THE OFFICE

Which has proved its popularity by its progress.

Record of New Bussiness

Proposed.	Year.	Completed.
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
176,83,250	**1938**	**144,91,000**

1939-VALUATION YEAR.

Please take up a Policy Now and participate in Bonus.

To Insure or to Represent it pays you to consult us: —

— *Apply to* — **KOCHIKAR BROTHERS, LIMITED,**

Madras Branch Secretaries,

The Bombay Life Assurance Co., Ltd.,

The Bombay Life Building : : Gandhinagar, UDIPI.

or any of our following offices:

Post Box No. 337,
Mount Road,
Madras.

Visweshwarapuram Circle,
Bangalore City.

Charni Road,
Girgaum,
BOMBAY 4.

Car Street,
Mangalore.

Puthiyara,
Calicut.

Central Station Road,
Trivandrum.

MAKE LIFE WORTH-LIVING!

Indigestion — Insomnia — Dry Cough —
Nervousness — Weak Heart &c.,
these make you wiery of Life!

CONSULT US AND BUY
YOUR LIFE'S HAPPINESS!

Oils — that cool the brain and induce sleep.
Lehas — that build-up your wasted system.
Asavas — that regenerate your jaded nerves.

All Genuine Ayurvedic Preparations-

from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕ್ಲೇಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ— ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ರೆ ಕೊಡುವ — ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ — ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, — ದ. ಕನ್ನಡ

(ಬ್ರಾಂಚ್: ಕುಮಟ, ಉತ್ತರ ಕನ್ನಡ.)

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906

Date 11—8 1939

ಬ್ರಿಟನು ಭರದಿಂದ ಯುದ್ಧಸಿದ್ಧತೆ ಮಾಡುತ್ತಿದೆ!
ವಿಮಾನ ಸೈನಿಕರು ಬಾಂಬುಗಳನ್ನು ಹೊತ್ತುಕೊಂಡು ಹೋಗುತ್ತಾರೆ.

Photo C P London

ಸಚಿತ್ರ
ವಾರಪತ್ರಿಕೆ

ಸೂಚನೆಗಳು

ಬಂಗಾಳ ರಾಜಕೀಯ ಕೈದಿಗಳ ಉಪವಾಸವು ಎರಡು ತಿಂಗಳ ವರೆಗೆ ನಿಲ್ಲಿಸಲ್ಪಟ್ಟಿತು!

ಇದರ ಕುರಿತು ಸುಭಾಷ ಬೋಸರು ಬಹಳ ಹಿಗ್ಗಿಕೊಂಡಂತೆಯೂ, ಇದರ ಕೀರ್ತಿಯು ತನಗೊಬ್ಬನಿಗೆ ಮಾತ್ರ ಸಲ್ಲತಕ್ಕದ್ದು ಎಂಬ ಹಾಗೂ ಅಭಿನಯದ ಪತುಪಂಕೆ ತೋರುತ್ತದೆ!

ಆದರೆ, ಕೈದಿಗಳು ಬೇರೊಂದು ರೀತಿಯಿಂದ ತಿಳಕೊಂಡಿದ್ದಾರೆ! ಅವರಿಗೆ ಗಾಂಧಿಜಿಯವರಲ್ಲಿ ವಿಶ್ವಾಸವುಂಟಂತೆ!

ಬೋಸರು ಇನ್ನೂ ತಮ್ಮ ಹೆಗ್ಗಳಿಕೆಯನ್ನು ಕೊಚ್ಚಿಕೊಳ್ಳುವುದನ್ನು ಬಿಡಲಿಲ್ಲ! ರಾಜಕೀಯ ಕೈದಿಗಳ ಬಿಡುಗಡೆಗಾಗಿ ಹೋರಾಡುವ ಜವಾಬ್ದಾರಿಯು ತನ್ನ ಮೇಲಿದೆ ಎಂದು ಅವರು ಹೇಳುತ್ತಾರೆ ಸತ್ಯಾಗ್ರಹವನ್ನು ಹೂಡಲು ಅವರಿಗೆ ೧೦,೦೦೦ ಸ್ವಯಂಸೇವಕರ ಬೇಕು, ಸಾಧ್ಯವಾದರೆ, ಇದನ್ನು ಅಖಿಲ ಭಾರತ ಆಂದೋಲನವನ್ನಾಗಿ ಮಾಡುವರು, ಎರಡು ತಿಂಗಳ ಅವಧಿಯಲ್ಲಿ ಬಂಗಾಳ ಮಂತ್ರಿಮಂಡಳವು ರಾಜಕೀಯ ಕೈದಿಗಳನ್ನು ಬಂಧವಿಮುಕ್ತರನ್ನಾಗಿ ಮಾಡದಿದ್ದರೆ, ಹೀಗೆಲ್ಲ ಇದೆ ಅವರ ಕಾರ್ಯಕ್ರಮ!

ಬಂಗಾಳದ ಮಂತ್ರಿಮಂಡಳವು ಈ ಪ್ರಕಟಣೆಯನ್ನು ಮೆಚ್ಚಿದಂತೆ ಕಂಡುಬರುವುದಿಲ್ಲ, ಹಾಗಾಗಿ, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ವಿಷಯ ನಿಶ್ಚಿತ ಸಮಯವನ್ನು ಹೇಳಲಾಗುವುದಿಲ್ಲವೆಂದು ಸರಕಾರದ ಉತ್ತರ

ಬೋಸರಿಗೆ ತಮ್ಮ ಶಾಂತಿಕಾರಕ ಪ್ರೇರಣೆಯನ್ನು ಪ್ರದರ್ಶಿಸಲು ಇದ ಒಂದು 'ಫಸ್ಟ್ ಕ್ಲಾಸ್' ಸಂದರ್ಭ! ಕೂಡಲೇ ಅವರ ಜೈಲಿನ ಕಡೆಗೆ ಸತ್ಯಾಗ್ರಹ ದಂಡನ್ನು ಮುಂದುವರಿಸಿ ಹೋಗಲಿ!

ಗಾಂಧಿಜಿಯವರಿಗೆ ಅಷ್ಟರಲ್ಲಿ ಎಹಶ ಎಲ್ಲಾ ರಾಜಕೀಯ ಕೈದಿಗಳನ್ನೂ ಸಭೆಯ [illegible]ರನ್ನೂ ಸಹಿತ ಸೆರೆಯಿಂದ ಬಿಡುಗಡೆ ಮಾಡಲು ಅವಕಾಶವಾಗಬಹುದ

ಶ್ರೀ ಟಿ ಆರ್ ವೆಂಕಟ್ರಮಣ ಶಾಸ್ತ್ರಿ, ಸಿ ಐ ಇ ಇವರು ದೇವಾಲಯ ಪ್ರವೇಶ ಮಸೂದೆಯ ಕುರಿತು ಹೇಳುತ್ತಾ, ವ್ಯಕ್ತಿಶಃ ನಾನು ದೇವಾಲಯ ಪ್ರವೇಶದ ಕುರಿತು ವಿರುದ್ಧವಿಲ್ಲ, ಆದರೆ ಇಂದು ಈ ಮಸೂದೆಯನ್ನು ಜಾರಿಗೆ ತರಲು ಮಾಡಿದ ಕ್ರಮಗಳನ್ನು ನಿಷೇಧಿಸುತ್ತೇನೆ ಎನ್ನುತ್ತಾರೆ!

"ಟಿ ಆರ್ ವೆಂಕಟರಮಣ ಶಾಸ್ತ್ರಿಗಳ ಪ್ರಕಟಣೆಯನ್ನು ನಾನು ಸಂತೋಷದಿಂದ ಓದಿದೆ" ಎಂದು ಪಿ ಯಸ್ ಶಿವಸ್ವಾಮಿ ಅಯ್ಯರು ಒಬ್ಬರು ಮೇಲಿನವರನ್ನು ಸಮರ್ಥಿಸುತ್ತಾರೆ

ಪಾರ್ಥಸಾರಥಿ ದೇವಾಲಯದ ಟ್ರಸ್ಟಿಗಳಾದ ಸಿ. ನರಸಿಂಹಾಚಾರ್ಯರೆಂಬವರು ತಾನು ಒಂದು ದೇವಾಲಯದ ಜವಾಬ್ದಾರಿಯ ಕೆಲಸದಲ್ಲಿದ್ದು ಆದರ ಹಿಂದಿನ ನಿಯಮ, ಆಚಾರಗಳಿಗೆ ವಿರುದ್ಧ ಹೋಗಬಹುದೇ ಎಂದು ಸಂದೇಹಗೊಂಡಿದ್ದಾರೆ!

"ಇದರಿಂದ ದೇವಾಲಯಗಳು ಮಾತ್ರ ಅಪಾಯ ಸ್ಥಿತಿಯಲ್ಲಿರುವುವಲ್ಲ, ಇದೇ ಧರ್ಮವೇ ನಶನವಾಗುವುದು, ಕಟ್ಟಕಡೆಗೆ ಹಿಂದೂ ಧರ್ಮವೇ ಕಟ್ಟುಹೋಗುವುದೆಂದು" ವಿ ವಿ ಶ್ರೀನಿವಾಸ ಅಯ್ಯಂಗಾರ್ ಎಂಬವರು ಭಯಗೊಂಡಿದ್ದಾರೆ!

ಈ ಮಸೂದೆಯನ್ನು ತಂದ ಕ್ರಮವನ್ನು ಆನರೇಬಲ್ ವಿ ಶ್ರೀನಿವಾಸ ಶಾಸ್ತ್ರಿಗಳು ತಪ್ಪೆಂದು ಹೇಳುತ್ತಾರೆ

ಹೀಗೆ ಒಂದು ಕಡೆಯಿಂದ ಶಾಸ್ತ್ರಿಗಳು, ಅಯ್ಯರರೂ ಆಚಾರ್ಯರೂ ಕೂಡಿ ರಾಜಾಜಿಯವರ ಮೇಲೆ ಕತ್ತಿ ಮಸೆಯ ಹತ್ತಿದ್ದಾರೆ!

ಆದರೆ, ತಿರುಪತಿ ದೇವಾಲಯದ ಪ್ರಧಾನ ಆಚಾರ್ಯ ಪುರುಷರಾದ ದಿ ಬ ಟಿ ಕೆ ವೀರರಾಘವಾಚಾರ್ಯರು, ದೇವಾಲಯ ಪ್ರವೇಶ ಮಸೂದೆಗೆ ತಮ್ಮ ಸಂಪೂರ್ಣ ಬೆಂಬಲವನ್ನು ಕೊಟ್ಟಿದ್ದಾರೆ ಪ್ರಕಟಣೆಯೊಂದರಲ್ಲಿ ಹೊಲೆಯನಾದ ಭಕ್ತನಂದನಾರನನ್ನು ದೇವಾಲಯದೊಳಗೆ ಬಿಟ್ಟಿದೆಯೆಂದೂ, ಶ್ರೀ ರಾಮಾನುಜಾಚಾರ್ಯರೇ ದೇವಾಲಯದೊಳಗೆ ಚಂಡಾಲರನ್ನು ಕರೆತಂದಿರುವರೆಂದೂ ವೆಂಕಟಾಚಲ ಮಾಹಾತ್ಮ್ಯದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನು ತಿರುಪತಿಯಲ್ಲಿ ಮಾಡಿದ ಬ್ರಹ್ಮೋತ್ಸವಕ್ಕೆ ಅಸ್ಪೃಶ್ಯ ವರ್ಗದವರ ಕರೆತಂದಿರುವ ವಿಷಯ ಹೇಳಲ್ಪಟ್ಟಿರುವುದೆಂದೂ, ಶಾಸ್ತ್ರಗಳ ಆಧಾರದಿಂದಲೇ ಸನಾತನಿಗಳ ವಾಯಿಮುಚ್ಚಿಸಿದ್ದಾರೆ!

ನಿಯಮ, ಆಚಾರಗಳು ಹಾಳಾಗುತ್ತವೆಂಬ ವಿಷಯದಲ್ಲಿ ಅವರೇ [illegible] ದಯನ್ನು ವಿರೋಧಿಸುವ [illegible] ಆಗಲಿ [illegible] ಕ್ಕೆ [illegible] ಆಲೋಚನೆಯಿದ್ದಾಗ [illegible] ದಿನ [illegible] ಆಗುದ್ದದ [illegible] ಸರಿಯಾಗಿರಲಿಲ್ಲ [illegible] ಹೇಳುತ್ತಾರೆ

[illegible]

ಸನಾತನಿಗಳಿಗೆ ರಾಜಾಜಿಯವರ [illegible] ಉತ್ತರ ಹೀಗಿದೆ

ಕೆಲವು ಜನರನ್ನು ಬಹಿಷ್ಕೃತರೆಂದು ದೇವಾಲಯಗಳೊಳಗೆ ಬರಲು ಬಿಡದಿರುವುದು ಸಾರ್ವಜನಿಕ ತತ್ವಕ್ಕೆ ಸಂಪೂರ್ಣ ವಿರುದ್ಧವಾದದ್ದು ಯಾವುದು ಧರ್ಮದ ಭಾವನೆಗಳಿಗೆ ಸಮೀಪ ಸಂಬಂಧಿಸುತ್ತದೋ ಯಾವುದರಿಂದ ನಮ್ಮ ದೇಶದ [illegible] ಜನಸಂಖ್ಯೆಯವರಿಗೆ ಹಿತವಾಗುವುದೋ ಅದೇ ಆಚಾರ ಮುಖ್ಯ ನಿಯಮವಾಗಿದೆ ನಮ್ಮ ದೇಶದ ಹೆಸರ ಅದಕ್ಕಿಂದಲೂ ಹೆಚ್ಚಾಗಿ ಧರ್ಮದ ಗೌರವವೂ ಈ ಸಧಾರಣೆಯಿಂದ ಉಳಿಯುವಂತಾಗುವುದು" ಇದು ಪ್ರಧಾನ ಮಂತ್ರಿಗಳ ಖಂಡಿತ ನಿರ್ಧಾರ!

ಕಾಂಗ್ರೆಸಿನ ಮಾಜಿ ಅಧ್ಯಕ್ಷರಾದ ಶ್ರೀ ಎಸ್ ಶ್ರೀನಿವಾಸ ಅಯ್ಯಂಗಾರರು ಈಗ ಕಾಂಗ್ರೆಸಿನ ಧೋರಣೆಯನ್ನು, ಕಾಂಗ್ರೆಸು ಮಂತ್ರಿಮಂಡಳಗಳನ್ನು ಕಟುವಾಗಿ ಟೀಕಿಸಿ, ಜೋರಾಗಿ ಭಾಷಣಗಳ ಸುರಿಮಳೆ ಸುರಿಸುತ್ತಾರೆ!

ಕಾಂಗ್ರೆಸಿನ ಅಧಿಕಾರದಲ್ಲಿ ತಾನಿಂದು ಇಲ್ಲವಲ್ಲಾ ಎಂಬ ಚಿಂತೆಯಿಂದ ಹೀಗೆ ಹೇಳುವುದಲ್ಲದೆ, ಅದರ ಮೇಲಿನ ದ್ವೇಷದಿಂದಲ್ಲ, ಆದರೆ, ಅವರ ಸೇವೆಯು ರಾಷ್ಟ್ರಕ್ಕೆ ಅಗತ್ಯವಿದ್ದಾಗ ಅದನ್ನು ಸಲ್ಲಿಸಲು ಹಿಂಜರಿದವರು, ಈಗ ಹೀಗೆಲ್ಲ ಅಸಂಬದ್ಧ ದೂರುವುದು ಅವರ ಹೆಸರಿಗೆ ಭೂಷಣವಾಗಲಾರದು!

ಮಿತವ್ಯಯದ ಟಿನ್ನುಗಳು

ದೊಡ್ಡ ಸೈಜು (8 ಔನ್ಸು) ರೂ 1-4-0
(ದೊಡ್ಡ ಬಾಟ್ಲಿಗಳಲ್ಲಿದ್ದಷ್ಟು ಇರುತ್ತದೆ)
ಸಣ್ಣ ಸೈಜು (4 ಔನ್ಸು) ಆಣೆ 11

ಹೆಚ್ಚು ಯಾಕೆ ವ್ಯಯಿಸುತ್ತೀರಿ

ನೀವು ಇಷ್ಟರ ವರೆಗೆ ಬಾಟ್ಲಿಗಳಲ್ಲಿ ಕೊಂಡುಕೊಳ್ಳುತ್ತಿದ್ದ ಎಂಡ್ರೂಸ್ ಲಿವರ್ ಸೋಲ್ಟ್ ಇಂದು ಮಿತವ್ಯಯದ ಟಿನ್ನುಗಳಲ್ಲಿ ಬಂದಿರುತ್ತದೆ ನೀವು ಈಗ ಉತ್ತಮವಾದ ಲವಣವನ್ನು ಕಡಿಮೆ ಕ್ರಯಕ್ಕೆ ಟಿನ್ನುಗಳಲ್ಲಿ ಕೊಂಡುಕೊಳ್ಳಬಹುದು ಎಂಡ್ರೂಸ್ ಲವಣವು ಲೋಕದ ಎಲ್ಲಾ ಉಕ್ಕಿ ಬರುವ ಲವಣಗಳಿಗಿಂತ ಹೆಚ್ಚಾಗಿ ಮಾರಿಹೋಗುತ್ತದೆ ಇದು ಕಡಿಮೆ ಕ್ರಯದ್ದು ಮಾತ್ರವಲ್ಲ—ಉತ್ತಮವೂ ನವೀನವೂ ಆಗಿರುತ್ತದೆ 50 ವರ್ಷಗಳಿಂದ ಗ್ರೇಟ್ ಬ್ರಿಟನಲ್ಲಿ ಮಾರಲ್ಪಡುತ್ತಿರುವುದು ಎಲ್ಲಾ ಭೇದಿ ಔಷಧಿಗಳಲ್ಲಿ ಉತ್ತಮವಾದದ್ದು ಇದರ [illegible] ಉಕ್ಕಿಬರುವ ಗುಣವು ಈ ಲವಣವು ಬಹಳ ಉತ್ತಮವೂ ಆರೋಗ್ಯಕರವೂ ಆದುದೆಂದು ಪ್ರಖ್ಯಾತಿಪಟ್ಟಿದೆ ಅಷ್ಟಲ್ಲದೆ ಎಂಡ್ರೂಸ್ ಲವಣವು ಟಿನ್ನುಗಳಲ್ಲಿ ಉತ್ತಮವಾಗಿರುತ್ತದೆ ಇದನ್ನು ತಯಾರಿಸ [illegible] ಕ್ಕೆ ಸೋಕಿರುವುದಿಲ್ಲ

ಎಂಡ್ರೂಸ್ ಲವಣವು ಮೊದಲಿನ ಬಾಟ್ಲಿಗಳಲ್ಲಿದ್ದ ಟಿನ್ನುಗಳಲ್ಲಿದ್ದು ಕಡಿಮೆ ಕ್ರಯಕ್ಕೆ ದೊರೆಯುತ್ತದೆ

ಈ ಕೆಳಗಿನವುಗಳಿಂದ ನರಳುವಿರಾದರೆ
ನಿಮಗೆ ಎಂಡ್ರೂಸ್ ಲವಣವು ಅಗತ್ಯ
ಪಿತ್ತಪಿಕಾರ ಬಲಹೀನತೆ ಅಜೀರ್ಣತೆ ಅಗ್ನಿಮಾಂದ್ಯ
ಅಲಸ್ಯತನ ಅರುಚಿ ತಲೆನೋವು, ಯಕೃತ್ತಿನ ದೋಷ
ಎದೆಯುರಿ, ನರಗಳ ಅಶಕ್ತತೆ

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ

ಅಂತರೇಂದ್ರಿಯ ಶುದ್ಧಿಗೆ ಎಂಡ್ರೂಸ್ ಲವಣ



713A

ANDREWS
LIVER SALT
for Inner Cleanliness

THE
Canara Banking Corporation Ltd.,
(INCORPORATED IN BRITISH INDIA)

THREE YEARS' CASH CERTIFICATES

bearing interest at 4% p a
in denominations of

RS. 50/-, 100/-, 500/-, 1,000/-, & 5,000/
are now issued at all our Branches

For particulars call at or write to
any of our nearest Branches

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಬ್ರಿಟನಿನಲ್ಲಿ ೭೮,೦೦೦ ಜನರ ಮುಷ್ಕರ

ಜನರಲ್ ಫ್ರಾಂಕೋ ಸಮಸ್ಯೆ

ಕ್ರಾಂತಿಕಾರರ ಆಂದೋಲನ

ಐರಿಷ್ ಕ್ರಾಂತಿಕಾರರ ಆಂದೋಲನ

ಲಂಡನಿನಲ್ಲಿ ಐರಿಷ್ ಕ್ರಾಂತಿಕಾರರು ಕಳೆದವಾರ ಅನೇಕ ಕಡೆಗಳಲ್ಲಿ ಬಾಂಬು ಎಸೆದಿರುವರಷ್ಟೆ. ಆ ಸಂಬಂಧ ಅನೇಕರನ್ನು ಸಂದೇಹದಿಂದ ಸೆರೆ ಹಿಡಿಯಲಾಗಿದೆ. ಅವರಲ್ಲಿ ೧೯ ವರ್ಷದ ನವಯುವತಿಯೊಬ್ಬಳನ್ನು ಸೆರೆ ಹಿಡಿದಿದ್ದಾರೆ. ಒಟ್ಟಾರೆ ೫೫ ಮಂದಿಯು ಹೀಗೆ ಬಂಧಿತರಾಗಿದ್ದಾರೆ.

ನಿಲ್ಲಿಸಬೇಕಾಗಿಯೂ, ಹಾಗೆ ಮಾಡದಿದ್ದಲ್ಲಿ ಟೋಕ್ಯೋ ಒಪ್ಪಂದವನ್ನು ಹಿಂದೆಗೆಯಬಹುದಾಗಿಯೂ ಹೆದರಿಕೆ ಹೇಳಿರುವನು.

ಇದಕ್ಕೆ ಉತ್ತರ ಹೇಳುತ್ತಾ ಜಪಾನು ಅಧಿಕಾರಿಯು 'ಟೋಕ್ಯೋ ಒಪ್ಪಂದ ಮತ್ತು ಆಂಗ್ಲ ವಿರುದ್ಧ ಪ್ರಚಾರಗಳು ಪರಸ್ಪರ ವಿರುದ್ಧ ಸಂಗತಿಗಳು. ಜಪಾನಿನಲ್ಲಿ ಜನರು ಅಂತಹ ಕಾರ್ಯಗಳನ್ನು ಮಾಡುತ್ತಿರಲು, ಅದನ್ನು ತಡೆದು ನಿಲ್ಲಿಸಲು ಸರಕಾರವು ಸರ್ವ ವಿಧದಿಂದಲೂ ಕಾರ್ಯಗಳನ್ನು ಮಾಡಿರುವುದು. ಆದರೆ ಚೈನಾದಲ್ಲಿ ಆಗುತ್ತಿರುವ ಅಂತಹ ವಿರುದ್ಧ ಕಾರ್ಯಗಳ ಕುರಿತು ಜಪಾನು ಜವಾಬ್ದಾರಿಯಾಗುವುದಿಲ್ಲ.

ಟ್ಸಿಂಗ್ಟಾವೋವನ್ನು ಬಿಡುವ ಮತ್ತು ಪ್ರವೇಶಿಸುವ ಎಲ್ಲಾ ಬ್ರಿಟಿಷ್ ಜನರನ್ನು ಸಂಪೂರ್ಣವಾಗಿ ಶೋಧಿಸಲಾಗುತ್ತದೆ.

ಟೋಕಿಯೋ ಮಾತುಕತೆ ನಿರರ್ಥಕವಾಗುವುದೇ?

ಉತ್ತರ ಚೈನಾದಲ್ಲಿ ನಡೆಯುತ್ತಿರುವ ಬ್ರಿಟಿಷ್ ವಿರುದ್ಧ ಕಾರ್ಯಗಳ ಸಂಬಂಧವಾಗಿ ಜಪಾನು ಮತ್ತು ಇಂಗ್ಲಿಷರು ಸಂಧಿ ಶರ್ತವು ಹಿಂದೆಗೆಯಲಾಗುವುದೆಂದು ತಿಳಿದಿದೆ.

ಜಪಾನಿನ ಮಂತ್ರಿಮಂಡಳವು ಈ ಸಂಬಂಧವಾಗಿ ಜಪಾನು ಮತ್ತು ಯೂರೋಪಿನ ಇತರ ರಾಷ್ಟ್ರಗಳ ಸಂಬಂಧವಾಗಿ ಚರ್ಚಿಸಲು ಸಭೆ ಸೇರಿರುತ್ತದೆ.

ಟೆಂಗಾಚುಯಲ್ಲಿರುವ ಅನೇಕ ಮಂದಿ ಗೌರವಸ್ಥರಾದ ಇಂಗ್ಲಿಷರನ್ನು ಹೊರಗೆ ಹೋಗಬೇಕೆಂದು ಜಪಾನು ಆಜ್ಞಮಿಸುತ್ತಿದೆ.

ಬಿಸಿ-ಬಿಸಿ ವಾರ್ತೆ

ಜಯಪುರ ಆಶ್ರಿತ ಸರಕಾರವು ಸೇಟಿಮನಿಯಿಂದ-ಸೇಟ್ ಜಮ್ನಾಲಾಲ ಬಜಾಜರನ್ನು ಬಂಧಮುಕ್ತ ಮಾಡಿದೆ.

[೨ ಪುಟದಿಂದ ಮುಂದುವರಿದುದು]

ಎಲ್ಲಾ ಕ್ರಾಂತಿಕಾರಕ ಗುಣಗಳನ್ನು ಬಿಟ್ಟಲ್ಲಿಯೂ ಈಡೀ ಪ್ರಪಂಚದಲ್ಲಿ ಬಹಳ ಸರಳ ಮತ್ತು ಸುಖಜೀವಿಯಾದ ಮನುಷ್ಯನು ಇತನೇ! ಬಹುತುಂಬ ಖರ್ಚು ಮಾಡುತ್ತಾನೆ. ಸುಖವನ್ನು ಬೇಕಾದಷ್ಟು ಅನುಭವಿಸುತ್ತಾನೆ. ಅವನಿಗೆ ಉತ್ತಮ ಸಾಹಿತ್ಯ ಮತ್ತು ಸಂಗೀತಗಳಲ್ಲಿ ತುಂಬಾ ಅಭಿರುಚಿಯುಂಟು; ತನ್ನ ಹಳೆಯ ಗೆಳೆಯನಾದ ಸ್ಟಾಲಿನನೊಡನೆ ಸಂಭಾಷಣೆ ಮಾಡುವುದಕ್ಕಿಂತ ಹೆಚ್ಚಿನ ಸಂತೋಷವು ಅವನಿಗೆ ಬೇರಿಲ್ಲ. ಇಬ್ಬರೂ ಅವಿಭಕ್ತರಾದ ಗೆಳೆಯರು. ರಷ್ಯದಲ್ಲಿ ಇಂದು ಸಾಮಾನ್ಯವಾಗಿ ಸ್ಟಾಲಿನನ ಅನಂತರ ವೋರೊಶಿಲೋವನೇ ಅಧಿಕಾರಿಯಾಗುತ್ತಾನೆಂಬ ವಿಶ್ವಾಸವೂ ಇದೆ.

ಶುದ್ಧ ಸರಳ ಜೀವಿ; ಮುಗುಳು ನಗೆಯ ಮುಖ ಗಂಭೀರ; ಶಕ್ತಿಪೂರ್ಣವಾದ ವೃಥಕಾಯ; ಹೊಳೆವ ತೇಜಸ್ವಿ ದೃಷ್ಟಿಗಳು; ಇವುಗಳೆಲ್ಲ ಅತನ ಜೀವನದಲ್ಲಿ ಒಬ್ಬ ಯುದ್ಧ ವೀರನಿಗೆ ಸಲ್ಲಕ್ಷಣಗಳನ್ನು ಒಪ್ಪಿವೆ.

ಜಗತ್ತಿನಲ್ಲಿ ಅತ್ಯಂತ ದೊಡ್ಡ ಸೈನ್ಯದಳವನ್ನು ನಿರ್ಮಿಸಲು ಅತನು ಕಾರಣಕರ್ತನಾದವನು. ಇಂದು ತನ್ನ ಕಾರ್ಯವು ಸಫಲವಾಗಿದೆ ಎಂಬ ನಿರ್ಧಾರ ಮತ್ತು ವಿಶ್ವಾಸಗಳುಳ್ಳವನಾಗಿದ್ದಾನೆ.

ಸ್ಥಳೀಕ ಸಂಸ್ಥೆಗಳ ಆಡಳಿತೆಯ ವಿಷಯವಾಗಿ, ಶ್ರೀ. ಎಲ್. ಎಮ್. ಪಾಟೀಲರ ಅಧ್ಯಕ್ಷತೆಯಿಂದ ಬೊಂಬಯಿಯಲ್ಲಿ ನೆರೆದ ಪ್ರಾಂತಿಕ ಮಂತ್ರಿಗಳ ಕೂಟಚಿತ್ರ

ಪ್ರಖ್ಯಾತ ಸಿನೆಮಾ ನಟಿ ಗ್ಲೋರಿಯಾ ಸ್ಟುವರ್ಟಳು ತನ್ನ ಪತಿ ಆರ್ಥರ್ ಶೇಕ್‌ಮೇನನೊಂದಿಗೆ ಬೊಂಬಯಿಗೆ ಬಂದಿರುವಳು

ಬ್ರಿಟನಿನಲ್ಲಿ ೭೮,೦೦೦ ಜನರ ಮುಷ್ಕರ

ಲಂಡನಿನಲ್ಲಿ ೭೮,೦೦೦ ಮಂದಿಯು ದೊಡ್ಡದೊಂದು ರೈಲ್ವೆ ಮುಷ್ಕರವನ್ನೆಬ್ಬಿಸಲು ನಿಶ್ಚಯಿಸಿರುವರು. ರೈಲ್ವೆ ಎಂಜಿನೀಯರರ ಮತ್ತು ಕೆಲಸಗಾರರ ರಾಷ್ಟ್ರೀಯ ಸಂಘವು ಸಂಬಳ ಹೆಚ್ಚಿಸುವ ವಿಷಯದಲ್ಲಿ ಮತ್ತು ಇನ್ನಿತರ ಸೌಕರ್ಯಗಳ ವಿಷಯದಲ್ಲಿ ಅಧಿಕಾರಿಗಳು ಗಮನಕೊಡದಿದ್ದದಕ್ಕಾಗಿ ಮುಷ್ಕರಹೂಡಿದರು.

ಕೆಲಸಗಾರರ ಈ ಬೇಡಿಕೆಗಳನ್ನು ಸಂಪೂರ್ಣಗೊಳಿಸಬೇಕಾದರೆ ರೈಲ್ವೆ ಅಧಿಕಾರಿಗಳಿಗೆ ಒಂದು ಕಾಲು ಮಿಲಿಯ ಸ್ಟರ್ಲಿಂಗು ಹೆಚ್ಚು ಹಣ ಬೇಕಾಗುವುದು.

ಐರಿಷ್ ಕ್ರಾಂತಿಕಾರರು ಅಮೇರಿಕದಿಂದ ಸಹಾಯ ಪಡೆಯುತ್ತಾರೆ

ಲಂಡನಿನಲ್ಲಿ ಹನ್ನೆರಡು ಮಂದಿಯನ್ನು ಐರಿಷ್ ಕ್ರಾಂತಿಕಾರರೆಂಬ ಸಂಶಯದಿಂದ ಸರ್ ಸಾಮುವೆಲ್ ಹೋರರು ಬಂಧಿತರನ್ನಾಗಿ ಮಾಡಿದ್ದಾರೆ. ಅವರೆಲ್ಲರನ್ನು ಇಂಗ್ಲೆಂಡಿನಿಂದ ಹೊರಗೆ ಕಳುಹಿಸಲಾಗುವುದು.

ಅಮೇರಿಕದಿಂದ ಇವರ ಮೇಲೆ ಸಹಾನುಭೂತಿಯಿಂದ ತುಂಬಾ ಧನವು ಬರುತ್ತಿದೆ ಎಂದು ತಿಳಿದುಬಂದಿದೆ.

ಆಂಗ್ಲ-ವಿರುದ್ಧ ಪ್ರಚಾರ

ಬ್ರಿಟಿಷ್ ರಾಯಭಾರಿ, ಸರ್ ರೊಬರ್ಟ್ ಕ್ರೇಜಿಯು, ಜಪಾನೀ ಅಧಿಕಾರಿಗಳನ್ನು ಸಂದರ್ಶಿಸಿ ಜಪಾನು ಮತ್ತು ಚೈನಾಗಳಲ್ಲಿ ಆಗುವ ಜಪಾನೀಯರ ಆಂಗ್ಲ-ವಿರುದ್ಧ ಚಳವಳವನ್ನು

ಓವಲಿನಲ್ಲಿ ಬ್ರಿಟಿಷ ಸಾರ್ವಭೌಮರು ವೆಸ್ಟ್ ಇಂಡೀಸಿನ ಕ್ರಿಕೆಟ್ ಟೀಮಿನ ಕೆಪ್ಟನಿಗೆ ಹಸ್ತಲಾಘವ ಕೊಡುವುದು

ಜಗತ್ತಿನ ಪ್ರಬಲ ಸೇನಾನಾಯಕ
ವೊರೊಶಿಲೋವ್

ದರಿದ್ರನಾಗಿ ಹುಟ್ಟಿ, ಮಹಾಧಿಕಾರಿಯಾಗಿ ಮೆರೆಯುತ್ತಾನೆ
ಅಧಿಕಾರ ಗೌರವವು ಬಾಲ್ಯದ ಅವನ ಕನಸು
ಜಗತ್ತಿನಲ್ಲಿ ದೊಡ್ಡ ಸೈನ್ಯಬಲವನ್ನು ನಿರ್ಮಿಸಿದ್ದಾನೆ

ಬ್ರಿಟನ್-ಫ್ರಾನ್ಸ್-ರಶ್ಯಾ ದೇಶಗಳೊಳಗೆ ನಡೆಯುವ ಒಪ್ಪಂದದ ಮಾತುಕತೆಯು ನಿರೀಕ್ಷಿಸಿದಂತೆ ಕೊನೆಗೊಳ್ಳುವ ಪಕ್ಷದಲ್ಲಿ, ರಶ್ಯದ ಅಪ್ರತಿಮ ಸೇನಾನಾಯಕನಾದ ಮಾರ್ಶಲ್ ವೊರೊಶಿಲೋವ್ ಇವನು ಕೂಡಲೇ ಬ್ರಿಟನನ್ನು ಇದೇ ಮೊದಲನೆಯದಾಗಿ ಸಂದರ್ಶಿಸಬಹುದೆಂದು ಊಹಿಸಲಾಗಿದೆ. ಬಹುಶಃ ರಶ್ಯಾದಿಂದ ಹೊರಗಿರುವ ಜನರು ಮಾರ್ಶಲ್ ವೊರೊಶಿಲೋವನ ಕುರಿತು ಬಹಳ ಕಡಿಮೆ ಪರಿಚಯವುಳ್ಳವರಿರಬೇಕು. ಆದರೆ ರಶ್ಯಾ ರಾಷ್ಟ್ರದಲ್ಲಿ; ಮಿಕ್ಕ ಎಲ್ಲಾ ಧುರೀಣರಿಗಿಂತಲೂ ಬಹಳ ಜನಪ್ರಿಯನಾಗಿದ್ದಾನೆ. ರಶ್ಯನರು ಸ್ಟಾಲಿನನನ್ನು ಬಹುಮಾನಿಸುತ್ತಾರೆ ಆದರೆ ವೊರೊಶಿಲೋವನನ್ನು ಆರಾಧಿಸುತ್ತಾರೆ. ನಿಜವಾಗಿಯೂ ಇಂತಹ ಅಸದೃಶವಾದ ಜನಾದರವನ್ನು ಹೊಂದಲು ಸಾಕಷ್ಟು ಕಾರಣಗಳೂ ಇವೆ; ಗನಿಯಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಯಃಕಶ್ಚಿತ ಮನುಷ್ಯನೊಬ್ಬನು ಇಂದು ಪ್ರಬಲ ರಾಷ್ಟ್ರವಾದ ರಶ್ಯದ ಅಪ್ರತಿಮ ಸೇನಾನಾಯಕನಾಗಿದ್ದಾನೆ. ಜಗತ್ತಿನ ಅತ್ಯಂತ ದೊಡ್ಡ ಸೈನ್ಯದಳ ವಿಮಾನದಳಗಳ ಸರ್ವ ಸ್ವತಂತ್ರ ಅಧಿಕಾರಕ್ಕೆ ಏರಿ ನಿಂತಿದ್ದಾನೆ! ವೊರೊಶಿಲೋವನ ವ್ಯಕ್ತಿತ್ವದ ಅದ್ಭುತ ಪ್ರಭಾವವನ್ನು ಸರಿಯಿಲ್ಲದ ಸಾಹಸವನ್ನು ಈ ದೃಷ್ಟಿಯಿಂದ ಪರೀಕ್ಷಿಸಿ ನಾವು ಅರ್ಥಮಾಡಿಕೊಳ್ಳಬಹುದು.



ಯೂರೋಪಿನಲ್ಲಿ ಕಲೆಯ ಉಚ್ಚ ಶಿಕ್ಷಣವನ್ನು ಪಡೆದು, ಔಂಧ ರಾಜಕುಮಾರಿ ಮಿಸ್ ಕೆ. ಪಂಥಳು ಮಾತೃಭೂಮಿಗೆ ಹಿಂತೆರಳಿದಳು

ಬೊಂಬಯಿ ಕಾಂಗ್ರೆಸು ಸರಕಾರದ ಮಂತ್ರಿಮಂಡಳದವರೂ, ಬೊಂಬಯಿ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಸದಸ್ಯರೂ, ಮದ್ಯಪಾನ ನಿಷೇಧ ದಿನಾಚರಣೆಯಂದು ಜನಸಂದಣಿಯೊಡನೆ ಮೆರವಣಿಗೆ ಹೋಗುವುದು

ಬಾಲ್ಯಜೀವನ

ಕ್ಲಿಮೆಂಟ್ ಎಫ್ರಿಮೋವಿಚ್ ವರೋಶಿಲೋವ್ ಇವನು ಇಂದಿಗೆ ೫೮ ವರ್ಷಗಳ ಹಿಂದೆ ರಶ್ಯದ ಕೊಕೇಶಿಯನ್ ಎಂಬ ಜಿಲ್ಲೆಯಲ್ಲಿ ಜನ್ಮವೆತ್ತಿದನು. ಆತನ ತಂದೆಯು ಗನಿಗಳಲ್ಲಿ ಕೂಲಿ ಕೆಲಸಮಾಡುವ ಅವಿದ್ಯಾವಂತನಾದ ಸಾಮಾನ್ಯ ಮನುಷ್ಯ. ಕೂಲಿಕೆಲಸಮಾಡಿ ಜೀವಿಸುವ ಸೇವಕಿಯೊಬ್ಬಳನ್ನು ಆತನು ಮದುವೆಯಾಗಿದ್ದ. ಆದರೆ, ಅವರು ತಮ್ಮಲ್ಲಿಯೇ ತಮ್ಮ ಮಗನಿಗಾದರೂ ವಿದ್ಯೆ ಕೊಡಬೇಕೆಂಬ ಹಂಬಲವುಳ್ಳವರಾಗಿದ್ದರು. ಆದರೆ ಆ ಸ್ಥಳದಲ್ಲಿ ಸುಲಭವಾಗಿ ವಿದ್ಯೆಯು ಸಿಗುತ್ತಿದ್ದಿಲ. ದುಡ್ಡುಕೊಟ್ಟು ಶಾಲೆಗೆ ಕಳುಹಿಸುವರೆ, ಅವರಲ್ಲಿ ಚಿಕ್ಕಾಸೂ ಇರಲಿಲ್ಲ. ಹಾಗಾಗಿ, ಏಳು ವರ್ಷದ ಮಗು ವೊರೊಶಿಲೋವನೂ ಕೂಡಾ ತಂದೆತಾಯಿಗಳೊಡನೆ ಜೀವನಕ್ಕಾಗಿ ಗನಿಗೆ ಹೋಗಿ ದುಡಿದು ತರಲುಹೊರಡಬೇಕಾಯಿತು.

ಆದರೆ ಅಲ್ಲಿನ ಕೆಲಸ, ಆ ಜನರ ಜೀವನದೊಡನೆ ವೊರೋಶಿಲೋವನು ಬೆರೆಯಲಿಲ್ಲ. ಬಾಲ್ಯದಲ್ಲಿಯೇ ಮಹಾಕೆಲಸಗಳನ್ನು ಮಾಡಬೇಕಾದೆಯೆಂಬ ಆಸೆ ಭರವಸೆಗಳು ಆತನಲ್ಲಿತ್ತು. ವರ್ಷ ಹತ್ತು ತುಂಬಲು, ಅವನು ಮನೆಯನ್ನು ಬಿಟ್ಟು, ನೂರು ಮೈಲುಗಳ ದೂರದ ಒಂದು ಕುರಿಮೇಯಿಸುವ ಉದ್ಯೋಗವನ್ನು ಸೇರಿದನು ಆತನಿಗೆ ಆ ಕೆಲಸದಲ್ಲಿ ಅಭಿರುಚಿಯಿತ್ತು, ಕುರಿಗಳಿಗಾದರೂ ಆಜ್ಞೆ ಮಾಡುವ ಅಧಿಕಾರವು ದೊರೆತದ್ದಕ್ಕಾಗಿ ಗರ್ವಗೊಳ್ಳುತ್ತಿದ್ದನು ಆದರೆ ತನ್ನ ಮನದ ದಿವ್ಯ ಸ್ವಪ್ನಗಳನ್ನು ಪೂರೈಸುವ ಸಲುವಾಗಿ ವಿದ್ಯಾಭ್ಯಾಸವನ್ನು ಪಡೆಯಬೇಕೆಂಬ ಅಭಿಲಾಷೆಯು ಆತನ ಮನಸ್ಸನ್ನು ಸದಾ ಕೊರೆಯುತ್ತಿತ್ತು ವರ್ತಕದ ಬದಿಯಲ್ಲಿ ಕುಳಿತು, ಕುರಿಗಳನ್ನು ಕಾಯುತ್ತಿದ್ದಂತೆ ತಾನು ಓದಲೂ ಒರೆಯಲೂ ಕಲಿಯುತ್ತಿದ್ದನು ಅದು ಬಹಳ ಸಾಹಸದ ಕೆಲಸವಾಗಿತ್ತು, ಆದರೆ ನಿರಂತರ ಸಾಧನೆಯಿಂದ ಮತ್ತು ತನ್ನ ಮೇಲೆ ಪ್ರೀತಿಯಿಟ್ಟು ಕಲಿಸಿಕೊಡುವ ತನ್ನ ಧನಿ ಹೊಲಗಾರನ ಸಹಕಾರದಿಂದ, ಹನ್ನೆರಡನೆಯ ವರ್ಷದಲ್ಲಿ ಆತನಿಗೆ ಓದಲೂ ಬರೆಯಲೂ ಬಂತು

ಮಹತ್ವಾಕಾಂಕ್ಷೆ

ಓದುಬರಹಗಳಿಂದ ಆತನ ವಿಚಾರ ಉದ್ದೇಶಗಳು ಕೆರಳಿದುವು ಕೃಷಿಕ ವೃತ್ತಿಗಿಂತ, ಔದ್ಯೋಗಿಕ ವೃತ್ತಿಯು ಒಳ್ಳೆಯದೆಂದೂ, ಇಂದಿರುವ ಏಕಪ್ರಭುತ್ವ ರಾಜ್ಯಪದ್ಧತಿಗಿಂತ, ಬಹುಸಮ್ಮತ ರಾಜ್ಯಪದ್ಧತಿಯು ನ್ಯಾಯವಾದುದೆಂದು ಆತನಿಗೆ ಹೊಳೆಯಿತು ದಿನ ಹೋದಂತೆ ಕಾರ್ಲ್‌ಮಾರ್ಕ್ಸನ ತತ್ವವು ಅವನನ್ನು ಆಕರ್ಷಿಸಿತು ತನ್ನ ಜ್ಞಾನಭಂಡಾರವನ್ನು ಆತ ಮತ್ತೂ ಬೆಳಸಿದನು ಅಲ್ಲಿಂದ ಬಿಟ್ಟ ಆತ ಸೈಂಟ್ ಪೀಟರ್ಸ್‌ಬರ್ಗಿಗೆ ಹೋಗಿ, ಅಲ್ಲಿ ಒಂದು ಉದ್ಯೋಗದಲ್ಲಿ ಸೇರಿದನು ಅಲ್ಲಿ ೧೮೯೭ರಲ್ಲಿಯೇ ರಾಜಕೀಯ ಕ್ರಾಂತಿಯು ಜೋರಾಗಿ ಹರಡಿತ್ತು. ೧೬ನೇ ವರ್ಷ ಪ್ರಾಯದವನಾದ ವೊರೊಶಿಲೋವನು ಕ್ರಾಂತಿಕಾರರ ಪಂಗಡಕ್ಕೆ ಸೇರಿ ಕೆಲವೇ ಸಮಯದಲ್ಲಿ ಬಹಳ ಪ್ರಸಿದ್ಧನಾದನು.

ಸ್ಟಾಲಿನನ ಗೆಳೆತನ

ತನ್ನ ಮುಂದಿನ ಶುಭ್ರ ಜೀವನಕ್ಕಾಗಿ ಆಸೆಪಟ್ಟಿದ್ದ ಹೆತ್ತವರು, ಇದ್ದ ಮಲೀನ ಪರಿಸ್ಥಿತಿಯನ್ನೂ, ರಶ್ಯದ ಅಸಂಖ್ಯಾತ ಕೂಲಿಕಾರರ ಜೀವನ ದುರಂತತೆಯನ್ನೂ ಆತನೂ ಕಣ್ಣಾರೆ ಕಂಡು ಅನುಭವ ಹೊಂದಿದ್ದನು, ಅಲ್ಲಿಯೇ ಆತನು ತನ್ನ ಜೀವನದ ಗೆಳೆಯನನ್ನಾಗಿ ಜೋಸೆಫ್ ಸ್ಟಾಲೀನನನ್ನು ಮಾಡಿಕೊಂಡನು. ಸ್ಟಾಲಿನನು ಇವನಿಗೆ ಎರಡು ವರ್ಷಕ್ಕೆ ಹಿರಿಯ ಇವರಿಬ್ಬರೂ ರಾಜಕೀಯ ಕ್ರಾಂತಿಗಾಗಿ ಉಗ್ರ ಚಟುವಟಿಕೆಗಳಿಂದ ಕಾರ್ಯಮಾಡಿದರು ೧೯೦೩ರಲ್ಲಿ ಇಬ್ಬರೂ ಬೊಲ್ಶೆವಿಕ್ ಪಕ್ಷಕ್ಕೆ ಸೇರಿದರು ಮೂರು ವರ್ಷಗಳ ನಂತರ ಸ್ಟೆಲೀನನನ್ನು ಗಡೀಪಾರು ಮಾಡಿದಾಗ, ಬೊಲ್ಶೆವಿಕ್ ಪಾರ್ಟಿ ಕಾಂಗ್ರೆಸಿಗೆ ಪ್ರತಿನಿಧಿಯಾಗಿ ವೊರೋಶಿಲೋವನೇ ಹೋಗಿದ್ದನು ಸಭೆಯಿಂದ ಮರಳಿಬಂದ ವೊರೋಶಿಲೋವನಿಗೂ ಗಡೀಪಾರು ಶಿಕ್ಷೆಯೇ ವಿಧಿಸಲ್ಪಟ್ಟಿತು. ಕೆಲವರ್ಷ ಇಬ್ಬರೂ ತಮ್ಮ ಬಂಧನಗಳಿಂದ ಬಿಡುಗಡೆ ಹೊಂದುವ ಸಲುವಾಗಿ ಬಾರಿ ಪ್ರಯತ್ನಿಸಿದರು, ಅನೇಕ ಸಲ ಶಿಕ್ಷೆಗೆ ಗುರಿಯಾದರು

ಅಧಿಕಾರ ಪ್ರಾಪ್ತಿ

೧೯೧೪ರ ಮಹಾ ಯುದ್ಧದ ಕಾಲ ವೊರೊಶಿಲೋವನು ತಿರುಗೊಮ್ಮೆ ಬಂಧನದಿಂದ ತಪ್ಪಿಸಿದನು ಕೂಡಲೆ ತಾನು ಒಂದು ಕ್ರಾಂತಿಕಾರೀ ಪಕ್ಷವೊಂದನ್ನು ಬಲವಾಗಿ ಸ್ಥಾಪಿಸಿದನು ೧೯೧೭ರಲ್ಲಿ ಲೆನಿನ್ ಮತ್ತು ಸ್ಟಾಲಿನರೊಡನೆ ವೊರೋಶಿಲೋವನೂ ರಶ್ಯದಲ್ಲಿ ತನ್ನ ಕ್ರಾಂತಿಧ್ವಜವನ್ನು ಮೇಲೆತ್ತಿ ನಿಂತನು ಇದರಲ್ಲಿ ವೊರೋಶಿಲೋವನಷ್ಟು ಸಂಕಷ್ಟಗಳನ್ನು ಅನುಭವಿಸಿದವರು ಯಾರೂ ಇರಲಿಲ್ಲ ತಾನು ಒಂದು ಸೈನ್ಯದಳವೊಂದನ್ನು ಸೇರಿಸಿ ಜರ್ಮನರೊಡನೆ ಮತ್ತು ಬಿಳಿ ರಶ್ಯನರೊಡನೆ ಎಲ್ಲಾ ಕಡೆಗಳಿಂದಲೂ ಆತನು ಎದುರಿಸಬೇಕಾಯಿತು ಕಟ್ಟಕಡೆಗೆ ಸಾಹಸದಿಂದ, ಬಿಡದೆ ಮುಂದುವರಿಸಿ ಇತರ ಕ್ರಾಂತಿಕಾರೀ ಸೈನ್ಯಗಳೂ ಬೆಂಬಲಬಳಿಲು ಟ್ಸಾರಿಟ್ಸಿನ್ ನಗರವನ್ನು ಮುಟ್ಟಿದ

ಸೋವಿಯಟ್ ರಾಷ್ಟ್ರ ನಿರ್ಮಾಣ

ಕ್ರಾಂತಿಯು ಕೊನೆಗೊಂಡಾಗ ವೊರೋಶಿಲೋವನು ಮೊಸ್ಕೋನಗರಕ್ಕೆ ತಲಪಿದನು. ಅಲ್ಲಿ ಸರಕಾರದ ಸದಸ್ಯನಾಗಿ ಆತ ಚುನಾಯಿತನಾದನು ನವರಶ್ಯದ ನಿರ್ಮಾಣವು ಇನ್ನೂ ಆಗಬೇಕಿತ್ತು ಅಲ್ಲಲ್ಲಿ ವಿರುದ್ಧ ದಂಗೆಯೆದ್ದವರನ್ನು ಆತ ನಿರ್ದಯನಾಗಿ ಹದಮಾಡಿ ಸ್ವಾಧೀನಕ್ಕೆ ತಂದನು ಸೋವಿಯಟಿನ ಸ್ವಾಧೀನತೆಗೆ ಇಡೀ ರಾಷ್ಟ್ರವೇ ಬಂದಾಗ ಅವನ ಕೆಲಸವು ಕೊನೆಗೊಂಡಿತು ೧೯೨೧ರಲ್ಲಿ ಸೋವಿಯಟ್ ಕೌನ್ಸಿಲರನಾಗಿಯೂ ೧೯೨೫ರಲ್ಲಿ ಮುಖ್ಯ ಸೇನಾಧಿಕಾರಿಯಾಗಿಯೂ ಆತ ಚುನಾವಣೆ ಹೊಂದಿದನು

ಸಂಸಾರಿಕ ಜೀವನ

ವೊರೋಶಿಲೋವನು ಕ್ರಾಂತಿಜೀವನವನ್ನು ಮಂಗಲದ ಮೇಲೆ ರಶ್ಯದ ಸುಪ್ರಸಿದ್ಧ ಸುಂದರಿಯೂ, ನರ್ತಕಿಯೂ ಆದ ಕಟರಿನಾ ಡಯಿಡೇವ್ನಾಳನ್ನು ಮದುವೆಯಾದ. ಕೆಲಸಮಯ ಮಾತ್ರ ವಿವಾಹಿತ ಜೀವನವನ್ನು ಸುಖಿಸಿದನು. ಆದರೆ ರಶ್ಯದ ಮುಂದಿನ ಏಳಿಗೆಯ ಕುರಿತು ಚಿಂತೆಗೊಂಡನು ೧೯೩೪ರಲ್ಲಿ ಇಡೀ ಸೈನ್ಯವನ್ನು ಚೆನ್ನಾಗಿ ತರಬೇತಿ ಮಾಡಿ, ಸಂಘಟನೆ ಮಾಡಿ ಸಜ್ಜುಗೊಳಿಸಿದನು

ಇಂದಿನ ಸ್ಥಾನಮಾನ

ಇಂದು ೧೯,೦೦೦,೦೦೦ ಯುದ್ಧವೀರರನ್ನು ಪಡೆದಿರುವ ಆಜ್ಞೆಯಿಂದ ವೊರೋಶಿಲೋವನು ಯುದ್ಧರಂಗಕ್ಕೆ ಇಳಿಸಬಲ್ಲನು ಜರ್ಮನಿಯ ಸೈನ್ಯಕ್ಕಿಂತ ಇಮ್ಮಡಿ ಶಕ್ತಿಸಂಪನ್ನವಾಗಿದೆ ಇಂದಿನ ವೊರೊಶಿಲೋವನ ಸೈನ್ಯವು.

[ಬಿ ಪುಟದ ನಾಲ್ಕನೇ ಕಾಲಮನ್ನು ನೋಡಿರಿ]

ಸಾಹುಕಾರ ಶ್ರೀನಿವಾಸ ರಂಗ ಪೈ
[ಸ್ಥಾಪನೆ ಕ್ರಿ ಶ 1858]
: : ಉಜ್ವಲ ಕಾಂತಿಯ : :
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾಹುಕಾರ ಮಹಾಲ್, ಮಂಗಳೂರು.

卐
ರಕ್ಷೈರ್ಮಹಾರ್ಹೈಸ್ತುತುರ್ಷನ
ದೇವಾಃ । ನ ಭೇಜಿರೇ ಭೀನು
ವಿಷೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ
卐

ಸ್ವದೇಶಾಭಿಮಾನಿ
SWADESHABHIMANI
ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

卐
ದೊರೆಯಲನುಪಮ ರತ್ನಗಳು
ಸಾ । ಗರವ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುತ ಬರುತಿರುವ ॥
ಗರಳಕವರಂಜದರೆ ಸುಧೆಯನು ।
ಮರೆತು, ಕ್ಷುದ್ರರ
ಕರದಿ ಕುಳಿತರೆ । ತೆರಳ ಬಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥವನು ॥
卐

ತಾರೀಕು ೧೧—೮—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 11—8—1939

ಮದ್ಯಪಾನ ನಿಷೇಧವು ಅಖಿಲ ಭಾರತದ ಕಾರ್ಯ

ಬೊಂಬಯಿ ನಗರ ಇಂದು ಸುಂದರವಾಯಿತು

ರಾಜಕೀಯ ಕೈದಿಗಳ ಉಪವಾಸ ತ್ಯಾಗ

ಸೇಟ್ ಗೋವಿಂದದಾಸರ ರಾಜಕೀಯ ವಿಶ್ರಾಂತಿ



ಬೊಂಬಾಯಿಯ ಅಜಾದ್ ಮೈದಾನಿನಲ್ಲಿ ನೆರೆದ ಲಕ್ಷಾಂತರ ಮಂದಿಗೆ ಮದ್ಯಪಾನ ನಿಷೇಧ ದಿನದಂದು ಸರ್ದಾರ ಪಟೇಲರು ಭಾಷಣ ಕೊಡುತ್ತಿದ್ದಾರೆ

ಮದ್ಯಪಾನ ನಿಷೇಧವು ಅಖಿಲ ಭಾರತದ ಕಾರ್ಯ

ಸರ್ದಾರರ ಹೇಳಿಕೆ

ಗಾಂಧಿಜಿಯವರ ಸಹಾಯ

ಅಹಮ್ಮದಾಬಾದಿನ ಸಭೆಯೊಂದರಲ್ಲಿ ಸರ್ದಾರ ಪಟೇಲರು ಮಾತನಾಡುತ್ತಾ ಕೇಂದ್ರ ಸರಕಾರವು ಸೈನ್ಯದ ಖರ್ಚನ್ನು ಕಡಿಮೆಮಾಡಿ ಪ್ರಾಂತಗಳಿಗೆ ಹೆಚ್ಚಿನ ಸಹಾಯವಿತ್ತು ಮದ್ಯಪಾನ ನಿಷೇಧದ ಕಾರ್ಯಕ್ರಮವನ್ನು ಹಿರಿದ ವರ್ಷದಲ್ಲಿ ಅಖಿಲಭಾರತ ಕಾರ್ಯವಾಗಿ ಮಾಡದಿದ್ದಲ್ಲಿ, ಕಾಂಗ್ರೆಸು ಮಂತ್ರಿಮಂಡಳಗಳು ರಾಜಿ ಕೊಡಬಹುದು ಎಂಬ ವಿಷಯದಲ್ಲಿ ಮಹಾತ್ಮಾಜಿಯವರು ಲಾಹೋರಿನಲ್ಲಿ ಸಂಭಾಷಣೆ ನಡಸುವ ಸಂದರ್ಭದಲ್ಲಿ ಹೀಗೆಂದರು.

'ಮದ್ಯಪಾನದ ಕುರಿತು ಸರ್ದಾರ ವಲ್ಲಭಭಾಯಿಯವರು ಹೇಳಿದ ಸಲಹೆಯನ್ನು ನಾನು ಸಂಪೂರ್ಣ ಅನುಮೋದಿಸುತ್ತೇನೆ ಆರ್ಥಿಕ ಪರಿಸ್ಥಿತಿಯಲ್ಲಿ ಸಂಕಷ್ಟಗೊಂಡವರಿಗೆ ಸಹಾಯ ಮಾಡಲು ನಾನು ಆಲೋಚಿಸಿರುವುದು. ಈ ಕಾರ್ಯವು ಆಗಬೇಕಾದರೆ, ಹಣ ಮತ್ತು ಸುಧಾರಣಾ ಸಾಹಸಗಳೆರಡೂ ಬೇಕಾಗಿವೆ ಈ ಸಂದರ್ಭದಲ್ಲಿ ಕೇಂದ್ರ ಸರಕಾರದ ಸಹಾಯವನ್ನು ಆಶಿಸುವುದು ಸಂಪೂರ್ಣ ನ್ಯಾಯವಾಗಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಸೈನ್ಯದ ಖರ್ಚನ್ನು ಕಡಿಮೆಮಾಡುವುದರಿಂದ, ಹಣವು ಒದಗಬಹುದಾಗಿಯೂ ನಾನು ತಿಳಿಯುತ್ತೇನೆ

ರಾಜಕೀಯದಿಂದ ವಿಶ್ರಾಂತಿ

ಜಬ್ಬಲ್‌ಪುರದ ಸೇಟ್ ಗೋವಿಂದದಾಸರು ಇತ್ತೀಚೆಗೆ ಮಹಾಕೋಸಲ ಪ್ರಾಂತಿಕ ಕಾಂಗ್ರೆಸು ಕಮಿಟಿಯ ತನ್ನ ಸ್ಥಾನಕ್ಕೆ ರಾಜಿಕೊಟ್ಟಿರುತ್ತಾರೆ. ಸ್ವಲ್ಪ ಸಮಯದ ವರೆಗೆ ರಾಜಕೀಯ ಕ್ಷೇತ್ರದಿಂದ ವಿಶ್ರಾಂತಿಪಡೆಯುವ ಸಲುವಾಗಿ ಇರುವ ಹಾಗೆ ಮಾಡಿರುವರೆಂದು ಅವರ ಹೇಳಿಕೆ.

ಆಗತ್ಯವಾದ ಅನುಜ್ಞೆಯನ್ನು ಪಡೆಕೊಂಡು ಬರುವ ಅಕ್ಟೋಬರ ತಿಂಗಳೊಳಗೆ ಅವರು ಕೇಂದ್ರ ನ್ಯಾಯವಿಧಾಯಕ ಸಭೆಯ ಸದಸ್ಯತನಕೂ ರಾಜಿಕೊಡಲಿರುವರಂತೆ.

ಬೊಂಬಯಿ ನಗರವು ಇಂದು ಸುಂದರವಾಗಿದೆ

ಸರ್ದಾರ ಪಟೇಲರ ಭಾಷಣ

ಆಕಾಶದಲ್ಲಿ ಗುಡುಗು ಮಿಂಚುಗಳು ತೋರಿಯುತ್ತಿದ್ದುವು. ಆದರೂ ಸರ್ದಾರ ಪಟೇಲರ ಭಾಷಣದ ಸಭೆಗೆ ಐದು ಲಕ್ಷ ಜನರಿಂದ ಹೆಚ್ಚು ಮಂದಿ ಬಂದು ಸೇರಿದ್ದರು.

ಬೊಂಬಯಿ ಕಾಂಗ್ರೆಸು ಭವನದಿಂದ ಹೊರಟ ಸರ್ದಾರ ಪಟೇಲ ಮತ್ತು ಬೊಂಬಯಿಯ ಮಂತ್ರಿಮಂಡಳದ ಮೆರವಣಿಗೆಯು ವಿಜೃಂಭಣೆಯಿಂದ ಸಭಾ ಸ್ಥಳಕ್ಕೆ ಬಂದಿತು ಮುಖ್ಯ ಮುಖ್ಯ ನಗರಗಳಲ್ಲಿ ಇವರು ಮೆರವಣಿಗೆ ಹೋಗುತ್ತಾ ನಗರದ ಗಂಡುಸರು, ಹೆಂಗುಸರು, ಮಕ್ಕಳು, ಮುದುಕರಾದಿಯಾಗಿ ಸರ್ವರೂ ಸಮರ್ಪಿಸಿದ ಪುಷ್ಪಮಾಲೆ ಮೊದಲಾದವುಗಳಿಂದ ಕಾಂಗ್ರೆಸು ಧುರೀಣರ ಮೇಲೆ ತಮಗಿರುವ ಭಕ್ತಿಯನ್ನು ತೋರಿಸಿದರು

ಮಿಲ್ಲು, ಕಾರ್ಖಾನೆ, ಸರಕಾರೀ ಆಫೀಸುಗಳಿಗೆಲ್ಲಾ ರಜೆ ಕೊಡಲ್ಪಟ್ಟ ಕಾರಣ ಮೆರವಣಿಗೆಯಲ್ಲಿ ಅಸಂಖ್ಯ ಜನರು ಸೇರಿದ್ದರು. ನಗರದ ಮಾತ್ರವಲ್ಲದೆ, ಸುತ್ತ ಮುತ್ತಲಣ ಜನರೂ, ರಾಷ್ಟ್ರಧ್ವಜವನ್ನು ಎತ್ತಿಕೊಂಡು ಗುಂಪು ಗುಂಪಾಗಿ ಬಂದು ಮೆರವಣಿಗೆಯಲ್ಲಿ ಸೇರಿದರು.

ಅಜಾದ ಮೈದಾನು ಮಾನವ ಸಂದಣಿಯ ಸಮುದ್ರದಂತೆ ತೋರುತ್ತಿತ್ತು

ಸರ್ದಾರ ಪಟೇಲರು ಮದ್ಯಪಾನ ನಿಷೇಧ ಕಾರ್ಯದ ಕುರಿತು ಟೀಕೆಗಳನ್ನು ಮಾಡಿದವುಗಳಿಗೆ ಸಮರ್ಪಕ ರೀತಿಯಿಂದ ಉತ್ತರ ಹೇಳುತ್ತಾ —

'ಯಾವ ಆನಂದದ ದಿನಕ್ಕಾಗಿ ಇದೀ ಭಾರತದೇಶವೇ ಕಾದುಕೊಂಡಿತ್ತೋ, ಆ ಶುಭ ದಿನವು ಇಂದು ಬೊಂಬಯಿಯ ನಗರದಲ್ಲಿ ಉದಯವಾಗಿದೆ ಇಂದಿನ ಈ ಅನುಪಮ ಘಟನೆಯು ಇದರ ಇತಿಹಾಸದ ಪುಟದಲ್ಲಿ ಸುವರ್ಣಾಕ್ಷರದಿಂದ ಲಿಖಿತವಾಗುವುದು ಇಂದಿನ ಬೊಂಬಯಿ ನಗರವು ಎಂದಿಗಿಂತಲೂ ಸೌಂದರ್ಯಶಾಲಿಯಾಗಿದೆ ಅಂತರ್ರಾಷ್ಟ್ರೀಯ ಮಹತ್ವದ ಈ ನಗರವು ಹಿಂದೂದೇಶದ ಪ್ರಸಿದ್ಧ ನಗರವೂ, ಮಹತ್ವವಾದ ಬಂದರಾಗಿ ಇಲ್ಲಿಯ ಯಶಸ್ವಿಯಾಗುವ ಕಾರ್ಯಕ್ರಮವು ಅಖಿಲ ಭಾರತದಲ್ಲಿ ಖಂಡಿತವಾಗಿ ಯಶಸ್ವಿಯಾಗುವುದು'' ಎಂದರು

ಆ ವೇಳೆ ಪ್ರಧಾನ ಮಂತ್ರಿ ಶ್ರೀ ಬಾಲಗಂಗಾಧರ ಖೇರರೂ ಉಜ್ವಲ ಭಾಷಣವಿತ್ತರು

ಬಳಿಕ, ಡಾ। ಕ್ಲಿಫೋರ್ಡ, ಡಾ। ಗಿಲ್ಡರ್, ಶ್ರೀ। ಬ್ರೆಲ್ವಿ, ಎಸ್. ಎನ್ ಡಾಂಗೇ, ಭುಲಾಭಾಯಿ ದೇಸಾಯಿ ಇವರುಗಳೂ ಸಭಿಕರನ್ನು ತಮ್ಮ ಅಮೋಘ ಭಾಷಣಗಳಿಂದ ಸಂತೋಷಗೊಳಿಸಿದರು.

ಬಂಗಾಳದ ರಾಜಕೀಯ ಕೈದಿಗಳ ಉಪವಾಸ ತ್ಯಾಗ!

ಎರಡು ತಿಂಗಳ ಅವಧಿ

ಡಂ ಡಂ ಮತ್ತು ಆಲಿಪುರ ಜೈಲುಗಳಲ್ಲಿ ಉಪವಾಸ ವ್ರತವನ್ನು ಕೈಕೊಂಡಿದ್ದ ಬಂಗಾಳದ ರಾಜಕೀಯ ಕೈದಿಗಳಲ್ಲಿ ಉಪವಾಸ ವ್ರತವನ್ನು ಆಗಸ್ಟ್ ಮೂರರಂದು ಎರಡು ತಿಂಗಳ ತನಕ ಬಿಟ್ಟರು ಬೋಸ ಸಹೋದರರ ಪ್ರಯತ್ನದಿಂದಾಗಿ ಇದು ಆಯಿತು.

ಶ್ರೀ ಸುಭಾಷರು ಪ್ರಕಟಣೆಯೊಂದರಲ್ಲಿ ಎರಡು ತಿಂಗಳ ಅವಧಿಯೊಳಗೆ ಎಲ್ಲಾ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡುವುದೆಂದು ತಿಳಿಸಿರುವರಾಗಿ ಹೇಳಿರುತ್ತಾರೆ

ಇವರು ಜೂಲಾಯಿ ೭ನೇ ತಾರೀಕಿಗೆ ತಮ್ಮ ಉಪವಾಸ ವ್ರತವನ್ನು ಆರಂಭಿಸಿದ್ದರು. ಅವರ ಉಪವಾಸ ಕಾರಣವು ಎಲ್ಲಾ ರಾಜಕೀಯ ಕೈದಿಗಳನ್ನು ಯಾವ ಶರತ್ತೂ ಇಲ್ಲದೆ ಎಲ್ಲಾ ನಾಗರಿಕ ಸ್ವಾತಂತ್ರ್ಯವುಕೊಟ್ಟು ಬಿಡುಗಡೆ ಮಾಡಬೇಕೆಂದಾಗಿತ್ತು ರಾಷ್ಟ್ರಪತಿಗಳು, ಗಾಂಧಿಜಿಯವರೆ ಮೊದಲಾದವರ ಅವರು ಉಪವಾಸವನ್ನು ಬಿಟ್ಟುಕೊಡಬೇಕಾಗಿಯೂ, ಅವರ ವಿಚಾರವನ್ನು ರಾಷ್ಟ್ರದವರೆಲ್ಲರೂ ಕೈಕೊಳ್ಳುವರೆಂದು ಭರವಸೆಯಿತ್ತಿದ್ದರು ಬೋಸ ಸಹೋದರರು ಬಂಗಾಳದ ಮಂತ್ರಿ ಮತ್ತು ರಾಜಕೀಯ ಕೈದಿಗಳೊಡನೆ ಮಾಡಿದ ವ್ಯವಹಾರದಿಂದ ಈಗ ಈ ಉಪವಾಸ ವ್ರತವನ್ನು ಎರಡು ತಿಂಗಳವರೆಗೆ ನಿಲ್ಲಿಸಲಾಗಿದೆ

ಬೋಸರು ತಮ್ಮ ಪ್ರಕಟಣೆಯಲ್ಲಿ ಸರಕಾರವು ಎರಡು ತಿಂಗಳ ಅವಧಿಯಲ್ಲಿ ಅವರನ್ನು ಬಿಡುಗಡೆ ಮಾಡಲು ಭರವಸೆ ಕೊಟ್ಟ ವಿಷಯವನ್ನೂ, ಹಾಗೆ ಮಾಡದಿದ್ದ ಪಕ್ಷದಲ್ಲಿ ಪ್ರತ್ಯಕ್ಷ ಸತ್ಯಾಗ್ರಹ ಚಳವಳವನ್ನೂ ಹೂಡಲು ಎರಡು ತಿಂಗಳ ಅವಧಿ ಸಿಗುವುದೆಂದೂ ಹೇಳುತ್ತಾರೆ. ಬಂಗಾಳ ಸರಕಾರವೂ ಈ ಕುರಿತು ವಿಚಾರ ನಡೆಸುತಿದೆ.

ಲಕ್ನೋದಲ್ಲಿ ೧೪೪ನೇ ಸೆಕ್ಷನ್!

ಗಾಂಧಿಜಿಯವರು ಕೈದಿಗಳ ಬಿಡುಗಡೆಗೆ ಯತ್ನಿಸುವರು!

ಶೀಯರಿಗೆ ಮಹಾತ್ಮರ ಬೋಧನೆ!

ಹಿಂದುಳಿದ ಜಾತಿಯವರ ಪ್ರಥಮ ಪರಿಷತ್ತು



ಬೊಂಬಾಯಿಯಲ್ಲಿ ಸಂಭ್ರಮದಿಂದ ಜರಗಿದ ಲೋಕಮಾನ್ಯ ತಿಳಕರ ಪುಣ್ಯ ದಿನಾಚರಣೆಯ ದಿನದಂದು, ಚಂದ್ರಕಾಂತ ಶಿಲಾ ನಿರ್ಮಿತವಾದ ತಿಳಕರ ಮಹಾ ಪ್ರತಿಮೆಯನ್ನು ಪುಷ್ಪಮಾಲೆ ಹಾಕಿ ಅಲಂಕರಿಸುವರು, ಶ್ರೀ. ಭೂಲಾಭಾಯಿ ದೇಸಾಯಿಯವರು ತಿಲಕರ ದಿನಾಚರಣೆಯ ಕುರಿತು ಭಾಷಣ ಕೊಡುತ್ತಿರುವರು.



ಲಕ್ನೋದಲ್ಲಿ ೧೪೪ನೇ ಸೆಕ್ಷನ್!

ಲಕ್ನೋ ಡಿ ಮೆಜಿಸ್ಟ್ರೇಟರು ಎರಡು ೧೪೪ನೇ ಸೆಕ್ಷನಿನ ಹುಕುಮನ್ನು ಲಕ್ನೋ ಮುನ್ಸಿಪಾಲಿಟಿ ಮತ್ತು ಕೆಂಟೋನ್ಮೆಂಟಿನೊಳಗೆ ಎರಡು ತಿಂಗಳ ಪರ್ಯಂತ ಜಾರಿ ಮಾಡಿರುವುದಾಗಿ ಆಜ್ಞೆಯಿತ್ತಿದ್ದಾರೆ!

ಮೊದಲನೆಯ ಆಜ್ಞೆಯು ಇಂದಿರುವ ಮೆರವಣಿಗೆ ಕೈಯಲ್ಲಿ ಆಯುಧಗಳನ್ನು ಹಿಡಿದು ಹೋಗುವಿಕೆ, ಮೊದಲಾದ ಅಂತರ್ಜಾತೀಯ ಗೊಂದಲಕ್ಕೆ ಕಾರಣವಾಗುವ ಯಾವುದಾದರೂ ಕಾರ್ಯಗಳನ್ನು ತಡೆಯುವಂತದ್ದಾಗಿದೆ.

ಎರಡನೆಯದು, ಯಾವ ಸಭೆ ಮತ್ತು ಸ್ಥಳಗಳಲ್ಲಾಗಲಿ ಸರಕಾರದ ಮುಂಚಿತವಾದ ಅಪ್ಪಣೆಯನ್ನು ಪಡೆಯದ ವಿನಹ ಲೌಡ್ ಸ್ಪೀಕರ್ ಇಡಬಾರದೆಂದು ನಿಷೇಧಿಸುವಂತಹುದಾಗಿದೆ. ಶೀಯಾ ಮತ್ತು ಸುನ್ನೀ ಪಂಗಡಗಳೊಳಗೆ ಇಂದು ಇರುವ ಜಾತೀಯ ದ್ವೇಷವನ್ನು ಕೆರಳಿಸುವಂತೆ, ಈಗ ಹಲವೆಡೆ ಲೌಡ್ ಸ್ಪೀಕರುಗಳ ಮೂಲಕ ಜಾತೀಯ ಮುಖಂಡರು ಉದ್ರೇಕಕಾರದವಾದ ಮಾತುಗಳನ್ನಾಡುವುದನ್ನು ತಡೆಯುವುದಕ್ಕಾಗಿ ಈ ಆಜ್ಞೆಯು ವಿಧಿಸಲಾಗಿದೆ.

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಗಾಂಧಿಜಿಯವರು ಯತ್ನಿಸುತ್ತಿದ್ದಾರೆ!

ಗಾಂಧಿಜಿಯವರು ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಯ ವಿಷಯದಲ್ಲಿ ಯತ್ನಿಸಬೇಕಾಗಿ ಶ್ರೀಗಳಾದ ಅನುಕೂಲ ಚಟರ್ಜಿ, ಅಜಿತ ಮಜುಮುದಾರ, ಕೃಷ್ಣಪಾದ ಚಕ್ರವರ್ತಿ ಇವರು ಗಾಂಧಿಜಿಯವರಿಗೆ ಬರೆದ ಪತ್ರಕ್ಕೆ ಉತ್ತರವಾಗಿ, ಗಾಂಧಿಜಿಯವರ ಕಾರ್ಯದರ್ಶಿಗಳಾದ ಶ್ರೀ ಪ್ಯಾರೇಲಾಲರು ಹೀಗೆಂದು ಬರೆಯುತ್ತಾರೆ.

ಗಾಂಧಿಜಿಯವರು ನಿಮ್ಮ ಮತ್ತು ಇತರರ ಗೆಳೆಯರ ಪತ್ರಗಳನ್ನು ನೋಡಿದ್ದಾರೆ, ಅವುಗಳಿಗೆ ಉತ್ತರವಾಗಿ, ಗಾಂಧಿಜಿಯವರ ವಿಷಯ ನಾನು ತಿಳಿಸುವುದೇನಂದರೆ, ಅಲಿಪುರ ಮತ್ತು ಡಂ ಡಮ ಜೈಲುಗಳಲ್ಲಿರುವ ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಯ ವಿಷಯ, ಅವರು ಕೈದಿಗಳೊಡನೆ ಹೇಳಿದಂತೆ ಖಂಡಿತವಾಗಿ ಯತ್ನ ಮಾಡುತ್ತಿರುವರು.'

ರಾಜಕೋಟಿದಲ್ಲಿ ಗಾಂಧಿಜಯಂತಿಯ ಕಾರ್ಯಕ್ರಮ

೭೦ ದಿನಗಳ 'ನೂಲುವ ಯಜ್ಞ'ದ ಕಾರ್ಯಕ್ರಮವನ್ನು ಅವರ ೭೧ನೇ ಜನ್ಮದಿನೋತ್ಸವದ ಸಲುವಾಗಿ ಮಾಡಬೇಕೆಂದ ಕಾರ್ಯಕ್ರಮವು ಅಗಸ್ಟ್ ೨೦ರಿಂದ ಸುರುವಾಗಿದೆ.

ಈ ಯಜ್ಞವು ರಾಷ್ಟ್ರೀಯ ಪಾಠಶಾಲೆಯಲ್ಲಿ ಜರಗುವುದು ಎಲ್ಲಾ ಖಾದೀ ಪ್ರೇಮಿಗಳೂ ಈ ಕಾರ್ಯಕ್ರಮದಲ್ಲಿ ಸಹಕರಿಸಬೇಕಾಗಿ ಕೇಳಿಕೊಳ್ಳಲಾಗಿದೆ

ಮಹಾತ್ಮಾಜಿಯವರು ಈ ಯಜ್ಞದ ಕಾರ್ಯಕ್ರಮವನ್ನು ಆಶೀರ್ವದಿಸುತ್ತಾ ಇದು ಯಶಸ್ವಿಯಾಗಲೆಂದು ತಿಳಿಸುತ್ತಾರೆ ಇದರ ಸಂಪಾದನೆಯು ಕ್ಷಾಮ ನಿವಾರಣಾ ಕಾರ್ಯಕ್ಕಾಗಿ ಉಪಯೋಗಿಸಲ್ಪಡುವುದು. ಈ ಮಹಾ ಖಾದೀ ಯಜ್ಞದ ಕಾರ್ಯಕ್ರಮಕ್ಕೆ ಪಂಡಿತ ನೆಹರುಗಳೂ ಮತ್ತು ಆಚಾರ್ಯ ಕೃಪಾಲನಿ ಮೊದಲಾದವರು ನೂಲನ್ನು ಕಳುಹಿಸಿಕೊಡುವುದಾಗಿ ತಿಳಿದಿದೆ

ಹಿಂದುಳಿದ ಜಾತಿಯವರ ಪ್ರಥಮ ಪ್ರಾಂತಿಕ ಪರಿಷತ್ತು

ಮದ್ರಾಸಿನಲ್ಲಿ ಅಗಸ್ಟ್ ೬ರಂದು ಹಿಂದುಳಿದ ಜಾತಿಯವರ ಪ್ರಥಮ ಪ್ರಾಂತಿಕ ಪರಿಷತ್ತು ಜರಗಿತು. ನೀಲಗಿರಿ ಡಿ| ಬೋರ್ಡ್ ಅಧ್ಯಕ್ಷರೂ, ಎಸೆಂಬ್ಲಿ ಸದಸ್ಯರೂ ಆದ ಶ್ರೀ| ಆರಿ ಗೌಡರು ಅಧ್ಯಕ್ಷತೆ ವಹಿಸಿದರು ರಾವ್ ಬಹದೂರ್ ಯು ರಾಮಪ್ಪ, ರಿಟಾಯರ್ಡ್, ಸಿವಿಲ್ ಜಡ್ಜ್ ಇವರು ಉದ್ಘಾಟನೆ ಮಾಡಿದರು.

ಗಾಂಧಿ ಸೇವಾ ಸಂಘ

ಗಾಂಧಿ ಸೇವಾ ಸಂಘದ ೬ನೇ ವಾರ್ಷಿಕ ಸಭೆಯು ಬಂಗಾಳದಲ್ಲಿ ಬರುವ ಫೆಬ್ರವರಿ ಮಾರ್ಚಿ ತಿಂಗಳುಗಳೊಳಗೆ ಜರಗುವುದೆಂದು ಅದರ ಅಧ್ಯಕ್ಷರಾದ ಡಾ| ಕಿಶೋರಿಲಾಲ ಮಶ್ರುವಾಲರು ಪ್ರಕಟಿಸುತ್ತಾರೆ.

ಶೀಯರಿಗೆ ಗಾಂಧಿಜಿಯವರ ಉಪದೇಶ

ಶೀಯರು ಸಾರ್ವಜನಿಕ ಸ್ಥಳಗಳಲ್ಲಿ ತಬರಾ ಓದುವುದನ್ನ ನಿಲ್ಲಿಸಬೇಕೆಂದು ಗಾಂಧಿಜಿಯವರು ಅವರಿಗೆ ಉಪದೇಶವಿತ್ತಿರುವರು ಮಾಧೇಶಾಹೇಬಾ ಎಂಬುದು ಖಲೀಫರನ್ನು ಹೊಗಳುವುದು ತಬರಾ ಎಂಬುದು ಮೊದಲನೆಯ ಮೂರು ಮಂದಿ ಖಲೀಫರನ್ನು ಬಯ್ಯುವುದು ಶೀಯರು ತಬರಾ ಓದುವವರು ಗಾಂಧಿಜಿಯವರು ಆ ಕುರಿತು ಬರೆಯುತ್ತಾ ಇದು ಪವಿತ್ರ ಖುರಾನಿನಲ್ಲಿ ಹೇಳಲ್ಪಟ್ಟ ಧಾರ್ಮಿಕ ಕೆಲಸವಾಗಿರಲಾರದೆಂದೂ ಇತರರನ್ನು ಬಯ್ಯುವುದು ಧರ್ಮವಲ್ಲವೆಂದೂ ಆದುದರಿಂದ ಪ್ರಜಾಶಾಂತಿಗಾಗಿ ಶೀಯರು ಸಾರ್ವಜನಿಕ ತಬರಾ ಓದುವುದನ್ನು ನಿಲ್ಲಿಸಬೇಕೆಂದೂ ತಿಳಿಸಿರುವರು.

ಪಂಜಾಬಿನ ರಾಜಕೀಯ ಕೈದಿಗಳ ಬಿಡುಗಡೆ ಗಾಂಧಿಜಿಯವರ ಸಲಹೆ

ಪಂಜಾಬಿನ ರಾಜಕೀಯ ಕೈದಿಗಳ ಬಿಡುಗಡೆಯ ವಿಷಯದಲ್ಲಿ ಶೀ| ಗೋಪಿಚಂದ ಭಾರ್ಗವ? — ಧರ್ನಲಾಲ ಶುಕ್ಲರದರು ಗಾಂಧಿಜಿಯವರನ್ನು ಕಂಡು ಸಂಭಾಷಿಸಿರುವರು

ಗಾಂಧಿಜಿಯವರು ಅವರೊಡನೆ ಈ ಕುರಿತು ವರ್ಕಿಂಗ್ ಕಮಿಟಿಯು ಒಂದು ನಿರ್ಣಯ ಮಾಡುವುದೆಂದೂ, ಬಂಗಾಳ ರಾಜಕೀಯ ಕೈದಿಗಳ ಬಿಡುಗಡೆಯಿಂದ ಅಖಿಲಭಾರತದ ರಾಜಕೀಯ ಕೈದಿಗಳ ಸಮಸ್ಯೆಯೂ ಪರಿಹಾರವಾಗುವುದೆಂದೂ ಹೇಳಿದರು

ಪ್ರಜಾಸತ್ತೆಗೆ ಜಯವಾಗುವುದು

ಜೆಕೊಸ್ಲವೇಕಿಯದ ಹಿಂದಿನ ಪ್ರೆಸಿಡೆಂಟರಾದ ಡಾ. ಬೆನೆಸರವರು ಯುರೋಪಿನಲಿ ಮುಂದಕ್ಕೆ ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯಗಳಿಗೆ ವಿಜಯವಾಗುವೆಂಬ ವಿಷಯದಲ್ಲಿ ಕಾಂಬ್ರಿಜಿನಲ್ಲಿ ಸೇರಿದ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಹೇಳಿದರು

ಅವರು ತಮ್ಮ ಭಾಷಣದಲ್ಲಿ ಇಂದಿನ ಯುರೋಪಿನ ಪ್ರಜಾಸತ್ತೆ ಮತ್ತು ಸರ್ವಾಧಿಕಾರಿ ಪಕ್ಷಗಳ ವಿಷಯವಾಗಿ ವಿವರಿಸುತ್ತಾ, ಈಗಣ ಪ್ರಜಾಸತ್ತೆಗಳಿಗೆ ತಮ್ಮ ತತ್ವದಲ್ಲಿ ಅಚಲವಿಶ್ವಾಸವಿಲ್ಲವೆಂದೂ, ಧೈರ್ಯವಿಲ್ಲವೆಂದೂ ನಾಗರಿಕ ಸ್ವಾತಂತ್ರ್ಯದಬಗ್ಗೆ ಎದೆಗಾರಿಕೆಯಿಲ್ಲವೆಂದೂ, ಆದುದರಿಂದಲೇ ಸರ್ವಾಧಿಕಾರಿಗಳಿಂದ ಉಂಟಾಗುವ ಗೊಂದಲಗಳಿಂದ ಭಯಭೀತವಾಗಿವೆಯೆಂದೂ ಹೇಳಿದರು

ಕಡೆಗೆ, ಜಗತ್ತಿನ ಇತಿಹಾಸದಲ್ಲಿ ರಾಷ್ಟ್ರದ ಸ್ವಾತಂತ್ರ್ಯ ಮತ್ತು ಪ್ರಜಾಹಿತಕ್ಕಾಗಿ ಹೋರಾಡದ ಕಾಲವು ಇರಲೇ ಇಲ್ಲವೆಂದೂ, ಇಂದಿನ ತಮಸ್ಸನ್ನು ಭೇಧಿಸಿ, ಮುಂದಕ್ಕೆ ಸ್ವಾತಂತ್ರ್ಯದ ಸೂರ್ಯೋದಯವಾಗುವುದೆಂದೂ ಭರವಸೆಯಿಂದ ನುಡಿದರು

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction Chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—**K. R. GURU**, *Managing Director*

ಸರದಾರ ಭವನ Sirdar Bhavan

ಫೆಲಿಕ್ಸ್‌ಪೈ ಬಜಾರ್—ಮಂಗಳೂರು.

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ ಎಲ್ಲಾ ಮೇಲ್ಪಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ.

Propriter— H. R. Rao,

Bangalore Gilt Emporium Madras

ಜಪಾನಿನೊಡನೆ ಪಿಕಲಾಟ

ಚೇಂಬರ್ಲೀನರ ಪ್ರಕಟಣೆಗಳಿಂದ ಬ್ರಿಟಿಷರ ಧೋರಣೆಯನ್ನು ತಿಳಿದುಕೊಳ್ಳುವುದು ಕಷ್ಟವಾಗಿದೆ. ಅವರ ನಡತೆಗಳಿಂದ ಮಾತ್ರ ಅದನ್ನು ಕಂಡು ಹುಡುಕಬೇಕಾಗಿದೆ. ಪ್ರತಿಯೊಂದು ಸಂಗತಿಯು ಗುಟ್ಟು ಹಣದಲ್ಲಿದೆ. ಜಪಾನಿಯರು ಇಂದು ಚೈನಾದಲ್ಲಿ ವಶಪಡಿಸಿದ ಭಾಗಗಳ ಆರ್ಥಿಕ ದುಸ್ಥಿತಿಯ ವಿಷಯವಾಗಿ ಏನೆಂದೂ ಪ್ರಯತ್ನಮಾಡಿಲ್ಲ, ಇತ್ತ ಬ್ರಿಟಿಷ ವ್ಯಾಪಾರಿಗಳಾಗಲಿ, ಚೈನೀಯ ಬೇಸಾಯಗಾರನಾಗಲಿ, ಜಪಾನಿನ ಅಧಿಕ ಬೆಲೆಯ ನಾಣ್ಯಗಳನ್ನು ಅಂಗೀಕರಿಸುವುದಿಲ್ಲ. ಎಲ್ಲಾ ಕಡೆಯಲ್ಲಿಯೂ ಚೈನೀಯರ ಡೋಲರುಗಳನ್ನು ಬ್ರಿಟಿಷ್ ಬೇಂಕುಗಳು ಕೈಗೊಂಡು ಚಲಾವಣೆ ನಡೆಸುತ್ತಿವೆ, ಮಾತ್ರವಲ್ಲದೆ ಬ್ರಿಟಿಷ್ ಮತ್ತು ಚೈನಾಗಳೊಳಗೆ ಅನ್ಯೋನ್ಯ ವ್ಯಾಪಾರವು ಸುಸೂತ್ರವಾಗಿ ಸಾಗುವ ಕಾರಣ, ಚೈನೀಯರಿಗೆ ಬ್ರಿಟಿಷ್ ಸೈನ್ಯ ಸಾಮಗ್ರಿಯನ್ನು ತರಿಸಿಕೊಳ್ಳುವುದು ಸಾಧ್ಯವಿದೆ. ಜಪಾನು ಚೈನಾವನ್ನು ಗೆದ್ದದ್ದು ಅದಕ್ಕೆ ಲಾಭವಾಗುವ ಬದಲು ಹೊರೆಯಾಗುವುದು ಸಾಧ್ಯವಿದೆ; ಯಾಕೆಂದರೆ ಈ ನಾಣ್ಯವ್ಯವಹಾರದಿಂದಾಗಿ, ಚೈನದ ಕಚ್ಚಾ ಮಾಲುಗಳನ್ನಾಗಲಿ, ಮನುಷ್ಯಶಕ್ತಿಯನ್ನಾಗಲಿ ಜಪಾನು ಕ್ರಯಕ್ಕೆ ಪಡೆದು ಬೇಕಾದಂತೆ ಉಪಯೋಗಿಸುವುದು ಸಾಧ್ಯವಿಲ್ಲ. ಹಾಗಾಗಿ ಎಲ್ಲಿವರೆಗೆ ಬ್ರಿಟಿಷರ ಸಂಪರ್ಕವು ಚೈನಾಕ್ಕೆ ಇದೆಯೋ ಅಲ್ಲಿ ವರೆಗೆ ಚೈನದಲ್ಲಿ ಜಪಾನಿನ ಆರ್ಥಿಕ ರಾಜಕೀಯ ಬೆಳವಣಿಗೆಗೆ ತಡೆಯುಂಟೆಂಬುದು ಸ್ಪಷ್ಟವಾಯಿತು. ತಮ್ಮ ಜಯಕ್ಕೆ ಬ್ರಿಟಿಷರು ಹೀಗೆ ಅಡ್ಡ ಕಾಲಿಡುವ ವಿಷಯವು ಜಪಾನಿಗೆ ತಿಳಿದು, ಬ್ರಿಟಿಷರು ಆ ಕಡೆಯಿಂದ ಹೊರಹಾಕುವ ಯತ್ನವನ್ನು ಅವರು ಮಾಡಿದರು. ಟಿಯೆನ್ಸಿನ್‌ನ ಪ್ರಕರಣ ಮತ್ತು ಬ್ರಿಟಿಷರ ಅಪಮಾನ ಮೊದಲಾದ ಕಾರ್ಯಗಳ ಅರ್ಥವೇನೆಂದರೆ, ಒಂದೋ ಬ್ರಿಟಿಷರು ಚೈನದಿಂದ ತೊಲಗಿಹೋಗಬೇಕು, ಇಲ್ಲವಾದರೆ ಜಪಾನಿಗೆ ಶರಣಾಗಬೇಕೆಂಬುದೇ ಆಗಿದೆ.

ಆದರೆ ಚೇಂಬರ್ಲೀನರ ಇಂದಿನ ಕತ್ತರಿ ನೀತಿಯು ಹೀಗಿದೆ: ಮೊದಲನೆಯದಾಗಿ ಯುದ್ಧವನ್ನು ತಪ್ಪಿಸುವುದು, ಆ ಮೇಲೆ ಚೈನೀಯರನ್ನು ಪ್ರೋತ್ಸಾಹಿಸುವುದು, ಕಡೆಗೆ ಜಪಾನಿಯರನ್ನು ಆರ್ಥಿಕ ಮುಗ್ಗಟ್ಟಿನಿಂದ ಕಂಗಾಲು ಮಾಡುವುದು. ಆದರೆ ಯುರೋಪಿನ ಇಂದಿನ ಸಂದರ್ಭವನ್ನು ಚೆನ್ನಾಗಿ ತೆರೆದ ಕಣ್ಣುಗಳಿಂದ ಪರೀಕ್ಷಿಸುವ ಜಪಾನಿಗೂ, ಇಂದು ಬ್ರಿಟನು ಜಪಾನೀಯರಿಗೆ ಎದುರಾಗಿ ತನ್ನ ಯುದ್ಧ ಸೈನ್ಯವನ್ನು ಕಳುಹಿಸಲು ತಯಾರಿಲ್ಲವೆಂಬ ವಿಷಯ ಚೆನ್ನಾಗಿ ತಿಳಿದಿದೆ.

ಅಷ್ಟರಲ್ಲಿಯೇ ಟೋಕಿಯೋದಲ್ಲಿ ಬ್ರಿಟಿಷ ಮತ್ತು ಜಪಾನೀಯರಿಗೆ ಸಂಧಿಯಾಗುವ ಮಾತುಕತೆ ಜರಗಿತು. ಬ್ರಿಟಿಷರು ಚೈನೀಯರ ಡೋಲರನ್ನು ಪ್ರೋತ್ಸಾಹಿಸುವುದು ಹಿಂತೆಗೆಯಬೇಕೆಂಬ ಶರ್ತವೂ ಆಯಿತು. ಜಪಾನೀಯರು ಬ್ರಿಟಿಷರ ಬೆಂಬಲವನ್ನು ತಾವು ಪಡೆದು ಬಿಟ್ಟೆವೆಂದು ಭ್ರಮಿಸಿಕೊಂಡರು. ಟಿಯೆನ್ಸಿನ್‌ನಲ್ಲಿ ನಡೆಯುವ, ಎಲ್ಲಾ ರೀತಿಯ ಬ್ರಿಟಿಷ್ ವಿರುದ್ಧ ಚಳವಳಿಗಳೂ ನಿಲ್ಲಿಸಲ್ಪಟ್ಟವೆಂದು ಜಪಾನು ತಿಳಿಸಿತು.

ಕಟ್ಟಕಡೆಗೆ, ಚೇಂಬರ್ಲೀನರ ಪ್ರಕಟಣೆಯು ಜಪಾನನ್ನು ತಲೆಕೆಳಗು ಮಾಡಿದೆ. ಜಪಾನು ಅಲ್ಲಿ ಎಷ್ಟು ಭದ್ರವಾದ ಯುದ್ಧ ಸೈನ್ಯವನ್ನು ಸಿದ್ಧಮಾಡಿಕೊಂಡಿದೆಯೋ, ಅದಕ್ಕಿಂತ ಮಿಗಿಲಾದ ಪಡೆಯು ನಮ್ಮಲ್ಲಿದೆಯೆಂದೂ ಅಗತ್ಯವಿದ್ದಲ್ಲಿ ಯುದ್ಧರಂಗಕ್ಕೆ ಕಳುಹಿಸಲು ತಯಾರಿರುವುದಾಗಿಯೂ, ಇಂದಿನ ಯುರೋಪಿನ ಧೋರಣೆಯಿಂದ ಅಂತಹ ಕಾರ್ಯಗಳನ್ನು ತಾವು ಆರಂಭಿಸಬೇಕಾಗಿ ಬಂದಿದೆಯೆಂದೂ ಅಂತಹ ಸಂದರ್ಭದಲ್ಲಿ ಯುದ್ಧದ ಸಂಭವವನ್ನು ತಾವು ಎದುರು ನೋಡುತ್ತಿರುವೆವೆಂದೂ ಚೈನದಲ್ಲಿ ಆಗುತ್ತಿರುವ ಘಟನೆಗಳನ್ನು ಕೇಳಿ

ತೆರೆಯ ಮರೆಯಲ್ಲಿ

ಚೇಂಬರ್ಲೀನರ ದ್ವಂದ್ವ ಧೋರಣೆ

ತನ್ನ ರಕ್ತವು ಕುದಿಯುತ್ತದೆಯೆಂದೂ ಚೇಂಬರ್ಲೀನರು ರಣನಾದವನ್ನೇ ಮೊಳಗಿಸಿ ಬಿಟ್ಟಿದ್ದಾರೆ.

ಚೇಂಬರ್ಲೀನರ ಇಂತಹ ಪ್ರಕಟಣೆಯು, ಅವರ ಶಾಂತಿಸಾಧನೆಯ ವಿಷಯದಲ್ಲಿ ಜಪಾನೀಯರಿಗೆ ಸಂಶಯವನ್ನುಂಟುಮಾಡಿದೆ. ಟ್ಯೆನ್ಸಿನ್ನಲ್ಲಿ ತಿರುಗಿ ಬ್ರಿಟಿಷರಿಗೆ ಉಪಟಳವು ಜೋರಾಗಿ ಆರಂಭವಾಗಿದೆ. ಬ್ರಿಟಿಷ್ ವಿರುದ್ಧ ಜನರು ಪಟ್ಟಣದಲ್ಲಿ ತುಂಬಿ ಬ್ರಿಟಿಷರನ್ನು ಬರದಂತೆ ಹೊರಹಾಕುತ್ತಿದ್ದಾರೆ.

ಅಂತೂ ಈ ಎಲ್ಲಾ ಕಾರ್ಯಗಳಿಂದ ನಾವು ಚೇಂಬರ್ಲೀನರಿಗೆ ಒಂದು ಸ್ಪಷ್ಟವಾದ ಧೈರ್ಯಪೂರ್ವಕವಾದ ಧೋರಣೆಯು ಇಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಯಬಹುದಾಗಿದೆ.

ಹೀಗೆ ಜಪಾನಿನೊಡನೆ ಯುದ್ಧ ಭೀತಿಯನ್ನು ಹೊತ್ತ ಸಿಂಹ ಚೇಂಬರ್ಲೀನರು, ಅತ್ತ ಕಡೆ ರಷ್ಯದೊಡನೆ ಒಪ್ಪಂದಕ್ಕಾಗಿ ಸೈನ್ಯಾಧಿಕಾರಿಗಳನ್ನು ಕಳುಹಿಸುತ್ತಿದ್ದಾರೆ. ರಷ್ಯ ಮತ್ತು ಜಪಾನುಗಳಿಗೆ ಮಂಚೂರಿಯಾದಲ್ಲಿ ಜಗಳವು ಬಹು ಕಾಲದಿಂದ ನಡೆಯುತ್ತಲೇ ಇದೆ. ಹೀಗಾಗಿ ರಷ್ಯ ಬ್ರಿಟನುಗಳು ಒಂದುಗೂಡಿ ಜಪಾನಿನ ಕಲಹದಾಹವನ್ನು ಇಳಿಸುವ ಯೋಚನೆ ಮಾಡುವುದು ನ್ಯಾಯವಿದೆ.

ಹಿಟ್ಲರನೊಡನೆ ಹುಸಿ ಗೆಳೆತನ

ಈಗ ನಾವು ಪೂರ್ವದಿಂದ ಪಶ್ಚಿಮದ ಕಡೆಗೆ ತಿರುಗಿ ಯುರೋಪಿನಲ್ಲಿ ಚೇಂಬರ್ಲೀನರು ಕೈಗೊಂಡ ಧೋರಣೆಯ ಕುರಿತ ವಿಚಾರಿಸಿದರೆ ಮೇಲಿನ ಮಾತು ಇನ್ನಷ್ಟು ಸ್ಪಷ್ಟೀಕರಣ ಸ್ಪಷ್ಟವಾದೀತು.

ಜರ್ಮನಿಯ ವಿಷಯವಾಗಿ ಬ್ರಿಟನಿನ ನಿಜವಾದ ಧೋರಣೆ ಏನು? ಹೊರಗಿನಿಂದ ನೋಡಿದಲ್ಲಿ, ಎರಡು ರಾಷ್ಟ್ರಗಳೂ ಪರಸ್ಪರ ಗೆಳೆತನವನ್ನು ಇಟ್ಟುಕೊಂಡಂತೆಯೇ ಕಾಣುವುದು. ಇಂಗ್ಲೆಂಡು ಹಿಟ್ಲರನನ್ನು ಸಮಾಧಾನ ಮಾಡುತ್ತಾ ಆ ಮೂಲಕ ಯುರೋಪಿನಲ್ಲಿ ಯುದ್ಧವು ಸಂಭವಿಸದಂತೆ ನೋಡುತ್ತದೆ.

ಕಳೆದ ಮಾರ್ಚಿಯಲ್ಲಿ ಚೇಂಬರ್ಲೀನರು ಹಿಟ್ಲರನು ಜೆಕೊಸ್ಲೊವೇಕಿಯವನ್ನು ಆಕ್ರಮಿಸುವ ಪಕ್ಷದಲ್ಲಿ ತಮ್ಮ ಸ್ಪಷ್ಟವಾದ ನಿಷೇಧವಿದೆಯೆಂದು ಹೇಳಿದರು. ಆದರೆ ಜರ್ಮನ್ ಮಂತ್ರಿಯು ಇಂಗ್ಲೆಂಡಿಗೆ ಬಂದು, ಅಲ್ಲಿನ ಬೇಂಕಿನಲ್ಲಿದ್ದ ಜೆಕ್ಕರ ನಿಧಿಯನ್ನು ಕೇಳಲು ಯಾವ ಮಾತಿಲ್ಲದೆ ಕೊಟ್ಟೇಬಿಟ್ಟರು. ಹೌಸ್ ಒಫ್ ಕಾಮನ್ಸಿನಲ್ಲಿ ಈ ಕುರಿತು ಪ್ರಶ್ನೆ ಬಂದಾಗ ತೆರೆಯಮರೆಯಲ್ಲಿ ಆಗುವ ವಿಷಯವು ಯಾರಿಗೂ ಗೋಚರವಾಗದಂತೆ ಗುಪ್ತವಾಗಿರಿಸಲಾಗಿತ್ತು.

ಆ ಮೇಲೆ ಡಾಕ್ಟರ್ ವಾಲ್ಟರವರು ಲಂಡನಿನಲ್ಲಿ ಜರಗಿದ 'ತಿಮಿಂಗಿಳ ಸಮ್ಮೇಳನ'ಕ್ಕೆ ಬಂದಾಗ ಬ್ರಿಟಿಷ್ ಮಂತ್ರಿಗಳು ೧೦೦೦, ೦೦೦,೦೦೦ ಪವನುಗಳ ಸಾಲವನ್ನು ಜರ್ಮನಿಗೆ ಕೊಡುವುದಾಗಿ ಭರವಸೆಯಿತ್ತರು. ಇದರಿಂದ ಹಿಟ್ಲರನು ತನ್ನ ದೃಷ್ಟಿಯನ್ನು ಯುದ್ಧದ ಕಡೆಯಿಂದ ಇತರ ರಾಷ್ಟ್ರೀಯ ಅಭಿವೃದ್ಧಿಯ ಕಡೆಗೆ ತಿರುಗಿಸಬಹುದೆಂದು ಬ್ರಿಟನಿನ ಭಾವನೆಯಾಗಿದೆ. ಈ ಕುರಿತು ಹೌಸ್ ಒಫ್ ಕಾಮನ್ಸಿನಲ್ಲಿ ಪ್ರಶ್ನೆ ಬಂದಾಗ "ಹೀಗೆ ಮಾಡುವುದರಿಂದ ಯಾವ ತೊಂದರೆಯೂ ಆಗಲಾರದೆಂದು ನಾನು ಭಾವಿಸುತ್ತೇನೆ" ಎಂದು ಹೇಳಿದ ಚೇಂಬರ್ಲೀನರ ಮಾತು ಆ ಸುದ್ದಿಯನ್ನು ದೃಢಪಡಿಸುತ್ತದೆ. ಹೀಗೆ ಹಿಟ್ಲರನೊಡನೆ ರಾಜತಂತ್ರ ಕುಶಲತೆಯ ಆಟ ಆಡುವ ಚೇಂಬರ್ಲೀನರು ಮತ್ತು ಅವರ ಗೆಳೆಯರು ಇಂದು ಜರ್ಮನಿಯು ತನ್ನ ಕಾರ್ಯದಲ್ಲಿಯೇ ಗಮನಪಡುವಂತೆ ಮಾಡುವ ಸಾಧನೆಯಲ್ಲಿದ್ದಾರೆ.

ಆದಕಾರಣ ಮುಂದಿನವಾಗಿಯೂ ಜರ್ಮನಿಯು ಡಾನ್ಜಿಗನ್ನು ಪಡೆಯುವುದೆಂಬ ವಿಷಯ ಸ್ಪಷ್ಟವಾದಂತಾಯಿತು. ಪೋಲೆಂಡನ್ನು ಜರ್ಮನಿಯು ಬೆದರಿಸಿದರೆ ಮಾತ್ರ ಬ್ರಿಟನು ಸುಮ್ಮಗಿರಲು ಸಾಧ್ಯವಿಲ್ಲವಂತೆ. ಆದರೆ ಪೋಲೆಂಡನ್ನು ಜರ್ಮನಿಯು ಬೆದರಿಸಿದೆಯೋ ಇಲ್ಲವೋ ಎಂಬ ವಿಷಯದ ಕುರಿತು ತೀರ್ಮಾನ ಮಾಡುವವರಾದರೂ ಬ್ರಿಟನೇ ಅಲ್ಲದೆ ಬೇರೆ ಯಾರೂ ಅಲ್ಲ.

ಜರ್ಮನಿಗೆ ಹಲವು ವಸಾಹತುಗಳು ಸಿಗುವವು ಜರ್ಮನಿಯ ಕೈಗಾರಿಕೆಯ ಅಭಿವೃದ್ಧಿಗೆ ಬೇಕಾದ ಸಾಲವೂ ದೊರೆಯುವುದು. ಬ್ರಿಟಿಷ್ ವೃತ್ತ ಪತ್ರಿಕೋದ್ಯಮಿ ಕೆನ್ಸ್ಲೇಯವರು ಈಗಾಗಲೇ ಜರ್ಮನಿಗೆ ತೆರಳಿ ಹಿಟ್ಲರರನ್ನು ಕಂಡು ಮಾತನಾಡಿದ್ದಾರೆ. ಬೇಗನೇ ಹೀನರ್ ಗ್ರಾಂಡಿಯವರು ಲಂಡನಿಗೂ ಬರುವರು.

ಬ್ರಿಟನು ಈ ರೀತಿಯ ಕತ್ತರಿ ಪ್ರಯೋಗದ ದ್ವಂದ್ವ ಧೋರಣೆಯು ಆಟವಾಡುವುದು ಸ್ಪಷ್ಟವಾಗಿದೆ. ಈ ಆಟದಿಂದ ಯುರೋಪಿನಲ್ಲಿ ಭಯಂಕರ ಅನಾಹುತವಾಗುವುದೇ ಎಂಬುದು ಇಂದಿನ ಸಂದೇಹ. ಶಾಂತಿಯನ್ನು ಕ್ರಯಕ್ಕೆ ಪಡೆದುಕೊಳ್ಳಲು ಖಂಡಿತವಾಗಿಯೂ ಸಾಧ್ಯವಿಲ್ಲ.

ಹಿಟ್ಲರನು ಖಡ್ಗ ಶಕ್ತಿಯೆ ನ್ಯಾಯವೆಂದು ನಂಬುತ್ತಾನೆ. ಇದರಿಂದಲೇ ಅವರು ಮಾಡ್ರಿಡಿನಿಂದ ಟ್ಯೆನ್ಸಿನ್ ವರೆಗೆ ಜಯಶಾಲಿಗಳಾಗಿದ್ದಾರೆ. ಇಂದಿನ ಈ ಉದ್ಯೋಗವನ್ನು ಯಾವುದಾದರೂ ಖಂಡಿತ ಧೋರಣೆಯಿಂದ ಎದುರಿಸುವುದು ಅಗತ್ಯವಿದೆ. ಆಗ ಮಾತ್ರ ನಿಶ್ಚಿತವಾದ ಶಾಂತಿಯು ಕೈಗೂಡುವುದು.

NOTICE

In the Court of the District Munsif of Mangalore

Small Cause Suit No 137 1939.

Between

The Javalaxmi Bank Ltd., Mangalore, by Secretary M. Ganesh Rao } Plaintiff.

and

1. P. Kunjunni Menon } Defendants
2. P. Subba Rao }

To,

1. P. Kunjunni Menon, son of Kunju Panickkar, Secretary General Insurance Bank of India Ltd., Mangalore.
2. P. Subba Rao, son of Panambur Krishnayya Registered Medical Practitioner, Radha Dispensary, Mangalore.

Notice is hereby given that the above named plaintiff filed a suit against you for recovery of the monies due under a demand promissory note dated 11—8—1936 executed in favour of the plaintiff Bank and the same stands posted to *28-8-1939* for final disposal

You are hereby requested to apper on the above said date to contest the above suit failing which the same shall be decided and proceeded with exparte.

Published under orders of the Court dated 31st July 1939.

Mangalore, } G. Somasheker Rao
6—8—1939 } Vakil for Plaintiff.

A Sensational Interview

How would the world get on without ... interviews? Journalists who make a speciality of interviewing travel all over the world; they penetrate into houses and workshops, into laboratories and Offices, go behind the scenes of theatres and visit the dressing room at sports grounds, and ask questions... and take notes.

In the morning, you open your newspaper and read the results of a thousand and one interviews You learn how Dr Willam Mengelberg works, what books Greta Garbo perfers, how Henry Ford began to make cars and how many letters Roosevelt must read every day ...

As soon as you have done something out of the ordinary you are interviewed You are asked every possible kind of question .....and others, because the world wants to know something about

Not long ago I interviewed Juan Vujtech Do you know him, this Czech who is remarkable on account of his perseverance? In July 1937, the paper stated that he had just taken a decision as strange as it was audacious he wanted to go round the world on foot and he had commenced his journey. We are now in 1938 and Vujtech has already covered 80,000 miles! I met him in a South-Africa and was able to have a five minutes tal kwith this sensational globe-trotter. "How are you" I enquired. "Well, sir, I've had nothing to worry about anywhere, every-thing has gone swimmingly you understand Naturally, one catches cold occasionally You do'nt merely go round the world In Egypt I was held up for some time by malaria, but thanks to the recommendations of the Malaria-Commission of the League of Nations advising that for a cure of malaria a daily dose of 15 to 20 grains of quinine should be taken from 5 to 7 days, that is all finished now and for good you know According to the abovesaid Malaria Commission, I now take 6 grains of quinine (on other medicine) every day, I have no further trouble. That's the product that has immunised me. To prevent malaria in hot countries I take 6 grains a day and not prevent influenza in cold ores, I always take 3 grains of quinine every day You ought to do the same, it's good for everybody".
"I'll think about it", I replied

"Tired? I never got tired I never do less than 25 miles a day. Sometimes as much as 30 And now I'm just going to the boat for Australia

Juan Vujtech continues his journey on foot, round the world

Mal Eng 57

ಕಾಪು ಪೇಟೆ ಗೌಡ ಸಾರಸ್ವತ ಬ್ರಾಹ್ಮಣರು ಆರಾಧಿಸಿ ಬರುವ ಮಂಗಳೂರು ಸಬ್ ಕೋರ್ಟು ನಂಬ್ರ 47/1921 ಕ್ರಮ ಅರ್ಜಿ ನಂಬ್ರ 142/1922ನೇಯು ಸ್ಕೀಮಿಗೆ ಒಳಪಟ್ಟ ಕಾಪು ಶ್ರೀ ಹಳೇಮಾರಿಅಮ್ಮ ದೇವರ ಭಂಡಾರದ ಬಾಬ್ತು ತಾರೀಕು 29-7-1938ರ ಲಾಗಾಯ್ತು ತಾರೀಕು 27-7-1939ರ ವರೆಗಿನ ವರ್ಷ ೧ರ ಜಮಾ ಖರ್ಚಿನ ಗೋಶ್ವಾರೆ

ಜಮಾ ವಿವರ	ನಗದಿ ರೂ	ಆ.	ಪೈ	ಪವನು ಮತ್ತು ಅರ್ಧ ಪವನು	ಭತ್ತ	ಅಕ್ಕಿ	[illegible]	[illegible]	ಉದ್ದು	[illegible]	ಕ್ಯಾ	[illegible]
ಗುದಸ್ತಾ ಶಿಲ್ಕು	157	11	8	2 ಪ	—	14¼1¼	—	—	—	—	—	—
ಗದ್ದಿಗೆ ಪೂಜೆ ಬಾಬ್ತು ಜಮಾ	1847	15	7	—	—	—	—	—	—	—	—	—
ಕುಂಕುಮಾರ್ಚನೆ ಬಾಬ್ತು ಜಮಾ	88	2	0	—	—	—	—	—	—	—	—	—
ಪವನು ಜಮಾ	—	—	—	7 ಪ	—	—	—	—	—	—	—	—
ಅರ್ಧ ಪವನು ಜಮಾ	—	—	—	4 ಅ ಪ	—	—	—	—	—	—	—	—
ಚಿನ್ನ ತೂಕ 13½ ಹಣ ತೂಕ 1¾ ಮತ್ತು ಪವನು ಅರ್ಧ ಪವನು ಕೂಡಾ ವಿಕ್ರಿತ ಜಮಾ	322	11	6	—	—	—	—	—	—	—	—	—
ನವರಾತ್ರಿ ಬಾಬ್ತು ಜಮಾ	7	2	6	—	—	3¼9¼	—	—	—	—	—	—
ಮಾರಿಪೂಜೆಗಳ ಬಾಬ್ತು ಜಮಾ	339	13	0	—	—	—	—	—	—	—	—	—
ಚಪ್ಪರದ ಬಿದಿರು ವಗೈರೆ ಮಾರಾಟದಿಂದ	7	0	0	—	—	—	—	—	—	—	—	—
ಇತರ ಕಾಣಿಕೆ ಜಮಾ	4	0	0	—	—	—	—	—	—	—	—	—
ವಕ್ಲು ಹುಟ್ಟುವಳಿ ಜಮಾ	359	8	9	—	64¼5¼	124	600	1 5¼	¾ 9¾	2 2	30	—
ಗೇಣಿ ಅಕ್ಕಿ, ಭತ್ತ ವ ಧಾನ್ಯ ಮಾರಾಟದಿಂದ	825	0	10	—	—	—	—	—	—	—	—	—
72/30ನೇ ಆಸ್ತಿಯಿಂದ ಉತ್ಪತ್ತಿ	144	4	0	—	—	—	—	—	—	—	294	420
ರಾಜ್ಯದ ಕೇರಿಯಿಂದ ಉತ್ಪತ್ತಿ	72	0	0	—	—	—	—	—	—	—	21	30
ಜುಮ್ಲಾ	3678	5	10	9-4	64¼5½	141¾¼	600	1 5¼	¾ 9¼	2 2	368	560

ಖರ್ಚು ವಿವರ	ನಗದಿ ರೂ	ಆ	ಪೈ	ಪವನು ಮತ್ತು ಅರ್ಧ ಪವನು	ಭತ್ತ	ಅಕ್ಕಿ	[illegible]	[illegible]	ಉದ್ದು	[illegible]	ಕ್ಯಾ	[illegible]
ಗದ್ದಿಗೆ ಪೂಜೆ ಬಾಬ್ತು ಖರ್ಚು	200	6	5	—	—	—	—				15	450
ಕುಂಕುಮಾರ್ಚನೆ ಬಾಬ್ತು ಖರ್ಚು	58	12	0	—	—	—	—					
ಪವನು ವಿಕ್ರಿತ	0	0	0	9 ಪ	—	—	—					
ಅರ್ಧ ಪವನು ವಿಕ್ರಿತ	0	0	0	4 ಅ ಪ	—	—	—					
ನವರಾತ್ರಿ ಬಾಬ್ತು ಖರ್ಚು	17[illegible]	5	2	—	—	1¼ 1						
ಮಾರಿಪೂಜೆಗಳ ಬಾಬ್ತು ಖರ್ಚು	268	4	5	—		7¼ 3¼						
ವ್ಯವಹರಣೆ ಖರ್ಚು	37	0	0	—		—	—					
ಆಸ್ತಿಗಳ ತೀರ್ವೆ	196	8	0	—	—	—	—					
ವೆಂಕಟ್ರಮಣ ದೇವಸ್ಥಾನಕ್ಕೆ ಖರ್ಚು	6[illegible]	11	8	—	—	3¾ 8¼	—				50	
ಮಾರಿಗುಡಿ ಬಾಬ್ತು ಹಸೂರ ಖರ್ಚು	78	0	[illegible]	—	—		—					
ಮುಷ್ಠಿ ಫಂಡಿನ ಲೆಕ್ಕಕ್ಕೆ ಬಂದ ಸ್ಥಿತಿ ಖರ್ಚು	50	0	0	—	—	—						
ಮೂಲಗೇಣಿ ಬಾಬ್ತು ಸಂದದ್ದು	4	13	8	—	—	—	—					
ಕೃತ ವ ಭಾವನೆ ಬಗ್ಗೆ	29	14	9	—	¼ 5¼	¾ 2	600					
ಮಾರಿಗುಡಿ ಜೀರ್ಣೋದ್ಧಾರದ ಬಗ್ಗೆ	739	12	9		—	—	—					
ನೌಕರರ ಸಂಬಳ	613	1	4	—	—	40½ 7	—					
ಬೆಳ್ಳಿಸಿಂಹದ ಮಜೂರಿ ದಸ್ತಾ ಬುಕ್ಕಾ ಸಂದದ್ದು	61	9	3	—	—	—	—					
ಅಕ್ಕಿ, ಭತ್ತ ವ ಧಾನ್ಯ ವಿಕ್ರಿತ	0	0	0	—	64	57	—	1-5¼	¾ 9¼	2-2		
ಆಖೈರು ಶಿಲ್ಕು	466	1	7	—	0	28¼9¾	—					
ಜುಮ್ಲಾ	3678	5	10	9 4	64¼5½	141¾¼	600	1 5¼	¾ 9¼	2 2	365	[illegible]

ಆಖೈರು ಶಿಲ್ಕು ಚಿನ್ನದ ಮೂಗುತಿಗಳು 15, ಬೊಟ್ಟುಗಳು 8, ವಂಟಿ 2, ಚಿನ್ನ ಎರಡಾಣೆ ಪಾವಲಿ (ನಿಕ್ಕಲ್) ತಡಕ, ಬೆಳ್ಳಿ ಕೋಲೆ ಮುಂಚಿನ ಶಿಲ್ಕು ಕೂಡಾ ತೊಲೆ 276.

ಕಾಪು ಪೇಟೆ ಗೌಡ ಸಾರಸ್ವತ ಬ್ರಾಹ್ಮಣರು ಆರಾಧಿಸಿ ಬರುವ ಮಂಗಳೂರು ಸಬ್ ಕೋರ್ಟ್ ನಂಬ್ರ 72/1921 ಕ್ರಮ ಅರ್ಜಿ ನಂಬ್ರ 149/1922ನೇಯು ಸ್ಕೀಮಿಗೆ ಒಳಪಟ್ಟ ಕಾಪು ಶ್ರೀ ವೆಂಕಟ್ರಮಣ ದೇವರ ಭಂಡಾರದ ಬಾಬ್ತು ತಾರೀಕು 29-7-38ರ ಲಾಗಾಯ್ತು ತಾರೀಕು 27-7-39ರ ವರೆಗಿನ ವರ್ಷ ೧ರ ಜಮಾ ಖರ್ಚಿನ ಗೋಶ್ವಾರೆ.

ಜಮಾ ವಿವರ	ನಗದು ರೂ	ಆ	ಪೈ	ಕಾ ಬೆ	ಸು ಬೆ	ಮಸ್ಕತಿ	ಭತ್ತ	ಕ್ಯಾ
ಗುದಸ್ತಾ ಶಿಲ್ಕು	20	3	0	1-0 5¼	1-0-0	11 2 9	—	4
ವಕ್ಲು ಹುಟ್ಟುವಳಿ	64	10	0	22-1-0	—	26-1-10	30	364
ಅಮೃತ ಪಡಿ	4	0	0	0-0-20	—	—	—	—
ತಸ್ತೀಕು	6	0	0	—	—	—	—	—
ಗೇಣಿ ಅಕ್ಕಿ ವ ಭತ್ತ ವಿಕ್ರಿತ	191	2	3	—	—	—	—	—
ಕಟ್ಟೋಣದ ಬಾಡಿಗೆ	6	8	0	—	—	—	—	—
ಅನಂತವ್ರತದ ಖರ್ಚಿನ ಬಗ್ಗೆ ಬಂದದ್ದು	50	0	0	—	—	—	—	—
ಮಾರಿಅಮ್ಮ ದೇವರ ಭಂಡಾರದಿಂದ	87	0	0	5-2-12	—	—	—	50
ಶ್ರೀ ದೇವರ ಕಾಣಿಕೆ	3	15	0	—	—	—	—	—
ಗುರುಗಳ ಮಠ ಮರ್ಯಾದಿ ಕಾಣಿಕೆ	1	15	0	—	—	—	—	—
ಕ್ರಯಕ್ಕೆ ಪಡೆದ ಅಕ್ಕಿ	0	0	0	13-0-0	—	—	—	—
ಕ್ರಯಕ್ಕೆ ಪಡೆದ ಕ್ಯಾ	0	0	0	—	—	—	—	215
ಮಾರಿಗುಡಿ ಲೆಕ್ಕದಲ್ಲಿ ಖರ್ಚು ಬರೆಸಿಕೊಂಡದ್ದು	0	0	0	2-0-0	—	—	—	150
	0	0	0	—	—	—	—	—
	0	0	0	—	—	—	—	—
ಜುಮ್ಲಾ	455-5-8			44-2-9¼	1-0-0	38-1-5	30	783

ಖರ್ಚು ವಿವರ	ನಗದು ರೂ	ಆ	ಪೈ	ಕಾ ಬೆ	ಸು ಬೆ	ಮಸ್ಕತಿ	ಭತ್ತ	ಕ್ಯಾ	ಷರಾ
ಆಸ್ತಿಗಳ ತೀರ್ವೆ	50	6	0	—	—	—	—	—	ಬೆಳ್ಳಿಪಾಲಿಕೆ ಬಾಬ್ತು
ಉತ್ಸವಗಳ ಖರ್ಚು	43	9	1	—	—	—	—	—	ಬೆಳ್ಳಿತೊಲೆ 87¾.
ಸಮಾರಾಧನೆ ಖರ್ಚು	47	5	5	0 2 4	—	—	—	50	ಮಜೂರಿ ವ ಹಸೂರಿ
									ರೂ 235-15-11
ಅನಂತವ್ರತದ ಖರ್ಚು	49	10	5	—	—	—	—	—	ಖರ್ಚು ಮಾರಿಗುಡಿ
ಶಾಶ್ವತ ಸಂತರ್ಪಣೆ	18	12	0	—	—	—	—	—	ಲೆಕ್ಕದಲ್ಲಿ ವರ್ಗದ
ಕ್ರಯಕ್ಕೆ ಪಡೆದ ತೆಂಗಿನ ಕ್ಯಾ	7	1	0	—	—	—	—	—	ಪಾನು 92ರಲ್ಲಿ
ನಿತ್ಯ ಸಮರ್ಪಣೆ ಬಗ್ಗೆ ಎಲೆ ಅಡ್ಕೆ	8	5	9	—	—	—	—	—	ಖರ್ಚು ಬರೆದಿದೆ
ಬತ್ತಿ	8	5	9	—	—	—	—	—	
ಹಸೂರಿ ಖರ್ಚು	8	5	0	—	—	—	—	—	
ಕ್ರಯಕ್ಕೆ ಪಡೆದ ಎಣ್ಣೆ	75	3	0	—	—	—	—	—	
ಅರ್ಚಕರ ಸಂಬಳ	54	0	0	—	—	—	—	—	
ಶ್ರೀ ದೇವರ ಅಮೃತಪಡಿ ಬಗ್ಗೆ	62	14	0	43-1-0	—	—	—	—	
ಸಮರ್ಪಣೆ ಬಗ್ಗೆ ಕ್ಯಾ ಖರ್ಚು	—	—	0	—	—	—	—	728	
ವಿಕ್ರಿತ ಅಕ್ಕಿ ವ ಭತ್ತ	—	—	0	—	1-0-0	38-1-5	30	—	
ಆಖೈರು ಶಿಲ್ಕು	31	7	7	0-2 5¼	—	—	—	5	
ಜುಮ್ಲಾ	455-5-8			44-2-9¼	1-0-0	38-1-5	30	783	

ಒಂದು ಸಣ್ಣ ಕಥೆ

ಕೈಯ್ಯ ದೊಣ್ಣೆಯನ್ನು ಎತ್ತಿ, ಆಕೆಯನ್ನು ನಿಲ್ಲುವಂತೆ ಆಜ್ಞಾಪಿಸಿದ

ಚಿತ್ರ ಹಿಂಸೆ!

[ದೂರದಲ್ಲಿ ಒಂದು ಕಂಗಾಲಾದ ಹೆಣ್ಣು ನಾಯಿಯು, ಧೂಳಲ್ಲಿ ಬಿದ್ದುಕೊಂಡು ಮರಿಗಳಿಗೆ ಮೊಲೆಯೂಡುತ್ತಿತ್ತು. ಮರಿಗಳು ಹಿಡಿದೆಳೆಯುವಾಗ ಅದಕ್ಕೆ ನೋವಾಗುತ್ತದೆ. ಆದರೂ ಆದರ ಮುಖದಲ್ಲಿ ಆನಂದವಿದೆ. ಮಾತೃಪ್ರೇಮವು ಎಷ್ಟು ಅಪೂರ್ವವಾದುದು. ಆದರೆ ತನ್ನ ತಲೆ ಮೇಲೆ ಸುತ್ತುತ್ತಿರುವ ಶಾಸನವು ಪ್ರಾಣಿ ಜಾತಿಗೆ ಇರುವ ಆ ಸ್ವಾತಂತ್ರ್ಯವನ್ನು ಅಪಹರಿಸಿದೆ. ಆಕೆಗೆ ಅದ ನುಡ ಅನೇಕ ಒಂದಂತಾಗಿ ಅಧಿಕಾರಿಗಳನ್ನು ಶಾಸನವನ್ನು ಸರಕಾರವನ್ನು ಪ್ರತಿಭಟಿಸಬೇಕೆಂಬ ಹೊಟ್ಟೆಯುರಿ ಹುಟ್ಟಿತು! ದುಃಖವು ತಡೆಯಲಾರದೆ ಹೋದಾಗ ಪಾಪಾಳ ಕಣ್ಣೀರು ... ಸೀರೆಯ ಸೆರಗಿನಿಂದ ಒರಸುತ್ತಾ ಕಲ್ಲನ್ನು ಕಡಿದು ಪುಡಿ ಮಾಡುತ್ತಿದ್ದಳು.]

೧

ಸೂರ್ಯನು ರಕ್ತವರ್ಣವನ್ನು ತಾಳಿ, ಪಶ್ಚಿಮ ದಿಗಂತದಲ್ಲಿ ಮರೆಯಾಗುವ ಹೊತ್ತಿಗೆ ಅವರು ಕಲ್ಲನ್ನು ಪುಡಿಮಾಡುವ ತಮ್ಮ ಕೆಲಸವನ್ನು ಮುಗಿಸಿ ಸಾಮಾನುಗಳನ್ನು ಹಾಗೆ ಅಲ್ಲಿಯೇ ಬಿಟ್ಟು, ಆಯಾಸಗೊಂಡ ತಮ್ಮ ಕಾಲುಗಳನ್ನೆಳೆಯುತ್ತಾ ಇಬ್ಬರೋ ನಾಲ್ವರೋ ಜೊತೆ ಜೊತೆಯಾಗಿ ಹೊರಬಂದರು. ಅಲ್ಲಿಂದ ಎರಡು ಮೈಲುಗಳ ದೂರದಲ್ಲಿರುವ "ಕ್ರಿಮಿನಲ್ ಕೈದಿಗಳ ವಾಸಸ್ಥಾನ"ಕ್ಕೆ ಅವರು ಹೋಗಬೇಕಾಗಿತ್ತು. ಅವರ ಮುಖ, ಮಾತು, ಎಲ್ಲಾ ಚಲನೆಗಳು ಇತರ ಸಾಮಾನ್ಯ ಮನುಷ್ಯರಂತೆಯೇ ಇತ್ತು. 'ಕ್ರಿಮಿನಲ್'ಗಳೆಂಬುದು ಅವರನ್ನು ಕಂಡರೆ ತಿಳಿವ ಹಾಗಿರಲಿಲ್ಲ. ಅವರ ಕ್ಷೀಣವಾದ, ಬಡವಾದ, ಶರೀರವನ್ನು ನೋಡಿದರೆ, ಕೈಯಲ್ಲಿ ಕತ್ತಿ ಕೊಟ್ಟರೂ ಕಡಿವ ತ್ರಾಣವು ಅವರಿಗೆ ಇರಲಾರದು ಎಂದು ಭಾಸವಾಗುತ್ತಿತ್ತು. ಅವರ ಮೈಯ್ಯ ತ್ರಾಣವು ದಿನಂಪ್ರತಿ ಬೆಳಗಿಂದ ಸಂಜೆಯ ವರೆಗೆ ಯಂತ್ರಗಳಂತೆ ಆ ಶಿಲೆಯನ್ನು ಒಡೆಯುವ ಕೆಲಸದಲ್ಲಿ ಕುಂದಿ ಹೋಗಿತ್ತು. ಅವರ ವಿಚಾರಶಕ್ತಿಯು ಚಿತ್ರಹಿಂಸೆಯನ್ನು ಹೊಂದಿ ದುಡಿದು ಸಿಗುವ ಅರೆಹೊಟ್ಟೆಯ ಸಂಪಾದನೆಯಿಂದ ಜಡವಾಗಿ ಹೋಗಿತ್ತು. ಮೂಕ ಪಶುಗಳಂತೆ ಅವರು ಅಲ್ಲಿಂದ ಹೊರಬರುತ್ತಿದ್ದರು. ಎಲ್ಲರ ಧ್ವನಿಯೂ ಕ್ಷೀಣವಾಗಿದೆ. ಮುಖವು ನಿಸ್ತೇಜವಾಗಿ, ದೀನವಾಗಿ ದಯೆಯನ್ನು ಹುಟ್ಟಿಸುವಂತಿದೆ. ನಿಜವಾಗಿಯೂ, ಅವರು ಕ್ರಿಮಿನಲ್‌ಗಳಾದ ಮನುಷ್ಯರಲ್ಲ, ನಿರ್ದಯರಾದ ಕಟುಕನ ಕೈಗೆ ಸಿಕ್ಕಿ ಸಂಕಟಪಡುವ ಮೂಕಪಶುಗಳು!

ಸರಕಾರದ ಶಾಸನವು (ಮನುಷ್ಯರಿಂದಲೇ ನಿರ್ಮಿತವಾದ ಶಾಸನವು) ಬಹುಕಾಲದಿಂದ 'ಕ್ರಿಮಿನಲ್ ಕೈದಿ'ಗಳಾಗಿ ಹೀಗೆಯೇ ಬದುಕಿ ಸಾಯಿರೆಂದು ಅವರ ಹಣೆಯಲ್ಲಿ ಬರೆದಿತ್ತು! ಅಧಿಕಾರಿಗಳು ಅವರ ಸುತ್ತು ಕಣ್ಣಿಟ್ಟಿದ್ದರು, ಬೇಲಿಯೊಳಗೆ ಬಂಧಿಸಿದಂತೆ ಅವರನ್ನು ಕಾಯುತ್ತಿದ್ದರು. ಬೇರೆ ಕಡೆಗೆ ಕೂಲಿಗಾದರೂ ಹೋಗಿ, ಗೌರವದ ಜೀವನ ನಡೆಸಲು ಅವರಿಗೆ ಸಮ್ಮತಿಯಿರಲಿಲ್ಲ. ಅಧಿಕಾರಿಗಳಿಂದ ನಿಯಮಿತವಾದ ಅದೇ ಕೆಲಸ, ಅದೇ ಬೆಳಗಿಂದ ಸಂಜೆಯ ವರೆಗೆ ಶಿಲೆಯನ್ನು ಒಡೆಯುವ ಕೆಲಸ, ಅದಕ್ಕಾಗಿ ಅಧಿಕಾರಿಗಳು ತೆರುವ ಅರೆಹೊಟ್ಟೆಗೂ ಸಾಕಾಗದ ಸಂಬಳ, ಇವುಗಳಿಂದ ಕಾಲಯಾಪನೆ ಮಾಡಬೇಕಾಗಿತ್ತು. ಈ ನಿಯಮಗಳಿಗೆ ಯಾರಾದರೂ ಎದುರಾಡಿದರೆ, ಅವರನ್ನು ಅವರ ಹೆಂಡತಿ ಮಕ್ಕಳಿಂದ ದೂರಮಾಡಿ ಇನ್ನಷ್ಟು ಕಠಿಣದ ಶಿಕ್ಷೆಯು ವಿಧಿಸಲ್ಪಡುತ್ತಿತ್ತು.

ನೂರಾರು ಮಂದಿ ಈ ಕೂಲಿಗಳು ಹೀಗೆ ಹೊರಟಿದ್ದರು ಮನೆಗೆ. ಹೌದು ನರಕಕೂಪದಂತಿದ್ದ ಅವರ ಮನೆಗೆ, ಕಾಲೇಜು, ಬ್ಯಾಂಕು, ಆಫೀಸು, ಕೋರ್ಟುಗಳಿಂದ ಹೊರಟು ಬರುವ 'ಶ್ರೀದೇವಿಯ ಪುತ್ರ'ರು ಯಾವ ಸಂಭ್ರಮ ಉದ್ವೇಗದಿಂದ ಮನೆಯ ಕಡೆಗೆ ತೆರಳುತ್ತಾರೋ, ಅದೇ ಸಂಭ್ರಮಗಳು ಇವರ ಮುಖದಲ್ಲಿಯೂ ಕಾಣುತ್ತಿತ್ತು. ತಮಗೂ ಒಂದು ಮನೆಯಿದೆ, ತಮಗೂ ಮಕ್ಕಳಿದ್ದಾರೆ, ಸಂಸಾರ ಬಂಧನವು ತಮ್ಮನ್ನೂ ಸುತ್ತಿದೆ, ಹಾಗಾಗಿ ಎಲ್ಲರೂ ತಮ್ಮ ಶಕ್ತಿಕುಂದಿದ ಶರೀರಗಳನ್ನು ಎಳೆಯುತ್ತಾ ಹೊರಟಿದ್ದರು.

೨

ದಟ್ಟ ಜನಸಂದಣಿಯ ಹಿಂದೆ, ಆ ಹೆಂಗುಸೂ ಹೋಗುತ್ತಿದ್ದಾಳೆ. ಯೌವನದ ಬೆಡಗಿಲ್ಲದಿದ್ದರೂ, ಆಕೆಗೆ ಕೇವಲ ಇಪ್ಪತ್ತೈದೇ ವರ್ಷ ಪ್ರಾಯ. ದಿನನಿತ್ಯದ ಕಷ್ಟವಡೆ ಕೆಲಸದಿಂದ ಆಕೆಗೆ ಮುದಿತನವೇ ಬಂದಿದೆ. ತನ್ನ ಗಂಡು ಮಗುವನ್ನು ಕೆಲ ತಿಂಗಳ ಹಿಂದೆ ಕಳೆಕೊಂಡಳು. ಈಗ ಏಳು ವರ್ಷದ ಹೆಣ್ಣು ಮಗು—ಕಾಳಿ—ಮಾತ್ರ ಇದ್ದಾಳೆ. ಕೇವಲ ಹದಿನೈದು ದಿನಗಳ ಹಿಂದೆ, ನಿಯಮವನ್ನು ಉಲ್ಲಂಘಿಸಿದನೆಂಬ ಅಪವಾದನೆ ... ಮಾವ, ನಿಯಮವನ್ನು ಹೇಗೆ ಉಲ್ಲಂಘಿಸಿದನೆಂಬ ಬಗ್ಗೆ ವಿಚಾರಣೆಯೂ ಇಲ್ಲದೆ ಆಕೆಯ ಗಂಡನನ್ನು ಅವಳಿಂದ ಬೇರೆ ಮಾಡಿ ದೂರ ಕಳುಹಿಸಿದ್ದರು. ಇಂತಹ ಘಟನೆಗಳು ಆ ಬಡಜೀವಿಗಳಿಗೆ ದಿನನಿತ್ಯದ ಸಂಭವಗಳಾಗಿದ್ದುವು. ತನ್ನ ಮಗನನ್ನು ಕಳಕೊಂಡಂತಹ ಹೊಟ್ಟೆಯ ಉರಿಯೇ, ಗಂಡನನ್ನೂ ಬೇರೆ ಮಾಡಿದಾಗ ಆಕೆಗೆ ಆಯಿತು! ಎಲ್ಲವನ್ನೂ ನುಂಗಿಕೊಳ್ಳದೆ ಬೇರೆ ಗತಿಯಿರಲಿಲ್ಲ.

ಜೀವನದಲ್ಲಿ ಇಷ್ಟೆಲ್ಲಾ ಹೊಡೆತ ತಿಂದಿದ್ದರೂ ಈಗ ಆಕೆ ಅವುಗಳನ್ನು ಒಮ್ಮೆ ಮರೆತಿದ್ದಾಳೆ. ಮನೆಯ ಕಡೆಗೆ ತೆರಳುವಾಗ, ತನ್ನ ಮಗಳು ಕಾಳಿಯು ಇತರ ಮಕ್ಕಳೊಡನೆ ಗುಡಿಸಲ ಮುಂದೆ ಧೂಳಿನಲ್ಲಿ ಆಟವಾಡುತ್ತಾ ಇರಬಹುದೆಂಬ ವಿಚಾರವು ಮಾತ್ರ ಆಕೆಯ ಮನಸ್ಸಿನಲ್ಲಿ ಉಳಿದಿತ್ತು. ಅದಕ್ಕಾಗಿಯೇ ಆಕೆ ಸಂಭ್ರಮಗೊಂಡು, ಮುದ್ದು ಮಗುವಿನ ದರ್ಶನಕ್ಕಾಗಿ ಆತುರಗೊಂಡು ಮುಂದಡಿಯಿಡುತ್ತಿದ್ದಾಳೆ. ಕೂಡಲೇ ನೆನಪಾಯಿತು! ಈ ದಿನ ಸಂಜೆ ಮನೆಗೆ ಹಿಂದಿರುಗುವಾಗ ಕಾಳಿಗೆ 'ಎಳ್ಳುಂಡೆ'ಗಳನ್ನು ತರುವುದಾಗಿ ಭರವಸೆ ಹೇಳಿದ್ದಳು! ಮಗು ಇದಕ್ಕಾಗಿ ಕಾಯುತ್ತಿರಬಹುದು!

ಸೆರಗಿನ ತುದಿಯನ್ನು ಮೆಲ್ಲಗೆ ಬಿಚ್ಚಿದಳು. ಗುಡಿಸಲಿಂದ ಬರುವಾಗ ಒಂದಾಣೆಯ ನಿಕ್ಕಲ್ ನಾಣ್ಯವೊಂದನ್ನು ಅಲ್ಲಿ ಕಟ್ಟಿ ತಂದಿದ್ದಳು.

ಆದರೆ ನಾಣ್ಯವು ಈಗ ಅಲ್ಲಿರಲಿಲ್ಲ!

ನಾಣ್ಯವು ಎಲ್ಲಿ ಹೋಯಿತು? ಏನು ಮಾಡಲಿ? ಎಂಬುದು ತಿಳಿಯಲಿಲ್ಲ. ದಿನವಿಡೀ ಕಲ್ಲು ಒಡೆಯುತ್ತಿದ್ದ, ಆ ಸ್ಥಳದಲ್ಲಿಯೇ ಬಿದ್ದಿರಬಹುದೆಂದು ಹೊಳೆಯಿತು. ನಿಧಿಯನ್ನು ಕಂಡು ಹುಡುಕುವಂತಹ ಆತುರದಿಂದ, ಅವಳು ಅಲ್ಲಿಗೆ ಮಿಂಚಿನಂತೆ ಓಡಿಹೋದಳು.

ಎಡೆ ತಡೆದು ಎಲ್ಲಾ ಕಡೆ ಹುಡುಕಿದಳು. ಮಣ್ಣನ್ನು ಉಗುರುಗಳಿಂದ ಕೆದಕಿ ನೋಡಿದಳು. ನಾಣ್ಯವು ಕಂಡು ಬರಲಿಲ್ಲ. ಅದು ಕಳೆದು ಹೋಗಿತ್ತು.

ಮನೆಗೆ ಹೋಗುವ ಆಕೆಯ ಉತ್ಸಾಹವೆಲ್ಲ ಅಡಗಿತು. ಮಾರ್ಗದ ಬದಿಯಲ್ಲಿ ಒಂದು ಶಿಲೆಯ ಮೇಲೆ ಕುಸಿದು ಕುಳಿತು ಬಿಟ್ಟಳು.

ಹೊತ್ತು ಇಳಿದು, ಕತ್ತಲೆ ಕವಿದು ಬರುತ್ತಿತ್ತು. ಇಡೀ ಪಟ್ಟಣವೇ ವಿಶ್ರಾಂತಿಯನ್ನು ಹೊಂದುವ ಸಂತಸದಿಂದ ತುಂಬಿತ್ತು. ಅವಳ ವಿಚಾರದಲ್ಲಿ ಯಾವುದೂ ಹೊಳೆಯಲಿಲ್ಲ. ಮನೆಗೆ ಹೋಗುವ ವಿಚಾರವೊಮ್ಮೆ ಏನೋ ಬಂತು. ಕೂಡಲೇ ತನನಾಗಿ ಈ ದಿನ ತಾನು ಭರವಸೆ ಹೇಳಿದ 'ಎಳ್ಳುಂಡೆ'ಗಾಗಿ ಕಾದು ಕುಳಿತಿರುವ ಕಾಳಿಯ ನೆನಪಾಯಿತು. ಪ್ರತಿದಿನವೂ ಗುಡಿಸಲಿಂದ ಹೊರಡುವಾಗ ಮಗುವು ತಿಂದಿ ತರಲು ಕೇಳುತ್ತಿದ್ದಳು. ಆಕೆ 'ಇಂದು ಇಲ್ಲ ಮಗೂ, ಖಂಡಿತ ನಾಳೆ ತರುತ್ತೇನೆ' ಹೀಗೆಂದು ಸಮಾಧಾನ ಪಡಿಸುತ್ತಿದ್ದಳು. ಆಕೆಯ ಬಳಿ ಅದಕ್ಕಾಗಿ ಒಂದೇ ಒಂದು ನಿಕ್ಕಲ್ ನಾಣ್ಯವೂ ಉಳಿಯುತ್ತಿರಲಿಲ್ಲ. ಆದರೆ ಕಾಯು ಕರುಳು! ಈ ದಿನ ಬೆಳಗ್ಗೆ ಬರಬೇಕೆಂದರೆ ಬೀರಣ್ಣನಿಂದ ಒಂದಾಣೆ ಸಾಲ ತಂದಿದ್ದಳು. ಹಾಗಾಗಿ ಕೊರಳಾಣೆ ಹೇಳಿ ಖಂಡಿತವಾಗಿಯೂ ತಾನು ಸಂಜೆಗೆ ಮರಳುವಾಗ ಎಳ್ಳುಂಡೆಯನ್ನು ತಂದು ಕೊಡುವುದಾಗಿ ಮಗಳನ್ನು ಸಂತೈಸಿದ್ದಳು!

ಈಗ ನಾಣ್ಯವು ಕಳೆದುಹೋಯಿತು. ಮಗುವನ್ನು ಆಕೆ ಹೇಗೆ ಸಮಾಧಾನ ಪಡಿಸಲಿ? ತಲೆ ತಿರುಗುತ್ತಿದ್ದಂತೆ ಆ ಹೆಂಗುಸು ನಡೆದು ಹೋಗುತ್ತಿದ್ದಳು.

ಹಿಂದಿನಿಂದ ಶಬ್ದವೊಂದು ಕೇಳಿತು. ಕಾರು ಬರುತ್ತಿತ್ತು. ಕಾರಿನಲ್ಲಿ ಮಹಿಳೆಯರು ಮಾತನಾಡುವುದು, ನಗಾಡುವುದು ಕೇಳಿಸಿತು. ಯಾರೋ ಧನಿಕರ ಮನೆತನದವರಿರಬೇಕು, ಅವರು ತನ್ನನ್ನು ಕರೆದಿರಬಹುದೆಂಬ ವಿಚಾರವು, ಏನೋ ತನ್ನ ಹುಚ್ಚು ಗ್ರಹಿಕೆಯೊಂದು, ಬಗೆದು ಮುಂದುವರಿದು ಹೋದಳು.

"ಇಲ್ಲಿ ಥೂ, ನಾವೇನೂ ನಿನ್ನನ್ನು ತಿನ್ನುವುದಿಲ್ಲ . . ." ಈಗ ತನ್ನನ್ನೇ ಅವರು ಕರೆಯುವುದೆಂದು ತಿಳಿಯಿತು. ಕರೆದಾಗ ಯಾಕೆ ಹೋಗಬಾರದು ಎನ್ನಿಸಿತು. ಹತ್ತಿರ ಹೋಗಲು ಅವರು ತಿಂಡಿಯ ಕಟ್ಟೊಂದನ್ನು ಅವಳ ಕೈಯ್ಯಲ್ಲಿಟ್ಟರು. ಸುತ್ತಿದ ಕಾಗದದೊಳಗೆ ತುಂಬಾ ತಿಂಡಿಯಿತ್ತು.

'ಸಂಶಯವೇನು? ಅದು ಶುದ್ಧವಾದ ಆಹಾರ, ನಾವು ತಿನ್ನಲು ತಂದಿದ್ದೆವು. ಆದರೆ ಬಹಳ ಇದ್ದುದರಿಂದ ಬಿಸಾಡುವುದು ಬೇಡವೆಂದು ಕೊಟ್ಟಿದ್ದೇವೆ, ಹಾಳಲ್ಲ, ತೆಕ್ಕೋ' ಕಾರು ಮುಂದೆ ಹೋಯಿತು.

ಗಂಗಮ್ಮ (ಆಕೆಯ ಹೆಸರು) ಅದನ್ನು ತೆಕ್ಕೊಂಡು ನಡೆದಳು. ಆಕೆ ಬಹಳ ಸರಳ ಸ್ವಭಾವದವಳು. ದೇವರೇ ತನ್ನ ಮೇಲೆ ದಯೆ ತೋರಿಸಿರಬಹುದೆಂದು, ಆತನನ್ನು ಮನದಲ್ಲಿಯೇ ವಂದನೆ ಮಾಡಿದಳು. ಮಗುವಿಗೆ—ಈ ದಿನ ಬೇಕಾದಷ್ಟು ತಿಂಡಿ ಕೊಡಬಹುದು, ಸಂತೋಷದಿಂದ ಮುಂದಡಿಯಿಟ್ಟಳು.

ಕೂಡಲೇ ಒಂದು ವಿಚಾರವು ಹೊಳೆದು ಅವಳ ಸಂತೋಷವನ್ನೆಲ್ಲಾ ನುಂಗಿಬಿಟ್ಟಿತು.

'ಗೇಟಿ'ನಲ್ಲಿ ಕಾವಲಿನವನಿದ್ದ, ಬೇಡುವುದೂ ಕದ್ದುಕೊಳ್ಳುವುದೂ ಅಲ್ಲಿ ನಿಷಿದ್ಧವಾಗಿತ್ತು. ಇನ್ನೊಂದು ಆಹಾರವನ್ನು ಆಕೆ ಕ್ರಯಕೊಟ್ಟು ಪಡೆದ ಕೊಳ್ಳುವುದು, ಕನಸಿನಲ್ಲಿಯೂ ಸಾಧ್ಯವಿಲ್ಲದ ಮಾತು. ಹಾಗಾಗಿ, ಕಾವಲುಗಾರನು ತನ್ನನ್ನು ಸಂಶಯದಿಂದ ಹಿಡಿದು ಶಿಕ್ಷೆಗೆ ಗುರಿಪಡಿಸುವುದು ಸಾಧ್ಯವೆಂದ, ಹಿಂದಿನ ಅನುಭವಗಳಿಂದ ಆಕೆಗೆ ತಿಳಿದಿತ್ತು. ಈ ತಿಂಡಿಗಳನ್ನು ತನ್ನ ಮಗುವಿಗೆ ಸುರಕ್ಷಿತವಾಗಿ ತಲುಪಿಸುವುದು ಸಾಧ್ಯವುಂಟೇ ಎಂದ ಗ್ರಹಿಸಿ ಆಕೆ ಕಳವಳಗೊಂಡಳು. ಬಹಳ ಹೊತ್ತು ವಿಚಾರ ಮಾಡಿದಳು. ಕಡೆಗೆ ಒಂದು ವಿಚಾರ ಹೊಳೆಯಿತು. ಸೀರೆಯಲ್ಲಿ ಮುಚ್ಚಿ ಅದನ್ನು ಹೊಟ್ಟೆಗೆ ತಗಲಿಸಿ ಇಟ್ಟುಕೊಂಡಳು. ಸುತ್ತಲೂ ನೋಡಲು ಯಾರೂ ಇರಲಿಲ್ಲ. ಜೀವಬಂದಂತೆ, ಸಂತೋಷಗೊಂಡ ತೀವ್ರವಾಗಿ ಹೆಜ್ಜೆಯಿಟ್ಟಳು.

ಮುಖ್ಯ ಮಾರ್ಗವನ್ನು ಬಿಟ್ಟು ಗುಡಿಸಲ ಕಡೆಗೆ ತಿರುಗುವ ದಾರಿ ಇನ್ನು ಕಾಲಿಡಬೇಕಾಗಿತ್ತು. ಸ್ವಲ್ಪ ದೂರದಲ್ಲಿಯೆ ಜನರ ಗುಂಪೊಂದು ಕಂಡಿತು. ಅವರೆಲ್ಲರೂ ಕ್ರಿಮಿನಲ್ ಜನರು. ಅವರು ಯಾಕಲ್ಲಿ ಸೇರಿರಬೇಕು?

ಒಬ್ಬನ ಬೆಳ್ಳಗಿನ ಮನುಷ್ಯ, ಒಂದು ಕೆಂಪು ಪತಾಕೆಯನ್ನು ಹಿಡಿದೆತ್ತಿ, ಮಾತನಾಡುತ್ತಿದ್ದ. ಎಲ್ಲರೂ ಅವನ ಕಡೆಗೆ ಎವೆಯಿಕ್ಕದೆ ನೋಡುತ್ತಿದ್ದರು. ತೀಕ್ಷ್ಣ ಸ್ವರದಲ್ಲಿ ಆತ ಉದ್ರೇಕಗೊಂಡು ಭಾಷಣ ಮಾಡುತ್ತಿದ್ದ. ಒಮ್ಮೆಗೇ ನೂರಾರು ಕೊರಳ ಧ್ವನಿಗಳು ಒಂದಾಗಿ ಕೇಳಿಸಿತು 'ಹೌದು ಸ್ವಾಮೀ, ನಾವು ನೀವಂದಂತೆಯೇ ಮಾಡುವೆವು'

[ಮುಂದಿನ ಪುಟವನ್ನು ನೋಡಿ]

ಶ್ರೇಷ್ಠ ತರದ

ದೃಷ್ಟಿ ಚಕ್ರಗಳಿಗೆ



ಕಣ್ಣಿನ ಪರೀಕ್ಷೆಗಳಿಗೆ

ನಾಯಕ್ ಸ್ಟೋರ್ಸ್,

ರಥಬೀದಿ, ಮಂಗಳೂರು.

ಮದ್ರಾಸು ಮಂತ್ರಿಮಂಡಲ

ಮಾನ್ಯ ರಾಜಾಜಿಯವರು

[ಅಸ್ಪೃಶ್ಯತಾ ನಿವಾರಣೆಯ ಕುರಿತು]

'ಅಸ್ಪೃಶ್ಯತೆಯೆಂಬುದು ರೋಗಸಮಾನವಾಗಿ ಮನುಷ್ಯ ಮನುಷ್ಯರನ್ನು ಭೇದವಾಡುವ ಬುದ್ಧಿಯು ಹಿಂದೂದೇಶಕ್ಕೇ ತಗಲಿದ ರೋಗ; ಹಿಂದೂ ಧರ್ಮವು ಶುದ್ಧವಾಗಬೇಕಾದರೆ ಈ ಭೇದಬುದ್ಧಿಯು ಇಲ್ಲದಾಗಬೇಕು. ಸ್ವರಾಜ್ಯವು ಬೇಕಾದರೆ ಹಿಂದೂ ಮುಸ್ಲಿಮರೂ ಒಂದಾಗಬೇಕು; ಈ ಐಕ್ಯದಿಂದ ಅಸ್ಪೃಶ್ಯತೆಯನ್ನು ದೇಶದಿಂದ ಇಲ್ಲದೆ ಮಾಡಬಹುದು.

'ಮಹಾತ್ಮಾಜಿಯವರು ಮಾತ್ರ ಈ ಸಮಸ್ಯೆಯನ್ನು ಪರಿಹರಿಸಲು ಯತ್ನಿಸಿದರು. ನಂದನಾರನ ಕಥೆಯನ್ನು ಬರೆದ ಕವಿಯು ನಿಜವಾಗಿ ಆವೇಶಗೊಂಡು ಬರೆದಿರಬೇಕು. ನಂದನಾರನು ಗಾಂಧಿಗಳಿಗಿಂತ ಬಹಳ ಹಿಂದೆ ಹುಟ್ಟಿದವನು. ಮಹಾತ್ಮಾಜಿಯವರು ಅಸ್ಪೃಶ್ಯತೆಯ ಕೊಳಕನ್ನು ಕಂಡರು; ಆ ವಿಷಯವಾಗಿ ಜನರು ತಿಳಿದ ಕೂಡಲೆ ಅದನ್ನು ಬಿಟ್ಟುಬಿಡುವರೆಂದೂ ಅವರ ಭರವಸೆ. ಜನರಿಗೆ ಎಷ್ಟು ಹೇಳಿದರೂ, ಅವರ ಮನಸ್ಸು ಬೆದರಿಕೊಂಡಿದೆ.

'ಈ ದೇವಾಲಯಗಳು, ಇದೇ ಧರ್ಮಕ್ಕೆ ಸೇರಿದ ಎಲ್ಲಾ ಜನರಿಗೂ ಒಂದೇ ರೀತಿಯ ಹಕ್ಕುಳ್ಳದ್ದಾಗಿದೆ. ಸ್ವಂತ ದೇವಾಲಯಗಳ ವಿಷಯ ಅವರವರ ಇಚ್ಛೆ; ಆದರೆ ಸಾರ್ವಜನಿಕ ದೇವಾಲಯಗಳಿಗೆ ಪ್ರವೇಶಿಸಲು ಅವರಿಗೂ ಹಕ್ಕಿದೆ. ಇಂತಹ ಉತ್ತಮ ಆದರ್ಶವನ್ನು ಇತಿಹಾಸ ಪ್ರಸಿದ್ಧವಾದ ಮಧುರೆಯು ತೋರಿಸಿದೆ. ಈ ವಿಷಯದಲ್ಲಿ ಇಲ್ಲಿನ ಸಾರ್ವಜನಿಕ ಕೆಲಸಗಾರರಾದ ಹರಿಜನ ಸೇವಕ ಶ್ರೀ. ವೈದ್ಯನಾಥ ಅಯ್ಯರರನ್ನು ಹೆಚ್ಚು ಪ್ರಶಂಸಿಸುವುದು ಸರಿಯಲ್ಲ. ಅವರು ದೇವರ ಮತ್ತು ಸಾರ್ವಜನಿಕರ ಹೇಳಿಕೆಯಂತೆ ಆಡುವ ಬೊಂಬೆ ಮಾತ್ರ. ಕೆಲವರು ಮನೆಯಲ್ಲಿಯೇ ಇದ್ದು, ವಿಶ್ವ ದರ್ಶನದಿಂದ ದೇವರ ಕುರಿತು ಅರಿತುಕೊಳ್ಳುವವರಿರಬಹುದು; ಆದರೆ ಸಾಮಾನ್ಯ ಜನರಿಗೆ ದೈವಜ್ಞಾನವನ್ನು ಕೊಡಲು ದೇವಸ್ಥಾನಗಳು ಬೇಕು. ಒಬ್ಬ ಮನುಷ್ಯನು ಸೂರ್ಯನ ರಶ್ಮಿಯಲ್ಲಿ ಸ್ನಾನಮಾಡಿದರೆ, ಇನ್ನೊಬ್ಬನಿಗೆ ಅದರ ಹಕ್ಕಿಲ್ಲವೆಂದು ಆಗುವುದಿಲ್ಲ. ದೇವರು ಸೂರ್ಯನಂತೆ. ರೋಗ ಹಿಡಿದವನು ಆಸ್ಪತ್ರೆಗೆ ಹೋಗಬೇಕು. ಹಾಗೆಯೇ ಇದುವರೆಗೆ ಪತಿತರಾದವರು, ತಿರಸ್ಕೃತರು ಇಂದು ದೈವಸಾನಿಧ್ಯಕ್ಕೆ ಹೋಗಬೇಕಾಗಿದೆ. ಕೆಲವರು ಕಪ್ಪು ಪತಾಕೆ ಹಿಡಿದು ನನಗೆ ನಿಷೇಧ ಪ್ರದರ್ಶಿಸಿದರು. ಆದರೆ ಕಪ್ಪು ಮತ್ತು ಬಿಳಿಗೆ ಆಗಮನಗಳಲ್ಲಿ ಏನಾದರೂ ಭೇದವುಂಟೇ ನನಗೆ ತಿಳಿಯದು. ಮಹಾ ವಿಷ್ಣುವನ್ನು ಕಪ್ಪು ವರ್ಣದವನಾಗಿ ವರ್ಣನೆಯಿದೆ' ಹೀಗೆಂದು ಪ್ರಧಾನ ಮಂತ್ರಿ ರಾಜಾಜಿಯವರು ಮಧುರೆಯಲ್ಲಿ ಭಾಷಣವಿತ್ತರು.

ತಿಲಕ ಮೈದಾನಿನಲ್ಲಿ ಭಾಷಣವಮಾಡುತ್ತಾ ರಾಜಾಜಿಯವರು ಹೀಗೆಂದರು:—

'ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿಯೇ ವೃದ್ಧರಾದ ಜನರ ನಿಷೇಧವನ್ನು ಕಾಣುವುದು ಸಹಜವಿದೆ. ಇಂತವರ ವಿಷಯ ನಾವು ಯಾವ ರೀತಿ ವರ್ತಿಸಬೇಕೆಂದು ನಮಗೆ ಗೊತ್ತಿದೆ. ಅದೇ ರೀತಿ ನಾವು ನಮ್ಮ ನೆರೆಕರೆಯವರೊಡನೆ ಮಿತ್ರರೊಡನೆ ವರ್ತಿಸಬೇಕು. ಅವರಿಗೆ ಈ ಸುಧಾರಣೆಯಲ್ಲಿರುವ ನ್ಯಾಯವನ್ನು ಕೂಲಂಕಷ ವಿವರಿಸಬೇಕು. ಸಾರ್ವಜನಿಕರು ಮಹಾರಾಜರು ಮೊದಲಾದವರಿಂದ ಕಟ್ಟಲ್ಪಟ್ಟ ದೇವಾಲಯಗಳಿಗೆ, ಇತರ ಎಲ್ಲಾ ಜಾತಿಯ ಹಿಂದೂಗಳು ಹೋಗುವಾಗ, ಒಂದು ಜಾತಿಯ ಕೆಲವರು ಮಾತ್ರ ಬಹಿಷ್ಕೃತರಾಗಿರುವುದು ಅಮಾನುಷವೆಂದು ತಿಳಿಯಬೇಕು. ಆ ಬಹಿಷ್ಕೃತರು ತಮಾಷೆಗಾಗಿ ಹೋಗುವುದಿಲ್ಲ. ನಮ್ಮಂತೆಯೇ ಅಲ್ಲಿಗೆ ಭಕ್ತಿಯಿಂದಲೇ ಬರುತ್ತಾರೆ. ಹೊಟ್ಟೆ ತುಂಬಿರುವವರು ದೇವಾಲಯಗಳಿಗೆ ಹೋಗದಿದ್ದರೂ ಚಿಂತೆಯಿಲ್ಲ; ನಿರ್ಗತಿಕರು, ಬಡವರು ದೇವರ ಸಾನಿಧ್ಯಕ್ಕಾದರೂ ಹೋಗುವಂತಾಗಬೇಕು. ದೇವರು ವಿಶಾಲ ಸಾಗರ ಸಮಾನನಾಗಿದ್ದಾನೆ. ಎಷ್ಟು ಜನರು ಬಂದು ಆತನನ್ನು ಅಲ್ಲಿ ಆರಾಧಿಸಿದರೂ, ಸಮುದ್ರವು ಬತ್ತಿಹೋಗದಂತೆ ಆತನ ಕೃಪೆಯೂ ಬತ್ತಿಹೋಗಲಾರದು. ಜನರನ್ನು ತಿದ್ದುವಲ್ಲಿ ಈ ವಾದವನ್ನು ಹೂಡಬೇಕು. ಇತರರಿಗೆ ಒಳ್ಳೆಯುದನ್ನು ಮಾಡುವಾಗ, ತನ್ನ ಹಿಂದಿನ ಸಂಪ್ರದಾಯವನ್ನು ಬದಲಾಯಿಸುವುದರಿಂದ ದೋಷವಿಲ್ಲವೆಂದು ಹೇಳಬೇಕು. ಈ ರೀತಿಯ ಪ್ರಚಾರವನ್ನು ತಾಳ್ಮೆಯಿಂದ ಮಾಡಬೇಕು. ಎಲ್ಲವನ್ನೂ ಧೈರ್ಯದಿಂದ ಎದುರಿಸಬೇಕು. ಅನೇಕ ಜಾತಿಗಳು ಅನ್ಯೋನ್ಯ ದ್ವೇಷಗೊಂಡಿವೆ; ಆದರೆ ದೇವಾಲಯಗಳಲ್ಲಿ ಯಾರೂ ದ್ವೇಷ ಮತ್ಸರ ತಾಳುವುದಿಲ್ಲ. ಹರಿಜನರ ಕುರಿತೂ ಜನರು ಹಾಗೆಯೇ ವರ್ತಿಸಬೇಕು. ನಮಗೆ ಇದರಿಂದ ಲಾಭವಿಲ್ಲವೆಂಬುದು ಖಂಡಿತ; ಆದರೆ ಅನ್ಯರಿಗೆ ಸಂತೋಷವಾಡುವ ಕೆಲಸವು ಬಹು ಪುಣ್ಯವನ್ನು ಕೊಡುವಂತಹುದು' ಹೀಗೆಂದರು.

ಮಾನ್ಯ ಪ್ರಕಾಶಂ

[ಕಾಂಗ್ರೆಸು ಸರಕಾರದ ಚಟುವಟಿಕೆಯ ಕುರಿತು]

'ಪ್ರಾಂತಿಕ ರಾಜ್ಯಭರಣವು ಬಂದಿದ್ದರೂ, ಹಿಂದಿನ ಸರಕಾರದ ಬಂಧನವು ಬಿಡುಗಡೆಯಾಗಲಿಲ್ಲ; ಕಾಂಗ್ರೆಸು ಮಂತ್ರಿಮಂಡಳವು ಇಂದು ಪ್ರಜೆಗಳ ಸರಕಾರಕ್ಕಾಗಿ ಪಂಚಾಂಗವನ್ನು ತಯಾರುಮಾಡುತ್ತಿದೆ. ಮಂತ್ರಿಗಳು ಜನತೆಯ ಸಂಪರ್ಕಕ್ಕಾಗಿ ಬಹಳ ಯತ್ನಮಾಡಿದರೂ, ಜನರು ಮಂತ್ರಿಮಂಡಳದ ಕುರಿತು ಚನ್ನಾಗಿ ಗಮನಕೊಟ್ಟು ಸಹಕರಿಸದಿರುವುದು ವಿಷಾದಕರ. ಹಿಂದಿನ ಸರಕಾರದ ಆದೇಶಯ ಆಧಾರದಿಂದ, ಅನೇಕ ಸ್ಥಳೀಕ ಬೋರ್ಡುಗಳು ಮತ್ತು ಮುನ್ಸಿಪಾಲಿಟಿಗಳು, ಪ್ರಜಾಹಿತ ದೃಷ್ಟಿಯನ್ನು ಇಟ್ಟುಕೊಂಡಿಲ್ಲವೆಂದು ಹೇಳುವುದು ವಿಷಾದವಾಗಿದೆ. ಗ್ರಾಮ ಪಂಚಾಯಿತಿ ಶಾಸನವು ಕೆಲವೇ ಸಮಯಗಳಲ್ಲಿ ಜಾರಿಗೆ ಬರಲಿರುವುದು. ಆದ್ದರಿಂದ ಗ್ರಾಮ ಪಂಚಾಯಿತಿಗಳಿಗೆ ಜನರು ಉತ್ತಮ ಗುಣನಡತೆಯ ಗೌರವದ, ಜವಾಬ್ದಾರೀ ಅಧಿಕಾರದ ಯೋಗ್ಯತೆಯ ಜನರನ್ನೇ ಆರಿಸಬೇಕು.

'ಮಧುರೆಯಲ್ಲಿ ಆದ ದೇವಾಲಯ ಪ್ರವೇಶವು ಸರಕಾರದಿಂದಲಾಗಿ ಆದುದಲ್ಲ, ಜನತೆಯಿಂದಲೇ; ಯಾವ ಹೊರಗಿನ ಒತ್ತಾಯವೂ ಇಲ್ಲದೆ ಜನರು ಸ್ವತಃ ವಿಚಾರದಿಂದ ನಡೆಸಿದ್ದಾರೆ; ತಿರುಪತಿಯಲ್ಲಿಯೂ ಜನರು ಅದೇ ರೀತಿಯಲ್ಲಿ ಹರಿಜನರಿಗೆ, ದೇವಾಲಯ ಪ್ರವೇಶವನ್ನು ಮಾಡಿಸಲು ಸಮರ್ಥರಾಗಬೇಕು. ಯಾವ ನ್ಯಾಯ ನಿರ್ಬಂಧನೆಗಳ ಅಪಾಯವಿಲ್ಲದೆ, ಜನರು ಆ ಕಾರ್ಯಗಳ ಕುರಿತು ಸಾಕಷ್ಟು ಕೆಲಸಮಾಡಲು ಇಂದಿನ ಸರಕಾರವು ಜನರಿಗೆ ಎಡೆಯಿತ್ತಿರುವುದು. ಅದನ್ನು ಸಂಪೂರ್ಣ ಯೋಗ್ಯವಾಗಿ ಉಪಯೋಗಿಸಿಕೊಳ್ಳಬೇಕು.

'ಸ್ವದೇಶಿ ವಸ್ತುಗಳನ್ನೇ ಯಾರು ಕೊಳ್ಳುವುದಿಲ್ಲವೋ ಅಂಥವರು ನಾಡಿನ ಪುತ್ರರಾಗಲು ಅಯೋಗ್ಯರು, ಭಾರತೀಯ ಸಂಸ್ಕೃತಿ ಮತ್ತು ಕೀರ್ತಿಗೆ ಅಪಮಾನ ಮಾಡುವವರು. ವ್ಯಾಪಾರಿಗಳೂ ಕೂಡಾ ಸ್ವಾತಂತ್ರ್ಯಕ್ಕಾಗಿ ಹೋರಾಡಲು ನಿರ್ಧಾರಮಾಡಬೇಕು' ಹೀಗೆಂದು ಮಾನ್ಯ ಮಂತ್ರಿ ಟಿ. ಪ್ರಕಾಶಂರವರು ತಿರುಪತಿಯಲ್ಲಿ ಭಾಷಣಮಾಡಿದರು.

ಮಾನ್ಯ ಪಾರ್ಕಿ

[ಮದ್ರಾಸಿನ ಶಿಕ್ಷಣ ಯೋಜನೆಗೆ ಸಂಬಂಧಿಸಿ]

"ಈ ವರ್ಷ ಹೆಚ್ಚು ವಾರ್ಧಾಶಿಕ್ಷಣದ ಶಾಲೆಗಳನ್ನು ಪ್ರಾಂತದಲ್ಲಿ ತೆರೆಯುವುದು ಸಾಧ್ಯವಿಲ್ಲ. ಬರುವ ವರ್ಷ ಹೆಚ್ಚು ಶಾಲೆಗಳನ್ನು ತೆರೆಯಬಹುದು; ಆ ಸಂದರ್ಭದಲ್ಲಿ 'ಹಿಂದುಳಿದ ಜಿಲ್ಲೆಗಳಾದ ಸೀಡೆಡ್ ಜಿಲ್ಲೆಗಳಲ್ಲಿ ಒಂದು ಶಾಲೆ ತೆರೆಯಬಹುದಾಗಿ ನಾನು ನಮ್ಮುತ್ತೇನೆ. ಆದರೆ ಎಲ್ಲಾ ಟ್ರೈನಿಂಗ್ ಶಾಲೆಗಳನ್ನು ವಾರ್ಧಾ ಶಾಲೆಗಳನ್ನಾಗಿ ಮಾಡುವುದು ಒಳ್ಳೆಯದಲ್ಲ.

"ಲೋವರ್ ಗ್ರೇಡು ಉಪಾಧ್ಯಾಯರನ್ನು ಸೆಕೆಂಡರಿ ಗ್ರೇಡು ಉಪಾಧ್ಯಾಯರ ಶಿಕ್ಷಣಕ್ಕೆ ಕಳುಹಿಸುವುದು ಅಸಾಧ್ಯವಾದ ಯೋಜನೆ. ಸರಕಾರವು ಕೆಲವೇ ಸಮಯದಲ್ಲಿ ಹೈಯರ್ ಗ್ರೇಡ್ ಟ್ರೈನಿಂಗ್ ಶಿಕ್ಷಣವನ್ನು ನಿಲ್ಲಿಸುವುದು." ಹೀಗೆಂದು ಮಾನ್ಯ ಪಾರ್ಕಿಯವರು ಕರ್ನೂಲಿನಲ್ಲಿ ಮಾತನಾಡಿದರು.

ಮಾನ್ಯ ರಾಮನಾಥನ್

[ಮಧುರೆಯ ಆದರ್ಶ ಸುಧಾರಣೆಯ ಪ್ರಶಂಸೆ]

'ತಮಿಳ ನಾಡಿನಲ್ಲಿ ಮಧುರೆಯು ಮಹಾ ಪ್ರಭಾವವನ್ನು ಬೀರಿದೆ. ಪ್ರತಿಯೊಂದು ಪ್ರಭಾವಶಾಲಿಗಳಾದ ಕಾರ್ಯಗಳೂ ಇಲ್ಲಿಯೇ ಪ್ರಾರಂಭವಾಗಿವೆ. ಚರಿತ್ರೆಯಲ್ಲಿ ಅದ್ಭುತವಾದ ಸಂಗತಿಗಳನ್ನು ಪ್ರದರ್ಶಿಸಿದ ನಗರವಿದು. ಕಳೆದ ಮಹಾ ಸತ್ಯಾಗ್ರಹದ ಸಮಯದಲ್ಲಿ ಇಡೀ ತಮಿಳುನಾಡಿಗೆ ಆದರ್ಶವಾಗಿ ೭೮ ಜನ ಸ್ವಯಂ



ಸೇವಕರನ್ನು ಆ ಮಹಾ ಆತ್ಮಯಜ್ಞಕ್ಕೆ ತೊಡಲಾಗಿ ಕಳುಹಿಸಿದ ನಗರವು ಮಧುರೆ. ಹಾಗಾಗಿ ಇಲ್ಲಿ ಇಂದು ಅತ್ಯಂತ ಉತ್ಸಾಹ ಮತ್ತು ಕ್ರಿಯಾ ಶಕ್ತಿಯು ಇರುವುದರಲ್ಲಿ ಯಾವ ಸಂಶಯವೂ ಇಲ್ಲ. ಇಲ್ಲಿಯೇ ಮೊದಲಾಗಿ ಕಾರ್ಯವನ್ನು ಯಶಸ್ವಿಯಾಗಿ ಮಾಡಿ ತೋರಿಸಿದರೆ, ಮಧುರೆಯು ಇದರಿಂದ ತಮಿಳುನಾಡಿಗೆ ಮಾತ್ರವಲ್ಲ; ಇಡೀ ಭಾರತಕ್ಕೆ ಮಹಾ ಸೇವೆಯನ್ನು ಸಲ್ಲಿಸಿದಂತಾಗುವದು.

'ಸಾವಿರಾರು ವರ್ಷಗಳಿಂದ ಭಾರತದೇಶದಿಂದ ಅಸ್ಪೃಶ್ಯತೆಯ ಕಲಂಕವನ್ನು ತೊಳೆಯಲು ಮಹಾ ಪುರುಷರನೇಕರು ಯತ್ನಿಸಿದರು. ಆದರೆ ಇಂದು ಮಹಾತ್ಮಾಜಿಯವರು ಅದಕ್ಕಾಗಿ ತಮ್ಮ ಜೀವಾರ್ಪಣ ಮಾಡಲೂ ಸಿದ್ಧರಿದ್ದಾರೆ. ಚಾರಿತ್ರಿಕ ಮಹತ್ವದ ಮಹಾ ಉಪವಾಸವೊಂದನ್ನು ಗಾಂಧಿಜಿಯವರು ಆರಂಭಿಸಿ, ಅಸ್ಪೃಶ್ಯತೆಯ ಯಜ್ಞಕುಂಡದಲ್ಲಿ ತಮ್ಮ ಜೀವನದ ಬಲಿದಾನ ಮಾಡಲು ಸಿದ್ಧರಾಗಿ ನಿಂತಾಗ, ಭಾರತದ ಎಲ್ಲಾ ಧುರೀಣರೂ ಒಂದಾಗಿ, ಅವರ ಅಮೂಲ್ಯ ಜೀವನದ ರಕ್ಷಣೆಯಾಗಲು, ಹಿಂದೂ ಧರ್ಮದಿಂದ ಆ ಕಲಂಕವನ್ನು ಕಿತ್ತೊಗೆಯಲು ಕಾರ್ಯ ಸಾಧಿಸುವುದಾಗಿ ಭರವಸೆಯಿತ್ತರು. ಇಂತಹ ಭರವಸೆಯನ್ನು ಸಂಪೂರ್ಣ ಮಾಡಿದ ಕೀರ್ತಿಯು ಮಧುರೆಯ ಮಹಾ ಭಾಗ್ಯದಾಗಿದೆ.

'ಅಹಿಂಸೆಯನ್ನು ಅನುಸರಿಸುವುದರಿಂದ ಮಾತ್ರ ಧರ್ಮಕ್ಕೆ ಹಿತವನ್ನು ಮಾಡಬಹುದು. ಬಹುಮತದಿಂದ ಕಾರ್ಯ ಮಾಡುವುದಿದ್ದರೆ ಯಾವಾಗಲೇ ಮಾಡಬಹುದಿತ್ತು; ಆದರೆ ಇದು ರಾಜಕೀಯ ವಿಷಯವಲ್ಲ; ಸನಾತನಿಗಳ ಆಕ್ಷೇಪವನ್ನು ತಿದ್ದಬೇಕು; ಅವರನ್ನು ಬೈದು ಭಂಗಿಸಬಾರದು. ಅವರ ಮನಸ್ಸು ನೋಯಿಸ ಬಾರದು. ಮಧುರೆಯು ಗಳಿಸಿದ ಒಳ್ಳೆಯ ಹೆಸರು ಶಾಶ್ವತವಾಗಿ ಉಳಿಯಬೇಕು.'

ಮಾನ್ಯ ಡಾ. ರಾಜನ್

[ಸರಕಾರದ ಯೋಜನೆಯನ್ನು ಸಂಬಂಧಿಸಿ]

ಸೇಲಮಿನಲ್ಲಿ ಮದ್ಯಪಾನ ನಿಷೇಧವನ್ನು ಜಾರಿಗೆ ತಂದುದರಿಂದ ಅಲ್ಲಿನ ಬಡ ಜನರಲ್ಲಿ ೬೭ ಲಕ್ಷ ರೂಪಾಯಿಗಳ ಉಳಿತಾಯವಾಗಿದೆ. ಸಂಪೂರ್ಣ ಪ್ರಾಂತದಲ್ಲಿ ಮದ್ಯಪಾನ ನಿಷೇಧ ಮಾಡಲು ಮದ್ರಾಸು ಮಂತ್ರಿಮಂಡಳವು ೫ ವರ್ಷಗಳ ಕಾರ್ಯ ಕ್ರಮವನ್ನು ಮಾಡಿದೆ. ಇದರಿಂದ ೪ ಕೋಟಿ ರೂಪಾಯಿಗಳನ್ನು ಸರಕಾರವು ನಷ್ಟವನ್ನು ಹೊಂದುವುದಿದ್ದರೂ, ಅಂತಹ ಸಾಹಸವನ್ನು ಮಾಡಲು ಆರಂಭಮಾಡಿದ್ದಾರೆ. ಸರಕಾರವು ಈ ಕೆಲಸವನ್ನು ಮಾಡುವಾಗ, ಭೂಮಿಯ ತೆರಿಗೆಯನ್ನು ಕಡಿಮೆ ಮಾಡಬೇಕೆಂಬ ವಿಷಯವನ್ನು ಗಮನಕ್ಕೆ ತಂದಿರುತ್ತದೆ.

"ಕಳೆದ ವರ್ಷ ೧೫ ಲಕ್ಷರೂಪಾಯಿಗಳನ್ನು ಸರಕಾರವು ತೆಗೆದಿಟ್ಟಿದೆ. ಇದರಿಂದ ಪ್ರಾಂತದಲ್ಲಿ ೬೯೦ ಸಾರ್ವಜನಿಕ ಬಾವಿಗಳನ್ನು ಮಾಡಬಹುದು. ಎಲ್ಲಾ ಹಳ್ಳಿಗಳಲ್ಲಿಯೂ ಸರಿಯಾಗಿ ಕುಡಿಯ ಒಳ್ಳೆಯ ನೀರಿನ ವ್ಯವಸ್ಥೆಯಾಗಬೇಕಾದರೆ ೧೧ ಲಕ್ಷರೂಪಾಯಿಗಳು ದರಬೇಕು. ಸರಕಾರವು ೧೦ ವರ್ಷಗಳ ಯೋಜನೆಯೊಂದನ್ನು ಆ ಕುರಿತು ಮಾಡಿರುತ್ತದೆ.

"ದೇವರ ದೃಷ್ಟಿಯಲ್ಲಿ ಮನುಷ್ಯ ಮನುಷ್ಯರೊಳಗೆ ಭೇದವಿಲ್ಲ; ಈ ಭೇದವನ್ನು ಮಾಡಿದ್ದು ಕೇವಲ ಹುಚ್ಚು ಮನುಷ್ಯರು ಮಾತ್ರ. ಹಿಂದುಗಳು ಶುದ್ಧ ಹೃದಯಗಳಾದ ಸರ್ವಶಕ್ತನಾದ ದೇವರನ್ನು ದರ್ಶನಮಾಡಬೇಕೆಂದು ಅಪೇಕ್ಷಿಸುವುದಿದ್ದರೆ; ಅವರ ಧರ್ಮಕ್ಕೆ ಸೇರಿದ ಕೆಲವರಿಗೆ ಆ ದರ್ಶನವನ್ನು ಒದಗಿಸಿ ಕೊಡಲು ಯಾತಕ್ಕೆ ಹಿಂಜರಿಯಬೇಕು. ಹರಿಜನರನ್ನು ದೇವಾಲಗಳೊಳಗೆ ಬಿಡುವುದರಿಂದ, ದೇವಾಲಯಗಳು ಮಾತ್ರ, ಪರಿಶುದ್ಧವಾಗುವುದಲ್ಲ, ಇಡೀ ಹಿಂದೂ ಧರ್ಮವೇ ಪರಿಶುದ್ಧವಾಗುವುದು." ಹೀಗೆಂದು ಮಾನ್ಯ ಡಾ. ರಾಜನರು ತಿರುಚಿನಾಪಳ್ಳಿಯ ರಾಜಕೀಯ ಪರಿಷತ್ತು ಉದ್ಘಾಟನೆಮಾಡುತ್ತಾ ತಿಳಿಸಿದರು.

ಗಾಂಧಿಜಿಯುವರ ಸಂದೇಶ

ಅಪ್ರಾಯಸ್ಥ ರಾಜರ ಆಡಳಿತೆ

ಚಂಬಾ ಸಂಸ್ಥಾನದ ಅರಸರು ಅಪ್ರಾಯಸ್ಥರ; ಆದಕಾರಣ ಆ ಸಂಸ್ಥಾನವು ಬ್ರಿಟಿಷ್ ಆಡಳಿತೆಯಲ್ಲಿದೆ. ಆ ಸಂಸ್ಥಾನದ ಪರವಾಗಿ, ಬ್ರಿಟಿಷ್ ಸಾರ್ವಭೌಮ ಸರಕಾರವು ಪ್ರಜೆಗಳಿಗೆ ಸಂಸ್ಥಾನದ ಆಡಳಿತೆಯಲ್ಲಿ ಹೊಣೆಗಾರಿಕೆಯನ್ನು ಯಾತಕ್ಕೆ ಕೊಡಬಾರದ? ಎಂಬ ವಿಷಯ, ಅಲ್ಲಿನ ಪ್ರಜೆಗಳು ಗಾಂಧಿಜಿಯುವರಿಗೆ ಪತ್ರ ಬರೆದುದಕ್ಕೆ ಗಾಂಧಿಜಿಯುವರು ಹರಿಜನದಲ್ಲಿ ಹೀಗೆಂದು ಬರೆಯುತ್ತಾರೆ –

'ಬ್ರಿಟಿಷರೇ ಆಡಳಿತ ಮಾಡುವ ಸಂಸ್ಥಾನಗಳಲ್ಲಿರುವ ಪ್ರಜೆಗಳು ಬ್ರಿಟಿಷ್ ಹಿಂದೂಸ್ಥಾನದ ಪ್ರಜೆಗಳಿಗಿರುವ ಹಕ್ಕು ಸ್ವಾತಂತ್ರ್ಯಗಳನ್ನು ಯಾತಕ್ಕೆ ಅನುಭವಿಸಬಾರದು ಎಂಬ ವಿಷಯವು ಕುತೂಹಲದ ಪ್ರಶ್ನೆಯಾಗಿದೆ. ಬ್ರಿಟಿಷ್ ಹಿಂದೂಸ್ಥಾನದಲ್ಲಿ ಇಂದಿರುವ ಯಾವ ಆಡಳಿತೆಯು ಅಷ್ಟು ಸ್ವಾತಂತ್ರ್ಯವು ಪ್ರಜೆಗಳಿಗುಂಟೋ, ಅದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಒಬ್ಬ ಜವಾಬ್ದಾರನಾದ ಒಳ್ಳೆಯ ಸಂಸ್ಥಾನದ ಆಡಳಿತೆಗಾರನು ಅಲ್ಲಿ ಕೊಡಬಹುದು. ಪ್ರಾಂತಗಳಲ್ಲಿ ಆಡಳಿತೆ ಮಾಡುವಾಗ ಅನೇಕ ಉಚ್ಚಾಧಿಕಾರಿಗಳನ್ನು ಗಮನಿಸಬೇಕಾಗಿದೆ. ಆದರೆ ಸಂಸ್ಥಾನಗಳ ಆಡಳಿತೆಗಾರನು ಒಬ್ಬ ಗವರ್ನರರಿಗಿಂತಲೂ ಅಧಿಕ ಯೋಗ್ಯತೆಯ ಸ್ವಾತಂತ್ರ್ಯವನ್ನುಳ್ಳವನಾಗಿರುತ್ತಾನೆ. ಆದಕಾರಣ ಸಂಸ್ಥಾನಗಳಲ್ಲಿ ಮಾಡುವ ಯಾವ ತರದ ಅನ್ಯಾಯದ ಆಡಳಿತೆಗಾದರೂ ಯಾವ ಕ್ಷಮೆಯೂ ಇಲ್ಲ. ಆದರೆ ಅಂತ ಸ್ಥಳಗಳಲ್ಲಿ ಒಳ್ಳೆಯ ಆಡಳಿತೆಯು ನಡೆಯುವುದಿಲ್ಲವಾದರೆ, ಅದರಿಂದ ಸಾರ್ವಭೌಮ ಸರಕಾರವು ಪ್ರಜೆಗಳ ಕುರಿತು ಹಿತದೃಷ್ಟಿಯನ್ನು ಇಟ್ಟುಕೊಂಡಿಲ್ಲವೆಂದೇ ಅರ್ಥವಾಗುವುದು. ಸಂಸ್ಥಾನದ ಆಡಳಿತೆಯಲ್ಲಿ ಸಾರ್ವಭೌಮ ಸರಕಾರವು ಸೇರಿಲ್ಲವೆಂಬುದು ಸತ್ಯವಾದುದಲ್ಲ. ಇಂದು ಸಂಸ್ಥಾನದ ಪ್ರಜೆಗಳಲ್ಲಿ ಬಹಳ ಜಾಗೃತಿಯುಂಟಾಗಿದೆ. ನ್ಯಾಯವನ್ನು ತಾವು ಆಡಳಿತೆ ನಡೆಸುವ ಸಂಸ್ಥಾನಗಳಲ್ಲಿ ಬ್ರಿಟಿಷರು ಕೊಡಲು ಅಲ್ಲಗಳೆವುದು ವಿಚಾರಿಸಲು ಸಾಧ್ಯವಿಲ್ಲದ ಕಾರ್ಯವಾಗಿದೆ. ಚಂಬಾ ಸಂಸ್ಥಾನದ ಪ್ರಜೆಗಳು ತಮ್ಮ ಅಲ್ಲಿನ ಸಂಗತಿಗಳ ಕುರಿತು ಸತ್ಯಾಂಶಗಳನ್ನು ಪ್ರಕಟಿಸಲಿ. ಅವರಿಗೆ ಅನ್ಯಾಯವು ಅಲ್ಲಿ ಆಗಿದ್ದರೆ ಸಾರ್ವಜನಿಕ ಅಭಿಪ್ರಾಯವೇ ನ್ಯಾಯವನ್ನು ಒದಗಿಸುವುದು.

ಧಾಮಿ ಸಂಸ್ಥಾನದ ಘಟನೆ

'ಸಾರ್ವಭೌಮ ಸರಕಾರವು ಸಂಸ್ಥಾನಗಳ ಆಡಳಿತೆಯ ಕುರಿತು ಪ್ರವೇಶಿಸುವುದಿಲ್ಲವೆಂಬ ಮಾತಿನ ಸತ್ಯಾಂಶವು ಸಣ್ಣ ಧಾಮಿ ಸಂಸ್ಥಾನದ ವಿಷಯದಲ್ಲಿ ವಿದಿತವಾಗಿದೆ. ಸಾರ್ವಭೌಮ ಸರಕಾರಕ್ಕೆ ತಿಳಿಯದೆ ಅಲ್ಲಿ ಗುಂಡು ಹಾಕುವಂತಹ ಕಾರ್ಯವು ಆಗುತ್ತಿರಲಿಲ್ಲ. ಪೊಲಿಟಿಕಲ್ ಏಜೆಂಟರು ಹೊರಡಿಸಿದ ಪ್ರಕಟಣೆಯೇ ಆ ದುರ್ಘಟನೆಯಲ್ಲಿ ಕಡೆಯ ತೀರ್ಮಾನವಾಗಿರಲಿಕ್ಕಿಲ್ಲವಾಗಿತ್ತು. ಅಂತಹ ಪ್ರತಿಯೊಂದು ಸಾರ್ವಜನಿಕರ ಮೇಲೆ ಗುಂಡು ಹಾರಿಸುವಿಕೆಯನ್ನೂ ವಿಚಾರಣೆ ಮಾಡುವುದು ನ್ಯಾಯವಿದೆ. ಸಾರ್ವಜನಿಕರಿಗೆ ಆ ಕುರಿತು ತಮ್ಮ ಅಭಿಪ್ರಾಯಗಳನ್ನು ಕೊಡುವ ಸಂದರ್ಭವನ್ನೇ ಒದಗಿಸಲಿಲ್ಲ. ಪೊಲಿಟಿಕಲ್ ಏಜೆಂಟರ ಪ್ರಕಟಣೆಯಲ್ಲಿ ಯಾವುದೂ ಸ್ಪಷ್ಟವಿಲ್ಲ. ಅದರಲ್ಲಿ ಪ್ರತಿಯೊಂದು ಮಾತೂ ಸತ್ಯವಾಗಿರಬಹುದು. ಆದರೆ ಜನರಿಗೆ ಅದರಲ್ಲಿ ವಿಶ್ವಾಸವಿಲ್ಲ. ಪೊಲಿಟಿಕಲ್ ಏಜೆಂಟರು ತಮಗೆ ಆ ಪ್ರಕಟಣೆಯನ್ನು ಕೊಡಲು ಸಿಕ್ಕಿದ ಆಧಾರಗಳ ಕುರಿತು ತಿಳಿಸುವುದಿಲ್ಲ. ಯಾರು ತಪ್ಪು ಮಾಡಿದರೆಂಬ ವಿಷಯ, ಅದು, ಸಂಸ್ಥಾನವಾಗಲಿ ಪ್ರಜೆಗಳೇ ಆಗಲಿ ಯೋಗ್ಯ ವಿಚಾರಣೆಯಿಂದ ಆಗುವುದು ಅವಶ್ಯವಿದೆ. ಪ್ರಜೆಗಳು ರಾಣಾರನ್ನು ಕಿತ್ತುಹಾಕಲು ಯತ್ನಿಸಿದ್ದರೆ, ಅದು ನಿಜವಾಗಿಯೂ ತಪ್ಪು, ಅದಕ್ಕೆ ಯೋಗ್ಯ ಶಿಕ್ಷೆಯೂ ಆಗಬೇಕು.

ಆದರೆ ರಾಣಾ ರವರು ಪ್ರಜೆಗಳೊಡನೆ ನ್ಯಾಯರೀತಿಯಿಂದ ವರ್ತಿಸಿದರೋ ಎಂಬುದನ್ನು ವಿಚಾರಿಸಬೇಕು. ಪ್ರತಿಯೊಂದು ಗುಂಪು ಕೊಂಬಿನಮಾಡುವ ಗುಂಪಾಗಲಾರದು. ಆಶ್ರಿತ ರಾಜ್ಯಗಳ ಮನುಷ್ಯರ ಜೀವಕ್ಕೂ ಬ್ರಿಟಿಷ್ ರಾಜ್ಯದ ಮನುಷ್ಯರ ಜೀವದಷ್ಟೇ ಬೆಲೆಯಿದೆ.' ಆದ್ದರಿಂದ ಇಂತಹ ಸಂದರ್ಭದಲ್ಲಿ ಯೋಗ್ಯವಾದ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುವುದು ಅವಶ್ಯವಿದೆ.

ಬಹಳ ದೊಡ್ಡ ತಪ್ಪು ಕಾಂಗ್ರೆಸನ್ನು ಮರೆತದ್ದು!

'ಹಳೆಯ ಪದ್ಧತಿಗಳನ್ನು ಹೊಸ ಕಾಲವು ಕವಿದಿದೆ. ಇಂತಹ ಕಾಲದ ಒದಲಾವಣೆಯಲ್ಲಿ ಸಾರ್ವಭೌಮ ಸರಕಾರ, ಆಶ್ರಿತ ರಾಜರು, ಪ್ರಜೆಗಳು, ಕಾಂಗ್ರೆಸು, ಇವೆಲ್ಲವುಗಳ ರೀತಿನೀತಿಗಳಲ್ಲಿ ಬದಲಾವಣೆಯಾಗಬೇಕಾಗಿದೆ. ರಾಜರಾಗಲಿ, ಸಾರ್ವಭೌಮ ಸರಕಾರವಾಗಲಿ ಕಾಂಗ್ರೆಸನ್ನು ಮರೆತುಬಿಡುವುದು ದೊಡ್ಡ ತಪ್ಪು. ಆರಂಭದಿಂದಲೇ ಆಶ್ರಿತ ರಾಜ್ಯಗಳ ಪ್ರಜೆಗಳು ಕಾಂಗ್ರೆಸಿನ ನೆರಳಲ್ಲಿ ಒಂದಾಗಿ ಸೇರಿರುತ್ತಾರೆ; ಅಲ್ಲಿ ತಮ್ಮ ಆಸೆ ಭರವಸೆಗಳನ್ನು ತುಂಬಿಸಿಕೊಂಡಿರುತ್ತಾರೆ. ಕಾಂಗ್ರೆಸನ್ನು ಸಂದೇಹದಿಂದ ನೋಡಿ, ಹೆದರುವುದಕ್ಕಿಂತ ಕಾಂಗ್ರೆಸನ್ನು ಸ್ವಾಗತಿಸುವುದು ಯೋಗ್ಯ. ಆಶ್ರಿತ ರಾಜ್ಯಗಳಿಗೂ, ಪ್ರಜೆಗಳಿಗೂ ಇದರಿಂದ ಹಿತವುಂಟು. ಕಾಂಗ್ರೆಸು ಕೂಡಾ ಇಂತಹ ಸಂದರ್ಭದಲ್ಲಿ ಒಳ್ಳೆಯ ಪರಿಣಾಮಕಾರಿಯಾಗಿ ಕೆಲಸಮಾಡಬೇಕಾದರೆ ಅಹಿಂಸಾ ತತ್ವವನ್ನು ಸಂಪೂರ್ಣವಾಗಿ ಇಟ್ಟುಕೊಳ್ಳಬೇಕು. ನಾನಿದನ್ನೆಲ್ಲಾ ಹೇಳಿದ್ದು ಸತ್ಯವಾಗಿ ಧಾಮಿ ಸಂಸ್ಥಾನದಲ್ಲಿ ಏನು ನಡೆದಿದೆಯೆಂಬ ವಿಷಯವಾಗಿ ಕೂಲಂಕುಷ ವಿಚಾರವಾಗಬೇಕೆಂದು ತಿಳಿಯುವ ಸಲುವಾಗಿ.

ಅಹಿಂಸೆಯು ಸಾಧ್ಯವಿಲ್ಲವೇ?

ಕಾಂಗ್ರೆಸಿನ ತತ್ವದಲ್ಲಿ ಅಹಿಂಸೆಯು ಪ್ರಯೋಜನವಿಲ್ಲ ಮತ್ತು ಯಾವಾಗಲೂ ಸಾಧ್ಯವಾದುದಲ್ಲವೆಂಬ ಅಭಿಪ್ರಾಯವು ಇಂದು ಬಹುಜನರಲ್ಲಿದೆ. ಕಾಂಗ್ರೆಸಿನ ತತ್ವದಿಂದ ಅದನ್ನು ತೆಗೆದರೆ ಅಖಿಲ ಭಾರತ ಕಾಂಗ್ರೆಸು ಕಮಿಟಿಯು ತಿದ್ದಬಹುದೆಂಬ ವಿಷಯವಾಗಿ ಸತ್ಯಾಗ್ರಹದ ಕುರಿತು ಮಾಡಿದ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಠರಾವಿನ ಸಂಬಂಧ ಡಾ। ಲೋಹಿಯಾರವರು ಬರೆದ ಪತ್ರಕ್ಕೆ ಉತ್ತರವಾಗಿ 'ಹರಿಜನ'ದಲ್ಲಿ ಗಾಂಧಿಯುವರು ಹೇಳುತ್ತಾರೆ.

'ಅಹಿಂಸೆಯ ಕಾರ್ಯವು ಮಾನವ ಇತಿಹಾಸದಲ್ಲಿ ಕಾಣಸಿಗುವ ಬಹಳ ಅಪೂರ್ವವೂ ಅಮೂಲ್ಯವೂ ಆದ ವಿಷಯವಾಗಿದೆ. ನಾನು ನನ್ನೀ ಕಾರ್ಯಕ್ರಮವನ್ನು ಬಿಟ್ಟುಬಿಡಲೂ, ಮತ್ತು ಹೊಸ ಕಾರ್ಯಕ್ರಮಗಳನ್ನು ಮುಂದಿರಿಸಲು ಹಲವು ಸಲ ಕೇಳಿಕೊಂಡಿದ್ದೇನೆ. ಆದರೆ ನನ್ನ ಮನಸ್ಸಿಗೆ ಸರಿಹೋಗದ ಕಾರ್ಯಕ್ರಮಗಳನ್ನು ನಾನು ಆಶೀರ್ವದಿಸಲಾರೆನು. ನನ್ನ ಸತ್ಯಾಗ್ರಹ ಕಾರ್ಯಕ್ರಮವು ನನ್ನ ಆತ್ಮಸಾಕ್ಷಿಗೆ ಸಮ್ಮತವಾಗಿ ಇದೆ. ಆದರೆ ಇಂದು ಕಾಂಗ್ರೆಸಿನಲ್ಲಿರುವ, ಮೇಧಾವಿಗಳಿಗೆ ಹಲವರಿಗೆ ಇದು ಸಾಕಷ್ಟು ತೃಪ್ತಿಕರವಾಗಿ ತೋರಲಿಲ್ಲವೆಂದು ನಾನು ವಿಷಾದಪೂರ್ವಕ ತಿಳಕೊಂಡಿದ್ದೇನೆ. ಇದರಿಂದ ಅಂತವರಿಗೆ ಬುದ್ಧಿಯಿಲ್ಲವೆಂದು ನಾನು ಹೇಳುವುದಿಲ್ಲ, ಆದರೆ ಅಹಿಂಸೆಯಲ್ಲಿ ಅವರಿಗೆ ಸಾಕಷ್ಟು ನಂಬಿಗೆಯಿಲ್ಲವೆಂಬುವುದು ಸ್ಪಷ್ಟವಾಗಿದೆ.

ನಮ್ಮಲಿ ಅನ್ಯೋನ್ಯ ಜಾತೀಯ ಸೌಹಾರ್ದವು ಹುಟ್ಟಿ, ಮದ್ಯದ ಬಟ್ಟಿಯ ಸ್ಥಾನವನ್ನು ಹಾಲಿಯು ಪಡೆದು, ಅಸ್ಪೃಶ್ಯತೆಯು ನಮ್ಮ ಸಮಾಜದಿಂದ ದೂರವಾಗಿ, ಮದ್ಯಪಾನವು ನಮ್ಮ ಅಭ್ಯಾಸದಿಂದ ಕಳೆದುಹೋದಲ್ಲಿ, ಇದಕ್ಕಿಂತ ಹೆಚ್ಚಿನ ಸೌಭಾಗ್ಯವು ನಮಗೆ ಇನ್ನೇನು ಬೇಕಾಗಿದೆ? ಹಿಂದು ಮತ್ತು ಮುಸ್ಲಿಮರು ಅನ್ಯೋನ್ಯ ಅವಿಶ್ವಾಸವನ್ನು ಕಿತ್ತುಹಾಕಿದ್ದರೆ, ಅನ್ಯೋನ್ಯ ರಕ್ತಸಂಬಂಧಿಕರೆಂಬ ಪ್ರೀತಿಯಿಂದ ಇರುತ್ತಿದ್ದರೆ, ಹಿಂದುಗಳು ಅಸ್ಪೃಶ್ಯತೆಯನ್ನು ಬಿಟ್ಟುಕೊಟ್ಟು ಆತ್ಮಶುದ್ಧಿ ಮಾಡಿಕೊಳ್ಳುತ್ತಿದ್ದರೆ, ಧನಿಕರು ಬಡವರನ್ನು ಸುಲಿಯುವುದನ್ನು ನಿಲ್ಲಿಸಿದ್ದರೆ, ಹಿಂದೂದೇಶದ ಏಳು ಲಕ್ಷ ಗ್ರಾಮಗಳ ಜನರಿಗೆ ಆಹಾರ ಸಾಧನವಾದ ಗ್ರಾಮೋದ್ಯೋಗಗಳಿಗೆ ಸಹಕಾರ ಕೊಡಲು ನಾವು ಮರೆತರೆ, ಖಂಡಿತವಾಗಿಯೂ ಸ್ವರಾಜ್ಯವು ನಮಗೆ ಸಿಗುವುದು ಸಾಧ್ಯವಿಲ್ಲ.

ರಚನಾತ್ಮಕ ಕಾರ್ಯಗಳ ಕುರಿತು ಯಾರೂ ಆಕ್ಷೇಪವೆತ್ತುವುದಿಲ್ಲ. ಆದ್ದರಿಂದ ನಾವು ಧೈರ್ಯಪೂರ್ವಕವಾಗಿ ಹೇಳುವುದೇನೆಂದರೆ, ಪ್ರತಿಯೊಬ್ಬ ಕಾಂಗ್ರೆಸು ಕೆಲಸಗಾರನೂ ಈ ರೀತಿಯ ರಚನಾತ್ಮಕ ಕಾರ್ಯಗಳ ಕಡೆಗೆ ಗಮನವಿತ್ತ ಪಕ್ಷದಲ್ಲಿ ಅಹಿಂಸಾತ್ಮಕ ಸ್ವರಾಜ್ಯವು ನಮಗೆ ಬಹು ಬೇಗನೇ ಸಿಗುವುದು. ಭಾರತದಲ್ಲಿ ಅಹಿಂಸಾತ್ಮಕ ವಾತಾವರಣವೂ ನೆಲಸುವುದು.

ಅಹಿಂಸೆಯಲ್ಲಿ ಯಾವಾಗ ಕಾಂಗ್ರೆಸು ಮುಖಂಡರು ಸಂಪೂರ್ಣ ವಿಶ್ವಾಸವಿಡುತ್ತಾರೊ ಆಗ ಈ ಎಲ್ಲಾ ಗಲಭೆಗಳೂ ಕೊನೆಗೊಳ್ಳುವವು. ಅಧಿಕಾರ ಲಾಲಸೆಯೂ ಮಾಯವಾಗುವುದು. ಒಳ್ಳೆಯ ಕಾರ್ಯಕ್ರಮವನು ಮುಂದಿಟ್ಟು, ಕಾಂಗ್ರೆಸಿನ ಸಭೆಯೊಂದು ಕರೆಯಲ್ಪಡಲಿ, ಅಲ್ಲಿ ಕಾಂಗ್ರೆಸಿನ ತತ್ವದಿಂದ ಅಹಿಂಸೆಯು ತಳ್ಳಲ್ಪಡಲಿ! ಕಾಂಗ್ರೆಸು ಇಂದು ವಿಭಕ್ತವಾದ ಮನೆಯಾಗಿದೆ. ಆದರೆ ಅಂತಹ ಸಭೆಯಲ್ಲಿ ಎಲ್ಲಾ ಪಕ್ಷದವರೂ ಸೇರಿ ಸರಿಯುಕ್ತ ಕಾರ್ಯಕ್ರಮವೊಂದನ್ನು ಒಪ್ಪಿಕೊಂಡು ಸ್ವರಾಜ್ಯಕ್ಕಾಗಿ ಹೋರಾಡಲಿ'.

ಖಾದಿಯಿಂದಲೇ ದೀನರ ಸೇವೆ

'ನನ್ನ ಜೀವನಮಾನದಲ್ಲಿ ಮಾಡಿದ ಎಲ್ಲಾ ದೀನ ಜನರ ಸೇವೆಯಲ್ಲಿ ಖಾದಿಗೇ ನಾನು ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿರುತ್ತೇನೆ. ಇದು ಹುಚ್ಚು ಮನುಷ್ಯನ ಹುಚ್ಚು ಅಭಿಪ್ರಾಯವೆಂದು ನಾನು ಅಭಿಪ್ರಾಯಪಡುವುದಿಲ್ಲ. ಇದು ಭಾರತದ ಹಿಂದೂ ಮುಸ್ಲಿಂ ಜನರಿಗೆ ಎರಡು ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಕೊಡುತ್ತಿರುವಾಗ ನಾನು ಅದನ್ನಿಂದು ಹುಚ್ಚನಾಗಲು ಸಾಧ್ಯವಿಲ್ಲ' ಹೀಗೆಂದು ಮಹಾತ್ಮಾಜಿಯವರು ಖಾದಿಯ ಮಹತ್ವದ ಕುರಿತು 'ಹರಿಜನ'ದಲ್ಲಿ ಬರೆಯುತ್ತಾರೆ.

ಗಾಂಧಿಜಿಯುವರು ಮಾತ್ರ ಮುನ್ನಡೆಸಬಲ್ಲರು

ಲಕ್ನೋದಲ್ಲಿ ಸೇರಿದ ಕಾಂಗ್ರೆಸು ಕೆಲಸಗಾರರ ಸಮ್ಮೇಳನದಲ್ಲಿ ಶ್ರೀ. ಮೋಹನಲಾಲ ಸಕ್ಸೇನಾರವರು ಇಂದು ಭಾರತದಲ್ಲಿರುವ ಫಾರ್ವರ್ಡ್ ಬ್ಲಾಕ್, ಸೋಶಿಯಲಿಸ್ಟ್ ಪಕ್ಷ, ಕಮ್ಯುನಿಸ್ಟ್ ಪಕ್ಷ, ರಾಯಿಸ್ಟ್ ಪಕ್ಷ ಇವುಗಳ ವಿಷಯ ಮಾತನಾಡುತ್ತಾ, ಇವುಗಳೆಲ್ಲಾ ರಾಷ್ಟ್ರದ ರಾಜಕೀಯ ಪರಿಸ್ಥಿತಿಗೆ ಸಂದಿಗ್ಧವಾಗುವುದೆಂದೂ, ಗಾಂಧಿಜಿಯವರೊಬ್ಬರು ಮಾತ್ರ ದೇಶವನ್ನು ಯೋಗ್ಯ ಪಥದಲ್ಲಿ ನಡೆಸಲು ಸಮರ್ಥರೆಂದೂ ಹೇಳಿದರು.

ಗಾಂಧಿಜಿಯವರನ್ನು ಕಾಂಗ್ರೆಸಿನ ಕೆಲಸಗಾರರು ನಿಜವಾಗಿಯೂ ನಂಬಿದ್ದರೆ, ಇಂದು ಅವರ ಸಹಾಯಗಳನ್ನು ವಿರೋಧಿಸಿ, ವಿರೋಧಿ ಪಕ್ಷಕ್ಕೆ ಸೇರುತ್ತಿರಲಿಲ್ಲವೆಂದೂ ಹಾಗೆ ತಿಳಿಯದಿರುವುದು ದೌರ್ಭಾಗ್ಯವೆಂದೂ ಹೇಳಿದರು. ಭಾಷಣ ಮುಂದುವರಿಸುತ್ತಾ ಅವರು ಬೊಂಬಯಿಗೆ ಬಂದಾಗ ಸರ್ದಾರ ಪಟೇಲರು ತನ್ನೊಡನೆ ಆಶ್ರಿತ ರಾಜ್ಯಗಳ ಪ್ರಜೆಗಳು ಗಾಂಧಿಜಿಯವರ ಇಂದಿನ ಸೂಚನೆಯನ್ನು ಸಂಪೂರ್ಣ ಸಮ್ಮತಿಸಿರುವರೆಂದೂ, ಮಹಾತ್ಮಾ ಗಾಂಧಿಯವರು ಯಾವ ಕಾಲದಲ್ಲಿ ಹೇಗೆ ನಡೆಯಬೇಕೆಂಬ ವಿಷಯ ತಿಳಿದಿರುವರೆಂದೂ, ತನ್ನ ತಪ್ಪನ್ನು ಒಪ್ಪಿಕೊಳ್ಳುವುದರಿಂದ ಮತ್ತು ನಿಜವಾದ ಸೇವಾ ಬುದ್ಧಿಯಿಂದ ಕೆಲಸಮಾಡುವುದರಲ್ಲಿ ಮಾತ್ರ ಅವರಿಗೆ ಇಂತಹ ಮಹಾತ್ಮ್ಯತೆ ಬಂದಿದೆಯೆಂದೂ, ಅವರಿಂದ ಇಂದು ಯಾವ ಧುರೀಣನೂ ಅಷ್ಟೊಂದು ನೈತಿಕ ಧೈರ್ಯವನ್ನು ಹೊಂದಿಲ್ಲವೆಂದೂ, ಆದಕಾರಣ ಕಾಂಗ್ರೆಸಿನವರು ಗಾಂಧಿಜಿಯವರ ಧುರೀಣತೆಯನ್ನು ಅನುಸರಿಸುವುದು ಯೋಗ್ಯವೆಂದರು.

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು.

ತಯಾರಿಸುವವರು:
ಆಯುರ್ವೇದಾಶ್ರಮ :: :: ಮದರಾಸು.



ಸ್ಟಾಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಬೊಂಬಾಯಿಯಲ್ಲಿ ಗುಂಡು ಹಾರಿಸಿದರು!

ಸುಭಾಷ ಬೋಸರ ತಮಿಳುನಾಡು ಪ್ರವಾಸ

ಡಾ. ಸತ್ಯಪಾಲರ ರಾಜಕೀಯ ವಿಶ್ರಾಂತಿ

ಕಾಂಗ್ರೆಸು ಧುರೀಣರೊಬ್ಬರ ನಿಧನ!

ಗುಜರನ್‌ವಾಲಾದಲ್ಲಿ ೩೫ ಮಂದಿಯ ಬಂಧನ

ಸಿಕ್ಖ ಮತ್ತು ಹಿಂದುಗಳಿಗೆ ಗುಜರನ್‌ವಾಲಾದ ಒಂದು ದೇವಾಲಯವನ್ನು ಕಟ್ಟುವ ವಿಷಯದಲ್ಲಿ ಆದ ಗಲಾಟೆಯ ನಿಮಿತ್ತವಾಗಿ ೧೪೪ನೇ ಸೆಕ್ಷನು ಜಾರಿಯಾಗಿದೆ. ಆ ಪ್ರಕರಣದಿಂದ ೩೫ ಮಂದಿಯನ್ನು ಸೆರೆ ಹಿಡಿದಿರುವರು.

ಅವರಲ್ಲಿ ಅಪಾದಿತರಾದ ಹಿಂದೂಗಳು ಜಾಮೀನು ಕೊಟ್ಟು ಬಿಡುಗಡೆಯಾಗಿದ್ದಾರೆ; ಆದರೆ ಸಿಕ್ಖರು ಬಿಡುಗಡೆಹೊಂದಲು ತಿರಸ್ಕರಿಸಿದರು.

ಅಸ್ಸಾಮಿನ ಕಾಂಗ್ರೆಸು ಧುರೀಣರೊಬ್ಬರ ನಿಧನ

ಸೆಂಟ್ರಲ್ ಎಸೆಂಬ್ಲಿಯ ಸದಸ್ಯರೂ ಅಸ್ಸಾಮಿನ ಪ್ರಸಿದ್ಧ ಕಾಂಗ್ರೆಸು ಮುಖಂಡರೂ ಆಗಿದ್ದ ಬ್ಯಾರಿಸ್ಟರ್ ಶ್ರೀ ಟಿ. ಆರ್. ಪೂಕ್ಹಾನರವರು ಕಳೆದ ತಿಂಗಳ ತಾ. ೨೭ರಂದು ನಿಧನ ಹೊಂದಿದರು.

ಇವರು ನಿಧನವಾರ್ತೆಯನ್ನು ಕೇಳಿ ಅಸ್ಸಾಮಿನ ಪ್ರಧಾನ ಮಂತ್ರಿಗಳು 'ಇಂದು ಅಸ್ಸಾಮವು ಸ್ವಾತಂತ್ರ್ಯದ ಮಹಾ ಯೋಧನನ್ನು ಕಳೆದುಕೊಂಡು ಅಪಾರ ನಷ್ಟ ಹೊಂದಿತು' ಎಂದು ಹೇಳಿದರು.

ಕಳೆದ ೨೫ ವರ್ಷಗಳ ಅಸ್ಸಾಮಿನ ರಾಜಕೀಯ ಕ್ಷೇತ್ರದಲ್ಲಿ ಇವರು ಬಹಳ ಪ್ರಖ್ಯಾತಿಗೆ ಬಂದಿರುವರು. ಇವರು ಮೊದಲಾಗಿ ಅಸಹಕಾರ ಚಳವಳಿಯನ್ನು ಅಲ್ಲಿ ಆರಂಭಿಸಿದರು. ೧೯೨೬ರಂದು ಗೌಹಾತಿಯಲ್ಲಿ ಸೇರಿದ ಅಖಿಲಭಾರತ ರಾಷ್ಟ್ರ ಸಭೆಯ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಹೊಸ ರಾಜ್ಯಘಟನೆಯು ಬಂದಾಗ ಅಸ್ಸಾಮಿನಲ್ಲಿ ಸಂಯುಕ್ತ ಪ್ರಜಾಪಕ್ಷವೆಂಬೊಂದು ಪಕ್ಷವನ್ನು ಇವರು ಸ್ಥಾಪಿಸಿದರು. ಇತ್ತೀಚೆಗೆ ಪ್ರತ್ಯಕ್ಷ ರಾಜಕೀಯದಿಂದ ವಿಶ್ರಾಂತಿ ಪಡೆಯಬೇಕೆಂದು ಅವರು ನಿಶ್ಚಯಿಸಿದ್ದರು. ಆದರೆ ಇವರಿಗೆ ಪ್ರಿಯಾದಂತೆಯೇ ದೇವರು ಚಿರವಿಶ್ರಾಂತಿಯನ್ನು ದಯಪಾಲಿಸಿದರು.

ಅಖಿಲಭಾರತ ಕಾಂಗ್ರೆಸು ಸಭೆಯು ಪಾಟ್ನಾದಲ್ಲಿ

ವಾರ್ಧಾದಲ್ಲಿ ಅಖಿಲ ಭಾರತ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯು ಸಭೆಸೇರಿದ ಬಳಿಕ, ಕೂಡಲೇ ಪಾಟ್ನಾದಲ್ಲಿ, ಜೂಲಾಯಿ ೯ರಂದು ನಿಷೇಧ ಸಭೆ ಮಾಡಿದವರ ಕುರಿತು, ಶಿಸ್ತುಜಾರಿಯನ್ನು ಮಾಡುವ ಸಲುವಾಗಿ ಸಭೆಯೊಂದು ಜರಗಲಿರುವುದು.

'ಯುನೈಟೆಡ್ ಪ್ರೆಸ್ಸಿನ ವಾರ್ತೆಯಂತೆ ಕಾಂಗ್ರೆಸಿನ ತೀರ್ಮಾನಕ್ಕೆ ವಿರೋಧಿಸಿದವರ ಕುರಿತು, ಕಾಂಗ್ರೆಸು ಅಧಿನಾಯಕರು ಬಹಳ ಕಠೋರರಾಗಿರುವರೆಂದು ತಿಳಿಯುತ್ತದೆ. ಅಖಿಲಭಾರತ ಕಾಂಗ್ರೆಸು ವರ್ಕಿಂಗ್ ಕಮಿಟಿಯವರು ಮುಂದಿನ ಸಭೆಯ ಅಂಗೀಕಾರಕ್ಕಾಗಿ ನಿರ್ಣಯಗಳನ್ನು ಮಾಡುವುದು.

ಶ್ರೀ ಸುಭಾಸಬೋಸರ ತಮಿಳು ನಾಡಿನ ಪ್ರವಾಸ

ಶ್ರೀ. ಸುಭಾಸಬೋಸರು ಹದಿನೈದು ದಿನಗಳ ತನಕ ತಮಿಳು ನಾಡಿನ ಸಂದರ್ಶನ ಮಾಡಲಿರುವರೆಂದು ಕಾರ್ಯಕ್ರಮವು ನಿರ್ಣಯವಾಗಿದೆ. ಅಣ್ಣಾಮಲೆ ಯುನಿವರ್ಸಿಟಿಯ ವೈಸ್ ಚಾನ್ಸಲರಾದ ರೈಟ್ ಆನರೇಬಲ್ ಶ್ರೀನಿವಾಸ ಶಾಸ್ತ್ರಿಗಳು ಸುಭಾಷರನ್ನು ಅತಿಥಿಗಳಾಗಿ ಆಮಂತ್ರಿಸಿರುವರು. ಚಿದಂಬರ ಯುವಕ ಸಂಘದಲ್ಲಿ ಅವರು ಅಧ್ಯಕ್ಷತೆ ವಹಿಸುವರು. ಅಣ್ಣಾಮಲೆ ಯುನಿವರ್ಸಿಟಿಯ ವಿದ್ಯಾರ್ಥಿಗಳಿಗೂ ಅವರು ಭಾಷಣ ಮಾಡಲಿರುವರು.

ಬೊಂಬಯಿಯಲ್ಲಿ ಗುಂಡು ಹಾರಿಸಿದರು

ಮುಸ್ಲಿಂ ಲೀಗಿನವರು ಬೊಂಬಯಿ ಸರಕಾರದವರು ಪ್ರಯೋಗಕ್ಕೆ ತಂದ ಸ್ಥಿರ ಸೊತ್ತಿನ ತೆರಿಗೆಯ ವಿಷಯದಲ್ಲಿ ನಿಷೇಧ ಪ್ರದರ್ಶನ ಮಾಡಿದರು. ಕರಿ ನಿಶಾನೆಯನ್ನು ಹಿಡಿದು ಸಾವಿರಾರು ಮಂದಿ ಮುಸ್ಲಿಮರು ಮೆರವಣಿಗೆ ಹೊರಟರು.

ಮೆರವಣಿಗೆಯು ಮುಂದುವರಿದು ಸಭಾಸ್ಥಳವನ್ನು ಮುಟ್ಟುವಷ್ಟರಲ್ಲಿ ಗುಂಪಿನ ಒಂದು ಕಡೆಯಿಂದ ಕಲ್ಲೆಸೆಯುವುದು ಸುರುವಾಯಿತು. ಹಿಂದೂ ಮುಸ್ಲಿಮರೊಳಗೆ ಜಗಳ ಸುರುವಾಯಿತು. ಕೆಲವು ಆಫೀಸರರು ಮತ್ತು ಪೋಲೀಸರಿಗೂ ಗಾಯಗಳಾದುವು. ಪೋಲೀಸರು ಲಾಠೀ ಚಾರ್ಜು ಮಾಡಿದರು. ಕಲ್ಲೆಸೆವುದು ನಡೆಯುತ್ತಾ ಇತ್ತು. ಕಡೆಗೆ ಪೋಲೀಸರು ಈ ಗಲಭೆಯನ್ನು ನಿಲ್ಲಿಸಲು ಗುಂಡು ಹೊಡೆಯಬೇಕಾಯಿತು.

ರಾಷ್ಟ್ರೀಯ ಯೋಜನಾ ಸಮಿತಿಯ ಸಭೆ

ರಾಷ್ಟ್ರೀಯ ಯೋಜನಾ ಸಮಿತಿಯ ಬೇರೆ ಬೇರೆ ಕಮಿಟಿಗಳ ಸಭೆಯೊಂದು ಆಗಸ್ಟ ತಿಂಗಳ ತಾ. ೧೩ರಂದು ಅಲ್ಲಹಾಬಾದಿನಲ್ಲಿ ಸೇರಲಿರುವುದು. ಜವಾಹಿರಲಾಲ ನೆಹರುಗಳು ಅಧ್ಯಕ್ಷತೆ ವಹಿಸುವರು.

ರಾಜಕೀಯ ಕೈದಿಗಳ ಉಪವಾಸವು ನ್ಯಾಯವಲ್ಲ!

ಗಾಂಧಿಜಿಯವರ ಎಚ್ಚರಿಕೆ

ರಾಜಕೀಯ ಕೈದಿಗಳು ಮಹಾತ್ಮಾಜಿಯವರಿಗೆ ಕೆಲವು ಪ್ರಶ್ನೆಗಳನ್ನು ಮಹಾದೇವ ದೇಸಾಯಿಗಳ ಮುಖಾಂತರ ಕಳುಹಿಸಿದ್ದಾರೆ. ಅವುಗಳ ಕುರಿತು ಗಾಂಧಿಜಿಯವರು ಹೀಗೆನ್ನುತ್ತಾರೆ.

ಅವರ ಬಿಡುಗಡೆಯ ಕುರಿತು ಇಂತಹದೇ ಅವಧಿಯನ್ನು ಹೇಳಲಾರೆ. ನನಗೆ ಆ ಅಧಿಕಾರವಿದ್ದರೆ ಖಂಡಿತ ನಾನು ಹಾಗೆಮಾಡುತ್ತಿದ್ದೆ: ನನಗಿರುವ ಅಧಿಕಾರವೆಂದರೆ, ನನ್ನ ಸಾಧ್ಯವಾದ ಶಕ್ತಿಯಿಂದ ಅವರ ಪರವಾಗಿ ವಾದಿಸುವುದು, ಆದರೆ ಅವರು ಉಪವಾಸವನ್ನು ಮುಂದುವರಿಸುವುದರಿಂದ ನನಗೆ ಅಂತಹ ಸಂದರ್ಭವನ್ನೇ ಕೊಡುವುದಿಲ್ಲ. ಸಾರ್ವಜನಿಕರ ಅಭಿಪ್ರಾಯವನ್ನು ಕೆರಳಿಸುವ ಉದ್ದೇಶದಿಂದ ಆರಂಭಿಸಿದ ಉಪವಾಸವು ಆ ಕಾರ್ಯವನ್ನು ಮಾಡಿದೆ. ಆದರೆ ಇನ್ನು ಮುಂದುವರಿಸುವುದು ಬೇಡ. ಈಗ ಅವರು ಉಪವಾಸ ಬಿಟ್ಟುಕೊಟ್ಟಲ್ಲಿ ಅದಕ್ಕಾಗಿ ಕೆಲವರು ಯತ್ನಮಾಡುವವರಿದ್ದಾರೆ. ಈ ಉಪವಾಸವು ನ್ಯಾಯವಲ್ಲವೆಂದು ನಾನು ತಿಳಿಯುತ್ತೇನೆ. ಇಂತಹ ಪರಿಸ್ಥಿತಿಯಲ್ಲಿರುವ ಜನರಿಗೆ ಇವರು ಒಂದು ಅಧಮ ಆದರ್ಶವನ್ನು ತೋರಿಸಿದಂತಾಗುತ್ತದೆ. ಇಂತಹ ಉಪವಾಸವು ಸರ್ವತ್ರ ಹರಡಿದರೆ ಯಾವುದೇ ಸರಕಾರವನ್ನಾದರೂ ನಿಯಮಿತಿಯಿಂದ ನಡೆಯಬಿಡಲಿಕ್ಕಿಲ್ಲ.

ಕೈದಿಗಳ ಕಾರಣವು ಸಂಪೂರ್ಣ ನ್ಯಾಯವಾದದ್ದು. ಆದರೆ ಅದನ್ನೇ ಒತ್ತಿ ಹೇಳುವುದರಿಂದ ತಮ್ಮ ಕಾರಣವನ್ನು ಅವರು ದುರ್ಬಲಗೊಳಿಸುತ್ತಾರೆ. ನಾನು ಅವರಿಗೆ, ಉಪವಾಸದ ವಿಷಯದಲ್ಲಿ ಅನುಭವವುಳ್ಳವನ, ಸೆರೆಮನೆಯಲ್ಲಿದ್ದ ಅನುಭವವುಳ್ಳವನ ಮಾತನ್ನು ಕೇಳಿರೆಂದು ಬಿನ್ನವಿಸುತ್ತೇನೆ. ಅವರ ಪರವಾಗಿ ವಾದಿಸುವವನನ್ನು ಹೀಗೆ ಅವರು ಸಂಕಷ್ಟಗೊಳಿಸದಿರಲಿ. ಉಪವಾಸವನ್ನು ಬಿಟ್ಟು ವರ್ಕಿಂಗ್ ಕಮಿಟಿಗೆ ಅವರು ಒಂದು ವಿಚಾರವಮಾಡಲು ಆಸ್ಪದ ಕೊಡಲಿ.

ಕಲ್ಕತ್ತದಲ್ಲಿ ನೆರೆಹಾವಳಿ

ಕಳೆದ ವಾರ ಕಲ್ಕತ್ತದಲ್ಲಿ ಭಯಂಕರವಾಗಿ ಮಳೆಯು ಸುರಿದು, ಹಲವು ಕಡೆಗಳಲ್ಲಿ ನೆರೆಹಾವಳಿಯು ಆಗಿದೆ. ವಾಹನಗಳೂ ಅತ್ತಿತ್ತ ಚಲಿಸಲಾರದಷ್ಟು ಮಾರ್ಗಗಳ ಮೇಲೆ ನೀರು ಹರಿದು ಹೋಗುತ್ತಿತ್ತು. ಎಷ್ಟೋ ಕಾರ್ಯಕ್ರಮಗಳು ಮಳೆಯ ದೆಸೆಯಿಂದ ಮುಂದುವರಿಸಲ್ಪಟ್ಟವು. ಬಿರುಗಾಳಿ ಸುಂಟರು ಗಾಳಿಗಳೂ ಅಲ್ಲಲ್ಲಿ ಸುರುವಾಗಿದ್ದವು. ನೆರೆಯ ದೆಸೆಯಿಂದ ಡೆಕ್ಕಾ ಮೈಲು ಗಾಡಿಯು ಹೊರಡಿರಲಿಲ್ಲ.

ಆಂಧ್ರ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ

ಆಂಧ್ರ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ ಭಾಷಣವನ್ನು ಕಲ್ಕತ್ತದ ಸರ್ ನೀಲರತ್ನ ಸರ್ಕಾರರವರು ಮಾಡುವರಾಗಿ ಒಪ್ಪಿರುವುದು. ಇದು ಬರುವ ಅಕ್ಟೋಬರ ೭ರಂದು ಜರಗುವುದು.

ಆಂಧ್ರ ರಾಜಕೀಯ ಪರಿಷತ್ತು

೧೮ನೇ ಆಂಧ್ರ ಪ್ರಾಂತಿಕ ರಾಜಕೀಯ ಪರಿಷತ್ತಿನ ಕಾರ್ಯಕಾರೀ ಸದಸ್ಯರ ಚುನಾವಣೆಯ ಸಲುವಾಗಿ ಆಗಸ್ಟ ೬ರಂದು ಮದ್ರಾಸಿನಲ್ಲಿ ಸಭೆ ಸೇರಲಿರುವರು.

ಸರ್ ಸಿ. ವಿ. ರಾಮನರಿಗೆ ಅಧ್ಯಕ್ಷತನ.

ಆಂಧ್ರ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಅಧ್ಯಕ್ಷರಾಗಿ ಸರ್ ಸಿ. ವಿ. ರಾಮನರನ್ನು ಚುನಾಯಿಸಲಾಗಿದೆ. ವಿಶಾಖಪಟ್ಣ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಮೇಜರ್ ಜೆ. ಎಫ್. ಶೆಪರ್ಡರನ್ನು ವೈದ್ಯಕೀಯ ವಿಭಾಗದ ಅಧ್ಯಕ್ಷರಾಗಿ ಚುನಾಯಿಸಲಾಗಿದೆ

ಬೆಂಗಳೂರಲ್ಲಿ ಪಂಡಿತ ಕುಂಜ್ರೂರವರು

ಇಂಡಿಯಾನ್ ಸಾಂಡ್ರಸ್ಸ ಕಮಿಟಿಯ ಸದಸ್ಯರಾದ ಪಂಡಿತ ಹೃದಯನಾಥ ಕುಂಜ್ರೂರವರು ಮೈಸೂರು ಸಂಸ್ಥಾನದ ಕೆಲವು ಕಾಂಗ್ರೆಸು ಮುಖಂಡರನ್ನು ಬೆಂಗಳೂರಲ್ಲಿ ಸಂದರ್ಶಿಸಿ ಆಶ್ರಿತರಾಜ್ಯದ ಆಂದೋಲನದ ಕುರಿತು ಸಂಭಾಷಣೆ ನಡೆಸಿದರು. ಶ್ರೀಗಳಾದ ಎನ್. ಸಿ. ತಿಮ್ಮರೆಡ್ಡಿ, ಕೆ. ಪಿ. ರಾಮ್, ಸೀತಾರಾಮಶಾಸ್ತ್ರಿ ಮೊದಲಾದವರು ಬಂದಿದ್ದರು. ಮೈಸೂರು ಕಾಂಗ್ರೆಸು ಚಳವಳದ ಕುರಿತು ಮಾತುಕತೆಯಾಯಿತು. ಅವರು ಮೈಸೂರು ರಾಜ್ಯದ ಆಡಳಿತೆಯು ಪ್ರಾಗತಿಕವಾಗಿದೆ ಎಂಬ ಅಭಿಪ್ರಾಯವನ್ನು ಪ್ರಕಟಿಸಿದರು.

ಲಂಚವಿಲ್ಲದಂತೆ ಮಾಡುವುದು

ಸರಕಾರೀ ಅಧಿಕಾರಿಗಳು ಲಂಚತಕ್ಕೊಳ್ಳದಂತೆ ಬೀಹಾರ್ ಸರಕಾರವು ಮುಖ್ಯ ಅಧಿಕಾರಿಗಳಿಗೆ ಒಂದು ಪ್ರಕಟಣೆ ಕಳುಹಿಸಿದೆ. ಇದರಲ್ಲಿ ಮುಖ್ಯ ಅಧಿಕಾರಿಗಳು ಆ ಕಡೆಗೆ ಚೆನ್ನಾಗಿ ಗಮನಕೊಡಬೇಕು, ಅವರು ಹೆಚ್ಚು ಗಮನ ಕೊಡದಿರುವುದರಿಂದ ಹೀಗೆ ಕೆಳಗಿನ ನೌಕರರು ಲಂಚಕ್ಕೆ ಬಾಯೊಡ್ಡುತ್ತಿರುವರೆಂದೂ ಪ್ರತಿಯೊಂದು ಇಲಾಖೆಯ ಮೇಲಾಧಿಕಾರಿಗಳನ್ನು ಎಚ್ಚರಿಸಲಾಗಿದೆ.

ಡಾ. ಸತ್ಯಪಾಲರು ರಾಜಕೀಯದಿಂದ ವಿಶ್ರಾಂತಿ ಹೊಂದುವರು

ಪಂಜಾಬ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಾದ ಡಾ. ಸತ್ಯಪಾಲರು ಪ್ರತ್ಯಕ್ಷ ರಾಜಕೀಯದಿಂದ ವಿಶ್ರಾಂತಿ ಹೊಂದುವರೆಂದು ಅಲ್ಲಿನ ದೇಶಭಾಷಾ ಪತ್ರಿಕೆಯಲ್ಲಿ ಅವರ ಸಹಿ ಹಾಕಿದ ಪ್ರಕಟಣೆಯು ಹೊರಟಿದೆ. ಕಾಂಗ್ರೆಸಿಗೆ ಇದು ಬಹಳ ಆಶ್ಚರ್ಯವನ್ನು ಹುಟ್ಟಿಸಿದೆ.

ಹೀಗೆ ವಿಶ್ರಾಂತಿ ಹೊಂದಲು ಅವರು ಕಾರಣ ಹೇಳುತ್ತಾ, ಗಡಿನಾಡಿನ ಗಾಂಧಿಯವರ ಸಂಚಾರದಂದು ಪಂಜಾಬದ ಕಾಂಗ್ರೆಸಿನಲ್ಲಿರುವ ವಿಷಮತೆಯನ್ನು ಹೋಗಲಾಡಿಸುವ ಸಲುವಾಗಿ ಮಹಾತ್ಮಾಜಿಯವರನ್ನು ಆಮಂತ್ರಿಸಿದ್ದು, ಅವರು ಅಲ್ಲಿಗೆ ಬರಲು, ಪಂಜಾಬದ ಮುಖಂಡರಲ್ಲಿ ಗಾಂಧಿಜಿಯವರು ತನಗೆ ವಿಶ್ವಾಸವಿಲ್ಲವೆಂಬ ಕಾರಣವನ್ನು ಹೇಳಿದ್ದು ತನ್ನನ್ನು ಬಹಳ ನೋಯಿಸಿತು ಎಂದು ತಿಳಿಸುತ್ತಾರೆ. ತನ್ನ ಸೇವೆಯು ಪ್ರಾಂತ್ಯಕ್ಕೆ ಮತ್ತು ದೇಶಕ್ಕೆ ಅಗತ್ಯವಿಲ್ಲವಾದರೆ, ದೇಶಕ್ಕಾಗಿ ತನ್ನನ್ನು ಅರ್ಪಿಸುವುದರಲ್ಲಿ ಅರ್ಥವಿಲ್ಲವೆಂದು ಅವರ ಹೇಳಿಕೆ.

ಪಂಜಾಬ ಕಾಂಗ್ರೆಸಿನಲ್ಲಿರುವ ಪಕ್ಷಭೇದಗಳ ಕುರಿತು ಇನ್ನು ಮುಂದಕ್ಕೆ ಯಾವ ಅಭಿಪ್ರಾಯವನ್ನೂ ತಾನು ಹೇಳುವುದಿಲ್ಲವಾಗಿ ಅವರು ಪ್ರತಿಜ್ಞೆ ಮಾಡಿರುವರು. ಕಡೆಗೆ ಅವರು ತಮ್ಮ ಲೇಖನದಲ್ಲಿ ತಾನು ಸಂಪೂರ್ಣ ಕಾಂಗ್ರೆಸಿನಿಂದಲೇ ಹೊರಬಂದಿಲ್ಲವೆಂದೂ ಕಾಂಗ್ರೆಸಿನ ಚಟುವಟಿಕೆಗಳಲ್ಲಿ ಮಾತ್ರ ಭಾಗವಹಿಸುವುದಿಲ್ಲವೆಂದೂ ಹೇಳುತ್ತಾರೆ.

ತಿರುವಾಂಕೂರು ಸಂಸ್ಥಾನ

ತಿರುವಾಂಕೂರು ಸಂಸ್ಥಾನ ಕಾಂಗ್ರೆಸಿನ ಶಿಷ್ಟಮಂಡಳವು ದಿವಾನರನ್ನು ಸಂದರ್ಶಿಸಿತು.

ಸಂಸ್ಥಾನದ ರಾಜಕೀಯ ಕೈದಿಗಳ ವಿಷಯದಲ್ಲಿ ಸಂಸ್ಥಾನವು ಅಂಗೀಕರಿಸಿದ ಪದ್ಧತಿಯ ಕುರಿತು ಚರ್ಚೆ ನಡೆಯಿತು.

ನ್ಯಾಯವಿಧಾಯಕ ಸಭೆಯ ಆಡಳಿತೆಯ ವಿಷಯದಲ್ಲಿ ಜೋಣೆಗಾರಿಕೆಯುಳ್ಳ ಜವಾಬ್ದಾರೀ ಸರಕಾರವನ್ನು ಕೊಡುವ ಸಾಧ್ಯತೆಯ ವಿಷಯದಲ್ಲಿ ಮಾತುಕತೆಯಾಗಿದೆ.

ಇನ್ನೂ ಹಲವು ಚರ್ಚಾಸ್ಪದ ವಿಷಯಗಳಲ್ಲಿ ನಿಷ್ಕರ್ಷೆ ಆಗತಕ್ಕದ್ದಿದೆ.

ಯುವಕರಿಗೆ ಸರೋಜಿನಿ ದೇವಿಯರ ಉಪದೇಶ

ಡೆಕ್ಕಾ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಭಾಷಣ ಮಾಡುತ್ತಾ ಶ್ರೀಮತಿ ಸರೋಜಿನಿ ದೇವಿಯವರು, ದೇಶದ ಯುವಕರು ಗುಣ ನಡತೆಯಲ್ಲಿ ಧೈರ್ಯಶಾಲಿಗಳಾಗಬೇಕೆಂದೂ, ಹಾಗೆ ಮಾಡಿ ದೇಶದ ಗೌರವನ್ನು ಹೆಚ್ಚಿಸಬೇಕೆಂದೂ, ಜಾತೀಯತೆಯ ಸಂಕುಚಿತತೆಯನ್ನು ಬಿಟ್ಟು ಬಿಡಬೇಕೆಂದೂ, ಹೇಳಿದರು. 'ಧೈರ್ಯಶಾಲಿಗಳಾಗಿ, ಎದೆಗಾರರಾಗಿ, ದಾಸ್ಯಬಂಧನವು ಕಡಿದುಹೋಗುವುದು' ಇದು ಅವರ ಆಶ್ವಾಸನೆಯಾಗಿತ್ತು.

ವೈದ್ಯಕೀಯ ಸಂಶೋಧನೆ

ಹಿಂದೂದೇಶದಲ್ಲಿ, ಅದರಲ್ಲಿಯೂ ಉತ್ತರ ಭಾರತದ ಅನೇಕ ಕಡೆಗಳಲ್ಲಿ ಬಹು ಪ್ರಚಾರವಾಗಿರುವ ಸಾಂಕ್ರಾಮಿಕ ರೋಗಗಳನ್ನು ಬಾಡ ಸಹಿತ ಕಿತ್ತೆಗೆಯುವ ಸಲುವಾಗಿ ವೈದ್ಯಕೀಯ ಶೋಧನೆಯು ಭಾರತ ಸರಕಾರದಿಂದ ನಡೆಸಲ್ಪಡುತ್ತಿದೆ.

ಕೊಚ್ಚಿಯಲ್ಲಿ ಕೃಷಿಕರ ಸಾಲನಿವಾರಣಾ ಮಸೂದೆ

ಕೊಚ್ಚಿಯಲ್ಲಿ ಕೃಷಿಕರ ಸಾಲ ನಿವಾರಣಾ ಮಸೂದೆಯು ಎಸೆಂಬ್ಲಿಯ ಮುಂದೆ ತರಲಾಗಿದೆ.

ಸಿಲೆಕ್ಟ್ ಕಮಿಟಿಯ ವರದಿಯು ಒಪ್ಪಲಾಯಿತು.

ಹಿಟ್ಲರನ ರಾಜ್ಯದಲ್ಲಿ ಸ್ತ್ರೀಯರ ಸಂಕಷ್ಟ!

ಐರಿಷ್ ಭವಿಷ್ಯವಾದಿನಿಯ ಹೇಳಿಕೆ

ಪ್ರಿನ್ಸಿಪಾಲರು ವಿದ್ಯಾರ್ಥಿಗಳ ಕ್ಷಮೆ ಬೇಡಿದರು

ಹರಿಜನ ಸಾಧುವಿನ ದೈವಭಕ್ತಿ!

ವಜೀರಸ್ಥಾನದ ಹೆಂಡಂದಿರು

ಪತಿಭಕ್ತಿಯಿಲ್ಲದ ಹೆಂಡಂದಿರಿಗೆ ವಜೀರಸ್ಥಾನದಲ್ಲಿ ಮೂಗು ಕೊಯ್ಯುವ ಶಿಕ್ಷೆಯು ವಿಧಿಸಲ್ಪಡುತ್ತದೆ. ಹೀಗಾಗಿ, ಅಲ್ಲಿ ಅನೇಕಮಂದಿ ಮೂಗಿಲ್ಲದ ಗುರುತಿಯರು ಇರುವರು. ಇದನ್ನು ನಿವಾರಿಸಲು ಅಲ್ಲಿನ ಒಬ್ಬ ವ್ಯಾಪಾರಿಯು ಒಂದು ಒಳ್ಳೆಯ ಉಪಾಯವನ್ನು ಹೂಡಿದ್ದಾನೆ. ಕೃತ್ರಿಮ ಮೂಗುಗಳನ್ನು ತರಿಸಿ, ಮೊದಲಿದ್ದ ಮೂಗಿನಂತಹವುಗಳನ್ನು ಇಟ್ಟಲ್ಲಿ ಕತ್ತರಿಸಿದ ಮೂಗಿನ ವಿಕಾರವು ಇಲ್ಲದಾಗುವುದು. ಇಂತಹ ಮೂಗುಗಳನ್ನು ಆತ ಇಂಗ್ಲೆಂಡಿನಿಂದ ತರುತ್ತಿದ್ದಾನೆ. ಬಹಳ ಹಣವನ್ನು ಸಂಪಾದಿಸಿರುವನು. ಆದರೆ ಈ ಎಲ್ಲಾ ಕೃತ್ರಿಮ ಮೂಗುಗಳೂ ಬಿಳೀ ಬಣ್ಣದವುಗಳಾಗಿರುವ ನಿಮಿತ್ತ ಅಲ್ಲಿನ ಬೂದು ಬಣ್ಣದ ಜನಕ್ಕೆ ಸರಿಯಾಗುವುದಿಲ್ಲವೆಂದು ಅವನ ಚಿಂತೆ. ಬೂದುಬಣ್ಣದ ಮೂಗುಗಳಿಗೇ ಆತ ಈಗ ಆರ್ಡರು ಮಾಡಿರುವನು.

ಮನುಷ್ಯನ ಭಯಂಕರ ವೈರಿಗಳು

ಕಲ್ಕತ್ತೆಯ ವಿಜ್ಞಾನ ಪತ್ರಿಕೆಯೊಂದರಲ್ಲಿ ಬರೆಯುತ್ತಾ ಕರ್ನಲ್ ಆರ್ ಎನ್ ಚೋಪ್ರಾರವರು ಹೀಗೆನ್ನುತ್ತಾರೆ

“ಕ್ರಿಮಿಗಳು ಮನುಷ್ಯನ ಭಯಂಕರ ವೈರಿಗಳು. ಯುದ್ಧ, ಭೂಕಂಪ, ನೆರೆಹಾವಳಿಯೇ ಮೊದಲಾದವುಗಳಿಂದ ಆಗುವ ಸಾವಿರಪಾಲು ಅನರ್ಥಗಳಿಗಿಂತ ಈ ಕ್ರಿಮಿಗಳಿಂದ ಆಗುತ್ತದೆ. ಎಲ್ಲಾ ತರದ ರೋಗಗಳನ್ನು ಪ್ರಕೃತಿಯಲ್ಲಿ ಸೃಷ್ಟಿಸಲು, ಹರಡಲು ಹಾಗೂ ಇಡೀ ಮಾನವ ವಂಶವನ್ನೇ ಪೀಡಿಸಲು ಇವುಗಳೇ ಇದ್ದಂತೆ. ಸಾಮಾನ್ಯ ತರವಾಗಿ ಕ್ರಿಮಿಗಳಿಂದಲೇ ಹಿಂದೂದೇಶದಲ್ಲಿ ಆಗುವ ನಷ್ಟವು ೨,೦೦೦ ರೂಪಾಯಿಗಳಷ್ಟಾಗುವವು. ಒಂದು ಮಿಲಿಯಕ್ಕಿಂತ ಮಿಕ್ಕಿದ ಜನರ ಜೀವನವನ್ನು ಇವುಗಳು ತೆಗೆಯುವವು.

“ಇಂತಹ ಆರ್ಥಿಕ, ಸಾಮಾಜಿಕ ಹಾನಿಕಾರಕ ಜಂತುಗಳನ್ನು ಪರಿಣಾಮಕಾರಿಯಾಗಿ ತಡೆಯುವ ಪ್ರಯೋಗದಿಂದ ಹಿಂದೂದೇಶದ ಏಳಿಗೆಯಲ್ಲಿ ಬಹು ದೊಡ್ಡ ಅಭಿವೃದ್ಧಿಯು ಆದೀತು. ಇವುಗಳನ್ನು ತಡೆಯುವ ಸಾಧನಗಳಾದರೂ ಹಿಂದೂದೇಶದ ಬಡ ಆರ್ಥಿಕ ಸ್ಥಿತಿಗೆ ಸರಿಯಾದದ್ದಿರಬೇಕು.

ಠಾಗೂರರ ಕೈಬರಹದ ಅನುಕರಣೆ

ಕವಿ ರವೀಂದ್ರನಾಥ ಠಾಗೋರರ ಮೇಲೆ ಇರುವ ಅಭಿಮಾನದಿಂದ ಅವರಂತೆಯೇ ಬರೆಯಲು ಯತ್ನಿಸಿದ ಇಬ್ಬರು ವಿದ್ಯಾರ್ಥಿಗಳು ತಮ್ಮ ಬಿ. ಎ., ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾದರೆ ಬಹು ಸಂಕಷ್ಟವಾಯಿತು.

ಇವರಿಬ್ಬರು ಬಂಗಾಳಿ ಭಾಷೆಯ ಉತ್ತರದ ಪೇಪರುಗಳನ್ನು ಒಬ್ಬರೇ ಪರೀಕ್ಷಕರು ತಿದ್ದುವಂತೆ ಆಯಿತು. ಅವರಿಗೆ ಕೂಡಲೇ ಸಂಶಯ ಬಂದು, ವಿದ್ಯಾರ್ಥಿಗಳು ಚೆನ್ನಾಗಿ ಬರೆದಿದ್ದರೂ ಅವರನ್ನು ಪಾಸುಮಾಡದೆ ತನಿಖೆ ನಡೆಯಿತು.

ಅವರಲ್ಲಿ ಒಬ್ಬನು ವಿಶ್ವವಿದ್ಯಾಲಯದ ಅಧಿಕಾರಿಗಳ ಮುಂದೆ ಬಂದು, ಸ್ವತಃ ತನ್ನ ಕೈಬರಹದಿಂದ ಬರೆದು ತೋರಿಸಿದನು. ಇನ್ನೊಬ್ಬನು ತನ್ನ ಪ್ರೊಫೆಸರರ ಮೂಲಕ ಶಾಲೆಯ ಸಾಹಿತ್ಯ ಸಂಘದಲ್ಲಿ ಬರೆದ ಹಲವು ಹಸ್ತಪ್ರತಿಗಳನ್ನು ಹೊತ್ತುತಂದು ಸತ್ಯಾಗ್ರಹ ಹೂಡುವುದಾಗಿ ಹೇಳಿದ.

ಕಡೆಗೆ ತಿಳಿಯಿತು. ಇವರಿಬ್ಬರೂ ಅಕ್ಷರದಲ್ಲಿ ಅನುಸರಿಸಿದ್ದುದರಿಂದ ಇಬ್ಬರ ಬರಹಗಳೂ ಒಂದೇ ರೀತಿಯದ್ದುವೆಂದು. ಕಟ್ಟಕಡೆಗೆ ಅವರು ತಮ್ಮ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿರುವರಾಗಿ, ವಿಶ್ವವಿದ್ಯಾಲಯದ ಅಧಿಕಾರಿಗಳು ಪ್ರಕಟಿಸಿದರು.

ಹಿಟ್ಲರನ ರಾಜ್ಯದಲ್ಲಿರುವ ಮಹಿಳೆಯರು

೧೯೩೩ರ ಕ್ರಾಂತಿಯ ಮೇಲೆ, ಜರ್ಮನಿಯಲ್ಲಿ ಮಹಿಳೆಯರು ತುಂಬಾ ಅಧಿಕಾರ ಮತ್ತು ಸ್ಥಾನಗಳನ್ನು ಪಡೆದಿದ್ದರು. ಆದರೆ ಹಿಟ್ಲರನ ನಾಜೀ ಪಕ್ಷದ ನೇಶನಲ್ ಸೋಶಯಲಿಸ್ಟ್ ಸರಕಾರವು ಬಂದ ಮೇಲೆ, ರೀಶ್‌ಸ್ಟಾಗಿನ, ಪ್ರಾಂತಿಕ ಪಾರ್ಲಿಮೆಂಟುಗಳ ಮತ್ತು ಸ್ಥಳೀಕ ಸಂಸ್ಥೆಗಳ ಎಲ್ಲಾ ಜವಾಬ್ದಾರೀ ಸ್ಥಾನಗಳಿಂದ ಅವರನ್ನು ತೆಗೆದು ಹಾಕಲಾಗಿದೆ. ಆಸ್ಪತ್ರೆ, ಶಾಲೆ ಇವುಗಳಿಂದಲೂ ಅವರನ್ನು ತೆಗೆದುಹಾಕವ ಹಾಗೆ ಮಾಡಿದೆ. ೩೫ ವರ್ಷ ಪ್ರಾಯದ ಕೆಳಗಿನ ಎಲ್ಲಾ ಹೆಂಗುಸರೂ ಸರಕಾರದ ಜವಾಬ್ದಾರೀ ಅಧಿಕಾರದಲ್ಲಿರಲು ಅಯೋಗ್ಯರೆಂದು ಕಾನೂನಾಗಿದೆ, ಮತ್ತು ಉದ್ಯೋಗದಲ್ಲಿರುವ ಗಂಡಂದಿರನ್ನು ಮದುವೆಯಾದರೆ, ಅನಾರ್ಯ ಜಾತಿಯವರನ್ನು ಮದುವೆಯಾದರೂ ಅವರಿಗೆ ಅಲ್ಲಿ ಕೆಲಸವಿಲ್ಲ.

೧೯೩೩ನೇ ಜೂನ್ ೩೦ರಂದು ಪಾಸಾದ ಕಾನೂನಿನಂತೆ ಎಲ್ಲ ಮದುವೆಯಾದ ಹೆಂಗುಸರೂ ಅವರ ಕೆಲಸಗಳಿಂದ ತೆಗೆದುಹಾಕಲ್ಪಟ್ಟರು. ಬಹಳ ಉತ್ತಮವಾದ ಗೌರವದ ಅಧಿಕಾರದಲ್ಲಿರುವ ಸಾವಿರಾರು ಮಂದಿ ಹೆಂಗುಸರನ್ನು ಜರ್ಮನ್ ಸರಕಾರವು ಪದಚ್ಯುತರನ್ನಾಗಿ ಮಾಡಿದೆ.

ಹೀಗಿದೆ ಹಿಟ್ಲರ್ ಭಂಟರ ಅಧಿಕಾರ! ಬ್ರಹ್ಮಚಾರೀ ಹಿಟ್ಲರನಿಗೆ ಹೆಣ್ಣು ಜಾತಿಯ ಮೇಲೆಯೇ ಇಷ್ಟು ಭಯಂಕರ ಕೋಪವೇ?

ಪ್ರಿನ್ಸಿಪಾಲರು ವಿದ್ಯಾರ್ಥಿಗಳಲ್ಲಿ ಕ್ಷಮೆ ಬೇಡಿದರು

ಸಿಂಧದ ಕಾಲೇಜಿನಲ್ಲಿ ಆದ ಗಲಭೆಯಿಂದ ವಿದ್ಯಾರ್ಥಿಗಳನ್ನು ಪೋಲೀಸರು ಬಂಧಿಸಬೇಕಾಯಿತು. ಆ ಎಲ್ಲ ಕಾಲೇಜಿನ ಪ್ರಿನ್ಸಿಪಾಲರು ಅಂತಹ ಪರಿಸ್ಥಿತಿಗೂ ಮಾತ್ರವಲ್ಲದೆ ಪೋಲೀಸರಿಂದ ವಿದ್ಯಾರ್ಥಿಗಳನ್ನು ಸೆರೆಹಿಡಿಸುವಂತಹ ಎಲ್ಲಾ ಕಾರ್ಯಗಳಿಗೂ ತಾನೇ ಜವಾಬ್ದಾರನೆಂದೂ, ಅದಕ್ಕಾಗಿ ಕಾಲೇಜಿನ ಪ್ರತಿಯೊಬ್ಬ ವಿದ್ಯಾರ್ಥಿಯೊಡನೆಯೂ ತಾನು ಕ್ಷಮಾಪಣೆ ಕೇಳಿಕೊಳ್ಳುವುದಾಗಿಯೂ, ಆಗಸ್ಟ್ ೭ರಂದು ತೆರೆಯಲಾಗುವ ಕಾಲೇಜಿಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಬಂದು ತನ್ನ ಸಸ್ನೇಹವನ್ನು ಸ್ವೀಕರಿಸಬೇಕೆಂದೂ, ಯಾರಾದರೂ ವ್ಯಕ್ತಿಶಃ ಮನನೊಂದಿದಲ್ಲಿ ಅಂತವರು ಸ್ವತಃ ತನ್ನಲ್ಲಿಗೆ ಬಂದು ವ್ಯಕ್ತಿಶಃ ನನ್ನಿಂದ ಕ್ಷಮಾಪಣೆಯನ್ನು ಪಡೆದುಕೊಳ್ಳಬೇಕಾಗಿಯೂ ಪ್ರಕಟಿಸಿರುತ್ತಾರೆ.

ಶಾಂತಿ ಸಾಧನೆಗಾಗಿ ಹಿಟ್ಲರನು ಬ್ರಿಟನಿಗೆ ಬರುವನು!

ಐರಿಷ್ ಭವಿಷ್ಯವಾದಿನಿಯ ಹೇಳಿಕೆ

ಲಂಡನಿನಲ್ಲಿ ವಾಸಮಾಡಿರುವ ಒಬ್ಬ ಐರಿಷ್ ಭವಿಷ್ಯವಾದಿನಿಯು ಹಿಟ್ಲರನು ಶಾಂತಿ ಸಾಧನೆಯ ಕಾರ್ಯಕ್ಕಾಗಿ ಬ್ರಿಟನಿಗೆ ಬೇಗನೇ ಬರಲಿರುವನೆಂದು ಹೇಳುತ್ತಾಳೆ.

ಆಕೆ ಸುಪ್ರಸಿದ್ಧನಾಗಿದ್ದ ಐರಿಷ್ ಸಿವಿಲ್ ಕೆಲಸಗಾರನೊಬ್ಬನ ವಿಧವೆ ಹೆಂಗುಸು! ಹೆಸರು ಬ್ರಿಡ್‌ಗೆಟ್ ಡ್ರಿಸ್ಕೋಲ್ ಎಂದು. ‘ನಾನು ಲಾರ್ಡ್ ಹೆಲಿಫಾಕ್ಸರೊಡನೆ ಹಿಟ್ಲರನು ವೈಟ್ ಹಾಲನ್ನು ಪ್ರವೇಶಿಸಿದ್ದನ್ನು ಕನಸಿನಲ್ಲಿ ಕಂಡೆನು’ ಎಂದು ಹೇಳುತ್ತಾಳೆ.

ಈಗಾಗಲೇ ಹೀಗಿದ್ದ ದಿವ್ಯ ಸ್ವಪ್ನಗಳ ಭವಿಷ್ಯಗಳನ್ನು ಹೇಳುತ್ತಾ ಆಕೆ ಬ್ರಿಟನನ್ನು ಆಶ್ಚರ್ಯಚಕಿತಳಾಗಿ, ಮಾಡಿದ್ದಾಳೆ!

ಆಕೆಗೆ ‘ಬಾನ್ಶೀ’ ಎಂಬ ಐರಿಷ್ ದೇವತೆಯು ಹೀಗೆ ಸಹಾಯ ಮಾಡುವುದಂತೆ.

೧೯೨೨ರಲ್ಲಿ ಒಂದು ದಿನ ಪ್ರಾತಃಕಾಲ ಹಾಸಿಗೆಯಿಂದ ಎದ್ದಾಗ, ಈ ಘಟನೆ ನಡೆಯಿತು. ರಾತ್ರಿಯಲ್ಲಿ ಆ ದೇವತೆಯು ದರ್ಶನವಾಗಿ ಆದು ಅವಳ ಕಣ್ಣಮುಂದೆ ಐರಿಷ್ ಒಪ್ಪಂದದ ನಿಜವಾದ ಘಟನೆಗಳನ್ನು ಕಂಡು ಅದನ್ನು ಗೆಳೆಯರೊಡನೆ ತಿಳಿಸಿದಳು.

ಆದರೆ ಆಗ ಐರ್ಲೆಂಡು ಬ್ರಿಟನಿನೊಡನೆ ಸಂಧಿ ಮಾಡಿಕೊಳ್ಳುವ ವಿಷಯ ಸ್ವಲ್ಪವಾದರೂ ಸೂಚನೆಯಿರಲಿಲ್ಲ.

ರಾಜ ದಂಪತಿಗಳು ಅಮೇರಿಕಕ್ಕೆ ಹೋಗುವ ಎರಡು ತಿಂಗಳ ಹಿಂದೆಯೇ, ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರೊಡನೆ ಅವರು ಹಸ್ತಲಾಘವನ್ನು ಕೊಡುವ ದೃಶ್ಯವನ್ನು ಕಂಡಿದ್ದಳು.

ಹರಿಜನ ಸಾಧುವಿನ ದೈವಭಕ್ತಿ

‘ಪರಶಕ್ತಿ’ ಪತ್ರಿಕೆಯಲ್ಲಿ ಶ್ರೀ ಆರ್. ವಿ. ಸನ್ಯಾಸಿಯೆಂಬವರು ಶ್ರೀರಂಗಂದಲ್ಲಿ ನಡೆದ ಹರಿಜನ ಸಾಧುವಿನ ದೃಷ್ಟಾಂತದ ವಿಷಯವಾಗಿ ಹೀಗೆಂದು ಬರೆಯುತ್ತಾರೆ:—

‘ತಿರುಪಾನನ್ ಎಂಬವನು ಶ್ರೀ ರಂಗನಾಥ ದೇವರ ಅಚಲ ಭಕ್ತನಾಗಿದ್ದ. ಇತರ ಉನ್ನತ ಜಾತಿಯು ಯಾವನಾದರೂ ಏಳುವುದಕ್ಕಿಂತ ಮೊದಲೇ ಕಾವೇರೀ ನದಿಯಲ್ಲಿ ದಿನನಿತ್ಯ ಪ್ರಾತಃಕಾಲ ಸ್ನಾನ ಮಾಡುತ್ತಿದ್ದ. ತಿರುಪಾನನು ಧ್ಯಾನಮಗ್ನನಾಗಿರುವಾಗ ಒಬ್ಬ ಲೋಕಸಾರಂಗ ಮಹಾಮುನಿಯೆಂಬ ಬ್ರಾಹ್ಮಣನು ಸ್ನಾನಕ್ಕೆ ಬಂದಿಳಿದ. ಆ ಬ್ರಾಹ್ಮಣನು ಪಂಚಮನ ಕಡೆಗೆ ಕಲ್ಲೆಸೆದ. ಅದು ತಿರುಪಾನನ ತಲೆಗೆ ತಗುಲಿತು. ಬ್ರಾಹ್ಮಣನಿಗೆ ತನ್ನ ತಪ್ಪು ತಿಳಿಯಿತು, ಆದರೆ ಏನುಮಾಡಲಿ ಎಂಬುದು ತಿಳಿಯಲಿಲ್ಲ.

‘ದೇವಾಲಯದ ಅಧಿಕಾರಿಗಳ ಮೂಲಕ ದೇವರು ದರ್ಶನ ಬಂದು ಆ ಬ್ರಾಹ್ಮಣನೊಡನೆ, ಭಕ್ತ ಹೊಲೆಯನನ್ನು ತನ್ನಲ್ಲಿಗೆ ಕರೆತರಲು ಆಜ್ಞಾಪಿಸಿದರು. ಬ್ರಾಹ್ಮಣನು ತಿರುಪಾನನಿಗೆ ಇದನ್ನು ಹೇಳಲು, ಆತನು ಅಂಜಿಕೆಯಿಂದ ತಿರಸ್ಕರಿಸಿದ. ಕಡೆಗೆ ದರ್ಶನ ಬಂದ ದೇವರು ಆ ಹೊಲೆಯನನ್ನು ಹೊತ್ತುಕೊಂಡು ತನ್ನ ಬಳಿಗೆ ಬರುವಂತೆ ಆಜ್ಞಾಪಿಸಿದನು. ಬ್ರಾಹ್ಮಣನು ಹಾಗೆಯೇ ಮಾಡಬೇಕಾಯಿತು. ದೊಡ್ಡ ನಗರದ ಬೀದಿಯಲ್ಲಿ ಈ ಮೆರವಣಿಗೆಯು ಆಯಿತು.

‘ತಿರುಪಾನನು ಅಲ್ಲಿಗೆ ಒಂದಾಗ, ಪಾದದಿಂದ ಶಿರಸ್ಸಿನ ತನಕ ದೇವರನ್ನು ದರ್ಶನ ಮಾಡಿದವನಂತೆ ಆನಂದದಿಂದ ಕೂಡಿದನ. ‘ಅಮಲ ನಂದಿ ಪಿರಾನ್’ ಎಂಬ ಅಮರ ಕಾವ್ಯವೊಂದು ಅಲ್ಲಿ ದೇವರ ಸ್ತುತಿರೂಪವಾಗಿ ಆತನಿಂದ ಹಾಡಲ್ಪಟ್ಟಿತ. ಕಡೆಗೆ ಆತನು ಅಲ್ಲಿಯೇ ದೇವರಲ್ಲಿ ಐಕ್ಯನಾಗಿ ಮಾಯವಾದನು.’’

ಉದಯಶಂಕರರ ನರ್ತನ ವೈಭವ

ಸಂಯುಕ್ತ ಪ್ರಾಂತದ ಗವರ್ನರ ಮತ್ತು ಅವರ ಪತ್ನಿಯವರ ಸಂದರ್ಶನದ ಸಲುವಾಗಿ ಭಾರತದ ಸುಪ್ರಸಿದ್ಧ ನರ್ತನ ಕುಶಲಿಗರಾದ ಉದಯಶಂಕರರು ತನ್ನ ಸ್ಟುಡಿಯೋದಲ್ಲಿ ವಿಶಿಷ್ಟವಾದ ಹಲವು ನರ್ತನಗಳನ್ನು ಪ್ರದರ್ಶಿಸಿದರು.

ಕೇವಲ ಒಂಭತ್ತು ಐಟಂಗಳನ್ನು ತೋರಿಸುವ ಸಂಕೋಚವಾದ ಕಾರ್ಯಕ್ರಮವಿತ್ತು. “ಹಾವಾಡಿಗ” ಮತ್ತು “ಅಥವ ತತ್ತ್ವ ಕಾರ್ತಿಕೇಯ” ಎಂಬ ನರ್ತನವು ಸ್ವತಃ ಉದಯಶಂಕರರೇ ನಟಿಸಿ ತೋರಿಸಿದರು. ಕೇರಳದ ಸುಪ್ರಸಿದ್ಧ ‘ಕಥಕ್ಕಳಿ’ ನರ್ತನಪಟುಗಳಾದ ಗುರುಶಂಕರನ್ ನಂಬೂದರಿಯವರು, ಭೀಮಪ್ರಭಾವಂ ಎಂಬ ನರ್ತನ ಮಾಡಿದರು. ಅದರಲ್ಲಿ, ಯುದ್ಧರಂಗದಲ್ಲಿ ಭೀಮನು ದುಶ್ಯಾಸನನೊಡನೆ ಯುದ್ಧಮಾಡಿ ಪ್ರತೀಕಾರಪಡುವ ರುದ್ರತೆಯು ತೋರಿಸಲ್ಪಟ್ಟಿತು. ‘ಕಥಕ್ಕಳಿಯ’ ಜ್ಞಾನವಿಲ್ಲದವರಾಗಿದ್ದರೂ, ಪ್ರೇಕ್ಷಕರು ಆ ನಟನೆಯಲ್ಲಿರುವ ‘ರುದ್ರರಸ’ದಿಂದ ಸ್ತಂಭೀಭೂತರಾದರು. ಸಿಮ್ಕಿಯು ಮಾಡಿದ ನರ್ತನವೂ ಬಹುಪ್ರಶಂಸಾರ್ಹವಾಗಿತ್ತು. ಇದೇ ಸಂಗಡದವರಿಂದಲೇ ಪ್ರದರ್ಶಿತವಾದ ಬಲ್ ನರ್ತನವು ಬಹಳವಾಗಿ ಮನೋರಂಜಕವಾಗಿತ್ತು. ಉದಯಶಂಕರರು ಹೊಸತಾಗಿ ‘ಮೃದಂಗ ಸೃಷ್ಟಿ’ಯೆಂಬ ಹೊಸ ನರ್ತನವನ್ನು ಅಭ್ಯಾಸಮಾಡುತಿದ್ದಾರೆ. ೧೯೩೯ನೇ ಅಕ್ಟೋಬರದಲ್ಲಿ ಅಖಿಲಭಾರತ ಸಂಚಾರ ಕೈಕೊಳ್ಳಲಿರುವರು.

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು
ಮನೆಗೆಲ್ಲಾ ಬೆಳಕು, ಬೆಳದಿಂಗಳು.
ಆದ್ದರಿಂದಲೇ ಸ್ತ್ರೀಯರ ಆರೋಗ್ಯವು
ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತು ಸಂಬಂಧವಾದ
ದೋಷಗಳಿಂದ ಶರೀರವು ಕೃಶಿಸಿ
ಸಂತಾನ ವಾಂಛೆಯು ಸಫಲತೆ
ಹೊಂದದು. ಆದರೆ ಲೋಧ್ರವನ್ನು
ಸೇವಿಸಿದರೆ ಸ್ತ್ರೀಯರಿಗೆ ಸತ್ಸಂ
ತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟಾಕಿಸ್ಟರು: ಪೊಪ್ಯುಲರ್ ಸ್ಟೋರ್ಸ್ ರಥಬೀದಿ, ಮಂಗಳೂರು.

ಬೊಂಬಾಯಿಯಲ್ಲಿ ಗುಂಡು ಹಾರಿಸಿದರು!

ಸುಭಾಷ ಬೋಸರ ತಮಿಳುನಾಡು ಪ್ರವಾಸ
ಡಾ. ಸತ್ಯಪಾಲರ ರಾಜಕೀಯ ವಿಶ್ರಾಂತಿ
ಕಾಂಗ್ರೆಸು ಧುರೀಣರೊಬ್ಬರ ನಿಧನ!

ಗುಜರನ್‌ವಾಲಾದಲ್ಲಿ ೬೫ ಮಂದಿಯ ಬಂಧನ

ಸಿಕ್ಖರು ಮತ್ತು ಹಿಂದುಗಳಿಗೆ ಗುಜರನ್‌ವಾಲಾದ ಒಂದು ದೇವಾಲಯವನ್ನು ಕಟ್ಟುವ ವಿಷಯದಲ್ಲಿ ಆದ ಗಲಾಟೆಯ ನಿಮಿತ್ತವಾಗಿ ಗಲಭೆನೇ ಸೆಕ್ಷನು ಜಾರಿಯಾಗಿದೆ. ಆ ಪ್ರಕರಣದಿಂದ ೬೫ ಮಂದಿಯನ್ನು ಸೆರೆ ಹಿಡಿದಿರುವರು.

ಅವರಲ್ಲಿ ಅಪರಾಧಿತರಾದ ಹಿಂದೂಗಳು ಜಾಮೀನಾದ ಕೊಟ್ಟು ಬಿಡುಗಡೆಯಾಗಿದ್ದಾರೆ. ಆದರೆ ಸಿಕ್ಖರು ಬಿಡುಗಡೆಹೊಂದಲು ತಿರಸ್ಕರಿಸಿದರು.

ಅಸ್ಸಾಮದ ಕಾಂಗ್ರೆಸು ಧುರೀಣರೊಬ್ಬರ ನಿಧನ

ಸೆಂಟ್ರಲ್ ಎಸೆಂಬ್ಲಿಯ ಸದಸ್ಯರೂ ಅಸ್ಸಾಮಿನ ಪ್ರಸಿದ್ಧ ಕಾಂಗ್ರೆಸು ಮುಖಂಡರೂ ಆಗಿದ್ದ ಬ್ಯಾರಿಸ್ಟರ್ ಶ್ರೀ ಟಿ. ಆರ್. ಫೂಕಾನರವರು ಕಳೆದ ತಿಂಗಳ ತಾ. ೨೭ರಂದು ನಿಧನ ಹೊಂದಿದರು.

ಇವರು ನಿಧನವಾರ್ತೆಯನ್ನು ಕೇಳಿ ಅಸ್ಸಾಮದ ಪ್ರಧಾನ ಮಂತ್ರಿಗಳು "ಇಂದು ಅಸ್ಸಾಮವು ಸ್ವಾತಂತ್ರ್ಯದ ಮಹಾ ಯೋಧನನ್ನು ಕಳಕೊಂಡು ಅಪಾರ ನಷ್ಟ ಹೊಂದಿತು" ಎಂದು ಹೇಳಿದರು.

ಕಳೆದ ೨೫ ವರ್ಷಗಳ ಅಸ್ಸಾಮಿನ ರಾಜಕೀಯ ಕ್ಷೇತ್ರದಲ್ಲಿ ಇವರು ಬಹಳ ಪ್ರಖ್ಯಾತಿಗೆ ಬಂದಿರುವರು. ಇವರು ಮೊದಲಾಗಿ ಅಸಹಕಾರ ಚಳವಳಿಯನ್ನು ಅಲ್ಲಿ ಆರಂಭಿಸಿದರು. ೧೯೨೬ರಂದು ಗೌಹಾತಿಯಲ್ಲಿ ಸೇರಿದ ಅಖಿಲಭಾರತ ರಾಷ್ಟ್ರ ಸಭೆಯ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಹೊಸ ರಾಜ್ಯಘಟನೆಯು ಬಂದಾಗ ಅಸ್ಸಾಮಿನಲ್ಲಿ ಸಂಯುಕ್ತ ಪ್ರಜಾಪಕ್ಷವೆಂಬೊಂದು ಪಕ್ಷವನ್ನು ಇವರು ಸ್ಥಾಪಿಸಿದರು. ಇತ್ತೀಚೆಗೆ ಪ್ರತ್ಯಕ್ಷ ರಾಜಕೀಯದಿಂದ ವಿಶ್ರಾಂತಿ ಪಡೆಯಬೇಕೆಂದು ಅವರು ನಿಶ್ಚಯಿಸಿದ್ದರು. ಆದರೆ ಅವರಿಗೆ ೬೦ ಯದಂತೆಯೇ ದೇವರು ಚಿರವಿಶ್ರಾಂತಿಯನ್ನು ದಯಪಾಲಿಸಿದರು.

ಅಖಿಲಭಾರತ ಕಾಂಗ್ರೆಸು ಸಭೆಯು ಪಾಟ್ನಾದಲ್ಲಿ

ವಾರ್ಧಾದಲ್ಲಿ ಅಖಿಲ ಭಾರತ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯ ಸಭೆಸೇರಿದ ಬಳಿಕ, ಕೂಡಲೇ ಪಾಟ್ನಾದಲ್ಲಿ ಜುಲಾಯಿ ೯ರಂದು ನಿಷೇಧ ಸಭೆ ಮಾಡಿದವರ ಕುರಿತು, ಶಿಸ್ತು ಜಾರಿಯನ್ನು ಮಾಡುವ ಸಲುವಾಗಿ ಸಭೆಯೊಂದು ಜರಗಲಿರುವುದು.

ಯುನೈಟೆಡ್ ಪ್ರೆಸ್ಸಿನ ವಾರ್ತೆಯಂತೆ ಕಾಂಗ್ರೆಸಿನ ತೀರ್ಮಾನಕ್ಕೆ ವಿರೋಧಿಸಿದವರ ಕುರಿತು, ಕಾಂಗ್ರೆಸು ಅಧಿನಾಯಕರು ಬಹಳ ಕಠೋರರಾಗಿರುವರೆಂದು ತಿಳಿಯುತ್ತದೆ. ಅಖಿಲಭಾರತ ಕಾಂಗ್ರೆಸು ವರ್ಕಿಂಗ್ ಕಮಿಟಿಯವರು ಮುಂದಿನ ಸಭೆಯ ಅಂಗೀಕಾರಕ್ಕಾಗಿ ನಿರ್ಣಯಗಳನ್ನು ಮಾಡುವುದು.

ಶ್ರೀ ಸುಭಾಸಬೋಸರ ತಮಿಳುನಾಡಿನ ಪ್ರವಾಸ

ಶ್ರೀ. ಸುಭಾಸಬೋಸರು ಹದಿನೈದು ದಿನಗಳ ತನಕ ತಮಿಳು ನಾಡಿನ ಸಂಚಾರಕ್ಕೆ ಬರಬೇಕೆಂದು ಕಾರ್ಯಕ್ರಮವು ನಿರ್ಣಯವಾಗಿದೆ. ಅಣ್ಣಾಮಲೆ ಯುನಿವರ್ಸಿಟಿಯ ವೈಸ್ ಚಾನ್ಸಲರಾದ ರೈಟ್ ಆನರೇಬಲ್ ಶ್ರೀನಿವಾಸ ಶಾಸ್ತ್ರಿಗಳು ಸುಭಾಸರನ್ನು ಅತಿಥಿಗಳಾಗಿ ಆಮಂತ್ರಿಸಿರುವರು. ಅದಲ್ಲದೆ ಮಧುರೆ ಪಂಚಾಯತಿಯಲ್ಲಿ ಅವರು ಅಧ್ಯಕ್ಷತೆವಹಿಸುವರು. ಅಣ್ಣಾಮಲೆ ಯುನಿವರ್ಸಿಟಿಯ ವಿದ್ಯಾರ್ಥಿಗಳಿಗೂ ಅವರು ಭಾಷಣ ಮಾಡಲಿರುವರು.

ಬೊಂಬಯಿಯಲ್ಲಿ ಗುಂಡು ಹಾರಿಸಿದರು

ಮುಸ್ಲಿಂಲೀಗಿನವರು ಬೊಂಬಯಿ ಸರಕಾರದವರು ಪ್ರಯೋಗಿಸಿದ ಶಾಂತರಕ್ಷಕರ ಸೂತ್ರದ ಮೇರೆಗೆಯ ವಿಷಯದಲ್ಲಿ ನಿಷೇಧ ಪ್ರದರ್ಶನ ಮಾಡಿದರು. ಕರಿ ನಿಶಾನೆಯನ್ನು ಹಿಡಿದು ಸಾವಿರಾರು ಮಂದಿ ಮುಸ್ಲಿಮರು ಮೆರವಣಿಗೆ ಹೊರಟರು.

ಮೆರವಣಿಗೆಯು ಮುಂದುವರಿದು ಸಭಾ ಸ್ಥಳವನ್ನು ಮುಟ್ಟುವಷ್ಟರಲ್ಲಿ ಗುಂಪಿನ ಒಂದು ಕಡೆಯಿಂದ ಕಲ್ಲೆಸೆಯುವುದು ಸುರುವಾಯಿತು. ಹಿಂದೂ ಮುಸ್ಲಿಮರೊಳಗೆ ಜಗಳ ಸುರುವಾಯಿತು. ಕೆಲವು ಅಧಿಕಾರಿಗಳು ಮತ್ತು ಪೋಲೀಸರಿಗೂ ಗಾಯಗಳಾದುವು. ಪೋಲೀಸರು ಲಾಠೀ ಚಾರ್ಜು ಮಾಡಿದರು. ಕಲ್ಲೆಸೆವುದು ನಡೆಯುತ್ತಾ ಇತ್ತು. ಕಡೆಗೆ ಪೋಲೀಸರು ಈ ಗಲಭೆಯನ್ನು ನಿಲ್ಲಿಸಲು ಗುಂಡು ಹೊಡೆಯಬೇಕಾಯಿತು.

ರಾಷ್ಟ್ರೀಯ ಯೋಜನಾ ಸಮಿತಿಯ ಸಭೆ

ರಾಷ್ಟ್ರೀಯ ಯೋಜನಾ ಸಮಿತಿಯ ಬೇರೆ ಬೇರೆ ಕಮಿಟಿಗಳ ಸಭೆಯೊಂದು ಆಗಸ್ಟು ತಿಂಗಳ ತಾ. ೧೩ರಂದು ಅಲ್ಲಹಾಬಾದಿನಲ್ಲಿ ಸೇರಲಿರುವುದು. ಜವಾಹಿರಲಾಲ ನೆಹರುಗಳು ಅಧ್ಯಕ್ಷತೆ ವಹಿಸುವರು.

ರಾಜಕೀಯ ಕೈದಿಗಳ ಉಪವಾಸವು ನ್ಯಾಯವಲ್ಲ!
ಗಾಂಧಿಜಿಯವರ ಎಚ್ಚರಿಕೆ

ರಾಜಕೀಯ ಕೈದಿಗಳು ಮಹಾತ್ಮಾಜಿಯವರಿಗೆ ಕೆಲವು ಪ್ರಶ್ನೆಗಳನ್ನು ಮಹಾದೇವ ದೇಸಾಯಿಗಳ ಮುಖಾಂತರ ಕಳುಹಿಸಿದ್ದಾರೆ. ಅವುಗಳ ಕುರಿತು ಗಾಂಧಿಜಿಯವರು ಹೀಗೆನ್ನುತ್ತಾರೆ.

ಅವರ ಬಿಡುಗಡೆಯ ಕುರಿತು ಇಂತಹದೇ ಅವಧಿಯನ್ನು ಹೇಳಲಾರೆ. ನನಗೆ ಆ ಅಧಿಕಾರವಿದ್ದರೆ ಖಂಡಿತ ನಾನು ಹಾಗೆಮಾಡುತ್ತಿದ್ದೆ. ನನಗಿರುವ ಅಧಿಕಾರವೆಂದರೆ, ನನ್ನ ಸಾಧ್ಯವಾದ ಶಕ್ತಿಯಿಂದ ಅವರ ಪರವಾಗಿ ವಾದಿಸುವುದು. ಆದರೆ ಅವರು ಉಪವಾಸವನ್ನು ಮುಂದುವರಿಸುವುದರಿಂದ ನನಗೆ ಅಂತಹ ಸಂದರ್ಭವನ್ನೇ ಕೊಡುವುದಿಲ್ಲ. ಸಾರ್ವಜನಿಕರ ಅಭಿಪ್ರಾಯವನ್ನು ಕೆರಳಿಸುವ ಉದ್ದೇಶದಿಂದ ಆರಂಭಿಸಿದ ಉಪವಾಸವು ಆ ಕಾರ್ಯವನ್ನು ಮಾಡಿದೆ. ಆದರೆ ಇನ್ನು ಮುಂದುವರಿಸುವುದು ಬೇಡ; ಈಗ ಅವರು ಉಪವಾಸ ಬಿಟ್ಟುಕೊಟ್ಟಲ್ಲಿ ಅದಕ್ಕಾಗಿ ಕೆಲವರು ಯತ್ನವನಾಡುವವರಿದ್ದಾರೆ. ಈ ಉಪವಾಸವು ನ್ಯಾಯವಲ್ಲವೆಂದು ನಾನು ತಿಳಿಯುತ್ತೇನೆ. ಇಂತಹ ಪರಿಸ್ಥಿತಿಯಲ್ಲಿರುವ ಜನರಿಗೆ ಇವರು ಒಂದು ಅಧಮ ಆದರ್ಶವನ್ನು ತೋರಿಸಿದಂತಾಗುತ್ತದೆ. ಇಂತಹ ಉಪವಾಸವು ಸರ್ವತ್ರ ಹರಡಿದರೆ ಯಾವುದೇ ಸರಕಾರವನ್ನಾದರೂ ನಿಯಮಿತಯಿಂದ ನಡೆಯಬಿಡಲಿಕ್ಕಿಲ್ಲ.

ಕೈದಿಗಳ ಕಾರಣವು ಸಂಪೂರ್ಣ ನ್ಯಾಯವಾದದ್ದು. ಆದರೆ ಅದನ್ನೆ ಎತ್ತಿ ಹೇಳುವುದರಿಂದ ತಮ್ಮ ಕಾರಣವನ್ನು ಅವರು ದುರ್ಬಲಗೊಳಿಸುತ್ತಾರೆ. ನಾವು ಅವರಿಗೆ, ಉಪವಾಸದ ವಿಷಯದಲ್ಲಿ ಅನುಭವವುಳ್ಳವನ, ಸೆರೆಮನೆಯಲ್ಲಿದ್ದ ಅನುಭವವುಳ್ಳವನ ಮಾತನ್ನು ಕೇಳಿರೆಂದು ಬಿನ್ನವಿಸುತ್ತೇನೆ. ಅವರ ಪರವಾಗಿ ವಾದಿಸುವವನನ್ನು ಹೀಗೆ ಅವರು ಸಂಕಷ್ಟಗೊಳಿಸದಿರಲಿ. ಉಪವಾಸವನ್ನು ಬಿಟ್ಟು ವರ್ಕಿಂಗ್ ಕಮಿಟಿಗೆ ಅವರು ಒಂದು ವಿಚಾರವಾಡಲು ಅವಸ್ರದ ಕೊಡಲಿ.

ಕಲ್ಕತ್ತದಲ್ಲಿ ನೆರೆಹಾವಳಿ

ಕಳೆದ ವಾರ ಕಲ್ಕತ್ತದಲ್ಲಿ ಭಯಂಕರವಾಗಿ ಮಳೆಯು ಸುರಿದು, ಹಲವು ಕಡೆಗಳಲ್ಲಿ ನೆರೆ ಹಾವಳಿಯು ಆಗಿದೆ. ವಾಹನಗಳೂ, ಅತ್ತಿತ್ತ ಚಲಿಸಲಾರದಷ್ಟು ಮಾರ್ಗಗಳ ಮೇಲೆ ನೀರು ಹರಿದು ಹೋಗುತ್ತಿತ್ತು. ಎಷ್ಟೋ ಕಾರ್ಯಕ್ರಮಗಳು ಮಳೆಯ ದೆಸೆಯಿಂದ ಮುಂದುವರಿಸಲ್ಪಟ್ಟವು. ಬಿರುಗಾಳಿ ಸುಂಟರ ಗಾಳಿಗಳೂ ಅಲ್ಲಲ್ಲಿ ಸುರುವಾಗಿದ್ದವು. ನೆರೆಯ ದೆಸೆಯಿಂದ ಡಕ್ಕಾ ಮೈಲು ಗಾಡಿಯು ಹೊರಡಿರಲಿಲ್ಲ.

ಆಂಧ್ರ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ

ಆಂಧ್ರ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ ಭಾಷಣವನ್ನು ಕಲ್ಕತ್ತೆದ ಸರ್ ನೀಲರತ್ನ ಸರ್ಕಾರರವರು ಮಾಡುವರಾಗಿ ಒಪ್ಪಿರುವುದು. ಇದು ಬರುವ ಅಕ್ಟೋಬರ ೨ರಂದು ಜರಗುವುದು.

ಆಂಧ್ರ ರಾಜಕೀಯ ಪರಿಷತ್ತು

೧೧ನೇ ಆಂಧ್ರಪ್ರಾಂತಿಕ ರಾಜಕೀಯ ಪರಿಷತ್ತಿನ ಕಾರ್ಯಕಾರೀ ಸದಸ್ಯರ ಚುನಾವಣೆಯ ಸಲುವಾಗಿ ಆಗಸ್ಟ ೭ರಂದು ಮಧ್ಯಾಹ್ನ ಸಭೆ ಸೇರಲಿರುವರು.

ಸರ್ ಸಿ. ವಿ. ರಾಮನರಿಗೆ ಅಧ್ಯಕ್ಷತನ

ಆಂಧ್ರ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಅಧ್ಯಕ್ಷರಾಗಿ ಸರ್ ಸಿ. ವಿ. ರಾಮನರನ್ನು ಚುನಾಯಿಸಲಾಗಿದೆ. ವಿಶಾಖಪಟ್ಟ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಮೇಜರ್ ಜೆ. ಎಫ್. ಶಿಪರ್ಡ್‌ರನ್ನು ವೈದ್ಯಕೀಯ ವಿಭಾಗದ ಅಧ್ಯಕ್ಷರಾಗಿ ಚುನಾಯಿಸಲಾಗಿದೆ.

ಬೆಂಗಳೂರಲ್ಲಿ ಪಂಡಿತ ಕುಂಜ್ರೂರವರು

ಇಂಡಿಯನ್ ಸಾಂಡ್ರನ್ಸ ಕಮಿಟಿಯ ಸದಸ್ಯರಾದ ಪಂಡಿತ ಹೃದಯನಾಥ ಕುಂಜ್ರೂರವರು ಮೈಸೂರು ಸಂಸ್ಥಾನದ ಕೆಲವು ಕಾಂಗ್ರೆಸು ಮುಖಂಡರನ್ನು ಬೆಂಗಳೂರಲ್ಲಿ ಸಂದರ್ಶಿಸಿ ಅತ್ತಿತರಾಜ್ಯದ ಆಂದೋಲನದ ಕುರಿತು ಸಂಭಾಷಣೆ ನಡೆಸಿದರು. ಶ್ರೀಗಳಾದ ಎನ್. ಸಿ. ತಿಮ್ಮರೆಡ್ಡಿ, ಕೆ. ವಿ. ರಾಮ್, ಸೀತಾರಾಮಶಾಸ್ತ್ರಿ ಮೊದಲಾದವರು ಬಂದಿದ್ದರು. ಮೈಸೂರು ಕಾಂಗ್ರೆಸು ಚಳವಳದ ಕುರಿತು ಮಾತುಕತೆಯಾಯಿತು. ಅವರು ಮೈಸೂರು ರಾಜ್ಯದ ಆಡಳಿತೆಯು ಪ್ರಾಗತಿಕವಾಗಿದೆ ಎಂಬ ಅಭಿಪ್ರಾಯವನ್ನು ಪ್ರಕಟಿಸಿದರು.

ಲಂಚವಿಲ್ಲದಂತೆ ಮಾಡುವುದು

ಸರಕಾರೀ ಅಧಿಕಾರಿಗಳು ಲಂಚತೆಕ್ಕೊಳ್ಳದಂತೆ ಬೀಹಾರ್ ಸರಕಾರವು ಮುಖ್ಯ ಅಧಿಕಾರಿಗಳಿಗೆ ಒಂದು ಪ್ರಕಟನೆ ಕಳುಹಿಸಿದೆ. ಇದರಲ್ಲಿ ಮುಖ್ಯ ಅಧಿಕಾರಿಗಳು ಆ ಕಡೆಗೆ ಚೆನ್ನಾಗಿ ಗಮನ ಕೊಡಬೇಕು, ಅದರು ಹೆಚ್ಚು ಗಮನ ಕೊಡದಿರುವುದರಿಂದ ಹೀಗೆ ಕೆಳಗಿನ ನೌಕರರು ಲಂಚಕ್ಕೆ ಬಾಯೊಡ್ಡುತ್ತಿರುವರೆಂದೂ ಪ್ರತಿಯೊಂದು ಇಲಾಖೆಯ ಮೇಲಾಧಿಕಾರಿಗಳನ್ನು ಎಚ್ಚರಿಸಲಾಗಿದೆ.

ಡಾ. ಸತ್ಯಪಾಲರು ರಾಜಕೀಯದಿಂದ ವಿಶ್ರಾಂತಿ ಹೊಂದುವರು

ಪಂಜಾಬ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಾದ ಡಾ. ಸತ್ಯಪಾಲರು ಪ್ರತ್ಯಕ್ಷ ರಾಜಕೀಯದಿಂದ ವಿಶ್ರಾಂತಿ ಹೊಂದುವರೆಂದು ಅಲ್ಲಿನ ದೇಶಭಾಷಾ ಪತ್ರಿಕೆಯಲ್ಲಿ ಅವರ ಸಹಿ ಹಾಕಿದ ಪ್ರಕಟಣೆಯು ಹೊರಟಿದೆ. ಕಾಂಗ್ರೆಸಿಗೆ ಇದು ಬಹಳ ಆಶ್ಚರ್ಯವನ್ನು ಹುಟ್ಟಿಸಿದೆ.

ಹೀಗೆ ವಿಶ್ರಾಂತಿ ಹೊಂದಲು ಅವರು ಕಾರಣ ಹೇಳುತ್ತಾ, ಗತದಿನದ ಗಾಂಧಿಜಿಯವರ ಸಂಚಾರದಿಂದ ಪಂಜಾಬದಲ್ಲಿ ಕಾಂಗ್ರೆಸಿನಲ್ಲಿರುವ ವಿಷಮತೆಯನ್ನು ಹೋಗಲಾಡಿಸುವ ಸಲುವಾಗಿ ಮಹಾತ್ಮಾಜಿಯವರನ್ನು ಆಮಂತ್ರಿಸಿದ್ದು, ಅವರು ಅಲ್ಲಿಗೆ ಬರಲು, ಪಂಜಾಬದ ಮುಖಂಡರಲ್ಲಿ ಗಾಂಧಿಜಿಯವರು ತನಗೆ ವಿಶ್ವಾಸವಿಲ್ಲವೆಂಬ ಕಾರಣವನ್ನು ಹೇಳಿದ ತನ್ನನ್ನು ಬಹಳ ನೋಯಿಸಿತು ಎಂದು ತಿಳಿಸುತ್ತಾರೆ. ತನ್ನ ಸೇವೆಯು ಪ್ರಾಂತ್ಯಕ್ಕೆ ಮತ್ತು ದೇಶಕ್ಕೆ ಅಗತ್ಯವಿಲ್ಲವಾದರೆ, ದೇಶಕ್ಕಾಗಿ ತನ್ನನ್ನು ಅರ್ಪಿಸುವುದರಲ್ಲಿ ಅರ್ಥವಿಲ್ಲವೆಂದು ಅವರ ಹೇಳಿಕೆ.

ಪಂಜಾಬ ಕಾಂಗ್ರೆಸಿನಲ್ಲಿರುವ ಪಕ್ಷಭೇದಗಳ ಕುರಿತು ಇನ್ನು ಮುಂದಕ್ಕೆ ಯಾವ ಅಭಿಪ್ರಾಯವನ್ನೂ ತಾನು ಹೇಳುವುದಿಲ್ಲವಾಗಿ ಅವರು ಪ್ರತಿಜ್ಞೆ ಮಾಡಿರುವರು. ಕಡೆಗೆ, ಅವರು ತಮ್ಮ ಲೇಖನದಲ್ಲಿ ತಾನು ಸಂಪೂರ್ಣ ಕಾಂಗ್ರೆಸಿನಿಂದಲೇ ಹೊರಬಂದಿಲ್ಲವೆಂದೂ, ಕಾಂಗ್ರೆಸಿನ ಚಟುವಟಿಕೆಗಳಲ್ಲಿ ಮಾತ್ರ ಭಾಗವಹಿಸುವುದಿಲ್ಲವೆಂದೂ ಹೇಳುತ್ತಾರೆ.

ತಿರುವಾಂಕೂರು ಸಂಸ್ಥಾನ

ತಿರುವಾಂಕೂರು ಸಂಸ್ಥಾನ ಕಾಂಗ್ರೆಸಿನ ಶಿಷ್ಟಮಂಡಳವು ದಿವಾನರನ್ನು ಸಂದರ್ಶಿಸಿತು. ಸಂಸ್ಥಾನದ ರಾಜಕೀಯ ಕೈದಿಗಳ ವಿಷಯದಲ್ಲಿ ಸಂಸ್ಥಾನವು ಅಂಗೀಕರಿಸಿದ ಪದ್ಧತಿಯ ಕುರಿತು ಚರ್ಚೆ ನಡೆಯಿತು.

ನ್ಯಾಯವಿಧಾಯಕ ಸಭೆಯ ಆಡಳಿತೆಯ ವಿಷಯದಲ್ಲಿ ಹೊಣೆಗಾರಿಕೆಯುಳ್ಳ ಪ್ರಜಾಪ್ರಭುತ್ವೀ ಸರಕಾರವನ್ನು ಕೊಡುವ ಸಾಧ್ಯತೆಯ ವಿಷಯದಲ್ಲಿ ಮಾತುಕತೆಯಾಗಿದೆ.

ಇನ್ನೂ ಹಲವು ಚರ್ಚಾಸ್ಪದ ವಿಷಯಗಳಲ್ಲಿ ನಿಷ್ಪತ್ತಿ ಆಗತಕ್ಕದ್ದಿದೆ.

ಯುವಕರಿಗೆ ಸರೋಜಿನಿ ದೇವಿಯರ ಉಪದೇಶ

ಡಕ್ಕಾ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಭಾಷಣ ಮಾಡುತ್ತಾ ಶ್ರೀಮತಿ ಸರೋಜಿನಿ ದೇವಿಯವರು, ದೇಶದ ಯುವಕರ ಗುಣ ನಡತೆಯು ಧೈರ್ಯಶಾಲಿಗಳಾಗಬೇಕೆಂದೂ, ಹಾಗೆ ಮಾಡಿ ದೇಶದ ಗೌರವವನ್ನು ಹೆಚ್ಚಿಸಬೇಕೆಂದೂ, ಜಾತೀಯತೆಯ ಸಂಕುಚಿತತೆಯನ್ನು ಬಿಟ್ಟು ಬಿಡಬೇಕೆಂದೂ, ಹೇಳಿದರು. ಧೈರ್ಯಶಾಲಿಗಳಾಗಿ, ಎದೆಗಾರರಾಗಿ, ದಾಸ್ಯಬಂಧನವು ಕಡಿದುಹೋಗುವುದು ಇದು ಅವರ ಅಭ್ಯಾಸನೆಯಾಗಿತ್ತು.

ವೈದ್ಯಕೀಯ ಸಂಶೋಧನೆ

ಹಿಂದೂದೇಶದಲ್ಲಿ, ಅದರಲ್ಲಿಯೂ ಉತ್ತರ ಭಾರತದ ಅನೇಕ ಕಡೆಗಳಲ್ಲಿ ಬಹಳ ಪ್ರಚಾರವಾಗಿರುವ ಸಾಂಕ್ರಾಮಿಕ ರೋಗಗಳನ್ನು ಬುಡ ಸಹಿತ ಕಿತ್ತೆಗೆಯುವ ಸಲುವಾಗಿ ವೈದ್ಯಕೀಯ ಶೋಧನೆಯು ಭಾರತ ಸರಕಾರದಿಂದ ನಡೆಸಲ್ಪಡುತ್ತಿದೆ.

ಕೊಚ್ಚಿಯಲ್ಲಿ ಕೃಷಿಕರ ಸಾಲನಿವಾರಣಾ ಮಸೂದೆ

ಕೊಚ್ಚಿಯಲ್ಲಿ ಕೃಷಿಕರ ಸಾಲ ನಿವಾರಣಾ ಮಸೂದೆಯು ಎಸೆಂಬ್ಲಿಯ ಮುಂದೆ ಬಾಗಿದೆ.

ಸೆಲೆಕ್ಟ್ ಕಮಿಟಿಯ ವರದಿಯು ಒಪ್ಪಿಗೆಯಾಯಿತು.

ಹಿಟ್ಲರನ ರಾಜ್ಯದಲ್ಲಿ ಸ್ತ್ರೀಯರ ಸಂಕಷ್ಟ!

ಐರಿಷ್ ಭವಿಷ್ಯವಾದಿನಿಯ ಹೇಳಿಕೆ

ಪ್ರಿನ್ಸಿಪಾಲರು ವಿದ್ಯಾರ್ಥಿಗಳ ಕ್ಷಮೆ ಬೇಡಿದರು

ಹರಿಜನ ಸಾಧುವಿನ ದೈವಭಕ್ತಿ!

ವಜೀರಸ್ಥಾನದ ಹೆಂಡಂದಿರು

ಪತಿಭಕ್ತಿಯಿಲ್ಲದ ಹೆಂಡಂದಿರಿಗೆ, ವಜೀರಸ್ಥಾನದಲ್ಲಿ ಮೂಗನ್ನು ಕೊಯ್ಯುವ ಶಿಕ್ಷೆಯು ವಿಧಿಸಲ್ಪಡುತ್ತದೆ. ಹೀಗಾಗಿ, ಅಲ್ಲಿ ಅನೇಕ ಮಂದಿ ಮೂಗಿಲ್ಲದ ಗರತಿಯರು ಇರುವರು. ಇದನ್ನು ನಿವಾರಿಸಲು ಅಲ್ಲಿನ ಒಬ್ಬ ವ್ಯಾಪಾರಿಯು ಒಂದು ಒಳ್ಳೆಯ ಉಪಾಯವನ್ನು ಹೂಡಿದ್ದಾನೆ. ಕೃತ್ರಿಮ ಮೂಗುಗಳನ್ನು ತರಿಸಿ, ಮೊದಲಿದ್ದ ಮೂಗಿನಂತಹುಗಳನ್ನು ಇಟ್ಟಲ್ಲಿ ಕತ್ತರಿಸಿದ ಮೂಗಿನ ವಿಕಾರವು ಇಲ್ಲದಾಗುವುದು. ಇಂತಹ ಮೂಗುಗಳನ್ನು ಆತ ಇಂಗ್ಲೆಂಡಿನಿಂದ ತರುತ್ತಿದ್ದಾನೆ, ಬಹಳ ಹಣವನ್ನು ಸಂಪಾದಿಸಿರುವನು. ಆದರೆ ಈ ಎಲ್ಲಾ ಕೃತ್ರಿಮ ಮೂಗುಗಳೂ ಬೇರೆ ಬಣ್ಣದವುಗಳಾಗಿರುವ ನಿಮಿತ್ತ ಅಲ್ಲಿನ ಬೂದು ಬಣ್ಣದ ಜನಕ್ಕೆ ಸರಿಯಾಗುವುದಿಲ್ಲವೆಂದು ಅವನ ಚಿಂತೆ. ಬೂದುಬಣ್ಣದ ಮೂಗುಗಳಿಗೇ ಆತ ಈಗ ಆರ್ಡರು ಮಾಡಿರುವನು.

ಮನುಷ್ಯನ ಭಯಂಕರ ವೈರಿಗಳು

ಕಲ್ಕತ್ತದ ವಿಜ್ಞಾನ ಪತ್ರಿಕೆಯೊಂದರಲ್ಲಿ ಬರೆಯುತ್ತಾ ಕರ್ನಲ್ ಆರ್. ಎನ್. ಚೋಪ್ರರವರು ಹೀಗೆನ್ನುತ್ತಾರೆ

“ಕ್ರಿಮಿಗಳು ಮನುಷ್ಯನ ಭಯಂಕರ ವೈರಿಗಳು ಯುದ್ಧ, ಭೂಕಂಪ, ನೆರೆಹಾವಳಿಯೇ ಮೊದಲಾದವುಗಳಿಂದ ಆಗುವ ಸಾವಿರಪಾಲು ಅನರ್ಥಗಳಿಗಿಂತ ಈ ಕ್ರಿಮಿಗಳಿಂದ ಆಗುತ್ತದೆ ಎಲ್ಲಾ ತರದ ರೋಗಗಳನ್ನು ಪ್ರಕೃತಿಯಲ್ಲಿ ಸೃಷ್ಟಿಸಲು, ಹರಡಲು ಹಾಗೂ ಇಡೀ ಮಾನವ ವಂಶವನ್ನೇ ಪೀಡಿಸಲು ಇವುಗಳು ಇದ್ದಂತಿವೆ ಸಾಮಾನ್ಯ ತರವಾಗಿ ಕ್ರಿಮಿಗಳಿಂದಲೇ ಹಿಂದೂ ದೇಶದಲ್ಲಿ ಆಗುವ ನಷ್ಟವು ೨,೦೦೦ ರೂಪಾಯಿಗಳಷ್ಟಾಗುವವು. ಒಂದು ಮಿಲಿಯಕ್ಕಿಂತ ಮಿಕ್ಕಿದ ಜನರ ಜೀವನವನ್ನು ಇವುಗಳು ತೆಗೆಯುವವು

“ಇಂತಹ ಆರ್ಥಿಕ, ಸಾಮಾಜಿಕ ಹಾನಿಕಾರಕ ಜೀವಿಗಳನ್ನು ಪರಿಣಾಮಕಾರಿಯಾಗಿ ತಡೆಯುವ ಪ್ರಯೋಗದಿಂದ ಹಿಂದೂದೇಶದ ಏಳಿಗೆಯಲ್ಲಿ ಬಹು ದೊಡ್ಡ ಅಭಿವೃದ್ಧಿಯು ಆದೀತು ಇವುಗಳನ್ನು ತಡೆಯುವ ಸಾಧನೆಗಳಾದರೂ ಹಿಂದೂದೇಶದ ಬಡ ಆರ್ಥಿಕ ಸ್ಥಿತಿಗೆ ಸರಿಯಾದದ್ದಿರಬೇಕು

ಠಾಗೂರರ ಕೈಬರಹದ ಅನುಕರಣೆ

ಕವಿ ರವೀಂದ್ರನಾಥ ಠಾಗೋರರ ಮೇಲೆ ಇರುವ ಅಭಿಮಾನದಿಂದ ಅವರಂತೆಯೆ ಬರೆಯಲು ಯತ್ನಿಸಿದ ಇಬ್ಬರು ವಿದ್ಯಾರ್ಥಿಗಳು ತಮ್ಮ ಬಿ. ಎ., ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾದರೆ ಬಹು ಸಂಕಷ್ಟವಾಯಿತು

ಇವರಿಬ್ಬರು ಬಂಗಾಳಿ ಭಾಷೆಯ ಉತ್ತರದ ಪೇಪರುಗಳನ್ನು ಒಬ್ಬರೇ ಪರೀಕ್ಷಕರು ತಿದ್ದುವಂತೆ ಆಯಿತು ಅವರಿಗೆ ಕೂಡಲೇ ಸಂಶಯ ಬಂದು, ವಿದ್ಯಾರ್ಥಿಗಳು ಚೆನ್ನಾಗಿ ಬರೆದಿದ್ದರೂ ಅವರನ್ನು ಪಾಸುಮಾಡದೆ ತಡೆ ನಡೆಯಿತು.

ಅಷ್ಟರಲ್ಲಿ ಒಬ್ಬನು ವಿಶ್ವವಿದ್ಯಾಲಯದ ಅಧಿಕಾರಿಗಳ ಮುಂದೆ ಬಂದು, ಸ್ವತಃ ತನ್ನ ಕೈಬರಹದಿಂದ ಬರೆದು ತೋರಿಸಿದನು. ಇನ್ನೊಬ್ಬನು ತನ್ನ ಪ್ರೊಫೆಸರರ ಮೂಲಕ ಶಾಲೆಯ ಸಾಹಿತ್ಯ ಸಂಘದಲ್ಲಿ ಬರೆದ ಹಲವು ಹಸ್ತಪ್ರತಿಗಳನ್ನು ಹೊತ್ತುತಂದು ಸತ್ಯಾಗ್ರಹ ಹೂಡುವುದಾಗಿ ಹೇಳಿದ.

ಕಡೆಗೆ ತಿಳಿಯಿತು. ಇವರಿಬ್ಬರೂ ಅಕ್ಷರದಲ್ಲಿ ಅನುಸರಿಸಿದುದರಿಂದ ಇಬ್ಬರ ಬರಹಗಳೂ ಒಂದೇ ರೀತಿಯಿದ್ದುವೆಂದು ಕಟ್ಟಕಡೆಗೆ ಅವರು ತಮ್ಮ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿರುವರಾಗಿ, ವಿಶ್ವವಿದ್ಯಾಲಯದ ಅಧಿಕಾರಿಗಳು ಪ್ರಕಟಿಸಿದರು.

ಹಿಟ್ಲರನ ರಾಜ್ಯದಲ್ಲಿರುವ ಮಹಿಳೆಯರು

೧೯೧೮ರ ಕ್ರಾಂತಿಯ ಮೇಲೆ, ಜರ್ಮನಿಯಲ್ಲಿ ಮಹಿಳೆಯರು ತುಂಬಾ ಅಧಿಕಾರ ಮತ್ತು ಸ್ಥಾನಗಳನ್ನು ಪಡೆದಿದ್ದರು ಆದರೆ ಹಿಟ್ಲರನ ನಾಜೀ ಪಕ್ಷದ ನೇಶನಲ್ ಸೋಶಯಲಿಸ್ಟ್ ಸರಕಾರವು ಬಂದ ಮೇಲೆ, ರಿಶ್‌ಸ್ಟಾಗಿನ, ಪ್ರಾಂತಿಕ ಪಾರ್ಲಿಮೆಂಟುಗಳ ಮತ್ತು ಸ್ಥಳೀಕ ಸಂಸ್ಥೆಗಳ ಎಲ್ಲಾ ಜವಾಬ್ದಾರೀ ಸ್ಥಾನಗಳಿಂದ ಅವರನ್ನು ತೆಗೆದು ಹಾಕಲಾಗಿದೆ. ಆಸ್ಪತ್ರೆ, ಶಾಲೆ ಇವುಗಳಿಂದಲೂ ಅವರನ್ನು ತೆಗೆದುಹಾಕುವ ಹಾಗೆ ಮಾಡಿದೆ ೩೫ ವರ್ಷ ಪ್ರಾಯದ ಒಳಗಿನ ಎಲ್ಲಾ ಹೆಂಗುಸರೂ ಸರಕಾರದ ಜವಾಬ್ದಾರೀ ಅಧಿಕಾರದಲ್ಲಿರಲು ಅಯೋಗ್ಯರೆಂದು ಕಾನೂನಾಗಿದೆ, ಮತ್ತು ಉದ್ಯೋಗದಲ್ಲಿರುವ ಗಂಡಂದಿರನ್ನು ಮದುವೆಯಾದರೆ, ಅನಾರ್ಯ ಜಾತಿಯವರನ್ನು ಮದುವೆಯಾದರೂ ಅವರಿಗೆ ಅಲ್ಲಿ ಕೆಲಸವಿಲ್ಲ.

೧೯೩೩ನೇ ಜೂನ್ ೩೦ರಂದು ಪಾಸಾದ ಕಾನೂನಿನಂತೆ ಎಲ್ಲ ಮದುವೆಯಾದ ಹೆಂಗುಸರೂ ಅವರ ಕೆಲಸಗಳಿಂದ ತೆಗೆದುಹಾಕಲ್ಪಟ್ಟರು ಬಹಳ ಉತ್ತಮವಾದ ಗೌರವದ ಅಧಿಕಾರದಲ್ಲಿರುವ ಸಾವಿರಾರು ಮಂದಿ ಹೆಂಗುಸರನ್ನು ಜರ್ಮನಿ ಸರಕಾರವು ಪದಚ್ಯುತರನ್ನಾಗಿ ಮಾಡಿದೆ

ಹೀಗಿರೆ ಹಿಟ್ಲರ್ ಭೂಪತಿಯು ಅಧಿಕಾರಿ! ಬ್ರಹ್ಮಚಾರೀ ಹಿಟ್ಲರನಿಗೆ ಹೆಣ್ಣು ಜಾತಿಯ ಮೇಲೆಯೇ ಇಷ್ಟು ಭಯಂಕರ ಕೋಪವೇ?

ಪ್ರಿನ್ಸಿಪಾಲರು ವಿದ್ಯಾರ್ಥಿಗಳಲ್ಲಿ ಕ್ಷಮೆ ಬೇಡಿದರು

ಸಿಂಧದ ಕಾಲೇಜಿನಲ್ಲಿ ಆದ ಗಲಭೆಯಿಂದ ವಿದ್ಯಾರ್ಥಿಗಳನ್ನು ಪೋಲೀಸರು ಬಂಧಿಸಬೇಕಾಯಿತು ಆ ಬಗ್ಗೆ ಕಾಲೇಜಿನ ಪ್ರಿನ್ಸಿಪಾಲರು ಅಂತಹ ಪರಿಸ್ಥಿತಿಗೂ, ಮಾತ್ರವಲ್ಲದೆ ಪೋಲೀಸರಿಂದ ವಿದ್ಯಾರ್ಥಿಗಳನ್ನು ಸೆರೆಹಿಡಿಸುವಂತಹ ಎಲ್ಲಾ ಕಾರ್ಯಗಳಿಗೂ ತಾನೇ ಜವಾಬ್ದಾರನೆಂದೂ, ಅದಕ್ಕಾಗಿ ಕಾಲೇಜಿನ ಪ್ರತಿಯೊಬ್ಬ ವಿದ್ಯಾರ್ಥಿಯೊಡನೆಯೂ ತಾನು ಕ್ಷಮಾಪಣೆ ಕೇಳಿಕೊಳ್ಳುವುದಾಗಿಯೂ, ಆಗಸ್ಟ್ ೭ರಂದು ತೆರೆಯಲಾಗುವ ಕಾಲೇಜಿಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಬಂದು ತನ್ನ ಸ್ವಾಗತವನ್ನು ಸ್ವೀಕರಿಸಬೇಕೆಂದೂ, ಯಾರಾದರೂ ವ್ಯಕ್ತಿಶಃ ಮನನೊಂದಿದಲ್ಲಿ ಅಂತವರು ಸ್ವತಃ ತನ್ನಲ್ಲಿಗೆ ಬಂದು ವ್ಯಕ್ತಿಶಃ ನನ್ನಿಂದ ಕ್ಷಮಾಪಣೆಯನ್ನು ಪಡೆದುಕೊಳ್ಳಬೇಕಾಗಿಯೂ ಪ್ರಕಟಿಸಿರುತ್ತಾರೆ.

ಶಾಂತಿ ಸಾಧನೆಗಾಗಿ ಹಿಟ್ಲರನು ಬ್ರಿಟನಿಗೆ ಬರುವನು!

ಐರಿಷ್ ಭವಿಷ್ಯವಾದಿನಿಯ ಹೇಳಿಕೆ

ಲಂಡನಿನಲ್ಲಿ ವಾಸಮಾಡಿರುವ ಒಬ್ಬ ಐರಿಷ್ ಭವಿಷ್ಯವಾದಿನಿಯು ಹಿಟ್ಲರನು ಶಾಂತಿ ಸಾಧನೆಯ ಕಾರ್ಯಕ್ಕಾಗಿ ಬ್ರಿಟನಿಗೆ ಬೇಗನೇ ಬರಲಿರುವನೆಂದು ಹೇಳುತ್ತಾಳೆ

ಆಕೆ ಸುಪ್ರಸಿದ್ಧನಾಗಿದ್ದ ಐರಿಷ್ ಸಿವಿಲ್ ಕೆಲಸಗಾರನೊಬ್ಬನ ವಿಧವೆ ಹೆಂಗುಸು! ಹೆಸರು ಬ್ರಿಡ್‌ಗೆಟ್ ದ್ರಿಸ್ಕೋಲ್ ಎಂದು 'ನಾನು ಲಾರ್ಡ್ ಹೆಲಿಫಾಕ್ಸರೊಡನೆ ಹಿಟ್ಲರನು ವೈಟ್ ಹಾಲನ್ನು ಪ್ರವೇಶಿಸಿದ್ದನ್ನು ಕನಸಿನಲ್ಲಿ ಕಂಡೆನು' ಎಂದು ಹೇಳುತ್ತಾಳೆ

ಈಗಾಗಲೇ ಹಿಗಿದ್ದ ದಿವ್ಯ ಸ್ವಪ್ನಗಳ ಭವಿಷ್ಯಗಳನ್ನು ಹೇಳುತ್ತಾ ಆಕೆ ಬ್ರಿಟನನ್ನು ಆಶ್ಚರ್ಯಚಕಿತಳಾಗಿ, ಮಾಡಿದ್ದಾಳೆ!

ಆಕೆಗೆ 'ಬಾನ್ಶೀ' ಎಂಬ ಐರಿಷ್ ದೇವತೆಯು ಹೀಗೆ ಸಹಾಯ ಮಾಡುವುದಂತೆ

೧೯೩೭ರಲ್ಲಿ ಐದ್ಕು ದಿನ ಪ್ರಾತಃಕಾಲ ಹಾಸಿಗೆಯಿಂದ ಎದ್ದಾಗ, ಈ ಘಟನೆ ನಡೆಯುತ ರಾತ್ರಿಯಲ್ಲಿ ಆ ದೇವತೆಯು ದರ್ಶನವಾಗಿ ಅದು ಅವಳ ಕಣ್ಣಮುಂದೆ ಐರಿಷ್ ಒಪ್ಪಂದದ ನಿಜವಾದ ಘಟನೆಗಳನ್ನು ಕಂಡು ಅದನ್ನು ಗೆಳೆಯರೊಡನೆ ತಿಳಿಸಿದಳು

– ಆದರೆ ಆಗ ಐರ್ಲೆಂಡು ಬ್ರಿಟನಿನೊಡನೆ ಸಂಧಿ ಮಾಡಿಕೊಳ್ಳುವ ವಿಷಯ ಸ್ವಲ್ಪವಾದರೂ ಸೂಚನೆಯಿರಲಿಲ್ಲ.

ರಾಜ ದಂಪತಿಗಳು ಅಮೇರಿಕಕ್ಕೆ ಹೋಗುವ ಎರಡು ತಿಂಗಳ ಹಿಂದೆಯೇ, ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರೊಡನೆ ಅವರು ಹಸ್ತಲಾಘವನ್ನು ಕೊಡುವ ದೃಶ್ಯವನ್ನು ಕಂಡಿದ್ದಳು.

ಹರಿಜನ ಸಾಧುವಿನ ದೈವಭಕ್ತಿ

'ಪರಶಕ್ತಿ' ಪತ್ರಿಕೆಯಲ್ಲಿ ಶ್ರೀ ಆರ್. ಬಿ. ಸನ್ಯಾಸಿಯೆಂಬವರು ಶ್ರೀರಂಗಂದಲ್ಲಿ ನಡೆದ ಹರಿಜನ ಸಾಧುವಿನ ಮಹಾತ್ಮೆಯ ವಿಷಯವಾಗಿ ಹೀಗೆಂದು ಬರೆಯುತ್ತಾರೆ —

'ತಿರುಪಾನನ್' ಎಂಬವನು ಶ್ರೀ ರಂಗನಾಥ ದೇವರ ಅಚಲ ಭಕ್ತನಾಗಿದ್ದ. ಇತರ ಉತ್ತಮ ಜಾತಿಯ ಯಾವನಾದರೂ ಏಳುವುದಕ್ಕಿಂತ ಮೊದಲೇ ಕಾವೇರೀ ನದಿಯಲ್ಲಿ ದಿನನಿತ್ಯ ಪ್ರಾತಃಕಾಲ ಸ್ನಾನ ಮಾಡುತ್ತಿದ್ದ. ತಿರುಪಾನಿಯು ಧ್ಯಾನಮಗ್ನನಾಗಿರುವಾಗ ಒಬ್ಬ ಲೋಕ ಸಾರಂಗ ಮಹಾಮುನಿಯೆಂಬ ಬ್ರಾಹ್ಮಣನು ಸ್ನಾನಕ್ಕೆ ಬಂದಿಳಿದ ಆ ಬ್ರಾಹ್ಮಣನು ಪಂಚಮನ ಕಡೆಗೆ ಕಲ್ಲೆಸೆದ ಅದು ತಿರುಪಾನಿಯ ತಲೆಗೆ ತಗಲಿತು ಬ್ರಾಹ್ಮಣನಿಗೆ ತನ್ನ ತಪ್ಪು ತಿಳಿಯಿತು, ಆದರೆ ಏನುಮಾಡಲಿ ಎಂಬುದು ತಿಳಿಯಲಿಲ್ಲ

'ದೇವಾಲಯದ ಅಧಿಕಾರಿಗಳ ಮೂಲಕ ದೇವರು ದರ್ಶನ ಬಂದು ಆ ಬ್ರಾಹ್ಮಣನೊಡನೆ, ಭಕ್ತ ಹೊಲೆಯನನ್ನು ತನ್ನಲ್ಲಿಗೆ ಕರೆತರಲು ಆಜ್ಞಾಪಿಸಿದರು ಬ್ರಾಹ್ಮಣನು ತಿರುಪಾನನಿಗೆ ಇದನ್ನು ಹೇಳಲು, ಆತನು ಅಂಜಿಕೆಯಿಂದ ತಿರಸ್ಕರಿಸಿದ ಕಡೆಗೆ ದರ್ಶನ ಬಂದ ದೇವರು ಆ ಹೊಲೆಯನನ್ನು ಹೊತ್ತುಕೊಂಡು ತನ್ನ ಬಳಿಗೆ ಬರುವಂತೆ ಆಜ್ಞಾಪಿಸಿದನು. ಬ್ರಾಹ್ಮಣನು ಹಾಗೆಯೇ ಮಾಡಬೇಕಾಯಿತು. ದೊಡ್ಡ ನಗರದ ಬೀದಿಯಲ್ಲಿ ಈ ಮೆರವಣಿಗೆಯು ಆಯಿತು

'ತಿರುಪಾನನು ಅಲ್ಲಿಗೆ ಬಂದಾಗ, ಪಾದದಿಂದ ಶಿರಸ್ಸಿನ ತನಕ ದೇವರನ್ನು ದರ್ಶನ ಮಾಡಿದವನಂತೆ ಆನಂದದಿಂದ ಹಾಡಿದನ 'ಅಮಲನ್ ಆದಿ ಪಿರಾನ್' ಎಂಬ ಅಮರ ಕಾವ್ಯವೊಂದು. ಅಲ್ಲಿ ದೇವರ ಸ್ತುತಿರೂಪವಾಗಿ ಆತನಿಂದ ಹಾಡಲ್ಪಟ್ಟಿತು. ಕಡೆಗೆ ಆತನು ಅಲ್ಲಿಯೇ ದೇವರಲ್ಲಿ ಐಕ್ಯನಾಗಿ ಮಾಯವಾದನು.'

ಉದಯಶಂಕರರ ನರ್ತನ ವೈಭವ

ಸಂಯುಕ್ತ ಪ್ರಾಂತದ ಗವರ್ನರ ಮತ್ತು ಅವರ ಪತ್ನಿಯವರ ಸಂದರ್ಶನದ ಸಲುವಾಗಿ ಭಾರತದ ಸುಪ್ರಸಿದ್ಧ ನರ್ತನ ಕುಶಲಿಗರು ಉದಯಶಂಕರರು ತನ್ನ ಸ್ಟುಡಿಯೋದಲ್ಲಿ ವಿಶಿಷ್ಟವಾದ ಹಲವು ನರ್ತನಗಳನ್ನು ಪ್ರದರ್ಶಿಸಿದರು

ಕೇವಲ ಒಂಭತ್ತು ಘಟನೆಗಳನ್ನು ತೋರಿಸುವ ಸಂಕೋಚವಾದ ಕಾರ್ಯಕ್ರಮವಿತ್ತು “ಹಾವಾಡಿಗ” ಮತ್ತು “ಇಂಧ ಮತ್ತು ಕಾರ್ತಿಕೇಯ” ಎಂಬ ನರ್ತನವು ಸ್ವತಃ ಉದಯಶಂಕರರೇ ನಟಿಸಿ ತೋರಿಸಿದರು. ಕೇರಳದ ಸುಪ್ರಸಿದ್ಧ 'ಕಥಕ್ಕಳಿ' ನರ್ತನಪಟುಗಳಾದ ಗುರುಶಂಕರನ್ ನಂಬೂದರಿಯವರು, ಭೀಮ ಪ್ರಭಾವಂ ಎಂಬ ನರ್ತನ ಮಾಡಿದರು, ಅದರಲ್ಲಿ, ಯುದ್ಧರಂಗದಲ್ಲಿ ಭೀಮನು ದುಶ್ಶಾಸನನೊಡನೆ ಯುದ್ಧಮಾಡಿ ಪ್ರತೀಕಾರ ಮಾಡುವ ರುದ್ರತೆಯು ತೋರಿಸಲ್ಪಟ್ಟಿತು 'ಕಥಕ್ಕಳಿಯ ಜ್ಞಾನವಿಲ್ಲದವರಾಗಿದ್ದರೂ, ಸಾಮಾಜಿಕರು ಆ ನಟನೆಯಲ್ಲಿರುವ 'ರುದ್ರರಸ'ದಿಂದ ಸ್ತಂಭೀಭೂತರಾದರು. ಸಿಮಿಕಿಯ ಮಾರವಾರೀ ನರ್ತನವೂ ಬಹುಪ್ರಶಂಸಾರ್ಹವಾಗಿತ್ತು ಇದೀ ಪಂಗಡದವರಿಂದಲೇ ಪ್ರದರ್ಶಿತವಾದ ಬಿಲ್ ನರ್ತನವು ಬಹುವಾಗಿ ಮನೋರಂಜಕವಾಗಿತ್ತು. ಉದಯಶಂಕರರು ಹೊಸತಾಗಿ 'ಮೃದಂಗ ಸೃಷ್ಟಿ'ಯೆಂಬ ಹೊಸ ನರ್ತನವನ್ನು ಅಭ್ಯಾಸಮಾಡುತಿದ್ದಾರೆ. ೧೯೩೯ನೇ ಅಕ್ಟೋಬರದಲ್ಲಿ ಅಖಿಲಭಾರತ ಸಂಚಾರ ಕೈಕೊಳ್ಳಲಿರುವರು.

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು
ಮನೆಗೆಲ್ಲಾ ಬೆಳಕು, ಬೆಳದಿಂಗಳು
ಆದ್ದರಿಂದಲೇ ಸ್ತ್ರೀಯರ ಆರೋಗ್ಯವು
ಅತ್ಯ ಮುಖ್ಯ

ಸ್ತ್ರೀಯರಿಗೆ ಋತು ಸಂಬಂಧವಾದ
ದೋಷಗಳಿಂದ ಶರೀರವು ಕೃಶಿಸಿ
ಸಂತಾನ ವಾಂಛೆಯು ಸಫಲತೆ
ಹೊಂದದು. ಆದರೆ ಲೋಧ್ರವನ್ನು
ಸೇವಿಸಿದರೆ ಸ್ತ್ರೀಯರಿಗೆ ಸತ್ಸಂ
ತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟಾಕಿಸ್ಟರು **ಪೊಪ್ಯುಲರ್ ಸ್ಟೋರ್ಸ್ ರಥಬೀದಿ, ಮಂಗಳೂರು.**

ಸ್ವದೇಶಾಭಿಮಾನಿ

ತಾರೀಕು ೧೧—೮—೧೯೩೮

ಮಾನ್ಯ ಮಂತ್ರಿ ವಾರ್ಕಿಯವರ ಪದವೀದಾನ ಸಮಾರಂಭ ಭಾಷಣ

ಇಂದು ಸುತ್ತಲಿನ ದಿಗಂತವನ್ನು ಮುಸುಕು ಕವಿದು ಬಂದಿದ್ದರೂ, ಜಯವನ್ನು ಪಡೆಯಲು ಬೇಕಾದ ಕೆಲವು ಗುಣಗಳನ್ನು ನೀವು ಹೊಂದಿದ್ದರೆ, ಜೀವನದ ಹೋರಾಟದಲ್ಲಿ ಜಯಶಾಲಿಗಳಾಗುವಿರಿ' ಹೀಗೆಂದು ಮದ್ರಾಸು ವಿಶ್ವವಿದ್ಯಾನಿಲಯದ ಹೊಸ ಪದವೀಧರರಿಗೆ ಮದ್ರಾಸು ಸರಕಾರದ ವಿದ್ಯಾ ಮಂತ್ರಿಗಳಾದ ಮಾನ್ಯ ಶ್ರೀ ಸಿ. ಜೆ. ವಾರ್ಕಿಯವರು ಉಪದೇಶ ಮಾಡುತ್ತಾರೆ. ಬಹು ಸಮಯಗಳ ತನಕ ಪ್ರೊಫೆಸರರಾಗಿದ್ದು, ವಿದ್ಯಾಂಗದ ವಿವಿಧ ಕ್ಷೇತ್ರಗಳ, ಹಾಗೂ ವಿಶ್ವವಿದ್ಯಾನಿಲಯದ ಮತ್ತು ಪದವೀಧರರ ಪೂರ್ಣ ಅನುಭವ ಪಡೆದ, ಇವರ ಪದವೀದಾನ ಸಮಾರಂಭ ಭಾಷಣವು ಅನೇಕ ದೃಷ್ಟಿಯಿಂದ ಗಮನೀಯವೂ ಮನನೀಯವೂ ಆಗಿರುತ್ತದೆ.

ಮಾನ್ಯ ವಾರ್ಕಿಯವರು ಮೊದಲಾಗಿ ಮದ್ರಾಸು ವಿಶ್ವವಿದ್ಯಾನಿಲಯದ ಘನತೆ ಗೌರವಗಳನ್ನು ವರ್ಣನೆ ಮಾಡುತ್ತಾ ಪ್ರೌಢ ಶಿಕ್ಷಣದ ಪ್ರಯೋಜನವು 'ಬುದ್ಧಿಯನ್ನು ಸರಿದಾರಿಗೆ ತಂದು ಮನಸ್ಸಿನ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸುವುದೆಂದು ಹೇಳಿ, ಸಾಂಸ್ಕೃತಿಕ ಜ್ಞಾನದೊಡನೆ ಸಾಮಾಜಿಕ ಜ್ಞಾನವೂ ಬೆಳೆಯಬೇಕೆಂದೂ, ಯೋಗ್ಯ ನಾಗರಿಕನಾಗಿ, ಧೈರ್ಯಶಾಲಿಯಾಗಿ, ಚತುರನಾಗಿ, ಆತ್ಮಶಕ್ತಿಯುಳ್ಳವನಾಗಿ, ಜನಾಂಗದ ಮುಂದಾಳುವಾಗಿ, ದಲಿತರ ಬಗೆಗೆ ಸಹಸಂತಾಪವುಳ್ಳವನಾಗಿ, ವಿದ್ಯಾರ್ಥಿಯು ಸಿದ್ಧನಾಗಬೇಕೆಂದೂ ಅಭಿಪ್ರಾಯಪಿತ್ತರು.

ಮದ್ರಾಸು ವಿಶ್ವವಿದ್ಯಾಲಯವು ಪ್ರಗತಿ ಹೊಂದುತ್ತಿದೆಯೆಂದು ಹೇಳಿ ವಾಣಿಜ್ಯ, ಶಿಲ್ಪ ಕಲ್ಪೆ ಮೊದಲಾದವುಗಳ ಕುರಿತು ಇನ್ನೂ ಕೂಡಾ ಸಾಕಷ್ಟು ಗಮನ ಕೊಡದಿರುವುದು ಶೋಚನೀಯವೆಂದೂ, ವ್ಯಾಪಾರ ವಹಿವಾಟುಗಳು ಈ ಪ್ರಾಂತದಲ್ಲಿ ದಿನದಿಂದ ದಿನಕ್ಕೆ ಅಭಿವೃದ್ಧಿಯಾಗುತ್ತಿರುವಾಗ ವಾಣಿಜ್ಯ ವಿದ್ಯೆಯ ಕಾಲೇಜು ತೆರೆಯಲ್ಪಡಬೇಕೆಂದೂ ಟೆಕ್ನಿಕಲ್ ಕಾಲೇಜೊಂದು ಅವಶ್ಯವಾಗಿ ಆಗಬೇಕಾಗಿದೆಯೆಂದೂ, ಸರಕಾರ ಮತ್ತು ವಿಶ್ವವಿದ್ಯಾನಿಲಯಗಳ ಅನ್ಯೋನ್ಯ ಸಹಕಾರದಿಂದ ಇದು ಬೇಗನೇ ಪೂರ್ಣತೆಗೆ ಬರುವುದೆಂದೂ ಹೇಳಿದರು.

ಭಾಷಣದಲ್ಲಿ, ವಿಶ್ವವಿದ್ಯಾನಿಲಯದ ಆರ್ಥಿಕಸ್ಥಿತಿಯನ್ನು ವಿವರಿಸುತ್ತಾ 'ರಾಷ್ಟ್ರದ ಕರುಗಳು' ಯೆಂದು ಹೇಳಿದ ಕೌಟಿಲ್ಯನ ಅರ್ಥಶಾಸ್ತ್ರವನ್ನು ಎತ್ತಿ ಹೇಳುತ್ತಾ, ವಿಶ್ವವಿದ್ಯಾನಿಲಯವು ಆರಂಭವಾದಾಗ, ಸಾರ್ವಜನಿಕರ ಸಹಾಯವನ್ನು ಪಡೆಯುವ ನಿಯಮ ಮಾಡಿತ್ತೆಂದೂ, ಇಂದು ಕೇವಲ ಸರಕಾರದ ೩,೦೫,೫೦೦ ರೂಪಾಯಿಗಳ ಸಹಾಯ ನಿಧಿಯನ್ನು ಮಾತ್ರ ಅವಲಂಬಿಸಿಕೊಂಡಿರುವುದೆಂದೂ, ತಿರುವಾಂಕೂರು ಯುನಿವರ್ಸಿಟಿಯೂ ಅತ್ತ ಬೇರೆಯಾಗಿರುವುದರಿಂದ ಹಣದ ದಾರಿಯೂ ಕಡಿಯಲ್ಪಟ್ಟಿತೆಂದೂ ತಿಳಿಸಿದರು. ಅದರೊಡನೆ ಆಂಧ್ರ ವಿಶ್ವ ವಿದ್ಯಾನಿಲಯವು ಅತ್ಯಲ್ಪ ಸಮಯದಲ್ಲಿಯೇ ದೊಡ್ಡ ಸಂಖ್ಯೆಯಿಂದ ಸಾರ್ವಜನಿಕ ನಿಧಿಯನ್ನು ಪಡೆದಿರಲು ಮದ್ರಾಸು ವಿಶ್ವವಿದ್ಯಾನಿಲಯವು ಪಡೆಯದಿರುವುದು ಶೋಚನೀಯವೆಂದು ಹೇಳಿದರು. ಆಂಧ್ರ ವಿಶ್ವವಿದ್ಯಾನಿಲಯಕ್ಕೆ ಒಂದುವರೆ ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಸಹಾಯವನ್ನು ಕೊಡಲು ಸರಕಾರವು ತಿರಸ್ಕರಿಸಿರುವುದೇ ಇದರ ಕಾರಣವಾಗಿರಬೇಕೆಂದರು.

[—ಪದವೀಧರರಿಗೆ ಉಪದೇಶ ಮಾಡುತ್ತಾ, ಏಳಿಗೆಯ ದಾರಿಯಲ್ಲಿ ಮುಂದುವರಿಯಬೇಕಾದರೆ, ಇಲ್ಲಿಂದ ಪದವೀಧರರಾಗಿ ಹೊರಟ, ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ ಯುವಕರೆಲ್ಲರೂ ತಾವು ತಮ್ಮ ಸಮಸ್ತ ವ್ಯವಹಾರ ಕ್ಷೇತ್ರಗಳಲ್ಲಿ ಐಕ್ಯಬುದ್ಧಿಯುಳ್ಳವರಾಗಿರಬೇಕೆಂದರು. ಚುನಾವಣೆ, ಎಸೆಂಬ್ಲಿ, ಸ್ಥಳೀಕ ಬೋರ್ಡುಗಳು, ಕಡೆಗೆ ತಮ್ಮ ನೆರೆಕರೆಯ ಸಾಮಾಜಿಕ ಜೀವನದಲ್ಲಿಯೂ ಈ ಧೋರಣೆಯನ್ನು ಇಂದಿನ ಪದವೀಧರರು ಕಾರ್ಯತಃ ಮಾಡಿ ತೋರಿಸುವುದು ಅವಶ್ಯವಾಗಿದೆಯೆಂದರು.

ನಿರುದ್ಯೋಗ ಸಮಸ್ಯೆಯ ಕುರಿತು ಹೇಳುತ್ತಾ, ಇದಕ್ಕಾಗಿ, ವಿಶ್ವವಿದ್ಯಾನಿಲಯವನ್ನೋ ಹೆತ್ತವರನ್ನೋ ದೂರಿ ಪ್ರಯೋಜನವಿಲ್ಲವೆಂದೂ, ಅನ್ಯ ಉಪಾಯವಿಲ್ಲದೆ, ಅವರು ಆ ರೀತಿ ತಮ್ಮ ಕರ್ತವ್ಯವನ್ನು ಪೂರೈಸುತ್ತಿರುವರೆಂದೂ, ಇಂತಹ ವಿಷಮ ಸಮಸ್ಯೆಗೆ ಸರಕಾರವೇ ಮುಖ್ಯ ಕಾರಣವೆಂದೂ ಹೇಳಿದರು. ಯೋಗ್ಯತೆಯಿರಲಿ, ಇಲ್ಲದಿರಲಿ, ಮಾಧ್ಯಮಿಕ ಶಿಕ್ಷಣವಾದ ಮೇಲೆ ಪ್ರೌಢಶಿಕ್ಷಣಕ್ಕೆ ಕಳುಹಿಸುವ ಇಂದಿನ ಪರಿಸ್ಥಿತಿಯನ್ನು ನಿವಾರಿಸಲು, ವೃತ್ತಿ ಶಿಕ್ಷಣವನ್ನು ಕೊಡುವ ಮಾಧ್ಯಮಿಕ ಶಿಕ್ಷಣವು ಪ್ರಯೋಗದಲ್ಲಿ ಬರಬೇಕೆಂದೂ, ಇಂದಿನ ಕಾಂಗ್ರೆಸು ಸರಕಾರವು ಆ ಬಗೆಗೆ ಯತ್ನಿಸುತ್ತಿದೆಯೆಂದೂ ಹೇಳಿದರು.

ಕಟ್ಟಕಡೆಗೆ ರಾಷ್ಟ್ರೀಯ ಐಕ್ಯದ ಕುರಿತು ಪದವೀಧರರು ಮಾಡತಕ್ಕ ಕರ್ತವ್ಯವೇನೆಂದು ಹೇಳಿ, ಗುಣನಡತೆ ಸದಾಚಾರಗಳನ್ನು ಇಟ್ಟುಕೊಂಡು, ಧಾರ್ಮಿಕ ಬುದ್ಧಿಯುಳ್ಳವರಾಗಿ ಭಾರತವು ತನ್ನ ಹಿಂದಿನ ಉಜ್ವಲಮಹನೀಯತನವಾದ ಕೀರ್ತಿಗೌರವಗಳನ್ನು ಪಡೆಯುವಂತೆ ಎಲ್ಲರೂ ಸಾಧಿಸಬೇಕೆಂದರು.

ಚೆಂಬರ್ಲೆನರ ರಕ್ತವು ಕುದಿಯುತ್ತದಂತೆ!

"ಇಂದು ಚೈನಾದಲ್ಲಿ ಜಪಾನಿಗೆ ಸಮತೂಕವಾದ ಯುದ್ಧ ಸೈನ್ಯವನ್ನು ನಾವು ಇಟ್ಟಿಲ್ಲ; ಆದರೆ ಅದಕ್ಕಿಂತ ಹೆಚ್ಚಿನ ಸೈನ್ಯವು ಇಲ್ಲಿದೆ. ಅಗತ್ಯಬಿದ್ದರೆ ಖಂಡಿತವಾಗಿಯೂ ನಾವಿಲ್ಲಿಗೆ ಕಳುಹಿಸುವೆವು. ಆದರೆ ಚೈನಾದಲ್ಲಿ ಎಲ್ಲಾ ಕಡೆಗಳಲ್ಲಿಯೂ ಬ್ರಿಟಿಷ ಪ್ರಜೆಗಳು ಹಂಚಿದ್ದಾರೆ; ಅವರ ಪರವಾಗಿ ನಾವು ಮಾಡುವ ಕೆಲಸದಿಂದ, ಅವರಿಗೇ ಕಷ್ಟವಾಗುವ ಸಂಭವವಿದೆ.

"ಇಂದು ಯೂರೋಪಿನಲ್ಲಿ ಆಗುವ ಕೆಲವು ಕಾರ್ಯಗಳನ್ನು ವಿಚಾರಿಸಿದಲ್ಲಿ ನಾವು ನಮ್ಮ ಶಕ್ತಿಯನ್ನು ಪ್ರದರ್ಶಿಸದಿರಲು ಸಾಧ್ಯವಿಲ್ಲ. ಚೈನಾದಲ್ಲಿ ಆಗುವ ಘಟನೆಗಳೂ ನಮ್ಮನ್ನು ಉದ್ವಿಗ್ನಮಾಡಿವೆ. ಈ ಸಂದರ್ಭದಲ್ಲಿ ಹಿಂಸಾತುರನಾದ ಯಾವನೊಡನೆಯಾದರೂ ನಾನು ನನ್ನ ಭಾವನೆಗಳನ್ನು ಹಂಚಲು ಸಿದ್ಧನಾಗಿದ್ದೇನೆ. ಅಲ್ಲಿ ಆಗುವ ಘಟನೆಗಳನ್ನು ಕೇಳಿ ನನ್ನ ರಕ್ತವು ಕುದಿಯ ತೊಡಗಿದೆ. ಇದಕ್ಕಿಂತಲೂ ದೊಡ್ಡ ಸಮಸ್ಯೆಗಳನ್ನು ಕೆಲವೇ ಸಮಯದಲ್ಲಿ ನಾವು ಎದುರಿಸಬೇಕಾಗಿ ಬರಬಹುದಾದುದರಿಂದ, ನಮ್ಮ ಶಕ್ತಿಯನ್ನು ಬಲಪಡಿಸಬೇಕೆಂದು" ಚೆಂಬರ್ಲೆನರು ಹೌಸ್ ಓಫ್ ಕಾಮನ್ಸಿನಲ್ಲಿ ಭಾಷಣಮಾಡಿದರು.

"ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಲು ನಿಶ್ಚಿತ ಅವಧಿಯಿಲ್ಲ"

ಬಂಗಾಳ ಸರಕಾರದ ಹೇಳಿಕೆ

ಬಂಗಾಳ ಸರಕಾರದ ಹೋಮ್ ಮಿನಿಸ್ಟರರಾದ ಮಾನ್ಯ ಸರ್. ಕೆ. ನಾಜೀಮುದ್ದೀನರು ತಮ್ಮ ಪ್ರಕಟಣೆಯೊಂದರಲ್ಲಿ, ಬಂಗಾಳದ ರಾಜಕೀಯ ಕೈದಿಗಳ ಉಪವಾಸವ್ರತದ ಬಿಡುಗಡೆಗಾಗಿ ಯತ್ನ ಮಾಡಿದ ಎಲ್ಲಾ ರಾಜಕೀಯ ಮುಖಂಡರಿಗೂ ಧನ್ಯವಾದವನ್ನು ಹೇಳುತ್ತಾ, ಅವರನ್ನು ಜೈಲಿನಿಂದ ಬಿಡುವ ವಿಷಯದಲ್ಲಿ ನಾವು ಯಾವ ಅವಧಿ ನಿಶ್ಚಯದ ಮಾತನ್ನು ಯಾರಿಗೂ ಹೇಳಿಲ್ಲವೆಂದೂ, ಸರಕಾರವು ತನ್ನ ಧೋರಣೆಯನ್ನು ಬದಲಾಯಿಸುವುದಿಲ್ಲವೆಂದೂ, ಬಿಡುಗಡೆಯ ವಿಷಯ ಸಾವಕಾಶವಾಗಿ ವಿಚಾರಿಸಲಾಗುವುದೆಂದು ಹೇಳುತ್ತಾರೆ.

ಸತ್ಯಾಗ್ರಹಕ್ಕಾಗಿ ಬೋಸರ ತಯಾರಿ

ಇಂದು ರಾಜಕೀಯ ಕೈದಿಗಳ ಉಪವಾಸ ವ್ರತವನ್ನು ಬಿಡಿಸಿರುವ ನಿಮಿತ್ತ ಜವಾಬ್ದಾರಿಯು ನಮ್ಮೆಲ್ಲರ ಮೇಲೆ ಬಿದ್ದಿರುವುದೆಂದೂ, ಎರಡು ತಿಂಗಳ ಅವಧಿಯಲ್ಲಿ ಸರಕಾರವು ಯಾವ ಶರತುಗಳೂ ಇಲ್ಲದೆ, ಅವರ ಬಿಡುಗಡೆ ಮಾಡದಿದ್ದರೆ ಇಡೀ ನಾಡಿನಲ್ಲಿ ಸತ್ಯಾಗ್ರಹ ಚಳವನ್ನು ಆರಂಭಿಸಬೇಕೆಂದೂ ಅದಕ್ಕಾಗಿ ಸ್ವಯಂಸೇವಕರ ದಳವು ಈಗಲೇ ಸಿದ್ಧವಾಗಬೇಕೆಂದೂ ಹೇಳಿರುತ್ತಾರೆ.

ಹರಿಜನ ದೇವಾಲಯ ಪ್ರವೇಶ

ಹಿಂದುಪುರ ತಾಲೂಕಿನ ಮಾನವಳ್ಳಿ ಗ್ರಾಮದ ಶಿವದೇವಾಲಯವು ಹರಿಜನರಿಗೆ ಮುಕ್ತ ದ್ವಾರವಾಯಿತು.

ಕೊಯಂಬುತ್ತೂರಿನ ಕರಮಾಡೈ ಎಂಬ ಗ್ರಾಮದ ವಿನಾಯಗರ್ ಮತ್ತು ಕಾಮಾಚಿ ಅಮ್ಮನ್ ದೇವಾಲಯಗಳಿಗೆ ಹರಿಜನ ಪ್ರವೇಶವಾಯಿತು.

ಉಟಕಮುಂಡಿನ ಸ್ಥಳೀಕ ದೇವಾಲಯವೊಂದಕ್ಕೆ ಹರಿಜನರಿಗೆ ಪ್ರವೇಶ ದೊರಕಿತು.

ಪ್ರಧಾನ ಮಂತ್ರಿಗಳ ತಾಲೂಕಾದ ಸೇಲಂ ಜಿಲ್ಲೆಯ ಹೊಸೂರಿನಲ್ಲಿ ಶ್ರೀ ಚನ್ನ ಕೇಶವ ಪೆರುಮಳ್ ದೇವಾಲಯವು ಹರಿಜನರಿಗೆ ತೆರೆಲಾಯಿತು.

ಕಾಂಗ್ರೆಸು ಪ್ರಾಥಮಿಕ ಸದಸ್ಯನ ಹಕ್ಕು

ಕಾಂಗ್ರೆಸು ಪ್ರಾಥಮಿಕ ಸದಸ್ಯನು, ಪ್ರಾಂತಿಕ ಅಥವಾ ಅಖಿಲಭಾರತ ನಿರ್ಣಯದ ಕುರಿತು ತನ್ನ ವಿಮರ್ಶೆಯನ್ನು ಹೇಳಲು ಹಕ್ಕುಳ್ಳವನಾಗಿದ್ದಾನೆ. ಆದರೆ ಅದಕ್ಕೆ ವಿರುದ್ಧವಾಗಿ ಆಡುವುದು, ಪ್ರಚಾರ ಮಾಡುವುದು, ತಪ್ಪಾಗಿರುತ್ತದೆ. ಹೀಗೆಂದು ನೆಹರುಗಳು ಹೇಳುತ್ತಾರೆ.

ನೆಹರುಗಳು ತಮ್ಮ ಚೈನಕ್ಕೆ ಹೋಗುವ ವಿಷಯ ದಿವಸ ನಿರ್ಧಾರ ಮಾಡಿಲ್ಲವೆಂದೂ, ಬೇರೆ ತೊಂದರೆಗಳಾಗದಿದ್ದರೆ, ಈ ತಿಂಗಳ ಅಂತ್ಯದೊಳಗೆ ತಾನು ಹೋಗಬಹುದೆಂದೂ ತಿಳಿಸುತ್ತಾರೆ.

ಜರ್ಮನಿಯ ರಾಜದ್ರೋಹದ ಶಿಕ್ಷೆಗಳು

ಜರ್ಮನಿಯ ನ್ಯಾಯಾಲಯದಲ್ಲಿ ರಾಜದ್ರೋಹ ಹಂಚಿಕೆ ಹೂಡಿದುದಕ್ಕಾಗಿ ಶಿಕ್ಷೆ ಮಾಡುವುದು ಇಂದು ಬಹಳವಾಗಿ ಕಂಡು ಬರುತ್ತದೆ. ೧೯೩೭ನೇ ಇಸವಿಯಲ್ಲಿ ೨೬೪ ಶಿಕ್ಷೆಗಳು ಆಗಿವೆ. ಅವುಗಳಲ್ಲಿ ಹೆಚ್ಚಿನವುಗಳಿಗೆ ಗಲ್ಲಿಗೇರಿಸುವ ಶಿಕ್ಷೆಯೇ ವಿಧಿಸಲಾಗಿದೆ. ಇದು ಜರ್ಮನಿಯ ನ್ಯಾಯಾಲಯದ ಪ್ರೆಸಿಡೆಂಟ್ ಹೆರ್ ಥೇರಕ್ ಇವರಿಂದಲೇ ನ್ಯಾಯಾಲಯಗಳ ಚತುರ್ಥ ವಾರ್ಷಿಕ ಪರಿಷತ್ತಿನ ಭಾಷಣದಲ್ಲಿ ಹೇಳಲ್ಪಟ್ಟ ಸಂಖ್ಯೆಗಳು. ಇದೀ ರಾಜಕೀಯ ಮತವನ್ನೇ ದ್ವೇಷಿಸುವ ಜನರು ಅಲ್ಲಿ ಇರುತ್ತಾರಲ್ಲದೆ ರಾಜಕೀಯ ಪಕ್ಷದ ಧುರೀಣರನ್ನು ಕೊಲ್ಲುವ ಹಂಚಿಕೆಯನ್ನು ಮಾಡಿದ ಒಂದೇ ಒಂದು ಆಪಾದನೆಯಾದರೂ ಬರಲಿಲ್ಲವಂತೆ. ರಾಜಕೀಯ ಪಕ್ಷದ ಕುರಿತು ವಿರುದ್ಧಾಭಿಪ್ರಾಯ ಹೇಳಬಹುದು, ಆದರೆ ವ್ಯಕ್ತಿಗಳ ಮೇಲೆ ದ್ವೇಷ ವಿರಬಾರದೆಂದು ಹಿಟ್ಲರನ ಪ್ರಜೆಗಳಿಗೂ ಗೊತ್ತುಂಟು!

ಹೊಸ ವಾರ್ತೆ

ಅಧಿಕಾರಿಗಳ ವರ್ತನೆಯ ಬಗ್ಗೆ ಅಸಂತೃಪ್ತಿಯಿಂದ ಜಯಪುರ ಸೆರೆಮನೆಯಲ್ಲಿರುವ ಸೇಟ್ ಜಮ್ನಾಲಾಲಬಜಾಜರು ದಿನಂಪ್ರತಿ ಆಸ್ಪತ್ರೆಗೆ ಹೋಗುವುದನ್ನು ನಿಲ್ಲಿಸಿದ್ದಾರೆ. ಮೊಣಕಾಲಿನ ನೋವಿಗೆ ಕೊಡುವ ಇಲೆಕ್ಟ್ರಿಕ್ ಪ್ರಯೋಗವು ಆಗುವುದಿಲ್ಲ.

★

ರಾಮಲೀಲಾ ಸಮಿತಿಯವರು ಕಟ್ಟಿಸುವ ಗೋಡೆಯೊಂದರ ಕುರಿತು ಮುಸಲ್ಮಾನರು ಆಕ್ಷೇಪಿಸಿದ ನಿಮಿತ್ತ ವಿವಾದವಾಗಿ ಅಲ್ಲಹಾಬಾದಿನಲ್ಲಿ ಹಿಂದೂ ಮುಸ್ಲಿಂ ಗಲಭೆಯುಂಟಾಗಿದೆ.

★

ಸುಭಾಸರ ಫಾರ್ವರ್ಡ್ ಬ್ಲಾಕು ಕಾಂಗ್ರೆಸಿನ ಶತ್ರುವೆಂದೂ, ಅನ್ಯಾಯ, ಅನೀತಿಯ ಸಂಸ್ಥೆಯೆಂದೂ ಶ್ರೀ ಸತ್ಯಮೂರ್ತಿಯವರು ಟೀಕಿಸುತ್ತಾರೆ.

★

ದಿಲ್ಲಿಯಲ್ಲಿ ರಾಷ್ಟ್ರಧ್ವಜ ವಂದನೆಯಾಗಲು ಪೋಲೀಸರು ಬಂದು ಗುಂಪನ್ನು ಚದರಿಸಿ, ಅದು ಆಗದಂತೆ ತಡೆದರು.

★

ಬಂಗಾಳ ಸರಕಾರವು ಐದು ಮಂದಿ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಿದೆ.

★

ಮಹಾತ್ಮಾಜಿಯವರು ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಯ ಕುರಿತು ಬಂಗಾಳದ ಸರಕಾರವನ್ನು 'ಕೈದಿಗಳ ಸಂಕಷ್ಟವನ್ನು ಕೂಡನೆ ಗಮನಿಸಬೇಕಾಗಿ' ಹೇಳಿಕೊಂಡಿದ್ದಾರೆ.

★

'ಯಾರೊಡನೆಯಾದರೂ ನಾವು ದ್ವೇಷವಿಟ್ಟಿಲ್ಲ ಆದರೆ ನಮ್ಮನ್ನು ಪ್ರತ್ಯಕ್ಷವಾಗಲಿ, ಅಪ್ರತ್ಯಕ್ಷವಾಗಲಿ ಎದುರಿಸುವವರೊಡನೆ ನಾವು ಖಂಡಿತ ಯುದ್ಧ ಹೂಡದಿರಲಾರೆವು' ಎಂದು ಪೋಲೆಂಡಿನ ಸಿಥಾರ್ನಿಯದ ಕುರಿತು ಮಾರ್ಶಲ್ ಸ್ಮಿಗ್ಲಿರಿಗ್ಲರು ಹೇಳುತ್ತಾರೆ.

★

ಮಾದ್ರಿಡಿನ ಸಿವಿಲ್ ಗಾರ್ಡಿನ ಇನ್‌ಸ್ಪೆಕ್ಟರನಾದ ಮೋಜರ್ ಗಾಬಾಲ್ಡನ್ ಎಂಬವನನ್ನು ಕೊಂಡ ಕಾರಣವೆಂಬ ನಿಮಿತ್ತದಿಂದ ಜನರಲ್ ಫ್ರಾಂಕೋ ೫೩ ಮಂದಿಯನ್ನು ಕೊಂದು ಸೇಡು ತೀರಿಸಿದನು.

★

ದಕ್ಷಿಣ ಆಫ್ರಿಕದ ಹಿಂದೀಯರ ಪರಿಸ್ಥಿತಿಯ ಸುಧಾರಣೆಯ ವಿಷಯ ಆಲೋಚಿಸಲು, ಭಾರತ ಸರಕಾರ ಮತ್ತು ಅಲ್ಲಿನ ಯೂನಿಯನ್ ಸರಕಾರಗಳೊಳಗೆ ದುಂಡು ಮೇಜಿನ ಪರಿಷತ್ತು ಆಗುವುದಿಲ್ಲವೆಂದು ಅಲ್ಲಿನ ಮಂತ್ರಿಗಳ ಹೇಳಿಕೆ.

★

ಪ್ರಧಾನ ಮಂತ್ರಿ ರಾಜಾಜಿಯವರು ಹರಿಜನ ದೇವಾಲಯ ಪ್ರವೇಶ ಮಸೂದೆಯನ್ನು ಎಸೆಂಬ್ಲಿಯ ಮುಂದೆ ತಂದಿದ್ದಾರೆ.

ರೋಮನ್ ಕೆಥೋಲಿಕನು ಹಿಂದುವಾದನು

ಕಳೆದ ತಾ. ೩ನೇ ಶನಿವಾರ ಇಲ್ಲಿಯ ಫೋರ್ಟು ಆರ್ಯಸಮಾಜದಲ್ಲಿ ಮಾರ್ಕ್ ಡಿ'ಸೋಜ ಎಂಬ ಮಂಗಳೂರಿನ ಓರ್ವ ಜನ್ಮತಃ ರೋಮನ್ ಕೆಥೋಲಿಕರಾಗಿದ್ದ ಯುವಕರನ್ನು ವೈದಿಕ ರೀತ್ಯಾನುಸಾರ ಶುದ್ಧಿ ಮಾಡಿ "ಅಶೋಕ ಚಂದ್ರ ರೈ" ಎಂಬ ಹೆಸರನ್ನಿಡಲಾಯಿತು. ತಾನು ತನ್ನ ದೇಶ ತಥಾ ಆರ್ಯ ದರ್ಮದ ನಿಜವಾದ ಸೇವೆಯನ್ನು ಮಾಡುವ ಇಚ್ಛೆಯಿಂದಲೇ ವೈದಿಕ ಧರ್ಮವನ್ನು ಸ್ವೀಕರಿಸಿದೆನೆಂದು ಶುದ್ಧಿಯನಂತರ ಅವರು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ತದನಂತರ ಪಂಡಿತ ಸತ್ಯಾರ್ಥಿ, ಹರಿಪ್ರಸಾದ್ ಕಾಲ್ಯಾಡ್, ದಾಮೋದರ ಕಾಂಚನರೇ ಮೊದಲಾದವರು ಶುದ್ಧಿಯ ಮಹತ್ವದ ಕುರಿತು ಭಾಷಣಗೈದರು.

ಮಂಗಳೂರು ಸಮಾಚಾರ

ಭಾಷಣ

ಸ್ಥಳೀಯ ಕೆಥೊಲಿಕ್ ಕ್ಲಬ್ಬಿನಲ್ಲಿ, ಕಥೋಲಿಕ್ ಯೂನಿಯನ್ ಮತ್ತು ಹೆಲ್ತ್ ಎಂಡ್ ವೆಲ್‌ಫೇರ್ ಅಸೋಸಿಯೇಶನ್‌ಗಳ ಆಶ್ರಯದಲ್ಲಿ, ಕಳೆದ ಶನಿವಾರ ಸಂಜೆ ೫||ಗೆ ಸರಿಯಾಗಿ ಡಾ| ಎಂ ಉಮೇಶರಾವ್, ಎಲ್. ಎಂ. ಎಂಡ್ ಎಸ್, ಟಿ. ಡಿ ಡಿ. (ವೇಲ್ಸ್)ರವರು ಕ್ಷಯರೋಗದ ವಿಷಯ ಭಾಷಣವಿತ್ತರು. ಕೇಪ್ಟನ್ ಸಿ ಆರ್. ನಾಯ್ಡು, ಎಂ. ಬಿ, ಸಿ. ಎಂ.ರವರು ಅಧ್ಯಕ್ಷತೆ ವಹಿಸಿದ್ದರು.

ವಿದಾಯ ಸತ್ಕಾರ

ಕಳೆದ ೨೫ ವರ್ಷಗಳ ಅವಿಶ್ರಾಂತ ಸೇವೆ ಸಲ್ಲಿಸಿ ನಿವೃತ್ತರಾದ ಗವರ್ನಮೆಂಟ್ ಕಾಲೇಜ್ ಟ್ರೈನಿಂಗ್ ಮತ್ತು ಹೈಸ್ಕೂಲು ವಿಭಾಗಗಳ ಹೆಡ್ಮಾಸ್ತರರಾದ ಶ್ರೀ| ರಾಮಚಂದ್ರ ಪೈಯವರಿಗೆ, ಕಾಲೇಜಿನ ಟ್ರೈನಿಂಗ್ ಸೆಕ್ಷನ್‌ನವರು ಕಳೆದ ಗುರುವಾರದ ದಿನ ಒಂದು ವಿದಾಯ ಸತ್ಕಾರವನ್ನಿತ್ತು ಮನ್ನಿಸಿದರು. ಕಾಲೇಜ್ ಪ್ರಿನ್ಸಿಪಾಲರಾದ ಶ್ರೀ| ಕೆ ಎಸ್. ಯು. ನಾಯರ್‌ರವರು ಅಧ್ಯಕ್ಷತೆ ವಹಿಸಿದ್ದರು

ದ. ಕ. ಜಿಲ್ಲಾ ಪ್ರೆಸ್ ಕೆಲಸಗಾರರ ಸಂಘ

ಇದರ ಎರಡನೇ ವಾರ್ಷಿಕೋತ್ಸವವು, ಕಳೆದ ಆದಿತ್ಯವಾರ ಸಂಜೆ, ಫೆಲಿಕ್ಸ್ ಪೈ ಬಜಾರಿನಲ್ಲಿ ಶ್ರೀ. ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು

ವಿದ್ಯಾರ್ಥಿಗಳ ಕರ್ತವ್ಯ

ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಕಳೆದ ಬುಧವಾರ, ಮಂಗಳೂರು ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ, ಶ್ರೀ| ವಿ. ಜೆ. ಜೋಸೆಫರ ಅಧ್ಯಕ್ಷತೆಯಲ್ಲಿ, ಗವರ್ನಮೆಂಟ್ ಕಾಲೇಜ್ ಪ್ರಿನ್ಸಿಪಾಲರಾದ ಶ್ರೀ| ಕೆ. ಎಸ್. ಯು. ನಾಯರ್‌ರವರು 'ವಿದ್ಯಾರ್ಥಿಗಳ ಕರ್ತವ್ಯ'ದ ಕುರಿತಾಗಿ ಭಾಷಣವಿತ್ತರು

ಉಪಾಧ್ಯಾಯರ ಸಭೆ

ಮಂಗಳೂರಿನ ಉತ್ತರ ಸೆಂಟರ್ ಉಪಾಧ್ಯಾಯರ ಸಂಘದ ಆಶ್ರಯದಲ್ಲಿ ಸಭೆಯೊಂದು ಬೋಳೂರು ಮುನ್ಸಿಪಲ್ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ, ಕಳೆದ ಶನಿವಾರ ಶ್ರೀ| ಉಡುಪಿ ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ| ಎ ಭೋಜರಾಯರು ವಾರ್ಧಾ ಶಿಕ್ಷಣಯೋಜನೆಯ ಪ್ರಕಾರ ಕೃಷಿಯ ಮೂಲಕ ಗಣಿತ ಶಾಸ್ತ್ರವನ್ನು ಬೋಧಿಸುವ ವಿಷಯವಾಗಿ ಭಾಷಣವಿತ್ತರು.

ವಿದ್ಯಾರ್ಥಿಗಳ ಫೆಡರೇಶನ್

ಮಂಗಳೂರು ವಿದ್ಯಾರ್ಥಿಗಳ ಸಂಘದ ಉಪಾಧ್ಯಕ್ಷರಾದ ಶ್ರೀ| ಬಿ ಎಸ್ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಸೇರಿತು ಮುಂದಿನ ವರ್ಷಕ್ಕೆ ಕ್ರಮವಾಗಿ ಶ್ರೀ ಗಳಾದ ಡಾ| ಕೆ. ವಿಠ್ಠಲ ಶೆಟ್ಟಿ, ವಿ. ಜೆ. ಜೋಸೆಫ್, ಜೋರ್ಜ್ ಐಮನ್‌ರವರು ಅಧ್ಯಕ್ಷ, ಉಪಾಧ್ಯಕ್ಷ, ಕೋಶಾಧಿಕಾರಿಗಳಾಗಿ ಚುನಾಯಿಸಲ್ಪಟ್ಟರು. ವರ್ಕಿಂಗ್ ಕಮಿಟಿಯ ಚುನಾವಣೆಯೂ ನಡೆಯಿತು.

ಡಿ ಬೋರ್ಡಿನ ಮೀಟಿಂಗ್

ನಮ್ಮ ಜಿಲ್ಲಾ ಬೋರ್ಡ್ ಮೀಟಿಂಗ್ ಅದರ ಸ್ಥಳೀಯ ಸಭಾಭವನದಲ್ಲಿ ಇದೇ ತಾ. ೧೪ನೇ ಸೋಮವಾರ ಪ್ರಾತಃ ಗಂಟೆ ೧೧ರಿಂದ ನಡೆಯುವುದು.

ಉಪನ್ಯಾಸ

ಯುನಿವರ್ಸಿಟಿ ಎಕ್ಸ್‌ಟೆನ್‌ಶನ್ ಬೋರ್ಡಿನ ಆಶ್ರಯದಲ್ಲಿ, ಡಾ| ಯಂ. ಉಮೇಶರಾಯರು 'ಟ್ಯೂಬರ್ ಕ್ಯುಲೋಸಿಸ್ ಎಂಡ್ ಸಿಟಿಝನ್' ಎಂಬ ವಿಷಯದಲ್ಲಿ ಇದೆ ತಾ. ೯ನೇ ಬುಧವಾರ ಸಾಯಂ. ೫ ಘಂಟೆಗೆ ಸೈಂಟ್ ಅಲೋಸಿಯಸ್ ಕಾಲೇಜಿನ ಭವನದಲ್ಲಿ ಉಪನ್ಯಾಸವಾಡಿದರು.

ವಿದ್ಯಾನಿಯಮ

ಸರಕಾರದವರು ಉಪಾಧ್ಯಾಯರು ಚುನಾವಣೆಗಳಲ್ಲಿಯೂ, ರಾಜಕೀಯ ಚಳವಳಿಗಳಲ್ಲಿಯೂ ಭಾಗವಹಿಸದ ಹಾಗೆ ವಿದ್ಯಾನಿಯಮಗಳನ್ನು ಮಾಡಿದ ಬಗ್ಗೆ ಉಪಾಧ್ಯಾಯ ಸಂಘದವರು ಕಳೆದ ವಾರ ಗಣಪತಿ ಶಾಲೆಯಲ್ಲಿ ಸಭೆ ಜರಗಿಸಿ ಸರಕಾರದ ವರ್ತನೆಯನ್ನು ನಿಷೇಧಿಸಿದರು.

ಉಪಾಧ್ಯಾಯರ ಸಭೆ

ಕಳೆದ ತಾ. ೩ರಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಜರಗಿದ ಸಭೆಯಲಿ ಈ ಪ್ರಶ್ನೆಗಳ ವಿಷಯದಲ್ಲಿ ಹೆಡ್ಮಾಸ್ತರರುಗಳು ಅಭಿಪ್ರಾಯ ಸೂಚಿಸಬೇಕೆಂದು ನಿರ್ಣಯವಾಯಿತು (ಎ) ಹೈಸ್ಕೂಲಿನಲ್ಲಿ ಇಂಗ್ಲಿಷ್ ಕಲಿಸುವುದು ವಾರ್ತಾಪತ್ರಿಕೆಗಳಲ್ಲಿ ಬರುವ ಇಂಗ್ಲಿಷಿಗಿಂತ ಹೆಚ್ಚಿನ ಮಟ್ಟದಲ್ಲಿರಬೇಕೆ? (ಬಿ) ವಿದ್ಯಾರ್ಥಿಯ ಇಂಗ್ಲಿಷ್ ಪರಿಜ್ಞಾನವನ್ನು ಪರೀಕ್ಷಿಸಲು ಒಂದು ಪ್ರಶ್ನೆ ಪೇಪರ್ ಸಾಲದೆ? (ಸಿ) ಸಣ್ಣ ವಿಷಯವನ್ನು ವಿಸ್ತರಿಸಿ ಹೇಳುವುದು, ತಾತ್ಪರ್ಯ ಕೊಡುವುದು ಇತ್ಯಾದಿಗಳಿಂದ ತಿಳುವಳಿಕೆಯನ್ನು ಪರೀಕ್ಷಿಸಬಹುದಾದ್ದರಿಂದ ಪಠ್ಯ ಪುಸ್ತಕದಿಂದ ಪ್ರಶ್ನೆ ಕೇಳುವ ಅಗತ್ಯವಿದೆಯೇ? ಮತ್ತು (ಡಿ) ವ್ಯಾಕರಣ ಕಲಿಸತಕ್ಕದ್ದು ಅಗತ್ಯವೇ?

ದೀನಬಂಧು ಅನಾಥಾಶ್ರಮಕ್ಕೆ ಉದಾರ ದಾನ

ಮಂಗಳೂರಿನ ದೀನಬಂಧು ಅನಾಥಾಶ್ರಮಕ್ಕೆ ಮುಂಡ್ಕೂರಿನ ಗುತ್ತು ರಾಮಕ್ಕ ಶೆಟ್ಟಿಯವರು ಶ್ರೀಯುತ ಬಿ ಟಿ. ರೈಗಳ ಮುಖಾಂತರ ರೂ ೫ನ್ನು ನಗದಾಗಿ ದಾನ ಮಾಡಿರುತ್ತಾರಾಗಿ ತಿಳಿಸುವರೆ ತುಂಬ ಸಂತೋಷವಡುತ್ತೇವೆ.

ತಿಲಕರ ಪುಣ್ಯ ದಿನಾಚರಣೆ

ಇಲ್ಲಿಯ ವಿದ್ಯಾರ್ಥಿಭವನದ ವಿದ್ಯಾರ್ಥಿವೃಂದದ ಸಭೆಯು ಕಳೆದ ತಾ. ೧ರಲ್ಲಿ ಶ್ರೀ| ವೆಂಕಟಕೃಷ್ಣರಾಯರ ಅಧ್ಯಕ್ಷತೆಯಲ್ಲಿ, ತಿಲಕರ ಪುಣ್ಯ ದಿನಾಚರಣೆ ನೆರವೇರಿಸುವುದಕ್ಕಾಗಿ ಜರಗಿತು.

ಮಂಗಳೂರು ಬೀಡಿ ಲೇಬರ್ ಪರಿಷತ್ತು

ತಾ ೭ರಂದು ರಾತ್ರೆ ಸ್ಥಳೀಯ ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ, ಕಲ್ಲಿಕೋಟೆಯ ಶ್ರೀ ಎಚ್ ಮಂಜುನಾಥಯ್ಯರವರ ಅಧ್ಯಕ್ಷತೆಯಲ್ಲಿ ಬೀಡಿ ಲೇಬರ್ ಪರಿಷತ್ತು ವಿಜೃಂಭಣೆಯಿಂದ ಜರಗಿತು

ಹಿಂದುಸ್ಥಾನ್ ಸ್ಕೌಟ್ ಅಸೋಸಿಯೇಶನ್

ನಗರದ ಅನೇಕ ಸ್ಕೌಟ್ ದಳಗಳು ಮೇಲಿನ ಎಸೋಸಿಯೇಶನನ್ನು ಸೇರಿದೆ ಜಿಲ್ಲೆಯ ಎಲ್ಲಾ ದಳಗಳು ಇದನ್ನು ಸೇರುವುದೆಂದು ನಿರೀಕ್ಷಣೆಯಿದೆ

ತಾಲೂಕು ಸಮಾಚಾರ

ಉಡುಪಿ:—ತಾ. ೨ಲಕ್ಕೆ ಜರಗಿದ ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಭೆಯಲ್ಲಿ ಕಡ್ಡಾಯ ಶಿಕ್ಷಣದ ವಿಷಯ ಆಲೋಚಿಸಲಾಗಿ, ತೆಂಕಪೇಟೆ ವಾರ್ಡಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡುವದರ ವಿಷಯ ಜಿಲ್ಲಾ ವಿದ್ಯಾಧಿಕಾರಿಗಳ ಅಭಿಪ್ರಾಯವನ್ನು ಪಡೆಯಬೇಕೆಂದಾಯಿತು

ತಾ. ೨೭ಕ್ಕೆ ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಸಾಧಾರಣ ಸಭೆಯು ನಗರಾಧ್ಯಕ್ಷರ ಗೈರ ಹಾಜರಿಯಲ್ಲಿ ಶ್ರೀ. ಎಲ್ ಎಸ್. ನಾಯಕರ ಅಧ್ಯಕ್ಷತೆಯಲ್ಲಿ ಜರಗಿ, ೧೯೩೮–೧೯೩೯ನೆ ವರ್ಷದ ಆಡಳಿತದ ವರದಿಯು ಮಂಜೂರು ಮಾಡಲ್ಪಟ್ಟಿತು.

ತಾ. ೨೯ಕ್ಕೆ ಉಡುಪಿ ತಾಲೂಕು ಏಡೆಡ್ ಶಾಲೆಗಳ ಉಪಾಧ್ಯಾಯರ ಮಹಾಸಭೆಯು ಶಾಲಾ ಡಿಪ್ಯುಟಿ ಇನ್ಸ್ಪೆಕ್ಟರರಾದ ಶ್ರೀ. ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ನೆರೆಯಿತು. ಸದ್ರಿ ಉಪಾಧ್ಯಾಯರ ಸಂಘವೊಂದು ಸ್ಥಾಪನೆಯಾಗಿ; ಶ್ರೀ ಎಸ್ ಫೆರ್ನಾಂಡೀಸರು ಅಧ್ಯಕ್ಷರಾಗಿಯೂ, ಶ್ರೀ. ಬಿ ಆನಂದರಾಯರು ಕಾರ್ಯದರ್ಶಿಯರಾಗಿಯೂ, ಶ್ರೀ ಸಿ ಅನಂತ ಶೆಣೈಯವರು ಕೋಶಾಧಿಕಾರಿಯಾಗುಳ್ಳ ಮತ್ತು ಕೆಲ ಸದಸ್ಯರನ್ನೊಳಗೊಂಡ ಕಾರ್ಯಕಾರಿ ಮಂಡಳಿಯು ಆರಿಸಲಾಯಿತು. ತಿಂಗಳು ಸಂಬಳ ಬಟವಾಡೆಯಾಗುವ ಏಡೆಡ್ ಶಾಲಾ ಮಾಸ್ತರರಿಗೆ ಸರಕಾರವು ಗ್ರಾಂಟನ್ನು ಪ್ರತಿ ತಿಂಗಳಲ್ಲಿ ಸೀದಾ ಉಪಾಧ್ಯಾಯರಿಗೆ ಕೊಡಿಸುವಂತೆಯೂ ಉಪಾಧ್ಯಾಯರ ಮಾನವನ್ನೂ ಬೋರ್ಡ್ ಶಾಲಾ ಉಪಾಧ್ಯಾಯರದ್ದಕ್ಕೆ ಸಮಾನಗೊಳಿಸಬೇಕಾಗಿಯೂ ಸದ್ರಿ ಉಪಾಧ್ಯಾಯರಿಗೆ ರಜಾ ನಿಬಂಧನೆಗಳನ್ನು ರಚಿಸಬೇಕಾಗಿಯೂ ಸರಕಾರವನ್ನು ಕೇಳಿಕೊಳ್ಳಬೇಕೆಂದು ನಿರ್ಣಯಗಳಾದವು ತಾಲೂಕು ಎಡ್ಯುಕೇಶನ್ ಕಮಿಟಿಯಲ್ಲಿ ಸದ್ರಿ ಉಪಾಧ್ಯಾಯರಿಗೆ ಪ್ರಾತಿನಿಧ್ಯವಿರಬೇಕಾಗಿ ಸರಕಾರವನ್ನು ಕೇಳಿಕೊಂಡು ಠರಾವಾಯಿತು ಶ್ರೀ ಎಮ್ ವಿಠ್ಠಲ ಕಾಮತರು ಹಾಜರಿದ್ದರು

ಕಳವು:—ಸರಾಲು ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಕಳೆದ ತಾ: ೨೬ನೇ ರಾತ್ರಿ ಸಾಧಾರಣ ಒಂದು ಸಾವಿರ ರೂಪಾಯಿಗೂ ಮಿಕ್ಕಿ ಬೆಲೆಬಾಳುವ ಚಿನ್ನಾಭರಣಗಳು ಕಳವು ಆದುವೆಂದು ತಿಳಿದುಬರುತ್ತದೆ. ಇತ್ತೀಚೆಗೆ ಬ್ರಹ್ಮಗಿರಿಯ ಶ್ರೀ ಗಡಹದ್ ರಾಮಕೃಷ್ಣರಾಯರ ಮನೆಯಲ್ಲಿಯೂ ಕಳ್ಳತನ ನಡೆದಿದ್ದು ಹೆಚ್ಚು ಕಡಿಮೆ ಒಂದು ಸಾವಿರ ರೂಪಾಯಿ ಬೆಲೆಬಾಳತಕ್ಕ ನಗನಾಣ್ಯಗಳು ಕಾಣೆಯಾಗಿವೆಯಂತೆ.

ಆದಿ ದ್ರಾವಿಡರ ಸುಧಾರಿತ ಮದುವೆ:—ಇತ್ತೀಚೆಗೆ ಉಪ್ಪಿ 'ಚಂಗಮ ಮರದಲ್ಲಿ' ದ ಕ. ಜಿಲ್ಲಾ ಉಡುಪಿ ಕ್ಷೇತ್ರದಲ್ಲಿರುವ 'ಶಿವ ಸಮಾಜ'ದ ವತಿಯಿಂದ ಆದಿ ದ್ರಾವಿಡರ ಎರಡು ಮದುವೆಗಳು ಅಲ್ಪ ಖರ್ಚಿನಲ್ಲಿ ಬಹು ಉತ್ಕೃಷ್ಟ ರೀತಿಯಲ್ಲಿ ಜರಗಿದವು. ಇದಕ್ಕೆ ಸಮಾಜದ ಕಾರ್ಯದರ್ಶಿಯವರಾದ ಶ್ರೀ ರಾಮಚಂದ್ರ ಮಾಸ್ತರರ ಪರಿಶ್ರಮವೇ ಕಾರಣವೆಂದು ತಿಳಿದುಬರುತ್ತದೆ.

ಕಾರ್ಕಳ

ಮಂಗಳೂರಿನ ಶ್ರೀ ಯಂ ಸುಬ್ರಾಯನ್ ಶಿರೋಮಣಿ ಮತ್ತು ವಿದ್ವಾನ್, ಇವರು ಕಾರ್ಕಳದ ಭುವನೇಂದ್ರ ಸಂಸ್ಕೃತ ಮಹಾ ವಿದ್ಯಾಲಯದ ಜ್ಯೋತಿಷ–ಅಧ್ಯಾಪಕರಾಗಿ ನೇಮಕ ಹೊಂದಿ ತಾ. ೧–೮–೩೯ರಲ್ಲಿ ಕೆಲಸಕ್ಕೆ ಸೇರಿರುತ್ತಾರೆ.

ಪಡು ಪಣಂಬೂರು ಬೋ ಶಾಲಾ ಮುಖ್ಯೋಪಾಧ್ಯಾಯರಿಗೆ ವಿದಾಯ: ಊರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತನು ಮನ ಧನ ವ್ಯಯಿಸಿ ಊರವರ ಹಾಗೂ ಮಕ್ಕಳ ಪ್ರೀತಿಗೆ ಪಾತ್ರರಾಗಿದ್ದ ಇಲ್ಲಿಯ ಶಾಲಾ ಮುಖ್ಯೋಪಾಧ್ಯಾಯರಿಗೆ ವರ್ಗವಾದುದರಿಂದ ಇಲ್ಲಿನ ಜನ ಸಮುದಾಯಕ್ಕೆ ಬಹಳ ವ್ಯಸನ ಉಂಟಾಗಿದೆ ಜನರು ಅವರಿಗೆ ಯೋಗ್ಯ ವಿದಾಯವಿತ್ತರು ವಿದ್ಯಾರ್ಥಿಗಳು ಪ್ರೇಮಪೂರ್ವಕವಾಗಿ ಒಂದು ರೇಶ್ಮೆಮುಡಿ ಮತ್ತು ಶಾಲನ್ನೂ, ಬಾಲವೀರ ದಳದವರು ಒಂದು ಶಾಲನ್ನೂ ಸಮರ್ಪಿಸಿ ಶ್ರೀಯುತರ ಆಯುರಾರೋಗ್ಯವನ್ನೂ ಪುನರಾಗಮನವನ್ನೂ ಕೋರಿದರು

ಕೊಡವೂರು:—ಕೊಡವೂರಿನ ಗ್ರಾಮಸ್ಥರು ಕೆಲವರು ಸೇರಿ ಸಾರ್ವಜನಿಕರ ಉಪಯೋಗದ ಸಲುವಾಗಿ ಕೊಡವೂರು ಸುಬ್ರಾಯನ್ ರೋಡುಗಳು ಸಂಧಿಸುವಲ್ಲಿ ಸುಂದರವಾಗಿ ಕಟ್ಟಿಸಿದ ಬಾವಿಯ ಉದ್ಘಾಟನಾ ಸಮಾರಂಭವು ಇದೇ ತಾ ೨–೮–೩೯ರಲ್ಲಿ ಪಂಟೆ ೫—೩೦ಕ್ಕೆ ಸರಿಯಾಗಿ ಮಾನ್ಯ ಜಿಲ್ಲಾ ಬೋರ್ಡು ವೈಸ್ ಪ್ರೆಸಿಡೆಂಟರಾದ ಶ್ರೀ. ಅರೂರು ಲಕ್ಷ್ಮೀ ನಾರಾಯಣರಾಯರ ಹಸ್ತದಿಂದ ಅತ್ಯಂತ ಸಂಭ್ರಮದಿಂದ ನೆರವೇರಿಸಲ್ಪಟ್ಟಿತು ಈ ಸಂದರ್ಭದಲ್ಲಿ ಶಾಲಾ ಡಿಪ್ಟಿ ಇನ್ಸ್‌ಪೆಕ್ಟರರು, ಶ್ರೀಮಾನ್ ಸಂಜೀವರಾಯರು ಉಪಸ್ಥಿತರಾಗಿದ್ದರು.

ಕಾಸರಗೋಡು

ಮುಳಿಯಾರು:— ಕಲ್ಯಾಣಪುರದ ಸಬ್ ಡಿವಿಜನಿನ ಅಂಚೆ ಇಲಾಖೆಯ ಇನ್ಸ್‌ಪೆಕ್ಟರರು ಕಳೆದ ತಾ ೨೭ರಲ್ಲಿ ಇಲ್ಲಿಯ ಅಂಚೆ ಆಫೀಸಿನ ಇನ್ಸ್‌ಪೆಕ್ಷನ್ ಮುಗಿಸಿ ಬ್ರಾಂಚ್ ಪೋಸ್ಟ್ ಮಾಸ್ಟರ್, ಶ್ರೀ ಬೋರಿಕಾನ ನಾರಾಯಣ ನಾಯಕರು ರಾಜಿಕೊಟ್ಟ ಸ್ಥಾನದಲ್ಲಿ ಸದ್ರಿ ಗ್ರಾಮದ ಶ್ರೀ| ಎಮ್ ಕೃಷ್ಣ ಬಳ್ಳುಳ್ಳಾಯರನ್ನು ನೇಮಿಸಿದರು

ಉಪ್ಪಿನಂಗಡಿ

ಕಳವು:—ಇಲ್ಲಿಗೆ ಸುಮಾರು ಐದು ಮೈಲು ದೂರದಲ್ಲಿರುವ ತಣ್ಣೀರು ಪಂತ ಗ್ರಾಮದ ಒಬ್ಬ ಬ್ರಾಹ್ಮಣನ ಮನೆಗೆ ಕಳೆದ ತಾ ೩೦ನೇ ರಾತ್ರಿ ಕಳ್ಳರು ನುಗ್ಗಿ ನಿದ್ರಿಸುತ್ತಿದ್ದ ಸತಿಪತಿಯರಿಬ್ಬರನ್ನೂ ಕಟ್ಟಿಹಾಕಿ ಇದ್ದ ಹಣ ಮತ್ತು ಬೇರೆ ಕೆಲವು ಸಾಮಾನುಗಳನ್ನು ದೋಚಿಕೊಂಡು ಹೋಗಿರುವರೆಂದೂ ಸುಮಾರು ರೂ ೧೫೦ರಷ್ಟು ಕಾಣೆಯಾಗಿದೆಯೆಂದೂ ಸುದ್ದಿ

ಬೈಂದೂರು

ಬರೋಡದ ಸಂಗೀತ ನಿಪುಣ ಜನಾಬ್ ಉಸ್ತಾದ್ ಫಯ್ಯಾಜ್ ಖಾನರ ಶಿಷ್ಯ ಶ್ರೀ ಪುರುಷೋತ್ತಮಲಾಲ್ ಎಂಬವರು, ತಾ. ೮ನೇ ಶುಕ್ರವಾರ ಸ್ಥಳೀಯ ಮಾಧ್ಯಮಿಕ ಶಾಲೆಯಲ್ಲಿ ಸಂಗೀತ ಕಲೆಯ ಕೌಶಲ್ಯವನ್ನು ಪ್ರದರ್ಶಿಸಿದರು. ಜನಸ್ತೋಮವು ಕಿಕ್ಕಿರಿದಿದ್ದಿತು.

ಕರ್ನಾಟಕ ಸಮಾಚಾರ

ಬೆಂಗಳೂರು

ಮೈಸೂರು ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಮ್ಮೇಳನ

ಅಖಿಲಭಾರತ ಮೈಸೂರು ಶಾಖೆಯ ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಮ್ಮೇಳನವು ಮೈಸೂರಿನಲ್ಲಿ ಶ್ರೀಯುತ ಕೆ ಟಿ ಭಾಷ್ಯಂ ಅಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಯುತ ಹೆಚ್ ಸಿ ದಾಸಪ್ಪನವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಮೈಸೂರಿನ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಹೆಚ್ ಸಿ ದಾಸಪ್ಪನವರು ಕಾಂಗ್ರೆಸ್ ತ್ರಿವರ್ಣ ಧ್ವಜವನ್ನೂ, ಶ್ರೀ ಕೆ ಟಿ. ಭಾಷ್ಯಂ ಅಯ್ಯಂಗಾರ್ಯರವರು ಮೈಸೂರು ಧ್ವಜವನ್ನೂ ಹಾರಿಸಿದರು

ಶ್ರೀಯುತ ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರವರು ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡಿ ಸೈನಿಕನು ತೋರಿಸುವ ವಿಧೇಯತೆಯನ್ನು ಕಾಂಗ್ರೆಸು ಕೆಲಸಗಾರರು ತೋರಿಸಬೇಕು. ಮೈಸೂರಿನಲ್ಲಿ ನಡೆದಿರುವ ಹೋರಾಟ ಅತ್ಯಲ್ಪವಾದುದು ಇನ್ನೂ 'ಅಧಿಕವಾಗಿ ಕೆಲಸ ನಡೆಸಬೇಕು. ಕಾಂಗ್ರೆಸ್ಸಿನವರು ಸಂಶಯಗಳಿಗೆ ಆಸ್ಪದ ಕೊಡಬಾರದು ಎಂದರು

ಮೈಸೂರು ರಾಜಕೀಯ ಸುಧಾರಣಾ ಸಮಿತಿಯ ವರದಿಯು ತೃಪ್ತಿಕರವಾಗಿಲ್ಲವೆಂದು ಗೊತ್ತಾಗಿದೆ. ಇಂದಿನ ಕಾಂಗ್ರೆಸ್ ಮುಖಂಡರು ಯಶಸ್ವಿಯಾಗಿ ಕೆಲಸ ನಡೆಸಬೇಕು ಎಂದರು.

ಕೋಲಾರ್‌ಪೇಟೆ ಮತ್ತು ಚನ್ನಪಟ್ಟಣದ ಪಾನನಿರೋಧಕ್ರಮ

ಕೋಲಾರ್‌ಪೇಟೆ ಮತ್ತು ಚನ್ನಪಟ್ಟಣದ ತಾಲೂಕುಗಳಲ್ಲಿ ಕೆಲವು ಕಡೆ ಮದ್ಯಪಾನ ನಿರೋಧವು ಜಾರಿಯಲ್ಲಿದೆಯಷ್ಟೆ. ಕಳೆದ ಎಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ವ್ಯಾಪಾರವು ಕಡಿಮೆಯಾಗಿದೆ ೨೨೦ ಗ್ಯಾಲನ್‌ಗಳಷ್ಟು ಸಾರಾಯಿ ಕಡಿಮೆಯಾಗಿದೆ. ಶೇಂದಿ ಸಂಬಂಧವಾಗಿ ೨೦೬ ತೆಂಗಿನ ಮರಗಳು ಮತ್ತು ೩೪೦ ಈಚಲಮರಗಳು ಕಡಿಮೆಯಾಗಿದೆ.

ಕೋಲಾರ್‌ಪೇಟೆ ಊರಿನಲ್ಲಿ ಅಂಗಡಿ ಮುಚ್ಚಿರುವುದರಿಂದ ೬೨ ಸೇರುಗಳಷ್ಟು ಗಾಂಜ ಮತ್ತು ೩ ಸೇರಿನಷ್ಟು ಅಫೀಮು ಕಡಿಮೆಯಾಗಿದೆ.

ಮದ್ಯಪಾನಜಾರಿಯಲ್ಲಿರುವ ಪ್ರದೇಶದ ಅಕ್ಕಪಕ್ಕಗಳ ಅಂಗಡಿಗಳಲ್ಲಿ ಅತಿ ಹೆಚ್ಚು ವ್ಯಾಪಾರವಾಗದಿರದೆಂದು ಒಳ್ಳೆಯ ಉಸ್ತುವಾರಿ ಇದೆ.

ಆರ್ಮಿ ಇಂಡಿಯನೈಜೇಷನ್ ಕಮಿಟಿ ಬೆಂಗಳೂರಿಗೆ ಆಗಮನ

ಇಂಡಿಯಾ ಸರಕಾರದಿಂದ ನೇಮಿತವಾಗಿರುವ ಆರ್ಮಿ ಇಂಡಿಯನೈಜೇಷನ್ ಕಮಿಟಿಯವರು ಬೆಂಗಳೂರಿಗೆ ಆಗಮಿಸಿರುವರು.

ಸಿಟಿ ರೈಲ್ವೆ ನಿಲ್ದಾಣದಲ್ಲಿ ದಿವಾನರಾದ ಸರ್ ಮಿರ್ಜಾ ಎಂ ಇಸ್ಮಾಯಿಲ್‌ರವರೂ, ದ್ವಿತೀಯ ಸಚಿವರಾದ ಶ್ರೀ. ಕೆ. ಅನಂತರಾಮನ್‌ರವರೂ ಸ್ವಾಗತಿಸಿದರು

ಹರಿಜನರ ದೇವಾಲಯ ಪ್ರವೇಶ ಮಹಿಳೆಯರ ಬೆಂಬಲ

ಮೈಸೂರು ಒಂಟಿಕೊಪ್ಪಲ್ ಬಡಾವಣೆಯಲ್ಲಿರುವ ಮಾತೃಮಂಡಳಿಯ ಆಶ್ರಯದಲ್ಲಿ ಮಹಿಳೆಯರ ಸಭೆಯಲ್ಲಿ ಮದ್ರಾಸು ಆಧಿಪತ್ಯದಲ್ಲಿ ಮಧುರಾ ಮೀನಾಕ್ಷಿ ದೇವಸ್ಥಾನಕ್ಕೆ ಹರಿಜನರಿಗೆ ಪ್ರವೇಶ ದೊರೆತಿದ್ದುದಕ್ಕಾಗಿ ಅವರನ್ನೂ ಮಂತ್ರಿಮಂಡಳಿಯನ್ನೂ ಅಭಿನಂದಿಸಿಯೂ, ಮೈಸೂರು ಸರಕಾರದವರು ಕೂಡ ಹರಿಜನರಿಗೆ ದೇವಸ್ಥಾನ ಪ್ರವೇಶ ಸೌಕರ್ಯ ಒದಗಿಸಿಕೊಡಬೇಕೆಂದೂ ಪ್ರಾರ್ಥಿಸುವ ನಿರ್ಣಯಗಳನ್ನು ಮಾಡಲಾಯಿತು.

ಮೈಸೂರು

ಕಾಂಗ್ರೆಸ್ ಕೆಲಸಗಾರರ ಸಮ್ಮೇಳನ

ಮೈಸೂರು ಕಾಂಗ್ರೆಸ್ ಕೆಲಸಗಾರರ ಸಮ್ಮೇಳನವು ಶ್ರೀ. ವಿ. ಸಿ. ಬಂದೇಗೌಡರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ನಡೆಯಿತು. ಅಧ್ಯಕ್ಷರು ಭಾಷಣಮಾಡಿ ಮೈಸೂರಿನ ಇಂದಿನ ರಾಜಕೀಯ ಪರಿಸ್ಥಿತಿಯ ವಿಷಯವನ್ನು ವಿವರಿಸಿದರು. ಅನಂತರ ಕೆಲವು ನಿರ್ಣಯಗಳು ಪಾಸಾದವು.

ಜಪಾನು-ಇಟಲಿ-ಜರ್ಮನಿಗಳು ಒಂದಾಗುವವೇ?

ಡಾ॥ ಶಾಟರು ಜರ್ಮನಿಯಲ್ಲಿ

ಹಿಟ್ಲರನೊಡನೆ ಮಾತುಕತೆ

ಹಿಂದೂದೇಶದ ಯಾತ್ರೆಯನ್ನು ಮುಗಿಸಿದ ಡಾಕ್ಟರ್ ಎಚ್ ಶಾಟರವರು ಜರ್ಮನಿಗೆ ಮರಳಿ ಬಂದಿರುವರು. ಬಹುಶಃ ಬೇಗನೇ ಹಿಟ್ಲರನನ್ನು ಸಂದರ್ಶಿಸಲಿರುವರೆಂದು ತಿಳಿದಿದೆ.

ಮಂಗೋಲಿಯದಲ್ಲಿ ಜಗಳ

ಮಂಚುಕೋ ಮಂಗೋಲಿಯಾ ಗಡಿಯಲ್ಲಿ ರಶ್ಯಾ-ಜಪಾನು ಸೈನ್ಯಗಳೊಳಗೆ ಭಯಂಕರ ಕಾದಾಟವು ಆಯಿತು. ಸೋವಿಯಟ್ ರಶ್ಯದ ಸೈನ್ಯವು ಜಪಾನಿಯರ ಗಡಿಗಳನ್ನು ಆಕ್ರಮಿಸಲು ಬಂದುದೇ ಈ ಗೊಂದಲದ ಕಾರಣವಾಗಿ ತಿಳಿದಿದೆ

ಜಪಾನು – ಇಟಲಿ – ಜರ್ಮನಿಗಳು ಒಂದಾಗುವವೇ?

ಜಪಾನಿನ ರಾಯಭಾರಿಗಳು ರೋಮ್ ಮತ್ತು ಬರ್ಲಿನ್ ನಗರಗಳಲ್ಲಿ ಇಟಲಿ ಮತ್ತು ಜರ್ಮನ್ ಅಧಿಕಾರಿಗಳೊಡನೆ ಮಾತುಕತೆ ನಡೆಸುತ್ತಿರುವರು

ಈಜಿಪ್ಟಿನ ರಕ್ಷಣೆಗಾಗಿ ಭಾರತದ ಸೈನ್ಯ

ಹಿಂದೂದೇಶದ ಸೈನ್ಯವು ಇಜಿಪ್ಟಿನ ರಕ್ಷಣೆಗಾಗಿ ಬೇಗನೇ ಕೊಂಡೊಯ್ಯಲಾಗುವುದು ಇದಕ್ಕಾಗಿ ಭಾರತ ಸರಕಾರವು ೧೦ ಹಡಗುಗಳನ್ನು ಸಿದ್ಧಗೊಳಿಸಿದೆ ಅವುಗಳಲ್ಲಿ ಒಂದರಲ್ಲಿ ಸಾಮಾನು, ಒಂಭತ್ತು ಹಡಗುಗಳಲ್ಲಿ ಸೈನಿಕರೂ ತುಂಬಿಸಲ್ಪಡುವರು.

ಕರಾಚಿಯಿಂದ ಈಗಾಗಲೇ ಕೆಲವು ಹಡಗುಗಳು ಹೊರಟಿರುವವಾಗಿ ತಿಳಿದಿದೆ ಮಹಾಯುದ್ಧವು ಸಂಭವಿಸುವುದಾದ ಪಕ್ಷದಲ್ಲಿ, ಈಜಿಪ್ತನ್ನು ಲೈಬಿಯಾದ ಕಡೆಯಿಂದ ಇಟಲಿಯು ಅಲ್ಲಿ ಈಗಾಗಲೇ ಇಟ್ಟಿರುವ ಸೈನ್ಯದಿಂದ ಎದುರಿಸಬಹುದಾದುದರಿಂದಲೂ, ಮುಂದಕ್ಕೆ ಇಟಲಿಯು ಅಲ್ಲಿಗೆ ಹೆಚ್ಚು ಸೈನ್ಯಸಾಮಗ್ರಿಗಳನ್ನು ಕಳುಹಿಸಬಹುದಾದುದರಿಂದಲೂ ಭಾರತದಿಂದ ಈಜಿಪ್ಟಿನ ಸಹಾಯಕ್ಕಾಗಿ ಸೈನ್ಯವು ಕಳುಹಿಸಲ್ಪಡುವುದು

ಇತ್ತೀಚೆಗೆ ಜೆನರಲ್ ಗೋರಿಂಗರು ಲಿಬಿಯಕ್ಕೆ ಸಂದರ್ಶನ ಕೊಟ್ಟ ವಿಷಯದಿಂದ, ಜರ್ಮನಿ-ಇಟಲಿಗಳು ಮುಂದಕ್ಕೆ ಏನು ಮಾಡಲಿರುವವೆಂಬ ಕುರಿತು ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಬೆದರಿಕೆಯನ್ನು ಹುಟ್ಟಿಸುವಂತಾಗಿದೆ

ಅತ್ತ ಜಪಾನಿನ ಕಡೆಯಲ್ಲಿಯೂ ಬ್ರಿಟಿಷರ ಪರಿಸ್ಥಿತಿಯು ವಿಷಮವಾಗಿದೆ. ಇತ್ತೀಚೆಗೆ ಟಿನಿಸ್ಟನಿನ ವಿಷಯದಲ್ಲಿ ಚೆಂಬರ್ಲೇನರು ಜಪಾನಿಗೆ ತಲೆಬಗ್ಗಿಸಿದರೂ, ಇನ್ನು ಜಪಾನಿಯರ ಕಾಟ ತಪ್ಪಿದಿಲ್ಲ. ಅಂತೂ ಈಜಿಪ್ಟಿಗೆ ಕಳುಹಿಸುವ ಸೈನ್ಯಬಲದ ಚಲಾವಣೆಯು ಅಂತರ್‌-ರಾಷ್ಟ್ರೀಯ ಪರಿಸ್ಥಿತಿಯ ವಿಚಾರದಲ್ಲಿ ಬಹಳ ಮಹತ್ವದಾಗಿರುತ್ತದೆ

ಹೆಲಿಫಾಕ್ಸರು ಜಪಾನನ್ನು ಎಚ್ಚರಿಸುತ್ತಾರೆ

ರಶ್ಯಾಕ್ಕೆ ಸಂಧಾನದ ರಾಯಭಾರಿಗಳು

ಡಾನ್ಜಿಗನ್ನು ನುಂಗುವುದೆಂತು?

ಪ್ರೆಸಿಡೆಂಟ್ ರೂಸವೆಲ್ಟರ ಇನ್ನೊಂದು ಅಪಜಯ

ಹೌಸ್ ಒಫ್ ರಿಪ್ರೆಸೆಂಟೆಟಿವ್ಸಿನಲ್ಲಿ ಮುಂಬಂದ ಎಡ್ಮಿನಿಸ್ಟ್ರೇಶನ್ಸ್ ಲೆಂಡಿಂಗ್ ಬಿಲ್ ಎಂಬ ಮಸೂದೆಯು ೧೬೬ ಮತಗಳ ವಿರುದ್ಧ ೧೯೩ ಮತಗಳಿಂದ ಬಿದ್ದುಹೋಯಿತು

ಹೀಗೆಂದು ಈ ಬಿಲ್ಲನ್ನು ಪಾಸುಮಾಡದೆ ಇರುವುದರಿಂದ ಅಮೇರಿಕದ ತೆರಿಗೆದಾರರಿಗೆ ಮಿಲಿಯಾಂತರ ಡಾಲರುಗಳ ನಷ್ಟವಿದೆಯೆಂದೂ, ಅನೇಕ ಉದ್ಯೋಗಿಕ ಕಾರ್ಖಾನೆಗಳು ಇದರಿಂದ ಉದ್ಯೋಗವನ್ನು ನಿಲ್ಲಿಸಬೇಕಾಗುವುದೆಂದೂ ಹೇಳಿದರು ಪ್ರಜಾಪ್ರತಿನಿಧಿ ಸಂಸ್ಥೆಯು ಈಗ ಮಾಡಿದಂತೆ ಆಚರಿಸಲು ಅದಕ್ಕೆ ಸಂಪೂರ್ಣ ಅಧಿಕಾರವಿದೆ ಆದರೆ ಸಭೆಯು ಈ ನಿರ್ಣಯದಿಂದ ಪರಿಣಾಮ ಹೊಂದಿದವರು, ಹೀಗಾಗಲು, ಯಾರು ಯಾರಿಲ್ಲ ಮತಕೊಟ್ಟಿರುತ್ತಾರೆಯೆಂಬುದನ್ನು ತಿಳಿಯಲು ಜನರಿಗೂ ಅಧಿಕಾರವಿದೆಯೆಂದು ಹೇಳಿದರು

ಡಾ॥ ಬೆನೆಸರ ಆಸೆ

ಜೆಕೊಸ್ಲೊವೇಕಿಯದ ಮಾಜಿ ಅಧ್ಯಕ್ಷರಾದ ಬೆನೆಸರವರು ಇಂಗ್ಲೆಂಡಿಗೆ ಬಂದಿಳಿದಿರುವರು ೧೯ಲಂತೇ ಇಸವಿಯಲ್ಲಿ ಈಸ್ಟರ್ ಹಬ್ಬವನ್ನು ಪ್ರೇಗಿನಲ್ಲಿ ಆಚರಿಸುವುದಾಗಿ ಅವರು ಆಸೆಯಿಂದಿದ್ದಾರೆ ಬೊಹೇಮಿಯಾ ಮತ್ತು ಮೊರೇವಿಯಾಗಳ ಮೇಲೆ ಜರ್ಮನಿಯು ಅಧಿಕ ನಿರ್ಬಂಧವನ್ನು ಕೊಡುತ್ತಿರುವುದಾಗಿ ತಿಳಿದಿದೆ.

ಡಾನ್ಜಿಗನ್ನು ನುಂಗುವುದೆಂತು?

ಯುದ್ಧವು ಆರಂಭವಾಗದೆ ಡಾನ್ಜಿಗನ್ನು ಹೇಗೆ ನುಂಗಿಬಿಡುವುದೆಂದು ಹಿಟ್ಲರನು ತನ್ನ ಸಂಗಡಿಗರೊಡನೆ ಆಪ್ತಾಲೋಚನೆಯಲ್ಲಿದ್ದಾನೆ ಪ್ರಥಮವಾಗಿ, ಪೋಲೆಂಡು ಮತ್ತು ಜರ್ಮನಿಗಳೊಳಗೆ ಕಲಹವಿಲ್ಲವೆಂಬ ಒಪ್ಪಂದವನ್ನು ಮಾಡಿ ಡಾನ್ಜಿಗಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಪ್ರಕಟಿಸಬೇಕೆಂಬುದು ಒಂದು ಸೂಚನೆ ಈ ಆಲೋಚನೆಯಿಂದ ಮುಂದಕ್ಕೆ ಡಾನ್ಜಿಗಿನಲ್ಲಿರುವ ಎಲ್ಲಾ ಪೋಲೆಂಡಿನ ಅಧಿಕಾರಿಗಳನ್ನು ಹೊರಹಾಕಬೇಕೆಂದು ಹಿಟ್ಲರನ ಅಭಿಮತ

ಇನ್ನೊಂದು ಅಭಿಪ್ರಾಯದಂತೆ ಹಿಟ್ಲರನನ್ನು ಡಾನ್ಜಿಗ್ ಸಿನೇಟಿಗೆ ಪ್ರೆಸಿಡೆಂಟಾಗಿ ಚುನಾವಣೆ ಮಾಡಬೇಕೆಂಬ ಸೂಚನೆ. ಹಾಗಾದರೆ ಡಾನ್ಜಿಗು ದ್ವಿದಳ ರಾಜ್ಯಭರಣದಲ್ಲಿ ಸೇರಿ ಜರ್ಮನಿಯ ನ್ಯಾಯಾಧಿಕಾರಿಗಳ ವಶವಾಗುವ ಹಂಚಿಕೆ

ಅಂತೂ ನವಂಬರ ಆರಂಭದಲ್ಲಿ ಬರ್ಲಿನಿನಲ್ಲಿ ಸೇರುವ ನಾಜೀಪಾರ್ಟಿ ಕಾಂಗ್ರೆಸಿನ ಸಭೆಯಾಗದ ವಿನಹ ಯಾವುದೂ ಖಂಡಿತ ನಿಶ್ಚಯವಾಗಲಾರದೆಂದು ತಿಳಿದುಬರುತ್ತದೆ.

ರಶ್ಯಾಕ್ಕೆ ಬ್ರಿಟನಿನ ಸೈನ್ಯ ಪ್ರಾತಿನಿಧ್ಯ

ಈ ವಾರದ ಅಂತ್ಯದಲ್ಲಿ ಬ್ರಿಟನಿನಿಂದ ಸೈನಿಕರ ಪ್ರಾತಿನಿಧ್ಯವು ರಶ್ಯಾದ ಕಡೆಗೆ ಕಳುಹಿಸಲ್ಪಡುವುದೆಂದು ಚೆಂಬರ್ಲೇನರು ಹೇಳಿದ್ದಾರೆ

ಬ್ರಿಟಿಷ್ ಮತ್ತು ಫ್ರೆಂಚ್ ಅಧಿಕಾರಿಗಳೊಳಗಿನ ಮಾತುಕತೆಯಿಂದ ಸೌಹಾರ್ದವು ಆಂಗ್ಲ ರಶ್ಯಾಗಳೊಳಗೆ ಆಗುವುದಾಗಿ ತಿಳಿಯಬಹುದಾದರೂ, ಬೇಗನೇ ಒಪ್ಪಂದದ ಕರಾರು ಆಗುವುದು ಸಂಶಯದಲ್ಲಿದೆ

ಆಗಸ್ಟ್ ಹನ್ನೊಂದರಂದು ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕ ಪ್ರತಿನಿಧಿಗಳೊಡನೆ ಸಂಭಾಷಣೆಯು ರಶ್ಯದ ಪ್ರಮುಖ ಸೇನಾನಾಯಕರ ಸಮಕ್ಷಮ ನಡೆಯುವುದು

ರಶ್ಯಾದ ಸೈನ್ಯ ಪ್ರಾತಿನಿಧ್ಯವು ಲಂಡನಿಗೆ ತಾ ೪ರಂದು ಹೊರಟಿರುವುದು ಫ್ರೆಂಚ್ ಸೈನಿಕ ಪ್ರಾತಿನಿಧ್ಯವೂ ಲಂಡನಿಗೆ ಬಂದಿಳಿದಿದೆ

ಚೈನಾ—ಜಪಾನ್ ಕಲಹ

ಕಳೆದ ತಿಂಗಳಲ್ಲಿ ಜಪಾನೀಯರು ಯಾಂಗ್ಸೆ ಕಣಿವೆಯಿಂದ ಹಿಂದೋಡಿರುವರಾಗಿ ಅಧಿಕಾರೀ ಪ್ರಕಟಣೆಯು ಹೊರಬಿದ್ದಿದೆ

೧೩,೬೯೪ ಮಂದಿ ಜಪಾನರ ೩೬೫ ಸಲ ಸಂಘರ್ಷಣದಲ್ಲಿ ಚೈನೀಯರು ಕೊಲ್ಲಲ್ಪಟ್ಟಿದ್ದಾರೆ ಜಪಾನೀಯರ ಯುದ್ಧಸಾಮಗ್ರಿಗಳನ್ನೂ, ಯುದ್ಧಹಡಗುಗಳನ್ನೂ ನಾಶಗೊಳಿಸಲಾಗಿದೆ ಜಪಾನರ ೧೨೦ ಮೈಲು ರೈಲುಮಾರ್ಗವನ್ನೂ ೬೫ ಮೈಲುಗಳ ಇತರ ಮಾರ್ಗವನ್ನೂ ಚೈನೀಯರು ಹಾಳುಮಾಡಿರುವರು.

ಚೆನ್ನಾಗಿ ಅಭ್ಯಾಸ ಮಾಡಿದ ಮತ್ತು ಸಮಸ್ತ ಸನ್ನದ್ಧವಾದ ಚೈನೀಯರ ಯುದ್ಧದಳವು ಶಾಂಗಾಯಿಯಲ್ಲಿ ನೆಲಸಿದೆ

ಯುಗೊಸ್ಲೇವಿಯಾದ ಅರಸು ಕುಮಾರ

ಯುಗೊಸ್ಲೇವಿಯಾದ ಅರಸು ಕುಮಾರ ಪಾಲರು ಲಂಡನಿನಿಂದ ಪ್ಯಾರಿಸಿಗೆ ತೆರಳಿರುವರು ಲಂಡನಿನಲ್ಲಿರುವಾಗ ಬಹಳ ತೀಕ್ಷ್ಣವಾದ ಹಲ್ಲು ಬೇನೆಯಾಗಿ ಅದಕ್ಕಾಗಿ ಒಪರೇಶನು ಮಾಡಲಾಗಿತ್ತು

ಹೆಲಿಫಾಕ್ಸರು ಜಪಾನನ್ನು ಎಚ್ಚರಿಸುತ್ತಾರೆ

ಜಪಾನಿನ ವರ್ತನೆಯು ಬ್ರಿಟಿಷರ ಕಡೆಗೆ ಯಾವ ತೆರದಿಂದಲೂ ಸಮಾಧಾನಕರವಾಗಿಲ್ಲವೆಂದು ಲಾರ್ಡ್ ಹೆಲಿಫಾಕ್ಸರು ಹೇಳುತ್ತಾರೆ 'ಟೈನಿಸ್ಟನ್ನು' ಮೊದಲಾದೆಡೆಗಳಲ್ಲಿ ಜಪಾನೀಯರು ಇಂಗ್ಲಿಷರ ವಿರುದ್ಧ ಮಾಡುತ್ತಿರುವ ಕಾರ್ಯಗಳಿಂದ ಈ ಎರಡು ರಾಷ್ಟ್ರಗಳ ಅನ್ಯೋನ್ಯ ಸಂಬಂಧವು ಸೌಹಾರ್ದದಿಂದ ನಡೆಯಲಾರದು" ಎಂದರು.

ಸರಕಾರೀ ನೌಕರರು ರಾಜಕೀಯಕ್ಕೆ ಕೈಹಾಕಬಾರದು

ಅಮೇರಿಕದ ಪ್ರೆಸಿಡೆಂಟ್ ರೂಸವೆಲ್ಟರು, ಯಾವ ಸರಕಾರೀ ನೌಕರನೂ, ಯಾವುದೇ ರೀತಿಯ ರಾಷ್ಟ್ರದ ರಾಜಕೀಯ ಚಳವಳಿಯಲ್ಲಿ ಪ್ರತ್ಯಕ್ಷವಾಗಿಯಾಗಲಿ ಅಪ್ರತ್ಯಕ್ಷವಾಗಿಯಾಗಲಿ ಕೈಹಾಕಬಾರದೆಂದೂ, ಹಾಗೆ ಕೈಹಾಕಿದ ಪಕ್ಷದಲ್ಲಿ ಆತನನ್ನು ಕೆಲಸದಿಂದ ತೆಗೆದುಹಾಕುವುದು ಮಾತ್ರವಲ್ಲದೆ, ಶಿಕ್ಷೆ ದಂಡನೆಗಳೂ ಕೂಡ ಕೊಡಲ್ಪಡುವವೆಂದೂ ಆಜ್ಞೆ ಹೊರಡಿಸಿರುತ್ತಾರೆ

ಡಾನ್ಜಿಗಿನಲ್ಲಿ ವ್ಯಾಪಾರೀ ಕಲಹ

ಡಾನ್ಜಿಗನ್ನು ರಾಶಿಗೆ ಸೇರಿಸುವ ಹಿಟ್ಲರನ ಪ್ರಯತ್ನಗಳು ಯಾವ ರೀತಿ ನಡೆಯುತ್ತವೆ, ಹೇಗೆ, ಅಲ್ಲಿನ ವ್ಯಾಪಾರ, ಆರ್ಥಿಕ ಸ್ಥಿತಿಗಳು ಬದಲಾಗುತ್ತಿವೆಯೆಂಬ ವಿಷಯವನ್ನು ಪೋಲೆಂಡು ತೆರೆದ ಕಣ್ಣುಗಳಿಂದ ನಿರೀಕ್ಷಿಸುತ್ತಿದೆ

ಪೂರ್ವ ಪಕ್ಷದೊಡನೆ ನಡೆಸುವ ಯಾವುದೇ ವ್ಯಾಪಾರ ಸಂಬಂಧವಾದರೂ ಡಾನ್ಜಿಗಿನ ವಿಷಯದಲ್ಲಿ ಅಧಿಕ ಮಾರ್ಪಾಟನ್ನುಂಟುಮಾಡುವುದೆಂದೂ, ಅದನ್ನು ಪೋಲೆಂಡು ಸಹಿಸಲಾರದೆಂದೂ ಪೋಲೆಂಡು ಸರಕಾರವು ಡಾನ್ಜಿಗಿಗೆ ಬೆದರಿಕೆ ಹೇಳಿದೆ ಆದರೆ ಇದಕ್ಕೆ ವಿರುದ್ಧ ಡಾನ್ಜಿಗಿನಲ್ಲಿ ಪೋಲೆಂಡಿನ ಆಫೀಸರರನ್ನು ಕೆಲಸದಿಂದ ತೆಗೆದುಹಾಕುವಂತಹ ಘಟನೆಗಳು ನಡೆದಿವೆ

ಡಾನ್ಜಿಗಿನ ಸಮಸ್ಯೆಯು ಹಿಟ್ಲರನ ಮುಷ್ಟಿಯೊಳಗಿದೆಯೆಂದು ಡಾನ್ಜಿಗಿನಲ್ಲಿ ನಾಜೀ ಮುಂದಾಳುವು ಹೇಳುತ್ತಾನೆ

ರುಮೇನಿಯಾ ಮತ್ತು ಹೆಂಗೇರಿ

ರುಮೇನಿಯಾ ಮತ್ತು ಹಂಗೇರಿಗಳ ಗಡಿಭೂಮಿಗಳಲ್ಲಿ ಆಗ ಇತ್ತೀಚಿನ ಕೆಲವು ಸಂಭವಗಳಿಂದ ಪರಸ್ಪರ ಒಪ್ಪಂದ ಮಾತುಕತೆಯು ನಡೆಯುತ್ತಿದೆ

ಆ ಒಪ್ಪಂದವು ಬೇಗನೇ ಶಾಂತಿ ಫಲಕಾರಿಯಾಗುವುದೆಂದು ಇಕ್ಕಡೆಗಳಲ್ಲಿಯೂ ನಂಬಲಾಗಿದೆ

ಹಂಗೇರಿಯ ಸಲಹೆಗಳನ್ನು ರುಮೇನಿಯವು ಅಂಗೀಕರಿಸಿರುತ್ತದೆ

ಟೋಕಿಯೋ ಬ್ರಿಟಿಷ್ ವಿರುದ್ಧ ಚಳವಳ

೨೫,೦೦೦ ಮಂದಿಯ ಮೆರವಣಿಗೆ

"ಬ್ರಿಟನ್ ಹಾಳಾಗಲಿ" ಎಂಬವೇ ಮೊದಲಾದ ಜಯಘೋಷವನ್ನು ಹೇಳುತ್ತಾ ೨೫,೦೦೦ ಮಂದಿಯ ಮೆರವಣಿಗೆಯೊಂದು ಟೋಕಿಯೋದಲ್ಲಿ ಆಯಿತು ಬ್ರಿಟಿಷ್ ರಾಯಭಾರಿಗೆ ತಮ್ಮ ಠರಾವುಗಳನ್ನು ಕಳುಹಿಸಿರುವರು

ಇಡೀ ಜಪಾನಿನಲ್ಲಿಯೇ ಈ ರೀತಿಯ ಮೆರವಣಿಗೆ ಭಾಷಣ ಠರಾವುಗಳಾಗಿವೆ

ಆಕ್ಟೋಬರ ತಿಂಗಳಲ್ಲಿ ಪಾರ್ಲಿಮೆಂಟು ಸಭೆ

ಆಕ್ಟೋಬರ ಮೂರನೇ ತಾರೀಕಿನ ವರೆಗೆ ಪಾರ್ಲಿಮೆಂಟು ಸಭೆಯು ಮುಂದುವರಿಸಲ್ಪಡಬೇಕೆಂದು ಪ್ರಧಾನ ಮಂತ್ರಿಗಳಾದ ಮಿ ಚೆಂಬರ್ಲೇನರು ತಂದ ಠರಾವು ಮಂಜೂರಾಯಿತು

ಸಾರ್ವಜನಿಕರ ಅಗತ್ಯದ ವಿಷಯಕ್ಕಾಗಿ ಅದಕ್ಕಿಂತ ಮುಂಚಿತವಾಗಿ ಸಭೆ ಕರೆಯಬೇಕೆಂದಾದರೆ, ಸ್ಪೀಕರರು ಅದಕ್ಕಿಂತ ಮೊದಲೂ ಕರೆಯಬಹುದೆಂದು ಠರಾವಿನಲ್ಲಿ ಸೂಚಿತವಾಗಿದೆ.

ವಿರೋಧ ಪಕ್ಷದ ಮಿ ಆರ್ಥರ್ ಗ್ರೀನ್‌ವುಡ್ಡರವರು ಆಗಸ್ಟ್ ೨೧ರಂದು ಪಾರ್ಲಿಮೆಂಟನ್ನು ಕರೆಯಬೇಕಾಗಿ ಉಪಸೂಚನೆ ತಂದರು, ಇವರನ್ನು ಲಿಬರಲ್ ಪಕ್ಷದ ಸರ್ ಆರ್ಚಿಬಾಲ್ಡ್ ಸಿನ್‌ಕ್ಲೇರರು ಸಮರ್ಥಿಸಿದರು ಆದರೆ ಉಪಸೂಚನೆಯು ಮತ ತೆಗೆಯಲಾಗಿ ಬಿದ್ದುಹೋಯಿತು.

ಪ್ರಧಾನ ಮಂತ್ರಿ ಚಕ್ರವರ್ತಿ ರಾಜಗೋಪಾಲಾಚಾರ್ಯರು

[ವ್ಯಕ್ತಿತ್ವದ ಪರಿಚಯ]

ಅಖಿಲ ಭಾರತ ಕಾಂಗ್ರೆಸು, ಮಹಾತ್ಮಾ ಗಾಂಧಿಜಿಯವರ ಧುರೀಣತೆಯಿಂದ ಒಂದು ವಿಶಿಷ್ಟ ಸ್ವರೂಪವನ್ನು ಪಡೆದಿದೆ. ಭಾರತೀಯ ರಾಜಕೀಯ ಆಂದೋಲನವು ಧರ್ಮ, ಸತ್ಯ, ಅಹಿಂಸೆಗಳ ಭದ್ರ ತಳಹದಿಯಲ್ಲಿ ನೆಲೆಸುವಂತೆ ಮಾಡಿದ ಕೀರ್ತಿಯು ಗಾಂಧಿಜಿಯವರದಾದರೂ ಅಲ್ಲಲ್ಲಿ ಪ್ರಾಂತಗಳಲ್ಲಿ ಆ ತತ್ವವನ್ನು ಪ್ರಬಲವಾಗಿ ಪ್ರಚಾರ ಮಾಡಿದ ಅವರ ಶ್ರದ್ಧಾವಂತ ಅನುಯಾಯಿಗಳೂ, ಗಾಂಧಿಜಿಯವರ ಪಟ್ಟಶಿಷ್ಯರೊ ಎಂದು ಹೆಸರುಪಡೆದ ಮಹನೀಯರಲ್ಲಿ ಮದ್ರಾಸು ಪ್ರಧಾನ ಮಂತ್ರಿ ರಾಜಗೋಪಾಲಾಚಾರ್ಯರು ಮುಖ್ಯರು! ಅವರು ಅಖಿಲ ಭಾರತದಲ್ಲಿ ಹೆಸರಾಂತ ದೇಶಾಭಿಮಾನಿಗಳೂ, ಗಾಂಧಿವಾದದ ಅಚಲ ಆರಾಧಕರೂ ಮಹಾ ಪ್ರಧಾನರಲ್ಲಿ ಅಗ್ರಸ್ಥಾನವನ್ನು ಪಡೆದವರೂ ಆಗಿದ್ದಾರೆ!

ಸಂಕಷ್ಟದಿಂದ ನರಳುತ್ತಿರುವ ಭಾರತೀಯರ ಜೀವನವನ್ನು ಉತ್ತಮಗೊಳಿಸುವುದಕ್ಕಾಗಿ ರಾಜಾಜಿಯವರ ಬಾಳುವೆಯು ವಿನಿಯೋಗಿಸಲಾಗಿದೆ. ಕಾಂಗ್ರೆಸಿನ ಅಪ್ಪಣೆಯನ್ನು ಶಿರಸಾವಹಿಸಿ, ಅಧಿಕಾರ ಸ್ವೀಕಾರ ಮಾಡಿ, ಅಲ್ಲಿ ಅವಿಶ್ರಾಂತರಾಗಿ ದುಡಿಯುವ ರಾಜಾಜಿಯವರು, ಮದ್ಯಪಾನ ನಿಷೇಧ, ರೈತರ ಸಾಲನಿವಾರಣಾ ಶಾಸನ ಮೊದಲಾದ ಕಾರ್ಯಗಳನ್ನು ತಮ್ಮ ಪ್ರಾಂತದಲ್ಲಿ ಮೊದಲಾಗಿ ಪ್ರಯೋಗಕ್ಕೆ ತಂದದ್ದನ್ನು ವಿಚಾರಿಸಿದಲ್ಲಿ ಅವರ ಹೃದಯವು ಎಷ್ಟರಮಟ್ಟಿಗೆ ದುಃಖಿತರಿಗಾಗಿ, ನಿರ್ಭಾಗ್ಯರಿಗಾಗಿ ದರಿದ್ರ ಭಾರತೀಯ ಸಹೋದರರಿಗಾಗಿ ಮರುಕಪಡುತ್ತಿದೆಯೆಂಬುದು ವ್ಯಕ್ತವಾಗುವುದು. ಶಾಸನದ ನಿರ್ಬಂಧವಿಲ್ಲದೆ, ತನ್ನ ನಿರಂತರ ಯತ್ನದ ಮೂಲವಾಗಿ ಮಹಾಜನರ ಸಮ್ಮತಿಯಿಂದಲೇ ಇಂದು ಅಧಿಪತ್ಯದ ಪ್ರಸಿದ್ಧ ದೇವಾಲಯಗಳನ್ನು ಹರಿಜನ ಬಂಧುಗಳಿಗಾಗಿ ತೆರೆಯುವಂತೆ ಮಾಡಿದ ಅವರ ಉದಾತ್ತ ಧ್ಯೇಯವ ಸಾಹಸವು ಅತ್ಯಂತ ಮಹತ್ವವಾದದು. ಹೀಗೆ ಅವರ ಇಡೀ ಜೀವನವೇ ಭಾರತದ ದರಿದ್ರರಿಗಾಗಿ ಅರ್ಪಿತವಾಗಿದೆ.

ಗಾಂಧಿಜಿ—ರಾಜಾಜಿಯವರ ಸೌಹಾರ್ದ

ಗಾಂಧಿಜಿ ಮತ್ತು ರಾಜಾಜಿಯವರ ಅನ್ಯೋನ್ಯ ಸ್ನೇಹಸಂಬಂಧವು ಬಹಳ ಸ್ಥಿರವಾದುದು. ಮಹಾತ್ಮಾ ಗಾಂಧಿಯವರು ತಮ್ಮ ಜೀವಮಾನದಲ್ಲಿ ಅನುಭವಿಸಬೇಕಾದ ಅನೇಕ ಸಂಕಷ್ಟಗಳಲ್ಲಿ ಅವರಿಗೆ ನೆರವಾದ ಇಷ್ಟು ಸಮೀಪದ ಗೆಳೆಯರು ಬೇರೆ ಯಾರೂ ಇರುವುದಿಲ್ಲ. ಭಾರತದ ರಾಜಕೀಯ ಕ್ಷೇತ್ರದಲ್ಲಿ ರಾಜಾಜಿಯವರಿಗೆ ವಿಶಿಷ್ಟವಾದ ಸ್ಥಾನಮಾನಗಳಿವೆ. ಹಾಗಾಗಿ ಗಾಂಧಿಜಿ ಮತ್ತು ರಾಜಾಜಿಯವರು ಅನ್ಯೋನ್ಯ ತಮ್ಮ ವಿಚಾರ ಪ್ರವಾಹಗಳಿಗೆ ಯೋಗ್ಯವಾದ ಪವಿತ್ರವಾದ ಸಂಗಮವನ್ನು ಕಂಡುಕೊಂಡಿದ್ದಾರೆ.

ದಿಲ್ಲಿಯ ದೇವದಾಸ ಗಾಂಧಿಯವರ ಮನೆಯಲ್ಲಿ ಗಾಂಧೀ ರಾಜಾಜಿಯವರ ಸ್ನೇಹದ ಸುಂದರ ಫಲಗಳು ಮೂರ್ತಿಮತ್ತಾಗಿ ಶೋಭಿಸುವುದನ್ನು ಇಂದು ಕಾಣಬಹುದು. ಮಹಾತ್ಮಾಜಿಯವರ ಪುತ್ರ ದೇವದಾಸ ಗಾಂಧಿಯವರಿಗೆ ರಾಜಾಜಿಯವರು ತಮ್ಮ ಕನ್ಯೆಯನ್ನು ಧಾರೆಯೆರೆದು ಕೊಟ್ಟರು. ದಿಲ್ಲಿಯ ಆ ಪುಣ್ಯಾಶ್ರಮದಲ್ಲಿ, ಗಾಂಧೀ—ರಾಜಾಜಿಯವರ ಮೊಮ್ಮಕ್ಕಳು ಅವರಿಬ್ಬರ ಪ್ರೇಮ ಸಂಬಂಧದ ಮಧುರ ಸ್ಮರಣೆಯನ್ನು ಅಖಿಲ ಭಾರತಕ್ಕೆ ತರುತ್ತಾರೆ.

ಹರಿಜನೋದ್ಧಾರ

ಶತ ಶತಮಾನಗಳಿಂದ ಉತ್ತಮ ಜಾತಿಯವರೆಂಬವರಿಂದ ಸಧರ್ಮೀಯರಾದ ಹರಿಜನರಿಗೆ ಆದ ಅನ್ಯಾಯವು ಮಹಾ ಪಾಪವು ಮಹಾತ್ಮಾಜಿಯವರ ಹೃದಯವನ್ನು ಕನಿಕರದಿಂದ ಕರಗಿಸಿತು. ಕಾಂಗ್ರೆಸಿನ ಧ್ಯೇಯದಲ್ಲಿ ಹರಿಜನರ ಉದ್ಧಾರವೂ ಒಂದಾಗಿರುತ್ತದೆ. ಈ ಧ್ಯೇಯವು ಇಷ್ಟು ತೀವ್ರವಾಗಿ ಯಶಸ್ವಿಯಾಗುತ್ತಿರುವಲ್ಲಿ ಮಹಾತ್ಮಾಜಿಯವರ ವ್ಯಕ್ತಿತ್ವ ನಿರ್ಮಲ ಕಾರ್ಯಸಾಧನೆ ಮಾತ್ರ ಕಾರಣವಲ್ಲವೆ? ರಾಜಾಜಿಯವರಂತಹ ಬ್ರಾಹ್ಮಣ ಮುಖಂಡರೇ ಮುಂದಾಳುಗಳಾಗಿ ನಿಂದು ಕೆಲಸ ಮಾಡುವುದೂ ಮುಖ್ಯವಾಗಿರುತ್ತದೆ. ಇಂತಹ ಪವಿತ್ರ ಕಾರ್ಯದ ಸಾಧನೆಯಲ್ಲಿ ರಾಜಾಜಿಯವರ ಸ್ಥಾನವು ಅತ್ಯಂತ ಪ್ರಾಮುಖ್ಯವಿರುತ್ತದೆ. ರಾಜಾಜಿಯವರೇ ಮೊನ್ನೆ ಮಧುರಾ ಮೀನಾಕ್ಷಿ ದೇವಾಲಯವು ಹರಿಜನರಿಗೆ ತೆರೆಯಲ್ಪಟ್ಟ ಸುಸಂದರ್ಭದಲ್ಲಿ 'ನನ್ನ ಜೀವಮಾನದಲ್ಲಿಯೇ ಇಂತಹ ಪುಣ್ಯಕಾರ್ಯವನ್ನು ಕಣ್ಣಾರೆ ನೋಡಬೇಕೆಂದು ಆಶಿಸಿದ್ದೆ. ಈ ಸುಮುಹೂರ್ತದಲ್ಲಿ ನನಗೆ ಆದ ಆನಂದವು ನನ್ನನ್ನು ಪರವಶನನ್ನಾಗಿ ಮಾಡಿದೆ, ದೇವರು ಈ ಪವಿತ್ರ ಕಾರ್ಯವನ್ನು ಕೊನೆಗಾಣಿಸಲು ನನಗೆ ಶಕ್ತಿ ಕೊಡುವನೆಂದು ನಂಬಿದ್ದೆ, ಆದರೆ ಇಷ್ಟು ಬೇಗನೆ ಆ ಮಹೂರ್ತವು ಬಂದೀತೆಂದು ನಾನು ನಂಬಿರಲಿಲ್ಲ, ಇಂದು ಆತನ ದಿವ್ಯ ಸನ್ನಿಧಿಯಲ್ಲಿ ನಾವೆಲ್ಲಾ ಒಂದಾದೆವು' ಹೀಗೆಂದ ಮಾತೇ ಹರಿಜನರಿಗಾಗಿ ಅವರ ಹೃದಯವು ಎಷ್ಟೊಂದು ದಯಾರ್ದ್ರವಾಗಿದೆಯೆಂಬುದನ್ನು ವ್ಯಕ್ತಗೊಳಿಸುತ್ತದೆ.

ಮದ್ಯಪಾನ ನಿಷೇಧ

ರಾಜಾಜಿಯವರು ಪ್ರಧಾನ ಮಂತ್ರಿಗಳಾದ ಮೇಲೆ, ಮಾಡಿದ ಎಲ್ಲದಕ್ಕಿಂತಲೂ ಹೆಚ್ಚು ಪವಿತ್ರವಾದ ಕೆಲಸವೆಂದರೆ ಮದ್ಯಪಾನ ನಿಷೇಧವು. ತನ್ನ ಜೀವಮಾನದಲ್ಲಿ ಅನೇಕ ವರ್ಷಗಳ ಸಾರ್ವಜನಿಕ ಕಾರ್ಯಗಳ ಅನುಭವದಿಂದ, ಮದ್ಯಪಾನದ ಭಯಂಕರ ಅನಾಹುತವನ್ನು ಚೆನ್ನಾಗಿ ಮನಗಂಡ ರಾಜಾಜಿಯವರು, ಯಾವ ಜಿಲ್ಹೆಯಲ್ಲಿ ಕುಡಿಕತನವು ಅತ್ಯಂತ ಪರಮಾವಧಿಯನ್ನು ಹೊಂದಿದೆಯೋ, ಅದೇ ಸೇಲಮ್ಮಿನಲ್ಲಿ ಪ್ರಥಮತಃ, ನಿಷೇಧ ಕಾರ್ಯವನ್ನು ಆರಂಭಿಸಿದರು. ಅಮೇರಿಕದಲ್ಲಿ ಯಾವ ಚಳವಳಿವು ಯಶಸ್ವಿತವಾಗಲಿಲ್ಲವೆಂದು ಬಹುಮಂದಿ ಭೀತರಾಗಿದ್ದರು. ಅದು ಭಾರತದಲ್ಲಿ ಸಂಪೂರ್ಣ ಯಶಸ್ವಿಯಾಗುವುದೆಂದು ಮಾಡಿ ತೋರಿಸಿದ ಕೀರ್ತಿಯು ರಾಜಾಜಿಯವರದು.

ಮದ್ರಾಸು ಪ್ರಾಂತದಲ್ಲಿ ಆದ ಮದ್ಯಪಾನ ನಿಷೇಧದ ಯಶಸ್ವಿತೆಯ ಪ್ರೋತ್ಸಾಹದಿಂದಲೇ, ಇಂದು ಹಿಂದೂದೇಶದ ಇತರ ಪ್ರಾಂತಗಳಲ್ಲಿಯೂ ಮಂತ್ರಿಗಳು ಇದನ್ನು ಆರಂಭಿಸಿರುವರು. ಬಹುಶಃ ಮುಂದಿನ ಭಾರತದ ಇತಿಹಾಸದಲ್ಲಿ ರಾಜಾಜಿಯವರ ಅತ್ಯಂತ ಮಹತ್ವವಾದ ಕೆಲಸಗಳಲ್ಲಿ ಈ ಮದ್ಯಪಾನ ನಿಷೇಧ ಕಾರ್ಯವು, ಹೆಚ್ಚು ಪ್ರಾಮುಖ್ಯವಾಗಿ ಪರಿಗಣಿಸಲ್ಪಡುವುದು. ದೇಶದಲ್ಲಿ ಅಸ್ಪೃಶ್ಯತೆಯ ಕಳಂಕವು ಸಂಪೂರ್ಣವಾಗಿ ತೊಳೆದು ಹೋಗದ ತನಕ ಮದ್ಯಪಾನ ನಿಷೇಧವು ಯಶಸ್ವಿಯಾಗಲಾರದು, ಏಕೆಂದರೆ ಇವೆರಡೂ ರಾಷ್ಟ್ರದ ಜೀವಶಕ್ತಿಯನ್ನು ಇದುವರೆಗೆ ಕೆಡಿಸಿದ ರೋಗಗಳಾಗಿ ಒಂದನ್ನು ಆಶ್ರಯಿಸಿ ಇನ್ನೊಂದು ಬೆಳೆಯುವಂತಹುದು. ಎರಡೂ ಸಂಪೂರ್ಣ ನಿರ್ನಾಮಗೊಂಡ ದಿನವೇ ರಾಜಾಜಿಯವರು ಪೂರ್ಣ ಸಂತೋಷವನ್ನು ಹೊಂದುವರೆಂದು ಊಹಿಸುವುದು ಹೆಚ್ಚಾಗಲಾರದು.



ಉದಾತ್ತ ಧಾರ್ಮಿಕ ಪುರುಷರು

ರಾಜಗೋಪಾಲಾಚಾರ್ಯರು ಕೇವಲ ಒಬ್ಬ ರಾಜಕೀಯ ಮುಂದಾಳ ಮಾತ್ರವಲ್ಲ, ಬಹಳ ಘನವಂತ ವಿದ್ವಾಂಸರು, ಭಾರತೀಯ ಸಂಸ್ಕೃತಿಯನ್ನು ಚನ್ನಾಗಿ ಕಲಿತು ಅರ್ಜಿಸಿಕೊಂಡವರಾಗಿದ್ದಾರೆ. ಉಜ್ವಲ ಧಾರ್ಮಿಕ ಆದರ್ಶ ಪುರುಷರಾಗಿದ್ದಾರೆ. ಹಿಂದೂ ಸಂಸ್ಕೃತಿಯ ಧರ್ಮಧ್ವಜವನ್ನು ಹಿಡಿದೆತ್ತಿ ನಿಂತ ಮಹಾ ಧರ್ಮವೀರರೂ ಆಗಿದ್ದಾರೆ. ಅವರು ಇತ್ತೀಚೆಗೆ ಬರೆದ ಗೀತಾ ಮತ್ತು ಉಪನಿಷತ್ತುಗಳ ವಿಷಯದ ಗ್ರಂಥಗಳು ಅವರ ಅಗಾಧವಾದ ಪೌರ್ವಾತ್ಯ ಸಂಸ್ಕೃತಿಯ ಜ್ಞಾನವನ್ನು ಎತ್ತಿ ತೋರಿಸುತ್ತವೆ. ಈ ಪುಸ್ತಕಗಳು ಹಿಂದೂ ಧರ್ಮದ ವಿಶಾಲತೆಯನ್ನು ಸ್ಪಷ್ಟಗೊಳಿಸಿ, ಅನ್ಯ ಧರ್ಮೀಯರು ಪೌರ್ವಾತ್ಯ ಸಂಸ್ಕೃತಿಯನ್ನು ಗೌರವಿಸುವಂತೆ ಮಾಡುತ್ತವೆ. ಧರ್ಮ ಸಹಿಷ್ಣುತೆಯು ಅವರ ಮನ, ವಚನ, ಕಾರ್ಯಗಳಲ್ಲಿ ಸಂಪೂರ್ಣ ವ್ಯಕ್ತವಾಗುತ್ತದೆ.

ಅವರ ಅದ್ಭುತ ವ್ಯಕ್ತಿತ್ವವೇ ರಾಜಾಜಿಯವರಿಗೆ ಅಖಿಲ ಭಾರತ ಧುರೀಣತೆಯ ಮನ್ನಣೆಯನ್ನು ಒದಗಿಸಿದೆ. ಅವರ ಉತ್ತಮ ನಡತೆ—ಗುಣಗಳೇ ಅವರನ್ನು ಪೂಜ್ಯ ಪಟ್ಟಕ್ಕೆ ಏರಿಸಿವೆ. ಅನಾರೋಗ್ಯ, ನಿಶ್ಶಕ್ತತೆಗಳಿಂದ ಶರೀರವು ಜಗ್ಗಿ ಹೋಗುತ್ತಿದ್ದರೂ, ರಾಷ್ಟ್ರದ ಹಿತಕ್ಕಾಗಿ ಒಬ್ಬನು ಎಷ್ಟು ದುಡಿಯಬೇಕೆಂಬುದನ್ನು, ರಾಜಾಜಿಯವರು, ವೀರ ಸತ್ಯಾಗ್ರಹಿಯಾಗಿಯೂ, ಅಧಿಕಾರವನ್ನು ಪಡೆದ ಮಹಾಮಂತ್ರಿಯಾಗಿಯೂ ಭಾರತೀಯರಿಗೆ ಕಲಿಸಿಕೊಟ್ಟಿದ್ದಾರೆ.

ಅವರ ಬ್ರಾಹ್ಮಣ್ಯ ಸಂಸ್ಕೃತಿಯ ಆಳವು, ವೇದೋಪನಿಷತ್ತುಗಳ ಜ್ಞಾನವು ಅವರನ್ನು ಇತರ ಸನಾತನಿಗಳೆಂಬವರಂತೆ ಸಮಾಜದಿಂದ ಪ್ರತ್ಯೇಕಿಸಿಡಲಿಲ್ಲ. ಹರಿಜನರು ಅವರನ್ನು ತಮ್ಮ ಹೆತ್ತವರಂತೆ, ಆಪ್ತರಂತೆ ಗೌರವಿಸುತ್ತಾರೆ. ಹಿಂದೂದೇಶದಲ್ಲಿರುವ ಯುರೋಪಿಯನರು ಅವರನ್ನು ಮಹಾ ಮೇಧಾವಿಗಳಾಗಿ ಮನ್ನಿಸುತ್ತಾರೆ. ಮದ್ರಾಸಿನ ಗವರ್ನರರೇ, ಎಷ್ಟು ಹೃತ್ಪೂರ್ವಕ ಸಹಕರಿಸುತ್ತಿರುವರೆಂಬುದು, ಮೊನ್ನೆ ತಾನೇ ಪ್ರಕಟವಾದ ದೇವಸ್ಥಾನ ಪ್ರವೇಶದ ಆಜ್ಞಾ ಶಾಸನದಿಂದ ವ್ಯಕ್ತವಾಗುತ್ತದೆ.

ಇಂತಹ ಋಷಿ ಸಮಾನರಾದ ರಾಜಕೀಯ ಧುರೀಣರನ್ನು ಪ್ರಧಾನ ಮಂತ್ರಿಗಳಾಗಿ ಪಡೆದ ಪ್ರಾಂತದವರು ನಿಜವಾಗಿಯೂ ಧನ್ಯರು!

ಮನೋಹರ ಗ್ರಂಥಮಾಲಾ
ಧಾರವಾಡ.

ಸ್ವತಂತ್ರ ಕಥೆ, ಕಾದಂಬರಿ, ನಾಟಕ, ಹರಟೆ ಮೊದಲಾದ ಮನಮೆಚ್ಚಿಸುವ ಸರಸ ವಾಙ್ಮಯದ ಸುಗ್ಗಿ! ಅಖಿಲ ಕರ್ನಾಟಕದಲ್ಲಿ ಹೆಸರುಪಡೆದ ಬರಹಗಾರರ ಕೈವಾಡ ಮನದ ಹಸಿವೆಯನ್ನು ಹಿಂಗಿಸಿಕೊಳ್ಳಿ!

ಒಂದು ವರ್ಷದಲ್ಲಿ ೧೫೦೦ ಪುಟಗಳುಳ್ಳ ಆರು ಸರಸ ಗ್ರಂಥಗಳು!

ವಾರ್ಷಿಕ ಚಂದಾ ರೂ. ೩-೮-೦

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ತೋರಿಸಲಾಗುವುದು

ವ್ಯವಸ್ಥಾಪಕ,
ಮನೋಹರ ಗ್ರಂಥಮಾಲಾ
ಧಾರವಾಡ.

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬೇಡವಾಗಬೇಕೆಂಬ ಇಚ್ಛೆಯವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುತ್ತದೆ. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ನೋಡಲೇ ಪೂರಾ ಖಾತ್ರಿಯಾದಿ ಔಷಧ ಬೇಡಿರಿ. ಮುಕ್ಕಿ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಲೇಖಮಾಡಿದು, ಕಾಲೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪-೦-೦ ವಿ. ಪಿ.

ವಿಳಾಸ: ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.

ಸಿನೆಮಾ ನಟಿಗಳ ಜೀವನ ಪರಿಚಯ

೩. ದೇವಿಕಾರಾಣಿ

ಪ್ರಥಮ ಬಾರಿಯಾಗಿ ಆಂಗ್ಲ ಭಾಷೆಯ ಭಾಷಣೀಯ ಚಲಚ್ಚಿತ್ರವೊಂದು ಲಂಡನಿನಲ್ಲಿ ೧೯೩೩ರಲ್ಲಿ ಪ್ರದರ್ಶಿಸಲ್ಪಟ್ಟಿತು. ಭಾರತವು ಚಲಚ್ಚಿತ್ರ ಪ್ರಪಂಚದಲ್ಲಿ, ಮುಂದುವರಿಯುತ್ತಿದೆ ಎಂದು ಜಗತ್ತು ಮನಗೊಂಡಿತು. ಲಂಡನಿನಲ್ಲಿ ಪ್ರದರ್ಶಿಸಲ್ಪಟ್ಟ "ಕರ್ಮ" ಚಿತ್ರವನ್ನು ಕಂಡು ಭಾರತಮಾತೆಯು ಉತ್ತಮ ನಟನಟಿಯರಿಗೆ ಜನ್ಮವಿತ್ತಿರುವುದೆಂದು ಲೋಕವು ದಶದಿಶೆಗಳಿಂದಲೂ ಸಾರುವಂತಾಯಿತು. ಅದರಲ್ಲಿಯ ದೇವಿಕಾರಾಣಿಯ ಅಭಿನಯ ಚಾತುರ್ಯವನ್ನು ಕಂಡು ಸಾವಿರಾರು ಕಡೆಗಳಿಂದ ಪ್ರಸಂಶನೀಯ ಪತ್ರಗಳು ಭಾರತಕ್ಕೆ ಬಂದು ಸುರಿದುವು. ಅದು ಮೊದಲ್ಗೊಂಡು ದೇವಿಕಾರಾಣಿಯ ಛಾಯಚಿತ್ರ ಜೀವನದಲ್ಲಿ ಒಂದು ನವೀನ ಕಳೆಯು ಬಂದು ಸೇರಿತು.

ವಿದ್ಯಾಭ್ಯಾಸ

ಕರ್ನಲ್ ಎಂ. ಎನ್. ಚೌಧುರಿ, ಐ ಎಂ. ಎಸ್., ಸರ್ಜನ್ ಜನರಲರೇ ದೇವಿಕಾರಾಣಿಯ ಜನ್ಮದಾತರು. ಕವಿ ರವೀಂದ್ರರೇ ಈಕೆಯ ಕಕ್ಕಂದಿರು. ಕರ್ನಲ್ ಚೌಧುರಿಯವರು ಮದ್ರಾಸಿನಲ್ಲಿ ಸರ್ಜನ್ ಜನರಲರ ಹುದ್ದೆಯಲ್ಲಿದ್ದರು. ವೊಲ್ಟಯರ್‌ನಲ್ಲಿಯೇ ದೇವಿಕಾರಾಣಿಯು ಜನ್ಮವೆತ್ತಿದಳು. ಬಾಲ್ಯದ ಬಹುಭಾಗವನ್ನು ಮದ್ರಾಸು ಪ್ರಾಂತ್ಯದಲ್ಲಿಯೇ ಕಳೆದಿದ್ದಳು. ಅವಳ ಪ್ರಾರಂಭಿಕ ವಿದ್ಯಾಭ್ಯಾಸವು ಬಂಗಾಳದಲ್ಲಿ ಠಾಗೂರರ ಶಾಂತಿನಿಕೇತನಾಲಯದಲ್ಲಿ ನಡೆಯಿತು. ಪ್ರೌಢ ವಿದ್ಯಾಭ್ಯಾಸವನ್ನು ಲಂಡನಿನಲ್ಲಿ ಪಡೆದಳು. ೧೬ನೇ ವಯಸ್ಸಿನಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಗಿಸಲು ಫ್ರಾನ್ಸು, ಸ್ವಿಜರ್‌ಲೇಂಡ್, ಜರ್ಮನಿ ಮೊದಲಾದ ದೇಶಗಳನ್ನು ಸಂಚರಿಸಿದಳು. ನಂತರ ಪುನಃ ಸ್ವದೇಶಕ್ಕೆ ಕೊಂಚ ಸಮಯದ ಮಟ್ಟಿಗೆ ಹಿಂತಿರುಗಿ ಕಲಾ ನೈಪುಣ್ಯವನ್ನು ಅಭ್ಯಸಿಸಲು ಪುನ ಲಂಡನಿಗೆ ತೆರಳಿದಳು. ಇದೇ ಸಮಯ ಆಕೆಯು ಚಲಚ್ಚಿತ್ರ ಜೀವನದ ವಿಷಯ ಯೋಚಿಸತೊಡಗಿದಳು. ಅಲ್ಲಿಂದ ಅಭಿನಯ ಮತ್ತು ಚಲಚ್ಚಿತ್ರಗಳನ್ನು ತೋರಿಸುವ ಯಂತ್ರಗಳ (cinematograph) ವಿಷಯ ಕಲಿಯಲು ಜರ್ಮನಿಗೆ ಹೋದಳು. ಮಾತನಾಡುವ ಚಲಚ್ಚಿತ್ರಗಳು ಜಗತ್ತಿಗೆ ಆಶ್ಚರ್ಯವನ್ನು ಹುಟ್ಟಿಸಿ ಅದು ಸಾಧ್ಯವಾದ ಮಾತು ಎಂದು ಲೋಕಕ್ಕೆ ಸಾರಲು ಪ್ರಾರಂಭಿಸಿದ ಸಮಯವದು.

ಜರ್ಮನಿಯಲ್ಲಿ ಕೆಲವಷ್ಟು ವಿದ್ಯಾರ್ಜನೆಯನ್ನು ಮಾಡಿ, ಸ್ಕೇಂಡಿನೇವಿಯಾ, ಸ್ವಿಜರ್‌ಲೇಂಡ್, ಜರ್ಮನಿ ಮೊದಲಾದ ದೇಶದ ಎಲ್ಲಾ ಭಾಗಗಳನ್ನು ಸಂಚರಿಸಿ ಮಕ್ಕಳ ಸಣ್ಣ ಸಣ್ಣ ಮೂಕನಾಟಕಗಳಲ್ಲಿ (hantomines) ಭಾಗವಹಿಸಿ ತುಂಬಾ ಮಾನ್ಯತೆಯನ್ನು ಪಡೆದಳು.

ಸಿನೇಮಾ ಜೀವನ

೧೯೩೩ನೇ ವರ್ಷದಲ್ಲಿ "ಕರ್ಮ" ಚಿತ್ರದ ದಿಗ್ದರ್ಶಕರಾದ ಹಿಮಾಂಶು ರೈಗಳನ್ನು ವರಿಸಿದಳು. 'ಕರ್ಮ'ದಲ್ಲಿನ ಅಭಿನಯವು ಆಕೆಯ ಮೊದಲನೆಯ ಸಾಹಸವಾಗಿತ್ತು. ಮಾತ್ರವಲ್ಲದೆ ಅದು ಭಾರತದ ಮೊಟ್ಟ ಮೊದಲನೇಯ ಆಂಗ್ಲೇಜಿ ಭಾಷೆಯ ಚಲನಚಿತ್ರವಾಗಿದ್ದಿತು. ಇದರಲ್ಲಿನ ಅಭಿನಯವೇ ಈಕೆಯು ಉತ್ತಮ ನಟಿಶ್ರೇಣಿಯವರಲ್ಲೊಬ್ಬಳೆಂದು ಭಾರತವು ತಿಳಿಯುವಂತಾಯಿತು. ಇದರ ಫಲವಾಗಿ ಬ್ರಿಟಿಷ ಬ್ರೋಡ್ ಕಾಸ್ಟಿಂಗ್ ಕೋರ್ಪರೇಶನಿನವರು ಮೊಟ್ಟಮೊದಲಿನ ಹಿಂದೂದೇಶದ ಶೋರ್ಟ್‌ವೇವ್ ಬ್ರೋಡ್‌ಕಾಸ್ಟನ್ನು ಪ್ರಾರಂಭಿಸುವಾಗ ಈಕೆಯನ್ನು ಆಮಂತ್ರಿಸಿ ಗೌರವಿಸಿದರು. ೧೯೩೪ರಲ್ಲಿ ಈಕೆಯು ಬೊಂಬೇ ಟೋಕಿಸ್ ಎಂಬ ಚಲಚ್ಚಿತ್ರ ಕಂಪೆನಿಯನ್ನು ಸೇರಿದಳು. ಭಾರತೀಯ ಅಭಿನಯದ ವಿಷಯ ಪಾಶ್ಚಾತ್ಯರ ಮನಸೆಳೆದವಳೆಂದರೆ ದೇವಿಕಾರಾಣಿಯೆ ಮೊದಲಿನವಳು. ಇದೊಂದು ಮಾತೇ ಬೊಂಬೇ ಟಾಕೀಸ್ ಕಂಪೆನಿಯವರಿಗೆ ಭೂಷಣವಾಗಿರುತ್ತದೆ. ಈಕೆಯು ಅಭಿನಯಿಸಿದ 'ಜವಾನಿಕಿ ಹವಾ' 'ಸಾವಿತ್ರಿ' 'ಜೀವನ ಪ್ರಭಾತ' 'ವಚನ' 'ಅಚ್ಯುತ ಕನ್ಯಾ' 'ನಿರ್ಮಲಾ' ಮೊದಲಾದ ಚಿತ್ರಗಳೆಲ್ಲವೂ ಅವಳಿಗೆ ಖ್ಯಾತಿಯನ್ನು ತಂದಿತಲ್ಲದೆ ಅವಳ ಕಂಪೆನಿಯೂ ಯಶಸ್ಸನ್ನು ಗಳಿಸುವಂತೆ ಮಾಡಿತು. ಈಕೆಯ ಅಭಿನಯ ಕೌಶಲ್ಯದಲ್ಲಿ ಮುಖ್ಯ ಒಂದು ವೈಶಿಷ್ಟ್ಯವೆಂದರೆ ಚಿಕ್ಕ ಬಾಲಿಕೆಯ ಭೂಮಿಕೆಯಿಂದ ಉಚ್ಚತಮ ಪ್ರಬುದ್ಧ ಭೂಮಿಕೆಯಲ್ಲಿ ಕೂಡಾ ಈಕೆಯ ಅಭಿನಯವು ನಿರ್ದೋಷವೂ ಸ್ವಾಭಾವಿಕವೂ ಆಗಿರುತ್ತದೆ.



ಅನೇಕ ಪಾಶ್ಚಾತ್ಯ ದೇಶಗಳನ್ನು ಸಂಚರಿಸಿ ಅಲ್ಲಿಯ ನವನಾಗರೀಕತೆಯ ಸ ಘಾರಗಳ ಅನುಭವ ಪಡೆದವಳಿದ್ದರೂ ದೇವಿಕಾರಾಣಿಯು ಒಂದು ಸಾದಾ ಭಾರತೀಯ ಸಿರಾಡಂಬರದ ಜೀವನವನ್ನು ಸಾಗಿಸುತ್ತಿರುವಳು.

'ನಿರ್ಮಲಾ' ಚಿತ್ರದಲ್ಲಿ ಭಾಗವಹಿಸಿ ವಿಶ್ರಾಂತಿಹೊಂದಿ ಹೊರಬಿದ್ದ ದೇವಿಕಾರಾಣಿಯು 'ದುರ್ಗಾ' ಎಂಬ ಚಿತ್ರಪಟದಲ್ಲಿ ಕೆಲಸ ಮಾಡಿರುವಳು. ಕಳೆದ ಜುಲಾಯಿ ತಾರೀಖು ಒಂದರಿಂದ ಮುಂಬಯಿಯ ರೋಕ್ಸಿ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಈ ಚಿತ್ರಕ್ಕೆ ಮುಂಬಯಿಯ ನಾಗರಿಕರು ಮನ್ನಣೆಯ ಸ್ವಾಗತ ವನ್ನಿತ್ತಿರುವರು.

'ದುರ್ಗಾ'

ಇದೊಂದು ಬೊಂಬೇ ಟಾಕೀಸಿನವರ ನವೀನ ಕೃತಿ. ಪ್ರಸಿದ್ಧ ಸಾಹಿತಿಗಳಾಗಿದ್ದ 'ಭಾಬಿ' ಚಿತ್ರಲೇಖಕರಾಗಿ ಜನಮನ ಸೆಳೆದ ಸರದಿಂದು ಬೆನರ್ಜಿಯವರೇ ಇದರ ಲೇಖಕರು. ಇದರಲ್ಲಿ ದೇವಿಕಾರಾಣಿ, ರಾಮಶುಕುಲ್, ಮುಮ್ತಾಜ್ ಅಲಿ, ಹಂಸಾ ವಾಡ್ಕರ್, ವಿಷ್ಣುಪಂತ ಔಂಧಕರ ಮೊದಲಾದವರು ಅಭಿನಯಿಸಿರುವರು. ಈಗಾಗಲೇ ವಿಶ್ರಾಂತಿ ಹೊಂದಿದ ದೇವಿಕಾರಾಣಿಯು ಈ ಚಿತ್ರದಲ್ಲಿ ಅಭಿನಯಿಸಿರುವಳು. ಹಳ್ಳಿಯ ನೈಜ ಜೀವನವೊಂದನ್ನು ಚಿತ್ರಿಸುವ ಚಿತ್ರಪಟ!

ದುರ್ಗಾ ಇವಳು ಬಡತನದ ಬೇಗೆಯಲ್ಲಿ ಹುಟ್ಟಿ ಬೆಳೆದ ಹಳ್ಳಿಯ ಹುಡುಗಿ. ಆದರೆ ಚಿಕ್ಕಂದಿನಿಂದಲೂ ಸ್ವಚ್ಛ ತುಂಟ ಸ್ವಭಾವದವಳು. ತಾಯಿಯು ಸತ್ತಾಗ ದುರ್ಗೆಯ ವಯಸ್ಸು ೧೨. ಚಿಕ್ಕದೊಂದು ಆಡಿನ ಮರಿಯು ಅವಳ ಸಂಗಾತಿ, ಮುರುಕು ಗುಡಿಸಲೊಂದೇ ಅವಳ ಆಸ್ತಿ. ಇಷ್ಟರಿಂದಲೇ ತೃಪ್ತಿಗೊಂಡು ಆಕೆಯು ತನ್ನ ಜೀವನವನ್ನು ಸಂತೋಷದಿಂದ ಸಾಗಿಸುತ್ತಿದ್ದಳು. ಆ ಹಳ್ಳಿಯಲ್ಲಿ ಆಕೆಯನ್ನು ಪ್ರೀತಿಸುವವರೆಂದರೆ ಇಬ್ಬರೆ. ತರುಣ ಡಾಕ್ಟರ ಜವಾಹರ ಮತ್ತು ನಾಗಲಾ ಎಂಬ ಮುದುಕ ಬೈರಾಗಿ.

ಒಂದೆ ಬಾರಿ ನೆರೆಹಳ್ಳಿಯಿಂದ ಸಾಲದ ಸೂಲಿಗಾಗಿ ಬಂದ ಜಮೀನ್ದಾರನೊಬ್ಬನ ದೃಷ್ಟಿಯು ದುರ್ಗೆಯ ಮೇಲೆ ಬಿತ್ತು. ಜಮೀನ್ದಾರನ ಹೆಂಡತಿ ಅದೇ ಸ್ವಲ್ಪ ದಿವಸಗಳ ಹಿಂದೆ ಸತ್ತಿದ್ದಳು. ಮನೆಯಲ್ಲಿ ಸಣ್ಣ ಮಗುವೊಂದು ಮಾತ್ರ ಇದ್ದಿತು. ದುರ್ಗೆಯ ಮೇಲೆ ಕಣ್ಣಿಟ್ಟ ಜಮೀನ್ದಾರನು ಆಕೆಯನ್ನು ತನ್ನ ಮನೆಗೆ ಬಂದು ನಿಲುವಂತೆ ಕೇಳಿಕೊಳ್ಳುವನು. ಕ್ರಮೇಣ ಆಕೆಯನ್ನು ಮದುವೆಯಾಗುವೆನೆಂದೇ ಜಮೀನ್ದಾರನ ಆಸೆ. ಅದೇ ಸಮಯಕ್ಕೆ ಸರಿಯಾಗಿ ಎನ್ ದುರ್ಗೆಯ ಗುಡಿಸಲಿಗೆ ಯಾರೋ ಬೆಂಕಿ ಹಚ್ಚಿ ಅದು ಉರಿದು ಹೋಗುವುದು. ಇದರಿಂದ ನಿರ್ಗತಿಕಳಾದ ದುರ್ಗೆಯು ಜಮೀನ್ದಾರನ ಮಾತಿಗೆ ಒಡಂಬಟ್ಟು ಜಮೀನ್ದಾರನೊಡನೆ ತೆರಳುವಳು. ಇದಾವುದೂ ಡಾಕ್ಟರ್ ಜವಾಹರನಿಗೂ ಬೈರಾಗಿ ನಾಗಲನಿಗೂ ಗೊತ್ತೇ ಇರುವುದಿಲ್ಲ.

ದುರ್ಗೆಯು ಜಮೀನ್ದಾರನ ಮನೆಯಲ್ಲಿ ಸುಖದಿಂದಿದ್ದರೂ ಹಳ್ಳಿಯ ತನ್ನ ಹಿತಚಿಂತಕರಾದ ಜವಾಹರ ಮತ್ತು ನಾಗಾಲನನ್ನು ಮರೆಯುವುದಿಲ್ಲ. ತರುಣ ಡಾಕ್ಟರ ಜವಾಹರನ ಮೇಲೆ ಆಕೆಯ ಪ್ರೇಮವು ಮನೆಮಾಡಿತ್ತು. ಇದರಿಂದಲೇ ಜಮೀನ್ದಾರನ ಮನೆಯಲ್ಲಿ ಬಂದು ವಾಸಿಸಿದರೂ ಆತನನ್ನು ಮದುವೆಯಾಗಬೇಕೆಂಬ ವಿಚಾರವೇ ಆಕೆಯ ಮನಸ್ಸಿಗೆ ಬರುವುದಿಲ್ಲ. ಸ್ವಲ್ಪ ಕಾಲದ ಮೇಲೆ ಜಮೀನ್ದಾರನು ದುರ್ಗೆಯೊಡನೆ ಲಗ್ನದ ಪ್ರಸ್ತಾಪವನ್ನೆತ್ತುವನು. ಅದಕ್ಕೆ ದುರ್ಗೆಯು ಒಪ್ಪದೆ ಅಲ್ಲಿಂದ ಹೊರಬೀಳಲು ಸಿದ್ಧಳಾಗುವಳು. ಆದರೆ ಚಿಕ್ಕಂದಿನಿಂದ ತನ್ನ ಕೂಸಿನಂತೆ ಸಾಕಿದ ಜಮೀನ್ದಾರನ ಮಗಳಾದ ಪದ್ಮಳನ್ನು ಬಿಟ್ಟು ತೆರಳಲು ಮನಸ್ಸು ಒಪ್ಪಲಿಲ್ಲ. ಇನ್ನು ಲಗ್ನದ ವಿಚಾರವನ್ನೇ ಎತ್ತುವುದಿಲ್ಲವೆಂದ ಜಮೀನ್ದಾರನಿಂದ ಮಾತುಪಡೆದು ಅಲ್ಲೆ ವಾಸಿಸುವಳು.

ಇತ್ತ ನಾಗಲ ಮತ್ತು ಜವಾಹರರು ದುರ್ಗೆಯ ಭಸ್ಮೀಭೂತವಾದ ಗುಡಿಸಲಿನ ಮೇಲೆಯೇ 'ದುರ್ಗಾಮಂದಿರ'ವೆಂಬ ಒಂದು ಆಸ್ಪತ್ರೆಯನ್ನು ಕಟ್ಟಿಸಿ ಬಡಬಗ್ಗರಿಗೆ ಚಿಕಿತ್ಸೆಯನ್ನು ನಡೆಸುತ್ತಾರೆ. ಒಮ್ಮೆ ಜಮೀನ್ದಾರನ ಮಗಳಾದ ಪದ್ಮಳಿಗೆ ಕಾಯಿಲೆಯಾಗಲು ಡಾಕ್ಟರ ಜವಾಹರನ ಚಿಕಿತ್ಸೆಯಿಂದ ಗುಣವಾಗುವುದು. ಈ ಸಮಯದಲ್ಲಿ ದುರ್ಗಾ-ಜವಾಹರರಿಗೆ ಭೇಟಿಯಾಗುವುದು. ಆದರೆ ತಮ್ಮ ಮನಸ್ಸಿನಲ್ಲಿರುವ ಪ್ರೇಮವನ್ನು ವ್ಯಕ್ತಪಡಿಸಲು ಇಬ್ಬರಿಂದಲೂ ಸಾಧ್ಯವಾಗುವುದಿಲ್ಲ.

ದುರ್ಗೆಯು ಜಮೀನ್ದಾರನನ್ನು ಲಗ್ನವಾಗಿ ತನ್ನ ಪ್ರೇಮಭಂಗವನ್ನು ಮಾಡುವಳು ಎಂದ ಮನನೊಂದ ಡಾ। ಜವಾಹರನು ಬೇರೊಬ್ಬಳನ್ನು ಮದುವೆಯಾಗಲು ಸಿದ್ಧನಾಗುವನು. ಈ ವಿಷಯವು ನಾಗಲನ ಮೂಲಕ ದುರ್ಗೆಗೆ ತಿಳಿದು ಬರುವುದು. ಇದರಿಂದ ದುರ್ಗೆಯ ಮನಸ್ಸಿನ ಮೇಲೆ ಭಯಂಕರ ಪರಿಣಾಮವಾಗುವುದು. ಇದನ್ನರಿತ ಜಮೀನ್ದಾರನ ದುರ್ಗೆಯು ಕಠಿಣ ಅಸ್ವಸ್ಥದಲ್ಲಿರುವಳೆಂದು ಜವಾಹರನಿಗೆ ತಿಳಿಸಲು ಹೋದಾಗ ಜವಾಹರನ ವಿವಾಹ ಸಮಾರಂಭವು ನೆರವೇರುತ್ತಲಿತ್ತು. ಆದರೆ ಜಮೀನ್ದಾರನಿಂದ ದುರ್ಗೆಯ ಅಸ್ವಸ್ಥತೆಯನ್ನು ಕೇಳಿದ ಡಾಕ್ಟರನು ದುರ್ಗೆಯ ಬಳಿಗೆ ಧಾವಿಸುವನು. ಇತ್ತ ಜವಾಹರನನ್ನ ವರಿಸಲು ಸಿದ್ಧಳಾದ ವಧುವನ್ನು ಡಾಕ್ಟರನ ಮಿತನೊಬ್ಬನು ಮದುವೆಯಾಗುವನು. ಕಟ್ಟಕಡೆಗೆ ಡಾಕ್ಟರನು ದುರ್ಗೆಯನ್ನು ಮದುವೆಯಾಗಿ ಸುಖಸಂತೋಷದಲ್ಲಿ ಕಥೆಯು ಕೊನೆಗೊಳ್ಳುವದು.

THE

Bank of Mangalore Ltd.,

MANGALORE

ESTD. 1931

Branches -

Panemangalore, Mudabidri & Padubidri.

Fixed Deposits will be received at the following rates of interest

For 3 months		3½%
„ 6 „		4%
„ 12 „		5%
24 „	& upwards	5½%

Interest Payable Quarterly

Savings Bank deposit** 3½%* ***on daily balances.

All kinds of banking business transacted

ಚಿತ್ರಹಿಂಸೆ

[೬ನೇ ಪುಟದಿಂದ ಮುಂದುವರಿದುದು]

ಗಂಗಮ್ಮನಿಗೆ ಏನೆಂದು ತಿಳಿಯಲಿಲ್ಲ. ಬೇರೆ ಯಾವ ಸಂದರ್ಭವಾಗಿದ್ದರೂ, ಅವಳು ಅಲ್ಲಿಗೆ ಹೋಗದೆ ಬಿಡುತ್ತಿರಲಿಲ್ಲ. ಆದರೆ ಇಂದು ತನ್ನ ಗುಡಿಸಲಲ್ಲಿ ಮಗಳು ತಿಂಡಿಗಾಗಿ ಕಾಯುತ್ತಿದ್ದಾಳೆ.

ಯಾರೋ ಹಿಂದಿನಿಂದ ಓಡಿಬರುವ ಕಾಲ ಸಪ್ಪಳ ಕೇಳಿಸಿತು. 'ಗಂಗಮ್ಮಾ ಸ್ವಲ್ಪ ತಡಿ, ಇಷ್ಟು ಅವಸರವೇನು?' ಹೀಗೆಂದು ಬೀರಣ್ಣನೇ ಆಕೆಯ ಮುಂದೆ ಬಂದು ನಿಂತು ಹೇಳಿದ.

ಬೀರಣ್ಣ ಕಟ್ಟಾಳು ಇಂತಹ ಕಠಿಣ ಕೆಲಸವೂ ಆತನ ದೃಢಕಾಯವನ್ನು ಕುಗ್ಗಿಸಿರಲಿಲ್ಲ. ಅಗಲವಾದ ಹಣೆ, ವಿಶಾಲವಾದ ಎದೆ, ಕರ್ರಗಿನ ಶರೀರ, ಬೀರಣ್ಣ ಸುಂದರನೂ ಭಯಂಕರನೂ ಆಗಿದ್ದ, ಆತನು ಯೋಧರ ವಂಶದಲ್ಲಿ ಹುಟ್ಟಿದ್ದನಂತೆ ಸರಕಾರಕ್ಕೆ ವಿರುದ್ಧ ದಂಗೆಯೆಬ್ಬಿಸಿದನೆಂದು ಅವನ ಹಿರಿಯರನ್ನು ಕ್ರಿಮಿನಲ್ ಶಿಕ್ಷೆಗೆ ಗುರಿಪಡಿಸಿದ್ದರು. ಯಾವಾಗಲೂ ಆತನ ಮಾತು ಚರ್ಯೆಗಳಲ್ಲಿ ತೀವ್ರವಾದ ಕ್ರಾಂತಿಯ ಗುಣವು ಒಡೆದು ತೋರುತ್ತಿತ್ತು ಗಂಗಮ್ಮನೇ ಒಮ್ಮೆ 'ಬೀರಣ್ಣಾ' ಹೀಗೆಲ್ಲಾ ಗಲಾಟೆ ಮಾಡಬೇಡ, ಅಧಿಕಾರಿಗಳ ಕೋಪಕ್ಕೆ ಗುರಿಯಾದರೆ, ಇದಕ್ಕಿಂತಲೂ ಕಷ್ಟವಾದ ಯಮ ಯಾತನೆಯನ್ನು ಅನುಭವಿಸಬೇಕಾಗುವುದು ಎಂದು ಎಚ್ಚರಿಸಿದಳು. 'ಅವರನ್ನು ಸುಡಲಿ' ಹೀಗೆಂದ ಆತ ಅದಕ್ಕೆ ನಗಾಡಿ ಹೇಳಿದ್ದ. ಹೀಗಾಗಿ ಬೀರಣ್ಣನ ಮೇಲೆ, ಇತರರಿಗೆ ಇದ್ದಂತೆ ಅವಳಿಗೂ ಒಂದು ರೀತಿಯ ಗೌರವವೇ ಇತ್ತು.

ಬೀರಣ್ಣ ಬಡವನೇ ಎಲ್ಲವನ್ನೂ ಹೇಳಿದ. ಸಭೆ ಕರೆದ ವಿಷಯವನ್ನೂ, ತಾವು ಒಟ್ಟಾಗಿದ್ದರೆ, ತಮ್ಮ ಇಂದಿನ ಈ ಸಂಕಷ್ಟಗಳನ್ನು ಪರಿಹರಿಸಬಹುದೆಂಬವಿಷಯವೂ ಆ ಭಾಷಣಕೊಡುವ ಗೃಹಸ್ಥನ ಒಳ್ಳೆಯ ಉಪದೇಶಗಳನ್ನು ಕೊಡುತ್ತಿರುವನೆಂದೂ, ಇಂದಿನ ಸಂಕಷ್ಟವನ್ನು ಪರಿಹರಿಸುವ ಸಲುವಾಗಿ, ನಾವೆಲ್ಲರೂ ಒಂದಾಗುವುದು ಅವಶ್ಯವೆಂದೂ ಆತನ ಮಾತನ್ನು ಕೇಳಿ, ಅರ್ಧಗಂಟೆ ಕಳೆದು ಮನೆಗೆ ಹೋಗಬಹುದೆಂದು ಆತ ಬಿನ್ನವಿಸಿದ ಆತನ ಕಣ್ಣುಗಳೇ ಆಕೆಯನ್ನು ಬೇಡುವಂತಿದ್ದುವು

ಗಂಗಮ್ಮನಿಗೆ ಯಾವುದೂ ಬೇಡವಾಗಿತ್ತು, ತನ್ನ ಮಗಳು, ಕೈಯ್ಯ ತಿಂಡಿ, ಅದನ್ನು ತಿಂದಾಗ ಕಾಳಿಗೆ ಆಗುವ ಆನಂದ, ತನ್ನ ಹೆತ್ತ ಕರುಳಿಗೆ ಅದರಿಂದ ಸಿಗುವ ಸಂತೋಷ ಇಷ್ಟು ಮಾತ್ರ ಆಕೆಗೆ ಬೇಕಿತ್ತು 'ಬೀರಣ್ಣಾ, ನಾನಿಂದು ಬರುವುದಿಲ್ಲ. ನನ್ನ ಮಗಳು ಕಾಳಿ ನನಗಾಗಿ ಕಾಯುತ್ತಿದ್ದಾಳೆ ಕ್ಷಮಿಸು' ಎಂದಳು ಬೀರಣ್ಣ ಸಿಟ್ಟುಮಾಡಿ ಹೇಳಿದ ಮರುಮಾತಾಡದೆ ಆಕೆ ಮುಂದುವರಿದಳು.

ಅಧಿಕಾರಿಗಳು ಗಂಡನನ್ನು ತನ್ನಿಂದ ಎಂದೆಂದೂ ಬೇರೆ ಮಾಡಿದ್ದರು ಇದ್ದ ಒಬ್ಬನೇ ಒಬ್ಬ ಮಗ ತೀರಿ ಹೋಗಿದ್ದ. ಬಾಳುವೆಯಲ್ಲಿ ದುಡಿದು ಕಂಗಾಲಾಗಿದ್ದಾಳೆ, ದುಡಿತದ ಸಂಕಷ್ಟ ಚೆನ್ನಾಗಿ ಗೊತ್ತಿದೆ; ಆದರೆ ಮುಂದಿನ ಒಂದು ಕ್ಷಣದ ಆ ಆನಂದ, ಆ ದಿವ್ಯ ಸ್ವಪ್ನವು ಅವಳಿಗೆ ಸ್ವರ್ಗೀಯವಾಗಿತ್ತು ಮಗುವಿನ ಬಹು ಕಾಲದ ಆಸೆಯನ್ನು ನಾನು ತೀರಿಸುತ್ತೇನೆ ಕಾಳಿಯು ತನ್ನನ್ನು ಒಳ್ಳೆಯವಳೆಂದು ತಿಳಿಕೊಳ್ಳುತ್ತಾಳೆ, ಆಕೆಯನ್ನು ಅಪ್ಪಿ ಮುದ್ದಾಡುತ್ತೇನೆ, ತೊಡೆಯಲ್ಲಿ ಕೂತುಕೊಳ್ಳಿಸಿ, ತಿಂಡಿಗಳನ್ನು ತಿನಕೊಡುತ್ತೇನೆ ಆಕೆಯ ಮಾತೃ ಹೃದಯವು ಪ್ರೇಮದ–ವಾತ್ಸಲ್ಯದ ಕನಸಿನಿಂದ ತುಂಬಿ ಹೋಯಿತು.

'ನೀನು ಹೋಗುವುದು ಸರಿಯಲ್ಲ, ಗಂಗಮ್ಮ' ನಿಷ್ಠುರನಾಗಿ ಬೀರಣ್ಣ ಹೇಳಿದ. ಆಕೆ ಅದನ್ನು ಗಮನಿಸದೆ ಮುಂದೇ ಹೋದಳು

ಗೇಟಿನ ಬಳಿ ಬಂದಾಗ, ಯಮದೂತನಂತೆ ನಿಂತಿದ್ದ ಕಾವಲುಗಾರ ಪಠಾಣನನ್ನು ನೋಡಿ, ಬೆದರಿಹೋದಳು. ಕಾವಲುಗಾರನಿಗೆ ಸಂಶಯ ಬಂತು. ಕೈಯ ದೊಣ್ಣೆಯನ್ನು ಎತ್ತಿ ಆಕೆಯನ್ನು ನಿಲ್ಲುವಂತೆ ಆಜ್ಞಾಪಿಸಿದ. ನಡುಕದಿಂದ ಮಡಿಲಲ್ಲಿ ಕಟ್ಟಿದ್ದ ಗಂಟು ನೆಲಕ್ಕೆಬಿತ್ತು. ತಿಂಡಿಯ ಆ ಗಂಟನ್ನು ಕಾಲಿಂದ ತುಳಿದು, ಆಕೆಯನ್ನು ಬಾಯಿಗೆ ಬಂದಂತೆ ಬೈದು ಕಳುಹಿಸಿದ.

೩

ಮರುದಿನ ಗಂಗಮ್ಮ ಕಲ್ಲು ಒಡೆಯುತ್ತಿದ್ದಂತೆ, ಅಳಲು ಮತ್ತು ಕೋಪಗಳಿಂದ ಆಕೆಯ ಹೃದಯವೂ ಒಡೆದು ಹೋಗುವಂತೆ ನೋವಾಗುತ್ತಿತ್ತು. ಅಧಿಕಾರಿಗಳ ಮಿತಿಯಿಲ್ಲದ ಈ ಅನಾಚಾರದಿಂದ ಆಕೆಯ ವಿಚಾರದಲ್ಲಿ ಕ್ರಾಂತಿಯು ಕೆರಳಿತ್ತು. ತನ್ನ ಮಗುವನ್ನು ತಿಂಡಿ ಕೊಟ್ಟು ಸಾಕುವ ಸ್ವಾತಂತ್ರ್ಯವೂ ತನಗಿಲ್ಲ? ಧೂಳಿನಲ್ಲಿ ಆ ತಿಂಡಿಯು ಆ ದುಷ್ಟನಿಂದ ತುಳಿಯಲ್ಪಟ್ಟಿತು

ಸ್ವಲ್ಪ ದೂರದಲ್ಲಿ ಒಂದು ಹೆಣ್ಣು ನಾಯಿಯು ಧೂಳಲ್ಲಿ ಬಿದ್ದುಕೊಂಡು, ತನ್ನ ಮರಿಗಳಿಗೆ ಮೊಲೆಯೂಡುತ್ತಿತ್ತು. ನಾಯಿಯು ಕ್ಷೀಣವಾಗಿ ಕಂಗಾಲಾಗಿದೆ ಆಹಾರವಿಲ್ಲದೆ ಎಷ್ಟು ದಿನವಾಯಿತೋ, ಮರಿಗಳು ಮೊಲೆಯನ್ನು ಹಿಡಿದು ಎಳೆಯುತ್ತಿವೆ ನೋವಾಗುವುದಿದ್ದರೂ ತಾಯಿಯ ಮುಖದಲ್ಲಿ ಒಂದು ಆನಂದವಿದೆ ಜಗತ್ತಿನಲ್ಲಿ ಮಾತೃಪ್ರೇಮವು ಎಷ್ಟು ಅಪೂರ್ವವಾಗಿದೆ! ಆದರೆ ಆಕೆಯ ತಲೆಮೇಲೆ ಸುತ್ತುತ್ತಿದ್ದ ಶಾಸನವು ಪ್ರಾಣಿಜಾತಿಗೆ ಇರುವ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ ಒಮ್ಮೆ ಆಕೆಗೆ ಅಪಮಾನ ಸಹಿತದ ಆವೇಶ ಬಂದಂತಾಗಿ, ಅಧಿಕಾರಿಗಳನ್ನು, ಶಾಸನವನ್ನೂ, ಸರಕಾರವನ್ನೂ ಪುಡಿಮಾಡಿ ಬಿಡಬೇಕೆಂದು [illegible] ಆದರೆ ಅಲ್ಲಿಂದ ಚಲಿಸಲಿಲ್ಲ. ಈ ಎಲ್ಲಾ ವಿಚಾರಗಳೂ ಒಂದು ತನಗೆ ತಡೆಯಲಾರದೆ ಹೋದಾಗ, ಬವಳವಾಗಿ ಕಂಬನಿಗರೆದಳು ಸೆರಗಿನ ತುದಿಯಿಂದ ಒರೆಸುತ್ತಾ ಕಲ್ಲನ್ನು ಒಡೆಯುತ್ತಲೂ ಇದ್ದಳು

ಮಧ್ಯಾಹ್ನ ಕೂಲಿಗಾರರಿಗೆ ಐದು ನಿಮಿಷ ವಿಶ್ರಾಂತಿಯಿತ್ತು ಬೀರಣ್ಣನಲ್ಲಿಗೆ ಬಂದು 'ಬೀರಣ್ಣಾ' ಎಂದಳು. ಆತ ಕೇಳಿದರೂ ಉತ್ತರಿಸಲಿಲ್ಲ

'ನೀನು ನನ್ನಲ್ಲಿ ಸಿಟ್ಟುಮಾಡುವುದು ನ್ಯಾಯವಾದುದು, ಆದರೆ ನಾನು ನಿನ್ನನ್ನು ಸಮಾಧಾನಪಡಿಸಬಲ್ಲೆ, ಮುಂದಿನ ಸಭೆಗಳಿಗೆ ನಾನು ತಪ್ಪದೆ ಬರುತ್ತೇನೆ ಈ ದಿನ ಸಭೆಯುಂಟೇ?'

ಬೀರಣ್ಣ ತಲೆ ಅಲ್ಲಾಡಿಸಿದ. ಸಭೆಗೆ ಬರುತ್ತಾಳೆಂಬ ಸಂತೋಷದಿಂದಲ್ಲ, ನಿನ್ನೆ ಹಾಗೆ ಮಾಡಿದವಳು ಈ ದಿನ ಇಷ್ಟು ವ್ಯತ್ಯಾಸವಾಗಬೇಕಾದರೆ? ಇದು ಆತನಿಗೆ ಆಶ್ಚರ್ಯವನ್ನು ಹುಟ್ಟಿಸಿತು. ಏನೋ ನಡೆದಿರಬಹುದೆಂದು ಆತ ತಿಳಿದ

ಆ ಕುರಿತು ಗಂಗಮ್ಮನೊಡನೆಯೇ ಪ್ರಶ್ನಿಸಿದ

'ಬೀರಣ್ಣಾ, ನನಗೆ ಯಾರೂ ಏನೂ ಬೋಧಿಸಲಿಲ್ಲ ನಿರ್ದಯ ಹೃದಯರಾದ ಈ ಅಧಿಕಾರಿಗಳೇ ತಮ್ಮ ಕೆಲಸದಿಂದ ನನಗೆ ಈ ಪಾಠವನ್ನು ಕಲಿಸಿದರು . . . .'

ಬೀರಣ್ಣನಿಗೆ ಅರ್ಥವಾಯಿತು. ಸಂತೋಷಗೊಂಡು ಸಾಯಂಕಾಲ ಕೆಲಸ ಮುಗಿಸಿ ಬಂದು ಬೀರಣ್ಣ 'ಗಂಗಮ್ಮ' ಎಂದು ಕರೆದ. 'ನಾವು ಹೋಗೋಣ' ಎಂದು ಉತ್ತರ ಕೊಟ್ಟಳು

ಗಂಗಮ್ಮ ಅವರ ಚಳವಳದಲ್ಲಿ ಸೇರಿದಳು. ಮಾನವ ಹಕ್ಕು ಸ್ವಾತಂತ್ರ್ಯಗಳಿಗಾಗಿ ಅವರು ಆಂದೋಲನ ಮಾಡಿದರು. ನ್ಯಾಯವನ್ನು ಪಡೆಯಲು ಪಾಡಿಸುವ ಅವರ ಹೃದಯದ ನಿರ್ಭಯ ಕ್ರಾಂತಿಯ ಅಟ್ಟಹಾಸವು ದಿಗಂತವನ್ನು ಭೇದಿಸುವಂತೆ ಮೊಳಗಿತು.

(ಇಂಗ್ಲಿಷ್ ಕಥೆಯೊಂದರ ಆಧಾರದಿಂದ)

—ದುರ್ಗಾದಾಸ.

Kanarese No 4

ಗಾಯಗಳಲ್ಲಿರುವ ಹೊಲಸು ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಸಣ್ಣ ಒಂದು ಚುಚ್ಚುವಿಕೆ ಯಾ ಭಯಂಕರವಾದ ಗಾಯ—ಎರಡೂ ಒಂದೇ ಸಮಾನ! ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೇ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ ಭಯಂಕರವಾದ ಹಾನಿಯು ತಲೆದೋರಬಹುದು, ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು. ಹಾಗೆ ದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟಿಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ಹಾಗಿದ ಭಾಗದಲ್ಲಿ ಕ್ರಿಮಿಗಳು ಕಾಣಿಸುವುದಿಲ್ಲ ಒಂದೂ ದೋಷವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರೋಗಜನಕವೆಂಬ ಭಯವೇ ಇರುವುದಿಲ್ಲ

ಗಜ್ಜಿ, ಗಾಯ, ವ್ರಣ, [illegible], ಹುಣ್ಣು, ಚರ್ಮರೋಗ, ಮುದ್ದಣ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿ

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು

CUTICURA OINTMENT

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಗೌರವಾಗಿ ಕಾರಖಾನೆದಾರರು ತಮ್ಮ ಸಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ವಾಗತ್ಯಗಳನ್ನು ಏಜಂಟರ ಹೆಸರು ಹಾಕಿ [illegible] ದಲ್ಲಿ ಪೋರಿಸ ಪದು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹೀರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳ [illegible] ಕೊಡಲ್ಪಡುವವು ೪) ಸ್ಟೇಷನ್ ಡೆಲಿವರಿ ಕೊಡುವದು ನಮ್ಮ [illegible] ಸ್ಪರ್ಧೆಯಲ್ಲಿ ಮಾಲು ಪರದೇಶದಿಂದ ಬರುವಂತೆ ಉಂಟು ಏಜಂಟರಿಗೆ ತ [illegible] ಕೊಡಲಾಗುವುದು ಕನ್ನಡ ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು

ವಿಚಾರ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎನ್. ಎಮ್ ನಾಫ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ

ಹೊನ್ನಾವರ ಏಜಂಟ್ —ಪಿ ಎಚ್. ಭಕ್ತಾ ಗದಗ—ವಿ. ಎಸ್. ಶೆಟ್ಟಿ.
ಮೈಸೂರು, ಕೂರ್ಗ್, ದಕ್ಷಿಣ ಕನ್ನಡಾ ಏಜೆಂಟ್ —ಡಾ. ಕೆ ಭಾಸ್ಕರ ಪೈ.
ಸ್ಪೆಶಲ್ ಏಜಂಟ್ — ಬಿ ವ್ಹಿ. ಹೊನ್ನಾವರ

Now! NACET SLOTTED BLADES

ಎಲ್ಲರ ಮನ್ನಣೆಗೆ ಪಾತ್ರವಾದ ನೆಸೆಟ್ ಬ್ಲೇಡುಗಳ ಬೊಕ್ಕಟವಾದ ಕ್ಷೌರದ ಸಂಪ್ರದಾಯವನ್ನು ಮುಂದರಿಸಲು ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳನ್ನು ಹೊರಡಿಸಿದ್ದೇವೆ, ಆದರೆ ಈ ಬಾರಿ ಅಧಿಕ ಉತ್ತಮತರದ್ದಾಗಿದೆ—

ಹೊಸ ಬ್ಲೇಡುಗಳು "ಸೀಳಾಗಿವೆ" ಹಿಂದೆ ಬಾರಿ ಪರೀಕ್ಷಿಸಿದಲ್ಲಿ ಅದರ ಸ್ವಲ್ಪ ಹೆಚ್ಚಿಸಿದ ಬೆಲೆಯ ಗುಣವನ್ನು ಕಂಡು ಸಮಾಧಾನವಾದೀತು ಅದು ಅಲ್ಲದೆ ಇದು ಹೊಸ ಯಾ ಹಳೆಯ ರೇಜರುಗಳಿಗೆ ಆಗುವ ತರದ್ದಾಗಿರುತ್ತದೆ,

10 ಬ್ಲೇಡುಗಳಿಗೆ ಅಣೆ 8



ಬಂಗಾಳದ ಶಿಲ್ಪಸಂಶೋಧನೆಯು ಭಾರತಕ್ಕೇ ಕೀರ್ತಿ ತಂದಿದೆ

ಪಹರಪುರದಲ್ಲಿ ನವೀನ ಶೋಧನಾ ಕಾರ್ಯ

ಭಾರತದ ಎಷ್ಟೋ ಶಿಲ್ಪ, ಲಲಿತಕಲೆ, ಸಂಸ್ಕೃತಿಗಳ ವೈಭವವು ಇತಿಹಾಸದ ಇರುಳಲ್ಲಿ ಅಡಕವಾಗಿವೆ. ಈಗೀಗ ಅವುಗಳ ಶೋಧನೆಯು ಅಖಿಲ ಭಾರತ ಸಂಶೋಧನಾ ಸಂಘದವರಿಂದ ಮಾಡಲ್ಪಟ್ಟು, ಅದ್ಭುತಗಳನ್ನು ಪ್ರಪಂಚದ ದೃಷ್ಟಿಪಥಕ್ಕೆ ತಂದಿವೆ. ಅಂತಹ ಮಹಿಮೆಯುಳ್ಳ ಸಂಶೋಧನೆಗಳಲ್ಲಿ ಇತ್ತೀಚೆಗೆ ಬಂಗಾಳದ ಪಹರಪುರದಲ್ಲಿ ನಡೆದುದು ಬಹಳ ವಿಶೇಷವಾಗಿದೆ. ಅಲ್ಲಿನ ಶಿಲ್ಪಮಯ ದೇಗುಲಗಳ ರಚನಾ ನೈಪುಣ್ಯ, ಸರ್ವ ಧರ್ಮಸಹಿಷ್ಣುತಾ ಕಾರ್ಯಗಳು ಭಾರತೀಯರಿಗೆ ತಮ್ಮ ಗತವೈಭವದ ಪುಣ್ಯ ಸ್ಮರಣೆಯನ್ನು ಹುಟ್ಟಿಸಿ ಮುನ್ನಡೆಸಲು ಸಹಾಯಕವಾಗುವುದು

ಬಂಗಾಳದ ಪಹರಪುರ ಎಂಬಲ್ಲಿನ ಇತಿಹಾಸದ ಭಗ್ನಾವಶೇಷ ಸ್ಥಳವನ್ನು ಭಾರತೀಯ ಇತಿಹಾಸ ಸಂಶೋಧ ಸಂಘದವರು ಪರೀಕ್ಷಿಸಿ ನೋಡಿ, ಭಾರತೀಯ ಕಲಾಸಂಸ್ಕೃತಿಗಳ ಪ್ರಾಚೀನ ವೈಭವದ ಕುರಿತು ಅನೇಕ ಮಹತ್ವದ ವಿಷಯಗಳನ್ನು ಈಗ ಜಗತ್ತಿನ ದೃಷ್ಟಿಪಥಕ್ಕೆ ತಂದಿದ್ದಾರೆ.

ಎತ್ತರವಾದ ಪರ್ವತಾಕಾರವಾಗಿದ್ದ ಈ ಪ್ರದೇಶವು ಭಾರತದ ಸಂಶೋಧಕ ಸಂಘದ ರಕ್ಷಣೆಯಲ್ಲಿ ಕಳೆದ ೨೦ ವರ್ಷಗಳಿಂದ ಕಾಯಲಾಗಿತ್ತು. ಕಳೆದ ೧೬ ವರ್ಷಗಳಿಂದ ಇದರ ಸಂಶೋಧನೆಯು ಆರಂಭವಾಗಿತ್ತು. ಈ ಭಗ್ನಾವಶೇಷವು ಉನ್ನತವಾಗಿದ್ದುದರಿಂದ ಇದಕ್ಕೆ ಜನರು ಪಹಾರ್ ಎಂದರೆ ಪರ್ವತವೆಂದು ಕರೆದರು. ಆ ಕಾರಣವೆ ಆ ಹಳ್ಳಿಗೆ ಪಹಾರ್‌ಪುರವೆಂಬ ಹೆಸರಾಯಿತು. ಅನೇಕ ಮಂದಿ ಇತಿಹಾಸ ಕುಶಲರು ಭಾರತದ ನಾನಾ ಭಾಗದಿಂದ ಇಲ್ಲಿಗೆ ಬರುತ್ತಿದ್ದರು. ಆದರೆ ಭಾರತದ ಅತ್ಯಂತ ಮಹತ್ವವಾದ, ಒಂದು ಉನ್ನತ ಭಗ್ನಾವಶೇಷವು ಇದರೊಳಗೆ ಇರಬಹುದೆಂಬ ವಿಷಯವು ಯಾರಿಗೂ ಹೊಳೆದಿರಲಿಲ್ಲ.

ಅಪ್ರತಿಮ ದೇವಾಲಯ

೧೯೨೫ರಿಂದು ಈ ಸ್ಥಳವನ್ನು ಸಂಶೋಧಿಸಲು ಆರಂಭವಾಯಿತು. ಇತ್ತೀಚೆಗೆ ಆ ಕೆಲಸವು ಸಂಪೂರ್ಣವಾಯಿತು. ಈಗ ನಾಲ್ಕು ಮಾಳಿಗೆಯ ಉನ್ನತ ಬೌದ್ಧ ದೇವಾಲಯವೊಂದು ಅದರೊಳಗಿರುವುದು ಕಂಡುಹುಡುಕಲಾಗಿದೆ. ಇದರ ರಚನೆಯು ಬಹಳ ಅಸದೃಶವೆಂದು ತಿಳಿದಿದೆ. ೧೯೦ ಇತರ ಮಂದಿರಗಳಿಂದ ಸೇರಿದ ಈ ದೇವಾಲಯವು ವಿಶಾಲವಾಗಿದೆ.

ಬೌದ್ಧರ ತಾರಾ, ದೇವತೆಯ ದೇವಾಲಯದ ರಚನೆಯ ವಿಧಾನಕ್ಕೆ ಹೋಲುವ ಇನ್ನೊಂದು ಸತ್ಯಪೀರಭಿತಾ ಎಂಬ ಮಹಾಭಗ್ನಾವಶೇಷವೂ ಅದರಡಿಯಲ್ಲಿ ಕಂಡುಬಂದಿದೆ. ಸ್ನಾನದ ಘಾಟುಗಳು, ಮಹಾದ್ವಾರಗಳು, ಇವೇ ಮೊದಲಾದ ಅನೇಕ ರಚನೆಗಳು ಈಗ ಪ್ರಕಾಶಕ್ಕೆ ಬಂದಿವೆ.

ಮುಖ್ಯ ದೇವಾಲಯದ ರಚನೆ

ಮುಖ್ಯ ದೇವಾಲಯದ ರಚನೆಯು ಬಹು ಅಪೂರ್ವವಾಗಿ ತೋರುತ್ತದೆ. ಇದರ ನಾಲ್ಕು ಸುತ್ತೂ ಚೌಕದಲ್ಲಿ ಕಟ್ಟಡಗಳು ಬಂದಿವೆ. ಪ್ರತಿಯೊಂದು ಭಾಗದಲ್ಲಿಯೂ ಅಡ್ಡವಾಗಿರುವ ಬೇರೆ ಮಂದಿರಗಳಿವೆ. ಪ್ರತಿಯೊಂದೂ ನಾಲ್ಕು ಪ್ರಾಥದ ರಚನೆಯಾಗಿ ಕಟ್ಟಲ್ಪಟ್ಟಿದೆ. ಅಂತೂ ಇದು ಹಿಂದೂದೇಶದಲ್ಲಿ ಕಂಡು ಹುಡುಕಿದ ಕಲಾಕೃತಿಗಳಲ್ಲಿ ಅಸದೃಶವಾದುದು. ಮಾತ್ರವಲ್ಲದೆ ಬರ್ಮಾ, ಜಾವಾ ಮತ್ತು ಮಲಯನ್ ದ್ವೀಪಗಳಲ್ಲಿರುವ ಮಂದಿರದ ರಚನಾ ನೈಪುಣ್ಯವನ್ನು ಸರಿಹೋಲುವುದು. ಪಹರಪುರದ ಈ ಮಹಾ ಸಂಶೋಧನೆಯ ನಂತರ ಇದೇ ರೀತಿಯ ಶಿಲ್ಪರಚನಾ ಚಾತುರ್ಯವು ಬೀಹಾರಿನ ನಂದನಗರ್ ಎಂಬಲ್ಲಿಯೂ ಕಂಡು ಹುಡುಕಲ್ಪಟ್ಟಿದೆ. ಆದರೆ ವಿಶಾಲಭಾರತದ ವಿಶಾಲ ಶಿಲ್ಪರಚನಾ ವೈಭವದ ಮಹತ್ತಿಕೆಯನ್ನು ಈ ಪಹರಪುರದ ಶಿಲ್ಪಮಂದಿರಗಳಷ್ಟು ಬೆಳಗಿಸುವುಗಳು ಬೇರೆ ಯಾವುವೂ ಇಲ್ಲ.

ಅದ್ಭುತ ಮೂರ್ತಿಗಳು

ಎಲ್ಲದಕ್ಕಿಂತಲೂ ವಿಶೇಷವಾದ ಇನ್ನೊಂದು ಸಂಶೋಧನೆಯೆಂದರೆ ಈ ಮುಖ್ಯ ದೇವಾಲಯದ ಕೆಳಗಡೆಯಲ್ಲಿರುವ ಉನ್ನತ ಶಿಲಾಮೂರ್ತಿಯೊಂದು. ಆರು ಮತ್ತು ಏಳನೇ ಕ್ರಿಸ್ತಶಕದ ಭಾರತೀಯ ಕಲಾ ವೈಭವದ ಮಹತ್ವಪೂರ್ಣವಾದ ಗುರುತಾಗಿ ಇದು ಶೋಭಿಸುತ್ತಿದೆ. ಬೌದ್ಧವಿಹಾರವಾಗಿ, ಪಾಲ ರಾಜನಾದ ಧರ್ಮಪಾಲನಿಂದ ಏಳನೇ ಶತಮಾನದಲ್ಲಿ ಕಟ್ಟಲ್ಪಟ್ಟ ದೇಗುಲದಲ್ಲಿ ಅಲ್ಲಲ್ಲಿ ಬ್ರಾಹ್ಮಣ ದೇವತಾ ಕೃತಿಗಳು ಕೆತ್ತಿದ್ದನ್ನು ಕಾಣುವದು ನಿಜವಾಗಿಯೂ ಪರಮಾಶ್ಚರ್ಯವನ್ನು ಹುಟ್ಟಿಸುವಂತಹುದಾಗಿರುತ್ತದೆ. ಅವುಗಳು ಬಹಳ ಶುಭ್ರ ಮತ್ತು ಸುಂದರವಾಗಿ ಇಂದೂ ವ್ಯಕ್ತವಾಗುತ್ತವೆ.

ಇವುಗಳಲ್ಲಿ ಹೆಚ್ಚಿನ ಚಿತ್ರಕೃತಿಗಳು ಭಗವಾನ್ ಶ್ರೀ ಕೃಷ್ಣನ ಬಾಲ್ಯಲೀಲೆಗಳನ್ನು ತೋರಿಸುವಂತಹವುಗಳು, ಮಾತ್ರವಲ್ಲದೆ ಇನ್ನನೇಕ ವಿಚಿತ್ರಗಳು ರಾಧೆಯೊಡನೆ ಶ್ರೀಕೃಷ್ಣನ ವಿಲಾಸವಿಹಾರಗಳನ್ನು ವರ್ಣಿಸುವ ಶೃಂಗಾರ ದೃಶ್ಯಗಳು. ದಿವ್ಯದಂಪತಿಗಳ ದಿವ್ಯ ಶೃಂಗಾರವು ಈ ಚಿತ್ರಾಕೃತಿಗಳಲ್ಲಿ ಸುಂದರವಾಗಿ ಕಂಡು ಹುಡುಕಲ್ಪಟ್ಟಿದೆ. ಬಂಗಾಳದಲ್ಲಿ ಇಷ್ಟು ಸುಂದರವಾದ ಇಂತಹ ಚಿತ್ರಲೇಖನವು ಇನ್ನೆಲ್ಲಿಯೂ ಇದುವರೆಗೆ ಕಂಡು ಬರಲಿಲ್ಲ.

ಭಿತ್ತಿ ಚಿತ್ರಗಳು

ಪಹರಪುರದ ಈ ಶಿಲ್ಪಮಂದಿರಗಳ ಚಿತ್ರಣದಲ್ಲಿ ಗೋಡೆಗಳಲ್ಲಿ ಕೆತ್ತಲ್ಪಟ್ಟಿರುವ ನಾನಾ ವಿಧವಾದ ಸುಂದರ ವಸ್ತು ಚಿತ್ರೀಕರಣದ ಬೆಡಗು ಯಾರನ್ನಾದರೂ ತಲೆದೂಗಿಸುವಂತಹವುಗಳಾಗಿವೆ. ಇವುಗಳು ಒಟ್ಟು ೨,೮೦೦೦ ಇರುವುದಾಗಿ ತಿಳಿದಿದೆ. ಗೋಡೆಗಳನ್ನು ಅಲಂಕರಿಸುವಲ್ಲಿ ಇವುಗಳು ಪ್ರಾಮುಖ್ಯವಾಗಿ ಕಂಡುಬರುತ್ತವೆ. ಕೆಲವು ಗೋಡೆಗಳಲ್ಲಿ ಇವುಗಳು ಎರಡು ಮೂರು ಸಾಲುಗಳಾಗಿಯೂ ಕಾಣಸಿಗುತ್ತವೆ.

ಇವುಗಳಲ್ಲಿ ಬೌದ್ಧ ಮತ್ತು ಬ್ರಾಹ್ಮಣ ದೇವತೆಗಳ ನಾನಾ ವಿಧ ರೂಪಗಳ ಸಮ್ಮಿಶ್ರಣವನ್ನು ನಾವು ಕಾಣಬಹುದು. ಕೆಲವು ಅಮಾನುಷವಾದ ರೂಪಗಳಿವೆ. ಹಲವು ಪ್ರಾಣಿಗಳ ಚಿತ್ರಗಳಿವೆ. ಜನಪದಗಳಲ್ಲಿ ಪ್ರಚಾರವಿರುವ ಕಥಾಚಿತ್ರಗಳಿವೆ. ಸುತ್ತಲಿನ ಗ್ರಾಮಗಳಲ್ಲಿನ ಜನರು ದಿನಂಪ್ರತಿ ವ್ಯಾಪೃತರಾಗಿರುವ ಬೇರೆ ಬೇರೆ ಉದ್ಯೋಗಗಳ ಚಿತ್ರಗಳಿವೆ. ಅಲ್ಲಿನ ಬೇರೆ ಬೇರೆ ಪ್ರಾಣಿಗಳು, ಹಕ್ಕಿಗಳು, ಸಸ್ಯ ಜಾತಿಗಳು, ಹೂಗಿಡಗಳು ಇವೇ ಮೊದಲಾದುಗಳು ಅತ್ಯಂತ ಚಮತ್ಕಾರವನ್ನು ಉಂಟುಮಾಡುವಂತೆ ಚಿತ್ರಿಸಲ್ಪಟ್ಟಿವೆ. ಅಂತೂ ೧,೨೦೦ ವರ್ಷಗಳ ಹಿಂದೆ ಇದನ್ನು ಕೆತ್ತಿದ ಮಹಾ ಶಿಲ್ಪಿಯು ಅಲ್ಲಿ ಪ್ರಪಂಚದ ಸಂಪೂರ್ಣ ಜೀವಿಜಾಲಗಳ ಸೊಬಗನ್ನು, ಪ್ರಪಂಚದ ಅನೇಕ ವಿಧದ ಚಿತ್ರಸೌಂದರ್ಯವನ್ನು ಅಲ್ಲಿ ಒಂದು ಕಡೆಯಲ್ಲಿ ತಂದು ತೋರಿಸಿರುವನು.

ಶಾಸನಗಳು

ಅನೇಕ ತಾಮ್ರ ಶಿಲಾಶಾಸನಗಳು ಅಲ್ಲಿ ಕಾಣಸಿಕ್ಕಿವೆ. ಅವುಗಳಲ್ಲಿ ಪ್ರಾಮುಖ್ಯವಾದುದು ಒಂದು ವಿಹಾರದಲ್ಲಿ ಜಿನ ಆರಾಧನೆಗಾಗಿ ಭೂಮಿಯನ್ನು ಉಂಬಳಿಯಾಗಿ ಬಿಟ್ಟ ವಿವರವನ್ನು ಹೇಳುವ ತಾಮ್ರಶಾಸನವು. ಎಲ್ಲದಕ್ಕಿಂತಲೂ ಪ್ರಾಮುಖ್ಯವಾಗಿದ್ದ ಇದನ್ನು ದಾನ ಮಾಡಿಕೊಟ್ಟವರು ಬ್ರಾಹ್ಮಣ ದಂಪತಿಗಳೆಂಬ ವಿಷಯವು ಅತ್ಯಂತ ಗಮನಾರ್ಹವಾಗಿದೆ. ಹೀಗೆ ಬೌದ್ಧ, ಹಿಂದೂ, ಜೈನಧರ್ಮಗಳ ಸಂಮಿಶ್ರಣ ಸಂಸ್ಕೃತಿಯು ಒಂದಕ್ಕೊಂದು ಸಂಘರ್ಷಣೆಯನ್ನು ಹುಟ್ಟಿಸದೆ ಜತೆ ಜತೆ ಬೆಳೆದ ವಿಷಯ ಮತ್ತು ಅನ್ಯಮತ ಸಹಿಷ್ಣುತೆಯ ವಿಷಯ ಪ್ರಾಚೀನ ಭಾರತೀಯರ ವಿಶಾಲ ಬುದ್ಧಿಯನ್ನು ತೋರಿಸುತ್ತದೆ.

---

೫ ವರ್ಷಗಳಲ್ಲಿ ೪೫ ಗಾಯಗಳು

ಪಶ್ಚಿಮ ಆಸ್ಟ್ರೇಲಿಯದ ಪೆರ್ತ್ ನಗರದಿಂದ ಈ ವಾರ್ತೆಯು ಬಂದಿದೆ:

“ಕೆ. ಎಂ. ಬೆಸ್ಟ್ ಎಂಬ ಪೆರ್ತಿನ ವಿಕ್ಟೋರಿಯಾ ಪಾರ್ಕಿನ ನಿವಾಸಿಗೆ ವಲೆರಿ ಬೆಸ್ಟ್ ಎಂಬ ಐದು ವರ್ಷದ ಬಾಲಿಕೆಯಿದ್ದಾಳೆ. ಆಕೆಗೆ ಈಗಾಗಲೇ ಅವಳ ಜೀವನದಲ್ಲಿ ೪೫ ಗಾಯಗಳ ಅನುಭವವಾಗಿದೆ.

ಆಕೆಯ ಶರೀರವು ಬಹಳ ಮೃದು. ಮಗುವನ್ನು ಮೇಲಕ್ಕೆ ಎತ್ತಿದರೆ ಸಾಕು. ಎಲ್ಲಿಯಾದರೂ ಒಂದು ಗಾಯವಾಗಿ ಎಲುಬು ಮುರಿದು ಹೋಗುತ್ತದೆ. ಇಂತಹ ಎಲುಬಿನ ಅಪ್ರಾಕೃತಿಕವಾದೊಂದು ರೋಗವು ಆವಳಿಗಿದೆ. ಇದನ್ನು ಗುಣಪಡಿಸಲು ಡಾಕ್ಟರರು ಯತ್ನಿಸಿ ಇಂದು ನಿರಾಶರಾಗಿದ್ದಾರೆ. ಆಕೆಯ ತಾಯಿಗೂ ಇದೇ ರೀತಿಯ ರೋಗವಿತ್ತು. ಐದು ವರ್ಷಗಳಾದರೂ ಆ ಹುಡುಗಿ ನಡೆಯಲು ಅಸಮರ್ಥಳಾಗಿದ್ದಾಳೆ. ಆದರೆ ಮನೆ ಸುತ್ತು ಆಲಿವಾಡುವಳು.”

ಜಾಹೀರಾತುಗಳಿಗೆ

ಸ್ವದೇಶಾಭಿಮಾನಿ

ಅತ್ಯುತ್ತಮ ಸೌಕರ್ಯಕೊಡುವುದು:

ಪ್ರತಿಫಲಬರುವಂತೆ ಸಾಧಿಸುವುದು.

ಹಿಂದೂ ಅನಾಥಾಶ್ರಮ

ಶಾಂತಿನಿಕೇತನ : : ಕೊರಾಡಿ

ನಿರ್ಗತಿಕ ಮಕ್ಕಳ ನೀತಿ ಬೋಧೆಗೆ ನಿರುಪಮ ಸೌಕರ್ಯ. ಶಾಂತವಾದ ವಾತಾವರಣದ ಶಾಂತಿನಿಕೇತನ ಬಾಲಕರಿಗೆ ಸುಲಭದಲ್ಲಿ ವಿದ್ಯೆಕಲಿಸಲು ಸಕಲರೂ

ಈಗ ತಾನೇ ತೆರೆಯಲ್ಪಟ್ಟ ಅನಾಥಾಶ್ರಮಕ್ಕೆ ಅಕ್ಕರೆಯ ಮಕ್ಕಳನ್ನು ಕಳುಹಿಸಿರಿ.

ಅನಾಥರು ಅನುಭವಕ್ಕೆ ಬರೆಯಿರಿ—

ಎಲ್ಲಾ ಜಾತಿಯವರಿಗೂ ಪ್ರವೇಶವಿದೆ.

ಮೆನೇಜರ್, ಶಾಂತಿನಿಕೇತನ, ಕೊರಾಡಿ, (ದ. ಕ.)

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ “ಸಾರಥಿ ನಸ್ಯ”ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟುಕು ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲವರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧. ಸಾರಥಿ ನಸ್ಯ 1 ವೀಸಕ್ಕೆ ರೂ. 3–8–0 ನವೀನ ಮಾರ್ಕು ಸಾರಥಿ ನಸ್ಯ 1 ವೀಸಕ್ಕೆ ರೂ. 3-0-0

(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ.

ವಿಳಾಸ:—

ಎ. ಪಿ. ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸು

ಎಂಬ ಹಂಬಲದಿಂದ ದಮ್ಮು ಹತ್ತಿ ಬಳಲುವವನು ತೀವ್ರ ಗುಣವಾಗುವ ಆಶೆಯಿಂದ ಎಂಟು ಹತ್ತು ನಿಮಿಷಗಳಲ್ಲಿಯೇ ದಮ್ಮು ನೆಟ್ಟಗೆ ಆಗುವದು ಎಂದು ಪ್ರಶಿದ್ಧ ಹೊಂದುವ ಪೇಟೆಂಟ ಉಪಾಯಗಳನ್ನು ಉಪಯೋಗಿಸಿ ದೇಶಕ್ಕೆ ಹೋಗುತ್ತಾನೆ. ಆದರೆ ದಮ್ಮಿನಂಥ ಕಠ್ಠಿಣ ಬೇನೆಯನ್ನು ಸಾಂಗೋಪಾಂಗ ಚಿಕಿತ್ಸೆ ಮಾಡದೆ, ಬೇರು ಸಹಿತ ನಾಶಮಾಡಿ ನೆಟ್ಟಗೆ ಆಗದು ಎಂಬ ಆತ ತಿಳಿಯುವದು ನಿಜ.

ದಮ್ಮು ಹತ್ತಿದವನ ಪ್ರಕೃತಿಯು ಒಳಗಿಂದೊಳಗೇ ಕೆಟ್ಟು ಹೋಗಿರುತ್ತದೆ. ದಮ್ಮು ಮಾತ್ರ ಬರೇ ಹೊರಗೆ ತೋರುವ ಲಕ್ಷಣ. ಆದ್ದರಿಂದ ಬಳಲುವವರು ಸ್ವಲ್ಪ ವೇಳೆ ಶಾಂತವಾದರೆ ದಮ್ಮು ಗುಣವಾಯಿತು ಎಂದು ಅನ್ನಲಿಕ್ಕೆ ಬರುವದಿಲ್ಲ. ಉಸಿರಾಡುವದನ್ನು ನಿಯಮಿತವಾಗಿಯೂ ದೃಢವಾಗಿಯೂ ಮಾಡುವಂಥ ಔಷಧಗಳೇ ದಮ್ಮನ್ನು ನೆಟ್ಟಗೆ ಮಾಡುವವು. ಆದರೆ ಆ ಔಷಧಗಳಿಂದ ಸಂಪೂರ್ಣ ಗುಣವಾಗಬೇಕಾದರೆ ಅವುಗಳ ಜೊತೆಗೆ ನಿಯಮಿತ ಶೌಚಶುದ್ಧಿಯಾಗಿ ಪಚನ ಕ್ರಿಯೆಯು ಸುಧಾರಿಸುವಂಥ ಮತ್ತು ಶಕ್ತಿಯನ್ನು ಕೊಡುವಂಥ ಉಪಾಯವೂ ಆಗಬೇಕು.

ಪುರೋಹಿತ ಶ್ವಾಸಹಾರಿಯಲ್ಲಿ ಇಂಥ ಔಷಧಗಳು ಸರಿಯಾಗಿ ಸೇರಿದ್ದರಿಂದ ದಮ್ಮಿನ ಮೂಲಕಾರಣವನ್ನು ದೂರ ಮಾಡಿ ಅದರ ಮೇಲೆ ತನ್ನ ಪ್ರಭಾವವನ್ನು ತೋರಿಸಿ ಮೆಲ್ಲ ಮೆಲ್ಲಗೆ ಆದರೆ ಖಂಡಿತವಾಗಿ ದಮ್ಮನ್ನು ನೆಟ್ಟಗೆ ಮಾಡುವ ಕಾರ್ಯದ ಔಷಧಗಳಲ್ಲಿ ಅದು ಎಷ್ಟೋ ವರ್ಷಗಳಿಂದ ಶ್ರೇಷ್ಠವೆಂದು ಗಣನೆಯಾಗಿದೆ. ಆದ್ದರಿಂದ ದಮ್ಮು, ಕೆಮ್ಮು, ದುಂಬುಸ್ ಸ್ಕಂಯ್ ಇಲ್ಲವೆ ಗಂಟಲು ಉರಿಯುವಂಥ ಕೆಮ್ಮು ಮತ್ತು ಕ್ಷಯರೋಗದ ಎಲ್ಲ ನಮೂನೆಗಳಿಗೆ ಅದು ಗುಣಮಾಡುವಂಥ ಔಷಧವು ಆಗಿದೆ.

ಎಲ್ಲ ಕಡೆಯಲ್ಲಿ ಸಿಗುತ್ತದೆ.

ಡಾಕ್ಟರ ಪುರೋಹಿತ ಫಾರ್ಮಸಿ, ಕಲ್ಕತ್ತಾ

ಪುರೋಹಿತ ಶ್ವಾಸಹಾರಿ ದಮ್ಮಿಗೆ ಗುಣಕಾರಿ

ಆತ್ಮಶಕ್ತಿಯನ್ನು ಗಳಿಸಿ ಜೀವನ ಸಂಗ್ರಾಮದಲ್ಲಿ ವಿಜಯಿಗಳಾಗಿರಿ

ವಿದ್ಯಾ ಮಂತ್ರಿ ಮಾನ್ಯ ವಾರ್ಕಿಯವರು ಪದವೀದಾನ ಸಮಾರಂಭದಲ್ಲಿ ಮಾಡಿದ ಭಾಷಣ

ಮದ್ರಾಸು ವಿಶ್ವವಿದ್ಯಾಲಯದ ಗೌರವ ಕೀರ್ತಿಗಳು
ಸಾರ್ವಜನಿಕ ನಿಧಿಯ ಸಹಾಯವಿಲ್ಲ
ಮಾನಸಿಕ-ಸಾಮಾಜಿಕ ಸಂಸ್ಕೃತಿಗಳ ಸಂಗ್ರಹವೇ ಧ್ಯೇಯ

ಮದ್ರಾಸು ವಿಶ್ವವಿದ್ಯಾಲಯದ ವಾರ್ಷಿಕ ಪದವೀದಾನ ಸಮಾರಂಭವು ಆಗಸ್ಟ್ ೪ರಂದು ಸಿನೇಟ್ ಹಾಲಿನಲ್ಲಿ ಜರಗಿತು. ಮಾನ್ಯ ವಿದ್ಯಾ ಮಂತ್ರಿಗಳಾದ ಸಿ. ಜೆ. ವಾರ್ಕಿಯವರು ಸಮಾರಂಭದ ಭಾಷಣವನ್ನಿತ್ತರು. ಅದರ ಸಾರಾಂಶ ಹೀಗಿದೆ.

"ಮದ್ರಾಸು ವಿಶ್ವವಿದ್ಯಾಲಯವು ಜ್ಞಾನದಾನದಲ್ಲಿ ಹೆಚ್ಚಿನ ಗೌರವದ ಮತ್ತು ಉತ್ತಮವಾದ ನೆಲೆಯನ್ನು ಪಡೆದಿದೆ. ಶ್ರೇಷ್ಠರಾದ ಪ್ರೊಫೆಸರರನ್ನು, ಲೆಕ್ಚರರನ್ನು ಇಟ್ಟುಕೊಂಡು ಒಳ್ಳೆಯ ಶಿಸ್ತಿನಿಂದ ಶಾಲೆ, ಕಾಲೇಜುಗಳನ್ನು ನಡೆಸಿ, ಯೋಗ್ಯ ಪರೀಕ್ಷೆಗಳನ್ನು ಏರ್ಪಡಿಸುವ ಕಾರ್ಯಪ್ರವೀಣತೆಯಿಂದ ಈ ಕೀರ್ತಿಯನ್ನು ಪಡೆದಿರುತ್ತದೆ. ಇನ್ನು ಮುಂದಾದರೂ ಆ ಗೌರವವು ಕಡಿಮೆಯಾಗದಂತೆ ನೋಡುವುದವಶ್ಯ

ಈ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದ ಅನೇಕ ಮಹನೀಯರು ದಕ್ಷಿಣಭಾರತದ ಸಾರ್ವಜನಿಕ ಕಾರ್ಯರಂಗದಲ್ಲಿ ಬಹಳ ಪ್ರಕಾಶರಾದವರು ಹಲವರಿದ್ದಾರೆ. ಅವರ ಉತ್ತಮ ಜೀವನಾದರ್ಶವು ಮುಂದಿನ ಜನತೆಗೆ ಆದರ್ಶವಾಗಲಿ

ಈ ವಿಶ್ವವಿದ್ಯಾಲಯವು ಪ್ರತಿ ದಿನದಿಂದ ದಿನದ ವಿದ್ಯೆಯು ಸರ್ವಾಂಗಗಳಲ್ಲಿಯೂ ಉನ್ನತಿಯನ್ನು ಹೊಂದುತಿದ್ದು ಸಂಪೂರ್ಣತೆಯನ್ನು ಹೊಂದಿದೆ

ವಿಶ್ವವಿದ್ಯಾಲಯದ ಶಿಕ್ಷಣದ ಪ್ರಯೋಜನ

ವಿಶ್ವವಿದ್ಯಾಲಯದ ಶಿಕ್ಷಣದಿಂದ ಮನುಷ್ಯನ ಮಾನಸಿಕ ಸಂಸ್ಕೃತಿಯೂ ಸಾಮಾಜಿಕ ಸಂಸ್ಕೃತಿಯೂ ಬೆಳೆಯಬೇಕು. ರಾಷ್ಟ್ರದ ಏಳಿಗೆಗೆ ಇವುಗಳೇ ಬೇಕಾಗಿವೆ. ಬುದ್ಧಿಗೆ ಯೋಗ್ಯವಾದ ನಿಯಮ, ಮಾನಸಿಕ ಸಂಸ್ಕೃತಿ ಇವೇ ಉಚ್ಚ ವಿದ್ಯಾಭ್ಯಾಸದ ಪ್ರಯೋಜನಗಳು. ಇವುಗಳೇ ಒಬ್ಬನಿಗೆ ಅಲ್ಲಿ ದೊರಕುವವುಗಳು. ದುರ್ಬಲಿತರ ಮೇಲೆ ದಯೆ, ನಿರ್ಭಾಗ್ಯರ ಕುರಿತು ಮರುಕ, ಸಾಹಸ, ಉಪಾಯ, ಆತ್ಮಧೈರ್ಯ, ಸ್ವತಂತ್ರ ವಿಚಾರ, ಧರ್ಮನಿಷ್ಠೆ ಇವುಗಳೇ ಉತ್ತಮ ನಾಗರಿಕನಾಗಲು ಬೇಕಾಗಿವೆ. ಜಾತೀಯತೆಯು ಸಂಕುಚಿತತೆಯೂ ಪರಿಹಾರವಾಗಬೇಕು. ನಮ್ಮ ದೇಶದಲ್ಲಿ ಇಂದು ಇಂತಹ ಸ್ವಾರ್ಥತ್ಯಾಗಿಗಳು, ಕಾರ್ಯಪಟುಗಳು ತುಂಬಾ ಬೇಕಾಗಿದೆ. ಸಮಾಜದೊಡನೆ ಬೆರತು ಕೆಲಸಮಾಡುವವರು ಸಿದ್ಧರಾಗಿ ದೇಶಸೇವೆಯನ್ನು ಮಾಡಲು ತಿಳಿದಿರಬೇಕು. ಇವುಗಳೆಲ್ಲಾ ವಿಶ್ವವಿದ್ಯಾಲಯದ ಶಿಕ್ಷಣದ ಸಮಯದಲ್ಲಿ ವಿದ್ಯಾರ್ಥಿ ಭವನ, ಸಂಘ, ಆಟಕೂಟಗಳಲ್ಲಿ ಈ ಗುಣಗಳು ಬೆಳೆಯಬೇಕು

ಪ್ರಗತಿಪಡೆಯದ ವಿದ್ಯೆಗಳು

ವ್ಯಾಪಾರ ಮತ್ತು ಲಲಿತ ಕಲೆಗಳಿಗಾಗಿ ಕಾಲೇಜುಗಳು ತೆರೆಯಲ್ಪಡದಿರುವುದು ಶೋಚನೀಯವಾಗಿದೆ. ಅದು ಮಾತ್ರವಲ್ಲದೆ ಟೆಕ್ನೊಲಜಿ, ಮಾನಸಿಕ ಶಿಕ್ಷಣ, ಪದಾರ್ಥ ವಿಜ್ಞಾನ, ಮತ್ತು ಸ್ಟಾಟಿಸ್ಟಿಕ್ಸ್ ಇವುಗಳ ವಿಷಯವಾಗಿ ವಿಶ್ವವಿದ್ಯಾಲಯವು ಸಾಕಷ್ಟು ಸಹಾಯವಿಲ್ಲದ ನಿಮಿತ್ತ ಸುಮ್ಮಗಾಗಿದೆ. ಆದರೆ ಸರಕಾರ ಮತ್ತು ಮಹಾಜನರ ನೆರವಿನಿಂದ ಈ ಕಾರ್ಯಗಳು ಬೇಗನೆ ಕೊನೆಗೊಳ್ಳಬೇಕಾಗಿದೆ

ಸಾರ್ವಜನಿಕ ನಿಧಿಯಿಲ್ಲ!

ಮದ್ರಾಸು ವಿಶ್ವವಿದ್ಯಾಲಯ ಸ್ಥಾಪಿತವಾಗಿ, ಹಲವು ಸಮಯಗಳಾದುವು. ಆದರೆ ಇದುವರೆಗೆ ಸಾರ್ವಜನಿಕ ಸಹಾಯ ನಿಧಿಯು ಬಂದ ಹಾಗೆ ತಿಳಿಯುವುದಿಲ್ಲ. ಸರಕಾರದ ಸಹಾಯದ್ರವ್ಯದ ಭದ್ರತೆಯಲ್ಲಿ ವಿಶ್ವವಿದ್ಯಾಲಯದ ಅಧಿಕಾರಿಗಳು ಕುಳಿತಿದ್ದಾರೆ; ಆದರೆ ಭೋಳಂಪಕ್ಕೆ ಎಂತಹ ಶಿಲೆಯೂ ಚೂರ್ಣವಾಗುವುದು ಸಾಧ್ಯವಿದೆ. ಆಂಧ್ರ ವಿಶ್ವವಿದ್ಯಾಲಯವು ಅತ್ಯಲ್ಪ ಸಮಯದಲ್ಲಿಯೇ, ಬಹು ದೊಡ್ಡ ಸಾರ್ವಜನಿಕ ನಿಧಿಯನ್ನು ಪಡೆದಿದ್ದರೆ ಮದ್ರಾಸು ವಿಶ್ವವಿದ್ಯಾಲಯವೂ ಯಾಕಕ್ಕೆ ಪಡೆಯಬಾರದು? ಈ ಕಡೆಗೆ ವಿಶ್ವವಿದ್ಯಾಲಯದ ಅಧಿಕಾರಿಗಳು ಹೆಚ್ಚು ಗಮನಕೊಡಬೇಕು

ಪದವೀಧರರಿಗೆ ಉಪದೇಶ

ದಿಗಂತವನ್ನು ನಿರಾಶೆಯು ಕತ್ತಲು ಕವಿದು ಬರುತಿದ್ದರೂ, ನೀವು ನಿಮ್ಮಲ್ಲಿ ಸಾಮರ್ಥ್ಯವನ್ನು ಕಾಪಾಡಿಕೊಂಡರೆ ಜೀವನಸಂಗ್ರಾಮದಲ್ಲಿ ಜಯಶೀಲರಾಗಬಹುದು. ಅನೇಕ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದ ವಿಷಯವೇ ನಿಮಗೆ ಅಂತಹ ಎದೆಗಾರಿಕೆಯಿದೆ ಎಂಬುದನ್ನು ವ್ಯಕ್ತಪಡಿಸುತ್ತದೆ. ನಿಮ್ಮ ವಿಚಾರ ಕ್ರಾಂತಿಯು ಉಪಯೋಗ, ಆರ್ಥಿಕ, ಸಾಮಾಜಿಕ, ರಾಜಕೀಯ ಸಮಸ್ಯೆಗಳ ಪರಿಹಾರವು ನಿಮ್ಮ ಹಸ್ತದಲ್ಲಿಯೆ ಇದೆಯೆಂಬುದು ನೆನಪಿಡಿರಿ. ನಿಮ್ಮ ಅಂತರ್ಗತವಾದ ಗುಣಗಳನ್ನು ಬೆಳಸಿರಿ, ಜ್ಞಾನವನ್ನು ಪಡೆದು ಹೆಚ್ಚುಗೊಳಿಸಿ, ಆ ಮೇಲೆ ನೈತಿಕ ಮತ್ತು ಸಾಮಾಜಿಕ ಗುಣನಡತೆಗಳನ್ನು ಹೆಚ್ಚು ಮಾಡಿರಿ. ಯಾವುದೇ ಉದ್ಯೋಗದಲ್ಲಿ ನೀವು ಸೇರಿದರೂ, ಅದರಲ್ಲಿ ನಿಮಗೆ ಸಿಗುವ ಯಶಸ್ವಿತೆಯು, ಆ ವಿಷಯವಾಗಿ ನೀವು ಪೂರ್ಣತೆಯಿಂದ ಮಾಡುವ ಕಾರ್ಯದಿಂದ ಮಹಾನುಭಾವರು ಹೇಳಿದ್ದನ್ನು, ಕೇಳಿರಿ, ಆ ರೀತಿ ಅಂಧಾನುಕರಣೆ ಮಾತ್ರ ವುದು ಬೇಡ, ಅವುಗಳನ್ನು ಗಮನಿಸಿ, ನಿಮ್ಮ ಸ್ವಂತ ಅನುಭವದಿಂದ ಸ್ವಂತ ಆಶಯವೊಂದನ್ನು ಮಾಡಿಕೊಂಡಲ್ಲಿ ಕಾರ್ಯವನ್ನು ಯಶಸ್ವಿಪೂರ್ತಿಸಬಹುದು

'ಬೇರೆ ಬೇರೆ ಮತ ಜಾತಿಗಳಿರುವ ನಮ್ಮ ದೇಶದಲ್ಲಿ ಸಹನಾ ಶಕ್ತಿಯು ಬೇಕಾಗಿದೆ. ಯಾವುದು ರಾಷ್ಟ್ರದ ಕಾನೂನಿನಂತೆ ಸರಿಯಾಗಿರುವುದೋ, ಅದು ದೇವರ ಮುಂದೆ ಸರಿಯಾಗಿರಲಿಕ್ಕಿಲ್ಲ. ಹಾಗಾಗಿ ಸಮಾಜದ ಕಡೆಗೆ ನಿಮ್ಮ ಗಮನವು ಹೆಚ್ಚಾಗಿರಬೇಕು. ಈ ರೀತಿಯಿಂದಲೇ ನೀವು ಸತ್ಯದ ದಾರಿಯಲ್ಲಿ ಅಭಿವೃದ್ಧಿ ಹೊಂದಿ, ದೇಶದ ಏಳಿಗೆಗೆ ಸಹಾಯಿಗಳಾಗಬೇಕು

ಅನ್ಯೋನ್ಯ ಜಾತಿ ಸೌಹಾರ್ದತೆ

"ಇಲ್ಲಿ ಸೇರಿದ ಹಿಂದೂ, ಮುಸ್ಲಿಂ, ಕ್ರಿಶ್ಚನ್ ಪದವೀಧರರಾದವರು ಕೌನ್ಸಿಲು, ಜ್ಯೂರಿ, ನ್ಯಾಯವಿಧಾಯಕ ಸಭೆಗಳ ಮೂಲಕವೋ, ಇಲ್ಲವೇ ನಮ್ಮ ಅನುದಿನ ಸಮಾಜ ಸಂಬಂಧಗಳ ಮೂಲಕವೋ ಹೊಸ ಭಾರತವೊಂದನ್ನು ಸೃಷ್ಟಿಮಾಡಬೇಕೆಂದು ಹೃತ್ಪೂರ್ವಕ ದುಡಿಯುದಿದ್ದರೆ, ದೇಶವು ಏಳಿಗೆಯಾದೀತೆಂದು ಕನವರಿಸಬೇಡ. ಒಳ್ಳೆ ಗುಣ ನಡತೆ, ಆತ್ಮ ತೃಪ್ತಿ ಮೊದಲಾದವುಗಳನ್ನು ನೀವು ಚೆನ್ನಾಗಿ ಕಲಿತುಕೊಳ್ಳಬೇಕು

ನಿರುದ್ಯೋಗದ ಸಮಸ್ಯೆ

"ಇಂದಿನ ನಿರುದ್ಯೋಗಕ್ಕೆ ವಿಶ್ವವಿದ್ಯಾಲಯವನ್ನಾಗಲಿ, ಪತ್ರಪತ್ರನ್ನಾಗಲಿ ದೂರಲು ಸಾಧ್ಯವಿಲ್ಲ. ವಿಶ್ವವಿದ್ಯಾಲಯಗಳು ಯೋಗ್ಯರನ್ನು ದೇಶಕ್ಕೆ ಒದಗಿಸಿ ಕೊಡುತ್ತದೆ. ಹೆತ್ತವರು ಬೇರೆ ಉಪಾಯ ವಿಲ್ಲದೆ, ಜೀವನದಲ್ಲಿ ಗೌರವವನ್ನು ಮಕ್ಕಳು ಪಡೆಯಬೇಕೆಂದು ವಿಶ್ವವಿದ್ಯಾಲಯ ಶಿಕ್ಷಣವನ್ನು ಕೊಡುತ್ತಾರೆ. ಇದಕ್ಕೆ ದೇಶದ ಸರಕಾರವನ್ನು ನಾವು ದೂರಬೇಕು. ದೇಶದ ಏಳಿಗೆಯಲ್ಲಿ ಸರಕಾರದ ಕಾರ್ಯವು ಹೆಚ್ಚಿನದು. ಇಂದಿನ ಸರಕಾರವು ಈ ಸಮಸ್ಯೆಯನ್ನು ಪರಿಹರಿಸಲು ಸಾಕಷ್ಟು ಪ್ರಯತ್ನಿಸುವುದು

"ಹೈಸ್ಕೂಲ್ ವಿದ್ಯಾಭ್ಯಾಸದ ಸುಧಾರಣೆಯಾಗಬೇಕು. ಜೀವನದ ಬೇರೆ ಬೇರೆ ವೃತ್ತಿಯಲ್ಲಿ ವಿದ್ಯಾರ್ಥಿಗಳು ನೆಲೆಯಾಗುವಂತೆ ಮಾಡುವುದರಿಂದ ಸಮಸ್ಯೆಯು ಪರಿಹಾರವಾಗುವುದು

ರಾಷ್ಟ್ರ ಹಿತ

"ಎಲ್ಲದಕ್ಕಿಂತಲೂ ಹೆಚ್ಚಾಗಿ ಎಲ್ಲಾ ಮತ ಧರ್ಮದವರೂ ಏಕಬುದ್ಧಿಯಿಂದ ರಾಷ್ಟ್ರದ ಏಳಿಗೆಗಾಗಿ ಹೋರಾಡುವುದು ಅಗತ್ಯವಿದೆ. ಸಮಾಜದ ಜನರಲ್ಲಿ ಬೆರೆತಿದ್ದು ನಿಮ್ಮ ನಡತೆಯಿಂದ ನೀವು ಒಳ್ಳೆಯ ಉದಾಹರಣೆ ತೋರಿಸಬೇಕು. ನಮ್ಮ ಮಾತೃಭೂಮಿಯು ಹಿಂದೆ ಪಡೆದ ಕೀರ್ತಿ, ಉಜ್ವಲತೆ, ಸೌಭಾಗ್ಯಗಳನ್ನು ತಿರಿಗಿ ಪಡೆಯುವುದು ನಿಮ್ಮನ್ನು ಹೊಂದಿದೆ. ಇಂದಿನ 'ಇಸಂ'ಗಳು ಹಿಂದೀ ಸಂಸ್ಕೃತಿಗೆ ವಿರುದ್ಧವಾದವುಗಳು. ಧರ್ಮ ಮತ್ತು ದೈವ ಜ್ಞಾನದ ತಳಹದಿಯಲ್ಲಿ ನಿಮ್ಮ ಮತ್ತು ರಾಷ್ಟ್ರದ ಏಳಿಗೆಯನ್ನು ಸಾಧಿಸಿರಿ

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಹತ್ತು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸುಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ಪ್ರಕಾರದ ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ. ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರಮಾರ್ಗದ ಒಸಗೆ, ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಾರಿ ಜಂತುಗಳು. ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ಕ್ಷಣಿಕವಾಗಿ ಮತ್ತು ಸಮೂಲವಾಗಿ ನಾಶವಾಗುವುವು. ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8-0-0 (ವ್ಹಿ-ಪಿ-ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಬರೆಯಿರಿ. ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, Vithalbhai Patel Road, BOMBAY.

ಸ್ಟಾಕಿಸ್ಟರು ಮೆಸರ್ಸ್ ಇಲೆಕ್ಟ್ರೊ ಹೊಮ್ಯೊಪತ್ ಡಿಸ್ಪೆನ್ಸರಿ ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ, ಹಂಪನಕಟ್ಟಾ ಮಂಗಳೂರು.

ವಿಜ್ಞಾನ ಯುಗ

ಜಲಾಂತರ್ಯಾಮಿ ನಾವೆಗಳು ಉಳಿಯಬಹುದು

ಲಂಡನಿನ ನೌಕಾ ಇಂಜಿನಿಯರರಾದ ಮಿ। ಟಿ. ಎ. ಕ್ರಿಸೋಲ್ಡ್ ಎಂಬವರು ನೀರೊಳಗೆ ಸಂಚಾರಮಾಡುವ ಹಡಗುಗಳನ್ನು ಅಪಾಯಗಳಿಂದ ತಪ್ಪಿಸುವ ಹೊಸತೊಂದು ಹಂಚಿಕೆಯನ್ನು ಹೂಡಿರುತ್ತಾರೆ.

ಹಡಗಿನ ಡೆಕ್ಕಿಗೆ ತಾಗಿಸಿ ಒಂದು ಸಿಲಿಂಡರು ಇಡಲ್ಪಡುತ್ತದೆ. ಈ ಸಿಲಿಂಡರನಲ್ಲಿ ನೀರ ಮೇಲೆ ತೇಲಾಡುವ ಒಂದು 'ಬೋಯ್' ಇದೆ.

ನೀರು ಈ ಸಿಲಿಂಡರಿನ ಮೂಲಕ ಒತ್ತಲ್ಪಟಪ್ಪಗ, ಒಳಗಿನ ಮತ್ತು ಹೊರಗಿನ ಒತ್ತಡವು ಸಮಾನವಾಗಿ, ಮುಚ್ಚಳವು ತೆರೆಯಲ್ಪಟ್ಟು, ಬೋಯಿಯು ಮೇಲಕ್ಕೆ ಮೆಲ್ಲಗೆ ಎತ್ತಲ್ಪಡುತ್ತದೆ.

ಹೀಗೆ ಇದು ಮೇಲಕ್ಕೆ ಹೋಗುತ್ತಿದ್ದಂತೆ ಇದಕ್ಕೆ ತಾಗಿಸಿಟ್ಟ ಟ್ಯೂಬುಗಳ ಮೂಲಕ, ಹಡಗಿನ ಒಳಗಡೆಗೆ ಬೇಕಾದ ಒಳ್ಳೆಯ ಗಾಳಿ ಮತ್ತು ಗಟ್ಟಿ ಆಹಾರವನ್ನು ಕೂಡಾ ಒದಗಿಸಲು ಅನುಕೂಲವಿರುತ್ತದೆ.

ಮಿದುಳಿನ ವಿದ್ಯುತ್ ತರಂಗ

ಮಾನವನ ಮಿದುಳಿನ ರೋಗವನ್ನು ಮಿದುಳಿನ ವಿದ್ಯುತ್ ತರಂಗಗಳ ಪರೀಕ್ಷಣದಿಂದ ಗುಣಪಡಿಸಬಹುದಾಗಿ ಈಗ ಗೊತ್ತಾಗಿದೆ.

ಈ ವಿದ್ಯುತ್ ತರಂಗಗಳನ್ನು ಕಂಡುಹಿಡಿಯಲು, ಇಲೆಕ್ಟ್ರೋ-ಎನ್ಸೆಫಾಲೋಗ್ರಾಫ್ ಎಂಬ ಒಂದು ಉಪಕರಣವು ತಯಾರಾಗಿದೆ.

ಒಂದು ಸೆಕುಂಡಿಗೆ ಹತ್ತರಂತೆ ಮಿದುಳಿನಿಂದ ಈ ವಿದ್ಯುತ್ ತರಂಗಗಳು ಬರುತ್ತವೆ. ಆದರೆ ಈ ತರಂಗಗಳು ಮಿದುಳು ಕೆಲಸಮಾಡುತ್ತಿದ್ದಾಗ ಮತ್ತು ಕಣ್ಣು ತೆರೆದಿರುವಾಗ ಇಲ್ಲ. ಕಣ್ಣು ತೆರೆದು, ಸುತ್ತುಮುತ್ತು ನಿರೀಕ್ಷಿಸುತ್ತಿದ್ದರೆ ಸಾಕು, ಆ ತರಂಗಗಳು ನಿಂತುಬಿಡುವುವು.

ಇವುಗಳು ಬಹಳ ಶಕ್ತಿಹೀನವಾದುವುಗಳು. ಒಂದು 'ವೋಲ್ಟ್'ನ ೫೦ ಮಿಲಿಯಾಂಶದ ಒಂದರಷ್ಟು ಆಕಾರವುಳ್ಳದ್ದು.

ತಲೆಯ ಹಿಂದುಗಡೆಯಲ್ಲಿ ಇವುಗಳ ಹೊಡೆತವು ಹೆಚ್ಚಾಗಿರುತ್ತದೆ.

ರೋಗಿಗಳ ಮಿದುಳು ಇಂತಹ ಅಲೆಗಳನ್ನು ಬಹಳ ಕಡಿಮೆ ತೋರಿಸುತ್ತದೆ. ಸಾಧಾರಣ ಸೆಕೆಂಡಿಗೆ ಎರಡೋ ಮೂರೋ ಅಷ್ಟೆ!

ಮುಖ ನೋಡಿ ರೋಗ ಪರೀಕ್ಷೆ

ಲಂಡನ್ ವೆಸ್ಟ್ ಮಿನ್‌ಸ್ಟರ್ ಹೋಸ್ಪಿಟಲಿನ ಡಾಕ್ಟರರಾದ ಸರ್ ಅಡಲ್ಫ್ ಅಬ್ರಹಾಮರೆಂಬವರು, ಡಾಕ್ಟರರಿಗೆ ಮುಖ ನೋಡಿದ ಕೂಡಲೇ ರೋಗದ ಪರೀಕ್ಷೆಮಾಡಿ ಬಿಡಬಹುದೆಂದು ಹೇಳುತ್ತಾರೆ.

ಕೆಲವು ರೋಗಗಳನ್ನು ರೋಗಿಯನ್ನು ಒಮ್ಮೆ ನೋಡಿದ ಕ್ಷಣದಲ್ಲಿಯೇ ಕಂಡು ಹಿಡಿಯಬಹುದು. ಉದಾಹರಣೆಗೆ ಲೋಬರ್ ನಿಮೋನಿಯ ರೋಗಿಯ ಕಣ್ಣುಗಳು ಶುಭ್ರವಾಗಿ, ಕೆನ್ನೆಗಳು ಬಾತುಹೋಗಿ, ತುಟಿಗಳು ಗುಳ್ಳೆಗಳುಳ್ಳದಾಗಿ ಇರುತ್ತವೆ.

ಮರಣವು ಮುಖದ ಮೇಲೆ ಸೂಚಿತವಾಗುತ್ತದೆ. ಆದರೆ ರೋಗವನ್ನೂ ಮತ್ತು ಮರಣವನ್ನೂ ಪ್ರತ್ಯೇಕ ಮಾಡಿ ಕಂಡು ಹಿಡಿಯುವುದು ಕಷ್ಟವಾಗಿದೆ.

ಹುಡುಗನ ಕಣ್ಣಿನಲ್ಲಿ 'ಎಕ್ಸ್ ರೇ

ಬೆನಿಟೋಪಾಸ್ ಎಂಬ ಸ್ಪಾನಿಷ್ ಉಪಾಧ್ಯಾಯರ ಮಗನ ಕಣ್ಣುಗಳ ಕುರಿತು ಕಳೆದ ಮೇ ತಿಂಗಳಲ್ಲಿ ಒಂದು ಅದ್ಭುತ ಸಂಗತಿಯು ಹೊರಬಿದ್ದಿದೆ.

ನಾಲ್ಕುವರೆ ವರ್ಷ ಪ್ರಾಯದ ಆ ಹುಡುಗನು ಪುಸ್ತಕವನ್ನು ಮುಚ್ಚಿಟ್ಟಿದ್ದರೂ, ಅದು ಬಿಡಿಸಿಟ್ಟರೇ ಹೇಗೆ ಓದಬಲ್ಲನೋ ಹಾಗೆಯೇ ಓದುತ್ತಿದ್ದ.

ಒಂದು ದಿನ ಅವನ ತಂದೆಯು ತನ್ನ ವೆಸ್ಟ್ ಗುಬ್ಬಿಯೊಂದನ್ನು ಹುಡುಕುವಗಲಭೆಯಲ್ಲಿದ್ದ; ಆತನ ವೆಸ್ಟಿನ ಕಿಸೆಯಲ್ಲಿರುವ ಹೊಗೆಸೊಪ್ಪಿನ ಪೆಟ್ಟಿಗೆಯೊಳಗೆ ಗುಬ್ಬಿಯುಂಟೆಂದು ಹುಡುಗ ಹೇಳಿದ.

ಯಾವುದೇ ಲೋಹದ ಪೆಟ್ಟಿಗೆಗಳೊಳಗಿರುವ ವಸ್ತುಗಳನ್ನಾದರೂ ಆತನು ಹೊರಗಡೆಯಿಂದ ನೋಡಬಲ್ಲನೆಂಬ ವಿಷಯ ಮ್ಯಾಡ್ರಿಡಿನ ಪ್ರಸಿದ್ಧ ಡಾಕ್ಟರರಾದ ಡಾ. ಪೆಡ್ರೋ ನೈಲ್ ಎಂಬವರು ಆ ಹುಡುಗನನ್ನು ಚೆನ್ನಾಗಿ ಪರೀಕ್ಷಿಸಿ ಪ್ರಕಟಿಸಿದ್ದಾರೆ. ನಾಲ್ಕೋ ಐದೋ ಬೈಂಡುಗಳೊಳಗೆ ಇರುವ ಪುಸ್ತಕದಲ್ಲಿರುವ ಅಕ್ಷರಗಳನ್ನಾದರೂ ಆತನು ಸ್ಪಷ್ಟವಾಗಿ ಓದಬಲ್ಲವನಾಗಿದ್ದಾನೆ. ಆದರೆ ಮರದ ಸಾಮಾನಿನ ಒಳಗಡೆಯ ವಿಷಯಗಳು ಆತನ 'ಎಕ್ಸ್'ರೇ ಕಣ್ಣುಗಳಿಗೆ ಕಾಣುವುದಿಲ್ಲವಂತೆ.

ಹಿಂಸೆ ಮಾಡಿದವರಿಗೆ ದಂಡನೆಯೇ ಮದ್ದು

ಇತ್ತೀಚೆಗೆ ದಂಡನೆ ಮತ್ತು ಶಿಸ್ತುಪಾಲನೆಯ ವಿಷಯದಲ್ಲಿ ಬಹಳವಾಗಿ ಬುದ್ಧಿವಂತರು ಮಾತನಾಡುತ್ತಿದ್ದಾರೆ. ಹಿಂಸೆ ಮಾಡಿದವರಿಗೆ ದಂಡನೆ ಮಾಡಿದಲ್ಲಿ ಪ್ರಯೋಜನವಿಲ್ಲವೆಂದೂ, ಅವರನ್ನು ಶಿಸ್ತಿನಿಂದ ಸರಿದಾರಿಗೆ ತರಬೇಕೆಂದೂ ಬಹುಮಂದಿ ಅಭಿಪ್ರಾಯ ಪಡುತ್ತಿದ್ದಾರಷ್ಟೆ? ಆ ಕುರಿತು ಕೇಂಬ್ರಿಜ್ ಯುನಿವರ್ಸಿಟಿಯ ಮಾನಸ ಶಾಸ್ತ್ರಜ್ಞರಾದ ಪ್ರೊಫೆಸರ್ ಎಫ್. ಸಿ. ಬಾರ್ಟ್ಲೆಟ್ಟರು, ಹಿಂಸೆ ಮಾಡಿದವರಿಗೆ ಕ್ರೂರ ಘಾತಕಿಗಳಿಗೆ ಯೋಗ್ಯದಂಡನೆಯೇ ಒಳ್ಳೆಯ ಮದ್ದು ಎಂದು ಸಾಧಾರಣವಾಗಿ ವಿವರಿಸಿ ತಿಳಿಸುತ್ತಾರೆ.

ದಂಡನೆಯು ಒಳ್ಳೆಯ ಪರಿಣಾಮಕಾರಿಯಾಗಿರಬೇಕು, ಬಹಳ ಕಠಿಣವಾಗಿರಬೇಕು, ತಪ್ಪುಮಾಡಿದ ಕೂಡಲೇ ಅವರಿಗೆ ದಂಡನೆ ಕೊಡಬೇಕು, ಆದರೆ ಅವರ ಗುಣ ನಡತೆಯು ಒಳ್ಳೆಯದಾದ ಕೂಡಲೇ ಯೋಗ್ಯ ಬಹುಮಾನವನ್ನೂ ಕೊಟ್ಟು ಸಂಭಾವಿಸಬೇಕು. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಪ್ರತಿಯೊಬ್ಬನನ್ನು ತಿದ್ದಲೂ ಇದೇ ಯೋಗ್ಯವಾದ ಮಾರ್ಗವಾಗಿದೆ'' ಹೀಗೆಂದು ಅವರ ವಾದ.

ಮೀನು ಹಿಡಿವವರಿಗೆ ವಿಜ್ಞಾನ ಲಾಭ

ಮೀನು, ನೀರಿನಲ್ಲಿ ಸಿಗುವುದು ವಾತಾವರಣದ ಒತ್ತಾಟಕ್ಕೆ ಸಂಬಂಧಿಸಿ ಹೆಚ್ಚು ಕಡಿಮೆಯಾಗುವುದೆಂದು ಈಗ ತಿಳಿದಿದೆ. ಆದುದರಿಂದ ಹೆಚ್ಚಿನ ಒತ್ತಾಟದ ಸಮಯದಲ್ಲಿ ಅವರು ಹೆಚ್ಚು ಮೀನು ಹಿಡಿಯಬಹುದಾದ ಕಾರಣ, ಅದನ್ನು ತಿಳಿಯಲು ಈಗೊಂದು ಹೊಸ ಸಾಧನವನ್ನು ಮಾಡಿದ್ದಾರೆ, ಹಾಗಾಗಿ ಅವರು ಹೆಚ್ಚು ಮೀನುಗಳಿದ್ದಲ್ಲಿಯೇ ಅವರು ಬಲೆ ಬೀಸಿ ಲಾಭಪಡೆಯಬಹುದು.

ಇಂತಹ ವಾತಾವರಣದಲ್ಲಿಯೇ ಮೀನುಗಳು ಹೆಚ್ಚು ಹಸಿವೆಗೊಂಡವುಗಳಾಗಿ, ಮೇಲಕ್ಕೆ ಬರುವುದೇ ಹಾಗೆ ಒಟ್ಟಾಗಿ ಸಮೃದ್ಧವಾಗಿ ಸಿಗಲು ಕಾರಣ

Constructive Banking

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding a Crore.

And this is but the be ginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE

Estd 1906

CANARA BANK, LIMITED.



ಮಕ್ಕಳಿಗೆ

ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಇದರಿಂದ ಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಕೆಲಸಗಾರರಿಗೆ ಸೌಕರ್ಯ

ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಯಂತ್ರಗಳೊಡನೆ ದುಡಿಯುತ್ತಿರುವ ಕೆಲಸಗಾರರಿಗೆ ಮಧ್ಯ ಮಧ್ಯದಲ್ಲಿ ಅಲ್ಪಸ್ವಲ್ಪ ವಿರಾಮ ಕೊಡುವುದೂ, ಸಂಗೀತ ಮೊದಲಾದ ಸೌಕರ್ಯಗಳ ನ್ನೊದಗಿಸುವುದೂ, ಅವರ ಆಯಾಸವನ್ನು ಕಡಿಮೆ ಮಾಡಲು ಸಹಕಾರಿಯಾಗುವುದೆಂದು ಲಂಡನಿನ ವಿಜ್ಞಾನ ಸಂಘದವರು ಪ್ರಕಟಿಸಿದ್ದಾರೆ.

ಈ ಅಭಿಪ್ರಾಯವು ೧೦೫ ಕಾರ್ಖಾನೆಗಳನ್ನು ಸಂದರ್ಶಿಸಿ, ೩,೦೫,೦೦೦ ಕೆಲಸಗಾರರನ್ನು ಪರೀಕ್ಷಿಸಿ ನೋಡಿದ ಮೇಲೆ ಮಾಡಲ್ಪಟ್ಟಿದೆ. ಹೀಗೆ ಅವರಿಗೆ ಸೌಕರ್ಯ ಮಾಡುವುದರಿಂದ, ಹಾಗೆಯೇ ನಿರಂತರ ದುಡಿಸುವುದಕ್ಕಿಂತ ಹೆಚ್ಚಿನ ಕೆಲಸಗಳನ್ನು ಅವರು ಮಾಡಲು ಸಮರ್ಥರಾಗುತ್ತಾರೆ ಎಂದೂ ಅವರು ತಿಳಿಸುತ್ತಾರೆ.

ಜೋರಾಗಿ ಸಂಗೀತವು ನಡೆಯುವುದಿದ್ದರೆ ಅದರೊಡನೆ ಕೆಲಸಗಾರರ ಕೆಲಸವೂ ಜೋರಾಗಿ ನಡೆಯುವುದೆಂದೂ, ಅವರು ಸಂಗೀತದ ಏರಿಳಿತಕ್ಕೆ ಸರಿಯಾಗಿ ಕೆಲಸ ಮಾಡುವರೆಂದೂ ತಿಳಿಸುತ್ತಾರೆ.

ಸಂಗೀತವನ್ನು ಪ್ರಯೋಗಿಸುವುದರಿಂದ ಅವರು ಮಾತನಾಡುವುದೂ ನಿಲ್ಲುವುದು ಎಂದು ಅವರ ಅಭಿಪ್ರಾಯ.

ಗಾಂಧಿಜಿಯವರ ದರ್ಶನಕ್ಕಾಗಿ ಗೊಂದಲ

ಗಡಿನಾಡಿನಿಂದ ಬರುವಾಗ ಪಂಜಾಬಿನಲ್ಲಿ ಗಾಂಧಿಜಿಯವರ ದರ್ಶನಕ್ಕಾಗಿ ಜನಸಂದಣಿಯು ಬಹಳ ಗಲಭೆಮಾಡಿತು. ಎಷ್ಟೆಂದು ವಿನಂತಿಸಿ ಕೊಂಡರೂ ಜನರು ಸುಮ್ಮಗಾಗಲೇ ಇಲ್ಲ. ಒಬ್ಬನು ಗಾಂಧಿಜಿಯವರಿದ್ದ ರೈಲುಗಾಡಿಗೆ ಹಾರಿಯೇ ಬಿಟ್ಟನು.

"ಲಾಹೋರು ಸ್ಟೇಶನಿನ ಗತಿ ತಲುಪಿದಾಗ ಹೊರಗಿನ ಜನಸಂದಣಿಯ ಶಬ್ದವು ಬಹಳ ಜೋರಾಗಿತ್ತು. ಎಷ್ಟು ಅವರೊಡನೆ ಶಾಂತರಾಗಿರ್ರಲು ಬಿನ್ನವಿಸಿದರೂ, ಆ ಶಬ್ದವು ಮತ್ತೂ ಮುಂದೊತ್ತಿ ಬರುವುದು ನಿಲ್ಲಲೇ ಇಲ್ಲ. ಜನರ ಗುಂಪು ಕಿಟ್ಕಿ ಬಾಗಿಲುಗಳನ್ನು ಮುರಿತ್ತು ಗಾಂಧಿಜಿಯವರು ಪ್ರಯಾಣದ ಆಯಾಸದಿಂದ ಗಾಡಿಯಲ್ಲಿ ವಿಶ್ರಾಂತಿಗಾಗಿ ಮಲಗಿದ್ದರು. ಆದರೂ ಗಾಂಧಿಜಿಯವರ ತಲೆ ಮತ್ತು ಮುಖವು ಜನಸಂದಣಿಗೆ ಕಾಣುವಂತೆ ಮಲಗಿಸಲಾಯಿತು.

"ನಾವು ಅವರನ್ನು ಏಳುವಂತೆ ಮಾಡುವೆವು" "ಇದು ಈಗ ಮಧ್ಯರಾತ್ರಿಯಲ್ಲ; ಈಗ ಯಾಕೆ ಮಲಗುವುದು" ಹೀಗೆ ಕೂಗು ಕೇಳಿಸಿತು. 'ನೀವು ಒಳ್ಳೆಯವರಾಗಿ ನಡೆಯಿರಿ' ಎಂದು ತಿರಿಗಿ ವಿಜ್ಞಾಪಿಸಲಾಯಿತು. ಅವರು ಎಪ್ಪತ್ತು ವರ್ಷ ಪ್ರಾಯದ ಮುದುಕರು, ದೀರ್ಘ ಪ್ರಯಾಣದಿಂದ ಬಹಳ ದಣಿದವರಾಗಿದ್ದಾರೆ, ವಿಶ್ರಾಂತಿಗಾಗಿ ಮಲಗಿದ್ದಾರೆ, ಉಪದ್ರವ ಕೊಡಬೇಡಿ' ಎಂದರೆ ಬೊಬ್ಬೆ ಹೆಚ್ಚುತ್ತಾ ಇತ್ತು. ಅಷ್ಟರಲ್ಲಿಯೇ ಒಬ್ಬನು ಕಿಟಿಕಿಯ ಬಾಗಿಲಿನಿಂದ ಗಾಡಿಯೊಳಗೆ ಹಾರಿ, ಗಾಂಧಿಜಿಯವರ ಕಡೆಗೆ ಬಂದನು. 'ಇವರನ್ನು ದರ್ಶನಮಾಡಲು ಒಳ್ಳೆಯ ಉಪಾಯವೆಂದರೆ, ಅವರ ಎರಡು ಕಾಲುಗಳನ್ನು ಹಿಡಿದು, ಕೆಳಗೆ ಎಳೆದು ಹಾಕುವುದು.' ಎಂದು ನಾನು ಹೇಳಿದೆ. ಆತ ನನ್ನ ಕಡೆಗೆ ಸಿಟ್ಟಿನಿಂದ ನೋಡಿ ಹೊರ ಹೋದನು.' ಹೀಗೆಂದು ಗಾಂಧಿಜಿಯವರ ಕಾರ್ಯದರ್ಶಿಗಳಾದ ಶ್ರೀ. ಮಹಾದೇವ ದೇಸಾಯಿಗಳು 'ಹರಿಜನ'ದಲ್ಲಿ ಬರೆಯುತ್ತಾರೆ.

ವಿವಿಧ ವಿಷಯಗಳನ್ನರಿಯಲು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ

ಜಪಾನಿಯರು ಇಷ್ಟೊಂದು ಭಯಂಕರ ಸ್ಫೂರ್ತಿಗೆಳಾದುದರ ಕಾರಣವೇನು? ಅವರು ಹೀಗೆ ಧೀರ ಉನ್ನತ್ತರಾಗಿರಲು ಯಾತರ ಸಹಾಯವು ಅವರಿಗೆ ದೊರೆತಿದೆ? ನಿಜವಾಗಿ, ಜಪಾನಿಗೆ ಏನು ಬೇಕಾಗಿದೆ?

ಚೈನಾದ ವಿದೇಶೀಯ ಭೂಭಾಗದಲ್ಲಿರುವ ಜನರ ವಿಚಾರಕ್ಕೆ ಬರುವ ಅನೇಕ ಆಲೋಚನೆಗಳಲ್ಲಿ ಇವು ಕೆಲವು ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡಲು, ಈ ಜನರ ಈ ಧೀರ ಪ್ರಮತ್ತ ಉತ್ಸಾಹದ ವಿಷಯವನ್ನು ವರ್ಣಿಸಲು, ಅವರ ವಿಚಾರ ಭಾವನೆಗಳನ್ನು ಅರ್ಥಮಾಡಿಕೊಳ್ಳಲು, ನಾವು ಇತಿಹಾಸವನ್ನು ಶೋಧಿಸಬೇಕು

೧೬೩೮ರಲ್ಲಿ ಶೋಗನನು ಎಲ್ಲಾ ವಿದೇಶೀಯ ಗುರುಗಳನ್ನೂ, ಅವರ ದೇವಾಲಯಗಳನ್ನೂ, ಹೊರಗೆ ಹೋಗಬೇಕೆಂದೂ, ಧ್ವಂಸಗೊಳಿಸಬೇಕೆಂದೂ ಆಜ್ಞಾಪಿಸಿದನು ಅದು ಮಾತ್ರವಲ್ಲದೆ, ಜಪಾನೀಯರು ತಮ್ಮ ಪ್ರಾಣಾಂತಿಕವಾದ ಸಂಕಷ್ಟ ಬಂದರೂ, ಅಲ್ಲಿಂದ ಬಿಟ್ಟು ಹೊರದೇಶಕ್ಕೆ ಹೋಗಬಾರದೆಂದೂ ಕಠಿಣ ಶಾಸನವು ವಿಧಿಸಲ್ಪಟ್ಟಿತು ಆ ವೇಳೆ, ವಿದೇಶದ/ಹಾಗೂ ಪಾಶ್ಚಾತ್ಯದೇಶದ ತಂತ್ರವು ಜಪಾನಿನೊಳಗೆ ನಡೆಯಲಿಲ್ಲ

ಇದರಿಂದ ಜಪಾನು ದೇಶದ ಅಭಿವೃದ್ಧಿ ಸರ್ವತೋಮುಖವಾದ ಪ್ರಗತಿ, ಜಪಾನು ಜನಾಂಗದ ಅಭಿವೃದ್ಧಿ ಈ ವಿಷಯವು ಅಲ್ಲಿನ ಜನರ ವಿಚಾರದಲ್ಲಿ ಬಹಳ ಕ್ರಾಂತಿಯನ್ನು ಉಂಟುಮಾಡಿತು ಹಾಗಾಗಿ ಜಪಾನು ಜಗತ್ತಿನ ಚರಿತ್ರೆಯಲ್ಲಿ ಅಸದೃಶವಾದ ರಾಷ್ಟ್ರವೆಂದು ಪರಿಗಣಿಸಲ್ಪಟ್ಟಿತು

ಜಪಾನಿಯರು ತಾವೆಲ್ಲರೂ ಅನೋನ್ಯ ಸಹೋದರ ಸಮಾನರೆಂದು ತಿಳಿದು ತಮ್ಮ ಕಾರ್ಯಗಳನ್ನು ನಡವಳಿಕೆಗಳನ್ನು ಇಟ್ಟುಕೊಂಡಿದ್ದಾರೆ

ಜಪಾನು ಪವಿತ್ರ ಭೂಮಿಯೆಂದು ಅವರ ವಿಶ್ವಾಸವಿದೆ ಜಪಾನಿನ ರಾಜನು ಅತ್ಯಂತ ಪ್ರಾಚೀನ ವಂಶ ಪರಂಪರೆಯಿಂದ ಬಂದ ರಾಜನೆಂದೂ ಪ್ರಜೆಗಳ ತಂದೆಯೆಂದೂ ಅವರು ನಂಬುವರು

ಕ್ರಿ. ಪೂ. ೬೬೦ರ ಹಿಂದಕ್ಕೆ ಆ ರಾಜವಂಶದ ಇತಿಹಾಸವು ಹೋಗಿದೆ ಇಂದಿಗೆ ೧೨೨ ಅರಸರು ಆಳಿದರೆಂದು ಅವರು ತಿಳಿದಿದ್ದಾರೆ

ಈ ರಾಜವಂಶದ ಪೂರ್ವಜಳಾಗಿ ಸೂರ್ಯ ದೇವತೆಯಾದ ಅಮೆಟಿರಾಸೋ ಇವಳನ್ನು ಜಪಾನೀಯರು ನಂಬಿರುತ್ತಾರೆ

ಸ್ವರ್ಗದ ಪುತ್ರರು

ಆದ್ದರಿಂದ ಈ ಲೋಕದಲ್ಲಿ ಸ್ವರ್ಗದಿಂದ ಪ್ರತ್ಯಕ್ಷವಾಗಿ ಇಳಿದು ಬಂದ ವಂಶ ಪರಂಪರೆಯವರು ತಾವೆಂದೂ, ಯುದ್ಧವೀರನಾಗಿ ಸತ್ತ ಜಪಾನೀಯನು ಸೀದಾ ಸ್ವರ್ಗಾರೋಹಣ ಮಾಡುವನೆಂದೂ ಅವರ ದೃಢ ವಿಶ್ವಾಸವಾಗಿದೆ

ಈ ರೀತಿಯ ಪ್ರಾಚೀನ ವಂಶದ ಹಿರಿಯರ ಆರಾಧನೆಯಿಂದಲೂ ಜಪಾನೀಯರ ಸ್ವಾರ್ಥತ್ಯಾಗ, ಮತ್ತು ಧೈರ್ಯವಿಲ್ಲದ ಕೆಲಸಕ್ಕಾಗಿ ಯಾವುದು ಮಾಡುವುದು ತಪ್ಪೆಂದು ತಿಳಿದಿರುತ್ತಾರೆ ತನಗೆ ಮಾತ್ರ ತಪ್ಪಲ್ಲ, ಅದರಿಂದ ಇಡೀ ತನ್ನ ವಂಶ, ಸಾಮ್ರಾಜ್ಯಕ್ಕೆ ಕಡೆಗೆ, ತನ್ನ ಹಿರಿಯರಿಗೂ ಅವಮಾನವೆಂದು ಅವರು ನಂಬುತ್ತಾರೆ

ಜಪಾನಿಯರು ಧರ್ಮಾಂಧರು

ಜಪಾನಿನ ಇಂದಿನ ವೇಷಕ್ಕೆ ಕಾರಣವೇನು?
ದೇವರ ಸಂತತಿಯವರು ಯಾರಿಗೂ ತಲೆಬಗ್ಗಿಸರು!
ಸಾಮ್ರಾಜ್ಯಾಭಿಲಾಷೆಯೇ 'ಪವಿತ್ರ ಕಾರ್ಯ'ವೆನಿಸಿತು!
ಸಂಗರದಲ್ಲಿ ನಿರ್ದಯರು— ಸಂಸಾರದಲ್ಲಿ ಸದಯರು!

ಆ ಕಾರಣದಿಂದಲೇ ಇಂದು ಯುದ್ಧರಂಗದಲ್ಲಿ ಹೇಡಿಯಾಗಿರದೆ, ಧೈರ್ಯ ಪೂರ್ವಕ ಮುಂದೆಬಂದು, ಪೋರ್ಟ್ ಅರ್ಥರನ್ನೋ, ಟ್ಸಿಂಗ್ ಟೋಮನ್ನೋ ನಿಮಿಷಮಾತ್ರದ ಅಜ್ಞೆಯಲ್ಲಿ ಸ್ವಾಧೀನ ಮಾಡಲು ಜಪಾನೀ ಸೈನಿಕನು ತಯಾರಾಗಿ ನಿಂತಿದ್ದಾನೆ.

'ಪವಿತ್ರ ಕಾರ್ಯ'

ಅವರು ಜಪಾನಿನ ಸಾಮ್ರಾಜ್ಯ ವಿಸ್ತಾರದ ಆಲೋಚನೆ ಮಾಡಿದರು ಇಂತಹ ದೈನಂದಿನ ಸಮಸ್ಯೆಗೆ, ಜಪಾನಿನ ಸಾಮ್ರಾಜ್ಯ ವಿಸ್ತಾರಣಾ ಕಾಂಕ್ಷೆಯು "ಪವಿತ್ರ ಕಾರ್ಯ"ವೆಂಬ ಹೊಸ ಪ್ರಚಾರವು ಸುರುವಾಗಿ ಅವರನ್ನು ಸಂಪೂರ್ಣ ಸಂಭ್ರಮಗೊಳಿಸಿದೆ

ಇಂತಹ ಪವಿತ್ರ ಕಾರ್ಯದ ಸಂಪೂರ್ಣತೆಗಾಗಿ ಅವರು ಯಾವ ರಾಷ್ಟ್ರದೊಡನೆಯಾದರೂ ಎದೆಗೊಟ್ಟು ಕಾದಾಡಲು ಸಿದ್ಧರಿದ್ದಾರೆ

ಬೊಂಬಾಯಿ ಸರಕಾರದ ಸೊತ್ತು ತೆರಿಗೆಯ ಕುರಿತು ನಿಷೇಧ ಸೂಚಕವಾಗಿ ನೆರೆದ ಮುಸ್ಲಿಮರ ಪ್ರಚಾರದ ದೃಶ್ಯ

೧೯ನೇ ಶತಮಾನದಲ್ಲಿ ಇಂಗ್ಲಿಷು, ಫ್ರೆಂಚ್, ಅಮೇರಿಕಾ ರಾಷ್ಟ್ರಗಳು ಜಪಾನಿನ ಬಂದರಗಳ ಮೇಲೆ ಬಲಾತ್ಕಾರ ಮಾಡಿದಾಗ ಇದೇ ಧೈರ್ಯೋತ್ಸಾಹಗಳಿಂದ ಜಪಾನೀಯರು ರಾಷ್ಟ್ರ ಸಂರಕ್ಷಣೆಗಾಗಿ ಕಾದಾಡಿದರು

ಹಾಗಾಗಿ, ಇಷ್ಟು ಮಹಾಮಹಿಮೆಯನ್ನು ಪಡೆದ ಜನಾಂಗದವರು ಪಾಶ್ಚಾತ್ಯರ ದವಡೆಯೊಳಗೆ ಸಿಕ್ಕಿ ಬೀಳುವುದು ಹೇಗೆ ಸಾಧ್ಯವಾದೀತೆಂಬುದು ಅವರ ರಕ್ತಕಣದಲ್ಲಿಯೇ ಹುಟ್ಟುವ ಪ್ರಶ್ನೆಯಾಗಿದೆ. ಇತ್ತೀಚೆಗೆ ಜಪಾನಿನ ವಿದ್ಯಾರ್ಥಿಗಳು ಪಾಶ್ಚಾತ್ಯ ಸೈನಿಕ ಶಿಕ್ಷಣಕ್ರಮವನ್ನು ಅಭ್ಯಾಸಿಸಿ, ಚನ್ನಾಗಿ ಶಿಕ್ಷಣಹೊಂದಿದ ಸೈನ್ಯವೊಂದನ್ನು ತಮ್ಮ ರಾಷ್ಟ್ರದ ರಕ್ಷಣೆಗಾಗಿ ಸಿದ್ಧಪಡಿಸಿ ಇಟ್ಟಿರುವರು

ಕಟ್ಟಕಡೆಗೆ ಈ ಸಮಸ್ಯೆಯೊಂದು ಪರಿಹರಿಸಲಾರದೆ ಅವರ ಕಣ್ಣಮುಂದೆ ಕಟ್ಟಿ ನಿಂತಿತು ಇಷ್ಟು ಸೈನ್ಯ ಸಂಗ್ರಹ, ಈ ಅಪರಿಮಿತ ಜನಸಂಖ್ಯೆ, ಈ ಸಾಮಗ್ರಿಗಳು, ಇವುಗಳನ್ನು ಇಂತಹ ಪರಿಮಿತವಾದ ದ್ವೀಪದಲ್ಲಿಟ್ಟು ಬದುಕುವಂತೆ ಮಾಡುವುದು ಹೇಗೆ? ಎಂಬ ವಿಚಾರ

ಹೀಗೆ ಸಾಮ್ರಾಜ್ಯ ವಿಸ್ತಾರಣಾಭಿಲಾಷೆಯು ತಪ್ಪಭಿಪ್ರಾಯ'ವೆಂಬುದು ಅವರ ಮನಸ್ಸಿನಲ್ಲಿ ಇಲ್ಲವೇ ಇಲ್ಲ ಅಂಥವರಿಗೆ ಜಪಾನು ಸಿಪಾಯಿಯೊಡನೆ ಕೇಳಿದರೆ ನಾವು ಚೈನದವರನ್ನು ಒಳಿತಿಗಾಗಿ ಮಾಡುವೆವು ಎನ್ನುತ್ತಾನೆ

ಈ ಮಾತಿನಲ್ಲಿ ಸತ್ಯಾಂಶವಿದ್ದರೆ ಇದರ ಒಹುದು ಇಂದಿನ ಜಪಾನಿನ ವೀರರೆಂದರೆ ಸೈನ್ಯದ ಮುಖ್ಯಾಧಿಕಾರಿಗಳ ಅವರು ಹೇಳುವುದು ತಮ್ಮ ಮೇಲ್ವಿಚಾರಣೆಯಲ್ಲಿ ಚೈನವನ್ನು ನಾವು ಒಳ್ಳೇದು ಮಾಡುತ್ತೇವೆಂದೂ, ತಮಗೆ ಅದರಿಂದ ಲಾಭದಾಶೆಯಿಲ್ಲವೆಂದೂ ಸಾರುತ್ತಿದ್ದಾರೆ ಲಾಭದಾಶೆಯಿಲ್ಲದಲ್ಲಿ ಇಷ್ಟೊಂದು ಕಲಹವೇಕೆ?

ಕರುಣೆಯೂ ಉಂಟು

ಚೈನದ ವಿಷಯ ಹೀಗೆ ಅವರ ನಿರ್ದಯ ವರ್ತನೆ ಸಮಾನರಾಗಿ ವರ್ಣಿಸಿದರೂ ಅವರ ನಾಗರಿಕ ಜೀವನವು ದಯೆಯನ್ನು ತೋರಿಸುವಂತಹುದಾಗಿದೆ

ವಿದೇಶೀಯ ಅತಿಥಿಯನ್ನು ಅತ್ಯಂತ ಆದರದಿಂದ ಅವರು ಸ್ವಾಗತಿಸುವರು. ಅವರ ಅನ್ಯೋನ್ಯ ಭ್ರಾತೃಪ್ರೇಮಭಾವವು ಎಲ್ಲಿವರೆಗೆ ಇದೆಯೆಂದರೆ ಮಕ್ಕಳಿಲ್ಲದ ದಂಪತಿಗಳಿಗೆ, ಜಪಾನೀಯರು ತಮ್ಮ ಮಕ್ಕಳನ್ನು ಕೊಡುವರು ಅವರ ಸಂಸಾರಜೀವನವು ಉತ್ತಮ ತರಗತಿಯದಾಗಿದೆ

ಆದರೆ "ಪವಿತ್ರ ಕಾರ್ಯ"ವನ್ನು ಮಾಡುವಲ್ಲಿ ಅವರು ಎಂತಹ ಕಠಿನ ಕೆಲಸಗಳನ್ನೂ ಮಾಡುವರು ಪಟ್ಟಣಗಳನ್ನು ಬೊಂಬಿನಿಂದ ಸುಡುವರು, ಬ್ರಿಟಿಷರನ್ನು ಕಡೆಯಲ್ಲಿ ಹಡ ಮಾಡುವರು.

ಜಪಾನಿನ ಗೌರವಕ್ಕಾಗಿ ಅಲ್ಲಿನ ಯೋಧರು ಯಾವುದನ್ನು ಮಾಡಲೂ ಸಿದ್ಧರಿದ್ದಾರೆ ಅವರ ಇಂದಿನ ಈ ತೀಕ್ಷ್ಣವಾದ ಆತ್ಮಸ್ವಾರ್ಥದ ಬುದ್ಧಿಯನ್ನು ತಿದ್ದಲೂ, ಪ್ರಾಚೀನ ಆರಾಧನಾ ರೀತಿಗಳನ್ನೂ, ಸ್ವಮತ ಭ್ರಾಂತಿಯನ್ನೂ ಬಿಡಿಸದಿದ್ದರೆ, ಅವರ ವಿಚಾರವನ್ನು ಆ ರೀತಿಯಿಂದ ವಿಶಾಲಗೊಳಿಸದಿದ್ದಲ್ಲಿ ಜಪಾನು ಮುಂದಕ್ಕೂ ಪ್ರಪಂಚದ ಭಯಂಕರ ಶತ್ರುವಾಗಿ ಉಳಿವುದು

ಜನರಲ್ ಫ್ರಾಂಕೋವಿನ ಪ್ರತೀಕಾರ

ಹಂಗುಸನ್ನೂ ಗುಂಡಿಕ್ಕಿ ಕೊಂದನು

ಮೇಜರ್ ಗಾಬಲ್ಲನನ ಮರಣದ ಕಾರಣವೆಂಬ ನಿಮಿತ್ತದಿಂದ ಸ್ಪೈನಿನ ಸರ್ವಾಧಿಕಾರಿ ಜನರಲ್ ಫ್ರಾಂಕೋ ಎಳು ಮಂದಿ ಗಂಡಸರನ್ನು ಗ[illegible] ಇಕ್ಕಿ ಕೊಂದನು ಈ ಸಂಬಂಧದಲ್ಲಿ ಒಬ್ಬ ಹೆಂಗಸನ್ನು ಕೊಂದಿರುವನು ಇಪ್ಪತ್ತೈದನೆ ಮುವತ್ತು ವರ್ಷಗಳ ಏಕಾಂತ [illegible] ವಿಧಿಸಿರುವನ

ನೋಟೀಸು

ಕಾರ್ಕಳ ಡಿ ಮು ಕೋರ್ಟಿನಲ್ಲಿ

ಕ್ರಿ.ಮ. ಸಂಖ್ಯೆ ೨೫೦ 19 R E P 188 1939

and

R E A 62 39

ವಾದಿ [illegible] ಕುಂತಂ [illegible] ಟ್ರಾನ್ಸಫರದಾರ

[illegible] M I D [illegible]—ಅರ್ಜಿದಾರ

ಮತ್ತು

R T ಶ್ಲೇಡ [illegible] ಎದ್ರಿ

ಇವರೊಳಗೆ

ಎದ್ರಿ—R T ಶ್ಲೇಡ ರೆವರೆಂಡ್ E ಶ್ಲೇಡರ ಮಗ ಮಂಗಳೂರು ತಾಲೂಕು ಒಪ್ಪನ [illegible] ಕಸಬಾ ಮೊಳ್ಳಿ ಪೇಟೆಯಲ್ಲಿರುವವ ಇವರಿಗೆ—

ಸದ್ರಿ ಅಮಲ್ ಜ್ಯಾರಿಯಲ್ಲಿ ಎದ್ರಿಯಾದ ನಿಮ್ಮ ಬಾಬ್ತು ಸ್ಥಿರಾಸ್ತಿಗಳ [illegible] ಬಗ್ಗೆ [illegible] ಇಸ್ತಿಹಾರ ದ್ರಷ್ಟ ಮತ್ತು [illegible] ಸಮಯ ಬಿಡುವನದುವರೆ ವಸೇಲ್ ಒಥ ಒಗ್ಗೆ ಸರ್ಟಿಫಿಕೆಟ್ [illegible] ಅರ್ಜಿ ಸಹಾ ಹಾಜರು ಪಡಿಸಿದ್ದುದರಿಂದ ಅವುಗಳ ಕುರಿತು ನಿಮಗೇನಾದರೂ ಆಕ್ಷೇಪವಿದ್ದರೆ [illegible] ಈ ಕೋರ್ಟು ಮುಂದೆ ಬರುವ ತಾರೀಕು 5-[illegible] 1939ರಲ್ಲಿ ಬಂದು ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ಸಂಗತಿಗಳು ತೀರ್ಮಾನಿಸಲ್ಪಡುವವು ಎಂಬುದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿರುವೆ

ಕಾರ್ಕಳ 3-೭-39 **P. Ramachandra Rao,** Pleader for Petitioner

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

OPPORTUNITY

Now offered to up-country clients to do ready and forward business in Cotton, Gold, Silver, Wheat, Linseed, Stocks & Shares & through "India Cotton Association Bombay Bullion Exchange, Marwari Chamber of Commerce etc. of Bombay.

Prompt Service latest information and Moderate Charges.

For terms of business write to.

Hindustan Cotton Company, Limited
106, Cowasji Patel Street, Fort, Bombay

ಚಲಚ್ಚಿತ್ರ ಪ್ರಪಂಚ



ಯುನೈಟೆಡ್ ಆರ್ಟಿಸ್ಟರಿಂದ ಪ್ರಕಟಿತವಾದ 'ಜಿನೋಬಿಯಾ' ಚಿತ್ರದಲ್ಲಿ ಓಲಿವರ್ ಹಾರ್ಡಿ

'ರಜತಜಯಂತಿ'

ನ್ಯೂಥಿಯೇಟರ್ಸಿನ ಡೈರೆಕ್ಟರ್ ಪಿ ಸಿ ಬರುವಾರವರ ದಿಗ್ದರ್ಶಕತನದಲ್ಲಿ ತಯಾರಾಗುತ್ತಿದ್ದ 'ರಜತ ಜಯಂತಿ' (ಬಂಗಾಳಿ) ಎಂಬ ಚಲಚ್ಚಿತ್ರವು ಸಂಪೂರ್ಣವಾಗಿ ಆದೇ ೧೨ನೇ ತಾರೀಖಿನಿಂದ ಕಲ್ಕತ್ತದ 'ಚಿತ್ರಾ' ಮತ್ತು ನ್ಯೂ ಸಿನೇಮಾ ಮಂದಿರದಲ್ಲಿ ಪ್ರದರ್ಶಿಸಲ್ಪಡುವುದು

ದಿಗ್ದರ್ಶಕರಾದ ಪಿ ಸಿ ಬರುವಾರವರೇ ಪ್ರಾಮುಖ್ಯ ಭೂಮಿಕೆಯನ್ನ ವಹಿಸಿರುವರು. ಇವರೊಂದಿಗೆ ಮೋಲಿನಾ, ಮೇನಕಾ, ಪಹಾರಿ ಸನ್ಯಾಲ್, ಭಾನು, ಇಂದು ಮುಂತಾದವರೂ ಅಭಿನಯಿಸಿರುವರು

'ಜೀವನಮರಣ'

ಇನ್ನು ಹತ್ತುಹನ್ನೆರಡು ದಿನಗಳಲ್ಲೇ ನ್ಯೂ ಥಿಯೇಟರ್ಸಿನ 'ಜೀವನ ಮರಣ' ಎಂಬ ಛಾಯಾ ಚಿತ್ರವು ಪ್ರದರ್ಶನಕ್ಕೆ ಹೊರಬೀಳುವುದು ಶ್ರೀ ನಿಟಿನ್ ಬೋಸರೇ ಇದರ ದಿಗ್ದರ್ಶಕರು ಸೈಗಲನೇ ನಾಯಕನು ಕಳೆದ ವಾರ ತಯಾರಿಸಿದ ಕೆಲವು ಸೀನುಗಳಲ್ಲಿ ಮದುವೆಯ ಸಮಯ ಅತಿಥಿಗಳಿಗೆ ತಾಂಬೂಲ ಪಾನಕ ಮೊದಲಾದುವನ್ನು ಹಂಚುತ್ತಿರುವ ಸೇವಕನ ಭೂಮಿಕೆಯನ್ನು ಧರಿಸಿದ ಸೈಗಲನನ್ನು ಗುರುತಿಸುವುದೇ ಕಷ್ಟವಾದ ರೀತಿಯಲ್ಲಿ ಅತನು ವೇಷ ಬದಲಾಯಿಸಿ ಅಭಿನಯಿಸಿರುವನೆಂದು ವಾರ್ತೆ

"ಕಪಾಲಕುಂಡಲ" ಚಿತ್ರವು ಪ್ರದರ್ಶನಕ್ಕೆ ತಯಾರಾಗಿದೆ ಡೈರೆಕ್ಟರ್ ಹೇಮಚಂದರರು "ಜವಾನಿಕಿ ರೀತ್" ಎಂಬ ಸಾಮಾಜಿಕ ಚಿತ್ರವನ್ನು ತಯಾರಿಸುತ್ತಲಿರುವರು ಇದರಲ್ಲಿ ಕನನ್‌ದೇವಿಯು ಆಧುನಿಕ ಕಾಲೇಜು ಹುಡುಗಿಯ ಪಾತ್ರದಲ್ಲಿ ಅಭಿನಯಿಸುವಳು

'ಆದ್ಮಿ'

ಪ್ರಭಾತ ಕಂಪೆನಿಯ ಡೈರೆಕ್ಟರರಾದ ಶಾಂತಾರಾಮರವರು "ಆದ್ಮಿ" ಅಥವಾ 'ಲೈಫ್ ಈಸ್ ಫೋರ್ ಲಿವಿಂಗ್" ಎಂಬ ಸಾಮಾಜಿಕ ಚಿತ್ರ ತಯಾರಿಕೆಯಲ್ಲಿಯೇ ತೊಡಗಿರುತ್ತಾರೆ. ಇದು ಬೇಗನೆ ಪ್ರದರ್ಶನಕ್ಕೆ ಹೊರಬೀಳಬಹುದೆಂದು ಭಾವಿಸಲಾಗಿದೆ. ಕೆಲಸದಲ್ಲಿಯೇ ತಲ್ಲೀನರಾದ ಶಾಂತಾರಾಮರ ಭೆಟ್ಟಿಯನ್ನು ಪಡೆಯಲು ಬಂದ ನೂರಾರು ಜನರು ನಿರಾಶರಾಗಿ ಹಿಂತಿರುಗುತ್ತಿರುವರು "ಡೈರೆಕ್ಟರ್ ಶಾಂತಾರಾಮರವರನ್ನು ಭೇಟಿಮಾಡಲು ಸಾಧ್ಯವೇ ಇಲ್ಲ" ಎಂದೇ ಭೇಟಿಗೆ ಬಂದ ಜನರಿಗೆ ಸಿಕ್ಕಿದ ಉತ್ತರ ಇದಕ್ಕೆ ಚಿತ್ರದ ದಿಗ್ದರ್ಶಕತನದಲ್ಲಿಯೇ ಅವರು ಮಗ್ನರಾಗಿರುವುದೇ ಕಾರಣ ಇದು ಹಿಂದೀ ಮತ್ತು ಮರಾಠಿ ಎರಡು ಭಾಷೆಗಳಲ್ಲಿಯೂ ತಯಾರಿಸಲ್ಪಡುವುದು ಇದರಲ್ಲಿ ಶಾಂತಾ ಹುಬ್ಳಿಕರ್, ಶಾಹು ಮೋದಕ್, ವಸಂತ ಶೆಂಗಡಿ ಮೊದಲಾದ ಅಭಿನಯ ಕುಶಲರು ಅಭಿನಯಿಸಿರುವರು

'ಸಂತ ತುಳಸೀದಾಸ'

ರಣಜಿತ ಕಂಪೆನಿಯ ಉತ್ತಮ ಪೌರಾಣಿಕ 'ಸಂತ ತುಳಸೀದಾಸ' ಚಿತ್ರವು ಬೊಂಬಾಯಿಯಲ್ಲಿ ಇನ್ನೂ ಪ್ರದರ್ಶಿತವಾಗುತ್ತಲಿರುವುದು ರಣಜಿತ ಕಂಪೆನಿಯವರು ಇದರ ತಯಾರಿಗಾಗಿ ಲಕ್ಷಾಂತರ ರೂಪಾಯಿಯನ್ನು ವ್ಯಯಿಸಿರುವರು ಇದರ ಉದ್ಘಾಟನಾ ಸಮಾರಂಭವನ್ನು ರೋಯಲ್ ಒಪೇರಾ ಮಂದಿರದಲ್ಲಿ ಜೂನ್ ತಾರೀಕು ೨೪ರಂದು ಪ್ರಭಾತ ಕಂಪನಿಯ ದಿಗ್ದರ್ಶಕರಾದ ಶಾಂತಾರಾಮರು ನೆರವೇರಿಸಿದರು ಪ್ರಭಾತದ 'ಸಂತ ತುಕಾರಾಮ' ಚಿತ್ರದಲ್ಲಿ ತುಕಾರಾಮನ ಭೂಮಿಕೆಯನ್ನು ಧರಿಸಿ ನಿಮ್ಮ ಹೃದಯ ದಲ್ಲಿ ಜ್ಞಾನರಸವನ್ನೆರೆದ ವಿಷ್ಣುಪಂತ ಪಗ್ನೀಸನೇ ಇದರಲ್ಲಿ ತುಳಸೀದಾಸ ಪಾತ್ರದಲ್ಲಿ ಅಭಿನಯಿಸಿರುವನು ವಸಂತಿ ಮೊದಲಾದವರೂ ಇದರಲ್ಲಿ ಅಭಿನಯಿಸಿರುವರು ಪಂಡಿತ ಮದನಮೋಹನ ಮಾಲವೀಯ, ಗುರು ಶಂಕರಾಚಾರ್ಯರು ಈ ಚಿತ್ರವನ್ನು ಹೊಗಳುತ್ತಾ ಈ ಚಿತ್ರವು ರಣಜಿತ ಕಂಪೆನಿಗೆ ಖ್ಯಾತಿಯನ್ನು ತರಲೆಂದು ಹರಸಿದ್ದಾರೆ

ರಣಜಿತ ಕಂಪೆನಿಯ ಡೈರೆಕ್ಟರ್ ಕಾರ್ದಾರರವರು 'ಪಾಗಲ್' ಎಂಬ ಚಿತ್ರದ ತಯಾರಿಕೆಯನ್ನು ಸ್ವಲ್ಪ ಮುಂದರಿಸಿರುವರು ಈ ಚಿತ್ರದ ನಾಯಿಕೆಯಾದ ಮಿಸ್ ಮಾಧುರಿಯು ಅಸ್ವಾಸ್ಥ್ಯತೆಯಲ್ಲಿರುವುದೇ ಇದಕ್ಕೆ ಕಾರಣ ಈ ಚಿತ್ರದಲ್ಲಿ ಪ್ರಿಥ್ವೀರಾಜನು ನಾಯಕನಾಗಿರುವನು

☽ ☽ ☽ ☽

ಹನ್ಸ್ ಪಿಕ್ಚರ್ಸನವರ 'ಸುಖಕಾ ಶೋಧ ಮೇ' ಅಥವಾ 'In search of happiness' ಎಂಬ ಚಿತ್ರವನ್ನು ಮಾಸ್ಟರ್ ವಿನಾಯಕರ ದಿಗ್ದರ್ಶಕತನದಲ್ಲಿ ತಯಾರಿಸಲ್ಪಡುವದು

☽ ☽ ☽ ☽

ಕಾಳಿ ಫಿಲ್ಮ ಕಂಪೆನಿಯವರು 'ಚಾಣಕ್ಯ' ಎಂಬ ಅಲೆಕ್ಸಾಂಡರನ ಭಾರತದ ದಿಗ್ವಿಜಯ ಕಾಲದ ಚಿತ್ರವನ್ನ ತಯಾರಿಸಲಿರುವರು ಇದರಲ್ಲಿ ಅಹೀಂದ್ರ ಚೌಧುರಿಯು ಸೆಲ್ಯೂಕಸನ ಪಾತ್ರದಲ್ಲಿಯೂ ಬಿನಾದೇವಿಯು ಸೆಲ್ಯೂಕಸನ ಮಗಳಾದ ಹೆಲೆನಳ ಪಾತ್ರದಲ್ಲಿಯೂ ಅಭಿನಯಿಸುವರು

'ಹೌದು ನನ್ನ ಬಂಧಿಸಿ ಕೊಂಡುಹೋಗು ಆದರೆ ಯಾರು ಬಂಧಿತರಾದವರು' ಶಾಂತಾ ಹುಬ್ಳೀಕರ್ ಇಕೆಯೋ? ಪೋಲೀಸನಾದ ಶಾಹು ಮೋದಕ್ ಇವನೋ? ಶಾಂತಾರಾಮರ ದಿಗ್ದರ್ಶನ ಬಾಳುವದಕ್ಕಾಗಿ ಬಾಳುವೆ ಎಂಬ ಪ್ರಭಾತ ಚಿತ್ರದಲ್ಲಿ

'ಸಾಧನಾ'

ಸಾಗರ ಕಂಪನಿಯವರ ಚಿತ್ರ ಇದರಲ್ಲಿ ಬಿಬ್ಬು, ಪ್ರೇಮ ಅದೀಬ್, ಬುದೊ ಅದ್ವಾನಿ, ಶೋಭನ ಸಮರ್ಥ ಮೊದಲಾದವರು ಅಭಿನಯಿಸಿರುವರು ಈ ಚಿತ್ರವು ಈಗ ಮುಂಬಾಯಿಯ ಇಂಪೀರಿಯಲ್ ಮಂದಿರದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಲ್ಪಡುತ್ತಿರುವುದು ದಿಗ್ದರ್ಶಕರು ವೀರೇಂದ್ರ ದೇಸಾಯಿ ಮತ್ತು ಮಹೇಂದ್ರ ಠಾಕೂರರು

ಸಾಗರ ಕಂಪೆನಿಯ ಡೈರೆಕ್ಟರ್ ಮಾಧು ಬೋಸರ 'ಕುಂಕುಮ ನರ್ತಕಿ' ಎಂಬ ಹೆಸರಿನ ಚಿತ್ರವನ್ನು ಹಿಂದೀ ಮತ್ತು ಬಂಗಾಳಿ ಭಾಷೆಗಳಲ್ಲಿ ತಯಾರಿಸುತ್ತಲಿರುವರು ಇದರಲ್ಲಿ ಅವರ ಪತ್ನಿಯಾದ ಸಾಧನಾ ಬೋಸ್, ಪದ್ಮಾದೇವಿ, ಧೀರಜ ಭಟ್ಟಾಚಾರ್ಯ, ರೊಬಿ ರೋಯ್ ಮೊದಲಾದವರು ಅಭಿನಯಿಸುವರು ಹೊರ ಬಯಲಿನ ಎಲ್ಲಾ ದೃಶ್ಯಗಳು ಸಂಪೂರ್ಣವಾಗಿವೆ

ಅನೇ ಕಂಪೆನಿಯ ಇನ್ನೊಬ್ಬ ದಿಗ್ದರ್ಶಕರಾದ ರಾಮಚಂದ್ರ ಠಾಕೂರರು 'ಸಭ್ಯ ಮದುವೆ' ಅಥವಾ 'ಸಿವಿಲ್ ಮೆರಿಜ್' ಎಂಬ ಚಿತ್ರವನ್ನು ಬೇಗನೇ ಸಂಪೂರ್ಣಗೊಳಿಸುವರು ಇದರಲ್ಲಿ ಪ್ರಭಾ ಮತ್ತು ಹರೀಶರು ಅಭಿನಯಿಸುವರಲ್ಲದೆ ಮುಂಬಯಿಯ ವಿದ್ಯಾರ್ಥಿಗಳ ಕಾಲೇಜು ನಾಟಕಗಳಲ್ಲಿ ಭಾಗವಹಿಸಿ ತನ್ನ ನೃತ್ಯದಿಂದಲೂ, ಗಾನದಿಂದಲೂ ಪ್ರೇಕ್ಷಕರ ಮನಮೆಚ್ಚಿಸಿದ ಸ್ನೇಹಪ್ರಭಾ ಪ್ರದಾನ್ ಎಂಬ ಹೊಸ ನಟಿಯೊಬ್ಬಳು ಅಭಿನಯಿಸುವಳು

ಮಿಲಿಯಾಂತರ ಮಂದಿಯ ಕಣ್ಮನಗಳನ್ನು ಸೂರೆಗೊಂಡ ವಾಸಂತಿಯು 'ಸಂತ ತುಳಸೀದಾಸ'ವೆಂಬ ರಣಜಿತ ಚಿತ್ರದಲ್ಲಿ

ದಿಗ್ದರ್ಶಕ ಜಯಂತಶರಾಧಿಯವರು 'ಭೋಲಿ ಬಾತೆ' ಎಂಬ ಚಿತ್ರವನ್ನು ತಯಾರಿಸುತ್ತಲಿರುವರ ಇದರಲ್ಲಿ ಮಾಯಾ ಪ್ರೇಮ ಅದೀಬ್, ಅರುಣ ಬಿಬ್ಬು ಬುದೊ ಅದ್ವಾನಿ, ಮೊದಲಾದವರು ಪಾತ್ರವಹಿಸುವರು

ಡೈರೆಕ್ಟರ್ ಮಹಬೂಬಾರವರು ಸುರೇಂದ್ರ, ಗುಲಾಮ ಮಹಮ್ಮದ್, ಸರ್ದಾರ್ ಅಖ್ತರ್ ಮೊದಲಾದವರನ್ನು ಸೇರಿಸಿ 'ಅಲಿಬಾಬಾ' ಎಂಬ ಚಿತ್ರವನ್ನು ತಯಾರಿಸಲು ವಿಲಕ್ಷಣ ಪ್ರಯತ್ನವನ್ನು ಮಾಡುತ್ತಿರುವರ

☽ ☽ ☽

ಬೊಂಬೆ ಟಾಕೀಸ್ ಕಂಪನಿಯಲ್ಲಿ ದೇವಿಕಾರಾಣಿಯೊಂದಿಗೆ ಅನೇಕ ಚಿತ್ರಗಳಲ್ಲಿ ಅಭಿನಯಿಸಿದ ಅಶೋಕ ಕುಮಾರನು ಈಗ ಆ ಕಂಪೆನಿಯನ್ನು ಬಿಟ್ಟಿರುವನು ಜೀವನ ಪ್ರಭಾತದಲ್ಲಿ ಅಭಿನಯಿಸಿದ ಕಿಶೋರಶಾಹುವು ಹೊಸದಾಗಿ ಪ್ರಾರಂಭಿಸಲಿರುವ ಫಿಲ್ಮ್ ಕಂಪನಿಯನ್ನು ಸೇರಬಹುದೆಂದು ಊಹೆ

☽ ☽ ☽ ☽

ಮಿನರ್ವಾ ಕಂಪನಿಯವರ ಜಹಾಂಗೀರನ ರಾಜ್ಯಾಡಳಿತೆಯನ್ನು ಚಿತ್ರಿಸುವ 'ಪುಕಾರ' ಎಂಬ ಚಿತ್ರವು ಸಂಪೂರ್ಣವಾಗಿದೆ ಇದರಲ್ಲಿ ಚಂದ್ರಮೋಹನನು ಸಲೀಮನಾಗಿಯೂ, ನಾಸಿಮಳು ಮಿಹರುನ್ನೀಸಳಾಗಿಯೂ ಅಭಿನಯಿಸಿರುವರು ದಿಗ್ದರ್ಶಕ ಸೊಹ್ರಾಬ್ ಮೋದಿಯವರು ಇದರಲ್ಲಿ ಅಭಿನಯಿಸಿರುವರು

'ಕ್ರೈಸಿಸ್'

ಜೆಕೊಸ್ಲೊವಾಕಿಯದಲ್ಲಿ ಹಿಟ್ಲರನ ಕ್ರೂರ ಕೃತ್ಯಗಳನ್ನು ಚಿತ್ರಿಸುವ 'ಕ್ರೈಸಿಸ್' ಎಂಬ ಚಿತ್ರಪಟವು ಅಮೇರಿಕದಲ್ಲಿ ಪ್ರದರ್ಶಿಸಲ್ಪಡುತ್ತಿದೆ ಮ್ಯುನಿಚ್ ಒಪ್ಪಂದದ ಮೊದಲು ಹಿಟ್ಲರನು ನಡೆಸಿದ ಕೃತ್ಯಗಳೆಲ್ಲವನ್ನು ಡೈರೆಕ್ಟರ್ ಹರ್ಬರ್ಟ ಕ್ಲೈನ್‌ರವರು ಈ ಚಿತ್ರದಲ್ಲಿ ಸಂಗ್ರಹಿಸಿರುವರು ಈ ಚಿತ್ರವು ಹಿಟ್ಲರನ ಹಾಗೂ ಪ್ರಜಾ ಪ್ರಭುತ್ವ ರಾಷ್ಟ್ರಗಳ ಪ್ರತಿನಿಧಿಗಳೆಂದು ಅನ್ನಿಸಿಕೊಳ್ಳುತ್ತಿರುವ ಚೆಂಬರ್ಲೇನ್, ಡಾಲಡಿಯರ್ ಮೊದಲಾದ ಪ್ರಭೃತಿಗಳಿಂದ ಮೋಸಹೋಗದಿರಿ ಎಂದು ಅಮೇರಿಕಕ್ಕೆ ಪಾಠ ಕಲಿಸುತ್ತಿವೆ

ಸಾಗರ ಚಿತ್ರಪಟದ "ಸಾಧನಾ"ದಲ್ಲಿ ಶೋಭನಾ ಸಮರ್ಥ ಮತ್ತು ಪ್ರೇಮ ಅದೀಬ ಇವರು ಹರ್ಷಿತರಾಗಿ ನಟಿಸುತ್ತಾರೆ

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ: ಜಮ್ಮಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ: ಲಿವರ್ ಮತ್ತು ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪುರ, ಮದ್ರಾಸು.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಸಮಯದ ಬೆಲೆ ಎಷ್ಟೆಂದು ನಿಶ್ಚಯಿಸಿದವರಿರುವರೆ?

ಹಣದ ಬೆಲೆಯನ್ನು ಕಟ್ಟಬಹುದು—ಆದರೆ ಸಮಯದ ಬೆಲೆಯನ್ನು ನಿಶ್ಚಯಿಸಲಸಾಧ್ಯ!

ಇಂತಹ ಅತ್ಯಮೂಲ್ಯ ಸಮಯವನ್ನು ನಿರರ್ಥಕವಾಗಿ ಹಾಳುಮಾಡಲವಕಾಶ ಕೊಡವಂತೆ, ನಮ್ಮ ಸರ್ವಿಸುಗಳು ಪ್ರಾತಃ ಕಾಲದಿಂದ—ಸಾಯಂಕಾಲ ವರೆಗ ಬಿಡುವಿಲ್ಲದೆ ಓಡಾಡುತ್ತಿದ್ದು ನಿಮ್ಮ ಯಾವುದೇ ಕೆಲಸಗಳನ್ನಾದರೂ ನೀವು ಒಂದೂರಿನಿಂದ ಇನ್ನೊಂದೂರಿಗೆ ನಮ್ಮ ಬಸ್ಸುಗಳಲ್ಲಿ ತ್ವರ್ಯದಲ್ಲಿ ಪ್ರಯಾಣ ಬೆಳಸಿ, ನಿಮ್ಮ ಅತ್ಯಮೂಲ್ಯ ಸಮಯವನ್ನು ನಿರರ್ಥಕಗೊಳಿಸದಂತೆ, ನಾವು ಏರ್ಪಾಡು ಮಾಡಿರುವೆವು ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ನಾವು ಇನ್ನು ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು.

JOINT MANAGERS.

The Combined Booking Agency, MANGALORE

The Joint Booking Office, KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲುವೇದನೆಗಳಿಗೂ ಎದೆನೋವು ... ಗಳು, ಚಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ವಕ್ರವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ಕೋಲಿಗಳ ಡಬ್ಬಿ ರೂ. 1-4-0 (ವಿ. ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ.
P. O. Peridepi (ನೆಲ್ಲೂರು ಡ್ರಿ.)

HOUNSA

ಹಂಸಾಸ್ನೋ ಮತ್ತು ಬ್ರಿಲ್ಲೆಂಟಿನ್ಸ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಲಿಕಟ್ಟಾ ಬಜಾರ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ	1—14—0	—
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	4—12—0	4—14—0
,, ದುಯಂ ,, ,,	4—8—0	4—10—0
,, ಅವ್ವಲ್ ಸುಗ್ಗಿ ,,	4—8—0	4—8—0
,, ದುಯಂ ,, ,,	4—5—0	4—6—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
,, ಸಿಪ್ಪೆ ಇದ್ದದು ,,	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
,, ದಿಲ್‌ಪಸಂದಿ ,,	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—8—0	3—8—0
ಗೇರುಬೀಜ ಮುಡಿಗೆ	3—8—	3—8—0
ಕಬ್ಬಿನ ಬೆಲ್ಲ ಖಂಡಿಗೆ	47—8—0	53—12—0
ಒಳ್ಳೆಮೆಣಸು ಕಂದ್ರತ್ತೈಟಿಗೆ	14—8—0	15—8—0

ಬಿಡಿಸಂಚಿಕೆ ಒಂದಾಣೆ
ವಾರ್ಷಿಕ ಚಂದಾ ರೂ. 2-0-0

ಸ್ವದೇಶಾಭಿಮಾನಿ

ಟಪ್ಪಾಲು ಹಾಸಲು ಸೇರಿ
ರೂ. 2-13-0

Established 1906 *Regd. No. M 340*

ಸಂಪುಟ ೩೩] ತಾರೀಖು ೧೧-೮-೧೯೩೯ (11-8-1939) [ಸಂಚಿಕೆ ೩೨

THE

BOMBAY LIFE ASSURANCE COMPANY, LTD.,

(ESTD 1908)

THE OFFICE

Which has proved its popularity by its progress

Record of New Business

Proposed	Year	Completed
1,25,50,250	1934	1 04,38 750
1,50,48,915	1935	1 23 28 665
1 68,88 200	1936	1 36 01 500
1,72,579,75	1937	1 40,08 745
176.83,250	**1938**	**144 91 000**

1939 VALUATION YEAR.

Please take up a Policy Now and participate in Bonus

To Insure or to Represent it pays you to consult us

— *Apply to* — **KOCHIKAR BROTHERS, LIMITED,**

Madras Branch Secretaries

The Bombay Life Assurance Co. Ltd

The Bombay Life Building, Gandhinagar, UDIPI

or any of our following offices:

Post Box No 337
Mount Road,
Madras

Visweshwarapuram Circle
Bangalore City

Charni Road
Girgaum
BOMBAY 4

Car Street,
Mangalore

Puthiyara,
Calicut.

Central Station Road,
Trivandrum

MAKE LIFE WORTH-LIVING!

Indigestion – Insomnia – Dry Cough—
Nervousness – Weak Heart &c.

these make you wiery of Life!

CONSULT US AND BUY
YOUR LIFE'S HAPPINESS!

Oils – that cool the brain and induce sleep
Lehas – that build-up your wasted system
Asavas = that regenerate your jaded nerves

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA N. KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ ದುರ್ಬಲ ಹೃತ್ಕೋಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ. ಕನ್ನಡ
(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

ಸ್ಥಳೀಯ ಸ್ಟೋಕಿಸ್ಟರು. –
ಯು ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು

Edited, Printed & Published by A. S. Kamath at the ... Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 18—8—1939 卐 ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 卐 ತಾರೀಕು ೧೮—೮—೧೯೩೯



Photo C P London

ಲಂಡನ್ ಡಾಕ್ಸಿನಲ್ಲಿ, ವಿಮಾನದಾಳಿಯನ್ನು ತಡೆಯಲು ತರಬೇತಿಯ ಪ್ರದರ್ಶನ.

★ ಸಚಿತ್ರ ವಾರಪತ್ರಿಕೆ ★

ನೋಟಗಳು

ಕಾಂಗ್ರೆಸ್ಸು ವರ್ಕಿಂಗ್ ಕಮಿಟಿಯು ಆಧಿವೇಶನವು, ಇದಗ್ರಿತ್ಯ ಸುಭಾಸ ಬೋಸರಿಗೆ ಮೂರು ವರ್ಷಗಳ ರಜೆಯೂ ಸಿಕ್ಕಿತು.

ಈಗ ಬೋಸರಿಗೆ, ತನ್ನ ಹಿಂದಿನ ಕೃತ್ಯಗಳ ವಿಷಯ ಆಲೋಚನೆ ಮಾಡಲು ಬೇಕಾದಷ್ಟು ಸಮಯವೂ ದೊರಕಿತು!

ಬೋಸರು ಹಿಂದೆ, ಕಾಂಗ್ರೆಸಿನ ಬಲಪಕ್ಷದ ಮುಖಂಡರು ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಒಪ್ಪಂದ ಮಾಡಿಕೊಳ್ಳುವರೆಂದೂ ಜೋರಾಗಿ ಅವರ ಮೇಲೆ ಆಪಾದನೆ ಹೊರಿಸಿದ್ದರು.

ಆದರೆ, ವರ್ಕಿಂಗ್ ಕಮಿಟಿಯು, ಈಜಿಪ್ಟ್, ಸಿಂಗಾಪುರಗಳಿಗೆ ಸೈನ್ಯವನ್ನು ಕಳುಹಿಸುವ ವಿಷಯದಲ್ಲಿ ಖಂಡಿಸಿ ಮಾಡಿದ ಠರಾವಿನಿಂದ ಆದರೂ, ತಾವು ಮಾಡಿದ ಆರೋಪವು ನಿರಾಧಾರವೆಂದೂ ನಿಷ್ಪ್ರಯೋಜಕವೆಂದೂ ಅವರಿಗೆ ತಿಳಿಯದಿರದು!

ಇದರಂತೆ, ಕಾಂಗ್ರೆಸಿನಲ್ಲಿ ಜನತೆಯ ವಿಶ್ವಾಸವನ್ನು ಪಡೆದಿರುವ ಹಲವು ಮುಖಂಡರ ಮೇಲೆ ಬೋಸರು ಆರೋಪಣೆಗಳನ್ನು ಹೊರಿಸಿದ್ದರು!

ಅವರ ನಿಂದೆಯ ಬಾಯಿಯಿಂದ, ಮಹಾತ್ಯಾಗಿಯವರು, ನೆಹರುಗಳೂ ತಪ್ಪಲಿಲ್ಲ!

ಸರ್ದಾರ ಪಟೇಲರಂತಹ ಧನಿಯರು, ಕಾಂಗ್ರೆಸಿನಲ್ಲಿ ಅಧಿಕಾರ ವಹಿಸಿಕೊಂಡು, ಕಾಂಗ್ರೆಸನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಮಾರಿಬಿಡುವರೆಂದು ಅವರು ಊಹಿಸಿದರು!

ಇಂತಹ ಟೀಕೆಗಳನ್ನು ಮಾಡುತ್ತಾ, ಪಿಶಾಚಿ ಹಿಡಿದವರಂತೆ ಅವರ ಬಹಳವಾಗಿ ಕೂಗೆಬ್ಬಿಸಿದರು!

ಇಂತಹ ಕೃತ್ಯಗಳನ್ನು ಮಾಡುತ್ತ ಬಹುಶಃ ಅವರು, ಠಾಗೂರ್, ಜಗದೀಶ ಮೊದಲಾದವರು ಜನ್ಮವೆತ್ತಿದ ಬಂಗಾಳ ಪ್ರಾಂತವು ತನ್ನನ್ನು ಜಯಘೋಷ ಮಾಡಿ ಎತ್ತಿ ಹಿಡಿಯುವುದೆಂದು ಭ್ರಮೆಗೊಂಡಿರಬೇಕು!

ಬೊಂಬಾಯಿ ಮದ್ರಾಸು ಮೊದಲಾದ ಪ್ರಾಂತಗಳ ಇಂಗ್ಲಿಷರ ಗೆಳೆತನವುಳ್ಳವುಗಳೆಂದೂ, ಬಂಗಾಳವು ಅದರ ಬದ್ಧದ್ವೇಷಿಯೆಂದೂ ಕಲ್ಪಿಸಿಕೊಂಡಿದ್ದ ಬೋಸರಿಗೆ, ತನ್ನ ಕ್ರಾಂತಿಕಾರಕ ಪ್ರೇರಣೆ (Revolutionary urge) ಯನ್ನು ಮುಂದೊತ್ತಲು ಬಂಗಾಳದ ಪ್ರೋತ್ಸಾಹವು ಒದಗುವುದೆಂದು ಅವರು ಕಲ್ಪಿಸಿಕೊಂಡಿದ್ದು ಬಹು ಸೋಜಿಗವಾಗಿದೆ!

ಜನತೆಯನ್ನು ಕಾಂಗ್ರೆಸಿನಿಂದ ಭಿನ್ನಮಾಡುವ ಮತ್ತು ತಪ್ಪುದಾರಿಯಲ್ಲಿ ನಡೆಸುವಂತಹ ಆವೇಶಗೊಂಡವರಾಗಿ, ಅವರು ಕಾಂಗ್ರೆಸಿಗೆ ಎದುರಾಗಿ ತಮ್ಮದೊಂದು ತೀವ್ರಗಾಮಿಪಕ್ಷವನ್ನು ಸ್ಥಾಪಿಸಿ, ಗಾಂಧೀಜಿಯವರ ಮತ್ತು ಕಾಂಗ್ರೆಸು ಸಂಸ್ಥೆಯ ತಲೆಮೆಟ್ಟಿ ನಿಲ್ಲಬೇಕೆಂದೆಲ್ಲಾ ಭಾವನೆಗಳನ್ನು ಮಾಡಿಕೊಂಡರು

ಬೋಸರ ಒಂದು ಪ್ರಾಮುಖ್ಯ ಆಸೆಯು ಇಂದಿನ ಕಾಂಗ್ರೆಸಿನ ಮುಖಂಡರನ್ನು ಅಪರಾಧಿಗಳಾಗಿ ಹಿಡಿದು ಬಿಡಬೇಕೆಂದಾಗಿತ್ತು.

ಕಾಂಗ್ರೆಸಿನ ತತ್ವಗಳನ್ನು ಅವರು ನಿಶ್ಚಯವಾಗಿಯೂ ಮಾರಿಬಿಡುತ್ತಾರೆಂದು ಬೋಸರು ಖಂಡಿತವಾಗಿ ತಿಳಿದುಕೊಂಡಿದ್ದರು

ಸ್ವಾಭಾವಿಕ ನೈಸರ್ಗಿಕವಾದ ಆಹಾರವೇ ಉತ್ತಮ ತಾಯಂದಿರು ತಮ್ಮ ಮಕ್ಕಳಿಗೆ ಅಂಥಾ ನೈಸರ್ಗಿಕ ಆಹಾರವಾದ ಮೊಲೆಹಾಲನ್ನುಣ್ಣಿಸಿ ಅವನ್ನು ಏನೊಂದು ಪ್ರಯಾಸ ಪಡದೆ ಸಂಗೋಪನೆ ಮಾಡುವ ಶಕ್ತಿಯು ಬರಬೇಕಾದರೆ ಬಾಣಂತಿತನದ ಮೊದಲೂ ನಂತರವೂ 'ಓವಲ್‌ಟಿನ್'ನ್ನು ಸೇವಿಸಬೇಕು ಇದರಿಂದ ತಾಯಂದಿರಿಗೆ ಹಾಲು ಸಮೃದ್ಧವಾಗುವುದೆಂಬುದು ಖಾತ್ರಿ

ಪ್ರಕೃತಿಯ ಸಂಪನ್ನವಾದ ಶಕ್ತಿವರ್ಧಕ ಆಹಾರ—ನೆನೆಹಾಕಿ ಹುರಿದ ಬಾರ್ಲಿ ದನದ ಹಸಿ ಹಾಲು ಮ[illegible] ಸ್ವಾಭಾವಿಕ ಆಹಾರ ಸತ್ವ (Vitamins)ಗಳಿಂದ ತಯಾರಿಸಲ್ಪಟ್ಟ ಈ 'ಓವಲ್ಟಿನ್' ಸಂಪೂರ್ಣವಾಗಿ [illegible] ಆಹಾರವಾಗಿದ್ದು ತಾಯಿಂದರಿಗೆ ಆರೋಗ್ಯ, ತ್ರಾಣ ಮತ್ತು ಚೇತನವನ್ನುಂಟುಮಾಡಿ ಪೋಷಿಸುತ್ತದೆ

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ

ವಿತರಣಾಕಾರರು: ಜೇಮ್ಸ್ ರೈಟ್ ಲಿಮಿಟೆಡ್,
ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ

'ಓವಲ್‌ಟಿನ್'

OVALTINE [illegible]

'ಓವಲ್‌ಟಿನ್ ಬಿಸ್ಕುಟುಗಳು'

ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು ಎಲ್ಲಾ ಸಮಯಕ್ಕೆ ಉತ್ತಮವಾದ ಬಿಸ್ಕುಟುಗಳು ಇವುಗಳಲ್ಲಿ ಓವಲ್ಟಿನ್ ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ 4 ಔನ್ಸು ಮತ್ತು 8 ಔನ್ಸು ಪೆಕೆಟುಗಳಲ್ಲಿಯೂ ಒಂದು ರಾತ್ತಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ

OV/10/39

ಈಗ ಕಾಂಗ್ರೆಸಿನ ಧುರೀಣರ ಧೋರಣೆಯ ವಿಷಯದಲ್ಲಿ ಬೋಸರು ಮಾಡಿದ ಆರೋಪಣೆಗಳು ಕೇವಲ ಹಸಿ ಸುಳ್ಳೆಂದು ನಿರ್ಧಾರವಾದಂತಾಯಿತು!

ತನ್ನ ಹಿಂದಿನ ಹಲವು ಅಕೃತ್ಯಗಳನ್ನು ನೆನೆದು ಕೊರಗಿ ಪಶ್ಚಾತ್ತಾಪ ಹೊಂದಲು ಬೋಸರಿಗೆ ಇಂದು ಬೇಕಾದಷ್ಟು ಅವಕಾಶವೂ ಒದಗಿದೆ!

ಜಪಾನಿನ ನೂಲು ಮತ್ತು ವಸ್ತ್ರಗಳ ಸಾಮಾನು ಹಿಂದೂದೇಶಕ್ಕೆ ಬರುತಿದ್ದು ಭಾರತದ ವಸ್ತ್ರ ಕೈಗಾರಿಕೆಯೇ ವಿನಾಶವಾಗುವ ಪರಿಸ್ಥಿತಿಯಲ್ಲಿದೆ!

ಹೀಗೆಯೇ ಬರ್ಮಾದಿಂದ ಇಲ್ಲಿಗೆ ಬರುವ ಅಕ್ಕಿಯಿಂದ ದಕ್ಷಿಣ ಭಾರತದ ಬೇಸಾಯಗಾರರಿಗೆ ಬಹಳ ಪೆಟ್ಟಾಗಿದೆ!

ಭಾರತದ ರಾಷ್ಟ್ರೀಯ ಕೈಗಾರಿಕೆ, ಉತ್ಪತ್ತಿಗಳನ್ನು ಅಭಿವೃದ್ಧಿಗೊಳಿಸುವ ರಾಷ್ಟ್ರದ ಹಿತದೃಷ್ಟಿಯಿಂದ ಕೇಂದ್ರ ಸರಕಾರವು ತೀವ್ರವಾಗಿ ತಕ್ಕ ಪ್ರತಿಕ್ರಿಯೆಗಳನ್ನು ಮಾಡಲು ಅವಕಾಶವಿದೆ ಮೊದಲನೆಯದಾಗಿ ಜಪಾನನ್ನು ಬಹಿಷ್ಕರಿಸುವುದು, ಎರಡನೆಯದಾಗಿ ಬರ್ಮಾದ ಅಕ್ಕಿಯ ಮೇಲೆ ಕರ ಹಾಕುವುದು.

ಜಪಾನಿನಿಂದ ಬರುವ ಆಮದುಗಳನ್ನು ನಿಲ್ಲಿಸಿದರೆ ಭಾರತದ ರಾಷ್ಟ್ರೀಯ ಕೈಗಾರಿಕೆಯು ಖಂಡಿತವಾಗಿಯೂ ಏಳಿಗೆಯಾಗುವುದು

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾಃ । ನ ಭೇಜಿರೇ ಭೀಮ ವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿ ಗದರಿಂ । ಹರುಷವಾಯಿತೆ! ಮತ್ತೆ ವಿಷದ ಸುಧುತ ಬರುತಿರುವ । ಗರಳಕವರಂಜಿದರೆ ಸುಧೆಯ ನು । ಮರೆತು, ಕ್ಷುದ್ರದ ಕೆರಳಿ ಕುಳಿತರೆ । ಕೆರಳ ಬಲ್ಲರೆ ಕೊಡಿದು ಧೀರರು ನಿಶ್ಚಿತಾರ್ಥವನು ।

ತಾರೀಕು ೧೮—೮—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 18—8—1939

ಬೋಸರು ಮೂರು ವರ್ಷಗಳ ವರೆಗೆ ಕಾಂಗ್ರೆಸಿನ ಅಧಿಕಾರದಿಂದ ಬಾಹಿರರಾದರು!

ಬೋಸರ ಮೇಲೆ ಶಿಸ್ತಿನ ಠರಾವು

ಠರಾವಿನ ವಿಷಯವು ಹೀಗಿದೆ

"ಅಖಿಲ ಭಾರತ ಕಾಂಗ್ರೆಸು ಕಮಿಟಿಯು ಸಭೆಯಲ್ಲಿ ನಿರ್ಣಯವಾದ 'ಪ್ರಾಂತಗಳಲ್ಲಿ ಸತ್ಯಾಗ್ರಹ' ಎಂಬ ... ಕಾಂಗ್ರೆಸು ಮಂತ್ರಿಗಳು ಮತ್ತು ಪ್ರಾಂತಿಕ ಕಾಂಗ್ರೆಸು ಸಮಿತಿ ಈ ಎರಡು ಠರಾವುಗಳ ವಿಷಯದಲ್ಲಿ ಹಿಂದಿನ ಕಾಂಗ್ರೆಸಿನ ಪ್ರೆಸಿಡೆಂಟರಾಗಿದ್ದ ಶ್ರೀಯುತ ಸುಭಾಷಚಂದ್ರ ಬೋಸರು ಕಳೆದ ತಿಂಗಳ ...ದು ಮಾಡಿದ ಖಂಡನೆಯ ಕಾರ್ಯದ ಕುರಿತ ವರ್ಕಿಂಗ್ ಕಮಿಟಿಯು ಗಮನಿಸಿತು. ಈ ಕುರಿತು ಸುಭಾಷಚಂದ್ರ ಬೋಸರಿಂದ ಬಂದ ದೀರ್ಘ ವಿವರಣೆಯ ಪತ್ರದ ಕುರಿತೂ ವರ್ಕಿಂಗ್ ಕಮಿಟಿಯ ವಿಚಾರಿಸಿತು. ಕಾಂಗ್ರೆಸು ವರ್ಕಿಂಗ್ ಕಮಿಟಿಯು ರಾಷ್ಟ್ರಪತಿಗಳು ಸ್ಪಷ್ಟವಾಗಿ ಸೂಚಿಸಿದ ಮೇಲೂ ಆ ... ಅವರು ತಪ್ಪು ನಡೆದಿರುವರೆಂದು ವಿಷಾದಪೂರ್ವಕದಿಂದ ನಿಶ್ಚಯಕ್ಕೆ ಬಂದಿದೆ.

"ಹಿಂದಿನ ರಾಷ್ಟ್ರಪತಿಗಳಾಗಿದ್ದ ಅವರು, ಇಂದಿನ ರಾಷ್ಟ್ರಪತಿಗಳ ಕೊಟ್ಟ ಸೂಚನೆಗಳನ್ನು ದೇಶದ ನವ ಜೀವನದ ದೃಷ್ಟಿಯಿಂದ, ತನಗೆ ಆ ವಿಷಯ ಅಭಿಪ್ರಾಯ ವ್ಯತ್ಯಾಸವಿದ್ದರೂ, ವಿಧೇಯತೆ ತೋರಬೇಕಾದದ್ದು ಅವರ ಕರ್ತವ್ಯವಾಗಿತ್ತು. ಅವರು ಈ ವಿಷಯದಲ್ಲಿ ಭಿನ್ನತೆ ಕಂಡಿದ್ದರೆ ಕಾಂಗ್ರೆಸು ವರ್ಕಿಂಗ್ ಕಮಿಟಿಗಾಗಲಿ, ಅಖಿಲ ಭಾರತ ಕಾಂಗ್ರೆಸು ಕಮಿಟಿಗಾಗಲಿ ಬಿನ್ನಹ ಮಾಡಿಕೊಳ್ಳುವುದು ಅವರಿಗೆ ಸರಿಯಾದ ದಾರಿಯಾಗಿತ್ತು. ಹೇಗೂ ರಾಷ್ಟ್ರಪತಿಗಳ ಸೂಚನೆಗಳನ್ನು ಅವರು ವಿಶ್ವಾಸಪೂರ್ವಕ ಮನ್ನಿಸಿ ನಡೆಯುವುದು ಅವರ ಕರ್ತವ್ಯವಾಗಿತ್ತು.

ಜಗತ್ತಿನ ಬಹಳ ಬಲಿಷ್ಠವಾಗಿರುವ ಸಾಮ್ರಾಜ್ಯಶಾಹಿಯೊಡನೆ ಜೀವನ ಮರಣದ ಹೋರಾಟಕ್ಕೆ ಹಿಂದೂದೇಶದಲ್ಲಿ ಸ್ಥಾಪಿತವಾಗಿ ಬಲವತ್ತರವಾಗಿರುವ ಕಾಂಗ್ರೆಸಿನಂತಹ ಯಾವುದೇ ಸಂಸ್ಥೆಗಾಗಲಿ ಹೀಗೆ ಅದರ ಸದಸ್ಯರು ಆಚರಿಸುವುದು ಸಂಘದ ಸುವ್ಯವಸ್ಥೆಯ ... ಪರಿಣಾಮಕಾರಿಯಾದ ಫಲದ ದೃಷ್ಟಿಯಿಂದ ಘಾತಕವಾಗಿದೆ.

ಸುಭಾಸ ಬೋಸರು ತಮ್ಮ ವಿವರಣೆಯಲ್ಲಿ ಹೇಳುವಂತೆ, ಪ್ರತಿಯೊಬ್ಬನೂ ಕಾಂಗ್ರೆಸಿನ ಠರಾವಿನ ಕುರಿತು ತನ್ನ ಅಭಿಪ್ರಾಯವನ್ನು ಯಾವ ರೀತಿಯಿಂದಲಾದರೂ ಪ್ರಕಟಿಸುವ ಹಕ್ಕುಳ್ಳವನಾಗಿರುವನೆಂದು ಒಪ್ಪಿಕೊಂಡರೆ ಕಾಂಗ್ರೆಸು ಸಂಸ್ಥೆಯು ದುರ್ಬಲವಾಗಿ ಹೋಗುವುದು ... ಕಾಂಗ್ರೆಸ ಛಿನ್ನ ಭಿನ್ನವಾಗುವುದು. ಆದ್ದರಿಂದ ಸುಭಾಸ ಬೋಸರು ವೇಳೆ ... ಮಾಡಿದ ಕಾಂಗ್ರೆಸಿನ ಶಿಸ್ತಿನ ಉಲ್ಲಂಘನೆಯು ಕಾರ್ಯದ ಕುರಿತ, ಕಾರ್ಯಕ್ರಮವನ್ನು ಕೈಕೊಳ್ಳದಿದ್ದಲ್ಲಿ ಕಾಂಗ್ರೆಸ ತನ್ನ ಕರ್ತವ್ಯದ ಕುರಿತು ... ವಿಷಾದಪೂರ್ವಕವಾಗಿ ಸೂಚಿಸುತ್ತದೆ.

'ಆದ್ದರಿಂದ ಕಾಂಗ್ರೆಸ ವರ್ಕಿಂಗ್ ಕಮಿಟಿಯು ಸುಭಾಸ ಬೋಸರು ಮಾಡಿದ ಕಾಂಗ್ರೆಸಿನ ಶಿಸ್ತಿನ ಉಲ್ಲಂಘನೆಯು ಕಾರ್ಯಕ್ಕಾಗಿ ಅವರನ್ನು ೧೯೩೯ನೇ ಅಗಸ್ಟ ತಿಂಗಳಿಂದ ಮೂರು ವರ್ಷಗಳ ತನಕ ಬಂಗಾಳ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷತೆಯಿಂದಲೂ, ಇನ್ನಿತರ ಯಾವುದೇ ಕಾಂಗ್ರೆಸಿನ ಚುನಾಯಿತ ಸದಸ್ಯತನದ ಜವಾಬ್ದಾರಿಯಿಂದಲೂ ಬಾಹಿರರನ್ನಾಗಿ ಮಾಡಲು ನಿಶ್ಚಯ ಮಾಡಿದೆ.

ವರ್ಕಿಂಗ್ ಕಮಿಟಿಯು ಅವರ ನಿಯಮೋಲ್ಲಂಘನೆಯ ಈ ಮಹಾಪರಾಧವನ್ನು ಅವರು ಮನಗಂಡು, ಇನ್ನು ಮುಂದಾದರೂ ವಿಧೇಯತೆಯಿಂದ ವರ್ತಿಸುವರೆಂದು ನಂಬುತ್ತದೆ.

ಇದೇ ರೀತಿಯಲ್ಲಿ ಬೇರೆ ಬೇರೆ ಕಡೆಗಳಲ್ಲಿ, ಕಾಂಗ್ರೆಸಿನವರು ನಿಯಮೋಲ್ಲಂಘನೆ ಮಾಡಿದಲ್ಲಿ ಆಯಾಯ ಪ್ರಾಂತಿಕ ಕಾಂಗ್ರೆಸು ಕಮಿಟಿಗಳು, ಅವರ ಕುರಿತು ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದೂ, ಹೀಗೆ ಜಾರಿಗೆ ತಂದಲ್ಲಿ, ಅಂತಹ ಅಪರಾಧಗೊಂಡವರು ಬೋಸರ ಮಾದರಿಯಾಗಿಯು ವರ್ಕಿಂಗ್ ಕಮಿಟಿಯು ತಿಳಿಸುತ್ತದೆ."

ಈ ಠರಾವು ಆದ ಶಿಸ್ತು ಜಾರಿಯ ವಾರ್ತೆಯನ್ನು ಕೇಳಿ ಸುಭಾಷಬೋಸರು ತಾನು ಇದನ್ನು ಸ್ವಾಗತಿಸಿದ್ದೇನೆಂದೂ, ಅದರೆ ಇನ್ನು ಮುಂದೆಯೂ ರಾಷ್ಟ್ರದ ಸ್ವಾತಂತ್ರ್ಯದ ಹೋರಾಟಕ್ಕಾಗಿ ಕಾಂಗ್ರೆಸಿನವಿಷಯದಲ್ಲಿ ನಿಶ್ಚಲಯೋಧನಾಗಿರುವೆನೆಂದೂ ಅಭಿಪ್ರಾಯಪಟ್ಟರು.

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು, ಸರೋಜಿನೀ ದೇವಿ, ಆಚಾರ್ಯ ಕೃಪಲಾನಿಯವರೇ ಮೊದಲಾದವರು ವಾರ್ಧಾದಲ್ಲಿ ಜರಗಿದ ವರ್ಕಿಂಗ್ ಕಮಿಟಿಯ ಅಧಿವೇಶನಕ್ಕೆ ಹೋಗುತ್ತಾರೆ

ಸಾಯಂಕಾಲ ತಿರುಗಾಟಕ್ಕಾಗಿ ಗಾಂಧಿಜಿಯವರು ಶೇಗಾವಿನ ಆಶ್ರಮದಿಂದ ಕೆಲವಂದಿ ಆಶ್ರಮ ನಿವಾಸಿಗಳೊಡನೆ ಹೊರಬರುವುದು.

ಪಂಡಿತ ನೆಹರುಗಳು ಅಗಸ್ಟ ೨೦ರಂದು ಚೀನಾಕ್ಕೆ ತೆರಳುವರೆ

ಬ್ರಿಟಿಷ್ ರಾಯಭಾರಿಯು ಜಪಾನಿನ ಪ್ರತಿನಿಧಿಯನ್ನು ಸಂದರ್ಶಿಸಿರುವನು ಪರಿಸ್ಥಿತಿಯು ಸಮಾಧಾನ ಹೊಂದುವ ಆಸೆಯಿದೆ

ಕಾಂಗ್ರೆಸಿನಿಂದ ಮೂರು ವರ್ಷಗಳ ತನಕ ವಿಶ್ರಾಂತಿ ಪಡೆದ ಶ್ರೀಯುತ ಸುಭಾಷ ಚಂದ್ರ ಬೋಸರು

ಕಾಂಗ್ರೆಸು ವರ್ಕಿಂಗ್ ಕಮಿಟಿಯ ಅಧಿವೇಶನದ ವಿವರ



ಸರ್ದಾರ ಪಟೇಲರು ತಮ್ಮ ಪುತ್ರಿ ಮತ್ತು ಆಚಾರ್ಯ ಕೃಪಾಲಾನಿಯವರೊಡನೆ ವಾರ್ಧಾ ರೈಲ್ವೆ ಸ್ಟೇಶನಿನಿಂದ ತೆರಳುವುದು.

ವಾರ್ಧಾದ ವರ್ಕಿಂಗ್ ಕಮಿಟಿಯ ಸಭೆಯ ಸಮಯದಲ್ಲಿ ಸೇಟ್ ಬಜಾಜರ ಮನೆಯಲ್ಲಿ ಪಂಡಿತ ನೆಹರು, ಶಂಕರರಾವ್ ದೇವ್, ಡಾ. ಪಟ್ಟಾಭಿ ಇವರು ಸಂಭಾಷಣೆ ಮಾಡುತ್ತಾರೆ

ಕಾಂಗ್ರೆಸು ವರ್ಕಿಂಗ್ ಕಮಿಟಿಯ ಅಧಿವೇಶನದ ವಿವರ

ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆಯು ತಾ. ೯ರಂದು ವಾರ್ಧಾದಲ್ಲಿ ಸೇರಿತು. ಗಾಂಧಿಜಿಯವರು ಸಭೆಗೆ ಹಾಜರಾಗಿದ್ದರು. ಕಾಂಗ್ರೆಸಿನ ಅಂತರ್ಯದ ಹಲವು ವಿಚಾರಗಳು ಚರ್ಚಿಸಲ್ಪಟ್ಟವು.

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಜ್ವರದ ನಿಮಿತ್ತ ಕಂಗಾಲಾಗಿದ್ದರು. ಆದರೆ ಪ್ರೈಯ ಟೇಂಪರೇಚರ್ ಸಾಧಾರಣ ಸ್ಥಿತಿಗೆ ಬಂದಿತ್ತು.

ಕೇಂದ್ರ ಪ್ರಾಂತಿಕ ಲೆಜಿಸ್ಲೇಟಿವ್ ಸದಸ್ಯರಾದ ಶ್ರೀ ಉಧೋಜಿಯವರ ವರ್ತನೆಯನ್ನು ಖಂಡಿಸಿ, ಅವರನ್ನು ಕಾಂಗ್ರೆಸಿನ ಪ್ರಾಥಮಿಕ ಸದಸ್ಯತನದಿಂದಲೇ ತೆಗೆದು ಹಾಕಲಾಯಿತು.

ಪಂಡಿತ ಜವಾಹರಲಾಲರ ಸಿಲೋನ್ ಸಂದರ್ಶನದ ವರದಿಯಂತೆ, ವಿದೇಶದಲ್ಲಿರುವ ಭಾರತೀಯರ ಪರಿಸ್ಥಿತಿಯ ಕುರಿತು ವಿಚಾರಣೆ ನಡೆಯಿತು.

ಇತ್ತೀಚೆಗೆ, ಸಿಂಧ್ ಮಂತ್ರಿಗಳು ಸರ್ದಾರ್ ಪಟೇಲರನ್ನು ಸಿಂಧ್ ಕಾಂಗ್ರೆಸ್ ಮಂತ್ರಿಮಂಡಳದ ಕುರಿತು ಸಂದರ್ಶಿಸಿದ ವಿಚಾರವು ನಿಷ್ಕರ್ಷಿಸಲಾಯಿತು.

ಪಂಜಾಬ್ ಕಾಂಗ್ರೆಸು ರಾಜಕೀಯದ ಕುರಿತು ಅಲ್ಲಿನ ಭಿನ್ನಭೇದಗಳ ಕುರಿತು ಬಿನ್ನವಿಸುವರೆ ಅಲ್ಲಿನ ಮುಖಂಡರು ಬಂದಿದ್ದರು.

ಅಂತರ್ ರಾಷ್ಟ್ರೀಯ ಪರಿಸ್ಥಿತಿಯ ವಿಷಯ ಯುದ್ಧವಾಗುವ ಸಂಭವದಲ್ಲಿ ಕಾಂಗ್ರೆಸು ಮತ್ತು ಹಿಂದೂದೇಶದ ವರ್ತನೆಗಳನ್ನು ಮಹಾತ್ಮಾ ಗಾಂಧಿಯವರು ವರ್ಕಿಂಗ್ ಕಮಿಟಿಗೆ ದೀರ್ಘವಾಗಿ ತಿಳಿಸಿದರು. ಈ ವಿಷಯದಲ್ಲಿ ಕಾಂಗ್ರೆಸಿನ ಪ್ರಮುಖರೆಲ್ಲರೂ ಭಾಗ ವಹಿಸಿದ್ದರು.

ಕೇಂದ್ರ ಎಸೆಂಬ್ಲಿಯ ಒಂದು ವರ್ಷದ ಕೆಳ್ಳನ ಜೀವನಮಾನದ ಕುರಿತು ವರ್ಕಿಂಗ್ ಕಮಿಟಿಯು ವಿಚಾರ ಮಾಡಿದೆ.

ತಾ. ೯ರಂದು ಮಾಡಿದ ಕಾರ್ಯಕ್ರಮದ ಕುರಿತು ಬಂಗಾಳ ಪ್ರಾಂತಿಕ ಕಾಂಗ್ರೆಸು ಕಮಿಟಿಯು ಉದಾಹರಣೆ ಕೊಡಬೇಕಾಗಿ ಕೇಳಿ ಬಿಟ್ಟಿದಕ್ಕೆ ಸುಭಾಷಬೋಸರು ವಿವರಣೆ ಕಳುಹಿಸಿದ್ದರು.

ತಾ. ೧೦ರಂದು ಎಡೆಬಿಡದೆ ಅಪರಾಹ್ನ ಐದು ಗಂಟೆಗಳ ತನಕ ಕಾಂಗ್ರೆಸು ವರ್ಕಿಂಗ್ ಕಮಿಟಿಯ ಅಧಿವೇಶನವು ಕಾರ್ಯಕ್ರಮವನ್ನು ನಡೆಸಿತು. ಇಷ್ಟು ಹೊತ್ತು ಗಾಂಧಿಜಿಯವರು ಎಲ್ಲಾ ಚರ್ಚೆಗಳಲ್ಲಿಯೂ ಭಾಗವಹಿಸಿದ್ದರು.

ತಾ. ೧೧ರಂದು ವರ್ಕಿಂಗ್ ಕಮಿಟಿಯು ಬಂಗಾಳ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಾದ ಬಾಬು ಸುಭಾಸಚಂದ್ರಬೋಸರು ಕಳೆದ ತಿಂಗಳು ೯ರಂದು ವರ್ತಿಸಿದ ಕಾರ್ಯದ ಕುರಿತು ಅವರನ್ನು ಕಾಂಗ್ರೆಸಿನ ಯಾವ ಜವಾಬ್ದಾರೀ ಕಾರ್ಯದಿಂದಲೂ ಮೂರು ವರ್ಷಗಳ ವರೆಗೆ ಬಾಹಿರರನ್ನಾಗಿ ಮಾಡುವ ಠರಾವು ಮಂಜೂರಾಯಿತು.

ತಾ. ೧೨ರಂದು ಸೇರಿದ ವರ್ಕಿಂಗ್ ಕಮಿಟಿಯ ಸಭೆಗೆ ಮಹಾತ್ಮಾ ಗಾಂಧಿಯವರೂ ಹಾಜರಿದ್ದರು. ಅದರಲ್ಲಿ:—

ಹರಿಜನ ದೇವಾಲಯ ಪ್ರವೇಶದ ಠರಾವು

'ಮದ್ರಾಸು ಕಾಂಗ್ರೆಸು ಮಂತ್ರಿಗಳು ಎಲ್ಲಾ ತರದ ಸಂಕಷ್ಟಗಳನ್ನೂ ಎದುರಿಸಿ ಹರಿಜನರಿಗೆ ದೇಗುಲ ಪ್ರವೇಶದ ಕುರಿತು ಯೋಗ್ಯ ಕಾನೂನನ್ನು ತಯಾರಿಸಿದ ಬಗ್ಗೆಯೂ ಮಧುರಾ ಮೀನಾಕ್ಷೀ ದೇವಾಲಯವು ಹರಿಜನರಿಗೆ ಮುಕ್ತದ್ವಾರವಾದ ಬಗ್ಗೆಯೂ ಈ ಉತ್ತಮ ಆದರ್ಶವು ದೇಶದಲ್ಲಿ ಇತರ ದೇವಾಲಯಾಧಿಕಾರಿಗಳಿಂದಲೂ ಅನುಸರಿಸಲ್ಪಡಬೇಕಾಗಿಯೂ ಠರಾವಾಯಿತು.

ಮದ್ಯಪಾನ ನಿಷೇಧದ ಠರಾವು

ಬೊಂಬಾಯಿ ಕಾಂಗ್ರೆಸು ಮಂತ್ರಿಮಂಡಳವು ಬೊಂಬಾಯಿಯಲ್ಲಿ ಯಶಸ್ವಿಯಾಗಿ ಮದ್ಯಪಾನ ನಿಷೇಧ ಕಾರ್ಯವನ್ನು ಮಾಡಿದ್ದಕ್ಕಾಗಿ ಅವರನ್ನು ಮತ್ತು ಜನರು ಅದರಲ್ಲಿ ಹೃತ್ಪೂರ್ವಕ ಭಾಗವಹಿಸಿದಕ್ಕಾಗಿ ಜನತೆಯನ್ನು ಅಭಿನಂದಿಸುತ್ತಾ, ಕಾಂಗ್ರೆಸು ಬಹುಮತವಿರುವ ಇನ್ನಿತರ ಪ್ರಾಂತದವರೂ, ವರ್ಕಿಂಗ್ ಕಮಿಟಿಯ ಸೂಚನೆಯಂತೆ ತಮ್ಮ ತಮ್ಮ ಪ್ರಾಂತಗಳಲ್ಲಿ ಆದಷ್ಟು ಬೇಗನೇ ಮದ್ಯಪಾನ ನಿಷೇಧ ಕಾರ್ಯವನ್ನು ಕೈಕೊಳ್ಳಬೇಕಾಗಿಯೂ, ಇದರಿಂದ ಪ್ರಾಂತದ ಆಡಳಿತೆಗೆ ಆರ್ಥಿಕ ದುಸ್ಥಿತಿಯು ಬರುವಲ್ಲಿ ಕೇಂದ್ರ ಸರಕಾರವು ಸಾಲದ ಹಣದಂಶವನ್ನು ತುಂಬಿಸಬೇಕಾಗಿಯೂ ಕೇಳಿಕೊಳ್ಳುವ ಠರಾವು ಮಂಜೂರಾಯಿತು.

ಸರ್ದಾರ ಶಾರ್ದೂಲ ಸಿಂಘ (ಪಂಜಾಬ್ ವಿದ್ಯಾರ್ಥಿ ಸಂಘದ ಅಧ್ಯಕ್ಷ)ರು, ಸರ್ದಾರ ಮಂಗಲ ಸಿಂಘರು ಎಂ. ಎಲ್. ಎ. ಮತ್ತು ಎ. ಐ. ಸಿ. ಸಿ. ಸದಸ್ಯರು ಮತ್ತು ಮೌಲಾನಾ ಅಬ್ದುಲಗನಿ ಎ. ಐ. ಸಿ. ಸಿ. ಸದಸ್ಯರು, ಪಂಜಾಬ್ ಕಾಂಗ್ರೆಸಿನ ವಿಷಯದಲ್ಲಿ, ರಾಷ್ಟ್ರಪತಿ ಮತ್ತು ಗಾಂಧಿಜಿಯವರನ್ನು ಕಾಣಲು ವಾರ್ಧಾಕ್ಕೆ ಬಂದರು.

ರಾಜಕೀಯ ಕೈದಿಗಳ ಬಿಡುಗಡೆಯ ಠರಾವು

ಬಂಗಾಳದ ಡಂ ಡಂ ಮತ್ತು ಆಲಿಪುರ ಜೈಲುಗಳ ರಾಜಕೀಯ ಕೈದಿಗಳು ಉಪವಾಸ ವ್ರತವನ್ನು ಬಿಟ್ಟುಕೊಟ್ಟ ವಿಷಯದಲ್ಲಿ ಅವರನ್ನು ಅಭಿನಂದಿಸುತ್ತಾ, ಕೈದಿಗಳ ಈ ನ್ಯಾಯದ ಆಚರಣೆಯನ್ನು ಗಮನಿಸಿ ಬಂಗಾಳ ಸರಕಾರವು ಇವರ ಬಿಡುಗಡೆಗಾಗಿ, ನಿಶ್ಚಯಿಸುವಂತೆ; ಇಡೀ ಭಾರತದ ಆಸೆಯನ್ನು ಗೌರವಿಸುವಂತೆಯೂ ವಿವರಿಸುವ ಠರಾವು ಮಂಜೂರಾಯಿತು.

ಇದು ಮಾತ್ರವಲ್ಲದೆ ಪಂಜಾಬು ಮತ್ತು ಕೇಂದ್ರ ಸರಕಾರವು ಕೂಡಾ ಅವರವರ ಆಡಳಿತೆಯೊಳಗಿನ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡುವ ಬಗ್ಗೆ ಕೇಳಿಕೊಳ್ಳುವ ನಿರ್ಣಯವೂ ಮಂಜೂರಾಯಿತು.

ವರ್ಕಿಂಗ್ ಕಮಿಟಿಯು ರಾಜಕೀಯ ಮತ್ತು ಇತರ ಕೈದಿಗಳು ತಮ್ಮ ಬಿಡುಗಡೆಗಾಗಿ ಉಪವಾಸಮಾಡುವುದು ತಪ್ಪೆಂದು ಅಭಿಪ್ರಾಯಪಡುತ್ತದೆ. ಹೀಗೆ ಅವರು ಉಪವಾಸಮಾಡಿ ಬಿಡುಗಡೆ ಹೊಂದುವದಿದ್ದರೆ ಯಾವ ಸರಕಾರವಾದರೂ ಕ್ರಮದಿಂದ ನಡೆಯಲು ಸಾಧ್ಯವಿಲ್ಲವೆಂದು ವರ್ಕಿಂಗ್ ಕಮಿಟಿಯು ನಿಶ್ಚಯಮಾಡುತ್ತದೆ.

ಕೇಂದ್ರ ಎಸೆಂಬ್ಲಿಗೆ ಗೈರುಹಾಜರಿ

ಹಿಂದೂದೇಶದಿಂದ ಸಿಂಗಾಪೂರ್ ಈಜಿಪ್ಟ್ ಮೊದಲಾದೆಡೆಗಳಿಗೆ ಸೈನ್ಯವನ್ನು ಕಳುಹಿಸಿದ ವಿಷಯದಲ್ಲಿ, ಕೇಂದ್ರ ಎಸೆಂಬ್ಲಿಯ ಕಾಂಗ್ರೆಸು ಪಕ್ಷದ ಸದಸ್ಯರು ಬರುವ ಸಿಮ್ಲಾ ಅಧಿವೇಶನಕ್ಕೆ ಹಾಜರಾಗದೆ ತಮ್ಮ ನಿಷೇಧವನ್ನು ವ್ಯಕ್ತಪಡಿಸಬೇಕಾಗಿ ನಿರ್ಣಯವಾಯಿತು.

ಯುದ್ಧ ಠರಾವು

ಯುರೋಪಿನ ಯುದ್ಧವಾಗುವ ಸಂದರ್ಭದಲ್ಲಿ ಭಾರತ ಸರಕಾರವು ಹಿಂದೂದೇಶದಿಂದ ಹಣ ಮತ್ತು ಜನರನ್ನು ಕಳುಹಿಸುವ ಪಕ್ಷದಲ್ಲಿ ಅದನ್ನು ಖಂಡಿತವಾಗಿ ಪ್ರಾಂತಿಕ ಸರಕಾರವು ನಿಷೇಧಿಸಬೇಕಾಗಿಯೂ ಹಿಂದೂದೇಶದ ಸ್ವಾತಂತ್ರ್ಯದ ವಿನಹ ಯಾವ ಸಹಕಾರವೂ ಈ ವಿಷಯದಲ್ಲಿ ಬ್ರಿಟನಿಗೆ ಸಿಗಲಾರದೆಂದೂ ಹೇಳುವ ನಿರ್ಣಯವು ಮಾಡಲ್ಪಟ್ಟಿತು.



ಲೈಸೆನ್ಸ್ ಬೇಕಾಗಿಲ್ಲ

ಅಮೇರಿಕನ್ ರಿವಾಲ್ವರ್

ಅತ್ಯಾಧುನಿಕ ತಯಾರಿ, 1939ರಲ್ಲೇ ಮೊದಲನೆಯ ಸಲ ತರಿಸಿದ್ದು. ಆಕಾರ ಮೇಲಿನ ಚಿತ್ರದಲ್ಲಿರುವಂತೆಯೇ. ಉದ್ದ 7 ಇಂಚು. ಭಾರ ಸುಮಾರು 15 ಔನ್ಸುಗಳಷ್ಟು. 50 ಗುಂಡುಗಳನ್ನು ತನಗೆ ತಾನಾಗಿ ಅಂಧರ ಆಟೊಮೆಟಿಕ್ ಆಗಿ ಹಾರಿಸಬಹುದು. ಬೆಲೆ ರೂ. 4-8-0 ಶ್ರತಕ ಮದ್ದು ಗುಂಡುಗಳಿಗೆ 1000ಕ್ಕೆ ರೂ. 3 ಚರ್ಮದ ಚೀಲ ಬೇಕಾದರೆ 1-12-0 ರಿವಾಲ್ವರಿನ ಯಂತ್ರಕ್ಕೆ ಬಿಡುವ ಎಣ್ಣೆ ಬೇಕಾದರೆ 0-12-0. ಆರ್ಡರಿನೊಂದಿಗೆ ಸಂಪೂರ್ಣ ಬೆಲೆಯ ಮೊತ್ತವನ್ನು ಕಳುಹಿಸಿಕೊಟ್ಟರೆ ಟಪ್ಪಾಲು ಖರ್ಚು ಮುಫತ್ತು.

ಸೂಚನೆ: ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಪ್ರಯತ್ನಿಸಿರಿ,

American Pistol Co. (P. M. H.)

Post Box No. 27 Amritsar (India

ತೆರೆಯ ಮರೆಯಲ್ಲಿ

-ಹಿಟ್ಲರನ ಹಲವು ಹಂಬಲಗಳು-

ನಾಲ್ಕು ಸೂತ್ರಗಳು

೧. ಪ್ರಬಲವಾದ ಜರ್ಮನಿಯ ವಿಮಾನ ದ್ರಳದಿಂದ ಬೇಗನೇ ಪೋಲೆಂಡನ್ನು ಧ್ವಂಸ ಮಾಡುವುದು!

೨. ಪೋಲೆಂಡನ್ನು ಹೀಗೆ ಧ್ವಂಸಮಾಡಿದ ಮೇಲೆ, ಡಾನ್ಜಿಗನ್ನು ನುಂಗಿಬಿಟ್ಟಲ್ಲಿ ಮುಂದೆ ೫೦ ವರ್ಷಗಳ ವರೆಗೆ ಶಾಂತಿಸ್ಥಾಪನೆಯ ಯತ್ನ!

೩. ಡಾನ್ಜಿಗನ್ನು ಬಗಲೊಳಗೆ ಹಾಕಿದ ಮೇಲೆ, ಹಿಟ್ಲರನು ಇಡೀ ಯೂರೋಪಿನಲ್ಲಿ ಮಹಾ ದೊರೆಯಾಗುತ್ತಾನೆ, ಆ ಮೇಲೆ ವಸಾಹತುಗಳಿಗಾಗಿ ಕೇಳಲೂಬಹುದು

೪. ಡಾನ್ಜಿಗನ್ನು ಆಕ್ರಮಣ ಮಾಡಿದಲ್ಲಿ ಯೂರೋಪಿನಲ್ಲಿ ಮಹಾಸಂಗ್ರಾಮವಾಗುವುದೆಂಬ ನಿರೀಕ್ಷೆ ಹಿಟ್ಲರನಿಗೆ ಇದೆ. ಈ ಸಂದರ್ಭದಲ್ಲಿ, ಇಟಲಿಯ ಸೈನ್ಯವನ್ನು ಈಜಿಪ್ಟ್ ಸುಡಾನುಗಳಿಗೆ ಕಳುಹಿಸುವುದು ಸ್ಪೈನ ಜಿಬ್ರಾಲ್ಟರಿನ ಮೇಲೆ ಬೀಳುವುದು, ಜರ್ಮನಿಯು ಫ್ರಾನ್ಸಿಗೆ ಎದುರಾಗಿ ಹೋರಾಡುವುದು, ಆ ಮೂಲಕ ಇಂಗ್ಲೆಂಡನ್ನು ಹಾಲೆಂಡಿನ ವಾಯುವಿನಿಂದ ಭಯಗೊಳಿಸುವುದು

ಡಾನ್ಜಿಗನ್ನು ನುಂಗುವಾಗ—

೧೯೩೯ನೇ ಎಪ್ರಿಲ್ ೨೮ರಂದು ಮಾಡಿದ ಭಾಷಣದಲ್ಲಿ ಹಿಟ್ಲರನ ಜರ್ಮನಿಗೆ ಡಾನ್ಜಿಗನ್ನು ಸೇರಿಸುವ ಖಂಡಿತ ನಿರ್ಧಾರವನ್ನು ಪ್ರಕಟಿಸಿದ್ದಾನೆ. ಈ ಉದ್ದೇಶವನ್ನು ಸಾಧಿಸುವುದರಲ್ಲಿ ಹಿಟ್ಲರನ ಏರ್ಪಾಡುಗಳೆಲ್ಲಾ ಸಂಪೂರ್ಣ ಸಿದ್ಧವಾಗಿದೆ. ಪೋಲೆಂಡನ್ನು ಶಾಂತಿಯ ಉಪಾಯಗಳಿಂದ ಸಮಾಧಾನಪಡಿಸುವ ವಿಷಯವಾಗಿ ಹಿಟ್ಲರನಿಗೆ ಯಾವ ಭರವಸೆಯೂ ಇಲ್ಲ. ಬ್ರಿಟಿಷ್ ಮತ್ತು ಫ್ರೆಂಚ್ ಸಹಾಯದ ಭರವಸೆಯು ಪೋಲೆಂಡಿಗೆ ಇರುವ ನಿಮಿತ್ತ ಅಂತರ್‌ರಾಷ್ಟ್ರೀಯ ಕ್ರಾಂತಿಯೊಂದು ಉಂಟಾಗದೆ ಡಾನ್ಜಿಗು ಒಳಗೆ ಸೇರುವುದಿಲ್ಲ. ಒಂದು ವೇಳೆ ಹಿಟ್ಲರನ ರಣಗರ್ಜನೆಗೆ ನಡುಗಿ ಬ್ರಿಟನು ಫ್ರಾನ್ಸುಗಳು ಪೋಲೆಂಡಿಗೆ ನೆರವಾಗಲು ಬರದಿದ್ದರೂ, ಪೋಲೆಂಡು ಕಟಿಸ್ಥವಾಗಿ ಹಿಟ್ಲರನನ್ನು ಕೆಣಕದೆ ಬಿಡುವಹಾಗಿಲ್ಲ. ಹಾಗಾಗಿ ಡಾನ್ಜಿಗ್ ಸಮಸ್ಯೆಯು ಹಿಟ್ಲರನು ಖಂಡಿತ ಮಾಡಿದಂತೆ ಮುಂದುವರಿಯುವುದರಿಂದಲೇ ಯುರೋಪಿನಲ್ಲಿ ಮಹಾಸಮರವು, ಅದರಿಂದ ಲೋಕ ಸಮರವೂ ಉಂಟಾಗಬಹುದು.

ಪೋಲೆಂಡಿನ ಧ್ವಂಸ!

ಹಿಟ್ಲರನು ಡಾನ್ಜಿಗನ್ನು ಹಿಡಿಯುವ ಸಮಯದಲ್ಲಿ ಹೇಗಾದರೂ ಮಾಡಿ ಪೋಲೆಂಡನ್ನು ಸುಮ್ಮಗಿರುವಂತೆ ಕಾರ್ಯಗಳನ್ನು ಮಾಡಬಹುದು, ಆತನ ಆ ಯತ್ನವು ಸಫಲವಾಗದಿದ್ದಲ್ಲಿ ಪೋಲೆಂಡನ್ನು ಕೇವಲ ಮೂರು ವಾರದೊಳಗೆ ಧ್ವಂಸ ಮಾಡುವ ನಿಶ್ಚಯವಾಗಿದೆ. ಜರ್ಮನಿಯ ಸೈನ್ಯವು ಒಮ್ಮೆಯೇ ಪೋಲೆಂಡನ್ನು ನಾಲ್ಕು ಕಡೆಗಳಿಂದಲೂ ಮುತ್ತಿಗೆ ಹಾಕುವ ತರಬೇತಿಯು, ಜರ್ಮನ್ ಸೈನ್ಯ ಶಿಬಿರದಲ್ಲಿ ನಡೆಯುತ್ತಿದೆ

ಜಯವು ಸಾಧ್ಯವೇ?

ಜರ್ಮನಿಯ ಇಂದಿನ ವಿಮಾನದಳದ ಭದ್ರತೆಯನ್ನೂ, ಮಹತ್ವವನ್ನೂ ವಿಚಾರಿಸಿದಲ್ಲಿ ಫ್ರಾನ್ಸ್, ಇಂಗ್ಲೆಂಡುಗಳಿಂದ ಕಡೆಗೆ ರಶ್ಯಾದಿಂದಲೂ ತಕ್ಷಣವೇ ಪೋಲೆಂಡಿಗೂ ಯಾವ ವಿಧದ ಸಹಾಯವೂ ಬರುವ ಲಕ್ಷಣವು ತೋರದಿರುವಲ್ಲಿ ಹಿಟ್ಲರನ ಕೆಲವು ಭರವಸೆಗಳು ಸಂಪೂರ್ಣ ಫಲಕಾರಿಯಾಗುವುದೆಂದು ನಂಬಬೇಕಾಗಿದೆ

೫೦ ವರ್ಷಗಳ ಶಾಂತಿ ನಿದ್ರೆ!

ಡಾನ್ಜಿಗನ್ನು ಬಿಟ್ಟುಕೊಟ್ಟಲ್ಲಿ, ಮುಂದಕ್ಕೆ ೫೦ ವರ್ಷಗಳ ಘೋರ ಶಾಂತಿನಿದ್ರೆಯನ್ನು ಹಿಟ್ಲರನ ಕೈಕೊಳ್ಳುವನಂತೆ! ಈ ಎಲ್ಲಾ ಹಂಚಿಕೆಗಳು ಕೊನೆಗೊಂಡಲ್ಲಿ ಹಿಟ್ಲರನು ಯುರೋಪಿನಲ್ಲಿ ಮಹಾ ಪ್ರಭುವಾಗುತ್ತಾನೆ! ಆಗ ಪ್ರಾಮುಖ್ಯ ಸ್ಥಾನವನ್ನು ಪಡೆದ, ಏಷಿಯಾದ ಎಲ್ಲಾ ರಾಷ್ಟ್ರಗಳಿಗಿಂತಲೂ ಬಲಶಾಲಿಯಾಗಿ ಮೆರೆಯುವನ!

ಹಿಟ್ಲರನಿಗೆ ಯುರೋಪು

ತಲೆಬಾಗಿಸುವುದೇ?

ಆದರೆ ಹಿಟ್ಲರನಿಗೆ ಯೂರೋಪು ತಲೆಬಾಗಿ ಡಾನ್ಜಿಗನ್ನು ಬಿಟ್ಟುಬಿಡುವುದ ಸುಲಭವಾಗಿ ಏನೂ ಕಂಡುಬರುವುದಿಲ್ಲ. ಹಾಗಾದಲ್ಲಿ ಹಿಟ್ಲರನು ಜೆಕೋಸ್ಲೊವಾಕಿಯಾವನ್ನು ಹಿಡಿಯಲು ಇಟಲಿಯ ಸೈನ್ಯವನ್ನು ಕಳುಹಿಸುವನು. ತಕ್ಷಣವೇ ಜರ್ಮನ್ ಇಟಲಿ ಸೈನ್ಯಗಳ ಸಹಾಯದಿಂದ ಸ್ಪೈನ್ ವಶಪಡಿಸುವ ನಿಮಿತ್ತ ಈಜಿಪ್ಟನ್ನು ಮುತ್ತುವದು, ಅದೇ ಸಮಯದಲ್ಲಿ ಸ್ಪೈನ ಜಿಬ್ರಾಲ್ಟರನ್ನು ಶರಣಾಗಬೇಕಾಗಿ ಬಲವಂತಮಾಡುವುದು, ಜರ್ಮನ್ ಇಟಲಿ ಸೈನ್ಯಗಳು ಇಬ್ಬದಿಗಳಲ್ಲಿಯೂ ಮೆಡಿಟರೇನಿಯನ್ನು ವಶಪಡಿಸುವವು. ಇಂತಹ ಸಂದರ್ಭದಲ್ಲಿ ಜರ್ಮನಿಯು ಫ್ರಾನ್ಸಿನ ಗಡಿಭೂಮಿಯನ್ನು ಸ್ವಾಧೀನ ಪಡಿಸಲು ಮುಂದುವರಿಯುವದ. ಇಂಗ್ಲೆಂದ ಹೋಲೆಂಡಿನ ಮೂಲಕ ಪ್ರತ್ಯಕ್ಷವಾಗಿ ಬ್ರಿಟನನ್ನು ಬೆದರಿಸಿದರೆ ಡಾನ್ಜಿಗನ್ನು ಸ್ವಾಧೀನಪಡಿಸುವ ವಿಷಯದಲ್ಲಿ ಬ್ರಿಟನ್ ತೊಡನೆ ಶಾಂತಿಯ ಒಪ್ಪಂದವು ಆಗಿಯೇ ಆಗುವುದು.

ಇದು ಬರ್ಲಿನಿನಿಂದ ಬಂದ ವಾರ್ತೆಯಂತೆ ಹಿಟ್ಲರನ ಹಂಚಿಕೆಯಾಗಿರುತ್ತದೆ. ಇಷ್ಟರಲ್ಲಿ ಹಂಗೇರಿಯನ್ನು ವಶಪಡಿಸಲು ಹಿಟ್ಲರನು ಸಾಧಿಸಬಹುದು, ಜಪಾನನ್ನು ರಶ್ಯದ ಮೇಲೆ ಬೀಳಲು ಪ್ರೇರೇಪಿಸಲೂ ಬಹುದು

ಹಿಟ್ಲರನಿಗೆ ವಿರೋಧ ದಂಗೆ

ಈ ಎಲ್ಲಾ ಹಂಚಿಕೆಗಳ ಬಳಿಯಲ್ಲಿ ಹಿಟ್ಲರನು ಜೀವನ ಮರಣಗಳ ನಿಶ್ಚಯವಾಗುವುದು. ಹಿಟ್ಲರನ ವಿರೋಧಿಗಳು ಸಮಯವನ್ನು ನಿರೀಕ್ಷಿಸುತಿದ್ದಾರೆ. ದೊಡ್ಡದೊಂದು ಯುದ್ಧವು ಸಂಭವಿಸದಿದ್ದಲ್ಲಿ ಹಿಟ್ಲರನ ಬಾಧೆಯು ನಿವಾರಣೆಯಾಗಲಾರದು.

ಹಿಟ್ಲರನ ಈ ಎಲ್ಲಾ ಉಪಾಯಗಳನ್ನು ಮಾಡಲು ಇಚ್ಛೆ. ಧಿಕ್ಕಿನಲ್ಲಿ ತನ್ನ ಹಂಚಿಕೆಗಳನ್ನು ಹಂಚಿಬಿಟ್ಟಾದ ಯೋಗ್ಯಸಂದರ್ಭವನ್ನು ಹುಡುಕಿ, ಆತನ ವಿರೋಧಿಗಳನ್ನು ಅವನನ್ನು ಅಧಿಕಾರದಿಂದ ಉರುಳಿಸಬಹುದು. ಇಂತಹ ಪ್ರಸಂಗವು ಆದಷ್ಟು ಬೇಗನೇ ಆದಲ್ಲಿ, ಜರ್ಮನಿಯ ಹೊಸ ಧುರೀಣತೆಯಿಂದ ನಿಜವಾದ ಯೂರೋಪಿನ ಶಾಂತಿಯು ಸ್ಥಾಪಿತವಾಗಿ ಜಗತ್ತಿಗೆ ಮಹಾಸಂಕಷ್ಟವೊಂದು ಪರಿಹಾರವಾದಂತಾಗುವುದು!

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಬಹುಕಾಲದ ಕೆಮ್ಮು ಕೂಡಲೇ ಗುಣವಾಗುವುದು

ಕೆರಳಿಸುವ ಕೆಮ್ಮು ಯಾ ಕಾಸವು ನಿಮ್ಮ ಗಂಟಲಿಗೆ ಭಯಂಕರ ಹಾನಿಯನ್ನುಂಟುಮಾಡುವದಲ್ಲದೆ ನೋವನ್ನುಂಟುಮಾಡುವುದು. ಸ್ವಲ್ಪ ಸಮಯದಲ್ಲಿಯೇ ಅದು ಕೋಮಲವಾದ ವಾಯುನಾಳಗಳನ್ನು ಉದ್ರೇಕಿಸಿ ಇದರಿಂದ ಭಯಂಕರವಾದ ಪರಿಣಾಮವಾಗಬಹುದು. ಆದುದರಿಂದ ಈ ಬಾಧೆಯ ಪ್ರಾರಂಭಿಕ ಲಕ್ಷಣಗಳು ಕಂಡು ಬಂದೊಡನೆ ಕ್ರಿಮಿನಾಶಕ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ಸೇವಿಸಿರಿ. ಪೆಪ್ಸ ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಆಳವಾಗಿ ಹೊಕ್ಕುತ್ತದೆ. ಈ ರೀತಿಯಿಂದ ಪೆಪ್ಸ ನಿಮ್ಮ ಗಂಟಲು ನಾಳ ಮತ್ತು ವಾಯುನಾಳಗಳಲ್ಲಿರಬಹುದಾದ ಸೋಂಕು ರೋಗದ ಕ್ರಿಮಿಗಳನ್ನು ನಾಶಮಾಡುತ್ತದೆ. ಬತ್ತಾದ ನಿಮ್ಮ ಎದೆಯನ್ನು ನಿವಾರಿಸಿ ಎಲ್ಲಾ ಭಯಂಕರವಾದ ಕೆಮ್ಮು ಯಾ ಶೀತವನ್ನು ಗುಣಪಡಿಸುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸ ರೂ 1—0—0ರಂತೆ ಮಾರುತ್ತಾರೆ

ಏಜೆಂಟ- ಮೆಸರ್ಸ್ ದಾಥಾ ಮತ್ತು ಕಂಪೆನಿ, ಜಾರ್ಜಟೌನ್, ಮದ್ರಾಸು.

ಯಾವಾಗಲೂ ಪೆಪ್ಸನ್ನೇ ಉಪಯೋಗಿಸಿರಿ

PEPS

ಕ್ರಿಮಿನಾಶಕ ಶ್ವಾಸನೀಯ ಗುಳಿಗೆಗಳು

ಮಕ್ಕಳಿಗೆ
ಡೋಂಗರೆ ಬಾಲಾಮೃತವು
ಆದರ್ಶಕರವಾದ ಪೌಷ್ಟಿಕ.

ಇದರಿಂದ ಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಹತ್ತು ಗಡಿಯಾರಗಳಿಗೆ ಬರೇ ಮೂರು ರೂಪಾಯಿ ಹತ್ತಾಣೆ ಮಾತ್ರ



ಎಂಟು ದಪ್ಪ "ಸ್ಪ್ರೆಚ್"ಗಳು. ಎರಡು ದಸ್ತು ಗಾಳಿ ವಾಚ್ ಮತ್ತು ಒಂದು ಒಳ್ಳೆ ವಾದ ಮಿಶನ್ ಸಾಮಾನುಗಳಿಂದ ತಯಾರಿಸಲ್ಪಟ್ಟ ಸ್ಟಾಂಪಿನ ೩೦ ಘಂಟೆಗಳ ಕಾಲ ನಡೆಯುವುದು. ೧೨ ವರ್ಷ ಗ್ಯಾರಂಟೀ, ಈ ಗಡಿಯಾರಗಳನ್ನು ವಿಲಾಯತಿಯಿಂದ ಬಹಳವಾಗಿ ತರಿಸಿರುತ್ತೇವೆ. ಆದರೆ ಈ ರಿಯಾಯತಿ ದರದಂತೆ ೧೦ ಸಾವಿರ ಗಡಿಯಾರಗಳನ್ನು ಮಾರಲು ನಿಶ್ಚಯಿಸಿರುತ್ತೇವೆ. ಈ ಸಮಯದಲ್ಲಿ ಬೇಗನೆ ತರಿಸಿಕೊಳ್ಳುವುದು. ಇಲ್ಲವಾದರೆ ಎಲ್ಲಾ ಖರ್ಚಾಗಿ ಹೋಗುವವು. ಗಡಿಯಾರಗಳ ಜೊತೆಗೆ ಒಂದು ಫೌಂಟನ್‌ಪೆನ್, ೧೪ ಕ್ಯಾರೆಟ್ ರೋಲ್ಡ್‌ಗೋಲ್ಡ್ ಸೆಟ್ ಸಹಿತ, ಒಂದು ಸುಂದರವಾದ ಹಾರವೂ, ಉಚಿತವಾಗಿ ಕೊಡಲಾಗುವುದು. ಟಪ್ಪಾಲು ಖರ್ಚು ಪ್ಯಾಕಿಂಗ್ ಖರ್ಚು ಬೇರೆ. ಸರಿಯಾಗಿ ತೋರದಿದ್ದಲ್ಲಿ ಬೆಲೆ ವಾಪಸು. ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ ಮಾಡಬೇಕು.

ಪತ್ತೆ

German Watch Co., (P. M. H.)
P. B. No. 2, Amritsar (India)

ಸರದಾರ ಭವನ Sirdar Bhavan

ಫೆಲಿಕ್ಸ್‌ಪೈ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೋಣೆಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ

Proprieter— H. R Rao,
Bangalore Guit Emporium Madras

ಜಪಾನೀಯರ ಜೀವನದ ಅಂತರಂಗ!

ಜಪಾನಿಯರ ಕುರಿತು ಪತ್ರಿಕೆಗಳಲ್ಲಿ ಓದಿದವರು ಅವರೊಂದು ವಿಜಾತೀಯ ಕ್ರಮದ ಜನರೆಂದು ತಿಳಿಯಬೇಕಾಗಿದೆ. ಆದರೆ ಜಪಾನಿಯರ ಚರಿತ್ರೆಯನ್ನು ತಿಳಿದವರು ಅವರು ...ಹಾಗೆ ಹಾಗೆ ಇತರರಿಗಿಂತ ಭಿನ್ನ ಕ್ರಮದಿಂದ ಇರುವರೆಂಬ ವಿಷಯ ಅರ್ಥ ಮಾಡಿಕೊಳ್ಳಬಹುದು.

ಟೋಕುಗಾವಾ ವಂಶ

ಜಪಾನಿನ ವಿಷಯ ತಿಳಕೊಳ್ಳಲು ನಾವು ೧೬೦೩ ವರ್ಷಗಳ ಹಿಂದಿನ ಚರಿತ್ರೆಯನ್ನು ಶೋಧಿಸಿ ನೋಡಬೇಕು. ಅದಕ್ಕಿಂತ ಮೊದಲೇ ಜಪಾನಿಯರು ಸಮೃದ್ಧರಾಗಿದ್ದರು. ಶತಮಾನಗಳ ತನಕದ ನಿಕೃಷ್ಟದಾಟದ ಚರಿತ್ರೆಯು ಅದಾಗಿದೆ. ಅಲ್ಲಿ ಟೋಕುಗಾವಾ ವಂಶವು ಉದಯಕ್ಕೆ ಬಂತು. ಅರಸರು ಒಳಕಲಹಗಳನ್ನು ನಿಲ್ಲಿಸಿ, ರಾಜ್ಯದಲ್ಲಿ—ಏಕಚ್ಛತ್ರಾಧಿಪತ್ಯವನ್ನು ಸ್ಥಾಪಿಸಿದರು. ೧೮೬೮ರ ವರೆಗೆ ಈ ಸರ್ವಾಧಿಕಾರವು ಬೆಳೆಯಿತು.

ಎರಡುವರೆ ಶತಮಾನಗಳ ಈ ಟೋಕುಗಾವಾ ವಂಶದ ಆಳ್ವಿಕೆಯಲ್ಲಿ ಜಪಾನು ವಿದೇಶೀಯ ರಾಷ್ಟ್ರಗಳ ಸಂಬಂಧದಿಂದ ಬೇರೆಯಾಗಿ ಸ್ವತಂತ್ರವಾಯಿತು. ಆದರೆ ವ್ಯಾಪಾರ ವಹಿವಾಟುಗಳ ಕುಶಲತೆಯು ಜಪಾನಿನಲ್ಲಿ ಹೆಚ್ಚಾಗಿ ಬೆಳೆಯಿತು.

ವರ್ಗ ಕ್ರಮ

ಬೇರೆ ಬೇರೆ ವೃತ್ತಿಯವರು, ಆಯಾಯ ಕಸಬುಗಳಲ್ಲಿರುವ ವರ್ಗ ಕ್ರಮ. ಜಪಾನಿನ ಕ್ರಾಂತಿಯಲ್ಲಿ ಬಹಳ ಮಹತ್ವದ್ದಾಗಿದೆ. ಇದರಿಂದ ಅವರ ಕೆಲಸಗಳನ್ನು ಉತ್ಕೃಷ್ಟವಾಗಿ ಮಾಡಲು ಅವರಿಗೆ ಸಂದರ್ಭವೊದಗಿತು. ಇವರಲ್ಲಿ ಶ್ರೇಷ್ಠ ತರಗತಿಯವರು ಸೈನಿಕ ಪಂಗಡಕ್ಕೆ ಸೇರಿದ 'ಶೀ' ಅಥವಾ ಸಮೂರೀಗಳಾಗಿರುತ್ತಾರೆ. ಇವರು ರಾಜ್ಯದ ಆಡಳಿತೆಯ ಸಲುವಾಗಿ ಜೀವ ಹಂಗು ತೊರೆದು ದುಡಿಯುವವರು. ಇಂದೂ ಕೂಡ ಯೋಧತನವು ಜಪಾನಿನ ಬಹಳ ಉತ್ತಮ ವೃತ್ತಿಯಾಗಿ ಗೌರವವಿದೆ. ಇಂದೂ ಆ ಶೀ ಪಂಗಡದವರು ಗೌರವ ಮತ್ತು ಅಧಿಕಾರದಿಂದ ಮೆರೆಯುತ್ತಾರೆ. ಜಪಾನಿನ ಶಕ್ತಿಯೇ ಅವರು. ಜಪಾನಿನ ಈ ಸೈನಿಕರ ಮುಖಂಡರ ಕೈಯಲ್ಲಿ ಅಲ್ಲಿನ ರಾಜನೀತಿ ಕುಶಲರ ಕೇವಲ ಕೈಗೊಂಬೆಗಳಾಗಿದ್ದಾರೆ. ಅದುದರಿಂದಲೇ ಜಪಾನಿನ ಹಲವು ಕಾರ್ಯಗಳಲ್ಲಿ ರಾಜಕೀಯ ಕುಶಲತೆಯು ಇಂದೂ ಕಂಡುಬರುವುದಿಲ್ಲ.

ಎರಡನೆಯ ವರ್ಗವು 'ನೋ' ಎಂಬ ಕೃಷಿಕರ ಪಂಗಡ. ಜಪಾನಿನ ಶೇಕಡಾ ೬೦ ಮಂದಿಯಷ್ಟು ಜನರು ಈ ಕಸುಬಿನವರು. ಅವರು ಪ್ರತಿಯೊಂದ ಗ್ರಾಮಗಳಲ್ಲಿಯೂ ಸರಕಾರದ ವಿಚಾರಣೆಯ ಮೂಲಕ, ಸಣ್ಣ ಸಣ್ಣ ಆಡಳಿತೆಗಳನ್ನು ಮಾಡಿಕೊಂಡು ಅವುಗಳ ನಿಬಂಧನೆಗಳಂತೆ, ಗದ್ದೆಗಳಲ್ಲಿ, ತೋಟಗಳಲ್ಲಿ, ಮೀನು ಹಿಡಿಯುವುದರಲ್ಲಿ ಹೀಗೆ ಎಲ್ಲಾ ಕಾರ್ಯಗಳಲ್ಲಿಯೂ ಉತ್ತಮ ಕುಶಲತೆಯನ್ನು ತೋರಿಸುತ್ತಿದ್ದರು. ಅವರು ಯಾವಾಗಲೂ ಪ್ರಸನ್ನ ಜೀವಿಗಳು! ಸಮೃದ್ಧವಾಗಿ ಪ್ರತಿಯೊಂದೂ ಅವರಿಗೆ ಒಂದಾಗ್ಗಿ ಬಲಪುಷ್ಟಿವಂತರಾಗಿ ಬಾಳುತ್ತಾರೆ. ಅವರ ಆಯುಕಷ್ಟಗಳಿಗೆ ಸರಿಯಾಗಿ ಸರಕಾರದ ಬೆಂಬಲವಿರುವುದರಿಂದ ರಾಷ್ಟ್ರೀಯ ಸಂಪತ್ತನ್ನು ಅವರು ಅಭಿವೃದ್ಧಿಗೊಳಿಸಿದರು.

ಮೂರನೆಯ ಪಂಗಡವು 'ಕೋ' ಎನ್ನುವ ಕೈಗಾರಿಕೆಯ ಪಂಗಡ. ಹಿಂದೆ, ಇಂದಿರುವಂತೆ ಕಾರ್ಖಾನೆಗಳು ಅಂದು ಇರಲಿಲ್ಲವಾದರೂ ಬೇರೆ ಬೇರೆ ವಿಧದ ಉತ್ತಮ ಕೈಗಾರಿಕೆಗಳನ್ನು ಅವರು ಮಾಡುತ್ತಿದ್ದರು. ಎಲ್ಲಾ ಪಂಗಡಗಳಿಗೆ ಬೇಕಾದ ದಿನ ನಿತ್ಯದ ಸುಖ ಸೌಕರ್ಯಗಳು ಇವರಿಂದ ಒದಗಿಸಲ್ಪಡುತ್ತಿತ್ತು!

ಕಡೆಯ ಪಂಗಡವು 'ಶೋ' ಎಂದು ಕರೆಯಲ್ಪಡುವ ವ್ಯಾಪಾರಿಗಳ ಪಂಗಡ. ಎಲ್ಲಾ ದೇಶಗಳ ಸ್ಥಿತಿಯಂತೆ, ಆರ್ಥಿಕ ಸ್ಥಿತಿಯಲ್ಲಿ ಅವರೇ ರಾಜ್ಯದಲ್ಲಿ ಅಧಿಕ ಗೌರವವನ್ನು ಹೊಂದಿರುವರು. ಇಂದು ಜಪಾನಿನಲ್ಲಿರುವ ಕೇವಲ ಐದಾರು ಮನೆತನದವರು, ಮಿತುಸಿ, ಮಿತುಸುಬಿಶಿ, ಯಾಸುದಾ ಮತ್ತು ಸುಮಿಟೊಮೋ ಕುಲದವರು ಜಗತ್ತಿನ ಅತ್ಯಂತ ಮಹತ್ವದ ವಹಿವಾಟನ್ನು ನಡೆಸುತ್ತಿದ್ದಾರೆ. ಇವರ ಆಶ್ರಯದಲ್ಲಿಯೇ ಸಣ್ಣ ಸಣ್ಣ ರೀತಿಯಿಂದ ವ್ಯಾಪಾರಗಳನ್ನು ಮಾಡುವವರೂ ಇದ್ದರು.

ಹೀಗೆ ನಾಲ್ಕು ಪಂಗಡಗಳಿಗೂ ಬೇರೆ ಬೇರೆ ಕಾರ್ಯಕ್ಷೇತ್ರ ಗೊತ್ತುಮಾಡಲಾಗಿತ್ತು. ಇಂದು ಜಪಾನಿನ ನಿಜವಾದ ಮಹತ್ವವಿರುವುದು, ಈ ಜನರ ಐಕ್ಯತೆಯಿಂದ ವಿವಿಧ ಕ್ಷೇತ್ರಗಳಲ್ಲಿ ಅವರು ಕೈಗೊಂಡ ಕಾರ್ಯಗಳ ಶ್ರೇಷ್ಠತೆಯಾಗಿದೆ.

'ಶೋ' ಪಂಗಡದವರು ಆರ್ಥಿಕ ಸ್ವಾತಂತ್ರ್ಯವನ್ನು ವಹಿಸಿದ್ದರೂ, ರಾಷ್ಟ್ರದ ಆಡಳಿತೆಯು ಯೋಧವರ್ಗದವರ ಸ್ವಾಧೀನತೆಯಲ್ಲಿಯೇ ಇದೆ. 'ಶೋ' ಪಂಗಡದವರ ಆರ್ಥಿಕ ಸಹಾಯವು ಇವರಿಗೆ ನೆರವಾಗಿದೆ.

ಈ ಪ್ರಸಿದ್ಧ ನಾಲ್ಕು ಪಂಗಡಗಳ ಒಳಗೆ ಇನ್ನೂ ಅನೇಕ ಭೇದಗಳಿವೆ. ಅವುಗಳೆಲ್ಲವೂ ಆಯಾಯ ವೃತ್ತಿಯ ದೆಸೆಯಿಂದ ರಾಷ್ಟ್ರಕ್ಕೆ ವಿಧೇಯವಾಗಿರುತ್ತವೆ. ಇತರ ರಾಷ್ಟ್ರಗಳ ಜನರ ಜೀವನ-ಸಮಾಜ ನಿಯಮಗಳಿಗಿಂತ ಜಪಾನಿಯರಲ್ಲಿ ವೈಶಿಷ್ಟ್ಯವು ತೋರುವುದು ಈ ಜಾತಿಗಳ ಪ್ರತ್ಯೇಕ ಕಾರ್ಯಗಳ ಸಮಾದಾಯಕತೆಯಿಂದ. ಇಡೀ ಜಪಾನೆಂಬುದು ಇಂತಹ ಪಂಗಡಗಳ ಗುಂಪಾಗಿದೆ. ನಗರಗಳಲ್ಲಾಗಲಿ, ಉದ್ಯೋಗಗಳಲ್ಲಾಗಲಿ, ಹಳ್ಳಿಯಲ್ಲಾಗಲಿ, ಹೊಲಗಳಲ್ಲಾಗಲಿ ಇವರು ಅವಿಭಕ್ತರಾಗಿ ರಾಷ್ಟ್ರದ ಹಿತಸಾಧಿಸುವ ಗುಂಪಾಗಿರುತ್ತಾರೆ.

ಇಂತಹ ಗುಂಪುಗಳ ಪ್ರತ್ಯಕ್ಷವಾದ ಪ್ರಯೋಜನವೆಂದರೆ ಕೂಲಿಗಾರರ ಸಂಸ್ಥೆ ಮತ್ತು ಕೂಲಿಯ ಅಭಿವೃದ್ಧಿ ಇವೆರಡಾಗಿವೆ. ಕೂಲಿಗಾರರು ದೊಡ್ಡ ಸಂಸ್ಥೆಯ ದೃಷ್ಟಿಯಿಂದ ವಿಚಾರಿಸುವುದಿಲ್ಲ, ಅವರ ಕಾರ್ಯಕ್ಷೇತ್ರಗಳಲ್ಲಿ ಸಣ್ಣ ಸಣ್ಣ ಗುಂಪಾಗಿ ದುಡಿಯುತ್ತಾರೆ. ಹೀಗಾಗಿ ಅನ್ಯೋನ್ಯ ಪಂಗಡಗಳೊಳಗೆ ಜಗಳಗಳುಂಟಾಗುವುದೂ ಅಲ್ಲಿ ನಡೆದೇ ಬಂದಿದೆ.

ಕೂಲಿಗಾರರು ಮತ್ತು ಬಂಡವಾಳಗಾರರು

ದೊಡ್ಡ ಕೂಲಿಗಾರರ ಸಂಸ್ಥೆಯನ್ನು ಅವರು ಬಲಪಡಿಸದಿದ್ದರೂ ಬಂಡವಾಳಗಾರರ ಮೇಲೆ ಅವರ ಕೈನಡೆಯುತ್ತದೆ. ಇತರ ದೇಶಗಳಂತೆ ಕೂಲಿಗಾರರಿಗೆ ಅವರ ಸಂಬಳ ಮಾತ್ರದ ಆಸೆಯೆಂದಲ್ಲದೆ, ಬೇರೆ ವಿಷಯವಿಲ್ಲವೆಂಬ ಪರಿಸ್ಥಿತಿಯು ಅಲ್ಲಿರುವುದಿಲ್ಲ. ಅಲ್ಲಿ ಕಂಪನಿಗಳ ಜೀವಾಳವೇ ತಾವೆಂದೂ ಅವರು ತಿಳಿದಿದ್ದಾರೆ. ಹಾಗಾಗಿ ಭಂಡವಾಳಗಾರರು ಅವರ ಜೀವನ ಸುಧಾರಣೆಯಲ್ಲಿ ಕುತೂಹಲಿಗಳಾಗಿದ್ದಾರೆ. ಯಾವುದಾದರೂ ರಾಷ್ಟ್ರೀಯ ಗೊಂದಲದ ಕಾಲದಲ್ಲಿ ಅವರು ಒಂದೇ ಗುಂಪಾಗಿ ಒಟ್ಟಾಗುತ್ತಾರೆ.

ಮೈಜಿ ಪುನಸ್ಸ್ಥಾಪನೆ

ಮೈಜಿ ಅಥವಾ ಸಾಮ್ರಾಟರ ಪುನಸ್ಸ್ಥಾಪನೆಯು ಜಪಾನಿನಲ್ಲಿ ಬಹಳ ಬದಲಾವಣೆಯನ್ನು ತಂದಿದೆ. ಇದರ ಮುಖ್ಯ ಪ್ರಯೋಜನವೆಂದರೆ, ರಾಜನು ದೇವಪುತ್ರನ ವಂಶದವನೆಂದೂ, ಅತನಿಗೆ ಎಲ್ಲರೂ ವಿಧೇಯರಾಗಿರಬೇಕೆಂದೂ ಅವರಲ್ಲಿ ವಿಧೇಯತೆಯು ಅಧಿಕವಾಗಿದೆ. ಇದರಿಂದ ರಾಷ್ಟ್ರಪ್ರೇಮವು ಇನ್ನಷ್ಟು ಬಲಗೊಳ್ಳಲು ಸಹಾಯವಾಗಿದೆ.

ಇಂದು ಹಿಂದಿನ ವಂಶದ ಯೋಧರ ಅಧಿಕಾರವು ರಾಜ್ಯದಲ್ಲಿ ವಿಶೇಷವಾಗಿದೆ. ವಿದೇಶೀಯ ರಾಜ್ಯನೀತಿಯಲ್ಲಿ ಇವರದೇ ಒಂದು ಧೋರಣೆಯಿದೆ. ಹಾಗಾಗಿ ಟ್ರೈನ್‌ಸ್ಟಿನ್ ಮೊದಲಾದೆಡೆಗಳಲ್ಲಿ ಆಗುವ ಗೊಂದಲವು ನಿಜವಾಗಿಯೂ ಜಪಾನಿಯರ ಕುತಂತ್ರವೋ ಅಥವಾ ಈ ಯೋಧರ ಕಲಹಪದ್ಧತಿಯೋ ಎಂಬುದು ಸಂಶಯದಲ್ಲಿದೆ. ಚೈನಾದ ಘಟನೆಯ ವಿಷಯದಲ್ಲಿಯೂ ಹಾಗೆಯೇ ಇಡೀ ಜಪಾನನ್ನು ಒಂದು ಅಧಿಕಾರವಾಣಿಯಿಂದ ನಡೆಸುವುದು ಇಂದು ಸೈನಿಕವಂಶವಾಗಿದೆ. ಇದರಿಂದಲೇ ಇತರರು ಜಪಾನೀಯರ ಧೋರಣೆಯು ಒಂದು ವಿಶಿಷ್ಟತರದ್ದಾಗಿ ತಿಳಿಯುವಂತಾಗಿದೆ. ಜಪಾನಿನ ಭವಿಷ್ಯವೂ ಇವರ ಕೈಯಲ್ಲಿಯೇ ಇದೆ.

ಆರ್ಥಿಕ ಪರಿಸ್ಥಿತಿ

ವಿದೇಶೀಯ ಪತ್ರಿಕೆಗಳ ಪ್ರಚಾರದಷ್ಟು ಜಪಾನಿನ ಆರ್ಥಿಕ ಪರಿಸ್ಥಿತಿಯು ಹಾಳಾಗಿರುವುದಿಲ್ಲ. ಇಂದು ಕೃಷಿಕರ ಪರಿಸ್ಥಿತಿಯು ಅಷ್ಟು ಉತ್ತಮವಾಗಿಲ್ಲವೆಂಬುದು ಸತ್ಯ. ಅವರಿಗೆ ಸಾಲ ಹೆಚ್ಚಾಗಿ ಭೂತೆರಿಗೆ ಅವರ ಭಾರವನ್ನು ಇಮ್ಮಡಿ ಮಾಡಿದೆ. ಆದರೆ ಸಾಲವನ್ನು ಕಂತು ಪ್ರಕಾರ ತೆರುವ ಹಾಗೂ ಮುಂದುವರಿಸುವ ಸಹಕಾರ ಪದ್ಧತಿಯು ಅಲ್ಲಿದೆ. ಅಕ್ಕಿಯ ಕ್ರಯವು ಇಳಿಯದಿದ್ದರೆ ಜಪಾನೀಯರು ಸಾಧಾರಣ ಜೀವನ ಮಾಡಬಹುದು. ಅಲ್ಲಿನ ಮೀನು ಹಿಡಿವವರು ರಾಷ್ಟ್ರಕ್ಕೆ ಬೇಕಾದ ಉತ್ತಮ ಆಹಾರವನ್ನು ಒದಗಿಸುತ್ತಾರೆ. ಒಟ್ಟಿನ ಮೇಲಿಂದ ಜಪಾನು ಆರ್ಥಿಕ ಪರಿಸ್ಥಿತಿಯಲ್ಲಿಯೂ ಸುಧಾರಿಕವಾಗಿದೆ.

ಖಂಡಿತವಾಗಿಯೂ ಜಪಾನಿಯರು ಒಂದು ವಿಶಿಷ್ಟ ಜನಾಂಗ. ಆದರೆ ಅವರ ಚರಿತ್ರೆಯನ್ನು ಅಭ್ಯಾಸಿದವನಿಗೆ ಅದರ ಗುಟ್ಟು ಗೊತ್ತಾಗ ವುದು. ಈ ದೃಷ್ಟಿಯಿಂದ ನೋಡಿದಲ್ಲಿ ಅವರ ವಿಚಾರಸರಣಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದಾಗಿದೆ.

ಪುರಾಣವು ಸಾರುತ್ತಿದೆ,

''ಗಂಧದ ಮರವು ಪ್ರಾಣಘಾತುಕ ಸರ್ಪಗಳನ್ನು ಆಕರ್ಷಿಸುತ್ತದೆಂದು''

ವಸ್ತುಸ್ಥಿತಿಯು ರುಜುಪಡಿಸುತ್ತಿದೆ,

''ಆ ಗಂಧದ ಮರದ ಎಣ್ಣೆಯೇ ಮರಣಪ್ರಾಯವಾದ ರೋಗಗಳನ್ನು ವಾಸಿಮಾಡುವುದೆಂದು''

ಪುರಾಣವನ್ನು ಮನರಂಜನೆಗಾಗಿ ಕಾದಿರಿಸಿ ವಸ್ತುಸ್ಥಿತಿಯನ್ನು ಗಮನಿಸಿರಿ

ಸೆಟ್‌ಸನ್

ಸಾರಭೂತವಾದ ಶ್ರೇಷ್ಠತರಗತಿಯ ಮೈಸೂರುಗಂಧದ ಎಣ್ಣೆ.

(ಜಠರರಸಗಳಿಂದ ಹಾನಿಯೊದದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ. ಆದರೆ ಕರುಳುಗಳಲ್ಲಿ ಕೊಲೋಯಿಡಿಯಲ್ ರಸವಾಗಿ ಮಾರ್ಪಾಟು ಹೊಂದುವುದು—ಹೊಟ್ಟೆಯ ಕರುಳನ್ನಾಗಲೀ, ಆಹಾರದ ಮಾರ್ಗವನ್ನಾಗಲೀ ಕೆಡಿಸುವುದಿಲ್ಲ.)

ಗೊನೋರಿಯಾವನ್ನು

ಗುಣಮಾಡುವುದು

''ಸೆಟ್‌ಸನ್'' ಅದೇ ಸಮಯಕ್ಕೆ ಸ್ಥಿರವಾದ ಗುಣಕಾರಕವಾದ ತಲ್ಲಿನತೆಯನ್ನುಂಟುಮಾಡುವುದು. ಸೆಟ್‌ಸನ್‌ನಲ್ಲಿಯ ಗಂಧದೆಣ್ಣೆಯು ಗೊನೊಕೊರೆ ಕ್ರಿಮಿಗಳನ್ನು, ನಾಶಮಾಡುವುದು. ಸೆಟಸನಿನಿಂದ ಕ್ರಮವಾಗಿ ಬೇನೆಯು ನಿಲ್ಲುವುದು ಮತ್ತು ಗುಣವು ನಿಶ್ಚಯ.

ಮುಖ್ಯ ಸೂಚನೆ. 'ಸೆಟಸನ್'ನ ವಿಷಯ ಇತರ ಕೆಲವು ಔಷಧಿಗಳಲ್ಲಿ ಗಂಧದೆಣ್ಣೆಯಿದ್ದರೂ ಅವುಗಳೊಡನೆ ಹೋಲಿಸಹೋಗಬೇಡಿರಿ, ಅಂಥಾ ಔಷಧಿಗಳಲ್ಲಿ ಪ್ರತಿ ಡೋಸಿಗೆ ಇರುವ ತಾರತಮ್ಯವೆಂದರೆ 'ಸೆಟಸನ್'ಗಿಂತ ೨ರಿಂದ 10 ಪಾಲಿನವರೆಗೆ ಕಡಿಮೆ ಇರುವುದು. ಹಾಗಿದ್ದರೂ 'ಸೆಟಸನ್'ನ ಕ್ರಯ ಬಹಳ ಕಡಿಮೆ. ಆದರೆ ವಾಸಿಮಾಡುವ ಶಕ್ತಿಯು ಬಹಳ ಉತ್ತಮವಾದದ್ದು ಮತ್ತು ಖಂಡಿತವಾದದ್ದು. 'ಸೆಟಸನ್'ನ ಶೋಧನೆಯ ಜಯವನ್ನು, ಸೇವಿಸಿದೊಡನೆ ಗೊನೊರಿಯಾದ ಮೇಲೆ ರಾಮಬಾಣದ ಔಷಧೋಪಾದಿಯಲ್ಲಿ ಉದ್ಯಮಿಸಲು ಪ್ರಾರಂಭಿಸುವುದೆಂಬುದೊಂದೇ ಸಾಕಷ್ಟು ಪರಿಮಾಣದಲ್ಲಿ ರುಜುಪಡಿಸಿದೆ. ಗೊನೊರಿಯಾದ ಸಂಪೂರ್ಣ ಚಟುವನ್ನೇ ನಾಶಮಾಡಿ, ಗುಣವನ್ನೂ ಸ್ಥಿರವಾದ ತಲ್ಲಿನತೆಯನ್ನೂ ನಿಶ್ಚಯಪಡಿಸುವುದು.

ಟಪ್ಪಾಲು ದ್ವಾರಾತರಿಸಬಹುದು —

Available by Post from:—

CRYSTAL CHEMICAL COMPANY, LTD.,
Podar Chambers, 109, Parsee Bazar Street,
FORT BOMBAY.

ಕ್ರಯ: ಹಣವನ್ನು ಆರ್ಡರಿನೊಂದಿಗೆ ಕಳುಹಿಸಿದರೆ ರೂ. 6-10-0 (ಅಂಚೆವೆಚ್ಚ ಧರ್ಮಾರ್ಥ)
(ವಿ. ಪಿ. ಪಿ. ದ್ವಾರ ತರಿಸುವುದಾದರೆ ಅಂಚೆವೆಚ್ಚ ಜಾಸ್ತಿ).

ಒಂದು ಸಣ್ಣ ಕಥೆ!

ಜೆಬುನ್ನೀಸಾ

ಬಹಳ ದಿನಗಳಿಂದ, ಲಾಹೋರಿಗೆ ಹೋಗುವ ಸಿದ್ಧತೆ ಆಕೆ ಮಾಡುತ್ತಿದ್ದಳು. ಉತ್ತಮವಾದ ಸೀರೆಗಳನ್ನು, ಚೆಲುವಾಗಿ ಒಪ್ಪುವ ಅನೇಕ ಆಭರಣಗಳನ್ನೆಲ್ಲಾ ಪ್ರತ್ಯೇಕ ತೆಗೆದಿಟ್ಟಳು 'ಬೆಳ್ಳಿ ಜರಿಯು ಆ ಬಂಗಾರದ ಬಣ್ಣದ ಸೀರೆಯನ್ನು ಬೇರೆ ಇಟ್ಟಿದ್ದೀಯಾ?' ಜೆಬುನ್ನೀಸಾ ಸೇವಕಳೊಡನೆ ಕೇಳಿದಳು

'ಹೌದು ತಾಯೀ,' ಸೇವಕಳು ಉತ್ತರ ವಿತ್ತಳು. 'ಲಾಹೋರಿಗೆ ಹೋಗುವ ವಿಷಯದಲ್ಲಿ ನೀನು ಬಹಳ ಸಂಭ್ರಮಗೊಂಡಂತಿದೆ ನಿನ್ನ ಈ ಅಪೂರ್ವ ಉತ್ಸುಕತೆಯನ್ನು ನೋಡಿದವರು ಯಾರಾದರೂ, ನೀನು ನಿನ್ನ ಪ್ರೇಮಪಾತ್ರನಾದ ಪ್ರಣಯಿಯೊಬ್ಬನನ್ನು ಅಲ್ಲಿ ಸಂದರ್ಶಿಸಲು ಹೋಗ್ತಿಯೋ ಎಂದು ತಿಳಿಯಬೇಕಾಗಿದೆ' ಸೇವಕಳ ಈ ನಗೆಯ ಮಾತಿನಿಂದ, ಮೊಗಲ ರಾಜಕುಮಾರಿಯು ಆಕೆ ತನ್ನನ್ನು ಹೀಗೆ ಅಣಕವಾಡಿದಳೇ ಎಂದು ಭಾವಿಸಿ ನಾಚಿಕೊಂಡಳು

ಜೆಬುನ್ನೀಸಳು ಸಹಜವಾಗಿಯೂ ಬಹಳ ಸಂಭ್ರಮದಿಂದ ಲಾಹೋರಿಗೆ ಹೊರಡುವ ತಯಾರಿ ಮಾಡಿದ್ದಳು! ಆದರೆ ರಾಜಕುಮಾರಿಯ, ಆ ಪ್ರಫುಲ್ಲ ಸುಂದರಿಯ, ಪ್ರಣಯ ವಿಚಾರವು ಸೇವಕಳಾದ ಪಾತಿಮಾಳಿಗೆ ಹೇಗೆ ತಿಳಿದಿರಬೇಕು? ನಗೆಮಾತಿನಿಂದ ನಾಚಿಕೊಂಡಿದ್ದಳೇನೋ ನಿಜ ತನ್ನ ನಲ್ಲನನ್ನು, ತನ್ನ ಪ್ರಣಯಪಾತ್ರನಾದ ಅಖಿಲ್ ಖಾನನನ್ನು ಆಕೆ ಲಾಹೋರಿನಲ್ಲಿ ಹೋಗಿ ಕಾಣುವ ಸಂತೋಷವೊಂದೇ ಅವಳ ಹೃದಯವನ್ನು ತುಂಬಿಸಿತ್ತು. ಲಾಹೋರಿನ ರಕ್ಷಣೆಯ ಅಧಿಕಾರಿಯಲ್ಲಿ ತಂದೆಯಿಂದ ನೇಮಿತನಾದ ಆ ಸುಂದರ ತರುಣ ಅಖಿಲ್‌ನ ಪ್ರೇಮಪೂರ್ಣ ದೃಷ್ಟಿಗಳಿಂದ ಹಿಂದೆ ಈಗ ಮೋಹಿತಳಾಗಿದ್ದಳು ಭಾವನಾ ರಾಜ್ಯದಲ್ಲಿ ಅದೇ ದಿವ್ಯ ಸ್ವಪ್ನಗಳನ್ನು ಕಲ್ಪಿಸುತ್ತ, ಆಕೆ ಲಾಹೋರಿಗೆ ಹೋಗುವುದರ ಕುರಿತು ಅಷ್ಟೊಂದು ಸಂಭ್ರಮಳಾಗಿ, ಉತ್ಸುಕಳಾಗಿ ಇದ್ದಳು

ಬಹುಶಃ ಆಕೆಯೂ ತನ್ನ ದೃಷ್ಟಿಯಿಂದ ತನ್ನೆಡೆಯ ಪ್ರೇಮವನ್ನ ಅವನಿಗೆ ತಿಳಿಸಿದ್ದಳು ಆದರೆ ತಮ್ಮ ನಲ್ಮೆಯ ನುಡಿಗಳನ್ನು, ಪ್ರಣಯ ಸಂಭಾಷಣೆಯನ್ನು ಮಾಡಿಕೊಳ್ಳುವ ಸುಯೋಗವು ಅವರಿಗೆ ಒದಗಿರಲಿಲ್ಲ. ಯಾವ ಸ್ಥಳದಲ್ಲಿ, ಯಾವ ಸುಂದರ ಮನೋಹರನ ಪ್ರೇಮ ದೃಷ್ಟಿಯ ಕಿರಣಗಳಿಂದ, ತನ್ನ ಹೃದಯ ಕುಸುಮವು ವಿಕಾಸಗೊಂಡಿತ್ತೋ, ತಿರಿಗಿ ಒಮ್ಮೆ ಅದೇ ಸ್ಥಳಕ್ಕೆ ಹೋಗುವ ಸಂತೋಷದ ವಿಚಾರದಿಂದ ಜೇಬುನ್ನೀಸಳು ಇಂದ ಉದ್ವೇಗಗೊಂಡಿದ್ದಾಳೆ

ಎಲ್ಲಾ ಸಿದ್ಧತೆಗಳೂ ಮುಗಿದುವು ಅನಂತರ ಲಾಹೋರಿಗೆ ಹೊರಟು ಹೋದರು. ಮೊಗಲ್ ಬಾದಶಹನಾದ ಅವರಂಗಜೇಬನು ತನ್ನ ಪ್ರೀತಿಯ ಕುಮಾರಿ ಜೇಬುನ್ನೀಸಳೊಂದಿಗೆ, ಲಾಹೋರನ್ನೊಮ್ಮೆ ಸಂದರ್ಶಿಸಿ ಬರಲು ಹೊರಟಿದ್ದಾನೆ ಧಾರಿಯುದ್ದಕ್ಕೂ ಮೊಗಲ್ ಬಾದಶಹನಿಗೆ ಸಂಭ್ರಮದ ಸ್ವಾಗತವಾಯಿತು ಲಾಹೋರಿನ ರಾಜದ್ವಾರದ ಬಳಿ, ಅವರಂಗಜೇಬ ಮತ್ತು ಅವನ ಪರಿವಾರವನ್ನು ಅಖಿಲ್ ಖಾನನೇ ಬಂದು ಸ್ವಾಗತಿಸಿ ವಿವಿಧ ವಾದ್ಯ ಸಂಗೀತ ಸಮ್ಮೇಳನದಿಂದ ಎದುರುಗೊಂಡನು!

ಬಂಗಾರದ ಬಣ್ಣದ ಸೀರೆಯ ಮುಖದ ಆವರಣದೆಡೆಯಿಂದ ಅಖಿಲ್‌ನನ್ನು ಒಂದು ಸುಂದರ ಸ್ತ್ರೀಯ ದೃಷ್ಟಿಯು ಇಣಿಕಿ ನೋಡುತ್ತಿತ್ತು ಬಾದಶಹನ ಪರಿವಾರವನ್ನು ಸ್ವಾಗತಿಸಿ, ವಾಸಸ್ಥಳಕ್ಕೆ ಕರೆತರುತ್ತಿದ್ದಂತೆ, ಅಖಿಲ್ ಖಾನನು, ತಾನು ಯಾವುದೋ ಒಂದು ಕನಸಿನ ಲೋಕದಲ್ಲಿ, ಗಾಳಿಯ ಮೇಲೆ ತೇಲಾಡಿ ನಡೆದು ಹೋಗುತ್ತಿದ್ದಂತೆ ಸುಖವೊಂದನ್ನು ಅನುಭವಿಸುತ್ತಿದ್ದನು

ಜೆಬುನ್ನೀಸಳು, ರಾತ್ರಿಯಲ್ಲಿ ನಿದ್ರಾಹೀನಳಾಗಿ, ವಿಶ್ರಾಂತಿಯಿಲ್ಲದೆ ಹೂತೋಟದಲ್ಲಿ ಅತ್ತಿತ್ತ ಸಂಚರಿಸುತ್ತಿದ್ದಳು. ಬಾನಿನಲ್ಲಿ ಚಂದ್ರಮನು ಬೆಳಗಿದ್ದನು' ಪ್ರಕೃತಿಯು ನಿತಾಂತ ಮೋಹಕವಾಗಿತ್ತು ತನ್ನ ಹೃದಯದ ಪ್ರೇಮ ನಿರ್ಭರತೆಯನ್ನು, ಪ್ರಣಯವಲ್ಲಭನಿಗೆ ತಿಳಿಸಲು ಆಕೆ ಸ್ವತಃ ಕವನಗಳನ್ನು ಕಟ್ಟಿ, ಮಂದ ಸ್ನಿಗ್ಧವಾಗಿ ಹಾಡುತ್ತಿದ್ದಳು!

ಒಂದು ಭವ್ಯ ಆಕೃತಿಯ ನೆಳಲು ಅವಳ ಮುಂದೆ ಬಿತ್ತು'

ನಿಮಿಷದಲ್ಲಿಯೇ, ಕೂಲಿಗಾರರ ಉಡುಪು ತೊಟ್ಟ, ಮನೋಹರ ತರುಣನು ಆಕೆಯ ಎದುರು ನಿಂತಿದ್ದನು.

ಅದು ಅಖಿಲ್ ಖಾನನೇ ಎಂದರಿತಾಗ, ಆಕೆಗೆ ಆದ ಆನಂದಕ್ಕೆ ಮಿತಿಯೇ ಇರಲಿಲ್ಲ

ಮಂತ್ರಮುಗ್ಧಳಂತೆ ಆತನನ್ನು ಎವೆಯಿಕ್ಕದೆ ನೋಡಿದಳು ಪ್ರೇಮವು ಇಬ್ಬರನ್ನೂ ಮೌನಿಗಳನ್ನಾಗಿ ಮಾಡಿತ್ತು. ಆದರೆ ಅವರ ನೋಟಗಳು ಪ್ರೇಮದ ಸಂಭಾಷಣೆಯಲ್ಲಿ ತಲ್ಲೀನವಾಗಿದ್ದುವು

'ಅಖಿಲ್, ನನ್ನ ಕಂಡು ಆನಂದವಾಯಿತೆ' ಕಡೆಗೆ ಜೆಬುನ್ನೀಸಳೇ ಮಾತು ಶುರುಮಾಡಿದಳು.

'ಇದು ನನ್ನ ಜೀವಿತದಲಿ ಅಮಿತ ಆನಂದದ ಅಮೂಲ್ಯ ನಿಮಿಷ ನಾನು ಸೆರೆಮನೆಯಲ್ಲಿ ಬಂಧಿತನಾಗಿದ್ದಾಗ ನಾನು ಎಷ್ಟೋ ದುಃಖ ವಳಗೊಂಡೆನೆಂಬ ವಿಷಯ ನೀನು ಊಹನೆ ಮಾಡಿ ತಿಳಿಯಬಲ್ಲೆ' ಅಖಿಲ್‌ನ ತನ್ನ ಹೃದಯದ ವೇದನೆಯನ್ನು ಒಟ್ಟಿ ತೋರಿಸುವಂತೆ ಮಾತನಾಡಿದ

ಆದಕ್ಕೆ ಖಂಡಿತವಾಗಿ ಸಮ್ಮತಿಸಲಾರ' ಜೆಬುನ್ನೀಸಳು ನಿಟ್ಟುಸಿರೆಳೆದು ಹೇಳಿದಳು

ಈ ಮಾತುಗಳು ಅಖಿಲ್ ಖಾನನ ಹೃದಯವನ್ನು ಅಸ್ತ್ರದಿಂದ ಇರಿದಂತೆ ನೋಯಿಸಿತು ಅವನೆದೆಯ ಸಂಕಷ್ಟದ ಅನುಭವವು ಆಕೆಗೆ ತಿಳಿಯಿತು. ಆತನ ಕೊರಳು ಸುತ್ತು ಬಾಹುಗಳನ್ನು ಬಿಗಿದು ಹೇಳಿದಳು 'ನಲ್ಲಾ, ವಿವಾಹಿತರಾಗದೇ ಇದ್ದರೂ, ನಾವು ಹೀಗೆಯೇ ಇರಲು ಆಗ ವುದಿಲ್ಲವೇ?'

ಅಖಿಲ್ ಜೆಬುನ್ನೀಸಳ ಹಸ್ತವನ್ನು ಪ್ರೇಮ ಕೃತಜ್ಞತೆಗಳಿಂದ ಒತ್ತಿ ಮುದ್ದಿಟ್ಟನು. ಆ ಪ್ರಶಾಂತ ರಾತ್ರಿಯಲ್ಲಿ ಆ ಪ್ರಣಯಿಗಳು ಬಹು ಹೊತ್ತು ಹಾಗೆ ಸರಸವಾಡಿದರು.

ಹೀಗೆ ಅವರು ಪ್ರತಿ ರಾತ್ರಿಯೂ ಸೇರುತ್ತಿದ್ದರು. ಒಬ್ಬರ ಹೃದಯವನ್ನೊಬ್ಬರು ಸಂಪೂರ್ಣ ಪರಿಚಯ ಮಾಡಿಕೊಂಡ ಮೇಲೆ ಪ್ರಣಯವು ಅವರನ್ನು ಇನ್ನಷ್ಟು ಉತ್ಸುಕರನ್ನಾಗಿ ಮಾಡಿತು

ದಿನಗಳ ನಿಮಿಷಗಳಂತೆ ಹಾರಿದವು

ಅಖಿಲ್‌ಖಾನ್ ನಿನ್ನನ್ನು ಕಂಡು ಆನಂದವಾಗಿದೆ ಕಡೆಗೆ ಜೆಬುನ್ನೀಸಳೇ ಮಾತಿಗೆ ಶುರುಮಾಡಿದಳು

'ಹೌದು, ಬಾದಶಹನಿಗೆ ಎದುರಾಗಿ ದಂಗೆಯೆದ್ದ ಅಕ್ಬರನಿಗೆ ನಾನು ನೆರವಾಗುತ್ತೇನೆಂದು ನನ್ನ ತಂದೆ ವಿಚಾರಿಸಿದ ಹಾಗಾಗಿ ನಾನೂ ಸೆರೆಮನೆಯಲ್ಲಿ ಬಂಧಿಯಾಗಿರಬೇಕಾಯಿತು.'

'ಅಲ್ಲಿ ನೀನು ಬಹಳ ಸಂಕಷ್ಟವನ್ನು ಅನುಭವಿಸಿದೆಯಲ್ಲವೇ?'

'ಕವಿತೆಯ ಮತ್ತು ಸಾಹಿತ್ಯ ಪುಸ್ತಕಗಳನ್ನು ಹೇಗೆ ಪ್ರಾಣಕ್ಕಿಂತಲೂ ಮಿಗಿಲಾಗಿ ನಾನು ಪ್ರೀತಿಸುತ್ತೇನೆಂದು ಬಲ್ಲೆಯಷ್ಟೆ? ಅವುಗಳು ನನಗೆ ಅಲ್ಲಿಯೂ ಸಿಗುವಂತಾಗಿತ್ತು. ಹಾಗಾಗಿ ಸೆರೆಮನೆಯಲ್ಲಿಯೂ ನನಗೆ ಅರಮನೆಯಂತೆಯೇ ದಿನ ಕಳೆಯಿತು.'

'ಪ್ರಿಯೇ, ಬಹಳ ಕಾಲದ ಮೇಲೆ ನಾವು ಒಂದಾಗಿದ್ದೇವೆ. ಇನ್ನು ಬೇರೆಯಾಗುವುದು ಬೇಡ. ನೀನು ಯಾವಾಗ ನನ್ನನ್ನು ವರಿಸಬಲ್ಲೆ, ಹೇಳು' ಅಖಿಲ್‌ಖಾನನು ಸಂಭ್ರಮದಿಂದ ಕೇಳಿದ.

'ಅಯ್ಯೋ, ಅಖಿಲ್, ನಮ್ಮ ವಿವಾಹವು ಸಾಧ್ಯವುಂಟೆಂದು ತಿಳಿದೆಯಾ? ತಂದೆಯು ಅವರಂಗಜೇಬನು ಲಾಹೋರನ್ನು ಬಿಟ್ಟು ದಿಲ್ಲಿಗೆ ಹೊರಡುವ ದಿನವೂ ಬಂತು ಜೆಬುನ್ನೀಸಳು ತಂದೆಯ ಬಳಿಗೆ ಬಂದು –

'ಪಿತಾಜೀ, ಇಲ್ಲಿನ ಹವೆಯು ನನ್ನ ಆರೋಗ್ಯಕ್ಕೆ ಬಹಳ ಒಪ್ಪುತ್ತದೆ ಆದಾಗ, ಸ್ವಲ್ಪ ಸಮಯದ ವರೆಗೆ ನನ್ನನ್ನು ಇಲ್ಲಿಯೇ ಉಳಿಕೊಳ್ಳಲು ಅನುಮತಿ ಕೊಡಬೇಕು.

ಮಗಳ ಮುದ್ದು ಮುಖವನ್ನೂ, ಬಿನ್ನಹ ಮಾಡುವಂತಿದ್ದ ಕಣ್ಣುಗಳನ್ನೂ ಬಾದಶಹನು ನೋಡಿ, ದಯೆಯಿಂದ 'ನಿನ್ನ ಹೃದಯದ ಸಂತೋಷವಿದ್ದಂತೆ ಆಗಲಿ ಮಗಳೇ, ಆದರೆ ತಂದೆಯನ್ನು ಬಹಳ ಸಮಯ ಏಕಾಂಗಿಯಾಗಿರುವಂತೆ ಮಾಡಬೇಡ, ನಿನ್ನ ಬರೀ ಸಾನ್ನಿಧ್ಯ ಮಾತ್ರವಲ್ಲ, ರಾಜ್ಯದ ಆಡಳಿತದ ವಿಷಯದಲ್ಲಿಯೂ ನಿನ್ನ ಹಿತೋಕ್ತಿಗಳನ್ನೂ ಕೇಳಲು ನಾನು ಎಷ್ಟು ಆತುರವುಳ್ಳವನಾಗಿರುವೆನೆಂದು ನೀನೇ ಬಲ್ಲೆಯಷ್ಟೆ? ಎಂದು ಹೇಳಿದನು.

ಹಾಗೆ ಜೆಬುನ್ನಿಸಳು ಲಾಹೋರಿನಲ್ಲಿಯೇ ಉಳಕೊಂಡಳು! ಈ ಸ್ವಾತಂತ್ರ್ಯವು ಆ ಪ್ರಣಯಿಗಳಲ್ಲಿ ಸುಖಲಾಲಸೆಯನ್ನು ಇನ್ನಷ್ಟು ಹೆಚ್ಚಿಸಲು ಯೋಗ್ಯ ಸಂದರ್ಭಗಳನ್ನು ಒದಗಿಸಿತು. ಬೆಳದಿಂಗಳ ರಾತ್ರಿಗಳಲ್ಲಿ ನಕ್ಷತ್ರರಂಜಿತ ಸಿರಿಯಲ್ಲಿ ಅವರು ಪ್ರೇಮ, ಸಂಗೀತ, ಕವಿತೆ, ಸಾಹಿತ್ಯ ಈ ಕುರಿತೇ ಸಂಭಾಷಿಸಿ ಹೊತ್ತುಗಳೆದರು!

ಜಗತ್ತಿನ ದೃಷ್ಟಿಯಿಂದ ಬಹುಕಾಲದವರೆಗೆ ಇಂತಹ ವಿಷಯಗಳು ಗುಪ್ತವಾಗಿಯೆ ಇರಲು ಆಗುವುದಿಲ್ಲ! ಅವರಂಗಜೇಬನ ಗುಪ್ತಚಾರರು, ರಾಜಕುಮಾರಿಯ ಈ ಪ್ರಣಯವಾರ್ತೆಯನ್ನು ಆತನ ಕಿವಿಗೆ ಬೀಳುವಂತೆ ಮಾಡಿದರು ಸಿಟ್ಟಿನಿಂದ ಕುದಿಯುತ್ತಾ, ತತ್‌ಕ್ಷಣವೆ ಲಾಹೋರನ್ನು ಬಿಟ್ಟುಬರುವಂತೆ 'ಮಗಳಿಗೆ ಹೇಳಿಕಳುಹಿಸಿದನು.

ಪ್ರಣಯಿಗಳ ಅಂತ್ಯದರ್ಶನವು ಅವರಿಬ್ಬರ ಹೃದಯವನ್ನು ಬಹಳ ಕರಗಿಸಿಬಿಟ್ಟಿತು ಅವರಿಬ್ಬರೂ ಜೀವನಾವಧಿ ಅನ್ಯೋನ್ಯ ಪ್ರೇಮಿಗಳಾಗಿಯೇ ಇರುವಂತೆ ಪ್ರೇಮದ ಪ್ರತಿಜ್ಞೆಯನ್ನು ಮಾಡಿಕೊಂಡರು "ಹಾ! ನಾನು ಯಾವ ಪಾಪಮಾಡಿ, ಬಾದಶಹನ ಮಗಳಾಗಿ ಹುಟ್ಟಿದೆ, ದೀನಳಾದ ಸೇವಕಳೊಬ್ಬಳಿಗಾದರೂ ತನ್ನ ಮನವೆಚ್ಚಿದ ನಲ್ಲನೊಡನೆ ಜೀವನನಡೆಸಲು ಲೋಕದಲ್ಲಿ ಸ್ವಾತಂತ್ರ್ಯವುಂಟು! ವಿಷಮತೆಗಳನ್ನು ಪರಿಹರಿಸುವ ಜಗತ್ತಿನ ನಿಯಮಗಳೆ ವಿಷಮತೆಗೆ ಕಾರಣವಾಗಿರುತ್ತವೆ" ಹೀಗೆಂದು ಹೇಳಿ ಜೆಬುನ್ನಿಸಳು ತನ್ನ ಬಾಳವೆಗಾಗಿ ಮರುಗಿಕೊಂಡಳು.

ಗದ್ಗದ ಕಂಠದಿಂದ ಹೊರಬಿದ್ದ ಈ ಪ್ರೇಮಪೂರ್ಣವಾದ ನುಡಿಗಳು ಅಖಿಲ್‌ಖಾನನ ಹೃದಯದಲ್ಲಿ ಅಗಾಧವಾದ ದುಃಖವನ್ನು ತುಂಬಿಸಿದುವು! ಬೇಗಾಗಲಿ ಅವರ ಹೃದಯಗಳೆರಡು ಸಮ್ಮತಿಗೊಳ್ಳದಿರಲು, ಕಡೆಗೆ ಆ ಪ್ರಾಕಾಲ ಸಮಾಪಿಸಿ ಅವರನ್ನು ಅಗಲಿಸಿತು.

ಅವರಂಗಜೇಬನು ಮಗಳ ವಿಷಯವಾಗಿ ಬಹಳ ಕಠೋರವಾಗಿ ವರ್ತಿಸಿದನು. ಲಾಹೋರಿನಿಂದ ಹಿಂದಿರುಗಲು ಅನ್ಯಥೆಮಾಡಿದವನಿ ಆಕೆ ದಿಲ್ಲಿಗೆ ಬಂದ ಕೂಡಲೆ, ಅವಳನ್ನು ವಿವಾಹಮಾಡಿಕೊಡುವುದಾಗಿ ಹೇಳಿದನು. ಜೆಬುನ್ನೀಸಳಿಗೆ ಮೊದಲು ಇದನ್ನು ತಿರಸ್ಕರಿಸಬೇಕೆಂದು ಅನ್ನಿಸಿತು ಆದರೆ ತಂದೆಯ ಸ್ವಭಾವದ ಪರಿಚಯವಿದ್ದುದರಿಂದ ಕಟ್ಟಕಡೆಗೆ "ಅಪ್ಪಾ ನನ್ನ ಬಂದೇ ಒಂದು ಶರತದ ಮೇಲೆ ನೀನು ನನ್ನನ್ನು ವಿವಾಹಮಾಡಿಕೊಡು, ರಾಜಮನ್ನಣೆಗೆ ಪಾತ್ರವಾಗಿ ನನ್ನನ್ನು ವರಿಸಲು ಬಂದ ನೆರೆದವರಲ್ಲಿ ನಾನು ಯಾರನ್ನು ವರಿಸಲ ಇಚ್ಛೆಪಡುತ್ತೇನೋ ಅವನೊಡನೆ ಮಾತ್ರ ನನ್ನ ವಿವಾಹವನ್ನು ನೆರವೇರಿಸುವಂತೆ ಅನುಗ್ರಹಿಸು ಎಂದು ತಂದೆಯೊಡನೆ ಬೇಡಿಕೊಂಡಳು

'ಸ್ವಯಂವರವು ಹಿಂದೆಯೆ ಪದ್ಧತಿಯಾಗಿತ್ತು ಆಗಬಹುದು, ನನ್ನ ವಿರೋಧವೇನು?'' ಎಂದನೇ ಅವರಂಗಜೇಬನು ಅಲ್ಲಿಂದ ಹೊರಟು ಹೋದನು.

ಜೆಬುನ್ನಿಸಳು ಬಹಳ ಗುಪ್ತವಾಗಿ ಈ ವಿಷಯವನ್ನು ಅಖಿಲ್‌ಖಾನನಿಗೆ ತಿಳಿಸಿದಳು. ಮಾತ್ರವಲ್ಲದೆ, ತನ್ನಿಚ್ಛೆಯವನನ್ನು ವರಿಸಲು ಸ್ವಯಂವರಕ್ಕೆ ತಂದೆಯು ಸಮ್ಮತಿಸಿರುವುದಾಗಿಯೂ ಅಖಿಲಖಾನನು ಆ ದಿನ ಬರಬೇಕಾಗಿಯೂ, ಆತನನ್ನೇ ಖಂಡಿತ ತಾನು ವರಿಸುವುದಾಗಿಯೂ ತಿಳಿಸಿದ್ದಳು.

ಜೆಬುನ್ನೀಸಳ ಈ ಗುಪ್ತ ಸಂದೇಶವು ಧೂರ್ತನಾದ ಅವರಂಗಜೇಬನಿಗೆ ಹೇಗೊ ತಿಳಿಯಿತು ಅವಳನ್ನು ಮದುವೆಯಾಗಬೇಕೆಂದು ಹಾತೊರೆಯುತಿದ್ದ ಒಬ್ಬ ತರುಣನ ಮೂಲಕ್ಕ ಈ ರೀತಿ ಅಖಿಲಖಾನನಿಗೆ ಬರೆಯುವಂತೆ ಹೇಳಿದನು –

"ದಿಲ್ಲಿಗೆ ಬಾರದಿರು, ನಿನ್ನ ಮತ್ತು ರಾಜಕುಮಾರಿ ಜೆಬುನ್ನೀಸಳ ಗುಪ್ತ ವ್ಯವಹಾರ ವಿಷಯವನ್ನು ಬಾದಶಹನು ತಿಳಿದಿದ್ದಾನೆ ನೀನು ಬಂದಲ್ಲಿ, ನಿನ್ನ ಮರಣವು ಖಂಡಿತ"–

ಪ್ರೇಯಸಿಯ ಆಹ್ವಾನ ಪತ್ರವನ್ನೂ, ಈ ಎಚ್ಚರಿಕೆಯ ಕಾಗದವನ್ನೂ ನೋಡಿ, ಅಖಿಲ ಖಾನನಿಗೆ ಮೊದಲು ಏನು ಮಾಡುವುದೆಂದು ತಿಳಿಯಲಿಲ್ಲ. ಕಟ್ಟಕಡೆಗೆ ಬಾದಶಹನ ಕೋಪಾಗ್ನಿಯನ್ನು, ಯಾವ ರೀತಿಯಿಂದಲಾದರೂ ಶಮಿಸುವ ದಾರಿಯಿಲ್ಲವೆಂದು ತಿಳಿದು, ತನ್ನ

[೧೭ನೇ ಪುಟವನ್ನು ನೋಡಿರಿ]

ಮದ್ರಾಸು ಮಂತ್ರಿಮಂಡಲ

ಮಾನ್ಯ ಶ್ರೀ. ಗೋಪಾಲ ರೆಡ್ಡಿ
[ಕಾಂಗ್ರೆಸು ಸರಕಾರದ ಧ್ಯೇಯದ ಕುರಿತು]

"ಕಾಂಗ್ರೆಸು ಅಧಿಕಾರಕ್ಕೆ ಬಂದ ಕೇವಲ ಎರಡೇ ವರ್ಷಗಳಲ್ಲಿ, ಹಿಂದೆ ರಾಷ್ಟ್ರದ ಸ್ವಾತಂತ್ರ್ಯ ಸಮರಕ್ಕಾಗಿ, ಅಧಿಕಾರಗಳನ್ನು, ಕೆಲಸಗಳನ್ನು ಬಿಟ್ಟು ಹಲವರು ತಿರುಗಿ ಕೆಲಸದಲ್ಲಿ ಸೇರುವಂತೆ ಮಾಡಿದೆ. ನೂರಾರು ಮಂದಿ ರಾಜಕೀಯ ಕೈದಿಗಳು ಸೆರೆಮನೆಗಳಿಂದ ಬಂಧಮುಕ್ತರಾಗಿ ಬಂದಿದ್ದಾರೆ. ಗಾಂಧಿಟೊಪ್ಪಿಯ ಮೇಲಿದ್ದ ನಿಷೇಧ ತೆಗೆದು ಹಾಕಲಾಗಿದೆ. ನಮ್ಮ ರಾಷ್ಟ್ರೀಯ ತ್ರಿವರ್ಣರಂಜಿತ ಪತಾಕೆಯು ಸರ್ವತ್ರ ನಿರ್ಭಯವಾಗಿ ಹಾರಾಡುವಂತಾಗಿದೆ".

"ರಾಷ್ಟ್ರದ ಸ್ವಾತಂತ್ರ್ಯದ ಸಮರದಲ್ಲಿ ದುಡಿದ ನಾಗರಿಕರಿಗೆ ಮಾತ್ರ ಅಲ್ಲದಿರುವ ಊರಿಗೆ ಕಾಂಗ್ರೆಸು ಅಧಿಕಾರದಲ್ಲಿರುವದು ಖಂಡಿತಾಗಿಯೂ ಉಪಕಾರವಾಗಬೇಕಾಗಿದೆ; ಕಾಂಗ್ರೆಸು ಅಂತಹ ಕಾರ್ಯಗಳ ಕಡೆಗೆ ಗಮನಿಸುತ್ತದೆ, ಆದರೆ ಅವಸರದಿಂದ ಎಲ್ಲಾ ಕಾರ್ಯಗಳನ್ನು ಒಮ್ಮೆಗೇ ಕೊನೆಗಾಣಿಸುವುದು ಸಾಧ್ಯವಾಗಲಾರದು. ಹಾಗಾಗಿ ಮುಂದಿನ ದಿನಗಳಲ್ಲಿ ಅವುಗಳು ಆಗಲಿರುವವೆಂದು ಜನರು ವಿಶ್ವಾಸ ತಳೆದಿರಬೇಕು."

"ಕಾಂಗ್ರೆಸಿನ ಪರವಾಗಿ ಹಲವು ಕಡೆಗಳಲ್ಲಿ ಸ್ಥಳೀಕ ಸಂಸ್ಥೆಗಳಿಗೆ ಪ್ರತಿಸ್ಪರ್ಧಿಗಳಿಲ್ಲದೆ, ಜನರು ಬರುತ್ತಿರುವುದು ಸಂತೋಷಕರವಾಗಿದೆ. ಆದರೆ ಹಾಗೆ ಚುನಾಯಿತರಾಗಿ ಬಂದವರು ನಾಗರಿಕರ ಸೇವೆಯನ್ನು ಮಾಡಲು ಬದ್ಧಕಂಕಣರಾಗಿರಬೇಕಾದುದು ಅವರ ಕರ್ತವ್ಯವಾಗಿರುತ್ತದೆ. ಪಂಚಾಯತ ಬೋರ್ಡುಗಳಲ್ಲಿ ಅನೇಕ ರೀತಿಯಿಂದ ಜನಹಿತವನ್ನು ಮಾಡಬಹುದಾಗಿದೆ. ಅದರ ಉತ್ಪತ್ತಿಯನ್ನು ಹೆಚ್ಚು ಮಾಡಿ ಆ ಉತ್ಪತ್ತಿಯಿಂದ ಸಾರ್ವಜನಿಕ ಹಿತದ ಹಲವಾರು ಕಾರ್ಯಗಳನ್ನು ಕೈಕೊಳ್ಳಬೇಕಾಗಿದೆ" ಹೀಗೆಂದು ಡಿರಲಾ ಪಂಚಾಯತ ಬೋರ್ಡಿನ ಕಟ್ಟಡದಲ್ಲಿ ಧ್ವಜಾರೋಹಣ ಮಾಡಿದಾಗ ಭಾಷಣವಿತ್ತರು.

ಮಾನ್ಯ ಡಾ। ರಾಜನ್
[ಹಿಂದೀಯ ಹೆಂಗುಸರ ಹೆರಿಗೆಯನ್ನು ಉದ್ದೇಶಿಸಿ]

"ಹೆರಿಗೆಯ ಕೆಲದಿನಗಳ ಹಿಂದೆಯೇ ತಾಯಿಯ ಕುರಿತು ಜಾಗ್ರತೆಕೊಳ್ಳಬೇಕಾದ ವಿಷಯವನ್ನು ಜನರು ತಿಳಿದಿಲ್ಲ. ಹೆರಿಗೆಯ ಕೆಲ ತಿಂಗಳ ಮೊದಲೇ ಪುತ್ರಿಯರು ತಾಯಿಮನೆಗೆ ಹೋಗುವ ವಿಷಯವು ಬಹಳ ಉತ್ತಮವಾದ ಪದ್ಧತಿಯಾಗಿತ್ತು. ಆದರೆ ಆಧುನಿಕ ನಾಗರಿಕತೆಯ ಕಾಲದಲ್ಲಿ ಅದು ಇಲ್ಲದಾಗಿದೆ. ಹೀಗೆ ಕೆಲಸ ಮಾಡುವ ಹೆಂಗುಸರ ವಿಷಯದಲ್ಲಿ ಹೆರಿಗೆಯ ಮೊದಲು ಮಾಡುವ ಜಾಗ್ರತೆಯಿಂದ ಅನೇಕ ತೊಂದರೆಗಳು ತಪ್ಪುತ್ತವೆ. ಹಲವು ಸಲ ಗರ್ಭಿಣಿಯರು ಬಹಳ ಕಡೆಯ ಕಾಲದಲ್ಲಿ ಮಾತ್ರ ಅನುಭವಸ್ಥರಾದ ಡಾಕ್ಟರ ಬಳಿಗೆ ಹೋಗುತ್ತಾರೆ ಹಲವು ಸಲ, ಅವರ ಆಸ್ಪತ್ರೆಗೆ ಒಯ್ಯುವುದರೊಳಗೆ ಆಗಲೇ ಮಾಡಿದ್ದ ಅಜಾಗ್ರತೆಯಿಂದ ಗರ್ಭಾಶಯದ ರೋಗವು ಅಂಟಿಕೊಂಡಿರುತ್ತವೆ. ಇಂತಹ ಅಜಾಗ್ರತೆ ಮತ್ತು ನಿರ್ಮಲವಿಲ್ಲದ ಹೆರಿಗೆಯ ಅಭ್ಯಾಸದ ಮೂಲಕವಾಗಿ, ಹಿಂದೂದೇಶದಲ್ಲಿ ಪ್ರಸವಕಾಲದಲ್ಲಿ ಹೆಂಗುಸರ ಮರಣಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದನ್ನು ತಪ್ಪಿಸಲು ಹೆರುವ ಸಮಯಕ್ಕಿಂತ ಮೊದಲು ಗರ್ಭಾಶಯದ ನೈರ್ಮಲ್ಯದ ವಿಷಯ ಜಾಗ್ರತೆ ತೆಕ್ಕೊಳ್ಳುವುದೇ ಮುಖ್ಯವಾಗಿದೆ. ಹೀಗೆ ಜಾಗ್ರತೆ ತೆಕ್ಕೊಳ್ಳುವುದರಿಂದ, ಎಷ್ಟೋ ಗರ್ಭಿಣಿಯರ ಮರಣವು ಕಡಿಮೆಯಾಗಿದೆ. ಡಾಕ್ಟರರಿಗೂ ಈಗ ಆ ವಿಷಯದಲ್ಲಿ ಬೇಕಾದ ಶಿಕ್ಷಣದ ವಿಷಯವು ಕಲಿಸಲ್ಪಡುತ್ತದೆ."

"ಇನ್ನು ಮುಂದಕ್ಕೆ ಹೆರಿಗೆಯ ಕೆಲಸದ ವಿಷಯದಲ್ಲಿ ಮೂರು ಮುಖ್ಯ ವಿಷಯಗಳ ಕಡೆಗೆ ಗಮನಕೊಡುವಂತೆ ಮಾಡಲಾಗುವದು. ಮೊದಲನೆಯದಾಗಿ ನೋವು ಬರುವುದಕ್ಕಿಂತ ಮೊದಲು ಮಾಡಬೇಕಾದ ಜಾಗ್ರತೆ ನಿಜವಾದ ಹೆರುವ ಸಮಯದಲ್ಲಿ ತೆಕ್ಕೊಳ್ಳಬೇಕಾದ ಜಾಗ್ರತೆ, ಆ ಮೇಲೆ ಹೆರಿಗೆಯ ನೋವು ಇಮ್ಮಡಿಯಾಗುವ ಸ್ಥಿತಿಯಲ್ಲಿ, ಮಗುವನ್ನು ತಾಯಿಯ ಉಪಚರಿಸುವುದರಿಂದ ಆಗುವ ಆರ್ಥಿಕ ದೌರ್ಬಲ್ಯವನ್ನು ನಿವಾರಿಸುವ ಸೂಚನೆಗಳು. ಹೀಗೆ ತೆಕ್ಕೊಂಡ ಜಾಗ್ರತೆಯ ಪರಿಣಾಮವಾಗಿ, ಯೂರೋಪಿನಲ್ಲಿ ಪ್ರಸವಕಾಲದ ಮರಣವು, ಸಾವಿರಕ್ಕೆ ೨೨ರಂತಿದ್ದದು, ಕಳೆದ ೨೫ ವರ್ಷಗಳಿಂದ ಈಗ ಕೇವಲ ಸಾವಿರಕ್ಕೆ ಮೂರರಂತೆ ಮಾತ್ರ ಇರುತ್ತದೆ. ಪ್ರಪಂಚದ ಒಂದು ಭಾಗದಲ್ಲಿ ಅಂತಹ ಪರಿಣಾಮವು ಆಗುವುದಿದ್ದ ಪಕ್ಷದಲ್ಲಿ ಇನ್ನೊಂದು ಕಡೆಯಲ್ಲಿಯೂ ಆಗುವುದು ಸಾಧ್ಯವಿರುತ್ತದೆ. ಆದುದರಿಂದ ಇಲ್ಲಿಯೂ ಅದನ್ನು ಖಂಡಿತವಾದ ನಿರ್ಧಾರದಿಂದ ಕೈಕೊಳ್ಳಬೇಕಾಗಿದೆ. ಹಾಗಾಗಿ ಹೆರಿಗೆಯ ಆಸ್ಪತ್ರೆಗಳು ಊರಲ್ಲಿ ಎಲ್ಲಾ ಕಡೆಯಲ್ಲಿಯೂ ಆಗಬೇಕಾಗಿದೆ. ಇದರಿಂದ ಹೆಚ್ಚಾಗಿ ಬಡ ತಾಯಂದರ ಪ್ರಾಣವು ಉಳಿಯುವುದು" ಹೀಗೆಂದು ಮಾನ್ಯ ಡಾ। ರಾಜನರವರು ತಿರುಚಿನಾಪಳ್ಳಿಯ ಹೆರಿಗೆಯ ಆಸ್ಪತ್ರೆಯ ಉದ್ಘಾಟನೆಯ ಸಮಾರಂಭದಂದು ಹೇಳಿದರು.

ಪ್ರಧಾನ ಮಂತ್ರಿ ರಾಜಾಜಿ
[ಕಾಂಗ್ರೆಸಿಗೆ ವಿಧೇಯರಾಗಿರಬೇಕೆಂದು]

'ಕಾಂಗ್ರೆಸಿನ ಕೆಲವು ಕಾರ್ಯಗಳ ವಿಷಯದಲ್ಲಿ ಅದರಲ್ಲಿರುವ ಸದಸ್ಯರಿಗೆ ಅಭಿಪ್ರಾಯ ಭೇದವಿರಬಹುದು. ಆದರೆ ಇಂದು ಊರ್ಜಿತಗೊಂಡು ಬೆಳೆಯುತ್ತಿರುವ ಕಾಂಗ್ರೆಸು ಸಂಸ್ಥೆಯನ್ನು ಇಂದಿನ ವೈಷಮ್ಯದಿಂದ ದುರ್ಬಲ ಮಾಡಬೇಡಿ. ಕಾಂಗ್ರೆಸಿನ ದ್ವಾರವು ಎಲ್ಲರಿಗೂ ಮುಕ್ತವಾಗಿದೆ, ಅದರಲ್ಲಿ ಅಧಿಕಾರದಲ್ಲಿ ಬರುವುದು, ಸರಕಾರದ ಆಡಳಿತೆಯಲ್ಲಿ ಸೇರುವುದು, ಇತ್ಯಾದಿಯಾಗಿ ಸುಖಲಾಲಸೆಯಿಂದ ಕಾಂಗ್ರೆಸನ್ನು ಸೇರಬೇಡಿ. ಇದರಲ್ಲಿ ಸೇರುವವರು ನಾಡಿನ ಸೇವೆಮಾಡಬೇಕೆಂಬ ಮನಸ್ಸಿನಿಂದ ಸೇರಬೇಕು ನಮ್ಮ ಕಾಂಗ್ರೆಸಿನ ಇಂದಿನ ವಿಷಮತೆಯು, ಈಗಾಗಲೇ ನಿರ್ನಾಮ ಹೊಂದುತ್ತಿರುವ ಫಾರ್ವರ್ಡ್ ಬ್ಲಾಕಲ್ಲ ಗಾಂಧಿಜಿಯವರು ತಾವು ಇತ್ತೀಚೆಗೆ ಎತ್ತಿ ತೋರಿಸಿದ, ಕಾಂಗ್ರೆಸಿನ ಒಳಗಿರುವ ಕೊಳಕುಗಳೇ ಕಾರಣವಾಗಿವೆ. ಕಾಂಗ್ರೆಸಿನಂತಹ ಸಂಸ್ಥೆಯಲ್ಲಿ ಐಕ್ಯತೆ, ಶಿಸ್ತು ಅವಶ್ಯವಾಗಿರಬೇಕು. ರಾಷ್ಟ್ರದ ಹಿತಕ್ಕಾಗಿ ನಾವು ಮಹಾತ್ಮರನ್ನು ಅನುಸರಿಸಬೇಕು. ಮಹಾತ್ಮರನ್ನು ಹಿಂಬಾಲಿಸುವುದು ಕಷ್ಟ. ಆದರೆ ನಮ್ಮ ಇಂದಿನ ಕಾರ್ಯದ ಜಯಕ್ಕೆ ಅವರನ್ನು ಅನುಸರಿಸದೆ ರಾಷ್ಟ್ರಕ್ಕೆ ಬೇರೆ ಉಪಾಯವಿಲ್ಲ. ಫಾರ್ವರ್ಡ್ ಬ್ಲಾಕ್ ಇಂದು ದುರ್ಬಲವಾಗಿರುವ ಕಾರಣವೆಂದರೆ ನಿಜವಾಗಿ ಕಾಂಗ್ರೆಸಿಗೆ ಅದೊಂದು ತಡೆಯಾಗಿದೆ. ಕಾಂಗ್ರೆಸು 'ಹೆಚ್ಚು ಸ್ವಾರ್ಥತ್ಯಾಗ ಪರಿಶ್ರಮಗಳಿಂದ ಸ್ಥಾಪಿತವಾದ ಸಂಸ್ಥೆ! ಕಾಂಗ್ರೆಸನ್ನು ಬಲಪಡಿಸಲು ಕಾಂಗ್ರೆಸು ಶುದ್ಧೀಕರಣವಾಗಬೇಕು ಕಾಂಗ್ರೆಸು ಭಾರತದ ಜನತೆಯ ಪ್ರತಿನಿಧಿಯೆಂಬುದನ್ನು ನೆನಸಿಡಬೇಕು. ಹಾಗಾಗಿ ಕಾಂಗ್ರೆಸಿಗೆ ಎದುರಾಡಿ ಹೆಚ್ಚಿನದನ್ನು ಮಾಡುವೆವೆಂದು ಹೇಳುವವರು ದೇಶದ ಅಹಿತವನ್ನೇ ಸಾಧಿಸುತ್ತಿರುವರೆಂದು ತಿಳಿದಿರಲಿ' ಹೀಗೆಂದು ಮದ್ರಾಸಿನ ಸಾರ್ವಜನಿಕ ಭಾಷಣವೊಂದರಲ್ಲಿ ಪ್ರಧಾನ ಮಂತ್ರಿ ರಾಜಾಜಿಯವರು ಹೇಳಿದರು

(ಪ್ರಾಯಸ್ಥರ ಶಿಕ್ಷಣದ ಕುರಿತು)

'ಯಾವನೊಬ್ಬ ವಿದ್ಯಾವಂತನಾದರೂ ಎರಡು ತಿಂಗಳ ಅವಧಿಯಲ್ಲಿ ಓದಲು ಬರೆಯಲು ಯಾರಿಗೂ ಕಲಿಸಬಹುದು ಸಣ್ಣ ಹುಡುಗರಿಗೆ ಕಲಿಸುವ ವಿಷಯದಲ್ಲಿ ಹೆಚ್ಚಿನ ಸೇವೆಯಿಲ. ನಾವಿಂದು ಪ್ರಾಯ ಒಂದವರಿಗೆ ಬುದ್ಧಿ ಬೆಳೆದವರಿಗೆ ಕಲಿಸಬೇಕು. ಹಾಗಾಗಿ ಹುಡುಗರಿಗೆ ಕಲಿಸುವ ಕ್ರಮಕ್ಕಿಂತ ಪ್ರಾಯಸ್ಥರಿಗೆ ಕಲಿಸುವ ಕ್ರಮವು ಬೇರೆಯಾಗಿರಬೇಕು. ಪ್ರಾಯ ಬಂದವರಿಗೆ ಕಲಿಸುವುದು ಹುಡುಗರಿಗೆ ಕಲಿಸುವುದಕ್ಕಿಂತ ಸುಲಭ ನಿದರ್ಶನಾರ್ಥವಾಗಿ ನಾನೇ ಆ ಬಗ್ಗೆ ಒಂದು ಪುಸ್ತಕವನ್ನು ಬರೆದಿರುವೆನು. ಆ ಪುಸ್ತಕದ ಸಹಾಯದಿಂದ ತಮಿಳನ್ನು ಕೇವಲ ಎರಡು ತಿಂಗಳ ಅವಧಿಯಲ್ಲಿ ಓದಲು ಬರೆಯಲು ಕಲಿಯಬಹುದೆಂದು ನಾನು ನಂಬುತ್ತೇನೆ ನಾನು ಒಬ್ಬ ಮದ್ದುಗಾರನಂತೆ ನನ್ನ ಪುಸ್ತಕದ ಜಾಹೀರಾತು ಮಾಡುತ್ತೇನೆ ಹಾಗ ಮಾಡಿದ್ದು ಇದೇ ಮೊದಲನೆಯ ಸಲ, ಅದಕ್ಕೆ ಕಾರಣವೆಂದರೆ, ಇಲ್ಲಿ ನೆರೆದಿರುವ ೬೦೦, ೭೦೦ ಮಂದಿ ವಿದ್ಯಾರ್ಥಿಗಳ ಮುಂದಲ್ಲಿಯೂ ಅಧ್ಯಾಪಕನಿಗಿರುವ ಯೋಗ್ಯತೆಯು ಇದೆ, ಅವರು ಇಡೀ ದೇಶದಲ್ಲಿ ೬೦೦, ೭೦೦ ಕೇಂದ್ರಗಳನ್ನು ಸ್ಥಾಪಿಸಿ ನಾಡಿನಿಂದ ನಿರಕ್ಷರತೆಯನ್ನು ಇಲ್ಲದಂತೆ ಮಾಡಬಹುದು

'ಆದರೆ ಪ್ರತಿಯೊಬ್ಬನೂ ಶಾಲೆಗಳನ್ನು ಸ್ಥಾಪಿಸಿ ಹಲವರನ್ನು ಕ್ರೋಡಿ ಹಾಕಿ ಕಲಿಸಬೇಕೆಂದೂ, ಹಾಗೆ ಎಲ್ಲರಿಗೂ ಸೌಕರ್ಯವುಂಟೆಂದೂ ನಾನು ತಿಳಿಯುವುದಿಲ್ಲ. ಆದರೆ ಪ್ರತಿಯೊಬ್ಬನೂ ಒಬ್ಬ ನಿರಕ್ಷರನಿಗಾದರೂ ಕಲಿಸಬಹುದು. ತಾನು ಕಲಿತದನ್ನು ಅವನಿಗೆ ತಿಳಿಸಿ ತಾನು ಅಭಿಮಾನಪಡಬೇಕು. ಹೀಗೆ ನಿರಕ್ಷರತೆಯು ಪರಿಹಾರವಾದರೂ ಅದ್ಭುತವಾಗಿ ನಮ್ಮ ದೇಶವು ಅಭಿವೃದ್ಧಿ ಹೊಂದುವುದು.' ಹೀಗೆಂದು ಮದ್ರಾಸಿನ ಅಮೇರಿಕನ್ ಕಾಲೇಜಿನ ವಿದ್ಯಾರ್ಥಿಗಳಿಗೆ ಭಾಷಣವೀಯುತ್ತಾ ರಾಜಾಜಿಯವರು ಹೇಳಿದರು.

ಅಂತರೇಂದ್ರಿಯದ ಶುದ್ಧಿಗೆ

ಹೊಸ ಇಕೊನೊಮಿ ಟಿನ್ನುಗಳಲ್ಲಿರುವ ಎಂಡ್ರೂಸ್ ಲವಣವು ನಿಮ್ಮ ದೇಹದ ಅಂತರೇಂದ್ರಿಯಗಳನ್ನು ಶುಚಿಗೊಳಿಸಿ ಉತ್ತಮವಾದ ಆರೋಗ್ಯವನ್ನುಂಟುಮಾಡುತ್ತದೆ

ನೀವು ಆಲಸ್ಯದಿಂದ ಒಳಲಿಯುವಿರಾದರೆ ಯಾವಾಗಲೂ ಒಂದು ಗ್ಲಾಸು ಎಂಡ್ರೂಸ್ ಲವಣವನ್ನು ಸೇವಿಸಿದಲ್ಲಿ ಅದು ನಿಮ್ಮ ಅಂತರೇಂದ್ರಿಯಗಳನ್ನು ಶುಚಿಗೊಳಿಸಿ ನಿಮಗೆ ಆರೋಗ್ಯವನ್ನೂ ನವಚೇತನವನ್ನೂ ಉಂಟುಮಾಡುತ್ತದೆ. ನಿಮ್ಮ ಆರೋಗ್ಯವು ಒಳ್ಳೆದಾಗಿರುವುದಾದರೆ ಉಕ್ಕಿಬರುವ ಗುಣವುಳ್ಳ ಈ ಎಂಡ್ರೂಸ್ ಲವಣವನ್ನು ಸೇವಿಸಿ ಅದನ್ನು ಕಾಪಾಡಿರಿ

ಎಂಡ್ರೂಸ್ ಲವಣವು ಈಗ ಇಕೊನೊಮಿ ಟಿನ್ನುಗಳಲ್ಲಿ ಮಾರಲ್ಪಡುತ್ತದೆ (ದೊಡ್ಡದು ರೂ 1–4–0 ಸಾಧಾರಣದ್ದು ಆಣೆ 11) ಹಳೇಯ ಬಾಟ್ಲಿಗಳಿಗಿಂತಲೂ ಬೆಲೆಯಲ್ಲಿ ಕಡಿಮೆ ಎಂಡ್ರೂಸ್ ಟಿನ್ನುಗಳಲ್ಲಿ ಉತ್ತಮ ಆದರೆ ನಿಮಗೆ ಇಷ್ಟರ ವರೆಗೆ ಚಿರ ಪರಿಚಿತವಾದ ಲವಣವು ಬಾಟ್ಲಿಗಳಲ್ಲಿಯೂ ಮಾರಲ್ಪಡುತ್ತದೆ.

ಕೊಂಡುಕೊಳ್ಳಿರಿ

782

ANDREWS
LIVER SALT

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ: ಜಮ್ಮಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ

ಲಿವರ್ ಮತ್ತು ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪುರ, ಮದ್ರಾಸು.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಪ್ರಕೃತಿಯು ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಡಮಾಹಿಮ, ಬಾನೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪–೦–೦ ವಿ. ಪಿ. ಖ

ವಿಳಾಸ:– ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.

ಗಾಂಧಿಜಿಯವರ ಸಂದೇಶ

ಹರಿಜನ ಸೇವಕರ ಕರ್ತವ್ಯ

ದೇವಾಲಯದೊಳಗೆ ಹರಿಜನರು ಪ್ರವೇಶವಾಗುವುದೆಂದರೆ, ಅವರ ಜೀವನದಲ್ಲಿ ಅದು ಪ್ರಕೃತಿ ಸಹಜವಾಗಿ ಆಗುವ ಉದ್ಧಾರವೆಂಬಂತೆ ನಡೆಯಬೇಕು ' ಹೀಗೆಂದು ಗಾಂಧಿಜಿಯವರು 'ಹರಿಜನ'ದಲ್ಲಿ ತಂಜಾವೂರಿನ ದೇವಾಲಯ ಸುಧಾರಣೆಯ ಕುರಿತು ಬರೆಯುತ್ತಾರೆ

'ತಂಜಾವೂರು ಅರಮನೆ ದೇವಾಲಯದ ಮುಖ್ಯ ಅಧಿಕಾರಿಗಳ, ವಂಶಪರಂಪರೆಯಿಂದ ಹಿರಿಯರಾಗಿ ಬಂದ ರಾಜಶ್ರೀ ರಾಜಾರಾಮ ರಾಜ ಸಾಹೇಬ್ ಇವರು. ಸುಪ್ರಸಿದ್ಧ ಶ್ರೀ ಬೃಹದೀಶ್ವರ ದೇವಾಲಯವೂ ಕೂಡಿ ತೊಂಬತ್ತು ದೇವಾಲಯಗಳು ಅವರ ಅಧಿಕಾರದಲ್ಲಿದೆ ಅವರು ಈ ದೇವಾಲಯ ಗಳನ್ನು ಹರಿಜನರಿಗೆ ಮುಕ್ತದ್ವಾರ ಮಾಡುವ ಮೂಲಕ, ಹಿಂದೂ ಧರ್ಮದ ಶುದ್ಧತೆಯ ಕಾರ್ಯದಲ್ಲಿ ನೆರವಾಗಿದ್ದಾರೆ ರಾಜಾ ಸಾಹೇಬರು ಮಾಡಿದ ಅತ್ಯಂತ ಮಹತ್ವವುಳ್ಳ ಬಹಳ ದೊಡ್ಡ ಕೆಲಸವಿದು. ಹಿಂದೂ ಧರ್ಮಕ್ಕೆ ಅಸ್ಪೃಶ್ಯತೆಯು ದೊಡ್ಡ ಕಳಂಕವೆಂದ ನಂಬುವರೆಲ್ಲರೂ ಅವರನ್ನು ಕೊಂಡಾಡುವರು ಶ್ರೀಮತಿ ರಮೇಶ್ವರೀ ನೆಹರುಗಳು ಕಳುಹಿಸಿದ ಪತ್ರಗಳ ಮುಖಾಂತರ ದಕ್ಷಿಣ ಭಾರತದಲ್ಲಿ ಹರಿಜನ ದೇವಾಲಯ ಪ್ರವೇಶದ ಕುರಿತು ಜನರು ನಿರ್ಮಳ ಹೃದಯದಿಂದ ಸಮ್ಮತಿಸಿ ಪ್ರೋತ್ಸಾಹಿಸುತ್ತಿರುವರೆಂಬ ವಿಷಯವು ನಿಜವಾಗಿಯೂ ಈ ಸುಧಾರಣೆಯು ಯಶಸ್ವಿಯಾಗುವುದೆಂಬುದನ್ನು ತಿಳಿಸುತ್ತದೆ. ಆಕೆ, ಬಹಳ ಜಾಗ್ರತೆಯಿಂದ ಪ್ರತಿಯೊಂದನ್ನು ಪರೀಕ್ಷಿಸುವ ಸ್ವಭಾವದವರು, ತಾನು ಹೇಳಿದ ಪ್ರತಿಯೊಂದು ಮಾತನ್ನೂ ಜನರು ಅತ್ಯಂತ ಶ್ರದ್ಧೆಯಿಂದ ಕೇಳುತ್ತಿರುವರೆಂದೂ, ಅದಕ್ಕಾಗಿ ಸಾವಿರಾರು ಮಂದಿ ನೆರೆದು ಕುತೂಹಲವನ್ನು ತೋರಿಸುತ್ತಿರುವರೆಂದೂ ಬರೆಯುತ್ತಾರೆ ಅವರ ಪ್ರಚಾರಕಾರ್ಯವು ಸಮರ್ಥರಾದ ಭಾಷಾಂತರಕಾರರ ಮೂಲಕ ಜನರಿಗೆ ವಿವರಿಸಲಾಗುತ್ತದೆ ಭಾಷಣವನ್ನು ಕೇಳುವ ಸಭಿಕರು, ತಮ್ಮ ಆನಂದವನ್ನು ಮುಖದಲ್ಲಿ ವ್ಯಕ್ತಪಡಿಸುತ್ತಾರೆಂದು ಅವರು ಹೇಳುತ್ತಾರೆ.

'ಇವೆಲ್ಲವೂ ಹಿಂದಿಗಿಂತ ಇಂದು ಬಹಳ ಪರಿವರ್ತನೆ ಸುಧಾರಣೆಗಳಾಗಿವೆಯೆಂಬ ವಿಷಯಗಳನ್ನು ತಿಳಿಸುವಂತಹವುಗಳಾಗಿವೆ. ಹಿಂದೂ ಸುಧಾರಕರು ಸಂಪೂರ್ಣ ತೃಪ್ತಿಗೊಳ್ಳುವುದಕ್ಕಿಂತ ಮೊದಲು, ಈಗ ಎಷ್ಟು ಕಾರ್ಯವು ಆಗಿದೆಯೋ ಅದಕ್ಕಿಂತ ಬಹುಪಾಲು ಮುಂದಕ್ಕೆ ಮಾಡತಕ್ಕದ್ದು ಉಳಿದಿರುತ್ತದೆಯೆಂದು ತಿಳಿದಿರಬೇಕು. ದೇವಾಲಯ ಪ್ರವೇಶದೊಡನೆ ದೇವಾಲಯ ಸುಧಾರಣೆಯ ವಿಷಯವೂ ಜೊತೆಯಿಂದಲೇ ಆಗಬೇಕಾಗಿದೆ. ಈ ಸುಧಾರಣೆಯು ನಿಜವಾಗಿಯೂ ಹೃದಯ ಪರಿವರ್ತನೆಯಿಂದ ಆಗಿದ್ದರೆ, ಹಿಂದುಗಳಿಗೆ ಖಂಡಿತವಾಗಿ ಹಿಂದೂ ಧರ್ಮದ ಶುದ್ಧತೆಯನ್ನು ಮಾಡಬೇಕೆಂಬ ಭಾವನೆಯಿದ್ದರೆ, ಈ ಸುಧಾರಣೆಯೊಡನೆ ಎಲ್ಲಾ ವಿಧದಿಂದಲೂ ದೇವಾಲಯದ ಒಳರಂಗ ಪರಿಶುದ್ಧಿಯೂ ನಡೆಯಬೇಕು ದೇವಾಲಯಗಳು ಶುದ್ಧ ಮತ್ತು ಪೂಜ್ಯ ಸ್ಥಳಗಳೆಂಬ ಭಾವನೆಯೂ ಹೆಚ್ಚಬೇಕು ದೇವಾಲಯಗಳೊಳಗೆ ಹರಿಜನ ಪ್ರವೇಶವಾಗುವುದು ಅವರ ಜೀವನದಲ್ಲಿ ಅದ ಸಹಜ ಸುಧಾರಣೆಯೆಂದು ಅವರು ತಿಳಿಯುವಂತಾಗಬೇಕು ತಾವು ಯಾವ ಸುಧಾರಣೆಯನ್ನು ತರಲು ಬಯಸುತ್ತಾರೋ, ಆ ವಿಷಯದಲ್ಲಿ ಅಧಿಕ ಉತ್ಸಾಹದಿಂದ, ಹೆಚ್ಚು ಗಮನದಿಂದ, ಹರಿಜನ ಸೇವಕರು ಕರ್ತವ್ಯಪರರಾಗಬೇಕ, ಮಾತ್ರವಲ್ಲದೆ ಈ ಸುಧಾರಣೆಯಿಂದ ತಾವೇ ಸುಧಾರಿತರಾಗಿರುವಂಬ ಭಾವನೆಯು ಅವರಿಗಿರಬೇಕು ಈ ಕೆಲಸ ಮಾಡುವವರಲ್ಲಿ, ಈ ಕೆಲಸದಿಂದ ಪರಿಣಾಮ ಗೊಂಡವರಲ್ಲಿ ಹೀಗೆ ಜೀವನದ ಸಮತೆಯೊಂದು ಸ್ಥಾಪಿಸಲ್ಪಡಬೇಕಾಗಿದೆ

ಆಶ್ರಿತ ರಾಜ್ಯಗಳ ಕಾಂಗ್ರೆಸು ಕೆಲಸಗಾರರಿಗೆ ಉಪದೇಶ

ಆಶ್ರಿತ ರಾಜ್ಯಗಳ ಕೆಲಸಗಾರರು, ಅಖಿಲ ಭಾರತ ಆಶ್ರಿತ ರಾಜ್ಯ ಸಮ್ಮೇಳನದ ಸ್ಟೇಡಿಂಗ್ ಕಮಿಟಿಯ ಉಪದೇಶವನ್ನು ಕೇಳಿಕೊಳ್ಳಬೇಕೆಂದು ಮಹಾತ್ಮಾಜಿಯವರು ಹರಿಜನದಲ್ಲಿ ಬರೆಯುತ್ತಾರೆ —

'ಧಾಮಿಯ ರಾಣಾಸಿಗೆ ಗುಂಡು ಹಾರಿಸಿದ ವಿಷಯದಲ್ಲಿ ಅಲ್ಲಿನ ಪೊಲಿಟಿಕಲ್ ಏಜೆಂಟನು ಪ್ರಕಟಿಸಿದ ಸಂಗತಿಗಳನ್ನು, ಹಿಮಾಲಯ ಪ್ರಜಾಮಂಡಳದವರು, ಪ್ರತಿಭಟಿಸಿರುವರು ಅಲ್ಲಿನ ಸತ್ಯಾಂಶವು ಹೊರಬಿದ್ದಿಲ್ಲ, ಆದರೂ ಆ ಸತ್ಯಾಂಶದ ಕುರಿತು ಸಂಪೂರ್ಣ ಬಯಲು ಮಾಡಲು ಒಂದು ವಿಚಾರಣಾ ಸಮಿತಿಯು ಏರ್ಪಡಬೇಕಾದದ್ದು ಬಹಳ ಅಗತ್ಯವಿದೆ

ಧಾಮಿಯಿಂದ ಶಿಷ್ಟಮಂಡಳ

'ನಾನು ಡಿಲ್ಲಿಯಲ್ಲಿ ಕೆಲ ದಿನಗಳಿದ್ದಾಗ ಧಾಮಿಯ ಹಿಮಾಲಯ ಪ್ರಜಾಮಂಡಳದ ಶಿಷ್ಟಮಂಡಳದವರು ನನ್ನನ್ನು ಕಂಡು ತಮ್ಮ ವಿಷಯಗಳನ್ನು ಹೇಳಿದರು ಧಾಮಿ ಘಟನೆಯ ವಿಷಯವಾಗಿ ನಾನು ಬಹಳ ಆತುರಗೊಂಡು ವಿಚಾರಿಸುತ್ತೇನೆ ಅಂತಹ ಅನಾಹುತವನ್ನು ತಪ್ಪಿಸಲು ಸಾಧ್ಯವಿರಲಿಲ್ಲವೇ? ಆದರೆ ಹಿಮಾಲಯದ ಪ್ರಜಾಮಂಡಳದ ಕರ್ತವ್ಯದ ಕುರಿತು ತಿಳಿಸಲು ನನಗೆ ಹೇಳಲು ಮನಸ್ಸಿದ್ದರೂ ಆ ಜವಾಬ್ದಾರಿಯನ್ನು ನಾನು ವಹಿಸುವುದು ತಪ್ಪಾಗಿರುತ್ತದೆ ಹೊರಗಿನವರಿಗೆ ದೊಡ್ಡದ ಆದುದರಿಂದ ಈ ವಿಷಯದ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳಬೇಕಾಗಿಲ್ಲ? ಅಖಿಲ ಭಾರತ ಆಶ್ರಿತ ರಾಜ್ಯಗಳ ಸಮ್ಮೇಳನದ ಸ್ಟೇಂಡಿಂಗ್ ಕಮಿಟಿಯು ವಹಿಸಬೇಕಾಗಿದೆಯೆಂದು ನಾನು ತಿಳಿದೆ

'ಆಶ್ರಿತ ರಾಜ್ಯಗಳ ಸಮಸ್ಯೆಯ ವಿಷಯವು ದಿನದಿಂದ ದಿನಕ್ಕೆ ದೊಡ್ಡದಾಗುತ್ತಾ ಬರುತ್ತದೆ ಆಳುವ ಅಲ್ಲಿನ ಅರಸರೂ ತಮ್ಮ ಕೈಯಲ್ಲಿ ಕೋವಿ ಹಿಡಿದು ಗಟ್ಟಿಯಾಗಿ ನಿಂತಿದ್ದಾರೆ ಸಾರ್ವಭೌಮ ಸರಕಾರದ ಭದ್ರತೆಯಿಂದ ಅವರು ತಾವು ಭದ್ರರಾಗಿರುವೆವೆಂದು ತಿಳಿದಿದ್ದಾರೆ ಕಾಂಗ್ರೆಸು ಅವರ ದೃಷ್ಟಿಯಲ್ಲಿ ಯಾವ ಮನ್ನಣೆಯನ್ನೂ ಹೊಂದಿಲ್ಲ ಹಲವರು ಅಲ್ಲಿನ ಪ್ರಜೆಗಳ ಮನಸ್ಸಿನಲ್ಲಿ ಉಂಟಾಗಿರುವ ಕಾರ್ಯಶಕ್ತಿಯನ್ನು ಅದುಕಿ ಪುಡಿ ಮಾಡಬೇಕೆಂದು ಬಯಸುತ್ತಿದ್ದಾರೆ, ಹಾಗೆ ಮಾಡುವುದರಿಂದ ತಮ್ಮ ಪ್ರಜೆಗಳ ಧೋರಣೆಯಲ್ಲಿ ಕಾಂಗ್ರೆಸು ಅವರಿಗೆ ಯಾವ ಹಿತೋಕ್ತಿಯನ್ನೂ ಹೇಳದಂತೆ ಮಾಡಬೇಕೆಂದ ಬಯಸುತ್ತಿದ್ದಾರೆ ಆದರೆ ಕಾಂಗ್ರೆಸಿಗೆ ಅಲ್ಲಿನ ಜನರ ವಿಷಯದಲ್ಲಿ ಮಾಡಬೇಕಾದ ಕರ್ತವ್ಯವೊಂದಿದೆ ಎಂಬುದನ್ನು ಅವರು ಮರೆತಿದ್ದಾರೆ ನನಗೆ ನಿಜವಾಗಿ, ಆಶ್ರಿತ ರಾಜ್ಯ ಸಮ್ಮೇಳನದ ಘಟನೆಯ ವಿಷಯವಾಗಿ ಸರಿಯಾದ ಅನುಭವವಿಲ್ಲ ಹೇಗಿದ್ದರೂ, ಆ ಸಮ್ಮೇಳನ ಕಾಂಗ್ರೆಸಿಗೆ ಸಂಬಂಧಿಸಿದೆಯೆಂದು ನಾನು ತಿಳಿಯುತ್ತೇನೆ ಇಂದು ಆಶ್ರಿತ ರಾಜ್ಯಗಳ ಪ್ರಜೆಗಳನ್ನು ಸಾರ್ವಜನಿಕವಾಗಿ, ಯೋಗ್ಯ ರೀತಿಯಿಂದ ಮುನ್ನಡೆಸಲಿರುವ ಒಂದೇ ಒಂದು ಸಂಸ್ಥೆಯು ಅದೇ ಆಗಿದೆ ಆದುದರಿಂದ ಅಂತಹ ಸಂಸ್ಥೆಯ ಕುರಿತು ಸಿಟ್ಟುಗೊಳ್ಳುವುದು ಆಶ್ರಿತ ರಾಜ್ಯಗಳಿಗೆ ಸಮವಾಗಲಾರದು ಅವರ ಯಾವ ಕೋಪವಾದರೂ ವಿಫಲವಾಗುವುದೆಂಬುದನ್ನು ಅವರು ತಿಳಿದಿರಬೇಕು. ಅವಶ್ಯ ಬಿದ್ದ ಸಮಯದಲ್ಲಿ ಪ್ರಜೆಗಳನ್ನು ಸದುಪದೇಶವಿತ್ತು ಮುನ್ನಡೆಸುವ ತನ್ನ ಕರ್ತವ್ಯವನ್ನು ಕಾಂಗ್ರೆಸು ಮರೆಯಲಾರದು ಅಗತ್ಯಬಿದ್ದಾಗ ಆಶ್ರಿತ ರಾಜ್ಯಗಳು ಕಾಂಗ್ರೆಸಿನ ನೆರವನ್ನು ಬೇಡಿದ್ದಲ್ಲಿ, ಎಂದೂ ಅಲ್ಲಿನ ಪ್ರಜೆಗಳು ಯಾವ ರೀತಿಯಿಂದಲಾದರೂ ಕಾಂಗ್ರೆಸಿನ ರಕ್ಷಣೆಯನ್ನು ಪಡೆಯುವ ವಿಷಯದಲ್ಲಿ ವಿವಾದವಿಲ್ಲ

'ಎಲ್ಲಾ ವಿಷಯಗಳಲ್ಲಿಯೂ ಪ್ರಜೆಗಳಿಗೆ ಕಾಂಗ್ರೆಸು ಪರಿಣಾಮಕಾರಿಯಾದ ಹಿತೋಕ್ತಿಯನ್ನು ತಿಳಿಸಲು ಆಗಲಿಲ್ಲವೆನ್ನುವುದು ಹಲವು ಸಮಯ ಹೇಳವುದಕ್ಕೆ ಬರಬಾರದು ಸಾಧ್ಯವೂ ಮತ್ತು ನಿಜವಾದ ಶಿಸ್ತಿನ ದಾರಿ ನಡೆಯುವಂತೆ ಕಾಂಗ್ರೆಸು ಮಾಡಲು ಪ್ರಯತ್ನಿಸುತ್ತಿದೆ ಕಾಂಗ್ರೆಸ್ಸಿನವರೂ ತನ್ನ ಕಾರ್ಯವನ್ನು ಸರಿಯಾಗಿ ಮಾಡಬೇಕಿದ್ದರೆ ಆ ಕೆಲಸವನ್ನು ಮುನ್ನಡೆಸುವ ತನ್ನ ಕೆಲಸಗಾರರ ಯೋಗ್ಯತೆಯ ಮೇಲೆ ಹೊಂದಿಕೊಂಡಿರಬೇಕಾಗಿದೆ ಆಶ್ರಿತ ರಾಜ್ಯಗಳಲ್ಲಿ ಬಹಳ ಭಯಂಕರವಾದ ಕಾರ್ಯಗಳು ನಡೆದಿದ್ದಾವೆ, ಅದರ ಯೋಗ್ಯ ವಿಚಾರಣೆಗೂ ಆಸ್ಪದವೀಯುತ್ತಿಲ್ಲ ಸಮ್ಮೇಳನವು ನ್ಯಾಯಕ್ಕಾಗಿ ಯೋಗ್ಯ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ತಕ್ಕ ಕಳಕಳಿ ಮಾಡದಂತಾಯಿತು

ನಾನು ಕೇವಲ ಮುಂದಾಳುಗಳ ಎದುರು ದಾರಿಯನ್ನು ತೋರಿಸಿದ್ದೇನೆ ಸಮಯಕ್ಕೆ ತಕ್ಕಂತೆ ಆಗಾಗ ಬರುವ ಸಮಸ್ಯೆಗಳ ಕುರಿತು ಖಂಡಿತವಾಗಿಯೂ ಸಮ್ಮೇಳನವು ಕಾರ್ಯ ತೆಗೆದುಕೊಳ್ಳಬೇಕು. ಈ ಲೇಖನವನ್ನು ನಾನು ಆಶ್ರಿತ ರಾಜ್ಯಗಳ ಪ್ರಜೆಗಳು ನನ್ನ ಕಡೆಗೆ ಬಂದು, ನನ್ನ ಉಪದೇಶವನ್ನು ಅಪೇಕ್ಷಿಸುವುದನ್ನು ತಪ್ಪಿಸಲು, ಅವರಿಗೆ ಯೋಗ್ಯ ದಾರಿಯೊಂದನ್ನು ತೋರಿಸಲು ಬರೆದಿದ್ದೇನೆ. ಅವರು ಆಶ್ರಿತ ರಾಜ್ಯ ಸಮ್ಮೇಳನದ ಸ್ಟೇಡಿಂಗ್ ಕಮಿಟಿಯನ್ನು ಸಮೀಪಿಸಬೇಕು. ಕಾಂಗ್ರೆಸಿನ ವಿಷಯದಲ್ಲಿಯೂ ನಾನು ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸೂಚನೆಯನ್ನು ಜನರು ಅನುಸರಿಸುವ ಸಲುವಾಗಿ, ದೂರವಿರುವಂತೆ, ಆಶ್ರಿತ ರಾಜ್ಯಗಳ ಇನ್ನು ಮುಂದಿನ ಸಮಸ್ಯೆಗಳ ವಿಷಯದಲ್ಲಿಯೂ ನಾನು ವ್ಯವಹಾರವನ್ನು ಇಟ್ಟುಕೊಳ್ಳುವೆನು. ನಾನು ಯಾವುದರ ವಿಷಯದಲ್ಲಿ ಈಗಾಗಲೇ ಕೈಹಾಕಿರುವೆನೋ ಆ ಆಶ್ರಿತರಾಜ್ಯಗಳ ಕುರಿತು ಮಾತ್ರ ವ್ಯವಹಾರವನ್ನು ಪ್ರತ್ಯಕ್ಷವಾಗಿ ಮಾಡಬೇಕಾಗಿದೆ ಇನ್ನು ಮುಂದೆ ಅವರು ತಮ್ಮ ಎಲ್ಲಾ ಸಮಸ್ಯೆಗಳನ್ನೂ ಸ್ಟೇಡಿಂಗ್ ಕಮಿಟಿಯ ಮುಂದಿಡಬೇಕು

೧೨ ತಿಂಗಳ ತೀವ್ರವಾದ ಹೊಟ್ಟೆನೋವು!

ವೇದನೆಯನ್ನನುಭವಿಸಿದವನ ವಿನಂತಿ ಮೇರೆಗೆ ಪ್ರಕಟಿಸಲ್ಪಟ್ಟ ಪತ್ರ

'೧೨ ತಿಂಗಳುಗಳ ವರೆಗೆ ಹೊಟ್ಟೆ ಮತ್ತು ಪಕ್ಕೆಗಳ ಭಯಂಕರ ವೇದನೆಯಿಂದ ನಾನು ಕಷ್ಟವನ್ನನುಭವಿಸಿದಂತೆ ಇತರರು ಕಷ್ಟಪಡದೆ ಪ್ರಯೋಜನ ಹೊಂದಲೆಂದೇ ಈ ಪತ್ರವನ್ನು ಬರೆಯುತ್ತೇನೆ' ಎಂದು ಮಿ, ಜೆ ಎಸ್ ರವರು ಹೇಳುತ್ತಾರೆ

'ನಾನೊಬ್ಬ ಮೋಟಾರು ನಡೆಸುವವನು. ಆದರೆ ನನ್ನ ಕೆಲಸವನ್ನು ಸರಿಯಾಗಿ ನೆರವೇರಿಸಲು ನನ್ನಿಂದಾಗುತ್ತಿರಲಿಲ್ಲ ಇಡೀ ಜೀವಮಾನ ನಾನು ಇದರಿಂದ ನರಳುತ್ತಿರಬೇಕು ಮತ್ತು ಒಂದು ಓಪರೇಷನು ಕೂಡ ಅಗತ್ಯ ಬೀಳಬಹುದೆಂದು ಹೇಳುತ್ತಿದ್ದರು

'ಈ ವೇದನೆಯಿಂದ ಮನೆಯಲ್ಲಿರುವುದಕ್ಕೋಸ್ಕರ ನನ್ನ ಹೆಂಡತಿಯು ಕಳವಳಪಟ್ಟಳು. ನಾನು ಅನೇಕ ಔಷಧಿಗಳನ್ನು ಉಪಯೋಗಿಸಿದೆನು ಆದರೆ ಮೆಕ್ಲೀನ್ ಬ್ರಾಂಡ್ ಸ್ಟಾಮಕ್ ಪೌಡರನ್ನು ಸೇವಿಸುವ ತನಕ ಯಾವುದೂ ಪ್ರಯೋಜನಕಾರಿಯಾಗಲಿಲ್ಲ ಮೆಕ್ಲೀನ್ ಸ್ಟಾಮಕ್ ಪೌಡರಿನ ಎರಡು ಟೀ ಚಮಚೆಯಷ್ಟು ಹುಡಿಯನ್ನು ಸೇವಿಸಿದೊಡನೆ ನನ್ನ ನೋವು ಸುಧಾರಿಸತೊಡಗಿತು ಎಂದು ನಾನು ನಿಮಗೆ ದೃಢಪಡಿಸುತ್ತೇನೆ ಮೊಟ್ಟಮೊದಲು ಇದರ ಮೇಲೆ ನನಗೆ ಕೂಡ ನಂಬಿಕೆಯಿರಲಿಲ್ಲ ನನ್ನ ವೇದನೆಯೂ ಅಂತೆಯೇ ಮಾಯವಾಯಿತು ಈಗ ನನಗೆ ರಾತ್ರಿ ಚೆನ್ನಾಗಿ ನಿದ್ದೆ ಬೀಳುತ್ತಿದೆ. ನಾಲ್ಕು ತಿಂಗಳಿಂದ ಇದೆ ತೀವ್ರವಾದ ಈ ಪರಿವರ್ತನೆಯು ಆಶ್ಚರ್ಯಕರವಾದುದ!

ಹೊಟ್ಟೆನೋವನ್ನು ಗುಣಪಡಿಸುವ ಆಶ್ಚರ್ಯಕರವಾದ ಈ ಔಷಧಿಯನ್ನು ಕೊಂಡುಕೊಳ್ಳಲು ನಿಮಗೆ ಉತ್ಸಾಹವುಂಟಾಗಬೇಕೆ? ಕೊಂಡುಕೊಳ್ಳುವಾಗ ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರನ್ನೇ ವಿಚಾರಿಸಿರಿ ಬಾಟ್ಲಿಯ ಮೇಲೆ

ಎಂಬ ದಸ್ಕತೂ ಪೆಟ್ಟಿಗೆಯ ಮೇಲೆ ದಸ್ಕತೂ ಕೆಂಪು ಸೀಲೂ ಇದ್ದರೆ ಮಾತ್ರ ಅದು ಖಾತ್ರಿಯಾದುದು. ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ—ಪೆಟ್ಟಿಗೆಗಳಲ್ಲಿರುವ ಬಾಟ್ಲಿಗಳಲ್ಲಿ (ಹುಡಿಯೂ ಮಾತ್ರೆಯೂಪದಲ್ಲಿ) ದೊರೆಯುತ್ತದೆ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

K S 701

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಚೈನವನ್ನು ಸಂದರ್ಶಿಸಲು ನೆಹರುಗಳ ಸಿದ್ಧತೆ!

ದಕ್ಷಿಣ ಆಫ್ರಿಕಕ್ಕೆ ಭಾರತದ ಬೆಂಬಲ! ಜಿನ್ನಾರವರಿಗೆ ಚಿತ್ತಭ್ರಮೆ!!

ಸಿಲೋನಿನ ಹಿಂದೀಯರ ವಿಷಯ ಕಾಂಗ್ರೆಸು ರರಾವು.

ದಕ್ಷಿಣ ಆಫ್ರಿಕದ ಪ್ರಶ್ನೆ ವರ್ಕಿಂಗ್ ಕಮಿಟಿ ರರಾವು

ಕಾಂಗ್ರೆಸು ವರ್ಕಿಂಗ್ ಕಮಿಟಿಯು ತನ್ನ ಠರಾವಿನಲ್ಲಿ, ದಕ್ಷಿಣ ಆಫ್ರಿಕದ ಸತ್ಯಾಗ್ರಹಿಗಳು ಚಳವಳವನ್ನು ನಿಲ್ಲಿಸಿದಕ್ಕಾಗಿ ಅಭಿನಂದಿಸುತ್ತಾ, ಅಲ್ಲಿನ ಹಿಂದೀಯರಿಗೆ ಪ್ರಾಥಮಿಕ ಸ್ವಾತಂತ್ರ್ಯವನ್ನು ಯೂನಿಯನ್ ಸರಕಾರವು ಬೇಗನೆ ಕೊಡಬೇಕೆಂದೂ, ಇಂತಹ ಒಪ್ಪಂದವು ಆಗದಿದ್ದರೆ, ಅಲ್ಲಿನ ಸತ್ಯಾಗ್ರಹಿಗಳ ಪರವಾಗಿ ಅಖಿಲ ಭಾರತವೇ ಆಂದೋಲನದಲ್ಲಿ ನೆರವಾಗಿ ನಿಲ್ಲುವುದೆಂದೂ ವ್ಯಕ್ತಪಡಿಸಿದೆ.

ಜವಾಹಿರಲಾಲರ ಚೈನಾ ಸಂದರ್ಶನ ಸಿದ್ಧತೆಯಾಗುತ್ತಿದೆ

ಚುಂಕಿಂಗಿನಿಂದ ಪಂಡಿತ ಜವಾಹಿರಲಾಲರಿಗೆ ಈ ರೀತಿಯ ತಂತಿ ವಾರ್ತೆಯು ಬಂದಿದೆ

'ನಮ್ಮ ನ್ಯಾಯವಾದ ಹೋರಾಟಕ್ಕೆ ನೀವು ನಿಮ್ಮ ಧುರೀಣತೆಯಿಂದ ಹಿಂದೂದೇಶದ ರಾಷ್ಟ್ರೀಯ ಸಂಘದ ಮೂಲಕ ಕೊಡುವ ಎಲ್ಲಾ ಪ್ರೋತ್ಸಾಹಗಳಿಗೂ ಕೃತಜ್ಞತೆ ನಮ್ಮ ದೇಶಕ್ಕೆ ನಿಮ್ಮ ಸಂದರ್ಶನದಂದು ನಮ್ಮ ಹೃತ್ಪೂರ್ವಕ ಸ್ವಾಗತವಿದೆ'

ಚೈನದ ನೂರಾರು ಸಂಸ್ಥೆಗಳ ಪ್ರಾತಿನಿಧ್ಯದಿಂದ ಲೀಗ್ ಓಫ್ ನೇಶನ್ಸ್ ಯೂನಿಯನ್ನಿನವರು ಈ ತಂತಿಯನ್ನು ಕಳುಹಿಸಿರುತ್ತಾರೆ

ಜವಾಹಿರಲಾಲರು ಒಂದು ಪಕ್ಷದೊಳಗೆ ಚೈನಾಕ್ಕೆ ತೆರಳುದಂತಾಗಿ ತಿಳಿದಿದೆ ಚೈನಾದಲ್ಲಿ ಎರಡು ತಿಂಗಳ ವರೆಗೆ ಯಾತ್ರೆ ಮಾಡುವರು.

ಅಲ್ಲಿಗೆ ಆದಷ್ಟು ಬೇಗನೇ ಹೊರಡುವ ಸಿದ್ಧತೆಗಳು ನಡೆಯುತ್ತಿವೆ

ಫೆಡರೇಶನಿನ ಕುರಿತು ಗಾಂಧಿಜಿಯವರು ಏನನ್ನುತ್ತಾರೆ?

ಜಿನ್ನಾರ ಚಿತ್ತಭ್ರಮೆ!

ಇತ್ತೀಚೆಗೆ ಜಿನ್ನಾರವರು ಕೊಟ್ಟ ಪ್ರಕಟಣೆಯೊಂದರಲ್ಲಿ ಫೆಡರೇಶನಿನ ಕುರಿತು ಗಾಂಧಿಜಿಯವರು ಸ್ವೀಕಾರ ಧೋರಣೆಯವರೆಂದು ಮಾಡಿದ ಆರೋಪಕ್ಕೆ ಉತ್ತರ ಕೊಡುತ್ತಾ ಹರಿಜನದ ಮೆನೇಜರರಾದ ಶ್ರೀ ಕೆ ವಿ ಶುಕ್ಲಾರವರ ಇದು ಜಿನ್ನರ ಚಿತ್ತಭ್ರಮೆಯೆಂದು ಹೇಳುತ್ತಾರೆ ಅದರ ಕುರಿತು ಗಾಂಧಿಜಿಯವರೇ 'ಹರಿಜನ'ದಲ್ಲಿ ಹಿಂದೆ ಪ್ರಕಟಿಸಿದ, ಮೂರು ಪ್ರಬಂಧಗಳನ್ನು ಎತ್ತಿ ಹೇಳಿದ್ದಾರೆ

ಮೊದಲನೆಯದರಲ್ಲಿ ನೆಹರು ಮತ್ತು ಗಾಂಧಿಜಿಯವರಿಗೆ ಫೆಡರೇಶನಿನ ವಿಷಯದಲ್ಲಿ ಅಭಿಪ್ರಾಯ ಭೇದವುಂಟೆಂಬ ವಿಷಯದ ಸುಳ್ಳು ಪ್ರಚಾರವನ್ನು ಅಲ್ಲಗಳೆಯುತ್ತಾ ಗಾಂಧಿಜಿಯವರು, ಫೆಡರೇಶನನ್ನು ಭಾರತದ ಮೇಲೆ ಹೊರಿಸುವುದು ನ್ಯಾಯವಲ್ಲವೆಂಬ ಕಾಂಗ್ರೆಸಿನ ಮತ್ತು ಜವಾಹಿರಲಾಲರ ಅಭಿಮತವು ನನ್ನದೂ ಆಗಿದೆಯೆಂದಿದ್ದಾರೆ

ಎರಡನೆಯದಾಗಿ ಲಾರ್ಡ್ ಲೋಥಿಯಾನರವರ ಪತ್ರಕ್ಕೆ ಉತ್ತರ ಹೇಳುತ್ತಾ ಇಂದು ರಚಿತವಾದ ಫೆಡರೇಶನು ಜಾರಿಗೆ ಬರುವುದು ಖಂಡಿತವಾಗಿಯೂ ಸಾಧ್ಯವಿಲ್ಲವೆಂದಿದ್ದಾರೆ

ಮೂರನೆಯದಾಗಿ ನ್ಯೂಯಾರ್ಕ್ ಪತ್ರಿಕೋದ್ಯೋಗಿ ಮಿ ಸ್ಟೀಲರೊಡನೆ ಮಾಡಿದ ಮಾತುಕತೆಯ ವಿಷಯದಲ್ಲಿಯೂ ಗಾಂಧಿಜಿಯವರು ಫೆಡರೇಶನಿನ ಖಂಡನೆ ಮಾಡಿದುದನ್ನು ಹೇಳಿದ್ದಾರೆ.

ತಾನು ಈ ಪತ್ರವನ್ನು, ಫೆಡರೇಶನಿನ ವಿಷಯ ಗಾಂಧಿಜಿಯವರ ಅಭಿಪ್ರಾಯದ ಸ್ಪಷ್ಟೀಕರಣಕ್ಕಾಗಿ ಬರೆದುದು ಎಂದು ಅವರು ಹೇಳಿರುತ್ತಾರೆ

ಸಂಬಳದ ದಿನ ಹುಬ್ಬಳ್ಳಿಯಲ್ಲಿ ಮದ್ಯದಂಗಡಿಗಳುಮುಚ್ಚಲ್ಪಟ್ಟವು

ಭಾರತ ಮಿಲ್ಲಿನಲ್ಲಿ ಸಂಬಳ ಕೊಡುವ ದಿನದಂದು, ಎಲ್ಲಾ ಮದ್ಯದಂಗಡಿಗಳು ಮುಚ್ಚಬೇಕಾಗಿ, ಸರಕಾರೀ ಹುಕುಮಿನ ಪ್ರಕಾರ ಎಲ್ಲಾ ಮದ್ಯದಂಗಡಿಗಳೂ ಮುಚ್ಚಲ್ಪಟ್ಟವು

ಡಾ| ಹರ್ಡೀಕರರ ಧುರೀಣತೆಯಿಂದ ಮದ್ಯಪಾನ ನಿಷೇಧ ಮೆರವಣಿಗೆಯು ಜಯಘೋಷದಿಂದ ಸಾಗಿತು.

ಮಿಲ್ಲಿನ ಅಧಿಕಾರಿಗಳೂ ಕೆಲಸಗಾರರು ಇದರಲ್ಲಿ ಭಾಗವಹಿಸಿದ್ದರು

ಗಾಂಧಿಯವರ ಮಹತ್ವ ವಾರ್ತೆ

'ಬೊಂಬಯಿಯಲ್ಲಿ ಮದ್ಯಪಾನ ನಿಷೇಧದ ವರ್ತಮಾನವನ್ನು ತಾನು ಕೇಳಿದ್ದು, ನನಗೆ ಬಂದ ಎಲ್ಲಾ ವಾರ್ತೆಗಳಿಂದಲೂ, ಮಹತ್ವದ್ದಾಗಿದೆ' ಹೀಗೆಂದು ಬೊಂಬಯಿಯ ಮದ್ಯಪಾನ ನಿಷೇಧದ ಆರಂಭವಾದ ವಾರ್ತೆಯ ಕುರಿತು, ಗಾಂಧಿಜಿಯವರು ಹೇಳುತ್ತಾರೆ

ಬೊಂಬಯಿ ಮಿಲ್ಲು ಸತ್ಯಾಗ್ರಹ

ಹೆಂಗುಸು ಕೂಲಿಗಾರರು ಮಂತ್ರಿಗಳ ಭವನದ ಮುಂದೆ ಸತ್ಯಾಗ್ರಹ ಮಾಡಿದರಷ್ಟೆ? ಅವರು ಹಾಗೆ ಮಾಡಿದ್ದು ಸರಿಯಾಗಲಿಲ್ಲವೆಂದು, ಅವರನ್ನು ಕಮ್ಯುನಿಸ್ಟ್ ಮುಖಂಡರು ತಪ್ಪು ರೀತಿಯಿಂದ ಚಳವಳ ಮಾಡುವಂತೆ ಹುರಿದುಂಬಿಸಿದರೆಂದೂ, ಮಾಸ್ಕ ಮುನ್ಶಿಯವರು ಪ್ರಕಟಿಸಿದ್ದಾರೆ!

ಈಗ ಮಿಲ್ಲಿನ ಮುಂದುಗಡೆಯಲ್ಲಿ ನಿರಂತರ ಸತ್ಯಾಗ್ರಹವು ಸ್ತ್ರೀ ಕೆಲಸಗಾರರಿಂದ ಸುರುವಾಗಿದೆ ಮಿಲ್ಲು ಕೆಲಸಗಾರರು ಹೊಸಬರನ್ನು ನೇಮಿಸಿರುವರಾಗಿ ತಿಳಿದಿದೆ

ಮಿಲ್ಲಿನ ಎದುರುಗಡೆಯಿಂದ ಕಲ್ಲು ಬಿಸಾಡಿ ಒಬ್ಬನಿಗೆ ಗಾಯವಾಗಿದೆ ಅದರ ಹಿಂದೀಯ ಮೇನೇಜರನು ಕಾರಿನಲ್ಲಿ ಬರುತ್ತಿದ್ದಾಗ ಕೆಲಸಗಾರರು ಕಡೆದರು

ಲೋರಿಯನ್ನು ನಡೆಸುವ ಕ್ಲಾರ್ಕರ ಮೇಲೂ ಕಲ್ಲು ಬಿತ್ತು ಪೋಲೀಸರ ಬಂದೋಬಸ್ತು ಸುರುವಾಗಿದೆ



ಮಹಾತ್ಮಾಜಿಯವರು ಶ್ರೀ ಪ್ಯಾರೀಲಾಲ ಮಿಸ್ ಮಾರಾಬೆನ್ ಮತ್ತು ವಿದ್ಯಾಮಂದಿರದ ಕೆಲವು ವಿದ್ಯಾರ್ಥಿಗಳೊಡನೆ ಕಳೆದ ಸೋಮವಾರ ಸೇಗಾಂವಿನಲ್ಲಿ ಸಂಜೆಯ ತಿರುಗಾಟಕ್ಕೆ ಹೊರಟು ಹೋಗುವದು

ಕೇಂದ್ರಪ್ರಾಂತದ ಮಂತ್ರಿಗಳ ವಿಚಾರಣೆ

ಕಾಂಗ್ರೆಸು ವರ್ಕಿಂಗ್ ಕಮಿಟಿ

ಕೇಂದ ಪ್ರಾಂತಿಕ ಎಸೆಂಬ್ಲಿಯ ಹನ್ನೆರಡು ಮೆಂಬರರ ವರ್ತನೆಯ ಕುರಿತು, ಅವರ ವಿವರಣೆ ಕೇಳಲು, "ಅವರು ವಾರ್ಧಾಕ್ಕೆ ಬಂದು ವರ್ಕಿಂಗ್ ಕಮಿಟಿಗೆ ವಿವರಿಸಬೇಕಾಗಿ ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಯ ಅಧ್ಯಕ್ಷರಾದ ಸರದಾರ ಪಟೇಲರು ಪತ್ರ ಬರೆದಿದ್ದರು

ಪ್ರಧಾನರಾದ ಶ್ರೀ ಶುಕ್ಲರೂ, ಕಳೆದ ಮೆಂಬರರೆಲ್ಲ ಬಂದಿದ್ದರು

ಶ್ರೀ ಭುಲಾಭಾಯಿ ದೇಸಾಯಿಯವರು ವಿಚಾರಣೆ ನಡೆಸಲು ನಿಯೋಜಿತರಾಗಿರುವರು

ಸಿಲೋನಿನ ಹಿಂದೀಯರ ಕುರಿತು ವರ್ಕಿಂಗ್ ಕಮಿಟಿ ರರಾವು

ಸಿಲೋನಿಗೆ ಕಾಂಗ್ರೆಸು ರಾಯಭಾರಿಗಳಾಗಿ ತೆರಳಿದ ನೆಹರುಗಳ ವರದಿಯಂತೆ ಸಿಲೋನ್ ಸರಕಾರವು ಅಲ್ಲಿನ ಹಿಂದೀಯರ ಬಗ್ಗೆ ಈಗಲಾದರೂ ಯಾವ ಸಹಾನುಭೂತಿಯನ್ನು ತೋರಿಸದಿರುವ ನಿಮಿತ್ತ, ವಿಷಾದನನ್ನು ವ್ಯಕ್ತಪಡಿಸುತ್ತಾ ಸಿಲೋನಿನ ಸಾಂಪತ್ತಿಕ ಅಭಿವೃದ್ಧಿಯಲ್ಲಿ ನೆರವಾದ ಹಿಂದೀಯರ ಕುರಿತು ನ್ಯಾಯವನ್ನು ಕೊಡಲು ಸಿಲೋನು ಸರಕಾರವು ಬೇಗ [illegible]

ನಿರಾವರಿ ಯೋಜನೆಗಾಗಿ ಪಂಜಾಬ್ ಸರಕಾರದ ಸಾಲ

ಹಾವೇರಿ ಮತ್ತು ಥಾಲ ಪ್ರದೇಶಗಳಲ್ಲಿ ನೀರಾವರಿಯ ಯೋಜನೆಗಾಗಿ ಪಂಜಾಬ್ ಸರಕಾರವು ಸೇಕಡಾ ೩ ಬಡ್ಡಿ ಸಲಿಗೆ ಒಪ್ಪಿಯಲ್ಲಿ ಹತ್ತು ವರ್ಷದ ಯೋಜನೆಯ [illegible] ಲಕ್ಷ ರೂಪಾಯಿಗಳ ಸಾಲ ತೆಗೆದುಕೊಳ್ಳುವುದು

ಹಾವೇರಿಯ ಯೋಜನೆಗೆ [illegible] ಲಕ್ಷ ರೂಪಾಯಿಗಳು ಥಾಲ ಯೋಜನೆಗೆ [illegible] ಲಕ್ಷ ರೂಪಾಯಿಗಳ ಹೀಗೆ ಒಟ್ಟು [illegible] ಲಕ್ಷ ರೂಪಾಯಿಗಳು

ಧಾಮಿಯಲ್ಲಿ ವಿಚಾರಣಾ ಸಮಿತಿಯ ಪ್ರಹಸನ!

ಧಾಮಿಯಲ್ಲಿ ಜನರ ಮೇಲೆ ಗುಂಡು ಹಾರಿಸಿದ ವಿಷಯದಲ್ಲಿ ಹಿಮಾಲಯ ಪ್ರಜಾಮಂಡಲ, ಗಾಂಧಿಜಿ ಮೊದಲಾದವರು ಅದರ ನ್ಯಾಯದ ವಿಚಾರಣೆಯಾಗಬೇಕೆಂದು ಹೇಳಿರುವರಷ್ಟೇ? ಆ ಪ್ರೇರಿಗೆ ಈಗ ಧಾಮಿಯರಾಣಾನು ವಿಚಾರಣಾ ಸಮಿತಿಯೊಂದನ್ನು ನೇಮಕ ಮಾಡಿದ್ದಾನೆ.

ಆದರೆ ಸಮಿತಿಯನ್ನು ನೇಮಕ ಮಾಡಿದವರು ಯಾರೂ ಕೂಡಾ ಗುಂಡುಹಾರಿಸಿದ್ದನ್ನು ಕಂಡವರಿಲ್ಲವಂತೆ! ಎಲ್ಲರೂ ರಾಣನ ಕೈಗೊಂಬೆಗಳು

ಜಯಪುರದ ಪ್ರಜೆಗಳ ಕೇಳಿಕೆ

ಸೆರೆಮನೆಯಿಂದ ಮುಕ್ತರಾಗಿ ಬಂದ ಬಜಾಜರಿಗೆ ಸಂಭ್ರಮದ ಸ್ವಾಗತವಾಯಿತು. ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಬಜಾಜರು ತಾವು ಆಶ್ರಿತ ಅರಸರ ದ್ವೇಷಿಗಳಲ್ಲವೆಂದೂ, ತಮ್ಮ ಮುಖ್ಯವಾದ ಉದ್ದೇಶವು ಅಲ್ಲಿ ಮಾನವ ನಾಗರಿಕ ಸ್ವಾತಂತ್ರ್ಯವು ಸಿಕ್ಕಬೇಕೆಂದು ಚಳವಳ ಮಾಡುವುದೆಂದೂ ಹೇಳಿದರು.

ಮುಖಂಡರ ಶಿಕ್ಷೆ

ರಾಜದ್ರೋಹಾತ್ಮಕ ಭಾಷಣವಿತ್ತರೆಂಬ ಆಪಾದನೆಯಿಂದ ಅಹ್ರಾರಿನ ಮುಖಂಡರಾದ ಮೌಲಾನಾ ಮಜಾಹರ್ ಅಲಿ ಅಜಾದ್ ಎಂ ಎಲ್ ಎ ಇವರು ಬಂಧನದಲ್ಲಿಟ್ಟಿರುವರು

ಅಮೃತಸರದಲ್ಲಿ ಭಾಷಣಕ್ಕೆ ಹೋಗಿದ್ದವರನ್ನು ಪೋಲೀಸರು ಮೋಟಾರಿನಲ್ಲಿ ಕೂತುಕೊಳ್ಳಿಸಿ ರಾವಲಪಿಂಡಿಗೆ ತಂದಿರುವರು

ಮುಸ್ಲಿಂ ದಂಪತಿಗಳ ಖೂನಿ

ಪೇಶಾವರದ ಪಾಬ್ಬಿ ಎಂಬ ಗ್ರಾಮದಲ್ಲಿ ಮುಸ್ಲಿಮರ ಮನೆಗೆ ಡಜನು ಪಠಾಣರು ನುಗ್ಗಿ ಪಿಸ್ತೂಲಿನಿಂದ ಒಂದು ತರುಣ ಮುಸ್ಲಿಂ ದಂಪತಿಗಳನ್ನು ಗುಂಡಿಕ್ಕಿ ಕೊಂದುಹಾಕಿರುವರು.

ಊಟವಾದೊಡನೆ ಆತನಲ್ಲಿ ಸಂಕಟವಾಗುತ್ತಿತ್ತು

ಕಠಿಣ ತರದ ಅಜೀರ್ಣಾವಸ್ಥೆಯು ಕ್ರುಶನ್‌ನಿಂದ ನಿವಾರಿಸಲ್ಪಟ್ಟಿತು ಈಗ ಆತನು ಹೊಸ ಮನುಷ್ಯನಾಗಿರುವನು!

ಆತನನ್ನು ಅಜೀರ್ಣಾವಸ್ಥೆಯಿಂದ ಗುಣಪಡಿಸಿದ ಚಿಕಿತ್ಸೆಯು, ಪ್ರತಿಯೊಬ್ಬರೂ ಉಪಯೋಗಿಸುವುದರಲ್ಲಿ ಉತ್ತಮವಿದೆ ಆತನ ಹೀಗೆಂದು ಬರೆದಿರುವನು

ಎರಡು ವರ್ಷಗಳ ಹಿಂದೆ ಅಜೀರ್ಣಪೀಡಿತನಾಗಿ ಹಸಿವಿಲ್ಲದವನಾಗಿ ನಾನು [illegible] ಕಠಿಣ ತರದ ನೋವನ್ನು ಅನುಭವಿಸುತ್ತಿದೆ ಊಟದ ನಂತರ ನನ್ನಲ್ಲಿ ಸಂಕಟ [illegible] ಉಂಟಾಗುತ್ತಿತ್ತು ಊಟ [illegible] ನನ್ನಲ್ಲಿ [illegible] ಹಸಿವೂ ಇರಲಿಲ್ಲ ಒಬ್ಬ ಸ್ನೇಹಿತನ ಕ್ರುಶನ್ ಲವಣ [illegible] ಉಪಯೋಗಿಸಲು [illegible] ನಾನು ಆತನ ಹೇಳಿದ ಹಾಗೆ [illegible] ಅದರ ಫಲವಾಗಿ [illegible] ನಾನು [illegible] ಕ್ರುಶನ ಲವಣಗಳನ್ನು ಸೇವಿಸಿ [illegible] ಈಗ ನಾನೊಬ್ಬ ಹೊಸ ಮನುಷ್ಯನೆಂಬ ಭಾವವು ನನ್ನಲ್ಲಿ ಉಂಟಾಗಿರುತ್ತದೆ ಇಪ್ಪತ್ತು ವರ್ಷಗಳ ಹಿಂದೆ ನಾನು ಯಾವ ಸ್ಥಿತಿಯಲ್ಲಿದ್ದೆನೋ ಅದೇ ಸ್ಥಿತಿಯ [illegible] ಹೊಂದಿರುವೆನು.

ಜೀರ್ಣರಸಗಳ ಸರಿಯಾಗಿ ಕಾರ್ಯಸದಿದ್ದರೆ ನೀವು ಸೇವಿಸಿದ ಆಹಾರದಿಂದ ಸತ್ವವು ನಿಮ್ಮ ದೇಹವನ್ನು ಸೇರದೆ, ಆಹಾರವು ನಿಮ್ಮ ಹೊಟ್ಟೆಯೊಳಗೆ ಕೊಳೆತು ಹಾನಿಕರ ವಿಷದ್ರಾವಕಗಳನ್ನು ಹೊರಡಿಸುತ್ತದೆ ಆಗ ನಿಮಗೆ ಬೇಕಾದದು ನಿಸರ್ಗದ ಟಾನಿಕ್ ಆದ ಆರು ಲವಣಗಳು

ಈ 6 ಲವಣಗಳು ನಿಮಗೆ ಕ್ರುಶನ್‌ನಲ್ಲಿ ದೊರಕುತ್ತದೆ ಅವುಗಳಲ್ಲಿ ಪ್ರತಿಯೊಂದಕ್ಕೆ ಒಂದೊಂದು ತರದ ಉಪಯೋಗವಿದೆ ಕ್ರುಶನ್ ಲವಣಗಳ ಸೇವನೆಯಿಂದ ಎಂಜಲು ಸರಿಯಾಗಿ ಉಂಟಾಗಿ ಅದರಿಂದ ಒಳ್ಳೇ ಹಸಿವೆಯು ಉಂಟಾಗುತ್ತದೆ ನಂತರ ಹೊಟ್ಟೆಯ ಜೀರ್ಣರಸಗಳು ಸರಿಯಾಗಿ ಸರಿಯುವಂತೆ ಮಾಡಿ ತಿಂದ ಆಹಾರವು ಸಂಪೂರ್ಣ ಜೀರ್ಣಸುವ ಹಾಗೆ ಮಾಡುವ ಪ್ರಭಾವವು ಕ್ರುಶನ್ನಿಗೆ ಇವೆ ನಂತರ ಈ ಲವಣಗಳಿಂದ ಕರುಳುಗಳಲ್ಲೂ ಒಂದು ತರದ ರಸವನ್ನು ಹೊರಡಿಸಿ ಹೊಟ್ಟೆಯಲಿ ಜೀರ್ಣವಾಗದ ಆಹಾರವನ್ನು ಜೀರ್ಣಗೊಳಿಸುವ ಪ್ರಭಾವವು ಕ್ರುಶನ್ನಿಗೆ ಇದೆ. ಕ್ರುಶನ್ ಲವಣಗಳು ಎಲ್ಲಾ ಬಜಾರುಗಳಲ್ಲೂ ದವಾಖಾನೆಗಳಲ್ಲೂ ದೊರಕುತ್ತದೆ



ಒಂದು ವಿಚಿತ್ರ ಜಾಹಿರಾತು

ಒಂದು ಬ್ರಿಟಿಷ್ ದಿನ ಪತ್ರಿಕೆಯಲ್ಲಿ ಹೀಗೆಂದು 'ಬೇಕಾಗಿದೆ'ಯೆಂಬ ಜಾಹೀರಾತು ಪ್ರಕಟವಾಗಿದೆ:—

ಜನರಲ್ ಸ್ಟೋರ್ಸಿನಲ್ಲಿ ಕೆಲಸಮಾಡಲು, ಒಬ್ಬ ಮೆಟ್ರಿಕ್ಯುಲೇಶನ್ ಪಾಸಾದ ಹುಡುಗ ಬೇಕಾಗಿದೆ. ಅವನು ಪಾದರಕ್ಷೆ ಮಾಡಲು ಕಲಿತಿದ್ದು; ಹಾಲು ಕರೆಯಲು ತಿಳಿದಿರುವವನು ಮತ್ತು ವಾದ್ಯದಲ್ಲಿ ಅಭ್ಯಾಸವುಳ್ಳವನ ವಿಷಯವಾಗಿ ಹೆಚ್ಚು ಗಮನ ಕೊಡಲಾಗುವುದು. ಸಿಗರೇಟ್ ಮೊದಲಾದ ಹೊಗೆ ಸೇದುವ ಅಭ್ಯಾಸ ಅವನು ಆಗಿರಬಾರದು; ಈ ಉದ್ಯೋಗವನ್ನು ಪಡೆದವನು ಬಹಳ ಅಭಿಮಾನಿಯಾಗಿದ್ದು ಇತರ ಸಾಮಾನ್ಯ ಜನರೊಡನೆ ಬೆರೆಯಲು ಬೇಸರಿಸುವದನಿರಕೂಡದು. ತೋಟಗೆ ಕೆಲಸದ ಎಲ್ಲಾ ಅನುಭವವಿರಬೇಕು. ಒಳ್ಳೆಯ ಆಟಗಾರನಾಗಿದ್ದವನು ಅದರಿ ಉತ್ತಮ. ಬೇಗ ಏಳುವ ಅಭ್ಯಾಸವಿರಬೇಕು, ಯಾವುದೇ ಕೆಲಸ ಕೊಡಲಿ ಬಹಳ ಜಾಗ್ರತೆಯಿಂದ ಅದನ್ನು ನಿರ್ವಹಿಸಬೇಕು, ಒಳ್ಳೆಯ ಆರೋಗ್ಯಕರವಾದ ವಾತಾವರಣವಿರುವಲ್ಲಿ, ಮೀನು ಹಿಡಿಯಲು, ಆಟವಾಡಲು ಸಂದರ್ಭವುಳ್ಳ ಸ್ಥಳದಲ್ಲಿ ಕೆಲಸವು ಕೊಡಲ್ಪಡುವುದು. ಆದಿತ್ಯವಾರ ಮಧ್ಯಾಹ್ನದ ಮೇಲೆ ಸವಾರಿ ಮಾಡಲು ಕುದುರೆಯು ಕೊಡಲ್ಪಡುವುದು. ಒಳ್ಳೆಯ ವ್ಯಾಪಾರ ಕೌಶಲವಿರಬೇಕು, ನಿಮ್ಮ ಸ್ವಂತ ಕೈಬರಹದಲ್ಲಿ ಫೋಟೋಗ್ರಾಫಿನೊಂದಿಗೆ, ಮೂರು ಜನ ಗೃಹಸ್ಥರ ಯೋಗ್ಯತಾ ಸರ್ಟಿಫಿಕೇಟುಗಳು ಸಹಿತ ಬರೆಯಿರಿ. ತಿಂಗಳೊಂದರ ಮೂರು ಪವನುಗಳ ಸಂಬಳ ಕೊಡಲಾಗುವುದು. ಎರಡು ಪವನು ಹತ್ತು ಶಿಲಿಂಗುಗಳನ್ನು ತೆತ್ತಲ್ಲಿ ಊಟ ಮತ್ತು ಉಳಕೊಳ್ಳುವ ಸ್ಥಳದ ಏರ್ಪಾಡು ಮಾಡಲಾಗುವುದು. ಬೋಕ್ಸ್ ನಂ . . ಒರಿಯುರಿ

ಸೈಕಲ್ ಸ್ಮಾರಕ

ನಮ್ಮ ದೇಶದಲ್ಲಿರುವ ಅಸಂಖ್ಯಾತ ಸೈಕಲುಗಳನ್ನು ಒಂದು ದಿನ ಪ್ರಥಮವಾಗಿ ಒಬ್ಬ ಆರಂಭಮಾಡಿರಬೇಕೆಂದು ನಮ್ಮ ಊಹೆ ಇದೆಯಷ್ಟೆ?

ಇದನ್ನು ರಚಿಸಿದವನು ಸ್ಕಾಟ್ಲ್ಯಾಂಡ್ ದೇಶದ ಒಬ್ಬ ಕಮ್ಮಾರ. ಆತನು ಸನ್ ೧೮೩೯ನೆಯ ವರ್ಷದಲ್ಲಿ ತಾನು ಮೊದಲಾಗಿ ಮಾಡಿದ ಸೈಕಲನ್ನು ಹತ್ತಿ ತನ್ನ ಮೂವರು ಸಹೋದರರನ್ನು ಸಂದರ್ಶಿಸಲು ಗ್ಲಾಸ್ಗೋ ಪಟ್ಟಣಕ್ಕೆ ಹೊರಟಿದ್ದನು.

"ಗಾಳಿಯಲ್ಲಿ ಸವಾರಿ ಮಾಡುವ ಮನುಷ್ಯನೊಬ್ಬನನ್ನು ನಾನು ನೋಡಿದೆ!'' ಹೀಗೆಂದು ಅವನನ್ನು ಮೊದಲಾಗಿ ಕಂಡ ಸಮಗಾರನು ಆಶ್ಚರ್ಯದಿಂದ ಹೇಳಿದನು! "ಇದು ಮನುಷ್ಯನೇ ಆದರೂ ಆತನು ಭೂತಹಿಡಿದವನಾಗಿರಬೇಕು'' ಹೀಗೆ ಅವನು ವಾದಿಸಿದ!

ಈತನ ಮನೆಯಲ್ಲಿ ಅದರ ಜನ್ಮ ದಿನೋತ್ಸವವು ಒದಗುವ ಸಪ್ಟಂಬರ ತಿಂಗಳಲ್ಲಿ ಆಚರಿಸಲ್ಪಡುವುದು. ಆ ಸ್ಮಾರಕವಾಗಿ, ಒಂದು ಲೋಹದಲ್ಲಿ ಕೆತ್ತಿದ ಆಭರಣವು ಅಲ್ಲಿ ಇಡಲ್ಪಡುವುದು.

ಈ ಮೊದಲನೆಯ ಸೈಕಲಿನ ಸಂತತಿಗಳು ಇಂದು ಅಖಿಲ ಜಗತ್ತಿನಲ್ಲಿ ೬೧,೦೦೦,೦೦೦ ಇರುವುದಾಗಿ ಬ್ರಿಟಿಷ್ ಸೈಕಲ್ ಮಾಡುವವರ ಸಂಘದವರು ತಿಳಿಸುತ್ತಾರೆ!

ಕಳೆದ ವರ್ಷ ಗ್ರೇಟ್ ಬ್ರಿಟನಿನಿಂದ ೫೭೬,೮೫೮ ಸೈಕಲುಗಳು ಹೊರಗೆ ಕಳುಹಿಸಲ್ಪಟ್ಟಿವೆ. ಅವುಗಳಲ್ಲಿ ೧೫೬,೧೬೬ ಸೈಕಲು ವಿದೇಶಗಳಲ್ಲಿಯೇ ಮಾರಾಟವಾಗಿವೆ.

ಅಂತೂ ಇದರ ಮೌಲ್ಯವು ಸುಮಾರು ೮೮೬,೩೦೬ ಪವನುಗಳಷ್ಟು!

ಜಗತ್ತಿನ ಬಹಳ ಎತ್ತರದ ರೈಲ್ವೇ

ಬ್ರಿಟಿಷ್ ಇಂಜಿನಿಯರೊಬ್ಬರು ಈಗ ಡೈಸೆಲ್ ಲೋಕಮೋಟಿವ್ ಎಂಬ ಉಗಿಬಂಡಿಯೊಂದನ್ನು ಜಗತ್ತಿನ ಬಹಳ ಎತ್ತರದ ರೈಲ್ವೇಯಲಿ ಬಿಡಲು ಸಾಹಸಪಡುವ ವಿಜಯಿಗಳಾಗಿದ್ದಾರೆ!

ಈ ಇಂಜನಿನ ಕುರಿತು ಎಲ್ಲಾ ಪರೀಕ್ಷೆಗಳನ್ನು ಮಾಡಿ ಬಹಳ ನಾಜೂಕಾಗಿರುವುದಾಗಿ ಖಂಡಿತಮಾಡಲಾಗಿದೆ. 'S' ಆಕಾರದ ಅರು ಮೈಲು ಎತ್ತರದ ಗುಡ್ಡ ಹತ್ತಿ ಇದರಲ್ಲಿ ಇಳಿದು ಬರಬಹುದಾಗಿದೆ. ಇದು ಪೆರುವಿಯನ್ ಕಾರ್ಪೊರೇಶನಿಗಾಗಿ ರಚಿತವಾಗಿದೆ. ಎಲ್ಲಿ ಸಾಧಾರಣ ಉಗಿಬಂಡಿಯು ಹೋಗಲಾರದೋ ಅಲ್ಲಿಗೆ ಇದರಿಂದ ಉಪಯೋಗವಾಗುವುದು.

ಹಿಂದಿನ ಎಂಜಿನೀಯರರೆಲ್ಲಾ ಹೀಗಿದ್ದ ಸಾಹಸ ಮಾಡುವುದು ಬಹಳ ಕಷ್ಟವೆಂದೂ, ಮಾಡಿದರೂ ಅದರ ಬೆಲೆಯನ್ನು ಹೋಲಿಸಿ ನೋಡಿದಲ್ಲಿ ಪ್ರಯೋಗಕ್ಕೆ ತರುವುದಂತೂ ಸಾಧ್ಯವಿಲ್ಲವೆಂದೂ ತಿಳಿದಿದ್ದರು!

ಎಷ್ಟು ಸಾಮಾನುಗಳನ್ನು ತುಂಬಿಸಿದರೂ ಎತ್ತರ ಪರ್ವತದ ಮೇಲೆ ಅದನ್ನು ಸಾಗಿಸುವುದು ಸಾಧ್ಯವುಂಟೆಂದು ಆ ಕೋರ್ಪರೇಶನಿನವರು ಪಂಥ ಹಾಕುತ್ತಾರೆ!

ಇಂದು ೩೩೦ ಕುದುರೆಗಳ ಶಕ್ತಿಯುಳ್ಳದ್ದಾಗಿ, ಎತ್ತರದ ಜಾಗದಲ್ಲಿ ವಾಯುವಿನ ಯಾವ ವಾತಾವರಣಕೂ ಇದಿರಾಗಿ ಮುಂದೆ ಹೋಗಲು ಸಾಧ್ಯವುಳ್ಳದ್ದಾಗಿದೆ.

ತಿಮಿಂಗಿಲ ಪರಿಷತ್ತು

ಜುಲಾಯಿ ತಿಂಗಳಲ್ಲಿ ಲಂಡನಿನಲ್ಲಿ ಆದ ತಿಮಿಂಗಿಲ ಪರಿಷತ್ತಿನಲ್ಲಿ ಅಂತರ್ರಾಷ್ಟ್ರೀಯ ದೃಷ್ಟಿಯಿಂದ ಒಂದು ಪ್ರಾಮುಖ್ಯತೆಯ ಉದ್ದೇಶಕ್ಕೂ ಇದೆ. ಹಿಂದೀ ಸಾಗರದಲ್ಲಿ ತಿಮಿಂಗಿಲಗಳು ತೆಗೆಯಲ್ಪಡುತ್ತವೆ. ಇವುಗಳ ಎಣ್ಣೆಯು ನೆಲಗಡಲೆಯ ಎಣ್ಣೆಗೆ ಹೋಗುತ್ತದೆ. ಈ ಎಣ್ಣೆಯಿಂದ ತುಂಬಾ ವ್ಯಾಪಾರ ದೃಷ್ಟಿಯು ಪ್ರಯೋಜನವಿರುತ್ತದೆ. ಮುಂದೆ ಬರಲಿರುವ ಯುದ್ಧದ ಸಂಗ್ರಹಕ್ಕಾಗಿ ಬ್ರಿಟಿಷರು ತುಂಬಾ ತಿಮಿಂಗಿಲದೆಣ್ಣೆಯನ್ನು ಸಂಗ್ರಹಿಸಿಟ್ಟಿರುವರು. ಇಂಗ್ಲೆಂಡಿಗೆ ಇಲ್ಲಿಂದ ಕಳುಹಿಸಲಾದ ರಫ್ತು ಸಾಧಾರಣ ಇಷ್ಟರ ವರೆಗೇ ೩೦೦,೯೦೦ ಟನ್ನುಗಳಷ್ಟಿದೆ. ಸಮುದ್ರದಲ್ಲಿರುವ ತಿಮಿಂಗಿಲಗಳನ್ನು ಹಿಡಿಯುವ ಕಾರ್ಯವು ಎಲ್ಲಾ ಕಡೆಗಳಿಂದಲೂ, ಭರದಿಂದ ನಡೆಯುತ್ತಿರುವಾಗ ಅಂತರ್ರಾಷ್ಟ್ರೀಯ ವ್ಯವಹಾರ ದೃಷ್ಟಿಯಿಂದ ಅದನ್ನು ಸ್ವಾಧೀನ ಪಡಿಸುವ ಕಾರ್ಯವು ಮಾಡಲ್ಪಟ್ಟಿದೆ. ಕೆಲವು ದೇಶಗಳಲ್ಲಿ ಈ ಕುರಿತು ಅಗತ್ಯದ ಕಾನೂನುಗಳು ಮಾಡಲಾಗಿವೆ. ಲಂಡನಿನಲ್ಲಿ ತಿಮಿಂಗಿಲವನ್ನು ಹಿಡಿದವರಿಗೆ ಮೂರು ತಿಂಗಳ ಶಿಕ್ಷೆಯು ವಿಧಿಸಬೇಕೆಂಬ ಕಾನೂನಾಗಿರುತ್ತದೆ.

ದೊಡ್ಡ ತಿಮಿಂಗಿಲ ಹಿಡಿವ ಹಡಗು

ಬ್ರಿಟಿಷರ ಸ್ವಾಧೀನದಲ್ಲಿರುವ ಟೆರ್ಜಿಪರ್ ಎಂಬ ಹಡಗೇ ದೊಡ್ಡ ತಿಮಿಂಗಿಲ ಹಿಡಿವ ಹಡಗಾಗಿರುತ್ತದೆ. ನೋರ್ವೆ ಜನರು ತಿಮಿಂಗಿಲ ಹಿಡಿಯುವುದರಲ್ಲಿ ಬಹಳ ನಿಪುಣರಾಗಿರುತ್ತಾರೆ. ತಿಮಿಂಗಿಲ ಹಿಡಿವ ಸಮಯದಲ್ಲಿ ೧,೦೦೦ ಪವನುಗಳಷ್ಟು ಇದರಿಂದ ಸಂಪಾದನೆಯಾಗುತ್ತದೆ.

ಲಂಡನಿನಲ್ಲಿ ಸೇರಿದ ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಜರ್ಮನಿ, ನೋರ್ವೆ, ಅಮೇರಿಕಾ, ದಕ್ಷಿಣ ಆಫ್ರಿಕಾ ನ್ಯೂಜಿಲೇಂಡುಗಳಿಂದೆಲ್ಲಾ ಜನರು ಬಂದಿರುತ್ತಾರೆ. ಈ ಸಮ್ಮೇಳನದ ಮುಖ್ಯ ಕಾರ್ಯವು ಎಂಟ್ಲಾಂಟಿಕ್ ಸಾಗರದಲ್ಲಿ ಕಳೆದ ವರ್ಷದ ಅನುಭವದಂತೆ ಸಾಧ್ಯದಾದ ತಿಮಿಂಗಿಲಗಳ ಸಂಖ್ಯಾನಿರ್ಧಾರದ ನಿಶ್ಚಯವಾಗಿತ್ತು. ಅಮೇರಿಕಾ, ಜರ್ಮನಿ, ಬ್ರಿಟನ್ ಇವುಗಳು ಈ ಸಾಗರದ ಕೆಲಭಾಗದಲ್ಲಿವೆ. ಪ್ರತಿ ತಿಮಿಂಗಿಲ ಹಿಡಿಯಬಹುದಾಗಿ ಒಪ್ಪಂದಮಾಡಿಕೊಂಡಿದ್ದವು.

ದಕ್ಷಿಣ ಆಫ್ರಿಕವು ಈ ಒಪ್ಪಂದವನ್ನು ಎಟ್ಲಾಂಟಿಕ್ ಸಾಗರದ ವಿಷಯವಾಗಿ ಒಪ್ಪಿಕೊಂಡರೂ, ಹಿಂದೂಸಾಗರದಿಂದ ಹಿಡಿಯುವುದನ್ನು ನಿಲ್ಲಿಸಲಿಲ್ಲ. ಜಪಾನು ಕೂಡಾ ಈ ಶರತ್ತಿಗೆ ಒಪ್ಪುವುದಾಗಿ ತಿಳಿದಿದೆ. ಆದರೆ ಮುಂದಕ್ಕೆ ಅಂತರರಾಷ್ಟ್ರೀಯ ಶಾಸನವೊಂದು ಮಾಡಲಾಗುವುದು. ತಿಮಿಂಗಿಲ ತೈಲದ ತಯಾರಿಗಾಗಿ ಜಪಾನಿನಲ್ಲಿ ಆರು ದೊಡ್ಡ ಕಾರ್ಖಾನೆಗಳಿವೆ.

ಜಗತ್ತಿನಲ್ಲಿ ಹೆಚ್ಚು ವೇಗವುಳ್ಳ ಕಾರು

ಜಾನಾಗಿಬ್ಸನು ಗಂಟೆಗೆ ೩೬೦ ಮೈಲುಗಳ ತೀವ್ರ ಓಡುವ ಕಾರೊಂದನ್ನು ತಯಾರಿಸುವ ಭರವಸೆಯಲ್ಲಿದ್ದಾನೆ.

ಬರುವ ಆಗಸ್ಟ್ ತಿಂಗಳಲ್ಲಿ ಈ ಕಾರು ಸಿದ್ಧವಾಗಲಿದೆ.

ಸಾಧಾರಣ ಕಾರಿನ ಗಂಟೆಗೆ ೬೦ ಮೈಲಿನ ವೇಗವು ಅದಕ್ಕೆ ೩೦೦ ಮೈಲುಗಳ ವೇಗದಂತಾಗುವುದು. ಇದು ಪ್ರತಿ ಮಿನಿಟಿಗೆ ಒಂದು ಎಕ್ಸ್‌ಪ್ರೆಸ್ ಟ್ರೈನನ್ನು ಭೂಮಿಯಿಂದ ಮೇಲೆತ್ತಬೇಕಾದಷ್ಟು ಶಕ್ತಿಯನ್ನು ಹೊಂದಿದೆ. ಒಂದು ಸೆಕುಂಡಿಗೆ ಚಕ್ರಗಳು ೮೬ ಸಲ ತಿರುಗುವವು.

ಲಂಡನಿನ "ವಿಶ್ವ ವಿದ್ಯಾಲಯ''

ಲಂಡನಿನ ವಿಶ್ವವಿದ್ಯಾಲಯದಲ್ಲಿ ೩,೭೦೮ ಮಂದಿ ವಿದೇಶೀಯ ವಿದ್ಯಾರ್ಥಿಗಳಿದ್ದಾರೆ! ಅವರಲ್ಲಿ ಹಿಂದೂದೇಶದಿಂದ ಹೋದವರು ೭೯೬ ಮಂದಿ.

ಬ್ರಿಟಿಷ್ ಸಾಮ್ರಾಜ್ಯದಲ್ಲಿ ಆರಂಭವಾದ ದೊಡ್ಡ ಯೋಜನೆಯೊಂದರ ಸಲುವಾಗಿ, ದೊಡ್ಡ ವಿಶ್ವವಿದ್ಯಾಲಯಕ್ಕೆ ನಾಲ್ಕು ಕಟ್ಟಡಗಳು ಸೇರಿಸಲ್ಪಡುವವು. ಈ ಯೋಜನೆಗೆ ಈಗಾಗಲೇ ೧,೫೧೨,೦೦೦ ಪವನುಗಳಷ್ಟು ಖರ್ಚಾಗಿದೆ. ಅಂದಾಜಿನಂತೆ ಸಾಧಾರಣವಾಗಿ ೨,೦೦೧,೦೦೦ ಪವನುಗಳಿಂದ ೩,೦೦೦,೦೦೦ ಪವನುಗಳೊಳಗಿನ ಖರ್ಚಾಗಬೇಕೆಂದು ತಿಳಿಯುತ್ತದೆ.

ಈ ಕೆಳಗಿನಂತೆ ಕಟ್ಟಡಗಳಿಗೆ ಖರ್ಚು ಅಂದಾಜಾಗಿದೆ.

	ಪವನುಗಳು
ಚರಿತ್ರಾ ಸಂಶೋಧನೆಯ ಶಾಖೆಗೆ	೭೦,೦೦೦
ವಿಶ್ವವಿದ್ಯಾಲಯದ ಭವನಕ್ಕೆ	೨೫೧,೦೦೦
ಉದ್ಯೋಗಿಗಳ ಶಿಕ್ಷಣಶಾಖೆಗೆ	೩೧,೦೦೦
ವಿದ್ಯಾರ್ಥಿಸಂಘದ ಭವನಕ್ಕೆ	೧,೭೨,೦೦೦
ವಿದ್ಯಾರ್ಥಿಗಳ ಸಾಯಂಕಾಲದ ಡಿಗ್ರಿ ಶಿಕ್ಷಣದ ಕಾಲದಲ್ಲಿ ಸಂಪಾದನೆಮಾಡುವ ಭವನದ ವೆಚ್ಚಕ್ಕೆ	೨೦೦,೦೦೦

ಪೌರ್ವಾತ್ಯ ಮತ್ತು ಆಫ್ರಿಕನ್ ಶಿಕ್ಷಣದ ಶಾಖೆಯ ಬಗ್ಗೆ ರಚಿತವಾಗುವ ಭವನಕ್ಕೆ ೧೫೦,೦೦೦ ಪವನುಗಳು ವೆಚ್ಚವಾಗಿವೆ. ಸಿನೆಟ್ ಹೌಸಿಗೆ ೩೯೨,೦೦೦ ಪವನುಗಳೂ, ವಾಚನಾಲಯದ ಶಾಖೆಗೆ ೫೧೦,೦೦೦ ಪವನುಗಳೂ, ಪವರ್ ಹೌಸಿಗೆ ೩೭,೦೦೦ ಪವನುಗಳೂ, ಸ್ಲಾವೆನಿಕ್ ಶಿಕ್ಷಣಶಾಖೆಗೆ ೮೬,೦೦೦ ಪವನುಗಳೂ, ವಿದ್ಯಾಶಿಕ್ಷಣಕ್ಕೆ ೧೫೦,೦೦೦ ಪವನುಗಳೂ ಅಂದಾಜಾಗಿದೆ.

ಇದರ ಸ್ಥಳವು ೧೧½ ಎಕ್ರೆಯಷ್ಟಿದೆ. ಈ ಕಟ್ಟಡದ ರಚನೆಗೆ ಬ್ರಿಟಿಷ್ ಸಾಮಾನುಗಳನ್ನೇ ಉಪಯೋಗಿಸಬೇಕಾಗಿ ನಿರ್ಬಂಧನೆಯಾಗಿದೆ.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.



ಈ ನಿದರ್ಶನದ ವಾಚುಗಳು ಮುರಿಯುವವೆಂಬ ಬೆದರಿಕೆಯಿಲ್ಲ

ಸಾಮಾನ್ಯ ವಾಚುಗಳು ಯಾವಾಗ್ಲೂ ಮುರಿದು ಹೋಗಲಿಕ್ಕಿಲ್ಲವೆಂದು ಹೇಳಿಕೆಸಾಧ್ಯ. ಆದರೆ 'ವೆಸ್ಟ್ ಎಂಡ್' ವಾಚುಗಳು ಮುರಿದು ಹೋಗಲಿಕ್ಕಿಲ್ಲವೆಂದು ಖಂಡಿತ ಹೇಳಬಹುದು. ಯಾಕೆಂದರೆ ಇವುಗಳ ಆಕೃತಿಯು ಅಂಥಾದ್ದಿರುತ್ತದೆ. ಇದು ಎಂಥಾ ಸಂದರ್ಭಗಳಲ್ಲಿಯೂ ನಾಶವಾಗದೆ ದುರ್ಗಮವಾಗಿಹದು. ಇದು [illegible] ಆಟವಾಡುವಾಗ ಧರಿಸಲು ಯೋಗ್ಯವಾದದ್ದು. ಆದುದರಿಂದ 'ಸವರ್ ಪ್ರಿಮಾ'' ವಾಚನ್ನು ಕೊಂಡುಕೊಂಡು ಅಗಾಗ ಬೀಳಿ, ಮುರಿದುಹೋಗುವುದರಿಂದ ನಿವೃತ್ತಿ ಪಡೆಯಿರಿ. ಇಂಥಾ ಉತ್ಕೃಷ್ಟ ಗಡಿಯಾರಗಳಿಗೆ ಕ್ರಯವು ನಿಜವಾಗಿ ಕಡಿಮೆ. ಕೆಟಲಾಗು ಧರ್ಮಾರ್ಥ

ವೆಸ್ಟ್ ಎಂಡ್ 'ಸವರ್ ಪ್ರಿಮಾ' ಪೆಟ್ಟು-ಕಳೆ ಮತ್ತು ನೀರೂರದ್ದು ನಿಕ್ಕೆಲ್ಲು (1ನೇದ್ದು) ಸದಾ ಹೊಳೆವ ಉಕ್ಕು ರೂ 40 ಪಟ್ಟಮುಸ್ಸೆಲು (2ನೇ) ರೂ [illegible] ೯ಕೆರೆಟ್ ಚಿನ್ನ ರೂ 125 18 ಕೆರೆಟ್ ಚಿನ್ನ ರೂ 220

ವೆಸ್ಟ್ ಎಂಡ್ ವಾಚ್ ಕೋ, ಬೊಂಬಾಯಿ ಮತ್ತು ಕಲ್ಕತ್ತಾ

WEST END WATCH Co.

BOMBAY CALCUTTA

ಜಾಹೀರಾತುಗಳಿಗೆ

ಸ್ವದೇಶಾಭಿಮಾನಿ

ಅತ್ಯುತ್ತಮ ಸೌಕರ್ಯಕೊಡುವುದು. ಪ್ರತಿಫಲಬರುವಂತೆ ಸಾಧಿಸುವುದು.

ಸ್ವದೇಶಾಭಿಮಾನಿ

ತಾರೀಕು ೧೮—೮—೧೯೩೯

ಸುಭಾಸರಿಗೆ ವಿಶ್ರಾಂತಿ!

ಇಂದು ಅಖಿಲಭಾರತ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಸುಭಾಸ ಬೋಸರನ್ನು ಅವರು ಮಾಡಿದ ನಿಯಮೋಲ್ಲಂಘನೆಗಾಗಿ ಮೂರು ವರ್ಷಗಳ ಅವಧಿಯವರೆಗೆ, ಕಾಂಗ್ರೆಸಿನ ಯಾವುದೇ ಹೊಣೆಗಾರಿಕೆಯ ಅಧಿಕಾರ ಸ್ಥಾನದಿಂದ ಹೊರಹಾಕಿದೆ. ವರ್ಕಿಂಗ್ ಕಮಿಟಿಯು ಇಂತಹ ನಿರ್ಣಯವನ್ನು ಮಾಡಿದ್ದು, ಬೋಸರ ಕುರಿತು ಮಾಡಿದ ಮಹಾಪರಾಧವೆಂದು, ಅವರ ವಿಷಯ ಅಭಿಮಾನವುಳ್ಳ ಸಾರ್ವಜನಿಕರು ಹೇಳಬಹುದಾಗಿದೆ.

ಬೋಸರು ಕಾಂಗ್ರೆಸಿನಲ್ಲಿ ಮಾಡಿದ ಈ ಕ್ರಾಂತಿಯ ನಂತರ, ಸಮಸ್ತ ಭಾರತದಲ್ಲಿ ಗಾಂಧಿ–ಬೋಸರ ಮತಭೇದಗಳ ವಿಚಾರದಲ್ಲಿಯೂ, ಈ ಪ್ರಸಂಗದಲ್ಲಿ ಸರ್ದಾರ ಪಟೇಲರು ವಹಿಸಿದ ಭಾಗದ ವಿಷಯವಾಗಿಯೂ ಬಹಳ ವಾದವಿವಾದಗಳು ನಡೆದವೆ. ಈ ವಿಷಯಗಳನ್ನು ಆದ್ಯಂತವಾಗಿ ಪರೀಕ್ಷಿಸಿದವರಿಗೆ ಬೋಸರು ತನ್ನ ಕೃತ್ಯದ ಫಲವಾಗಿಯೇ ಈ ರಾಜಕೀಯ ಆತ್ಮಹತ್ಯೆಯನ್ನು ಮಾಡಿಕೊಂಡಿರುವರೆಂಬುದು ಖಚಿತವಾಗದಿರದು.

ಕಾಂಗ್ರೆಸಿನ ಧುರೀಣರೊಡನೆ ಬೋಸರಿಗೆ ಇರುವ ಒಂದು ಮುಖ್ಯ ಅಭಿಪ್ರಾಯ ಭೇದವೆಂದರೆ, ಸ್ವಾತಂತ್ರ್ಯದ ಹೋರಾಟದ ಕುರಿತು, ಅವರು ಭರದಿಂದ ಕಾರ್ಯವನ್ನು ಮುಂದೊತ್ತುವುದಿಲ್ಲವೆಂಬುದು. ಬೋಸರ ಈ ಮನೋಗತವನ್ನು ಸರ್ದಾರ ಪಟೇಲರು, ಬಹಳ ಗೌರವಪೂರ್ವಕ ಒಪ್ಪಿಕೊಂಡು, ಇಂದಿನ ಕಾಂಗ್ರೆಸು ವರ್ಕಿಂಗ್ ಕಮಿಟಿಯು, ನ್ಯಾಯವಾದ ರಚನಾತ್ಮಕವಾದ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ದೇಶದ ಮುಂದಿಟ್ಟು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಶ್ರೇಷ್ಠ ದೇಶಸೇವಕರಿಗೆ, ಎಡೆಮಾಡಿಕೊಡುವುದಾಗಿ ಸುಸ್ಪಷ್ಟ ಉತ್ತರವಿತ್ತರು. ಈ ರೀತಿಯ ಅಭಿವಚನವನ್ನು ಸ್ವತಃ ಮಹಾತ್ಮಾಜಿಯವರೂ ಮತ್ತು ಇತರ ಕಾಂಗ್ರೆಸು ಧುರೀಣರೂ ಬೋಸರಿಗೆ ಕೊಟ್ಟಿದ್ದರು.

ಆದರೆ ಬೋಸರು ಈ ಯೋಗ್ಯ ಸಂದರ್ಭವನ್ನು ತಾವು ಹೇಳುತ್ತಿರುವ ಭರದ ಹೋರಾಟಕ್ಕಾಗಿ ಉಪಯೋಗಿಸುವ ತನ್ನ ಕರ್ತವ್ಯವನ್ನು ಮಾಡಬೇಕಾಗಿದ್ದ ಬದಲು, ವರ್ಕಿಂಗ್ ಕಮಿಟಿಯ ಸದಸ್ಯರನ್ನು ದೂರುವ ಸಂಕುಚಿತ ಮನೋವೃತ್ತಿಯನ್ನು ಪ್ರಕಟಿಸಿದರು. ನಿಜವಾಗಿಯೂ ವರ್ಕಿಂಗ್ ಕಮಿಟಿಯ ಬಲಪಕ್ಷದ ಸದಸ್ಯರಿಗೆ, ಎಷ್ಟಕ್ಕಾದರೂ ಅಧಿಕಾರವನ್ನು ಬಿಡಬಾರದೆಂಬ ಹಠವಾಗಿರುತ್ತಿದ್ದಲ್ಲಿ ಅವರೆಲ್ಲರೂ ರಾಜಿನಾಮೆಯಿತ್ತು ಬೋಸರಿಗೆ ಯೋಗ್ಯ ಸಂದರ್ಭವನ್ನು ಒದಗಿಸಿಕೊಡುತ್ತಿರಲಿಲ್ಲ. ಅಂತಹ ಉಚಿತ ಸಮಯದಲ್ಲಿ, ತಾನು ನಿಶ್ಚಯಿಸಿದ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟು, ಸ್ವಾತಂತ್ರ್ಯಕ್ಕಾಗಿ ಹೋರಾಡುವ ತನ್ನ ಧ್ಯೇಯವನ್ನೆಲ್ಲಾ ಬದಿಗೊತ್ತಿ, ಅವರು ಕಾಂಗ್ರೆಸು ಸಂಸ್ಥೆಗೇ ವಿರುದ್ಧ ನಿಂತು ಭಯಂಕರ ಯುದ್ಧ ಹೂಡಲು ಪ್ರಾರಂಭಿಸಿದರು.

ಆ ಮೇಲಿನ ಅವರ ಪ್ರಕಟನೆಗಳಲ್ಲಿ ಬಲಪಕ್ಷದ ಧುರೀಣರು, ಅಧಿಕಾರ ಲಾಲಸೆಯವರೆಂದೂ, ಪ್ರಜಾಪ್ರಭುತ್ವ ಪದ್ಧತಿಗೆ ಅನುಕೂಲವಿರುವವರಲ್ಲವೆಂದೂ, ಫೆಡರೇಶನನ್ನು ಸ್ವಾಗತಿಸುವವರೆಂದೂ, ತಾನು ಫೆಡರೇಶನ್ ಬದ್ಧದ್ವೇಷಿಯೆಂದೂ, ಅಲ್ಲಸಲ್ಲದ ಆಗೌರವದ ದೂರುಗಳನ್ನು ಧುರೀಣರ ಮೇಲೆ ಹೊರಿಸುತ್ತಾ ಬಂದರು. ಬಲಪಕ್ಷದ ನಾಯಕರು, ಬ್ರಿಟಿಷ್ ಗವರ್ನಮೆಂಟಿಗೆ 'ಕಡೆಯ ನುಡಿ' (ultimatum) ಕೊಡುವ ತನ್ನ ಸೂಚನೆಯನ್ನು ಒಪ್ಪಿಕೊಳ್ಳಬೇಕೆಂದೂ ಹೇಳಿದರು.

ಆದರೆ ಬಲಪಕ್ಷದ ಧುರೀಣರು, ಇಂದಿನ ಪರಿಸ್ಥಿತಿಯನ್ನು ಕೂಲಂಕುಷ ವಿಚಾರಮಾಡಿ, ಬ್ರಿಟಿಷ್ ಗವರ್ನಮೆಂಟಿಗೆ 'ಕಡೆಯ ನುಡಿ' ಕೊಡುವ ಅಭಿಪ್ರಾಯವನ್ನು ಮಾನ್ಯಮಾಡಲಿಲ್ಲ. ಅವರು ತಮ್ಮ ನಿರ್ಣಯಗಳಂತೆಯೇ ಜನಾಂಗವನ್ನು ಸ್ವಾತಂತ್ರ್ಯದ ದಾರಿಯಲ್ಲಿ ಮುಂದುವರಿಸುವ ಅಭಿಪ್ರಾಯವನ್ನೇ ವ್ಯಕ್ತಪಡಿಸಿದರಲ್ಲದೆ, ಇತರರು ಕೊಡುವ ಎಲ್ಲಾ ತರದ ಸೂಚನೆಗಳನ್ನೂ ತಕ್ಕೊಂಡು ಅದರಂತೆ ನಡೆಯಲು ತಯಾರಾಗಲಿಲ್ಲ.

ಸಹಜವಾಗಿ, ಕಾಂಗ್ರೆಸಿನಲ್ಲಿ ಹೊಸ ಕಾರ್ಯಕ್ರಮವನ್ನು ಮುಂದೊತ್ತಬೇಕೆಂದು ಬೋಸರಂತಹ ಧುರೀಣರು ಮನಃಪೂರ್ವಕ ಬಗೆದಿದ್ದಲ್ಲಿ, ಅಖಿಲಭಾರತ ಕಾಂಗ್ರೆಸು ಅಧಿವೇಶನದಲ್ಲಿ ಅಂತಹ ನಿರ್ಣಯವೊಂದನ್ನು ತಂದು, ಜನತೆಯನ್ನು ಆ ಹೊಸ ಸಿದ್ಧಾಂತದಂತೆ ಒಪ್ಪಿಸಲು ಸಾಧ್ಯವಿದೆಯೆ ಎಂದು ನೋಡಬೇಕಾಗಿತ್ತು. ಇದೇ ಅಭಿಪ್ರಾಯವನ್ನೇ ಬಲಪಕ್ಷದ ಧುರೀಣರು ಕೂಡಾ 'ನಿಮ್ಮ ಕಾರ್ಯಕ್ರಮವನ್ನು ಹೊರತನ್ನಿ, ನಾವು ನಿಮಗೆ ಜಾಗ ಮಾಡಿಕೊಡುತ್ತೇವೆ' ಎಂದುಹೇಳಿದ್ದರೆಂದು ತಿಳಿಯಬಹುದಾಗಿದೆ. ಆದರೆಬೋಸರು ಈ ನ್ಯಾಯವಾದ ಸೂಚನೆಯನ್ನು ತಕ್ಕೊಂಡು ಕಾರ್ಯಮಾಡಲಿಲ್ಲ. ಅಖಿಲಭಾರತ ಕಾಂಗ್ರೆಸು ಅಧಿವೇಶನದ ಪ್ರತಿನಿಧಿಗಳಿಗೆ ಒಪ್ಪಿಗೆಯಾಗುವ ಯೋಗ್ಯವಾದ ಹೊಸ ಕಾರ್ಯಕ್ರಮವು ಅವರಲ್ಲಿ ಆಗ ಇರಲಿಲ್ಲ.

ಇಂತಹ ಸಂದರ್ಭದಲ್ಲಿ ಏನುಮಾಡಬೇಕೆಂದು ತಿಳಿಯದವರಂತೆ, ಅಧ್ಯಕ್ಷಸ್ಥಾನಕೆ ರಾಜಿಕೊಟ್ಟು, ಎಲ್ಲೆಲ್ಲೂ ಕಾಂಗ್ರೆಸು ವಿರುದ್ಧ, ಇಂದಿನ ವಿಶ್ವಾಸವನ್ನು ಪಡೆದ ಧುರೀಣರ ವಿರುದ್ಧ ತನ್ನ ಆರೋಪಣೆಗಳ, ಅಪವಾದಗಳ ಸುರಿಮಳೆ ಸುರಿಸಲು ಆರಂಭಿಸಿದರು. ಈ ರೀತಿಯ ನಡತೆಯಿಂದ, ಹಿಂದೆ ಮುಂದಾಳುಗಳ ಅಧೀನದಿಂದ, ಗಾಂಧಿಜಿಯವರು ತನ್ನ ಕಾರ್ಯಕ್ರಮವನ್ನು ಮುಂದಿಟ್ಟು ಕಾಂಗ್ರೆಸ್ಸನ್ನು ಸ್ವಾಧೀನಪಡಿಸಿದಂತೆ, ತಾನೂ ಮಾಡಬಹುದೆಂದು, ಹೊಸ ತತ್ವದ ಕನಸಿನ ಗೋಪುರ ಕಟ್ಟಿದರು.

ಬೋಸರ ಈ ತತ್ವವು ಏನೂ ಫಲಕಾರಿಯಾಗಲಿಲ್ಲ. ಗಾಂಧಿಜಿಯವರು ೧೯೨೦ರಲ್ಲಿ ಕಾಂಗ್ರೆಸನ್ನು ಸ್ವಾಧೀನಮಾಡಿದ, ಅರ್ಥವಿಲ್ಲದ, ಪ್ರಯೋಜನವಿಲ್ಲದ್ದು ಕೇವಲ ಕಲ್ಪಿತವಾದ ಭಿನ್ನಮತದ ವ್ಯರ್ಥವಾದದಿಂದಲ್ಲ, ಅವರು ಜನತೆಯ ಮುಂದೆ ಪ್ರಯೋಜನವುಳ್ಳ ತನ್ನ ಕಾರ್ಯಕ್ರಮವನ್ನು ತಿಳಿಸಿದರು. ಕಡೆಗೆ ಅದರಿಂದ ನಿಜವಾದ ಪ್ರಯೋಜನವುಂಟೆಂದು ತಿಳಿದು ಅವರ ಕಾರ್ಯಕ್ರಮವನ್ನು ಸ್ವಾಗತಿಸಿ ಕಾಂಗ್ರೆಸು ಸ್ವಾತಂತ್ರ್ಯದ ಹೋರಾಟವನ್ನು ನಡೆಸಲು ಜನತೆಯು ಬೆಂಬಲ ಕೊಟ್ಟಿತು. ಇಂದಿನ ಕಾಂಗ್ರೆಸಿನ ಮಹತ್ವದ ಒಲವು ಅದರಲ್ಲಿರುವ ಕೆಲ ಮುಖಂಡರ ಗಾಂಭೀರ್ಯ ಘನತೆಗಳಿಂದ ಮಾತ್ರವಲ್ಲ, ಕಾಂಗ್ರೆಸನ್ನು ಸರಿದಾರಿಯಲ್ಲಿ ನಡೆಸುವ ಗಾಂಧಿಜಿಯವರ ಅಸಾಧಾರಣ ಧುರೀಣತೆಯಿಂದಲೂ ಆಗಿರುತ್ತದೆ. ಕಾಂಗ್ರೆಸಿನ ಮಹಾಬೆಂಬಲವು ಜನತೆಗೆ ಅದರ ಇಂದಿನ ಕಾರ್ಯಕ್ರಮದಲ್ಲಿರುವ ವಿಶ್ವಾಸಪೂರ್ವಕವಾದ ಭರವಸೆಯಿಂದಲಾಗಿದೆ. ಹಾಗಾಗಿ, ಭಾರತದ ಸಮಸ್ತ ಜನತೆಯ ಕಂಠನಾದವು ಗಾಂಧಿಜಿಯವರ ಮತ್ತು ಅಖಿಲ ಭಾರತ ಕಾಂಗ್ರೆಸಿನ ಕಂಠನಾದಕ್ಕಿಂತ ಭಿನ್ನವಾಗಲಿಲ್ಲ.

ಬೋಸರು ಅಖಿಲಭಾರತ ಕಾಂಗ್ರೆಸು ಕಮಿಟಿಯ ನಿರ್ಣಯಕ್ಕೆ ವಿರೋಧ ನಿಷೇಧ ಸಭೆ ಕರೆಯುವ ಸಂದರ್ಭದಲ್ಲಿ ಅವರ ಹಿತೇಚ್ಛುಗಳಾಗಿ ಕಾಂಗ್ರೆಸಿನ ಧುರೀಣರು ಅವರನ್ನು ಎಚ್ಚರಿಸಿದ್ದರು. ಈ ಹಿತೋಕ್ತಿಗೆ ಕಿವಿಗೊಡದೆ ಕಾಂಗ್ರೆಸು ಕಮಿಟಿಯನ್ನೂ, ಕಾಂಗ್ರೆಸು ಮಂತ್ರಿಮಂಡಲಗಳನ್ನೂ, ಕಡೆಗೆ ಗಾಂಧಿಜಿಯವರನ್ನೂ ಕೂಡ ಕಟುವಾಗಿ ಟೀಕಿಸುವ ಕಾರ್ಯವನ್ನೇ ಬೋಸರು ಮುಂದುವರಿಸಿದರು. ಹೀಗೆ ಸುಸ್ಪಷ್ಟವಾಗಿ ಬೋಸರನ್ನು ಕಾಂಗ್ರೆಸಿನ ಧುರೀಣರು ಎಚ್ಚರಿಸಿದ್ದರೂ, ಅವರು ಅದನ್ನು ಅಲ್ಲಗಳೆದದ್ದು ಅವರ ಬುದ್ಧಿಭ್ರಮತೆಯ ಕಾರ್ಯವಾಯಿತು. ಕಾಂಗ್ರೆಸಿನ ಹೊಣೆಗಾರಿಕೆಯ ಕಾರ್ಯದಲ್ಲಿರುವವರೇ ಈ ರೀತಿಯಿಂದ ವರ್ತಿಸಿದಲ್ಲಿ, ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಜೀವನ-ಮರಣದ ಸಂಗ್ರಾಮ ನಡೆಸಲು ಕಾಂಗ್ರೆಸು ಸಿದ್ಧತೆ ಮಾಡುತ್ತಿರುವ ಐಕ್ಯ ಸಾಧನೆಗೆ ಕೊಡಲಿಯ ಪೆಟ್ಟು ಬಿದ್ದಂತಾಗುವುದು. ಈ ವಿಚಾರಗಳ ಸಮನ್ವಯದಿಂದ ಬೋಸರ ಮೇಲೆ ವರ್ಕಿಂಗ್ ಕಮಿಟಿಯು ಜಾರಿಮಾಡಿದ ಶಿಸ್ತು ದಂಡನೆಯು ರಾಷ್ಟ್ರಹಿತದ ಸಲುವಾಗಿ ಎಷ್ಟು ಉಚಿತವಾಗಿದೆಯೆಂಬುದನ್ನು ಅರಿತುಕೊಳ್ಳಬೇಕು.

ಇಂದು ಈ ರೀತಿಯ ಕಾಂಗ್ರೆಸಿನ ಮೂಲಭೂತ ಪ್ರಾಧಾನ್ಯತೆಯುಳ್ಳ ನಿರ್ಣಯವನ್ನು ಮಾಡಿದ ಕಾಂಗ್ರೆಸು ಬಲಪಕ್ಷದ ಧುರೀಣರ ಕಾರ್ಯವು ಬಹಳ ಮಹತ್ವದ್ದಾಗಿದೆ. ಇಂತಹ ಉಚಿತ ಕಾರ್ಯವನ್ನು ಕೈಗೊಂಡದ್ದಕ್ಕಾಗಿ ಅವರನ್ನು ಜನತೆಯು ಅಭಿನಂದಿಸಬೇಕು. ಬೋಸರಿಗೆ ಇದು ಯೋಗ್ಯವೂ, ಉಪಯೋಗಕರವೂ ಆದ ಶಾಸನವಾಗಿದೆ. ಈ ಶಿಸ್ತು ದಂಡನೆಯು ನಿರ್ಣಯದಲ್ಲಿರುವ ನ್ಯಾಯವನ್ನು ಮನಗಂಡು ಇದರಂತೆ ವರ್ತಿಸಿ ಮುಂದಕ್ಕಾದರೂ ಬಾಬು ಸುಭಾಸಚಂದ ಬೋಸರ ರಾಷ್ಟ್ರಹಿತಚಿಂತಕರಾಗಿ ಕೀರ್ತಿಶಾಲಿಗಳಾಗಲಿ ಎಂದು ಹಾರೈಸಬೇಕಾಗಿದೆ.

ಹೊಸ ವಾರ್ತೆ

ಗುಜರಾತಿನಲ್ಲಿ ಅನಾವೃಷ್ಟಿಯ ಸಂಕಷ್ಟವು ವಿಪರೀತವಾಗಿದೆ. ಕಾಥಿಯಾವಾಡ್, ಗುಜರಾತ್, ಕಚ್ಛ್ ಪ್ರಾಂತಗಳಲ್ಲಿ ನೀರು ಮತ್ತು ಗೋಗ್ರಾಸಗಳ ಅಭಾವದಿಂದ ೪೦ ೦೦೦ ಪಶುಗಳು ಸತ್ತುಹೋಗಿವೆ. ಹಲವರು ಪಶುಗಳನ್ನು ದೂರದ ದೇಶಕ್ಕೆ ತೆಕ್ಕೊಂಡುಹೋಗಿ ಸಾಕಲು ಸಾಧ್ಯವಿಲ್ಲದೆ ಬಿಟ್ಟುಬಿಡುವರಾಗಿ ತಿಳಿದಿದೆ. ಇಂತಹ ಪಶುಗಳು ಕುರುಡಾಗಿ, ಕ್ಷೀಣವಾಗಿ ಉರಿದಂತೆ ಸತ್ತುಹೋಗುತ್ತವೆ. ಇದರ ನಿಮಿತ್ತ ಬೇರೆ ಪ್ರಾಂತಗಳಿಂದ ಅಲ್ಲಿಗೆ ಗೋಗ್ರಾಸವು ಕಳುಹಿಸಲ್ಪಟ್ಟು ಕ್ಷಾಮದ ನಿವೃತ್ತಿಗೆ ಸಹಾಯ ಬರುತ್ತಿದೆ. ಆರು ದಿನಗಳ ಮೊದಲು ಆರು ರೂಪಾಯಿಗಳಿದ್ದ ಗೋಗ್ರಾಸಕ್ಕೆ ಈಗ ೨೩ ರೂಪಾಯಿಗಳ ಕ್ರಯವೇರಿದೆ. ಸರಕಾರವು ಈ ವಿಧದ ಸಂಕಷ್ಟವನ್ನು ಪರಿಹರಿಸಲು ಯೋಗ್ಯ ಹಂಚಿಕೆಗಳನ್ನು ಯೋಚಿಸುತ್ತಿದೆ.

★

ಶೇಟ್ ಪಾಲನಾಕಲನ ಎಂ. ಎಲ್. ಎ. ಇವರ ಅಧ್ಯಕ್ಷತೆಯಿಂದ ಆಗ್ರಾದಲ್ಲಿ ಸೇರಿದ ರಾಜಕೀಯ ಪರಿಷತ್ತಿನಲ್ಲಿ ಗಾಂಧಿಜಿಯವರ ಮೇಲೆ ಜನತೆಗೆ ಸಂಪೂರ್ಣ ವಿಶ್ವಾಸವಿರುವ ನಿರ್ಣಯವು ಮಂಜೂರಾಯಿತು.

★

೧೯೩೯ ಆಗಸ್ಟು ೫ರ ವಾರಾಂತ್ಯಕ್ಕೆ ಬೊಂಬಯಿಯಿಂದ ಬಂದರದಿಂದ ೧೬,೦೦,೦೦೦ ರೂಪಾಯಿಗಳ ಬೆಲೆಯ ಬಂಗಾರವು ಹಡಗಿನ ಮೂಲಕ ವಿದೇಶಕ್ಕೆ ಹೋಯಿತು!

★

ಇಟಲಿಯ ಕೌಂಟ್ ಸಿಯಾನೋ ಜರ್ಮನಿಯ ಹಿಟ್ಲರನೊಡನೆ ಒಂದು ತಾಸಿನ ತನಕ ಮಾತುಕತೆ ನಡೆಸಿದನು. ಆ ಮೇಲೆ, ಜರ್ಮನಿ ವಿದೇಶಾಂಗ ಮಂತ್ರಿ ವಾನ್ ರೋಬಿನ್ ಟ್ರಾಪನನ್ನು ಕಂಡು ಮಾತನಾಡಿದನು. ಈ ಸಿಯಾನೋ-ಹಿಟ್ಲರ್- ರಾಬಿನ್ ಟ್ರೊಪ್ ತ್ರಿಮೂರ್ತಿಗಳ ಮಾತುಕತೆಯ ಹೆಚ್ಚಿನಂಶವು ಇಟಲಿ–ಜರ್ಮನಿಗಳ ಭೂತ, ಭವಿಷ್ಯತ್, ವರ್ತಮಾನ ಸಂಬಂಧದ ವಿಷಯವಾಗಿತ್ತೆಂದೂ, ಕಡೆಗೆ ಡಾನ್ಝಿಗ್ ಸಮಸ್ಯೆಯೂ ಚರ್ಚಿಸಲ್ಪಟ್ಟಿತೆಂದೂ ತಿಳಿಯುತ್ತದೆ. ಇದು ಮಾತ್ರವಲ್ಲದೆ ಇತರ ಯುರೋಪಿನ ಅಂತರ್ರಾಷ್ಟ್ರೀಯ ವಿಚಾರಗಳೂ ಚರ್ಚಿಸಲ್ಪಟ್ಟವೆಂದು ಗೊತ್ತಾಗಿದೆ.

★

ಅಫೀಶಿಯಲ್ ಪ್ರಕಟಣೆಯಲ್ಲಿ ಜರ್ಮನಿಯು ಪೋಲೆಂಡಿನ ಪರಿಸ್ಥಿತಿಯ ಕುರಿತು, ಸಂಭ್ರಮಗೊಂಡಿರುವಂತೆಯೂ, ಆ ಬಗ್ಗೆ ಇಟಲಿ–ಜರ್ಮನಿಗಳ ದ್ವಂದ್ವ ಧೋರಣೆಯು ಚರ್ಚಿಸಲ್ಪಟ್ಟಿತೆಂದು ತಿಳಿಯುತ್ತದೆ.

★

ಜಪಾನಿನ ಮಂತ್ರಿಮಂಡಳದ ಸಭೆಯಲ್ಲಿ ಆದ ಮಾತುಕತೆಯ ಕುರಿತು ಪ್ರಧಾನ ಮಂತ್ರಿ ಬಾರನ್ ಹಿರನುಮಾನರವರನ್ನು ಸಂದರ್ಶಿದಾಗ, ಬರುವ ಮಂತ್ರಿಮಂಡಳ ಅಧಿವೇಶನದಲ್ಲಿ ಜಪಾನು, ಯುರೋಪಿನ ಪರಿಸ್ಥಿತಿಯ ಕುರಿತು ನಿರ್ಣಯಕ್ಕೆ ಬರುವುದೆಂದು ಹೇಳಿದರು. ಹೇಗಿದ್ದರೂ ಜರ್ಮನ್–ಇಟಲಿಗಳ ಧೋರಣೆಗೆ ಜಪಾನಿನ ಶೀಘ್ರ ಸಹಾಯವು ಇಲ್ಲವೆಂದು ತಿಳಿದಿದೆ.

★

ಇಟಲಿಯ ರಾಜ್ಯಭಾರಿಯು ಸ್ಪೈನಿಗೆ ಬಂದಿರುವನು.

★

ವರ್ಕಿಂಗ್ ಕಮಿಟಿಯ ಸದಸ್ಯರಾದ ಬಜಾಜರು ವಾರ್ಧಾಕ್ಕೆ ಬಂದಾಗ ಪಟೇಲ, ಕಸ್ತೂರಬಾಯಿ ಗಾಂಧಿ ಪಟ್ಟಾಭಿ ರಾಷ್ಟ್ರಪತಿ, ದೇಸಾಯಿ ಪ್ರಭೃತಿಗಳು ಸಂಭ್ರಮದ ಸ್ವಾಗತವಿತ್ತರು. ಅವರು ಮಹಾತ್ಮಾಜಿಯವರೊಡನೆ ಜಯಪುರದ ಇತ್ತೀಚೆಯ ಪರಿಸ್ಥಿತಿಯ ಕುರಿತು ವಿವರಿಸಿದರು.

★

ಟೋಕಿಯೋದಲಿ ನಡೆದ ಜಪಾನ ಬ್ರಿಟಿಷ್ ರಾಜ್ಯಭಾರಿಗಳ ಆಂಗ್ಲ–ಜಪಾನು ಮಾತುಕತೆಯು ಕೃತಕಾರ್ಯವಿಲ್ಲದೆ ಜರುಗಿದರು. ಟಿನಿಸ್ಟ್ಸಿನ ವಿಷಯದಲ್ಲಿ ಬ್ರಿಟನು ಹೇಳುವ ಸೂಚನೆಗೆ ಜಪಾನು ಒಪ್ಪುದಿಲ್ಲವೆಂದು ತಿಳಿದಿದೆ. ಆಂಗ್ಲ ವಿರುದ್ಧ ಪ್ರಚಾರವೂ ಆರಂಭವಾಗಿದೆ.

★

ಕಲ್ಕತ್ತದಲ್ಲಿ ಸೋಶಿಯಲಿಸ್ಟ ಧುರೀಣರಾದ ಶ್ರೀ ಎಸ್ ಎಸ್, ಬಾಟ್ಲಿವಾಲರರು ಕಲ್ಕತ್ತದಲ್ಲಿ 'ಭಾರತ ಮತ್ತು ಮುಂದಿನ ಲೋಕಯುದ್ಧ' ಎಂಬ ಕುರಿತು ಮಾಡಿದ ಭಾಷಣಕ್ಕಾಗಿ ಬಂಧಿತರಾಗಿದ್ದಾರೆ. ಶ್ರೀ ರಾಮಮನೋಹರ ಲೋಹಿಯೋರವರನ್ನು ದಸ್ತಗಿರಿಮಾಡಿದ್ದು, ಅವರ ಹೇಳಿಕೆಯ ವಿಚಾರಣೆಯಾದ ಮೇಲೆ ಬಿಡಲ್ಪಟ್ಟಿದೆ.

★

ಕಾಂಗ್ರೆಸು ಪ್ರಧಾನ ಮಂತ್ರಿಗಳ ಸಭೆಯೊಂದು ಪೂನಾದಲ್ಲಿ ತಿಂಗಳ ಅಂತ್ಯ ವಾರದಲ್ಲಿ ಜರಗುವುದು.

★

ಚೈನಾ ರಾಷ್ಟ್ರೀಯ ಸರಕಾರದ ವಿದ್ಯಾಮಂತ್ರಿಗಳಾದ ಚೆನ್–ಲಿ–ಪ್ಯೂರವರು ಶಾಂತಿನಿಕೇತನಕ್ಕೆ ಕಳುಹಿಸಿದ ತಂತಿಯ ಸಂದೇಶದಲ್ಲಿ, ಜಪಾನು ಚೈನದಲ್ಲಿ, ಅಮಾನುಷತೆಯಿಂದ ನಡೆಯುವುದರಿಂದ ಅದು ಹೇಗೆ ಚೈನಕ್ಕೆ ಕಂಟಕವಾಗಿದೆಯೋ ಹಾಗೆಯೇ ಲೋಕಕ್ಕೇ ಕಂಟಕಪ್ರಾಯವಾಗಿದೆಯೆಂದೂ, ಎಲ್ಲಿಯಾದರೂ ಒಂದು ಕಡೆಯಲ್ಲಿ ನ್ಯಾಯವನ್ನು ಯಾರೇ ಅತಿಕ್ರಮಿಸಲಿ, ಅದರಿಂದ ಜಗತ್ತಿನ ಶಾಂತಿಗೇ ತೊಂದರೆಯಾಗುವುದೆಂದೂ ಹೇಳುತ್ತಾ, ಭಾರತದ ಸ್ವಾತಂತ್ರ್ಯ ಸಮರದಲ್ಲಿ ಹಿಂದೀಯರಿಗೆ ವಿಜಯ ದೊರಕಲೆಂದು ಆಶಿಸಿ ಜಪಾನಿನ ಇಂದಿನ ಅನ್ಯಾಯವು ಲೋಕದ ಶಾಂತಿಗೆ ಮಾಡಿದ ಅನ್ಯಾಯವೆಂಬುದನ್ನು ಗಮನದಲ್ಲಿಡಬೇಕಾಗಿ ವಿವರಿಸಿರುವರು.

ಮಂಗಳೂರು ಸಮಾಚಾರ

ಮಂಗಳೂರು ಮುನಿಸಿಪಾಲಿಟಿಗೆ ಶೀಲ್ಡಿನ ಬಹುಮಾನ

ನಮ್ಮ ಅಧಿಪತ್ಯದ ಮುನಿಸಿಪಾಲಿಟಿಗಳಲ್ಲಿ, ಉತ್ತಮ ರೀತಿಯ ಆರೋಗ್ಯ ಮತ್ತು ಶಿಶು ಪ್ರದರ್ಶನಗಳನ್ನು ಏರ್ಪಡಿಸಿದ ಸಂಬಂಧ, ಪ್ರಥಮ ಬಹುಮಾನದ ಶೀಲ್ಡು ನಮ್ಮ ಮುನಿಸಿಪಾಲಿಟಿಗೆ ದೊರಕಿರುವದೆಂಬುದು ಸಂತೋಷದ ವಾರ್ತೆಯಾಗಿದೆ.

ಜಿಲ್ಲಾ ಬೋರ್ಡು ಸಭೆ

ನಮ್ಮ ಜಿಲ್ಲಾ ಬೋರ್ಡು ಮೀಟಿಂಗು ತಾ ೧೪ರಂದು ಮುಂಜಾನೆ ೧೦ ಘಂಟೆಗೆ ಸರಿಯಾಗಿ ಪ್ರೆಸಿಡೆಂಟರಾದ ಡಾ॥ ಕೆ ವಿಠಲ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು

ಸಭೆಗೆ ಬಾರದೆ ಇದ್ದ ನಿಮಿತ್ತ ಸದಸ್ಯತನವನ್ನು ಕಳೆದುಕೊಂಡ ಶ್ರೀ॥ ವೈಕುಂಠ ಬಾಳಿಗರನ್ನು ಪುನಃ ಸದಸ್ಯರಾಗಿ ಸೇರಿಸಿಕೊಳ್ಳಲಾಯಿತು.

ಅಂಪರ್ ಗ್ರಾಮದಲ್ಲಿ ತಾ ೧-೪-'೪೦ ರಿಂದ ವಾರದ ಸಂತೆಯನ್ನು ತೆರೆಯುವ ನಿರ್ಣಯವಾಗಿ, ಬೇಕಾಗಬಹುದಾದ ಸ್ಥಳದ ವಿಚಾರದಲ್ಲಿ ಕಲೆಕ್ಟರರಿಗೆ ಬರೆಯುವಂತೆ ತಿಳಿಸಲಾಯಿತು.

ಬೋರ್ಡಿನ ಆಡಳಿತೆ ವರದಿಯ ಕುರಿತಾದ ಸರಕಾರದ ಅಭಿಪ್ರಾಯವನ್ನು ಸ್ವೀಕರಿಸಿ ಗ್ರಾಮೋದ್ಧಾರ ಪ್ರಚಾರವನ್ನಾಚರಿಸುವದರಲ್ಲಿ, ಜಿಲ್ಲಾ ಕಲೆಕ್ಟರರಿಗೆ ಬೋರ್ಡ್ ಅಧ್ಯಕ್ಷರು ಸಹಾಯ ಮಾಡಬೇಕೆಂದೂ, ಪಾಠಪಟ್ಟಿಯಲ್ಲಿ ಸೇರದ ಚಟುವಟಿಕೆಗಳನ್ನು ಶಾಲಾ ಮಕ್ಕಳ ಹಿತದಿಂದ ಶಾಲೆಗಳು ನಿರ್ವಹಿಸುವುದಿದ್ದರೆ, ಅಧ್ಯಕ್ಷರು ಆತಂಕಿಸಬಾರದೆಂದೂ, ಮೋಟರ್ ವಾಹನಗಳಿಗೆ ಲೈಸನ್ಸ್ ಕೊಡುವ ಅಧಿಕಾರ ತಪ್ಪಿದುದರಿಂದ, ಬೋರ್ಡಿಗಾದ ನಷ್ಟದ ವಿಚಾರದಲ್ಲಿ, ಈ ಬೋರ್ಡಿಗೆ ರೂ ೬೧೧೦೪ ಮಂಜೂರು ಮಾಡಲಾಗಿದೆಯೆಂದೂ, ವಿವಿಧ ವಿಚಾರಗಳ ಕುರಿತಾದ ಜಿ ಓ ಗಳ ಮಂಜೂರು ಮಾಡಲ್ಪಟ್ಟವು

ಬೋರ್ಡಿನ ಆಡಳಿತೆ ವಿಚಾರದಲ್ಲಿ ಸರಕಾರದ ವಿಮರ್ಶೆಯಂತೆ ಸುಪರಿಂಟೆಂಡಿಂಗ್ ಇಂಜಿನಿಯರರ ವರದಿಯ ಪ್ರಕಾರ ರಾಜರಸ್ತೆಗಳು ಚೆನ್ನಾಗಿಲ್ಲವೆಂದು ತಿಳಿದುಬರುತ್ತದೆ ಆದರೆ ಕಲೆಕ್ಟರರು ಜಿಲ್ಲೆಯೊಳಗಣ ವ್ಯಾಪಾರದ ಮಾರ್ಗಗಳೆಲ್ಲ ಚೆನ್ನಾಗಿವೆಯೆಂದು ಅಭಿಪ್ರಾಯಪಟ್ಟಿದ್ದಾರೆ ಅಲ್ಲದೆ ಬೋರ್ಡಿನ ಆಡಳಿತೆಯು ತೃಪ್ತಿಕರ ಮತ್ತು ಬೋರ್ಡಿನ ಅಧ್ಯಕ್ಷ ಹಾಗೂ ಸದಸ್ಯರೊಳಗಿನ ಸಂಬಂಧ ವಾತ್ಸಲ್ಯ ಸಹಿತವಾದುದು ಎಂದೂ ಹೇಳಲಾಗಿದೆ

ಸಭಾಂತ್ಯದಲ್ಲಿ ಅಧ್ಯಕ್ಷರು, ಜಿಲ್ಲೆಯ ಪ್ರಾಮುಖ್ಯವಾದ ಶಿವಪುರ ಮತ್ತು ಕಟೀಲು ಸೇತುವೆಗಳ ಉದ್ಘಾಟನೆಯ ವಿಚಾರವಾಗಿ ತಿಳಿಸುತ್ತಾ, ಈ ವಿಷಯದಲ್ಲಿ ಶಿವಪುರ ಸೇತುವೆಯನ್ನು ತೆರೆಯಲು ಮೈಸೂರಿನ ದಿವಾನರನ್ನೂ ಕಟೀಲು ಸೇತುವೆಯನ್ನು ತೆರೆಯಲು ನಮ್ಮ ಪ್ರಧಾನರಾದ ಮಾನ್ಯ ಶ್ರೀ॥ ಸಿ ರಾಜಗೋಪಾಲಾಚಾರಿಯವರನ್ನೂ ಕೇಳಿಕೊಳ್ಳಬೇಕೆಂದಿರುವೆನೆಂದೂ, ಈ ಕಾರ್ಯ ಅಕ್ಟೋಬರ ತಿಂಗಳಲ್ಲಿ ಜರಗಬಹುದೆಂದೂ ಹೇಳಿದರು.

ಈ ಸಭೆಯು ಹೊಸತಾಗಿ ಕಟ್ಟಿಸಿದ ಬೋರ್ಡಿನ ಸಭಾಮಂದಿರದಲ್ಲಿ ಪ್ರಥಮ ಬಾರಿಯಾಗಿ ಸೇರಿತು.

ಉದ್ಘಾಟನಾ ಭಾಷಣ

ಸೈಂಟ್ ಅಲೋಸಿಯಸ್ ಕಾಲೇಜ್ ಯೂನಿಯನಿನ ಉದ್ಘಾಟನಾ ಭಾಷಣವನ್ನು ಶ್ರೀ॥ ಜಿ ಸೋಮಶೇಖರ ರಾಯರು, ಕಳೆದ ಶನಿವಾರ ಸಂಜೆ ನೆರವೇರಿಸಿದರು. ಶ್ರೀಯುತರು 'ಧರ್ಮ'ದ ವಿಚಾರದಲ್ಲಿ ಮಾತನಾಡಿದರು ಯೂನಿಯನಿನ ಅಧ್ಯಕ್ಷರಾದ ಶ್ರೀ॥ ವಿ ಜೆ ಜೋಸೆಫ್‌ರವರು ಅಧ್ಯಕ್ಷತೆ ವಹಿಸಿದ್ದರು ಕಾರ್ಯದರ್ಶಿಗಳಾದ ಶ್ರೀ॥ ಆರ್ಥರ್ ಕುಞರವರು ವಂದನೆಯನ್ನರ್ಪಿಸಿದರು.

ಮಹಿಳಾ ಸಭೆ

ಮಹಿಳಾ ಸಭೆಯಲ್ಲಿ, ಮಹಿಳೆಯರಿಗಾಗಿ, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಆಶ್ರಯದಲ್ಲಿ ಡಾ॥ ಯಂ. ಉಮೇಶರಾವ್, ಟಿ. ಡಿ. ಡಿ. (ವೇಲ್ಸ್)ರವರು ಕಳೆದ ಶನಿವಾರ ಸಂಜೆ ಕ್ಷಯರೋಗದ ವಿಷಯವಾಗಿ ಭಾಷಣವಿತ್ತರು.

ನಾಟ್ಯವಿಲಾಸಿಗಳು

ಪ್ರಗತಿ ನಾಟ್ಯಕಲಾ ನಾಟ್ಯವಿಲಾಸಿ ಸಂಘದವು, ಇದರ ಸಾಮಾನ್ಯ ಸಭೆಯೊಂದು ಕಳೆದ ಆದಿತ್ಯವಾರ ದಿನ ರಾತ್ರೆ ಪದವಿನಲ್ಲಿ ಜರಗಿತು.

ಭಾಷಣ

ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಆಶ್ರಯದಲ್ಲಿ, ಡಾ॥ ಯಂ. ಉಮೇಶರಾವ್, ಟಿ ಡಿ ಡಿ (ವೇಲ್ಸ್)ರವರು, ತಾರೀಕು ೧೧ನೇ ಶುಕ್ರವಾರ ಸ್ಥಳೀಯ ಕೆನರಾ ಹೈಸ್ಕೂಲಿನಲ್ಲಿ, ಕ್ಷಯರೋಗದ ವಿಷಯವಾಗಿ, ಮಾಯಾಲಾಂದ್ರದ ಸಹಾಯದಿಂದ ಭಾಷಣವಿತ್ತರು ಶ್ರೀ॥ ಯಂ ವೆಂಕಟೇಶ ಪೈಗಳವರು ವಂದನಾರ್ಪಣೆ ಮಾಡಿದರು.

ವಿಮೋಚನೆ

ಕಳೆದ ದಶಂಬರ ೨೮ರಲ್ಲು, ಉಡುಪಿ ತಾಲೂಕು ಪೆಜಮಂಗೂರ್ ಗ್ರಾಮದ ಕೊಕ್ಕರ್ಣೆ ಎಂಬಲ್ಲಿ ಪುಂಡಾಟ ನಡೆಸಿ, ಕೊಲೆಮಾಡಿದರೆಂಬ ಅಪವಾದಕ್ಕೆ ಗುರಿಮಾಡಲ್ಪಟ್ಟ ಕೃಷ್ಣ ಶೆಟ್ಟಿ ಮತ್ತಿತರ ೫ ಮಂದಿಯನ್ನು, ನಮ್ಮ ಜಿಲ್ಲಾ ಮತ್ತು ಸೆಶ್ಯನ್ ಜಡ್ಜರಾದ ಮಾನ್ಯ ಪಿ. ರಾಜಗೊಪಾಲಾಚಾರಿಯವರು ಕಳೆದ ಶನಿವಾರ ನಿರಪರಾಧಿಗಳೆಂದು ಬಿಡುಗಡೆ ಮಾಡಿದರು.

ಚರ್ಚೆ

"ಬ್ರಿಟಿಷ್ ಸಾಮ್ರಾಜ್ಯ ಶಾಹಿತ್ವಕ್ಕೆ ಕಡೆಯ ನುಡಿ ಕೊಡುವುದಕ್ಕೆ ಇದು ಅನುಕೂಲ ಸಮಯವಲ್ಲ" ಎಂಬ ವಿಚಾರವಾಗಿ, ಶ್ರೀ॥ ಬಿ ವೈಕುಂಠ ಬಾಳಿಗರವರ ಅಧ್ಯಕ್ಷತೆಯಿಂದ ಮಂಗಳೂರ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ತಾ ೧೬ರಂದು ಚರ್ಚಾ ಸಭೆಯಾಯಿತ

ಸಿ ಪಿ ಸಿ ಮೋಟರ್ ವರ್ಕರ್ಸ್ ಎಸೋಸಿಯೇಶನ್

ಸಿ ಪಿ ಸಿ ಮೋಟರು ಕೆಲಸಗಾರರ ಎಸೋಸಿಯೇಶನು ಒಂದು ಸ್ಥಾಪಿತವಾಗಿದೆ

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಕಣ್ಣೀರುವ[illegible]ತ ಗ್ರಾಮದ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಕಳವು ಮಾಡಿದ ವಾರ್ತೆ ಸಳ್ಳೆಂದು ಆ ಗ್ರಾಮದ ಪಟೇಲರ ತಿಳಿಸುತ್ತಾರೆ ಸಳ್ಳು ವಾರ್ತೆಯು ಪ್ರಕಟವಾದದಕ್ಕಾಗಿ ವಿಷಾದ

ತಾಲೂಕು ಸಮಾಚಾರ

ಉಡುಪಿ

ಹೈಸ್ಕೂಲಲ್ಲಿ ಕೊರಗರ ಮಕ್ಕಳಿಗೆ ಪ್ರವೇಶ:—ಸ್ಥಳೀಯ ಬೋರ್ಡು ಹೈಸ್ಕೂಲಲ್ಲಿ ಮಾಧ್ಯಮಿಕ ಶಿಕ್ಷಣ ಪಡೆಯುವರೆ ಕೊರಗರ ಮಕ್ಕಳಿಗೆ ಪ್ರವೇಶ ದೊರೆತಿರುವುದಾಗಿ ತಿಳಿದು ಬರುತ್ತದೆ ಮೇಲ್ತರಗತಿಯ ಮಕ್ಕಳಿಂದ ಯಾವ ರೀತಿಯ ಆಕ್ಷೇಪಗಳಿಲ್ಲದಿರುವುದು ಎತ್ತಿ ಹೇಳಬೇಕಾಗಿದೆ ಜುಮ್ಲಾ ೩೪ ಮಂದಿ ಬಾಲಕರು ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವರು

ಅಳಿಯಕಟ್ಟಿನವರ ಸಭೆ:—ಪ್ರಕೃತ ಮುಂದೆ ಬಂದಿರುವ ಮದ್ರಾಸ್ ಅಳಿಯಸಂತಾನ ಮಸೂದೆಯ ನಕಲನ್ನು ಚರ್ಚಿಸಲು ಶ್ರೀ ಬಿ ಶ್ಯಾಮರಾಯ ಸೆಟ್ಟಿ ಬಿ ಎ. ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಅಳಿಯ ಸಂತಾನಿಗರ ಸಭೆಯೊಂದು ಸ್ಥಳೀಯ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿತು ಶ್ರೀ ಎನ್ ಎಸ್ ಕಿಲ್ಲೆಯವರು ಮಸೂದೆಯನ್ನೋದಿ ಪ್ರಾಮುಖ್ಯಾಂಶಗಳನ್ನು ವಿವರಿಸಲಾಗಿ, ಕೆಲ ಚರ್ಚೆ ನಡೆದು ಮಸೂದೆಯನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತ ಬರುವ ಮಹಾಸಭೆಗೆ ಉಡುಪಿ ತಾಲೂಕಿನಿಂದ ಪ್ರತಿನಿಧಿಗಳನ್ನು ಪ್ರತಿ ೧, ಬೋ ಸರ್ಕಲಿಗೆ ಹೋಗಿ ಸಭೆ ಕೂಡಿಸಿ ಆ ಮೂಲಕ ಚುನಾಯಿಸುವುದು ಯುಕ್ತವೆಂದು ಆ ವಿಚಾರವನ್ನು ಮುಂದರಿಸಲಾಯಿತು ಶ್ರೀ ಗಳಾದ ಬಿ ಸುಬ್ಬಯ್ಯ ಹೆಗ್ಗಡೆ, ಮೊದಲ್ತಾಗು ಜಗನ್ನಾಥ ಶೆಟ್ಟಿ ಮೊದಲಾದವರು ಕೊಟ್ಟ ಸೂಚನೆಗಳನ್ನು ಪರಿಷತ್ತಿನ ಮುಂದೆ ಇಡುವರೆ ರಿಕಾರ್ಡ್ ಮಾಡಲಾಯಿತು ಶ್ರೀ ಹೊನ್ನಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಲು ಸಭಾಂತ್ಯವಾಯಿತು.

ಕುಂದಾಪುರ

ಬೈಂದೂರು: ಜಡ್ಕಲ್ ನದಿಯ ಗುತ್ತೆದಾರನು ಪ್ರಯಾಣಿಕರಿಂದ ಹೆಚ್ಚು ಸುಂಕವನ್ನು ವಸೂಲುಮಾಡುತ್ತಾನೆಂದು ತಿಳಿದ ಶ್ರೀ ಒ ಸುಬ್ಬಣ್ಣ ಶೆಟ್ಟರ ಪಟೇಲರು ಪೋಲೀಸ ಧನಿಗೆ ಪತ್ರ ಕೊಟ್ಟು ಕತವು ದಾಟಿದರ ಆಚೆ ದಡ ಸೇರಿ ತನ್ನ ನಿಜವೇಷ ತೋರಿಸಲು ಕಡವಿನವನು ಕ್ಷಮೆಕೇಳಿದನೆಂದೂ ಮುಂದೆ ತಾನು ಹಾಗೆ ಮಾಡುವುದಿಲ್ಲವಾಗಿ ಬರೆದುಕೊಟ್ಟನೆಂದು ತಿಳಿದು ಬರುತ್ತದೆ

ಹಾಗೆಯೇ ಶ್ರೀ ಶೆಟ್ಟರು ವಿಮಾನುಕೊಂಡು ಹೋಗುವ ಪಾರ್ವಿ ಮತ್ತು ಮೊಗೇರ ಹೆಂಗಸರಿಗೆ ಉಪದ್ರವಕೊಡುತ್ತಿದ್ದ ಶೀರೂರಿನ ಕೆಲವು ಕುಂಟರನ್ನು ಪೋಲೀಸರಿಂದ ಹಿಡಿಸಿ ಅವರಿಂದ ಜಾಮೀನು ಮುಚ್ಚಳಿಕೆ ಬರಸಿಕೊಂಡದ್ದಲ್ಲದೆ ನಷ್ಟಹೊಂದಿದ ಹೆಂಗಸರಿಗೆ ಸ್ವಲ್ಪ ಪರಿಹಾರ ದ್ರವ್ಯವನ್ನು ಕೊಡಿಸಿದರೆಂದೂ ತಿಳಿದುಬರುತ್ತದೆ. ಬಡವರ ಸೇವೆಗಾಗಿ ದುಡಿಯುತ್ತಿರುವ ಶ್ರೀ. ಶೆಟ್ಟರ ಸಾಹಸವು ಶ್ಲಾಘ್ಯವಿದೆ.

ಪಡುಬಿದ್ರೆ:—ಇಲ್ಲಿ ಬೋ. ಹಾ. ಎ ಶಾಲೆಯ ಮುಖ್ಯೋಪಾಧ್ಯಾಯರಾಧ ಶ್ರೀ. ಎ. ಎನ್. ಹೆಬ್ಬಾರರು ಕಾಪು ಬೋ. ಹಾ. ಎ. ಶಾಲೆಗೂ, ಎರ್ಮಾಳ ಬೋ ಹಾ. ಎ ಶಾಲೆಯ ಮುಖ್ಯೋಪಾಧ್ಯಾಯರಾಧ ಶ್ರೀ ಉದ್ಯಾವರ ನಾರಾಯಣ ನಾಯ್ಕರವರು ಇಲ್ಲಿಗೂ, ಹೆಬ್ರಿ ಬೋ ಹಾ ಎ ಶಾಲೆಯ ಸಹಾಯಕ ಉಪಾಧ್ಯಾಯರೂ, ಪಡುಬಿದ್ರೆಯ ನಿವಾಸಕರೂ ಆದ ಶ್ರೀ ಎಮ್ ಮಂಜುನಾಥ ಪ್ರಭುಗಳು ಎರ್ಮಾಳ ಬೋ ಹಾ ಎ ಶಾಲೆಯ ಮುಖ್ಯೋಪಾಧ್ಯಾಯರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ

ಪುತ್ತೂರು

ಪುತ್ತೂರು ತಾಲೂಕಿನ ಮಹಾಜನರ ಅವಗಾಹನೆಯಬಗ್ಗೆ ಪುತ್ತೂರುತಾಲೂಕಿನಲ್ಲಿ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರಾಗಕಕ್ಕವರೆಲ್ಲರೂ ತಾ ೧೫ ನೇ ತಾರೀಕಿನೊಳಗೆ ಆಯಾ ಗ್ರಾಮ ಕಾಂಗ್ರೆಸ ಕಮಿಟಿಯ ಮುಖಾಂತ್ರ ಸದಸ್ಯರಾಗತಕ್ಕದ್ದು ಗ್ರಾಮಕಮಿಟಿಯು ಇಲ್ಲದವರು ಸಮೀಪವಿರುವ ಕಮಿಟಿಯೊಡನೆ ಸದಸ್ಯರಾಗಬಹುದು. ಸದಸ್ಯತನದ ಪುಸ್ತಕ ಬೇಕಾದವರು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಿಂದ ಪಡಕೊಳ್ಳಬಹುದೆಂದು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ

ಒಂದು ಬಾತ್ಮಿ:—ಬಾರ್ಕೂರು ಬಿಲ್ಲವರ ಚೇರಿಟಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಪೈ ಸಬ್ಬ ಇವರು ಬಿಲ್ಲವ ಜಾತಿಯವರಿಗಾಗಿ ಊತ ಪಿಯಲ್ಲಿ ಒಂದು ದೇವಸ್ಥಾನ ಕಟ್ಟಿಸುವುದರ ಅವಶ್ಯಕತೆಯ ಕುರಿತು ತಾನು ಮುಂದಿನ ಸಭೆಯಲ್ಲಿ ತರಲಿರುವ ಸೂಚನೆಯ ವಿಷಯದಲ್ಲಿ ಬಿಲ್ಲವ ಸಮಾಜದವರು ಗಮನಕೊಟ್ಟು ಪ್ರೋತ್ಸಾಹಿಸಬೇಕೆಂಬ ಲೇಖನವೊಂದನ್ನು ಕಳುಹಿಸಿರುತ್ತಾರೆ

ಕಾಸರಗೋಡು

ಕಾಸರಗೋಡು ತಾಲೂಕಿನ ಮಹಾಜನರಲ್ಲಿ ವಿನಂತಿ:—ಮಲಬಾರಿನ ಗೇಣಿಕ್ರಮದ ವಿಚಾರಣೆ ನಡೆಸುವರೆ ಮದ್ರಾಸ್ ಸರಕಾರದಿಂದ ನೇಮಿಸಿದ ಕಮಿಟಿಯವರು ಈ ತಾಲೂಕಿನ ಕುರಿತು ಸಹಾ ವಿಚಾರಣೆ ನಡೆಸಬೇಕಾಗಿ ಹುಕುಂ ಆಗಿರುತ್ತದೆ ಈ ಕಮಿಟಿಯವರು ಆಗೋಸ್ತು ಅಂತ್ಯದೊಳಗೆ ಇತ್ತ ಕಡೆ ಬರಬಹುದು ಆ ವೇಳೆ ಅವರಿಗೆ ಅವಶ್ಯವಿರುವ ಮಾಹಿತಿಯನ್ನು ಕೊಡಬೇಕಾಗುವುದರಿಂದ ಈ ಕೆಳಗಿನ ವಿಷಯಗಳ ಕುರಿತು ಮಾಹಿತಿಯನ್ನು ಪತಿಯೊಬ್ಬರು ತಮ್ಮ ಸರಹದ್ದಿನ ಹಳ್ಳಿಗಳ ಮಟ್ಟಿಗೆ ಆದಷ್ಟು ಬೇಗನೆ ಕಾಸರಗೋಡು ತಾಲೂಕು ಕಾಂಗ್ರೆಸು ಆಫೀಸಿಗೆ ಕಳುಹಿಸಬೇಕಾಗಿ ವಿನಂತಿ

(೧) ಒಕ್ಕಲುಗಳ ಸಾಮಾನ್ಯ ಸ್ಥಿತಿ (೨) ಹುಟ್ಟುವಳಿಗೂ ಗೇಣಿ ಮತ್ತು ತೀರ್ವೆಗೂ ಇರುವ ಪರಿಮಾಣ (೩) ಒಕ್ಕಲು ಕಸದೆ ಸ್ಥಿರತೆ (೪) ರಶೀದಿಗಳನ್ನು ಕೊಡುವ ಕ್ರಮವು ಇದೆಯೋ? (೫) ಬೇಸಾಯದ ಸಾಧಾರಣ ಖರ್ಚು [ಒಂದು ಎಕ್ರೆಗೆ] (೬) ಗೇಣಿ ಅಳತೆ ಮಾಡಲು ಉಪಯೋಗಿಸುವ ಪರೆಯು ಸರಕಾರದಿಂದ ನಿಯಮಿಸಿದ್ದೋ ಅಲ್ಲವೋ? (೭) ಬಿಟ್ಟಿಬೇಗಾರಿ ಇಲ್ಲವೆ ಕಾಣಿಕೆ ಇತ್ಯಾದಿ ಕ್ರಮಗಳಿವೆಯೋ? (೮) ಒಕ್ಕಲುಗಳ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ತಕ್ಕ ಸೂಚನೆಗಳು.

ನಿಮ್ಮ ಆಸುಪಾಸಿನ ಹಳ್ಳಿಗಳಲ್ಲಿ ಕರಪಾಳು ಗದ್ದೆ ಮತ್ತು ಭಾಗ್ಯಾಯತುಗಳ ಹುಟ್ಟುವಳಿ, ತೀರ್ವೆ, ಬೇಸಾಯದ ಖರ್ಚು, ಗೇಣಿ ಇವುಗಳ ಲೆಖ್ಖವನ್ನು ಸಂಗ್ರಹಿಸಿ ಕಳುಹಿಸಿದರೆ ಹೆಚ್ಚಿನ ಉಪಯೋಗವಾಗುವುದು ಎಂದು ಕಾಸರಗೋಡು ತಾ. ಕಾಂ. ಕಮಿಟಿಯು ಪ್ರಕಟಿಸಿದೆ.

ಕರ್ನಾಟಕ ಸಮಾಚಾರ

ಮೈಸೂರು

ಆರ್ಮಿ ಇಂಡಿಯನೈಜೇಶನ್ ಸಮಿತಿ —ಮೇಲ್ಕಂಡ ಸಮಿತಿಯ ಸದಸ್ಯರುಗಳು ಬೆಂಗಳೂರಿಗೆ ಕಳೆದ ವಾರ ಬಂದು, ಸರ್ಕಾರದ ಅತಿಥಿಗಳಾಗಿ ಕುಮಾರ ಪಾರ್ಕಿನಲ್ಲಿ ಬಿಡಾರ ಮಾಡಿದ್ದರು ಇವರನ್ನು ದಿವಾನರು ಸ್ವಾಗತಿಸಿದರು. ದಂಡಿನಲ್ಲಿರುವ ಮಿಲಿಟರಿ ಯೂನಿಟ್ಟುಗಳನ್ನು ಪರೀಕ್ಷಿಸಿದರು ಈ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಡಾ ಮುಂಜೆಯವರು ವಿಶ್ವವಿದ್ಯಾನಿಲಯದ ಸಂಸದಾಶ್ರಯದಲ್ಲಿ ಸೈನ್ಯ ವಿಚಾರವಾಗಿ ಒಂದು ಸ್ವಾರಸ್ಯವಾದ ಭಾಷಣವಿತ್ತರ

ಪ್ರಾರಂಭೋತ್ಸವ—ದಿವಾನರಾದ ಸರ್. ಮಿರ್ಜಾ ಇಸ್ಮಾಯಿಲ್‌ರವರು ನಿನ್ನೆಯ ದಿನ ಟಿ ನರಸೀಪುರಕ್ಕೆ ತಕ್ಕ ಪರಿವಾರದೊಡನೆ ಪ್ರಯಾಣ ಬೆಳಸಿ ಅಲ್ಲಿ ಸ್ಥಾಪಿಸಲ್ಪಟ್ಟಿರುವ ನೂತನ ಸಿಲ್ಕ್ ಫಿಲೇಚರ್ಸ್ಸಿನ ಪ್ರಾರಂಭೋತ್ಸವ ನೆರವೇರಿಸಿದರು

ಸುಂಕ ಕೊಡಬೇಕಾಗಿಲ್ಲ:— ಪ್ರಿನ್ಸ್ ಜಯಚಾಮರಾಜೇಂದ್ರ ಒಡೆಯರವರಿಗೆ ಪರದೇಶದಿಂದ ಬರುವ ವಸ್ತುಗಳಿಗೆ ತೆರಿಗೆ ಕೊಡಬೇಕಾಗಿಲ್ಲವೆಂದು, ಪೌರ ಸಭೆಯಲ್ಲಿ ತೀರ್ಮಾನಿಸಿದರು.

ಮೈಸೂರು ಸರಕಾರದ ಉದಾರ ದಾನ.—ಡಾ॥ ಮುಂಜೆಯವರು ನಾಸಿಕದಲ್ಲಿ ಸ್ಥಾಪಿಸುವ ಭೋನ್ಸ್ಲೆ ಮಿಲಿಟರಿ ಶಾಲೆಗೆ, ಮೈಸೂರು ಸರಕಾರದವರು ೧೦ ಸಾವಿರ ರೂ. ಕೊಟ್ಟಿರುತ್ತಾರೆಂದು ಹೇಳಲಾಗಿದೆ.

ಪತ್ರಿಕೋದ್ಯೋಗಿಗಳ ಸ್ಮಾರಕಕ್ಕೆ:— ಗತಿಸಿದ ಪತ್ರಿಕೋದ್ಯೋಗಿಗಳೂ, ರಾಜಸೇವಾ ಸಕ್ತರೂ ಆದ ಶ್ರೀ. ಎಂ. ವೆಂಕಟ ಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ, ಒಂದು ಉಪನ್ಯಾಸ ನಡೆಸುವ ಸಲುವಾಗಿ ಬೆಂಗಳೂರಿನ ಶ್ರೀ ಪಿ ಆರ್ ರಾಮಯ್ಯನವರ ಪತ್ರಿಕೋದ್ಯೋಗಿಗಳ ಸಂಘಕ್ಕೆ ೫೦೦ ರೂ ದಾನಮಾಡಿರುತ್ತಾರೆ

ಲೇಬರ್ ಮುಖಂಡರಿಗೆ ಶಿಕ್ಷೆ.—ಲೇಬರ್ ನ ಮುಖಂಡರಾದ ಶ್ರೀ ಯಸ್ ರಾಮಸ್ವಾಮಿಗಳು ಪ್ರತಿಬಂಧಕಾಜ್ಞೆ ಮೀರಿದರೆಂದು, ಸ್ಥಳೀಯ ಮೆ॥ ಅವರಿಗೆ ೫ ತಿಂಗಳು ಕಠಿಣ ಸಜೆ ೧೫೦ ರೂ ಜುಲ್ಮಾನೆ, ಅದು ತಪ್ಪಿದಲ್ಲಿ ಮತ್ತು ೩ ದು ತಿಂಗಳ ಸಜೆ ವಿಧಿಸಿದರ

ಬೆಳಗಾವಿ

ಸಾಕ್ಷರತಾ ಪ್ರಸಾರದ ಉದ್ಘಾಟನೆ.—ಇದೇ ತಿಂಗಳ ೨೧ನೇ ತಾರೀಕಿಗೆ ಇಲ್ಲಿಯ ಸಾಕ್ಷರತಾ ಪ್ರಸಾರದ ಪ್ರಾರಂಭೋತ್ಸವವನ್ನು ನೆರವೇರಿಸುವದಕ್ಕಾಗಿ, ಮುಂಬಾಯಿ ಸರಕಾರದ ವಿದ್ಯಾ ಖಾತೆಯ ಉಪಮಂತ್ರಿಗಳಾದ ಸೌ ಹಂಸಾ ಮೆಹತಾರವರು ಬರುವರಿದ್ದಾರೆ.

ಸರಕಾರಿ ನೌಕರರು ಭಾಗವಹಿಸಬಹುದು—ಸಾಕ್ಷರತಾ ಪ್ರಸಾರ ಕಾರ್ಯದಲ್ಲಿ ಆಫೀಸ ವೇಳೆ ಬಿಟ್ಟು ಉಳಿದ ವೇಳೆಯಲ್ಲಿ ಸರಕಾರಿ ನೌಕರರಿಗೆ ಭಾಗವಹಿಸಲಿಕ್ಕೆ ಅಡ್ಡಿಯಿಲ್ಲ ಎಂದು ಮುಂಬಾಯಿಯ ಸರಕಾರದವರು ತಿಳಿಸಿದ್ದಾರೆ ಲೋಕಲ್ ಬೋರ್ಡಿನಿಂದ ನೇಮಕವಾಗುವ ಶಿಕ್ಷಕರಲ್ಲಿ ಸುಮಾರು ೨೦ ಜನರನ್ನು ಸಾಕ್ಷರರನ್ನಾಗಿ ಯಾರು ಮಾಡಿರುತ್ತಾರೋ, ಅವರಿಗೇ ಪ್ರಾಶಸ್ತ್ಯ ಕೊಡಲಾಗುವದು.

ಕರ್ನಾಟಕ ಲಾ ಕಾಲೇಜ—ಇಲ್ಲಿ ಸ್ಥಾಪಿತವಾದ ಲಾ. ಕಾಲೇಜು ಬರುವ ನವಂಬರದಲ್ಲಿ ಇಲ್ಲವೆ ಅನಿವಾರ್ಯ ಕಾರಣಗಳಿಗಾಗಿ ಮುಂದೆ ೧೯೪೦ರ ಜನವರಿ ತಿಂಗಳಲ್ಲಿ ನಿಶ್ಚಯವಾಗಿ ಪಾರಂಭವಾಗುವುದು.

ಜಪಾನಿಗೆ ಬೆದರಿ ಬ್ರಿಟನು ಶರಣಾಗತವಾಯಿತೇ?

ಜಪಾನಿಗೆ ಬ್ರಿಟನು ಶರಣಾಯಿತೇ?

ಬ್ರಿಟಿಷ್ ಸ್ಥಳದಲ್ಲಿರುವ ನಾಲ್ಕು ಜನ ಚೈನೀಯರನ್ನು, ಅವರು ಕೊಲೆ ಘಾತಕಿಗಳೆಂದು ಜಪಾನು ಅವರನ್ನು ಬಿಟ್ಟುಕೊಡಲು ಕೇಳಿದುದರಿಂದ, ಬ್ರಿಟಿಷ್ ಸರಕಾರದ ಮೂಲಭೂತ ರಕ್ಷಣಾನೀತಿಯನ್ನೇ ಅಲ್ಲಗಳೆದು ಅವರನ್ನು ಜಪಾನೀಗೆ ಬಲಿಕೊಡುವ ನಿಶ್ಚಯವಾಗಿದೆ.

ಈ ಕುರಿತು ಹಿಂದೆ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಚೆಂಬರ್ಲೆನರು ಇವರು ಖೂನಿಗಾರರೆಂಬ ಆಕ್ಷೇಪವಿರುವುದಾದರೂ, ನ್ಯಾಯವಾದ ಸಾಕ್ಷ್ಯವನ್ನು ಕೊಡದ ವಿನಹ ಬಿಟ್ಟುಕೊಡಲಾಗುವುದಿಲ್ಲವೆಂದು ಹೇಳಿದ್ದರು.

ಲಾರ್ಡ್ ಹಾಲಿಫಾಕ್ಸರಿಗೆ ಅನೇಕ ಕಡೆಗಳಿಂದ ಈ ಕುರಿತು ಬ್ರಿಟಿಷ್ ಧೋರಣೆಯನ್ನು ಖಂಡಿಸಿ ತಂತಿಗಳು ಬರುತ್ತಿವೆ.

ಬ್ರಿಟನಿನಲ್ಲಿ 'ಬ್ಲೇಕ್—ಔಟ್'

ಯುದ್ಧ ಸಿದ್ಧತೆಯ ಸಮಯದಲ್ಲಿ ಬ್ರಿಟನಿನ ಶಕ್ತಿಯನ್ನು ಪ್ರದರ್ಶಿಸಲು ಲಂಡನಿನ ೨೭೦೦೦ ಚದುರ ಮೈಲುಗಳ ಸ್ಥಳದಲ್ಲಿ ಸಂಪೂರ್ಣ ಕತ್ತಲು ಮಾಡಲಾಯಿತು.

ಈಸ್ಟ್ಲೇಂಡಿನ ಬೊಂಬ್ ಹಡೆಯುವರು ಪ್ರಾನ್ಸಿಗೆ ಅಡ್ಡ ಹಾರಿದರು 'ವೆಸ್ಟ್ಲೇಂಡಿ'ನ ಸರ್ಚ್ ಲೈಟಿನಿಂದ ಅವರನ್ನು ಕಂಡು ಹುಡುಕಲಾಯಿತು. ಶತ್ರುಗಳ ಬರುವಿಕೆಗೆ ತಯಾರಾಗಿ ಸಾವಿರಾರು ಮಂದಿ ಶಸ್ತ್ರ ಸಿದ್ಧತೆಯ ಪ್ರದರ್ಶನ ಮಾಡಿದರು.

ಈ ಬ್ಲೇಕ್ ಔಟಿಗಾಗಿ ೧೫೦,೦೦೦ ಪವನುಗಳು ಖರ್ಚಾಗಿದೆ.

ಬ್ರಿಟಿಷ್ ಶಿಲ್ಪಿಯು ಬತ್ತಲೆಯಾಗಲು ಒಪ್ಪಲಿಲ್ಲ

ಬ್ರಿಟಿಷರನ್ನು ಟೆನಿಸ್ಟೈನಿನಲ್ಲಿ ದಿಗಂಬರರನ್ನಾಗಿ ಮಾಡುವ ಜಪಾನೀಯರ ಕೆಲಸವು ನಡೆಯುತ್ತದೆಯಷ್ಟೆ? ಮೆಕ್ಲ್ಯೂರ್ ಎಂಡರ್ಸನ್ ಎಂಬ ಬ್ರಿಟಿಷ್ ಶಿಲ್ಪಿಯು ತನ್ನನ್ನು ದಿಗಂಬರ ಮಾಡಲು, ಜಪಾನು ಸೈನಿಕನಿಗೆ ಅಡ್ಡಿ ಮಾಡಿದನು. ಅವನೊಡನೆ ಆತನ ಧರ್ಮಪತ್ನಿಯೂ ಇದ್ದಳು. ಸ್ವಲ್ಪ ಕಾಲದ ತನಕ ಮಾತುಕತೆಯಾಗಿ ಕಡೆಗೆ ಬ್ರಿಟಿಷ್ ಶಿಲ್ಪಿಯನ್ನು ಒಳಹೋಗಬಿಟ್ಟರು.

ರೂಸುವೆಲ್ಟರ ಶಾಂತಿಸಾಧನೆಯ ಭಂಗ

ಅಮೇರಿಕದ ಕಾಂಗ್ರೆಸು ಸಮ್ಮೇಳನದಲ್ಲಿ ಮಾತನಾಡುತ್ತಾ ಪ್ರೆಸಿಡೆಂಟ್ ರೂಸ್‌ವೆಲ್ಟರು ನ್ಯೂಟ್ರಾಲಿಟಿ ಬಿಲ್ಲನ್ನು ಪ್ರತಿನಿಧಿ ಸಭೆಯಲ್ಲಿ ಮಂಜೂರುಮಾಡದ ನಿಮಿತ್ತ, ತನ್ನ ಕೈಯು ಕಟ್ಟಲ್ಪಟ್ಟಿತೆಂದೂ, ತಾನು ಯುದ್ಧದ ಸಂಭವವನ್ನು ತಪ್ಪಿಸುವ ಸಾಧನೆಮಾಡುತ್ತಿರುವಾಗ ವಿರೋಧಿಗಳು ಅದನ್ನು ಭಗ್ನಮಾಡುವ ರೀತಿಯಲ್ಲಿ ವರ್ತಿಸಿದರೆಂದೂ ಹೇಳಿದರು.

ನ್ಯೂಟ್ರಾಲಿಟಿ ಬಿಲ್ಲು ಹಾಳಾದುದರಿಂದ ಮಿಲಿಯಾಂತರ ಮಂದಿಯ ಪ್ರಾಣಹಾನಿ ಮಾಡಿದಂತಾಯಿತೆಂದರು ರೂಸ್‌ವೆಲ್ಟರು.

ಜರ್ಮನ್ ಮಂತ್ರಿಮಂಡಳದ ಸಭೆ

ಜರ್ಮನ್ ಮಂತ್ರಿಮಂಡಳದ ಸಭೆ ಸೇರಿ, ಪ್ರಥಮತಃ ಡಾನ್ಜಿಗ್ ಪೋಲೆಂಡುಗಳ ವಿಷಯವೂ, ಆ ಮೇಲೆ ಯೂರೋಪಿನ ಪರಿಸ್ಥಿತಿಯ ವಿಷಯವೂ ಚರ್ಚಿಸಲಾಯಿತು.

ಹಂಗೇರಿ, ಸ್ಲೊವೇಕಿಯಗಳು ಮತ್ತು ಜರ್ಮನಿಗಳ ಸಂಬಂಧವು ತೃಪ್ತಿಕರವಾಗಿಲ್ಲದಿರುವ ವಿಷಯವೂ ಆಲೋಚಿಸಲ್ಪಟ್ಟಿತು.

ಇಟಲಿಯಿಂದ ಕೌಂಟ್ ಸಿಯಾನೋ ಜರ್ಮನಿಗೆ ಬಂದಿದ್ದಾನೆ.

ಯುಗೋಸ್ಲೇವಿಯವು ಪ್ರಾಣಾಂತಿಕದಲ್ಲಿದೆ!

ಸ್ಪೈನಿನ ಪ್ರಧಾನ ಮಂತ್ರಿ ಜನರಲ್ ಫ್ರಾಂಕೋ!

ಜರ್ಮನಿಯಿಂದ ಅನಾರ್ಯರ ಬಹಿಷ್ಕಾರ

ಜರ್ಮನಿಯಿಂದ ಅನಾರ್ಯರ ಬಹಿಷ್ಕಾರ

ಜರ್ಮನಿಯಲ್ಲಿರುವ ಅನಾರ್ಯರಾದ ಕ್ರಿಸ್ತನರು ಮತ್ತು ಯೆಹೂದಿಗಳನ್ನು ಹೊರಗೆ ಹಾಕುವ ಕೆಲಸವು ಹಿಟ್ಲರನ ರಾಜ್ಯದಲ್ಲಿ ಭರದಿಂದ ಸಾಗುತ್ತಿದೆ.

ಹಿಟ್ಲರನು ಅಧಿಕಾರಕ್ಕೆ ಬಂದ ಆರು ವರ್ಷಗಳ ಅವಧಿಯಲ್ಲಿ ೩೫೦,೦೦೦ ಮಂದಿ ಬಹಿಷ್ಕೃತರಾಗಿದ್ದಾರೆ.

ವಿಯೇನ್ನಾದಲ್ಲಿ ಈ ಪ್ರಚಾರದಿಂದ ಯೆಹೂದ್ಯರು ಮತ್ತು ಅನಾರ್ಯರಾದ ಕ್ರಿಶ್ಚನರು ಆಹಾರವನ್ನು ಪಡೆಯುವುದೇ ಕಷ್ಟಕರವಾಗಿದೆ. ಅವರ ಮೇಲೆ ಕರುಣೆಗೊಂಡವರು ಕಳುಹಿಸುವ ಆಹಾರಸಾಮಗ್ರಿಗಳ ಮೇಲೆ ಅವರು ಆಧರಿಸಿರಬೇಕಾಗಿದೆ.

ಜರ್ಮನಿಯ ಸೆರೆಯಲ್ಲಿರುವ ಹೆಂಗುಸರ ಸ್ಥಿತಿ

ರಾಜಕೀಯ ದ್ರೋಹ ಮತ್ತು ಇತರ ಕಾರಣಗಳ ನಿಮಿತ್ತ ಬಂಧಿತರಾದ ಹೆಂಗುಸರಿಗೆ ಪ್ರತ್ಯೇಕ ಶಿಬಿರವೊಂದು ನಿರ್ಮಿತವಾಗಿದೆ. ಅದು ಒಳ್ಳೆಯ ವಾತಾವರಣದಲ್ಲಿದ್ದು, ಮನೋಹರ ಸರೋವರಗಳು, ಸುಂದರ ಹೂದೋಟವೇ ಮೊದಲಾದುವುಗಳಿಂದ ಜೀವನದ ಸೌಂದರ್ಯಗಳುಳ್ಳದ್ದಾಗಿರುತ್ತದೆ.

ದಿನಕ್ಕೆ ಒಂಬತ್ತು ತಾಸುಗಳ ಕೆಲಸಗಳನ್ನು ಅವರು ಮಾಡಬೇಕು. ಅವರನ್ನು ಯಾರೂ ಸಂದರ್ಶಿಸಲುಕೂಡದು. ಆದರೆ ತಿಂಗಳಿಗೊಮ್ಮೆ ಅವರು ಮನೆಗೆ ಪತ್ರವ್ಯವಹಾರ ಮಾಡಬಹುದು.

ಒಳ್ಳೆಯ ಆಹಾರವೂ ಅವರಿಗೆ ಕೊಡಲ್ಪಡುತ್ತದೆ. ಗುಪ್ತಮಾತುಕತೆಗಳಾಗಲಿ, ಯಾವುದೇ ವ್ಯವಹಾರವಾಗಲಿ ಅಲ್ಲಿ ನಿಷಿದ್ಧವಾಗಿರುತ್ತದೆ. ಹಾಗೆ ಯಾರಾದರೂ ಬಂದಿಗಳಾದ ಹೆಂಗುಸರು ಮಾಡುತ್ತಿರುವರೆಂದು ತಿಳಿದಲ್ಲಿ ಅವರ ಪೂರ್ಣ ಶೋಧನೆ ನಡೆಸಲಾಗುವುದಲ್ಲದೆ ಮುಂದೆ ಯಾವ ರೀತಿಯ ದಂಡನೆಯನ್ನು ಅವರಿಗೆ ವಿಧಿಸಲಾಗುವುದೆಂದು ಹೇಳಬರುವಂತಿಲ್ಲ.

ಜರ್ಮನಿಯ ಜನರ ಶಕ್ತಿಶೋಧನೆ

ಜರ್ಮನಿಯು ೧೨ ವರ್ಷದಿಂದ ೧೮ ವರ್ಷದೊಳಗಿನ ಯುವಕರನ್ನು ಅವರವರ ಜ್ಞಾನಶಕ್ತಿ ಶರೀರಶಕ್ತಿಗಳ ಪರೀಕ್ಷೆಯ ಕಾರ್ಯವು ಆರಂಭವಾಗಿದೆ. ಯುದ್ಧವಾಗುವ ಸಂದರ್ಭದಲ್ಲಿ ಯಾರು ಯಾವ ಯಾವ ಕೆಲಸಕ್ಕೆ ಯೋಗ್ಯರೆಂಬುದನ್ನು ನಿಶ್ಚಯಿಸುವ ಸಲುವಾಗಿ ಈ ಕಾರ್ಯಕ್ರಮವಾಗಿರುತ್ತದೆ.

"ಜರ್ಮನಿಯ ಮೇಲೆ ಇತರರು ಕಾದಾಡಲು ಬಂದಲ್ಲಿ ಗಂಡಸರೂ ಹೆಂಗುಸರೂ ಯುದ್ಧರಂಗಕ್ಕಿಳಿದು ಹೋರಾಡಲು ಸಿದ್ಧರಾಗಿರಬೇಕೆಂದು ಸೈನ್ಯಶಾಖೆಯ ಪ್ರಕಟಣೆಯೊಂದು ಹೊರಬಿದ್ದಿರುತ್ತದೆ.

೬ ವರ್ಷದಿಂದ ೭೦ ವರ್ಷಗಳ ವರೆಗಿನ ಎಲ್ಲಾ ಜರ್ಮನರ ಯೆಹೂದ್ಯರ ಜನಗಣನೆಯು ಆರಂಭವಾಗಿದೆ.

ಜರ್ಮನಿಯು ಶಾಂತನಿರ್ಧಾರದಲ್ಲಿದೆ

ಜನರಲ್ ಗೋರಿಂಗರವರು ಜರ್ಮನಿಯ ಸೈನ್ಯದಲವನ್ನು ಪರೀಕ್ಷಿಸಿ ನೋಡುತ್ತಾ ಇಂದು ಜರ್ಮನಿಯು ತೀವ್ರ ಆಕ್ರಮಣ ಕಾಲದಲ್ಲಿ ಭದ್ರವಾದ ಸಿದ್ಧತೆಯನ್ನು ಸಂಪೂರ್ಣ ಮಾಡಿರುವುದೆಂದೂ, ಯಾವ ಗೊಂದಲದಲ್ಲಿಯೂ ಇರುವುದಿಲ್ಲವೆಂದೂ ಹೇಳುತ್ತಾರೆ.

ಹಿಟ್ಲರನಲ್ಲಿಗೆ ದೂರು

ಡಾನ್ಜಿಗನಲ್ಲಿರುವ ಜರ್ಮನಿಯ ಆಫೀಸರರಾದ ಹೆರ್ ಫೋರ್ಸ್ಟರ್ ಮತ್ತು ಹೆರ್ ಬಾಕೆ ಇವರು ವಿಮಾನದಲ್ಲಿ ಜರ್ಮನಿಗೆ ತೆರಳಿ ಹಿಟ್ಲರನೊಡನೆ ಡಾನ್ಜಿಗನ ವಿಚಾರವನ್ನು ವಿವರಿಸುವರು.

ಎರಡು ತಿಂಗಳ ಹಿಂದೆ ಡಾನ್ಜಿಗನಲ್ಲಿ ಬಂಧಿತನಾದ ಪೋಲೆಂಡಿನ ಕಸ್ಟಮ್ ಆಫೀಸರನಿಗೆ, ಹಿಟ್ಲರ್ ಮತ್ತು ಗೋಬೆಲ್ಸರಿಗೆ ಅಪಮಾನ ಮಾಡಿದ ಅಪಾದನೆಯ ಮೇರೆಗೆ ಸಜೆಯು ವಿಧಿಸಲಾಗಿದೆ.

ಪೋಲೆಂಡಿನ ಉಗ್ರ ನೀತಿಯನ್ನು ಖಂಡಿಸಿ ಜರ್ಮನಿಯು ಪೋಲೆಂಡನ್ನು ಎಚ್ಚರಿಸುತ್ತದೆ.

ಸ್ಪೈನಿನ ಪ್ರಧಾನ ಮಂತ್ರಿಯು ಫ್ರಾಂಕೊ

ಜನರಲ್ ಫ್ರಾಂಕೊ ತನ್ನ ಮಂತ್ರಿಮಂಡಲದಲ್ಲಿ ಪ್ರಧಾನ ಮಂತ್ರಿತ್ವವನ್ನು ವಹಿಸಿಕೊಂಡಿರುವನು. ಯಾವ ಇಲಾಖೆಯ ಕೆಲಸವನ್ನೂ ತಾನು ಪ್ರತ್ಯೇಕ ಇಟ್ಟುಕೊಂಡಿರುವುದಿಲ್ಲ.

ಉಪಪ್ರಧಾನ ಮಂತ್ರಿಯಾಗಿ ಪ್ರಸ್ತುತ ಜನರಲ್ ಜೋರ್ಡೋನನ ನೇಮಕವಾಗಿದೆ. ವಿಮಾನ, ಹಡಗು, ಸೈನ್ಯಗಳ ಮಂತ್ರಿಗಳ ನೇಮಕವಾಗುವುದು. ಈ ಎಲ್ಲಾ ಮಂತ್ರಿಗಳೂ ದಿವನ್ ಮಂತ್ರಿಯಾದ ಫ್ಯೂಲಾನ ಕೈಕೆಳಗೆ ಇರುವರು. ಒಟ್ಟು ೧೨ ಮಂತ್ರಿಗಳ ಮಂಡಲವು ರಚಿತವಾಗುವ ನಿರ್ಣಯವಾಗಿದೆ.

ಚೈನಾಮಾರ್ಗ ರಚನೆಯಲ್ಲಿ ಅಘಾತ

ಚೈನೀಸ್ ಟಿಬೇತಿಯನ್ ಗಡಿಯಲ್ಲಿ ಪರ್ವತಪ್ರದೇಶದಲ್ಲಿ ಮಾರ್ಗವೊಂದನ್ನು ಕಡಿಯುವಾಗ ೨,೦೦೦ ಮಂದಿ ಚೈನೀಯ ಕೂಲಿಗಾರರು ಮರಣಹೊಂದಿರುವರೆಂದು ತಿಳಿದಿದೆ.

ಒಟ್ಟು ೧೩೦,೦೦೦ ಜನರು ಆ ಮಾರ್ಗದ ರಚನೆಯ ಕೆಲಸವನ್ನು ಮಾಡುತಿದ್ದು ಬರುವ ವಸಂತಮಾಸದೊಳಗೆ ಕೆಲಸವು ಸಂಪೂರ್ಣಗೊಳ್ಳುವುದಾಗಿ ತಿಳಿದಿದೆ.

ಯುಗೊಸ್ಲೇವಿಯವು ಪ್ರಾಣಾಂತಿಕದಲ್ಲಿದೆ!

ಮುಂದಿನ ಯೂರೋಪಿನ ದುರ್ಘಟನೆಯ ದೌರ್ಭಾಗ್ಯವು ಯುಗೋಸ್ಲೇವಿಯ ತಲೆಮೇಲೆ ಬೀಳುವುದೆಂದು ತಿಳಿದಿದೆ.

ಜರ್ಮನಿಯ ಸೈನಿಕ ದಳವು ಈಗಾಗಲೇ ಗಡಿನಾಡುಗಳಲ್ಲಿ ಆಕ್ರಮಿಸಿ, ಗೊಂದಲಗಳನ್ನು ಎಬ್ಬಿಸಿದೆ.

ಯುಗಸ್ಲೇವಿಯವು ಬರುವ ಯುದ್ಧದಕಾಲದಲ್ಲಿ ತಟಸ್ಥ ಧೋರಣೆಯನ್ನು ವಹಿಸಲು ನಿಶ್ಚಯಿಸಿದೆ.

ಜರ್ಮನ್ ಸೈನ್ಯ ದಳವು ಅದರ ಮಧ್ಯಪ್ರಾಂತದಲ್ಲಿ ರೈಲ್ವೆಯ ಮೂಲಕ ಹೋಗಲು ಯುಗೋಸ್ಲೇವಿಯು ಅನುಮತಿಯುತ್ತಿದೆ.

'ತ್ರಿರಾಷ್ಟ್ರಗಳ ಒಪ್ಪಂದಕ್ಕೆ ಪೋಲೆಂಡು ಸೇರಲಿ'

ರಶ್ಯದ ಮಂತ್ರಿ ಎಂ. ಮೊಲೊಟೋವರು ರಶ್ಯದಲ್ಲಿರಲಿ ಪೋಲೆಂಡಿನ ರಾಯಭಾರಿಯ ಮುಖಾಂತರ ಇಂದು ಆಂಗ್ಲ-ಫ್ರೆಂಚ-ರಶ್ಯಗಳ ಮೊಸ್ಕೋದಲ್ಲಿ ಆಗುವ ಒಪ್ಪಂದದ ಮಾತುಕತೆಗೆ ಪೋಲೆಂಡು ಸೇರಲಿ ಎಂದು ಹೇಳಿ ಕಳುಹಿಸಿರುವರು. ರಕ್ಷಣಾ ಮಂತ್ರಿ ವ್ರೊರೊಶಿಲೋವರು, ಮೊಲೊಟೋವರೊಡನೆ, ಪೋಲೆಂಡು ಈ ಮಾತುಕತೆಗೆ ಸೇರದಿದ್ದರೆ ನಿಜವಾದ ಪರಿಣಾಮ ಆಗಲಿಕ್ಕಿಲವೆಂದು ಹೇಳಿರುವರೆಂದೂ, ಅವರ ಸಲಹೆಯಂತೆ ಈಗ ಈ ಸೂಚನೆಯು ಬಂದಿರುವುದೆಂದೂ ತಿಳಿಯುತ್ತದೆ.

ಡಾನ್ಜಿಗ್ ಕೋಲಾಹಲ

ಪೋಲೆಂಡಿನ ನಿಷೇಧ ಸೂಚನೆಗೆ ಡಾನ್ಜಿಗ್ ಸೆನೇಟಿನ ಉತ್ತರದಿಂದ ಪೋಲೆಂಡಿಗೆ ಆಶ್ಚರ್ಯವಾಗಿದೆ.

ಪೋಲೆಂಡಿನ ... ... ಕೃತ್ಯಗಳಿಗಾಗಿ ... ಅತ್ಯಾಗ್ರಹವನ್ನು ಸೂಚಿಸಿ, ಈ ವಿಷಯಗಳನ್ನು ಶಾಂತತೆಯಿಂದ ವಿಮರ್ಶೆ ಮಾಡಲು ತನ್ನ ಆತುರವನ್ನು ವ್ಯಕ್ತಪಡಿಸಿದೆ.

ಅಂತೂ, ಈ ಉತ್ತರದಿಂದ ಪೋಲೆಂಡು ತೃಪ್ತಿ ಹೊಂದಿದಂತೆ ತಿಳಿಯುವುದಿಲ್ಲ. ಡಾನ್ಜಿಗನಲ್ಲಿರುವ ಸಾರ್ವದೇಶಿಕ ಸಂಘದ ಹೈ ಕಮಿಶನರಾದ ಹೆರ್ ಬರ್ಕಾರ್ಟರು ಶಾಂತಿಯು ಕೆಡದಂತೆ ಪ್ರಯತ್ನ ಮಾಡುತ್ತಿರುವರು.

THE
Bank of Mangalore Ltd.,
MANGALORE
ESTD 1931

Branches -
Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

All kinds of banking business transacted

ಸ್ವೀಕಾರ-ವಿಮರ್ಶೆ.

ಕಂಬನಿ (ಕತೆಗಳ ಸಂಕಲನ) ಕತೆಗಾರ್ತಿ: ಶಿವಂಗತಾ ಮಿಸೆಸ್. ಬಿ. ಟಿ. ಜಿ. ಕೃಷ್ಣ (ಶ್ರೀಮತಿ ಗೌರಮ್ಮ) ಪ್ರಕಾಶಕರು: ಮನೋಹರ ಗ್ರಂಥ ಭಾಂಡಾರ, ಧಾರವಾಡ. ಕ್ರೌನ್ ⅛ರ 34+22+136 ಪುಟಗಳು. ಬೆಲೆ ಬೈಂಡಿಂಗಾಗದ ಕ್ಯಾಲಿಕೋ ಪ್ರತಿ ಒಂದೂವರೆ ರೂಪಾಯಿ, ಸುಂದರ ಪ್ರತಿ 1 ರೂಪಾಯಿ.

ಸ್ವರ್ಗೀಯರಾದ ಕನ್ನಡ ಕತೆಗಾರ್ತಿ ಕೊಡಗಿನ ಮಿಸೆಸ್ ಬಿ. ಟಿ. ಜಿ. ಕೃಷ್ಣ ಇವರು, ಹಿಂದೆ ಪ್ರಕಟಿಸಿದ್ದ ಮತ್ತು ಕೆಲವು ಹೊಸ ಕತೆಗಳನ್ನೂ ಸೇರಿಸಿ, ಬರೆದ ಒಟ್ಟು ಹನ್ನೆರಡು ಕತೆಗಳ ಸಂಗ್ರಹಪುಸ್ತಕವಿದು. ಕಥನ ರೂಪದಿಂದಲೂ ಕತೆಗಾರ್ತಿಯ ಬಾಳುವೆಯ ವಿಷಾದಮಯ ಘಟನೆಯಿಂದಲೂ ಕನ್ನಡ ಮಾತೆಗೆ ಕಂಬನಿಯ ಕಾಣಿಕೆಯೆನಿಸಿಯೇ ಸಂದಿದೆ' ಮೊದಲಲ್ಲಿ ಸೌ। ಗೌರಮ್ಮನವರ ಭಾವಚಿತ್ರವಿದೆ.

ಶ್ರೀ. ಬೇಂದ್ರೆಯವರೂ ತಮ್ಮ ಮನಕರಗಿಸುವ ಮುನ್ನುಡಿಯಲ್ಲಿಯೂ, ಕತೆಗಾರ್ತಿಯರ ಕುರಿತು ಬರೆದ ಚೇತೋಹಾರಿಯಾದ ಚರಮಗೀತೆಯಲ್ಲಿಯೂ ಕತೆಗಳಿಗಾಗಿ, ಕತೆಗಾರ್ತಿಯರಿಗಾಗಿ ಕಂಬನಿಯನ್ನೇ ಸುರಿಸಿದ್ದಾರೆ.

"ಉಷೆ ಸುರಿಸುವ ಇಬ್ಬನಿಯೊಲು ಕರುಣೆಯ ಕಂಬನಿಯ ಬಾಳ್ ಬಳ್ಳಿಗೆ ಬೇರಿದೆ; ಮಧುಹಾಸ್ಯದ ಹನಿಯು' ಪುಷ್ಪ ಜೀವಿಯಾಗಿದ್ದ, ಸೌ। ಗೌರಮ್ಮನವರ ಜೀವನ ಲೇಖನಗಳ ಕುರಿತು ಇದಕ್ಕಿಂತ ಚೆನ್ನಾಗಿ ಹೇಗೆ ವ್ಯಾಖ್ಯೆ ಮಾಡಬಹುದು?

ದತ್ತಾತ್ರೇಯ ಕುಲಕರ್ಣಿಯವರು ಸೌ। ಗೌರಮ್ಮನವರ ಜೀವಿತದ ಸಮೀಪ ಪರಿಚಯವನ್ನು ಮಾಡಿಕೊಡುತ್ತಾ, ಒಂದು ರಸಮಯವಾದ ಜೀವನ ಚಿತ್ರವನ್ನು ಬರೆದು ತೋರಿಸಿದಂತೆ, ಕತೆಗಾರ್ತಿಯರ, ಸಾಹಿತ್ಯಪ್ರೇಮ, ರಾಷ್ಟ್ರಪ್ರೇಮ, ರಸಿಕತೆ, ವಿಮರ್ಶನಾಶಕ್ತಿ, ಸಂಸ್ಕಾರದ ಸೊಬಗುಗಳನ್ನು ವಿಸ್ತಾರವಾಗಿ, ಸುಮನೋಹರವಾಗಿ ತಿಳಿಸಿ 'ನಾ ಕಂಡ ಗೌರಮ್ಮ'ದ ಮೂಲಕ ತಾವು ಮಾತ್ರ ಬಾಷ್ಪಾಂಜಲಿ ಸುರಿಸಿದಲ್ಲದೆ, ಇಡೀ ಕನ್ನಡ ಜನತೆಯನ್ನೇ ಕಂಬನಿಯ ಕಡಲಲ್ಲಿ ಅದ್ದುವಂತೆ ಮಾಡಿಬಿಟ್ಟಿದ್ದಾರೆ.

ಹೆಚ್ಚಿನ ಕತೆಗಳಲ್ಲಿ ಹೆಣ್ಣಿನ ಬಾಳುವೆಯನ್ನು ಸಂಬಂಧಿಸಿರುವ ನಮ್ಮ ಸಮಾಜ ಸಮಸ್ಯೆಗಳೇ ಚಿತ್ರಿತವಾಗಿವೆ. 'ಪ್ರಾಯಶ್ಚಿತ್ತ'ದಲ್ಲಿ ನಿರ್ಭಾಗ್ಯ ವಿಧವೆಯ ಬಾಳ್ವೆಯ ಸಂಕಟ, 'ಒಂದು ಪುಟ್ಟ ಚಿತ್ರ'ದಲ್ಲಿ ಸ್ವಾರ್ಥಕ್ಕಾಗಿ ನಿರಪರಾಧೀ ಹೆಣ್ಣುಜೀವವನ್ನು ಬಲಿಕೊಟ್ಟ ಸಮಾಜದ ಕ್ರೌರ್ಯ 'ಅವಳ ಭಾಗ್ಯ'ದಲ್ಲಿ ಸಮಾಜದಲ್ಲಿ ಇಂದು ದಾರಿದ್ರ್ಯಕ್ಕೆ ತುತ್ತಾಗಿ ಮುದ್ದಿನ ಕುವರಿಯರನ್ನು ಪ್ರಾಯದ ಮುದುಕರಿಗೋ, ಚಿರರೋಗಿಗಳಿಗೋ ಕೊಡಬೇಕಾಗುವ ಹೆತ್ತವರು, 'ಕೌಸಲ್ಯಾ ನಂದನ'ದಲ್ಲಿ ಒಂದು ಸುಂದರ ಆದರ್ಶ ದಾಂಪತ್ಯದ ಸಂಯೋಗ, ನಾಲ್ಕು ಘಟನೆಗಳಲ್ಲಿ ಹೊಸ ದಂಪತಿಗಳ ಚಿತ್ರ, ಹಳ್ಳಿಯ ಸಂಸಾರ ಬೇನೆ ಮತ್ತು ಚೆಲುವು, ವಿಧವೆಯರಿಗೆ ಸಮಾಜದಲ್ಲಿ ಕೊಡುವ ಹಿಂಸೆ, ವಿಧಿವಿಲಾಸಕ್ಕೆ ಬಿದ್ದು ತೊಳಲುವ ಜೀವಿತ, ಇವುಗಳ ವಿವಿಧ ವರ್ಣನೆ 'ಪ್ರಾಯಶ್ಚಿತ್ತ'ದಲ್ಲಿ ಆದರ್ಶ ಪ್ರೇಮಯೋಗಿನ ಪ್ರೇಮ ಹೃದಯ, 'ಅಪರಾಧಿಯಾರು?' ಇದರಲ್ಲಿ ಸಂಭಾವಿತ ಗೃಹಸ್ಥರೆನಿಸಿಕೊಂಡವರಿಂದಲೇ ನೀಚತನಕ್ಕೆ ಬಲಿಯಾಗಿ ಜಾತಿಯಿಂದ ಬಹಿಷ್ಕರಿಸಲ್ಪಡುವ ಮುಗ್ಧ ಹೆಣ್ಣುಜೀವಿಗಳ ಕೊರಗು, 'ಹೋಗಿಯೇ ಬಿಟ್ಟಿದ್ದ' ಇದರಲ್ಲಿ ಪ್ರೇಮದ ಒಂದು ಕ್ರೂರಕೃತ್ಯದ ನಿರೂಪಣೆ, 'ಸುಳ್ಳು ಸ್ವಪ್ನ'ದಲ್ಲಿ ಒಲಿದ ಹೆಣ್ಣನ್ನು ಕಡೆಗೆ ಮರೆತು ವರ್ತಿಸುವ ಪಾಪಿ ಜನರ ಅಪರಾಧ, 'ಯಾರು?' ಇದರಲ್ಲಿ ಆಡಂಬರದ ಜೀವನಕ್ಕೆ ಮರುಳಾಗಿ ಮಾಡಿದ ಉಪಕಾರವನ್ನೂ ಕೈಹಿಡಿದ ಹೆಂಡತಿಯ ಪಾಲನೆಯ ಜವಾಬ್ದಾರಿಕೆಯನ್ನೂ ಮರೆತ ವಿದ್ಯಾವಂತರ ಹೃದಯ ಶೂನ್ಯತೆ, 'ಮನುವಿನ ರಾಣಿ'ಯಲ್ಲಿ ಸೂಳೆಯ ಸಂಸಾರಕ್ಕಾದರೂ ಒಬ್ಬನನ್ನೇ ಪ್ರೇಮಿಸಿ, ಆದಕ್ಕಾಗಿ ಜೀವನವನ್ನು ನಿರ್ಮಲವಾಗಿರಿಸುವ ಅಕೃತ್ರಿಮ ಪ್ರೇಮದ ಹಕ್ಕು, ಹೀಗೆ ಒಂದರಲ್ಲೊಂದು ವಿಧದಿಂದ ಹೆಣ್ಣುಜೀವಿಗಳ ವಿಧವಿಧ ಜೀವನ ಸಮಸ್ಯೆ, ಅವರ ಬಾಳುವೆಯ ವೇದನೆ, ಇವುಗಳು ವರ್ಣಿತವಾಗಿದ್ದು ಸಮಾಜದ ನಿಯಮ-ನಡತೆಗಳಿಗಾಗಿ ಕತೆಗಾರ್ತಿಯರು ಮರುಗಿ ಕಂಬನಿ ಸುರಿಸುವುದನ್ನು ನೋಡಬಹುದು. 'ಸನ್ಯಾಸಿ ರತ್ನ'ದಲ್ಲಿ ಮೃದು ಹಾಸ್ಯದ ಹೊಳ್ಳಿಗೆ ಹರಿದಿದೆ.

ಇವರು ಎಲ್ಲಾ ವಿಧದ ಕಥಾನ ಶೈಲಿಯನ್ನು ಬಳಸಿ ತೋರಿಸಿದ್ದಾರೆ. ಯಶಸ್ವಿಯಾಗಿ ಕತೆಗಳನ್ನು ಕಟ್ಟಿದ್ದಾರೆ. ಎಲ್ಲದಕ್ಕಿಂತಲೂ ಹೆಚ್ಚು ಪತ್ರಲೇಖನ ರೂಪದಿಂದ ಕಥಾ ನಿರೂಪಣೆಯಲ್ಲಿ ಇವರಿಗೆ ಆದರವಿದ್ದಂತೆ ತೋರುತ್ತದೆ. ಕನ್ನಡದ ಉತ್ತಮ ಕತೆಗಾರರಲ್ಲಿರುವ ಒಳ್ಳೆಯ ಶಕ್ತಿ ಇವರಲ್ಲಿ ಒಡಮೂಡಿತ್ತು. ಸಾಕಷ್ಟು ಪಕ್ವವಾಗಿ, ಇನ್ನಷ್ಟು ಸುಂದರವಾಗಿ, ಬರೆಬೇಕಾಗಿದ್ದ ಅವರ ಕತೆಗಳನ್ನು ಓದುವ ಭಾಗ್ಯ ಕನ್ನಡಿಗರಿಗೆ ಒದಗಲಿಲ್ಲ.

ಉದಿತೋದಿತ ಕೀರ್ತಿಶಾಲಿನಿಯಾಗಿದ್ದ, ಇಂತಹ ಶ್ರೇಷ್ಠಶ್ರೇಣಿಯ ಕನ್ನಡದಮ್ಮನ ಚೆಲುವ ಕುವರಿಯು ಬದುಕಿದ್ದರೆ ಇನ್ನೆಷ್ಟು ಸುಂದರ ಸಾಹಿತ್ಯದ ಸವಿಯೂಟವನ್ನು ಉಣಬಡಿಸುತ್ತಿದ್ದರೋ, ಎಂದು ನೆನಸುವಾಗ, ಇವರ ಕೊನೆಯ ಕತೆಯಾಯಿತಲ್ಲಾ ಎಂದು ಕನ್ನಡಿಗರೆಲ್ಲರೂ ಕಂಬನಿ ಸುರಿಸುವಂತಾಗಿದೆ.

—ಕಯ್ಯಾರ.

ಟ್ರಿನಿಡಾಡಿನ ಹಿಂದೀಯರು

ಟ್ರಿನಿಡಾಡಿನಲ್ಲಿ ಒಟ್ಟು ೧೫೪,೦೦೦ ಹಿಂದೀಯರಿದ್ದಾರೆ; ೧೨೧,೦೦೦ ಎಕ್ರೆ ಸ್ಥಳಗಳು ಇವರ ಸ್ವಾಧೀನದಲ್ಲಿದೆ.

ಇಲ್ಲಿನ ಮುಖ್ಯ ಬೆಳೆಗಳು ಕೊಕ್ಕೋ ಮತ್ತು ಕಬ್ಬು, ಭತ್ತ, ಕಾಪಿ, ಹಣ್ಣುಹಂಪಲು ಮೊದಲಾದುವುಗಳೂ ಬೆಳೆಯುತ್ತವೆ.

ಇತ್ತೀಚೆಗೆ ಅಲ್ಲಿನ ಹಿಂದೀಯರು ಬೇಸಾಯಗಾರರ ವೃತ್ತಿಯಲ್ಲಿ ಅವನತಿ ಬಂದಿದೆ. ಅನಾಥಾಲಯಗಳಲ್ಲಿ ಹೆಚ್ಚು ಹಿಂದೀಯ ಮಕ್ಕಳು ಈಗ ಸೇರುವಂತಾಗಿದೆ.

ಒಟ್ಟು ಶಾಲೆಗೆ ಹೋಗುವ ಹಿಂದೀ ವಿದ್ಯಾರ್ಥಿಗಳು ೨೫,೦೦೦ ಇದ್ದಾರೆ. ಇವರಲ್ಲಿ ೯,೫೦೦ ಬಾಲಿಕೆಯರು. ಕೆಲವರು ಹೈಸ್ಕೂಲು ಮತ್ತು ಕಾಲೇಜು ವಿದ್ಯಾಭ್ಯಾಸವನ್ನೂ ಪಡೆಯುತ್ತಾರೆ.

ಇಲ್ಲಿ ಹಿಂದೀಯರು ಮತ್ತು ಇತರರ ವಿಷಯ ಹೆಚ್ಚಿನ ವ್ಯತ್ಯಾಸವಿಲ್ಲ. ಎಲ್ಲರೂ ಒಂದೇ ರೀತಿಯ ರಾಜಕೀಯ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಮೂರು ಮಂದಿ ಹಿಂದೀಯ ಸದಸ್ಯರಿದ್ದಾರೆ. ಜಮೀನ್ದಾರರು, ವ್ಯಾಪಾರಿಗಳು, ೧೯೩೭ರಿಂದ ಸ್ಥಾಪಿತವಾದ ಭಾರತೀಯ ಹಿತ ಸೂಚಕ ಸಂಘವು ಸರಕಾರದೊಡನೆ ಆಗಾಗ ಸಲಹೆಗಳನ್ನು ಕೊಡುತ್ತದೆ.

ಸಾದರ—ಸ್ವೀಕಾರ

೧ ಸಮಾಜ—ರಚನೆ

೨ ಭಾಷೆ ಮತ್ತು ಬರವಣಿಗೆ

೩ ಮತಧರ್ಮ

೪ ಅತೀಂದ್ರಿಯ ವಿಜ್ಞಾನಗಳು ಗ್ರಂಥಕರ್ತರು ಶ್ರೀಗಳಾದ ಎಚ್ ನಾರಾಯಣರಾವ್ ಬಿ. ಎ., ಕೆ. ಸಿ. ರಘುನಾಥಯ್ಯ ಎಂ. ಎ., ಬೆಂಗಳೂರು.

೫ ರಾಯ್ ಮತ್ತು ರಾಯ್ ವಾದ. ಲೇಖಕರು ಶ್ರೀ. ಸ. ರಂ. ಸುಂಕಣಕರ. ಪ್ರಕಾಶಕರು: ಅರ್. ಜನಾರ ಧಾರವಾಡ.

೬ ಧರ್ಮ ಅಥವಾ ನಾಲ್ವರು ಮಹಾಪುರುಷರು. ಲೇಖಕರು: ಶ್ರೀ. ವಾಸುದೇವ; ಶ್ರೀ ರಾಮಕೃಷ್ಣಾಶ್ರಮ ಮೈಸೂರು.

೭ ಸುಧಾರಣಾ ಯುಗದಲ್ಲಿ ಲೇಖಕರು: ಶ್ರೀ. ಎನ್. ಕೆ. ಪಾಲ್, ನವಜ್ಯೋತಿ ಗ್ರಂಥಮಾಲೆ ಬೊಂಬಾಯಿ.

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯು ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

Once again the 'Popular' makes its name for

PROMPTNESS!

1/3, Perumal Mudaly Street,
Royapetah, MADRAS
25th July, 1939

To
Messrs. The Popular Insurance Co., Ltd.,
MANGALORE

Dear Sirs,

Re: Policy No. 619 of Mr. M. Balaraman, B. A., B. L.

Mr. B. Vittal Rao, the Managing Director of your firm called on me this day with a cheque for Rs 990—10—0 in discharge of the above Policy on the life of my husband

This spirit of service and promptitude evinced by your firm in settling the matter within a couple of days, from the date of the receipt of the death news is commendable.

I wish you a brilliant future which you so richly deserve. Yours faithfully,
(Sd.) PATTAMMAL,
Widow of late Mr. M. Balaraman,
Vakil, CHITOOR.

The Popular Insurance Company Ltd.,
MANGALORE

ಭಾರತದಲ್ಲಿ ಉದ್ಯೋಗ ಪ್ರವರ್ತಕ ತಾತಾರವರು



[ತಾತಾ ಕಂಪೆನಿಯ ಕುರಿತು ಇಂದು ಕೇಳದವರಿಲ್ಲ, ಇಂಥ ಅಖಿಲ ಭಾರತದ ಮಹತ್ವದ ಉದ್ಯೋಗವೊಂದನ್ನು ಸ್ಥಾಪಿಸಿದ ಜೀವನವು ಭವ್ಯವಾಗಿದೆ. ನಿರಂತರ ಸಾಹಸದಿಂದ, ಕಾರ್ಯಕುಶಲತೆಗಳಿಂದ ಅವರು ಇಂತಹ ಅಪೂರ್ವ ಸಂಸ್ಥೆಯನ್ನು ಸ್ಥಾಪಿಸಿ, ರಾಷ್ಟ್ರೀಯ ಕೈಗಾರಿಕೆಯ ಮೂಲಪುರುಷರಾಗಿದ್ದಾರೆ]

ಶಿಲಾಮಶೇದ್‌ಪುರವನ್ನು ಸಂದರ್ಶಿಸಿದ ಯಾವ ಹಿಂದೀಯನಾದರೂ ತಾತಾರವರ ಕಾರ್ಯಗಳಿಗಾಗಿ ಅಭಿಮಾನ ಪಡದೆ ಇರಲಾರನು. ಅಖಿಲ ಜಗತ್ತಿನಲ್ಲಿ 'ತಾತಾ ಆಯರ್ನ್ ಎಂಡ್ ಸ್ಟೀಲ್ ವರ್ಕ್ಸ್' ಕಾರ್ಖಾನೆಯು ಮಹತ್ವದ ಸ್ಥಾನವನ್ನು ಪಡೆದಿದೆ. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಹೀಗಿರುವುದು ಇದೊಂದೇ ಸಂಸ್ಥೆ!

ಪೂರ್ವ ಚಿತ್ರಗಳು

ಈ ಸಂಸ್ಥೆಯನ್ನು ಸ್ಥಾಪಿಸಿದ ಮಹಾಪುರುಷರು ಇಂದಿಗೆ ನೂರು ವರ್ಷಗಳ ಹಿಂದೆ, ೧೮೩೯ನೇ ಇಸವಿಯಲ್ಲಿ ನವಸಾರೀ ಎಂಬ ಗ್ರಾಮದಲ್ಲಿ ಹುಟ್ಟಿದರು. ಪಾರ್ಸೀ ಕುಟುಂಬದ ಪುರೋಹಿತದ ವಂಶಕ್ಕೆ ಅವರ ಪೂರ್ವ ಜರುಗಳು ಸೇರಿದ್ದರು. ಬೊಂಬಾಯಿಯಲ್ಲಿ ಮೊದಲಾಗಿ ಏಳು ಮಾಳಿಗೆಯ ಮನೆ ಕಟ್ಟಿಸಿದವರು ಜಾಮ್ ಶೇಟ್ಜಿ ನುಸೆರ್‌ವಾಂಜಿ ತಾತಾರವರ ತಂದೆ. ಅವರ ಗುಣ ಮಗನಲ್ಲಿ ಪೂರ್ಣ ಬೆಳೆಯಿತು. ಭಾರತದಲ್ಲಿಯೇ ಬಹಳ ದೊಡ್ಡ ಉದ್ಯೋಗವು ಅವರಿಂದ ಸ್ಥಾಪಿತವಾಯಿತು.

ವಿದ್ಯಾಭ್ಯಾಸ ಮತ್ತು ಉದ್ಯೋಗ

೧೩ನೇ ವರ್ಷದಲ್ಲಿ ಇವರನ್ನು ವಿದ್ಯಾಭ್ಯಾಸಕ್ಕಾಗಿ ಬೊಂಬಯಿಗೆ ಕಳುಹಿಸಿದರು. ೧೯ನೇ ವರ್ಷದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ತಂದೆಯೊಡನೆ ವೃತ್ತಿಯಲ್ಲಿ ಸೇರಿದರು. ಆ ಮೇಲಿನ ವರ್ಷದಲ್ಲಿಯೇ ಚೈನಾಕ್ಕೆ ತೆರಳಿ, ಎರಡು ದೇಶಗಳೊಳಗೆ ವ್ಯಾಪಾರ ಸಂಬಂಧವನ್ನು ಬೆಳೆಸಿದರು. ೧೮೬೫ರಲ್ಲಿ ಮೊದಲನೆಯ ಸಲ ಇಂಗ್ಲೆಂಡಿಗೆ ತೆರಳಿದರು. ಅವರ ಅಭಿಪ್ರಾಯವು ಲಂಡನಿನಲ್ಲಿ ಒಂದು ಭಾರತೀಯ ಬೇಂಕನ್ನು ತೆರೆಯುವದಿತ್ತು. ಆದರೆ ಬೊಂಬಯಿಯಲ್ಲಿ ಆದ ಆರ್ಥಿಕ ಮುಗ್ಗಟ್ಟಿನಿಂದ ಅವರು ಆ ಅಭಿಪ್ರಾಯವನ್ನು ಮಾಡಲಾಗಲಿಲ್ಲ. ಹಾಗೆ ಇಂಗ್ಲೆಂಡಿನಿಂದ ಮರಳಿ ಬಂದು ತಂದೆಯೊಡನೆ ವ್ಯಾಪಾರಕ್ಕಿಳಿದು, ತಿರಿಗಿ ಹಣ ಸಂಪಾದಿಸಿದರು. ೧೮೬೮ರಲ್ಲಿ ತಾತಾ ಎಂಡ್ ಸನ್ಸ್ ಎಂಬ ಕಂಪನಿಯು ಸ್ಥಾಪಿತವಾಯಿತು.

೧೮೬೯ರಲ್ಲಿ ಅವರು ಒಂದು ಎಣ್ಣೆಯ ಮಿಲ್ಲನ್ನು ಪಡೆಕೊಂಡರು. ಆ ಮೇಲೆ ಆ ಮಿಲ್ಲನ್ನೇ ನೂಲುವ ಮತ್ತು ಮಗ್ಗದ ಕಾರ್ಯಕ್ಕಾಗಿ ಉಪಯೋಗಿಸಿದರು. ಈ ಮಿಲ್ಲನ್ನು ಹೆಚ್ಚಿನ ಲಾಭಕ್ಕೆ ಮಾರಿ, ವ್ಯಾಪಾರ, ವಸ್ತ್ರದ ಕೈಗಾರಿಕೆಯ ವಿಷಯವಾಗಿ ಹೆಚ್ಚು ಅನುಭವ ಪಡೆಯಲು ಎರಡನೆಯ ಸಲ ಇಂಗ್ಲೆಂಡಿಗೆ ತೆರಳಿದರು.

ಭಾರತ ದೇಶಕ್ಕೆ ಮರಳಿ, ತನ್ನ ಉದ್ದೇಶವಾದ ಮಿಲ್ ಒಂದನ್ನು ಸ್ಥಾಪಿಸುವ ಯೋಗ್ಯ ಸ್ಥಳಕ್ಕಾಗಿ ಇಡೀ ಹಿಂದೂದೇಶವನ್ನು ಸುತ್ತಿದರು. ನೆರ್ಬುದ್ದಾ ಜಲಪಾತದ ನೀರಿನಿಂದ ಮಿಲ್ಲನ್ನು ನಡೆಸಲು ಬೇಕಾದ ವಿದ್ಯುತ್ ಶಕ್ತಿಯನ್ನು ಪಡೆಯಬಹುದೆಂದು ಜಬ್ಬಲ್‌ಪುರದಲ್ಲಿ ಸ್ಥಳ ಗೊತ್ತು ಮಾಡಿದರು. ಆದರೆ ಅವರು ಆರಿಸಿದ ಸ್ಥಳವನ್ನು ಒಬ್ಬ ಫಕೀರನು ಮಸೀದಿಯೊಂದನ್ನು ಕಟ್ಟಲು ಪಡಕೊಂಡು, ಇವರಿಗೆ ಕೊಡಲೊಪ್ಪದ ಮೇರೆಗೆ, ನಾಗಪುರದಲ್ಲಿ ಕಟ್ಟುವುದಾಗಿ ಯೋಚಿಸಿದರು. ೧೫,೦೦,೦೦೦ ರೂಪಾಯಿಗಳ ಮೂಲಧನದಿಂದ ವಸ್ತ್ರದ ಕೈಗಾರಿಕೆಯ ಮಿಲ್ಲನ್ನು ಮಾಡಿದರು. ಇದರ ಅಭಿವೃದ್ಧಿಯ ಇತಿಹಾಸವೆಂದರೆ, ಇಬ್ಬರು ಮಹನೀಯರ ಇತಿಹಾಸ, ಒಂದ ಜಾಮ್ ಶೆಟ್ಜಿ ತಾತಾ ಮತ್ತು ಎರಡನೇದಾಗಿ ದಾದಾಬಾಯಿ ಮೆಧಾ ಇವರು.

ಇದರಲ್ಲಿ ಸಿಕ್ಕಿದ ಪ್ರೋತ್ಸಾಹದಿಂದ ಬೇರೆ ಬೇರೆ ಕಡೆಯಲ್ಲಿ ಅವರು ಮಿಲ್ಲುಗಳನ್ನು ಸ್ಥಾಪಿಸಿದರು.

ಕನಸು ಫಲಿಸಿತು

ಅವರ ಎಲ್ಲಾ ಹಂಚಿಕೆಗಳಲ್ಲಿಯೂ ಹಿಂದೂದೇಶದ ಕಬ್ಬಿಣದ ಕೈಗಾರಿಕೆಯ ಕೆಲಸವೇ ಪ್ರಾಮುಖ್ಯವಾಗಿತ್ತು. ದೇಶದ ಖನಿಜ ಸಂಪತ್ತನ್ನು ಬೆಳಸಿ, ದೇಶೀಯ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಅವರು ಅಭಿಪ್ರಾಯಪಟ್ಟರು. ೧೯೦೨ರಲ್ಲಿ ಅಮೇರಿಕದಿಂದ ಬೇಕಾದ್ದ ಅನುಭವಗಳನ್ನು ಪಡೆದು, ಸಂಯುಕ್ತ ಪ್ರಾಂತ ಮೊದಲಾದೆಡೆಗಳಿಂದ ಬೇಕಾದ ಖನಿಜಗಳನ್ನು ಹೊಂದಿ, ೧೯೦೭ನೇ ಆಗಸ್ಟ್ ೨೬ರಂದು ಬೊಂಬಾಯಿಯಲ್ಲಿ ತಾತಾ ಉಕ್ಕಿನ ಮತ್ತು ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸಿದರು.

ಇದರಲ್ಲಿ ವರ್ಷಹೋದಂತೆ ಹೆಚ್ಚು ಹೆಚ್ಚು ಕಬ್ಬಿಣಗಳ ಕೈಗಾರಿಕೆ ಮಾಡುತ್ತಾ ಬಂದು ವರ್ಷ ಒಂದರ ೫೭೦,೦೦೦ ಟನ್ನುಗಳ ಕಬ್ಬಿಣವು ಈಗ ಮಾಡಲ್ಪಡುವುದು. ಈಗ ಜಾಮ್ ಶೇದ್ ನಗರವೆಂದು ಕರೆಯಲ್ಪಡುವ ಶಾಖೆಯಲ್ಲಿರುವ ಕಾರ್ಖಾನೆಯನ್ನು ಆ ಮೇಲೆ ಸ್ಥಾಪಿಸಿದರು. ಇಂದು ಅದರ ಕ್ರಯವು ೫೯ ಕೋಟಿ ರೂಪಾಯಿಗಳಷ್ಟಿದೆ. ಇದರಲ್ಲಿಯೇ ಇದಕ್ಕೆ ಬೇಕಾದ ವರ್ಕ್‌ಶಾಪ್, ಕಬ್ಬಿಣದ ಕೆಲಸ ವಿದ್ಯುಚ್ಛಕ್ತಿ ಮೊದಲಾದ ಎಲ್ಲಾ ವಿಭಾಗಗಳೂ ಇವೆ. ಇಂದು ಅಲ್ಲಿ ಆಗುವ ಕಬ್ಬಿಣವು ೮೦೧ ೦೦೦ ಟನ್ನು, ಉಕ್ಕು ೬೫೦ ೦೦೦ ಟನ್ನುಗಳು.

ಮಹತ್ವದ ರಾಷ್ಟ್ರೀಯ ಉದ್ಯೋಗ

ಜಾಮ್‌ಶೇದ್‌ಪುರವನ್ನು ಸಂದರ್ಶಿಸದವನಿಗೆ ನಿಜವಾಗಿ ಅವರ ಕಂಪೆನಿಯಿಂದ ಹಿಂದೂದೇಶಕ್ಕೆ ಇರುವ ಲಾಭವೇನೆಂದು ತಿಳಿಯಲಾರದ ಭಾರತೀಯನಿಂದ ಈ ಮಹತ್ವದ ಕಾರ್ಯವೊಂದರ ಆಳ ವಿಷಯ ತಿಳಿದು ಯಾರಾದರೂ ಅಭಿಮಾನ ತಾಳದೆ ಇರಲಿಕ್ಕಿಲ್ಲ. ತಾತಾನಗರ ಸ್ಟೇಷನಿನಲ್ಲಿ ೬೫ ಮೈಲುಗಳ ರೈಲ್ವೇ ಮಾರ್ಗವಿದೆ. ದಿನಂಪ್ರತಿ ೨,೦೦೦ ರೈಲ್ವೇ ಬಂಡಿಗಳಲ್ಲಿ ಸಾಮಾನುಗಳ ವ್ಯವಹಾರವಿದೆ. ೪೦,೦೦೦ ಮಂದಿ ಧನಿಕರು ಅಲ್ಲಿ ಕೆಲಸ ಮಾಡುತ್ತಾರೆ, ಇವರಲ್ಲಿ ಹಿಂದೂದೇಶದ ಎಲ್ಲಾ ಕಡೆಯಿಂದ ಬಂದವರೂ ಇದ್ದಾರೆ.

ಆ ನಗರ ಒಂದರಲ್ಲಿಯೇ ೮೩,೦೦೦ ಜನರಿಗಿಂತ ಹೆಚ್ಚು ಮಂದಿ ವಾಸಿಸುತ್ತಾರೆ. ಹಿಂದೂದೇಶದ ಪ್ರಾಮುಖ್ಯ ಕೈಗಾರಿಕೆಯು ಕಬ್ಬಿಣ ಮತ್ತು ಉಕ್ಕು ಎಂಬುದನ್ನು ಮೊದಲಾಗಿ ಕಂಡು ಹುಡುಕಿದವರು ಜಾಮ್ ಶೇಟ್ಜಿಯವರು. ಹಾಗಾಗಿ ಇಂದು ಕಬ್ಬಿಣ ಉಕ್ಕು ಕೈಗಾರಿಕೆಗಳಿಗಾಗಿ ಹಿಂದೂದೇಶವು ಬೇರೆ ದೇಶಗಳನ್ನು ಹೊಂದಿರಬೇಕಾದುದಿಲ್ಲ. ಇಂದು ನಿಜವಾಗಿಯೂ ಇದು ಬಹಳ ದೊಡ್ಡ ರಾಷ್ಟ್ರೀಯ ಉದ್ಯೋಗವಾಗಿದೆ. ಮುಂದಕ್ಕೆ ಭಾರತವು ಸ್ವತಂತ್ರವಾಗುವ ಕಾಲದಲ್ಲಿ ಇದು ಇನ್ನಷ್ಟು ಪ್ರಾಬಲ್ಯವನ್ನು ಹೊಂದಲಿದೆ.

ಬೊಂಬಯಿಯಲ್ಲಿ ವಿದ್ಯುತ್ ಪ್ರಯೋಗ

ಬೊಂಬಯಿಯಲ್ಲಿ ವಿದ್ಯುತ್ ಪ್ರಯೋಗ ಮಾಡುವುದು ಅವರ ದೊಡ್ಡ ಆಸೆಯಾಗಿತ್ತು. ಬೊಂಬಯಿಯಂತಹ ಕೈಗಾರಿಕೆಯ ಉದ್ಯೋಗಿಕ ನಗರದಲ್ಲಿ ಅಲ್ಲಿನ ಅನೇಕ ಮಿಲ್ಲುಗಳು ನಡೆಯಲು ವಿದ್ಯುಚ್ಛಕ್ತಿಯ ಅಗತ್ಯವನ್ನು ತಿಳಿದು ೧೯೧೫ರಲ್ಲಿ ಹೈಡ್ರೋ ಇಲೆಕ್ಟ್ರಿಕ್ ಪವರ್ ಸಪ್ಲೈ ವರ್ಕ್ಸ್ ಸ್ಥಾಪಿಸಿದರು.

ಬೆಂಗಳೂರಿನ ವಿಜ್ಞಾನ ಸಂಸ್ಥೆ

ಜಮ್‌ಶೆಟ್ಜಿ ತಾತಾರವರು ಮಾಡಿದ ಬೇರೆ ಬೇರೆ ಕೈಗಾರಿಕೆಯ ಕುರಿತು ವಿವರ ಹೇಳುವುದು ಕಷ್ಟವಾಗಿದೆ. ಆದರೆ ಬೆಂಗಳೂರಿನ ವಿಜ್ಞಾನ ಸಂಸ್ಥೆಯ ವಿಷಯ ತಿಳಿಸದಲ್ಲ. ಇದು ವೈಜ್ಞಾನಿಕ ಶೋಧನಾ ಸಂಸ್ಥೆಯಾಗಿದೆ. ಈ ಸಂಸ್ಥೆಗಾಗಿ ಮೂವತ್ತು ಲಕ್ಷ ರೂಪಾಯಿಗಳ ಖರ್ಚು ಮಾಡಿರುವರು. ಇವೆಲ್ಲಾ ಮಹತ್ವದ ಕೆಲಸವನ್ನು ಭಾರತೀಯರ ಸೇವೆಗಾಗಿ ಮಾಡಿದ್ದು, ಭಾರತದ ಉದ್ಧಾರದ ದೃಷ್ಟಿಯಿಂದ [illegible] ಇವರ ಹೆಸರು ಹಿಂದೂದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ [illegible]

THE PIE-MONEY BANK LTD,
Maidan Road MANGALORE

Undertakes all kinds of Banking Business. Current account at $2\frac{1}{2}$% per annum. Savings Bank Deposits at $4\frac{1}{2}$% per annum.

FIXED DEPOSITS

For 2 Years 5% 1 Year $4\frac{1}{2}$% For 6 months 4% 3 months $3\frac{1}{2}$%

Auction [illegible] ranging from Rs 100/ to Rs 5000/ run regularly on systematic lines. Unique Banking facilities to Businessmen and interested Public.

Apply for particulars—K R. GURU, *Managing Director*

ಲೋಧ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆ ಲಕ್ಷ್ಮಿ ಬೆಳಕು, ಬೆಳದಿಗಳು ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ

ಸ್ತ್ರೀಯರಿಗೆ ಋತುಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟಾಕಿಸ್ಟರು: ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

THE BOMBAY
Life Assurance Co, Ltd

Mr Ullal Appayya Belchada holder of our Policy No 24416 having notified that he has either lost or misplaced his policy and having requested us to issue a duplicate thereof in his favour notice is hereby given that a duplicate will be issued to him by the Company should there be no objection recorded in our Office, to our doing so within a month of of this notice

Bombay 14 6 39 (Sd) JYOTENDRA L. MEHTA,
Managing Director

ಮನೋಹರ ಗ್ರಂಥಮಾಲಾ,
ಧಾರವಾಡ.

ಸ್ವತಂತ್ರ ಕಥೆ, ಕಾದಂಬರಿ, ನಾಟಕ, ಹರಟೆ ಮೊದಲಾದ ಮನಮೆಚ್ಚಿಸುವ ಸರಸ ವಾಙ್ಮಯದ ಸುಗ್ಗಿ! ಅಖಿಲ ಕರ್ನಾಟಕದಲ್ಲಿ ಹೆಸರುಪಡೆದ ಬರಹಗಾರರ ಕೈವಾಡ ಮನದ ಹಸಿವೆಯನ್ನು ಹಿಂಗಿಸಿಕೊಳ್ಳಿ!

ಒಂದು ವರ್ಷದಲ್ಲಿ ೧೫೦ ಪುಟಗಳುಳ್ಳ ಆರು ಸರಸ ಗ್ರಂಥಗಳು
ವಾರ್ಷಿಕ ಚಂದಾ ರೂ ೩-೮-೦
ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ತೋರಿಸಲಾಗುವುದು.

ವ್ಯವಸ್ಥಾಪಕ—
ಮನೋಹರ ಗ್ರಂಥಮಾಲಾ,
ಧಾರವಾಡ.

ಜೆಬುನ್ನೀಸಾ

[೬ನೇ ಪುಟದಿಂದ ಮುಂದುವರಿದುದು.]

ಉದ್ಯೋಗಕ್ಕೆ ರಾಜೀನಾಮೆಯಿತ್ತು, ಯಾರಿಗೂ ತಿಳಿಯದಂತೆ ಲಾಹೋರಿನಿಂದ ಎಲ್ಲಿಗೋ ಹೊರಟು ಹೋದನು.

"ನಾನು ನಿನ್ನನ್ನು—ನಿನ್ನೊಬ್ಬಳನ್ನು ಮಾತ್ರ ಪ್ರೀತಿಸುತ್ತೇನೆ. ಆದರೆ ಅಪಾಯದ ಭಯದಿಂದ ನನಗೆ ಅಲ್ಲಿಗೆ ಬರಲಾಗುವುದಿಲ್ಲ."

ಜೆಬುನ್ನೀಸಳಿಗೆ, ಬಾದಶಹನು ಅಖಿಲ್ ಖಾನನಿಗೆ ಹೆದರಿಸಿ ಬರೆದ ಪತ್ರದ ವಿಷಯ ತಿಳಿದಿರಲಿಲ್ಲ. ಕೆಲವೇ ದಿನಗಳಲ್ಲಿ ತನ್ನ ಜೀವಮಾನದ ಸಂಪೂರ್ಣ ಸೌಭಾಗ್ಯದ ಸಮಯವು ಒದಗುವುದೆಂದು ಆಕೆ ಕನವರಿಸುತಿದ್ದಳು ಒಳ್ಳೆಯ ವಿದ್ಯಾಭ್ಯಾಸ ಹೊಂದಿದವಳೆಂದೂ, ರಸಿಕಳೆಂದೂ ಸ್ವತಃ ಉತ್ತಮ ಕವಯಿತ್ರಿಯೆಂದೂ ಆಕೆಯ ಹೆಸರು ಇಡೀ ಹಿಂದೂದೇಶದಲ್ಲಿಯೆ ಪ್ರಸಿದ್ಧವಾಗಿದ್ದುದರಿಂದ, ಅವಳ ಪಾಣಿಗ್ರಹಣಲಾಲಸೆಯಿಂದ ಬಹು ಮಂದಿ ಯುವಕರು ಬಂದು ನೆರೆದಿದ್ದರು.

ಈ ಸಂದರ್ಭದೆಡೆಯಲ್ಲಿ ತನ್ನ ಪ್ರೇಮಪಾತ್ರನಿಂದ ಆಕೆಗೆ ಪತ್ರವು ತಲಪಿತು. ತನ್ನ ಎಲ್ಲಾ ನಿರೀಕ್ಷೆಗಳನ್ನೂ ಅದು ನುಂಗಿಬಿಟ್ಟಿತು

ತಾನು ಸ್ವಸ್ಥಳಾಗಿಲ್ಲದಿರುವುದರಿಂದ ಮದುವೆಯನ್ನು ಸ್ವಲ್ಪ ಸಮಯ ಕಳೆದು ಮಾಡಬಹುದೆಂದೂ, ಆಕೆ ತನ್ನ ತಂದೆಯನ್ನು ಹೇಗೊ ಹೇಗೊ ಒಪ್ಪಿಸಿದಳು. ಆದರೆ ಮನದಲ್ಲಿಯೇ ತಾನು ಎಂದೆಂದೂ ವಿವಾಹಮಾಡಿಕೊಳ್ಳುವುದಿಲ್ಲವೆಂದು ಖಂಡಿತ ಮಾಡಿದ್ದಳು

ಹೀಗೆ ಕೆಲವು ವರ್ಷಗಳು ಕಳೆದುವು ಜೆಬುನ್ನೀಸಳ ಜೀವನದಲ್ಲಿ ಸುಖದ ಸೂಚನೆಯೇ ಇರಲಿಲ್ಲ ಹಿಂದಿನ ಕೆಲ ಘಟನೆಗಳು ಮಾತ್ರ ದಿವ್ಯ ಸ್ವಪ್ನದಂತೆ ಬಂದು ಆಕೆಯನ್ನು ಒಮ್ಮೊಮ್ಮೆ ಪರವಶಳಾಗಿ ಮಾಡುತಿತ್ತು

ಸುಖವಿಲ್ಲದ, ಆನಂದವಿಲ್ಲದ ಆಕೆಯ ಜೀವನವು ಹೀಗೆ ಅಂಧಕಾರಮಯವಾದಂತೆ ಸಾಗುತ್ತಿರಲು ಒಮ್ಮೆ ಒಂದು ಸುವಾರ್ತೆಯನ್ನು ಕೇಳಿ, ಆಶೆಯ ಕಿರಣವನ್ನು ಕಂಡಂತೆ ಉಲ್ಲಾಸಗೊಂಡಳು! ಅಖಿಲ್ ಖಾನನು ವೇಷವನ್ನು ಮರೆಮಾಡಿ ಢಿಲ್ಲಿಯಲ್ಲಿಯೇ ವಾಸಿಸುತ್ತಿರುವನೆಂದು ಯಾರೋ ತಿಳಿಸಿದರು ಆತನನ್ನು ಸೇರಲು ಅನೇಕ ಹಂಚಿಕೆಗಳನ್ನು ಹುಡುಕಿದಳು. ಕಟ್ಟಕಡೆಗೆ ತನ್ನ ಆಪ್ತಸೇವಕಳೊಡನೆ ಆತನನ್ನು ಕಂಡುಹುಡುಕಿ, ಹೃದಯದ ಪ್ರೇಮನಿವೇದನೆಯನ್ನು ಆದಷ್ಟು ಬೇಗನೇ ಬಿನ್ನವಿಸುವಂತೆ ಬೇಡಿಕೊಂಡಳು

ಇಬ್ಬರಿಗೂ ಅನ್ಯೋನ್ಯ ಭೇಟಿಯಾಗಿ, ಸುಂದರ ಸಮಾಯೋಗ ಸೌಖ್ಯವು ತಿರಿಗಿ ಲಭಿಸುವಂತಾಯಿತು!

ಬಹಳ ವರ್ಷಗಳ ಈ ನಿಷ್ಠುರವಾದ ಅಗಲುವಿಕೆಯ ಪರಿಣಾಮವಾಗಿ, ಇಬ್ಬರೂ ಶರೀರದಲ್ಲಿ ಬಹಳವಾಗಿ ಬದಲಾವಣೆ ಹೊಂದಿದ್ದರು ಆದರೆ ಅವರ ಅಕೃತಿಮ ಪ್ರೇಮವು ಯಾವ ವ್ಯತ್ಯಾಸವನ್ನೂ ಹೊಂದಿರಲಿಲ್ಲ

ಹಲವು ರಾತ್ರಿ ಹೀಗೆ ಆ ಪ್ರೇಮಿಗಳು ಸಮ್ಮಿಳಿತರಾದರು!

ಜೆಬುನ್ನೀಸಳ ಹೃದಯದ ದುಃಖಾಗ್ನಿಯು ನಂದಿಹೋಗಿತ್ತು. ಮುಖದಲ್ಲಿ ಈಗ ಆನಂದದ ಸಂತೋಷದ, ಯೌವನದ ಅನುರಾಗದ ಉಜ್ವಲ ಕಾಂತಿಯು ಚಿಮ್ಮುತಿತ್ತು. ಆಕೆಯ ಕವನಗಳಲ್ಲಿ ಜೀವನ ನಶ್ವರತೆಯನ್ನು ನಿರಾಶೆಯನ್ನು, ಸಾರುವುದು ನಿಂತು ಹೋಗಿ, ಈಗ ಹೊಸ ಉಲ್ಲಾಸದ, ಸಂತಸದ, ಜೀವಿತ ಸೌಖ್ಯದ, ನವಸಂತಸದ ಪ್ರೇಮಪ್ರವಾಹಗಳನ್ನೇ ಹಾಡಿಹರಿಸುತಿದ್ದಳು.

ಅವಳನ್ನು ಮದುವೆಯಾಗಬೇಕೆಂದು ಬಯಸಿ, ನಿರಾಶರಾದವರು ಆಕೆಯ ಈ ಜೀವಿತದ ಹೊಸ ಉಲ್ಲಾಸವನ್ನು ಕಂಡು ಸಂಶಯಗೊಂಡರು. ಈ ಬದಲಾವಣೆಯ ರಹಸ್ಯವನ್ನು ಕಂಡುಹುಡುಕಲು, ಅವರು ಗುಪ್ತಚಾರಕರನ್ನಿಟ್ಟರು. ಕೊನೆಗೆ ಈ ರಹಸ್ಯವು ಹೊರಬಿತ್ತು.

ರಾಜ್ಯದ ಆಪತ್ತಿನ ಗೊಂದಲದಲ್ಲಿದ್ದ ಅವರಂಗಜೇಬನಿಗೆ ಈ ವಾರ್ತೆಯನ್ನು ಕೇಳಿ ಕೋಪವು ಮತ್ತಷ್ಟು ಮಸಗಿತು. ಆಗಲೆ ಒಬ್ಬ ಕುಲೀನನು ಬಂದು, ಬಾದಶಹನೊಡನೆ, ಅಖಿಲ್ ಖಾನನು—ಪ್ರತಿರಾತ್ರಿಯೂ ಜೆಬುನ್ನೀಸಳನ್ನು ಆಕೆಯ ಕೋಣೆಯಲ್ಲೇ ಭೇಟಿಮಾಡುತ್ತಿರುವುದಾಗಿ ಹೇಳಿದನು.

"ಏನು" ಹೀಗೆಂದು ಬಾದಶಹನು ಗುಡುಗಿದನು. "ಹೀಗೆನ್ನಲು ನಿನಗೆ ಧೈರ್ಯ ಬಂತೆ? ಇದನ್ನು ಸತ್ಯವೆಂದು ರುಜುಪಡಿಸದಿದ್ದರೆ, ನಿನ್ನ ಶಿರಚ್ಛೇದನವಾಗುವುದು."

ತಮಗೆ ಒದಗಲಿರುವ ವಿಪತ್ತಿನ ಯಾವ ಸೂಚನೆಯೂ ಇಲ್ಲದೆ ಆ ಪ್ರಣಯಿಗಳು ಒಂದು ದಿನ ಎಂದಿನಂತೆ ಅನ್ಯೋನ್ಯ ವ್ಯವಹರಿಸುತಿದ್ದರು ಆಕೆ, ಚೆಲುವಾದ ಸೀರೆಯನ್ನುಟ್ಟು ಶೃಂಗಾರದಿಂದ ಸುಂದರಳಾಗಿ ಅಲಂಕೃತಳಾಗಿದ್ದಳು ಉನ್ನತ ಪೀಠದಲ್ಲಿ ಕುಳಿತಿದ್ದಳು. ಅವಳ ನಲ್ಲನು, ಆಕೆಯ ಪ್ರೇಮ ಕಂಠದಿಂದ ಹೊರಡುವ ಸಂಗೀತ ಮನೋಹರವಾದ ಪ್ರೇಮಗೀತೆಗಳ ಚೆಲುವನ್ನು ಹೀರುತ್ತಾ ಪಾದದ ಬಳಿ ಅಖಿಲ್ ಖಾನನು ಕುಳಿತಿದ್ದನು.

ಕಾವಲುಗಾರರನ್ನು ಹೊರಗಡೆ ಭದ್ರವಾಗಿ ಕಾದಿರುವಂತೆ ಬಾದಶಹನು ಆಜ್ಞಾಪಿಸಿದ್ದನು ಬಾಗಿಲ ಬಳಿಯಲ್ಲಿ ತಾನೇ ನಿಂತು ಬಾಗಿಲು ತೆರೆಯುವಂತೆ ಕಠೋರನಾಗಿ ಹೇಳಿದನು

ಈ ಅನಿರೀಕ್ಷಿತವಾದ ಮತ್ತು ಅನಪೇಕ್ಷಿತವಾದ ನಿಷ್ಠುರೋಕ್ತಿಯನ್ನು ಕೇಳಿ ಪ್ರಣಯಿಗಳು ದಿಗ್ಭ್ರಮೆಗೊಂಡರು ಭೀತರಾಗಿ ಒಬ್ಬರ ಮುಖವನ್ನೊಬ್ಬರು ನೋಡಿದರು. ಬಾಗಿಲ ಹೊರಗಿನಿಂದ ಅದೇ ಕಠೋರ ಧ್ವನಿಯು ಮತ್ತೂ ಕೇಳಿಸಿತು. ಆಗ ಬೇರೆ ಉಪಾಯವಿಲ್ಲದೆ, ತನ್ನ ನಲ್ಲನನ್ನು ಅಡಗಿಸಲು ಆಕೆ ಅತ್ತಿತ್ತ ಹುಡುಕಿದಳು ಒಂದು ಯೋಗ್ಯಸ್ಥಳವನ್ನು ಆಕೆ ಕಂಡುಹುಡುಕುವಷ್ಟು ಹೊತ್ತಿಗೆ ಬಾಗಿಲನ್ನು ಒಡೆದು ಬಾದಶಹನು ಒಳಬಂದನು

"ಅಖಿಲ್ ಖಾನನು ಎಲ್ಲಿದ್ದಾನೆ! ಎಲ್ಲಿ ಅಡಗಿರುವನೋ ಹೇಳು' ಆತನನ್ನು ವಧೆಮಾಡಬೇಕಾಗಿದೆ"

"ಅಖಿಲ್ ಖಾನ್? ಬಹು ಸಮಯಗಳ ಹಿಂದೆ ಲಾಹೋರಿನಿಂದ ಆತನು ಎಲ್ಲಿಗೋ ಹೋಗಿದ್ದನಷ್ಟೆ"

"ಮರೆಮೋಸ ಬೇಡ, ದಾರಿ ಬಿಡು, ನಾನೇ ಹುಡುಕುತ್ತೇನೆ, ಅವನು ಇಲ್ಲಿದ್ದರೆ ಆತನು ಸಾಯಬೇಕು ಇಲ್ಲವಾದರೆ ಅಪವಾದ ಹುಟ್ಟಿಸಿದ ಸುಳ್ಳುಗಾರರು ಸಾಯಬೇಕು"

ಹೀಗೆ ಹೇಳುತ್ತಾ ಬಾದಶಹನ ಅರಸಲು ಆರಂಭಿಸಿದನು ಕೋಣೆಯ ಪ್ರತಿಯೊಂದು ಮೂಲೆ ಮೂಲೆಯನ್ನೂ ಹುಡುಕಿನೋಡಿದನು ಒಂದು ಕಡ್ಡಿ ಕಸವಾದರೂ ಅವನ ದೃಷ್ಟಿಯಿಂದ ಮರೆಯಾಗಲಿಲ್ಲ ಸಿಟ್ಟುಸಿರು ಎಳೆದು ಕ್ಷೋಭೆಗೊಂಡವನಾಗಿ, ಹೊರಗೆ ಹೋಗಬೇಕೆನ್ನುವಷ್ಟರಲ್ಲಿಯೇ ಸ್ನಾನಕ್ಕಾಗಿ ಕುದಿಯುವ ನೀರನ್ನು ಇಟ್ಟಿದ್ದ, ಪಾತ್ರದ ಕಡೆಗೆ ಆತನ ದೃಷ್ಟಿಯು ಬಿತ್ತು ಅಲ್ಲಿಯೇ ನಿಂತನು.

ಆ ಪಾತ್ರವನ್ನು ನಿನ್ನ ಕೋಣೆಯೊಳಗೆ ಯಾತಕ್ಕೆ ಇಟ್ಟಿದ್ದೀ?"

"ನೀರನ್ನು ಕುದಿಸಲು" ಮೆಲ್ಲನೆ ಉತ್ತರವಿತ್ತಳು

ಬಾದಶಹನು ಕಾವಲುಗಾರರನ್ನು ಕೂಗಿದನು ಐದಾರು ಮಂದಿ ಕೂಡಲೇ ಓಡಿಬಂದರು.

"ಪಾತ್ರದಲ್ಲಿ ಕುದಿಯುವ ನೀರನ್ನು ನೋಡಿ" ಬಾದಶಹನು ಅವರಿಗೆ ಆಜ್ಞಾಪಿಸಿದನು ಅಷ್ಟು ಹೊತ್ತಿನಲ್ಲಿ ಜೆಬುನ್ನೀಸಳು ಪಾತ್ರದ ಸಮೀಪ ಬಂದು ಹೀಗೆಂದಳು

"ಪ್ರಿಯಾ, ನನ್ನ ಮಾನವನ್ನು ಉಳಿಸು, ಪ್ರೀತಿಯ ಸಲುವಾಗಿ, ಸುಮ್ಮಗಿರು ನಿನಗಿದೇ ಕೊನೆಯ ವಂದನೆಯು. ನಾನು ಸಾಯುವ ತನಕವೂ ನಿನ್ನವಳೇ ಎಂದು ಖಂಡಿತ ತಿಳಿದಿರು"

ನೀರು ಬಿಸಿಯಾಗುತಿದ್ದಂತೆ, ಮೊದಲೇ ಹೃದಯವು ಪ್ರೇಮಾಗ್ನಿಯಿಂದ ಬೆಂದುಹೋಗಿದ್ದ ಅಖಿಲ್ ಖಾನನು ಮೌನವಾಗಿ ಅಲ್ಲಿ ಭಯಂಕರ ಮರಣವನ್ನು ಹೊಂದಿದನು.

ಜೆಬುನ್ನೀಸಳು ಈ ನಿಷ್ಠುರ ಪ್ರೇಮಾನುಭದಿಂದ ಆ ಮೇಲೆ ಎಂದೆಂದೂ ದುಃಖಿನಿಯಾಗಿಯೇ ಇದ್ದಳು.

ಆಕೆಯ ಕೊನೆಯ ಬಿನ್ನಹದಂತೆ, ಅವಳ ಸಮಾಧಿಯು, ಎಲ್ಲಿ ಆಕೆ ತನ್ನ 'ನಲ್ಲನೊಡನೆ ಕ್ಷಣಿಕವಾದರೂ ಪ್ರಥಮ ಪರಿಚಯ ಪಡೆದು ದಿವ್ಯಸುಖವನ್ನು ಪಡೆದಿದ್ದಳೋ, ಆ ಲಾಹೋರಿನ ಹೂತೋಟದಲ್ಲಿಯೇ ಕಟ್ಟಲ್ಪಟ್ಟಿತು.

(ಆಧಾರದಿಂದ)

ದುರ್ಗಾದಾಸ.

Kanarese No 8

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದಲ್ಲದೇ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ. ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತಿದ್ದಾರೆ. ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತವಿಸುವುದು. ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಔಷಧೀಕರಿಸಲ್ಪಟ್ಟಿದೆ. ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು ಉಷ್ಣದಿಂದ ಬೆಂದಂತ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ. ಬೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಮೆಚ್ಚುತ್ತಿರುವರು.

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ ಕುಟುಂಬದ ಪ್ರತೀ ಒಬ್ಬನಿಗೂ ಬಹುಮೂಲ್ಯವಾದದ್ದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರು

Cuticura Talcum Powder

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4%p a

in denominations of

RS. 50/-,100/-,500/-,1,000/-, & 5,000/

are now issued at all our Branches.

For particulars call at or write to any of our nearest Branches.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬೀನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿಸ್ಥದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲೈಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು. ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಟೇಷನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ ಮಾಲು ಪರದೇಶದಿಂದ ಬಂದಂತೆ, ಉಂಟು ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎನ್. ಎಮ್. ವಾರ್ಷ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜಂಟ್.—ಟಿ. ಎಚ್. ಭಟ್ರಾ. ಗದಗ:—ವಿ. ಎಸ್. ಶೆಟ್ಟಿ.

ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜೆಂಟ್—ಡಾ. ಕೆ ಭಾಸ್ಕರ ಶೈ.

ಸ್ಪೆಶಲ್ ಏಜಂಟ್:—ಟಿ. ವ್ಹಿ. ಹೊನ್ನಾವರ

ಮಹಾತ್ಮಾ ಜ್ಞಾನೇಶ್ವರ

(ಅವರ ಜೀವನ ಮಹಾತ್ಮ್ಯ)

ದಕ್ಷಿಣದ ವಿಶಾಲ ಬಯಲು ಭೂಮಿಯಲ್ಲಿ ಸಾವಡ ಏಕಾಂಗಿಯಾದ ಪ್ರಯಾಣಿಕನೊಬ್ಬನ ದೃಷ್ಟಿಯು ಮಂತ್ರವಶೀಕೃತವಾದಂತೆ ಆಕರ್ಷಿಸಲ್ಪಡುತ್ತದೋ, ಉನ್ನತ ವೃಕ್ಷಗಳು ತಮ್ಮ ವಿಶಾಲ ಶಾಖೆಗಳನ್ನು ವಿಸ್ತಾರವಾದ ಆಕಾಶದಲ್ಲಿ ಎಲ್ಲಿ ಹರಡಿ ನಿಂತಿವೆಯೋ, ಎಲ್ಲಿ ಆಬಾಲವೃದ್ಧರು ದೈವಭಕ್ತಿಯಿಂದ ಬೆಳಗಿಂದ ಸಂಜೆಯವರೆಗೆ ಸದಾ ಸಂತೋಷದಿಂದ ವಿಹರಿಸುತ್ತಿರುವರೋ ಆ ಇಂದ್ರಾಯಣೀ ನದಿಯ ದಡದಲ್ಲಿರುವ ಅಲಂದೀ ನಗರವು ಭಾರತೀಯರಿಗೆ ಒಂದು ಪವಿತ್ರ ಯಾತ್ರಾ ಕ್ಷೇತ್ರವಾಗಿ ಮನೋಹರವಾಗಿದೆ.

ಈ ನಗರದಲ್ಲಿಯೇ ಮರಾಠಾ ದೇಶದ ಮಹಾಕವಿಯಾದ 'ಜ್ಞಾನೇಶ್ವರನು ಅದ್ಭುತ ಪವಾಡವೊಂದನ್ನು ಮಾಡಿ ತೋರಿಸಿದನು

ಈಗಲೂ ಆ ಪವಾಡದ ಗೋಡೆಗೆ ಬಹಳ ಮಹತ್ವವು ಸಲ್ಲುತ್ತದೆ ಅಲ್ಲಿಯೇ ದೇಗುಲವೊಂದೂ ಕಟ್ಟಲ್ಪಟ್ಟಿದೆ

ಇಲ್ಲಿ ಜ್ಞಾನೇಶ್ವರ, ನಿವೃತ್ತಿ, ಸೋಪಾನ್ ದೇವ್, ಮುಕ್ತಾಬಾಯಿ ಈ ಸೋದರರಮಣಿಗಳ ಶಿಲಾವಿಗ್ರಹಗಳೂ ಸಾಲಾಗಿ ಇವೆ.

ಒಂದು ದಂತ ಕಥೆ

ಜ್ಞಾನೇಶ್ವರನು ಬಹಳ ಅದ್ಭುತ ಕಾರ್ಯಗಳನ್ನು ಮಾಡುವನೆಂಬ ಸುದ್ದಿಯು ಎಲ್ಲೆಲ್ಲೂ ಹರಡಿತ್ತು. ದೊಡ್ಡ ಸನ್ಯಾಸಿಯಾಗಿದ್ದ ಚಾನ್ ದೇವನು ಈ ವಾರ್ತೆಯನ್ನು ಕೇಳಿ ಆತನನ್ನು ಕಾಣುವ ಕುತೂಹಲದಿಂದ ಅವನಿದ್ದೆಡೆಗೆ ಹೋದನು

ಮಹಾ ಸನ್ಯಾಸಿಯಾದ ಚಾಂದೇವನು ಅಲಂದಿಗೆ ಬರುವನೆಂಬ ವಾರ್ತೆಯನ್ನು ಕೇಳಿ, ಅಲ್ಲಿನ ಅನೇಕ ಪುರಜನರೊಡನೆ ಜ್ಞಾನೇಶ್ವರನು ಅವನನ್ನು ಎದುರುಗೊಂಡನು ಯಾವ ಕಡೆಯಿಂದ ಚಾಂದೇವನು ಅಲ್ಲಿಗೆ ಬರುವನೆಂದು ಅವರು ಆಕಾಶದ ಎಲ್ಲಾ ಕಡೆಗೂ ನೋಡುತ್ತಿದ್ದರು. ಪೂರ್ವದಿಂದ ದೊಡ್ಡ ಸ್ವರವೊಂದು ಮೊಳಗಿತು. ಚಾಂದೇವನು ಹುಲಿಯ ಮೇಲೆ ಸವಾರಿ ಮಾಡಿ, ಮುಗಿಲ ಬಳಿಯಿಂದ ಇಳಿದು ಬರುತ್ತಿದ್ದನು ಬಲಕೈಯಲ್ಲಿ ಚಾಟಿಯಾಗಿ ಭಯಂಕರ ಸರ್ಪವೊಂದನ್ನು ಹಿಡಿದಿದ್ದನು ನಗರದ ಜನರು ಬೆದರಿಹೋದರು

ಜ್ಞಾನೇಶ್ವರನು ಮಾತ್ರ ಮೌನನಾಗಿ ಸುಮ್ಮಗಿದ್ದನು. ಚಾಂದೇವನು ಹುಲಿಯ ಮೇಲೇರಿ ಬರುತ್ತಾನೆ, ನಾನು ಬರಿಗಾಲಿನಲ್ಲಿ ಆತನನ್ನು ಎದುರುಗೊಳ್ಳುವುದು ಉಚಿತವಲ್ಲವೆಂದು ಆತನು ಭಾವಿಸಿದನು ಕೂಡಲೇ ನಗರದ ಗೋಡೆಯ ತುದಿಯೇರಿ, ಕುದುರೆಯ ಮೇಲೆ ಸವಾರಿಮಾಡುವವನಂತೆ ಕುಳಿತನು

ಅಲ್ಲಿ ಕುಳಿತಾಕ್ಷಣದಲ್ಲಿಯೇ ಗೋಡೆಯು ಕೆಳಬದಿಯು ಬಿಸುಗೆ ಬಿಟ್ಟಂತಾಗಿ ಮೇಲೇರಿತು. ಅಲಂಧಿಯ ಜನರಿಗೆ ಇದು ಇನ್ನೊಂದು ಅದ್ಭುತ ದೃಶ್ಯವಾಯಿತು

ಹೀಗೆ ಇಬ್ಬರು ಮಹಾತ್ಮರು ಅನ್ಯೋನ್ಯ ಭೇಟಿಯಾದರು'

ರಮಾನಂದರ ಭವಿಷ್ಯ

ಕ್ರಿ ಶ ೧೨೭೦ರ ಸುಮಾರಿಗೆ, ನಾಸಿಕದಿಂದ ಬಹು ದೂರದಲ್ಲಿರುವ, ಗೋದಾವರಿ ನದಿಯ ದಡದ ಮೇಲಿರುವ ಅಪ್‌ಗಾನ್ ಎಂಬ ಹಳ್ಳಿಯಲ್ಲಿ ವಾಸಿಸುತ್ತಿದ್ದ ವಿಠಲಪಂತಕುಲಕರ್ಣಿ (ಕುಲಕರ್ಣಿಯೆಂದರೆ ಹಳ್ಳಿಯ ಶ್ಯಾನುಭಾಗ) ಯೆಂಬವನ ಮನೆಯಲ್ಲಿ, ಆತನಮಡದಿ ರುಕ್ಮಾಬಾಯಿಯು ಒಂದು ಗಂಡು ಮಗುವಿಗೆ ಜನ್ಮವಿತ್ತಳೆಂಬ ವಿಷಯವು, ಕುಟುಂಬದವರಿಗೆಲ್ಲಾ ಅತ್ಯಂತ ಸಂತೋಷವನ್ನುಂಟುಮಾಡಿತು

ರುಕ್ಮಾಬಾಯಿಗೆ ಬಹಳ ಆನಂದವಾಯಿತು. ಮುದ್ದುಮಗುವನ್ನು ಮೋಲಿಯಾಡಿಸುತ್ತಿದ್ದಾಗ ಅವನ ಮುಖಮಂಡಳವನ್ನು ಕಂಡು, ಕಾಶಿಯ ಪ್ರಸಿದ್ಧ ಸನ್ಯಾಸಿ ರಮಾನಂದನೆಂಬವನು ಆಕೆ ಮೂರು ಗಂಡುಮಕ್ಕಳ ಮತ್ತು ಒಬ್ಬ ಕನ್ನಿಕೆಯ ತಾಯಿಯಾಗುವಳೆಂದು ಭವಿಷ್ಯ ಹೇಳಿದುದರ ನೆನಪಾಯಿತು.

ಆಕೆ ತಂದೆಯ ಮನೆಯಲ್ಲಿಯೇ ಇದ್ದಳು. ಮದುವೆಯಾದ ಕೆಲಸಮಯದಲ್ಲಿಯೆ ಅವಳ ಗಂಡನು ಬಿಟ್ಟುಹೋಗಿದ್ದನು.

ರಾತ್ರಿಯಿಡೀ ಚಿಂತೆಯಿಂದ ಜಾಗೃತಳಾಗಿದ್ದಳು. ಮುಂಜಾವದ ಹೊತ್ತಿಗೆ ನದಿಗೆ ಸ್ನಾನಕ್ಕೆಂದು ಹೋದಳು. ಇನ್ನೂ ಕತ್ತಲು ಕವಿದಿತ್ತು. ಬಾವಲಿಗಳು ಹಾರಾಡುತ್ತಿದ್ದುವು ನದಿಯ ನಿನಾದವೊಂದಲ್ಲದೆ ಇನ್ನಾವ ಶಬ್ದವೂ ಕೇಳಿಸುತ್ತಿರಲಿಲ್ಲ

ಮುಡಿಯನ್ನು ಬಿಚ್ಚಿ ಸ್ನಾನಕ್ಕೆಂದು ನದಿಗಿಳಿದಳು ನೀರು ಬಹಳ ತಂಪಾಗಿದ್ದೂ ಸೊಂಪಾಗಿತ್ತು ಸ್ನಾನ ತೀರಿಸಿ ದೇವದರ್ಶನಕ್ಕಾಗಿ ದೇಗುಲಕ್ಕೆ ಹೋದಳು ಅಶ್ವತ್ಥವೃಕ್ಷದ ಸುತ್ತು ಪ್ರದಕ್ಷಿಣೆ ಮಾಡಿ, ಮುಗಿಸುವಷ್ಟರಲ್ಲಿ ಒಬ್ಬ ಸನ್ಯಾಸಿಯು ಬಂದು —

"ಸೌಭಾಗ್ಯವತಿಯೇ, ನೀನು ಬ್ರಹ್ಮ, ವಿಷ್ಣು ಮಹೇಶ್ವರರೇ ಅವತಾರರಾಗಿ ಬರುವ ಮೂವರ ಗಂಡು ಮಕ್ಕಳನ್ನೂ, ಲಕ್ಷ್ಮಿಯೇ ಅವತಾರಳಾಗಿ ಬರುವ ಒಬ್ಬ ಕುವರಿಯನ್ನೂ ಪಡೆಯುವಿ" ಎಂದನು

"ಸ್ವಾಮಿ, ಅದು ಸಾಧ್ಯವಿಲ್ಲ, ನನ್ನ ಪತಿಯು ನನ್ನನ್ನು ಬಿಟ್ಟುಹೋಗಿರುವರು, ಅವರು ತಿರುಗಿ ಬರುವಂತಿಲ್ಲ" ನಿದ್ರೆಯಿಲ್ಲದ ಅವಳ ಕಣ್ಣುಗಳಲ್ಲಿ ದುಃಖಸಂತೋಷಗಳ ಬಾಷ್ಪ ಬಿಂದುವುದುರಿತ

"ಧರ್ಮಾತ್ಮಳೇ, ಹಾಗಿಲ್ಲ ನಿನ್ನ ಪತಿಯು ನನ್ನಲ್ಲಿಗೆ ಬಂದಿದ್ದನು. ಆತನಿಗೆ ಸನ್ಯಾಸದೀಕ್ಷೆಯನ್ನು ನಾನೇ ಕೊಟ್ಟಿರುತ್ತೇನೆ" ಎಂದನು

ವಿಠಲಪಂತನ ಆಗಮನ

ಈ ವಾರ್ತೆಯನ್ನು ಕೇಳಿ ಸನ್ಯಾಸಿಯ ಪಾದದಲ್ಲಿ ಬಿದ್ದು ಆಕೆ ಪ್ರಾರ್ಥಿಸಿದಳು

"ನೀವೇ ಆತನನ್ನು ತಿರುಗಿ ಗ್ರಹಸ್ಥನಾಗಿ ಮಾಡಲಾರಿರೇ?, ನೀವೆಂದಂತೆ ನಾನು ಮಕ್ಕಳ ತಾಯಿಯಾಗಬೇಕಾದಲ್ಲಿ, ನನ್ನ ಪತಿಯ ಸಂಗಮವು ನನಗೆ ಅವಶ್ಯವಷ್ಟೆ"

"ತಂಗೀ, ನಾನು ಆತನಿಗೆ ಆ ದೀಕ್ಷೆಯನ್ನು ಕೊಟ್ಟಾಗ, ವಿವಾಹಿತನೆಂದು ತಿಳಿದಿರಲಿಲ್ಲ ನಿನ್ನ ಕೊರಗನ್ನು ಅಳಿಸುವುದು ನನ್ನ ಕರ್ತವ್ಯವಾಗಿದೆ ಹೆದರಬೇಡ"

ವಿಠಲ ಪಂತನು ಅಲಂದಿಗೆ ತಿರುಗಿ ಬಂದನೆಂದು ಕೇಳಿ ರುಕ್ಮಾ ಬಾಯಿಯ ಮನೆಯವರು ಸಂತೋಷಗೊಂಡರು. ಹಲವರು ಸನ್ಯಾಸಿಯಾದವನು ತಿರುಗಿ ಗೃಹಸ್ಥನಾಗುವುದು ಸಲ್ಲದೆಂದು ಹೇಳಿದರು

ದಾರಿ ನಡೆದು ನಡೆದು ಕಂಗಾಲಾಗಿ ರಾತ್ರಿಯಾಗಬೇಕಾದರೆ ವಿಠಲಪಂತನು ಅಲಂದಿಯನ್ನು ಸಮೀಪಿಸಿದನು. ಒಂದು ಮನೆಯಲ್ಲಿ ಕೆಲದಿನ ವಿಶ್ರಾಂತಿ ಪಡೆದು, ಸ್ವಗ್ರಾಮವಾದ ಅಪೆಗಾನಿಗೆ ತೆರಳಿದನು ಹೆಂಡತಿಯೊಡನೆ ಸಂಸಾರ ಮಾಡುತ್ತಿದ್ದು, ನಿವೃತ್ತಿ ಜ್ಞಾನೇಶ್ವರ, ಸೋಪಾನ್ ದೇವಿ, ಮುಕ್ತಾ ಬಾಯಿಯವರನ್ನು ಮಕ್ಕಳಾಗಿ ಪಡೆದನು.

ಮಕ್ಕಳೊಡನೆ ಆತನು ಸುಖವಾಗಿರಲಿಲ್ಲ. ಗಂಡು ಮಕ್ಕಳಿಗೆ ಉಪನಯನ ಸಂಸ್ಕಾರವನ್ನು ಮಾಡಲು ಸನಾತನೀ ಬ್ರಾಹ್ಮಣರು ತಿರಸ್ಕರಿಸಿದರು. ಉಚ್ಚ ಕುಲೀನರಾದ ಬ್ರಾಹ್ಮಣ ಪುರೋಹಿತರ, ಶುದ್ಧಿ ಸಂಸ್ಕಾರ ಪತ್ರಿಕೆಯನ್ನೂ ತರದ ವಿನಹಾ ಆತನಿಗೆ ಬಹಿಷ್ಕಾರವೆಂದು ಅವರು ಹೇಳಿಬಿಟ್ಟರು

ಮೊದಲನೆಯ ಪವಾಡ

ಅಲ್ಲಿನ ಬ್ರಾಹ್ಮಣ ಪುರೋಹಿತರು ಶುದ್ಧಿ ಸಂಸ್ಕಾರ ಪತ್ರವನ್ನು ಕೊಡಲು ಒಪ್ಪಲಿಲ್ಲ. ಜ್ಞಾನೇಶ್ವರನು ತಾನು ವಿಷ್ಣುವಿನ ಅವತಾರವೆಂದಾಗ ಅವರು ಹಾಸ್ಯ ಮಾಡಿದರು 'ದೈವಿಕ ಶಕ್ತಿಯಿದ್ದರೆ ತೋರಿಸು ನೋಡುವಾ' ಎಂದರು

ಜ್ಞಾನದೇವನು ಉತ್ತರ ಕೊಡಲಿಲ್ಲ ಹೊರ ಬೀದಿಗೆ ಬಂದು, ಅಲ್ಲಿಂದ ಒಳ್ಳೆಯ ಪುಷ್ಟಿಯಾಗಿರುವ ಕೋಣವೊಂದನ್ನು ಒಳಗೆ ತಂದನು ಆ ಕೋಣದೊಡನೆ ಕೆಲಮಂತ್ರಗಳನ್ನು ಹೇಳಬೇಕಾಗಿ ಆಜ್ಞಾಪಿಸಿದನು ಬ್ರಾಹ್ಮಣರು ನಗುತ್ತಿದ್ದರು ಕೋಣವು ಬಾಯ್ದೆರೆಯಿತು, ಶುದ್ಧ ಸಂಸ್ಕಾರವಾದ ರೀತಿಯಲ್ಲಿ ಮಂತ್ರೋಚ್ಚಾರಣೆ ಮಾಡಿತು

ಪೂನಾದ ಕೋಲಿವಾಡ ಎಂಬಲ್ಲಿ ಈ ಕೋಣನ ಸಮಾಧಿಯು ಈಗಲೂ ಇದೆ

ಅಲ್ಲಿಂದ ಆ ಕೋಣವನ್ನು ತೆಕ್ಕೊಂಡು ಜ್ಞಾನೇಶ್ವರನು ಮರಳಿದಾಗ, ದಾರಿಯಲ್ಲಿ ಅದು ತೀರಿ ಹೋದದರಿಂದ ಕೋಳಿವಾಡದಲ್ಲಿ ಅದಕ್ಕೆ ಸಮಾಧಿ ಕಟ್ಟಿದನು

ಪ್ರತಿವರ್ಷ ಚೈತ್ರ ಮಾಸದಲ್ಲಿ ಈ ಸಮಾಧಿಯ ಗೌರವ ಸೂಚನೆಗಾಗಿ ಒಂದು ಉತ್ಸವವು ಅಲ್ಲಿ ನಡೆಯುತ್ತದೆ

ದಾರಿಯಲ್ಲಿ ಬರುವಾಗ, ಸಚ್ಚಿದಾನಂದ ಬಾಬನೆಂಬವನನ್ನು ಚಿರಕಾಲದ ರೋಗದಿಂದ ವಿಮೋಚನೆ ಮಾಡಿದನು

ಜ್ಞಾನೇಶ್ವರಿ ಎಂಬ ಮಹಾಗ್ರಂಥವು ಮರಾಠಿಯಲ್ಲಿ ಆತನಿಂದ ಬರೆಯಲ್ಪಟ್ಟಿತು. ಈ ಗ್ರಂಥವು ಬರೆದ ಜಾಗದಲ್ಲಿ ಒಂದು ಶಿಲಾಸ್ತಂಭವು ನಿಲ್ಲಿಸಲ್ಪಟ್ಟಿದೆ.

ಜ್ಞಾನದೇವನ ಮರಣ

ಜ್ಞಾನದೇವನು ಸಂಗಡಿಗನಾದ ನಾಮದೇವನೊಡನೆ, ಇಡೀ ಭರತಖಂಡವನ್ನು ಸಂಚರಿಸಿ, ಪಂಡರಾಪುರಕ್ಕೆ ಬಂದನು, ಆಗ ಕಾರ್ತಿಕ ಮಾಸವಾಗಿತ್ತು ವಾರ್ಷಿಕೋತ್ಸವವು ಸಂಭ್ರಮದಿಂದ ಜರಗುತ್ತಿತ್ತು

ಆ ದಿನ ರಾತ್ರಿ ಪೂರ್ಣ ಚಂದ್ರನು ಆಕಾಶದಲ್ಲಿ ಉರಿಸಿ ಮೇಲೇರಿ ಬರುತ್ತಿರಲು, ಜ್ಞಾನೇಶ್ವರನು ಆಯಾಸಗೊಂಡವನಂತೆ ಆದನು

ತಾನು ಅಲಂದಿಗೆ ಹೋಗಬೇಕೆಂದು ಹೇಳಿದನು ಆತನ ಸಹೋದರರು ಹಿಂಬಾಲಿಸಿದರು.

ಕಾರ್ತಿಕ ಕೃಷ್ಣಪಕ್ಷ ಏಕಾದಶಿಯ ದಿನ ರಾತ್ರಿ ಜ್ಞಾನೇಶ್ವರನ ಮನೆಯವರೆಲ್ಲಾ ಸಿದ್ಧೇಶ್ವರ ದೇವಾಲಯದಲ್ಲಿ ನೆರೆದು ಪವಿತ್ರ ಮಂತ್ರಗಳನ್ನು ಉಚ್ಚರಿಸುತ್ತಿದ್ದರು. ನೆರೆಕರೆಯವರೂ ಸೇರಿದ್ದರು

ರಾತ್ರಿಯು ಮಾಗಿಯುತ್ತಾ ಬಂದಂತೆ ಸ್ವರವು ಏರುತ್ತಾ ಹೋಯಿತು. ಮರುದಿನವೂ ಆ ಭಜನೆಯು ಮುಗಿಯಲಿಲ್ಲ ಮೂರನೇ ದಿನ ನಿವೃತ್ತಿಯನ್ನು ಬಳಿ ಕರೆದು ಜ್ಞಾನೇಶ್ವನು, ನನ್ನ ಆತ್ಮವು ಈ ಶರೀರವನ್ನು ಬಿಡಲು ತಯಾರಾಗಿದೆ ಎಂದು ಹೇಳಿದನು

ಭಜನೆಯು ತೀವ್ರವಾಗಿ ನಡೆಯುತ್ತಿತ್ತು ಆ ಪವಿತ್ರ ನಾದಗಳ ಮಧ್ಯದಲ್ಲಿ ಆ ಮಹಾಸನ್ಯಾಸಿಯ — ಮಹಾ ಕವಿಯ — ಆತ್ಮವು ಮಿಲನವಾಯಿತು.

ಮರಾಠದ ಜನರ ಹೃದಯದಲ್ಲಿ ಈ ಸ್ಮರಣೆಯು ಈಗಲೂ ನೂತನವಾಗಿದೆ

ಇಂದು ಅಲಂದಿಯಲ್ಲಿ ಅನೇಕ ಧರ್ಮಶಾಲೆಗಳು ಕಟ್ಟಲ್ಪಟ್ಟಿವೆ

ಜೂನ್ ತಿಂಗಳ ಜನ್ಮದಿನದ ಹಬ್ಬಕ್ಕೆ ಸಾವಿರಾರು ಜನರು ಬಂದು ನೆರೆಯುತ್ತಾರೆ ಇದು ಪವಿತ್ರ ಯಾತ್ರಾ ಕ್ಷೇತ್ರವಾಗಿದೆ

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ ಎಲ್ಲವರ ರುಚಿಗೆ ತಕ್ಕದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ 1 ವೀಸಕ್ಕೆ ರೂ 3-40 ನವಿಲಿನ ಮಾರ್ಕು ಸಾರಥಿ ನಸ್ಯ 1 ವೀಸಕ್ಕೆ ರೂ 3.00

(ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ

ಏಜೆಂಟರು ಬೇಕಾಗಿದ್ದಾರೆ

ಎಡ್ರೆಸು —

ಎ ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

ಸಾವಕಾರ ಶ್ರೀನಿವಾಸ ರಂಗ ಪೈ

[ಸ್ಥಾಪನೆ. ಕ್ರಿ ಶ 1858]

: : ಉಜ್ವಲ ಕಾಂತಿಯ : :

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಸಿನೆಮಾ ನಟರ ಜೀವನ ಪರಿಚಯ

೪. ಮೋತಿಲಾಲ್

ಇಪ್ಪತ್ತೆಂಟು ವರುಷಗಳ ಹಿಂದೆ ಡಿಶಂಬರ ತಾಲ್ಕರಂದು ಮೋತಿಲಾಲನು ಸಿಮ್ಲಾದಲ್ಲಿ ಆಢ್ಯ ಕುಟುಂಬವೊಂದರಲ್ಲಿ ಜನ್ಮವೆತ್ತಿದನು. ತಂದೆಯ ಕಿರಿಯ ಮಗನೇ ಮೋತಿಲಾಲನು. ಬಾಲ್ಯದಲ್ಲಿ ಈತನಲ್ಲಿ ಇತರ ಮಕ್ಕಳಿಗಿಂತ ಯಾವ ರೀತಿಯ ವಿಶೇಷತೆಗಳೂ ಕಂಡುಬರುತ್ತಿದ್ದಿಲ್ಲ. ಆದರೆ ಶಾಲೆಯಲ್ಲಿ ತನ್ನ ಪಾಠಗಳಿಗೆ ಎಲ್ಲಾ ಮಕ್ಕಳಿಗಿಂತಲೂ ಹೆಚ್ಚಿನ ಆಸಕ್ತಿಯಿಂದ ಮನಸ್ಸು ಕೊಡುತಿದ್ದನು. ಎಂಥಾ ಕಷ್ಟ ಪಾಠಗಳಾದರೂ ಪ್ರಥಮ ಬಾರಿಯಲ್ಲಿಯೇ ಇವನಿಗೆ ಮುಂದಟ್ಟಾಗುತಿತ್ತು. ಪರೀಕ್ಷೆ ಕಾಲದಲ್ಲಿ ಏನೊಂದೂ ಸಿದ್ಧತೆ ಮಾಡದೆ ಉತ್ತಮ ರೀತಿಯಲ್ಲಿ ತೇರ್ಗಡೆ ಹೊಂದುವ ವಿಶೇಷತೆಯ ಒಂದು ಗುಣವು ಈತನಲ್ಲಿದ್ದಿತು. ತನ್ನ ಹದಿನೈದನೇ ವಯಸ್ಸಿನಲ್ಲಿ ಅಂದರೆ ೧೯೨೬ರಲ್ಲಿ ಮೆಟ್ರಿಕ್ ಪರೀಕ್ಷೆಯನ್ನು ಪಾಸಾಗಿ ಮುಂದಿನ ವಿದ್ಯಾರ್ಜನೆಗಾಗಿ ಢಿಲ್ಲಿಯ ಕಾಲೇಜನ್ನು ಸೇರಿದನು. ಆದರೆ ಅವನ ಅದೃಷ್ಟದಿಂದಲೋ ಯಾ ದುರಾದೃಷ್ಟದಿಂದಲೋ ನಾಲ್ಕನೇ ವರುಷ ಅಂದರೆ ಆತನು ಪದವೀಧರನಾಗುವ ಸಮಯವೇ ಅವನ ಕೈಯ ಕೀಲು ಮುರಿದುಹೋದುದರಿಂದ ಪರೀಕ್ಷೆಗೆ ತೆರಳಲು ಸಾಧ್ಯವಾಗದೇ ತನ್ನ ವಿದ್ಯಾರ್ಥಿ ದೆಸೆಗೆ ಶರಣು ಕೊಡೆದನು.

ಕಾಲೇಜನ್ನು ಬಿಟ್ಟವನೇ ಯಾವುದಾದರೂ ಒಂದು ವೃತ್ತಿಗೆ ಸೇರಬೇಕೆಂಬ ಯೋಚನೆಯು ಹತ್ತಿತು. ಆದರೆ ತಾನು ಸಿನೆಮಾ ವೃತ್ತಿಯನ್ನು ಕೈಕೊಳ್ಳುವೆನೆಂದು ಆತನು ಕನಸಿನಲ್ಲಿ ಕೂಡಾ ಎಣಿಸಿರಲಿಲ್ಲ. ಬಾಲ್ಯದಿಂದ ಓಡಿಯಾಡುವುದೇ ಮೊದಲಾದ ಶೌರ್ಯ ಕಾರ್ಯಗಳಲ್ಲಿಯೇ ಹೆಚ್ಚು ಆಸಕ್ತಿಯಿದ್ದ ಮೋತಿಲಾಲನು ನೌಕಾಬಲವನ್ನು ಸೇರವುದಾಗಿ ನಿರ್ಧರಿಸಿದನು. ಆದರೆ ಮೋತಿಲಾಲನ ಈ ನಿರ್ಧಾರವನ್ನು ಕೇಳಿ ಆತನ ತಾಯಿಯು ವ್ಯಾಕುಲಗೊಂಡಳು. ಆ ಸಮಯ ಭಾರತೀಯ ತರುಣರಿಗೆ ನೌಕಾವೃತ್ತಿಯಿಂದರೆ ಅಭಿವೃದ್ಧಿಹೊಂದುವ ಏಳಿಗೆಯ ವೃತ್ತಿಯಾಗಿತ್ತು. ಅನೇಕ ಆಢ್ಯ ಮಹನೀಯರ ಪರಿಚಯ ಪತ್ರಗಳನ್ನು ಪಡೆದು ನೌಕಾದಳವನ್ನು ಸೇರಲು ಬೊಂಬಾಯಿಗೆ ಬಂದನು.

ಆದರೆ ಇಲ್ಲಿ ಕೂಡಾ ಮೋತಿಲಾಲನ ದುರಾದೃಷ್ಟವು ಆತನ ಬೆನ್ನು ಬಿಡಲಿಲ್ಲ. ಮೋಟಾರು ಸೈಕಲ್ ಅಪಘಾತವೊಂದರಲ್ಲಿ ಸಿಲುಕಿ, ನೌಕಾಧಿಕಾರಿಗಳು ಪರೀಕ್ಷೆಗೆ ನಿಯಮಿಸಿದ ನಿಶ್ಚಿತ ದಿವಸದಂದು ಇವನಿಗೆ ತೆರಳಲು ಸಾಧ್ಯವಾಗಲಿಲ್ಲ. ಆದರೆ ಮೋತಿಲಾಲನು ಇದರಿಂದ ಎದೆಗುಂದಲಿಲ್ಲ. ಅಪಘಾತದಲ್ಲಿ ಸಿಲುಕಿದ ಮೋತಿಲಾಲನು ತೃಪ್ತಿಕರವಾಗಿ ಗುಣ ಹೊಂದುತಿದ್ದನು. ಬೊಂಬಾಯಿಯಂಥಾ ದೊಡ್ಡ ನಗರವು ಆತನಿಗೆ ಶೂನ್ಯವಾಗಿ ಕಂಡುಬರಲಿಲ್ಲ. ಅನೇಕ ಸಂಸ್ಥೆಗಳ ಪರಿಚಯವನ್ನು ಮಾಡಿ ಹಲವು ಸ್ನೇಹಿತರನ್ನು ಸಂಪಾದಿಸಿ ಬೊಂಬಾಯಿಯಲ್ಲಿ ಸುಖವಾಗಿ ದಿನ ಹರಣೆ ಮಾಡತೊಡಗಿದನು.

ಒಂದು ಬಾರಿ ಮುಂಬಯಿಯ ಸೌಂದರ್ಯ ದೃಶ್ಯಗಳನ್ನು ನೋಡಲು ತೆರಳಿದ ಮೋತಿಲಾಲನು ಸಿನೆಮಾ ಸ್ಟುಡಿಯೋ ಒಂದನ್ನು ಪ್ರವೇಶಿಸಿದನು. ಅನೇಕ ನಟನಟಿಯರನ್ನು ನೋಡಿದನು. ಆ ಸಮಯದಲ್ಲಾದರೂ ಅವರನ್ನು ಅನುಕರಿಸಬೇಕೆಂಬ ವ್ಯಾಮೋಹವು ಈತನಲ್ಲಿ ಹುಟ್ಟಲಿಲ್ಲ. ಫಿಲ್ಮ್ ಸೆಟ್ಟಿನ ಬಳಿ ನಿಂತಿದ್ದ ಬಂಗಾಳೀ ಯುವಕನೊಬ್ಬನು ತನ್ನನ್ನೇ ಎವೆಯಿಕ್ಕದೆ ಈಕ್ಷಿಸುತಿದ್ದುದನ್ನು ಕಂಡ. ಮೋತಿಲಾಲನು ದಿಗ್ಭ್ರಮೆಗೊಂಡನು. ಕೂಡಲೇ ಆತನ ಬಳಿಗೆ ತೆರಳಿ, ತನ್ನನ್ನೇ ನೆಟ್ಟದೃಷ್ಟಿಯಿಂದ ನೋಡಲು ವಿಶೇಷತೆ ಇಲ್ಲವೆಂದು ತಿಳಿಸಿದನು. ಕೂಡಲೇ ಬಂಗಾಳಿ ಯುವಕನು ಮೋತಿಲಾಲನ ಕ್ಷಮೆ ಬೇಡಿ ಅಲ್ಲಿಂದ ತೆರಳಿದನು. ಕಟ್ಟಕಡೆಗೆ ಬಂಗಾಳಿ ಯುವಕನು ಬೊಂಬಾಯಿಯ ಪ್ರಮುಖ ಸಿನೆಮಾ ಕಂಪೆನಿಯೊಂದರ ದಿಗ್ದರ್ಶಕನೆಂದು ತಿಳಿದು ಮೋತಿಲಾಲನ ಆಶ್ಚರ್ಯಪಟ್ಟನ.

ಕೆಲವು ದಿವಸಗಳ ನಂತರ ಅದೇ ಸಿನೆಮಾ ಸ್ಟುಡಿಯೋದವರು ತಮ್ಮ ಸ್ಟುಡಿಯೋವನ್ನು ಇನ್ನೊಮ್ಮೆ ಸಂದರ್ಶಿಸಬೇಕೆಂತ ಮೋತಿಲಾಲನನ್ನು ಕೇಳಿಕೊಂಡರು. ಮೋತಿಲಾಲನು ಅವರ ಆಮಂತ್ರಣದ ಮೇರೆಗೆ ತೆರಳಿದನು. ಚಲಚ್ಚಿತ್ರಗಳಲ್ಲಿ ಅಭಿನಯ ಗಾರನಾಗಲು ಮನಸ್ಸಿದೆಯೋ ಎಂದು ವಿಚಾರಿಸಿದರು. ಆದರ ವಿಷಯ ಆಲೋಚಿಸಿ ತಿಳಿಸುವೆನೆಂದು ಮೋತಿಲಾಲನು ಉತ್ತರವಿತ್ತನು. ಒಂದು ವಾರದೊಳಗಾಗಿ ಮೋತಿಲಾಲನು ಸಿನೆಮಾ ಜೀವನಕ್ಕೆ ಪ್ರಾರಂಭಿಸಿದನು. ಪ್ರಥಮ ಬಾರಿಯಾಗಿ ಕೆಮರದೆದುರು ಅಭಿನಯಿಸತೊಡಗಿದನ.

ತನ್ನ ಪ್ರಥಮದ ಅಭಿನಯದ ವಿಷಯ ಮೋತಿಲಾಲನು ಈ ರೀತಿ ಅಭಿಪ್ರಾಯಪಡುತ್ತಿರುವನು: 'ನನ್ನ ಜೀವಮಾನದಲ್ಲಿ ಅದು ಭಯಾನಕ ನಿಮಿಷವಾಗಿತ್ತು. ನನ್ನ ಸುತ್ತುಮುತ್ತಲು ನಿಂತಿರುವ ನಟನಟಿಯರನ್ನೂ, ಕ್ಷಣ ಕ್ಷಣವೂ ನನ್ನ ಚಲನವಲನಗಳನ್ನು ಬದಲಾಯಿಸುತ್ತಿರುವ ಕಲಾವಿದರನ್ನು, ನನ್ನನ್ನು ದೈನ್ಯ ಭಾವದಿಂದ ಹಾಗೆ ವರ್ತಿಸು ಹೀಗೆ ವರ್ತಿಸು ಎನ್ನುವ ದಿಗ್ದರ್ಶಕನನ್ನು ಕಂಡು ನಾನು ಸ್ತಂಭೀಭೂತನಾದೆನು. ನನಗೆ ಜ್ವರ ಹಿಡಿಯತೊಡಗಿತು. ಶಬ್ದವನ್ನು ಉಚ್ಚರಿಸಲು ನಾಲಿಗೆಯೇ ಬಾರದಾಯಿತು. ಅಲ್ಲಿಂದ ಪಲಾಯನವಾಗುವುದೇ ಲೇಸೆಂದು ಒಂದು ಬಾರಿ ಯೋಚಿಸಿದೆನು. ಸಿನೆಮಾ ನಟ ನಟಿಯರು ಇಷ್ಟೆಲ್ಲಾ ಕಷ್ಟವನ್ನನುಭವಿಸುವುದಕ್ಕಿಂತ ಸಂಶಯವನ್ನು ಪಳಗಿಸುವ ಕಾರ್ಯಕ್ಕೆ ತೆರಳುವುದು ಲೇಸೆಂದು ಮನಗಂಡೆ.'

ಮೋತಿಲಾಲನ ಪ್ರಥಮ ಅಭಿನಯವೇ ಅವನಿಗೆ ಯಶಸ್ಸನ್ನು ಸಂಪಾದಿಸಿತು. ಪ್ರಥಮವಾಗಿಯೇ 'ಶ್ಯಾಡೋ ಆಫ್ ದಿ ಸಿಟಿ' ಎಂಬ ಚಿತ್ರದಲ್ಲಿ ಸಬಿತಾದೇವಿಯೊಂದಿಗೆ ಅಭಿನಯಿಸಿದನು. ಸಾಗರ ಮೂವಿಟೋನಿನವರು ನಿರೀಕ್ಷಿಸಿದುದಕ್ಕಿಂತಲೂ ಉತ್ತಮವಾಗಿ ಮೋತಿಲಾಲನು ಅಭಿನಯಿಸಿದ್ದನು.

ಇಷ್ಟರ ತನಕ ಮೋತಿಲಾಲನು ಸುಮಾರು ಹದಿನೆರಡು ಚಿತ್ರಗಳಲ್ಲಿ ಅಭಿನಯಿಸಿರುವನು. ಅವನ ಮಾತೃಭಾಷೆಯು ಉರ್ದು. ಗುಜರಾತಿಯನ್ನು ಕಲಿಯಲು ಪ್ರಾರಂಭಿಸಿರುವನು. 'ಮುನ್ನೂರು ದಿನಗಳ ನಂತರ' ಎಂಬ ಚಿತ್ರದಲ್ಲಿ ಇವನ ಅಭಿನಯವು ಚಲೋದಿದ್ದುದರಿಂದ ಈತನಿಗೆ ಗ್ವಾಲಿಯರ್ ಬಂಗಾರದ ಪದಕ ಬಹುಮಾನವಾಗಿಕೊಡಲ್ಪಟ್ಟಿದೆ. ಕಳೆದ ವರ್ಷದ ಈತನ ಉತ್ತಮ ಅಭಿನಯಕ್ಕೆ ತಲೆದೂಗಿ ಇನ್ನೊಂದು ಚಿನ್ನದ ಪದಕ ಕೊಡಲ್ಪಟ್ಟಿದೆ. ೧೯೩೬ರಲ್ಲಿ 'ಸಿಲ್ವರ್ ಕಿಂಗ್' ಎಂಬ ಚಿತ್ರದಲಿ ಅಭಿನಯಿಸಿದ ಅಭಿನಯಕ್ಕಾಗಿ ಅಖಿಲ ಭಾರತ ಚಲಚ್ಚಿತ್ರದವರು ಒಂದು ಪದಕವನ್ನು ಕೊಟ್ಟಿದ್ದರು. ಇವನ ಅಭಿನಯಗಳಲ್ಲಿ 'ಮುನ್ನೂರು ದಿನಗಳ ನಂತರ' ಎಂಬ ಚಿತ್ರದಲ್ಲಿನ ಅಭಿನಯವೇ ಪ್ರಸಂಶನೀಯವಾದದು.

ಮೋತಿಲಾಲನ ಖಾಸಗಿ ಜೀವನ ಬಹಳ ಭಯಾನಕವಾದುದು. ಒಂದು ಬಾರಿ ಶಿಕಾರಿಗೆ ತೆರಳಿದಾಗ ಒಂದು ಹಾವು ಇವನಿಗೆ ಕಚ್ಚಿತು. ಬಲಗಾಲಿಗೆ ಗುಂಡಿನೇಟಿನ ಒಂದು ಕಲೆಯಿರುವುದು. ಆಸಂಖ್ಯಾತ ಅಪಘಾತಗಳಿಂದ ಇವನ ದೇಹದ ಪ್ರತೀ ಒಂದು ಎಲುಬು ಮುರಿದುಹೋಗಿದೆ ಎಂದು ಹೇಳಿದರೂ ವಿಶೇಷತೆಯಾಗಲಿಕ್ಕಿಲ್ಲ. ಬಹಳ ಸುಂದರವಾದ ಬೊಂಬಾಯಿಯ ವಾಲ್ಕೇಶ್ವರ ಬೀದಿಯಲ್ಲಿ ಇವನ ವಾಸಸ್ಥಾನವಿರುವುದು. ಒಂದು ಬಾರಿ ಈತನು ಸಮುದ್ರದಲ್ಲಿ ಈಜಾಡಲು ಹೋಗಿದ್ದನು. ಸುಮಾರು ೨೦೦ ಗಜಗಳಷ್ಟು ಈಜಾಡಿದನು. ಸಮುದ್ರದಲ್ಲಿ ಭಯಂಕರ ತುಫಾನು ಎದ್ದುದರಿಂದ ಮುಂದೆ ಈಜಾಡಲು ಕೈಕಾಲು ಸೋತುಹೋದುವು. ಮೂರ್ಛೆಪಟ್ಟನು. ಅಲೆಗಳು ದಡಕ್ಕೆ ತಂದು ಅಪ್ಪಳಿಸಿದುವು. ಒಂದು ಬಾರಿ ಒಂದು ಚಿತ್ರದಲ್ಲಿ ಸುಮಾರು ೩೦ ಫೀಟು ಎತ್ತರದಿಂದ ಹಾರುವ ದೃಶ್ಯವೊಂದಿದ್ದಿತು. ಮೋತಿಲಾಲನು ತಾನದನ್ನು ಏಕವಾಗಿ ಮಾಡಿ ತೋರಿಸುವೆನೆಂದು ಹೇಳಿ ಹಾರಿದನು. ಇದರಿಂದ ಕೊರಳಿನ ಎಲುಬು ಮುರಿದುಹೋಯಿತು. ಹೆಗಲೆಲುಬಿನ ಕೀಲು ತಪ್ಪಿತು.

ಕುದುರೆ ಸವಾರಿ, ಈಜಾಟ, ಮೋಟಾರು ನಡಿಸುವುದು ಎಂದರೆ ಇವನಿಗೆ ಬಹಳ ಇಷ್ಟ. ಇವನೊಡನೆ ಉತ್ತಮವಾದ ಕಾರೊಂದಿದ್ದರೂ ಹಳೇ ಕಾರನ್ನು ನಡೆಸುವುದೆಂದರೆ ಇವನಿಗೆ ಬಹಳ ಇಷ್ಟವಾದುದರಿಂದ ಹಳೆಯ ಕಾರೊಂದನ್ನು ಇಟ್ಟುಕೊಂಡಿರುವನು. ಸುಮಾರು ಏಳುನೂರು ರೂಪಾಯಿಗಳಿಗೆ ಕೊಂಡುಕೊಂಡ ಈ ಕಾರಿಗೆ ಹೆಚ್ಚುಕಡಿಮೆ ೩೫೦೦ ರೂಪಾಯಿಗಳಷ್ಟು ರಿಪೇರಿ ಮಾಡಲು ತಗಲಿರವುದು. ಗಂಟೆಗೆ ನೂರು ಮೈಲಿನ ವೇಗದಲ್ಲಿ ಈ ಕಾರನ್ನು ಓಡಿಸಬೇಕೆಂಬುದೇ ಇವನ ಆಸೆ. ಇವನ ಹತ್ತಿರ ಸುಮಾರು ೫೦೦೦ ಪುಸ್ತಕಗಳ ಸಂಗ್ರಹವಿರುವುದು. ಮದವೆಯಾಗಿರುವುದು. ಈತನ ಹೆಂಡತಿಯು ಢಿಲ್ಲಿಯಲ್ಲಿ ಡಾಕ್ಟರಳಾಗಿರುವಳು.

ಅಮೇರಿಕವನ್ನು ಸಂಚರಿಸಿ 'ಹೋಲಿವುಡ್ಡ'ನ್ನು ಒಂದು ಬಾರಿ ಸಂದರ್ಶಿಸಬೇಕೆಂಬ ಆಸೆಯು ಇವನಲ್ಲಿ ಬೇರೂರಿರುವುದು. ಜೀವನದಲ್ಲಿ ಓಸರ ಕಷ್ಟಗಳು ಒಂದಾಗ ಢಿಲ್ಲಿಯಲ್ಲಿರುವ ತನ್ನ ತಾಯಿಗೆ ಪತ್ರವನ್ನು ಬರೆದು ಅವಳ ಬುದ್ಧಿವಾದವನ್ನು ಅನುಸರಿಸುವನು.

ಮೋತಿಲಾಲನು ಸಾಗರ ಮೂವಿಟೋನನ್ನು ಬಿಟ್ಟು, ಸರಸ್ವತಿ ಸಿನೆಟೋನನ್ನು ಸೇರಿ 'ಸಚಾಹೈ' ಅಥವಾ It is True ಎಂಬ ಚಿತ್ರದಲಿ ಮಿಸ್ ರೋಸ್‌ಳೊಂದಿಗೆ ಅಭಿನಯಿಸಿದನ. ಈ ಚಿತ್ರವು ವಿಫಲವೆಂದೇ ಚಲಚ್ಚಿತ್ರಕಾರರ ಟೀಕೆ. ಇದರ ನಿಷ್ಫಲತೆಗೆ ದಿಗ್ದರ್ಶಕರೇ ಕಾರಣರೆಂದು ಹೇಳುತ್ತಿರುವರು. ಈಗ ಸ ಫಾವಾ ಪ್ರೊಡಕ್ಷನ್ ಎಂಬ ಕಂಪನಿಯನ್ನು ಸೇರಿ ತಿರುಗೊಮ್ಮೆ ಸಬಿತಾದೇವಿಯೊಂದಿಗೆ 'ಆಪ್ ಕೀ ಮರ್ಜಿ' ಅಥವಾ As you please ಎಂಬ ಚಿತ್ರದಲ್ಲಿ ಅಭಿನಯಿಸಿರುವನ.

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಂಟಾಗುವ ಒಳಲಿಕ್ಕೆ, ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ಸಾಗಿಸುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವೀರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:

ಆಯುರ್ವೇದಾಶ್ರಮ :: ಮದರಾಸು



ಸ್ಟಾಕಿಸ್ಟರು:

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ವಿಜ್ಞಾನ ಯುಗ

ಆಕಾಶದಿಂದಿಳಿದು ಶತ್ರುಗಳ ಮುತ್ತಿಗೆ

೧೯೩೬ನೇ ಸಪ್ಟಂಬರದಲ್ಲಿ ರಶ್ಯಾದ ವಿಮಾನ ಸೈನ್ಯದ ಪ್ರಯೋಗ ವಿಷಯದಲ್ಲಿ ಜಗತ್ತು ವಿಸ್ಮಯಗೊಂಡಿತು. ಇದಕ್ಕಿಂತ ಮೊದಲು ... ಜನರು ... ಕೇಳರಿಯದ ಅದ್ಭುತವಾದ ವಿಮಾನ ದಳದ ನೂತನ ಯುದ್ಧ ಕ್ರಮವು ಅಂದು ತೋರಿಸಲಾಯಿತು

ಪೆರಿಚ್ಯೂಟಿನ ಉಪಯೋಗದಲ್ಲಿ, ಬಹಳ ಕ್ರಾಂತಿಯು ಉಂಟಾಗಿ ಆ ದಿನ ಜಗತ್ತಿನ ಕಣ್ತೆರೆದಂತೆ ಆಯಿತು ಯಾವ 'ಪರಿಚೂಟ್' ಕೊಡೆಯು ವೈಮಾನಿಕರ ಜೀವರಕ್ಷಣೆಗಾಗಿ ಕಂಡು ಹುಡುಕಲ್ಪಟ್ಟಿತ್ತೊ, ಅದೇ ಮಾನವ ಸಂಹಾರವನ್ನು ಮಾಡಲು ಸಾಧನವಾಗುವುದೆಂದು ತಿಳಿಯಲಾಯಿತು

ವಿಮಾನಗಳಲ್ಲಿ ಸೈನಿಕರನ್ನು ಆಕಾಶಕ್ಕೊಯ್ದು, ಅಲ್ಲಿಂದ ಅವರಿಗೆ ಪೆರಿಚ್ಯೂಟ್ ಕೊಡೆಗಳನ್ನು ಕೈಯಲ್ಲಿ ಕೊಟ್ಟು ಗುಪ್ತವಾಗಿ ಭೂಮಿಗೆ ಹಾರುವಂತೆ ಬಿಡಲಾಯಿತು ಅವರು ಶತ್ರುಗಳಿದ್ದ ಜಾಗದಲ್ಲಿ ಇಳಿದು ಗುಟ್ಟಾಗಿ ಅಲ್ಲಿ ತಳವೂರಲು ಇದರಿಂದ ಸಹಾಯವಾಯಿತು. ಶತ್ರುಗಳನ್ನು ತಿಳಿಯದಂತೆ ಸಂಭ್ರಮಗೊಳಿಸುವುದಕ್ಕಾಗಿ ಇದರಿಂದ ಸಹಾಯವಾಗುತ್ತದೆ. ಶತ್ರು ಶಿಬಿರದವರು, ಯುದ್ಧದ ವಿಷಯದಲ್ಲಿ ಎಚ್ಚರಗೊಂಡಿರದ ಹೊತ್ತಿಗೆ ದೂರದಲ್ಲಿ ಸಾವಿರಾರು ವಿಮಾನಗಳು ನಿಂತಿದ್ದು ಒಂದೇ ಸಮಯದಲ್ಲಿ ಸಹಸ್ರ ಸಂಖ್ಯೆಯ ಸೈನಿಕರು ಶತ್ರುಗಳ ಶಿಬಿರವನ್ನು ಆಕ್ರಮಿಸುವರು. ಇದು ಗೋರಿಲ್ಲಾ ಯುದ್ಧಕ್ರಮದಲ್ಲಿ ಒಂದು ಹೊಸ ರೀತಿಯಾಗಿ ಪರಿಣಮಿಸಿತು

ಇಂದು ದುರ್ಬಲವಾದ ಚೈನೀಯರ ಮೇಲೆ, ಕೆಲವು ಸ್ಥಳಗಳಲ್ಲಿ ಇದೇ ರೀತಿಯಿಂದ ಜಪಾನೀಯರು, ಪಕ್ಕನೇ ಆಕ್ರಮಣ ಮಾಡಿ ನಿರ್ದಯರಾಗಿ ಅವರನ್ನು ಕೊಂದು ದಿಗಿಲುಗೊಳಿಸುತ್ತಿದ್ದಾರೆ

ಈ ಪ್ರಯೋಗವನ್ನು ಮೊದಲು ಮೊದಲು ಮೊಸ್ಕೋದಲ್ಲಿ ಮಾಡಿ ತೋರಿಸಿದ್ದು, ಕೇವಲ ನೂರೈವತ್ತು ಜನರಿಂದ

ಹಿಂದೆ ಗೋರಿಲ್ಲಾ ಯುದ್ಧ ಕವಾಯ್ತು, ಸೈನ್ಯ ಚಲನೆಗೆ ತಾಗುತ್ತಿದ್ದ ಪರಿಶ್ರಮವು ಇದರಿಂದ ನಿವಾರಣೆಯಾಯಿತು ಆರು ವಿಮಾನಗಳು, ನಾರೈವತ್ತು ಜನರನ್ನು ಹೊತ್ತು ಇಳಿಸಿದಲ್ಲಿ, ಅವರು ಬರಿಯ ಎಂಟು ನಿಮಿಷಗಳ ಸಮಯದಲ್ಲಿ ಮೇಲೆ ಹೇಳಿದ ಕಾರ್ಯವನ್ನು ಪೂರೈಸಬಹುದು ಮೊನ್ನೆ ಆಗಾನೇ ರಶ್ಯದಲ್ಲಿ ಈ ಪ್ರಯೋಗದ ದೊಡ್ಡ ರೀತಿಯಲ್ಲಿ ಹೇಗೆ ಪ್ರಕಾರಿಯಾಗುವುದೆಂದು ವ್ಯಕ್ತವಾಗಿದೆ ೧೨೦೦ ಸೈನಿಕರು, ೧೫೦ ಮೆಶಿನು ಗನ್ನುಗಳನ್ನು ಹೊತ್ತು ಹೀಗೆ ಆಕ್ರಮಣ ಮಾಡುವುದು ಪ್ರಯೋಗಿಸಲಾಯಿತು.

ಹೀಗೆ ಮೆಶಿನುಗಳನ್ನು ಹೊತ್ತು ಆಕಾಶದಿಂದಿಳಿದವರನ್ನು ಕಂಡುಹಿಡಿದು, ಕೆಳಗಿನ ಗುಂಡು ಹೊಡೆವುದು ಸಾಧ್ಯವಿದ್ದರೂ, ಇತ್ತೀಚೆಗೆ ಹೊಗೆಯ ತೆರೆಯನ್ನುಂಟುಮಾಡಿ, ಭೂಮಿಯಲ್ಲಿದ್ದವರು ಆಕಾಶದಿಂದ ಬರುವುದನ್ನು ತಿಳಿಯದಂತೆ ಮಾಡುವ ಹಂಚಿಕೆಯಾಗಿದೆ

ಜರ್ಮನಿಯ ನವೋತ್ಸಾಹ

ಈ ನೂತನ ಪ್ರಯೋಗದಲ್ಲಿ ಬಹಳ ಆಸಕ್ತವುಳ್ಳದ್ದಾಗಿದೆ. ಹದಿನೇಳು ಮತ್ತು ಇಪ್ಪತ್ತೆರಡು ವರ್ಷಗಳ ಜರ್ಮನ್ ತರುಣರು, ಇತ್ತೀಚೆಗೆ ಸಿದ್ಧವಾಗುತ್ತಿರುವ ಹೊಸ ಪಡೆದು ನವೋತ್ಸಾಹದಿಂದ ಸೇರುತ್ತಿದೆ.

ರಶ್ಯವು ಈ ಸೂಚನೆಯ ಸಂಪೂರ್ಣ ಗುಟ್ಟನ್ನು ಇತರ ರಾಷ್ಟ್ರಗಳಿಗೆ ತಿಳಿಸದೆ ತನ್ನಲ್ಲಿಯೇ ಇನ್ನೂ ಅನೇಕ ರೀತಿಯಿಂದ ಇದರ ಮಾರ್ಪಾಟುಗಳನ್ನು ಮಾಡಲಿದ್ದೆ

ಅದೃಶ್ಯವಾಗಿದ್ದ ಮಾರಿಯನ್ನು ವೈಜ್ಞಾನಿಕರು ಹಿಡಿದುಬಿಟ್ಟರು

ಕ್ಷಯರೋಗದ ಅಣುವು ಶರೀರವನ್ನು ಹೊಕ್ಕು ಏನು ಭಯಂಕರ ಕೃತ್ಯಗಳನ್ನು ಮಾಡುತ್ತಿದೆಯೆಂಬ ವಿಷಯ ಬಹಳ ಸಮಯಗಳಿಂದ ಜಗತ್ತು ಅಜ್ಞಾನದ ಆವರಣದಲ್ಲಿತ್ತು

ಮೊದಲಿನ ಹದಿನಾಲ್ಕು ದಿನಗಳಲ್ಲಿ ಅದರ ಅದೃಶ್ಯತೆಯಿಂದ, ಅದನ್ನು ಎತ್ತಿ ತೋರಿಸುವುದು ಸಾಧ್ಯವಿರುವುದಾಗಿ ಡಾ ವಿಲಿಯಂ ಚಾರ್ಲ್ಸ್ ವೈಟ್ ಎಂಬವರು ತಿಳಿಸಿರುವರು ಶರೀರದಲ್ಲಿ ಇವು ಹೇಗೆ ಅಭಿವೃದ್ಧಿಯಾಗುತ್ತಿದೆಯೆಂಬುದನ್ನು ಕಂಡುಹಿಡಿದಲ್ಲಿ ಅದನ್ನು ತಡೆಯುವ ಕೆಲಸವೂ ಬಹಳ ಸುಲಭವಾಯಿತ

ಆಟಗಾರರ ಗ್ರಂಥಿ ಪ್ರಯೋಗ

ಆಟಗಾರರ ಗ್ರಂಥಿಯನ್ನು ಔಷಧಪ್ರಯೋಗ ಮಾಡುವ ಮೂಲಕ, ಆಟದ ಸಮಯದಲ್ಲಿ ಆಯಾಸವಾಗದಂತೆ ನಿತ್ಯ ಉತ್ಸಾಹದಿಂದ ಇರುವಂತೆ ಮಾಡಬಹುದೆಂಬ ಪ್ರಯೋಗವು ನಡೆಯುತ್ತದೆ

ಲಂಡನಿನಲ್ಲಿರುವ ಪ್ರತಿಭಾಶಾಲಿಗಳಿಂದ ಸೇರಿದ 'ಬ್ರಿಟಿಷ್ ಮೆಡಿಕಲ್ ಎಸೋಸಿಯೇಶನ'ವರಿಂದ ಈ ಕುರಿತು ಮುಂದಿನ ವಿವರಗಳು ತಿಳಿಯಲಿವೆ ಕಳೆದ ವರ್ಷದಿಂದ ಅನೇಕ ಜನರಿಗೆ ಈ ಪ್ರಯೋಗವನ್ನು ಮಾಡಿದೆ

ಆರೋಗ್ಯವಂತರಾದ, ನವಯುವಕರ ವಿಷಯದಲ್ಲಿ ಈ ಗ್ರಂಥಿ ಪ್ರಯೋಗವು ಅವಶ್ಯವೇ ಎಂಬುದು ಆಲೋಚನೆಗೊಳಗಾಗಿದೆ

ಬೆಳೆಯುವುದೇ ಇಲ್ಲ!

ಬೆಲ್ಗೇಡಿಯೆಂಬಲ್ಲಿನ ಕಳೆದ ನಲ್ವತ್ತು ವರ್ಷಗಳಿಂದ ಒಂದು ಮಗುವು ಬೆಳವಣಿಗೆಯ ಯಾವ ಸೂಚನೆಯನ್ನೂ ತೋರಿಸದ ವಾರ್ತೆ ಬಂದಿದೆ ಇಂದು ಕೂಡಾ ತೊಟ್ಟಿಲಲ್ಲಿಯೇ ಕೈಕಾಲು ಬಡಿಯುತ್ತಿದೆಯಂತೆ ಆ ಮಗು ಹುಟ್ಟಿದ ಸಮಯದಲ್ಲಿ ಒಳ್ಳೆಯ ಪುಷ್ಟಿಕರವಾಗಿಯೂ, ಇತರ ಶಿಶುಗಳಂತೆಯೇ ಇತ್ತು

ತೊಟ್ಟಿಲಿನಿಂದ ಕೆಳಗೆ ಬಿದ್ದುದರ ಪರಿಣಾಮವಾಗಿ ಆ ಶಾರೀರಿಕ ಪುಷ್ಟಿಯು ನಿಂತೆ ಹೋಗುವ ತಾಗಿದೆ

ಮಗುವು ಕೇವಲ ಮೂರು ಪೆಟ್ಟುಗಳಷ್ಟು ಎತ್ತರವಿದೆ ಮಾತನಾಡಲು ಬರುವುದಿಲ್ಲ ಕಿವಿಯು ಚೆನ್ನಾಗಿ ಕೇಳುವುದಿಲ್ಲ

ಇದು ಏತರ ದಾಯಿತ ? ಇದನ್ನು ಗುಣಪಡಿಸಲು ಸಾಧ್ಯವುಂಟೋ ಎಂಬ ಉಚಿತ ಯುಕ್ತಿಸಿ ಅನೇಕ ವೈಜ್ಞಾನಿಕರು ಡಾಕ್ಟರರ ಸೋತು ಹೋದರು

Constructive Banking

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding a Crore.

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OF A CRORE

ESTD 1906

CANARA BANK, LIMITED.

OPPORTUNITY

Now offered to up-country clients to do ready and forward business in Cotton, Gold, Silver, Wheat Linseed, Stocks & Shares & through India Cotton Association, Bombay Bullion Exchange, Marwari Chamber of Commerce etc, of Bombay

Prompt Service latest information and Moderate Charges

For terms of business write to

Hindustan Cotton Company, Limited

10b, Cowasji Patel Street, Fort Bombay

ಆತ್ಯಾಶ್ಚರ್ಯಕರವಾದ ಕನ್ನಡಿ!

ಯಾವುದೇ ವಯಸ್ಸಿನವರಾದರೂ ಮನುಷ್ಯನು ಈ ಕನ್ನಡಿಯನ್ನು ನೋಡಲು ಸಾಧ್ಯವಿದೆ ಕಳವು ಆಗಿರುವ ಸಾಮಾನ, ಅಸ್ವಸ್ಥತೆಯಿಂದ ಗುಣವಾಗದಿರುವಿಕೆ, ಮುಂದೆ ಸಂಭವಿಸಬಹುದಾದ ದುಃಖಗಳು ಮತ್ತು ಅವುಗಳಿಂದ ತಪ್ಪಿಸಲು ಉಪಾಯ, ಭೂಮಿಯಲ್ಲಿ ಇಟ್ಟಿರುವ ಹಣದ ಪತ್ತೆ ಯಾವುದೇ ಕಷ್ಟತರವಾದ ಕೆಲಸಗಳ ಸಾಧ್ಯವಾಗುವಿಕೆ, ನೌಕರಿ ಕೋರ್ಟ ಕಚೇರಿ ಕೆಲಸಗಳಲ್ಲಿ ಯಶ, ಪರೀಕ್ಷೆ ಮುಂತಾದ ಕೈಕೊಂಡ ಕೆಲಸಗಳಲ್ಲಿ ಯಶಸ್ಸು ಉಳ್ಳಿಗ ತದೆ ಸ್ವರ್ಗಸ್ಥರಾದ ತಂದೆತಾಯಿಗಳನ್ನು ಮತ್ತು ಆಪ್ತಮಿತ್ರರನ್ನು ಮತ್ತು ಸ್ವಪ್ನದಲ್ಲಿ ನೋಡಬೇಕಾದ ವಸ್ತುಗಳನ್ನು ಇದರಲ್ಲಿ ಕಾಣಬಹುದು

ಬೆಲೆ ಒಂದೇ ೨॥ ಪೌಂಡು ಮತ್ತು ಟಪ್ಪಾಲು ಖರ್ಚ ಬೇರೆ ಇದು ನಿಜವಲ್ಲವೆಂದು ತೋರಿಸಿಕೊಟ್ಟಲ್ಲಿ ಬೆಲೆ ವಾಪಸು ನಿಮ್ಮ ಪತ್ತೆ ಚೆನ್ನಾಗಿ ಬರೆಯಿರಿ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಸಿಕ್ಕುವ ಸ್ಥಳ

American Mesmerism House,
P B No 27 P M H. Amritsar (India)

The Canara Industrial & Banking Syndicate Ltd.

Head Office: UDIPI (S. India)

ESTD) (1925

MEMBER: **Reserve Bank of India, Bankers' Clearing House, Bombay.**

Five Year Cash Certificates are issued at the price of Rs 8, Rs 80, Rs 400 and Rs. 800, repayable on maturity at Rs 10, Rs 100, Rs 500, and Rs 1000 respectively

You can cash the Certificates at any time before maturity

AN INVESTMENT WHICH IS LIQUID AND YET VERY REMUNERATIVE.

Further particulars can be had from: **The Car Street Branch, Mangalore**

GENERAL BANKING BUSINESS TRANSACTED.

ಕೆಲಸಗಾರರಿಗೆ ನೆಹರುಗಳ ಉಪದೇಶ

ತಾತಾ ಕಂಪೆನಿಯ ಗಲಭೆ!

ಕೆಲಸಗಾರರಿಗೆ ನೆಹರುಗಳ ಉಪದೇಶ

ಜೆಮ್‌ಶೇದ್‌ಪುರದಲ್ಲಿ ಸೇರಿದ ಕೆಲಸಗಾರರ ಸಭೆಯಲ್ಲಿ ಮಾತನಾಡುತ್ತಾ, ಪಂಡಿತ ನೆಹರುಗಳು ಒಂದು ತಾಸಿನ ತನಕ ನಿಜವಾದ ಕೂಲಿಗಾರರ ಸಂಘವು ಮಾಡತಕ್ಕ ಕೆಲಸ ಮತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅವುಗಳು ವ್ಯವಸ್ಥಿತ ರೀತಿಯಿಂದ ರಚನಾತ್ಮಕ ಕಾರ್ಯಗಳನ್ನು ಮಾಡಿ ದೇಶದ ಹಿತಕ್ಕೆ ನೆರವಾಗುವ ಕುರಿತು ಉದ್ದಾಮ ಭಾಷಣವಿತ್ತರು.

ಹಾಗಾಗಿ, ಹಿಂದೂದೇಶದ ಕೆಲಸಗಾರರೂ ಅವರ ಒಳ್ಳೆಯ ಗುಣಗಳನ್ನು ಅನುಸರಿಸಿ, ರಾಷ್ಟ್ರದ ಉದ್ಯೋಗದ ಏಳಿಗೆಯ ದೃಷ್ಟಿಯಿಂದ ಕಾರ್ಯಗಳನ್ನು ಮುಂದುವರಿಸಬೇಕೆಂದರು.

ಸಂಘವನ್ನು ಬಲಪಡಿಸುವ ಮೂಲಕ ನಿಜವಾಗಿ ಅವರಿಂದು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಯನ್ನು ಪರಿಹರಿಸಲು ಯತ್ನಮಾಡುವುದಲ್ಲಿ ಹೋರಾಟವನ್ನು ನಡೆಸಲು ಸಿದ್ಧರಾಗಿರುವುದು ಅವರ ಜನ್ಮಸಿದ್ಧ ಹಕ್ಕೆಂದೂ, ಆದರೆ ತಾವು ಮಾಡುವ ಕೆಲಸವು ಶಿಸ್ತಿಗೆ, ನ್ಯಾಯಕ್ಕೆ ಸರಿಯಾಗಿರುವಂತೆ ಆಗಬೇಕೆಂದೂ ಉಪದೇಶಿಸಿದರು. ಆದುದರಿಂದ ಸಾಮಾನ್ಯ ಚಿಲ್ಲರೆ ವಿಷಯಗಳ ಕುರಿತು ಮುಷ್ಕರವೇ ಮೊದಲಾದ ಲಾಭದ ಮಹತ್ವದ ಕಾರ್ಯವನ್ನು ಮಾಡುವುದಕ್ಕಿಂತ, ಉದ್ದಾಮ ಕಾರಣಕ್ಕಾಗಿ ಚಳವಳಿ ಮಾಡಬೇಕೆಂದರು.

ಅವರು ತಮ್ಮ ತೀರ್ಮಾನದಲ್ಲಿ ಶೀಟ್ ಮಿಲ್ಲಿನಲ್ಲಿ ಕೆಲಸ ಕೈದು ಮಾಡಿದ ವಿಷಯ ಮಂಡಿಸಿದ್ದಾರೆ.

ಕಂಪೆನಿ ಮತ್ತು ಯೂನಿಯನುಗಳೊಳಗೆ ಇತ್ಯರ್ಥವಾಗದಿದ್ದಲ್ಲಿ ಲೇಬರ್ ಕಮಿಶನರ ವಿಚಾರಕ್ಕೆ ಇಡಬೇಕೆಂದು ತಿಳಿಸಿದ್ದಾರೆ.

ಯೂನಿಯನ್ ಪ್ರೆಸಿಡೆಂಟರ ಭಾಷಣವು ಉಚಿತವಾಗಿರಲಿಲ್ಲವೆಂದು ಅವರ ತೀರ್ಮಾನ. ಮುಷ್ಕರ ಹೂಡುವ ಹೆದರಿಕೆ ಹಾಕಿದ್ದು ಸರಿಯಾಗಿಲ್ಲವೆಂದಿರುವರು.

ಬೋನಸು ಕೊಡುವ ವಿಷಯ ಎಲ್ಲಾ ಕೆಲಸಗಾರರಿಗೂ ಕೊಡಬೇಕೆಂದು ಹೇಳಿದ್ದಾರೆ.

ಯೂನಿಯನನ್ನು ಕಂಪನಿಯವರು ಒಪ್ಪಿಕೊಂಡ ನಿಮಿತ್ತ ಬೀಹಾರ್ ಸರಕಾರದಿಂದ ಸ್ಥಾಪಿತವಾದ ಲೇಬರ್ ಎಂಕ್ವಯರಿ ಕಮಿಟಿಯಲ್ಲಿ ಇದು ಇತ್ಯರ್ಥವಾಗಬೇಕೆಂದು ಅವರ ಹೇಳಿಕೆ.

ಕಾಂಗ್ರೆಸಿನಲ್ಲಿ ಶಿಸ್ತು ಪಾಲನೆ

ಸಂಯುಕ್ತ ಪ್ರಾಂತದ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಸಭೆಯು ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ಜರಗಿ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಠರಾವನ್ನು ಖಂಡಿಸುವ ವಿಷಯದ ವಿಚಾರದಲ್ಲಿ, ಶಿಸ್ತು ಪಾಲನೆ ಮಾಡುವುದು ಕಾಂಗ್ರೆಸಿನ ಕರ್ತವ್ಯವೆಂದೂ, ಹಾಗೆ ನಿಷೇಧವನ್ನು ವ್ಯಕ್ತಮಾಡುವವನು ಕಾಂಗ್ರೆಸಿನ ನ್ಯಾಯದಿಂದ ಬಾಹಿರನಾಗುತ್ತಾನೆಂದು ನಿರ್ಣಯವಾಯಿತು.

ಕಳೆದ ಆದಿತ್ಯವಾರ ಇಂಡಿಯನ್ ಪ್ರೊಗ್ರೆಸಿವ್ ಗ್ರೂಪಿನವರಿಂದ ಬೊಂಬಯಿಯಲ್ಲಿ ಕೊಡಲಾದ ಸತ್ಕಾರಕೂಟದಂದು ಶ್ರೀ ಭೂಲಾಭಾಯಿ ದೇಸಾಯಿಯವರು ಭಾರತೀಯ ರಾಜನೀತಿ ಪ್ರಾಪಂಚಿಕ ವಿಷಯ ಭಾಷಣಮಾಡುವರು.

ಲ್ಲದೆ ನಿರುದ್ಯೋಗಿಗಳಾಗಿ ಸಂಕಟಪಡುತ್ತಾರೆ. ಮಿಲ್ಲನ್ನು ತೆರೆಯುವಂತೆ ಕಾಂಗ್ರೆಸು ಸರಕಾರವು ಮಾಡಬೇಕಾಗಿ ಅವರ ಕೇಳಿಕೆ.

ಇದಕ್ಕೆ ತಕ್ಕ ಉಪಾಯವನ್ನು ಸರಕಾರವು ಮಾಡದಿದ್ದಲ್ಲಿ ಏಳುನೆದುರು ಅವರು ಸತ್ಯಾಗ್ರಹ ಹೂಡಲಿರುವರು.

ರಾಜಕೀಯ ಕೈದಿಗಳನ್ನು ಬಿಡಿರಿ

ಲಂಡನಿನಲ್ಲಿ ಸಭೆ

ಬಂಗಾಳ ಸರಕಾರವು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡದಿರುವ ವಿಷಯದಲ್ಲಿ ಸರಕಾರದ ನೀತಿಯನ್ನು ಖಂಡಿಸಿ ಲಂಡನಿನಲ್ಲಿ ನೆರೆದ ಸಭೆಯಲ್ಲಿ ದಂಡಾವಾಯಿಕ ಮಾತ್ರವಲ್ಲದೆ ಕಾಂಗ್ರೆಸ ಇವರ ಬಿಡುಗಡೆಯ ಕಾರ್ಯದಲ್ಲಿ ಗಮನಕೊಟ್ಟು ತೀವ್ರ ಬಂಧವಿಮೋಚನೆಯಾಗ ... ಕ್ರಿಸಬೇಕಾಗಿ ನಿಶ್ಚಯವಾಯಿತು.

ಶ್ರೀಗಳಾದ ಅಜಿತಪ್ರಸಾದ ಜೈನ ಅಂಡ್ ಎಸ್ ... ರಿಪ್, ನೋರಿ ರೆನ್ಸನ್ ಬ್ರಿಜ್‌ನೇಸ್ ಮೊದಲಾದವರು ಭಾಷಣವಿತ್ತರು.

ಸಿಮ್ಲಾದ ಎಸೆಂಬ್ಲಿ ಸಭೆ

ಆಗಸ್ಟ ಮೂವತ್ತರಂದು ಸಿಮ್ಲಾದ ಎಸೆಂಬ್ಲಿಯು ಸೇರುವುದು ... ಬಿಲ್ಲುಗಳ ಸಭೆಯ ಮುಂದೆ ಬರಲಿರುವುವು. ಮೊದಲನೆಯದ ಬ್ಯಾನಿಕ ಮಾ... ... ಮೇಲಿ ಮೆಡಿಕಲ್ ಡಿಗ್ರಿ ಮಾ... ಬಿಲ್ ಭಾರತೀಯ ಚಾರ್ಟರ್ಡ್ ಬಿಲ್ ... ಸ್ಟೇಟ ಕಾನೂನ ... ಬ್ರಿಟಿಶ್ ಟ್ರೇಡ್ ಮಾರ್ಕ ಬಿಲ್ ಇವು ಮೇವಲಾದವುಗಳು.

ಸಂಕಷ್ಟದ ಘಟನೆಯು ಕೊನೆಗೊಂಡಿತು!

ಹೈದರಾಬಾದಿನ ಆರ್ಯಸಮಾಜದ ಸತ್ಯಾಗ್ರಹಿಗಳು ಸತ್ಯಾಗ್ರಹವನ್ನು ನಿಲ್ಲಿಸಿದುದರ ಕುರಿತು ಪಂಡಿತ ಜವಾಹಿರಲಾಲರು ತಮ್ಮ ಸಂತೋಷವನ್ನು ಸೂಚಿಸಿರುವರು.

ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಹೈದರಾಬಾದಿನ ಆರ್ಯಸಮಾಜದ ಸತ್ಯಾಗ್ರಹಿಗಳು ನಿಜವಾಗಿಯೂ ಬಹಳ ಸಂಕಷ್ಟವನ್ನು ಹೊಂದಿರುವರು. ಧಾರ್ಮಿಕ ವಿಷಯದಲ್ಲಿ ವಿಶ್ವಾಸವಿಲ್ಲದಂತಹ ನನಗೂ ಕೂಡಾ ಪ್ರತಿಯೊಬ್ಬನಿಗೂ ಅವನವನ ಮನಸಿಗೆ ಒಪ್ಪಿದ ಧರ್ಮದ ಕಾರ್ಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂಬ ನಿರ್ಧಾರವಿದೆ. ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ ಮಾಡುವುದನ್ನು ವಿಶಾಲ ಕಾರ್ಯಕ್ಷೇತ್ರವಿದ್ದ ನಾವು ಕೆಲವರು, ಒಪ್ಪಲಿಲ್ಲವಾದರೂ ಧರ್ಮಕ್ಕಾಗಿ ಸತ್ಯಾಗ್ರಹ ಮಾಡಲು ಅವರಿಗೆ ಸಂಪೂರ್ಣ ಹಕ್ಕಿರುವುದು, ಹಾಗೆ ಮಾಡಿದ ಕಾರಣವೂ ... ಯವಾಗಿರುತ್ತದೆ.

ಈ ಪಟ್ಟಾಭಿಮಾನ ... ಇದು ರಾಜಕೀಯ ವಿಷಯವಾಗಿರದೆ ಧಾರ್ಮಿಕ ವಿಷಯದ ಸ್ವಾತಂತ್ರ್ಯದ ಹೋರಾಟವಾದರೂ ಅವರ ಮಾಡಿದ್ದು ನ್ಯಾಯವೆಂದೂ ಆ ಕುರಿತು ನಿಜಾಮ ದೊರೆಗಳು ವಿಚಾರ ಮಾಡಿ ಕರ್ತವ್ಯ ಮಾಡಬೇಕಾಗಿದೆಯೆಂದೂ ಹೇಳಿರುವರು.

ಔದ್ಯೋಗಿಕ ಸಂಶೋಧನಾ ಸಂಘ

ಔದ್ಯೋಗಿಕ ಸಂಶೋಧನಾ ಸಂಘದ ಎಳನೆಯ ಸಭೆ ... ಕಲ್ಕತ್ತೆಯಲ್ಲಿ ಬಂಗಾಳ ಲೆಜಿಸ್ಲೇಟಿವ ಭವನದ ಕಮಿಟಿ ರೂಮಿನಲ್ಲಿ ಸೇರಿತು.

ಮಹಾತ್ಮಾ ಗಾಂಧಿಯವರು ವಾರ್ಧಾ ವರ್ಕಿಂಗ್ ಕಮಿಟಿಯ ಮೀಟಿಂಗಿಗೆ ಹೋಗುವುದು. ಮಹಾದೇವ ದೇಸಾಯಿ ಮೊದಲಾದವರೊಡನೆ ಸಂಭಾಷಿಸುತ್ತಾರೆ.

ಸಿಂಧಿಗೆ ಕಾಂಗ್ರೆಸು ಮಂತ್ರಿಮಂಡಳ

ಮಿ। ನಿಖಿಲ್‌ದಾಸ್ ವಚಿರಾಣಿಯವರು ಬೊಂಬಯಿಯಲ್ಲಿ ಸರ್ದಾರ ಪಟೇಲರನ್ನು ಕಂಡು ಸಂಭಾಷಿಸಿರುವರು. ಸಿಂಧದ ಕಾಂಗ್ರೆಸು ಮಂತ್ರಿಮಂಡಲದ ರಚನೆಯ ಬಗ್ಗೆ ಭರವಸೆ ತೋರುತ್ತದೆ.

ಪ್ರಾಥಮಿಕ ವಿಚಾರಗಳ ಕುರಿತು ಅವರು ಚರ್ಚಿಸಿದರು.

ಕಾಂಗ್ರೆಸಿನಲ್ಲಿ ಅಧಿಕಾರವನ್ನು ಪಡೆಯಲು ಕಡಿಮೆ ಮೂರು ವರ್ಷ ಒಬ್ಬ ಸದಸ್ಯನಾಗಿರತಕ್ಕದ್ದು ಎಂಬ ಠರಾವನ್ನು ತಿದ್ದುಪಡಿಮಾಡಬೇಕೆಂದು ನಿಖಿಲ್‌ದಾಸರ ಹೇಳಿಕೆ.

ತಾತಾ ಕಂಪೆನಿಯ ಗಲಭೆ

ತಾತಾ ಕಬ್ಬಿಣದ ಕಾರ್ಖಾನೆಯ ಕಂಪೆನಿ ಮತ್ತು ಅದರ ಕೆಲಸಗಾರರ ಯೂನಿಯನುಗಳ ವೈಷಮ್ಯದ ಇತ್ಯರ್ಥ ಮಾಡಲು ರಾಷ್ಟ್ರಪತಿ ರಾಜೇಂದ್ರ ಪ್ರಸಾದ ಮತ್ತು ಜವಾಹಿರಲಾಲ ನೆಹರುಗಳು ನೇಮಕರಾಗಿದ್ದರು. ಅವರು ತಮ್ಮ ತೀರ್ಮಾನವನ್ನು ಪ್ರಕಟಿಸಿರುತ್ತಾರೆ.

ಆದುದರಿಂದ ಪ್ರತಿಯೊಬ್ಬ ಕಾಂಗ್ರೆಸು ಕೆಲಸಗಾರನೂ, ಇಂದಿನ ಸಂದರ್ಭದಲ್ಲಿ ಕಾಂಗ್ರೆಸನ್ನು ಬಲಪಡಿಸುವ ಆವಶ್ಯಕತೆಯಿರುವಲ್ಲಿ ಐಕ್ಯತೆಯನ್ನು ಮುರಿಯುವ ಅಂತಹ ರಾಷ್ಟ್ರಘಾತುಕವಾದ ಕಾರ್ಯವನ್ನು ಮಾಡಬಾರದಾಗಿ ನಿರ್ಣಯವಾಯಿತು.

ಪ್ರತಿಯೊಬ್ಬನೂ ತನ್ನ ಅಭಿಪ್ರಾಯ ಪ್ರಕಟಣೆ ಮಾಡಲು ಸ್ವಾತಂತ್ರ್ಯವುಳ್ಳವನಾದರೂ, ಐಕ್ಯತೆಯನ್ನು ಮುರಿಯುವ ವಾಕ್ ಸ್ವಾತಂತ್ರ್ಯವು ನ್ಯಾಯವಲ್ಲವೆಂದು ಗೊತ್ತುವಳಿಯಾಯಿತು.

ಹೆಂಗುಸು ಕೂಲಿಗಾರರ ಮುಷ್ಕರ

ಬೊಂಬಯಿಯ ಫೊನಿಕ್ಸ್ ಮಿಲ್ಲಿನಲ್ಲಿ ಕೆಲಸ ಮಾಡುವ ಸುಮಾರು ೬೦ ಮಂದಿ ಹೆಂಗುಸರು ಮಂತ್ರಿಗಳ ಬಾಗಿಲ ಬಳಿ ನಿಂತು ತಮ್ಮ ಮನವಿಯನ್ನು ವಿಚಾರಿಸಬೇಕಾಗಿ ಕೇಳಿಕೊಂಡಿದ್ದಾರೆ.

ಈ ಮಿಲ್ಲು ನಾಲ್ಕು ತಿಂಗಳ ಹಿಂದೆ ಮುಚ್ಚಲ್ಪಟ್ಟು, ಸಾವಿರಾರು ಮಂದಿ ಕೆಲಸವಿ

NACET BLADES

ಉಪಯೋಗಿಸಿದರೂ ಕೂಡಾ ಬೆಲೆ ಬಾಳುವುವು.

Nacet Blade' ಎಂಬ ... ಉಪಯೋಗಿಸಿದ ಪೆಟ್ಟಿ ಬ್ಲೇಡುಗಳನ್ನು ... ಕೂಡಿಸಿ, ಅವನ್ನು ... ದರೆ ಒಂದು ಉತ್ತಮವಾದ ... ಕೊಡಲ್ಪಟ್ಟ ಒಂದು ... ಗೆಯ ಧರ್ಮಾರ್ಥವಾಗಿ ಕೊಡಲ್ಪಡುವು ... ಉತ್ತಮವು, ನಯವೂ ಆದ ಕ್ಷೌರದಿಂದ ಸಂತೋಷಪಟ್ಟವರು ನಿಮ್ಮ ವ್ಯಾಪಾರಸ್ಥರು ಬ್ಲೇಡುಗಳನ್ನು ಜಮೆ ಮಾಡಲು ಒಂದು ಸ್ಪೆಶಲ್ ಕಾರ್ಡನ್ನು ಕೊಡುವರು.

7 ಆಣೆಗೆ 10

ಮೂರು ಗುಡಿಗಳ ಕೆಡಿಗೆ

ಮುಲ್ಲರ್ ಎಂಡ್ ಫಿಪ್ಸ (ಇಂಡಿಯಾ) ಲಿಮಿಟೆಡ್, ಕಂಟ್ರಾಕ್ಟರ್ ಬಿಲ್ಡಿಂಗ್, ಬಲ್ಲಾರ್ಡ ಎಸ್ಟೇಟ್, ಬೊಂಬಾಯಿ ★ ಏವನ್ಸ್ ಹೌಸ್, ಚೌರಂಗಿ ಸ್ಕ್ವಾಯರ್, ಕಲ್ಕತ್ತಾ ★ 15 ಸಂಕುರಾಮು, ಚೆಟ್ಟಿ ಸ್ಟ್ರೀಟ್, ಮದ್ರಾಸು ★ 726 ನೇಪಿಯರ್ ರೋಡ್, ಕರಾಚಿ ★ ... ಗುಂಬಾಜ್ ಲಾಹೋರ್ ★ ಕಲಾಮ್ ಬಿಲ್ಡಿಂಗ್, ಚಂದನೀಚೌಕ್, ಡಿಲ್ಲಿ.

ಚಲಚ್ಚಿತ್ರ ಪ್ರಪಂಚ

ಸಾಗರ ಕಂಪೆನಿಯ "ಓನ್ಲಿ ವೇ" ಚಿತ್ರಪಟದಲ್ಲಿ ಜ್ಯೋತಿ

ಹಾಲ್ ರಾಚ್ ಕಂಪೆನಿಯ "ಜಿಟೇಸ್ ಸ್ಟ್ರಿಂಗ್" ಚಿತ್ರಪಟದಲ್ಲಿ ಹೆಂಲೇಂಗ್ಡನ್ ಮತ್ತು ಒಲಿವರ್ ಹಾರ್ಡಿ.

'ದಿ ಓನ್ಲಿ ವೇ'

ಸಾಗರ ಕೃತ 'ದಿ ಓನ್ಲಿ ವೇ' ಅಥವಾ ಒಂದೇ ಹಾದಿ' ಎಂಬ ಹೆಸರಿನ ಚಿತ್ರಪಟದ ಕಥಾನಕವು ಭಾರತೀಯ ಇತರ ಚಿತ್ರಪಟಗಳ ಕಥೆಗಳಿಗಿಂತ ಬಹಳ ನೀತಿ ಪರವಾಗಿರುತ್ತದೆ ಆಧುನಿಕ ಸಮಯದಲ್ಲಿ ಚಲಚ್ಚಿತ್ರ ನಿರ್ಮಾಣಕರ ಮನಸ್ಸು ಸಾಮಾಜಿಕ ಚಿತ್ರಗಳ ಕಡೆಗೆ ಆಕರ್ಷಿತವಾಗಿ ಇಂದು ಭಾರತೀಯ ಚಲಚ್ಚಿತ್ರ ಪ್ರಪಂಚವು ಹೆಚ್ಚಾಗಿ ಸಾಮಾಜಿಕ ಚಿತ್ರಗಳಿಂದ ತುಂಬಿರುತ್ತದೆ ಕಥಾನಕವು ಚಿತ್ರಪಟದ ಜೀವಾಳವಾಗಿರುತ್ತದೆ ಅದಕ್ಕಾಗಿಯೇ ಚಲಚ್ಚಿತ್ರ ನಿರ್ಮಾಣಕರೆಲ್ಲರೂ ಉತ್ತಮ ಕಾದಂಬರಿಕಾರರ, ಸಾಹಿತಿಗಳ ಕಥಾವಸ್ತುವನ್ನೆ ಚಲಚ್ಚಿತ್ರಗಳನ್ನಾಗಿ ತಯಾರಿಸುತ್ತಿರುವರು ಅಂಥಾ ಕಾದಂಬರಿಕಾರರಲ್ಲೊಬ್ಬರಾದ ಬಾಬು ಭಾನುಮ್ಹತಾರವರನ್ನು ಪಡೆದುದು ಸಾಗರ ಮೂವಿಟೋನಿನವರ ಗೌರವವಾಗಿರುತ್ತದೆ

ರಾಜ ಎಂಬವನೇ ಕಥೆಯ ನಾಯಕ ಭಯಂಕರ ತುಫಾನಿನ ದವಡೆಗೆ ಸಿಕ್ಕಿ ಒಂದು ಸಮುದ್ರ ಯಾನವು ಮುಳುಗಲು ಒಂದು ಮಗುವು ಮಾತ್ರ ಹಲಗೆಯ ತುಂಡೊಂದರ ಮೇಲೆ ತೇಲಿಕೊಂಡು ದಡವನ್ನು ಸೇರುವುದು ಈ ಮಗುವನ್ನು ಒಬ್ಬ ಕೂಲಿಯವನು ಸಂಗೋಪನೆ ಮಾಡುವನು ಕೂಲಿಯ ವೃತ್ತಿ ಪಡುವಾಗ ಮಗುವು ಪ್ರಾಪ್ತವಯಸ್ಕನಾಗಿ ಇವನೇ ಕಥಾನಾಯಕ ರಾಜ ಸಾಕುತಂದೆಯು ಮೃತನಾಗಲು ರಾಜನು ಕೂಲಿ ಮಾಡಿ ಜೀವಿಸುತ್ತಿದ್ದನು ಒಂದು ಬಾರಿ ಹುಡುಗಿಯೊಬ್ಬಳು ಮೋಟಾರು ಅಪಘಾತದಲ್ಲಿ ಸಿಲುಕಿ ಗಾಯ ಪಡಲು ರಾಜನು ಆಕೆಯನ್ನು ಹೊತ್ತುಕೊಂಡು ಆಕೆಯ ಮನೆಗೆ ತರುವನು ಆಕೆಯು ತನ್ನ ಮಗನಾದ ಮಂಗುವನ್ನು ಕರೆತರುವಂತೆ ರಾಜನಿಗೆ ಹೇಳುವಳು ಮಂಗ ಎಂಬವರೆ ಆ ನಗರದಲ್ಲಿ ಪ್ರತಿಯೊಬ್ಬರೂ ವೈದ್ಯರಾಗಿ ತಿದ್ದರೆ ನಗರದಲ್ಲಿ ಎಲ್ಲಿ ಕೊಲೆ, ದರೋಡೆ ಕಳವು ಆದರೂ ಮಂಗುವಿನ ಮನೆಯನ್ನು ಮಂಗುವನ್ನೂ ಪ್ರಥಮವಾಗಿ ಶೋಧಿಸುತ್ತಿದ್ದರು ರಾಜನು ಮಂಗುವನ್ನು ಹುಡುಕಲು ತೆರಳುವನು ಮಂಗುವಿನ ಪರಿವೆಯುತ್ತ ರಾಜನಿಗೆ ರಲಿಲ್ಲ. ಭರದಲ್ಲಿ ಸಾಗುತ್ತಿರುವ ರಾಜನು ಮನೆಗೆ ಬರುತ್ತಿರುವ ಮಂಗುವನ್ನು ನೋಡದೆ ಆತನಿಗೆ ಧಕ್ಕೆ ಕೊಡಲು ಮಂಗುವು ಕೋಪದಿಂದ ರಾಜನನ್ನು ಕೆಡವಿ ಕೊಲ್ಲಲು ಚೂರಿ ತೆಗೆಯುವನು ರಾಜನ ಬೊಬ್ಬೆಯನ್ನು ಕೇಳಿದ ಮಂಗುವಿನ ಪ್ರೇಯಸಿ ಜ್ಯೋತಿಯು ಓಡಿ ಬಂದು ಮಂಗುವಿಗೆ ನಿನ್ನ ತಾಯಿಯನ್ನು ರಕ್ಷಿಸಿದವನನ್ನು ಕೊಲ್ಲುವೆಯಾ ಎಂದು ಕೇಳಲು ಮಂಗುವು ರಾಜನನ್ನುಬಿಟ್ಟು ತಾಯಿಯನ್ನು ನೋಡಲು ಓಡಿ ಬರುವನು ಜೊತೆಗೆ ರಾಜನೂ ಬರುವನು ತಾಯಿಯು ಪ್ರಾಣಾಂತಿಕ ಸ್ಥಿತಿಯಲ್ಲಿದ್ದಳು ತನ್ನ ಮಗನು ರಾಜನಿಗೆ ಕೊಟ್ಟ ಶಿಕ್ಷೆಯನ್ನು ನೋಡಿ ಮಂಗುವಿನ ತಾಯಿಯು ಇನ್ನು ಮೇಲೆ ಇಬ್ಬರೂ ಸಹೋದರರಂತೆ ಇರಬೇಕೆಂದು ಮಂಗುವಿಗೆ ತಿಳಿಸುವಳು

ಮಂಗ ಮತ್ತು ರಾಜ ಇಬ್ಬರೂ ಅತ್ಯಂತ ಮೆಚ್ಚಿನ ಸ್ನೇಹಿತರಾದರು ಮಂಗುವಿನ ಪ್ರೇಯಸಿಯು ಅದೇ ದಾರಿಯಾಗಿ ಹಾದುಹೋಗುತಿದ್ದ ರಾಜ ಮತ್ತು ಮಂಗುವನ್ನು ರಕ್ಷಿಸುವಂತೆಮರೆ ಹೋಗುವಳು. ಮಂಗುವನ್ನು ನೋಡಿದಾಕ್ಷಣವೇ ಕ್ರೂರಾತ್ಮರು ಅಲ್ಲಿಂದ ಕಾಲ್ತೆಗೆಯುವರು ರಾಜನು ಹಳ್ಳಿಯ ಹುಡುಗಿಯಾದ ಮಾಲಳನ್ನು ಮನೆಗೆ ಕರೆದುಕೊಂಡು ಹೋಗಿ ಅವಳಿಗೆ ಬೇಕಾದ ಸೌಕರ್ಯವನ್ನೊದಗಿಸುವನು ಕ್ರಮವಾಗಿ ಅವರಲ್ಲಿ ಪ್ರೇಮವು ಬೆಳೆಯುವುದು ರಾಜನು ಮಾಲಳನ್ನು ಮದುವೆಯಾಗುವನು

ಯುದ್ಧವು ಪ್ರಾರಂಭವಾಗುವುದು. ಮಂಗು ಮತ್ತು ರಾಜರಿಬ್ಬರೂ ಸೈನಿಕರಾಗಿ ತೆರಳಿದರು ಯುದ್ಧವು ಅಂತ್ಯವಾಗಲು ಮಂಗುವು ಮೊದಲಾಗಿ ಅನೇಕ ಬಹುಮಾನಗಳಿಂದ ಹಿಂತಿರುಗುವನು ಒಂದು ಬಾರಿ ರಾಜನ ಮನೆಯ ದಾರಿಯಾಗಿ ಆತನ ಹಾದಹೋಗುತ್ತಿರುವಾಗ ರಾಜನ ಪತ್ನಿಯಾದ ಮಾಲಳ ಏರ್ಪಡಿಕೆಯು

ಸಾಗರ ಕಂಪೆನಿಯ "ಲೇಡೀಸ್ ಓನ್ಲಿ" ಚಿತ್ರಪಟದಲ್ಲಿ ಬಿಬ್ಬೊ

ದುಷ್ಕೃತ್ಯಗಳಿಗೆ ಹೇಸದ ರಾಜನು ಆತನನ್ನು ತನ್ನಂತೆ ಕಾರ್ಯ ನಡೆಸಿ ಜೀವನ ಸಾಗಿಸಲು ಕಲಿಸುವನು ಆಗ ಮಂಗುವು ಧನಿಕರೊಡನೆ ಕೆಲಸವಿಲ್ಲದ ಅಪವಾದ ಬೈಗಳನ್ನೂ ಹೊಡೆಗಳನ್ನೂ ಅವರಿಂದ ಕೇಳುವುದಕ್ಕಿಂತ ಧನಿಕರನ್ನು ಬೆದರಿಸಿ ಅಪಹರಿಸುವುದೇ ಉತ್ತಮವೆಂದು ಹೇಳುವನು. ವಿಪತ್ತು ದುಃಖ, ದೌರ್ಭಾಗ್ಯಗಳಿಂದ ಬಳಲುತ್ತಿರುವ ರಾಜನು ವೇಗವಾಗಿ ಹೇಗೆ ಈಶ್ವರನನ್ನು ನಿಂದಿಸಲು ಪ್ರಾರಂಭಿಸಿದನು

"ನ್ಯೂ ಥಿಯೇಟರ್ಸ್ ಚಿತ್ರವಾದ "ಹಾವಾದಿಗ"ದಲ್ಲಿ ಕನ್ನನ್‌ಬಾಲಾ ಮತ್ತು ಪಹಾರಿ ಸನ್ಯಾಲ್

ದೀಪಾವಳಿ ಸಮಯ ನಗರವು ಲಕ್ಷಾಂತರ ದೀಪಗಳಿಂದಲಂಕೃತವಾಗಿದೆ ಈ ಸೌಂದರ್ಯವನ್ನು ನೋಡಲು ನೆರೆಯ ಹಳ್ಳಿಯಿಂದ ಒಬ್ಬನು ತನ್ನ ಮಗಳೊಂದಿಗೆ ಬಂದಿದ್ದನು ದೀಪಾವಳಿ ಸೌಂದರ್ಯವನ್ನು ನೋಡಲು ಜನರು ಕಿಕ್ಕಿರಿದು ನೆರೆದಿದ್ದಾರೆ ಮಂಗುವೂ ಅದರಲ್ಲಿ ಸೇರಿಕೊಂಡನು ಜನರ ಗಲಾಟೆಯಲ್ಲಿ ಹಳ್ಳಿಯಿಂದ ಬಂದ ತಂದೆ ಮಗಳಿಬ್ಬರೂ ಬೇರಾದರು. ಮಂಗುವು ಹಳ್ಳಿಯಿಂದ ಬಂದ ಮನುಷ್ಯನನ್ನು ಸಂಪೂರ್ಣ ಅಪಹರಿಸಿ ಕೊಲೆಮಾಡುವನು. ತಂದೆಯನ್ನು ಅರಸುತಿದ್ದ ಹುಡುಗಿಯ ಸತೀತ್ವದ ಹರಣಮಾಡಲು ಕೆಲವು ಚಂಡಾಲರು ಪ್ರಯತ್ನಪಟ್ಟರು. ಒಡನೆ ಆಕೆ ಕೇಳಿ ಬರುವುದ ಚಂಡಾಲನೊಬ್ಬನು ಆಕೆಯ ಮೇಲೆ ಬಲಾತ್ಕಾರ ಮಾಡುತ್ತಿದ್ದನು ಕೂಡಲೆ ಮಂಗುವು ಆತನನ್ನು ಒದೆಯಲು ಚಂಡಾಲನು ಕೆಳಕ್ಕೆಬಿದ್ದು ಸಾಯುವನು ಇದನ್ನು ತಿಳಿದ ಪೋಲೀಸರು ಮಂಗುವನ್ನು ದಸ್ತಗಿರಿ ಮಾಡುವರು ನ್ಯಾಯಸ್ಥಾನದಲ್ಲಿ ಮಂಗುವಿಗೆ ಫಾಸಿಶಿಕ್ಷೆಯು ವಿಧಿಸಲ್ಪಡುವುದು. ಆಗ ಆತನಿಗೆ ಅಲ್ಲಿಯಾದ ನೋಡಿಯುವಂಗುವುದು ನ್ಯಾಯಾಧೀಶರನ್ನು ನೋಡಿ 'ಹಿಂದೆ ಯುದ್ಧಕ್ಕೆ ನಾನ ತೆರಳಿ ಹತ್ತು ಹದಿನೆರಡು ಜನರನ್ನು ಕೊಂದಾಗ ನನಗೆ ಹಿರಿದು ಪದಕಗಳನ್ನು ಕೊಟ್ಟು ನನ್ನನ್ನು ಬಹುಮಾನಿಸಿದಿರಿ ಯಾಕೆಂದರೆ ಅದರಲ್ಲಿ ನಿಮ್ಮ ಸ್ವಾರ್ಥವೇ ನನ್ನನ್ನು ಪುರಸ್ಕರಿಸುವಂತೆ ಮಾಡಿತು. ಇಂದು ಅಬಲೆಯೊಬ್ಬಳ ಸತೀತ್ವವನ್ನು ಭಂಗಮಾಡಲು ತೊಡಗಿದ ಪಾತಕಿಯೊಬ್ಬನನ್ನು ಕೊಂದುದಕ್ಕೆನನಗೆ ಈ ಶಿಕ್ಷೆಯ ವಿಧಿಸಿರುತ್ತೀರಿ ಯಾಕೆಂದರೆ ಇದರಲ್ಲಿ ನಿಮ್ಮ ಸ್ವಾರ್ಥವು ಅಡಗಿರುವುದಿಲ್ಲ ಜಗನ್ನಿಯಾಮಕನ ದೃಷ್ಟಿಯಲ್ಲಿ ಇದು ಯೋಗ್ಯವಾದ ನ್ಯಾಯವೇ?' ಎಂದು ನ್ಯಾಯ, ಕಾನೂನು, ಮನುಷ್ಯತ್ವ, ಶಾಂತಿ ಮೊದಲಾದುವುಗಳ ವಿಷಯ ಮಾತನಾಡುವನು ಕಟ್ಟಕಡೆಗೆ ನಿರ್ದೋಷಿಯಾದೊಬ್ಬನನ್ನು (ಮಾಲಳ ತಂದೆ) ದೀಪಾವಳಿಯ ಸಮಯ ಕೊಂದುದು ತನ್ನದೊಡ್ಡ ತಪ್ಪೆಂದೂ ಅದಕ್ಕಿದುವೇ ತಕ್ಕುದಾದ ಶಿಕ್ಷೆಯೆಂದು ಮನಸ್ಸಿನಲ್ಲಿ ಸಂತೃಪ್ತಿಪಡುವನು. ಮಂಗುವಿನ ಮಾತನ್ನು ಕೇಳಿದ ರಾಜನು ನಮ್ಮ ನಮ್ಮ ದೌರ್ಭಾಗ್ಯದಿಂದಲೇ ನಮಗೆ ವಿಪತ್ತು ಕಷ್ಟ ಸಂಕಟಗಳು ಬಂದೊದಗುವುವು. ಇದರಲ್ಲಿ ಈಶ್ವರನ ಅಪರಾಧ ತಪ್ಪಿಲ್ಲವೆಂದು ತಿಳಿದ ಜಗನ್ನಿಯಾಮಕನನ್ನು ಪೂಜಿಸುವುದು 'ಒಂದೇ ಹಾದಿ' ಎಂದು ತಿಳಿಯುವನು

ಅರ [illegible] ನಾಗಿ ಶೇಖ್ ಮುಖ್ತಾರನ [illegible] ಮಾಲ[illegible]ಾಗಿ ಜ[illegible] ಪ್ರೇಯಸಿಯಾಗಿ ಅಭಿನಯಿಸಿರುವರು.

[illegible] ಹೊಂದಿ[illegible] [illegible]

[illegible] ಧರಿಸಿದ ಶೇಖ್ [illegible] ತಕ್ಕುದಾಗಿದೆ [illegible] ರಾಜನ ಪಾತ್ರದಲ್ಲಿ [illegible] ಅಭಿನಯ [illegible]ರ ಗಂಭೀರದಿಂದ ಸೂಚಿಸುತ್ತಿರುವನು ಮಾಲಳ ಪಾತ್ರದಲ್ಲಿ ಅನರಾಧಳು ಹಿಂದೆ ಮದರ್ ಇಂಡಿಯಾದಲ್ಲಿ ಅಭಿನಯಿಸಿದಷ್ಟು ಉತ್ತಮವಾಗಿ ಅಭಿನಯಿಸಲಿಲ್ಲವಾದರೂ ತನ್ನ ಮಧುರ ಗಾನದಿಂದ ಚಿತ್ರವನ್ನು ಭೂಷಿಸಿರುವಳು ಜ್ಯೋತಿಯು ಭಗ್ನವ ಸ್ನೇಹದಿಂದ ಪ್ರೇಯಸಿಯ ಭೂಮಿಯಲ್ಲಿ ಭಾವಭಂಗಿಸ್ಫೂರ್ತಿವಾದ ತನ್ನ ಅಭಿನಯ ಗಾನದಿಂದ ಚಿತ್ರಕ್ಕೆ ಇನ್ನಷ್ಟು ಕಳೆಯೇರಿಸಿರುವಳು.

ದುರ್ಗಾ ಖೋಟೆ

ಕಲ್ಕತ್ತಾ [illegible] ಕಾರ್ಪೊರೇಶನವರ [illegible] ಯೊಡನೆ [illegible] ತಯಾರಿಸಿರುವ ತಮ್ಮ [illegible] ಚಿತ್ರವೊಂದರಲ್ಲಿ ಅಭಿನಯಿಸುವಂತೆ ಕಂಟ್ರಾಕ್ಟ್ ಮಾಡಿಕೊಂಡಿರುವರು

ಮಿಸೆಸ್ ದುರ್ಗಾಬಾಯಿ ಖೋಟೆ,

ಧಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಸಮಯದ ಬೆಲೆ ಎಷ್ಟೆಂದು ನಿಶ್ಚೈಸಿದವರಿರುವರೆ?

ಹಣದ ಬೆಲೆಯನ್ನು ಕಟ್ಟಬಹುದು—ಆದರೆ ಸಮಯದ ಬೆಲೆಯನ್ನು ನಿಶ್ಚೈಸಲಸಾಧ್ಯ!

ಇಂತಹ ಅತ್ಯಮೂಲ್ಯ ಸಮಯವನ್ನು ನಿರರ್ಥಕವಾಗಿ ಹಾಳುಮಾಡಲವಕಾಶ ಕೊಡದಂತೆ, ನಮ್ಮ ಸರ್ವಿಸುಗಳು ಪ್ರಾಥಃಕಾಲದಿಂದ ಸಾಯಂಕಾಲ ವರೆಗ ಬಿಡುವಿಲ್ಲದೆ ಓಡಾಡುತಿದ್ದು ನಿಮ್ಮ ಯಾವುದೇ ಕೆಲಸಗಳನ್ನಾದರೂ ನೀವು ಒಂದೂರಿನಿಂದ ಇನ್ನೊಂದೂರಿಗೆ ನಮ್ಮ ಬಸ್ಸುಗಳಲ್ಲಿ ತ್ವರ್ಯದಲ್ಲಿ ಪ್ರಯಾಣ ಬೆಳೆಸಿ, ನಿಮ್ಮ ಅತ್ಯಮೂಲ್ಯ ಸಮಯವನ್ನು ನಿರರ್ಥಕಗೊಳಿಸದಂತೆ, ನಾವು ಏರ್ಪಾಡು ಮಾಡಿರುವೆವು ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ನಾವು ಇನ್ನು ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು'

JOINT MANAGERS,

The Combined Booking Agency,
MANGALORE

The Joint Booking Office,
KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಘಾಯಗಳು, ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ವೊದಿನೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು ೩ ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ. ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದೀಯ ಸಮಾಜ್ಯ ಪೆಂಡೀಪಿ.
P. O. Peridepi (ನೆಲ್ಲೂರು ಜಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಲ್ಡಕಟ್ಟಾ ಬಜಾರ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ	1—14—0	—
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	4—12—0	4—14—0
,, ದುಯಂ ,, ,,	4—8—0	4—10—0
,, ಅವ್ವಲ್ ಸುಗ್ಗಿ ,,	4—8—0	4—8—0
,, ದುಯಂ ,, ,,	4—5—0	4—6—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
,, ಸಿಪ್ಪೆ ಇದ್ದದು ,,	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
,, ದಿಲ್‍ಪಸಂದಿ ,,	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—8—0	8—8—0
ಗೇರುಬೀಜ ಮುಡಿಗೆ	3—8—	8—8—0
ಕಬ್ಬಿನ ಬೆಲ್ಲ ಖಂಡಿಗೆ	47—8—0	58—12—0
ಒಳ್ಳೇಮೆಣಸು ಹುಂಡ್ರೆಡ್ವೇಟಿಗೆ	14—8—0	15—8—0

ಸ್ವದೇಶಾಭಿಮಾನಿ

Established 1906 • Regd. No M 3400

ಸಂಪುಟ ೩೩] ತಾರೀಕು ೧೮-೮-೧೯೩೯ (18—8—1939) [ಸಂಚಿಕೆ [illegible]

THE

BOMBAY LIFE ASSURANCE COMPANY, LTD.,

(ESTD 1908.)

THE OFFICE

Which has proved its popularity by its progress

Record of New Business

Proposed	Year	Completed
1,25,50,250	1934	1 04,33,750
1 50,48,915	1935	1,23,28,665
1,68 88 200	1936	1 36 01 500
1,72,579,75	1937	1 40 08 725
176 83 250	**1938**	**144 91 000**

1939- VALUATION YEAR

Please take up a Policy Now and participate in Bonus.

To Insure or to Represent it pays you to consult us

— *Apply to* — **KOCHIKAR BROTHERS, LIMITED,**

Madras Branch Secretaries

The Bombay Life Assurance Co., Ltd.,

The Bombay Life Building Gandhinagar, UDIPI

or any of our following offices:

Post Box No 337
Mount Road,
Madras

Visweshwarapuram Circle,
Bangalore City

Charni Road
Girgaum
BOMBAY 4

Car Street,
Mangalore

Puthiyara,
Calicut.

Central Station Road,
Trivandrum

MAKE LIFE WORTH-LIVING!

Indigestion — Insomnia — Dry Cough—
Nervousness — Weak Heart &c ,
these make you wiery of Life!

CONSULT US AND BUY
YOUR LIFE'S HAPPINESS!

Oils - that cool the brain and induce sleep
Lehas - that build-up your wasted system
Asavas = that regenerate your jaded nerves

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S, Kanara.

(BRANCH—KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ಚೈತನ್ಯವನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

ಸ್ಥಳೀಯ ಪ್ರತಿನಿಧಿಗಳು: —
ಯು ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು

Edited, Printed & Published by A S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 25—8—1939 卐 ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 卐 ತಾರೀಕು ೨೫—೮—೧೯೩೯



Photo C P London ಬ್ರಿಟಿಷರ ಯುದ್ಧಸಾಧನೆಗಳ ತಯಾರಿಮಾಡುವ ಕಾರ್ಖಾನೆಯ ಒಂದು ಒಳಗಿನ ದೃಶ್ಯ!

★ ಸಚಿತ್ರ ವಾರಪತ್ರಿಕೆ ★

ನೋಟಗಳು!

ಯೂರೋಪಿನ ಇಂದಿನ ಪರಿಸ್ಥಿತಿಯು ಇನ್ನೂ ಭೀಕರವಾಗಿದೆ!

ಇಟಲಿಯ ಪ್ರತಿನಿಧಿಯು ಜರ್ಮನಿಗೆ ಬಂದು, ಹೆರ್ ವಾನ್ ರಾಬಿನ್ ಟ್ರಾಫನೊಡನೆ ಮಾತು ಕತೆ ನಡೆಸಿದ ಮೇಲೆ ಹಿಟ್ಲರನನ್ನೂ ಕಂಡು ವಿಚಾರ ವಿನಿಮಯ ಮಾಡಿಕೊಂಡನು!

ಪ್ರಜಾಪ್ರಭುತ್ವ ರಾಷ್ಟ್ರಗಳು, ಸರ್ವಾಧಿಕಾರಿಗಳನ್ನು ಸುತ್ತುಗಟ್ಟುವ ಸಿದ್ಧತೆ ಮಾಡುತ್ತಿರುವಾಗ, ಇಟಲಿ ಮತ್ತು ಜರ್ಮನಿಗಳು ಆ ಕುರಿತು ಸಂಯುಕ್ತವಾಗಿ ಗೂಢತಕ್ಕ ಕಾರ್ಯಕ್ರಮವು ಈ ಸಂಭಾಷಣೆಗಳ ವಿಷಯವಾಗಿತ್ತು!

ಈ ಭೇಟಿಗಳಲ್ಲಿ ನಡೆದ ವಿಸ್ತಾರ ವಿಷಯವು ಇದು ವರೆಗೂ ಪ್ರಕಟವಾಗಿಲ್ಲ, ಆದರೆ, ಇದು ಇಟಲಿ-ಜರ್ಮನಿಗಳು ಇತರ ರಾಷ್ಟ್ರಗಳನ್ನು ಬೆದರಿಸಲು ಮಾಡುವ ಬರಿಯ ಮಾಯಾ ವಿದ್ಯೆಯೆಂದು ರಾಜಕೀಯ ವಿಚಾರಿಗಳ ಊಹನೆ!

ಬರುವ ನವಂಬರಿನಲ್ಲಿ ಸೇರುವ ಜರ್ಮನಿಯ ನಾಜೀ ಕಾಂಗ್ರೆಸ್ ಅಧಿವೇಶನದ ವರೆಗೆ ಹಿಟ್ಲರನು ಯುದ್ಧದ ವಿಷಯವಾಗಿ ಯಾವ ಕಾರ್ಯವನ್ನಾದರೂ ಮುಂದೊತ್ತಲಾರನೆಂದು ಅವರ ನಿರ್ಧಾರ!

ಈ ಅಭಿಪ್ರಾಯವು ಹಿಟ್ಲರನು ಇಂದು ಡಾನ್ಸಿಗಿನಲ್ಲಿ ಮಾಡುವ ಶಾಂತಿಯ ಆಶ್ರವಣದಿಂದ ಸ್ಪಷ್ಟವಾಗುತ್ತದೆ!

ಬಹುಶಃ ಸರ್ವಾಧಿಕಾರಿಗಳು ಇನ್ನೊಂದು ಮ್ಯೂನಿಕ್ ಒಪ್ಪಂದವು ಆಗಬಹುದೆಂದು ವಿಚಾರಿಸುತ್ತಿರಬೇಕು

ಹಾಗಾದರೆ, ಹಿಂದೆ, ಸುಡೆಟಿನ್ ಲೇಂಡನ್ನು ಬಗಲೊಳಗೆ ಹಾಕಿದ ಮೇಲೆ, ಜೆಕೊಸ್ಲೋವೇಕಿಯವನ್ನೂ ನುಂಗಿದಂತೆ, ಈಗಲಾದರೂ, ಡಾನ್ಸಿಗನ್ನು ಹೀಗೆ ಶಾಂತಿಯ ಮಂತ್ರವನ್ನು ಜಪಿಸುತ್ತಾ, ಸಂಪೂರ್ಣ ಸ್ವಾಧೀನ ಪಡಿಸಿಕೊಂಡ ಅನಂತರ ಪೋಲೆಂಡಿನ ತಲೆಗೆ ಕಾಲಿಡಲು ಹಿಟ್ಲರನು ಬಯಸುತ್ತಿರಬಹುದು!

ರಶ್ಯಾ ಫ್ರಾನ್ಸ್ ಬ್ರಿಟನಗಳಸ್ನೇಹ ಒಪ್ಪಂದದ ವಿಫಲತೆಯಿಂದ, ಹಿಟ್ಲರನು ಎಚ್ಚತ್ತ ಹಾಗೆ ತೋರುತ್ತದೆ!

ಪ್ರಾನ್ಸ ಬ್ರಿಟನಗಳು ಪ್ರತಿಜ್ಞೆ ಕೆಟ್ಟ ಡಾನ್ಸಿಗ ಕ್ರಾಂತಿ ಹಿಟ್ಲರನ ಯುದ್ಧಹೂಡಲು ಹಿಂಜರಿಯಲೂ ಬಹುದು!

ಹೇಗಿದ್ದರೂ, ಹಿಟ್ಲರನ ಈಳಿಗಾಲವಲ್ಲದೆ, ಉಳಿಗಾಲದ ಸೂಚನೆಯಿಲ್ಲ!

ಹಿಟ್ಲರನ ದೃಷ್ಟಿಯು ಈಗ ಹಂಗೇರಿ ಮತ್ತು ಜುಗೋಸ್ಲೇವಿಯಗಳ ಕಡೆಗೆ ತಿರುಗಿದಂತೆ ತೋರುತ್ತದೆ

ಜರ್ಮನ್ ಸೈನ್ಯವು, ಅವುಗಳ ಗಡಿನಾಡನ್ನು ಸಮೀಪಿಸಿ ಬಂದಿವೆ!

ಇದಕ್ಕೆ ಕಾರಣವೆಂದರೆ, ಹಂಗೇರಿಯ ಮತ್ತು ಜುಗೊಸ್ಲೇವಿಯಗಳ ವರ್ತನೆಯು ಸರ್ವಾಧಿಕಾರಿಗಳಿಗೆ ಸರಿ ತೋರದೆ, ಅವುಗಳಲ್ಲಿ ಯಾವುದನ್ನಾದರೂ ಒಂದನ್ನು ಹಿಡಿದು ಬುದ್ಧಿ ಕಲಿಸಲು ಸರ್ವಾಧಿಕಾರಿಗಳು ಸೈನ್ಯ ಕಳುಹಿಸಿರುವುದಂತೆ!

ಮಿತವ್ಯಯದ ಡಬ್ಬಿ

ಎಷ್ಟು ಉಳಿತಾಯವಾಗುವುದೆಂದು ನೋಡಿರಿ!

ದೊಡ್ಡ ಸೈಜು (೮ ಔನ್ಸು) ರೂ. ೧—೪—೦
(ದೊಡ್ಡ ಬಾಟ್ಲಿಯ ಪರಿಮಾಣದಷ್ಟಿದೆ.
ಸಣ್ಣ ಸೈಜು (೪ ಔನ್ಸು) ಆಣೆ ೦—೧೧—೦

ಕೇವಲ ಕಳೆಯುವ ಲೆಕ್ಕವು ಎಂಡ್ರೂಸ್ ಮಿತವ್ಯಯದ ಡಬ್ಬಿಗಳನ್ನು ಕೊಂಡುಕೊಂಡಲ್ಲಿ ದೊಡ್ಡ ಸೈಜಿನಲ್ಲಿ (8 ಔನ್ಸು) 6 ಆಣೆಯೂ, ಸಣ್ಣ ಸೈಜಿನಲ್ಲಿ (4 ಔನ್ಸು) 5 ಆಣೆಯೂ ಉಳಿತಾಯವಾಗುವುದು ಆದರೆ ಎಂಡ್ರೂಸ್ ಲವಣವು ಎಂತಹ ಉತ್ತಮ ಆರೋಗ್ಯವರ್ಧಕ ಲವಣವಾಗಿರುವುದೆಂಬುದು ಇದನ್ನು ಸೇವಿಸಿದಲ್ಲಿ ಖಚಿತವಾಗುವುದು

ಎಂಡ್ರೂಸ್ ಅಜೀರ್ಣವನ್ನು ನಾಶಗೊಳಿಸುತ್ತದೆ ಜೀರ್ಣೇಂದ್ರಿಯಗಳನ್ನು ಆರೋಗ್ಯವಾಗಿರಿಸುತ್ತದೆ ಮತ್ತು ಆಮ್ಲವನ್ನು ನಾಶಗೊಳಿಸುತ್ತದೆ

ಇಂದೇ ಪ್ರಾರಂಭಿಸಿರಿ—ಒಂದು ವಾರದ ತನಕ ಪ್ರತೀ ಬೆಳಿಗ್ಗೆ ಎಂಡ್ರೂಸ್ ಲವಣವನ್ನು ಸೇವಿಸಿರಿ—ಆರೋಗ್ಯವಾಗಿರಲು ಎಂಡ್ರೂಸ್ ಲವಣವನ್ನು ಯಾವಾಗಲೂ ಸೇವಿಸಿರಿ

ಎಂಡ್ರೂಸ್ ಲವಣಕ್ಕೆ ಇತರ ಲವಣಕ್ಕಿಂತ ನಿಧಾನವಾಗಿ ಉಕ್ಕುವ ಒಂದು ಮಹತ್ವದ ಗುಣವಿರುವುದು. ಈ ಗುಣದಿಂದಾಗಿ ಹೊಟ್ಟೆಯೊಳಗೆ ಅಂಗಾರಾಮ್ಲ ವಾಯುವನ್ನುಂಟುಮಾಡಿ ಇದು ಹೊಟ್ಟೆಯ ಪರೆಯನ್ನು ಆರೋಗ್ಯದಲ್ಲಿರಿಸುತ್ತದೆ.

ಎಂಡ್ರೂಸ್ ಲವಣದಿಂದ ಉತ್ತಮ ಪರಿಣಾಮವನ್ನು ಪಡೆಯಲು ಒಂದು ಯಾ ಎರಡು ಚಮಚೆಯಷ್ಟು ಎಂಡ್ರೂಸ್ ಲವಣವನ್ನು ಒಂದು ಗ್ಲಾಸು ನೀರಿನಲ್ಲಿ ಹಾಕಿ ಚೆನ್ನಾಗಿ ಕದಡಿಸಿರಿ—ಅದು ಉಕ್ಕಿ ಬರುತ್ತಿರುವ ಸಮಯ ಕುಡಿಯಿರಿ.

ಡಬ್ಬಿಗಳಲ್ಲಿ ಮೊದಲು ಬಾಟ್ಲಿಗಳಲ್ಲಿದ್ದಷ್ಟೆ ಪರಿಮಾಣದ ಲವಣವಿರುವುದು ಆದರೆ ಬೆಲೆಯು ಕಡಿಮೆ!

ಎಂಡ್ರೂಸ್ ಲವಣವು ಲೋಕದ ಎಲ್ಲಾ ಲವಣಗಳಿಗಿಂತಲೂ ಹೆಚ್ಚಾಗಿ ಮಾರಾಟವಾಗುತ್ತದೆ ಮತ್ತು ಇದನ್ನು ತಯಾರಿಸುತ್ತಿರುವಾಗ ಕೈಸೋಂಕಿರುವುದಿಲ್ಲ.

ಎಂಡ್ರೂಸ್ ಲಿವರ್ ಸೋಲ್ಟ್

ಅಂತರೇಂದ್ರಿಯ ಶುದ್ಧಿಗೆ ಉತ್ತಮ!

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.



Take
ANDREWS
LIVER SALT

LARGEST SALE OF ANY EFFERVESCING SALT IN THE WORLD

ಹಂಗೇರಿ ಮತ್ತು ಜುಗೋಸ್ಲೇವಿಯಗಳು 'ನಾಝಿಸಂ'ನ ಪ್ರಬಲ ವಿರೋಧಿಗಳಾದ ರಾಷ್ಟ್ರಗಳು!

ಬಹುಶಃ, ಈ ತತ್ವ ವಿರೋಧವೇ, ಎಲ್ಲದಕ್ಕಿಂತಲೂ ಹೆಚ್ಚಾಗಿ ಸರ್ವಾಧಿಕಾರಿಗಳನ್ನು ಕೆರಳಿಸಿರಬೇಕು!

ಹೇಗಿದ್ದರೂ, ಈಗ ಆ ಕಡೆಯಿಂದಲೂ ಯುದ್ಧ ಭೀತಿಯು ಹುಟ್ಟಿದೆ!

ಸರ್ವಾಧಿಕಾರಿಗಳಿಗೆ ಯುದ್ಧವು ಸಂಭವಿಸಿದಲ್ಲಿ, ಹಂಗೇರಿ ಮತ್ತು ಜುಗೊಸ್ಲೇವಿಯ ರಾಷ್ಟ್ರಗಳ ಎದೆಯ ಮೇಲೆ ತಮ್ಮ ಸೈನ್ಯವನ್ನು ನಿರ್ಭಯವಾಗಿ ಚಲಿಸಲು ಎಡೆಕೊಡಬೇಕೆಂದು ಅವರ ಹೇಳಿಕೆ!

ಹಂಗೇರಿ-ಜುಗೊಸ್ಲೇವಿಯಗಳ ಪರಿಸ್ಥಿತಿಯು ಬಹಳ ವಿಷಮವಾಗಿದೆ!

ಅವುಗಳ ಇಂದಿನ ಸ್ಥಿತಿಯಲ್ಲಿ ಸರ್ವಾಧಿಕಾರಿಗಳ ಹೇಳಿಕೆಯನ್ನು ತಿರಸ್ಕರಿಸುವುದೆಂದರೆ, ತಮ್ಮ ಸ್ವಾತಂತ್ರ್ಯವನ್ನೇ ಕಳೆಕೊಂಡಂತೆ!

ಅಥವಾ, ಇವರ ಹೇಳಿಕೆಗೆ ಲಿಬಾಗಿಸುವುದೆಂದರೆ ಅದೂ ಸ್ವಾತಂತ್ರ್ಯವನ್ನು ಕಳೆಕೊಂಡಂತೆ!

ಸರ್ವಾಧಿಕಾರಿಗಳ ನಿರ್ದಯ ರಣಗರ್ಜನೆಗೆ ಈ ರಾಷ್ಟ್ರಗಳು ತತ್ತರಿಸುತ್ತಿವೆ!

ಜರ್ಮನ್ ರಶ್ಯಾಗಳೊಳಗೆ ವ್ಯಾಪಾರಗಳ ಒಪ್ಪಂದವೂ ಮುಗಿದು, ರಾಜಕೀಯ ಒಪ್ಪಂದವು ಬೇಗನೇ ನಡೆಯಲಿದೆ!

ಸರ್ವಾಧಿಕಾರಿಗಳೊಡನೆ ಹೋರಾಡುವಲ್ಲಿ ರಶ್ಯವನ್ನು ಒಂದು ಸಾಧನವಾಗಿ ಉಪಯೋಗಿಸಿ, ಕಾರ್ಯಸಾಧನೆ ಮಾಡಬೇಕೆಂದಿದ್ದ ಬ್ರಿಟಿಷರ ಕುಹಕತನವು ಇಂದು ರಟ್ಟಾಗಿ, ಈ ಮೋಸಗಾರರ ಬಲೆಯಿಂದ ತಪ್ಪಿಸಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ರಶ್ಯವು ಈ ಯೋಗ್ಯ ನಿರ್ಧಾರಕ್ಕೆ ಬಂದಿದೆ

ತ್ರಿರಾಷ್ಟ್ರಗಳ ಒಪ್ಪಂದವು ಹೀಗೆ ಕನಸಿನ ಗಂಟಾಯಿತು!

ಜರ್ಮನಿಯು ರಣಗರ್ಜನೆಗೆ ಇನ್ನಷ್ಟು ಶಕ್ತಿ ಕೂಡಿತು!

ರಕ್ಷ್ಯೈರ್ಮಹಾರ್ಹೈಸ್ತುತುರ್ಷ್ಟನ
ದೇವಾಃ । ನ ಭೇಜಿರೇ ಭೀಮ
ವಿಷೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿಧೀರಾಃ

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ದೊರೆಯಲು ನುಪಮ ರತ್ನಗಳು
ಸಾ । ಗರವ ಮಥಿಸಲು ಸುರರಿಂ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು ।
ಮರೆತು, ಕ್ಷುದ್ರರ
ತೆರದಿ ಕುಳಿತರೆ । ತೆರಳ ಬಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾರೀಕು ೨೫-೮-೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 25—8—1939

ನಾಗರಿಕ ಸ್ವಾತಂತ್ರ್ಯವು ಲಭಿಸದೆ ಜಯಪುರವನ್ನು ಬಿಡುವ ಹಾಗಿಲ್ಲ!

ಸಂಯುಕ್ತ ಪ್ರಾಂತದಲ್ಲಿ ರೈಟಿಸ್ಟ್ ಬ್ಲಾಕ್

ಶಾಂತಿನಿಕೇತನದ ಅನಭಿಷಿಕ್ತ ಸಾಮ್ರಾಟ್

ಜಮ್ನಾಲಾಲ ಬಜಾಜರು ಮತ್ತು ಅವರ ಪುತ್ರರು.

ತನ್ನ ಕಾರ್ಯವು ಪೂರ್ಣವಾಗುವ ವರೆಗೆ ತಾನು ಜಯ ಪುರವನ್ನು ಬಿಡಲೊಲ್ಲನೆಂದ ಪ್ರಕಟಿಸಿ ಸೇಟ್ ಜಮ್ನಾಲಾಲ ಬಜಾಜರು, ಎಲ್ಲಿ ಅವರನ್ನು ಬಂಧಿಸಿ ಸೆರೆಯಿಟ್ಟಿದ್ದರೋ, ಅದೇ ಮಂದಿರವನ್ನೇ ಮೂರು ವರ್ಷಗಳ ತನಕ ಬಾಡಿಗೆಗೆ ಮಾಡಿಕೊಂಡಿರುವರು!

ಅವರ ಹೇಳಿಕೆ

ಬಜಾಜರು ಜಯಪುರದ ಪ್ರಜೆಗಳಿಗೆ ಹೀಗೆಂದು ಹೇಳಿಕೆಯೊಂದನ್ನು ಪ್ರಕಟಿಸಿರುವರು ನಾನು ನನ್ನ ಹುಟ್ಟು ನಾಡಿನ ಜನರ ಸೇವೆಯ ಮಹತ್ವವಾದ ಉದ್ದೇಶ ಸಾಧನೆಗಾಗಿ ಇಲ್ಲಿಗೆ ಬಂದಿರುತ್ತೇನೆ ನನ್ನ ಆರೋಗ್ಯ ಚೆನ್ನಾಗಿರದಿದ್ದರೂ ನಾನು ಜಯಪುರದಲ್ಲಿ ಉಳಕೊಳ್ಳಲು ನಿಶ್ಚಯ ಮಾಡಿದ್ದೇನೆ

ನಮ್ಮ ಸಂಗ್ರಾಮವು ಮುಗಿದಿಲ್ಲ ನನ್ನ ಕಡೆಯ ಉದ್ದೇಶವಾಗಿರುವ ನಾಗರಿಕ ಸ್ವಾತಂತ್ರ್ಯವು ದೊರಕುವ ತನಕ ಅದಕ್ಕಾಗಿ ಇಲ್ಲಿದ್ದು ಹೋರಾಡಲು ನಿಶ್ಚಯ ಮಾಡಿರುತ್ತೇನೆ - ಸಂಸ್ಥಾನದ ಆಡಳಿತೆಯು ಮನುಷ್ಯನ ಆತ್ಮಗೌರವವನ್ನು ಅಪಹರಿಸಿ, ಅವರ ಸೊತ್ತು ಜೀವನಗಳ ಮೇಲೆ ಅಧಿಕಾರ ನಡೆಸುವುದರಿಂದ ಆಗದು ಯಾವುದು ಮಾನವ ಸೌಖ್ಯಕ್ಕೆ ಸಹಾಯವಾಗಿಲ್ಲವೋ, ಅಂತಹ ಅಧಿಕಾರವು ನಾಗರಿಕತೆಯ ಪ್ರಾರಂಭ ಕಾಲದಿಂದ ನಿರ್ನಾಮ ಹೊಂದಿದೆ

ಮಹಾಜನರ ಕರ್ತವ್ಯ

ಮಳೆಯಿಲ್ಲದೆ ಇರುವ ಕಾರಣ, ಈ ವರ್ಷ ಹೆಚ್ಚು ಪರಿತಪಿಸುತ್ತಿರುವ ಕೃಷಿಕರ ಸಂಕಷ್ಟದ ಕಡೆಗೆ ನನ್ನ ಮನಸ್ಸು ತಿರುಗಿದೆ ಹೊರಲಾರದ ಅನೇಕ ಭಾರಗಳನ್ನು ಹೊತ್ತು ಯಮಯಾತನೆಗೆ ಒಳಗಾಗಿರುವ ಜಯಪುರದ ರೈತರ ವಿಷಯ ಪ್ರಜಾಮಂಡಳವು ಸಾಕಷ್ಟು ಗಮನ ಕೊಡಬೇಕು. ಕಳೆದ ವರ್ಷದ ಕ್ಷಾಮ ಕಾಲದಲ್ಲಿ ಪ್ರಜಾ ಮಂಡಳವು ಕೃಷಿಕರಿಗೆ ಅತ್ಯಂತ ನೆರವಾಗಿದೆ ಈ ವರ್ಷ ಅವರು ಮಾಡಬೇಕಾದ ಕೆಲಸ ಕಳೆದ ವರ್ಷಕ್ಕಿಂತ ಇನ್ನೂ ಹೆಚ್ಚಿಗೆ ಹೊಣೆಗಾರಿಕೆಯುಳ್ಳದ್ದಾಗಿದೆ

ಆದರೆ ನಿಜವಾದ ಸಂಸ್ಥಾನದ ಹಿತವು, ಮಹಾರಾಜನ ಸ್ವತಃ ಪ್ರಜೆಗಳ ಹಿತದ ಬಗೆ ಆಲೋಚಿಸಿ ಆಡಳಿತೆಯಲ್ಲಿ ಅವರಿಗೆ ಸಾಕಷ್ಟು ಸಹಾಯವನ್ನು ಒದಗಿಸಿಕೊಡದಿದ್ದಲ್ಲಿ ಸಾಧ್ಯವಿಲ್ಲ. ಇಂಗ್ಲೆಂಡಿನ ಪ್ರಧಾನ ಮಂತ್ರಿಯಾಗಿ ಬ್ರಿಟಿಷನೊಬ್ಬನನ್ನು ನೇಮಿಸುವುದರಿಂದ ಹಿಂದಿನ ಅನುಭವದಂತೆ ಸಂಸ್ಥಾನದ ಸಮಸ್ಯೆಯು ಬಗೆಹರಿದಹಾಗಿಲ್ಲ

ಸಂಯುಕ್ತ ಪ್ರಾಂತದಲ್ಲಿ 'ರೈಟಿಸ್ಟ್ ಬ್ಲಾಕ್'

ಕಾಂಗ್ರೆಸು ಶುದ್ಧೀಕರಣದ ಧ್ಯೇಯ

ಬಲಪಕ್ಷದ ಕಾಂಗ್ರೆಸುಕೆಲಸಗಾರರ ಒಂದು ಪ್ರತ್ಯೇಕ ಪಕ್ಷವೊಂದನ್ನು ಸ್ಥಾಪಿಸಲು ಲಖ್ನೋದಲ್ಲಿ ಒಂದು ತಾತ್ಕಾಲಿಕ ಸಮಿತಿಯು ರಚಿತವಾಗಿದೆ!

ಈ ಹೊಸ ಸಮಿತಿಯಲ್ಲಿ ಆಚಾರ್ಯ ಕೃಪಾಲಿನಿ ಶ್ರೀ ಮೋಹನಲಾಲ ಸೇಕ್ಸೆನ ಪ್ರಭೃತಿಗಳು ಇದ್ದಾರೆ ಇದರ ಸದಸ್ಯರೆಲ್ಲರೂ ಕಾಂಗ್ರೆಸು ಸದಸ್ಯರಾಗಿ ಕಾಂಗ್ರೆಸಿನ ಪ್ರತಿಜ್ಞೆಗಳಿಗೆ ಸಂಪೂರ್ಣ ಬದ್ಧರಾಗಿರಬೇಕು. ಕಾಂಗ್ರೆಸಿನಲ್ಲಿ ಗಾಂಧಿಜಿಯವರ ಧುರೀಣತೆಯಿಂದ ಇದರ ಪಕ್ಷವನ್ನು ಪ್ರತಿಭಟಿಸುವವರಾಗಿರಬೇಕು.

ಗಾಂಧಿಜಿಯವರ ಮುಂದಾಳುತನದಲ್ಲಿ ರಾಷ್ಟ್ರವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಇದಿರಾಗಿ, ಕಡೆಯ ಸಂಗ್ರಾಮಕ್ಕೆ ಈ ಪಕ್ಷದವರು ತಯಾರುಮಾಡುವರು

ಕಾಂಗ್ರೆಸಿನಲ್ಲಿ ವಂಚನೆ ಮೋಸಗಳು ಹೋಗುವಂತೆಯೂ, ಕಾಂಗ್ರೆಸಿನ ಶುದ್ಧೀಕರಣವು ನಡೆಯುವಂತೆಯೂ ಇವರು ಸಾಧಿಸುವರು

ಕಾಂಗ್ರೆಸಿನ ಸ್ವಾತಂತ್ರ್ಯ ಹೋರಾಟದಲ್ಲಿ ನೈತಿಕ ಬಲವಿರಬೇಕೆಂಬುದೇ ಅವರ ಮುಖ್ಯ ಧ್ಯೇಯ

ಶಾಂತಿನಿಕೇತನದಲ್ಲಿ ನೀಗ್ರೋ ಬಾಲಿಕೆಯರು!

ಸಂಯುಕ್ತ ಅಮೇರಿಕದ ಪ್ರೊಫೆಸರ್ ಹೋವಾರ್ಡ್ ತುರ್ಮಾನ್ ಎಂಬವರು, ಶಾಂತಿನಿಕೇತನದಲ್ಲಿ ಉಚಿತವಾದ ನೀಗ್ರೋ ನಿವಾಸ ಸ್ಥಾನವನ್ನು ಮಾಡಬೇಕಾಗಿ ಡಾಕ್ಟರ್ ರವೀಂದ್ರನಾಥ ಠಾಗೋರರಿಗೆ ಪತ್ರ ಬರೆದಿರುವರು.

ಮಿಸ್ ಬುಶ್ ಮತ್ತು ಮಿಸ್ ಬೆಕ್ಕಿ ಎಂಬಿಬ್ಬರು ನಿಗ್ರೋ ಬಾಲಿಕೆಯರು ಶಾಂತಿನಿಕೇತನಕ್ಕೆ ಬಂದು ತಲಪಿರುವರು ಅವರು ಅಲ್ಲಿ ಎರಡು ತಿಂಗಳ ವರೆಗಿದ್ದು, ಭಾರತೀಯ ಕಲಾ ಸಂಸ್ಕೃತಿಗಳ ಪರಿಚಯವನ್ನು ಮಾಡಿಕೊಳ್ಳುವರು

ಪ್ರೋ ತುರ್ಮಾನರು ಶಾಂತಿನಿಕೇತನದಲ್ಲಿ ನೀಗ್ರೋ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಿದ್ಯಾಪೀಠವನ್ನು ತೆರೆದ, ನೀಗ್ರೋ ಸಂಸ್ಕೃತಿಯ ಕುರಿತು ನೀಗ್ರೋ ವಿದ್ವಾಂಸರಿಂದ ಬರೆಯಲ್ಪಟ್ಟ ಪುಸ್ತಕಗಳ ಭಾಂಡಾರವೊಂದನ್ನು ಸ್ಥಾಪಿಸಬೇಕೆಂದೂ, ಅವರಿಂದಲೇ ಸಹಾಯಧನವನ್ನು ಪಡೆದು ಅವರ ನಾಗರಿಕತೆ, ಉದ್ಯೋಗಾಭಿವೃದ್ಧಿಯ ಶಿಕ್ಷಣ ಕೊಡಬೇಕೆಂದೂ ತಿಳಿಸಿರುವರು

ಶಾಂತಿನಿಕೇತನದ ಅನಭಿಷಿಕ್ತ ಸಾಮ್ರಾಟ್!

ರವೀಂದ್ರನಾಥ ಠಾಗೋರರು ಶಾಂತಿನಿಕೇತನದ ಅನಭಿಷಿಕ್ತ ಸಾಮ್ರಾಟರು ಅವರ ಲೇಖನಿ ಮತ್ತು ಮಾತುಗಳೆರಡೂ ಅವರಿಗೆ ಆ ಮಹತ್ವವನ್ನು ತಂದಿವೆ ಲೇಖನ ಮತ್ತು ಮಾತುಗಳೆರಡರಲ್ಲಿಯೂ ಉಚಿತವಾದ ಗಂಭೀರವಾದ ಶಬ್ದಗಳು ಬಹಳ ಕೆಚ್ಚರತರ ಹೊರಬರುತ್ತವೆ ಹೀಗೆಂದ ಶ್ರೀ ಬುದ್ಧದೇವ್ ಬೋಸರು 'ಇಂಡಿಯನ್ ಮುಕ್ತಿವೇಗಜಿನ್'ನಲ್ಲಿ ಬರೆಯುತ್ತಾರೆ!

ಅವರು ಬಾಲ್ಯಕಾಲದಿಂದಲೇ ಬಹಳ ಪ್ರಭಾವಶಾಲಿಗಳಾದ ಅಭಿನಯ ಕುಶಲರು ತಮ್ಮ ಹೃದಯದಪೂರ್ಣವಾದ ಅನುಭವ, ಭಾವನೆಗಳನ್ನು ಅವರು ತಮ್ಮ ಲಲಿತ ಅಭಿನಯಗಳಲ್ಲಿ ಸ್ಪಷ್ಟವಾಗಿ ತಿಳಿಸಬಲ್ಲವರಾಗಿರುತ್ತಾರೆ. ಅವರ ಪೌರ್ವಾತ್ಯ ಸಂಸ್ಕೃತಿಯ ಪ್ರಭಾದ್ಯೋತಕವಾದ ದೃಷ್ಟಿಗಳೂ ಕೋಮಲ ಹೃದಯ ಮಾಧುರ್ಯವನ್ನು ವ್ಯಕ್ತಗೊಳಿಸುತ್ತವೆ! ಅತ್ಯಂತ ಕವಿಪೂರ್ಣ ಶರೀರಿಕ ಚಲನೆಯು ದ ಸಂಗೀತ ಮನೋಹರವಾದ ವಾತು ದ ಅವರು ಉಜ್ವಲ ವಾಗ್ಮಿಯ ತ ಮಾತುಗಾರರಾಗಿದ್ದಾರೆ!

ಭವನದಲ್ಲಿ

ಶಾಂತಿನಿಕೇತನದಲ್ಲಿ ಅವರು ಭಾರತದ ಹಿಂದಿನ ರಾಜರ್ಷಿಗಳಂತೆ ನಿಜವಾಗಿಯೂ ರಾಜಗೌರವದಿಂದ ಇದ್ದಾರೆ ಅವರು ಕವಿಯಾಗಿ ಮಹಾನ ಭಾವದರ್ಶಿ, ತನ್ನ ನವ್ಯಕಲ್ಪನೆಗಳಿಂದ ಮಹಾಮೇಧಾವಿಗಳಾಗಿ ಇತರ ಜನತೆಯ ಸಮಸ್ತ ಭಾವನೆಗಳನ್ನೂ ಸೂರೆಗೊಂಡವರಾಗಿ ಇಡೀ ಜಗತ್ತೇ ಪೂಜಿಸುವ ಸಾರ್ವಭೌಮರಾಗಿರುತ್ತಾರೆ! ಅವರ ಸರಳವಾದ ಹೃದಯವೇ ನಮ್ಮಂತಿರುವ ಮಾತುಗಳ ಲೋಕದ ಸಂಪೂರ್ಣ ವಿಚಾರಗಳನ್ನು ನಮಗೆ ಕಲಿಸುತ್ತವೆ ಅವರು ತಮ್ಮ ಮಹತ್ತ್ವಗ್ರಂಥವಾದ ಗೀತಾಂಜಲಿಯ ಮೂಲಕ ಜಗತ್ತನ್ನು ಪರಿಗಣಿಸಿದ್ದಾರೆ

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಕೈದಿಗಳು ಬಿಡುಗಡೆಗಾಗಿ ಉಪವಾಸಮಾಡಬಾರದು

ಬಲಾತ್ಕಾರದಿಂದ ಉಣ್ಣಿಸುವುದು ಅಮಾನುಷ

ವರ್ಕಿಂಗ್ ಕಮಿಟಿಯ ಕರ್ತವ್ಯದ ಕುರಿತು ಗಾಂಧಿಜಿಯವರ ಹೇಳಿಕೆ

ತಮ್ಮ ಬಂಧನದ ಬಿಡುಗಡೆಗಾಗಿ, ಸೆರೆಯಾಳುಗಳು ಉಪವಾಸ ವ್ರತವನ್ನು ಕೈಕೊಳ್ಳುವುದನ್ನು ಖಂಡಿಸುತ್ತ, ಮಾತ್ರವಲ್ಲದೆ ಸರಕಾರವಾದರೂ ಬಲಾತ್ಕಾರದಿಂದ ಸೆರೆಯಾಳುಗಳಿಗೆ ತಿನ್ನಿಸುವ ಅಮಾನುಷ ಕಾರ್ಯವನ್ನು ನಿಷೇಧಿಸುತ್ತ ಗಾಂಧಿಜಿಯವರು 'ಹರಿಜನ'ದಲ್ಲಿ ಇದರ ಕುರಿತು ಕಾಂಗ್ರೆಸು ವರ್ಕಿಂಗ್ ಕಮಿಟಿಯು ಒಂದು ನಿಯಮವನ್ನು ರಚಿಸಬೇಕಾಗಿ ಬರೆಯುತ್ತಾರೆ.

"ಉಪವಾಸವ್ರತವೆಂಬುದು ಈಗ ಒಂದು ಸಾಂಕ್ರಾಮಿಕವಾದ ಮಾರಿರೋಗವಾಗಿ ಪರಿಣಮಿಸಿದೆ; ಚಿಲ್ಲರೆ ನೆವನಗಳಿಗಾಗಿ ಕೆಲ ಜನರು ಉಪವಾಸವನ್ನು ಆರಂಭಿಸಿಬಿಡುತ್ತಾರೆ, ಸೆರೆಯಿಂದ ತಮ್ಮನ್ನು ಬಿಡುಗಡೆ ಮಾಡಬೇಕೆಂಬ ಶರ್ತದಿಂದ ಸೆರೆಯಲ್ಲಿರುವವರು ಉಪವಾಸ ವ್ರತವನ್ನು ಮಾಡುವ ಶಾಠ್ಯತೆಯನ್ನು ನಿಲ್ಲಿಸುವ ಮಟ್ಟಿಗಾದರೂ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಒಂದು ನಿಯಮವನ್ನು ಮಾಡುವುದು ಅವಶ್ಯವಿದೆ!

ಮಾನವ ಶರೀರದ ಮೇಲೆ ಬಲಾತ್ಕಾರ

"ವರ್ಕಿಂಗ್ ಕಮಿಟಿಯು ಹಾಗೆ ಮಾಡುವುದು ಮಾತ್ರವಲ್ಲದೆ, ಸೆರೆಮನೆಗಳಲ್ಲಿ ಉಪವಾಸವನ್ನು ಕೈಕೊಂಡವರಿಗೆ ಬಲಾತ್ಕಾರದಿಂದ ಉಣ್ಣಿಸುವ ಸರಕಾರದ ಅಮಾನುಷಪಾಶವಿಕ ಕ್ರಿಯೆಯನ್ನೂ ತೀವ್ರವಾಗಿ ಖಂಡಿಸಬೇಕು. ಮಾನವಶರೀರವೆಂಬ ಪವಿತ್ರ ವಸ್ತುವಿನ ಮೇಲೆ, ಅದು ಸೆರೆಯಾಳುವಿನದ್ದೇ ಇರಲಿ, ಹೀಗೆ ಬಲಾತ್ಕಾರವನ್ನು ಉಪಯೋಗಿಸಲು ಯಾರಿಗೂ ಅಧಿಕಾರವಿರುವುದಿಲ್ಲ. ನಿಜವಾಗಿಯೂ ಸರಕಾರಕ್ಕೆ ಸೆರೆಯಾಳುಗಳ ಶರೀರದ ವಿಷಯದಲ್ಲಿ ಸ್ವಾಧೀನತೆಯು ಕೆಲಮಟ್ಟಿಗೆ ಇದೆ. ಆದರೆ ಅವರ ಆತ್ಮವನ್ನು ಕೊಲ್ಲುವಂತಹ ಸ್ವಾತಂತ್ರ್ಯವು ಅವರಿಗೆ ಇಲ್ಲ. ಅವರಿಗೆ ಇರುವ ಸ್ವಾಧೀನತೆಯು ಶಾಸನಮೂಲಕ ವ್ಯಕ್ತವಾಗಿ ತಿಳಿಸಿದೆ. ಒಬ್ಬ ಸೆರೆಯಾಳುವು ಉಪವಾಸದಿಂದ ಸಾಯಲು ಬಯಸುವುದಿದ್ದರೆ, ಹಾಗೆ ಮಾಡಲು ಅವನಿಗೆ ಸಂಪೂರ್ಣ ಸ್ವಾತಂತ್ರ್ಯವುಂಟು, ಅವನನ್ನು ಹಾಗೆ ಮಾಡಲು ಬಿಡಬೇಕು.

ಇಂದು ಉಪವಾಸದ ಶಕ್ತಿ ಮತ್ತು ಘನತೆಗಳು ಉಪವಾಸಿಯನ್ನು ಬಲಾತ್ಕಾರದಿಂದ ಉಣ್ಣಿಸುವುದರಿಂದ ಹಾಳಾಗುತ್ತವೆ, ಬಾಯಿಯಿಂದಾಗಲಿ, ಮೂಗಿನಿಂದಾಗಲಿ, ಬಲತ್ಕಾರದಿಂದಾಗಲಿ, ಸಾಕಾದಷ್ಟು ಆಹಾರವನ್ನು ಉಣ್ಣಿಸುವಂತೆ ಮಾಡುವುದರಿಂದ ಉಪವಾಸವನ್ನು ಒಂದು ಪ್ರಹಸನವನ್ನಾಗಿ ಮಾಡಿದಂತಾಗುವುದು ಮೂಗಿನ ಮೂಲಕ ಬಲಾತ್ಕಾರದಿಂದ ಉಣ್ಣಿಸುವುದರ ವಿಷಯ ಮನಸ್ಸು ಪ್ರತಿರೋಧ ಮಾಡುತ್ತದೆಯೆಂಬುದು ನಿಜ ಆದರೆ ಕೆಲ ದಿನ ಹೀಗೆ ಮಾಡುವುದರಿಂದ ಮನಸ್ಸು ನಿರೋಧಿಸುವ ಶಕ್ತಿಯನ್ನು ಕಳಕೊಳ್ಳುತ್ತದೆ ಕೈದಿಯು ಎಷ್ಟು ನಿರೋಧಮಾಡಿದರೆ ಆ ಕ್ರಮವು ಕಷ್ಟವಾಗುತ್ತದೆ. ಆದರೆ ಹಾಗೆ ನಡೆಯುವ ಸಂದರ್ಭಗಳು ಅಪರೂಪ ಎಷ್ಟು ಸಮಯದ ವರೆಗಾದರೂ ಹಾಗೆ ನಿರೋಧಮಾಡಿಕೊಂಡಿರುವುದು ಸಾಧ್ಯವಿಲ್ಲ ಒಬ್ಬ ನಿಶ್ಚಯದ ನಿರೋಧಕನು ಹಾಗೆಮಾಡುವ ಪ್ರಥಮ ಬಲತ್ಕಾರದ ಸಮಯದಲ್ಲಿಯೇ ಮರಣ ಹೊಂದಬಹುದು. ಆದರೆ ಆ ರೀತಿ ನಿರೋಧಿಸಲು, ಅಷ್ಟೊಂದು ಆತ್ಮಶಕ್ತಿ ಮತ್ತು ಸಾವಿನ ಕುರಿತು ನಿರ್ಭಯತೆಯು ಇರಬೇಕು.

ಹೇಗಿದ್ದರೂ ನನ್ನ ಅಭಿಪ್ರಾಯದಂತೆ ಹೀಗೆ ಬಲಾತ್ಕಾರದಿಂದ ಉಣ್ಣಿಸುವುದು ಕೇವಲ ಅಮಾನುಷ ಹಿಂಸೆಯಾದುದರಿಂದ ಅದನ್ನು ಸರಕಾರವು ನಿಲ್ಲಿಸಬೇಕು. ಕೆಲವು ಉಪವಾಸಿಗಳು ತಮ್ಮ ಮನಃಪೂರ್ವಕವಲ್ಲದ ಪ್ರದರ್ಶನ ಮಾತ್ರದ ಉಪವಾಸದಲ್ಲಿ ಹೀಗೆ ಬಲಾತ್ಕಾರವಾಗಿ ಉಣ್ಣಿಸುವ ಕ್ರಮವನ್ನು ಸ್ವಾಗತಿಸುವವರಿರಬಹುದೆಂದು ನನಗೆ ಗೊತ್ತಿದೆ. ಜೈಲಿನ ಅಧಿಕಾರಿಗಳು ಕೆಲಸಮಯ ನನ್ನೊಡನೆ ಹಾಗಿದ್ದ ಉಪವಾಸಿಗಳು ಬಲಾತ್ಕಾರದಿಂದ ಉಣ್ಣಿಸುವುದನ್ನು ನಿಲ್ಲಿಸಿದರೆ ಅವರನ್ನು ದೂಷಿಸುವುದಾಗಿ ಹೇಳಿದ್ದಾರೆ ಇಂದಿನ ಕಾನೂನಿನಂತೆ ಜೈಲಿನ ಅಧಿಕಾರಿಗಳು ಇತರ ಉಪಾಯಗಳು ಮುಗಿದಾಗ, ಬಲಾತ್ಕಾರದಿಂದ ಉಣ್ಣಿಸಬೇಕಾಗಿ ಇದೆ. ಆದರೆ ಈ ನಿಯಮವನ್ನು ತಿದ್ದುಪಡಿ ಮಾಡಬೇಕು.

ಗೌಡ ಸಾರಸ್ವತ ಸಮಾಜದ ೧೯೩೯ನೇ ಇಸವಿಯ ವಿಶ್ವವಿದ್ಯಾಲಯ ಪದವೀಧರರಿಗೆ ಸಂಯುಕ್ತ ಗೌಡಸಾರಸ್ವತ ಸಭೆಯವರು ಮದ್ರಾಸಿನಲ್ಲಿ ಕೊಟ್ಟ ಸತ್ಕಾರ ಕೂಟ

ವರ್ಕಿಂಗ್ ಕಮಿಟಿಯ ಕರ್ತವ್ಯ

"ಶಿಸ್ತಿನ ಉಲ್ಲಂಘನೆ ಮಾಡಿಬಿಟ್ಟ ಸಾರ್ವಜನಿಕನು ಅಥವಾ ಕೈದಿಯು ಉಪವಾಸ ಮಾಡುವ ಕುರಿತು ವರ್ಕಿಂಗ್ ಕಮಿಟಿಯು ನಿಯಮವನ್ನು ಮಂಜೂರು ಮಾಡಬೇಕೆಂಬ ವಿಷಯವು ವಿಚಾರಣೀಯವಾಗಿದೆ ಸಾಮಾಜಿಕಹಿತವನ್ನು ಹಾಳುಮಾಡದೆ ಇದ್ದರೆ, ಒಬ್ಬನು ತನ್ನ ವೈಯುಕ್ತಿಕವಾದ ಸ್ವಾತಂತ್ರ್ಯದಂತೆ ನಡೆಯಲು ನಾನು ಅಡ್ಡಿ ಮಾಡಲಾರೆ ಈಗ ಉಪವಾಸವೆಂಬುದು ಅಷ್ಟರಮಟ್ಟಿಗೆ ಕೆಟ್ಟ ಕೆಲಸವಾಗಿ, ಜನತೆಗೆ ಉಪದ್ರವಕಾರಿಯಾಗಿ ಪರಿಣಮಿಸಿರುವುದರಿಂದ, ವರ್ಕಿಂಗ್ ಕಮಿಟಿಯು ಇನ್ನು ಮುಂದೆ ಅದರಿಂದ ಭಯಂಕರ ಅತ್ಯಾಚಾರಗಳು ಆಗದಂತೆ ತಡೆಯುವ ಕಾರ್ಯಕ್ರಮವನ್ನು ತೆಕ್ಕೊಳ್ಳುವುದು ಉತ್ತಮವಾಗಿದೆ. ವರ್ಕಿಂಗ್ ಕಮಿಟಿಯು ನಿರ್ಣಯವೆಂದರೆ, ಅದು ಜನತೆಯ ಬಹುಮಂದಿಯ ಅಧಿಕಾರವಾಣಿಯಾಗಿದೆ ಇಂತಹ ಅಸಂಬದ್ಧ ಕಾರ್ಯಗಳನ್ನು ತಡೆಯಲು ಅದು ಸಮರ್ಥವಾಗುವುದಿಲ್ಲ"

ಸಿಲೋನಿಗೆ ಹೋಗುವ ಕೆಲಸಗಾರರ ಮೇಲೆ ಭಾರತ ಸರಕಾರದ ನಿರ್ಬಂಧ!

ಭಾರತ ಸರಕಾರವು ಸಿಲೋನಿಗೆ ಹೋಗುವ ಕೆಲಸಗಾರರ ಮೇಲೆ ನಿರ್ಬಂಧ ಮಾಡಿದೆ. ಇದು ಆಗಸ್ಟ್ ಒಂದರಿಂದ ಜಾರಿಗೆ ಬಂದಿರುತ್ತದೆ ಇದರಿಂದ ಸಿಲೋನಿನ ರಬ್ಬರ್ ಮತ್ತು ಟೀ ವ್ಯಾಪಾರ ಉದ್ಯೋಗಗಳಿಗೆ ಬಹಳ ಹಾನಿಯೊದಗಿದೆಯೆಂದು ತಿಳಿದಿದೆ.

ಸಿಲೋನಿನ ಮಂತ್ರಿಮಂಡಳವು ಈ ನಿರ್ಬಂಧದಿಂದ ಯಾವ ರೀತಿಯಿಂದಲಾದರೂ ಸಿಲೋನಿನ ಉದ್ಯೋಗಕ್ಕೆ ತೊಂದರೆ ಬಂದಿಲ್ಲವೆಂದು ಹೇಳುವುದಿದ್ದರೂ, ಇತ್ತೀಚೆಗೆ ಮಂತ್ರಿಮಂಡಳ ಮತ್ತು ಇತರ ಪ್ರಮುಖರು ಸೇರಿದ ಸಮ್ಮೇಳನವೊಂದರಲ್ಲಿ ಇದರಿಂದ ಬಹಳ ಆಘಾತವಾಗಿದೆಯೆಂಬಂಶವು ವ್ಯಕ್ತವಾಯಿತು.

ಹಿಂದೂದೇಶದ ಕೆಲಸಗಾರರಿಂದ ಕೆಲಸ ಮಾಡಿಸಿದವರು ಅಭಿಪ್ರಾಯಪಡುವಂತೆ ಸಿಲೋನಿನ ಔದ್ಯೋಗಿಕ ಅಭಿವೃದ್ಧಿಯಲ್ಲಿ ಹಿಂದೀಯ ಕೆಲಸಗಾರರ ಪಾಲು ಬಹಳವು ತುಂಬಾ ಇದೆಯೆಂದು ತಿಳಿಯುತ್ತದೆ

ಸಮ್ಮೇಳನದಲ್ಲಿ ಸೇರಿದ ಹಲವು ಮಂದಿಯು ಸಿಲೋನ್ ಮತ್ತು ಭಾರತ ಸರಕಾರಗಳೊಳಗೆ ಒಂದು ಒಳ್ಳೆಯ ಇತ್ಯರ್ಥವಾಗಲು, ಸಿಲೋನ್ ಸರಕಾರವು ಒಪ್ಪದೆ ಇರುವ ನಿಮಿತ್ತ ಹಿಂದೀ ಸರಕಾರವು ಕೂಲಿಗಾರರ ಮೇಲೆ ಹಾಕಿದ ನಿರ್ಬಂಧದ ಪರಿಣಾಮವು ಸಿಲೋನಿನ ಉದ್ಯೋಗ ಕೈಗಾರಿಕೆಯಲ್ಲಿ ಬಹಳವಾಗಿದೆಯೆಂದು ಹೇಳಿದರು

ಸಿಲೋನಿನ ಸರಕಾರವು ಈ ಪರಿಣಾಮದಿಂದ ಸಿಲೋನಿಗೆ ಕೆಡುಕಾಗಿದೆಯೆಂದು ಈಗ ಒಪ್ಪುವುದಿಲ್ಲವಾದರೂ, ಬೇಗನೇ ಅದರಿಂದ ಎಚ್ಚರಗೊಂಡು ಭಾರತಸರಕಾರದೊಡನೆ ಒಪ್ಪಂದಕ್ಕೆ ಬಾರದೆ ಇರಲಾರದು

"ಸಿಲೋನಿನ ತೋಟಗಾರರು ಮತ್ತು ಹಿಂದೀಯರನ್ನು ಕೆಲಸದಲ್ಲಿ ಇಟ್ಟುಕೊಂಡವರು, ಸಿಲೋನು ಸರಕಾರಕ್ಕೆ ಒಂದು ಮನವಿಯನ್ನು ಕಳುಹಿಸಿ, ಕೂಡಲೇ ಭಾರತ ಸರಕಾರದೊಡನೆ ಒಪ್ಪಂದ ಮಾಡಬೇಕಾಗಿ ಕೇಳಿಕೊಂಡಿರುವರು

ಸಿಲೋನಿನ ಭಾರತೀಯ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಚೆಟ್ಟಿಯಾರರು ಈ ಪ್ರತಿಬಂಧಕ್ಕಾಗಿ ಭಾರತ ಸರಕಾರವನ್ನು ಅಭಿನಂದಿಸುತ್ತಾರೆ

ದುರ್ಗಾಂಗ ಚಳವಳ ಕೈದಿಗಳ ಬಿಡುಗಡೆ!

ದುರ್ಗಾಂಗ ಚಳವಳದ ನಿಮಿತ್ತ ಬಂಧಿತರಾದ, ಹಲವು ಮಂದಿ ಸತ್ಯಾಗ್ರಹಿಗಳನ್ನು ಸೆರೆಯಿಂದ ಬಿಡುಗಡೆ ಮಾಡಲಾಗಿದೆ. ಅವರ ಜುಲ್ಮಾನೆಯ ಹಣವು ಹಿಂದಕ್ಕೆ ಕೊಡಲಾಗಿದೆ. ಇದರ ಸಂಬಂಧವಾಗಿ ಬಂಧಿತರಾದ ವಿದ್ಯಾರ್ಥಿಗಳ ವಿಷಯ ವಿದ್ಯಾಂಗದ ಡೈರೆಕ್ಟರ ತೀರ್ಮಾನ ಕಾಯ್ದಿದೆ.

ಕಾಶ್ಮೀರ್ ಸಂಸ್ಥಾನ ಕಾಂಗ್ರೆಸಿನವರು ಸತ್ಯಾಗ್ರಹವನ್ನು ನಿಲ್ಲಿಸಿದುದರ ಪರಿಣಾಮವಾಗಿ ಸರಕಾರವು ಈ ಆಜ್ಞೆಯಿತ್ತಿದೆ.

ಮುರಿದ ದೇಗುಲವನ್ನು ಕಟ್ಟಲು ಸಿಂಧದ ಹಿಂದುಗಳ ಆಂದೋಲನ

ಸಿಂಧದ ಪ್ರಾಚೀನ ದೇವಾಲಯವಾದ ಹನೂಮಾನ್ ದೇವಾಲಯವನ್ನು ಮುರಿದ ನಿಮಿತ್ತ, ಅದನ್ನು ತಿರಿಗಿ ಅದೇ ಸ್ಥಳದಲ್ಲಿ ಕಟ್ಟಲು, ಅಲ್ಲಿನ ಹಿಂದುಗಳ ಶಿಷ್ಟಮಂಡಳವೊಂದು ಸಿಂಧದ ಪ್ರಧಾನ ಮಂತ್ರಿಯು ಅಲ್ಲಾಭಕ್ಷರನ್ನು ಕಂಡು ಸಂದರ್ಶಿಸಿತು

ಪ್ರಧಾನ ಮಂತ್ರಿಗಳು ಹಾಗೆ ಮಾಡಲು ಸಾಧ್ಯವಿಲ್ಲವೆಂದು ಹೇಳಿರುವರು.

ಈ ಕುರಿತು ಕಾರ್ಯಕ್ರಮವನ್ನು ಕೈಕೊಳ್ಳಲು ಹಿಂದು ಮತದವರ ಸಮಿತಿಯೊಂದು ಸೇರಿ, ಸತ್ಯಾಗ್ರಹವನ್ನು ಹೂಡಬೇಕೆಂದು ಸೂಚನೆಯನ್ನು ತಂದು, ಅದರ ಇತ್ಯರ್ಥವು ಮುಂದುವರಿಸಲಾಯಿತು

DIAMONDS! DIAMONDS!
BEST BRILLIANCY!
K. R. K. SHET,
MANGALORE
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!
ವಜ್ರಗಳು!
ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ
ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು-
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಪಂಪನಕಟ್ಟೆಯಲ್ಲಿ ತೆರೆಯಲಾಗಿದೆ.
ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

ಪಂಡಿತ ಡಿ. ಗೋಪಾಲಾಚಾರ್ಲುರವರ
ಬಾಲಭಾಸ್ಕರ
ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು
ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು
ತಯಾರಿಸುವವರು:
ಆಯುರ್ವೇದಾಶ್ರಮ :: :: ಮದರಾಸು.

ಸ್ಟಾಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ತೆರೆಯ ಮರೆಯಲ್ಲಿ

--ಜರ್ಮನ್ ರಶ್ಯಾಗಳ ಒಪ್ಪಂದ--

ಆಶ್ಚರ್ಯದ ಘಟನೆ

ಜರ್ಮನ್ ಮತ್ತು ರಶ್ಯಾ ದೇಶಗಳು ರಾಜಕೀಯ ಒಪ್ಪಂದವನ್ನು ಖಂಡಿತ ಮಾಡಿಕೊಳ್ಳುವುದೆಂದು ಜರ್ಮನಿಯಿಂದ ಬಂದ ಆಧಾರದ ಪೂರ್ವಕವಾದ ಸುದ್ದಿಯು ಅಖಿಲ ಜಗತ್ತನ್ನು ದಿಗ್ಭ್ರಮೆಗೊಳಿಸಿದೆ. ಜರ್ಮನಿಯ ವಿದೇಶಾಂಗ ಮಂತ್ರಿಯಾದ ಹೆರ್ ವಾನ್‌ರಾಬಿನ್‌ಟ್ರಾಪನು, ಮೋಸ್ಕೊ (ರಶ್ಯಾ)ಕ್ಕೆ ತೆರಳಲಿರುವನು. ಅಲ್ಲಿ ಈ ಉಭಯ ರಾಷ್ಟ್ರಗಳ ಒಪ್ಪಂದದ ಕರಾರಿಗೆ ಸಹಿ ಬೀಳುವುದು

ತ್ರಿರಾಷ್ಟ್ರಗಳ ಒಪ್ಪಂದವು ಭಗ್ನವಾಯಿತು

ಜರ್ಮನಿಯೊಡನೆ ರಶ್ಯವು ಒಪ್ಪಂದ ಮಾಡುವ ಪಕ್ಷದಲ್ಲಿ, ತ್ರಿರಾಷ್ಟ್ರಗಳಾದ ರಶ್ಯಾ ಫ್ರಾನ್ಸು ಬ್ರಿಟನುಗಳ ಒಪ್ಪಂದದ ಮಾತುಕತೆಯು ಮುರಿದಂತೆಯೇ ಆಯಿತು. ಫ್ರಾನ್ಸು ಮತ್ತು ಬ್ರಿಟನುಗಳು ರಶ್ಯವನ್ನು ತಮ್ಮ ಸ್ವಾಧೀನ ಕೈಳಿದು, ಅದರ ಅಸಂಖ್ಯಾತ ಸೈನ್ಯದಳದಿಂದ ಜರ್ಮನಿಯನ್ನು ಬಗ್ಗು ಒಡೆಯುವ ಹಂಚಿಕೆಯನ್ನು ಮಾಡಿತ್ತು. ಆದರೆ, ರಶ್ಯವು ಹೇಳಿದ ಸೂಚನೆಗಳಿಗೆ, ಬ್ರಿಟನ ಒಪ್ಪದೆ, ಸವ ಯವನ್ನು ಮುಂದುವರಿಸುತ್ತಾ ಹೋದ ಕಾರಣ, ರಶ್ಯಾವು ಬ್ರಿಟನಿನ ಅಂತರ್ಯವನ್ನು ತಿಳಿದ, ಹೀಗೆ ಆತ್ಮರಕ್ಷಣೆಯ ಸಾಗರ ಕಟ್ಟಿದ ರಾಜಿಯನ್ನು ಮಾಡಿಕೊಂಡದ್ದು, ರಶ್ಯಾದ ಘುಟ್ಟಿಗೆ ವಿವೇಕತನದ್ದೇ ಆಗಿದೆ. ಏಕೆಂದರೆ ನವಿಲಿ ಚೆಂಬರ್ಲೆನರಿಗೆ, ರಶ್ಯಾವನ್ನು ಸರ್ವಾಧಿಕಾರಿಗಳ ಯುದ್ಧದಲ್ಲಿ, ಒಂದು ಆಟದ ವಸ್ತುವಾಗಿ ಉಪಯೋಗಿಸಿ, ತಮ್ಮ ಕಾರ್ಯಸಾಧನೆ ಮಾಡಿಬಿಡಬೇಕೆಂದು ಮನಸ್ಸಿತ್ತಲ್ಲದೆ, ಸರ್ವಥಾ ಸರ್ವಾಧಿಕಾರಿಗಳನ್ನು ಎದುರಿಸಬೇಕೆಂಬ ಆತ್ಮಸಾಕ್ಷಿಯಿದ್ದಂತೆ ತೋರಿಬರಲಿಲ್ಲ. ಚೆಂಬರ್ಲೆನರ ಕೊಂಕು ನೀತಿಯನ್ನು ಮನಗಂಡ ರಶ್ಯವು ಇಂದು ಜರ್ಮನಿಯೊಡನೆ ಒಪ್ಪಂದ ಮಾಡಿಕೊಂಡು, ಬ್ರಿಟನು ಫ್ರಾನ್ಸುಗಳ ಬಲೆಯಿಂದ ತಪ್ಪಿಸಿ ತಟಸ್ಥವಾಗಿದೆ!

ಜರ್ಮನಿ-ರಶ್ಯಗಳ ಸಂಬಂಧ

ರಶ್ಯ ದೇಶದ ವ್ಯಾಪಾರದ ಒಪ್ಪಂದವು ಈಗ ತಾನೇ ಆಗಿದೆ. ಅನೇಕ ಸಮಯಗಳಿಂದ ಈ ಉಭಯ ರಾಷ್ಟ್ರಗಳು ಅನ್ಯೋನ್ಯ ವೈರವನ್ನಿಟ್ಟಿದ್ದು, ಈಗ ತಿರಿಗಿ ಸ್ನೇಹ ಬಂಧದಿಂದ ಒಂದಾಗಿವೆ. ಪ್ರಾಕೃತಿಕ ಪರಿಸ್ಥಿತಿಯಿಂದಲೂ, ರಾಜಕೀಯ ಕುಶಲತೆಯಿಂದಲೂ, ಈ ರಾಷ್ಟ್ರಗಳ ಸಂಬಂಧವು ಸಾಧ್ಯವೂ ಶ್ರೇಯಸ್ಕರವೂ ಆಗಿದೆ. ರಶ್ಯಾ ಮತ್ತು ಜರ್ಮನಿಗಳು ಅನ್ಯೋನ್ಯ ಸಮೀಪದ ರಾಷ್ಟ್ರಗಳು ಮಾತ್ರವಲ್ಲದೆ ವ್ಯಾಪಾರ ವಹಿವಾಟುಗಳಿಗಾದರೂ, ಈ ಉಭಯ ರಾಷ್ಟ್ರಗಳು ಅನ್ಯೋನ್ಯ ಒಳ್ಳೆಯ ರೀತಿಯಿಂದಿರುವುದರಿಂದ ಮಾತ್ರ ಆ ರಾಷ್ಟ್ರಗಳೆರಡಕ್ಕೂ ಅಭಿವೃದ್ಧಿಯಾಗಲು ಎಡೆಯಿದೆ. ರಶ್ಯಾಕ್ಕೆ ಬ್ರಿಟನು ಫ್ರಾನ್ಸುಗಳು ಬಹುದೂರದ ಸಂಬಂಧವುಳ್ಳವುಗಳು. ಇದು ವರೆಗೆ, ಬ್ರಿಟನು ಫ್ರಾನ್ಸುಗಳೊಡನೆ ಕಲಹಕಂಟಕರನ್ನು ಇದಿರಿಸುವಸಲುವಾಗಿ, ಒಂದ ರೀತಿಯ ಧರ್ಮದ ದೃಷ್ಟಿಯಿಂದ ಅವುಗಳೊಳಗೆ ತ್ರಿರಾಷ್ಟ್ರ ಸಂಧಿಯ ಮಾತುಕತೆ ಒಂದಿತ್ತು. ಆದರೆ ಚೆಂಬರ್ಲೇನರು ತನ್ನ ಕುಟಿಲ ತಂತ್ರವನ್ನು ಉಪಯೋಗಿಸಿ, ಜರ್ಮನಿಯ ಎದುರಿಗೆ ರಶ್ಯಾದ ಸೈನ್ಯವನ್ನು ಒಡ್ಡಲು ಮಾಡಿದ ಹಂಚಿಕೆ, ಹಿಂದೆ ಮ್ಯುನಿಕ್ ಒಪ್ಪಂದದಲ್ಲಿ ಮಾಡಿದ ವಂಚನೆ, ನಿಜವಾಗಿ ಶಾಂತಿ ಸ್ಥಾಪನೆಯ ಆತ್ಮಸಾಕ್ಷಿಯಿಲ್ಲದಿರುವಂತೆ ರಶ್ಯದ ನ್ಯಾಯಸೂಚನೆಗಳಾದ ಬಾಲ್ಟಿಕ್ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಯೇ ಮೊದಲಾದವುಗಳಿಗೆ ಅನಿಶ್ಚಿತವಾದ ಉತ್ತರವಿತ್ತು, ಸಮಯ ದೂಡುವುದರಿಂದ ಎಚ್ಚೆತ್ತ ರಶ್ಯವು, ಫ್ರಾನ್ಸು ಬ್ರಿಟನುಗಳು ಅವರ ಪಾಡಿಗೇ ಬಿಟ್ಟು, ತಾನು ಕಾರ್ಯಚತುರತೆಯನ್ನು ವ್ಯವಹಾರ ನೀತಿಯನ್ನು ಉಪಯೋಗಿಸಿಕೊಂಡಿದೆ

ಜರ್ಮನಿಯು ಉನ್ಮತ್ತವಾಗಿದೆ!

ಬೇಗನೆ ಆಗಲಿರುವ ಈ ರಶ್ಯಾ ಜರ್ಮನಿ ಒಪ್ಪಂದ ವಾರ್ತೆಯನ್ನು ವರ್ತಮಾನ ಪತ್ರಿಕೆಗಳಲ್ಲಿ ಓದಿ ಜರ್ಮನಿಯ ಜನರು ಅತುಲ ಆನಂದಗೊಂಡಿದ್ದಾರೆ! ನಿಜವಾಗಿಯೂ ಜಯವು ತಮ್ಮ ಪಾಲಿಗೆ ದೊರಕಿತೆಂದೇ ಅವರು ಖಂಡಿತ ಮಾಡಿದ್ದಾರೆ. ಜರ್ಮನಿಯ ಪತ್ರಿಕೆಗಳು ವಿಶೇಷ ಸಂಚಿಕೆಗಳನ್ನೇ ಹೊರಡಿಸಿವೆ. ನಿಜವಾಗಿಯೂ ಯೂರೋಪಿನ ಪರಿಸ್ಥಿತಿಯು ಇದರಿಂದ ಸಂಪೂರ್ಣ ತಲೆ ಕೆಳಗಾಗಿದೆ. ಹಠಾತ್ತಾಗಿ ಇದು ಒಂದು ಅತ್ಯಂತ ಪ್ರಾಮುಖ್ಯ ವಿಷಯವಾಗಿ ಯೂರೋಪಿನ ರಾಜನೀತಿಯಲ್ಲಿ ಕ್ರಾಂತಿಯಾಗಿದೆ! ಹಲವು ಕಾಲದಿಂದ, ಗುಪ್ತವಾಗಿ, ಅಂತರಂಗದಲ್ಲಿಯೇ ನಡೆಯುತ್ತಿದ್ದ ಈ ವಿಷಯವು ಒಮ್ಮೆ ಆಕಸ್ಮಿಕ ಭೂಕಂಪದಂತೆ ಜನರನ್ನು ದಿಗಿಲುಗೊಳಿಸಿದೆ

ಮುಂದಿನ ಪರಿಣಾಮವೇನು?

ರಶ್ಯಾ ಜರ್ಮನಿಗಳ ಒಪ್ಪಂದದ ಪರಿಣಾಮವೇನಾಗುವುದೆಂಬುದರ ವಿಷಯವಾಗಿ, ಇಂದು ಭವಿಷ್ಯ ಹೇಳುವುದು ಅಸಾಧ್ಯವಾಗಿದೆ. ಅದರಲ್ಲಿಯೂ, ದಿನದಿಂದ ದಿನಕ್ಕೆ, ನಿಮಿಷ ನಿಮಿಷಕ್ಕೆ ಅದ್ಭುತ ಮಾರ್ಪಾಟಾಗುತ್ತಿರುವ ಯೂರೋಪಿನ ರಾಜನೀತಿಯ ವಿಷಯವಂತೂ ಏನೊಂದೂ ಹೇಳಲು ಬರುವಂತಿಲ್ಲ. ಆದರೆ, ಇದರ ತೀವ್ರ ಪರಿಣಾಮವೊಂದು ಜರ್ಮನಿಯ ಹೆಗ್ಗಳಿಕೆ. ರಶ್ಯವು ತಟಸ್ಥವಾಗಿದೆಯೆಂದೂ, ಕನ್ನ ಬೆಂಬಲಕ್ಕಿದೆಯೆಂದೂ, ಆ ಮೇಲೆ ದೂರದ ಬ್ರಿಟನು ಫ್ರಾನ್ಸುಗಳು ರಶ್ಯಾದ ನೆರವಿಲ್ಲದೆ ಜರ್ಮನಿಯನ್ನು ಸಮೀಪಿಸುವುದು ಸಾಧ್ಯವಿಲ್ಲವೆಂದೂ, ಆದುದರಿಂದ ಇಂದಿನ ಬ್ರಿಟನು ಫ್ರಾನ್ಸುಗಳ ಶಾಂತಿ ಸಂಘಟನೆಯ ಕಾರ್ಯವನ್ನು ತಾವು ಧ್ವಂಸಮಾಡಿ ಬಿಡಬಲ್ಲೆವೆಂದೂ ಜರ್ಮನಿಯ ನಾಜಿಗಳು ಜಗತ್ತಿನೆದುರು ಎದೆತಟ್ಟಿ ಸಾರುವರು! ಹೇಗಿದ್ದರೂ ಇದರ ಪೂರ್ಣ ಫಲವನ್ನು, ನಿಜವಾದ ಒಪ್ಪಂದದ ಶರತಗಳ ಮೇಲೆ ಆಧರಿಸಿ ಹೇಳಬಹುದು. ಅಂತೂ ಜರ್ಮನಿಯ ಗಡಿಗೆ ರಶ್ಯಾದ ತೊಂದರೆ ಬರಲಾರದೆಂಬ ಒಪ್ಪಂದವಾದಲ್ಲಿ ತ್ರಿರಾಷ್ಟ್ರಗಳ ಒಪ್ಪಂದವು ಕನಸಿನ ಗಂಟಾಯಿತು! ಹೇಗೂ ಮುಂದಕ್ಕೆ ಸರ್ವಾಧಿಕಾರಿಗಳನ್ನೆದುರಿಸುವ ಸಂಗದಲ್ಲಿ ರಶ್ಯವು ಇಲ್ಲದಂತೆಯೂ, ರಶ್ಯಾದ ಸ್ವಾತಂತ್ರ್ಯಕ್ಕೆ ಯಾವ ತೊಂದರೆ ತಗಲದಂತೆಯೂ ಇಂದು ಅದು ಮಾಡಿಕೊಂಡಿದೆ!

ಬ್ರಿಟನು-ಫ್ರಾನ್ಸುಗಳು ಬೆದರಲಿಲ್ಲವಂತೆ!

ಸಹಜವಾಗಿಯೂ ಈ ವಾರ್ತೆಯು ಯಾರಿಗಾದರೂ ಆಶ್ಚರ್ಯವನ್ನು ಹುಟ್ಟಿಸುವಂತೆ, ಬ್ರಿಟನ-ಫ್ರಾನ್ಸು ಪೋಲೆಂಡುಗಳಲ್ಲಿ ಆಶ್ಚರ್ಯವೇನೋ ಆಗಿದೆ. ಆದರೆ ಇದರಿಂದ ಬ್ರಿಟನು-ಫ್ರಾನ್ಸುಗಳು ಬೆದರಲಿಲ್ಲವೆಂದೂ, ಹಿಂದಿನ ತಮ್ಮ ಪ್ರತಿಜ್ಞೆಯಂತೆ, ಡಾನ್ಜಿಗಿನ ಸ್ವಾತಂತ್ರ್ಯ ರಕ್ಷಣೆಯಲ್ಲಿ, ಪೋಲೆಂಡಿಗೆ ನೆರವಾಗುವ ನಿರ್ಧಾರವನ್ನು ಇನ್ನಷ್ಟು ಒತ್ತಿ ಸಾರಿರುವುದಾಗಿಯೂ ತಿಳಿಯುತ್ತದೆ.

ಶಾಂತಿ ಸಾಧನೆಯು ಧ್ವಂಸವಾಯಿತೇ?

ಶಾಂತಿ ಸಾಧನೆಗಾಗಿಯೂ, ಕಲಹ ಕಂಟಕರಾದ ಸರ್ವಾಧಿಕಾರಿಗಳನ್ನು ಎದುರಿಸುವ ಸಲುವಾಗಿಯೂ ಬ್ರಿಟನು ಫ್ರಾನ್ಸುಗಳ ಮುಂದಾಳುತನದಿಂದ, ಈಗ ಈ ಒಪ್ಪಂದಗಳ ವ್ಯೂಹರಚನೆಗಳು ಆಗುತ್ತಾ ಬಂದಿವೆ. ಆದರೆ ಸರ್ವಾಧಿಕಾರಿಗಳನ್ನು ತಡೆವ ಈ ಕಾರ್ಯವು ರಶ್ಯದ ಅಮಿತ ಸೇನಾಬಲದ ಸಹಾಯವಿಲ್ಲದೆ, ಮತ್ತು ಪ್ರಾಕೃತಿಕವಾಗಿ ರಶ್ಯಾದ ನೆರವಿಲ್ಲದೆ ಇತರ ಯುರೋಪ್ಯ ರಾಷ್ಟ್ರಗಳಿಗೆ ಸಾಧ್ಯವಾಗುವಂತಿಲ್ಲ. ಈ ಒಪ್ಪಂದದಿಂದ ಮುಂದಕ್ಕೆ ಈ ಶಾಂತಿ ಸಾಧನೆಯ ವ್ಯೂಹರಚನೆಯು ಧ್ವಂಸವಾಯಿತೇ ಎಂದು ವಿಚಾರಿಸುವಂತಾಗಿದೆ!

ನಿಧನ

ದಿವಂಗತ ಕೆ ಪಿ ಮಾಧವರಾವ್

ಮದ್ರಾಸಿನಲ್ಲಿ ಹಲವು ಸಮಯಗಳಿಂದ ವಕೀಲ ಉದ್ಯೋಗದಲ್ಲಿದ್ದು ಪ್ರಸಿದ್ಧರಾಗಿದ್ದ ನಮ್ಮ ಜಿಲ್ಲೆಯವರಾದ ಶ್ರೀ ಕೆ ಪಿ ಮಾಧವ ರಾಯರು ಆಕಸ್ಮಾತ್ತಾಗಿ ಹೃದ್ರೋಗದಿಂದ ತಮ್ಮ ೬೫ನೇ ವಯಸ್ಸಿನಲ್ಲಿ ಮದ್ರಾಸಿನ ತಮ್ಮ ಮನೆಯಲ್ಲಿ ನಿಧನಹೊಂದಿರುವರೆಂಬ ವಿಷಯವನ್ನು ತಿಳಿಸುವರೆ ತುಂಬಾ ವಿಷಾದಿಸುತ್ತೇವೆ

ಇವರ ಪತ್ನಿ ಇಬ್ಬರು ಮಕ್ಕಳು (ಮಾನ್ಯ ಜಸ್ಟಿಸ್ ಕೆ ಪಿ ಲಕ್ಷ್ಮಣರಾವ್ ಮತ್ತು ಡಿಪ್ಯೂಟಿ ಕಮಿಶನರಾದ ಶ್ರೀ ಕೆ ಪಿ ಜನಾರ್ಧನ್‌ರಾವ್), ಇಬ್ಬರು ಪುತ್ರಿಯರು, ಅಲ್ಲದೆ ಅನೇಕ ಬಂಧು ಮಿತ್ರರ ದುಃಖದಲ್ಲಿ ಸಹಸಂತಾಪವನ್ನು ಸೂಚಿಸುತ್ತೇವೆ

ಇವರ ನಿಧನದ ಬಗ್ಗೆ ಮದ್ರಾಸಿನ ಬಾರ್ ಎಸೋಸಿಯೇಶನಿನವರು ದುಃಖಸೂಚಕ ಠರಾವನ್ನು ಮಂಜೂರುಮಾಡಿದರು

ಪಂಡಿತ ನೆಹರುಗಳ ಸ್ಥಾನಕ್ಕೆ

ಪಂಡಿತ ನೆಹರುಗಳು ಚೈನಾಕ್ಕೆ ತೆರಳುವ ನಿಮಿತ್ತ, ಸಂಯುಕ್ತ ಪ್ರಾಂತದ ಪ್ರಾಂತಿಕ ಕಾಂಗ್ರೆಸು ಕಮಿಟಿ ಅಧ್ಯಕ್ಷ ಪೀಠವನ್ನು ಅದು ವರೆಗೆ ಆಚಾರ್ಯ ನರೇಂದ್ರದೇವರು ಅಲಂಕರಿಸುವರಂತೆ!

ಇದು ಕೇವಲ ಆರು ವಾರಗಳ ವರೆಗೆ ಮಾತ್ರ!

ಚಿಯಾಂಗರ ಭೇಟಿ!

ಚೈನಕ್ಕೆ ತೆರಳಿದ ಪಂಡಿತ ಜವಾಹಿರಲಾಲ ನೆಹರುಗಳು, ಮಾರ್ಶಲ್ ಚಿಯಾಂಗ್ ಕೈಶೇಕರನ್ನು ಭೇಟಿಯಾಗುವುದೂ, ಚೈನದ ಯುದ್ಧ ರಂಗದಲ್ಲಿ ನಿಂತು ಯುದ್ಧವನ್ನು ಸಂದರ್ಶಿಸುವುದೂ ಅವರ ಚೈನದ ಕಾರ್ಯಕ್ರಮದಲ್ಲಿ ಸೇರಿರುತ್ತದೆ

ಅವರು ಅಲ್ಲಿ ಚೋಂಗ್‌ಕಿಂಗ್‌ರ ಅತಿಥಿಗಳಾಗಿರುವರು.

ಸ್ಥಳೀಕ ಸಂಸ್ಥೆಗಳ ಆಡಳಿತ ಜನರಿಗೆ ಹೆಚ್ಚಿನ ಅಧಿಕಾರ ಕೊಡಬೇಕು

ಸಂಯುಕ್ತ ಪ್ರಾಂತದ ಸ್ಥಳೀಕ ಸಂಸ್ಥೆಗಳ ಮಂತ್ರಿಯಾದ ಶ್ರೀಮತಿ ವಿಜಯ ಲಕ್ಷ್ಮೀ ಪಂಡಿತರು ಲಕ್ನೋದಲ್ಲಿ ಡಿ. ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳತ್ತ ಜತೆಯ ಮಾನಪತ್ರಕ್ಕೆ ಉತ್ತರವೀಯುತ್ತ ಹೀಗೆಂದರು:—

'ಇಂದು ಕಾಂಗ್ರೆಸು ಸರಕಾರದಿಂದ, ಸರಕಾರದ ಆಡಳಿತದ ನೀತಿಯು ತೀವ್ರ ಪರಿವರ್ತನೆ ಹೊಂದಿದೆ. ಕಾಂಗ್ರೆಸು ಸರಕಾರದ ಉದ್ದೇಶ ಹಳ್ಳಿ ಮತ್ತು ಪಟ್ಟಣಗಳಲ್ಲಿರುವ ಜನರಿಗೆ ಸ್ಥಳೀಕ ಸಂಸ್ಥೆಗಳ ಆಡಳಿತೆಯ ವಿಷಯದಲ್ಲಿ ಹೆಚ್ಚಿನ ಅಧಿಕಾರವನ್ನು ಕೊಡುವುದಾಗಿರುತ್ತದೆ! ಆದರೆ ಜನರು ಪ್ರಜಾ ಧರ್ಮವನ್ನು ಚೆನ್ನಾಗಿ ತಿಳಿದು, ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ಅರಿತುಕೊಳ್ಳದಿದ್ದರೆ, ಸ್ಥಳೀಕ ಸಂಸ್ಥೆಗಳ ಆಡಳಿತದ ವಿಷಯ ಯಾವ ಶಾಸನ, ಸ್ವಾತಂತ್ರ್ಯವಾಗಲಿ, ಏನು ಉಪಕಾರವನ್ನೂ ಮಾಡಲಾರದು. ಇಂದು ಅನೇಕ ಸ್ಥಳೀಕ ಸಂಸ್ಥೆಗಳಲ್ಲಿರುವ ದುರಾಡಳಿತೆಯು, ಅವರಲ್ಲಿರುವ ಸದಸ್ಯರ ಜಡ ಬುದ್ಧಿಯಿಂದಾಗಿದೆ.'

ಹತ್ತು ಗಡಿಯಾರಗಳಿಗೆ ಬರೇ ಮೂರು ರೂಪಾಯಿ ಹತ್ತಾಣೆ ಮಾತ್ರ



ನಾಲ್ಕು ದಮ್ಮಿ ರಿಸ್ಟವಾಚ್‌ಗಳು ಎರಡು ದಮ್ಮಿ ಪಾಕೆಟ್ ವಾಚ್ ಮತ್ತು ಒಂದು ಬಲವಾದ ಮಿಶನ್ ಸಾಮಾನುಗಳಿಂದ ತಯಾರಿಸಲ್ಪಟ್ಟ ಟೈಂಪೀಸ್, ೩೦ ಘಂಟೆಗಳ ಕಾಲ ನಡೆಯುವುದು. ೧೨ ವರ್ಷ ಗ್ಯಾರಂಟೀ, ಈ ಗಡಿಯಾರಗಳನ್ನು ವಿಲಾಯತಿಯಿಂದ ಬಹಳವಾಗಿ ತರಿಸಿರುತ್ತೇವೆ. ಆದರೂ ಈ ರಿಯಾಯತಿ ದರದಂತೆ ೧೦ ಸಾವಿರ ಗಡಿಯಾರಗಳನ್ನು ಮಾರಲು ನಿಶ್ಚಯಿಸಿರುತ್ತೇವೆ. ಈ ಸಮಯದಲ್ಲಿ ಬೇಗನೆ ತರಿಸಿಕೊಳ್ಳುವುದು. ಇಲ್ಲವಾದರೆ ಎಲ್ಲಾ ಖರ್ಚಾಗಿ ಹೋಗುವವು. ಗಡಿಯಾರಗಳ ಜೊತೆಗೆ ಒಂದು ಫೌಂಟನ್ ಪೆನ್, ಒಂದು ಸ್ಯಾಟಿನ್ ರೋಲ್ಡ್ ಗೋಲ್ಡ್ ಚೈನ್ ಸಹಿತ, ಒಂದು ಸುಂದರವಾದ ಹಾರವೂ, ಉಚಿತವಾಗಿ ಕೊಡಲಾಗುವುದು. ಟಪ್ಪಾಲು ಖರ್ಚು ಪ್ಯಾಕಿಂಗ್ ಖರ್ಚು ಬೇರೆ. ಸರಿಯಾಗಿ ತೋರದಿದ್ದಲ್ಲಿ ಹಣ ವಾಪಸ. ಪತ್ರವ್ಯವಹಾರಗಳ ಇಂಗ್ಲೀಷಿನಲ್ಲಿ ಮಾಡಬೇಕು.

ಪತ್ತೆ

German Watch Co., (P. M. H.)

P. B. No. 27 Amritsar (India)

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಸಿರಾಗುವದರಿಂದ ವಿಶೇಷ ಸಾಕ್ಷ್ಯವಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಹೊಸದಲ್ಲೇ ಪೂರಾ ಸಮಾಚಾರಕ್ಕಾಗಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ್-ಡಾಕ್ಟರ್, ವೈದ್ಯ, ಎಲ್. ಸಿ. ಪಿ. ಎಸ್. ಕೇಳಬಹುದಾಗಿದೆ, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ. ಡಬ್ಬಿಯ ಕ್ರಯ ರೂ ೪-೦-೦ ೨ ಪ.

ವಿಳಾಸ. ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.)

ಗಗನ ಸಂಚಾರಿ ನೆಹರುಗಳು

ಭಾರತ-ಚೈನಾಗಳೊಳಗೆ ಮಧುರ ಬಾಂಧವ್ಯ

'ನಾನು ಚೈನಕ್ಕೆ ಹೋಗುವುದು ಏಕೆಂದರೆ, ಆ ದೇಶವು ನನ್ನನ್ನು ನೂರಾರು ರೀತಿಗಳಿಂದ ಆಕರ್ಷಿಸುತ್ತದೆ. ಇಂತಹ ವಿಷಮ ಪರಿಸ್ಥಿತಿಯಲ್ಲಾದರೂ ನಾನು ಹಿಂದೂದೇಶವನ್ನು ಬಿಟ್ಟು ಹೋಗುವೆನು' ಹೀಗೆಂದು ಪಂಡಿತ ನೆಹರುಗಳು ಹೇಳುತ್ತಾರೆ.

ಬಹಳ ಸಮಸ್ಯೆಗಳ ವಿಚಾರಗೊಂದಲಗಳ ಮೇಲೆ ಚೈನಕ್ಕೆ ಖಂಡಿತ ಹೊರಡಬೇಕೆಂದು ನಾನು ನಿಶ್ಚಯಮಾಡಿದುದಾಗಿಯೂ, ಮಿತ್ರರು, ಅಲ್ಲಿ ಅಪಾಯ ಮತ್ತು ಪ್ರಾಣಾಂತಿಕ ಸಂಕಷ್ಟಗಳು ಒದಗಬಹುದೆಂದು ಎಚ್ಚರಿಸಿದರೆಂದೂ, ಕರ್ತವ್ಯದ ಭಾರವು ಒತ್ತಿದರೂ, ಸಾಹಸದ ಕರೆಯು ಕೇಳುತ್ತಿದ್ದುದರಿಂದ ಹೊರಡದಿರಲು ಸಾಧ್ಯವಾಗಲಿಲ್ಲವೆಂದೂ ಹೇಳುತ್ತಾರೆ

'ನಾನು ಚೈನಕ್ಕೆ ಭಾರವಾದ ಹೃದಯದಿಂದ ಹೋಗುತ್ತೇನೆ, ಈ ಕೆಲವು ವರ್ಷಗಳ ನಿರಂತರ ಸಂಕಷ್ಟದಿಂದ ಅವರು ಕಟ್ಟಿದ ರಾಷ್ಟ್ರದ ವಿನಾಶವನ್ನು ನಾನು ನೋಡ ಹೋಗುತ್ತೇನೆ ನಾನು ಹಿಂತಿರುಗಿದಾಗ, ಚೈನದ ಜನರು ಸಂಕಷ್ಟದ ಸಮಯದಲ್ಲಿ ತೋರಿಸಿದ ಐಕ್ಯಮಹತ್ಕಾರ್ಯಗಳ ಸಂದೇಶವನ್ನು ಹೊತ್ತು ತರುವೆನು.' ಹೀಗೆಂದು ಅವರು ಪ್ರಕಟಿಸಿದ್ದಾರೆ.

ತಾ. ೨೦ರಂದು ಅಪರಾಹ್ನ ೧ ಘಂಟೆಗೆ ಅಲ್ಲಹಾಬಾದಿನಿಂದ ಅವರು ಚೈನಕ್ಕೆ ವಿಮಾನವೇರಿ ತೆರಳಿದರು

ಚೈನಕ್ಕೆ ನೆಹರುಗಳು ಹೊರಡುವ ಸಮಯದಲ್ಲಿ ಅವರಿಗೆ ಶುಭಾಶಂಸೆ ಮಾಡಿ ಅನೇಕ ಸಂದೇಶಗಳು ಬಂದಿದ್ದವು, ಗಾಂಧಿಜಿ, ಠಾಗೋರು, ಸರೋಜಿನಿದೇವಿ, ರಾಜೇಂದ್ರಪ್ರಸಾದ ಇವರೇ ಮೊದಲಾದವರದು ಪ್ರಾಮುಖ್ಯವಾಗಿತ್ತು

ಗಾಂಧಿಜಿಯವರ ಸಂದೇಶ

'ನಿಮ್ಮ ಚೈನದ ಕಾರ್ಯವು ವಿಜಯಶಾಲಿಯಾಗಲಿ, ದೇವರು ನಿಮ್ಮೊಡನೆ ಇದ್ದು, ನಿರ್ವಿಘ್ನವಾಗಿ ಮಾತೃಭೂಮಿಗೆ ಹಿಂದಿರುಗಿ ತಂದು ಮುಟ್ಟಿಸಲಿ!'

ಸರೋಜಿನಿದೇವಿಯರ ಸಂದೇಶ

'ನಲ್ಮೆಯ ಗಗನ ಸಂಚಾರಿಯೇ, ನನ್ನ ಹೃದಯವೂ ನಿಮ್ಮೊಡನೆ ನಿನ್ನೆಯ ಮತ್ತು ನಾಳೆಯ ಭವ್ಯ ಸಂಸ್ಕೃತಿಯ ನಾಡಿಗೆ ಹಾರಾಡುತ್ತಿದೆ'

ರಾಷ್ಟ್ರಪತಿಗಳ ಸಂದೇಶ

'ಭಾರತದ ರಾಯಭಾರಿಯಾಗಿ, ಪಾಶವಿಕ ನೀತಿಯ ರಾಷ್ಟ್ರದ ತುಳಿತದಿಂದ ಸಂಕಷ್ಟಗೊಂಡಿರುವ, ನಮ್ಮ ಸಹೋದರೀ ಭೂಮಿಗೆ, ನಿಮ್ಮ ದೇಶದ ಶುಭಾಶಂಸೆಯನ್ನು ಕೊಂಡು ಹೋಗಿರಿ. ಚೈನವು ತನ್ನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿಜಯಿಯಾಗಲೆಂದೂ, ನೀವು ನಿರ್ವಿಘ್ನರಾಗಿ ಮರಳಿ ಬರುವಂತಾಗಲೆಂದೂ ನಾನು ದೇವರಲ್ಲಿ ಮೊರೆಯಿಡುತ್ತೇನೆ'

ಠಾಗೂರರ ಸಂದೇಶ

ಕವೀಂದ್ರ ಠಾಗೂರರು ತಮ್ಮ ದೀರ್ಘವಾದೊಂದು ಪತ್ರದಲ್ಲಿ ಈ ಸಾರಾಂಶದ ಸಂದೇಶವನ್ನು ಕಳುಹಿಸಿರುವರು

'ಯಾವುದೇ ರಾಷ್ಟ್ರವಾಗಲಿ, ಒಮ್ಮೆ ಸಂಕಷ್ಟಕ್ಕೆ ಗುರಿಯಾದರೆ, ಮುಂದೆ, ಮೊದಲಿಗಿಂತಲೂ ಭವ್ಯವಾಗಿ ಮೆರೆಯುವುದು ಚೈನದಲ್ಲಿ ನಿಮ್ಮ ಕಾರ್ಯಗಳೊಡನೆ ನನ್ನ ಹಾರ್ದಿಕ ಶುಭಾಶಂಸೆಯಿದೆ ಚೈನದ ಜನರ ಸಂಪರ್ಕದಲ್ಲಿ ನೀವು ಏಶ್ಯಾಖಂಡದ ಹಾಗೂ ಭಾರತ ದೇಶದ ಧೈರ್ಯಸಾಹಸವನ್ನು ನೀವು ಅವರಿಗೆ ತೋರಿಸಿ ಪ್ರೋತ್ಸಾಹಿಸಬೇಕೆಂದೂ ಬಯಸುತ್ತೇನೆ.

ಇಂದು ಜಪಾನಿನ ದುರ್ನೀತಿಯು ಏಶ್ಯಾದ ಸಂಸ್ಕೃತಿಯ ಘಾತುಕವಾಗಿದ್ದು, ತನ್ನ ದುರ್ನೀತಿಯಿಂದ ತನ್ನದೇ ಹತ್ಯಾಕಾಂಡಕ್ಕೆ ಆರಂಭವಾಗಿದೆ. ನಿಮ್ಮ ಕಾರ್ಯದಲ್ಲಿ ಇಂದು ರಾಜಕೀಯ ನೀತಿಯಿಂದ ಭಿನ್ನವಾದ, ಚೈನಾ, ಜಪಾನು, ಭಾರತ ದೇಶಗಳು ಒಂದೇ ಸಹೋದರ ಜನಾಂಗವಾಗಿ ಮಾಡಲು ಕೃತಾರ್ಥರಾಗಬೇಕಾಗಿ ಬಯಸುತ್ತೇನೆ. ಪೌರ್ವಾತ್ಯ ಸಂಸ್ಕೃತಿಯು ಇನ್ನೊಮ್ಮೆ ನವಚೇತನದಿಂದ ಬೆಳಗುವ ಕಾರ್ಯಸಾಧನೆಯೊಂದು ನಾನು ಬಯಸುತ್ತೇನೆ.

ಅಲ್ಲಹಾಬಾದಿನಿಂದ ಚೈನಾಕ್ಕೆ ತೆರಳುವ ಪಂಡಿತ ನೆಹರುಗಳು ಕಲ್ಕತ್ತೆಯಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ, 'ತಾನು ಕಾಂಗ್ರೆಸಿನ ರಾಯಭಾರಿಯಾಗಿ ಚೈನಕ್ಕೆ ತೆರಳುವುದಲ್ಲವೆಂದೂ, ತಾನು ತನ್ನ ಕಾರ್ಯದಲ್ಲಿಯೇ ತೆರಳುವುದೆಂದೂ ಹೇಳಿದರು

ನೆಹರುಗಳು ಚೈನಾ ಮತ್ತು ಭಾರತದೇಶಗಳು ಐಕ್ಯವಾಗಬೇಕಾದ ಕುರಿತು ಮಾತನಾಡಿದರು ತಾನು ಕಾಂಗ್ರೆಸಿನ ಪರವಾಗಿ ಹೋಗುವುದಲ್ಲವಾದರೂ, ಕಾಂಗ್ರೆಸು ಧುರೀಣರ ಆಶೀರ್ವಾದವು ತನಗಿದೆಯೆಂದು ಹೇಳಿದರು.

ತನ್ನ ಅಲ್ಲಿನ ಕಾರ್ಯವು ಕೇವಲ ಭಾರತೀಯರ ಸಂದೇಶಗಳನ್ನೂ ಅವರಿಗೆ ತಿಳಿಸುವುದು ಮಾತ್ರವಲ್ಲ, ಅವರೊಡನೆ ಇನ್ನಷ್ಟು ಸನಿಹದ ಪರಿಚಯ ಬೆಳೆಸುವುದೆಂದರು

ತಾನು ನಾಲ್ಕು ವಾರಗಳ ವರೆಗೆ ಚೈನಾದಲ್ಲಿರುವುದಾಗಿಯೂ, ಅಲ್ಲಿನ ತನ್ನ ಎಲ್ಲಾ ಕಾರ್ಯಕ್ರಮಗಳೂ, ಅಲ್ಲಿನ ಸಂಸ್ಥೆಗಳು ನಿಶ್ಚಯಿಸಿದಂತಿರುವುದೆಂದೂ, ಬರ್ಮಾದ ದಾರಿಯಾಗಿ ಸಾಧ್ಯವಾದರೆ ಸಪ್ಟಂಬರ ಅಖೈರು ಇಲ್ಲವೆ ಅಕ್ಟೋಬರ ಪ್ರಥಮ ವಾರದಲ್ಲಿ ಮಾತೃಭೂಮಿಗೆ ಮರಳುವುದಾಗಿಯೂ ಹೇಳಿರುವರು.

'ನನಗೆ ಡಾ| ಠಾಗೋರರಂದಂತೆ, ಜಪಾನಿಗೂ ಹೋಗಲು ಆಸೆಯಿದೆ ಆದರೆ ಈ ಸಂದರ್ಭದಲ್ಲಿ ನನಗೆ ಹೋಗಲು ಸಮಯವೂ ಇಲ್ಲ, ಅಂತಹ ಅವಕಾಶವೂ ಇಲ್ಲ' ಎಂದರು.

ನೆಹರುಗಳೊಡನೆ ವೈಮಾನಿಕನ ದುರ್ನಡತೆ

ಪಂಡಿತ ನೆಹರುಗಳು ಚೈನಾಕ್ಕೆ ತೆರಳುವ ವಿಮಾನವು ಫ್ರೆಂಚ ಕಂಪೆನಿಯದಾಗಿತ್ತು ಅದು ನಿಶ್ಚಿತ ಅವಧಿಗಿಂತ ಒಂದು ತಾಸಿನ ತಡವಾಗಿ ಬಂತು ಹಲವರು ಸೂರ್ಯನಬಿಸಿಲಲ್ಲಿ ನಡೆಯದ ಮಹಿಳೆಯರು ಅಷ್ಟು ಸಮಯ ಕಾದಿರಬೇಕಾಯಿತು. ವಿಮಾನ ಬಂದಾಗ ನೆಹರುಗಳು ವಿಮಾನದ ಒಳಭಾಗವನ್ನು ತಮ್ಮ ಕೆಲ ಮಿತ್ರರಿಗೆ ತೋರಿಸಲಬಹುದೇ ಎಂದು ಕೇಳಿದರು ಆದರೆ ಆಫೀಸರನೊಡನೆ ಅಲ್ಲದೆ ಯಾರೂ ವಿಮಾನದೊಳಗೆ ಹೋಗಕೂಡದೆಂದೂ, ಆಫೀಸರನು ಊಟಮಾಡುತ್ತಿರುವನೆಂದೂ ಉತ್ತರ ಬಂತು

ಮತ್ತು ಅರ್ಧ ಗಂಟೆ ಮಾಯಿತು. ನೆಹರುಗಳು ಸ್ವತಃ ಕಪ್ತಾನನು ಇದ್ದ ಕೋಣೆಯ ಕಡೆ ಹೋದರು ಆತನು ಜೋರಾಗಿ ಒಬ್ಬನಲ್ಲದೆ ಯಾರನ್ನೂ ಒಳಬಿಡಲಾಗುವುದಿಲ್ಲವೆಂದು ಹೇಳಿದ. ಪಂಡಿತರು ತಿರುಗಿ ಬಂದು, ಆಗಲೇ ತಲಪಿದ ಒಂದು ತಂತಿವಾರ್ತೆಯನ್ನು ಓದುತಿದ್ದರು. ಆಗ ಕಪ್ತನನು ತಡವಾಯಿತು ಇನ್ನು ಕಾದಿರಲು ಸಾಧ್ಯವಿಲ್ಲವೆಂದು ಹೇಳಿದ. ಅದಕ್ಕೆ ನೆಹರುಗಳು ಸಾಧ್ಯವಿಲ್ಲದಿದ್ದರೆ ಹೋಗಲಿ ಎಂದು ಹೇಳಿ, ತಂತಿ ಓದಿದ ಮೇಲೆ ವಿಮಾನದಲ್ಲಿ ಕುಳಿತರು

ನೆಹರುಗಳು ಈ ಕುರಿತು ತಾನು ಭಾರತವರ್ಷ ಮತ್ತು ಯೂರೋಪುಗಳಲ್ಲಿ ಅನೇಕ ವಿಮಾನಗಳನ್ನು ಕಂಡಿರುವುದಾಗಿಯೂ, ಆದರೆ ಇಂತು ಉಪಚಾರದ ಮಾತಿಲ್ಲದ, ಗಣ್ಯವಿಲ್ಲದ ಜನರನ್ನು ಇದುವರೆಗೆ ಕಂಡಿ[illegible]ದೂ, ಅವರ ವರ್ತನೆಗಾಗಿ ನಾನು ವಿ[illegible]ಸುತ್ತೇನೆಂದು ಪ್ರಕಟಿಸಿರುವರು.

೩೪,೦೦೦ ರೂಪಾಯಿಗಳ ಬಹುಮಾನ!

ಎಲ್ಲಾ ಸರಿಯಾದ 17 ಉತ್ತರಗಳಿಗೆ ಹಂಚಲಾಗುವುದು'



ಹೆಚ್ಚು ಒಗಟುಗಳನ್ನು ಕಳುಹಿಸಿದವರಿಗೆ 200 ರೂಪಾಯಿಯ ಪ್ರತ್ಯೇಕ ಬಹುಮಾನವೂ, ನಾವು ಮುದ್ರೆಹಾಕಿದ ಉತ್ತರದ ಮೊದಲನೆ ಎರಡು ಅಡ್ಡವಾದ ಪಂಕ್ತಿಗಳ ಉತ್ತರಕ್ಕೆ ಯಾರ ಉತ್ತರದ ಮೊದಲನೆಯ ಎರಡು ಅಡ್ಡ ಪಂಕ್ತಿಗಳು ಸರಿಬೀಳುತ್ತವೋ ಅವರಿಗೆ 50 ರೂಪಾಯಿಗಳ ಪ್ರತ್ಯೇಕ ಬಹುಮಾನವೂ ಕಡೆಗೆ ಉತ್ತರದ ಯಾವುದಾದರೂ ಒಂದು ಪಂಕ್ತಿಯು ನಮ್ಮ ಉತ್ತರಕ್ಕೆ ಸರಿಯಾಗಿ ಇರುವವರಿಗೆ 50 ಪ್ರತ್ಯೇಕ ಇನಾಮುಗಳೂ ಹಂಚಲ್ಪಡುತ್ತವೆ

ಮೇಲೆ ಕಾಣುವ ಸಣ್ಣ ಚಚ್ಚೌಕದಲ್ಲಿ ೩ರಿಂದ 20ರ ವರೆಗಿನ ಅಂಕೆಗಳನ್ನು ಬರೆಯಿರಿ ಯಾವ ಸಾಲನ್ನೂ ಯಾ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕೂಡಿಸಿದರೆ 50 ಬರಬೇಕು ಒಮ್ಮೆ ಉಪಯೋಗಿಸಿದ ಸಂಖ್ಯೆಯನ್ನು ಇನ್ನೊಮ್ಮೆ ಉಪಯೋಗಿಸಕೂಡದು.

ಉತ್ತರವನ್ನು ಕಳುಹಿಸುವ ಕಡೆ ತಾರೀಕು 9-9-1939 ಫಲಿತಾಂಶ ತಾ. 18 9 1939 ಪ್ರವೇಶ ಹಾಸಲು ಒಂದು ಉತ್ತರಕ್ಕೆ ರೂ 1 ಮೂರು ಉತ್ತರಗಳಿಗೆ ರೂ 2, ಎಂಟು ಉತ್ತರಗಳ ಸೆಟ್ಟಿಗೆ ರೂ 5

ನಿಯಮ: ಮೇಲೆ ಹೇಳಿದ ಪ್ರವೇಶಹಣದ ನಿಬಂಧನೆಯಂತೆ, ಎಷ್ಟು ಉತ್ತರಗಳನ್ನು ಕಳುಹಿಸಿದರೂ ಸ್ವೀಕರಿಸಲಾಗುವುದು ಹಣವನ್ನು ಮನಿಯಾರ್ಡರು ಇಲ್ಲವೆ ಇಂಡಿಯನ್ ಪೋಸ್ಟಲ್ ಆರ್ಡರಿನ ಮೂಲಕ ಕಳುಹಿಸಬೇಕು ಹಣ ಸಂಗ್ರಹವಾದುದನ್ನು ನಿರೀಕ್ಷಿಸಿ, ಇನಾಮುಗಳನ್ನು ವ್ಯತ್ಯಾಸ ಮಾಡಬಹುದು ಆದರೆ ನಮ್ಮ ಸೀಲು ಹಾಕಿದ ಉತ್ತರಕ್ಕೆ ಸರಿಯಾದ ಪ್ರತಿಯೊಂದು ಉತ್ತರಕ್ಕೂ ರೂ 2000ಗಳ ಬಹುಮಾನವು ಗ್ಯಾರಂಟಿಯಿದೆ. ಹಣವು ಬೊಂಬಾಯಿಯ ಒಂದು ಪ್ರಧಾನ ಬ್ಯಾಂಕಿನಲ್ಲಿ ಇರಿಸಲಾಗಿದೆ

ಉತ್ತರಕ್ಕೆ ನಿಮ್ಮ ಎಡ್ರೆಸು ಬರೆದು ಟಿಕೇಟು ಹಚ್ಚಿದ ಕವರನ್ನು ಕಳುಹಿಸಿರಿ ಈ ವಿಷಯದಲ್ಲಿ ಮನೇಜರರ ತೀರ್ಮಾನವೇ ಕಡೆಯದ್ದು ಮತ್ತು ನ್ಯಾಯಬದ್ಧವಾದುದೂ ಆಗಿದೆ ಹಿಂದಿನ ಒಗಟಿನ ಮೊಹರುಮಾಡಿದ ಉತ್ತರ

1ನೇ ಸಾಲು	7, 5, 18, 16
2ನೇ ಸಾಲು	10, 19, 1, 13
3ನೇ ಸಾಲು	17, 14, 9, 6
4ನೇ ಸಾಲು	12, 8, 15, 11

ಈ ಕೆಳಗಿನ ವಿಳಾಸಕ್ಕೆ ನಿಮ್ಮ ಒಗಟಿನ ಉತ್ತರ ಪ್ರವೇಶಹಾಸಲುಗಳನ್ನೆಲ್ಲಾ ಕಳುಹಿಸಿರಿ

The Manager,
PRESIDENCY COMMERCIAL SYNDICATE
Mumbadevi, Bombay, 2



ಲೈಸೆನ್ಸ್ ಬೇಕಾಗಿಲ್ಲ

ಅಮೇರಿಕನ್ ರಿವಾಲ್ವರ್

ಅತ್ಯಾಧುನಿಕ ತಯಾರಿ, 1939ರಲ್ಲೇ ಮೊದಲನೆಯ ಸಲ ತರಿಸಿದ್ದು ಆಕಾರ ಮೇಲಿನ ಚಿತ್ರದಲ್ಲಿರುವಂತೆಯೇ, ಉದ್ದ 7 ಇಂಚು, ಭಾರ ಸುಮಾರು 15 ಔನ್ಸುಗಳಷ್ಟು, 50 ಗುಂಡುಗಳನ್ನು ತನಗೆ ತಾನಾಗಿ ಅಂದರೆ ಆಟೊಮೆಟಿಕ್ ಆಗಿ ಹಾರಿಸಬಹುದು. ಬೆಲೆ ರೂ 4-8-0 ಪ್ರತಿಕ ಮದ್ದು ಗುಂಡುಗಳಿಗೆ 1000ಕ್ಕೆ ರೂ 3 ಚರ್ಮದ ಚೀಲ ಬೇಕಾದರೆ 1-12-0 ರಿವಾಲ್ವರಿನ ಯಂತ್ರಕ್ಕೆ ಬಿಡುವ ಎಣ್ಣೆ ಬೇಕಾದರೆ 0-12-0. ಆರ್ಡರಿನೊಂದಿಗೆ ಸಂಪೂರ್ಣ ಬೆಲೆಯ ಮೊತ್ತವನ್ನು ಕಳುಹಿಸಿಕೊಟ್ಟರೆ ಟಪ್ಪಾಲು ಖರ್ಚು ಮುಫತ್ತು

ಸೂಚನೆ: ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಪ್ರಯತ್ನಿಸಿರಿ.

American Pistol Co (P. M. H.)
Post Box No. 97, Amritsar (India

NOTICE

IN THE COURT OF THE DISTRICT JUDGE OF SOUTH KANARA

ORIGINAL PETITION No 81 OF 1939

In the matter of (1) *U. Rama Kini* (2) *U Laxmana Kini* (3) *U Raghavendra Kini* (4) *U Gopalakrishna Kini* (5) *U. Panduranga Kini* (6) *U Ramani Bai*—MINORS

1 Sushila alias Rukminidevi amma, widow of Ullal Upendra Kini
2 U Govinda Kini } Sons of Ullal Raghavendra Kini
3 U Vamana Kini }
4 Bhagirathi alias Yashod amma, widow of Ullal Raghavendra Kini
— *Petitioners*

To All Whom it May Concern

Please take notice that on the 16th day of August 1939 the above-named Petitioner residing at Joddmutt Street Mangalore town, have presented an application to this Court praying that the 1st Petitioner may be declared to be the guardian of the persons and that she may also be declared or appointed guardian of the property of the above named minors and for other reliefs, and that the Second day of October 1939 has been fixed for the hearing of the application and if you desire to oppose the said application, or to apply for the appointment of any person other than the above named 1st Petitioner as the guardian of the persons and property of the said minors, you must appear on the said Second day of October 1939 in this Court in person or by a duly authorised Pleader and be prepared to adduce any documentary or oral evidence upon which you wish to rely, and that, in default of your appearance the said application may be heard and decided in your absence Any relation or friend of the said minors may appear and be heard upon the said application, and may inspect and obtain a copy of the petition, and it shall not be necessary to present any petition for this purpose.

BY ORDER

Mangalore 24-8-1939 } **H VASUDEVA KAMATH,**
Vakil for Petitioners

WANTED

Applications are invited for teachers' posts in the 'Sri Venkatramana Temple Sanskrit School' Moolky, to be opened in September 1939 Preference will be given to Secondary grade trained teachers with Hindi qualifications Applications for a Sanskrit Pandit's post are also invited

The applications should reach the undersigned by the 12th Sept. 1939. *Manager,*
Sri Venkatramana Temple Sanskrit School, MOOLKY.

ಜೋರಾಗಿ ಮಳೆ ಸುರಿಯುತ್ತಲೇ ಇತ್ತು, ಮುದುಕನು, ನೀರೆಲ್ಲಾ ಒಳಗೇ ಬೀಳುತ್ತಿದ್ದುದರಿಂದ, ತನ್ನ ಹರಕು ಚಾಪೆಯನ್ನು ಮಡಚಿ, ಎದ್ದು ಕುಳಿತನು ಮಳೆಯ ಹನಿಯು ಮತ್ತೂ ಒಳಗೆ ಬೀಳುತ್ತಿತ್ತು, ಚಾಪೆಯಿಂದೆದ್ದು, ತನ್ನ ಮುರುಕು ಗುಡಿಸಲಿನ ಕಿಂಡಿಯಿಂದ ಹೊರಗೆ ಇಣಿಕಿ ನೋಡಿದ. ದೂರದಲ್ಲಿ ಕಾಣುತ್ತಿದ್ದ ಕಮ್ಮಾರ ಕೊಟ್ಟಿಗೆಯಲ್ಲಿ ಉರಿವ ಕೆಂಡದ ಜ್ವಾಲೆ ಸಿಡಿಯುತ್ತಿತ್ತು ಕಮ್ಮಾರನು ಕಾದ ಕಬ್ಬಿಣವನ್ನು ತಿರುಗಿಸಿ ತಿರುಗಿಸಿ ಬಡಿಯುತ್ತಿದ್ದ! ಕಿಡಿಯು ಮತ್ತೂ ಸಿಡಿಯುತ್ತಲೇ ಇತ್ತು, ಸುತ್ತಿಗೆಯ ಪೆಟ್ಟು ಇನ್ನಷ್ಟು ಬಲವಂತವಾಗಿ ಬೀಳುತ್ತಿತ್ತು!

ಅಲ್ಲಿಂದ ಆತನ ನೋಟವು ವಿದ್ಯುತ್ ಶಕ್ತಿಯ ಬೆಳಕಿನಿಂದ ಜಗಜಗಿಸುತ್ತಿರುವ ರಾಯರ ಮಹಾಲಿಗೆ ಮನೆಯ ಕಡೆಗೆ ಹೊರಳಿತು. ತಾನು ಕೆಲಸಮಾಡುತ್ತಿದ್ದ ಮಿಲ್ಲಿನ ಮೇನೇಜಿಂಗ್ ಡೈರೆಕ್ಟರು ಅವರು! ತುಂಬು ಯೌವನದ ಪುಷ್ಟಿಗೊಂಡ ಶರೀರವನ್ನು, ಎಡೆಬಿಡದ ದುಡಿತದಿಂದ ಅವರ ಮಿಲ್ಲಿನಲ್ಲಿ ಆತ ಸವೆದಿದ್ದ! ಚಿಲ್ಲರೆ ನೆವನಕ್ಕಾಗಿ ಮೊನ್ನೆ ಸಂಜೆ ಕೆಲಸದಿಂದ ತೆಗೆದುಹಾಕಿದ್ದರು!

ಹೊರಗಿನ ಮಳೆಯು ಬೀಳುತ್ತಿದ್ದಂತೆ, ಮುದುಕನ ಕಣ್ಣಿನಿಂದ ಕಂಬನಿಯೂ ಒಸರಿತು! ಅಲ್ಲಿ ನಿಲ್ಲುವುದಾಗದೆ ತಿರುಗಿ ಮೊದಲಿನ ಜಾಗದಲ್ಲಿಯೇ ಬಂದು ಕುಳಿತುಕೊಂಡನು!

ಹೊಗೆ ಸೇದುವ ಕೊಳವೆಯನ್ನು ಕೈಯಲ್ಲಿ ತೆಕ್ಕೊಂಡು ಗಾಂಜಾವನ್ನು ಅದಕ್ಕೆ ಹಾಕಿ, ಜೋರಾಗಿ ಸೇದಿದ ಆ ದಿನದ ಸಂಜೆಯ ಮೇಲೆ, ಅವನ ಎಲ್ಲಾ ಸಂಕಷ್ಟಗಳನ್ನೂ ಅದ ಮಾತ್ರ ಪರಿಹರಿಸುತ್ತಿತ್ತು ಅದರ ತುದಿಯಿಂದ ಬೆಂಕಿ ಏಳುತ್ತಿದ್ದಂತೆ, ಆತ ಕಪ್ಪು ಹೊಗೆಯನ್ನು ಸುರುಳಿಸುರುಳಿಯಾಗಿ ಉಗುಳುತ್ತಿದ್ದ

ಮೂಲೆಯಲ್ಲಿ ದೀಪವೊಂದು ಅರ್ಧಂಬರ್ಧ ಉರಿಯುತ್ತಿತ್ತು, ಅದನೊಡನೆ ಅಲ್ಲಿ ಇನ್ನೂ ಮೂರು ಜೀವಗಳು ಉಸಿರಿಡುತ್ತಿವೆಯೆಂಬುದನ್ನೇ ಆತ ಮರೆತಿದ್ದನು ಅವನ ಜೊತೆ ಒರಗಿ ನಿದ್ರಿಸುತ್ತಿದ್ದಳು ಆತನ ಮಗಳು, ಗಂಗಮ್ಮ—ವಿಧವೆ—ತಮ್ಮನ ಹರಿದು ಹರಿದು ಚೂರಾದ ಅಂಗಿಯನ್ನು ಹೊಲಿಯುತ್ತಿದ್ದಳು! ಅದು ಹೊಲಿದಷ್ಟು ಮುಗಿಯಲೊಲ್ಲದು. ಒಂದು ಬದಿಯಲ್ಲಿ ಸಣ್ಣ ಹುಡುಗ, ಕಂಟಿಟ್ಟಿದ್ದ ಗಂಜಿಯನ್ನು ಉಣ್ಣಲೊಲ್ಲೆನೆಂದು ಕೂಗುತ್ತಿದ್ದಾನೆ! 'ಎರಡು ದಿವಸಗಳಿಂದ ಅಪ್ಪ, ಅಮ್ಮ, ಅಣ್ಣ, ಅಕ್ಕ ಯಾರೂ ಊಟಮಾಡಿಲ್ಲ, ಅವರು ಉಣ್ಣದೆ ತಾನೂ ಉಣ್ಣುವುದಿಲ್ಲ'ವೆಂದು ದೊಡ್ಡ ದನಿ ಮಾಡಿ ಗಟ್ಟಿಯಾಗಿ ಕೂಗುತ್ತಿದ್ದ ಮುದುಕನಿಗೆ ತಲೆ ತಿರುಗುವಂತಾಗುತಿತ್ತು! ಕೊಳವೆಯನ್ನು ಬಾಯ್ಬಿಟ್ಟು, ಮತ್ತೊಮ್ಮೆ ಗಟ್ಟಿಯಾಗಿ ಎಳೆದ. ದೂರದ ಕಮ್ಮಾರ ಕಾದ ಕಬ್ಬಿಣದ ಮೇಲೆ ಸುತ್ತಿಗೆಯಿಂದ ಬಲವಂತವಾಗಿ ಹೊಡೆಯುತ್ತಿದ್ದ

ಈ ಹಾಳು ಕೊಳವೆಯ ಹೊಗೆಯು ಗಂಗಮ್ಮನನ್ನು ಕೆರಳಿಸಿತು, 'ನಾವೆಲ್ಲಾ ಹೊಟ್ಟೆಗೆ ತೀರ ಇಲ್ಲದೆ ಸಾಯುತ್ತಿರುವಾಗ, ನಾಚಿಕೆಯಿಲ್ಲದೆ ನೀನು ಹೊಗೆ ಬಿಡುತ್ತಾ ಇದ್ದೀಯಲ್ಲಾ!' ಎಂದು ಹಂಗಿಸಿ ಬೈದಳು

ಮುದುಕ ಒಮ್ಮೆ ನಗಾಡಿದ ನಗು ಹೊಟ್ಟೆಯ ಅಳಲನ್ನು ಹೊರತೋಡಿ ತೋರಿಸುವಂತಿತ್ತು! ಗಂಡ ಸತ್ತು ಬಂದ ಈ ಮೂರು ವರ್ಷಗಳಿಂದ ಆಕೆಯ ಸ್ವಭಾವವನ್ನು ಅವ ಚೆನ್ನಾಗಿ ತಿಳಿದಿದ್ದ ಸರಲ ಸ್ವಭಾವದ ಹುಡುಗಿ ಎಲ್ಲದಕ್ಕೂ ಸಿಡಿದುಬೀಳುವಳು ಪ್ರಪಂಚವೇನೆಂದು ಗೊತ್ತಿಲ್ಲ ಮಕ್ಕಳು ಮರಿಗಳೂ ಇಲ್ಲ. ತಂದೆಯೊಡನೆ ದಿನನಿತ್ಯ ಹೀಗೆಯೇ ನಡೆಯುವಳು. ಪಾಪ! ವಿಧವೆ ಪುತ್ರಿಗಾಗಿ ಆತನು ಮರುಕಪಡುತ್ತಿದ್ದ!

ಒಂದು ಸಣ್ಣ ಕತೆ:

ನಾಚಿಕೆಯ ಕೆಲಸ!

[ತುಂಬು ಯೌವನದ, ಪುಷ್ಟ ಶರೀರವನ್ನು ಅದೇ ಮಿಲ್ಲಿನಲ್ಲಿ ಆತ ಸವೆಸಿದ್ದ! ಮಿಲ್ಲಿನಲ್ಲಿ ಶುಭ್ರವಾದ ಹತ್ತಿಯ ರಾಶಿಯನ್ನು ಹಿಂಜಿ ತಮಗೆ ಬೇಕಾದ ನೂಲು ಬಟ್ಟೆಗಳನ್ನೆಲ್ಲಾ ಮಾಡಿ, ಸಾರವನ್ನು ಸಂಪೂರ್ಣ ಹಿಂಡಿ ತೆಗೆದ ಮೇಲೆ, ಉಳಿದ ಹಾಳು ಕಸವನ್ನು ಹೊರಗೆ ಬಿಸಾಡಿ ಬಿಡುತ್ತಿದ್ದರು! ಮಿಲ್ಲಿನ ಹೃದಯ ಶೂನ್ಯತೆಯಂತೆ, ಅದರ ಮಾಲಿಕರದ್ದೂ ಇರಬೇಕು]

ತಂದೆಯ ಈ ಮೌನ, ನಿರ್ಲಕ್ಷ್ಯಭಾವಗಳನ್ನು ಕಂಡು ಅವಳ ಸಿಟ್ಟು ಮತ್ತಷ್ಟು ಉದ್ರೇಕಗೊಂಡಿತು ಒರಗಿದ್ದ ತಾಯಿಯ ರಟ್ಟೆ ಹಿಡಿದೆಬ್ಬಿಸಿ ಕೂಗಿದಳು —

'ಏನಮ್ಮಾ! ಈ ದಿನವೂ ಬೆಂಕಿಯುರಿಸುವುದಿಲ್ಲವೇ?'

ನಿಷ್ಠುರ ಬಾಣಸ ನಾಲ್ಕೈದು ಮೊರ್ಕಾಣಿ, ಮಾರಾಟ ಸಾಮಾನುಗಳನ್ನು ಹೆಚ್ಚು? ತಾಯಿ ಸಂಕಷ್ಟದಿಂದ ಕೇಳಿದಳು

ಖಂಡಿತ ಕೊಡುವುದು.. ಖಂಡಿತ' ಗಂಗಮ್ಮ ರುದ್ರಸ್ವರದಿಂದ ಮಾರ್ನುಡಿಯುತ್ತಳೆ.

ಇನ್ನು ಮಾತನಾಡುವುದ ಬೇಡವೆಂದು ಮುದುಕ, ಹರಕು ಕಂಬಳಿಯನ್ನು ಗಟ್ಟಿಯಾಗಿ ಹೊದ್ದುಕೊಂಡು, ಗೋಡೆಗೆ ಒರಗಿ ಕುಳಿತುಕೊಂಡ ದೀಪದ ಬತ್ತಿ ಗಾಳಿಗೆ ಅತ್ತಿತ್ತ ಚಲಿಸುತ್ತಿತ್ತು ಕಮ್ಮಾರನ ಪೆಟ್ಟು ಜೋರಾಗಿ ಕೇಳುತ್ತಿತ್ತು

'ಈ ಹಣವಂತರ, ಈ ಧನಿಗಳ—ಎಲ್ಲ

[ಆ ದಿನದ ಸಂಜೆಯ ಮೇಲೆ, ಆ ಗಾಂಜಾದ ಕೊಳವೆಯ ಹೊಗೆಯು ಮಾತ್ರ, ಅವನ ಸಂಕಷ್ಟಗಳನ್ನು ಸ್ವಲ್ಪ ಪರಿಹರಿಸುತ್ತ]

ಈ ಮಾತಿನಿಂದ ಗಂಗಮ್ಮನ ಕೋಪವು ನೆತ್ತಿಗೇರಿದಂತಾಯಿತು ಅವಳು ಅಂಗಿಯನ್ನೂ, ಸೂಜಿ ನೂಲುಗಳನ್ನೂ ನೆಲಕ್ಕೆ ಎಸೆದು, ಎದ್ದಳು. ಮುಖವು ಕೆಂಪಡರಿತ್ತು ಕಠೋರವಾಗಿ ಎಲ್ಲರನ್ನೂ ಬೈದಳು

'ಈ ಮೂರಿಗಳು ಸಾಯಬೇಕು! ಈ ಬಡವರೆಲ್ಲ ಸಾಯಬೇಕು! ತಮ್ಮ ದನಿಗಳ ಮುಂದೆ ಮೊಣಕಾಲೂರಿ ಬೇಡುವ ಹೇಡಿಗಳು ಸತ್ತು ಸುಣ್ಣಾಗಬೇಕು. ನಾನು ಗಂಡುಸಾಗಿದ್ದರೆ ಮೊದಲು ದೊಡ್ಡ ಐಶ್ವರ್ಯವಂತ ಮಾಲಿಕನೊಬ್ಬನ ಕೊರಳು ಹಿಂಡುತ್ತಿದ್ದೆ. ಹಾಗೆ ಒಮ್ಮೆ ಮಾಡಿದರೆ ಮತ್ತೆಲ್ಲಾ ಸರಿಯಾಗುತ್ತಿತ್ತು, ನೀವು ಹೇಡಿಗಳು ಸಾಯಿ.'

ಮುದುಕ ಈ ಮಾತನ್ನು ಕೇಳಿ ಚೆನ್ನಾಗಿ ನಕ್ಕುಬಿಟ್ಟ! ಕಮ್ಮಾರನ ಬಲವಂತವಾದ ಬಡಿತ, ಹೊರಗಿನ ಜೋರಿನ ಮಳೆಯ ಧ್ವನಿ, ಆಕಾಶದ ಗುಡುಗು ಆತನ ಅಟ್ಟಹಾಸಕ್ಕೆ ಸಮ್ಮೇಳ ಕೂಡಿಸಿತು!

'ಹುಚ್ಚು ಹುಡುಗಿ, ಹಿಂಸೆಯು ಎಂದಿಗೂ ನ್ಯಾಯ ಮತ್ತು ಸುಖಗಳನ್ನು ಕೊಡಲಾರದು!' ಆತ ಹೇಳಿದ.

ಕಲ್ಲೆದೆಯವರು! ಕರುಣೆಯಿಲ್ಲದ ರಕ್ಕಸರು! ನಾವು ಸಾಯಬೇಕು!'

'ನಮಗೇನು ಗೊತ್ತು' ಕಡೆಗೆ, ಅವನು ಒಂದು ದಾರಿ ತೋರಿಸುತ್ತಾನೆ!' ಬಾಗಿನ ಕಡೆಗೆ ಕೈ ತೋರಿಸಿ ಮುದುಕ ಹೇಳಿದ

'ಕೈ ಕಟ್ಟಿ ಕುಳಿತ ಹೇಡಿಗಳಿಗೆ ದೇವರು ಸ್ಮಶಾನದ, ಕಡೆಗೆ ದಾರಿ ತೋರಿಸುತ್ತಾನೆ' ಗಂಗಮ್ಮ ಅರಚಿದಳು

ಇದಕ್ಕಿಂತ ಹೆಚ್ಚು ಆಕೆಯೊಡನೆ ವಾದಮಾಡಲು ಮುದುಕನಿಗೆ ತಾಳ್ಮೆ ಇರಲಿಲ್ಲ ಮತ್ತೊಮ್ಮೆ ಎದ್ದು ಕಿಟಿಕಿಯಿಂದ ಹೊರ ಇಣಿಕಿ ನೋಡಿದ ತನ್ನ ಮಗ ಜೋರ ಒಪ್ಪಿಸಾಗಿ ಓಡಿ ಬರುತ್ತಿದ್ದ

ಒಳಗಡೆ ತನ್ನ ಹೆಂಡತಿ ಸಣ್ಣ ಹುಡುಗನನ್ನು ಉಣ್ಣುವಂತೆ ಒತ್ತಾಯಮಾಡುತ್ತಿದ್ದಳು!

'ನೀನು ಯಾಕೆ ಉಣ್ಣುವುದಿಲ್ಲ ಮಗೂ'

'ನೀನು, ಅಪ್ಪ, ಅಕ್ಕ ಅಣ್ಣ ಯಾಕೆ ಉಣ್ಣುವುದಿಲ್ಲವಮ್ಮಾ! ನೀವು ಊಟಮಾಡದೆ ನಾನೂ ಒಲ್ಲೆ'' ತಾಯಿಯ ಕೊರಳಿಗೆ ಜೋತು ಹುಡುಗ ಅಳಲು ಆರಂಭಿಸಿದ. ಹೆತ್ತ ಕರುಳಿಗೆ ಇದರಿಂದ ಇರಿದಂತಾಯಿತು!

'ಮಿಲ್ಲು ಅಲ್ಲಿ ಸುರುವಾದ ವರ್ಷವೇ ತನ್ನ ತುಂಬು ಪ್ರಾಯದಲ್ಲಿ ಆತ ಕೆಲಸಕ್ಕೆ ಸೇರಿದ ಇದು ವರೆಗೆ, ಅವರು ಕೊಡುತ್ತಿದ್ದ ಚಿಲ್ಲರೆ ಸಂಬಳದಲ್ಲಿಯೇ ತೃಪ್ತಿಯಾಗಿದ್ದ, ಹಾಗಾಗಿ ಒಂದು ಚಿಕ್ಕಾಸು ಉಳಿಸಲು ಆಗಲಿಲ್ಲ ಮೊನ್ನೆ ಸಂಜೆ ಆತನನ್ನು ಹೊರಹಾಕಿದರು' ಈ ವಿಚಾರಗಳು ಮುದುಕನನ್ನು ಹುಚ್ಚನನ್ನಾಗಿ ಮಾಡಿತು

ಶುಭ್ರವಾದ ಹತ್ತಿಯ ರಾಶಿಯನ್ನು ಮಿಲ್ಲಿಗೆ ತರುತ್ತಿದ್ದರು. ಅದರಿಂದ ನೂಲುಮಾಡಿ, ಶುದ್ಧ ಬಟ್ಟೆ ಮಾಡಿ ತಮಗೆ ಬೇಕಾದುದನ್ನೆಲ್ಲಾ ಹಿಂಡಿ ತೆಗೆದು ಕಡೆಗೆ ಉಳಿದ ಹಾಳು ಕಸವನ್ನು ಹೊರಗೆ ಬಿಸಾಡಿ ಬಿಡುತ್ತಿದ್ದರು. ಮಿಲ್ಲಿನ ಹೃದಯ ಶೂನ್ಯತೆಯಂತೆ ಅದರ ಮಾಲಿಕರದ್ದೂ ಇರಬೇಕು ಅನ್ನಿಸಿತು!

ಬಾಗಿಲನ್ನು ನೂಕಿ ಬೋರ ಒಳಗೆ ಬಂದ. ಕೊಡಲಿಯನ್ನು ಹೆಗಲಿಂದ ಇಳಿಸಿ, ಒಂದು ಒಣಗಿದ ಬಟ್ಟೆಯಿಂದ ತಲೆ, ಮೈ ಎಲ್ಲಾ ಒರಸಿದ.

ಮಳೆ ಬಿಡಲೇ ಇಲ್ಲ ಕಟ್ಟಿಗೆ ಸಿಗಿಯುವ ಕೆಲಸವೂ ಇಲ್ಲ . ' ಸಿಟ್ಟುಸಿರೆಳೆದು ಹೇಳಿದ ಇದು ಅವರಿಗೆ ಕೇಳಿಸಿತೋ ಇಲ್ಲ

[ಇನ್ನೊಂದು ಪುಟಕ್ಕೆ ಮುಂದುವರಿಯುವುದು]

ಆಕೆಯ ತಲೆಯು ಸೀಸದ ತಲೆಯಂತೆ ಭಾರವಾಗಿತ್ತು!

ಬಾಲ್ಯದಿಂದ ಶಿರೋವೇದನೆಯಿದ್ದಿತು ದಿನನಿತ್ಯ ಕ್ರುಶನ್ ಸೇವನೆಯಿಂದ ಆಕೆಯ ಆರೋಗ್ಯ ನೆಟ್ಟಗಾಗಿರುವುದು!

ಇಪ್ಪತ್ತು ವರ್ಷಗಳ ಸಮಯ ಅತಿ ಕಠಿಣತರದ ಶಿರೋವೇದನೆಯನ್ನು ಅನುಭವಿಸಿ ಕೊನೆಗೆ ಕ್ರುಶನ್ ಲವಣಗಳ ಸೇವನೆಯಿಂದ ಒಳ್ಳೆ ಗುಣಾನುಭವವನ್ನು ಹೊಂದಿದ ಈ ಸ್ತ್ರೀ ಈಗ ಸ್ವರ್ಗ ಕಂಡಂತಾಗಿದೆ ಈಗ ಅವಳು ನಿತ್ಯವೂ ಕ್ರುಶನ್ ಲವಣವನ್ನು ಸೇವಿಸಲು ಮರೆಯುವುದಿಲ್ಲ ಆಕೆಯ ಹಿಂದಿನ ಸಂಕಟಾನುಭವಗಳನ್ನು ವಿವರಿಸುವ ಆಕೆಯ ಪತ್ರವು ಇಲ್ಲಿ ಕೊಡಲಾಗಿದೆ

'ಅನೇಕ ವರ್ಷಗಳ ತನಕ ಶಿರೋವೇದನೆಯನ್ನು ಅನುಭವಿಸಿದವಳು. ನಾನು ನನ್ನ ೧೧ನೇ ವಯಸ್ಸಿನಲ್ಲಿ ಆರಂಭವಾದ ಅದು ಮೊನ್ನೆ ತನಕ ನನ್ನನ್ನು ಪೀಡಿಸುತಿತ್ತು ಈಗ ನನ್ನ ಪ್ರಾಯ ೩೦ ಎಲ್ಲೆಲ್ಲೂ ಕ್ರುಶನ್ ಲವಣಗಳ ಜಾಹೀರು ಆಗುವುದನ್ನು ಕಂಡ, ಅದನ್ನು ಸೇವಿಸಬೇಕಾಗಿ ಅಪೇಕ್ಷಿಸಿ ಒಂದು ಬಾಟ್ಲಿಯನ್ನು ತಂದೆ ಒಂದೇ ಎರಡು ದಿನಗಳ ಸೇವನೆಯಿಂದ ನನಗೆ ವಿಚಿತ್ರತರದ ಫಲವು ದೊರಕಿರುತ್ತದೆ ನನ್ನಲ್ಲಿರುವ ಶಿರೋವೇದನೆಯು ಮಾಯವಾಗಿರುತ್ತದೆ ಕ್ರುಶನ್ ಔಷಧಿಯು ನಿಜವಾಗಿಯೂ ವಿಚಿತ್ರತರದ್ದು ಮಿ। ಇ ಡಿ

ಹೊಟ್ಟೆಯು ಹಾಳುಸ್ಥಿತಿಯು ತಲೆನೋವಿನ ಕಾರಣವೆಂದು ಅನೇಕ ಸಂದರ್ಭಗಳಲ್ಲಿ ಕಂಡುಹಿಡಿಯಲಾಗಿದೆ ದೇಹದೊಳಗೆ ಉಂಟಾಗುವ ಕಲ್ಮಶಗಳಿಂದ ರಕ್ತವು ಹೀರಿಕೊಂಡಿರುವುದರಿಂದಲೇ ಶಿರೋವೇದನೆಯುಂಟಾಗುವುದು ಈ ವಿಷ ಕಲ್ಮಶಗಳನ್ನು ತೆಗೆದುಬಿಡಿರಿ ಅವುಗಳು ಇನ್ನೊಮ್ಮೆ ಉಂಟಾಗದಂತೆ ನೋಡಿಕೊಳ್ಳಿರಿ ಆಗ್ಯೆ ನೀವು ಸಂಕಟದಿಂದ ಪಾರಾಗುವಿರಿ ನಿಮ್ಮ ಅಂಗಾಂಗವನ್ನು ಪರಿಶುದ್ಧವಾಗಿಡಲು ಕ್ರುಶನ್ ಲವಣಗಳು ನಿಸರ್ಗದೊಡನೆ ಸಹಕರಿಸುತ್ತದೆ ಅದು ನಿಮ್ಮ ದೇಹದೊಳಗಿರುವ ವಿಷಕಲ್ಮಶಗಳನ್ನು ಹೊರಡಿಸುತ್ತದೆ ಅದರಿಂದಲೇ ಕ್ರುಶನ್ ಲವಣಗಳಿಂದ ಖಾತ್ರಿಯಾದ ಗುಣವು ದೊರಕುತ್ತದೆ

ಎಲ್ಲಾ ಸ್ಟೋರುಗಳಲ್ಲಿ ಬಜಾರುಗಳಲ್ಲಿ ಕ್ರುಶನ್ ಲವಣವು ದೊರಕುತ್ತದೆ

No 19

ಮದ್ರಾಸು ಮಂತ್ರಿಮಂಡಳ

ಸಾರ್ವಜನಿಕರ ಹಿತಕ್ಕೆ ವಿರುದ್ಧವಾದ ಆಚಾರವು ಶಾಶ್ವತವಾಗಿ ನಿಲ್ಲಲಾರದು

ನಮ್ಮ ರಾಷ್ಟ್ರದಲ್ಲಿ ಪಕ್ಷಭೇದಗಳಿಗೆ ಎಡೆಯಿಲ್ಲ



ಮಾನ್ಯ ಗಿರಿಯವರು

[ಯುವಕರೂ ದೇಶಸೇವೆಯೂ]

'ಯುವಕರು, ರಾಜಕೀಯ ಪಕ್ಷ ಮತ್ತು ಅವುಗಳ ಭೇದಗಳ ಕುರಿತು, ಮೊದಲಾಗಿ ವಿಚಾರದ ಗೊಂದಲಕ್ಕೆ ಬೀಳಬಾರದು ಪ್ರಥಮತಃ ಇಡೀ ಭಾರತ ದೇಶದ ಹಿತವು ಅವರ ದೃಷ್ಟಿಯು ಮರೆಯದೆ ಇರಬೇಕು.. ನಮ್ಮ ರಾಷ್ಟ್ರದಂತಹ ಪ್ರದೇಶಗಳಲ್ಲಿ ಹೆಚ್ಚು ಪಕ್ಷಭೇದಗಳಿರಲು ಸಾಧ್ಯವಿಲ್ಲ. ಅಲ್ಲಿ ಕೇವಲ ಎರಡೇ ಪಕ್ಷ; ಒಂದು ಸ್ವಾತಂತ್ರ್ಯ ಬೇಕೆನ್ನುವ ಪಕ್ಷ, ಇನ್ನೊಂದು ಅದನ್ನು ಬೇಡವೆನ್ನುವ ಪಕ್ಷ ವಿದೇಶದ ಪ್ರಜಾಪ್ರಭುತ್ವ ಪದ್ಧತಿಯು ನಮ್ಮಲ್ಲಿಗೆ ಸರಿಯಾಗುವುದಿಲ್ಲ ಭಾರತದ ರಾಜಕೀಯ ತತ್ವವೆಂದರೆ, ಸರಳವಾದ, ಶುದ್ಧವಾದ ಭೇದಗಳಿಂದ ಪ್ರಜಾಪ್ರಭುತ್ವ ಪದ್ಧತಿಯಿಂದ ಇರುವ ವ್ಯವಸ್ಥೆಯುದಾಗಿರುತ್ತದೆ

'ಇಡೀ ಮಾತೃಭೂಮಿಯ ಏಕಮಾತ್ರ ಪ್ರತಿನಿಧಿ ಸಂಸ್ಥೆಯು ಕಾಂಗ್ರೆಸು ಒಂದೇ! ಭಾರತದಿಂದ ಸಾಮ್ರಾಜ್ಯಶಾಹಿಯನ್ನು ಓಡಿಸಿ, ಆರ್ಥಿಕ, ಸಾಮಾಜಿಕ, ರಾಜಕೀಯ ದೃಷ್ಟಿಗಳಿಂದ ಸ್ವಾತಂತ್ರ್ಯವನ್ನು ಪಡೆಯಬೇಕೆಂದು ಯಾರು ಇಚ್ಛಿಸುವರೋ, ಅವರು ಕಾಂಗ್ರೆಸನ್ನು ಬಲಪಡಿಸಬೇಕು ಅವರು ತಮ್ಮ ಶಿಬಿರದಲ್ಲಿಯೇ ಜಗಳಾಡಲು ಪ್ರಾರಂಭಮಾಡಿದರೆ ಅಭಿವೃದ್ಧಿಯನ್ನು ಕೆಡಿಸಿ ವಿನಾಶವನ್ನು ಆಹ್ವಾನಿಸಿಕೊಂಡಂತೆ ಆಗಿದೆ ಇದೇ ತತ್ವವೇ ಜಾತೀಯ ಐಕ್ಯತೆಯ ಪ್ರಯೋಜನವನ್ನೂ ತಿಳಿಸುತ್ತದೆ ಹಿಂದುಗಳಾಗಲಿ, ಮುಸ್ಲಿಮರಾಗಲಿ ಎಲ್ಲರೂ ಒಂದೇ ಭಾರತಮಾತೆಯ ಪುತ್ರರೆಂದು ವಿಚಾರಿಸಿ ದೇಶದ ಹಿತವನ್ನು ಮಾಡಬೇಕು ಪ್ರತಿಯೊಂದು ಜಾತಿಯವರೂ, ಮೊದಲನೆಯದಾಗಿ ತಾವು ಭಾರತೀಯರು ಎಂದೇ ವಿಚಾರಿಸಬೇಕು ನಾನು ಹಿಂದೆ ತಿಳಿಸಿದ್ದಂತೆ, ನಿಜವಾಗಿಯೂ ನಮ್ಮ ಶತ್ರುಗಳು ವಿದೇಶೀಯರಲ್ಲ, ಹಿಂದೀಯರೇ ಆಗಿದ್ದಾರೆ! ಅವರ ಭೇದಭಾವ, ಅವರ ದೌರ್ಬಲ್ಯ ಇವುಗಳೇ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಹಿಂದೂದೇಶದಲ್ಲಿ ಸಹಾಯವನ್ನು ಕೊಟ್ಟಿದೆ' ಹೀಗೆಂದು ಮಾನ್ಯ ಗಿರಿಯವರು ಚಿಂಗಲ್ಪಟ್ಟಿನ ಯುವಕರಿಗೆ ಉಪದೇಶಿಸಿದರು

ಪ್ರಧಾನ ಮಂತ್ರಿ ರಾಜಾಜಿ

[ಆಚಾರ ಮತ್ತು ಸಾರ್ವಜನಿಕ ಹಿತದ ವಿಷಯ]

ಹರಿಜನ ದೇವಾಲಯ ಪ್ರವೇಶಕ್ಕೆ ಆಕ್ಷೇಪವೆತ್ತುವವರು, ಇದು ಬಹಳ ಕಾಲದಿಂದ ಬಂದ ಆಚಾರವೆಂದೂ, ಆಚಾರವು ಧರ್ಮದ ಬಲವಂತದಿಂದಲಾದರೂ ಕಾಪಾಡಲ್ಪಡಬೇಕೆಂದೂ ಹೇಳುವರು ಇದು ಖಂಡಿತವಾಗಿಯೂ ಪ್ರಜಾಪ್ರಭುತ್ವ ತತ್ವಕ್ಕೆ ಅರ್ಥವಾಗದ ವಿಷಯ. ನಿಷ್ಠುರಹೃದಯಿಗಳಾದ ಸನಾತನಿಗಳು 'ನಾವು ಹರಿಜನರೊಡನೆ ದೇವರ ಆರಾಧನೆ ಮಾಡಲಿಕ್ಕಿಲ್ಲವೆಂದು ಹೇಳುವುದಿದ್ದರೆ, ಅದು ಅವರ ಇಷ್ಟ. ಆದರೆ ಯಾವದೊಂದು ಆಚಾರವು ಸಾರ್ವಜನಿಕ ಅಭಿಪ್ರಾಯಕ್ಕೆ ವಿರುದ್ಧವಿದೆಯೋ, ಅದನ್ನು ಸರಕಾರವು ಶಾಸನ ಮೂಲಕ ತಿದ್ದಮಾಡುವಲ್ಲಿ, ಸನಾತನಿಯು ವಿರುದ್ಧ ಬರುವುದು ಸಾಧ್ಯವಿಲ್ಲ. ಹಿಂದೆ ಆಚಾರವೇ ಕಾನೂನಾಗಿ ಬಂದಿರಬಹುದು; ಆದರೆ ಆಚಾರವು ಸಾರ್ವಜನಿಕರಿಗೆ ವಿರುದ್ಧವಾಗಿ ಶಾಶ್ವತ ನಿಲ್ಲುವುದು ಸಾಧ್ಯವಿಲ್ಲ ಹಾಗಾದರೆ, ಇದು ಸಾರ್ವಜನಿಕ ತತ್ವಕ್ಕೆ ವಿರುದ್ಧವಾಗಿ ನಡೆದುದೇ ಎಂದು ಕೇಳಬಹುದು ಆದರೆ ಸಾರ್ವಜನಿಕ ಅಭಿಪ್ರಾಯವು ಎಲ್ಲಾ ಸಮಯದಲ್ಲಿಯೂ ಒಂದೇ ವಿಧವಾಗಿರುವುದು ಸಾಧ್ಯವಿಲ್ಲ ಸಮಯಕ್ಕೆ ಸರಿಯಾದ ವ್ಯತ್ಯಾಸವಾಗುವ ಗುಣವು ಅದರಲ್ಲಿದೆ ಇಂದು ಹರಿಜನ ದೇವಾಲಯ ಪ್ರವೇಶವನ್ನು ಜನತೆಯು ಆಹ್ವಾನಿಸುತ್ತದೆ. ಅದಕ್ಕೆ ವಿರೋಧ ಯಾರು ಹೇಳುತ್ತಾರೋ ಅವರು ನ್ಯಾಯಮಾಡುವುದಿಲ್ಲ ಇದು ಜನತೆಯ ಹಕ್ಕಿನಲ್ಲಿ ಸರಕಾರವು ಮಧ್ಯವರ್ತಿಯಾಗುವ ವಿಷಯವಲ್ಲ; ಯಾವುದು ಅನೇಕ ಸಮಯಗಳಿಂದ, ಸಮಾಜಕ್ಕೆ ಅನ್ಯಾಯವನ್ನು ಮಾಡಿತ್ತೋ, ಯಾವುದಕ್ಕಾಗಿ ಈಗ ಸಾರ್ವಜನಿಕರು ಆಕಾಂಕ್ಷಿಸುತ್ತಿದ್ದಾರೋ, ಅದನ್ನು ಸರಕಾರವು ಸರ್ವಥಾ ಶಾಸನ ಮೂಲಕ ಸಮರ್ಥಿಸುವ ವಿಷಯವಾಗಿದೆ ಈ ಆಚಾರವು ಬಹುಮಂದಿಯ ಮನಸ್ಸನ್ನು ನೋಯಿಸಿ, ಬಹಳ ಅನಾಹುತ ಮಾಡಿದೆ ನಮ್ಮ ಒಟ್ಟು ಜನಸಂಖ್ಯೆಯ ಆರರ ಒಂದು ಪಾಲು ಜನರಿಗೆ ಇದರಿಂದ ಅನ್ಯಾಯವಾಗಿದೆ ಹೀಗೆಯೇ ಮುಂದುವರಿದಿದ್ದ ಸಮಯದಲ್ಲಿ ಇದರಿಂದ ಅನೇಕ ಕೆಡುಕುಗಳಾಗುತಿತ್ತು ಆದಕಾರಣ ಈ ಶಾಸನವನ್ನು ಕಾಂಗ್ರೆಸು ಮಂತ್ರಿಮಂಡಳವು ತಂದಿದೆ' ಹೀಗೆಂದು ರಾಜಾಜಿಯವರು ಬಿಲ್ಲನ್ನು ಎಸೆಂಬ್ಲಿಯಲ್ಲಿ ತರುವಾಗ ಹೇಳಿದರು.



ಮಾನ್ಯ ವಾರ್ಕಿಯವರು

[ಪ್ರಾಕೃತಿಕ ವ್ಯಾಯಾಮದ ವಿಷಯ]

'ಜನಾಂಗದ ಅಭಿವೃದ್ಧಿಯಲ್ಲಿ, ಆರೋಗ್ಯ ರಕ್ಷಣೆಯಲ್ಲಿ ಮಾನವನು, ಶಾರೀರಿಕ ವ್ಯಾಯಾಮವನ್ನು ತೆಗೆದುಕೊಳ್ಳುವುದು ಅವಶ್ಯ. ಆದರೆ ಹಿಂದಕ್ಕೆ ಇಂತಹ ವ್ಯಾಯಾಮಗಳನ್ನು ಕೊಡಲು ಅಧಿಕ ಖರ್ಚಿನ ಏರ್ಪಾಡುಗಳು ಮಾಡಲಾಗುತ್ತಿತ್ತು. ಹಾಗಾಗಿ ಹಲವರು ಟೆನಿಸ್ ಮತ್ತು ಬಿಲಿಯಾರ್ಡ್ಸ್ ಆಟಗಳೇ ಆರೋಗ್ಯ ರಕ್ಷಣೆಗೆ ತಕ್ಕದೆಂದು ಅಭಿಪ್ರಾಯಮಾಡಿದಂತಿದೆ ಕೆಲ ಸಮಯದ ಹಿಂದೆ ಪ್ರಧಾನ ಮಂತ್ರಿಯವರು ಬಿಲಿಯಾರ್ಡ್ಸ್‌ನ ಸ್ಥಳವನ್ನು ಶಿಲಾ ಕಲ್ಲು ತೆಗೆದುಕೊಳ್ಳಬೇಕೆಂದು ಹೇಳಿದುದನ್ನು ಚೆನ್ನಾಗಿ ಆಲೋಚಿಸುವುದು ಅವಶ್ಯವಿದೆ ಟೆನ್ನಿಸ್ ಮತ್ತು ಬಿಲಿಯಾರ್ಡ್ಸನ್ನು ಜನರು ಬಿಟ್ಟುಬಿಡಬೇಕೆಂದು ನಾವು ಹೇಳುವುದಿಲ್ಲ. ಯಾರಿಗೆ ಅದು ಸಾಧ್ಯವಿದೆಯೋ, ಅಂತಹವರು ಖಂಡಿತವಾಗಿ ಅದನ್ನೇ ಆಡಬಹುದು ಆದರೆ, ಸಿರಿವಂತರು ಹೆಚ್ಚು ವೆಚ್ಚಮಾಡಿ, ಕೃತ್ರಿಮ ಆಟಗಳಿಂದ ಆರೋಗ್ಯವನ್ನು ಗಳಿಸುವಂತೆಯೂ ಪ್ರಕೃತಿಸಹಜವಾದ ಮತ್ತು ಖರ್ಚಿಲ್ಲದ ರೀತಿಯಿಂದ, ಬಡವರೂ ಆರೋಗ್ಯ ಮತ್ತು ವ್ಯಾಯಾಮಗಳನ್ನು ಪಡೆಯಬೇಕು ಆದ್ದರಿಂದ ಸರಕಾರವು ಶಾಲೆಗಳಲ್ಲಿ ಹೆಚ್ಚಿನ ಖರ್ಚಿನ ಆಟಕ್ಕೆ ಸಹಾಯವನ್ನು ಕೊಡಲಾರದು ಇದು ಬಡವರ ತೆರಿಗೆಯ ಪಾಲಿನ ಹಣವೆಂಬುದು ಮಾತ್ರ ಕಾರಣವಲ್ಲ, ದೇಶದ ಬಹುಜನರಿಗೆ ಬಿಲಿಯಾರ್ಡ್ಸಿಗಿಂತ ಶಿಲೆಯ ತುಂಡೇ ಒಳ್ಳೆಯದಾಗಿದೆ. ಓಡುವುದು, ನಡೆಯುವುದು, ಹಲವು ಸಲ ಮನೆ ಮತ್ತು ಶಾಲೆಗಳ ಪರಿಸರದಲ್ಲಿರುವ ಮರಗಳಿಗೆ ಹತ್ತುವುದೇ ಅವರಿಗೆ ಆರೋಗ್ಯವನ್ನೂ, ಸಾಕಷ್ಟು ವ್ಯಾಯಾಮವನ್ನೂ ಕೊಡಲು ಸಾಕಾಗಿರುತ್ತದೆ ಯಾವ ಹುಡುಗರಿಗೆ, ಹೊಟ್ಟೆಗೆ ಸಾಕಷ್ಟು ತಿನ್ನಲು ಇಲ್ಲವೋ ಅಂತಹವರನ್ನು, ಹೆಚ್ಚು ಖರ್ಚಿನಿಂದ, ಕೃತ್ರಿಮವಾಗಿ, ಆಟವಾಡಿಸುವುದು ಹಾನಿಕರವೂ 'ಆಗಿದೆ'. ಹೀಗೆಂದು ಮಾನ್ಯ ವಾರ್ಕಿಯವರು ಮದ್ರಾಸಿನ ವ್ಯಾಯಾಮ ಪರಿಷತ್ತಿನಲ್ಲಿ ಭಾಷಣ ವಿತ್ತರು.

ಎರಡು ವರ್ಷಗಳ ಕಾಂಗ್ರೆಸು ಆಡಳಿತೆ

ಸರ್ ಟಿ ವಿಜಯರಾಘವಾಚಾರ್ಯರು ಬಳ್ಳಾರಿಯಲ್ಲಿ ಭಾಷಣಮಾಡುತ್ತಾ ಮದ್ರಾಸು ಮಂತ್ರಿಮಂಡಳದ ಎರಡು ವರ್ಷಗಳ ಸಮರ್ಪಕವಾದ ಆಡಳಿತೆಯನ್ನು ಪ್ರಶಂಸಿಸಿ ಹೀಗೆಂದು ಹೇಳಿದರು

'ಕಾಂಗ್ರೆಸ ಸರಕಾರವು ಸೇಲಮಿನಲ್ಲಿ ಮದ್ಯಪಾನ ನಿಷೇಧ ಮಾಡಿ[illegible] ಹಲವರು ಅಮೆರಿಕದ ಉದಾಹರಣೆ[illegible] ಹಿಡಿದು, ಅದು ಖಂಡಿತವಾಗಿ ಜಯಶೀಲವಾಗಲಾರದು ಎಂದು ಹೇಳಿದ್ದರು. ಆದರೆ ಸೇಲಮಿನಲ್ಲಿ ಆದ ಸಂಪೂರ್ಣ ಯಶಸ್ವಿತೆಯ ಕುರಿತು, ಅಲ್ಲಿನ ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ, ನಾನು ಸರಕಾರದ ವರದಿಯು ಸಂಪೂರ್ಣ ಸತ್ಯವೆಂದೂ, ಮದ್ಯಪಾನ ನಿಷೇಧವು ಜಯಶಾಲಿಯಾಗಿದೆಯೆಂದೂ ತಿಳಿದಿದ್ದೇನೆ

'ಹಿಂದೀ ಭಾಷೆಯನ್ನು ಐಚ್ಛಿಕ ಭಾಷೆಯಾಗಿ ತೆಗೆದುಕೊಳ್ಳುವ ವಿಷಯದಲ್ಲಿ ಬಹಳ ಗೊಂದಲವು ಹುಟ್ಟಿದೆ ಉತ್ತರ ಭಾರತದಲ್ಲಿ ಇಲ್ಲಿನಂತೆ ಇಂಗ್ಲೀಷು ಬಲವಂತ ಆಕ್ರಮಣ ಮಾಡಿಲ್ಲ ಅಲ್ಲಿ ಎಲ್ಲೆಲ್ಲಿಯೂ ಹಿಂದೀ ಭಾಷೆಯೇ ಜನರಿಂದ ವ್ಯವಹರಿಸಲ್ಪಡುತ್ತಿದೆ ಉತ್ತರ ಭಾರತದಲ್ಲಿಯೂ, ಅಲ್ಲಲ್ಲಿ ಪ್ರಾಂತಗಳ ಭಾಷೆಯು ಬೇರೆಬೇರೆಯಿದೆ ಆದರೆ ಹಿಂದೀ ಭಾಷೆಗೆ ಅಲ್ಲಿ ವಿರೋಧವು ಇಲ್ಲ ಇಟಲಿಯ ಬಾಲಕ ಬಾಲಕಿಯರು ತಮ್ಮ ದಿನನಿತ್ಯದ ವ್ಯವಹಾರಕ್ಕೇ ಇಂದು ಮೂರು ವಿದೇಶೀಯ ಭಾಷೆಗಳನ್ನು ಕಲಿತುಕೊಳ್ಳಬೇಕಾಗಿದೆ ಆದ್ದರಿಂದ ಹಿಂದೀ ವಿರೋಧವು ಸಹಜವಾದುದಲ್ಲ, ತೆಲುಗು ಹಿಂದಿಗೆ ವಿರೋಧ ಮಾಡಲಿಲ್ಲ, ಆದರೆ ತಮಿಳಿನ ವಿದ್ಯಾರ್ಥಿಗಳು ತೆಲುಗಿನ ವಿದ್ಯಾರ್ಥಿಗಳಿಗಿಂತ ಜ್ಞಾನದಲ್ಲಿ ಕಡಿಮೆಯವರೆಂದು ನಾನು ಖಂಡಿತ ತಿಳಿಯುವುದಿಲ್ಲ ಇದು ಕೇವಲ ಹಿಂದೀ-ವಿರೋಧವು ರಾಜಕೀಯವಾಗಿದೆ ಆದರೆ ಇಂಗ್ಲಿಷನ್ನು ಪ್ರಯೋಗಕ್ಕೆ ತಂದಾಗ ಯಾರೂ ವಿರೋಧಿಸಲಿಲ್ಲ ಈ ಎರಡು ವರ್ಷಗಳ ಯೋಗ್ಯ ಆಡಳಿತೆಗಾಗಿ ಮದ್ರಾಸಿನ ಕಾಂಗ್ರೆಸು ಸರಕಾರವನ್ನು ಅಭಿನಂದಿಸಬೇಕು

ಮನೋಹರ ಗ್ರಂಥಮಾಲಾ, ಧಾರವಾಡ.

ಸ್ವತಂತ್ರ ಕಥೆ, ಕಾದಂಬರಿ, ನಾಟಕ, ಹರಟೆ ಮೊದಲಾದ ಮನಮೆಚ್ಚಿಸುವ ಸರಸ ವಾಙ್ಮಯದ ಸುಗ್ಗಿ! ಅಖಿಲ ಕರ್ನಾಟಕದಲ್ಲಿ ಹೆಸರುಪಡೆದ ಬರಹಗಾರರ ಕೈವಾಡ ಮನದ ಹಸಿವೆಯನ್ನು ಹಿಂಗಿಸಿಕೊಳ್ಳಿ!

ಒಂದು ವರ್ಷದಲ್ಲಿ ೧೫೦೦ ಪುಟಗಳುಳ್ಳ ಆರು ಸರಸ ಗ್ರಂಥಗಳು

ವಾರ್ಷಿಕ ಚಂದಾ ರೂ ೩-೮-೦

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ಕೋರಿಸಲಾಗುವುದು.

ವ್ಯವಸ್ಥಾಪಕ—

ಮನೋಹರ ಗ್ರಂಥಮಾಲಾ, ಧಾರವಾಡ.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ.

ವಿಶೇಷ ಮಾಹಿತಿಗೆ ಬರೆಯಿರಿ

ಜಮ್ಮಿ ವೆಂಕಟ್ರಮಣಯ್ಯ

ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್,

ಮೈಲಾಪುರ, ಮದ್ರಾಸು.

ಗಾಂಧಿಜಿಯವರ ಸಂದೇಶ

ಮಂತ್ರಿಗಳ ಕಾರ್ಯಗಳಲ್ಲಿ ನಾನು ಮಧ್ಯವರ್ತಿಯಾಗುವುದಿಲ್ಲ

ಸ್ವರಾಜ್ಯವು ಹಿಂದುಗಳಿಗೆ ಮಾತ್ರವಲ್ಲ

'ಮಂತ್ರಿಗಳ ಕಾರ್ಯದಲ್ಲಿ ನಾನು ಭಾಗಿಯಾಗುವುದಿಲ್ಲ'

'ನಾನು ಸರ್ವಶಕ್ತನಾಗಿದ್ದೇನೆಯೇ?' ಹೀಗೆಂದು 'ಹರಿಜನ' ಪತ್ರಿಕೆಯಲ್ಲಿ ಮಹಾತ್ಮರು ಪ್ರಶ್ನೆಮಾಡಿದ್ದಾರೆ— ಅದಕ್ಕೆ ಉತ್ತರ ಹೇಳುತ್ತಾ 'ನಾನು ಮಂತ್ರಿಗಳ ವಿಷಯವಾಗಿಯಾಗಲಿ, ವರ್ಕಿಂಗ್ ಕಮಿಟಿಯ ವಿಷಯದಲ್ಲಿಯಾಗಲಿ ಏನೂ ಸಾಮರ್ಥ್ಯವುಳ್ಳವನಲ್ಲ'ವೆಂದಿದ್ದಾರೆ

ತಾನು ಮಂತ್ರಿಗಳ ಕೆಲಸಗಳನ್ನು ಬಹು ಸ್ವಲ್ಪ ಸ್ವಲ್ಪ ಮಾತ್ರ ತಿಳಿದಿದ್ದೇನೆ ಅವರ ಕೆಲಸದಲ್ಲಿ ನಾನೂ ಏನೂ ಮಧ್ಯವರ್ತಿಯಾಗಿಲ್ಲವೆಂದೂ ಅವರು ಹೇಳುತ್ತಾರೆ ವರ್ಕಿಂಗ್ ಕಮಿಟಿಯ ಅನೇಕ ನಿರ್ಣಯಗಳ ವಿಷಯ ತಾನು ತಿಳಿದಿರುವುದೇ ಇಲ್ಲವೆಂದೂ, ಅವರು ನಿರ್ಣಯಗಳನ್ನು ಮಂಜೂರು ಮಾಡಿ, ಪತ್ರಿಕೆಗಳಲ್ಲಿ ಪ್ರಕಟವಾದ ಮೇಲೆ ಮಾತ್ರ ತಿಳಿಯುತ್ತಿದ್ದೇನೆಂದೂ ಸ್ಪಷ್ಟಪಡಿಸಿರುವರು

ಈ ಉತ್ತರವನ್ನು ಗಾಂಧಿಜಿಯವರು, ಕೆಲವು ಕಾಂಗ್ರೆಸು ಕೆಲಸಗಾರರು ತನ್ನಲ್ಲಿಗೆ ಬಂದು ಮಾತನಾಡಿದ ಸಂಬಂಧವಾಗಿ ಹೇಳಿ— ಸಂದರ್ಭ ಬಂತು ಹಾಗೆ ಬಂದವರಲ್ಲಿ ಒಬ್ಬರು ವ ಹಾತ್ಮಾಜಿಯವರನ್ನು ಕುರಿತು

'ಮಧ್ಯಪ್ರಾಂತದವರಾದ ನಾವು ನೀವು ಯಾವ ಕೆಲಸವನ್ನು ಮಾಡಲು ಸಮರ್ಥರೆಂದು ತಿಳಿಯುತ್ತೇವೆ ಮಂತ್ರಿಮಂಡಳವನ್ನು ಬೇಕಾದಂತೆ ತಿರುಗಿಸುವುದು ನಿಮಗೆ ಸಾಧ್ಯವಿದೆ' ಎಂದು ಹೇಳಿದರು ಇನ್ನೊಬ್ಬರೆಂದದ

ನೀವೇ ನಿಜವಾದ ವರ್ಕಿಂಗ್ ಕಮಿಟಿ ಆದುದರಿಂದ ಕಾಂಗ್ರೆಸಿನವರ ಇಂಥ ಕಾಂಗ್ರೆಸಿನಲ್ಲಿರುವ ವಂಚನೆಯಿಂದ ನಮ್ಮನ್ನು ದೂರುತ್ತಾರೆ ಕಾಂಗ್ರೆಸಿನಲ್ಲಿ ನೀತಿ ಇರಬೇಕೆಂದು ನೀವು ಹೇಳಿದಿರಿ ಕಾಂಗ್ರೆಸು ಅಧಿಕಾರ ವಹಿಸುವಾಗ ಅನ್ಯಾಯವು ಸರ್ವಥಾ ಆಗಬಾರದೆಂದಿರಿ ಹಲವು ಪ್ರಾಂತಗಳಲ್ಲಿ ಈಗಲೂ ವಂಚನ ನಡೆಯುತ್ತದೆ ಜನರು ತಮ್ಮ ತಮ್ಮೊಳಗೆ ಜಗಳಾಡುತ್ತಾರೆ ನೀವು ಕೆಲವೇ ಮಂದಿ ಖ್ಯಾತ ದೇಶಸೇವಕರು ಸಾಕೆಂದು ಹೇಳಿದಿರಿ ಆದರೆ ಕಾಂಗ್ರೆಸಿನಲ್ಲಿ ಅಸಂಖ್ಯಾತರಾಗಿ ಜನರು ಸೇರಿದ್ದಾರೆ ಇದಕ್ಕೆಲ್ಲಾ ನೀವೇ ಕಾರಣ ಇತ್ತೀಚೆಗೆ ಶುದ್ಧೀಕರಣದ ವಿಷಯವಾಗಿ ಕಾಂಗ್ರೆಸಿನಲ್ಲಿ ಆದ ಠರಾವು ಏನೂ ತೃಪ್ತಿಕರವಾಗಿಲ್ಲ ನೀವೆಲ್ಲ ಮಾಡಬಲ್ಲಿರಿ ಆದರೆ ನಿಮ್ಮನ್ನೇ ಜನರ ದೂರುತ್ತಾರೆ ನೀವು ಖಾದಿಯು ಕಾಂಗ್ರೆಸಿನ ತತ್ವವೆಂದಿರಿ ಈಗ ಕಾಂಗ್ರೆಸಿನವರ ಖಾದಿಯನ್ನು ಸಂಪೂರ್ಣ ವಿಶ್ವಾಸವಿಟ್ಟು ಧರಿಸುವುದಿಲ್ಲ ಹಲವು ಕಾಂಗ್ರೆಸು ಸದಸ್ಯರು ಖಾದಿ ಧರಿಸುವುದೇ ಇಲ್ಲ ನೀವು ಕಾಂಗ್ರೆಸನ್ನು ಸರಿದಾರಿಗೆ ತರಲಾರಿರಾದರೆ, ಕಾಂಗ್ರೆಸಿನಿಂದ ನಿಮ್ಮ ಹಿಡಿತವನ್ನು ಯಾಕೆ ಬಿಟ್ಟುಬಿಡಬಾರದು?'

ಇದಕ್ಕೆ ಗಾಂಧಿಜಿಯವರ ಉತ್ತರವು ಹೀಗಿದೆ

'ನಾನು ಮಧ್ಯಪ್ರಾಂತ'ದ ಮಂತ್ರಿಮಂಡಳದ ವಿಷಯದಲ್ಲಿಯಾಗಲಿ, ಇತರ ಮಂತ್ರಿಮಂಡಳದ ವಿಷಯದಲ್ಲಿಯಾಗಲಿ ಯಾವ ಭಾಗವನ್ನೂ ವಹಿಸುವುದಿಲ್ಲ ಹಲವು ಸಲ, ಗ್ರಾಮೋದ್ಯೋಗ, ವಿದ್ಯಾಭ್ಯಾಸಗಳ ವಿಷಯದಲ್ಲಿ, ಇತರ ಯಾವ ನಾಗರಿಕನಾದರೂ ಪತ್ರವ್ಯವಹಾರ ಮಾಡಬಹುದಾದಂತೆ, ನಾನೂ ಮಾಡುತ್ತೇನೆ ನನಗೆ ಮನಸ್ಸಿದ್ದರೂ ಅವರ ಕಾರ್ಯದಲ್ಲಿ ಸೇರಲು ನನಗೆ ಅವಕಾಶವಿಲ್ಲ, ಹಾಗೂ ನಾನು ಹಾಗೆ ಮಾಡುವುದೂ ಸರಿಯಲ್ಲ, ಅದು ಕಾಂಗ್ರೆಸು ಪಾರ್ಲಿಮೆಂಟರಿ ಸಬ್ ಕಮಿಟಿಯ ಕೆಲಸವಾಗಿದೆ

ನನ್ನ ಉಪದೇಶವನ್ನು ತೆಕ್ಕೊಳ್ಳುವುದೇ ಇಲ್ಲ

'ನಾನು ಎಲ್ಲಾ ವರ್ಕಿಂಗ್ ಕಮಿಟಿ ಸಭೆಗಳಿಗೆ ಹಾಜರಾಗುವುದಿಲ್ಲ ನನಗೆ ಸಂಬಂಧಿಸಿದ ವಿಷಯದಲ್ಲಿ ಮಾತ್ರ ನಾನು ವರ್ಕಿಂಗ್ ಕಮಿಟಿಯ ವಿಷಯವಾಗಿ ಸೂಚನೆ ಕೊಡುತ್ತೇನೆ ಹಲವು ನಿರ್ಣಯಗಳು ಪ್ರಕಟವಾಗುವುದಕ್ಕಿಂತ ಮೊದಲು ನನಗೆ ತಿಳಿದಿರುವುದಿಲ್ಲ. ಹಲವು ಸಲ ನನ್ನ ಮಾತು ವರ್ಕಿಂಗ್ ಕಮಿಟಿ ಸದಸ್ಯರಿಗೆ ಸರಿಯಾಗಿ ತೋರುವುದಿಲ್ಲ ನನ್ನ ಅಪೇಕ್ಷೆಯಂತೆ, ಇಂದಿರುವ ಅಸಂಖ್ಯಾತ ನಿಷ್ಪ್ರಯೋಜಕ ಸದಸ್ಯರಿಗಿಂತ, ಕೆಲವೇ ಯೋಗ್ಯ ಸದಸ್ಯರು ಇರುವುದು ಸಾಕೆಂದಿದೆ ಆದರೆ ವರ್ಕಿಂಗ್ ಕಮಿಟಿಯು ಇದನ್ನು ಮನ್ನಿಸುವುದಿಲ್ಲ

'ಖಾದಿಯ ವಿಷಯದಲ್ಲಿ ಜನರಿಗೆ ವಿಶ್ವಾಸವಿಲ್ಲವೆಂದು ನಾನು ತಿಳಿದಿದ್ದೇನೆ ಹಲವು ಸಲ ಕಾಂಗ್ರೆಸಿನ ಪ್ರತಿಜ್ಞೆಯಿಂದ ಅದನ್ನು ತೆಗೆದು ಹಾಕಬೇಕಾಗಿ ನಾನು ಹೇಳಿದ್ದೆ ಆದರೆ ಕಾಂಗ್ರೆಸು ತೆಗೆದುಹಾಕಲಿಲ್ಲ ಹಾಗೆಯೇ 'ಶಾಂತಿಯ ಮತ್ತು ನ್ಯಾಯದ ಮೂಲಕ' ಎಂಬ ಶಬ್ದವನ್ನೂ ತೆಗೆದು ಹಾಕಬೇಕಾಗಿ ಕೇಳಿದ್ದೆ ಅದನ್ನು ಅವರು ಒಪ್ಪಲಿಲ್ಲ ನಾನು ಹೀಗೆ ಸೋತು ಹೋದದ್ದನ್ನು ವರ್ಕಿಂಗ್ ಕಮಿಟಿಯ ಮೇಲೆ ನನಗೆ ಅಸಮಾಧಾನವುಂಟೆಂಬ ಮನಸ್ಸಿನಿಂದ ಹೇಳುವುದಿಲ್ಲ ಅವರಿಗೆ ಇಷ್ಟವಿದ್ದಂತೆ ಅವರು ಕಾರ್ಯ ಮಾಡಬಹುದು ನಾನು ತಿಳಿದಂತೆ ಅವರೆಲ್ಲರೂ ನನಗಿಂತ ಕಡಿಮೆಯ ರಾಷ್ಟ್ರಭಕ್ತರಾಗಿರುವುದಿಲ್ಲ ನಾನು ಅವರೊಡನೆ ವ್ಯವಹರಿಸುವುದು, ಒಂದೂ ಅವರನ್ನು ನನ್ನ ಮತಕ್ಕೆ ಒಪ್ಪಿಸಬೇಕು, ಇಲ್ಲವಾದರೆ ಅವರ ಮತದಂತೆ ನಾನು ನಡೆಯಬೇಕು ಎಂಬುದಕ್ಕಾಗಿ ಮಾತ್ರ.

'ಕಾಂಗ್ರೆಸಿನ ಆಡಳಿತೆಯಲ್ಲಿ ತಪ್ಪಿಲ್ಲವೆಂದು ನಾನು ಹೇಳುವುದಿಲ್ಲ ಹಲವು ಮಂದಿ ಸ್ವಾರ್ಥಿಗಳು ಅದನ್ನು ಸೇರಿಕೊಂಡಿದ್ದಾರೆ ಆದರೆ ಕಾಂಗ್ರೆಸು ಆಡಳಿತವು ಅನೇಕ ರೀತಿಯಿಂದ ಜನತೆಯ ಹಿತವನ್ನು ಮಾಡಿದೆ, ಎಲ್ಲದಕ್ಕಿಂತಲೂ ಮೇಲಾಗಿ, ಮದ್ಯಪಾನ ನಿಷೇಧವು ಅವರ ಮಹತ್ವದ ಕೆಲಸವೆಂದು ನಾನು ತಿಳಿಯುತ್ತೇನೆ

'ಒಂದಾನೊಂದು ದಿನ ಕಾಂಗ್ರೆಸು ಪೂರ್ಣ ನಿರ್ಮೂಲನವಾಗುವುದೆಂದು ನಾನು ಆಸೆಗೊಂಡಿದ್ದೇನೆ ನೀತಿಯ ಭದ್ರತಳಹದಿಯಿಲ್ಲದಿದ್ದರೆ ಕಾಂಗ್ರೆಸು ಪ್ರಯೋಜನವಿಲ್ಲದ ಸಂಸ್ಥೆಯಾಗುವುದು'

'ಸ್ವರಾಜ್ಯವು ಹಿಂದುಗಳಿಗೆ ಮಾತ್ರವಲ್ಲ'

'ಹಿಂದೂ ಮುಸ್ಲಿಮ್ ಐಕ್ಯವಾಗದೆ ಇರುವುದು, ನನ್ನ ಯತ್ನವು ಸಾಕಾಗದೆ ಎಂದು ಹಲವರು ಹೇಳುತ್ತಾರೆ. ಇಂದು ನಾನು ಅದಕ್ಕಾಗಿ ಪ್ರತ್ಯಕ್ಷ ಯತ್ನಮಾಡದಿರುವುದು, ನನಗೆ ಅದರಲ್ಲಿರುವ ಯಾವ ತರದ ಅವಿಶ್ವಾಸದಿಂದಾಗಲಿ ಅಲ್ಲ

'ನಾನು ಹಿಂದೂ ಮುಸ್ಲಿಂ ಒಗ್ಗಟ್ಟಾಗಬೇಕೆಂದು ಹೇಳುವುದು ಮುಖ್ಯವಾಗಿ, ಅದಾಗದೆ ಸ್ವರಾಜ್ಯವನ್ನು ಪಡೆಯಲು ಸಾಧ್ಯವಿಲ್ಲವೆಂದು ತಿಳಿದಿರುವುದರಿಂದ ಹಿಂದೂದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಹಿಂದುಗಳು ಇರುವುದರಿಂದ, ಅವರಿಂದಲೇ ಸ್ವರಾಜ್ಯದ ಚಳವಳವು ನಡೆಲ್ಪಟ್ಟು, ಯಶಸ್ವಿಯಾಗಿ ಕೊನೆಗಾಣುವುದೆಂದು ಯಾರೂ ತಿಳಿದಿರಲಿ ಸತ್ಯಾಗ್ರಹವು ಕೆಲವೇ ಮಂದಿಯಿಂದಲೇ ಯಶಸ್ವಿಯಾಗುವುದು ಆದರೆ ಈ ಕೆಲವೇ ಮಂದಿಯು ಜನಾಂಗದ ಸಂಯುಕ್ತತೆಯ ಪ್ರತಿನಿಧಿಗಳಾಗಿರಬೇಕು ಸತ್ಯಾಗ್ರಹವೆಂಬುದು ಸಶಸ್ತ್ರಯುದ್ಧದಂತೆ ಜನಸಂಖ್ಯೆಯಲ್ಲಿ ಹೊಂದಿಕೊಂಡಿಲ್ಲ

ಹಿಂದೂ ಮುಸ್ಲಿಂ ಐಕ್ಯವಾಗದಿರುವುದಕ್ಕಾಗಿ ನಾನು ತಾಳ್ಮೆಗೆಟ್ಟಿದ್ದೇನೆ, ಕಾರಣವೇನೆಂದರೆ ಸ್ವರಾಜ್ಯವು ಅದರಿಂದಲೇ ಪಡೆಯಬೇಕಾಗಿದೆ ನಾನು ಹುಡುಗನಿದ್ದಾಗಿನಿಂದ ಇಂದಿನ ವರೆಗಿನ ನನ್ನ ಕನಸೇ ಅದಾಗಿದೆ ಈ ಕನಸು ನನ್ನ ಜೀವಮಾನದಲ್ಲಿಯೇ ಕೊನೆಗೊಳ್ಳುವಂತೆ ನೀವೆಲ್ಲರು ಭಗವಂತನಲ್ಲಿ ಮೊರೆಯಿಡಬೇಕು ಹೀಗೆಂದು ಗದಿನಾಡನಲ್ಲಿ ಗಾಂಧಿಜಿಯವರು ಹೇಳಿದರು

ನೋಟೀಸು

ಕಾಸರಗೋಡು ಡಿ। ಮು। ಕೋರ್ಟಿನಲ್ಲಿ

O S No 126/1939

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಇದರ ಕಾಞಂಗಾಡು ಬ್ರಾಂಚಿನ ಏಜೆಂಟ್ ಶ್ರೀ. ಕೆ. ಗಣೇಶಬಾಳಿಗ — ವಾದಿ

ಮತ್ತು

ಟಿ ಎಂ ಮಹಮ್ಮದ ಕುಂಞಿ ಕೂಡಾ — ಪ್ರತಿವಾದಿಯರು

ಇವರೊಳಗೆ

ತಾ 18-8-39

3ನೇ ಪ್ರತಿವಾದಿ ಪಾಟ್ಲತ್ ಅಬ್ದುಲ್ಲ ಹಾಜಿರಿಗೆ, ಜಮೀನುದಾರ ಕಾಞಂಗಾಡು ಗ್ರಾಮದ ಪಾಟ್ಲತ್ ಎಂಬಲ್ಲಿ ವಾಸ,

ಸದ್ರಿ ವಾದಿ ಕಡೆಯಿಂದ ನೋಟೀಸ್

ವಾದಿ ಬೇಂಕಿಗೆ ಬರಕೊಟ್ಟ ಪ್ರೋ ನೋಟಿನ ಅಸ್ಲು ಬಡ್ಡಿ ರೂಪಾಯಿ 461-11-8ಕ್ಕೆ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾ 9-9-'39ಕ್ಕೆ ವಿಚಾರಣೆಗೆ ಇಟ್ಟಿರುವುದರಿಂದ ಸದ್ರಿ 3ನೇ ಪ್ರತಿವಾದಿಯು ಆ ದಿವಸ ಹಾಜರಾಗದಿದ್ದರೆ ಎಕ್ಸ್‌ಪಾರ್ಟಿ ಡಿಕ್ರಿ ವಿಧಿಸೋಣಾಗುವುದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ

Kasaragod 18-8-39 — K. P Madhava Rao, Advocate for Plaintiff

Constructive Banking

"An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore

..And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OF A CRORE

ESTD 1906

CANARA BANK, LIMITED.

ಗುಜರಾತಿನ ಜನರು ಕ್ಷಾಮಪೀಡಿತರಾಗಿರುವರು!

ಜಾತೀಯ ತೀರ್ಮಾನವನ್ನು ಬಹಿಷ್ಕರಿಸಿರಿ

ಸತ್ಯಪಾಲರಿಗೆ ಗಾಂಧಿಜಿಯವರ ಉಪದೇಶ

ಜಾತೀಯ ತೀರ್ಮಾನವನ್ನು ಬಹಿಷ್ಕರಿಸಬೇಕು

ಪಂಡಿತ ಮಾಲವೀಯರ ಸಂದೇಶ

ಜಾತೀಯ ತೀರ್ಮಾನವು ದುಷ್ಟಶಾಸನವೆಂದು, ಅದನ್ನು ಕಿಗೆದು ಹಾಕದ ನಿಮಿತ್ತ ಕಳೆದ ೫೫ ವರ್ಷಗಳಲ್ಲಿ, ಹಿಂದೂದೇಶದ ರಾಜಕೀಯ ಮುಖಂಡರು ಸರ್ವ ಜಾತಿಗಳ ಐಕ್ಯಸಾಧನೆಗಾಗಿ ಮಾಡಿದ ಯತ್ನಗಳು ವಿಫಲವಾದುವೆಂದೂ, ಅದನ್ನು ನಿಷೇಧಿಸುವುದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವೆಂದೂ ಪಂಡಿತ ಮದನಮೋಹನ ಮಾಲವೀಯರು, ಕಲ್ಕತ್ತದಲ್ಲಿ ನೆರೆದ ಜಾತೀಯ ತೀರ್ಮಾನ ವಿರುದ್ಧ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಿಗೆ ಸಂದೇಶ ಕಳುಹಿಸುತ್ತಾರೆ.

ಈ ಜಾತೀಯ ತೀರ್ಮಾನವು ಇರುವ ವರೆಗೆ ರಾಷ್ಟ್ರದಲ್ಲಿ ಐಕ್ಯತೆಯಾಗಲು ಸಾಧ್ಯವಿಲ್ಲವೆಂದೂ, ಇದರಿಂದ ರಾಷ್ಟ್ರೀಯತೆಯು ಹಾಳಾಗಿ, ಜಾತಿದ್ವೇಷವು ಬೆಳೆಯುವುದೆಂದೂ, ಹಿಂದೂದೇಶವು ಸ್ವತಂತ್ರವಾಗಿ ನೋಡಬೇಕೆಂದು ಅಪೇಕ್ಷಿಸುವ ಪ್ರತಿಯೊಬ್ಬ ಭಾರತೀಯನೂ, ಅತನು ಹಿಂದುವಾಗಲಿ ಮುಸ್ಲಿಮನಾಗಲಿ, ಕ್ರಿಶ್ಚಿಯನನಾಗಲಿ, ಅಥವಾ ಪಾರ್ಸಿ, ಸಿಕ್ಖ ಯಾವ ಜಾತಿಗೇ ಸೇರಿರಲಿ, ಈ ಜಾತೀಯ ತೀರ್ಮಾನಕ್ಕೆ ವಿರುದ್ಧ ಚಳವಳ ಹೂಡುವುದು ಅವಶ್ಯವಿದೆಯೆಂದು ಸಾರುತ್ತಾರೆ.

ಬೊಂಬಯಿಯ ಕಳ್ಳಿನ ಕೆಲಸದವರಿಗೆ ಉದ್ಯೋಗ

ಬೊಂಬಯಿಯ ಎರಡು ಸಕ್ಕರೆ ಕಾರ್ಖಾನೆಯವರು, ಮದ್ಯಪಾನದ ನಿಮಿತ್ತ ಉದ್ಯೋಗವಿಲ್ಲದ ಜನರಿಗೆ ಕೆಲಸ ಕೊಡುವುದಾಗಿ ಒಪ್ಪಿರುವರು.

ಅವರಿಗೆ ಯೋಗ್ಯ ಸಂಬಳವನ್ನೂ ಕಂಪೆನಿಯವರು ನಿರ್ಧರಿಸಿ ಪ್ರಕಟಿಸಿದ್ದಾರೆ!

ಸರಕಾರದವರು ಈ ರೀತಿಯ ಉತ್ತರವನ್ನು ಇನ್ನೂ ಕೆಲವು ಕಂಪೆನಿಗಳಿಂದ ಹಾರೈಸುತ್ತಿದ್ದಾರೆ

ಡಾ. ಸತ್ಯಪಾಲರಿಗೆ ಗಾಂಧಿಜಿಯವರ ಉಪದೇಶ

ಡಾ. ಸತ್ಯಪಾಲರು, ಸಾರ್ವಜನಿಕ ಕೆಲಸದಿಂದ ನಿವೃತ್ತರಾಗುವರೆಂದು ಪ್ರಕಟಿಸಿದ್ದರಷ್ಟೆ? ಆ ಕುರಿತು ಮಹಾತ್ಮಜಿಯವರು, ಇದು ಅವರ ಅಂತರಂಗದ ಪ್ರೇರಣೆಯಾಗಿದ್ದರೆ, ಖಂಡಿತವಾಗಿಯೂ ಯೋಗ್ಯವಾಗಿದೆ. ಅದಲ್ಲದೆ ನಾನು ಪಂಜಾಬ್ ಕಾಂಗ್ರೆಸು ಹಾಳಾಗಿರುವ ವಿಷಯದಲ್ಲಿ ಲಾಲಾ ಧುನಿಚಂದರಿಗೆ ಬರೆದ ಪತ್ರದ ಪರಿಣಾಮವಾಗಿದ್ದರೆ, ಅವರ ನಿಶ್ಚಯವು ಪ್ರಯೋಜನವಿಲ್ಲದುದು. ನಾನು ಇಂದು ಕೇವಲ ಪಂಜಾಬ್ ಕಾಂಗ್ರೆಸು ಕಮಿಟಿ ಮಾತ್ರ ಅಶುದ್ಧವಾಗಿರುವುದೆಂದು ಅಭಿಪ್ರಾಯಪಟ್ಟಿಲ್ಲ; ಅದು ಎಲ್ಲಾ ಕಡೆಗಳಲ್ಲಿಯೂ ಇದೆ. ಇದು ಯಾವ ವ್ಯಕ್ತಿಯನ್ನೂ ದೂರಿ ಬರೆದುದಲ್ಲ.

‘ಡಾ. ಸತ್ಯಪಾಲರು ತಮ್ಮ ಆತ್ಮಸಾಕ್ಷಿಯಿಂದ ಹೀಗೆ ವರ್ತಿಸಲು ನಿಶ್ಚಯಿಸಿದ್ದರೆ, ಅವರು ಎಷ್ಟು ಸಮಯಗಳ ವರೆಗಾದರೂ ಸಾರ್ವಜನಿಕ ಕೆಲಸದಿಂದ ದೂರ ನಿಲ್ಲಬಹುದು. ಆದರೆ ಕೃತ್ರಿಮವಾದ, ಮೌನ ಆಚರಣೆಗೆ ಅವರ ಪ್ರಕೃತಿಯು ವಿರೋಧಿಸದಿರದು. ಆದುದರಿಂದ, ನಾನು ಅವರಿಗೆ ತಿಳಿಸುವುದೇನೆಂದರೆ, ಅವರು ಪಂಜಾಬಿನಲ್ಲಿ ಒಂದು ಪಕ್ಷದವರೆಂದು ತಿಳಿಯದಿರಲಿ; ಪಂಜಾಬ್ ಕಾಂಗ್ರೆಸಿನ ಬಲಶಕ್ತಿವರ್ಧನೆಗಾಗಿ ದುಡಿಯುವವರೆಂದು ಭಾವಿಸಲಿ, ತಮ್ಮ ತಮ್ಮೊಳಗಿನ ಪಕ್ಷದ ಕಲಹಗಳನ್ನು ಮರೆತು ಬಿಡಲಿ, ಈ ಕೆಲಸವನ್ನು ಹೇಗೆ ಪೂರೈಸಬೇಕೆಂದು ನಾನು ತಿಳಿಸಲಾರೆ ಅದನ್ನು ಅವರೇ ನಿಶ್ಚಯಿಸಿಕೊಳ್ಳಬೇಕು, ಪಂಜಾಬಿನ ಕಾಂಗ್ರೆಸಿನಲ್ಲಿ ಯಾರಾದರೂ ಶಾಂತಿಯನ್ನು ಮಾಡಬಲ್ಲರಾದರೆ, ಅದು ಖಂಡಿತವಾಗಿಯೂ ಡಾ. ಸತ್ಯಪಾಲರೊಬ್ಬರೇ!’ ಹೀಗೆಂದು ಹೇಳಿರುವರು.

ಗಡಿನಾಡಿನಲ್ಲಿ ಡಕಾಯಿತರ ಉಪಟಳ!

ಗುಜರಾತಿನಲ್ಲಿ ಭಯಂಕರ ಕ್ಷಾಮ



ಸರ್ದಾರ ಪಟೇಲರ ಬಿನ್ನಹ

ಅಹಮ್ಮದಾಬಾದಿನ ವಿದ್ಯಾರ್ಥಿಗಳಿಗೆ ಭಾಷಣಮಾಡುತ್ತಾ, ಸರ್ದಾರ ಪಟೇಲರು ಹೀಗೆಂದು ಉಪದೇಶಿಸಿದರು.

‘ಗುಜರಾತಿನ ತಲೆ ಸುತ್ತು ಮಹತ್ತಾದ ವಿಪತ್ತೊಂದು ತೂಗಾಡುತ್ತಿದೆ, ಇನ್ನೂ ಮಳೆ ಬರಬಹುದೆಂಬ ಆಸೆಯುಂಟು, ಆದರೆ ಈ ಆಸೆಯು ಭಗ್ನವಾದರೆ ಗುಜರಾತಿನಲ್ಲಿ, ಶಾಲೆಗಳು ಮುಂದಕ್ಕೆ ನಡೆ... ಬಹುದೇ ಎಂಬ ವಿಷಯವಾಗಿ ಸಂಶಯ... ಗಿದೆ

‘ನಿಮ್ಮ ಸುತ್ತ... ನವರು ಶಾಂತಿ ಸುಖ ... , ನೀವು ಅಭ್ಯಾಸದಲ್ಲಿ ಮಗ್ನರಾಗಿಯೇ ಇರಬೇಕಾದದ್ದು ನಿಮ್ಮ ಕರ್ತವ್ಯವಾಗಿದೆ ... ಳಿಗಾಲದಲ್ಲಿಯೇ, ಹೀಗೆ ನೀರಿಲ್ಲದ ... ಬಂದರೆ, ಬೇಸಿಗೆಯಲ್ಲಿ ಜನರ ಪಾಡೇನು?

ಅಹಮ್ಮದಾಬಾದ್ ಜಿಲ್ಲೆಯಲ್ಲಿ ಎಂಟು ನೂರು ಗ್ರಾಮಗಳಿವೆ. ನಾಲ್ಕು ಜಿಲ್ಲೆಗಳಲ್ಲಿ ನೀರಿನ ಕ್ಷಾಮವು ಒದಗಿದೆ. ನೂರಾರು ಮಂದಿ, ಬಂಗಾಲ ನಿವಾರಣಾ ಕಾರ್ಯದಲ್ಲಿ ನಿರತರಾಗಿದ್ದಾರೆ. ಕಾಲೇಜುಗಳು, ಶಾಲೆಗಳು ಗುಜರಾಥಿನಲ್ಲಿ ಮುಚ್ಚಲ್ಪಟ್ಟು, ವಿದ್ಯಾರ್ಥಿಗಳು ಉಪಾಧ್ಯಾಯರೂ ಈ ಕೆಲಸಕ್ಕಿಳಿದಿದ್ದಾರೆ. ಪಟೇಲರು ಮಾತನಾಡುತ್ತಾ, ಕ್ಷಾಮಪೀಡಿತ ಜನರಿಗೆ ನೆರವಾಗುವ ಸಲುವಾಗಿ, ದೊಡ್ಡವರ ಮಕ್ಕಳಾದರೂ, ದಿನಕ್ಕೊಂದೇ ಹೊತ್ತು ಉಣ್ಣುವ ಕಾಲವೂ ಬರಬಹುದೆಂದು ಹೇಳಿದರು.

ಸರಕಾರವು ಈಗಾಗಲೇ ಕ್ಷಾಮ ನಿವಾರಣಾ ಕಾರ್ಯವನ್ನು ಆರಂಭಿಸಿರುತ್ತದೆ.

ರಾಜಕೋಟದಲ್ಲಿ ನೀರಿನ ಅಭಾವದಿಂದ ದನಕರುಗಳು ಸಾಯ ತೊಡಗಿವೆ!

ಮೈಸೂರು ಕಾಂಗ್ರೆಸು ಕಮಿಟಿ

ಸಪ್ಟಂಬರ ಪ್ರಥಮ ವಾರದಲ್ಲಿ ಅಖಿಲ ಮೈಸೂರು ಕಾಂಗ್ರೆಸು ಕಮಿಟಿಯ ಅಧಿವೇಶನವು ಬೆಂಗಳೂರಲ್ಲಿ ಸೇರಿ, ಪ್ರಕೃತ ಪರಿಸ್ಥಿತಿಯ ಕುರಿತು ಚರ್ಚಿಸುವುದು.

ಆ ಬಗ್ಗೆ ವರ್ಕಿಂಗ್ ಕಮಿಟಿಯ ಸಭೆಯೊಂದು, ಕಳೆದ ಸೋಮವಾರ ಸೇರಿತು

ಕೋಲಾರ ಕಾಂಗ್ರೆಸು ಕಮಿಟಿಯ ಅಧಿವೇಶನವು ಕಳೆದ ಆದಿತ್ಯವಾರ ಚಿಕ್ಕಬಳ್ಳಾಪುರದಲ್ಲಿ ಸೇರಿತು ವರ್ಕಿಂಗ್ ಕಮಿಟಿಯು ಅಧಿಕಾರವಿತ್ತಲ್ಲಿ ಸತ್ಯಾಗ್ರಹವನ್ನು ಆರಂಭಿಸುವುದಾಗಿ ಕೋಲಾರ ಜಿ. ಕಾಂಗ್ರೆಸು ಕಮಿಟಿಯು ಅಭಿಪ್ರಾಯ ಪಟ್ಟಿದೆ

ಸಣ್ಣ ಸಂಸ್ಥಾನಗಳ ಒಕ್ಕಟ್ಟು!

ಮಹಾತ್ಮಾಜಿಯವರ ಆಶೀರ್ವಾದ

ಕಾಥಿಯಾವಾಡಿನಲ್ಲಿರುವ ಅನೇಕ ಸಣ್ಣ ಸಣ್ಣ ಸಂಸ್ಥಾನಗಳನ್ನು ಒಟ್ಟುಗೂಡಿಸುವ ವಿಷಯದಲ್ಲಿ, ತಮಗೆ ಬಂದ ಒಂದು ಪತ್ರವ್ಯವಹಾರಕ್ಕೆ ಉತ್ತರ ಕೊಡುತ್ತಾ ಮಹಾತ್ಮಾಜಿಯವರು ‘ಹರಿಜನ’ದಲ್ಲಿ ಹೀಗೆಂದು ಬರೆಯುತ್ತಾರೆ:

‘ಈಗಿನ ಸಂದರ್ಭದಲ್ಲಿ ಈ ಸೂಚನೆಯನ್ನು ಹೃತ್ಪೂರ್ವಕ ಸಮರ್ಥಿಸುವುದರಲ್ಲಿ ನಾನು ತೃಪ್ತಿಪಡಬೇಕಾಗಿದೆ ಪತ್ರವನ್ನು ಬರೆದವರು ಹೇಳುವಂತೆ, ಸಣ್ಣ ಸಣ್ಣ ಸಂಸ್ಥಾನಗಳು ಮನಃಪೂರ್ವಕ ಮಾತನಾಡಿದಲ್ಲಿ ಈ ಸೂಚನೆಗೆ ಅಸಮ್ಮತಿಸಲಾರರೆಂದು ನಾನು ತಿಳಿಯುತ್ತೇನೆ ನಿಜವಾಗಿಯೂ ಅವುಗಳ ಶ್ರೇಯಸ್ಸು ಹೀಗೆ ಒಟ್ಟುಗೂಡಿ ಪ್ರಜೆಗಳಿಗೆ ರಾಜ್ಯದ ಆಡಳಿತದಲ್ಲಿ ನ್ಯಾಯವಾದ ಹಕ್ಕುಗಳನ್ನು ಹಂಚಿಕೊಡುವುದರಲ್ಲಿ ಮಾತ್ರ ಇದೆ. ಇದಕ್ಕೆ ಅನುಕೂಲವಾದ, ಶಾಂತರೀತಿಯ ಸಾರ್ವಜನಿಕ ಅಭಿಪ್ರಾಯವನ್ನು ಜಾಗೃತಿಗೊಳಿಸುವುದು ಇದರಲ್ಲಿರುವ ಪ್ರಾಮುಖ್ಯ ವಿಷಯವಾಗಿದೆ

ಯುದ್ಧದ ವಿಷಯದಲ್ಲಿ ಪ್ರಾಂತ ಮಂತ್ರಿಮಂಡಳಗಳನ್ನು ವಿಚಾರಿಸಿರಿ

ಭಾರತ ಸರಕಾರಕ್ಕೆ ಶ್ರೀ ಸತ್ಯಮೂರ್ತಿಗಳ ಹೇಳಿಕೆ

ಶ್ರೀ ಸತ್ಯಮೂರ್ತಿಗಳು ಭಾರತ ಸರಕಾರವು ಯುದ್ಧ ಸಂಭವದಲ್ಲಿ ಹಿಂದೂದೇಶವು ಮಾಡತಕ್ಕ ಕಾರ್ಯದ ಕುರಿತು, ಎಲ್ಲಾ ಪ್ರಾಂತಗಳ ಮಂತ್ರಿಮಂಡಳಗಳನ್ನು ವಿಚಾರಿಸುವುದು ಅಗತ್ಯವೆಂದೂ, ಇದು ಎಲ್ಲಾ ದೇಶದ ರಾಜಕೀಯ ನೀತಿಗೆ ಅನುಗುಣವಾಗಿದೆಯೆಂದೂ, ಇಂದು ಹನ್ನೊಂದು ಪ್ರಾಂತಗಳಲ್ಲಿ ಸರಕಾರದ ಅಧಿಕಾರವನ್ನು ನಿರ್ವಹಿಸುತ್ತಿರುವ, ಪ್ರಾಂತದ ಮಂತ್ರಿಮಂಡಳಗಳಿಗೆ, ದೇಶದ ರಕ್ಷಣೆಯ ವಿಷಯದಲ್ಲಿ ಕೇಂದ್ರಸರಕಾರಕ್ಕಿರುವಂತೆ ಅವುಗಳಿಗೂ ಹಕ್ಕಿದೆಯೆಂದೂ ಹೇಳಿರುವರು.

ಗಡಿನಾಡಿನಲ್ಲಿ ಡಕಾಯಿತರ ಉಪಟಳ

ಇಬ್ಬರು ಹೆಂಗುಸರನ್ನು ಸೆರೆ ಹಿಡಿದರು

ಗೋರಿವಾಲ ಪೋಲೀ[illegible]ಷನಿನ ಅಧಿಕಾರಿತೆಯೊಳಗಿನ, ಬನುನಗರದಿಂದ ಹತ್ತು ಮೈಲು ದೂರದ ಕಾಕ್ಕಿ ಎಂಬ ಒಂದು ದೊಡ್ಡ ಗ್ರಾಮದಲ್ಲಿ, ಹಗಲು ಹತ್ತು ಗಂಟೆಯ ಸಮಯಕ್ಕೆ ಎರಡು ಹಿಂದೂ ಹೆಂಗುಸರನ್ನು ಹೊತ್ತುಕೊಂಡು ಹೋದರು!

ಈ ‘ಡಕಾಯಿತ’ರು ಸುಮಾರು ೧೩ ಜನ ಕೃಂತ ಹೆಚ್ಚಿದ್ದರು. ಹಳ್ಳಿಯವರು ನೆರೆದು ಇವರ ಮೇಲೆ ಗುಂಡು ಹಾರಿಸಿದರು. ಆದರೆ ಅವರನ್ನು ಹಿಂಬಾಲಿಸಿದವರಿಗೆ, ಅವರನ್ನು ಹಿಡಿಯಲು ಆಗಲಿಲ್ಲ ಹಲವು ಮಂದಿ ಕಾಂಗ್ರೆಸು ಕೆಲಸಗಾರರೂ ಸಹಾಯ ಮಾಡಿದ್ದರು.

ಪ್ರಧಾನ ಮಂತ್ರಿ ಖಾನ್ ಸಾಹೇಬರು ತಹಶಿಲ್‌ದಾರರೊಡನೆ ಆ ಸ್ಥಳವನ್ನು ಸಂದರ್ಶಿಸಿದರು

ಸ್ಟೇಶನಿನ ಸುತ್ತು ಮುತ್ತು ಎಂಟು ಮೈಲುಗಳೊಳಗಿನ ಟೆಲಿಫೋನು ತಂತಿಯು ತುಂಡು ಮಾಡಲ್ಪಟ್ಟಿತ್ತು

ಅನೇಕ ಹಿಂದುಗಳನ್ನು ಹೀಗೆ ಹೊತ್ತುಕೊಂಡು ಹೋಗಿ, ಅವರನ್ನು ಸಂಕಷ್ಟಕ್ಕೆ ಒಳಪಡಿಸಿ, ಬಿಟ್ಟುಕೊಡಬೇಕಾದರೆ ಸಾವಿರಾರು ರೂಪಾಯಿಗಳನ್ನೂ ಕೊಡಬೇಕಾಗಿ ಕೇಳುತ್ತಿದ್ದಾರೆ

ಬನು ನಗರದ ಹಿಂದು ಮತ್ತು ಸಿಕ್ಖರು ಸಂಪೂರ್ಣ ಹರತಾಳ ಮಾಡಿರುವರು

ಬರುವ ಕಾಂಗ್ರೆಸು ಅಧಿವೇಶನದ ಸಿದ್ಧತೆ!

ರಾಷ್ಟ್ರಪತಿಗಳು ಗಾಂಧಿಜಿಯವರನ್ನು ಕಂಡರು

ಕಾಂಗ್ರೆಸು ಅಧ್ಯಕ್ಷರಾದ ಡಾ। ರಾಜೇಂದ್ರ ಪ್ರಸಾದರು ತಾ -೨೦ರಂದು ವಾರ್ಧಾದಿಂದ ತೆರಳಿ, ೨೧ರಂದು ರಾಮಘರ್ (ಕಾಂಗ್ರೆಸು ನಗರ)ದಲ್ಲಿ ಸ್ವಯಂಸೇವಕರ ದಳದ ಶಿಕ್ಷಣ ಶಿಬಿರವನ್ನು ತೆರೆದು, ಸ್ವಾಗತ ಸಮಿತಿಯ ಸಭೆಯೊಂದರಲ್ಲಿ ಭಾಗಿಗಳಾದರು.

ರಾಜೇಂದ್ರ ಪ್ರಸಾದರು ಗಾಂಧಿಜಿಯವರೊಡನೆ, ಎರಡು ತಾಸುಗಳ ತನಕ ಮಾತನಾಡಿ ಇದುವರೆಗೆ ಮಾಡಿದ ಕೆಲಸಗಳ ವಿವರವನ್ನು ತಿಳಿಸುತ್ತಾ, ಬರುವ ಅಧಿವೇಶನದ ವಿಷಯವಾಗಿ ಆಲೋಚನೆ ಕೇಳಿದರು

ಶೀಯಾ ಸುನ್ನೀ ಗಲಭೆ

ಮೌಲಾನಾ ಅಜಾದರು ಲಕ್ನೋಗೆ ತೆರಳಿದರು

ಲಕ್ನೋದಲ್ಲಿ ನಿರಂತರವಾಗಿ ನಡೆಯುತ್ತಿರುವ ಮುಸ್ಲಿಂ ಪಂಗಡಗಳಾದ, ಶೀಯಾ ಮತ್ತು ಸುನ್ನೀ ಮುಸಲ್ಮಾನರಿಗೆ ಆಗುವ ಜಗಳದ ವಿಷಯವಾಗಿ, ಇತ್ಯರ್ಥ ಮಾಡುವ ಉದ್ದೇಶದಿಂದ, ವರ್ಕಿಂಗ್ ಕಮಿಟಿಯ ಸಭಾಸದರಾದ ಮೌಲಾನಾ ಅಬುಲ್ ಕಲಮ್ ಅಜಾದರು ಲಕ್ನೋಗೆ ತೆರಳಿರುವರು.

ಈಗಲೂ ಕೂಡಾ, ಕಾಲುನೋವಿನಿಂದ ಅವರಿಗೆ ಚಲಿಸಲು ಆಗುವುದಿಲ್ಲವಾದರೂ, ತಾನು ಲಕ್ನೋಗೆ ತೆರಳದೆ ಅಲ್ಲಿನ ಮುಸ್ಲಿಮರೊಳಗಿನ ಈ ಗಲಭೆಯು ಕೊನೆಗಾಣಲಾರದೆಂದು ಕೇಳಿ, ಅಲ್ಲಿಗೆ ಹೋಗಲು ಖಂಡಿತ ಮಾಡಿದರು..

ಆಕಾಶದಿಂದ ಬೀಜಗಳು

ರಶ್ಯಾದ ಮರುಳು ಭೂಮಿಯು ಈಗ ವಿಮಾನಗಳಿಂದ ಬಿತ್ತಲ್ಪಟ್ಟ ಬೀಜಗಳಿಂದ ಒಳ್ಳೆಯ ಹುಲ್ಲುಗಾವಲು ಆಗಿ ಬೆಳೆದು ಮನೋರಂಜಕವಾಗುತ್ತಾ ಬರುತ್ತಲಿದೆ.

ಈ ರೀತಿಯಾಗಿ ಮರುಳು ಭೂಮಿಯನ್ನು ಫಲವತ್ತಾದ ಪ್ರದೇಶಗಳನ್ನಾಗಿ ಮಾಡುವ ನೂತನ ಪ್ರಯೋಗವು ಬಹಳ ಫಲಕಾರಿಯಾಗುತ್ತಿದೆ. ಕಾರಾಕಂ ಪ್ರಾಂತ್ಯದಲ್ಲಿ ವಿಮಾನಗಳು ಬಹಳ ಹೆಚ್ಚಾಗಿ ಉಪಯೋಗಿಸಲ್ಪಡುತ್ತಿವೆ.

ಈ ಜಗತ್ತಿನ ಮೂರನೇ ಒಂದಂಶದಷ್ಟು ಕಾಡು ಪ್ರದೇಶವುಳ್ಳ ರಶ್ಯಾದ ಅರಣ್ಯಗಳನ್ನು ರಕ್ಷಣೆಮಾಡುವ ವಿಷಯದಲ್ಲಿಯೂ ವಿಮಾನಗಳು ಬಹಳ ಸಹಾಯ ಮಾಡುತ್ತಿವೆ ವಿಮಾನಗಳಿಂದ ಕೆಲ ಪ್ರದೇಶಗಳನ್ನು ಸುಟ್ಟು, ಆ ಮೇಲೆ ಅಲ್ಲಿ ಹೊಸ ಬೀಜಗಳನ್ನೂ ಬಿತ್ತಲಾಗುತ್ತದೆ

ಹಣ್ಣು ಹಂಪಲಗಳು ಹಾಳಾಗದಂತೆಯೂ ವಿಮಾನಗಳು ಉಪಯೋಗವಾಗುತ್ತಿವೆ ಅವುಗಳು ಕೆಳಕ್ಕೆ ಬಂದು ಮರಗಳ ಮೇಲೆ ಒಂದು ರೀತಿಯ ಪಸಿದನ್ನು ಚಿಮುಕಿಸುತ್ತವೆ ಇದರಿಂದ ಉಷ್ಣಮಾನವು ಒಂದೇ ಸ್ಥಿತಿಯಲ್ಲಿ ಇಂತ್ಯ ಕೊಳೆಯ ಬೆಳೆಯು ಆಗುವುದಿಲ್ಲ ಬತ್ತವನ್ನು ಬೆಳೆಸುವ ಗದ್ದೆಗಳ ಮೇಲೂ ಈ ರೀತಿ ಬೆಳೆಯನ್ನು ಹೆಚ್ಚು ಮಾಡುವ ಹಂಚಿಕೆ ಪ್ರಯೋಜನಕಾರಿಯಾಗಿ ಕಂಡಿದೆ

ಸಾವಿರಾರು ಮಿಡಿಕೆ ಮುತ್ತು ಇನ್ನಿತರ ಬೆಳೆ ಹಾವಳಿ ಮಾಡುವ ಜಂತುಗಳನ್ನು ಕೊಲ್ಲಲು ವಿಮಾನಗಳಿಂದ ಆಗುತ್ತದೆ ೪೦೦೦,೦೦೦ ಎಕ್ರೆ ಸ್ಥಳಗಳಲ್ಲಿರುವ ಮಿಡಿತೆಗಳನ್ನು ಕಳೆದ ಐದು ವರ್ಷಗಳಿಂದ ಕೊಂದ ಆಗಿದೆ

ಹೊಟ್ಟೆಯಲ್ಲಿರುವ ಶಿಶುವಿಗೆ ಕೇಳುತ್ತದೆ

ಅಮೇರಿಕದ ಒಬ್ಬ ವಿಜ್ಞಾನಿಯು ಪ್ರಯೋಗದಿಂದ ಹೊಟ್ಟೆಯಲ್ಲಿರುವ ಮಗುವಿಗೆ ಹೊರಗಿನ ಶಬ್ದಗಳು ಕೇಳುತ್ತವೆಯೆಂದು ರುಜುವಾತುಪಡಿಸಿರುತ್ತಾನೆ

ಜೀವದ ಹಂದಿಯ ಹೊಟ್ಟೆಯಲ್ಲಿರುವ ಮರಿಯ ಕುರಿತು ಈ ಪ್ರಯೋಗವನ್ನು ಮಾಡಿ ನೋಡಿದಾಗ, ಹೊರಗಿನ ಶಬ್ದಗಳ ಪ್ರಕಾರ ಹೊಟ್ಟೆಯೊಳಗಿನ ಮರಿಯು ಚಲಿಸುತ್ತಿರುವುದಾಗಿ ತಿಳಿದು ಬಂತು

ಕತ್ತಿಗಳೂ ಕೂಗುತ್ತವೆ

ಕ್ರಿಮಿಗಳ ಕಾಟದಿಂದ ರಕ್ಷಣೆಯು ಸಲುವಾಗಿ, ಕತಿಗಳೂ ಕೂಗುತ್ತವೆ ಅವುಗಳ ಕಂಬನಿಗಳು ಅಲ್ಲಿಯೇ ಅದೃಶ್ಯವಾಗಿ ಕಣ್ಣಿಗೆ ಗೋಚರಿಸುವುದಿಲ್ಲ ಇದನ್ನು ವಿಜ್ಞಾನಿಗಳು ಕತ್ತಿಯನ್ನು ಬಹಳ ಸಮಯದ ವರೆಗೆ ಸಂಶೋಧಿಸಿ ಕಂಡು ಹುಡುಕಿದ ತತ್ವವಾಗಿದೆ ಲಂಡನಿನ ವಿಜ್ಞಾನ ಉದ್ಯೋಗ ಸಂಶೋಧನಾ ಸಂಘದಲ್ಲಿ ಇದನ್ನು ಅವರು ಪ್ರಯೋಗ ಸಿದ್ಧವಾಗಿ ಪ್ರಚಾರ ಮಾಡಿದರು!

ಐದು ಮಣ ಭಾರವನ್ನು ದಿನನಿತ್ಯ ಹೊರುತ್ತಾನೆ

ಹೈದರಾಬಾದಿನ ಫಕೀರನೊಬ್ಬನು ೨೪ ತಾಸುಗಳ ತನಕ, ಐದು ಮಣ ಭಾರದ ಸಾಮಾನುಗಳನ್ನು, ಸೊಂಟ, ಕೈ, ಕಾಲು, ತಲೆ ಮೊದಲಾದುವುಗಳಿಗೆ ಹಾಕಿಕೊಂಡು ಹೊರುತ್ತಾನೆ. ಇದು ಆತನು ಮಾಡಿದ ಒಂದು ಪ್ರತಿಜ್ಞೆಗಾಗಿ ಹೀಗೆ ಆಚರಿಸುವುದಂತೆ!

ಆತನು ತಲೆಗಿಡುವ ಒಂದು ಕಿರೀಟದಲ್ಲಿ ಮಹಮ್ಮದ್ ಗಜನಿಯ ಕಾಲದಿಂದ ಟಿಪ್ಪು ಸುಲ್ತಾನನ ಕಾಲದ ವರೆಗಿನ ನಾಣ್ಯಗಳೂ, ಆ ಮೇಲೆ ಈಸ್ಟ್ ಇಂಡಿಯಾ ಕಂಪೆನಿಯ ನಾಣ್ಯಗಳೂ ನೂರಾರು ಇಟ್ಟುಕೊಂಡಿದ್ದಾನೆ! ಕೆಲವು ಯೂರೋಪಿನ ನಾಣ್ಯಗಳೂ ಅವುಗಳಲ್ಲಿವೆ. ಅದು ಏಳು ಸೇರು ಭಾರವಿದೆ! ನಿಜವಾಗಿಯೂ ಆತನ ತಲೆಯೆಂದರೆ ಜಗತ್ತಿನ ನಾಣ್ಯಗಳ ಒಂದು ಪ್ರದರ್ಶನ ಶಾಲೆಯೇ ಆಗಿದೆ!

ವಿಚಿತ್ರ ಪ್ರಪಂಚ

ರೋಗ ತಗಲಿದಂತೆಯೇ ಗುಣ!

ಇಟಲಿಯ, ಕೇಂಪೆಲೋ ಎಂಬಲ್ಲಿರುವ ೨೯ ವರ್ಷದ ವರ್ಜೀನಿಯಾ ವಲ್ಲಾರ್ಡಿ ಎಂಬ ಹೆಂಗುಸು ಒಂದು ತಿಂಗಳ ಹಿಂದೆ ಮಿಂಚು ಬಡಿದು ಮೂಕಳಾಗಿದ್ದಳು!

ಈಗ ಒಂದು ತಿಂಗಳ ನಂತರ ಹಾಗೆಯೇ ಒಂದು ಮಿಂಚಿನ ಹೊಡೆತದಿಂದಾಗಿ ತಿರುಗಿ ಮಾತನಾಡಲು ಸುರುಮಾಡಿದ್ದಾಳೆ! ರೋಗವು ತಗಲಿದಂತೆಯೇ ಗುಣವಾಗುತ್ತದೆಯೆಂಬ ತತ್ವವು ಪ್ರದರ್ಶಿತವಾಯಿತು

ನಾಯಿಯು ಗುರುತಿಸಿತು!

ಒಬ್ಬ ಫ್ರೆಂಚ್ ಹೆಂಗುಸು, ಅಲ್ಲಿನ ಚಿತ್ರಗಾರನೊಬ್ಬನಿಗೆ ತನ್ನ ಚಿತ್ರವನ್ನು ಪೈಂಟ್ ಮಾಡಲು ಆರ್ಡರ್ ಕೊಟ್ಟಳು ಹಲವು ದಿನಗಳಾದ ಮೇಲೆ ಆತನು ಅದನ್ನು ಸಂಪೂರ್ಣ ಮಾಡಿದ ಕಡೆಗೆ ಆತನಿಗೆ ಅದರ ಬೆಲೆಕೊಟ್ಟು ತೆಕ್ಕೊಂಡು ಹೋಗಬೇಕಾದರೆ ತನ್ನ ನಾಯಿಯೊಂದನ್ನು ತಂದ ಅದು ಚಿತ್ರವನ್ನು ಗುರುತಿಸುವುದಿಲ್ಲವೆಂದೂ, ಹಾಗಾಗಿ ಆ ಚಿತ್ರವು ತನ್ನ ಚಿತ್ರದಂತೆ ಇಲ್ಲವೆಂದೂ ಹೇಳಿ ಕ್ರಯಕ್ಕೆ ತೆಕ್ಕೊಳ್ಳಲು ತಿರಸ್ಕರಿಸಿದಳು

ಕೆಲವು ದಿವಸಗಳ ಮೇಲೆ ಚಿತ್ರಗಾರನು ಹೆಂಗಸಿಗೆ, ತಾನು ಆಭಾವ ಚಿತ್ರವನ್ನು ತಿದ್ದಿ ಸರಿಗೊಳಿಸಿರುವುದಾಗಿಯೂ, ಈಗ ನಾಯಿಯನ್ನು ತಂದರೆ ಗುರುತು ಸಿಗುವುದೋ ಇಲ್ಲವೋ ಎಂದು ನೋಡಬೇಕಾಗಿಯೂ ಹೇಳಿಕಳುಹಿಸಿದನು

ಆಕೆ ಬಂದಳು ನಾಯಿಯು ತಿರುಗಿಯೂ ಗುರುತಿಸಲಿಲ್ಲ ಆದರೆ ಚಿತ್ರಗಾರ ನೋಡಿ ನಾಯಿಯನ್ನು ಸ್ವಲ್ಪ ಸಮೀಪಕ್ಕೆ ಕರೆಬೇಕೆಂದ. ಆಕೆಯು ಮುಸುಕಿನ ಸಮೀಪ ತಂದಾಗ ಅದು ಅದರ ಮುಸುಡಿಗೆ ಮುತ್ತಿಕ್ಕಿತಂತೆ!

ಆಗ ನಿಜ ತನ್ನ ಭಾವಚಿತ್ರವನ್ನು ಚಿತ್ರಗಾರನು ಸರಿಯಾಗಿ ಬಿಡಿಸಿರುವನೆಂದು ಅವಳಿಗೆ ತಿಳಿದು ಬಂತು

ತಾಲೂಕು ಸಮಾಚಾರ

ಉಡುಪಿ

ಪರ್ಯಾಯ ಮಹೋತ್ಸವ ಕಾಲದಲ್ಲಿ ದ. ಕ ಜಿಲ್ಲಾ ಶಿಕ್ಷಣ ಪ್ರದರ್ಶನ:—ವಿದ್ಯಾಭಿಮಾನಿಗಳ ಸಭೆಯೊಂದು ಇದೇ ತಾ ೧೨ರಲ್ಲಿ ಬೋರ್ಡು ಹೈಸ್ಕೂಲಲ್ಲಿ ಜಿಲ್ಲಾ ಎಡ್ಯುಕೇಶನಲ್ ಆಫೀಸರ್ ಶ್ರೀ. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ ಜಿಲ್ಲಾ ಶಿಕ್ಷಣ ಪ್ರದರ್ಶನವು ಎಲ್ಲಿ ಮತ್ತು ಯಾವಾಗ ಜರಗಿಸಬೇಕೆಂದು ಚರ್ಚಿಸಲಾಯಿತು ಕಳೆದ ಪ್ರದರ್ಶನವು ಮಂಗಳೂರಲ್ಲಿ ಜರಗಿದ್ದು ಈ ಬಾರಿ ಉಡುಪಿಯಲ್ಲಿ ಜರಗುವುದು ಸಮಂಜಸವೆಂದೂ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಅನುಕ್ರಮವಾಗಿ ಪ್ರದರ್ಶನ ನಡೆಯುವುದು ಒಳಿತೆಂದೂ ಸೂಚಿತವಾಯಿತು ಬರುವ ಪರ್ಯಾಯದ ಸಮಯದಲ್ಲಿ ಮೂರು ನಾಲ್ಕು ದಿನಗಳ ಪರ್ಯಂತ ಜಿಲ್ಲಾ ಶಿಕ್ಷಣ ಪ್ರದರ್ಶನವು ಕ್ರಿಶ್ಚಿಯನ್ ಹೈಸ್ಕೂಲ್ ಹಾಲಿನಲ್ಲಿ ಜರಗತಕ್ಕದೆಂದು ಗೊತ್ತುಮಾಡಲಾಯಿತು ಆ ಬಗ್ಗೆ ಸಿದ್ಧತೆಗಳನ್ನು ಮಾಡುವರೆ ಶ್ರೀ ಯು. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯೇರ್ಪಟ್ಟಿತು

ಆಕಸ್ಮಿಕ ಮರಣ:—ರೋಮನ್ ಕಥೋಲಿಕ್ ಸಮಾಜದ ಅರ್ಬನ್ ಪೀಗಸ್ ಎಂಬ ಮರದಕೆಲಸದವನು ಇದೇ ತಾ ೧೩ರಲ್ಲು ನಾಲ್ಕೈದು ಮರಣ ಹೊತ್ತನ್ನು ಸೇರಿಕೊಂಡು ವರ ... ಬೇಗನೇ ನಂಟಸ್ತಿಕೆ ... ಶಿಕ್ಷಕ್ಕೆ

... ವಾಹನ ನಡೆಸುತ್ತಿದ್ದಾಗ, ನಿರೀಕ್ಷಿಸುವುದನ್ನೇ ನಿರೀಕ್ಷಿಸದೇ ಇರುವುದನ್ನೆಲ್ಲಾ ಗಮನಿಸಿರಿ!

... ಇದು ಒಳ್ಳೆಯ ಮಾರ್ಗ, ಆದರೆ, ಜೋರಾಗಿ ನಡೆಸುವ ಮಾರ್ಗವಲ್ಲ!

ಈ ನವ ಸೂತ್ರಗಳನ್ನು ವಾಹನಗಳನ್ನು ನಡೆಸುವವರು ಸರಿಯಾಗಿ ಗಮನಿಸಿಕೊಳ್ಳದಿದ್ದರೆ, ಪೋಲೀಸರ ವಶವಾಗ ವರು!

ಬೌದ್ಧಮತಕ್ಕೆ ಬ್ರಿಟಿಷ್ ಉದಾರಿಯ ದಾನಶಾಸನ!

ಹಿಂದಕ್ಕೆ ಹಿಂದೂದೇಶದಲ್ಲಿ ಬ್ರಿಟಿಷರ ದುಸ್ಸೀತಿಯ ಆಡಳಿತವನ್ನು ವಿರೋಧಿಸಿ ಕರಪತ್ರಗಳನ್ನು ಹಂಚಿದ ಸರ್ ವಾಲ್ಟರ್ ವಿಲಿಯಂ ಸಿಗ್ರೇವ್ ಎಂಬವರು, ಕಳೆದ ವರ್ಷ ತನ್ನ ೮೦ನೇ ವರ್ಷದಲ್ಲಿ ಜಾವಾದಲ್ಲಿ ಮೃತರಾಗಿ, ತನ್ನ ಸ್ವಾಧೀನದ ಸುಮಾರು ೫೦೦೦ ಪವನುಗಳ ಬೆಲೆಯ ಭೂಮಿಯನ್ನು ಬುದ್ಧ ಧರ್ಮಕ್ಕೆ ದಾನಮಾಡಿ ಕೊಟ್ಟಿರುವರು

ಇವರು ೧೯೩೩ರಂದು ತನ್ನ ಬಿರುದನ್ನು ತ್ಯಜಿಸಿ ಜೆಕೊಸ್ಲವೇಕಿಯದ ನಾಗರಿಕನಾಗಿ ಬಂದು ಉಳಕೊಂಡರು

ಇಲ್ಲಿಂದ ಮೂಲ್ಕಿ, ಹೆಜಮಾಡಿ, ಕಣ್ಣಂಗಾರು ವಗ್ಯೆರೆ ಸ್ಥಳಗಳಿಗೆ ಸುಲಭವಾಗಿ ಹೋಗಿ ಬರಲಿಕ್ಕೆ ಅನುಕೂಲವಾದಂತಾಗಿಯದೆ. ಈ ಆದರ್ಶ ಸೇತುವೆಗಳ ಕೆಲಸವನ್ನು ನೋಡಿ ಅಸಿಸ್ಟಾಂಟ್ ಪಂಚಾಯತ್ ಆಫೀಸರರು ತುಂಬಾ ಸಂತೋಷಪಟ್ಟಿರುವರು

ತಾ ೨೦ನೇ ಆದಿತ್ಯವಾರ ಸಾಯಂಕಾಲ ಮುನಿಸಿಪಲ್ ಪ್ಯೆನ್ ಶಾಲೆಯಲ್ಲಿ ಜಿಲ್ಲಾ ಸಹಕಾರ ಸಂಘಗಳ ಡಿಪ್ಯುಟಿ ರಜಿಸ್ಟ್ರಾರರ ಆಮಂತ್ರಣದ ಮೇರೆಗೆ ಮುನ್ಸಿಪಲ್ ಅಧ್ಯಕ್ಷ ಶ್ರೀ ಅರೋರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಸೇರಿತು.

ಕುಂದಾಪುರ

ದುಃಖಸೂಚಕ ಸಭೆ—ಸುಪ್ರಸಿದ್ಧ ಕನ್ನಡ ಭಾಷಾಭಿಮಾನಿಗಳಾದ ಶ್ರೀ ಹಳ್ಳನಾಡು ರಾಮಪ್ಪಯ್ಯನವರು ದಿವಂಗತರಾದ ೧೪ನೇ ದಿವಸವಾದ ತಾ. ೧೩ನೇ ಭಾನುವಾರ ಅ ಫ. ೫ಕ್ಕೆ ಕರ್ನಾಟಕ ಸಾಹಿತ್ಯ ಸಂಘದಲ್ಲಿ ಇಲ್ಲಿಯ ಮುನ್ಸಿಫ್ ಕೋರ್ಟಿನ ಹೆಡ್ ಕ್ಲಾರ್ಕರಾದ ಶ್ರೀ. ಕೆ. ರಾಮಕೃಷ್ಣ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ದುಃಖಸೂಚಕ ಸಭೆಯು ಜರಗಿತು. ದಿವಂಗತರು ಈ ಸಂಘದ ಉಪಾಧ್ಯಕ್ಷರಾಗಿದ್ದು ಹೇಗೆ ಕನ್ನಡ ಭಾಷಾ ಸೇವೆಯನ್ನು ಮಾಡಿದರೆಂಬುದನ್ನು ವಿವರಿಸಿ ಹಲವರು ಭಾಷಣ ಮಾಡಿದರು ಶ್ರೀಯುತರ ನಿಧನಕ್ಕೆ ಸಂತಾಪವನ್ನೂ ಅವರ ಬಂಧು ಮಿತ್ರರ ದುಃಖದಲ್ಲಿ ಸಹ ಸಂತಾಪವನ್ನೂ ಸೂಚಿಸಿ ಠರಾವಾಯಿತು

ಕಾಸರಗೋಡು

ಪೆರಡಾಲ—ಆರನೇ ಕ್ಲಾಸು ತೆರೆಯಲು ಸರಕಾರದ ಅನುಮತಿ—ಕಳೆದ ಕೆಲ ಸಮಯಗಳಿಂದ ಊರ ಪ್ರಮುಖರು ಹಿರಿಯರನೇಕರು ಬದಿಯಡ್ಕದ ಬೋ ಎ ಶಾಲೆಯನ್ನು ಹೈ ಎ ಶಾಲೆಯು ಮಟ್ಟಕ್ಕೇರಿಸಬೇಕೆಂದು, ಡಿ ಬೋರ್ಡಿನ ಮೂಲಕ ಪ್ರಯತ್ನಿಸುತ್ತಿದ್ದು, ಆ ಬಗ್ಗೆ, ಹೈ ಎ ಶಾಲೆಯ ಯೋಗ್ಯ ಕಟ್ಟಡವನ್ನು ಉಚಿತವಾಗಿ ಕಟ್ಟಿಸಿಕೊಡುತ್ತೇವೆಂದು ಡಿ. ಬೋರ್ಡಿಗೆ ಭರವಸೆಯಿತ್ತು, ಅದರ ಭದ್ರತೆಗಾಗಿ ಬೇಂಕಿನಲ್ಲಿ ಮೂಲಧನವಿಟ್ಟು, ತುಂಬಾ ಸಾಹಸಮಾಡಿದುದರ ಫಲವಾಗಿ, ಅಲ್ಲಿ ಈ ವರ್ಷವೇ ಆರನೇ ಕ್ಲಾಸು ತೆರೆಯಬಹುದಾಗಿ ಡಿ ಬೋ ಸಭೆಯಲ್ಲಿ ಮಂಜೂರಾದ ಮೇಲೆ, ಈಗ ಡಿವಿಜನಲ್ ಆಫೀಸರರಿಂದಲೂ, ಆ ಬಗ್ಗೆ ಹುಕುಂ ಬಂದಿರುವುದಾಗಿ ತಿಳಿಯುತ್ತದೆ ಈ ಬಗ್ಗೆ ನಿರಂತರವಾಗಿ ನಿಸ್ವಾರ್ಥ ಸಾಹಸ ಮಾಡಿದ ಶ್ರೀಗಳಾದ ಡಾ ಪಿ ಎಸ್ ಶಾಸ್ತ್ರಿ, ಪಿ. ಕೃಷ್ಣ ಭಟ್ಟ, ಪಿ ಅನಂತ ಭಟ್ಟ ಮೊದಲಾದ ಮಹನೀಯರು ಪ್ರಶಂಸಾರ್ಹರಾಗಿರುತ್ತಾರೆ

ಬರುವ ತಾ ೨೮ರಂದು ಹೊಸ ಕಟ್ಟಡದ ಶಂಕು ಸ್ಥಾಪನೆಯ ಕೆಲಸವನ್ನು ಮಾಡಲು ಡಿ ಬೋ ಪ್ರೆಸಿಡೆಂಟರಾದ ಡಾ ಕೆ ವಿಟ್ಠಲ ಶೆಟ್ಟರನ್ನು ಕೇಳಿಕೊಳ್ಳಲಾಗಿದೆ

ಪುತ್ತೂರು

ಮತಾಂತರ: ನೊನ್ನೆ ತಾ ೧೪ರಲ್ಲಿ ಇಲ್ಲಿಯ ಕಸಬಾ ಗ್ರಾಮದ ತಾಳೆಪಾಡಿಯಲ್ಲಿರುವ ಭಾಗವತ ಶ್ರೀನಿವಾಸಯ್ಯನವರ ಪುತ್ರಿ, ಮಹಾಲಕ್ಷ್ಮಿ ಎಂಬ ಸುಮಾರು ೨೨ ವರ್ಷ ಪ್ರಾಯದ ಶಿವ ಬ್ರಾಹ್ಮಣ ಜಾತಿಯ ವಿಧವೆಯೊಬ್ಬಳು ತನ್ನ ಐದು ವರ್ಷದ ಹುಡುಗನೊಂದಿಗೆ ಕಾರಣಾಂತರದಿಂದ ತನ್ನ ಅಭಿಲಾಷೆಯಿಂದಲೇ ಪ್ರೊಟೆಸ್ಟೆಂಟ್ ಮತವನ್ನು ಅಂಗೀಕರಿಸಿ ಈಗ ಇಲ್ಲಿಯ ಮಿಶನ್ ಬಂಗಲೆಯಲ್ಲಿ ಇರುತ್ತಾಳೆ ಎಂದು ತಿಳಿದು ಬಂದಿದೆ

ಬೇಕಾಗಿದ್ದಾರೆ

ಇದೇ ೧೯೩೯ನೇ ಸಪ್ಟಂಬರದಿಂದ ಮೂಲ್ಕಿಯಲ್ಲಿ ಪ್ರಾರಂಭವಾಗುವ 'ಶ್ರೀ ವೆಂಕಟ್ರಮಣ ಟೆಂಪಲ್ ಸಂಸ್ಕೃತ ಶಾಲೆ'ಗೆ ಉಪಾಧ್ಯಾಯರು ಬೇಕಾಗಿದ್ದಾರೆ ಹಿಂದೀ ತಿಳಿದಿದ್ದ ಸೆಕೆಂಡರಿ ಗ್ರೇಡಿನವರಿಗೆ ಮೊದಲಾಗಿ ಅವಕಾಶ ಕೊಡಲಾಗುವುದು. ಸಂಸ್ಕೃತ ಪಂಡಿತರ ಕೆಲಸಕ್ಕೂ ಓರ್ವ ಉಪಾಧ್ಯಾಯರು ಬೇಕಾಗಿದ್ದಾರೆ.

ಅರ್ಜಿಯು ಇದೇ ೧೯೩೯ನೇ ಸಪ್ಟಂಬರ ೧೫ನೇ ತಾರೀಕಿನೊಳಗೆ ಈ ಕೆಳಗಿನವರಿಗೆ ತಲಪಬೇಕು. ಮನೇಜರ್,

ಶ್ರೀ ವೆಂಕಟ್ರಮಣ ಟೆಂಪಲ್,
ಸಂಸ್ಕೃತ ಸ್ಕೂಲ್ ಮುಲ್ಕಿ

ಭಯಂಕರವಾದ ಮೂತ್ರವ್ಯಾಧಿಗಳ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲಾ ಪ್ರಕಾರದ ಸಂಬಂಧದ ರೋಗಗಳಿಗೆ ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆ ತೋರಿಸುತ್ತದೆ ಸಾವಿರಾರು ರೋಗಿಗಳು ಇದರ ಲಾಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾ ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ ವೀರ್ಯಸ್ರಾವ, ಮೂತ್ರವು ಹಣಿಹನಿಯಾಗಿ ಹೋಗುವುದು ಮತ್ತು ಉರಿಯಾಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೊಕಸ ಸ್ತ್ರೀಯರಿಗಾದ ಭಯಂಕರ ಪ್ರದರರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರ ಸಮೂಲವಾಗಿ ನಾಶವಾಗುವುವು. ಬೆಲೆ: 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8-0-0 (ವ್ಹಿ ಪಿ ಚಾ ಇಂಗ್ಲಿಷಿನಲ್ಲಿ ಬರೆಯಿರಿ ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,

Sole Manufacturer Dr. D. N. JASANI, Vith

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೊ ಹೋಮಿಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ ಮತ್ತು ಡ್ರಗಿಸ್ಟ್,

ಗುಜರಾತಿನ ಜನರು ಕ್ಷಾಮಪೀಡಿತರಾಗಿರವರು!

ಜಾತೀಯ ತೀರ್ಮಾನವನ್ನು ಬಹಿಷ್ಕರಿಸಿರಿ ಸತ್ಯಪಾಲರಿಗೆ ಗಾಂಧಿಜಿಯವರ ಉಪದೇಶ

ಜಾತೀಯ ತೀರ್ಮಾನವನ್ನು ಬಹಿಷ್ಕರಿಸಬೇಕು



ಪಂಡಿತ ಮಾಲವೀಯರ ಸಂದೇಶ

ಜಾತೀಯ ತೀರ್ಮಾನವು ದುಷ್ಟಶಾಸನವೆಂದು, ಅದನ್ನು ಕಿತ್ತು ಹಾಕದ ನಿಮಿತ್ತ ಕಳೆದ ೫೦ ವರ್ಷಗಳಲ್ಲಿ, ಹಿಂದೂದೇಶದ ರಾಜಕೀಯ ಮುಖಂಡರು ಸರ್ವ ಜಾತಿಗಳ ಐಕ್ಯಸಾಧನೆಗಾಗಿ ಮಾಡಿದ ಯತ್ನಗಳು ವಿಫಲವಾದುವೆಂದೂ, ಅದನ್ನು ನಿಷೇಧಿಸುವುದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವೆಂದೂ ಪಂಡಿತ ಮದನಮೋಹನ ಮಾಲವೀಯರು, ಕಲ್ಕತ್ತದಲ್ಲಿ ನೆರೆದ ಜಾತೀಯ ತೀರ್ಮಾನ ವಿರುದ್ಧ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಿಗೆ ಸಂದೇಶ ಕಳುಹಿಸುತ್ತಾರೆ

ಈ ಜಾತೀಯ ತೀರ್ಮಾನವು ಇರುವ ವರೆಗೆ ರಾಷ್ಟ್ರದಲ್ಲಿ ಐಕ್ಯತೆಯಾಗಲು ಸಾಧ್ಯವಿಲ್ಲವೆಂದೂ, ಇದರಿಂದ ರಾಷ್ಟ್ರೀಯತೆಯು ಹಾಳಾಗಿ, ಜಾತಿದ್ವೇಷವು ಬೆಳೆಯುವುದೆಂದೂ, ಹಿಂದೂದೇಶವು ಸ್ವತಂತ್ರವಾಗಿ ನೋಡಬೇಕೆಂದು ಅಪೇಕ್ಷಿಸುವ ಪ್ರತಿಯೊಬ್ಬ ಭಾರತೀಯನೂ, ಆತನು ಹಿಂದುವಾಗಲಿ ಮುಸ್ಲಿಮನಾಗಲಿ, ಕ್ರಿಶ್ಚಿಯನನಾಗಲಿ, ಅಥವಾ ಪಾರ್ಸಿ, ಸಿಕ್ಖ್ ಯಾವ ಜಾತಿಗೇ ಸೇರಿರಲಿ, ಈ ಜಾತೀಯ ತೀರ್ಮಾನಕ್ಕೆ ವಿರುದ್ಧ ಚಳವಳ ಹೂಡುವುದು ಅವಶ್ಯವಿದೆಯೆಂದು ಸಾರುತ್ತಾರೆ

ಬೊಂಬಯಿಯ ಕಳ್ಳಿನ ಕೆಲಸದವರಿಗೆ ಉದ್ಯೋಗ

ಬೊಂಬಯಿಯ ಎರಡು ಸಕ್ಕರೆ ಕಾರ್ಖಾನೆಯವರು, ಮದ್ಯಪಾನದ ನಿಮಿತ್ತ ಉದ್ಯೋಗವಿಲ್ಲದ ಜನರಿಗೆ ಕೆಲಸ ಕೊಡುವುದಾಗಿ ಒಪ್ಪಿರುವರು.

ಅವರಿಗೆ ಯೋಗ್ಯ ಸಂಬಳವನ್ನು ಕಂಪೆನಿಯವರು ನಿರ್ಧರಿಸಿ ಪ್ರಕಟಿಸಿದ್ದಾರೆ!

ಸರಕಾರದವರು ಈ ರೀತಿಯ ಉತ್ತರವನ್ನು ಇನ್ನೂ ಕೆಲವು ಕಂಪೆನಿಗಳಿಂದ ಹಾರೈಸುತ್ತಿದ್ದಾರೆ

ಡಾ. ಸತ್ಯಪಾಲರಿಗೆ ಗಾಂಧಿಜಿಯವರ ಉಪದೇಶ

ಡಾ ಸತ್ಯಪಾಲರು, ಸಾರ್ವಜನಿಕ ಕೆಲಸದಿಂದ ನಿವೃತ್ತರಾಗುವರೆಂದು ಪ್ರಕಟಿಸಿದ್ದರಷ್ಟೆ? ಆ ಕುರಿತು ಮಹಾತ್ಮಾಜಿಯವರು, ಇದು ಅವರ ಅಂತರಂಗದ ಪ್ರೇರಣೆಯಾಗಿದ್ದರೆ, ಖಂಡಿತವಾಗಿಯೂ ಯೋಗ್ಯವಾಗಿದೆ ಅದಲ್ಲದೆ ನವನ ಪಂಜಾಬ್ ಕಾಂಗ್ರೆಸು ಹಾಳಾಗಿರುವ ವಿಷಯದಲ್ಲಿ ಲಾಲಾ ಧುನಿಚಂದರಿಗೆ ಬರೆದ ಪತ್ರದ ಪರಿಣಾಮವಾಗಿದ್ದರೆ, ಅವರ ನಿಶ್ಚಯವು ಪ್ರಯೋಜನವಿಲ್ಲದುದು ನಾನು ಇಂದು ಕೇವಲ ಪಂಜಾಬ್ ಕಾಂಗ್ರೆಸು ಕಮಿಟಿ ಮಾತ್ರ ಅಶುದ್ಧವಾಗಿರುವುದೆಂದು ಅಭಿಪ್ರಾಯಪಟ್ಟಿಲ್ಲ; ಅದು ಎಲ್ಲಾ ಕಡೆಗಳಲ್ಲಿಯೂ ಇದೆ. ಇದು ಯಾವ ವ್ಯಕ್ತಿಯನ್ನೂ ದೂರಿ ಬರೆದುದಲ್ಲ.

'ಡಾ ಸತ್ಯಪಾಲರು ತಮ್ಮ ಆತ್ಮಸಾಕ್ಷಿಯಿಂದ ಹೀಗೆ ವರ್ತಿಸಲು ನಿಶ್ಚಯಿಸಿದ್ದರೆ, ಅವರು ಎಷ್ಟು ಸಮಯಗಳ ವರೆಗಾದರೂ ಸಾರ್ವಜನಿಕ ಕೆಲಸದಿಂದ ದೂರ ನಿಲ್ಲಬಹುದು ಆದರೆ ಕೃತ್ರಿಮವಾದ, ಮೌನ ಆಚರಣೆಗೆ ಅವರ ಪ್ರಕೃತಿಯು ವಿರೋಧಿಸದಿರದು ಆದುದರಿಂದ ನಾನು ಅವರಿಗೆ ತಿಳಿಸವುದೇನೆಂದರೆ, ಅವರು ಪಂಜಾಬಿನಲ್ಲಿ ಒಂದು ಪಕ್ಷದವರೆಂದು ತಿಳಿಯದಿರಲಿ, ಪಂಜಾಬ್ ಕಾಂಗ್ರೆಸಿನ ಬಲಶಕ್ತಿ ವರ್ಧನೆಗಾಗಿ ದುಡಿಯುವವರೆಂದು ಭಾವಿಸಲಿ, ತಮ್ಮ ತಮ್ಮೊಳಗಿನ ಪಕ್ಷದ ಕಲಹಗಳನ್ನು ಮರೆತು ಬಿಡಲಿ, ಈ ಕೆಲಸವನ್ನು ಹೇಗೆ ಪೂರೈಸಬೇಕೆಂದು ನಾನು ತಿಳಿಸಲಾರೆ ಅದನ್ನು ಅವರೇ ನಿಶ್ಚಯಿಸಿಕೊಳ್ಳಬೇಕು. ಪಂಜಾಬಿನ ಕಾಂಗ್ರೆಸಿನಲ್ಲಿ ಯಾರಾದರೂ ಶಾಂತಿಯನ್ನು ಮಾಡಬಲ್ಲರಾದರೆ, ಅದು ಖಂಡಿತವಾಗಿಯೂ ಡಾ ಸತ್ಯಪಾಲರೊಬ್ಬರೇ!' ಹೀಗೆಂದು ಹೇಳಿರುವರು

ಗಡಿನಾಡಿನಲ್ಲಿ ಡಕಾಯಿತರ ಉಪಟಳ!

ಗುಜರಾತಿನಲ್ಲಿ ಭಯಂಕರ ಕ್ಷಾಮ

ಸರ್ದಾರ ಪಟೇಲರ ಬಿನ್ನಹ

ಅಹಮ್ಮದಾಬಾದಿನ ವಿದ್ಯಾರ್ಥಿಗಳಿಗೆ ಭಾಷಣಮಾಡುತ್ತಾ, ಸರ್ದಾರ ಪಟೇಲರು ಹೀಗೆಂದು ಉಪದೇಶಿಸಿದರು

'ಗುಜರಾತಿನ ತಲೆ ಸುತ್ತು ಮಹತ್ತಾದ ವಿಪತ್ತೊಂದು ತಗಾದುತ್ತಿದೆ, ಇನ್ನೂ ಮಳೆ ಬರಬಹುದೆಂಬ ಆಸೆಯುಂಟು, ಆದರೆ ಈ ಆಸೆಯು ಭಗ್ನವಾದರೆ ಗ ಜರಾ 'ನಲ್ಲಿ, ಶಾಲೆಗಳ ಮುಂದಕ್ಕೆ ನಡೆ ಬಹುದೇ ಎಂಬ ವಿಷಯವಾಗಿ ಸಂಶ ... ಗಿದೆ

ಸ... ಸುತ್ತ... ಜನರು ಶಾಂತಿ ಸುಖ ... ನೀವು ಅಭ್ಯಾಸದಲ್ಲಿ ಮಗ್ನರಾಗಿಯೇ ... ದದ್ದು ನಿಮ್ಮ ಕರ್ತವ್ಯವಾಗಿದೆ ... ದಲ್ಲಿಯೇ, ಹೀಗೆ ನೀರಿಲ್ಲದೆ ... ಎಂದರೆ, ಬೇಸಿಗೆಯಲ್ಲಿ ಜನರ ಪಾಡೇನು?

ಅಹಮ್ಮದಾಬಾದ್ ಜಿಲ್ಲೆಯಲ್ಲಿ ಎಂಟು ನೂರು ಗ್ರಾಮಗಳಿವೆ. ನಾಲ್ಕು ಜಿಲ್ಲೆಗಳಲ್ಲಿ ನೀರಿನ ಕ್ಷಾಮವು ಒದಗಿದೆ ನೂರಾರು ಮಂದಿ, ಬರಗಾಲ ನಿವಾರಣಾ ಕಾರ್ಯದಲ್ಲಿ ನಿರತರಾಗಿದ್ದಾರೆ ಕಾಲೇಜುಗಳು, ಶಾಲೆಗಳು ಗುಜರಾತಿನಲ್ಲಿ ಮುಚ್ಚಲ್ಪಟ್ಟು, ವಿದ್ಯಾರ್ಥಿಗಳು ಉಪಾಧ್ಯಾಯರೂ ಈ ಕೆಲಸಕ್ಕಿಳಿದಿದ್ದಾರೆ. ಪಟೇಲರು ಮಾತನಾಡುತ್ತಾ, ಕ್ಷಾಮಪೀಡಿತ ಜನರಿಗೆ ನೆರವಾಗುವ ಸಲುವಾಗಿ, ದೊಡ್ಡವರ ಮಕ್ಕಳಾದರೂ, ದಿನಕ್ಕೊಂದೇ ಹೊತ್ತು ಉಣ್ಣುವ ಕಾಲವೂ ಬರಬಹುದೆಂದು ಹೇಳಿದರು.

ಸರಕಾರವು ಈಗಾಗಲೇ ಕ್ಷಾಮ ನಿವಾರಣಾ ಕಾರ್ಯವನ್ನು ಆರಂಭಿಸಿರುತ್ತದೆ

ರಾಜಕೋಟದಲ್ಲಿ ನೀರಿನ ಅಭಾವದಿಂದ ದನಕರುಗಳು ಸಾಯ ತೊಡಗಿವೆ!

ಮೈಸೂರು ಕಾಂಗ್ರೆಸು ಕಮಿಟಿ

ಸಪ್ಟಂಬರ ಪ್ರಥಮ ವಾರದಲ್ಲಿ ಅಖಿಲ ಮೈಸೂರು ಕಾಂಗ್ರೆಸು ಕಮಿಟಿಯ ಅಧಿವೇಶನವು ಬೆಂಗಳೂರಲ್ಲಿ ಸೇರಿ, ಪ್ರಕೃತ ಪರಿಸ್ಥಿತಿಯ ಕುರಿತು ಚರ್ಚಿಸುವುದು

ಆ ಬಗ್ಗೆ ವರ್ಕಿಂಗ್ ಕಮಿಟಿಯ ಸಭೆಯೊಂದು, ಕಳೆದ ಸೋಮವಾರ ಸೇರಿತು

ಕೋಲಾರ ಕಾಂಗ್ರೆಸು ಕಮಿಟಿಯ ಅಧಿವೇಶನವು ಕಳೆದ ಆದಿತ್ಯವಾರ ಚಿಕ್ಕಬಳ್ಳಾಪುರದಲ್ಲಿ ಸೇರಿತು ವರ್ಕಿಂಗ್ ಕಮಿಟಿಯು ಅಧಿಕಾರವಿತ್ತಲ್ಲಿ ಸತ್ಯಾಗ್ರಹವನ್ನು ಆರಂಭಿಸುವುದಾಗಿ ಕೋಲಾರ ಜಿ ಕಾಂಗ್ರೆಸು ಕಮಿಟಿಯು ಅಭಿಪ್ರಾಯ ಪಟ್ಟಿದೆ.

ಸಣ್ಣ ಸಂಸ್ಥಾನಗಳ ಒಕ್ಕಟ್ಟು!

ಮಹಾತ್ಮಾಜಿಯವರ ಆಶೀರ್ವಾದ

ಕಾಥಿಯಾವಾಡಿನಲ್ಲಿರುವ ಅನೇಕ ಸಣ್ಣ ಸಣ್ಣ ಸಂಸ್ಥಾನಗಳನ್ನು ಒಟ್ಟುಗೂಡಿಸುವ ವಿಷಯದಲ್ಲಿ, ತಮಗೆ ಬಂದ ಒಂದು ಪತ್ರವ್ಯವಹಾರಕ್ಕೆ ಉತ್ತರ ಕೊಡುತ್ತಾ ಮಹಾತ್ಮಾಜಿಯವರು 'ಹರಿಜನ'ದಲ್ಲಿ ಹೀಗೆಂದು ಬರೆಯುತ್ತಾರೆ

'ಹೀಗಿನ ಸಂದರ್ಭದಲ್ಲಿ ಈ ಸೂಚನೆಯನ್ನು ಹೃತ್ಪೂರ್ವಕ ಸಮರ್ಥಿಸವುದರಲ್ಲಿ ನಾನು ತೃಪ್ತಿಪಡಬೇಕಾಗಿದೆ ಪತ್ರವನ್ನು ಬರೆದವರು ಹೇಳುವಂತೆ, ಸಣ್ಣ ಸಣ್ಣ ಸಂಸ್ಥಾನಗಳು ಮಾನಪೂರ್ವಕ ಮಾತನಾಡದಲಿ ಈ ಸೂಚನೆಗೆ ಅಸಮ್ಮತಿಸಲಾರವೆಂದು ನಾನು ತಿಳಿಯುತ್ತೇನೆ. ನಿಜವಾಗಿಯೂ ಅವುಗಳ ಶೇಯಸ್ಸು ಹೀಗೆ ಒಟ್ಟುಗೂಡಿ ಪ್ರಜೆಗಳಿಗೆ ರಾಜ್ಯದ ಆಡಳಿತದಲ್ಲಿ ನ್ಯಾಯವಾದ ಹಕ್ಕುಗಳನ್ನು ಹಂಚಿಕೊಡುವುದರಲ್ಲಿ ಮಾತ್ರ ಇದೆ ಇದಕ್ಕೆ ಅನುಕೂಲವಾದ, ಶಾಂತರೀತಿಯ ಸಾರ್ವಜನಿಕ ಅಭಿಪ್ರಾಯವನ್ನು ಜಾಗೃತಿಗೊಳಿಸುವುದು ಇದರಲ್ಲಿರುವ ಪ್ರಾಮುಖ್ಯ ವಿಷಯವಾಗಿದೆ

ಯುದ್ಧದ ವಿಷಯದಲ್ಲಿ ಪ್ರಾಂತ ಮಂತ್ರಿಮಂಡಳಗಳನ್ನು ವಿಚಾರಿಸಿರಿ



ಭಾರತ ಸರಕಾರಕ್ಕೆ ಶ್ರೀ ಸತ್ಯಮೂರ್ತಿಗಳ ಹೇಳಿಕೆ

ಶ್ರೀ ಸತ್ಯಮೂರ್ತಿಗಳು ಭಾರತ ಸರಕಾರವು ಯುದ್ಧ ಸಂಭವದಲ್ಲಿ ಹಿಂದೂದೇಶವು ಮಾಡತಕ್ಕ ಕಾರ್ಯದ ಕುರಿತು, ಎಲ್ಲಾ ಪ್ರಾಂತಗಳ ಮಂತ್ರಿಮಂಡಳಗಳನ್ನು ವಿಚಾರಿಸುವುದು ಅಗತ್ಯವೆಂದೂ, ಇದು ಎಲ್ಲಾ ದೇಶದ ರಾಜಕೀಯ ನೀತಿಗೆ ಅನುಗುಣವಾಗಿದೆಯೆಂದೂ, ಇಂದು ಹನ್ನೊಂದು ಪ್ರಾಂತಗಳಲ್ಲಿ ಸರಕಾರದ ಅಧಿಕಾರವನ್ನು ನಿರ್ವಹಿಸುತ್ತಿರುವ, ಪ್ರಾಂತದ ಮಂತ್ರಿಮಂಡಳಗಳಿಗೆ, ದೇಶದ ರಕ್ಷಣೆಯ ವಿಷಯದಲ್ಲಿ ಕೇಂದ್ರ ಸರಕಾರಕ್ಕಿರುವಂತೆ ಅವುಗಳಿಗೂ ಹಕ್ಕಿದೆಯೆಂದೂ ಹೇಳಿರುವರು

ಗಡಿನಾಡಿನಲ್ಲಿ ಡಕಾಯಿತರ ಉಪಟಳ

ಇಬ್ಬರು ಹೆಂಗುಸರನ್ನು ಸೆರೆ ಹಿಡಿದರು

ಗೋರಿವಾಲ ಪೋಲೀಸ್ ಸ್ಟೇಷನಿನ ಆಡಳಿತೆಯೊಳಗಿನ, ಬನುನಗರದಿಂದ ಹತ್ತು ಮೈಲು ದೂರದ ಕಾಕ್ಕಿ ಎಂಬ ಒಂದು ದೊಡ್ಡ ಗ್ರಾಮದಲ್ಲಿ, ಹಗಲು ಹತ್ತು ಗಂಟೆಯ ಸಮಯಕ್ಕೆ ಎರಡು ಹಿಂದೂ ಹೆಂಗುಸರನ್ನು ಹೊತ್ತುಕೊಂಡು ಹೋದರು!

ಈ 'ಡಕಾಯಿತ'ರು ಸುಮಾರು ೧೫ ಜನಕ್ಕಿಂತ ಹೆಚ್ಚಿದ್ದರು. ಹಳ್ಳಿಯವರು ನೆರೆದು ಇವರ ಮೇಲೆ ಗುಂಡು ಹಾರಿಸಿದರು ಆದರೆ ಅವರನ್ನು ಹಿಂಬಾಲಿಸಿದವರಿಗೆ, ಅವರನ್ನು ಹಿಡಿಯಲು ಆಗಲಿಲ್ಲ ಹಲವು ಮಂದಿ ಕಾಂಗ್ರೆಸು ಕೆಲಸಗಾರರೂ ಸಹಾಯ ಮಾಡಿದ್ದರು

ಪ್ರಧಾನ ಮಂತ್ರಿ ಖಾನ್ ಸಾಹೇಬರು ತಹಶಿಲ್ದಾರರೊಡನೆ ಆ ಸ್ಥಳವನ್ನು ಸಂದರ್ಶಿಸಿದರು

ಸ್ಟೇಶನಿನ ಸುತ್ತು ಮುತ್ತು ಎಂಟು ಮೈಲುಗಳೊಳಗಿನ ಟೆಲಿಫೋನು ತಂತಿಯು ತುಂಡು ಮಾಡಲ್ಪಟ್ಟಿತ್ತು

ಅನೇಕ ಹಿಂದುಗಳನ್ನು ಹೀಗೆ ಹೊತ್ತುಕೊಂಡು ಹೋಗಿ, ಅವರನ್ನು ಸಂಕಷ್ಟಕ್ಕೆ ಒಳಪಡಿಸಿ, ಬಿಟ್ಟುಕೊಡಬೇಕಾದರೆ ಸಾವಿರಾರು ರೂಪಾಯಿಗಳನ್ನೂ ಕೊಡಬೇಕಾಗಿ ಕೇಳುತ್ತಿದ್ದಾರೆ

ಬನು ನಗರದ ಹಿಂದು ಮತ್ತು ಸಿಕ್ಖರು ಸಂಪೂರ್ಣ ಹರತಾಳ ಮಾಡಿರುವರು.

ಬರುವ ಕಾಂಗ್ರೆಸ್ಸು ಅಧಿವೇಶನದ ಸಿದ್ಧತೆ!

ರಾಷ್ಟ್ರಪತಿಗಳು ಗಾಂಧಿಜಿಯವರನ್ನು ಕಂಡರು

ಕಾಂಗ್ರೆಸು ಅಧ್ಯಕ್ಷರಾದ ಡಾ। ರಾಜೇಂದ್ರ ಪ್ರಸಾದರು ತಾ ೨೦ರಂದು ವಾರ್ಧಾದಿಂದ ತೆರಳಿ, ೨೧ರಂದು ರಾಮಘರ್ (ಕಾಂಗ್ರೆಸು ನಗರ)ದಲ್ಲಿ ಸ್ವಯಂಸೇವಕರ ದಳದ ಶಿಕ್ಷಣ ಶಿಬಿರವನ್ನು ತೆರೆದು, ಸ್ವಾಗತ ಸಮಿತಿಯ ಸಭೆಯೊಂದರಲ್ಲಿ ಭಾಗಿಗಳಾದರು.

ರಾಜೇಂದ್ರ ಪ್ರಸಾದರು ಗಾಂಧಿಜಿಯವರೊಡನೆ, ಎರಡು ತಾಸುಗಳ ತನಕ ಮಾತನಾಡಿ ಇದ ವರೆಗೆ ಮಾಡಿದ ಕೆಲಸಗಳ ವಿವರವನ್ನು ತಿಳಿಸುತ್ತಾ ಬರುವ ಅಧಿವೇಶನದ ವಿಷಯವಾಗಿ ಆಲೋಚನೆ ಕೇಳಿದರು

ಶೀಯಾ ಸುನ್ನೀ ಗಲಭೆ

ಮೌಲಾನಾ ಆಜಾದರು ಲಕ್ನೋಗೆ ತೆರಳಿದರು

ಲಕ್ನೋದಲ್ಲಿ ನಿರಂತರವಾಗಿ ನಡೆಯುತ್ತಿರುವ ಮುಸ್ಲಿಂ ಪಂಗಡಗಳಾದ, ಶೀಯಾ ಮತ್ತು ಸುನ್ನೀ ಮುಸಲ್ಮಾನರಿಗೆ ಆಗುವ ಜಗಳದ ವಿಷಯವಾಗಿ, ಇತ್ಯರ್ಥಮಾಡುವ ಉದ್ದೇಶದಿಂದ, ವರ್ಕಿಂಗ್ ಕಮಿಟಿಯ ಸಭಾಸದರಾದ ಮೌಲಾನಾ ಅಬುಲ್ ಕಲಮ್ ಆಜಾದರು ಲಕ್ನೋಗೆ ತೆರಳಿರುವರು

ಈಗಲೂ ಕೂಡಾ, ಕಾಲುನೋವಿನಿಂದ ಅವರಿಗೆ ಚಲಿಸಲು ಆಗುವುದಿಲ್ಲವಾದರೂ, ತಾನು ಲಕ್ನೋಗೆ ತೆರಳಿದ ಅಲ್ಲಿನ ಮುಸ್ಲಿಮರೊಳಗಿನ ಈ ಗಲಭೆಯು ಕೊನೆಗಾಣಲಾರದೆಂದು ಕೇಳಿ, ಅಲ್ಲಿಗೆ ಹೋಗಲು ಖಂಡಿತ ಮಾಡಿದರು.

ಆಕಾಶದಿಂದ ಬೀಜಗಳು

ರಶ್ಯಾದ ಮರುಳು ಭೂಮಿಯು ಈಗ ವಿಮಾನಗಳಿಂದ ಬಿತ್ತಲ್ಪಟ್ಟ ಬೀಜಗಳಿಂದ ಒಳ್ಳೆಯ ಹುಲ್ಲುಗಾವಲು ಆಗಿ ಬೆಳೆದು ಮನೋರಂಜಕವಾಗುತ್ತಾ ಬರುತ್ತಲಿದೆ

ಈ ರೀತಿಯಾಗಿ ಮರುಳು ಭೂಮಿಯನ್ನು ಫಲವತ್ತಾದ ಪ್ರದೇಶಗಳನ್ನಾಗಿ ಮಾಡುವ ನೂತನ ಪ್ರಯೋಗವು ಬಹಳ ಫಲಕಾರಿಯಾಗುತ್ತಿದೆ ಕಾಂಪಿಕ ಪ್ರಾಂತ್ಯದಲ್ಲಿ ವಿಮಾನಗಳು ಬಹಳ ಹೆಚ್ಚಾಗಿ ಉಪಯೋಗಿಸಲ್ಪಡುತ್ತಿವೆ

ಈ ಜಗತ್ತಿನ ಮೂರನೇ ಒಂದಂಶದಷ್ಟು ಕಾಡು ಪ್ರದೇಶವುಳ್ಳ ರಶ್ಯಾದ ಅರಣ್ಯಗಳನ್ನು ರಕ್ಷಣೆಮಾಡುವ ವಿಷಯದಲ್ಲಿಯೂ ವಿಮಾನಗಳು ಬಹಳ ಸಹಾಯ ಮಾಡುತ್ತಿವೆ ವಿಮಾನಗಳಿಂದ ಕೆಲ ಪ್ರದೇಶಗಳನ್ನು ಸುಟ್ಟು ಆ ಮೇಲೆ ಅಲ್ಲಿ ಹೊಸ ಬೀಜಗಳನ್ನು ಬಿತ್ತಲಾಗುತ್ತದೆ

ಹಣ್ಣು ಹಂಪಲಗಳು ಹಾಳಾಗದಂತೆಯೂ ವಿಮಾನಗಳು ಉಪಯೋಗವಾಗುತ್ತಿವೆ ಅವುಗಳು ಕೆಳಕ್ಕೆ ಬಂದು ಮರಗಳ ಮೇಲೆ ಒಂದು ರೀತಿಯ ವಿಷದನ್ನು ಚಿಮಿಕಿಸುತ್ತವೆ ಇದರಿಂದ ಉಷ್ಣಮಾನವು ಒಂದೇ ಸ್ಥಿತಿಯಲ್ಲಿ ಇತ್ತು ಕೊಳೆಯ ವಿಕೆಯು ಆಗುವುದಿಲ್ಲ ಬತ್ತವನ್ನು ಬೆಳೆಸುವ ಗದ್ದೆಗಳ ಮೇಲೂ ಈ ರೀತಿ ಫೆಳ್ಳುನ್ನು ಹೆಚ್ಚು ಮಾಡುವ ಹಂಚಿಕೆ ಪ್ರಯೋಜನಕಾರಿಯಾಗಿ ಕಂಡಿದೆ

ಸಾವಿರಾರು ಮಿಡಿತೆ ಮತ್ತು ಇನ್ನನೇಕ ಬೆಳೆ ಹಾವಳಿ ಮಾಡುವ ಜಂತುಗಳನ್ನು ಕೊಲ್ಲಲು ವಿಮಾನಗಳಿಂದ ಆಗುತದೆ ೫೦೦೦,೦೦೦ ಎಕ್ರೆ ಸ್ಥಳಗಳಲ್ಲಿರುವ ಮಿಡಿತಗಳನ್ನು ಕಳೆದ ಐದು ವರ್ಷಗಳಿಂದ ಕೊಂದು ಆಗಿದೆ

ಹೊಟ್ಟೆಯಲ್ಲಿರುವ ಶಿಶುವಿಗೆ ಕೇಳುತ್ತದೆ

ಅಮೇರಿಕದ ಒಬ್ಬ ವಿಜ್ಞಾನಿಯು ಪ್ರಯೋಗದಿಂದ ಹೊಟ್ಟೆಯಲ್ಲಿರುವ ಮಗುವಿಗೆ ಹೊರಗಿನ ಶಬ್ದಗಳು ಕೇಳುತ್ತದೆಯೆಂದು ರುಜುವಾತುಪಡಿಸಿರುತ್ತಾನೆ

ಜೀವವಿದ ಹಂದಿಯ ಹೊಟ್ಟೆಯಲ್ಲಿರುವ ಮರಿಯ ಕುರಿತು ಈ ಪ್ರಯೋಗವನ್ನು ಮಾಡಿ ನೋಡಿದಾಗ, ಹೊರಗಿನ ಶಬ್ದಗಳ ಪ್ರಕಾರ ಹೊಟ್ಟೆಯೊಳಗಿನ ಮರಿಯು ಚಲಿಸುತ್ತಿರುವುದಾಗಿ ತಿಳಿದು ಬಂತು

ತತ್ತಿಗಳೂ ಕೂಗುತ್ತವೆ

ಕ್ರಿಮಿಗಳ ಕಾಟದಿಂದ ರಕ್ಷಣೆಯು ಸಲುವಾಗಿ, ತತ್ತಿಗಳೂ ಕೂಗುತ್ತವೆ ಅವುಗಳ ಕಂಪನಗಳು ಅಲ್ಲಿಯೇ ಅದೃಶ್ಯವಾಗಿ ಕಣ್ಣಿಗೆ ಗೋಚರಿಸುವುದಿಲ್ಲ ಇದ ಕೆಲವು ವಿಜ್ಞಾನಿಗಳು ತತ್ತಿಯನ್ನು ಬಹಳ ಸಮಯದ ವರೆಗೆ ಸಂಶೋಧಿಸಿ ಕಂಡು ಹುಡುಕಿದ ತತ್ವವಾಗಿದೆ ಲಂಡನಿನ ವಿಜ್ಞಾನ ಉದ್ಯೋಗ ಸಂಶೋಧನಾ ಸಂಘದಲ್ಲಿ ಇದನ್ನು ಅವರು ಪ್ರಯೋಗ ಸಿದ್ಧವಾಗಿ ಪ್ರಚಾರ ಮಾಡಿದರು!

ಐದು ಮಣ ಭಾರವನ್ನು ದಿನನಿತ್ಯ ಹೊರುತ್ತಾನೆ

ಹೈದರಾಬಾದಿನ ಫಕೀರನೊಬ್ಬನು ೨೪ ತಾಸುಗಳ ಕ್ಷಣಕ, ಐದು ಮಣ ಭಾರದ ಸಾಮಾನುಗಳನ್ನು, ಸೊಂಟ, ಕೈ, ಕಾಲು, ತಲೆ ಮೊದಲಾದುವುಗಳಿಗೆ ಹಾಕಿಕೊಂಡು ಹೊರುತ್ತಾನೆ ಇದು ಆತನು ಮಾಡಿದ ಒಂದು ಪ್ರತಿಜ್ಞೆಗಾಗಿ ಹೀಗೆ ಆಚರಿಸುವುದಂತೆ!

ಆತನು ತಲೆಗಿಡುವ ಒಂದು ಕಿರೀಟದಲ್ಲಿ ಮಹಮ್ಮದ್ ಗಜನಿಯ ಕಾಲದಿಂದ ಟಿಪ್ಪು ಸುಲ್ತಾನನ ಕಾಲದ ವರೆಗಿನ ನಾಣ್ಯಗಳೂ, ಆ ಮೇಲೆ ಈಸ್ಟ್ ಇಂಡಿಯಾ ಕಂಪೆನಿಯ ನಾಣ್ಯಗಳೂ ನೂರಾರು ಇಟ್ಟುಕೊಂಡಿದ್ದಾನೆ! ಕೆಲವು ಯೂರೋಪಿನ ನಾಣ್ಯಗಳೂ ಅವುಗಳಲ್ಲಿವೆ. ಅದು ಏಳು ಸೇರು ಭಾರವಿದೆ! ನಿಜ

ವಿಚಿತ್ರ ಪ್ರ

ವಾಗಿಯೂ ಆತನ ತಲೆಯೆಂದರೆ ಜಗತ್ತಿನ ನಾಣ್ಯಗಳ ಒಂದು ಪ್ರದರ್ಶನ ಶಾಲೆಯೇ ಆಗಿದೆ!

ರೋಗ ತಗಲಿದಂತೆಯೇ ಗುಣ!

ಇಟಲಿಯ ಕೇಂಪೆಲೋ ಎಂಬಲ್ಲಿರುವ ೨೯ ವರ್ಷದ ವರ್ಜೀನಿಯಾ ವಲ್ಲಾರ್ಡಿ ಎಂಬ ಹೆಂಗುಸು ಒಂದು ತಿಂಗಳ ಹಿಂದೆ ಮಿಂಚು ಬಡಿದು ಮೂಕಳಾಗಿದ್ದಳು!

ಈಗ ಒಂದು ತಿಂಗಳ ನಂತರ ಹಾಗೆಯೇ ಒಂದು ಮಿಂಚಿನ ಹೊಡೆತದಿಂದಾಗಿ ತಿರುಗಿ ಮಾತನಾಡಲು ಸುರುಮಾಡಿದ್ದಾಳೆ! ರೋಗವು ತಗಲಿದಂತೆಯೇ ಗುಣವಾಗುತ್ತದೆಯೆಂಬ ತತ್ವವು ಪ್ರದರ್ಶಿತವಾಯಿತು

ನಾಯಿಯು ಗುರುತಿಸಿತು!

ಒಬ್ಬ ಫ್ರೆಂಚ್ ಹೆಂಗುಸು, ಅಲ್ಲಿನ ಚಿತ್ರಗಾರನೊಬ್ಬನಿಗೆ ತನ್ನ ಚಿತ್ರವನ್ನು ಪೈಂಟ್ ಮಾಡಲು ಆರ್ಡರ್ ಕೊಟ್ಟಳು ಹಲವು ದಿನಗಳಾದ ಮೇಲೆ ಆತನು ಅದನ್ನು ಸಂಪೂರ್ಣ ಮಾಡಿದ ಕಡೆಗೆ ಆತನಿಗೆ ಅದರ ಬೆಲೆಕೊಟ್ಟು ತೆಗೆದುಕೊಂಡು ಹೋಗಬೇಕಾದರೆ, ತನ್ನ ನಾಯಿಯೊಂದನ್ನು ತಂದ ಅದು ಚಿತ್ರವನ್ನು ಗುರುತಿಸುವುದಿಲ್ಲವೆಂದೂ, ಹಾಗಾಗಿ ಆ ಚಿತ್ರವು ತನ್ನ ಚಿತ್ರದಂತೆ ಇಲ್ಲವೆಂದೂ ಹೇಳಿ ಕ್ರಯಕ್ಕೆ ತೆಗೆದುಕೊಳ್ಳಲು ನಿರಾಕರಿಸಿದಳು

ಕೆಲವು ದಿವಸಗಳ ಮೇಲೆ ಚಿತ್ರಗಾರನು ಹೆಂಗುಸಿಗೆ, ತಾನು ಆಭಾವ ಚಿತ್ರವನ್ನು ತಿದ್ದಿ ಸರಿಗೊಳಿಸಿರ ವುದಾಗಿಯೂ ಈಗ ನಾಯಿಯನ್ನು ತ ದ ರೆ ಅ ತು ಸಿಗುವುದೋ ಇಲ್ಲವೋ ಎಂದು ನೋಡಬೇಕಾಗಿಯೂ ಹೇಳಿಕೊಂಡನು

ಆಕೆ ಬಂದಳು ನಾಯಿಯ ತಿರುಗಿಯೂ ಗುರುತಿಸಲಿಲ್ಲ ಆದರೆ ಚಿತ್ರಗಾರ ಹೇಳಿದ, ನಾಯಿಯನ್ನು ಸ್ವಲ್ಪ ಸಮೀಪ ತರಬೇಕೆಂದು ಆಕೆಯು ಮುಸುಡಿನ ಸಮೀಪ ತಂದಾಗ ಅದು ಅದರ ಮುಸುಡಿಗೆ ಮುತ್ತಿಕ್ಕಿತಂತೆ

ಆಗ ಮಾತ್ರ ತನ್ನ ಭಾವಚಿತ್ರವನ್ನು ಚಿತ್ರಗಾರನು ಸರಿಯಾಗಿ ಬಿಡಿಸಿರ ವನೆಂದು ಅವಳಿಗೆ ತಿಳಿದು ಬಂತ

ಮರಣ...
... ಮರಣ ವ ತ್ತು ...
ಬೇಗನೇ ನಂಟಸ್ತಿಕೆ!

... ವಾಹನ ನಡೆಸುತ್ತಿದ್ದಾಗ, ನಿರೀಕ್ಷಿಸುವುದನ್ನೇ ನಿರೀಕ್ಷಿಸದೇ ಇರುವುದನ್ನೆಲ್ಲಾ ಗಮನಿಸಿರಿ

... ಇದು ಒಳ್ಳೆಯ ಮಾರ್ಗ, ಆದರೆ, ಜೋರಾಗಿ ನಡೆಸುವ ಮಾರ್ಗವಲ್ಲ!

... ಈ ನವ ಸೂತ್ರಗಳನ್ನು ವಾಹನಗಳನ್ನು ನಡೆಸುವವರು ಸರಿಯಾಗಿ ಗಮನಿಸಿಕೊಳ್ಳದಿದ್ದರೆ ಪೋಲೀಸರ ವಶವಾಗ ವರು

ಬೌದ್ಧಮತಕ್ಕೆ ಬ್ರಿಟಿಷ್ ಉದಾರಿಯ ದಾನಶಾಸನ!

ಹಿಂದಕ್ಕೆ ಹಿಂದೂದೇಶದಲ್ಲಿ ಬ್ರಿಟಿಷರ ದುರ್ನೀತಿಯ ಆಡಳಿತೆಯನ್ನು ವಿರೋಧಿಸಿ ಕರಪತ್ರಗಳನ್ನು ಹಂಚಿದ ಸರ್ ವಾಲ್ಟರ್ ವಿಲಿಯಂ ಸ್ಟ್ರಿಕ್‌ಲೇಂಡ್ ಎಂಬವರ ಕಳೆದ ವರ್ಷ ತನ್ನ ೮೭ನೇ ವರ್ಷದಲ್ಲಿ ಜಾವಾದಲ್ಲಿ ಮೃತರಾಗಿ, ತನ್ನ ಸ್ವಾಧೀನದ ಸುಮಾರು ೨೭೦೦೦ ಪವನುಗಳ ಬೆಲೆಯ ಭೂಮಿಯನ್ನು ಬುದ್ಧ ಧರ್ಮಕ್ಕೆ ದಾನಮಾಡಿ ಕೊಟ್ಟಿರುವರು

ಇವರು ೧೯೩೭ರಂದು ತನ್ನ ಬಿರುದನ್ನು ತ್ಯಜಿಸಿ ಜೆಕೊಸ್ಲವೇಕಿಯದ ನಾಗರಿಕನಾಗಿ ಬಂದು ಉಳಕೊಂಡರ

ಭಯಂಕರವಾದ ಮೂತ್ರವ್ಯಾಧಿಗಳ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ
ಜಗತ್ಪ್ರಸಿದ್ಧ

ಗೊನೊಕಿಲರ್

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲಾ ಪ್ರಕಾರದ ಸಂಬಂಧದ ರೋಗ ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಗುಣ ತೋರಿಸುತ್ತದೆ ಸಾವಿರಾರು ರೋಗಿಗಳು ಇದರ ಲಾಭ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಕದೆ ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರಿ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೊಕಸ ಸ್ತ್ರೀಯರಿಗಾದ ಭಯಂಕರ ಪ್ರದರರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರ ಸಮೂಲವಾಗಿ ನಾಶವಾಗುವುವು ಬೆಲೆ: 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8-0-0 (ವ್ಹಿ. ಪಿ. ಚಾ ಇಂಗ್ಲಿಷಿನಲ್ಲಿ ಬರೆಯಿರಿ ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ,

Sole Manufacturer Dr. D. N. JASANI, Vith

ಸ್ಟಾಕಿಸ್ಟರು ಮೆಸರ್ಸ್ ಇಲೆಕ್ಟ್ರೊ ಹೊಮ್ಯೊಪತ್ ಡಿಸ್‌ಪೆನ್ಸರಿ, ಕೆಮಿಸ್ಟ ಮತ್ತು ಡ್ರಗ್ಗಿಸ್ಟ್,

ಹಿಟ್ಲರನ ನಿರ್ಧಾರ

ಜರ್ಮನಿಯ ಇತ್ತೀಚೆಯ ಘಟನೆಗಳು ಯುರೋಪಿನ ರಾಜಕೀಯ ಪರಿಸ್ಥಿತಿಯಲ್ಲಿ ಬಹಳ ಬದಲಾವಣೆಯನ್ನು ಸೂಚಿಸುವಂತಹವುಗಳಾಗಿವೆ ಹೆರ್ ಹಿಟ್ಲರನು ಒಂದು ಖಂಡಿತ ನಿರ್ಧಾರಕ್ಕೆ ಬಂದಂತೆ ತೋರುತ್ತದೆ ತನ್ನ ಮಂತ್ರಿಗಳೊಡನೆ, ಆತನು ಮುಂದೆ ಮಾಡತಕ್ಕ ಕಡೆಯ ತೀರ್ಮಾನದ ಇತ್ಯರ್ಥ ಸಂಭಾಷಣೆಯನ್ನು ಮಾಡಿರುವುದಾಗಿ ತಿಳಿದ.ಬರುತ್ತದೆ.

ಈಗ ಹಿಟ್ಲರನಿಗೆ ತನ್ನ ಇಂದ್ರಜಾಲವು, ಇನ್ನು ಮುಂದೆ ನಡೆಯಲಾರದು ಎಂಬ ವಿಷಯವು ತಿಳಿದಂತಿದೆ. ಹಿಟ್ಲರನು ಮಾಡಿದ ಅನೇಕ ಅನ್ಯಾಯಗಳಿಂದ ಆತನನ್ನು ಖಂಡಿತವಾಗಿ ಎದುರಿಸಲೇಬೇಕೆಂದು ಪ್ರಜಾಪ್ರಭುತ್ವ ರಾಷ್ಟ್ರಗಳು ಇಂದು ನಿಶ್ಚಯಮಾಡಿವೆ ಹಿಂದೆ ಇತರ ರಾಷ್ಟ್ರಗಳನ್ನು ಬೆದರಿಸಿ, ಮಂಕುಮಾಡಿದಂತೆ ಈ ಸರ್ತಿ ಹಿಟ್ಲರನ ಮಾಯಾಜಾಲವು ಫಲಕಾರಿಯಾಗುವ ಹಾಗೆ ಕಾಣುವುದಿಲ್ಲ.

ಆದರೆ, ಈ ಸಂದರ್ಭದಲ್ಲಿ ಇಂತಹ ಪರಿಸ್ಥಿತಿಯನ್ನು ಚೆನ್ನಾಗಿ ಅರಿತ ಹಿಟ್ಲರನು, ತಾನಿಟ್ಟ ಹೆಜ್ಜೆಯನ್ನು ಹಿಂದಿಡುವುದು ಸಾಧ್ಯವೇ ಎಂಬ ವಿಷಯ ಆಲೋಚಿಸತಕ್ಕುದಾಗಿದೆ ಹಿಟ್ಲರ ಶಾಹಿಯು, ಜರ್ಮನಿಯಲ್ಲಿ ಇದುವರೆಗೆ ನಿರಂಕುಶ ಪ್ರಭುತ್ವವನ್ನ ಮಾಡಿದ, ಇತಿಹಾಸವನ್ನು ಪರಿಶೀಲಿಸಿದವರಿಗೆ, ಹಾಗೆ ಮಾಡುವುದು ಸಾಧ್ಯವಿಲ್ಲವೆಂದು ನಿಶ್ಚಯವಾಗಿ ತಿಳಿಯದಿರದು "ಅಡಿಯನ್ನು ಮುಂದಿಟ್ಟರೆ ಜಯ" ಇದು ಹಿಟ್ಲರನ ನೀತಿ! ಇದರಿಂದಲೇ ಇಂದು ಜರ್ಮನಿಯ ಏಕೈಕಪ್ರಭುವಾಗಿ ಆತನು ವಿಜೃಂಭಿಸಿರುವನು ಈಗ ಕಿರಿಗಿ, ಬೆದರಿಕೆಯಿಂದಲೋ ಹಂಚಿಕೆಯಿಂದಲೋ, ಅಥವಾ ಇನ್ನಾವುದೇ ಉದ್ದೇಶದಿಂದಾಗಲಿ ಇಟ್ಟ ಹೆಜ್ಜೆಯನ್ನು ಹಿಂದೆ ಕೆದಲ್ಲಿ, ಆ ದೌರ್ಬಲ್ಯವೇ ಆತನ ಸಮಾಧಿಯನ್ನು ಮಾಡಿಬಿಡಲು ಸಾಕಾಗುವುದು. ಹಿಟ್ಲರನ ಇಂದಿನ ಅಮಾನುಷ ಶಕ್ತಿಯ ಪ್ರದರ್ಶನವು ಒಮ್ಮೆ ಆತನಲ್ಲಿ ಇಲ್ಲವೆಂದು ತಿಳಿದಾಗ, ಜರ್ಮನಿಯ ರಾಜನೀತಿಯು ಹಿಟ್ಲರನ ನಾಮಾವಶೇಷ ಮಾಡದೆಬಿಡದು.

ಹೀಗಾಗಿ, ಇಂದು ಪರಿಸ್ಥಿತಿಯು ಸಂಕಷ್ಟಮಯವಾಗಿ, ಡಾನ್ಜಿಗಿನ ಕುತ್ತು ಹಿಟ್ಲರನ ಕಂಠವನ್ನು ಸುಡಹತ್ತಿದೆ.

ಬ್ರಿಟಿಷ್ ಮತ್ತು ಫ್ರಾನ್ಸ್‌ಗಳು ತಮ್ಮ ಪ್ರತಿಜ್ಞೆಯಂತೆ ಪೋಲೆಂಡಿನ ನೆರವಾಗಿ ನಿಲ್ಲುವುದು ಖಂಡಿತವೆಂಬ ವಿಷಯದಲ್ಲಿ ನಾವು ಸಂಶಯಗೊಳ್ಳುವ ಅವಕಾಶವೇನೂ ಕಂಡುಬರುವುದಿಲ್ಲ. ಇನ್ನು ಮುಂದಕ್ಕೆ ಕಲಹಕಂಟಕರಾದ ಸರ್ವಾಧಿಕಾರಿಗಳು ಒಂದಡಿ ಮುಂದಿಡುವುದನ್ನು, ಬ್ರಿಟನು ಸಹಿಸಲಾರದೆಂದೂ, ತನ್ನ ಪ್ರತಿಜ್ಞೆಯಂತೆ ಪೋಲೆಂಡಿನ ಬೆಂಬಲಕ್ಕೆ ಬರುವುದೆಂದೂ ಸರ್ವಾಧಿಕಾರಿಗಳಿಗೆ ತೀವ್ರ ಉತ್ತರಗಳನ್ನು ಕೊಟ್ಟಿದೆ. ಡಾನ್ಜಿಗಿನ ಇಂದಿನ, ಸ್ವಾತಂತ್ರ್ಯದಲ್ಲಿ ಯಾವುದೇ ತರದ ಅತಿಕ್ರಮವು ಸಂಭವಿಸಿದರೂ ಫ್ರಾನ್ಸು ಮತ್ತು ಬ್ರಿಟನುಗಳು ತಮ್ಮ ಸೈನ್ಯಶಕ್ತಿಯಿಂದ ಅದನ್ನು ತಡೆಯಲು ಸಿದ್ಧವಾಗಿ ನಿಂತಿವೆ ಹೀಗಾಗಿ, ಈಗ ಹಿಟ್ಲರನು ಡಾನ್ಜಿಗನ್ನು ಆಕ್ರಮಿಸಲು ಮಾಡುವ ಪ್ರತಿಯೊಂದು ಕಾರ್ಯವೂ, ಇಡೀ ಯುರೋಪನ್ನು ಇತ್ತಂಡವಾಗಿ ವಿಭಾಗಿಸಿ, ಪರಸ್ಪರ ಯುದ್ಧ ಕೋಲಾಹಲಕ್ಕೆ ಆಸ್ಪದವಿತ್ತಂತಾಗುವುದು.

ಒಬ್ಬ ಹಿಟ್ಲರನ, ವ್ಯಕ್ತಿಮಾತ್ರದ ದುರಹಂಕಾರ, ದರ್ಪ, ಅಭಿಮಾನಗಳಿಗಾಗಿ ಇಡೀ ಜಗತ್ತೇ ಇಂದು ವಿಷಮ ಸಂಕಷ್ಟಕ್ಕೆ ತುತ್ತಾಗಿದೆ. ಈ ಮಹಾ, ಅಪಾಯವನ್ನು ನ್ಯಾಯರೀತಿಯಿಂದ ಪರಿಹರಿಸಲು, ಯಾರು ಸಮರ್ಥರಾದಾರು?

ಕನ್ನಡ ಸಾಹಿತ್ಯ ಪರಿಷತ್ತಿನ ಪರೀಕ್ಷೆಗಳು

ಕನ್ನಡ ಸಾಕ್ಷರತಾ ಪ್ರಚಾರ, ಸಾಹಿತ್ಯ ಸಂಸ್ಕೃತಿಗಳ ಅಭ್ಯಾಸದ ಉದ್ದೇಶದಿಂದ, ಕರ್ನಾಟಕ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ, ಮೊದಲನೆಯ, ಎರಡನೆ ಮತ್ತು ಮೂರನೆಯ (ಪ್ರೌಢ) ಪರೀಕ್ಷೆಗಳು ಹೀಗೆ ಮೂರು ಮಟ್ಟಗಳು ಏರ್ಪಡಿಸಲಾಗಿವೆ

ಸಾಹಿತ್ಯ ಪರಿಷತ್ತಿನವರ ಈ ರಚನಾತ್ಮಕ ಕಾರ್ಯದಿಂದ ಕನ್ನಡದ ಪ್ರಚಾರವು ಹೆಚ್ಚಾಗಿ, ಕನ್ನಡ ಜನತೆಯು ನಿರಕ್ಷರತೆಯ ಸಂಕಷ್ಟದಿಂದ ಪಾರಾಗಿ, ಕನ್ನಡಿಗರೆಲ್ಲಾ ಒಂದಾಗುವ ಸೌಭಾಗ್ಯವಾಗುವುದೆಂದು ಭರವಸೆಯಿಂದ ನಿರೀಕ್ಷಿಸಲಾಗಿದೆ

ಈ ಕಾರ್ಯಕ್ಕಾಗಿ, ಪರಿಷತ್ತು ಒಂದು ನಿರ್ದಿಷ್ಟ ಕಾರ್ಯಕ್ರಮದಿಂದ ಬರುವ ಸಪ್ಟೆಂಬರ ೧ನೆಯ ತಾರೀಕಿನ ಹೊತ್ತಿಗೆ ಶಾಲೆಗಳನ್ನು ಏರ್ಪಡಿಸುತ್ತದೆ.

ಪರಿಷತ್ತಿನ ಈ ಯೋಜನೆಯು ಪೂರ್ಣ ಯಶಸ್ವಿಯಾಗಲೆಂದು ಹಾರೈಸುತ್ತೇವೆ ಪಠ್ಯ ಪುಸ್ತಕ ಮೊದಲಾದ ವಿವರಗಳಿಗೆ ಸಾಹಿತ್ಯ ಪರಿಷತ್ತಿನ ಕಾರ್ಯಾಲಯಕ್ಕೆ ಬರೆದು ತಿಳಿಯಬಹುದು.

ಪದಗಳ ಸ್ಪರ್ಧೆ

ಧಾರವಾಡ ಪ್ರೌಢ ಶಿಕ್ಷಣ ಸಮಿತಿಯವರು ಸಾಕ್ಷರತೆಯ ಪ್ರಯೋಜನ, ನಿರಕ್ಷರತೆಯ ಹಾಗೂ ಅಜ್ಞಾನರ ಹಾನಿಯ ಕುರಿತು ಬರೆದ ಎರಡು ಪದ(ಹಾಡು)ಗಳಿಗೆ ಮೊದಲನೆಯದಕ್ಕೆ ರೂ ೧೦, ಎರಡನೆಯದಕ್ಕೆ ರೂ ೫ ಹೀಗೆ ಬಹುಮಾನವನ್ನು ಕೊಡುವುದಾಗಿ ನಿಶ್ಚಯಿಸಿದ್ದಾರೆ ಪದಗಳು ಸುಲಭವಾಗಿಯೂ ಜನಸಾಮಾನ್ಯರಿಗೆ ತಿಳಿವ ರೀತಿಯೂ, ಜನತೆಯನ್ನ ಚನ್ನಾಗಿ ಪರಿಣಾಮ ಹುಟ್ಟಿಸುವಂತೆಯೂ ಸಭೆ, ಮೆರವಣಿಗೆ, ಹಬ್ಬದಲ್ಲಿ ಹಾಡಲು ಸರಿಯಾಗಿಯೂ, ಪ್ರೌಢ ಶಿಕ್ಷಣದ ಕ್ಲಾಸಿನಲ್ಲಿ ಶಿಕ್ಷಣಾನುಕೂಲವಾಗಿಯೂ, ಬೀಸುವಾಗ, ಕುಟ್ಟುವಾಗಲೂ ಸರಿಯಾಗುವಂತೆ ಲಾವಣಿ ಧಾಟಿಗೆ ಸರಿಯಾಗುವಂತೆಯೂ ಇರಬೇಕು ಪದದ ವಿಷಯ, ಧಾಟಿ ರಾಗಗಳನ್ನು ತಿಳಿಸಬೇಕು.

೩೧-೮-೩೯ರೊಳಗೆ ತಲಪಬೇಕು. ಫಲಿತಾಂಶವು ಮುಂದೆ ಪ್ರಕಟಿಸಲ್ಪಡುವುದು ಎಂದು ಶ್ರೀ. ಸಿ. ಜಿ. ಹೊನ್ನಾವರ ಮಠ, ಪ್ರಚಾರ ಕಾರ್ಯಾಧ್ಯಕ್ಷ, ಧಾರವಾಡ ಸಾಕ್ಷರತಾ ಸಮಿತಿ ಧಾರವಾಡ ಇವರು ತಿಳಿಸುತ್ತಾರೆ.

ಹೊಸ ವಾರ್ತೆ

ಜರ್ಮನಿ ರಷ್ಯಾಗಳೊಳಗೆ ವ್ಯಾಪಾರದ ಒಪ್ಪಂದವು ಮುಗಿದು, ರಾಜಕೀಯ ಒಪ್ಪಂದಕ್ಕೂ ಉಭಯ ರಾಷ್ಟ್ರಗಳು ಬೇಗನೇ ಸಹಿ ಹಾಕುವುದರಲ್ಲಿವೆ.

★

ಬ್ರಿಟನಿನಲ್ಲಿ ಮಂತ್ರಿಮಂಡಳದವರು, ಮತ್ತು ಪಕ್ಷದ ಮುಖಂಡರು ಸಭೆ ಸೇರಿ ವಿಚಾರಮಾಡುತಿದ್ದಾರೆ.

★

ಜರ್ಮನಿ ಮತ್ತು ಪೋಲೆಂಡುಗಳಲ್ಲಿ ನಿಮಿಷ ನಿಮಿಷಕ್ಕೆ ಜನತೆಯು ಉದ್ವೇಗಗೊಂಡಿದೆ ತೀವ್ರವೇ ಏನಾದರೂ ಅನಾಹುತವಾಗುವುದೆಂದೂ ಎರಡು ರಾಷ್ಟ್ರಗಳೂ ನಿರೀಕ್ಷಿಸುತ್ತಿವೆ.

★

ತನ್ನ ಪ್ರತಿಜ್ಞೆಯಂತೆ ಡಾನ್ಜಿಗಿನ ಸ್ವಾತಂತ್ರ್ಯವನ್ನು ರಕ್ಷಿಸಲು ಸಿದ್ಧವಾಗಿರುವುದೆಂದು ಬ್ರಿಟನು ಮತ್ತು ಫ್ರಾನ್ಸುಗಳು ಸರ್ವಾಧಿಕಾರಿಗಳನ್ನು ಎಚ್ಚರಿಸಿವೆ ಚೆಂಬರ್ಲೇನರು ಬೇಗನೆ ಮಂತ್ರಿಮಂಡಳ ಸಭೆ ಕರೆದು ಈ ವಿಚಾರದಲ್ಲಿ ಖಂಡಿತ ನಿರ್ಧಾರಕ್ಕೆ ಬರಲಿರುವರು.

★

ಆಂಗ್ಲ ಜಪಾನೀಯರ ಮಾತುಕತೆಯು ಸಂಪೂರ್ಣ ಅಸಂತೃಪ್ತಿಕರವಾಗಿ ನಿಂತುಹೋದಂತಿದೆ

★

ಚೈನವು ಮೂರು ಮಿಲಿಯ ಮಂದಿ ಹೊಸ ಸೈನಿಕರನ್ನು ಯುದ್ಧಮಾಡಲು ತಯಾರಾಗುಮಾಡಿದೆ ಇದು ಮಾತ್ರವಲ್ಲದೆ, ಇನ್ನೆರಡು ಮಿಲಿಯ ಮಂದಿಯು ತಯಾರಾಗುತಿದ್ದಾರೆ

★

ಮದ್ರಾಸಿನ ರಾಮಕೃಷ್ಣ ಮಿಷನ್ ವಿದ್ಯಾರ್ಥಿನಿಲಯದ ಇಬ್ಬರು ವಿದ್ಯಾರ್ಥಿಗಳು ಸಮುದ್ರಸ್ನಾನಕ್ಕೆ ಹೋದವರು ಸಮುದ್ರದಲ್ಲಿ ಮುಳುಗಿ ಕಾಣೆಯಾಗಿರುವರೆಂದು ತಿಳಿಯುತ್ತದೆ. ಇವರಲ್ಲಿ ಒಬ್ಬನು ನಮ್ಮ ಜಿಲ್ಲೆಯ ೧೮ ವರ್ಷ ಪ್ರಾಯದ ನಾಗೇಶ ಅಡಿಗ ಎಂಬವನು ಅಲ್ಲಿನ ಕಲಾಶಾಲೆಯ ವಿದ್ಯಾರ್ಥಿಯಾಗಿದ್ದವನು.

★

ಸುಭಾಷ ಭೋಸರು ಸಪ್ಟಂಬರ ಪ್ರಥಮ ವಾರದಲ್ಲಿ ದಕ್ಷಿಣ ಹಿಂದೂದೇಶಕ್ಕೆ ಬಂದು ಆಂಧ್ರ ತಮಿಳುನಾಡು ಕೇರಳ ಪ್ರಾಂತ್ಯಗಳ ಸಂಚಾರವನ್ನು ಕೈಕೊಳ್ಳುವರು.

★

ಮನೆ ತೆರಿಗೆಯ ನಿಷೇಧ ಸೂಚನೆಯಾಗಿ, ಲಾಹೋರಿನಲ್ಲಿ ಎರಡು ಸಾವಿರಕ್ಕಿಂತ ಮಿಕ್ಕಿದ ಹೆಂಗಸರು ಮೆರವಣಿಗೆ ಮಾಡಿದರು.

★

ನರೇಂದ್ರರು ಸಿಮ್ಲಾದಲ್ಲಿ ರಾಜಕೀಯ ವಿಭಾಗದ ಅಧಿಕಾರಿಗಳೊಡನೆ ಮತ್ತು ವೈಸರಾಯರೊಡನೆ ಸಂಭಾಷಣೆ ನಡೆಸಿದರು.

ಕಾಂಗ್ರೆಸಿನಲ್ಲಿ ದೃಢ ವಿಶ್ವಾಸ! ಸಂಯುಕ್ತ ಪ್ರಾಂತದಲ್ಲಿ ಪ್ರಬಲ ಪ್ರಚಾರ

ಕಾಂಗ್ರೆಸು ಕಮಿಟಿಗಳಲ್ಲಿ ಹಳ್ಳಿ ಹಳ್ಳಿಗಳಲ್ಲಿ ಸ್ಥಾಪಿಸುತ್ತಾ, ಜನರಲ್ಲಿ ಕಾಂಗ್ರೆಸು ಮತ್ತು ಇಂದಿನ ಭಾರತದ ಧುರೀಣರ ಮೇಲೆ ದೃಢ ವಿಶ್ವಾಸವಿರುವಂತೆ ಸಂಯುಕ್ತ ಪ್ರಾಂತದ ಕಾಂಗ್ರೆಸು ಕೆಲಸಗಾರರು ಪ್ರಬಲವಾದ ಪ್ರಚಾರ ಕಾರ್ಯವನ್ನು ಆರಂಭಿಸಿದ್ದಾರೆ.

ಸಂಯುಕ್ತ ಪ್ರಾಂತದ ಕಾಂಗ್ರೆಸು ಸರಕಾರವು ಜನತೆಗೆ ಮಾಡಿದ ಹಿತ ಸಾಧನೆಗಳನ್ನು ಪ್ರಶಂಸಿಸಿ, ಇಂದಿನ ಕಾಂಗ್ರೆಸು ಧುರೀಣರಲ್ಲಿ ಭಕ್ತಿಯನ್ನೂ ಪ್ರದರ್ಶಿಸಿ ಕಾಂಗ್ರೆಸು ಸಂಸ್ಥೆಗೆ ವಿಧೇಯರಾಗಿ ನಡೆಯುವ ಠರಾವು ಅನೇಕ ಸಭೆಗಳಲ್ಲಿ ಮಂಜೂರಾಗಿವೆ!

ಮಂಗಳೂರು ಸಮಾಚಾರ

ನಗರ ಸಭೆ:— ನಗರ ಸಭೆಯ ಮೀಟಿಂಗು ಕಳೆದ ಸೋಮವಾರ ಸಂಜೆಗೆ ಚ್ಯಾರಮ್ಯಾನರಾದ ಶ್ರೀ ಬಿ. ವೆಂಕಟ್ರಾಯ ಬಾಳಿಗ ಎಂ ಎಲ್. ಎ. ಇವರ ಅಧ್ಯಕ್ಷತೆಯಿಂದ ಕೂಡಿತು.

ವೆಬ್ಸ್ಟರ್ ಮಾರ್ಕೆಟಿನ ಕಂಟ್ರ್ಯಾಕ್ಟರನು ಹೆಚ್ಚು ನಷ್ಟ ಹೊಂದಿದ ವಿಷಯವಾಗಿ ಕೌನ್ಸಿಲು ವಿಚಾರ ಮಾಡತಕ್ಕದ್ದೆಂದು, ಕಂಟ್ರ್ಯಾಕ್ಟರರ ಪರವಾಗಿ ಶ್ರೀ ಎ ಶಂಕರ ಆಳ್ವರು ವಾದಿಸಿದರು

ಶ್ರೀ. ಕಲಚೇರಿಕರರ ಅನೇಕ ಪ್ರಶ್ನೆಗಳಿಗೆ ಚ್ಯಾರಮೇನರು ಉತ್ತರಗಳನ್ನಿತ್ತರು.

ನೌಕರರ ಜಾತಿವಾರು ನಿಬಂಧನೆ, ಮೊದಲಾದ ಜಿ. ಓ ಗಳು ರಿಕಾರ್ಡು ಮಾಡಲ್ಪಟ್ಟವು. ಮುಸಾಫರಿ ಬಂಗ್ಲೆಯ ಚಿಕ್ಕ ಹೊಸ ಮೋರಿಗೆ ರ೩ ಕ್ಕೆ ೫ ಮಂಜೂರಾಯಿತು. ವೆಬ್ಸ್ಟರ್ ಮಾರ್ಕೆಟಿನ ಹೊಸ ಪ್ಲೇನಿನ ಬಗೆಗೆ ಹಣಸಾಲದ ವಿಷಯು ಸರಕಾರಕ್ಕೆ ಬರೆದುಕೊಳ್ಳುವ ನಿಶ್ಚಯ ಇವೇ ಮೊದಲಾದುವುಗಳು ಮಂಜೂರಾದುವು.

ಅಹಿಂಸಾ ಪ್ರಚಾರ: ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಮಹಾ ಧಾರ್ಮಿಕ ಪುರುಷನೆಂದು ಪ್ರಸಿದ್ಧಿಗೊಂಡಿರುವ ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿಯವರ ಜನ್ಮದಿನೋತ್ಸವವು ಇದೇ ಬರುವ ಅಗಸ್ಟು ೩೦ನೇ ಬುಧವಾರ ಎಲ್ಲೆಲ್ಲಿಯೂ ವಿಜೃಂಭಣೆಯಿಂದ ಆಚರಿಸಲ್ಪಡುವುದು ಇಂಥಾ ಆಚರಣೆಗಳಲ್ಲಿ ಭಾಗವಹಿಸಲು ಸಾಧ್ಯವಾಗದಿರುವ ಅನೇಕ ಕುಟುಂಬಗಳು ಇರಲೂ ಬಹುದು ಅಂಥವರು ಆ ದಿನದಲ್ಲಿಯಾದರೂ ಅಹಿಂಸಾ ಧರ್ಮ ಸಾಧಕರಾಗಿ, ಮನೆ, ಅಂಗಳ, ದೇಹಗಳನ್ನು ಶುಚಿಯಾಗಿಡಿಸಿ, ಹಿರಿಯರಿಗೆ ವಂದಿಸಿ, ಮನೆಯವರೆಲ್ಲರೂ ಒಟ್ಟಾಗಿ ಸೇರಿ ಸಕಲ ಸಮಾಜಗಳಲ್ಲಿಯೂ ವಿದ್ಯೆಯೂ, ಬುದ್ಧಿಯೂ ಅಹಿಂಸಾ ತತ್ವವೂ ಬೆಳೆಯಲೆಂದು ದೇವರನ್ನು ಪ್ರಾರ್ಥಿಸಿದರೆ ಅಹಿಂಸಾ ತತ್ವಕ್ಕಾಗಿ ದುಡಿದಂತಾಗುವುದಲ್ಲದೆ, ಅಹಿಂಸಾ ತತ್ವ ಮೂರ್ತಿಯಾದ ಬ್ರಹ್ಮ ಶ್ರೀ. ನಾರಾಯಣ ಗುರುಸ್ವಾಮಿಯವರಂತಹ ಮಹಾಪುರುಷರ ಜನ್ಮದಿನಾಚರಣೆಯನ್ನು ಮಾಡಿದಂತಾಗುವುದೆಂದು ಶ್ರೀ ಎಂ. ಕೆ. ವೈದ್ಯರು ತಿಳಿಸುತ್ತಾರೆ

ಜಿಲ್ಲೆಯ ಕೈಗಾರಿಕೆಯ ಕೆಲಸಗಾರರ ಅವಗಾಹನೆ ಬಗ್ಗೆ:— 'ಮದ್ರಾಸು ಸಂಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿ ತಯಾರಾಗುತ್ತಿರುವ ಗುಡಿಸಲು ಕೈಗಾರಿಕೆ ಮತ್ತು ಇನ್ನಿತರ ಕೈಗಾರಿಕೆಗಳ ಪರಿಚಯವನ್ನು ಸಾರ್ವತ್ರಿಕ ಹರಡುವ ಉದ್ದೇಶದಿಂದ ಮದ್ರಾಸು ನಗರದಲ್ಲಿ ಒಂದು ವಸ್ತು ಪ್ರದರ್ಶನ ಸಂಸ್ಥೆಯು ಮದ್ರಾಸು ಸರಕಾರದ ನೇತೃತ್ವದಲಿ ಈಗಾಗಲೇ ಸ್ಥಾಪಿಸಲ್ಪಟ್ಟಿರುವುದಷ್ಟೆ ನಮ್ಮ ಜಿಲ್ಲೆಯಲ್ಲಿ ತಯಾರಾಗುತ್ತಿರುವ ಅಂತಹ ಯಾವುದಾದರೂ ಕೈಗಾರಿಕೆಗಳ ಮಾದರಿ ಒಡವೆಗಳನ್ನು ಈ ವಸ್ತು ಪ್ರದರ್ಶನಾ ಸಂಸ್ಥೆಗೆ ಕಳುಹಿಸಿಕೊಡಬಹುದು ಇದರಿಂದ ಸಂಸ್ಥಾನದ ಯಾವ ಯಾವ ಪ್ರದೇಶಗಳಲ್ಲಿ ಎಂತೆಂಥ ಕೈಗಾರಿಕೆಗಳು ಆಗುತ್ತವೆ ಎಂಬುದು ಸಾಮಾನ್ಯ ಜನರಿಗೂ ತಿಳಿಯುವುದಕ್ಕೆ ಅನುಕೂಲವಾಗುವುದಲ್ಲದೆ ಅಂಥ ಸಾಮಾನುಗಳನ್ನು ಬೇಕಾದವರು ತರಿಸಿಕೊಳ್ಳುವುದಕ್ಕೂ ಅವಕಾಶವಾಗಬಹುದು

ಗುಡಿಸಲು ಕೈಗಾರಿಕೆಗಳ ಬಗ್ಗೆ ಯಾವ ವಿಧದ ಫೀಸೂ ಕೊಡುವುದು ಅಗತ್ಯವಿಲ್ಲವೆಂದು ಅಧಿಕಾರಿಗಳು ತಿಳಿಸುತ್ತಾರೆ. ಆದರೆ ಸಾಮೂಹಿಕ ಕೈಗಾರಿಕೆಗಳ ಸಂಗತಿಯಲ್ಲಿ ಸ್ಥಳದ ಆಕ್ರಮಣಕ್ಕನುಸರಿಸಿ ವಿವಿಧ ದರಗಳನ್ನು ಹೊರಿಸುವ ಏರ್ಪಾಡು ಮಾಡಿರುತ್ತಾರೆ

ಯಾವುದಾದರೂ ಕೈಗಾರಿಕೆಗಳನ್ನು ನಡೆಯಿಸುತ್ತಿರುವ ನಮ್ಮ ಜಿಲ್ಲೆಯು ಈ ವಸ್ತು ಪ್ರದರ್ಶನಾ ಸಂಸ್ಥೆಯ ಪೂರ್ಣ ಪ್ರಯೋಜನಕ್ಕೆ ಭಾಗಿಗಳಾಗಬಹುದೆಂದು ಈ ಮೂಲಕ ಸಕಲ ಜನರಿಗೆ ತಿಳಿಸೋಣವಾಗುತ್ತದೆ

ಈ ಕುರಿತು ಅಗತ್ಯದ ವಿಶೇಷ ಮಾಹಿತಿಗಳನ್ನು ಮದ್ರಾಸಿನ ಡ್ಯಾರೆಕ್ಟರ್ ಓಫ್ ಇಂಡಸ್ಟ್ರೀಸ್ ಮತ್ತು ಕಾಮರ್ಸ್' ಇವರಿಗೆ ಬರೆದು ತರಿಸಿಕೊಳ್ಳಬಹುದು. ಎಂದು ಜಿ ಬೋ ಪ್ರೆಸಿಡೆಂಟ್ ತಿಳಿಸುತ್ತಾರೆ.

ಸಾರ್ವಜನಿಕ ಸಭೆ: — ವೆಬ್ಸ್ಟರ್ ಮಾರ್ಕೆಟ್ಟಿನ ವ್ಯಾಪಾರಮಾಡುವವರಿಗೆ ಆಗುತ್ತಿರುವ ತೊಂದರೆಗಳ ವಿಷಯವಾಗಿ ನಿಷೇಧ ಸೂಚಿಸಲು ಕಳೆದ ತಾ. ೨೦ಕ್ಕೆ ಸಾಯಂ- ಮೈದಾನಿನಲ್ಲಿ ೬-೩೦ಕ್ಕೆ ಸಾರ್ವಜನಿಕ ಸಭೆ ಜರಗಿತು.

ಸ್ಟೀಮರು ಸಂಚಾರ:— ಹವೆಯು ನೆಟ್ಟಗಿದ್ದರೆ ದಿ 'ಬಾಂಬೆ ಸ್ಟೀಮ್ ನೇವಿಗೇಶನ್ ಕಂಪೆನಿ'ಯವರ ಹಡಗು ಬರುವ ಸಪ್ಟೆಂಬರ್ ತಾ. ೧೫ನೇ ಶುಕ್ರವಾರ ಮುಂಬಯಿಯಿಂದ ಮಂಗಳೂರಿಗೆ ಸಾಮಾನುಗಳನ್ನು ಮತ್ತು ಪ್ರಯಾಣಿಕರನ್ನು ಸಾಗಿಸಿಕೊಂಡು ಮಂಗಳೂರಿಗೆ ಭಾನುವಾರ ಅಪರಾಹ್ನ ಘಂಟೆ ೨ಕ್ಕೆ ತಲಪುವುದು ಮಂಗಳವಾರ ಇಲ್ಲಿಂದ ಬೆಳಿಗ್ಗೆ ೮ ಘಂಟೆಕ್ಕೆ ಹೊರಟು ಗುರುವಾರ ಅಪರಾಹ್ನ ೨ ಘಂಟೆಗೆ ಮುಂಬಯಿಗೆ ಹೋಗಿ ಸೇರುವುದು ಅಂತೆಯೆ ಕಂಪೆನಿಯ ಹಡಗು ಪ್ರತಿ ಮಂಗಳವಾರ ಹೊರಟು ಗುರುವಾರ ಬೆಳಿಗ್ಗೆ ೭ ಘಂಟೆಗೆ ಮಂಗಳೂರನ್ನು ಸೇರುವುದು ಇಲ್ಲಿಂದ ಅದು ಶುಕ್ರವಾರ ಹೊರಟು ಭಾನುವಾರ ಪೂರ್ವಾಹ್ನ ೯ ಘಂಟೆಗೆ ಮುಂಬಯಿಯನ್ನು ಮುಟ್ಟುವುದು ಬರುವ ತಿಂಗಳ ೮ನೇ ತಾರೀಕು (ಹವೆ ಚೆನ್ನಾಗಿದ್ದರೆ) ಕಂಪೆನಿಯ ಸ್ಪೆಶಲ್ ಹಡಗು ಮಂಗಳೂರಿಗೆ ಬರುವುದು ಹೆಚ್ಚು ವಿಷಯಗಳನ್ನು ಕಂಪೆನಿಯ ಏಜಂಟರಿಂದ ತಿಳಿಯಬಹುದು

ಮಂಗಳೂರಿನಿಂದ ಮುಂಬಯಿಗೆ ಹೋಗಲು ಟಿಕೇಟುಗಳ ಚಾರ್ಜು ಕ್ಯಾಬಿನಿಗೆ ರೂ ೨೮ ಟಿಕೇಟು ಮೊಬಲಗ ಮೇಲ್ತರಗತಿಗೆ ರೂ ೧೧-೪-೦, ಕೆಳತರಗತಿಗೆ ರೂ ೯-೮-೦ ಟೋಲ್ ಟೇಕ್ಸ್ ದೊಡ್ಡವರಿಗೆ ೨ಆಣೆ, ಮಕ್ಕಳಿಗೆ ಆಣೆ ೧

ದೇವಳ ತೆರೆಯಿರಿ

ಜಿಲ್ಲಾ ಹರಿಜನ ಸೇವಕ ಸಂಘದ ಸಬ್ ಕಮಿಟಿಯ ಸಭೆಯೊಂದು, ಕಳೆದ ಆದಿತ್ಯವಾರ ಡಿ ಸಿ ಮಿಶನ್ ಶಾಲೆಯಲ್ಲಿ, ಅಧ್ಯಕ್ಷರಾದ ಡಾ। ಯು ಚ್ ವಿ ಅಡಪರ ಅಧ್ಯಕ್ಷತೆಯಲ್ಲಿ ಜರಗಿತು ಜಿಲ್ಲೆಯ ನಾಗರಿಕರನ್ನೂ ಹಾಗೂ ಸಕಲ ದೇವಸ್ಥಾನಗಳ ಮೊಕ್ತೇಸರುಗಳನ್ನೂ, ದೇವಸ್ಥಾನಗಳಿಗೆ ಹರಿಜನರ ಪ್ರವೇಶಕ್ಕೆ ಆಸ್ಪದ ಕೊಡಬೇಕಾಗಿಯೂ, ತಮಿಳುನಾಡಿನ ಮಾದರಿಯನ್ನು ಅನುಕರಿಸುವಂತೆಯೂ ಪ್ರಾರ್ಥಿಸಿಕೊಳ್ಳಬೇಕೆಂದಾಯಿತು ಈ ವಿಚಾರದಲ್ಲಿ ಸಾರ್ವಜನಿಕ ಸಭೆಗಳನ್ನು ಬೇರೆ ಬೇರೆ ಕಡೆಗಳಲ್ಲಿ ಜರಗಿಸಿ ಚಳವಳ ನಡೆಸಲು, ಪ್ರಮುಖರ ಕಮಿಟಿಯೊಂದು ನೇಮಿಸಲ್ಪಟ್ಟಿತು

ತಾಲೂಕು ಸಮಾಚಾರ

ಉಡುಪಿ

ಪರ್ಯಾಯ ಮಹೋತ್ಸವ ಕಾಲದಲ್ಲಿ ದ ಕ ಜಿಲ್ಲಾ ಶಿಕ್ಷಣ ಪ್ರದರ್ಶನ:— ವಿದ್ಯಾಭಿಮಾನಿಗಳ ಸಭೆಯೊಂದು ಇದೇ ತಾ ೧೨ರಲ್ಲಿ ಬೋರ್ಡು ಹೈಸ್ಕೂಲಲ್ಲಿ ಜಿಲ್ಲಾ ವಿದ್ಯಾಕೇಶನಲ್ ಆಫೀಸರ್ ಶ್ರೀ ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ ಜಿಲ್ಲಾ ಶಿಕ್ಷಣ ಪ್ರದರ್ಶನವು ಎಲ್ಲಿ ಮತ್ತು ಯಾವಾಗ ಜರಗಿಸಬೇಕೆಂದು ಚರ್ಚಿಸಲಾಯಿತು ಕಳೆದ ಪ್ರದರ್ಶನವು ಮಂಗಳೂರಲ್ಲಿ ಜರಗಿದ್ದು ಈ ಬಾರಿ ಉಡುಪಿಯಲ್ಲಿ ಜರಗುವುದು ಸಮಂಜಸವೆಂದೂ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಅನುಕ್ರಮವಾಗಿ ಪ್ರದರ್ಶನ ನಡೆಯುವುದು ಒಳಿತೆಂದೂ ಸೂಚಿತವಾಯಿತು ಬರುವ ಪರ್ಯಾಯದ ಸಮಯದಲ್ಲಿ ಮೂರು ನಾಲ್ಕು ದಿನಗಳ ಪರ್ಯಂತ ಜಿಲ್ಲಾ ಶಿಕ್ಷಣ ಪ್ರದರ್ಶನವು ಕ್ರಿಶ್ಚಿಯನ್ ಹೈಸ್ಕೂಲ್ ಹಾಲಿನಲ್ಲಿ ಜರಗತಕ್ಕದೆಂದು ಗೊತ್ತುಪಡಿಸಲಾಯಿತು ಆ ಬಗ್ಗೆ ಸಿದ್ಧತೆಗಳನ್ನು ಮಾಡುವರೆ ಶ್ರೀ ಯು. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯೇರ್ಪಟ್ಟಿತು

ಆಕಸ್ಮಿಕ ಮರಣ:— ರೋಮನ್ ಕಥೋಲಿಕ್ ಸಮಾಜದ ಅರ್ಬನ್ ಮೀಗಸ್ ಎಂಬ ತರುಣನು ಇದೇ ತಾ ೧೩ರಲ್ಲಿ ನಾಲ್ಕೈದು ಮಂದಿ ಸಂಗಾತಿಗಳನ್ನು ಸೇರಿಕೊಂಡು ವಡಭಾಂಡೇಶ್ವರ ದೇವಸ್ಥಾನದ ಸಮೀಪ ಸಮುದ್ರದಲ್ಲಿ ಈಜಾಡುತ್ತಿದ್ದ ವೇಳೆ ತೆರೆಗಳ ಸೆಳೆತಕ್ಕೆ ಸಿಲುಕಿ ಮರಣಹೊಂದಿದನು ಈತನ ಶವವು ಎರಡು ದಿನಗಳ ಅನಂತರ ಈತನು ಸೇರಿದ್ದ ಒಂದು ಫರ್ಲಾಂಗ್ ದೂರ ಕರಾವಳಿಯಲ್ಲಿ ದೊರೆಯಿತು।

ಪೆರ್ಡೂರು:— ಇಲ್ಲಿಯ ಪಂಚಾಯ್ತ ಬೋರ್ಡಿನ ಉಳಿತಾಯ, ಶಕ್ತಿ, ತೀರಾ ಕಡಿಮೆಯಾಗಿದ್ದರೂ, ಇದರ ಕಡೆಯಿಂದ ಈ ವರ್ಷ ಅವರಾಲು ಮತ್ತು ನದಿಯಾರು ಎಂಬ ಎರಡು ಸ್ಥಳಗಳಲ್ಲಿ ಸೊಗಸಾದ ಗಟ್ಟಿಯಾದ ಮರದ ಸೇತುವೆಗಳನ್ನು ಉತ್ಸಾಹೀ ಪ್ರೆಸಿಡೆಂಟರಾದ ಶ್ರೀ ಹೆಗ್ಗಡೆ ನರಸಿಂಹ ಸ್ವಾಮಿಗಳವರು ಬಹಳ ಮೋಹನತಿನಿಂದ ಕಟ್ಟಿಸಿರುವರು. ಇದರಿಂದ ನೂರಾರು ಹೆಂಗಸರಿಗೂ, ಮಕ್ಕಳಿಗೂ, ಇಲ್ಲಿಂದ ಮೂಲ್ಕಿ, ಹೆಜಮಾಡಿ, ಕಣ್ಣಂಗಾರು ವಗೈರೆ ಸ್ಥಳಗಳಿಗೆ ಸುಲಭವಾಗಿ ಹೋಗಿ ಬರಲಿಕ್ಕೆ ಅನುಕೂಲವಾದಂತಾಗಿಯದೆ. ಈ ಆದರ್ಶ ಸೇತುವೆಗಳ ಕೆಲಸವನ್ನು ನೋಡಿ ಅಸಿಸ್ಟಾಂಟ್ ಪಂಚಾಯ್ತ್ ಆಫೀಸರರು ತುಂಬಾ ಸಂತೋಷಪಟ್ಟಿರುವರು.

ತಾ ೨೦ನೇ ಆದಿತ್ಯವಾರ ಸಾಯಂಕಾಲ ಮುನಿಸಿಪಲ್ ಮೈನ್ ಶಾಲೆಯಲ್ಲಿ ಜಿಲ್ಲಾ ಸಹಕಾರ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರರ ಆಮಂತ್ರಣದ ಮೇರೆಗೆ ಮುನ್ಸಿಪಲ್ ಅಧ್ಯಕ್ಷ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಸೇರಿತು

ಕುಂದಾಪುರ

ದುಃಖಸೂಚಕ ಸಭೆ:— ಸುಪ್ರಸಿದ್ಧ ಕನ್ನಡ ಭಾಷಾಭಿಮಾನಿಗಳಾದ ಶ್ರೀ ಹಳ್ಳಿನಾಡು ರಾಮಪ್ಪಯ್ಯನವರು ದಿವಂಗತರಾದ ೧೪ನೇ ದಿವಸವಾದ ತಾ. ೧೩ನೇ ಭಾನುವಾರ ಅ ಪ. ೫ಕ್ಕೆ ಕರ್ನಾಟಕ ಸಾಹಿತ್ಯ ಸಂಘದಲ್ಲಿ ಇಲ್ಲಿಯ ಮುನ್ಸಿಫ್ ಕೋರ್ಟಿನ ಹೆಡ್ ಕ್ಲಾರ್ಕರಾದ ಶ್ರೀ. ಕೆ. ರಾಮಕೃಷ್ಣ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ದುಃಖಸೂಚಕ ಸಭೆಯು ಜರಗಿತು. ದಿವಂಗತರು ಈ ಸಂಘದ ಉಪಾಧ್ಯಕ್ಷರಾಗಿದ್ದು ಹೇಗೆ ಕನ್ನಡ ಭಾಷಾ ಸೇವೆಯನ್ನು ಮಾಡಿದರೆಂಬುದನ್ನು ವಿವರಿಸಿ ಹಲವರು ಭಾಷಣ ಮಾಡಿದರು ಶ್ರೀಯುತರ ನಿಧನಕ್ಕೆ ಸಂತಾಪವನ್ನೂ ಅವರ ಬಂಧು ಮಿತ್ರರ ದುಃಖದಲ್ಲಿ ಸಹ ಸಂತಾಪವನ್ನೂ ಸೂಚಿಸಿ ಠರಾವಾಯಿತು

ಕಾಸರಗೋಡು

ಪೆರಡಾಲ—ಆರನೇ ಕ್ಲಾಸು ತೆರೆಯಲು ಸರಕಾರದ ಅನುಮತಿ:— ಕಳೆದ ಕೆಲ ಸಮಯಗಳಿಂದ ಊರ ಪ ಹಸೀಯರನೇಕರು ಬದಿಯಡ್ಕದ ಬೋ ಎ ಶಾಲೆಯನ್ನು ಹೈ ಎ ಶಾಲೆಯ ಮಟ್ಟಕ್ಕೇರಿಸಬೇಕೆಂದು, ಡಿ ಬೋರ್ಡಿನ ಮೂಲಕ ಪ್ರಯತ್ನಿಸುತ್ತಿದ್ದು, ಆ ಬಗ್ಗೆ ಹೈ ಎ ಶಾಲೆಗೆ ಯೋಗ್ಯ ಕಟ್ಟಡವನ್ನು ಉಚಿತವಾಗಿ ಕಟ್ಟಿಸಿಕೊಡುತ್ತೇವೆಂದು ಡಿ ಬೋರ್ಡಿಗೆ ಭರವಸೆಯಿತ್ತು, ಅದರ ಭದ್ರತೆಗಾಗಿ ಬೇಂಕಿನಲ್ಲಿ ಮೂಲಧನವಿಟ್ಟು, ತುಂಬಾ ಸಾಹಸಮಾಡಿದುದರ ಫಲವಾಗಿ, ಅಲ್ಲಿ ಈ ವರ್ಷವೇ ಆರನೇ ಕ್ಲಾಸು ತೆರೆಯ ಬಹುದಾಗಿ ಡಿ ಬೋ ಸಭೆಯಲ್ಲಿ ಮಂಜೂರಾದ ಮೇಲೆ, ಈಗ ಡಿವಿಜನಲ್ ಆಪೀಸರರಿಂದಲೂ, ಆ ಬಗ್ಗೆ ಹುಕುಂ ಬಂದಿರುವುದಾಗಿ ತಿಳಿಯುತ್ತದೆ ಈ ಬಗ್ಗೆ ನಿರಂತರವಾಗಿ ನಿಸ್ವಾರ್ಥ ಸಾಹಸ ಮಾಡಿದ ಶ್ರೀಗಳಾದ ಡಾ ಪಿ ಎಸ್ ಶಾಸ್ತ್ರಿ, ವಿ ಕೃಷ್ಣ ಭಟ್ಟ, ಪಿ ಅನಂತ ಭಟ್ಟ ಮೊದಲಾದ ಮಹನೀಯರು ಪ್ರಶಂಸಾರ್ಹರಾಗಿರುತ್ತಾರೆ.

ಬರುವ ತಾ ೨೮ರಂದು ಹೊಸ ಕಟ್ಟಡದ ಶಂಕು ಸ್ಥಾಪನೆಯ ಕೆಲಸವನ್ನು ಮಾಡಲು ದಿ ಬೋ ಪ್ರೆಸಿಡೆಂಟರಾದ ಡಾ ಕೆ ವಿಟ್ಠಲ ಶೆಟ್ರನ್ನು ಕೇಳಿಕೊಳ್ಳಲಾಗಿದೆ

ಪುತ್ತೂರು

ಮತಾಂತರ:— ಮೊನ್ನೆ ತಾ ೧೮ರಲ್ಲಿ ಇಲ್ಲಿಯ ಕಸಬಾ ಗ್ರಾಮದ ತಾಳೆಪಾಡಿಯಲ್ಲಿರುವ ಭಾಗವತ ಶ್ರೀನಿವಾಸಯ್ಯನವರ ಪುತ್ರಿ, ಮಹಾಲಕ್ಷ್ಮಿ ಎಂಬ ಸುಮಾರು ೨೨ ವರ್ಷ ಪ್ರಾಯದ ಶಿವ ಬ್ರಾಹ್ಮಣ ಜಾತಿಯ ವಿಧವೆಯೊಬ್ಬಳು ತನ್ನ ಐದು ವರ್ಷದ ಹುಡುಗನೊಂದಿಗೆ ಕಾರಣಾಂತರದಿಂದ ತನ್ನ ಅಭಿಲಾಷೆಯಿಂದಲೇ ಪ್ರೊಟೆಸ್ಟೆಂಟ್ ಮತವನ್ನು ಅಂಗೀಕರಿಸಿ ಈಗ ಇಲ್ಲಿಯ ಮಿಶನ್ ಬಂಗಲೆಯಲ್ಲಿ ಇರುತ್ತಾಳೆ ಎಂದು ತಿಳಿದು ಬಂದಿದೆ

ಕರ್ನಾಟಕ ಸಮಾಚಾರ

ಬೊಂಬಯಿ

ಇದೇ ತಿಂಗಳ ತಾ ೬-೮-೩೯ರಲ್ಲು ಈ ಸಂಘದ ೨೨ನೇ ವಾರ್ಷಿಕ ಮಹಾಸಭೆಯು ಬಾಟಿ ಬೋರು ಪ್ರಕೌಂಟೆನ್ಸಿ ಇನ್‌ಸ್ಟಿಟ್ಯೂಟನಲ್ಲಿ, ಸಂಘದ ಅಧ್ಯಕ್ಷರಾದ ಪಿ ಕೆ ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು ಈ ಸಭೆಯಲ್ಲಿ ೧೯೩೯ನೇ ಏಪ್ರೀಲ್ ತಿಂಗಳ ತಾ ೧೬ಕ್ಕೆ ಅಂತ್ಯವಾಗುವ ಒಂದು ವರ್ಷದ ಆಯವ್ಯಯದ ಪಟ್ಟಿಯನ್ನೂ, ಮುಂದಿನ ವರ್ಷದ ಕಾರ್ಯನಿರ್ವಾಹಕ ಸಮಿತಿಯನ್ನೂ, ಸರ್ವಾನುಮತದಿಂದ ಮಂಜೂರು ಮಾಡಲಾಯಿತು ಬಳಿಕ ಸಭಿಕರುಗಳಾದ ರಾಮ ಅಮೀನ್, ಯು ದೇಜಪ್ಪ, ಎನ್ ಎಮ್ ಉದ್ಯಾವರ್, ವೈ ಸುಬ್ಬ, ವೈ. ಜಿ ಬಂಗೇರ, ಎಸ್ ಜನಾರ್ಧನ್ ಕೆ ಎಮ್ ಬಂಗೇರರುಗಳು ಸಂಘದ ಏಳಿಗೆಯ ಕುರಿತು ಭಾಷಣವಿತ್ತನಂತರ, ಅಧ್ಯಕ್ಷರು ಸರ್ವಾನುಮತದಿಂದ ಕಾರ್ಯಕ್ರಮಗಳನ್ನು ನೆರವೇರಿಸಿ, ತನ್ನ ಮಧುರ ಭಾಷಣದಿಂದ ಅಂದಿನ ಸಭೆಯನ್ನು ಮುಕ್ತಾಯಗೊಳಿಸಿದರು

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ

ಕಾಂಗ್ರೆಸು ಸದಸ್ಯರನ್ನು ಮಾಡಿರಿ

ಈ ಸಲ ಕಾಂಗ್ರೆಸ್ ಸದಸ್ಯರನ್ನು ಮಾಡುವ ಕೊನೆಯ ತಾರೀಖು ೧೫-೯-೩೯ ಇರುವದೆಂದು ಎಲ್ಲರಿಗೂ ಗೊತ್ತಿರಲಿಕ್ಕೆ ಸಾಕು ಈ ಅವಧಿಯು ಒಂದು ತಿಂಗಳು ಸಹ ಉಳಿಯಲಿಲ್ಲ ಇದಕ್ಕೂ ಹೆಚ್ಚಿಗೆ ಅವಧಿಯು ದೊರೆಯಲಿಕ್ಕಿಲ್ಲವೆಂಬ ಮಾತು ಎಲ್ಲರೂ ಲಕ್ಷ್ಯದಲ್ಲಿಟ್ಟು ಈ ಕಾರ್ಯವನ್ನು ಭರದಿಂದ ಸಾಗಿಸಬೇಕು. ಸದಸ್ಯರನ್ನು ಮಾಡುವ ತಾರೀಖು ಮುಗಿದ ಕೂಡಲೇ ಮಾರಿಯಾದ ಪುಸ್ತಕಗಳನ್ನು ಮೇಲಿನ ಸಮಿತಿಗೆ ಕಳಿಸಿಕೊಡಬೇಕಾಗುವದು.

ಹೋದವರುಷ ನಮ್ಮ ಪ್ರಾಂತದಲ್ಲಿ ೧ಲಕ್ಷ ೭೩ ಸಾವಿರ ಸದಸ್ಯರಾಗಿದ್ದು ಈ ಸಲ ಎಲ್ಲ ಅಧೀನ ಸಮಿತಿಗಳು ಹಾಗೂ ಕಾರ್ಯಕರ್ತರು ಮನವಿಟ್ಟು ಕೆಲಸಮಾಡಿದರೆ ಈಗ ಉಳಿದಿರುವ ಎಲ್ಲಾ ಅವಧಿಯಲ್ಲಿಯೇ—ಅದಕ್ಕೂ ಹೆಚ್ಚು ಸದಸ್ಯರಾಗುವದರಲ್ಲಿ ಸಂದೇಹವಿಲ್ಲ ಕಾಂಗ್ರೆಸಿನ ಶಕ್ತಿಯು ತಿಳಿಯಬೇಕಾದರೆ ಅದರಲ್ಲಿಯ ಸದಸ್ಯತ್ವವು ಹೆಚ್ಚಾಗಲೇ ಬೇಕು ಆದರೆ ಖೋಟ್ಟಿ (Bogus) ಸಭಾಸದತ್ವವು ಆಗದಂತೆ ಎಚ್ಚರವಡಬೇಕು ಇದೂವರೆಗೆ ನಾವು ಈ ಸಂಬಂಧದಲ್ಲಿ ಹೊರಡಿಸಿದ ಕರಪತ್ರ-ಸಲಹೆ ಸೂಚನೆಗಳನ್ನು ಚನ್ನಾಗಿ ಮನಸ್ಸಿನಲ್ಲಿಟ್ಟು ಈ ಕೆಲಸವನ್ನು ಮಾಡಿದರೆ ಖೊಟ್ಟಿ ಸಭಾಸದತ್ವವು ಬಹುಮಟ್ಟಿಗೆ ದೂರಾಗುವದು

ಈ ಸಂಬಂಧದ ವೇಳಾ ಪತ್ರಿಕೆಯು ನಾಳೆ ೧೯ ೮-೩೯ಕ್ಕೆ ಸೇರಲಿರುವ ಕ ಪ್ರಾ ಸಮಿತಿಯ ಕಾರ್ಯಕಾರೀ ಮಂಡಲದ ಸಭೆಯಲ್ಲಿ ಗೊತ್ತು ಮಾಡಲ್ಪಟ್ಟು ಪ್ರಕಟಿಸಲಾಗುವದು. ಈ ವೇಳಾ ಪತ್ರಿಕೆಯನ್ನಾದರೂ ಲಕ್ಷದಲ್ಲಿಟ್ಟು ಸಣ್ಣವರು ದೊಡ್ಡವರು ಒಂದುಗೂಡಿ ಕಾರ್ಯ ಸಾಗಿಸಿದರೆ ನಮಗೆ ಯಶ ದೊರೆಯುವದರಲ್ಲಿ ಸಂದೇಹವಿಲ್ಲ ಎಂದು ಗೌ ಕಾರ್ಯದರ್ಶಿಗಳಾದ ನಾ. ಸು. ಹರ್ಡೀಕರರು ತಿಳಿಸುತ್ತಾರೆ

ಮೈಸೂರು ಕಾಂಗ್ರೆಸ್ ಮುಖಂಡರುಗಳ ದಸ್ತಗಿರಿ:— ಮೈಸೂರು ಕಾಂಗ್ರೆಸ್ ಮುಖಂಡರುಗಳಾದ ಶ್ರೀಗಳಾದ ಎಸ್ ಸಿ ತಿಮ್ಮಾರೆಡ್ಡಿ, ಎಚ್ ಸಿ ದಾಸಪ್ಪ, ಎಸ್ ರಂಗರಾಮಯ್ಯ ಕೆ ಟಿ ಭಾಷ್ಯಂ ಅಯ್ಯಂಗಾರ್, ಚಂಗಲರಾಯ ರೆಡ್ಡಿ ಗೋಪಾಲ ರೆಡ್ಡಿ, ಎ ಎಸ್ ನಾರಾಯಣ ರಾವ್ ಮುಂತಾದವರನ್ನು ಕೋಲಾರದ ಚಿನ್ನದ ಗಣಿಯಲ್ಲಿ ದಸ್ತಗಿರಿ ಮಾಡಲಾಗಿದೆ

ವಿಜಾಪುರ

ಖಟ್ಲೆಯ ವಿಚಾರಣೆ — ರಾಮದುರ್ಗ ಖಟ್ಲೆಗಳ ವಿಚಾರಣೆಗಾಗಿ ರಾಣೆಯ ಅಸಿಸ್ಟೆಂಟ್ ಸೆಶನ್ ಜಡ್ಜರು ನಿಯಮಿಸಲ್ಪಟ್ಟಿದ್ದಾರೆ.

ಬೇಕಾಗಿದ್ದಾರೆ

ಇದೇ ೧೯೩೯ನೇ ಸಪ್ಟಂಬರದಿಂದ ಮೂಲ್ಕಿಯಲ್ಲಿ ಪ್ರಾರಂಭವಾಗುವ 'ಶ್ರೀ ವೆಂಕಟ್ರಮಣ ಟೆಂಪಲ್ ಸಂಸ್ಕೃತ ಶಾಲೆ'ಗೆ ಉಪಾಧ್ಯಾಯರು ಬೇಕಾಗಿದ್ದಾರೆ ಹಿಂದೀ ತಿಳಿದಿದ್ದ ಸೆಕೆಂಡರಿ ಗ್ರೇಡಿನವರಿಗೆ ಮೊದಲಾಗಿ ಅವಕಾಶ ಕೊಡಲಾಗುವುದು. ಸಂಸ್ಕೃತ ಪಂಡಿತರ ಕೆಲಸಕ್ಕೂ ಓರ್ವ ಉಪಾಧ್ಯಾಯರು ಬೇಕಾಗಿದ್ದಾರೆ.

ಅರ್ಜಿಯು ಇದೇ ೧೯೩೯ನೇ ಸಪ್ಟಂಬರ ೧೫ನೇ ತಾರೀಕಿನೊಳಗೆ ಈ ಕೆಳಗಿನವರಿಗೆ ತಲಪಬೇಕು. ಮೆನೇಜರ್,

ಶ್ರೀ ವೆಂಕಟ್ರಮಣ ಟೆಂಪಲ್,
ಸಂಸ್ಕೃತ ಸ್ಕೂಲ್ ಮೂಲ್ಕಿ

ಇತಿಹಾಸದಲ್ಲಿ, ಪುರುಷಶಕ್ತಿಯು ಅನೇಕ ಮಾನಿನಿಯರ ವೀರಚರಿತ್ರೆಗಳನ್ನು ಓದಿ ಬೆರಗಾಗುತ್ತೇವೆ. ಪ್ರಪಂಚದಲ್ಲಿ ಇಂತಹ ಭಿನ್ನ ಗುಣಗಳ ದ್ವಂದ್ವವು ಬಹಳ ಅಪೂರ್ವವಾದ್ದುದು. ಇಂದಿನ ಭಾರತ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯ ಉಜ್ವಲ ವರ್ಣನೆಯಲ್ಲಿ ಅಂತಹ ಒಬ್ಬ ಧೀರ ಗಂಭೀರ ವ್ಯಕ್ತಿಯು ಇದೆ. ಅವರೇ ಶ್ರೀಮತಿ ಸರೋಜಿನಿ ದೇವಿಯವರು.

ಶ್ರೀಮತಿಯವರಲ್ಲಿ ಇಂತಹ ಪೌರುಷದ ಗಾಂಭೀರ್ಯವು ಮಾತ್ರ ನೆಲೆಗೊಂಡಿರುವುದಲ್ಲ; ಕಾಂಗ್ರೆಸು ಧುರೀಣರಲ್ಲಿ ಹೆಚ್ಚು ಮಂದಿಯಲ್ಲಿ ಇಲ್ಲದೇ ಇರುವ, ನಗುವಗಾಹು ಪ್ರಸನ್ನತೆಗಳು ಅವರಲ್ಲಿ ಸದಾ ಕಾಣಬಹುದು. ಅವರು ಕೂಲಿಯಾಳಿನಿಂದ ರಾಜನ ವರೆಗಿನ ವಿಷಯಗಳನ್ನೆಲ್ಲಾ ಎತ್ತಿ ಚರ್ಚಿಸಬಲ್ಲರು. ತಾನು ಚರ್ಚಿಸತಕ್ಕ ವಿಷಯದಲ್ಲಿ ಪರಿಣಾಮಕಾರಿಯಾದ, ರಚನಾತ್ಮಕವಾದ ಕಾರ್ಯವನ್ನು ಚೆಲುವಾಗಿ ಮಾಡಿ ತೋರಿಸಲೂ ಅವರಿಗೆ ಸಾಮರ್ಥ್ಯವು ಇದೆ

ಭಾರತದ ರಾಜಕೀಯದಲ್ಲಿ ಅವರು ತಮ್ಮ ಅಮೋಘ ಕವಿತಾವಾಣಿಯಿಂದಲೇ ಜನರನು ಮಂತ್ರಮುಗ್ಧರನ್ನಾಗಿ ಮಾಡಿದ್ದಾರೆ.

ಭವನದಲ್ಲಿ

ತನ್ನ ಕೋಣೆಯಲ್ಲಿ, ಅನೇಕ ಮಂದಿ ಪರಿಚಿತ ಆಪ್ತಸ್ನೇಹಿತರ ಮಧ್ಯದಲ್ಲಿ ನಗುಮೊಗದಿಂದ, ಒಂದೇ ಹೊತ್ತಿನಲ್ಲಿ ಹತ್ತು ಹನ್ನೆರಡು ಜನರೊಡನೆಯೂ ಮಾತನಾಡುತ್ತ ಅವರು ಎಲ್ಲರನ್ನೂ ಆನಂದಗೊಳಿಸುವರು. ಕಣ್ಣು, ಬಾಯಿ, ಮುಖ, ಕೈ, ಕಾಲುಗಳಿಂದೆಲ್ಲಾ ಆಕೆ ಮಾತನಾಡುತ್ತಿರುವರೆಂದು ಯಾರಾದರೂ ಪ್ರೇಕ್ಷಕರು ತಿಳಿಯುವಂತೆ ಮಾತುಕತೆ ನಡೆಸುವರು

ಅನೇಕ ಆಂಗ್ಲೇಯ ಸಾಹಿತ್ಯ ಪುರುಷರನ್ನು ಅವರು ಚೆನ್ನಾಗಿ ಪರಿಚಯ ಮಾಡಿಕೊಂಡಿರುವರು. ಅವರ ಗ್ರಂಥಗಳನ್ನೆಲ್ಲಾ ಅಭ್ಯಾಸ ಮಾಡಿದ್ದು ಮಾತ್ರವಲ್ಲದೆ ಅನೇಕರೊಡನೆ ಅವರಿಗೆ ವ್ಯಕ್ತಿಪರಿಚಯವೂ ಇದೆ ಅವರ ಕೆಲವು ಪುಸ್ತಕಗಳಿಗೆ ಸುಪ್ರಸಿದ್ಧ ಆಂಗ್ಲೇಯ ಸಾಹಿತ್ಯ ಪಟುಗಳೇ ಮುನ್ನುಡಿಗಳನ್ನು ಬರೆದಿರುವರು

ಕೇಂಬ್ರಿಜಿನಲ್ಲಿ ಆಕೆ ವಿದ್ಯಾಭ್ಯಾಸ ಮಾಡಿದ್ದರು. ಭಾರತೀಯ ಮಹಿಳೆಯರಲ್ಲಿ, ಕಡಲು ದಾಟಿ, ಯುರೋಪಿಗೆ ವಿದ್ಯೆಗಾಗಿ ತೆರಳಿದ ಮೊದಲನೆಯ ಸಾಹಸಗಾರ್ತಿಯೇ ಆಕೆ,

ಅವರ ಸಂಭಾಷಣಾ ಕಾಲದ ಮನೋಹರತೆಯನ್ನು-ಪ್ರಸನ್ನತೆಯನ್ನು ಅವರ ಲೇಖನಿಗಳನ್ನು ಓದಿ ತಿಳಿಯುವುದು ಸಾಧ್ಯವಿಲ್ಲ

ಭಾವನೆಗಳ ಬೆಡಗು

ಮುಖ ತುಂಬಾ ಭಾವನೆಗಳನ್ನು ಸದಾ ತುಂಬಿಸಿಕೊಂಡಿರುವ ವ್ಯಕ್ತಿತ್ವ ಅವರದು, ಬೇರೆ ಬೇರೆ ವಿಷಯಗಳಲ್ಲಿ ಭಿನ್ನ ಭಿನ್ನ ಭಾವನೆಗಳನ್ನು ಸಂಪೂರ್ಣವಾಗಿ ಕಲ್ಪಿಸಿಕೊಳ್ಳುವರು

ಸುತ್ತಲಿನ ಪ್ರಪಂಚದ ಚಲನವಲನಗಳ ಕುರಿತು ನಿರ್ಧಾರವಾದ ಜ್ಞಾನಶಕ್ತಿಯುಳ್ಳವರು. ದೀರ್ಘ ಮತ್ತು ಗಂಭೀರ ವಿಚಾರವುಳ್ಳವರು ಯಾವ ದ್ವೇಷ ಮತ್ಸರಗಳಿಗೆ ಎಡೆಯಿಲ್ಲದೆ, ಸದಾ ನಿರ್ಮಲವಾಗಿರುವ ಪವಿತ್ರ ಭಾವನೆಗಳನ್ನೇ ಇಟ್ಟುಕೊಂಡಿರುತ್ತಾರೆ.

ಸಾಕ್ಷರತೆಯ ಕುರಿತು

ಬೇರೆ ಬೇರೆ ಪ್ರಾಂತಿಕ ಸರಕಾರಗಳಿಂದ ಆರಂಭಿಸಲ್ಪಟ್ಟಿರುವ ಸಾಕ್ಷರತಾ ಪ್ರಚಾರ ಕಾರ್ಯದ ಕುರಿತು ಅವರ ಅಭಿಪ್ರಾಯವು ಹೀಗಿದೆ-

'ಸಾಕ್ಷರತೆಯು ವಿದ್ಯಾಭ್ಯಾಸದಂತಲ್ಲ, ನೀವು ಯಾರನ್ನಾದರೂ ತಿಂಗಳೊಂದರಲ್ಲಿಯೇ ಬೇಕಾದರೆ ಓದಲು ಬರೆಯಲು ಕಲಿಸಿ ಬಿಡಬಹುದು; ಆದರೆ ಎರಡು ವರ್ಷಗಳ ತನಕ ನೀವವನನ್ನು ನಿಮ್ಮ ಸಹವಾಸದಲಿಯೇ ಇಟ್ಟುಕೊಂಡರೂ ಒಬ್ಬ ಪ್ರಾಯಸ್ಥನು ಆ ಮೇಲೆ ಕೆಲಕಾಲ ಕಳೆದಾಗ್ಗ ಖಂಡಿತವಾಗಿ ನಿರಕ್ಷರನಾಗಿ ಬಿಡುವುದು ಸಾಧ್ಯವಿದೆ ಒಂದು ಮಗುವನ್ನು ವಿದ್ಯೆಕೊಟ್ಟು ಬೆಳೆಸಿದಂತೆ ಪ್ರಾಯಸ್ಥನಿಗೆ ಕಲಿಸಲು ಸಾಧ್ಯವಿಲ್ಲ,'

ಭಾರತದ ಉಜ್ವಲ ಇತಿಹಾಸದಲ್ಲಿ—

ಸರೋಜಿನಿ ದೇವಿಯರ ಸ್ಥಾನ!

[ಬಹು ಗಂಭೀರ ನಡತೆ. ಮನಮೆಚ್ಚಿಸುವ ನಗೆಮಾತು; ಸ್ವಾತಂತ್ರ್ಯ ಸಂಗರದಲ್ಲಿ ಕಾತ್ಯಾಯಿನಿ ಗಾಂಧಿಜೀಯವರ ಪಟ್ಟಶಿಷ್ಯೆ—ನಾಡಿನ ಕೋಕಿಲೆ-ಭಾವನಾಮಯಿ, ಭಾಷಣಾ ಚತುರೆ-ಹೀಗೆ ಹೆಣ್ಣು—ಗಂಡು ದ್ವಂದ್ವಗುಣಗಳು ಇವರಲ್ಲಿ ಮೂರ್ತಿಗೊಂಡಿವೆ.

ಅನುಭವದಿಂದ ಈ ವಿಷಯದ ಪರಿಚಯವಿದ್ದವರಿಗೆ ಈ ಮಾತಿನ ಸತ್ಯವು ತಿಳಿದೀತು

ಭಾರತದ ಸಂಸ್ಕೃತಿಯ ಹಿನ್ನೆಲೆ

"ನಾವಿಲ್ಲಿ ಭಾರತದಲ್ಲಿರುವ ಬಡವರಿರಲಿ ಭಾಗ್ಯವಂತರಿರಲಿ, ಅಕ್ಷರಜ್ಞನಿರಲಿ, ನಿರಕ್ಷರನಿರಲಿ, ರಾಜನಿರಲಿ, ಕೂಲಿಯಿರಲಿ ಎಲ್ಲರ ಹಿನ್ನೆಲೆಯಾಗಿ ಅಪೂರ್ವ ಸಂಸ್ಕೃತಿಯೊಂದನ್ನು ಪಡೆದಿದ್ದೇವೆ ಗದ್ದೆ ಉಳುವ ಬಡಬೇಸಾಯಗಾರನಿಗೂ ರಾಮಾಯಣ, ಮಹಾಭಾರತಗಳ ಪರಿಚಯವಿದೆ. ದೇಗುಲಗಳಲ್ಲಿಯ ಬಯಲಾಟಗಳಲ್ಲಿಯೇ ಆತನು ಈ ಅಮರಕಾವ್ಯಗಳನ್ನು ಕೇಳುತ್ತಾನೆ, ಕೇಳಿ ತನ್ನ ಪ್ರಾಚೀನ ಸಂಸ್ಕೃತಿಯ ಸಾರವನ್ನು ಹೀರುತ್ತಾನೆ ಹೀಗೆಯೇ ಮುಸ್ಲಿಮರೂ ಇತರರೂ ಸಂಸ್ಕೃತಿಯ ಹಿನ್ನೆಲೆಯಿಂದ ಜೀವನವನ್ನು ಸುಂದರವಾಗಿ ಇಟ್ಟುಕೊಂಡಿದ್ದಾರೆ

"ಹಾಗಾಗಿ ಸಂಸ್ಕೃತಿಯ ಈ ಹಿನ್ನೆಲೆಯಲ್ಲಿ ಜನರನ್ನು ವಿದ್ಯಾವಂತರನ್ನಾಗಿ ಯಾಕೆ ಮಾಡಬಾರದು? ತನ್ನ ಜೀವನ, ತನ್ನ ಜನರ ಕುರಿತಿರುವ ಈ ಮಹಾ ಗ್ರಂಥಗಳ ಅಭ್ಯಾಸ ರೂಪದಲ್ಲಿ, ಪಠನರೂಪದಲ್ಲಿ ಜನರನ್ನು ವಿದ್ಯಾವಂತರನ್ನಾಗಿ ಮಾಡಿ ನಿಜವಾದ ದೇಶೀಯ ಸಂಸ್ಕೃತಿಯು ಹೀಗೆ ಹರಡಿದ ಮೂಲೆ ಸೇರಿರುವಾಗ, ನೀವು ಬೇರೆ ಹೊಸತಾದ ಸಂಸ್ಕೃತಿಯೊಂದನ್ನು ಅವರ ಮೆದುಳಿಗೆ ಯಾಕೆ ತಿಕಿಕಟ್ಟುತ್ತೀರಿ?

ನಿಜವಾದ ವಿದ್ಯೆ

ನಮ್ಮ ಜನರು ನಿಜವಾಗಿ ವಿದ್ಯೆಯನ್ನು ಹರಡಬೇಕೆಂದು ಮನಸ್ಸುಳ್ಳವರಾದರೆ, ತಿಂಗಳ ವಿದ್ಯೆ ಇವೆಲ್ಲಾ ವ್ಯರ್ಥ, ಕೇವಲ ಮೂರೋ ನಾಲ್ಕೋ ಜನರನ್ನು ತೆಕ್ಕೊಂಡು, ಕೆಲವು ವರ್ಷಗಳ ಪರ್ಯಂತ ಕಲಿಸಬೇಕು ಕಡಿಮೆಯೆಂದರೆ ಎರಡು ಮೂರು ವರ್ಷಗಳು ಇಂತಹ ಸಾಹಸವನ್ನು ನಮ್ಮ ನಾಡಿನ ತರುಣ ತರುಣಿಯರು ಕೆಕ್ಕೊಳ್ಳಲಿ ನಿಜವಾಗಿಯೂ ಇದು ಕಷ್ಟದ ಮತ್ತು ಸಹನೆಯ ಕೆಲಸ

ಅಮೇರಿಕನರ ಪ್ರಶಸ್ತಿ

ಅಮೆರಿಕದ ಜನರ ಜೀವನದ ವಿಷಯ ಅವರ ಅಭಿಪ್ರಾಯ ಹೀಗಿದೆ

'ಯಾರಾದರೂ ಅವರನ್ನು ಹೊಗಳಲೇಬೇಕು ಅವರ ಜೀವನವು ಆನಂದ ಆಸೆ ಭರವಸೆಗಳಿಂದ ತುಂಬಿದೆ. ಎಂದೆಂದೂ ಜ್ಞಾನಸಂಗ್ರಹ ಮಾಡುತ್ತಲೇ ಇರುತ್ತಾರೆ, ಅಲ್ಲಿನ ಹೆಂಗಳೆಯರು ಚೆಲುವಾಗಿ ಉಡಿಗೆ ತೊಡುತ್ತಾರೆ. ಬಹಳ ಶೋಕಾಗಿ ಇರುತ್ತಾರೆ."

ಅವರು ಬಹಳ ಕುಶಾಲುಗಾತಿ. ಹೇಗೆ ಆನಂದದಿಂದ ಇರುವ ಗುಟ್ಟು ಹೇಗೆ ಕಲಿತರೋ ಯಾರಿಗೆ ಗೊತ್ತು? ಶ್ರೀಮತಿಯವರು ಸತ್ಯಾಗ್ರಹ ಸಮರದ ಸಮಯದಲ್ಲಿ ಸಿಂಹಿಣಿಯಂತೆ ಗುಡುಗಿ ಸ್ವಾತಂತ್ರ್ಯ ಆಂದೋಲನವನ್ನು ಮುಂದುವರಿಸಿದರು ಈ ಗುಣಗಳು ಹೇಗೆ ಒಟ್ಟಾದುವು?

ರಾಜಕೀಯ ವಿಚಾರ

ಗಾಂಧಿಜಿಯವರ ಅಚಲ ಆರಾಧಕರಾಗಿದ್ದಾರೆ ಕಾಂಗ್ರೆಸಿನ ಕಾರ್ಯರಂಗದಲ್ಲಿ ಇವರೊಂದು ಪ್ರತಿಭೆಯ ಉಜ್ವಲತೆಯ ಕೀರ್ತಿಯ ಸ್ಥಾನಮಾನಗಳನ್ನು ಗಳಿಸಿದ ಮಾನಿನಿಯರು ಬೇರೆ ಯಾರೂ ಇಲ್ಲ

ಅವರು ಮುಖ್ಯವಾಗಿ ಮಹಾ ಕವಯಿತ್ರಿ ಕಥೆಗಾರ್ತಿ, ನಾಟಕ, ಪ್ರಬಂಧಗಳನ್ನೂ ಬಹಳ ಬರೆದಿದ್ದಾರೆ ಎಷ್ಟು ಪುಸ್ತಕಗಳನ್ನು ಯಾವ ಯಾವ ವಿಷಯಗಳನ್ನು ಎತ್ತಿ ಬರೆದಿದ್ದಾರೆಂದು ಗಣನೆ ಮಾಡುವುದೇ ಸಾಹಸದ ಕೆಲಸ

ಎಲ್ಲಾ ಕಲೆಗಳ ಪರಿಚಯವಿದೆ ಯಾವುದೂ ಅವರಿಗೆ ಕಷ್ಟ ಸಾಧ್ಯವಾದ ವಿಷಯವೇ ಇಲ್ಲ

ಕಾಂಗ್ರೆಸು ಸಭೆಗಳಲ್ಲಿ ತನ್ನ ಕೋಕಿಲ ಕಂಠದಿಂದ ಜನರನ್ನು ಮುಗ್ಧರಾಗಿ ಮಾಡುವ ಭಾಗ್ಯವು ಅವರದು ಅಖಿಲಭಾರತ ಕಾಂಗ್ರೆಸು ಅಧಿವೇಶನದಂದ ಪ್ರತಿವರ್ಷವೂ ಅವರ ಅಪೂರ್ವ ವಾಗ್ವೈಖರಿಯನ್ನು ಆಲಿಸುವುದು ಭಾರತೀಯರಿಗೆ ಸವಿಯ ಔತಣವಾಗಿದೆ

ಭಾಷಣ ಮಾಡುವಂದು ಅವರು ನಿಂತುಕೊಳ್ಳುವ, ಮೈಯ್ಯಲುಗಿಸುವ ಕ್ರಮವು ಒಂದು ವಿಶಿಷ್ಟ ತೆರನಾಗಿದೆ

ಪ್ರಾಯವು ಹೆಚ್ಚುತ್ತಿದ್ದು, ತಲೆಗೂದಲು ನರೆತಿದ್ದರೂ, ಮಂದಿತನದ ಸೋಂಕಿಲ್ಲದ ಭಾರತದ ಮಹಾ ತಪಸ್ವಿನಿ ಇವರು!

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ!
ನಂಜನಗೂಡು ಟೂತ್ ಪೌಡರ್ (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಈ ನಿದರ್ಶನದ ವಾಚುಗಳು ಮುರಿಯುವದೆಂಬ ಬೆದರಿಕೆಯಿಲ್ಲ
ಸಾಮಾನ್ಯ ವಾಚುಗಳು ಯಾವಾಗಲೂ ಮುರಿದು ಹೋಗಲಿಕ್ಕಿಲ್ಲವೆಂದು ಹೇಳಲಸಾಧ್ಯ ಆದರೆ 'ವೆಸ್ಟ್‌ಎಂಡ್' ವಾಚುಗಳು ಮುರಿದು ಹೋಗಲಿಕ್ಕಿಲ್ಲವೆಂದು ಖಂಡಿತ ಹೇಳಬಹುದು ಯಾಕೆಂದರೆ ಇವುಗಳ ಅಕ್ಷವು ಅಂಥಾದ್ದಿರುತ್ತದೆ. ಇದು ಎಂಥಾ ಸಂದರ್ಭಗಳಲ್ಲಿಯೂ ನಾಶವಾಗದೆ ದುರ್ಗಮವಾದದ್ದು ಇದು ಬಯಲಿನಲ್ಲಿ ಆಟವಾಡುವಾಗ ಧರಿಸಲು ಯೋಗ್ಯವಾದುದು ಆದುದರಿಂದ "ಸವರ್ ಪ್ರಿಮಾ" ವಾಚನ್ನು ಕೊಂಡುಕೊಂಡು ಆಗಾಗ ರಿಪೇರಿ, ಮುರಿದುಹೋಗುವುದರಿಂದ ನಿವೃತ್ತಿ ಪಡೆಯಿರಿ. ಇಂಥಾ ಉಚ್ಚ ಗಡಿಯಾರಗಳಿಗೆ ಕ್ರಯವು ನಿಜವಾಗಿ ಕಡಿಮೆ ಕೆಟಲಾಗು ಧರ್ಮಾರ್ಥ
ವೆಸ್ಟ್ ಎಂಡ್ 'ಸವರ್ ಪ್ರಿಮಾ' ಪೆಟ್ಟು-ಕಳೆ ಮತ್ತು ನೀರೂರದ್ದು.
ಸಣ್ಣಸೈಜು (1ನೇದ್ದು) ಸದಾ ಹೋಲಿಕೆಯ ಉಕ್ಕು ರೂ 40 ಮಧ್ಯಮಸೈಜು (2ನೇ) ರೂ 36
9 ಕೇರೆಟ್ ಚಿನ್ನ ರೂ 125 18 ಕೇರೆಟ್ ಚಿನ್ನ ರೂ 220
ವೆಸ್ಟ್‌ಎಂಡ್ ವಾಚ್‌ಕೋ, ಬೊಂಬಾಯಿ ಮತ್ತು ಕಲ್ಕತ್ತಾ
WEST END WATCH Co
BOMBAY CALCUTTA

ಗೊನೋರಿಯಾ ರೋಗಕ್ಕೆ ತೀಕ್ಷ್ಣ ಪರಿಹಾರ ಮತ್ತು ಖಂಡಿತ ಗುಣ
ಸ ಟಿ ಸ ನ್
ಕೆಡುವ ಗುಣಗಳಿಂದ ವಿರಹಿತವಾದ ಶುದ್ಧ ಗಂಧದ ಎಣ್ಣೆಯಿಂದ ತಯಾರಿಸಲ್ಪಟ್ಟ ಔಷಧಿ
ಭಯಂಕರವಾದ
ಗೊನೊರಿಯಾ
ರೋಗಕ್ಕೆ ನಿಶ್ಚಿತವೂ ಸುರಕ್ಷಿತವೂ ಆದ ರಾಮಬಾಣ ಔಷಧ ಗೊನೊರಿಯಾವು ಪ್ರಾರಂಭದ್ದಿರಲಿ, ದೀರ್ಘಕಾಲದ್ದಿರಲಿ, ಸೌಮ್ಯವಿರಲಿ ಯಾ ತೀಕ್ಷ್ಣವಿರಲಿ ಸೆಟಿಸನ್ ನೋವನ್ನು ಕೂಡಲೇ ನಿವಾರಿಸಿ ಖಾತ್ರಿಯಾಗಿ ಗುಣಮಾಡುವುದು
ಪ್ರಾಮುಖ್ಯ ಸಂಗತಿ
ಸೆಟಿಸನ್ ಒಂದರಲ್ಲಿ ಮಾತ್ರವೇ ಹೊಟ್ಟೆಯೊಳಗೆ ಸೇವಿಸಿದೊಡನೆ ಗುಣಪಡಿಸುವಷ್ಟು ಪರಿಮಾಣದಲ್ಲಿರುವ ಗಂಧದ ಎಣ್ಣೆ ಇರುವುದು ಇದೇ ಇದರ ಅನುಪಮ ವಿಜಯ, ಆದುದರಿಂದ ಕಡಿಮೆ ಪರಿಮಾಣದ ಗಂಧದ ಎಣ್ಣೆಯಿಂದ ಕೂಡಿರುವ ಇದರಷ್ಟು ಉತ್ತಮವಲ್ಲದ ಇತರ ಔಷಧಿಯೊಂದಿಗೆ ಹೋಲಿಸಬೇಡಿ,
ಔಷಧಾಲಯದ್ವಾರಾ ತರಿಸಿರಿ
Crystal Chemical Co., Ltd.,
109 Parsee Bazar St. Fort Bombay
ಕ್ರಯ: ಆರ್ಡರಿನೊಂದಿಗೆ ಹಣ ಕಳುಹಿಸಿದರೆ ರೂ 6-10-0 (ಅಂಚೆವೆಚ್ಚ ಮುಫತ್ತು)
ವಿ. ಪಿ. ಪಿ ದ್ವಾರಾ ತರಿಸುವುದಾದರೆ ಅಂಚೆವೆಚ್ಚ ಹೆಚ್ಚು

ಪತ್ರವ್ಯವಹಾರ

[ಬಾತ್ಮಿದಾರರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ]

ಯೂನಿಯನಿನ ಸದಸ್ಯರಿಗೆ ಒಂದು ಸಲಹೆ

ದಕ್ಷಿಣ ಕನ್ನಡಾ ಜಿಲ್ಲೆಯ ಮೋಟರ್ ಕೆಲಸಗಾರರ ಸಂಘದ ವತಿಯಿಂದ ದೂರಿಡಿಸಲ್ಪಟ್ಟಿರುವ ಕರಪತ್ರದಲ್ಲಿ, ಬರೆದಿರುವ ವಿಷಯಗಳನ್ನು, ಮಹಾಜನರು ಓದಿದ್ದಲ್ಲಿ, ಇವರು ಕೆಲಸಗಾರರ ಹಿತೇಚ್ಛುಗಳಿರದೆ, ಅವರ ಹಿತಶತ್ರುಗಳಾಗಿರುವರೆಂಬುದನ್ನು ಈ ಕೆಳಗಿನ ಕಾರಣಗಳಿಂದ ತಿಳಿದುಕೊಳ್ಳದಿರಲಾರರು.

೧ ತಾರೀಕು ೧೧–೭–೩೯ರಲ್ಲಿ ಹೂಡಿದ ಮುಷ್ಕರವು, ಯೂನಿಯನಿನಿಂದ ಮಾಡಲ್ಪಟ್ಟದ್ದಲ್ಲವೆಂದೂ, ಕೆಲಸಗಾರರೇ, ಮಾಡಿದ್ದೆಂದೂ, ಯೂನಿಯನಿನವರು ಸರಕಾರಕ್ಕೆ ತಿಳಿಸಿರುವರು ಆದರೆ ಮುಷ್ಕರದ ದಿನ, ಸದ್ರಿ ಯೂನಿಯನಿನ ಅಧ್ಯಕ್ಷ, ಕಾರ್ಯದರ್ಶಿ, ವ ಕಾರ್ಯಕಾರಿ ಮಂಡಳಿಯ ಹಲವು ಸದಸ್ಯರು ಸೇರಿ, ಪಿಕೆಟಿಂಗ್ ವ ಇತರ ಕೆಲಸ ಮಾಡುತ್ತಿರುವುದನ್ನು ಮಹಾಜನರು ನೋಡಿರುವರು. ಇವರಲ್ಲಿ ಅಧ್ಯಕ್ಷರೆಂದೆನಿಸಿಕೊಂಡವರು ಶಂಕರ ವಿಠ್ಠಲ ಕಂಪೆನಿಯ ಕನ್ಟ್ರಾಕ್ಟರಾಗಿರುವರು. ಹೀಗಿರುತ್ತಾ ಇವರು ಸದ್ರಿ ಮುಷ್ಕರದಲ್ಲಿ ಭಾಗವಹಿಸಲು ಕಾರಣವೇನು? ಸದ್ರಿ ದಿನ ಹೂಡಲ್ಪಟ್ಟ ಮುಷ್ಕರವು ಕ್ರಮವಿರುದ್ಧವಾದುದ್ದೆಂದು ಮನಗಂಡು, ಯೂನಿಯನಿನವರಿಂದ ಹೂಡಲ್ಪಟ್ಟ ಮುಷ್ಕರವಲ್ಲವೆಂದು ಇವರು ಸಾರುವುದಾದರೆ, ಬಡ ಕೆಲಸಗಾರರೇ ಇದರಿಂದ ಉಂಟಾಗಬಹುದಾದ ಪರಿಣಾಮಕ್ಕೆ ಹೊಣೆಯಾಗುವುದಾದರೆ, ತನ್ನ ಯೂನಿಯನಿನ ಕೆಲಸಗಾರರ ಹಿತಕ್ಕೆ ಕೆಲಸಮಾಡುತ್ತಿದೆಯೆಂದು ಇವರು ಹೇಳುವುದರಲ್ಲಿ ನ್ಯಾಯವಿದೆಯೇ? ಯೂನಿಯನಿನವರ ಸಹಾಯವು ಸದ್ರಿ ದಿನದ ಮುಷ್ಕರಕ್ಕೆ ಪೂರ್ಣವಾಗಿ ಇರುತ್ತಿರಲಿಲ್ಲವಾದರೆ, ಯೂನಿಯನಿನವರು ಸದ್ರಿ ಮುಷ್ಕರವನ್ನು ಮಾಡಗೊಡಬಹುದಿತ್ತೇ? ತಮ್ಮ ತಿಳುವಳಿಕೆಗೆ ಇಲ್ಲದೆ ಸದ್ರಿ ಮುಷ್ಕರವು ಹೂಡಲ್ಪಟ್ಟದ್ದೆಂದು ಹೇಳುವುದಾದರೆ ಯೂನಿಯನಿನ ಜನರಲ್ ಸೆಕ್ರೆಟರಿಯವರೇ ಮೊದಲಾದ ಕೆಲಸಗಾರರಲ್ಲದವರು ಸೇರಲು ಕಾರಣವೇನು? ಜಿಲ್ಲಾ ಬೋರ್ಡಿನ ಅಧ್ಯಕ್ಷರು, ಮೇಲ್ಕಂಡ ಮುಷ್ಕರವನ್ನು ಖಂಡಿಸಿದುದು ನ್ಯಾಯವಲ್ಲವೆಂದು ಯೂನಿಯನಿನವರು ಅವರ ವರ್ತನೆಯನ್ನು ಖಂಡಿಸುವುದು ಯಾವ ನ್ಯಾಯ?

೨ ಕೆಲಸಗಾರರು, ಯೂನಿಯನಿನ ಹೆಸರನ್ನು ಹೇಳಿ, ತಾವು ಕೆಲಸಮಾಡುವ ಕಂಪೆನಿಯವರು ತಮಗೆ ಕೊಟ್ಟಿರುವ ಕೆಲಸಗಳನ್ನು ಮಾಡದೆ, ಉಡಾಪೆ ಮಾತನಾಡಿ ದಿನಗಳೆಯುವುದಾದರೆ, ಯಾವ ಕಂಪೆನಿಯು ಎಷ್ಟು ಕಾಲ, ವ್ಯವಹಾರವನ್ನು ಸುಗಮವಾಗಿ ಮಾಡಿ ಇರಬಲ್ಲುದು? ನಿಯಮಗಳನ್ನು ಉಲ್ಲಂಘಿಸದೆ ಕೆಲಸಗಾರರು ಕೆಲಸವನ್ನು ಸರಿಯಾಗಿ ಮಾಡಿದರೆ ತಾನೆ ಕಂಪೆನಿಯ ಬಾಳಿ ಬದುಕಬಹುದು ಹೀಗಿರುತ್ತಾ ಕೆಲವು ಕೆಲಸಗಾರರು ತನ್ನ ಪಾಲಿನ ಕರ್ತವ್ಯವನ್ನು ಮಾಡದೆ, ಉಡಾಪೆ ಮಾತನಾಡಿದುದರ ಫಲವಾಗಿ, ಬೋರ್ಡ್ ಒಫ್ ಡೈರೆಕ್ಟರರು ಅಂಥವರನ್ನು ಅವರವರು ಮಾಡಿದ ತಪ್ಪಿತಕ್ಕೆ ಸರಿಯಾಗಿ ದಂಡಿಸಿದುದರಲ್ಲಿ ಅನ್ಯಾಯವೇನು? ರಾಜಿಯಿಂದ ತೀರ್ಮಾನವಾಗುವ ತನಕ, ಕಂಪೆನಿಗಳ ವ್ಯವಹಾರವು ಸುಗಮವಾಗಿ ನಡೆಯಬಾರದೆಂದು ಸರಕಾರದವರಾಗಲೀ, ಮಹಾಜನರಾಗಲೀ ಎಂದೂ ಹೇಳಲಾರರು.

೩. ಮುಷ್ಕರದ ದಿನ, ಕೋರ್ಟ್ಯಾರಿನಲ್ಲಿ ಕೆಲಸಗಾರರನ್ನು ಹೊಡೆಸಿದರೆಂದೂ, ಮತ್ತು ಒಬ್ಬನ ಕಾಲಿನ ಮೇಲೆ ಬಸ್ಸನ್ನು ಹೆಗೆದುಕೊಂಡು ಹೋದರೆಂದೂ, ಸುಳ್ಳು ವಾರ್ತೆಗಳನ್ನು ಹಬ್ಬಿ, ಮಹಾಜನರ ಮನಸ್ಸನ್ನು ತಮ್ಮೆಡೆಗೆ ಸೆಳೆದುಕೊಳ್ಳುವಂತೆ ಮಾಡುವುದರಿಂದ, ಮಹಾಜನರು ಸತ್ಯಾಸತ್ಯತೆಗಳನ್ನು ತಿಳಿಯದೆ ಯೂನಿಯನಿಗೆ ಸಹಾಯಭೂತಿಯನ್ನು ತೋರುವಷ್ಟು ಮೂಢರಿರುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ ಬಸ್ಸಿನ ಚಕ್ರವು ಕಾಲ ಮೇಲೆ ಹೋದುದಾದರೆ, ಅಂಥವನ ಕಾಲು ಜಜ್ಜ ಪುಡಿಯಾಗಬೇಕಿತ್ತು ಅಥವಾ ಯಾವ ತರದಿಂದಲಾದರೂ, ಕೆಲವು ದಿನಗಳ ವರೆಗಾದರೂ, ಆಸ್ಪತ್ರೆಯಲ್ಲಿ ಶುಶ್ರೂಷೆಯನ್ನು ಪಡೆಯಬೇಕಿತ್ತು ಅಂಥವರ್‍ಯಾರೂ ಜಿಲ್ಲಾ ಸುಪರಿಂಟೆಂಡೆಂಟ್ ಧೊರೆಗಳವರ ತನಿಖೆಯಲ್ಲಿ ಕೂಡಾ ಸದ್ರಿಯವರಿಗೆ ಕಾಣಸಿಗದಿರುವಾಗ, ಇವರು ಎಷ್ಟು ಸುಳ್ಳು ಸಂಗತಿಗಳನ್ನು ಹಬ್ಬಿ ಮಹಾಜನರ ಬೆಂಬಲ ದೊರಕಿಸಿಕೊಳ್ಳಬೇಕೆಂದಿರುವರೆಂದು ಖಂಡಿತವಾಗಬಹುದು ಈ ತರದ ಹಲವು ಪ್ರಚಂಡ ಸುಳ್ಳುಗಳನ್ನು ಹರಡಿಸಿದರೂ ಯೂನಿಯನಿಗೆ ವಂತಿಗೆ ಪಟ್ಟಿಯಲ್ಲಿ ಮಂಗಳೂರಲ್ಲಿ ರೂ ೭–೮–೦ಕ್ಕಿಂತ ಹೆಚ್ಚಿಗೆ ವಸೂಲಾಗಲಿಲ್ಲವೆಂಬುದನ್ನು ತಿಳಿದರೆ ಇವರ ಸುಳ್ಳುಗಳು ಮಹಾಜನರಲ್ಲಿ ಬಯಲಾಗಿವೆ ಎಂಬುದು ಸ್ಪಷ್ಟವಾಗುವುದು

೪ ದಕ್ಷಿಣ ಕನ್ನಡಾ ಜಿಲ್ಲಾ ಮೋಟರ್ ಕೆಲಸಗಾರರ ಸಂಘವೆಂದು ಕರೆಯಲ್ಪಡುವ ಸಂಘಕ್ಕೆ ಮೋಟರು ಕೆಲಸಗಾರರೆಲ್ಲಾ ಸದಸ್ಯರಾಗಬೇಕಾಗಿತ್ತು ಹೀಗಿದ್ದು ಸದಸ್ಯರಾಗಬಯಸುವವರನ್ನು, ಸದಸ್ಯರನ್ನಾಗಿ ಮಾಡಿಕೊಳ್ಳದಿರುವುದು ಯಾವ ಕಾರಣದಿಂದೆಂದು ತಿಳಿಯುವುದಿಲ್ಲ ಕೆಲವೇ ಜನರ ಕೈಗೊಂಬೆಯಾಗಲು ಮೇಲ್ಕಂಡ ಯೂನಿಯನ್ನು ಸ್ಥಾಪಿಸಿದುದಲ್ಲವೆಂದು, ಖಂಡಿತವಾಗಿಯೂ ಎಲ್ಲಾ ಕೆಲಸಗಾರರು ತಿಳಿಯಬೇಕಾಗಿದೆ ಹಾಗೆ ಸದಸ್ಯರಾಗ ಬಂದವರನ್ನು, ಸದಸ್ಯರನ್ನಾಗಿ ಮಾಡಿಕೊಳ್ಳದ್ದನ್ನು ನೋಡುವಾಗ ಇವರು ಎಂತಹ ಮನೋಭಾವದವರೆಂದು ಒಡೆದು ಕಾಣುತ್ತದೆ ಮಾತ್ರವಲ್ಲದೆ ಇವರಿಗೆ ಹಾಗೆ ನಿರಾಕರಿಸಲು ಹಕ್ಕು ಇದೆಯೆ? ಎಂಬ ಪ್ರಶ್ನೆಯು ತರ್ಕಸತಕ್ಕದ್ದಾಗಿದೆ

೫ ಮೇಲ್ಕಂಡ ಕಾರಣಗಳಿಂದ ಯೂನಿಯನನ್ನು ನಡಿಸುತ್ತಿರುವ, ಮಹನೀಯರಲ್ಲಿ, ಕೆಲವರು, ತಾವು ಕೆಲಸಗಾರರ ಹಿತಚಿಂತಕರೆಂದು ತೋರಿಸಿಕೊಂಡು, ತಮ್ಮ ಸ್ವಾರ್ಥವನ್ನು ಸಾಧಿಸುವುದರಲ್ಲಿ ತಲ್ಲೀನರಾಗಿದ್ದು, ಒಳ್ಳೆ ಕಂಕಣರಾಗಿರುವರೆಂದು, ಹಲವರಿಗೆ ತಿಳಿದಿದೆ, ಆದರೆ ಇನ್ನೂ ಕೆಲವರಿಗೆ ತಿಳಿಯುವುದಿದ್ದುದ, ನಿಜೋದ್ದೇಶವನ್ನುಂಟುಮಾಡುತ್ತಿದೆ ಈ ಯೂನಿಯನಿನ ಮುಂತರೆಂದೆನಿಸಿಕೊಂಡು ಕೆಲಸಗಾರರ ಹಿತಚಿಂತಕರೆಂದೆನಿಸಿಕೊಳ್ಳುವವರು ಅವರು ಹುಟ್ಟಿದಂದಿನಿಂದ, ಇಂದಿನ ತನಕ ಯಾವತರದಿಂದ, ತನುಮನ ಧನಗಳನ್ನು ವ್ಯಯಿಸಿ, ರಾಷ್ಟ್ರಸೇವೆಯನ್ನು ಮಾಡಿದವರೆಂದು ಆಲೋಚಿಸಿದರೆ, ಇವರ ಗುಟ್ಟು ರಟ್ಟಾಗುವುದರಲ್ಲಿ ಸಂದೇಹವಿರಲಾರದು

೬ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಮಾನ್ಯ, ಶ್ರೀ ಡಾಕ್ಟರ್ ವಿಠ್ಠಲ ಶೆಟ್ಟಿಯವರು, ಪ್ರತಿಯೊಂದು ಕಂಪೆನಿಗೂ, ಒಂದು ಸಂಘವಿರಬೇಕೆಂದು ಹೇಳಿದುದು ಸರಿಯಲ್ಲವೆಂದು ಇವರು ಹೇಳುವ ಕಾರಣವೇನು? ಶ್ರೀಯುತ ಶೆಟ್ಟರು ಹಲವು ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿ ದುಡಿದವರಲ್ಲವೆಂದು ಹೇಳುವುದಾದರೆ, ಈಗ ಯೂನಿಯನಿನ ಮುಖಂಡರೆಂದೆನಿಸಿಕೊಂಡವರ್‍ಯಾರು ಅವರಿಗಿಂತ ಹೆಚ್ಚಿಗೆ ದುಡಿದವರಿರುವರು? ಶ್ರೀ. ಶೆಟ್ಟರಾದರೋ, ಕೆಲವು ವರುಷಗಳಿಂದ ಮುನಿಸಿಪಲ್ ಅಧ್ಯಕ್ಷರಾಗಿಯೂ ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷರಾಗಿಯೂ, ರಾಷ್ಟ್ರಸೇವೆಯನ್ನು ಮಾಡುತ್ತಿರುವರು. ಇನ್ನಾದರೂ, ಕೆಲಸಗಾರರು, ತಮ್ಮ ಮುಖಂಡರೆಂದೆನಿಸಿಕೊಳ್ಳುವ, ಸ್ವಾರ್ಥಿ ಜನರನ್ನು ತ್ಯಜಿಸಿ, ಅವರ ಸ್ವಾರ್ಥ ಬಲಿಗೆ ಬಲಿಯಾಗದೆ, ಕಣ್ತೆರೆದು ಮೋಸಕ್ಕೆ ಬೀಳಬಾರದೆಂದೇ ಒಂದು ಸಲಹೆ.

ಹಿರ್ವ ಸದಸ್ಯ.

ಗಾಯ ಮತ್ತು ವ್ರಣಗಳಿಗೆ ಜ್ಯಾಂಬಕು ಮನೆವೈದ್ಯನಂತೆ.

ಆಕಸ್ಮಾತ್ತಾಗಿ ಒದಗುವ ವಿಪತ್ತುಗಳಿಗೆ ಜ್ಯಾಂಬಕು ಅನುದಿನವೂ ಅಗತ್ಯ.

ಗಾಯ ಅಥವಾ ವ್ರಣಗಳನ್ನು ಅಲಕ್ಷಿಸಿ ಬಿಟ್ಟರೆ ರಕ್ತವು ವಿಷಕಾರಿಯಾಗುವ ಅಧಿಕ ಸಂಭವವಿರುವುದು ಆದಕಾರಣ ಅಂಥಾ ಹಾನಿಗಳನ್ನು ಕೂಡಲೇ ಜ್ಯಾಂಬಕಿನಿಂದ ಗುಣಪಡಿಸಿಕೊಳ್ಳಿರಿ ಜ್ಯಾಂಬಕಿನಲ್ಲಿ ಅಮೂಲ್ಯವಾದ ಗಿಡಮೂಲಿಕೆಗಳ ಎಣ್ಣೆಯು ನರನಾಡಿಗಳನ್ನು ಆಳವಾಗಿ ಹೊಕ್ಕು ನೋವನ್ನು ಗುಣಪಡಿಸಿ ಬಾತುವಿಕೆಯನ್ನು ಗುಣಪಡಿಸುವುದು. ಜ್ಯಾಂಬಕು ವಿಷಕ್ರಿಮಿಗಳನ್ನು ನಾಶಮಾಡುತ್ತದೆ, ರಣಗಳನ್ನು ಒಣಗಿಸಿ ಒಂದು ಕಲೆಯನ್ನುಂಟುಮಾಡದೆ ಗುಣಪಡಿಸುವುದು ಎಲ್ಲಾ ಔಷಧಿ ವ್ಯಾಪಾರಿಗಳು ಜ್ಯಾಂಬಕನ್ನು ರೂ. 1 ಮತ್ತು 2-4—ರಂತೆ ಮಾರುತ್ತಾರೆ ಏಜಂಟ್ಸ್ ಮೆಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿ ಕೊಬ್ಬುಗಳಿಂದ ವಿರಹಿತವಾದದ್ದು.

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4%p. a

in denominations of

RS. 50/-,100/-,500/-,1,000/ , & 5,000/

are now issued at all our Branches

For particulars call at or write to any of our nearest Branches.

ಲೋಧ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅತ್ಯಂತ ಮುಖ್ಯ

ಸ್ತ್ರೀಯರಿಗೆ ಋತು ಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಥಳೀಯ ಸ್ಟಾಕಿಸ್ಟರು: ಪೊಪ್ಯುಲರ್ ಸ್ಟೋರ್ಸ್ ರಥಬೀದಿ, ಮಂಗಳೂರು.

ಸ್ವಾತಂತ್ರ್ಯಕ್ಕಾಗಿ ಹೋರಾಡುವ ಚೈನದ ಯುವಕ ಸಂಘಗಳು

[ಇಂದು ಚೈನವು ಜಪಾನಿನ ಪದಹತಿಗೆ ಒಳಗಾಗಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ, ಚೈನದ ದೇಶಾಭಿಮಾನಿಗಳಾದ ಹೊಸ ಹರೆಯದ ತರುಣ ತರುಣಿಯರು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೇಗೆ ರಾಷ್ಟ್ರದ ಹಿತಕ್ಕಾಗಿ ಸಂಘಟಿತರಾಗಿ ನಿರಂತರ ಹೋರಾಡುತ್ತಾರೆಯೆಂಬುದನ್ನು ಕೆಳಗೆ ವಿವರಿಸಲಾಗಿದೆ.]

'ಚೈನೀಯ ಯುವಕ ಆಂದೋಲನ' ಸಂಘವು ೧೯೧೧ರ ಕ್ರಾಂತಿಯ ಸಮಯದಲ್ಲಿ ಸ್ಥಾಪಿತವಾಯಿತು. ಕ್ರಾಂತಿಯು ಕೊನೆಗೊಂಡ ಮೇಲೂ, ಸಂಘದ ಚಟುವಟಿಕೆಗಳು ನಿರಂತರ ನಡೆಯುತ್ತಿತ್ತು! ಆದರೆ, ರಾಷ್ಟ್ರೀಯ ಶಾಂತತೆಯ ಕಾರಣದಿಂದ ಅದರ ಚಟುವಟಿಕೆಗೆ ಅತಿ ಉಗ್ರರೂಪವು ಬಂದಿರಲಿಲ್ಲ. ಹೇಗಿದ್ದರೂ ಚೈನೀಯ ವಿದ್ಯಾರ್ಥಿಗಳ ಸ್ಕೌಟ್ ಚಳವಳ, ಗರ್ಲ್ ಗೈಡ್ಸ್ ಚಳವಳಗಳ ಮೂಲಕ ಸಂಘದ ಕಾರ್ಯವು ಜೀವಂತ ಸ್ಥಿತಿಯಲ್ಲಿಯೇ ಇತ್ತು.

ಆದರೆ, ೧೯೩೭ರ ರಾಷ್ಟ್ರೀಯ ಆಂದೋಲನದ ಸಮಯದಲ್ಲಿ, 'ಚೈನದ' ಯುವಕರು ಈ ಸಂಘದ ಮೂಲಕ ತಮ್ಮ ಸಾಮರ್ಥ್ಯವನ್ನು, ಕಾರ್ಯ ಚತುರತೆಯನ್ನು, ಉಜ್ವಲ ರಾಷ್ಟ್ರಪ್ರೇಮವನ್ನು ತೋರಿಸಿ ಜಗತ್ತನ್ನೇ ಬೆರಗು ಮಾಡಿರುವರು! ಜಪಾನಿನ ನಿರ್ದಯ ಸಾಮ್ರಾಜ್ಯಶಾಹಿಯು, ಚೈನವನ್ನು ಕಬಳಿಸಲು ಬಂದಾಗ, ಅಲ್ಲಿನ ಎಳೆಯ ತರುಣ ತರುಣಿಯರು, ನಾಡಿನ ಸೇವೆಗಾಗಿ ಪ್ರತ್ಯಕ್ಷ ಯುದ್ಧರಂಗಕ್ಕೆ ಹೋರಾಡಲು ಸೊಂಟಕಟ್ಟಿ ಇಳಿದರು! ಸರಕಾರದ ಸೈನ್ಯವನ್ನು ಸೇರಿ, ಇನ್ನೂ ಅನೇಕ ರೀತಿಗಳಲ್ಲಿ, ಸರಕಾರಕ್ಕೆ ಬೆಂಬಲವಿತ್ತು, ರಾಷ್ಟ್ರದ ಎಲ್ಲ ಜನರನ್ನು ಚೈನಾದ ಸಂಕಷ್ಟ ಸಮಯದಲ್ಲಿ ಹೋರಾಡಲು ಹುರಿದುಂಬಿಸಿದರು! 'ಚೈನದ ಸಂಕಷ್ಟವನ್ನು ಪರಿಹರಿಸಲು ಹೋರಾಡಬೇಕು, ಸ್ವತಂತ್ರ ಚೈನದಲ್ಲಿ ಬದುಕಬೇಕು ಸ್ವಾತಂತ್ರ್ಯವಿಲ್ಲದೆ ಸಾಯುವುದೇ ಮೇಲು, ಇದು ಅವರ ಇಂದಿನ ರಣಘೋಷವಾಗಿದೆ!

ತರುಣಿಯರ ಸಾಹಸ

ಈ ಚೈನೀಯ ಯುವಕ ಆಂದೋಲನ ಸಂಘದ ಒಂದು ಮಹತ್ವವಾದ ಕಾರ್ಯಶಕ್ತಿಯೆಂದರೆ, ನಾಡಿನ ದೇಶಾಭಿಮಾನಿಗಳಾದ ಯುವಕರೊಡನೆ, ಅಲ್ಲಿನ ಎಳೆ ತರುಣಿಯರೂ ಸಮಭುಜರಾಗಿ ರಾಷ್ಟ್ರದ ಏಳಿಗೆಗಾಗಿ ರಣರಂಗಕ್ಕಿಳಿದು ಕಾದಾಡುತ್ತಿದ್ದಾರೆ! ಈ ಉತ್ಸಾಹಿತರಾದ, ಮಿಂಚಿನ ಮರಿಗಳಂತಿದ್ದ ಮಹಿಳೆಯರು, ತುಂಬಿದ ಆವೇಶದಿಂದ, ಉಜ್ವಲ ರಾಷ್ಟ್ರಪ್ರೇಮದಿಂದ, ವೀರ ಸೈನಿಕರಂತೆ, ತಮ್ಮ ಸೇವೆಯ ಕರ್ತವ್ಯವನ್ನು ಸಲ್ಲಿಸಲು, ಸೈನ್ಯದ ಮುಂದು ಒಂದಾಗಿ ಸಾಲಾಗಿ ನಡೆಯುತ್ತಿದ್ದಾರೆ! ಅವರು ತಮ್ಮ ತಮ್ಮಲ್ಲಿ, ಅನೇಕ ಬೇರೆ ಬೇರೆ ಸ್ವಯಂಸೇವಕಿಯರ ದಳಗಳನ್ನು ಮಾಡಿಕೊಂಡು, ಯಾವ ಯಾವ ಕಾರ್ಯದಲ್ಲಿ ಯಾರು ಯಾರು ಇರಬೇಕೆಂದು ಪೂರ್ವಸಿದ್ಧತೆ ಮಾಡಿಕೊಳ್ಳುತ್ತಾರೆ! ಒಂದು ಕಡೆಯಿಂದ ಇನ್ನೊಂದು ಕಡೆಗೆ ಸೈನಿಕರಿಗೆ ಬೇಕಾದ ಸಾಮಾಗ್ರಿಗಳನ್ನು ಹೊತ್ತು ತರುತ್ತಾರೆ, ಪ್ರತಿ ನಿಮಿಷವೂ ಕೆಲಸದಲ್ಲಿ ತತ್ಪರರಾಗಿರುತ್ತಾರೆ, ಹೆದರಿದವರನ್ನು ಸಮಾಧಾನಗೊಳಿಸುತ್ತಾರೆ, ಗಾಯಗೊಂಡವರನ್ನು ರೋಗಿಗಳನ್ನು ಉಪಚರಿಸುತ್ತಾರೆ, ಅನಾಥರಿಗಾಗಿ, ಆಹಾರಗಳನ್ನು ಹಂಚಿಕೊಡುತ್ತಾರೆ, ಚೈನದ ರಾಷ್ಟ್ರಸಂಗ್ರಾಮದ ಜಯಶೀಲತೆಗಾಗಿ ನಿಧಿಗಳನ್ನು ಏರ್ಪಡಿಸಿ, ಸಂಗ್ರಹಿಸುತ್ತಾರೆ! ಹೆಚ್ಚೇಕೆ? ರಾಷ್ಟ್ರದ ಯಜ್ಞಕುಂಡದಲ್ಲಿ ಅವರು ತಮ್ಮ ಶಕ್ತ ಶರೀರಗಳನ್ನು ಸ್ವಾತಂತ್ರ್ಯಕ್ಕಾಗಿ ಆಹುತಿಯಾಗಿ ಅರ್ಪಿಸಲು ನಿರಂತರ ಸಿದ್ಧರಿದ್ದಾರೆ!

ಶಿಕ್ಷಣ ಶಿಬಿರದಲ್ಲಿ!

ಇಂತಹ ಉತ್ತಮ ರಾಷ್ಟ್ರೀಯ ಕಾರ್ಯಕ್ಕೆ ತಯಾರಾಗಲು, ಅಲ್ಲಿನ ಯುವಕ ಯುವತಿಯರು ಶಿಕ್ಷಣ ಶಿಬಿರಗಳಲ್ಲಿ ಕಠಿಣ ತರಬೇತಿ ಹೊಂದುತ್ತಾರೆ! ಅವರಿಗೆ ಶಾಲೆಗಳಲ್ಲಿಯೂ, ಯುದ್ಧದ ಪಾಠವು ಕಲಿಸಲ್ಪಡುತ್ತದೆ! ಅವರಿಗೆ ಸೈನಿಕ ಶಿಕ್ಷಣವು ಕೊಡಲ್ಪಡುವುದು ಮಾತ್ರ

ವಲ್ಲದೆ, ಆರೋಗ್ಯ ನಿಯಮವೂ ಕಲಿಸಲ್ಪಡುತ್ತದೆ ಬೇರೆ ಬೇರೆ ಪ್ರಯೋಜನಕಾರಿಗಳಾದ ಅಭ್ಯಾಸ ಕೂಟಗಳೇರ್ಪಟ್ಟು, ವಿಷಯಗಳು ಮನದಟ್ಟಾಗುವಂತೆ ಚರ್ಚಿಸಲ್ಪಡುತ್ತವೆ! ಅವರಿಗೆ ಶಸ್ತ್ರಗಳನ್ನು ಉಪಯೋಗಿಸಲು ತಿಳಿಸುತ್ತದೆ! ತರುಣಿಯರನ್ನೂ, ಶಿಸ್ತಿನ ಸ್ಪರ್ಧೆ ಮತ್ತು ಪರೀಕ್ಷೆಗಳನ್ನು ಏರ್ಪಡಿಸಿ ಸೈನ್ಯಕ್ಕೆ ಸೇರಿಸಲಾಗುತ್ತದೆ!

ಹೀಗೆ ರಾಷ್ಟ್ರದ ಹಿತಕ್ಕಾಗಿ ಸೈನ್ಯದೊಡನೆ ಸೇರಿ, ಕಾದಾಡಲು ಈ ನವಚೈನೀಯ ತರುಣಿಯರು, ಅವರ ಹೆತ್ತವರ, ಬಳಗದವರ ಅನೇಕ ತಡೆ ನಿಷ್ಠುರಗಳನ್ನು ಎದುರಿಸಬೇಕಾಗಿದೆ 'ನಮ್ಮ ಸಂಸಾರದ ಪ್ರೇಮ ಕಡೆಗೆ ಹೃದಯವನ್ನು ಹರಿಸಲು ಇಂದು ಸಮಯವಿಲ್ಲ, ಮಾತೃಭೂಮಿಯನ್ನು ನೆನೆದು ಸೈನ್ಯದಳದಲ್ಲಿ ಸೇರಿರಿ'' ಇದು ಅವರ ಜಯಘೋಷ!

ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆಯುವ ಚೈನದ ಯುವಕರು, ಜನಾಂಗದ ಜೀವನ ಸಂಸ್ಕೃತಿಗಳಂತಿದ್ದ ವಿಶ್ವವಿದ್ಯಾಲಯಗಳನ್ನಾದರೂ ಬರಿದುಮಾಡಿ, ಜನತೆಯ ಐಕ್ಯ ಸಾಧನೆಗಾಗಿ ಜಾಗೃತರಾಗಿದ್ದಾರೆ!

ಅವರು ಪ್ರಾಮುಖ್ಯ ಧ್ಯೇಯವು ತಮ್ಮ ರಾಷ್ಟ್ರದ ಸಂಕಷ್ಟವನ್ನು ಪರಿಹರಿಸಲು ಹೋರಾಡುವುದು, ಅಂತೆಯೇ ಅಖಿಲ ಜಗತ್ತಿನ ಯುವಕರನ್ನು ಈ ಆದರ್ಶಕ್ಕಾಗಿ ಸಿದ್ಧತೆಮಾಡುವುದು!

ಜಪಾನಿನ ಪಶುಶಕ್ತಿಗೆ ಎದುರಾಗಿ

೧೯೩೫ರಲ್ಲಿ ಕಲಹಕಂಟಕವಾದ ಜಪಾನು, ಚೈನದ ಮೇಲೆ ಬೀಳಲು ಪ್ರಥಮ ಸಲ ಚೈನದ ೩೦,೦೦೦ ಮಂದಿ ವಿದ್ಯಾರ್ಥಿಗಳು ರಾಷ್ಟ್ರಕ್ಕೊದಗಿದ ಸಂಕಷ್ಟವನ್ನು ತಿಳಿಸಿ, ಜನತೆಯು ಐಕ್ಯವಾಗಿ ಕಾದಾಡಲು ಕೂಗಿ ಕರೆದ ಮಹತ್ವಾದ ಮೆರವಣಿಗೆಯನ್ನು ಮಾಡಿದರು! ಆ ಮೇಲೆ ಇಡೀ ಚೈನದಲ್ಲಿ ೪೦ ದಿನಗಳ ವರೆಗೆ, ತಮ್ಮ ವಿದ್ಯಾಭ್ಯಾಸವನ್ನು ಬಿಟ್ಟು ಜನತೆಯನ್ನು ಯುದ್ಧಕ್ಕಾಗಿ ಎಚ್ಚರಿಸಿದರು! ನಾನ್ಕಿಂಗಿಗೆ, ವಿದ್ಯಾರ್ಥಿಗಳು ಹೋಗಿ, ಸರಕಾರವನ್ನು, ವೈರಿಗಳೊಡನೆ ಕಾದಾಡಲು ಎಚ್ಚರಿಸಿದರು! ಎಷ್ಟೋ ಸಮಯಗಳಲ್ಲಿ ವಿದ್ಯಾರ್ಥಿಗಳು ಟಿಕೇಟು ತೆಗೆಯಲು ಹಣವಿಲ್ಲದಿದ್ದರೂ, ರೈಲುಬಂಡಿಗಳನ್ನು ಹತ್ತಿ ನಾನ್ಕಿಂಗಿಗೆ ಹೋಗಿ ಸರಕಾರಕ್ಕೆ ತಮ್ಮ ಯುದ್ಧ ಉತ್ಸಾಹವನ್ನು ತೋರಿಸಿದ್ದರು.

೧೯೩೬ರಲ್ಲಿ ಚೈನದ ಎಲ್ಲೆಡೆಗಳಲ್ಲಿಯೂ ವಿದ್ಯಾರ್ಥಿಸಂಘಗಳು ಸ್ಥಾಪಿತವಾದುವು! ಆ ಮೇಲೆ ಬೇಸಾಯಗಾರರಲ್ಲಿ ಅವರ ಆಂದೋಲನ ಪ್ರಚಾರವು ಹರಡಿತು! ಕರಪತ್ರಗಳನ್ನು ತೆಕ್ಕೊಂಡು, ದೂರದ ಹಳ್ಳಿಹಳ್ಳಿಗಳ ರೈತರಿಗೆ, ರಾಷ್ಟ್ರದ ಸಂದೇಶವನ್ನು ಹೊತ್ತು ಸಾರಿದರು. ಅಲ್ಲಲ್ಲಿ ಭಾಷಣ, ಚರ್ಚೆ, ಹಾಡು, ನಾಟಕ ಇವುಗಳ ಮೂಲಕ ಜನತೆಯನ್ನು ಹೊಡೆದೆಬ್ಬಿಸಿದರು!

ರಾಷ್ಟ್ರ ವಿಶಾಲ ಆಂದೋಲನ

ಆ ಮೇಲೆ ಅಖಿಲ ಚೈನಾ ವಿದ್ಯಾರ್ಥಿಸಂಘವು ೫೮ ವಿಭಾಗಗಳಾಗಿ, ೩೦೦,೦೦೦ ವಿದ್ಯಾರ್ಥಿಗಳಿಂದ ಸೇರಿ ಸ್ಥಾಪಿತವಾಯಿತು! ೧೯೩೬ನೇ ಇಸವಿಯ ಮೇ ಮತ್ತು ಜೂನ್ ಬರೇ ಎರಡು ತಿಂಗಳ ಅವಧಿಯಲ್ಲಿ ಈ ಕಾರ್ಯವು ಸಾಧಿಸಲ್ಪಟ್ಟಿತ್ತು! ಇವರು ರಾಷ್ಟ್ರೀಯ ವಿದ್ಯಾರ್ಥಿ ಪ್ರೆಸ್ಸೊಂದನ್ನು ಸ್ಥಾಪಿಸಿ ಸಂಘದ ಚಟುವಟಿಕೆಗಳ ಪ್ರಚಾರಕಾರ್ಯವನ್ನು ಭರದಿಂದ ಮಾಡಿದರು! ಇವರು ತಿರಿಗಿ ಜನತೆಯನ್ನು ರಾಷ್ಟ್ರದ ಸೇವೆಗಾಗಿ ಶಿಕ್ಷಣ ಕೊಡುವ ಕಾರ್ಯವನ್ನು ಕೈಕೊಂಡರು

ಜನತೆಯ ಶಿಕ್ಷಣ ಕಾರ್ಯ

ಅಲ್ಲಲ್ಲಿ ಹಳ್ಳಿಗಳನ್ನು ಹೊಕ್ಕು, ವಿಶಾಲ ಬಯಲಲ್ಲಿ, ಸರಲ ಮತ್ತು ಸುಲಭ ರೀತಿಯಿಂದ ಡೇರೆಗಳನ್ನು ಹಾಕಿ, 'ನಾಟ್ಯ ಮಂದಿರಗಳನ್ನು ಕಟ್ಟಿ, ರಾಷ್ಟ್ರಪ್ರೇಮವನ್ನು ಹುರಿದುಂಬಿಸುವ, ನಾಟಕಗಳನ್ನು ಅಭಿನಯಿಸುವರು! ಜಪಾನಿನ ಪಶುಶಕ್ತಿಗೆ ಇದಿರಾಗಿ ಹೋರಾಡಲು ಐಕ್ಯತೆಯಿಂದಿರಬೇಕೆಂದು ರಾಷ್ಟ್ರದ ಸಂದೇಶವನ್ನು ಜನತೆಗೆ ಸಾರುವರು! ತಮ್ಮ ನಾಟಕಗಳಲ್ಲಿ ಚೈನದ ಹಿಂದಿನ ರಾಷ್ಟ್ರವೀರರ ಸಾಹಸಗಳ ವರ್ಣನೆ ಮಾಡುವರು! ಆಯಾಯ ಸ್ಥಳಗಳ ಪರಿಸ್ಥಿತಿಗಳನ್ನು ಅರಿತುಕೊಂಡು ಅಲ್ಲಿಗೆ ಸರಿಯಾದ ನಾಟಕಗಳನ್ನು ಬರೆದು ಅಭಿನಯಿಸುವರು! ಹೀಗೆ ಸಂಯುಕ್ತರಾಗಿ ಕಾರ್ಯ ಉತ್ಸಾಹಗಳಿಂದ ಚೈನದ ತರುಣ ತರುಣಿಯರು ಇಂದು ಹೊಸ ಜೀವನದಲ್ಲಿ ಕಾಲಿಟ್ಟಿರುತ್ತಾರೆ! ಹಾಗೆಯೇ ಹಾಡಿನ ಪಲ್ಲವಿ, ಸಂಗೀತ ಮೊದಲಾದವುಗಳಿಂದ ಪ್ರಚಾರಮಾಡುವರು! ಎಲ್ಲಿ ಜನರಿಗೆ ಸಂದೇಹಗಳುಂಟೋ, ಅವುಗಳನ್ನು ಪರಿಹರಿಸಲು ಅಭ್ಯಾಸಗೋಷ್ಠಿಗಳನ್ನು ಏರ್ಪಡಿಸುವರು!

ಇಂದು ಚೈನದ ಯುವಕರು ಹೀಗೆ, ರಾಷ್ಟ್ರದ ಐಕ್ಯಸಾಧನೆಗಾಗಿ, ಹೋರಾಡುತ್ತಾ, ನ್ಯಾಯಕ್ಕಾಗಿಯೂ ಆರ್ಥಿಕ ರಾಜಕೀಯ ಅಭಿವೃದ್ಧಿಗಾಗಿಯೂ, ಸಂಘರೂಪದಿಂದ ದುಡಿದು ರಾಷ್ಟ್ರಪ್ರೇಮದ ಉಜ್ವಲ ಆದರ್ಶವನ್ನು ಜಗತ್ತಿಗೆ ಸಾರುತ್ತಿದ್ದಾರೆ! ಈ ಇತಿಹಾಸವು ಮಹತ್ವಪೂರ್ಣವಾಗಿದೆ!

ಸಾವಕಾರ ಶ್ರೀನಿವಾಸ ರಂಗ ಪೈ

[ಸ್ಥಾಪನೆ: ಕ್ರಿ ಶ 1858]

: : ಉಜ್ವಲ ಕಾಂತಿಯ : :

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಕ್ಕಳಿಗೆ

ಡೋಂಗರೆ

ಬಾಲಾಮೃತವು

ಆದರ್ಶಕರವಾದ

ಪೌಷ್ಟಿಕ.

ಇದರಿಂದ ಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ನಾಚಿಕೆಯ ಕೆಲಸ!

[೬ನೆಯ ಪುಟದಿಂದ]

ಷ್ಟೋ, ಎಲ್ಲರೂ ಮೌನವಾಗಿದ್ದರು. ಗಂಗಮ್ಮನಿಗೆ ಅದು ಸ್ಪಷ್ಟವಾಗಿ ಕೇಳಿಸಿತು

'ನಿನಗೆ ಆಯಾಸವಾಗಿದೆ, ಸ್ವಲ್ಪ ಕೆಳಕೂಡು' ಎಂತ ಹೇಳಿದಳು. ಅದಕ್ಕೆ ಉತ್ತರ ಹೇಳದೆ ಬೋರ ಒಲೆಯ ಹತ್ತಿರ ಬಂದು, ತನ್ನ ಕೈಯನ್ನು ಚರಿದ ಚಳಿಯಿಂದ ನಡಗುತ್ತಿದ್ದ ಮೈಯನ್ನು ಕಾಯಿಸತೊಡಗಿದ

ಗಂಗಮ್ಮ ಅಲ್ಲಿಗೆ ಬಂದು, ಕುಳಿತು ಮಾತನಾಡತೊಡಗಿದಳು

'ರಾಯರ ಬಂಗ್ಲೆಯ ಆ ಬೆಳಕನ್ನು ನೋಡು, ನೋಡು, ಆ ಮಾಳಿಗೆಯಲ್ಲಿ ಇನ್ನೂ ದೀಪ ಉರಿಯುತ್ತದೆ ಅದು ರಾಯರ ಮಗ ಮಲಗುವ ಕೋಣೆ! ಆ ಮಾಳಿಗೆಯ ಎಡಬದಿಯ ಎರಡನೆ ಕೋಣೆ!'

'ಅದರಿಂದೇನಾಗಬೇಕು?' ಅತ ಕೇಳಿದ.

'ನೀನು ಬಂಗ್ಲೆಯ ಹಿಂಬದಿಯಿಂದ ಹೋಗಿ, ಗೋಡೆ ಹತ್ತಿ, ಒಳ ಹೋಗಬಹುದು. ಕೋಣೆಗೆ ಹೊಕ್ಕು ನೀನು ಏನಾದರೂ ತೆಕ್ಕೊಂಡು ಬಾ'

ಮುದುಕನಿಗೆ ಈ ಮಾತು ಕೇಳಿಸಿತ .

'ಕಳ್ಳತನ' ರಕ್ಕಸಿ, ನನ್ನ ಮಗ ಕದ್ದು ಕೊಳ್ಳಬೇಕೆ? ನಾಚಿಕೆಯ ಕೆಲಸ' ನಾವು ಸಾಯಬಹುದು ಆ ಕೆಲಸ '

'ನಾವು ಸಾಯಬಾರದು ಬೇರೆಯವರು ಮಾಡಿದ ಅನ್ಯಾಯಕ್ಕಾಗಿ ನಾವು ಖಂಡಿತ ಸಾಯಬಾರದು ತನ್ನ ತಂದೆ ತಾಯಿ, ಬಳಗನೆಲ್ಲಾ ಉಪವಾಸ ಹಾಕಿದವರನ್ನು ಅವ ಸುಲಿದು ತರಬೇಕು ' ಎಂತ ಗುಡುಗಿದಳು

ಮುದುಕ ಗೋಡೆಗೆ ಒರಗಿಕೊಂಡು ಈ ನಾಚಿಕೆಗೇಡಿತನದ ಉಪದೇಶಕ್ಕಾಗಿ ಅವಳನ್ನು ಶಪಿಸುತ್ತಿದ್ದ'

ಗಂಗಮ್ಮ ಮತ್ತು ಬೋರ ಅಲ್ಲಿಂದ ಹೊರಬಂದರು ಅವಳು ತಮ್ಮನೊಡನೆ ಹೇಳಿದಳು. ತಮ್ಮಾ, ಹೊಟ್ಟೆಗೆ ಇಲ್ಲದವರು ಕದ್ದುಕೊಳ್ಳುವುದೊಂದೇ ದಾರಿ ಕತ್ತಲು–ಯಾರೂ ನೋಡುವುದಿಲ್ಲ ಓಡು '

ಬೋರ ಗರೆಯುತ್ತಿದ್ದ ನಳಿಗೆ ಧುಮುಕಿದ ಕಣ್ಣುರೆಯಾದ ಗಂಗಮ್ಮ ಕೆಲ ಹೊತ್ತು ಆ ಕಡೆಯೇ ನೋಡುತ್ತಿದ್ದಳು ಒಳಗೆ ಒಂದು ಕಿರಿ ದೀಪದ ಸಣ್ಣ ಬೆಳಕಿನಲ್ಲಿ ಬೋರನ ಹರಕು ಅಂಗಿಯನ್ನು ಹೊಲಿಯಲು ಸುರು ಮಾಡಿದಳು. ಎರಡು ದಿವಸಗಳಿಂದ ಹೊಲಿಯುತ್ತಿದ್ದರೂ ಅಂಗಿಯ ತೂತು ತುಂಬುವ ಹಾಗಿರಲಿಲ್ಲ!

ಹುಡುಗ, ತಾನು ಗೋಡೆಯ ಮೇಲೆ ತೂಗಿಸಿದ್ದ ಹಿಂದೂದೇಶದ ಚಿತ್ರಪಟವನ್ನ ನೋಡಿದ ಅದು ಮಸಿಗೆ ಕಪ್ಪಾಗಿದ್ದು ಮಳೆಗೆ ಒದ್ದೆಯಾಗಿ ಹೋಗಿತ್ತು!

'ನನ್ನ ಹಿಂದೂದೇಶ, ಎಷ್ಟು ಹಾಳಾಗಿದೆ! ನಾನದನ್ನು ಸರಿಮಾಡಬೇಕು' ಸುಣ್ಣದ ಕಡ್ಡಿಯಿಂದ ಪಟದ ಮೇಲೆ ಬರೆಯಿತೊಡಗಿದ ಮುದುಕ ಗಾಂಜಾ ಸೇದಿದ ತಾಯಿ ಗೋಡೆಗೆ ಒರಗಿದ್ದಳು, ಕಮ್ಮಾರ ತನ್ನ ಸುತ್ತಿಗೆಯಿಂದ ಕಬ್ಬಿಣವನ್ನು ಚನ್ನಾಗಿ ಬಡಿಯುತಿದ್ದ. ಆಕಾಶದಲ್ಲಿ ಗುಡುಗು ಹೊಡೆಯುತಿತ್ತು. ಬೋರ ರಾಯರ ಬಂಗ್ಲೆಯ ಕಡೆಗೆ ಓಡುತ್ತಿದ್ದ.

ಬಂಗ್ಲೆಯ ಹಿಂಬದಿಯಿಂದ ಗೋಡೆ ಹಾರಿ ಮಾಳಿಗೆಯ ಮೆಟ್ಟಲಿಗೆ ಬಂದು ನಿಂತ. ಎಲ್ಲ ಕಡೆ ಕತ್ತಲು. ಹೊರಗಿನ ಮಳೆಯು, ಒಳಗಿನ ತನ್ನ ಎದೆಗುಂಡಿಗೆಯ ಈ ಎರಡು ಶಬ್ದಗಳು ಮಾತ್ರ ಬಿಡದೆ ಕೇಳಿಸುತಿತ್ತು! ಮಾಳಿಗೆಯ ಕೊನೆಗೆ ಮುಟ್ಟಬೇಕಾದರೆ ಒಳಗಿನ ಕಣ್ಣು ಕುಕ್ಕುವಂತಿದ್ದ ವಿದ್ಯುಚ್ಛಕ್ತಿಯ ಬೆಳಕು ಕಂಡಿತು. ಬಾಗಿಲು ತೆರೆದಿತ್ತು. ಎದೆಯು ಜೋರಾಗಿ ಬಡಿಯತೊಡಗಿತು!

ಧೈರ್ಯ ಮಾಡಿಕೊಂಡು ಒಳಗೆ ಕಾಲಿಟ್ಟ. ನೋಡುತ್ತಾನೆ! ರಾಯರ ಮಗ ನಿದ್ರೆಮಾಡಿದ್ದ!

ಯೂರೋಪಿಯನರು ಬರುವುದಕ್ಕಿಂತ ಮೊದಲು ಕುಡಿಕತನವಿರಲಿಲ್ಲ!

"ಯುರೋಪಿಯನರು ಹಿಂದೂದೇಶಕ್ಕೆ ಬರುವುದಕ್ಕಿಂತ ಮೊದಲು, ಇಲ್ಲಿ ಕುಡಿಕತನದ ಹಾವಳಿಯಿರಲಿಲ್ಲ"ವೆಂದು ಶ್ರೀ ಎಂ ಪಿ. ವ್ಯಾಸರವರು ಮೋಡರ್ನ್ ರಿವ್ಯೂ ಪತ್ರಿಕೆಯಲ್ಲಿ ಬರೆಯುತ್ತಾರೆ

"ಕುಡಿಕತನವು ಜನರಲ್ಲಿ ಸಾಕಷ್ಟು ದುಷ್ಪರಿಣಾಮವನ್ನು ಹುಟ್ಟಿಸುವುದಾದರೂ, ಸರಕಾರವು, ಜನತೆಯ ಅಭಿಪ್ರಾಯವನ್ನಾದರೂ ಇದಿರಿಸಿ, ಕಾನೂನಿನ ಬಲಾತ್ಕಾರದಿಂದ ಬಡಜನರಿಂದ ಸಾಧ್ಯವಾದಷ್ಟು ಹಣವನ್ನು ಸುಲಿಗೆ ಮಾಡಲು ಖಂಡಿತವಾಡಿದರು

"ಅದಕ್ಕಿಂತಲೂ ಹಿಂದೆ ಹಿಂದೂದೇಶದಲ್ಲಿ ಕುಡುಕುತನವು ಇರಲೇ ಇಲ್ಲವೆಂದಲ್ಲ, ಆದರೆ ಇಂದು ಅದರಿಂದ ಆಗುವಷ್ಟರ ಮಟ್ಟಿಗೆ ಆರ್ಥಿಕ-ಸಾಮಾಜಿಕ ಹಾನಿಯು ಹಿಂದೆ ಎಂದೂ ಆಗಿರಲಿಲ್ಲ ಇಂದು ಒಂದು ' ಯಮ ರೂಪದಿಂದ ಜನತೆಯನ್ನು ನೀತಿಯಿಂದ–ಹಣದಿಂದ–ಆರೋಗ್ಯದಿಂದ ಬಿಡದೆ ಸುಲಿಯುತ್ತಿರುವಂತೆ ಹಿಂದೆ ಎಂದೂ ಇರಲಿಲ್ಲ ಹಿಂದೂದೇಶದಲ್ಲಿ ಬ್ರಿಟಿಷ್ ಸರಕಾರವು ಸಂಘಟನೆಯಿಂದ ವಿಶಾಲವಾಗಿ, ಇಷ್ಟು ಹೆಚ್ಚು ಕರವನ್ನು ಕುಡಿಕತನದಿಂದ ಎಂದೂ ತೆಗೆಯುವ ಅನ್ಯಾಯವನ್ನು ಯಾರೂ ಮಾಡಿಲ್ಲ '

ಸಾಕ್ಷರತೆಯ ಪ್ರಚಾರಕ್ಕೆ ಸತ್ಯಶೋಧನೆಯ ದಾನ!

ಸಂಯುಕ್ತ ಪ್ರಾಂತವು ಪ್ರಾಯಸ್ಥರ ಶಿಕ್ಷಣದಲ್ಲಿ ಬಹಳ ತಟ ಗತಿಯಿಂದ ಏರ್ಪಾಡನ್ನು ನಡೆಸುತ್ತಿದೆ!

ಈ ಕಾರ್ಯಕ್ಕೆ ನೆರವಾಗಿ ಶ್ರೀ ಬಿರ್ಲಾರವರ ಸರಕಾರಕ್ಕೆ ೫,೦೦೦ ಗಾಂಧಿಜಿಯವರ ಆತ್ಮಕಥೆಯ ಪ್ರತಿಗಳನ್ನು ಕೊಟ್ಟಿರುತ್ತಾರೆ

ಸಾವಿರಾರ ವಸ್ತುಗಳಿದ್ದ ಸರ್ಜು ಕೋಟು ತೂಗಾಡಿಸಿತ್ತು, ಒಮ್ಮೆ ಅದನ್ನು ತೊಟ್ಟು ಕುಣಿದ ಸಂತೋಷದಿಂದ ಸತ್ತು ಬಿಡಬೇಕೆಂದು ಅನ್ನಿಸಿತು ಹೊಟ್ಟೆಯ ಹಸಿವೆ, ಮನೆಯ ನೆನಪು ಅವನ ತಲೆ ಸಿಕ್ಕ ಬಂತು

ಮೇಜಿನ ಮೇಲೆ ತುಂಬ ತಿಂಡಿಯು ಹಣ್ಣು ಹಂಪಲುಗಳ ತಟ್ಟೆ ಮೂರು ನಾಲ್ಕು ಹರಡಿತ್ತು ಆ ಕಡೆಗೆ ನೋಡಿ ತಿಂಡಿಯಿಂದ ತನ್ನ ಬಾಯಿ ಅಂಗಿಯ ಕಿಸೆ ಇವುಗಳಲ್ಲೆಲ್ಲಾ ತುಂಬಿಸಿಕೊಂಡ

ಸರ್ಜು ಕೋಟಿನ ಕಿಸೆಗೆ ಮೆಲ್ಲನೆ ಬೋರ ಬೆರಳು ಹಾಕಿದ ಆ ಚಳಿಯಲ್ಲಿಯೂ ಅವನ ಮೈ ಚನ್ನಾಗಿ ಬೆವರಿ ಹೋಯಿತು ಹಣದ ಚೀಲವನ್ನು ಕೈಯಲ್ಲಿ ಹಿಡಕೊಂಡವನೇ ಕೋಣೆಯಿಂದ, ಕಂಪೌಂಡಿನಿಂದ ಹೊರ ಬಿದ್ದು, ಗಾಳಿಯಲ್ಲಿ ಸವಾರಿ ಮಾಡುವವನಂತೆ ಮನೆಯ ಕಡೆಗೆ ನಡೆದುಬಂದ.

ಒಲೆಯ ಬೆಂಕಿಯ ಬಿಳಿ, ಮಿಣುಕು ದೀಪದ ಬೆಳಕಿನಲ್ಲಿ ಎಲ್ಲರೂ ಕುಳಿತುಕೊಂಡರು. ಬೋರ ಗಂಟು ಬಿಚ್ಚಿದ ಹಣ್ಣುಗಳು, ಒಗೆ ಬಗೆಯ ತಿಂಡಿ, ಎಲ್ಲರ ಬಾಯಿಯಲ್ಲಿಯೂ ನೀರೂರಿಸಿತು!

ಮುದುಕ ತನ್ನ ಹೆಂಡತಿಯ ಕಡೆಗೆ ನೋಡಿದ. ದೊಡ್ಡ ಮಿಂಚೊಂದು ಹೊರಗಡೆ ಹೊಳೆಯಿತು! ಎಲ್ಲರೂ ತಮ್ಮ ಬಾಯಿಯನ್ನು ತಿಂಡಿಯಿಂದ ತುಂಬಿಸಿಕೊಂಡರು!

ಗಂಗಮ್ಮ ಬೋರನ ಕಡೆ ನೋಡಿ ಗಟ್ಟಿಯಾಗಿ ನಕ್ಕಳು

'ನಾಚಿಕೆಯ ಕೆಲಸ!'

ಮೂವರೂ ನಗಾಡಿದರು! ಮುದುಕ ಮತ್ತು ಆತನ ಹೆಂಡತಿ ಇಬ್ಬರು ಮಾತ್ರ ಸಿಟ್ಟುಗೊಂಡು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು!

(ಆಧಾರದಿಂದ)

ದುರ್ಗಾದಾಸ.

Kanarese No 11

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನು ಪಯೋಗಿಸಿರಿ!

ಛಿದ್ರವಾದ ಚರ್ಮದಿಂದ ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ

ನಿಮ್ಮ ಮೈ ಚರ್ಮದ ಮೇಲೆ ಮಚ್ಚೆ ಮತ್ತು ಬೊಬ್ಬೆಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ ನಿಮ್ಮ ಸೂಕ್ಷ್ಮವಾದ ಚರ್ಮ ರಂಧ್ರಗಳು ಧೂಳು, ತೈಲ ಮತ್ತು ಬೆವರಿಂದ ಮುಚ್ಚಿಕೊಂಡಿರುತ್ತದೆ ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿಂದ (Cuticura Soap) ತೊಳೆಯಿರಿ

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮವು ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನು ಪಯೋಗಿಸುವುದೇ ಉತ್ತಮ ಹಾದಿ

ಕುಟಿಕೂರಾ ಮುಲಾಮು (Cuticura Ointment) ನಿಂದ ಮುದ್ದಣ ಛಿದ್ರ, ಗಜ್ಜಿಗಳನ್ನು ನಾಶಮಾಡಿರಿ ಇದರ ವಿಷಹಾರಕ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಹಿತಕರವಾದುದು

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು

ಕುಟಿಕೂರಾ ಸಾಬೂನು

Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜನಲ್ಲಿಯೂ (ಪ್ರಚಾರಕ್ಕೆ) ದೊರೆಯುತ್ತದೆ

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲೈಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವರು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳ ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಪೇಷಲ್ ಡೆಲಿವರಿ ಕೊಡುವರು ನಮ್ಮ ಕಿಮ್ಮತ್ತಿಗೆ ಸ್ಪರ್ಧೆ ಇಲ್ಲ. ಮ್ಯಾಲ ಮಂದೇಶದಿಂದ ಒದುವಂತೆ ಉಂಟು ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎನ್. ಎಮ್. ಪಾರೆಖ್ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ

ಹೊನ್ನಾವರ ಏಜಂಟ್ —ಪಿ ಎಚ್. ಭಕ್ತಾ ಗದಗ -ವಿ. ಎಸ್. ಶೆಟ್ಟಿ

ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜೆಂಟ್ —ಡಾ. ಕೆ ಭಾಸ್ಕರ ಷೈ.

ಸ್ಪೆಶ್ಯಲ್ ಏಜಂಟ್ —ಬಿ ವ್ಹಿ. ಹೊನ್ನಾವರ

ಆಶ್ಚರ್ಯಕರವಾದ ಕನ್ನಡಿ!

ಯಾವುದೇ ವಯಸ್ಸಿನವರಾದರೂ ಮನುಷ್ಯನು ಈ ಕನ್ನಡಿಯನ್ನು ನೋಡಲು ಸಾಧ್ಯವಿದೆ ಕಳವು ಆದ ವಸ್ತು ಸಾಮಾನ, ಅಸ್ವಸ್ಥತೆಯಿಂದ ಗುಣವಾಗದಿರುವಿಕೆ ಮುಂದೆ ಸಂಭವಿಸಬಹುದಾದ ದುಃಖಗಳ ಮತ್ತು ಅವುಗಳಿಂದ ತಪ್ಪಿಸಲು ಉಪಾಯ, ಭೂಮಿಯಲಿ ಇಟ್ಟಿರುವ ಹಣದ ಪತ್ತೆ, ಯಾವುದೇ ಕಷ್ಟತರವಾದ ಕೆಲಸಗಳು ಸಾಧ್ಯವಾಗುವಿಕೆ, ನೌಕರಿ, ಕೋರ್ಟು ಕಛೇರಿ ಕೆಲಸಗಳಲ್ಲಿ ಯಶ, ಪರೀಕ್ಷೆ ಮುಂತಾದ ಕೈಕೊಂಡ ಕೆಲಸಗಳಲ್ಲಿ ಯಶಸ್ಸು ಉಂಟಾಗುತ್ತದೆ. ಸ್ವರ್ಗಸ್ಥರಾದ ತಂದೆತಾಯಿಗಳನ್ನು ಮತ್ತು ಆಪ್ತಮಿತ್ರರನ್ನು ಮತ್ತು ಸ್ವಪ್ನದಲ್ಲಿ ನೋಡಬೇಕೆಂಬ ವಸ್ತುಗಳನ್ನು ಇದರಲ್ಲಿ ಕಾಣಬಹುದು

'ಬೆಲೆ ಬರೀ ೨॥ ಪೌಂಡು ಮತ್ತು ಟಪಾಲು ಖರ್ಚು ಬೇರೆ ಇದು ನಿಜವಲ್ಲವೆಂದು ತೋರಿಸಿಕೊಟ್ಟಲ್ಲಿ ಬೆಲೆ ವಾಪಸು ನಿಮ್ಮ ಪತ್ತೆ ಚೆನ್ನಾಗಿ ಬರೆಯಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ. ಸಿಕ್ಕುವಸ್ಥಳ.

American Mesmerism House,
P B. No. 27 P M H. Amritsar (India)

ಸ್ವಾಮಿ ಶ್ರದ್ಧಾನಂದರು

[ಒಂದು ಪಾವನ ಜೀವನ!]

(ಭಾರತದ ಇಂದಿನ ಜಾಗೃತಿಯು ಮಹಾ ಸಾಧನೆಯು ಹಲವು ಮಂದಿ ಭಾರತದ ವೀರರ ಸಾಹಸದಿಂದಾಗಿದೆ; ಅಂತಹ ಚಿರಸ್ಮರಣೀಯ ಮಹಾತ್ಮರಾದ ಶ್ರೀ ಸ್ವಾಮಿ ಶ್ರದ್ಧಾನಂದಜೀಯವರ ಪಾವನ ಜೀವನವನ್ನು, ಅವರ ಅತ್ಯಂತ ಮಿತ್ರರಾದ ದೀನಬಂಧು ಸಿ. ಎಫ್. ಆಂಡ್ರೂಸರು ಈ ಲೇಖನದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ)

೧೯೧೩ನೇ ಇಸವಿಯಲ್ಲಿ ಗಾಂಧಿಜಿಯವರನ್ನು ಸಂದರ್ಶಿಸಲು, ನಾನು ಪ್ರಥಮ ಸಲ, ಆಫ್ರಿಕಕ್ಕೆ ಹೋದಾಗ, ನಾನು ಹೇಳುವ ಪ್ರತಿಯೊಂದು ವರ್ತಮಾನದ ಕುರಿತು, ಗಾಂಧಿಜಿಯವರು ಅತ್ಯಂತ ಶ್ರದ್ಧೆಯಿಂದ ಕೇಳುತ್ತಿದ್ದರು; ಅಲ್ಲಿನ ಹಿಂದೀಯರ ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಹೋರಾಡಿ, ಸೆರೆಮನೆಯ ಸಂಕಷ್ಟಗಳನ್ನೂ ಅನುಭವಿಸಿದ್ದ ಅವರಿಗೆ, ನಾನು ಹಿಂದೂದೇಶದಲ್ಲಿ ಕಂಡ ಪ್ರತಿಯೊಂದು ವಾರ್ತೆಯೂ, ನಾನು ಪರಿಚಯ ಮಾಡಿಕೊಂಡ ಪ್ರತಿಯೊಬ್ಬರೂ, ಬಹಳ ವಿಶೇಷದ ವಿಷಯವಾಯಿತು

ನಮ್ಮ ಮಾತುಕತೆಗಳು

ಹಗಲು ಮುಗಿದು, ರಾತ್ರಿಯಾದಾಗ ನಾವು ನಕ್ಷತ್ರ ಆವೃತವಾದ ವಿಶಾಲ ಆಕಾಶದ ಕೆಳಗೆ ಕುಳಿತು ಬಹಳ ಕಾಲ ಭಾರತವರ್ಷದ ಕುರಿತು ಸಂಭಾಷಿಸುವೆವು. ನಾನು ಭಾರತದಲ್ಲಿ ಗುರುತಿಸಿದ ಮತ್ತು ಮೆಚ್ಚಿದ ಮಹನೀಯರ ವಿಷಯವಾಗಿ ಹೇಳುವೆನು. ನಾನು ಒಮ್ಮೆ ಶಾಂತಿ ನಿಕೇತನದ ವಿಷಯವಾಗಿ ತಿಳಿಸುವೆನು, ಆ ಮೇಲೆ ಢಿಲ್ಲಿಯ ನಿವಾಸದ ವಿಷಯ ಹೇಳಿ, ಅನಂತರ ಗಂಗಾ ನದಿಯ ದಡದಲ್ಲಿರುವ ಹರಿದ್ವಾರ ಗುರುಕುಲದಲ್ಲಿ ಮಹಾತ್ಮ ಮುನ್ಷಿ ರಾಮರು ತನ್ನ ಆಶ್ರಮದಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ, ಆರ್ಯಧರ್ಮದ ಸಾರವನ್ನು ಉಪದೇಶಿಸುವ ಕುರಿತು ಹೇಳುವೆನು

ಒಮ್ಮೆ ನಾನು ಮಹಾತ್ಮಾಜಿಯವರಿಗೆ, ಶಾಂತಿ ನಿಕೇತನ ಪ್ರಾಕೃತಿಕ ಸೌಂದರ್ಯವನ್ನು ವರ್ಣಿಸಿ ಹೇಳುವೆನು, ಮತ್ತೊಮ್ಮೆ ಹರಿದ್ವಾರದಲ್ಲಿ ಹರಿವ ಗಂಗಾನದಿಯ ದಡದಿಂದ ಹಿಮಾಲಯದ ಸೌಂದರ್ಯವನ್ನು ವರ್ಣಿಸುವೆನು, ಆ ಮೇಲೆ ಢಿಲ್ಲಿಯ ಪ್ರಿನ್ಸಿಪಾಲ್ ರುದ್ರ ಮತ್ತು ಕವಿ ರವಿಂದ್ರನಾಥ ಠಾಗೂರರ ಘನತೆಯನ್ನು ವಿವರಿಸುವೆನು, ಕಡೆಗೆ ಗುರುಕುಲದ ಮಹಾತ್ಮಾ ಮುನ್ಷಿ ರಾಮರ ಮತ್ತು ನನ್ನ ಪ್ರೇಮ ಪರಿಚಯವನ್ನು ತಿಳಿಸುವೆನು. ನಾನು ಇವರುಗಳನ್ನೂ, ಈ ಸೌಂದರ್ಯವನ್ನೂ ಜೀವನಾಧಿಕ್ಯವಾಗಿ ಪ್ರೀತಿಸುತ್ತಿದ್ದೆ. ಭಾರತವನ್ನು ಬೆಳಗಿಸಿದ ದೀಪಗಳಿವೆ' ನನ್ನ ಹೃದಯದಲ್ಲಿ ಎಂದೆಂದೂ ಶಾಶ್ವತ ಸ್ಥಾನವನ್ನು ಅವು ಪಡೆದಿವೆ

ತ್ರಿಮೂರ್ತಿಗಳು

ಒಮ್ಮೆ ಮಹಾತ್ಮರು ನನ್ನೊಡನೆ ನೀವು ಅವರಲ್ಲಿ ಯಾರನ್ನು ಹೆಚ್ಚಿನವರಾಗಿ ತಿಳಿಯುತ್ತೀರಿ ನಿಮ್ಮ ಗುರುದೇವ, ರುದ್ರ, ರಾಮ, ಈ ಮೂವರಲ್ಲಿ ಯಾರು ಹೆಚ್ಚು?' ಎಂದರು. ನಾನು ನಗಾಡಿದೆ' ಹೌದು ಅವರು ನಿಜವಾಗಿಯೂ ಬ್ರಹ್ಮ, ರುದ್ರ, ರಾಮ, ತ್ರಿಮೂರ್ತಿಗಳು

ಮುನ್ಷಿ ರಾಮ್

ಈ ತ್ರಿಮೂರ್ತಿಗಳಲ್ಲಿ ಒಬ್ಬರಾದ ಮುನ್ಷಿ ರಾಮರ ಜೀವನದ ಇತಿಹಾಸವು ಉಜ್ವಲವಾದುದು. ನವ ಭಾರತದ ನಿರ್ಮಾಪಕರಲ್ಲಿ ಅವರೂ ಒಬ್ಬರು

ಇವರು ಸ್ವಾಮಿ ದಯಾನಂದ ಸರಸ್ವತಿಯವರಿಂದ ಆರ್ಯಸಮಾಜಕ್ಕೆ ಮತಾಂತರಗೊಳಿಸಲ್ಪಟ್ಟಿರುವರು! ದಯಾನಂದರ ಪ್ರಭಾವಪೂರ್ಣವಾದ ವ್ಯಕ್ತಿತ್ವದ ಪರಿಚಯವಾಗುವವರೆಗೆ, ಅವರ ಜೀವನದಲ್ಲಿ ಯಾವ ಮಹತ್ವದ ಘಟನೆಗಳೂ ನಡೆದಿಲ್ಲ. ಕಡೆಗೆ ಒಂದು ದಿನ ಸರ್ವಸ್ವವನ್ನೂ ತ್ಯಜಿಸಿ, ಸ್ವಾಮಿ ದಯಾನಂದರು ಆಜ್ಞಾಪಿಸಿದಂತೆ ಕೆಲಸಮಾಡಲು ನಿಶ್ಚಯಿಸಿದರು. ದಯಾನಂದರು ಇವರನ್ನು ಆರ್ಯಧರ್ಮ ಶಿಕ್ಷಣಕ್ಕಾಗಿ, ಗುರುಕುಲವನ್ನು ಸ್ಥಾಪಿಸುವಂತೆ ತಿಳಿಸಿದರು. ಹಿಮಾಲಯದ ಪವಿತ್ರ ಪ್ರವಾಹವು ಹರಿದು ಬರುವ ಹರಿದ್ವಾರದ ದಡದಲ್ಲಿ ವೇದ ಕುಲೀನ ಆರ್ಯ ಸಂಸ್ಕೃತಿಯ ಬೋಧನೆಗಾಗಿ ಗುರುಕುಲವು ಸ್ಥಾಪಿತವಾಯಿತು.

ದಿನದಿಂದ ದಿನಕ್ಕೆ, ಆ ಮಹಾ ಸಂಸ್ಥೆಯು ಅಭಿವೃದ್ಧಿಯಾಯಿತು. ಅಲ್ಲಿನ ವಿದ್ಯಾರ್ಥಿಗಳನ್ನೂ ಹೊಟ್ಟೆಯ ಮಕ್ಕಳ ಬಾಯಿಂದ ಸಂರಕ್ಷಿಸುತ್ತಿದ್ದರು. ಹರಿದ್ವಾರ ಗುರುಕುಲದಲ್ಲಿ, ಗುರು ಮುನ್ಷಿರಾಮರು, ಆ ನಿರ್ಮಲ ಬಾಲಕರೊಡನೆ ಕಳೆದ ಜೀವನಕ್ಕಿಂತ ಸುಖಜೀವನವು ಜಗತ್ತಿನಲ್ಲಿಯೂ ದೊರಕಲಾರದು

ಕಡೆಕಡೆಗೆ ಮಹಾತ್ಮಾ ಮುನ್ಷಿರಾಮರು ಸಂಪೂರ್ಣ ಸಾಂಸಾರಿಕ ವಿಚಾರಗಳನ್ನು ಬಿಟ್ಟುಕೊಟ್ಟು, ವೇದಬೋಧಿತ ಆರ್ಯಋಷಿಗಳ ಜೀವನವನ್ನು ಅನುಸರಿಸಿದರು

ಸ್ವಾಮಿ ಶ್ರದ್ಧಾನಂದರು

ಅವರು ಸನ್ಯಾಸ ದೀಕ್ಷೆಯನ್ನು ವಹಿಸಿಕೊಂಡ ಮೇಲೆ ಸ್ವಾಮಿ ಶ್ರದ್ಧಾನಂದರೆಂದು ಹೆಸರಿಟ್ಟುಕೊಂಡರು. ಅವರು ಹೆಚ್ಚಾಗಿ ಢಿಲ್ಲಿಯಲ್ಲಿ ಇರುತ್ತಿದ್ದರು. ಹಿಂದೀ ಭಾಷೆಯನ್ನೂ, ಉತ್ತರ ಭಾರತದಲ್ಲಿ ಪ್ರಚಾರ ಮಾಡುವುದನ್ನು, ಅವರು ಕಡೆಗೆ ತಮ್ಮ ಉದ್ದೇಶವಾಗಿ ಇಟ್ಟುಕೊಂಡರು. ಅವರ ಮಗಂದಿರು ತಂದೆಯ ಜೀವನ ಧ್ಯೇಯವನ್ನು ಮುಂದುವರಿಸಿ, ಹಿಂದೀ ಭಾಷೆಯ ಮೂಲಕ, ಆರ್ಯ ಧರ್ಮದ ಪ್ರಚಾರವನ್ನು ಬಹಳವಾಗಿ ಮಾಡಿದರು

ಢಿಲ್ಲಿಯ ಒಂದು ಸಣ್ಣ ಗದಿಸಲೊಂದರಲ್ಲಿ, ಬಹಳ ಸರಳ ಜೀವನ ಸಾಧನಗಳೊಡನೆ, ಒಬ್ಬ ವಿಶ್ವಾಸವಂತ ಸೇವಕನೊಡನೆ ಅವರು ವಾಸಿಸುತ್ತಿದ್ದರು. ಆ ಸೇವಕ ಮತ್ತು ಗುರುಗಳೊಳಗಿನ ಸಂಬಂಧವು ಅನ್ಯೋನ್ಯ. ಸ್ವಾಮಿ ಸೇವಕರ ತೆರನಿರದೆ, ಪರಸ್ಪರ ಮಿತ್ರಭಾವದ ರೀತಿಯಾಗಿತ್ತು

ಇಬ್ಬರು ಮಹಾತ್ಮರ ಭೇಟಿ

ಮಹಾತ್ಮಾಜಿಯವರು, ಲಂಡನಿಗೆ ಹೋದವರು, ಅಲ್ಲಿ ಅಸೌಖ್ಯದಲ್ಲಿ ಬಿದ್ದರು. ಅವರನ್ನು ಹಿಂದೂದೇಶಕ್ಕೆ ಮರಳಲು ಡಾಕ್ಟರರು ಹೇಳಿದಂತೆ, ಅವರು ಮರಳಿ ಬಂದರು. ಆಗ ದಕ್ಷಿಣ ಆಫ್ರಿಕದ ಆಗಷ್ಟೇ ಬಂದಿದ್ದ ವಿದ್ಯಾರ್ಥಿಗಳನ್ನೂ ಸ್ವಾಮಿ ಶ್ರದ್ಧಾನಂದರು ತಮ್ಮ ಆಶ್ರಮಕ್ಕೆ ಕರೆದುಕೊಂಡರು

ಇಲ್ಲಿ, ಹರಿದ್ವಾರದಲ್ಲಿ ಇಬ್ಬರು ಮಹಾತ್ಮರಿಗೂ ಸಂದರ್ಶನವಾಯಿತು. ಆಗ ನಾನೂ ಅವರೊಡನೆ ಇದ್ದೆ. ಭಾರತದ ವೀರರು ಪ್ರಥಮ ಸಲ ಸಂದರ್ಶಿಸಿ, ಜೀವಿತಾವಧಿ ಮೈತ್ರಿಯನ್ನು ಇಟ್ಟುಕೊಂಡ ಅಮೂಲ್ಯ ದಿನವು ಅದಾಗಿತ್ತು

ವಿಷಾದಾಂತ ವಾರ್ತೆ

ಸ್ವಾಮಿ ಶ್ರದ್ಧಾನಂದರ ಮರಣವು ಅತ್ಯಂತ ವಿಷಾದಮಯವಾಗಿದೆ. ಒಬ್ಬ ಧರ್ಮಮೂಢ... ವಾರ್ತಾ ಪತ್ರಿಕೆಯಲ್ಲಿ ಒಂದು ವಾರ್ತೆಯನ್ನು ಓದಿ, ಸ್ವಾಮಿಜಿಯವರ ಸಣ್ಣ ಆಶ್ರಮದ ಕಡೆಗೆ ಓಡಿ, ಬಾಗಿಲ ಬಳಿಯಲ್ಲಿ, ಆಶ್ರದ್ಧವಂತ ಸೇವಕನು ದಿಗಿಲುಗೊಂಡು ನಿಂತಿದ್ದಂತೆ, ಇವರನ್ನು ಕೈಯ್ಯ ರಿವಾಲ್ವರನಿಂದ ಗುಂಡಿಟ್ಟು ಕೊಂದನು. ಬಹುಶಃ ಧರ್ಮವೀರನೊಬ್ಬನು ಆಯಬಹುದಾದ, ಅವರ ಅಪೇಕ್ಷೆಯಾದರೂ ಇರಬಹುದಾದಂತೆ ಹಾಗೆ ಅವರು ವೀರ ಮರಣವನ್ನು ಹೊಂದಿದರು. ನನ್ನ ಜೀವ ಮಿತ್ರನೊಬ್ಬನನ್ನು ಒಬ್ಬ ಹುಚ್ಚು ಮನುಷ್ಯನು ಹೀಗೆ ಕೊಂದುಬಿಟ್ಟ ವಾರ್ತೆಯು ನನ್ನನ್ನು ದುಃಖಿಯನ್ನಾಗಿ ಮಾಡಿತು!

ಹರಿಜನೋದ್ಧಾರ

ಸ್ವಾಮಿ ಶ್ರದ್ಧಾನಂದರು, ತನ್ನ ಮರಣದ ಹಿಂದೆ, ತಾನು ಮಾಡಿದ ಅತುಲ ಕಾರ್ಯಗಳನ್ನು ಬಿಟ್ಟು ಹೋಗಿದ್ದಾರೆ. ಅವರ ಮರಣವಾಗುವುದಕ್ಕಿಂತ, ಕೆಲ ದಿನಗಳಿಗಿಂತ ಮೊದಲು ಅವರು ಹರಿಜನರನ್ನು—ದಲಿತರನ್ನು—ಉದ್ಧಾರ ಮಾಡುವ ಕಾರ್ಯವನ್ನು ಕೈಕೊಂಡಿದ್ದರು. ಅವರ ಮರಣದ ಮೇಲೆ ಸಾರ್ವಜನಿಕರಿಂದ ಎತ್ತಿದ ಸ್ಮಾರಕ ನಿಧಿಯು ಈ ಉದ್ದೇಶಕ್ಕಾಗಿಯೇ ಉಪಯೋಗಿಸಲ್ಪಡುತ್ತದೆ. ಯಾರು ಅವರ ಪವಿತ್ರಸ್ಮರಣೆಯ ಬಗ್ಗೆ ಅಭಿಮಾನ ತಾಳುತ್ತಾರೋ ಅವರೆಲ್ಲಾ, ಆ ಹರಿಜನೋದ್ಧಾರ ಕಾರ್ಯವನ್ನು ಮುನ್ನಡೆಸಬೇಕು. ಹಾಗೆ ಮಾಡುವುದರಿಂದ ಮಾತ್ರ ಪಂಜಾಬ್ ದೇಶವು ನಿರಂತರ ಋಣಿಯಾಗುವುದು, ಮಾತ್ರವಲ್ಲದೆ, ಅವರನ್ನು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸಿದ್ದ, ನಮಗೆಲ್ಲರಿಗೂ ನಮ್ಮ ಗೆಳೆಯನನ್ನು ಜನರು ಮರೆತಿಲ್ಲವೆಂಬ ಆನಂದವೂ ಆಗುವುದು

ಸ್ವಾಮಿಜಿಯವರು, ಸಾಯುವುದಕ್ಕಿಂತ ಮೊದಲು, ಅವರು ನಿಜದ್ವೇಷದಿಂದ ಅನೇಕ ಹಿಂದೀಯ ಬಾಲಕರನ್ನು ಗುರುಕುಲಕ್ಕೆ ಕರೆತಂದು, ಅಲ್ಲಿ ವೈದಿಕರೀತ್ಯಾ ಅವರಿಗೆ ವಿದ್ಯಾಭ್ಯಾಸವನ್ನು ಕೊಟ್ಟಿದ್ದರು. ಅವರ ಹೃದಯವು ಎಂದೂ ತನ್ನ ಪ್ರಾಂತವಾದ ಸಂಯುಕ್ತ ಪ್ರಾಂತದ ವಿದೇಶಗಳಿಗೆ ತೆರಳಿದ್ದ, ಅಸಂಖ್ಯಾತ ಹಿಂದೀಯ ಕೂಲಿಕಾರರ ಹಿತಸಾಧನೆಯ ಬಗೆ ಹಾತೊರೆಯುತ್ತಿತು, ಅವರ ಮಕ್ಕಳನ್ನು ತನ್ನ ಗುರುಕುಲಕ್ಕೆ ತಂದು ಶಿಕ್ಷಣ ಕೊಡುವುದಕ್ಕಿಂತ ಹೆಚ್ಚಿನ ಆನಂದದ ಕಾರ್ಯವು ಅವರಿಗೆ ಬೇರೆಯೇನೂ ಇರಲಿಲ್ಲ'. ಹಾಗಾಗಿ ಅವರು ಫಿಜಿ ದ್ವೀಪಕ್ಕೆ ತನ್ನ ವಿದ್ಯಾರ್ಥಿಗಳನ್ನು ಕಳುಹಿಸುತ್ತಿದ್ದರು. ಎಳೆಯ ಬಾಲಕ ಬಾಲಕಿಯರನ್ನು ಅಲ್ಲಿಂದ ಗುರುಕುಲಕ್ಕೆ ಆಹ್ವಾನಿಸುತ್ತಿದ್ದರು. ಇದನ್ನು ಯಶಸ್ವಿಯಾಗಿ ಮಾಡಬೇಕೆಂದು ಅವರ ತನ್ನ ಕೊನೆಯ ಕಾಲದಲ್ಲಿ ಕನವರಿಸುತ್ತಿದ್ದರು! ಈ ಕಾರ್ಯವನ್ನೂ, ಅವರಲ್ಲಿ ಶ್ರದ್ಧೆಯುಳ್ಳವರು ಮುಂದುವರಿಸಿದಲ್ಲಿ ಅವರ ಮಹಾ ಸ್ಮರಣೆಯು ಸಾರ್ಥಕವಾಯಿತು.

(ದೀನಬಂಧು ಸಿ ಎಫ್ ಆಂಡ್ರೂಸರ ಲೇಖನದಿಂದ)

THE PIE-MONEY BANK LTD,
Maidan Road, MANGALORE
Undertakes all kinds of Banking Business. Current account at 2½% per annum. Savings Bank Deposits at 4½% per annum.
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit funds ranging from Rs 100/ to Rs 5000/ run regularly on systematic lines. Unique Banking facilities to Businessmen and interested Public
Apply for particulars—K. R. GURU, *Managing Director*

ಮಲೇರಿಯಾ ಇನ್‌ಫ್ಲುಯೆಂಜಾ ವ ಯಾವತ್ತೂ ಜ್ವರಗಳು ಒಡನೆ ವಾಸಿ ಹೊಂದುತ್ತವೆ

ಬಡಬಗ್ಗರ-ಯಜಮಾನ-ಕೂಲಿಕಾರರ ಎಲ್ಲವರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ!

ಮಾದನ ಸನ್ಸ್ ಮತ್ತು ಕಂ. ಕೆಮಿಸ್ಟ್. ಮುಬಂಯಿ ೨.

ಸಿನೆಮಾ ನಟಿಯರ ಜೀವನ ಪರಿಚಯ

೫. ಶೋಭನ ಸಮರ್ಥ

ಶೋಭನ ಸಮರ್ಥಳು ಉಚ್ಚಕುಲದ ಸುಶಿಕ್ಷಿತ ಮಹಾರಾಷ್ಟ್ರ ತರುಣಿ. ನೈಜವಾಗಿ ಶೋಭಾಯಮಾನದಿಂದ ಕೂಡಿದ ಸೌಂದರ್ಯ ರಾಶಿ. ದಿವಂಗತ ಡಾ. ಪಿ. ಎಸ್. ಶಿಲೋತ್ರಿ ಎಂಬ ಮಹಾರಾಷ್ಟ್ರದ ಹೆಸರುವಾಸಿಯಾದ ಬೇಂಕರರೊಬ್ಬರ ಪುತ್ರಿ. ಶೋಭನಳು ತನ್ನ ಚಿಕ್ಕನ ವಿದ್ಯಾಭ್ಯಾಸವನ್ನು ಬೆಂಗಳೂರಿನ ಬೋಲ್ಡ್‌ವಿನ್ ಹೈಸ್ಕೂಲಿನಲ್ಲಿ ಕಳೆದಳು. ಹಿಂದಿನ ತನ್ನ ವಿದ್ಯಾರ್ಥಿದಸೆಯನ್ನು ಈಗಲೂ ನೆನೆದು ಆನಂದಿಸುತ್ತಿರುವಳು. ಇವಳ ಮಾತಾಪಿತೃಗಳು ಒಳ್ಳೆಯ ಸುಶಿಕ್ಷಿತರಾಗಿದ್ದುದರಿಂದ ಶೋಭನ ಸಮರ್ಥಳು ಇಷ್ಟೊಂದು ವಿದ್ಯೆಯನ್ನು ಪಡೆಯಲು ಕಾರಣವಾಯಿತು

ಸಿನೆಮಾ ಜೀವನದ ವಿಷಯ ಮಗಳಲ್ಲಿದ್ದ ಆಸಕ್ತಿಯನ್ನು ಬದಲಾಯಿಸಬೇಕೆಂದು ಡಾ. ಶಿಲೋತ್ರಿಯವರು ಬಹಳ ಪ್ರಯತ್ನ ಪಟ್ಟರು ಅವರು ಕೇಂಬ್ರಿಜ್ ವಿಶ್ವವಿದ್ಯಾಲಯದ ಎಮ್. ಎ. ಮತ್ತು ಪಿ. ಎಚ್. ಡಿ. ಡಿಗ್ರಿಯ ಪದವಿಧರರಾಗಿದ್ದರು ಹತ್ತು ವರ್ಷಗಳ ಕಾಲ ನ್ಯೂಯಾರ್ಕ್ ನಗರದಲ್ಲಿ ವಿದ್ಯಾರ್ಥಿ ಜೀವನವನ್ನು ಕಳೆದಿದ್ದರು ಅಮೇರಿಕದ ಅವರ ಜೀವನ ಕಥೆಯನ್ನು ಏಕ ಮಾತ್ರ ಪುತ್ರಿಯಾದ ಶೋಭನಳು ಬಹಳ ಆಸಕ್ತಿಯಿಂದ ಆಲಿಸುತ್ತಿದ್ದಳು.

ಶೋಭನ ಸಮರ್ಥಳು ತನ್ನ ಹದಿನೆರಡನೇಯ ವಯಸ್ಸಿನಲ್ಲಿ ಪ್ರಥಮ ಬಾರಿಯಾಗಿ ತಂದೆಯೊಂದಿಗೆ ದೇಶಗಳನ್ನು ಸುತ್ತಾಡಲು ತೆರಳಿದಳು ತದನಂತರ ಅನೇಕ ಬಾರಿ ಆಗಾಗ ಯುರೋಪನ್ನು ಸಂಚರಿಸಿರುವಳು ಕಳೆದ ವರ್ಷ ಒಬ್ಬಂಟಿಗಳಾಗಿಯೇ ಚೈನಾ, ಜಪಾನುಗಳನ್ನು ಸಂದರ್ಶಿಸಿದಳು ಆದರೆ ಪ್ರಥಮ ಬಾರಿಯ ತನ್ನ ಸಂಚಾರದಲ್ಲಿ ಕಂಡಂಥ ದೇಶದ ಸೊಬಗು ಈಗ ಕಂಡು ಬರುವುದಿಲ್ಲವೆಂದೇ ಅವಳ ವಾದ

ಚಿಕ್ಕವಳಿರುವಾಗಲೇ ಇವಳಲ್ಲಿ ನಾಟಕೀಯ ಪ್ರತಿಭೆಯು ಮೂಡಿತ್ತು ಶಾಲೆಯ ಯಾವತ್ತೂ ಸಂಗೀತ ಕಚೇರಿ ನಾಟಕಗಳಲ್ಲಿ ಇವಳು ಭಾಗವಹಿಸುತ್ತಿದ್ದಳು. ಒಂದು ಬಾರಿ 'ವೆನಿಸಿನ ವಣಿಕ' ಎಂಬ ನಾಟಕದಲ್ಲಿ ಪೋರ್ಶಿಯಳ ಪಾತ್ರವನ್ನು ಧರಿಸಿದ ಇವಳ ಅಭಿನಯಕ್ಕಾಗಿ ಅನೇಕ ಅಭಿನಂದನೆಗಳು ಸಿಕ್ಕಿದ್ದವು ಈ ವಿಷಯವು ಇಂದೂ ಅವಳಿಗೆ ನೆನಪಿನಲ್ಲಿರುವುದು

ತನ್ನ ೧೬ನೇಯ ವಯಸ್ಸಿನಲ್ಲಿ ತಂದೆತಾಯಿಗಳಿಂದ ಅಗಲುವ ಯೋಗವುಂಟಾಯಿತು ಆಕೆಯ ತಂದೆತಾಯಿಗಳು ಆಕೆಯನ್ನು ಉಚ್ಚ ಕುಟುಂಬದ ಯೋಗ್ಯ ತರುಣನೊಬ್ಬನಿಗೆ ವಿವಾಹ ಮಾಡಿಕೊಡುವುದಾಗಿ ನಿಶ್ಚಯಿಸಿದರು. ಆದರೆ ಶೋಭನಳು ಚಲಚ್ಚಿತ್ರವನ್ನು ತನ್ನ ಜೀವನೋಪಾಯವಾಗಿ ಕೈಕೊಂಡು ಹಿರಿಯರ ವಿವಾಹದ ಹಂಚಿಕೆಯನ್ನೇ ಕೆಡವಿ ಬಿಟ್ಟಳು. ಅವಳ ಸಿನೆಮಾ ಜೀವನಕ್ಕೆ ತಂದೆತಾಯಿಗಳು ಒಡಂಬಡಲಿಲ್ಲ ಮಗಳು ತಮ್ಮ ಮಾತನ್ನು ಮೀರಲಿಕ್ಕಿಲ್ಲವೆಂದು ಅವರು ನಂಬಿದ್ದರು ಆದರೆ ಶೋಭನಳು ಅವರ ಒಪ್ಪಿಗೆಗೆ ಕಾಯದೇ ಮನೆ ಬಿಟ್ಟಳು.

ಕೊಲ್ಹಾಪುರ ಕಂಪೆನಿಯ ಡ್ಯಾರೆಕ್ಟರೊಬ್ಬರು ಇದಕ್ಕೆ ಕಾರಣವೆಂದ ಹೇಳುತ್ತಿರುವರು. ಅವರು ಇವಳನ್ನು ತಮ್ಮ ಚಿತ್ರವೊಂದರಲ್ಲಿ ಅಭಿನಯಿಸುವಂತೆ ಮೊದಲೇ ಕೇಳಿಕೊಂಡಿದ್ದರು ಇದರ ವಿಷಯವಾಗಿ ಆಕೆಯು ಚಲಚ್ಚಿತ್ರ ಕಲಾವಿಶಿಷ್ಟವನ್ನು ಅಭ್ಯಾಸಿಸುತ್ತಿದ್ದ ತನ್ನ ಹಿತಚಿಂತಕನೊಬ್ಬನ ಸಲಹೆಯನ್ನು ಕೇಳಿದನು ಆತನು ಈಕೆಯ ಅಭಿಪ್ರಾಯವನ್ನು ಪುರಸ್ಕರಿಸಿದ್ದರಿಂದ ಇಬ್ಬರೂ ಕೊಲ್ಹಾಪುರಕ್ಕೆ ಓಡಿದರು ತಾವು ಕೈಕೊಂಡ ಈ ಕಾರ್ಯವು ಉತ್ತಮವಾಗಿದ್ದರೂ ಅತ್ಯಂತ ಭಯಾನಕವೂ ಇತರರ ಮನಸ್ಸನ್ನು ಕ್ಷೋಭೆಗೊಳಿಸುವ ರೀತಿಯದಿರುವುದೆಂದು ಅವರು ಮನಗಂಡಿದ್ದರು.

ಪ್ರಥಮ ಬಾರಿಯಾಗಿ ಆಕೆಯು "ಸಮಾಜದ ಅನಾಥರ" ಎಂಬ ಚಿತ್ರದಲ್ಲಿ ಭಾಗವಹಿಸಿದಳು ಆಗ ಅವಳಿಗೆ ಸಿನೇಮಾ ಅಭಿನಯಗಾರರ ಜೀವನವು ಎಷ್ಟು ತ್ರಾಸದಾಯಕವೆಂದು ತಿಳಿಯಿತು ಪ್ರಥಮ ಚಿತ್ರವು ಸಮಾಪ್ತಿಯಾಗಲು ೧೫ ತಿಂಗಳ ಕಾಲವು ಹಿಡಿಯಿತು ಈ ಸಮಯವು ಆರಂಭಿಗಳಾದ ಇವರಿಗೆ ಉಗ್ರವಾದ ಪರೀಕ್ಷೆಯಾಗಿ ಪರಿಣಮಿಸಿತು. ಆದರೆ ಇದರಿಂದ ಅವಳ ಚಲಚ್ಚಿತ್ರ ನಟನೆಯ ಭ್ರಮೆಯು ಪರಿಹಾರವಾಗಲಿಲ್ಲ ಯಾವ ಆತಂಕಗಳೂ ಅವಳನ್ನು ಸಿನೇಮಾ ಜೀವನದ ಚೇಷ್ಟೆಯನ್ನು ನಾಶಮಾಡಲಿಲ್ಲ.

ತನ್ನೊಡನೆ ಪರಾರಿಯಾಗಿ ಕೊಲ್ಹಾಪುರಕ್ಕೆ ಬಂದ ತರುಣನನ್ನೆ ಮದುವೆಯಾಗಿ ಬೊಂಬಾಯಿಗೆ ಬಂದಳು. ಎರಡನೇ ಬಾರಿಯಾಗಿ "ಗೇ ಬರ್ಡ್ಸ್" ಎಂಬ ಚಿತ್ರದಲ್ಲಿ ಉತ್ತಮವಾಗಿ ಅಭಿನಯಿಸಿದಳು. ಈ ಚಲಚ್ಚಿತ್ರವು ಮಾನ್ಯ ಕೆ. ಎಮ್. ಮುನ್ಶಿಯವರ ಕಥೆಯನ್ನಾಧರಿಸಿ ಚಿತ್ರಿಸಲ್ಪಟ್ಟಿತು. ಇದರ ಅಭಿನಯವು ಇವಳಿಗೊಂದು ದೊಡ್ಡ ವಿಜಯವನ್ನು ಸಂಪಾದಿಸಿತು. ನಂತರ 'ಕೋಕಿಲಾ' ಎಂಬ ಚಿತ್ರದಲ್ಲಿ ಅಭಿನಯಿಸಿದಳು.

ತದನಂತರ ಜನರಲ್ ಫಿಲ್ಮ್ಸ್ ಕಂಪೆನಿಯನ್ನು ಸೇರಿ "ಇಂಡಸ್ಟ್ರಿಯಲ್ ಇಂಡಿಯಾ" ಎಂಬ ಚಿತ್ರದಲ್ಲಿ ಅಭಿನಯಿಸಿದಳು. ಇದರಲ್ಲಿನ ಅವಳ ಅಭಿನಯವು ಪ್ರಸಂಶನೀಯವಿರುವುದು. ಇನ್ನೊಂದು ಅವಳ ಚಿರಸ್ಮರಣೀಯವಾದ ಚಿತ್ರವೆಂದರೆ "ಪತಿ ಪತ್ನಿ." ಇದರಲ್ಲಿ ನಾಗರೀಕ ಸೌಂದರ್ಯವತಿಯಾದ ಹಿಂದು ವಿಧವೆಯ ಭೂಮಿಕೆಯನ್ನು ಧರಿಸಿ ಹಿಂದೂ ಸಮಾಜದಿಂದ ಉಂಟಾಗುವ ಯಾವತ್ತೂ ವಿಪತ್ತುಗಳನ್ನು ಧೈರ್ಯದಿಂದ ಇದಿರಿಸುವಳು ಈ ಭೂಮಿಕೆಯನ್ನು ಧರಿಸಿ ಸಮಾಜದಿಂದ ಬಾಲ ಹಿಂದೂ ವಿಧವೆಯರಿಗಾಗುವ ವಿಪತ್ತುಗಳನ್ನು ಮರ್ಮಧಾಯಕವಾಗಿ ಚಿತ್ರಿಸಿರುವರು. ಚಿತ್ರವನ್ನು ನೋಡಲು ಬಂದ ಇಡೀ ಜನತೆಯನ್ನು ಅಳಿಸಿರುವರು ಅವಳ ಇತ್ತೀಚಿನ ಚಿತ್ರವು "ಸಾಧನಾ" ಎಂಬುದು ಇದರಲ್ಲಿ ಹಳ್ಳಿಯ ಹುಡುಗಿ ಪಾತ್ರದಲ್ಲಿ ಅಭಿನಯಿಸಿರುವಳು. ಈಗ ಅವಳು ಹಿಂದೂಸ್ತಾನ ಸಿನೆಟೋನಿನವರ 'ಕಾನ್ ಕಿಸಿಕ' ಮತ್ತು 'ಮಾಡ್' ಎಂಬ ಚಿತ್ರಗಳಲ್ಲಿ ಕೆಲಸಮಾಡುತ್ತಿರುವರು

ಸ್ವಲ್ಪ ಸಮಯದ ಹಿಂದೆ ಆಕೆಯು ಒಂದೇ ಬಾರಿ ಮೂರು ಚಿತ್ರಗಳಲ್ಲಿ ಅಭಿನಯಿಸಿರುವಳು. ಬೆಳಗ್ಗೆ ಗಂಟೆ ೯ರಿಂದ ಸಾಯಂಕಾಲದ ತನಕ ಸ್ಟುಡಿಯೊಗಳಿಂದ ಸ್ಟುಡಿಯೊಗೆ ಅಭಿನಯಕ್ಕಾಗಿ ತೆರಳುತ್ತಿದ್ದಳು. ತನ್ನ ವೃತ್ತಿಯಲ್ಲಿ ಇಷ್ಟು ಸಮಯವನ್ನು ಕಳೆದರೂ ತನ್ನ ಮೂರು ವರ್ಷದ ಮಗುವಿಗೆ ಪಾಠವನ್ನು ಹೇಳಿಕೊಟ್ಟು ಮನೆಯನ್ನು ಆದರ್ಶ ರೀತಿಯಲ್ಲಿ ನಡೆಸುತ್ತಿರುವಳು ತನ್ನ ಆರೋಗ್ಯವನ್ನು ಕಾಪಾಡಲೂ ಪ್ರತೀ ದಿನವೂ ವ್ಯಾಯಾಮ ಮಾಡುತ್ತಿರುವಳು.

ನಾಟ್ಯ, ಈಜಾಡುವಿಕೆ ಮೊದಲಾದವುಗಳಲ್ಲಿ ಇವಳಿಗೆ ಬಹಳ ಮೆಚ್ಚುಗೆ ಕೇವಲ ಸೌಂದರ್ಯವೊಂದೇ ಸಿನೇಮಾ ನಟರನ್ನು ಉಚ್ಚ ಶ್ರೇಣಿಯ ನಟಿಯರನ್ನಾಗಿ ಮಾಡುವುದಿಲ್ಲವೆಂದೇ ಶೋಭನ ಸಮರ್ಥಳು ಅಭಿಪ್ರಾಯ.

THE

Bank of Mangalore Ltd.,

MANGALORE.

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted.

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ ಎಲ್ಲರ ರುಚಿಗೆ ತಕ್ಕದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧ ಸಾರಥಿ ನಸ್ಯ 1 ಪೀಸಕ್ಕೆ ರೂ 3-9-0 ನವೀನ ಮಾರ್ಕು ಸಾರಥಿ ನಸ್ಯ 1 ಪೀಸಕ್ಕೆ ರೂ. 3 0 0

(ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ —

ಎ. ಪಿ. ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸ

ಸರದಾರ ಭವನ Sirdar Bhavan

ಫೆಲಿಕ್ಸ್‌ಪೈ ಬಜಾರ್—ಮಂಗಳೂರು.

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ.

Propriter— H. R. Rao,

Bangalore Guit Emporuim Madras

ವಿಜ್ಞಾನ ಯುಗ

ಸಂತಾನ ನಿರೋಧ

ಈಗ ಸಂತಾನ ನಿರೋಧ, ಲೈಂಗಿಕಜ್ಞಾನ ಕ್ಷಣಿಕವಿವಾಹಗಳು ಎಲ್ಲೆಲ್ಲಿಯೂ ತೀವ್ರ ಪ್ರಚಾರವಾಗಿವೆ. ಲಿವರ್‌ಪೂಲಿನಲ್ಲಿ ನೆರೆದ ಮೆಥೆಡಿಸ್ಟ್ ಕಾನ್ಫರೆನ್ಸಿನಲ್ಲಿ ಈ ಮೂರು ವಿಷಯಗಳೂ ಸರಿಯೆಂದು ತಿಳಿಸಲಾಗಿದೆ.

ತಮ್ಮ ನಿಜವಾದ ಕಾರಣಗಳಾಗಲಿ, ಯಾವುದೇ ಧರ್ಮವಾಗಲಿ, ಅನಾವಶ್ಯಕವಾಗಿ, ಅಪ್ರಬುದ್ಧವನಿ, ಇರುವ ಮಕ್ಕಳನ್ನು ಹೆರುವುದು ತಪ್ಪೆಂದು ಸಾರಿದೆ ಇಲ್ಲ. ಈ ಮಕ್ಕಳನ್ನು ಪಡೆಯುವುದು, ಐಚ್ಛಿಕವಲ್ಲದ ನಿಷಯವೆಂದೂ, ಪ್ರೇಮದ ಫಲವೆಂದು ಹೇಳುವುದು ಸರಿಯಲ್ಲ; ಏಕೆಂದರೆ, ನಿಜವಾದ ಪ್ರೇಮವೆಂಬುದು ಪತಿ ಪತ್ನಿಯರಲ್ಲಿ ಸ್ವರ್ಗೀಯ ಸುಂದರವಾಗಿ ಇರಲು ಸಾಧ್ಯವೇ ಎಂಬುದೂ ವೈಜ್ಞಾನಿಕರ ಊಹನೆಗೆ ಅನಿಶ್ಚಿತವಾಗಿಯೇ ಉಳಿದಿದೆ

ಹೀಗಿರುವಾಗ ಮಾನವ ದಂಪತಿಗಳು ಅಜಾಗ್ರತೆಯಿಂದ, ಅವಿಚಾರದಿಂದ ಹೆಚ್ಚು ಮಕ್ಕಳನ್ನು ಹುಟ್ಟಿಸುವುದರಿಂದ, ಸಾಮಾಜಿಕ ಸೌಕರ್ಯಕ್ಕೆ ಹಾನಿಯಾಗುವುದು ಮಾತ್ರವಲ್ಲದೆ, ಅದರಿಂದ ಸೃಷ್ಟಿ ಸೌಖ್ಯವೇ ಕೆಡುವಂತಾಗುವುದು.

ಹೀಗೆ ಕ್ಷಣಿಕ ವಿವಾಹಕ್ಕೂ ಸಂತಾನ ನಿರೋಧಕ್ಕೂ ವಿರುದ್ಧವಾಗಿ ಯಾವ ಮತ ಧರ್ಮಗಳಾಗಲಿ ಏನನ್ನೂ ಹೇಳುವುದಿಲ್ಲ. ನಿಜವಾಗಿಯೂ ಇದರಿಂದ ಜಗತ್ತಿನಲ್ಲಿ ಆರೋಗ್ಯ ರಕ್ಷಣೆಯು ಅಭಿವೃದ್ಧಿ ಹೊಂದುವುದು.

ಲೈಂಗಿಕ ಜ್ಞಾನವಿಲ್ಲದೆ ಇರುವುದರಿಂದಲೇ ಹೆಣ್ಣು ಗಂಡು ನಿಜವಾದ ಸುಖವನ್ನು ಪಡೆಯುವುದಿಲ್ಲ. ಜೀವನದ ಪೂರ್ಣ ಸೌಖ್ಯಾನುಭವವನ್ನು ಪಡೆಯಲು, ಯಾವ ತೆರದ ಹಾನಿಗಳನ್ನೂ ಇಲ್ಲದೆ ಮಾಡಲು, ಸಂಸಾರದಲ್ಲಿ ಸೌಂದರ್ಯವನ್ನು ಸವಿಯಲು ಇದು ಅತ್ಯಾವಶ್ಯಕವಾದ ಜ್ಞಾನವಾಗಿದೆ. ಹೆಣ್ಣು ಗಂಡುಗಳಿಗೆ ಉಚಿತ ಪ್ರಾಯದಲ್ಲಿ ಈ ಕುರಿತು ಬೋಧಿಸುವುದು ಮಹತ್ವದ್ದಾಗಿದೆ! ಹೀಗೆಂದು ಅವರ ಅಭಿಪ್ರಾಯ.

ಶಿಶುಗಳಿಗೆ ಆಹಾರವಿಲ್ಲ!

ಬ್ರಿಟಿಷ್ ವಸಾಹತ್ತುಗಳಲ್ಲಿ ಇಂದು ಜನಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಲಕ್ಷಣದಿಂದ, ಅಲ್ಲಿ ಅದಕ್ಕೆ ಬೇಕಾದ ಪೌಷ್ಟಿಕ ಆಹಾರದ ಉತ್ಪತ್ತಿ ಇಲ್ಲದಿರುವುದರಿಂದಲೂ, ಜನತೆಯು ರೋಗರುಜಿನೆಗಳಿಗೆ ತುತ್ತಾಗುತ್ತಿವೆಯೆಂದು ಆರ್ಥಿಕ ಹಿತಸೂಚಕ ಸಮಿತಿಯವರು ಪ್ರಕಟಿಸಿರುತ್ತಾರೆ!

ಎಲ್ಲದಕ್ಕಿಂತಲೂ ಹೀಗೆ ಆರೋಗ್ಯವಿಲ್ಲದೆ ಕ್ಷೀಣ ದೆಶೆಯನ್ನು ಹೊಂದುವುದರ ಪ್ರಾಮುಖ್ಯ ಲಕ್ಷಣವೆಂದರೆ ಸಾಕಷ್ಟು ಆದಾಯವಿಲ್ಲದಿರುವುದೇ!

ಇದರಿಂದ ಜನರು ಆರೋಗ್ಯಹೀನರಾಗಿರುವುದು ಮಾತ್ರವಲ್ಲ, ರೋಗಗಳ ದಾಳಿಗೆ ಬೇಗನೇ ಬಲಿಬಿದ್ದು, ರೋಗಗಳನ್ನು ತಡೆವ ಶಕ್ತಿಯಿಲ್ಲವೆ, ದಿನದಿಂದ ದಿನಕ್ಕೆ ಅಲ್ಲಿನ ಆರ್ಥಿಕ ಔದ್ಯೋಗಿಕ, ಬೇಸಾಯವೇ ಮೊದಲಾದ ಎಲ್ಲಾ ದಿನನಿತ್ಯದ ಜೀವನೋಪಾಯಗಳೂ ಅತ್ಯಂತ ಕ್ಷೀಣಸ್ಥಿತಿಗೆ ಇಳಿದಿವೆ!

ನಗರಗಳಲ್ಲಿ ಹೆಚ್ಚು ಕಷ್ಟ!

ಹಳ್ಳಿಯ ಜನರಲ್ಲಿಯಾದರೂ ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳುವವರೂ, ನೈಸರ್ಗಿಕ ಆಹಾರದಿಂದ ಪರಿಪುಷ್ಟರಾಗುವವರೂ ಕುಂಬಾ ಜನರು ಇದ್ದಾರೆ. ಆದರೆ ನಗರಗಳಲ್ಲಿ ಇರುವುದು ಅತ್ಯಂತ ಅಪರೂಪ!

ಸಂಬಳ ಕಡಿಮೆ

ಅವರಿಗೆ ಕೊಡುವ ಸಂಬಳವು ಜೀವನ ಮಾರ್ಗಕ್ಕೆ ಸಾಕಾಗದೆ ಇರುತ್ತದೆ! ಸಂಸಾರ ಹೆಂಡತಿ, ಅಸಂಖ್ಯ ಮಕ್ಕಳು ಇವುಗಳಿದ್ದಲ್ಲಿ ಕೇಳುವುದೇ ಬೇಡ!

ಬರಬೋಡೋಸಿನಲ್ಲಿ ಅವರಿಗೆ ಕೊಡುವ ಸಂಬಳದಿಂದ ವಾರಕ್ಕೆ ಎರಡು ದಿನ ಅವರು ತಮ್ಮ ಮಕ್ಕಳನ್ನೂ ಉಪವಾಸ ಹಾಕಬೇಕಾಗುತ್ತದಂತೆ!

ಹಾಗಾದುದರಿಂದ ಸಂತಾನ ನಿರೋಧವು ಇದರ ಪರಿಹಾರವಾಗದೆ ಇರದು!

ಪಾರ್ಸಿಗಳ ಧರ್ಮವು ಮದ್ಯ ಪಾನವನ್ನು ಒಪ್ಪುತ್ತದೆಯೇ?

ಬೊಂಬಯಿ ಕಾಂಗ್ರೆಸ್ ಸರಕಾರದ ಮದ್ಯ ಪಾನ ನಿಷೇಧದ ಕುರಿತು ನಿಷೇಧಿಸಿ ಬೊಂಬಯಿಯ ಕೆಲಜನ ಪಾರ್ಸಿಗಳು-ತಮ್ಮ ಪತ್ರಿಕೆಗಳಲ್ಲಿ ಬರೆಯುತ್ತಿದ್ದಾರೆ! ಆದರೆ ಪಾರ್ಸಿಗಳ ಮಹಾ ಗ್ರಂಥವಾದ ಗಾಥಾದಲ್ಲಿ ಇರಾನಿನ ಮಹಾಪುರುಷನು ಏನೆಂದು ಬರೆದಿರುವನು? ಈ ಕುರಿತು ಮಿ। ಎಫ್. ಜೆ. ಗಿನ್ವಾಲಾರವರು ಪ್ರಬುದ್ಧ ಭಾರತದಲ್ಲಿ ಈ ಕೆಳಗಿನಂತೆ ಬರೆಯುತ್ತಾರೆ.—

ಗಾಥಾಗ್ರಂಥವು ಜಗತ್ತಿನ ಎಲ್ಲಾ ಪ್ರಾಮುಖ್ಯ ಗ್ರಂಥರಾಶಿಯಲ್ಲಿ ಹೆಚ್ಚು ಪ್ರಾಧಾನ್ಯತೆಯನ್ನು ಹೊಂದತಕ್ಕದಾಗಿರುತ್ತದೆ! ಏಕೆಂದರೆ, ಇತರ ಎಲ್ಲಾ ಎಲ್ಲಾ ಧಾರ್ಮಿಕ ಮಹಾಪುರುಷರ ಗ್ರಂಥಗಳಲ್ಲಿಯೂ, ಹಲವು ಸಂಭವಿಸಲು ಸಾಧ್ಯವಿಲ್ಲದಿರುವ ಮಾತುಗಳ ವರ್ಣನೆಗಳಿವೆ.

ಗ್ರಾಮಗಳಲ್ಲಿ ವೈದ್ಯಕೀಯ ಸಹಾಯ

ಪಂಜಾಬ್ ಸರಕಾರದ ಯೋಜನೆ

ಪಂಜಾಬ್ ಸರಕಾರದ ವೈದ್ಯಕೀಯ ಡಿಪಾರ್ಟುಮೆಂಟಿನವರು ಹಳ್ಳಿಯ ಜನರಿಗೆ ಯೋಗ್ಯ ವೈದ್ಯಕೀಯ ಸಹಾಯವು ಒದಗಿಸುವ ಉತ್ತಮ ಯೋಜನೆಯೊಂದನ್ನು ಮಾಡಿದ್ದಾರೆ.

ಒಂದು ಹಳ್ಳಿಯ ನೂರಿನಷ್ಟರು ಮನೆಗಳ ಗುಂಪಿನ ಜನರು ಕೂಡಿ ಒಂದು ವೈದ್ಯಕೀಯ ಸಂಘವನ್ನು ಸ್ಥಾಪಿಸಬೇಕು ಸರಕಾರದವರು ಅಲ್ಲಿಗೆ ಒಬ್ಬ ತರಬೇತಿಹೊಂದಿದ ಡಾಕ್ಟರರನ್ನು ಕಳುಹಿಸುವರು. ಅದರಲ್ಲಿ ನೇಕಡಾ ಐಂಬತ್ತರಷ್ಟು ಸಹಾಯ ದ್ರವ್ಯವನ್ನು ಸರಕಾರವು ಕೊಡುವುದು ನೇಕಡಾ ೨೫ರಷ್ಟು ಅಲ್ಲಿನ ಜಿಲ್ಲಾ ಬೋರ್ಡು ತೆರಬೇಕು. ಬಾಕಿ ನೇಕಡಾ-ಇಪ್ಪತ್ತೈದರಷ್ಟು ಹಳ್ಳಿಯ ವೈದ್ಯಕೀಯ ಸಂಘವು ಭರ್ತಿ ಮಾಡಬೇಕು

ಹೀಗೆ ಹಳ್ಳಿಗಳಲ್ಲಿ ಧರ್ಮಾರ್ಥ ಔಷಧಿ ಪ್ರಯೋಗವು ಕೊಡಲಾಗುವುದು. ಈ ವರ್ಷದಲ್ಲಿಯೇ ೫೦ಕಡೆ ೮೦ ಕೇಂದ್ರಗಳನ್ನು ಸ್ಥಾಪಿಸಲು ಸರಕಾರವು ನಿಶ್ಚಯಮಾಡಿದೆ ಯಾವ ಹಳ್ಳಿಯಲ್ಲಿ ಹೀಗೆ ಸಂಘ ಮಾಡಿ, ಯಾವ ಡಿ। ಬೋರ್ಡು ತಮ್ಮ ಸಹಾಯ ದ್ರವ್ಯವನ್ನು ತೆರಲು ತಯಾರಿದೆಯೋ ಆ ಗ್ರಾಮದಲ್ಲಿ ಸರಕಾರದವರು ತಮ್ಮ ಯೋಜನೆಯನ್ನು ಪ್ರಾರಂಭಿಸುವರು

ಉಕ್ಕಿನ ಶ್ವಾಸಕೋಶಗಳು

ಹಲವು ಅಪಾಯಕರವಾದ ಸನ್ನಿವೇಶಗಳಲ್ಲಿ ಉಸಿರಾಡಲು ಉಂಟಾಗುವ ಅಡ್ಡಚಣೆಯನ್ನೀಗಲು ಲಾರ್ಡ್ ನಫೀಲ್ಡರು ಭಾರತದ ಆರು ಆಸ್ಪತ್ರೆಗಳಿಗೆ ಉಕ್ಕಿನ ಶ್ವಾಸಕೋಶಗಳನ್ನು ದಾನಮಾಡಿರುವರು ಅಂಡಮಾನ, ನವದೆಹಲಿ, ಕೈಟಾ ಮುಂತಾದ ಕಡೆಯ ಆಸ್ಪತ್ರೆಗಳಲ್ಲಿ ಈ ಉಕ್ಕಿನ ಶ್ವಾಸಕೋಶಗಳು ಸ್ಥಾಪಿಸಲ್ಪಡುತ್ತವೆ

ಬ್ರಿಟನಿನ ಯುದ್ಧಸಿದ್ಧತೆ ಸೈನಿಕರು, ಮಳೆಯಲ್ಲಿ ವ್ಯಾಯಾಮ ಪ್ರದರ್ಶನ ನಡೆಸಿ ಶಿಬಿರಕ್ಕೆ ತೆರಳುವರು

ಹುಟ್ಟುವ ಮಗು ಗಂಡೋ ಹೆಣ್ಣೋ ತಿಳಿಯಿತು

ಹೋಲೆಂಡಿನ ರಾಜಕುಮಾರಿ ಜುಲಿಯಾನಾ ತನ್ನ ವಿವಾಹ ಮಾಂಗಲ್ಯವಾದ ಉಂಗುರದ ಮೂಲಕ ತನ್ನ ಹೊಟ್ಟೆಯಲ್ಲಿರುವ ಮಗುವು ಗಂಡೋ ಹೆಣ್ಣೋ ಎಂದು ಮೊದಲೇ ತಿಳಿದಳು!

ಹೋಲೆಂಡಿನಲ್ಲಿ ಇದೊಂದು ಹಳೆಯ ಆಚಾರ! ಒಂದು ಸಪೂರ ನೂಲಿನಿಂದ ಉಂಗುರವನ್ನು ಗರ್ಭಿಣಿಯ ಮುಖದ ಬಳಿ ಹಿಡಿದು ತೂಗಾಡಿಸಬೇಕು! ಅದು ಸುತ್ತಾಗಿ ತಿರುಗಿದರೆ ಹೆಣ್ಣು ಮಗು ಹುಟ್ಟುವುದು, ಅದು ಆಚೀಚೆಗೆ ವಾಲಿದರೆ ಗಂಡು ಮಗು ಹುಟ್ಟುವುದು

ರಾಜ ಕುಮಾರಿ ಜುಲಿಯಾನಳ ಉಂಗುರವು ಸುತ್ತಾಗಿ ತಿರುಗಿತಂತೆ! ಭವಿಷ್ಯವು ಇಂದು ಸತ್ಯವಾಗಿದೆ! ಆಕೆ ಹೆಣ್ಣು ಕೂಸನ್ನು ಪಡೆದಿದ್ದಾಳೆ!

ಹಿಮ ಸಮಾಧಿಯಲ್ಲಿ!

ನ್ಯೂಯಾರ್ಕಿನ ಒಂದು ಸಂತೆಯಲ್ಲಿ ಈ ಸಾಹಸದ ಕಾರ್ಯವೊಂದು ನಡೆಯಿತು ಹುಡುಗಿಯರನ್ನು ಹಿಮದ ಚಟ್ಟದಲ್ಲಿ ದಿಗಂಬರರಾಗಿ ಮಲಗಿಸುವುದು. ಅವರಿಗೆ ಎಷ್ಟು ಕಾಲದ ವರೆಗೆ ಅದರಲ್ಲಿ ಮಲಗಿರಲು ಆಗುತ್ತದೆಯೆಂಬುದು ಸ್ಪರ್ಧೆ! ಎಸಿಟಾ ಎಂಬವಳು ೨೧ ಮಿನಿಟುಗಳ ವರೆಗೆ ಹಿಮ ಸಮಾಧಿಯಲ್ಲಿ ಮಲಗಿ ಜನರನ್ನು ಬೆರಗುಗೊಳಿಸಿದಳು

ಕೃತ್ರಿಮ ರಬ್ಬರು

ಕೃತ್ರಿಮ ರಬ್ಬರು ಇಂದು ಜರ್ಮನಿಯಲ್ಲಿ ಬಹಳವಾಗಿ ಆಗುತ್ತದೆ! ಪ್ರಾಕೃತಿಕವಾದ ರಬ್ಬರಿನ ಬೆಲೆಗಿಂತ ಇದು ನಾಲ್ಕುಪಾಲು ಮೌಲ್ಯವುಳ್ಳದ್ದು, ಆದರೆ ಬಹಳ ಸಮಯಗಳ ಬಾಳುವಿಕೆಯುಂಟು; ಒಂದು ವರ್ಷದೊಳಗೆ ಈ ರಬ್ಬರು ಸಂತೆಗಳಲ್ಲಿ ಮಾರಾಟಕ್ಕೆ ಸಿದ್ಧವಾಗುವುದಾಗಿ ತಿಳಿದಿದೆ.

ಶುದ್ಧ ಮತ್ತು ಸರಲ ಧರ್ಮ!

ಪಾರ್ಸಿಗಳ ಮೂಲ ಪುರುಷ ಜರತುಷ್ಟ್ರ, ಈ ಧರ್ಮವು ಶುದ್ಧ ಮತ್ತು ಸರಲತೆಯಲ್ಲಿಯೂ ಇತರ ಧರ್ಮಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದತಕ್ಕದ್ದಾಗಿರುತ್ತದೆ! ಹಲವು ಧರ್ಮಗಳಲ್ಲಿರುವ ಪ್ರಾಣಿವಧೆ ಮತ್ತು ಮದ್ಯಪಾನಗಳನ್ನು ಕೇವಲ ಅಧಾರ್ಮಿಕವೆಂದು ಜರುತುಷ್ಟನು ಹೇಳುತ್ತಾನೆ, ಅವನು ಹೇಳುತ್ತಾನೆ.—'ಯಾವನು ಸಂತೋಷ ಅಟ್ಟಹಾಸ ಮಾಡಿ ದನವನ್ನು ಬಲಿಕೊಡಲು ಕೊಂಡುಹೋಗುತ್ತಾನೋ ಅವನು ಪಾಪಿಯು 'ಯಾವಾಗ ತಾನೇ ಜಗದ ಕುಲೀನ ಮಾನವ ವಂಶವು ಒಳ್ಳೆಯ ನಡತೆಯಿಂದ ಬಾಳುವುದು? ಯಾವಾಗ ಅವರ ಮನಸ್ಸಿನಿಂದ ಕುಡಿತತನದ ದುರಭ್ಯಾಸವು ಮಾಯವಾಗುವುದು?''

ಶುದ್ಧ ಧಾರ್ಮಿಕ

''ಕವೀಂದ್ರ ರವೀಂದ್ರರು 'ಇರಾಣಿಯನ್ ಚರಿತ್ರೆಯ ಬಹಳ ಪ್ರಾಮುಖ್ಯ ವಿಷಯವೆಂದರೆ, ಜರುತುಷ್ಟನು ಮಾಡಿದ ಸುಧಾರಣೆಯು, ಮೊಟ್ಟ ಮೊದಲಾಗಿ ಮಾನವನ ಆಚರಣೆಯು ನೀತಿಯ ನೆಲಗಟ್ಟಿನಲ್ಲಿರಬೇಕೆಂದು ಹೇಳಿದವನು ಅವನೇ!'' ಹೀಗೆಂದು ಹೇಳಿದ್ದಾರೆ

ಹಿಂದಿನ ಸನಾತನೀ ಪರ್ಷಿಯರು, ಯಾಗಕ್ಕಾಗಿ ಪಶುವಧೆ ಮಾಡುತ್ತಾ ದೇವರಿಗೆ ಹೋಮಗಳನ್ನು ಮಾಡುತ್ತಿದ್ದರು ಜರುತುಷ್ಟನು ಅವುಗಳನ್ನೆಲ್ಲಾ ಪಾಪಕರ್ಮಗಳೆಂದು ಜರಿದನು! ಇದರಿಂದ ಆಧಾರ್ಮಿಕ ಮಹಾಪುರುಷನ ಧೈರ್ಯವು ಮಾತ್ರ ಸ್ಪಷ್ಟವಾಗುವುದಲ್ಲ, ಆತನು ಮಹಾ ವಿಭೂತಿಗಳಲ್ಲಿ ಅಗ್ರಗಣ್ಯನೆಂದೂ ತಿಳಿಯಬೇಕಾಗಿದೆ

ಯಾವ ಧರ್ಮವೂ ಯಾವ ಮತವೂ, ಯವನ ಜಾತಿಯೂ ಹಿಂಸೆಯ ನಿಷ್ಠುರತೆಯನ್ನು ಮುಚ್ಚಿಡಿಸದೆ ಇಲ್ಲ!''



ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ಜರ್ಮನಿಯು ಜಗತ್ತನ್ನೇ ಬೆದರಿಸಲು ತೊಡಗಿದೆ!

ಶಾಂತಿಯು ಒಂದು ಪ್ರಹಸನ! ★ ಹಂಗೇರಿಯವು ಸಂಕಷ್ಟದಲ್ಲಿದೆ!

ಬ್ರಿಟನು-ಜಪಾನು ಮಾತುಕತೆ

ಬ್ರಿಟನು ಜಪಾನಿನೊಡನೆ ಚರ್ಚಿಸಲು ಇಷ್ಟಪಡುವುದಿಲ್ಲ

ಮೂರನೆಯವರು ತೀರ್ಮಾನಮಾಡಲಿ

ಚೈನದ ಬೆಳ್ಳಿ ಮತ್ತು ರಾಷ್ಟ್ರೀಯ ಹಣದ ಚಲಾವಣೆಯ ವಿಷಯದಲ್ಲಿ, ಆಂಗ್ಲ–ಜಪಾನುಗಳ ಪ್ರತಿನಿಧಿಗಳು ಎಷ್ಟು ಚರ್ಚಿಸಿದರೂ ಒಂದು ಯೋಗ್ಯವಾದ ತೀರ್ಮಾನವು ಆಗಲಾರದೆಂದೂ, ಈ ವಿಷಯದಲ್ಲಿ ಯಾವುದಾದರೂ ಇತರ ರಾಷ್ಟ್ರದ ತೀರ್ಮಾನವನ್ನು ಮಾಡಲು ಒಪ್ಪಬೇಕೆಂದೂ ಬ್ರಿಟಿಷ್ ಸರಕಾರವು ಜಪಾನು ಸರಕಾರಕ್ಕೆ ತಿಳಿಸಿದೆ.

ಚೈನದ ಇಂದಿನ ಸ್ಥಿತಿಯ ಕುರಿತು ಈ ವಿಷಯದ ಚರ್ಚೆಯು ಪ್ರಧಾನವೆಂದು ಬ್ರಿಟಿಷ್ ಸರಕಾರವು ಅಭಿಪ್ರಾಯಪಡುತ್ತದೆ. ಆದರೆ, ಈ ವಿಷಯದಲ್ಲಿ ಎಲ್ಲಾ ರಾಷ್ಟ್ರಗಳೂ ತಮ್ಮ ಯೋಗ್ಯ ಸೂಚನೆಯನ್ನು ಕೊಡಲು ಸಂದರ್ಭವನ್ನು ಒದಗಿಸಬೇಕಾಗಿ ಬ್ರಿಟಿಷ್ ಸರಕಾರದ ಅಪೇಕ್ಷೆಯಾಗಿದೆ!

ಟೋಕಿಯೋದಲ್ಲಿ ಆಂಗ್ಲ ಜಪಾನು ರಾಯಭಾರಿಗಳೊಳಗೆ ಈ ಕುರಿತು ಚರ್ಚೆ ಮಾಡಲು ಭೇಟಿಯಾಯಿತು. ಜಪಾನು ಸರಕಾರವು ಬ್ರಿಟಿಷ್ ಸರಕಾರವನ್ನು ಈ ಮಾತುಕತೆಯನ್ನು ಆದಷ್ಟು ಬೇಗ ಇತ್ಯರ್ಥಿಸಿ ಬಿಡಬೇಕಾಗಿ ಒತ್ತಾಯಪಡಿಸುತ್ತದೆ!

ಫ್ರೆಂಚ್ ಸರಕಾರದ ಸಹಾಯ

ಚೈನದ ಹಣ ಚಲಾವಣೆಯ ಕುರಿತು ಬ್ರಿಟಿಷ್ ಸರಕಾರವು ಮಾಡಿದ ಪ್ರಕಟಣೆಯನ್ನು ಫ್ರೆಂಚ್ ಸರಕಾರವು ಸಂಪೂರ್ಣ ಒಪ್ಪುತ್ತದೆ. ಮಾತ್ರವಲ್ಲದೆ, ಟೋಕಿಯೋದಲ್ಲಿರುವ ತಮ್ಮ ಪ್ರತಿನಿಧಿಯ ಮೂಲಕ ಇಂತಹ ವಿಷಯದಲ್ಲಿ, ಈ ಕುರಿತು ಆಗ್ರಹವುಳ್ಳ ಎಲ್ಲಾ ರಾಷ್ಟ್ರಗಳೂ ಚರ್ಚೆಮಾಡಲು ಸಂದರ್ಭ ಕೊಡಬೇಕೆಂದೂ ತಿಳಿಸಿದೆ.

ಅಮೇರಿಕವು ಸಮ್ಮತಿಸಿದೆ

ಟ್ಯೆನ್‌ಸ್ಟೆನಿನ ಹಣದ ಚಲಾವಣೆಯ ಕುರಿತು ಬ್ರಿಟಿಷರು ಪ್ರಕಟಿಸಿದ ಹೇಳಿಕೆಯನ್ನು ಸಂಯುಕ್ತ ಅಮೇರಿಕದ ಸರಕಾರವು ಸಂಪೂರ್ಣ ಅನುಮೋದಿಸಿದೆ.

ಬ್ರಿಟಿಷ್ ಪತ್ರಿಕೆಗಳು ಬ್ರಿಟನಿನ ಈ ಖಂಡಿತ ಧೋರಣೆಯನ್ನು ಪ್ರಶಂಸಿಸುತ್ತವೆ

ಜರ್ಮನಿಯು ಜಗತ್ತನ್ನೇ ಬೆದರಿಸುತ್ತದೆ!

ಬ್ರಿಟಿಷರ ಧೋರಣೆಯ ದೂಷಣೆ

ಹೆರ್ ವಾನ್‌ರೊಬಿನ್ ಟ್ರಾಪನು ಜರ್ಮನಿಯ ಪತ್ರಿಕೆಯೊಂದರಲ್ಲಿ ಬರೆಯುತ್ತಾ, ಜರ್ಮನಿಯ ಧೋರಣೆಯನ್ನು ವಿವರಿಸಿ, ವಿಶೇಷವಾಗಿ ಪೋಲೆಂಡು ಮತ್ತು ಗ್ರೇಟ್ ಬ್ರಿಟನುಗಳನ್ನೂ, ಆ ಮೇಲೆ ಒಟ್ಟಿನಿಂದ ಇಡೀ ಜಗತ್ತನ್ನೇ ತಮ್ಮ ಧ್ಯೇಯ ಮತ್ತು ಧೋರಣೆಗಳ ವಿಷಯ ವಿಚಾರಿಸಿಕೊಳ್ಳತಕ್ಕದೆಂದು ಬೆದರಿಕೆಯ ಪ್ರಕಟಣೆಯೊಂದನ್ನು ಹೊರಡಿಸಿರುತ್ತಾನೆ.

ಲೇಖನದಲ್ಲಿ ಹೀಗೆಂದು ಬರೆಯಲಾಗಿದೆ—

"ಜಗತ್ತು ಇಟಲಿ–ಜರ್ಮನಿಗಳ ಸಂಯುಕ್ತ ರಾಜಕೀಯ ಧೋರಣೆಯನ್ನು, ಅದರ ಫಲದ ರೂಪದಿಂದ ಆಲೋಚಿಸಬೇಕು. ಅವುಗಳು ಕೇಳುವ ಕೇಳಿಕೆಗಳು ಅವರಿಗೆ ಕೊಡಲು ಸಾಧ್ಯವಿಲ್ಲದ ಹಕ್ಕುಗಳೆಂದು ತಿಳಿದಿರಬೇಕು. ಎಲ್ಲ ದಕ್ಕಿಂತಲೂ ಹೆಚ್ಚಾಗಿ ಅವರ ಕೇಳಿಕೆಗಳು ಅವರ ರಾಷ್ಟ್ರೀಯ ಗೌರವಕ್ಕೆ ಸಂಬಂಧಿಸಿರುವವುಗಳೆಂದು ತಿಳಿದಿರಬೇಕು. ಡಾನ್ಜಿಗಿನ ಸಮಸ್ಯೆಯಲ್ಲಿ ಬ್ರಿಟನಿನ ಮಧ್ಯವರ್ತಿತ್ವವನ್ನು ಜರ್ಮನಿಯ ಗೌರವವು ಹೊರಲಾರದ ಭಾರವಾಗಿದೆ. ಬ್ರಿಟಿಷರ ಈ ಧೋರಣೆಯಿಂದ ಡಾನ್ಜಿಗ್ ಸಮಸ್ಯೆಯು ಪರಿಹಾರವಾಗದೆ, ಜರ್ಮನಿ ಪೋಲೆಂಡುಗಳೊಳಗೆ ಅದು ಇತ್ಯರ್ಥವಾಗಬೇಕಾಗಿ ಬಂದಿದೆ! ಇಂದು ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳ ವರ್ತನೆಯಿಂದ ಪೋಲೆಂಡು ಬಲಗೊಂಡು, ಎಷ್ಟರ ಮಟ್ಟಿಗೆ ಅನ್ಯಾಯ ಮಾಡುತ್ತಿದೆಯೆಂದರೆ, ಪೋಲೆಂಡಿನಲ್ಲಿ ಜರ್ಮನರ ಉಳಿಯುವಿಕೆಯೇ ಸಂಕಷ್ಟದ ಕಾರ್ಯವಾಗಿದೆ. ಪೋಲೆಂಡಿನಲ್ಲಿ ಆಗುವ ಈ ಸಂಗತಿಗಳ ಕುರಿತು ಪೋಲೆಂಡು ಸರಕಾರವಾದರೂ ತಟಸ್ಥ ಧೋರಣೆಯಲ್ಲಿದೆ.

"ಹೀಗಾಗಿ ಬ್ರಿಟಿಷರ ಮತ್ತು ಇತರ ರಾಷ್ಟ್ರಗಳ ಈ ಸುತ್ತು ಬಳಸುವ ಧೋರಣೆಯು ಪೋಲೆಂಡನ್ನು ಹುರಿದುಂಬಿಸಿದೆ. ಆದರೆ ಜರ್ಮನ್ ಸರಕಾರವು ಪೋಲೆಂಡಿನ ಈ ವರ್ತನೆಯನ್ನು ಬಹುಕಾಲ ತಾಳಿಕೊಂಡಿರುವುದು ಅಸಾಧ್ಯವಾಗಿದೆ. ಇದನ್ನು ಜರ್ಮನಿ–ಇಟಲಿಗಳ ಸಂಯುಕ್ತ ರಾಷ್ಟ್ರಶಕ್ತಿಯು ಧೂಳಿದೂಸರವಾಗಿ ಮಾಡುವುದು.

ಕೌಂಟೆಸ್ ಓಫ್ ಆತ್ಲೋನಳು "ಫಸ್ಟ್ ಎಯಿಡ್ ನರ್ಸಿಂಗ್ ಯೊಮೇನಿ" ಸಂಘದ ಸದಸ್ಯರನ್ನು ಅವರ ಶಿಬಿರದಲ್ಲಿ ಸಂದರ್ಶಿಸುವುದು.

ಬ್ರಿಟಿಷ್ ರಾಯಭಾರಿಯೊಡನೆ ಮಾತು

ಈ ಕುರಿತು ಬ್ರಿಟಿಷ್ ರಾಯಭಾರಿಯೊಡನೆ ಮಾತನಾಡಿದಾಗ, ತಾನು ಯಾವ ವಿಷಯ ತಿಳಿದಿಲ್ಲವೆಂದೂ, ಜರ್ಮನಿಯಿಂದ ತನಗೆ ಯಾವ ಸೂಚನೆಯೂ ಬಂದಿಲ್ಲವೆಂದೂ, ಬರುವ ವಾರದಲ್ಲಿ ಆಸ್ಟ್ರೀಯಕ್ಕೆ ಜೂಜನ್ನು ಸಂದರ್ಶಿಸಲು ಹೋಗುವುದಾಗಿಯೂ ಹೇಳಿದನು.

ಬರ್ಲಿನಿನಲ್ಲಿ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯ ಕುರಿತು ಯಾವ ಅಭಿಪ್ರಾಯ ವ್ಯಕ್ತವೂ ಆಗಿಲ್ಲ. ಆದರೆ ಪೋಲೆಂಡಿಗೆ ಬ್ರಿಟಿಷ್ ಬೆಂಬಲವು ಬರಿಯ ಗುಲ್ಲೆಂದು ಅಲ್ಲಿನ ಪತ್ರಿಕೆಗಳು ಸಾರುತ್ತವೆ.

ನಾಜೀ ಪಕ್ಷದ ನೂರು ಮಂದಿ ಸೈನಿಕರನ್ನು ಪೋಲೆಂಡು ಬಂಧಿಸಿರುವುದಾಗಿ ತಿಳಿದಿದೆ. ಅದರಲ್ಲಿ ಹನ್ನೊಂದು ಮಂದಿ ರಾಜಕೀಯ ಮುಖಂಡರೂ ಸೇರಿರುವರು.

ಜರ್ಮನಿಯು ಈ ಕುರಿತು ತನ್ನ ತೀವ್ರ ನಿಷೇಧವನ್ನು ವ್ಯಕ್ತಪಡಿಸಿದೆ.

ಜಪಾನು ಅಮೇರಿಕದ ಕ್ಷಮೆ ಕೇಳಿತು

ಅಮೇರಿಕದ ಮಹಿಳೆ ಮಿಸೆಸ್ ರಿಚಾರ್ಡ್ ಎಂಬವಳ ಕೆನ್ನೆಗೆ ಜಪಾನೀಯನೊಬ್ಬನು ಕಪಾಲಿಸಿದ ವಿಷಯವಾಗಿ, ಅಮೇರಿಕ ಸರಕಾರದೊಡನೆ ಜಪಾನಿನ ಅಧಿಕಾರಿಗಳು ಕ್ಷಮೆ ಕೇಳಿರುವರು. ಆ ಮನುಷ್ಯನಿಗೆ ಯೋಗ್ಯ ಶಿಕ್ಷೆಯು ವಿಧಿಸಲಾಗುವುದೆಂದು ಅವರು ಹೇಳುತ್ತಾರೆ.

ಆಂಗ್ಲ-ಪೋಲೆಂಡುಗಳ ಒಪ್ಪಂದವು ಬೇಗನೆ ಆಗುವುದು!

ಆಂಗ್ಲ–ಪೋಲೆಂಡುಗಳ ಒಪ್ಪಂದದ ಕರಾರು ಬೇಗನೇ ಎರಡು ಕಡೆಯ ಅಧಿಕಾರಿಗಳಿಂದ ದಸ್ಕತ್ತು ಹಾಕಲ್ಪಡುವುದೆಂದು ತಿಳಿದಿದೆ.

ಹಂಗೇರಿಯು ಸಂಕಷ್ಟದಲ್ಲಿದೆ

ಜರ್ಮನಿಯೊಡನೆ ಸೈನಿಕ ಒಪ್ಪಂದವೇ?

ಹಂಗೇರಿಯದ ವಿದೇಶ ಮಂತ್ರಿ ಕೌಂಟ್ ಕ್ಸಾಕಿಯು ಹೆರ್ ಹಿಟ್ಲರನೊಡನೆ ಭೇಟಿ ಮಾಡಿದನು. ಹಂಗೇರಿಯದ ಸ್ವಾತಂತ್ರ್ಯ ಮತ್ತು ಆಡಳಿತೆಯ ವಿಷಯದಲ್ಲಿ ವಿಶಾಲವಾದ ಕಾರ್ಯಕ್ಷೇತ್ರವನ್ನು ಇಟ್ಟುಕೊಳ್ಳುವುದೆಂದು ರಾಜಕೀಯ ವಂಗಡದವರ ಅಭಿಪ್ರಾಯವಾಗಿದೆ.

ಕೌಂಟ್ ಕ್ಸಾಕಿಯು ಜರ್ಮನಿಯನ್ನು ಸಂದರ್ಶಿಸುವನು. ಈ ಸಂದರ್ಶನದಿಂದ ಜರ್ಮನಿಯೊಡನೆ ಸಂಧಾನಮಾಡುವ ಯತ್ನಗಳು ನಡೆಯುವವೇ ಎಂದು ಊಹಿಸಲಾಗಿದೆ.

ಜರ್ಮನಿಯ ದೇಶೀಯ ಮಂತ್ರಿಯೊಡನೆ ಕೌಂಟ್ ಕ್ಸಾಕಿಯು ರೋಮಿಗೆ ತೆರಳಿರುವುದಾಗಿ ತಿಳಿದಿದೆ.

ಜರ್ಮನ್ ಪತ್ರಿಕೆಯು ಈ ಎಲ್ಲಾ ವಾರ್ತೆಯು ಸುಳ್ಳೆಂದು ಸಾರುತ್ತದೆ.

ರೋಮಿನಲ್ಲಿ ಕೌಂಟ್ ಕ್ಸಾಕಿಯನ್ನು ಕೌಂಟ್ ಸಿಯಾನೋ ಮತ್ತು ಮುಸಲೋನಿಗಳು ಸಂದರ್ಶಿಸಿದರು.

ಜರ್ಮನ್-ಸ್ಲೊವೇಕಿಯಾ ಒಪ್ಪಂದ

ಜರ್ಮನ್ ಮತ್ತು ಸ್ಲೊವೇಕಿಯಗಳೊಳಗೆ ಸೈನಿಕ ಒಪ್ಪಂದವು ಆಗಿದೆ. ಈ ಒಪ್ಪಂದದಂತೆ, ಜರ್ಮನಿಯು ಸ್ಲೊವೇಕಿಯವನ್ನು ಹೊರಗಣ ಮುತ್ತಿಗೆಯಿಂದ ರಕ್ಷಿಸಲು ಬದ್ಧವಾಗಿರುವುದು.

ಸ್ಲೊವೇಕಿಯದಲ್ಲಿರುವ ಎಲ್ಲಾ ಯೆಹೂದ್ಯ ಪತ್ರಿಕೆಗಳೂ, ಎರಡು ಜೆಕ್ಕರ ಪತ್ರಿಕೆಗಳೂ ನಿಷೇಧಿಸಲ್ಪಟ್ಟಿವೆ.

ಜರ್ಮನ್ ಮತ್ತು ಸ್ಲೊವೇಕಿಯ ವಿರುದ್ಧ ಪ್ರಚಾರಕರೆಂದು ಮೂವತ್ತು ಜನ ಜೆಕ್ಕರನ್ನು ಬಂಧಿಸಲಾಗಿದೆ.

ತ್ರಿರಾಷ್ಟ್ರದ ಒಪ್ಪಂದದ ಮಾತುಕತೆ

ಸೋವಿಯೆಟ್ ರಶ್ಯಾದೊಡನೆ ಬ್ರಿಟಿಷ್–ಫ್ರಾನ್ಸುಗಳ ಸೈನಿಕ ಪ್ರತಿನಿಧಿಗಳ ಒಪ್ಪಂದದ ಮಾತುಕತೆಯಲ್ಲಿ ಅಭಿಪ್ರಾಯ ವ್ಯತ್ಯಾಸ ಬಂದಿದೆಯೆಂದು ತಿಳಿದಿದೆ.

ಜಪಾನಿನೊಡನೆ ಯುದ್ಧವು ಸಂಭವಿಸಬಹುದಾದ ಸಂದರ್ಭದಲ್ಲಿ ಬ್ರಿಟನು–ಫ್ರಾನ್ಸುಗಳು ರಶ್ಯದ ಬೆಂಬಲಕ್ಕೆ ಬರಬೇಕೆಂದು ರಶ್ಯಾ ಸರಕಾರವು ಅಪೇಕ್ಷಿಸಿದ ವಿಷಯದಲ್ಲಿ ಈ ಮತಭೇದವು ಹುಟ್ಟಿರುತ್ತದೆ–ಹೀಗೆಂದು ಒಂದು ವಾರ್ತೆ.

ಶಾಂತಿ ಪ್ರಚಾರವು ಒಂದು "ಪ್ರಹಸನ"

ಯೂರೋಪಿನಲ್ಲಿ ನಾಜಿಪ್ರಚಾರ!

ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿರುವ ಸಾರ್ವಜನಿಕರ ಅಭಿಪ್ರಾಯವನ್ನು ತನ್ನ ಕಡೆಗೆ ಒಲಿಸಲು ಜರ್ಮನಿಯ ನಾಜೀ ಸರಕಾರವು ಒಂದು ಪ್ರಬಲವಾದ ಪ್ರಚಾರಕಾರ್ಯವನ್ನು ಆರಂಭಿಸಿದೆ.

ಈ ಪ್ರಚಾರ ಶಾಖೆಯು ಬ್ರಿಟನು, ಫ್ರಾನ್ಸ್, ಸ್ವಿಡರ್ಲೆಂಡುಗಳಿಗೆ ಕಳುಹಿಸಲ್ಪಟ್ಟು, ಅಲ್ಲಿ ಬೇರೆ ಬೇರೆ ರೀತಿಯಿಂದ ಕಾರ್ಯ ಮಾಡುತ್ತವೆ!

ಬ್ರಿಟಿಷ್ ವ್ಯಾಪಾರಿಗಳಿಗೆ ತಲಪಿದ ಒಂದು ಪತ್ರದಲ್ಲಿ, ಜರ್ಮನಿಯಲ್ಲಿ ಯಾರೂ ಬ್ರಿಟನಿಗೆ ವಿರುದ್ಧ ಯುದ್ಧಹೂಡಲು ಇಷ್ಟಪಡುವುದಿಲ್ಲವೆಂದೂ, ಬ್ರಿಟನು, ಅನಾವಶ್ಯಕವಾಗಿ ಇತರ ರಾಷ್ಟ್ರಗಳ ನೆರವಾಗಿ ಬ್ರಿಟಿಷರ ಜೀವವನ್ನು ಸಂಕಷ್ಟದಲ್ಲಿ ಕೆಡಹುತ್ತದೆಯೆಂದೂ ಬರೆಯಲಾಗಿದೆ.

ಪಾರಿಸ್ ಸ್ವಿಜರ್ಲೆಂಡುಗಳಲ್ಲಿಯೂ ಈ ತೆರದ ಪತ್ರಗಳ ಪ್ರವಾಹಗಳೇ ಬರುತ್ತಿವೆ. ಸರಕಾರವು ಅಂತಹದನ್ನು ಪೋಸ್ಟ್ ಆಫೀಸಿನಲ್ಲಿಯೇ ಧ್ವಂಸ ಮಾಡುತ್ತಿದೆ.

ಜರ್ಮನಿಯ ಪ್ರಚಾರ ಮಂತ್ರಿಯು ದಕ್ಷಿಣ-ಪೂರ್ವ-ಯುರೋಪಿನಲ್ಲಿ ಡಾನ್ಜಿಗ್ ಸಮಸ್ಯೆಯು ಯುದ್ಧವಾಗದೇ ಪರಿಹಾರವಾಗುವುದೆಂದು ಪ್ರಕಟಿಸಿರುವನು.

ಹಂಗೇರಿಯು ಬೇಗನೇ ಜರ್ಮನಿಗೆ ಸೇರಬೇಕೆಂಬ ಪ್ರಚಾರವೂ ಆಗುತ್ತಿದೆ.

ಈಜಿಪ್ಟಿನ ಹೊಸ ಮಂತ್ರಿಮಂಡಳ

ಮುಹಮ್ಮದ್ ಪಾಶರ ರಾಜೀನಾಮೆ

ಈಜಿಪ್ಟಿನ ಪ್ರಧಾನ ಮಂತ್ರಿ, ಮುಹಮ್ಮದ್ ಪಾಶಾರವರ ರಾಜೀನಾಮೆಯು ಅಂಗೀಕೃತವಾಯಿತು.

ಹೊಸ ಮಂತ್ರಿಮಂಡಳ ರಚನೆಯ ಅಧಿಕಾರವನ್ನು ಪಡೆದ ಮಹೇರ್ ಪಾಶಾರವರು ತನ್ನ ಮಂತ್ರಿಮಂಡಳವನ್ನು ರಚಿಸಿರುವರು. ಅವರ ಮಂತ್ರಿಮಂಡಳದಲ್ಲಿ ಮಹೇರ್ ಪಾಶಾರವರೇ ವಿದೇಶೀಯ ಮತ್ತು ದೇಶೀಯ ಅಂತರ್ಗತ ವಿಚಾರಗಳ ಮಂತ್ರಿತ್ವಗಳೆರಡನ್ನೂ ಇಟ್ಟುಕೊಂಡಿರುವರು.

ಮಂತ್ರಿಮಂಡಳದಲ್ಲಿ ಎಲ್ಲಾ ಪಕ್ಷಗಳ ಪ್ರಾತಿನಿಧ್ಯವೂ ಇದೆ.

ಡಿ. ವೆಲರರ ಅಮೇರಿಕಾ ಯಾತ್ರೆ

ಬರುವ ಸಪ್ಟಂಬರದಲ್ಲಿ ಐರ್ಲೆಂಡಿನ ಅಧ್ಯಕ್ಷರಾದ ಡಿ. ವೆಲರವರು ಸಂಯುಕ್ತ ಅಮೇರಿಕದ ಯಾತ್ರೆಯನ್ನು ಕೈಕೊಳ್ಳುವರೆಂದು ತಿಳಿದಿದೆ. ಅವರು ಮೊದಲು ವಾಶಿಂಗ್‌ಟನಿಗೆ ಹೋಗಿ, ಅಲ್ಲಿ ರೂಸ್‌ವೆಲ್ಟರ ಅತಿಥಿಗಳಾಗಿ ಉಳಕೊಳ್ಳುವರು.

ಚಲಚ್ಚಿತ್ರ ಪ್ರಪಂಚ



ಮಿಸ್. ಮಾಧುರಿ

ರಣಜಿತ ಮುವಿಟೋನ್

"ಸಂತ ತುಳಸಿದಾಸ" ಚಿತ್ರವು ಎಂಟು ವಾರಗಳಿಂದ ಮುಂಬಯಿಯಲ್ಲಿ ಪ್ರದರ್ಶಿಸಲ್ಪಡುತ್ತಿದೆ. "ಡಾಕ್ಟರ್ ಪತ್ನಿ" ಮತ್ತು "ಆತನ ಪತ್ನಿ" ಎಂಬ ಎರಡು ಚಿತ್ರಗಳು ಶೀಘ್ರದಲ್ಲಿಯೇ ಹೊರಬೀಳುವುದು.

ಫಿಲ್ಮ್ ಕಾರ್ಪರೇಷನ್

ಫಿಲ್ಮ್ ಕಾರ್ಪರೇಷನಿನವರ "ದಿಲ್ ಹಿ ತೋ ಹೈ" ಎಂಬ ಚಿತ್ರವು ಸಂಪೂರ್ಣವಾಗಿರುವುದು

ಪಂಡಿತ ಕೇದಾರ ಶರ್ಮರು ಮುಂದಿನ ಚಿತ್ರವನ್ನು ಹಿಂದಿ ಮತ್ತು ಬಂಗಾಳಿ ಭಾಷೆಗಳಲ್ಲಿ ತಯಾರಿಸಲಿರುವರು ಹಿಂದೀ ಆವೃತ್ತಿಯ ಪ್ರಾಮುಖ್ಯ ಭೂಮಿಕೆಯನ್ನು ನಂದ್ರೇಕರನು ವಹಿಸುವನು

ನೆಶನಲ್ ಸ್ಟುಡಿಯೊಸ್ಸ್ ಲಿಮಿಟೆಡ್

೫೦,೦೦೦೦ ರೂಪಾಯಿಯ ಮೂಲಧನದಿಂದ ಮೇಲಿನ ಹೆಸರಿನಲ್ಲಿ ಸುದೃಢವಾದೊಂದು ಚಲಚ್ಚಿತ್ರ ಕಂಪೆನಿಯು ಸ್ಥಾಪಿತವಾಗಿದೆ. ಚಲಚ್ಚಿತ್ರ ವ್ಯವಸಾಯವು ಊರ್ಜಿತವಾಗುವುದಕ್ಕೆ ಇದು ಶುಭ ಚಿಹ್ನೆಯಾಗಿರುತ್ತದೆ. ಆನರಿಬಲ್ ಸರ್ ರಹಿಮತುಲ್ಲಾ ಚಿನೋಯ್, ಸರ್ ಈಶ್ವರದಾಸ ಲಖಿಮದಾಸ್, ಸನ್ನಲಾಲ ದೇವಕರಣ ನಾನ್ಜಿ, ಮಹಮ್ಮದ್ ಅಕ್ಬರ್ ಫಜಲ್‌ಭಾಯಿ, ಚುನಿಲಾಲ್ ದೇಸಾಯಿ, ಯುಸುಫ್ ಅಲಿ ಫಜಲ್ ಭಾಯಿ– ಇವರೇ ಈ ಕಂಪೆನಿಯ ಬೋರ್ಡ್ ಓಫ್ ಡೈರೆಕ್ಟರರು.

ಯುಸುಫ್ ಅಲಿ, ಫಜಲ್ ಭಾಯಿ ಮತ್ತು ಚಿಮನ್‌ಲಾಲ್ ದೇಸಾಯಿಯವರು ಮೆನೇಜಿಂಗ್ ಏಜಂಟರಾಗಿ ನೇಮಕ ಹೊಂದಿರುವರು.

ಸುದಾಮ ಪಿಕ್ಚರ್ಸ್

"ಆಪ್ ಕೀ ಮರ್ಜಿ" ಎಂಬ ಚಿತ್ರವು ಸಂಪೂರ್ಣವಾಗಿರುವುದು. ಇದು ಶೀಘ್ರದಲ್ಲಿಯೇ ಪ್ರಮುಖ ನಗರಗಳಲ್ಲಿ ಪ್ರದರ್ಶಿಸಲ್ಪಡುವುದು. ಈ ಕಂಪೆನಿಯವರು "ಪ್ರಾತಃಕಾಲ" ಎಂಬ ಹೆಸರಿನ ಮುಂದಿನ ಚಿತ್ರವನ್ನು ತಯಾರಿಸಲಿರುವರು. ಮುಖ್ಯ ಭೂಮಿಕೆಯಲ್ಲಿ ಸವಿತಾ ದೇವಿಯು ಅಭಿನಯಿಸುವಳು. ಸಿನಿಮಾ ಪ್ರಪಂಚದಲ್ಲಿ ಬೊಂಬಾಯಿ ಟಾಕೀಸಿನಲ್ಲಿ ಖ್ಯಾತಿಪಡೆದ ಶ್ರೀ. ಶರ್ಮರು ಈ ಚಿತ್ರದ ಸಂವಾದವನ್ನು ಬರೆಯುತ್ತಿರುವರು.

...ಲಾದವರು ಪಾತ್ರವಹಿಸಿರುವರು.

ಡ್ಯಾರೆಕ್ಟರ್ ನಿಟಿನ್ ಬೋಸರ "ಜೀವನ ಮರಣ" ಎಂಬ ಚಿತ್ರವು ಸಂಪೂರ್ಣವಾಗಿದೆ. ಬೇಗನೇ ಪ್ರದರ್ಶಿಸಲ್ಪಡುವುದು

ಪಹಾಸಿ ಮೊಜುಮದಾರರ "ಕಪಾಲ ಕುಂಡಲ"ವೆಂಬ ಚಿತ್ರವು ಬೇಗನೇ ಹೊರಬೀಳುವುದು. ಮುನ್ನೂರು ವರುಷಗಳ ಹಿಂದಿನ ಒಂದು ಪ್ರಣಯಜೀವನ ಮತ್ತು ಅದ್ಭುತ ಸಾಹಸ ಕಾರ್ಯವನ್ನು ರೂಪಿಸಿ ದಿವಂಗತ ಬಂಕಿಮ ಚಂದ್ರ ಚಟರ್ಜಿಯವರ ಲೇಖನಿಯಿಂದ ಬರೆದ ಕಥಾವಸ್ತು. ಅಭಿನಯಗಾರರು ಲೀಲಾ ದೇಸಾಯಿ, ನಜ್ಮುಲ್ ಹುಸೇನ್, ಜಗದೀಶ, ಕಮಲೇಶ್ ಕುಮಾರಿ ಮೊದಲಾದವರು

ಲೀಲಾ ಚಿಟ್ನೀಸ್

ನ್ಯೂ ಥಿಯೇಟರ್ಸ್

ಪಿ ಸಿ ಬರುವಾರವರ ದಿಗ್ದರ್ಶಕತ್ವ ಮತ್ತು ನಾಯಕತ್ವದಲ್ಲಿ ಸಂಪೂರ್ಣವಾದ "ರಜತ ಜಯಂತಿ" ಚಿತ್ರವು ಕಲ್ಕತ್ತದ "ಚಿತ್ರಾ" ಮತ್ತು "ನ್ಯೂ ಸಿನಿಮಾ" ಮಂದಿರಗಳಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಇದರಲ್ಲಿ ಬರುವಾ, ಮೆನಕಾ, ಪಹಾರಿ, ಮೊಲಿನಾ, ಸೈಲೆನ್ ಚೌಧುರಿ ಮೊದಲಾದವರು ...

ಮಹತ್ವಾಕಾಂಕ್ಷೆಯುಳ್ಳ ಓರ್ವ ತರುಣ ಮತ್ತು ಪಾಪಪೂರಿತನಾದ ಆತನ ತಂದೆಯ ಜೀವನಗಳನ್ನು ಆದರಿಸಿ ಡ್ಯಾರೆಕ್ಟರ್ ಜೇಮ್ಸ್ ಚಂದ್ರರು ತಯಾರಿಸುತ್ತಿರುವ "ಸಿಕರ್" ಎಂಬ ಚಿತ್ರವು ಸಾವಧಾನದಿಂದ ಮುಂದುವರಿಯುತ್ತಾ ಇದೆ



ಪ್ರಭಾತ ಫಿಲ್ಮ್ ಕಂಪೆನಿ

ಶ್ರೀ ಶಾಂತಾರಾಮರು ತಮ್ಮ ನವೀನ ಚಿತ್ರವಾದ "ಆದ್ಮಿ"ಯ ಕಾರ್ಯವನ್ನು ಸಂಪೂರ್ಣಗೊಳಿಸಿರುವರು. ಇದು ಬೇಗನೆ ಪ್ರಮುಖ ನಗರಗಳಲ್ಲಿ ಪ್ರದರ್ಶಿತವಾಗಲಿರುವುದು ಇದರಲ್ಲಿ ಶಾಂತಾ ಹುಬ್ಳೀಕರ್ ಮತ್ತು ಸಾಹು ಮೋಡಕರ ಕಾರ್ಯವು ಪ್ರಸಂಶನೀಯವಿದೆಯೆಂದು ತಿಳಿದುಬರುತ್ತದೆ ಶ್ರೀ. ದಾಮ್ಲೆ ಮತ್ತು ಫತ್ತೆಲಾಲರ "ಸಂತ ದ್ಯಾನೇಶ್ವರ" ಎಂಬ ಮರಾಠಿ ಚಿತ್ರದ ತಯಾರಿಕೆಯು ಭರದಿಂದ ಸಾಗುತ್ತಿದೆ ಇದರಲ್ಲಿ ಶ್ರೀ ಕೇಶವರಾವ್ ಭೋಲೆಯವರೇ ಸಂಗೀತ ನಿರ್ದೇಶಕತ್ವವನ್ನು ಕೈಕೊಂಡಿರುವರು

ಮೋತಿ ಮಹಾಲ್ ಥಿಯೇಟರ್ಸ್

ಮೋತಿಮಹಾಲ್ ಥಿಯೇಟರ್ಸಿನವರು "ದೇವಯಾನಿ" ಎಂಬ ಪೌರಣಿಕ ಚಿತ್ರವನ್ನು ಪಹಾಸಿ ಬರ್ಮಾ ಮತ್ತು ಅನಿಲ್ ಘೋಷಾಲ್‌ರವರ ದಿಗ್ದರ್ಶಕತ್ವದಲ್ಲಿ ತಯಾರಿಸುತ್ತಿರುವರು. ಇದರಲ್ಲಿ ಛಾಯಾದೇವಿ, ನಿರ್ಮಲೆಂದು, ಮನೋರಂಜಕ ಮೊದಲಾದವರು ಅಭಿನಯಿ...



ದೇವಿಕಾರಾಣಿ

ಬೊಂಬಾಯಿ ಟಾಕೀಸ್

"ದುರ್ಗಾ" ಚಿತ್ರವು ಸಫಲತಾ ಪೂರ್ವಕವಾಗಿ ಮುಂಬಯಿಯಲ್ಲಿ ಪ್ರದರ್ಶಿತವಾಗುತ್ತಿದೆ.

ಮುಂದಿನ ಚಿತ್ರದ ತಯಾರಿಯು ಭರದಿಂದ ಸಾಗುತ್ತಿದೆ ಇದಕ್ಕಾಗಿ ಈ ಕಂಪೆನಿಯವರು ಲೀಲಾ ಚಿಟ್ನಿಸ್, ಮುಬಾರಕ್ ಮತ್ತು ನಯಂಪಲ್ಲಿ ಇವರನ್ನು ಈ ಚಿತ್ರದಲ್ಲಿ ಅಭಿನಯಿಸುವಂತೆ ಆಮಂತ್ರಿಸಿರುವರು ಮೂವರೂ ಉಚ್ಚ ಶ್ರೇಣಿಯ ಪ್ರಸಿದ್ಧ ಕಲಾವಿದರಾಗಿರುವರು. ಇವರ ಸಹಯೋಗದಿಂದ ಉತ್ತಮವಾದ ಚಿತ್ರವು ತಯಾರಿಸಲ್ಪಡುವುದರಲ್ಲಿ ಸಂದೇಹವಿಲ್ಲ

'ಭಾಭಿ' ಚಿತ್ರದ ರಜತೋತ್ಸವ ಸಪ್ತಾಹ

ಬೊಂಬಾಯಿ ಟಾಕೀಸಿನ ಉತ್ತಮ ಸಾಮಾಜಿಕ 'ಭಾಭಿ' ಚಿತ್ರವು ೨೫ ವಾರಗಳಿಂದ ಕಲ್ಕತ್ತಾದಲ್ಲಿ ಪ್ರದರ್ಶಿಸಲ್ಪಡುತ್ತಿದೆ "ಅಛೂತ ಕನ್ಯ" ದ ನಂತರ ಬಂಗಾಳಿ ಜನತೆಯು ಹಿಂದೀ ಚಿತ್ರಗಳಿಗೆ ಈ ರೀತಿಯಾಗಿ ಪ್ರೋತ್ಸಾಹವಿತ್ತುದು ಇದೇ ಪ್ರಥಮ ಬಾರಿ

ಮಜ್ಹರ್ ಖಾನ್

ರಣಜಿತ ಕಂಪೆನಿಯವರೊಡನೆ ಮಜ್ಹಾರ ಖಾನನ ಕರಾರು (contract) ಈ ತಿಂಗಳಂತ್ಯಕ್ಕೆ ಸಮಾಪ್ತವಾಗಿ ಈಗ ಆತನು ಸುಧಾಮ ಪ್ರೋಡಕ್ಷನ್ಸಿಗೆ ಸೇರಿರುವನು

ಧಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ಧಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಸಮಯದ ಬೆಲೆ ಎಷ್ಟೆಂದು ನಿಶ್ಚೈಸಿದವರಿರುವರೆ?

ಹಣದ ಬೆಲೆಯನ್ನು ಕಟ್ಟಬಹುದು—ಆದರೆ ಸಮಯದ ಬೆಲೆಯನ್ನು ನಿಶ್ಚೈಸಲಸಾಧ್ಯ!

ಇಂತಹ ಅತ್ಯಮೂಲ್ಯ ಸಮಯವನ್ನು ನಿರರ್ಥಕವಾಗಿ ಹಾಳುಮಾಡಲವಕಾಶ ಕೊಡದಂತೆ, ನಮ್ಮ ಸರ್ವಿಸುಗಳು ಪ್ರಾಥಃಕಾಲದಿಂದ—ಸಾಯಂಕಾಲ ವರೆಗೆ ಬಿಡುವಿಲ್ಲದೆ ಓಡಾಡುತಿದ್ದು ನಿಮ್ಮ ಯಾವುದೇ ಕೆಲಸಗಳನ್ನಾದರೂ ನೀವು ಒಂದೂರಿನಿಂದ ಇನ್ನೊಂದೂರಿಗೆ ನಮ್ಮ ಬಸ್ಸುಗಳಲ್ಲಿ ತ್ವರ್ಯದಲ್ಲಿ ಪ್ರಯಾಣ ಬೆಳಸಿ, ನಿಮ್ಮ ಅತ್ಯಮೂಲ್ಯ ಸಮಯವನ್ನು ನಿರರ್ಥಕಗೊಳಿಸದಂತೆ, ನಾವು ಏರ್ಪಾಡು ಮಾಡಿರುವೆವು. ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ನಾವು ಇನ್ನು ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು!

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಉತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ಕುಂಕಜ್ಜಿ, ಹುಳುಕಡ್ಡಿ, ಚಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುತ್ತದೆ

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಿಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ಅ. ಚಾರ್ಜು ಪ್ರತ್ಯೇಕ)

P. O. Petldani

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡ ಮುಡಿಗೆ	1—14—0	—
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡ ,,	4—14—0	4—14—0
,, ದುಯಂ ,, ,,	4—10—0	4—12—0
,, ಅವ್ವಲ್ ಸುಗ್ಗಿ ,,	4—10—0	—
,, ದುಯಂ ,, ,,	4—7—0	4—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
,, ಸಿಪ್ಪೆ ಇದ್ದದು ,,	30—0—0	40—0—0
ಕೊಬ್ಬರಿ ಅಫೀಸು ಖಂಡಿಗೆ	50—0—0	—
,, ದಿಲ್‌ಪಸಂದು ,,	52—8—0	—
ತೆಂಗಿನ ಎಣ್ಣೆ ಮುಡಿಗೆ	8—6—0	8—6—0
ಸಿಪ್ಪೆಯುಳ್ಳ ಅಡಿಕೆ 1000ಕ್ಕೆ	2—8—0	3—8—0
ಗೇರುಬೀಜ ಮುಡಿಗೆ	8—4—	8—8—0
ಕಬ್ಬಿನ ಬೆಲ್ಲ ಖಂಡಿಗೆ	47—8—0	55—0—0

ಸ್ವದೇಶಾಭಿಮಾನಿ

Established 1906 • Regd. No. M 3406

ಸಂಪುಟ ೩೩] ತಾರೀಕು ೨೫-೮-೧೯೩೯ (25-8-1939) [ಸಂಚಿಕೆ ೩೪

THE

BOMBAY LIFE ASSURANCE COMPANY, LTD.,

(ESTD 1908)

THE OFFICE

Which has proved its popularity by its progress

Record of New Business

Proposed	Year	Completed
1,25,50,250	1934	1 04,38 750
1 50,48,915	1935	1 28 28 605
1,68 88 200	1936	1 30 (1 500
1,72,679,75	1937	1 40,(8 725
176 83,250	**1938**	**144 91 000**

1939 - VALUATION YEAR

Please take up a Policy Now and participate in Bonus

To ... Represent it pays you to consult us

— *Apply to* — **KOCHIKAR BROTHERS, LIMITED,**

Madras Branch Secretaries

The Bombay Life Assurance Co., Ltd,

The Bombay Life Building Gandhinagar UDIPI

or any of our following offices:

Post Box No 337
Mount Road,
Madras

Visweshwarapuram Circle
Bangalore City

Charni Road
Girgaum
BOMBAY 4

Car Street,
Mangalore

Puthiyara,
Calicut.

Central Station Road,
Trivandrum

MAKE LIFE WORTH-LIVING!

Indigestion – Insomnia Dry Cough
Nervousness Weak Heart &c.
these make you wiery of Life!

CONSULT US AND BUY
YOUR LIFE'S HAPPINESS!

Oils – that cool the brain and induce sleep
Lehas – that build-up your wasted system
Asavas – that regenerate your jaded nerves

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಶವಾದ ಪ್ರಕೃತಿಯನ್ನು ಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಶೇಷ್ಟಿತ ನರಗಳಲ್ಲಿ ಹೊಸ ಚೈತನ್ಯವನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

ಸ್ಥಳೀಯ ಪ್ರತಿನಿಧಿಗಳು —
ಯು. ಪಾಂಡುರಂಗ ನಾಯಕ್, ರಥಬೀದಿ, ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.